ಕರ್ನಾಟಕ ಸರ್ಕಾರ

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ
ವಿಧಾನಸೌಧ, ಬೆಂಗಳೂರು

ಶಕ್ತಿವಿಶಿಷ್ಟಾದ್ವೈತತತ್ತ್ವತ್ರಯವಿಮರ್ಶೆ

ಸಂಸ್ಕೃತ ಮೂಲ
ಶ್ರೀಮತ್ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀ ಶ್ರೀ ೧೦೦೮ ಜಗದ್ಗುರು
ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು

ಕನ್ನಡಾನುವಾದ
ಡಾ॥ ಸಿ. ಶಿವಕುಮಾರಸ್ವಾಮಿ
ಸಂಸ್ಕೃತ ಪ್ರಾಧ್ಯಾಪಕರು
ಬಸವೇಶ್ವರ ಪ್ರಥಮ ದರ್ಜೆ ಕಾಲೇಜು, ಬೆಂಗಳೂರು-೫೬೦೦೧೦

ಪ್ರಕಟಣೆ :
ಶ್ರೀಮತಿ ಉಷಾ ಸುರೇಶ್
ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ,
ವಿಧಾನಸೌಧ, ಬೆಂಗಳೂರು

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ
ವಿಧಾನಸೌಧ, ಬೆಂಗಳೂರು

ಶಕ್ತಿವಿಶಿಷ್ಟಾದ್ವೈತತತ್ತ್ವತ್ರಯವಿಮರ್ಶೆ

(ವಾರಾಣಸಿಯ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಡಿ.ಲಿಟ್ ಪದವಿಗೆ
ಸಾದರಪಡಿಸಿದ ಸಂಸ್ಕೃತ ಸಂಪ್ರಬಂಧದ ಅನುವಾದ)

ಸಂಸ್ಕೃತ ಮೂಲ
ಶ್ರೀಮತ್ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀ ಶ್ರೀ ೧೦೦೮ ಜಗದ್ಗುರು
ಡಾ|| ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು

ಕನ್ನಡಾನುವಾದ
ಡಾ|| ಸಿ. ಶಿವಕುಮಾರಸ್ವಾಮಿ
ಸಂಸ್ಕೃತ ಪ್ರಾಧ್ಯಾಪಕರು
ಬಸವೇಶ್ವರ ಪ್ರಥಮ ದರ್ಜೆ ಕಾಲೇಜು, ಬೆಂಗಳೂರು-೫೬೦೦೧೦

ಪ್ರಕಟಣೆ :
ಶ್ರೀಮತಿ ಉಷಾ ಸುರೇಶ್
ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ,
ವಿಧಾನಸೌಧ, ಬೆಂಗಳೂರು

SHAKTIVISHISHTADVAITATATTVATRAYAVIMARSHE- Translation of a D. Litt Thesis entitled **"SHAKTI VISHISHTADVAITATTVATRAYAVIMARSHAH"** submitted to Sampurnananda Sanskrit University, Varanasi by Dr. Chandrashekara Shivacharya Mahaswamiji, Jagadguru of Kashi Vishvaradhya Jnanasimhasana Peetha. Translated by Dr. C. Shivakumara Swamy, Professor of Sanskrit, Basaveshwara College, Bangalore-560010. Published by: Karnataka State Archives, Vidhana Soudha, Bangalore-560 001

Pages : xxii + 522

First Impression : 2009

© Publisher

Price : **Rs. 220/-**

Copies are available at :
Veerashaiva Anusandhana Samsthana
365/C, 5th 'A' Main, REMCO Layout,
Vijayanagar 2nd Stage, Bangalore-40
Ph : 23302537

DTP by
M. Mahesh
Kumuda Graphics, Bangalore Ph : 9945814774

Printed at
Geetanjali Graphics
No. 4, M.S.R. Industrial Estate
Gokul Extension
Bangalore-560054 Ph : 23604087



ಶ್ರೀಮತ್ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀ ಶ್ರೀ ೧೦೦೮ ಜಗದ್ಗುರು
ಡಾ|| ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು
ಜಂಗಮವಾಡಿಮಠ, ವಾರಾಣಸಿ

ಶ್ರೀಮತ್ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀ ಶ್ರೀ ೧೦೦೮ ಜಗದ್ಗುರು
ಡಾ|| ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು
ಜಂಗಮವಾಡಿಮಠ, ವಾರಾಣಸಿ

ಆಶೀರ್ವಚನ

“ಶಕ್ತಿವಿಶಿಷ್ಟಾದ್ವೈತತತ್ತ್ವತ್ರಯವಿಮರ್ಶೆ” ಎಂಬ ಈ ಪುಸ್ತಕವು “ಶಕ್ತಿವಿಶಿಷ್ಟಾದ್ವೈತತತ್ತ್ವತ್ರಯವಿಮರ್ಶಃ” ಎಂಬ ನಮ್ಮ ಸಂಸ್ಕೃತ ಭಾಷೆಯ ವಿದ್ಯಾವಾಚಸ್ಪತಿ (ಡಿ.ಲಿಟ್) ಪ್ರಬಂಧದ ಕನ್ನಡಾನುವಾದವಾಗಿದೆ. ವಿದ್ವಾಂಸರಾದ ಡಾ|| ಸಿ. ಶಿವಕುಮಾರಸ್ವಾಮಿಗಳವರು ಅತ್ಯಂತ ಶ್ರಮವಹಿಸಿ ಶ್ರದ್ಧೆಯಿಂದ ಈ ಅನುವಾದ ಕಾರ್ಯವನ್ನು ಪೂರ್ಣಗೊಳಿಸಿದ್ದಾರೆ.

ಸನಾತನವಾದ ವೀರಶೈವ ಧರ್ಮದ ತತ್ತ್ವಜ್ಞಾನವು ಶಕ್ತಿವಿಶಿಷ್ಟಾದ್ವೈತವೆಂಬ ಹೆಸರಿನಿಂದ ಸುಪ್ರಸಿದ್ಧವಾಗಿದೆ. ಇದು ಮುಖ್ಯವಾಗಿ ಆಗಮಾಧಾರಿತವಾಗಿದ್ದು ವೇದಸಮ್ಮತವೂ ಆಗಿದೆ. ಶ್ರೀ ಶಿವಯೋಗಿ ಶಿವಾಚಾರ್ಯರು ತಮ್ಮ ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥದಲ್ಲಿ “ಶ್ರೀವೇದಾಗಮವೀರಶೈವಸರಣಿಂ” ಎಂಬುದಾಗಿ ಹೇಳಿ ಅದನ್ನು ಸಮರ್ಥಿಸಿದ್ದಾರೆ. ವೇದಾಗಮ ಸಮ್ಮತವಾದ ಈ ಶಕ್ತಿವಿಶಿಷ್ಟಾದ್ವೈತ ದರ್ಶನವು ಪ್ರಪಂಚವನ್ನು ೩೬ ತತ್ತ್ವಗಳ ರೂಪದಲ್ಲಿ ಪ್ರತಿಪಾದಿಸುತ್ತದೆ. ‘ತತ್ತ್ವ’ವೆಂದರೆ ಅನಾರೋಪಿತವಾದದ್ದು ಎಂದರ್ಥ. ಅಂದರೆ ಶಿವಾದಿ ಭೂಮ್ಯಂತಗಳಾದ ೩೬ ತತ್ತ್ವಗಳ ರೂಪದಲ್ಲಿ ಶಿವನೇ ವ್ಯಕ್ತನಾಗಿದ್ದಾನೆ. ಹೀಗೆ ವಾಸ್ತವಿಕವಾಗಿ ಸರ್ವವಸ್ತುಗಳ ರೂಪದಲ್ಲಿ ಶಿವನೇ ತೋರುತ್ತಿದ್ದರೂ ಎಲ್ಲರಿಗೂ ಸಹಜವಾಗಿ ಆ ಶಿವಸ್ವರೂಪವನ್ನು ತಿಳಿದುಕೊಳ್ಳುವುದು ಅಷ್ಟೊಂದು ಸುಲಭದ ಮಾತಲ್ಲ. ಅದಕ್ಕಾಗಿ ಈ ಶಕ್ತಿವಿಶಿಷ್ಟಾದ್ವೈತ ದರ್ಶನದಲ್ಲಿ ಶಿವತತ್ತ್ವವನ್ನು ತಿಳಿಯಲು ಪ್ರಮುಖವಾಗಿ ಮೂರು ವಿಧಗಳಾದ ಸಾಧನ ಗಳನ್ನು ಹೇಳಿದ್ದಾರೆ. ಅವುಗಳೇ ಅಷ್ಟಾವರಣ, ಪಂಚಾಚಾರ ಮತ್ತು ಷಟ್‌ಸ್ಥಲಗಳಾಗಿವೆ. ಇವುಗಳನ್ನೇ ಪ್ರಸ್ತುತ ಗ್ರಂಥದಲ್ಲಿ ತತ್ತ್ವತ್ರಯಗಳೆಂದು ಪರಿಗಣಿಸಲಾಗಿದೆ.

ಇಲ್ಲಿ ಒಟ್ಟು ಐದು ಪರಿಚ್ಛೇದಗಳಿವೆ. ಮೊದಲನೆಯ ಪರಿಚ್ಛೇದದಲ್ಲಿ ಆಗಮಗಳ ಇತಿಹಾಸವು ನಿರೂಪಿಸಲ್ಪಟ್ಟಿದೆ. ಎರಡನೆಯ ಪರಿಚ್ಛೇದದಲ್ಲಿ ಶಕ್ತಿವಿಶಿಷ್ಟಾದ್ವೈತ ದರ್ಶನದ ಶಿವ, ಜೀವ ಹಾಗೂ ಜಗತ್ತುಗಳೆಂಬ ಮೂರು ತತ್ತ್ವಗಳ ಸ್ವರೂಪವನ್ನು ಕಾಶ್ಮೀರಶೈವ,

ಸಿದ್ಧಾಂತಶೈವ ಮತ್ತು ವೀರಶೈವಗಳ ರೀತಿಯಿಂದ ಪರಸ್ಪರ ಸಾಮ್ಯ, ವೈಷಮ್ಯ ಮತ್ತು ವೈಶಿಷ್ಟ್ಯಗಳ ಬಗ್ಗೆ ಹೇಳಲಾಗಿದೆ. ಮೂರನೆಯ ಪರಿಚ್ಛೇದದಲ್ಲಿ ಶಕ್ತಿವಿಶಿಷ್ಟಾದ್ವೈತ ದರ್ಶನದ ಅಷ್ಟಾವರಣಗಳ ಸ್ವರೂಪದ ಬಗೆಗೆ, ಆಮೂಲಾಗ್ರವಾಗಿ ವಿವೇಚಿಸಲಾಗಿದೆ. ನಾಲ್ಕನೆಯ ಪರಿಚ್ಛೇದದಲ್ಲಿ ಪಂಚಾಚಾರಗಳನ್ನು ವಿವೇಚಿಸಲಾಗಿದೆ. ಐದನೆಯ ಪರಿಚ್ಛೇದದಲ್ಲಿ ಭಕ್ತಾದಿ ಐಕ್ಯಾಂತಗಳಾದ ಷಟ್‌ಸ್ಥಲಸೋಪಾನಗಳನ್ನು ವಿವೇಚಿಸಿ, 'ಲಿಂಗಾಂಗ ಸಾಮರಸ್ಯ'ವನ್ನು ಪ್ರತಿಪಾದಿಸಲಾಗಿದೆ. ಉಪಸಂಹಾರವೆಂಬ ಆರನೆಯ ಪರಿಚ್ಛೇದದಲ್ಲಿ ಎಲ್ಲ ವಿಷಯಗಳನ್ನು ಕ್ರೋಢೀಕರಿಸಿ ಸಂಕ್ಷೇಪಗೊಳಿಸಲಾಗಿದೆ.

ಹೀಗೆ ಶಕ್ತಿವಿಶಿಷ್ಟಾದ್ವೈತ ದರ್ಶನಕ್ಕೆ ಸಂಬಂಧಪಟ್ಟ ಅಷ್ಟಾವರಣ, ಪಂಚಾಚಾರ ಮತ್ತು ಷಟ್‌ಸ್ಥಲಗಳನ್ನು ನಿರೂಪಿಸುವಾಗ ಶಿವಾಗಮಗಳನ್ನು ಮತ್ತು ಶ್ರೀ ಸಿದ್ಧಾಂತ ಶಿಖಾಮಣಿಯನ್ನು ಆಧಾರವಾಗಿಟ್ಟುಕೊಂಡು ಶಾಸ್ತ್ರೀಯವಾಗಿ ನಿರೂಪಿಸಲಾಗಿದೆ. ಇಂತಹ ಶಾಸ್ತ್ರಗ್ರಂಥವನ್ನು ಡಾ|| ಸಿ. ಶಿವಕುಮಾರಸ್ವಾಮಿಗಳವರು ಸಮರ್ಥವಾಗಿ ಅನುವಾದ ಮಾಡಿದ್ದು ಶ್ರೀ ಸನ್ನಿಧಿ ಅವರಿಗೆ ಸಂತೃಪ್ತಿಯನ್ನು ತಂದಿದೆ. ಈ ಶಾಸ್ತ್ರೀಯವಾದ ವಿಚಾರವು ಈ ಗ್ರಂಥಮುಖೇನ ಕನ್ನಡಿಗರಿಗೆಲ್ಲಾ ಸುಲಭವಾಗಿ ತಿಳಿಯುವಂತಾಗಿದೆ.

ಕರ್ನಾಟಕ ಸರ್ಕಾರದ ಪತ್ರಾಗಾರ ಇಲಾಖೆಯ ಅನುದಾನದಿಂದ ಈ ಗ್ರಂಥವು ಪ್ರಟಕವಾಗುತ್ತಿರುವುದು ನಮಗೆ ಸಂತಸವನ್ನು ತಂದಿದೆ. ಇಲಾಖೆಯ ನಿರ್ದೇಶಕರಾದ ಶ್ರೀಮತಿ ಉಷಾ ಸುರೇಶ್ ಅವರಿಗೆ ಹಾಗೂ ಕರ್ನಾಟಕ ಸರ್ಕಾರದ ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಜಯರಾಮರಾಜೇ ಅರಸು ಅವರಿಗೆ ಮಂಗಳಾಶೀರ್ವಾದಗಳು. ವೀರಶೈವ ಅನುಸಂಧಾನ ಸಂಸ್ಥಾನದ ಸಂಪಾದಕ ಮಂಡಳಿಯ ಅಧ್ಯಕ್ಷರಾದ ಸಂಸ್ಕೃತ ಘನ ವಿದ್ವಾಂಸರಾದ ಡಾ|| ಎಂ. ಶಿವಕುಮಾರಸ್ವಾಮಿಗಳವರು ಈ ಗ್ರಂಥಕ್ಕೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿರುವುದಲ್ಲದೇ ಪ್ರಬಂಧವನ್ನು ಇಂಗ್ಲಿಷ್ ಭಾಷೆಗೆ ಅನುವಾದವನ್ನು ಮಾಡುತ್ತಿದ್ದು ಅದೂ ಸಹ ಶೀಘ್ರದಲ್ಲಿಯೇ ಪ್ರಕಟವಾಗಲಿದೆ. ಜಿಜ್ಞಾಸುಗಳಾದ ವಾಚಕರು ಈ ಗ್ರಂಥದ ಪ್ರಯೋಜನವನ್ನು ಪಡೆದುಕೊಂಡಲ್ಲಿ ಅನುವಾದಕರ ಶ್ರಮವು ಸಾರ್ಥಕವಾಗುವುದು. ಡಾ|| ಸಿ. ಶಿವಕುಮಾರ ಸ್ವಾಮಿಗಳವರು ಇನ್ನೂ ಹೆಚ್ಚು ಇಂತಹ ಸಂಸ್ಕೃತ ಗ್ರಂಥಗಳ ಅನುವಾದ ಕಾರ್ಯವನ್ನು ಸದಾ ಮುಂದುವರೆಸುತ್ತಿರಲಿ. ಶ್ರೀ ಕಾಶೀವಿಶ್ವನಾಥ ಅನ್ನಪೂರ್ಣಾದೇವಿಯವರು ಮತ್ತು ಶ್ರೀ ಜಗದ್ಗುರು ವಿಶ್ವಾರಾಧ್ಯರು ಅವರಿಗೂ ಹಾಗೂ ಅವರ ಕುಟುಂಬಕ್ಕೆ ಅನಂತ ಮಂಗಲ ಪರಂಪರೆಯನ್ನು ಅನುಗ್ರಹಿಸಲಿ.

ಇತ್ಯಾಶಿಷಃ

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ
ವಿಧಾನಸೌಧ, ಬೆಂಗಳೂರು

ಮುನ್ನುಡಿ

ಏಕೀಕೃತ ಕರ್ನಾಟಕ ಈಗ ೫೦ನೆಯ ವರ್ಷದ 'ಬಂಗಾರದ ಹೊಸ್ತಿಲು' ದಾಟಿದೆ. ಈ ಸಂದರ್ಭದಲ್ಲಿ ರಾಜ್ಯ ಪತ್ರಾಗಾರ ಇಲಾಖೆಯು ಸಂಭ್ರಮದಿಂದ ಕೈಗೆತ್ತಿಕೊಂಡಿರುವ ಹಲವು ಯೋಜನೆಗಳನ್ನು ಇತಿಹಾಸ ಕುರಿತಾದ ಪುಸ್ತಕ ಪ್ರಕಟಣೆ ಯೋಜನೆಯು ತುಂಬಾ ಮಹತ್ವಪೂರ್ಣ ಪ್ರಯತ್ನವೆನಿಸಿದೆ.

೧೯೭೪ರಲ್ಲಿ ಅಸ್ತಿತ್ವಕ್ಕೆ ಬಂದ ಕರ್ನಾಟಕ ಸರ್ಕಾರದ ಪತ್ರಾಗಾರ ಇಲಾಖೆಯು ದಾಖಲು ಇತಿಹಾಸ ಸಾಹಿತ್ಯದ ದೊಡ್ಡಗಣಿ. ರಾಜ್ಯದ ಮೂಲೆಮೂಲೆಗಳಲ್ಲಿರುವ ಪ್ರಸಿದ್ಧ ರಾಜವಂಶ, ಅರಮನೆ, ಗುರುಮನೆ, ಪ್ರಸಿದ್ಧ ವ್ಯಕ್ತಿಗಳ ವಶದಲ್ಲಿದ್ದ ಕಾಗದ ಪತ್ರ, ಸನದು, ಕೈಫಿಯತ್ತು ರೂಪದ ದಾಖಲು ಸಾಹಿತ್ಯ ನಾಶವಾಗಲು ಬಿಡಬಾರದೆಂಬ ಕಳಕಳಿಯ ನೆಲೆಯಲ್ಲಿ ಹುಟ್ಟಿಕೊಂಡ ಈ ಇಲಾಖೆ ಈವರೆಗೆ ಲಕ್ಷಕ್ಕೂ ಮೀರಿ ದಾಖಲೆಗಳ ಸಂಗ್ರಹ, ವರ್ಗೀಕರಣ, ಸಂರಕ್ಷಣೆ, ಪ್ರಕಟಣೆ ಇತ್ಯಾದಿ ಬಹುಮುಖಿ ಕೆಲಸ ನಿರ್ವಹಿಸುತ್ತಾ ಬಂದಿದೆ. ಕನ್ನಡ ನುಡಿಯ ರಕ್ಷಣೆಗೆ ಮುಂದಾಗಿದೆ.

ನಮ್ಮ ಸಂಸ್ಕೃತಿಯ ವಿಧಿಯೂ, ಪ್ರತಿನಿಧಿಯೂ ಆಗಿರುವ ದಾಖಲು ಸಾಹಿತ್ಯ ರಾಶಿಯನ್ನು ಆಧುನಿಕ ಪ್ರಜೆಗಳಿಗೆ ಮುಟ್ಟಿಸುವುದು ಪ್ರಜಾ ಸರಕಾರದ ಪ್ರಮುಖ ಕರ್ತವ್ಯವೇ ಆಗಿದೆ. ಈ ಕರ್ತವ್ಯ ಕಡತ, ತಾಡೋಲೆ, ಕಾಗದಗಳಲ್ಲಿರುವ ಕೃತಿಗಳನ್ನು ಬೆಳಕಿಗೆ ತರುವ ಮತ್ತು ಅವುಗಳ ವರ್ಣನಾತ್ಮಕ ಸೂಚಿಯನ್ನು ತಯಾರಿಸಿ ಜನರಿಗೆ ಪರಿಚಯಿಸುವುದರ ಮೂಲಕ ನೆರವೇರುತ್ತಲಿರುವುದು ಅಪೂರ್ವ ವಿಚಾರವೇ ಸರಿ.

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯು ಐತಿಹಾಸಿಕ ದಾಖಲೆಗಳನ್ನು ಸಂಗ್ರಹಿಸಿ, ತಜ್ಞರಿಂದ ಪರಿಶೀಲಿಸಿ ಗ್ರಂಥರೂಪದಲ್ಲಿ ಪ್ರಕಟಿಸುವ ಒಂದು ಮಹತ್ವದ ಯೋಜನೆಯನ್ನು ಹಮ್ಮಿಕೊಂಡಿದ್ದು, ಈಗಾಗಲೇ ಈ ನಿಟ್ಟಿನಲ್ಲಿ ಕೆಲವು ಮಹತ್ವದ ಕೃತಿಗಳನ್ನು ಬೆಳಕಿಗೆ ತಂದಿದೆ. ಅಂತಹ ಒಂದು ಯೋಜನೆಯಲ್ಲಿ 'ಶಕ್ತಿವಿಶಿಷ್ಟಾದ್ವೈತ ತತ್ತ್ವತ್ರಯವಿಮರ್ಶೆ' ಎಂಬ ಗ್ರಂಥರತ್ನ ಪ್ರಕಟವಾಗುತ್ತಿರುವುದು ಅತ್ಯಂತ ಹೆಮ್ಮೆಯ ಸಂಗತಿಯಾಗಿದೆ.

ಪ್ರಸ್ತುತ ಗ್ರಂಥವು ಕಾಶೀ ಜ್ಞಾನಸಿಂಹಾಸನದ ಅಧಿಪತಿಗಳಾದ ಡಾ।। ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರು ಕಾಶೀನಗರದ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಡಿ.ಲಿಟ್ ಪದವಿಗಾಗಿ ಸಲ್ಲಿಸಿದ್ದ "ಶಕ್ತಿವಿಶಿಷ್ಟಾದ್ವೈತತತ್ತ್ವತ್ರಯ ವಿಮರ್ಶಃ" ಎಂಬ ಸಂಸ್ಕೃತ ಭಾಷೆಯ ಸಂಶೋಧನಾ ಮಹಾಪ್ರಬಂಧದ

ಕನ್ನಡಾನುವಾದ. ಅದ್ವೈತ, ದ್ವೈತ, ವಿಶಿಷ್ಟಾದ್ವೈತಗಳಂತೆಯೇ ಪ್ರಸಿದ್ಧವಾಗಿರುವ ಶಕ್ತಿವಿಶಿಷ್ಟಾದ್ವೈತವೆಂದು ಕರೆಯಲ್ಪಡುವ ವೀರಶೈವ ಸಿದ್ಧಾಂತವನ್ನು ಕುರಿತಾದ ತಲಸ್ಪರ್ಶಿ ಅಧ್ಯಯನವಿದಾಗಿದ್ದು, ಕಾಶೀನಗರದ ಘನಪಂಡಿತವರೇಣ್ಯರಿಂದ ಶ್ಲಾಘಿಸಲ್ಪಟ್ಟಿರುವ ಅಪೂರ್ವ ಗ್ರಂಥವಿದು. ಸಂಸ್ಕೃತ ಭಾಷೆಯಲ್ಲಿದ್ದ ಈ ಕೃತಿಯು ವೀರಶೈವರು ಹೆಚ್ಚಿನ ಸಂಖ್ಯೆಯಲ್ಲಿರುವ ಕನ್ನಡ ನಾಡಿನ ಜನತೆಗೆ ಹಾಗೂ ವೀರಶೈವ ಧರ್ಮ-ದರ್ಶನಗಳನ್ನು ಕುರಿತು ಸಂಶೋಧನೆಯಲ್ಲಿ ನಿರತರಾಗಿರುವ ವಿದ್ವಾಂಸರಿಗೆ ಪ್ರಯೋಜನವಾಗಲಿ ಎಂಬ ಸದುದ್ದೇಶದಿಂದ ಪರಮ ಪೂಜ್ಯ ಜಗದ್ಗುರುಗಳು ಈ ಕೃತಿಯನ್ನು ಕನ್ನಡ ಭಾಷೆಗೆ ತರಬೇಕೆಂದು ಸಂಕಲ್ಪಿಸಿದರು. ಈ ಅಮೂಲ್ಯ ಗ್ರಂಥವನ್ನು ಕನ್ನಡ ಭಾಷೆಗೆ ಅನುವಾದಿಸಿದವರು ಬೆಂಗಳೂರಿನ ಬಸವೇಶ್ವರ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿರುವ ಡಾ॥ ಸಿ. ಶಿವಕುಮಾರಸ್ವಾಮಿ ಅವರು. ಶ್ರೀಯುತರು ಈಗಾಗಲೇ ವೀರಶೈವಕ್ಕೆ ಸಂಬಂಧಿಸಿದ ಹಲವು ಕೃತಿಗಳನ್ನು ಸಂಸ್ಕೃತದಿಂದ ಕನ್ನಡ ಭಾಷೆಗೆ ಅನುವಾದಿಸಿದ್ದು ಅವುಗಳೆಲ್ಲವೂ ಜನಮನ್ನಣೆ ಗಳಿಸಿವೆ. ಶಾಸ್ತ್ರಶೈಲಿಯಲ್ಲಿರುವ ಈ ಕೃತಿಯನ್ನು ಬಹಳ ಶ್ರಮವಹಿಸಿ ಡಾ॥ ಸಿ. ಶಿವಕುಮಾರಸ್ವಾಮಿಯವರು ಅನುವಾದಿಸಿದ್ದಾರೆ.

ವೇದ, ಉಪನಿಷತ್ತು, ೨೮ ಶಿವಾಗಮಗಳು, ಪುರಾಣಗಳು, ಸಿದ್ಧಾಂತ ಶಿಖಾಮಣಿ, ಶ್ರೀಕರಭಾಷ್ಯ, ಕ್ರಿಯಾಸಾರ, ಅನುಭವಸೂತ್ರ ಮೊದಲಾದ ಪ್ರಾಚೀನ ಸಂಸ್ಕೃತ ಗ್ರಂಥಗಳಲ್ಲುಕ್ತವಾದ, ವೀರಶೈವ ಧರ್ಮ-ದರ್ಶನಗಳಿಗೆ ಸಂಬಂಧಿಸಿದ ಸಮಸ್ತ ವಿಷಯವು ಈ ಕೃತಿಯಲ್ಲಿ ವ್ಯವಸ್ಥಿತ ರೀತಿಯಲ್ಲಿ ನಿರೂಪಿತವಾಗಿದೆ. ಒಟ್ಟಿನಲ್ಲಿ ಇದೊಂದು ವೀರಶೈವದ ಇತಿಹಾಸ-ಪರಂಪರೆಗಳನ್ನೊಳಗೊಂಡ ಮಹತ್ತ್ವದ ಕೃತಿ ಎಂದರೆ ತಪ್ಪಾಗಲಾರದು. ಇಂತಹ ಅಮೂಲ್ಯ ಗ್ರಂಥರತ್ನವನ್ನು ನಮ್ಮ ಇಲಾಖೆಯು ಪ್ರಕಟಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ.

ನಮ್ಮ ಇಲಾಖೆಯು ಕೈಗೊಂಡಿರುವ ಇಂತಹ ಯೋಜನೆಗೆ ಸದಾ ಸಹಕಾರವನ್ನು ನೀಡುತ್ತಿರುವ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಡಾ॥ ಬಿ.ಎಸ್. ಯಡಿಯೂರಪ್ಪನವರಿಗೆ ಧನ್ಯವಾದಗಳನ್ನು ಸಮರ್ಪಿಸುತ್ತೇನೆ.

ಪ್ರಸ್ತುತ ಗ್ರಂಥವು ರೂಪುಗೊಳ್ಳುವುದಕ್ಕೆ ಕಾರಣರಾದ ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಕಾರ್ಯದರ್ಶಿಗಳಾದ ಸನ್ಮಾನ್ಯ ಜಯರ್ಶಾಮರಾಜೇ ಅರಸು ಅವರಿಗೆ ಇಲಾಖೆಯ ಹೃತ್ಪೂರ್ವಕ ಕೃತಜ್ಞತೆಗಳು. ಗ್ರಂಥ ಪ್ರಕಾಶನಕ್ಕೆ ಸಹಕರಿಸಿದ ಇಲಾಖೆಯ ಎಲ್ಲ ಅಧಿಕಾರಿಗಳಿಗೂ, ಸಿಬ್ಬಂದಿ ವರ್ಗದವರಿಗೂ ಹಾಗೂ ಮುದ್ರಕರಿಗೆ ತುಂಬಾ ಅಬಾರಿಯಾಗಿದ್ದೇನೆ.

ಶ್ರೀಮತಿ ಉಷಾ ಸುರೇಶ್
ಬೆಂಗಳೂರು ನಿರ್ದೇಶಕರು
ದಿನಾಂಕ ೧೫.೬.೨೦೦೯ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ

ಅನಿಸಿಕೆಗಳು

ಈಗ ಪ್ರಕಟವಾಗುತ್ತಿರುವ ಶಕ್ತಿವಿಶಿಷ್ಟಾದ್ವೈತತತ್ತ್ವತ್ರಯವಿಮರ್ಶೆ ಎಂಬ ಗ್ರಂಥವು ಮೂಲತಃ ಶ್ರೀಮತ್ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಯವರು ತಮ್ಮ ವಿದ್ಯಾವಾಚಸ್ಪತಿ (ಡಿ.ಲಿಟ್) ಪದವಿಗಾಗಿ ವಾರಾಣಸಿಯ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದ ಸಂಸ್ಕೃತದಲ್ಲಿ ರಚಿಸಿದ್ದ ಮಹಾಪ್ರಬಂಧ. ಈ ಮಹಾಪ್ರಬಂಧಕ್ಕೆ ಮನ್ನಣೆ ನೀಡಿ ವಿಶ್ವವಿದ್ಯಾಲಯವು ವಿದ್ಯಾವಾಚಸ್ಪತಿ (ಡಿ.ಲಿಟ್) ಪದವಿಯನ್ನು ಪರಮಪೂಜ್ಯರಿಗೆ ನೀಡಿ ಗೌರವಿಸಿದೆ. ಕಾಶಿಯಲ್ಲಿನ ಪಂಡಿತಪ್ರವರರಿಂದ ಬಹುವಾಗಿ ಮೆಚ್ಚಿ ಪ್ರಶಂಸಿಸಲ್ಪಟ್ಟಿರುವ ಈ ಸಂಸ್ಕೃತ ಮಹಾಪ್ರಬಂಧವು ಈ ಮೊದಲು ೧೯೯೬ರಲ್ಲಿ ವಾರಾಣಸಿಯ ಜಂಗಮವಾಡಿ ಮಠದ ಶೈವಭಾರತೀ ಶೋಧ ಪ್ರತಿಷ್ಠಾನದ ಮೂಲಕ ಪುಸ್ತಕ ರೂಪದಲ್ಲಿ ಪ್ರಕಟವಾಗಿತ್ತು. ಈ ಗ್ರಂಥವು ಕರ್ನಾಟಕದ ಜನರಿಗೆ ತಮ್ಮದೇ ಭಾಷೆಯಲ್ಲಿ ದೊರೆಯಬೇಕೆಂಬ ಸದುದ್ದೇಶದಿಂದ ಇದರ ಕನ್ನಡ ಅನುವಾದವನ್ನು ಬೆಂಗಳೂರಿನ ವೀರಶೈವ ಅನುಸಂಧಾನ ಸಂಸ್ಥಾನದ ಮೂಲಕ ಪ್ರಕಟಿಸುತ್ತಿರುವುದು ನಮಗೆ ಅತ್ಯಂತ ಹರ್ಷದ, ಅದಕ್ಕಿಂತ ಹೆಚ್ಚಾಗಿ ಅತ್ಯಂತ ಅಭಿಮಾನದ ಸಂಗತಿ.

ಈ ಗ್ರಂಥದಲ್ಲಿ ಪ್ರತಿಪಾದಿತವಾದ ವಿಷಯವೆಂದರೆ ಗ್ರಂಥದ ಶೀರ್ಷಿಕೆಯೇ ಸೂಚಿಸುವಂತೆ ಶಕ್ತಿವಿಶಿಷ್ಟಾದ್ವೈತದರ್ಶನವೆಂದು ವಿದ್ವತ್ ಸಮುದಾಯದಲ್ಲಿ ಪ್ರಸಿದ್ಧವಾದ ವೀರಶೈವ ಸಿದ್ಧಾಂತದಲ್ಲಿ ಬರುವ ತತ್ತ್ವತ್ರಯದ ವಿಮರ್ಶಾತ್ಮಕ ವಿಚಾರ. ಇಲ್ಲಿ ತತ್ತ್ವತ್ರಯವೆಂದರೆ ಮೂರು ತತ್ತ್ವಗಳು. ಆ ಮೂರು ತತ್ತ್ವಗಳೆಂದರೆ ಶೈವಾಗಮಗಳ ಪ್ರಕಾರ ಪತಿ-ಪಶು-ಪಾಶ. ಗ್ರಂಥಕಾರರೇ ಹೇಳಿದಂತೆ ಈ ಮೂರು ತತ್ತ್ವಗಳು ವೀರಶೈವ ದರ್ಶನದಲ್ಲಿ ಶಿವ-ಜೀವ-ಶಕ್ತಿಯೆಂದು ಕರೆಯಲ್ಪಡುತ್ತವೆ. ಅವುಗಳ ವಿಷಯದಲ್ಲಿ ವೀರಶೈವ ಸಿದ್ಧಾಂತಕ್ಕೂ, ಉತ್ತರದ ಕಾಶ್ಮೀರ ಶೈವ-ದಕ್ಷಿಣದ ಸಿದ್ಧಾಂತಶೈವ ದರ್ಶನಗಳಿಗೂ ಅನೇಕಾಂಶಗಳಲ್ಲಿ ಸಾಮ್ಯವೂ, ಕೆಲವಂಶಗಳಲ್ಲಿ ವ್ಯತ್ಯಾಸವೂ ಕಂಡುಬರುತ್ತವೆ. ಹೀಗಿರುವಾಗ ತತ್ತ್ವತ್ರಯದ ವಿಚಾರದಲ್ಲಿ ವೀರಶೈವದ ವೈಶಿಷ್ಟ್ಯವೇನು? ಎಂಬುದು ಮೊದಲ ಪ್ರಶ್ನೆ. ಇದರ ಜೊತೆಗೆ ಕೇವಲ ವೀರಶೈವರಲ್ಲಿ ಪ್ರಸಿದ್ಧವಾದ ಅಷ್ಟಾವರಣ-ಪಂಚಾಚಾರ-ಷಟ್‌ಸ್ಥಲವೆಂಬ ತತ್ತ್ವತ್ರಯದ ಸ್ವರೂಪವಿಮರ್ಶೆಯೂ ಇಲ್ಲಿ ಪ್ರಸ್ತುತವೆಂದು, ಈ ತತ್ತ್ವತ್ರಯದ ಅಂಗೀಕಾರದಿಂದ ವೀರಶೈವ ಆಚಾರ್ಯರು ಯಾವ

ವೈಶಿಷ್ಟ್ಯವನ್ನು ನೆಲೆಗೊಳಿಸಿದರು? ಎಂಬುದು ಎರಡನೆ ಪ್ರಶ್ನೆ. ಈ ಎರಡೂ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವನ್ನು ಈ ಗ್ರಂಥದಲ್ಲಿ ಕಾಣಬಹುದು.

ಈ ಕನ್ನಡ ಅನುವಾದವನ್ನು ಸಿದ್ಧಪಡಿಸಿದವರು ಡಾ|| ಸಿ. ಶಿವಕುಮಾರಸ್ವಾಮಿ, ಸಂಸ್ಕೃತ ಪ್ರಾಧ್ಯಾಪಕರು, ಬಸವೇಶ್ವರ ಪ್ರಥಮದರ್ಜೆ ಮಹಾವಿದ್ಯಾಲಯ, ಬೆಂಗಳೂರು. ಮೂಲಕೃತಿಯು ಸಂಸ್ಕೃತದ ಶಾಸ್ತ್ರೀಯ ಶೈಲಿಯಲ್ಲಿದೆ. ಅದನ್ನು ಬೇರೆ ಯಾವುದೇ ಭಾಷೆಗೆ ಅನುವಾದಿಸುವುದೆಂದರೆ ಒಂದು ಸವಾಲಿನ ಕೆಲಸವೇ ಸರಿ. ಅಂತಹ ಸವಾಲಿನ ಕಾರ್ಯವನ್ನು ಡಾ|| ಸ್ವಾಮಿ ಸಮರ್ಥವಾಗಿ ನಿರ್ವಹಿಸಿದ್ದಾರೆ ಎಂಬುದು ನನಗೆ ವೈಯಕ್ತಿಕವಾಗಿ ಅತ್ಯಂತ ಹೆಮ್ಮೆಯ ವಿಷಯ. ಎಂ.ಎ., ಎಂ.ಫಿಲ್., ಪಿಎಚ್.ಡಿ. ಮಾಡುವಲ್ಲಿ ನನ್ನ ವಿದ್ಯಾರ್ಥಿಯಾಗಿದ್ದ, ಈಗಲೂ ನನ್ನನ್ನು ಗುರುವೆಂದು ಗೌರವಿಸುವ ಡಾ|| ಸ್ವಾಮಿ ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡಿರುವುದು ಅದಕ್ಕೆ ಕಾರಣ. ಅನುವಾದವು ಮೂಲಗ್ರಂಥದ ಶೈಲಿಯ ದೃಷ್ಟಿಯಿಂದ ಎಷ್ಟು ಸರಳವಾಗಿರಲು ಸಾಧ್ಯವೋ ಅಷ್ಟು ಸರಳವಾಗಿದೆ ಎಂದು ನಾನು ಮೆಚ್ಚುಗೆಯಿಂದ ಹೇಳಲು ಇಚ್ಛಿಸುತ್ತೇನೆ.

ಈ ಗ್ರಂಥವನ್ನು ಎಲ್ಲರೂ ಓದಬೇಕು. ಮೂರು ತತ್ತ್ವಗಳ ನಿರೂಪಣೆಯ ಅಂಗವಾಗಿ ವೀರಶೈವ ಆಚಾರ-ವಿಚಾರಗಳ ಸಮಗ್ರ ಪರಿಚಯವನ್ನು ಈ ಗ್ರಂಥದಲ್ಲಿ ಮಾಡಿಕೊಡಲಾಗಿದೆ. ಜೊತೆಗೆ ಕಾಶ್ಮೀರಶೈವ ಮತ್ತು ಸಿದ್ಧಾಂತ ಶೈವದರ್ಶನಗಳ ಮುಖ್ಯ ವಿಚಾರಗಳು ತೌಲನಿಕವಾಗಿ ವಿಮರ್ಶಿಸಲ್ಪಟ್ಟಿವೆ. ಹೀಗೆ ವೀರಶೈವರು ಮಾತ್ರವಲ್ಲದೆ ಇತರ ವೇದಾಂತ ದರ್ಶನಗಳಲ್ಲಿ ಆಸಕ್ತಿಯುಳ್ಳವರೆಲ್ಲರೂ ಇದನ್ನು ಓದಿದರೆ ಅವರಿಗೂ ದಾರ್ಶನಿಕ ಹಸಿವನ್ನು ತೃಪ್ತಿಪಡಿಸುವ ಕೆಲವಂಶಗಳು ದೊರೆಯುತ್ತವೆ. ಸಂಸ್ಕೃತದ ಶಾಸ್ತ್ರೀಯ ಗ್ರಂಥದ ಅನುವಾದವನ್ನು ಅರ್ಥಮಾಡಿಕೊಳ್ಳುವುದು ಕಷ್ಟವೇನೋ ಎಂಬ ಪೂರ್ವಸಂದೇಹಕ್ಕೆ ಒಳಗಾಗದೆ ಅಧ್ಯಯನ ಮಾಡಿದರೆ ಈ ಗ್ರಂಥವು ಎಲ್ಲರಿಗೂ ದಾರ್ಶನಿಕ ಜ್ಞಾನವನ್ನು ನೀಡುತ್ತದೆಯೆಂಬ ವಿಷಯದಲ್ಲಿ ನನಗಂತೂ ಭರವಸೆಯಿದೆ.

ಇಂತಹ ಅಮೂಲ್ಯ ಗ್ರಂಥವನ್ನು ಕನ್ನಡ ಭಾಷೆಗೆ ಅನುವಾದಿಸಲು ಅನುಗ್ರಹಿಸಿದ ಶ್ರೀಮತ್ಕಾಶೀ ಜಗದ್ಗುರುಗಳವರಿಗೆ ನಾನು ಪ್ರಣಾಮಪೂರ್ವಕ ಕೃತಜ್ಞತೆಗಳನ್ನು ಸಮರ್ಪಿಸುತ್ತೇನೆ. ಈ ಗ್ರಂಥವನ್ನು ಜಗದ್ಗುರುಗಳ ಆದೇಶದಂತೆ ಕನ್ನಡಕ್ಕೆ ಅನುವಾದಿಸಿಕೊಟ್ಟ ಡಾ|| ಸಿ. ಶಿವಕುಮಾರಸ್ವಾಮಿ ಅವರಿಗೆ ನನ್ನ ಮೆಚ್ಚುಗೆಯ ಶುಭಾಶಯಗಳು.

ಬೆಂಗಳೂರು
ದಿನಾಂಕ ೧೫.೬.೨೦೦೯

ಇತಿ ಸಜ್ಜನ ವಿಧೇಯ
ಡಾ|| ಎಂ. ಶಿವಕುಮಾರಸ್ವಾಮಿ

ಶಕ್ತಿವಿಶಿಷ್ಟಾದ್ವೈತತತ್ತ್ವತ್ರಯವಿಮರ್ಶೆ

ಭೂಮಿಕೆ

ಶೈವಧರ್ಮದ ಪ್ರಮುಖ ಶಾಖೆಯಾದ ವೀರಶೈವವು ತನ್ನದೇ ಆದ ಆಚಾರ-ವಿಚಾರಗಳನ್ನು ಒಳಗೊಂಡ ಒಂದು ಸ್ವತಂತ್ರವಾದ ಮತವಾಗಿದ್ದು, ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತವೆಂದು ಪ್ರಸಿದ್ಧವಾಗಿದೆ. ಅದ್ವೈತ, ದ್ವೈತ, ವಿಶಿಷ್ಟಾದ್ವೈತ ಸಿದ್ಧಾಂತ ಪ್ರತಿಪಾದಕರಾದ ಆಚಾರ್ಯರುಗಳು ತಮ್ಮ ಮತದ ಸಿದ್ಧಾಂತಗಳ ಸ್ಥಾಪನೆಯ ಸಂದರ್ಭದಲ್ಲಿ ಇತರ ಮತ ಸಿದ್ಧಾಂತಗಳನ್ನು ಖಂಡಿಸಿ, ಸ್ವಮತ ಸ್ಥಾಪನೆಯನ್ನು ಮಾಡಿದ್ದಾರಲ್ಲದೆ, ಪ್ರಸ್ಥಾನತ್ರಯಗಳೆಂದು ಪ್ರಸಿದ್ಧವಾದ ಉಪನಿಷತ್, ಬ್ರಹ್ಮಸೂತ್ರ ಮತ್ತು ಭಗವದ್ಗೀತೆಗಳಿಗೆ ತಮ್ಮ ತಮ್ಮ ಮತ ಪರವಾದ ಭಾಷ್ಯವನ್ನು ಬರೆದು ಆಯಾ ಮತದ ಸ್ಥಾಪಕರೆನಿಸಿದ್ದಾರೆ. ಆದರೆ ಶಕ್ತಿವಿಶಿಷ್ಟಾದ್ವೈತವೆಂದು ಕರೆಯಲಾಗುವ ವೀರಶೈವ ಸಿದ್ಧಾಂತ ಸ್ಥಾಪನೆಯ ಸಂದರ್ಭದಲ್ಲಿ ಈ ಮತದ ಆಚಾರ್ಯರು ಯಾವುದೇ ಮತ ಸಿದ್ಧಾಂತಗಳನ್ನು ಖಂಡಿಸದೆ ವೇದ, ಉಪನಿಷತ್, ಪುರಾಣ, ಆಗಮ ವಾಕ್ಯಗಳ ಆಧಾರದಿಂದ ಸರ್ವಶ್ರುತಿಸಮನ್ವಯವೆನಿಸಿರುವ ವೀರಶೈವ ಸಿದ್ಧಾಂತವನ್ನು ಸ್ಥಾಪಿಸಿದ್ದಾರೆ.

ವೇದ, ಉಪನಿಷತ್ತು, ಆಗಮಗಳು, ಪುರಾಣಗಳಲ್ಲಿ ಚದುರಿಹೋಗಿದ್ದ ವೀರಶೈವ ಸಿದ್ಧಾಂತವನ್ನು ಏಕೋತ್ತರಶತಸ್ಥಲಗಳ ಚೌಕಟ್ಟಿನಲ್ಲಿ ವ್ಯವಸ್ಥಿತವಾಗಿ ನಿರೂಪಿಸಿದ ಮೊಟ್ಟಮೊದಲ ಗ್ರಂಥವೇ ಶ್ರೀ ಸಿದ್ಧಾಂತ ಶಿಖಾಮಣಿ. ಸಿದ್ಧಾಂತ ಶಿಖಾಮಣಿಯಂತೆಯೇ ಶ್ರೀಪತಿ ಪಂಡಿತಾರಾಧ್ಯರ ಶ್ರೀಕರಭಾಷ್ಯ, ನೀಲಕಂಠ ಶಿವಾಚಾರ್ಯರ ಕ್ರಿಯಾಸಾರ, ಅಗಸ್ತ್ಯ ಮಹರ್ಷಿಗಳ ಲಘುಸೂತ್ರವೃತ್ತಿ, ಮೊಗ್ಗೆಯ ಮಾಯಿದೇವನ ಅನುಭವಸೂತ್ರ - ವಿಶೇಷಾರ್ಥ ಪ್ರಕಾಶಿಕೆ, ನಂದಿಕೇಶ್ವರ ಶಿವಾಚಾರ್ಯರ ಲಿಂಗಧಾರಣ ಚಂದ್ರಿಕೆ, ಸ್ವಪ್ರಭಾನಂದ ಶಿವಾಚಾರ್ಯರ ಶಿವಾದ್ವೈತಮಂಜರೀ, ಮರಿತೋಂಟದಾರ್ಯರ ವೀರಶೈವಾನಂದಚಂದ್ರಿಕೆ ಮೊದಲಾದ ನೂರಾರು ಸಂಸ್ಕೃತ ಭಾಷೆಯ ಗ್ರಂಥಗಳು ರಚಿತವಾದವು. ಇವಗಳಲ್ಲದೆ ಕನ್ನಡ, ಮರಾಠಿ, ತೆಲುಗು, ತಮಿಳು ಭಾಷೆಗಳಲ್ಲಿಯೂ ವೀರಶೈವ ಸಾಹಿತ್ಯ ಗ್ರಂಥಗಳು ರಚಿತವಾಗಿವೆ.

ಪ್ರತಿಯೊಂದು ಮತದ ದರ್ಶನದಲ್ಲಿ ಸಿದ್ಧಾಂತ (ಶಾಸ್ತ್ರ) ಮತ್ತು ಆಚರಣೆ (ಅಥವಾ ಸಂಪ್ರದಾಯ) ಎಂಬ ಎರಡು ಭಾಗಗಳಿರುತ್ತವೆ. ಅಂತೆಯೇ ಶಕ್ತಿವಿಶಿಷ್ಟಾದ್ವೈತವೆಂದು ಕರೆಯಲಾಗುವ ವೀರಶೈವದರ್ಶನದಲ್ಲಿ ಸಂಪ್ರದಾಯ ಅಥವಾ ಆಚರಣೆಯ ಭಾಗವನ್ನು

ಕುರಿತು ಅಧ್ಯಯನ, ಅಧ್ಯಾಪನ, ಸಂಶೋಧನೆಗಳನ್ನು ಮಾಡುವವರೇ ಹೆಚ್ಚಾಗಿ ಕಂಡುಬರುತ್ತಾರೆಯೇ ಹೊರತು ಶಾಸ್ತ್ರಭಾಗವನ್ನು ಕುರಿತು ಚಿಂತನೆ ಮಾಡುವವರು ಬಹಳ ವಿರಳವೆಂದರೆ ತಪ್ಪಾಗಲಾರದು. ಅಂತಹ ವಿರಳ ಚಿಂತಕರಲ್ಲಿ ಪ್ರಮುಖರಾದವರೆಂದರೆ ಈಗಿನ ಕಾಶೀ ವಿಶ್ವಾರಾಧ್ಯ ಜ್ಞಾನಸಿಂಹಾಸನದ ಪೀಠಾಚಾರ್ಯರಾದ ಡಾ।। ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರು. ಪರಮಪೂಜ್ಯರು ಸಂಸ್ಕೃತ, ಕನ್ನಡ, ಹಿಂದಿ ಮತ್ತು ಮರಾಠಿ ಭಾಷೆಗಳಲ್ಲಿ ಅಗಾಧ ಪಾಂಡಿತ್ಯವುಳ್ಳವರಾಗಿದ್ದು, ಈ ನಾಲ್ಕೂ ಭಾಷೆಗಳಲ್ಲಿಯೂ ವೀರಶೈವ ಸಾಹಿತ್ಯವನ್ನು ರಚಿಸಿದ್ದಾರೆ. ವೀರಶೈವ ಸಿದ್ಧಾಂತ-ಸಾಹಿತ್ಯವನ್ನು ಕರತಲಾಮಲಕ ಮಾಡಿಕೊಂಡಿರುವ ಜಗದ್ಗುರುಗಳು ಸಂಸ್ಕೃತವನ್ನು ಸಂಪ್ರದಾಯಬದ್ಧವಾಗಿ ಅಭ್ಯಾಸ ಮಾಡಿ, ಕಾಶೀ ಮಹಾನಗರದಲ್ಲಿರುವ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದಿಂದ ‘ಸಿದ್ಧಾಂತ ಶಿಖಾಮಣಿ ಸಮೀಕ್ಷಾ’ ಎಂಬ ಪ್ರೌಢಪ್ರಬಂಧ ರಚಿಸಿ ವಿದ್ಯಾವಾರಿಧಿ (ಪಿಎಚ್‌.ಡಿ.) ಮತ್ತು ‘ಶಕ್ತಿವಿಶಿಷ್ಟಾದ್ವೈತ ತತ್ತ್ವತ್ರಯವಿಮರ್ಶಃ’ ಎಂಬ ಸಂಪ್ರಬಂಧವನ್ನು ರಚಿಸಿ ವಿದ್ಯಾವಾಚಸ್ಪತಿ (ಡಿ.ಲಿಟ್‌) ಪದವಿಗಳಿಂದ ಭೂಷಿತರಾದರು. ಈ ಎರಡೂ ಸಂಪ್ರಬಂಧಗಳು ಶೈವಭಾರತಿ ಶೋಧ ಪ್ರತಿಷ್ಠಾನ, ಜಂಗಮವಾಡಿಮಠ, ವಾರಾಣಸಿ ಇಲ್ಲಿಂದ ಪ್ರಕಟವಾಗಿವೆ.

ಪ್ರಸ್ತುತ ‘ಶಕ್ತಿವಿಶಿಷ್ಟಾದ್ವೈತತತ್ತ್ವತ್ರಯವಿಮರ್ಶೆ’ ಎಂಬ ಕೃತಿಯು ಡಾ।। ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರಿಗೆ ಡಿ.ಲಿಟ್‌ ಪದವಿಯನ್ನು ತಂದುಕೊಟ್ಟ ‘ಶಕ್ತಿವಿಶಿಷ್ಟಾದ್ವೈತತತ್ತ್ವತ್ರಯವಿಮರ್ಶಃ’ ಎಂಬ ಸಂಸ್ಕೃತ ಗ್ರಂಥದ ಅನುವಾದ. ಇದೊಂದು ಶಾಸ್ತ್ರಗ್ರಂಥವಾಗಿದೆ.

ಪರಮಪೂಜ್ಯ ಜಗದ್ಗುರುಗಳೇ ತಮ್ಮ ಭೂಮಿಕೆಯಲ್ಲಿ ಈ ಗ್ರಂಥದ ಹೆಸರನ್ನು ಕುರಿತು ಹೀಗೆ ಹೇಳಿದ್ದಾರೆ: “ಕಾಶ್ಮೀರಶೈವ - ಸಿದ್ಧಾಂತಶೈವ - ವೀರಶೈವದರ್ಶನಗಳ ಸಾಮ್ಯ, ವೈಷಮ್ಯ, ವೈಶಿಷ್ಟ್ಯಗಳನ್ನು ಪ್ರತಿಪಾದಿಸುವ, ವಿಶೇಷವಾಗಿ ಶಕ್ತಿವಿಶಿಷ್ಟಾದ್ವೈತವೆಂದು ಕರೆಯಲಾಗುವ ವೀರಶೈವ ದರ್ಶನದ ತತ್ತ್ವತ್ರಯಗಳನ್ನು ವಿಮರ್ಶಾತ್ಮಕ ಅಧ್ಯಯನವನ್ನು ನೂತನ ಶೈಲಿಯಲ್ಲಿ ರಚಿಸಲಾಗಿದೆ ಎಂಬುದನ್ನು ತತ್ತ್ವಚಿಂತಕರಾದ ವಿದ್ವಾಂಸರು ಗಮನಿಸಬೇಕು.

ಆಗಮಿಕ ದರ್ಶನಗಳಲ್ಲಿ ಪದಾರ್ಥಗಳನ್ನು ‘ತತ್ತ್ವ’ ಎಂದು ಕರೆಯಲಾಗಿದೆ. ಆ ತತ್ತ್ವಗಳು ಒಟ್ಟು ಮೂವತ್ತಾರು. ಇವುಗಳಲ್ಲಿ ಪತಿ, ಪಶು, ಪಾಶ ಎಂಬವು ಮಾತ್ರ ಮೂರು ಪ್ರಧಾನ ತತ್ತ್ವಗಳು. ವೀರಶೈವ ದರ್ಶನದಲ್ಲಿ ಇವುಗಳನ್ನು ಶಿವ-ಜೀವ-ಶಕ್ತಿಗಳೆಂದು ಕರೆಯಲಾಗಿದೆ. ಜೀವಾತ್ಮನ ಬಂಧ-ಮೋಕ್ಷಗಳೆಂಬ ಅವಸ್ಥೆಗಳನ್ನು ದ್ವೈತ-ಅದ್ವೈತ ದರ್ಶನಗಳಂತೆ ವೀರಶೈವ ದರ್ಶನದಲ್ಲಿಯೂ ಪ್ರಾಮಾಣ್ಯವೆಂದು ಪ್ರತಿಪಾದಕವಾದರೆ, ಸಿದ್ಧಾಂತಶೈವರು ದ್ವೈತವಾದಿಗಳೆಂಬುದು ಪ್ರಸಿದ್ಧವಾಗಿಯೇ ಇದೆ. ತತ್ತ್ವತ್ರಯಗಳ ಸ್ವರೂಪದ ವಿಷಯದಲ್ಲಿ ವೀರಶೈವದರ್ಶನವು ಕಾಶ್ಮೀರಶೈವ-ಸಿದ್ಧಾಂತ

ಶೈವಗಳಿಗೆ ಕೆಲವು ವಿಷಯಗಳಲ್ಲಿ ಸಾಮ್ಯವು ಕಂಡುಬಂದರೆ ಮತ್ತೆ ಕೆಲವು ವಿಷಯಗಳಲ್ಲಿ ವೈಷಮ್ಯವು ಕಂಡುಬರುತ್ತದೆ. ಆ ಕಾರಣದಿಂದ ಈ ಮೂರೂ ದರ್ಶನಗಳಲ್ಲಿ ತತ್ತ್ವತ್ರಯಗಳ ವಿಷಯದಲ್ಲಿ ಕಂಡುಬರುವ ಸಾಮ್ಯ-ವೈಷಮ್ಯಗಳನ್ನು ಹೇಳಿ, ವೀರಶೈವ ದರ್ಶನದ ವೈಶಿಷ್ಟ್ಯವೇನೆಂದು ನಿರೂಪಿಸುವುದೇ ಪ್ರಮುಖ ಉದ್ದೇಶವಾಗಿದೆ. ಮತ್ತು ವೀರಶೈವ ದರ್ಶನಗಳಲ್ಲಿ ಪ್ರತಿಪಾದಿತವಾಗಿರುವ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳೆಂಬ ತತ್ತ್ವತ್ರಯಗಳ ಸ್ವರೂಪವನ್ನು ವಿಮರ್ಶಿಸಿ, ಈ ಅಸಾಧಾರಣವಾದ ತತ್ತ್ವತ್ರಯಗಳ ಅಂಗೀಕಾರದಿಂದ ವೀರಶೈವಾಚಾರ್ಯರು ಯಾವ ರೀತಿಯ ವೈಶಿಷ್ಟ್ಯವನ್ನು ಸ್ಥಾಪಿಸಿದ್ದಾರೆ ಎಂಬುದನ್ನು ಪರಿಶೀಲಿಸುವುದು ಎರಡನೆಯ ಉದ್ದೇಶವಾಗಿದೆ. ಹೀಗೆ ಈ ಎರಡು ಉದ್ದೇಶಗಳಿಗೆ ಸಂಬಂಧಿಸಿದ ವಿಷಯಗಳನ್ನು ಶಾಸ್ತ್ರೀಯ ಪದ್ಧತಿಯಿಂದ ಚಿಂತನೆ ಮಾಡಿರುವ ಗ್ರಂಥವಾಗಿದೆ" ಎಂದು ಪರಮಪೂಜ್ಯ ಜಗದ್ಗುರುಗಳೇ ತಮ್ಮ ಮೂಲ ಗ್ರಂಥದ ಭೂಮಿಕೆಯಲ್ಲಿ (ಪು. ೮) ಸ್ಪಷ್ಟಪಡಿಸಿದ್ದಾರೆ.

ದಾರ್ಶನಿಕ ಜಗತ್ತಿನಲ್ಲಿ ದ್ವೈತ-ಅದ್ವೈತ-ವಿಶಿಷ್ಟಾದ್ವೈತ ಎಂಬ ಸಿದ್ಧಾಂತಭೇದದಿಂದ ವಿದ್ವಾಂಸರು ಪರಸ್ಪರ ಜಗಳವಾಡುತ್ತಿರುವುದು ಸರ್ವರಿಗೂ ತಿಳಿದ ವಿಷಯವೇ ಸರಿ. ಇಂತಹ ಜಗಳಗಳಿಂದ ಶಾಂತಿಯು ಎಂದಿಗೂ ಲಭಿಸದು. ಆದುದರಿಂದಲೇ ವೀರಶೈವ ಆಚಾರ್ಯರು ಶಕ್ತಿವಿಶಿಷ್ಟಾದ್ವೈತವೆಂಬ ಸಮನ್ವಯ ಸಿದ್ಧಾಂತವನ್ನು ಸ್ಥಾಪಿಸಿದರು. ಅದನ್ನು ಶ್ರೀಪತಿ ಪಂಡಿತರು ಹೀಗೆ ಹೇಳಿದ್ದಾರೆ:

> **ಶ್ರುತ್ಯೈಕದೇಶಪ್ರಾಮಾಣ್ಯಂ ದ್ವೈತಾದ್ವೈತಮತಾದಿಷು॥**
> **ದ್ವೈತಾದ್ವೈತಮತೇ ಶುದ್ಧೇ ವಿಶೇಷಾದ್ವೈತಸಂಜ್ಞಕೇ।**
> **ವೀರಶೈವೈಕಸಿದ್ಧಾಂತೇ ಸರ್ವಶ್ರುತಿಸಮನ್ವಯಃ॥**
>
> **(ಶ್ರೀಕರಭಾಷ್ಯ, ಮಂಗಳಶ್ಲೋಕ, ೧೫)**

ವೀರಶೈವಸಿದ್ಧಾಂತದ ಪ್ರತಿಪಾದಕರಾದ ಆಚಾರ್ಯರನ್ನು ಅನುಸರಿಸಿಯೇ ಈ ಪ್ರಬಂಧದಲ್ಲಿ ವೀರಶೈವದ ಸಮನ್ವಯವನ್ನು ಸಂದರ್ಭಾನುಸಾರವಾಗಿ ಪ್ರದರ್ಶಿಸಲಾಗಿದೆ. ಮತ್ತು ವೀರಶೈವಸಿದ್ಧಾಂತದ ಅಷ್ಟಾವರಣಗಳು ಹೇಗೆ ಸಾಧಕನ ರಕ್ಷಾಕವಚಗಳಾಗಿವೆ, ಪ್ರಾಣಸ್ವರೂಪಗಳಾದ ಪಂಚಾಚಾರಗಳ ಪಾಲನೆಯಿಂದ ವ್ಯಕ್ತಿ ಮತ್ತು ಸಮಾಜದ ಉನ್ನತಿಗಳುಂಟಾಗಿ, ಶಾಂತಿ ನೆಲೆಸುತ್ತದೆ ಹಾಗೂ ಆತ್ಮಸ್ವರೂಪಗಳಾದ ಷಟ್‌ಸ್ಥಲೋಪಾಸನೆಯಿಂದ ಸಾಧಕನ ಆಧ್ಯಾತ್ಮಿಕೋನ್ನತಿಯು ಹೇಗೆ ಸಾಧಿತವಾಗಿರುತ್ತವೆಂಬುದನ್ನು ವಿಚಾರ ಮಾಡಿರುವ ವಿಷಯಗಳು ವ್ಯಷ್ಟಿ-ಸಮಷ್ಟಿಯ ವಿಷಯದಲ್ಲಿ ಮಹತ್ವಪೂರ್ಣವಾಗಿವೆ.

ಪ್ರಸ್ತುತ ಗ್ರಂಥದಲ್ಲಿ ಐದು ಪರಿಚ್ಛೇದಗಳೂ, ಕೊನೆಯಲ್ಲಿ ವಿಚಾರಬೋಧಕವಾದ ಉಪಸಂಹಾರದಿಂದ ಕೂಡಿದೆ. **'ಆಗಮಿಕ ದರ್ಶನಗಳ ಸಂಕ್ಷಿಪ್ತ ಇತಿಹಾಸ'**ವೆಂಬ ಮೊದಲನೆಯ ಪರಿಚ್ಛೇದದಲ್ಲಿ ವೇದಾಗಮಗಳು ಭಾರತೀಯ ದರ್ಶನಗಳ ಮೂಲಸ್ರೋತಗಳಾಗಿದ್ದು, ಅವುಗಳು ಭಗವಾನ್ ಶಿವನಿಂದ ಆವಿಷ್ಕಾರಗೊಂಡವು.

ವೇದಗಳು ಪರಮಾತ್ಮನ ನಿಶ್ವಾಸರೂಪದವುಗಳಾದರೆ, ಆಗಮಗಳು ಪರಮಾತ್ಮನ ವಾಗ್ರೂಪ ವ್ಯವಹಾರದಲ್ಲಿವೆ. ಅಂತೆಯೇ ಎಲ್ಲ ದುಃಖಗಳನ್ನು ನಿವಾರಿಸಿ ಪರಮಾನಂದ ವನ್ನುಂಟುಮಾಡುವ ಅಮೋಘ ಸಾಧನ ತತ್ತ್ವಜ್ಞಾನ ಎಂಬ ವಿಷಯದಲ್ಲಿ ದಾರ್ಶನಿಕರಲ್ಲಿ ಯಾವುದೇ ರೀತಿಯ ವಿರೋಧವಿಲ್ಲ. ತತ್ತ್ವಜ್ಞಾನದ ಪ್ರತಿಪಾದನೆಗಾಗಿ ಭಾರತೀಯ ದಾರ್ಶನಿಕ ಪರಂಪರೆಯನ್ನು ಉಪನಿಷತ್ ಆಧಾರವಾದವುಗಳು ಮತ್ತು ಆಗಮಾಧಾರಿತ ವಾದವುಗಳು ಎಂದು ಹೇಳಿ ವೇದಾಂತ ಪರಂಪರೆಯನ್ನು ಉಪನಿಷತ್ತುಗಳು ಪ್ರತಿಪಾದಿಸಿದರೆ, ಶೈವಪರಂಪರೆಯನ್ನು ಆಗಮಗಳು ಪ್ರತಿಪಾದಿಸುತ್ತವೆ ಎಂದು ನಿರೂಪಿಸಿ, ಆಗಮ ಪರಂಪರೆ ಅನೇಕ ಶಾಖೋಪಶಾಖೆಗಳಿಂದ ಕೂಡಿದೆ. ಅವುಗಳೆಂದರೆ- ವೈಷ್ಣವಾಗಮ (ಇದು ವೈಖಾನಸ, ಭಾಗವತ ಮತ್ತು ಪಾಂಚರಾತ್ರ ಎಂದು ಮತ್ತೆ ಮೂರು ವಿಧ), ಶಾಕ್ತಾಗಮ (ತ್ರಿಪುರಾ, ಕ್ರಮ, ಕುಲ, ತ್ರಿಕ -ಎಂದು ನಾಲ್ಕು ವಿಧ) ಮತ್ತು ಶೈವಾಗಮಗಳು ಎಂದು ಪ್ರಮುಖವಾಗಿ ಮೂರು ವಿಧವಾಗಿವೆ. ಶೈವಾಗಮಗಳು ಶ್ರೌತ ಮತ್ತು ಸ್ವತಂತ್ರ ಎಂದು ಎರಡು ಬಗೆಯಾಗಿದ್ದು, ಶ್ರೌತಾಗಮಗಳು ನೂರು ಕೋಟಿಯಷ್ಟು ವಿಪುಲವಾಗಿದ್ದರೆ, ಕಾಮಿಕಾದಿ ವಾತುಲಾಂತಗಳಾದ ೨೮ ಶಿವಾಗಮಗಳು ಸ್ವತಂತ್ರವೆನಿಸಿವೆ.

ಶೈವಾಗಮಗಳು -ಅವುಗಳ ಕಾಲ ಮತ್ತು ವಿಷಯವನ್ನು ನಿರೂಪಿಸುವಾಗ ೨೮ ಶಿವಾಗಮಗಳ ಉತ್ತರಭಾಗ, ಆಗಮಗಳಲ್ಲಿ ಕಂಡುಬರುವ ಕ್ರಿಯಾಪಾದ, ಜ್ಞಾನಪಾದ, ಚರ್ಯಾಪಾದ ಮತ್ತು ಯೋಗಪಾದ ಎಂಬ ನಾಲ್ಕು ಪಾದಗಳನ್ನು ಪ್ರಸ್ತಾಪಿಸಿ, ಕ್ರಿ.ಶ. ೫ನೇ ಶತಮಾನದ ಕಂಚಿಶಾಸನದಲ್ಲಿ ೨೮ ಶಿವಾಗಮಗಳ ನಾಮೋಲ್ಲೇಖವಾಗಿದ್ದು, ಅದಕ್ಕೂ ಬಹಳಷ್ಟು ಪ್ರಾಚೀನ ಅಂದರೆ ಸುಮಾರು ೫೦೦೦ ವರ್ಷಗಳಷ್ಟು ಪ್ರಾಚೀನವೆಂದು ಹೇಳಲಾಗಿದೆ.

ಶೈವಮತ ಮತ್ತು ಅದರ ಪ್ರಭೇದಗಳು ಎಂಬ ಶೀರ್ಷಿಕೆಯಡಿಯಲ್ಲಿ ಸಿದ್ಧಾಂತ ಶೈವದರ್ಶನ, ಲಕುಲೀಶಪಾಶುಪತಮತ, ಶ್ರೀಕಂಠವಿಶಿಷ್ಟಾದ್ವೈತ, ರಸೇಶ್ವರದರ್ಶನ, ನಂದಿಕೇಶ್ವರದರ್ಶನ, ಕಾಶ್ಮೀರಶೈವ ದರ್ಶನ, ಕ್ರಮದರ್ಶನ, ಕುಲದರ್ಶನ -ಈ ಎಲ್ಲ ಶೈವದರ್ಶನಗಳ ಪ್ರತಿಪಾದಕ ಆಚಾರ್ಯರು ಹಾಗೂ ಅವರ ಸಾಹಿತ್ಯ ಗ್ರಂಥಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ. ತರುವಾಯ ವೀರಶೈವಮತದ ಪರಿಚಯವನ್ನು "ಸಿದ್ಧಾಂತಾಖ್ಯೇ ಮಹಾತಂತ್ರೇ..." (ಸಿ.ಶಿ, ೫.೧೪) ಎಂಬ ಶ್ಲೋಕಗಳ ಆಧಾರದಿಂದ ವೀರಶೈವಮತವು ಕಾಮಿಕಾದಿ ವಾತುಲಾಂತಗಳಾದ ೨೮ ಶಿವಾಗಮಗಳ ಉತ್ತರ ಭಾಗಗಳಲ್ಲಿ, ವೇದಗಳು, ಉಪನಿಷತ್ತುಗಳು ಪುರಾಣಗಳಲ್ಲಿ ನಿರೂಪಿಸಲಾಗಿರುವುದರಿಂದ ಅದು ಪ್ರಾಚೀನವಾದ ಮತವೆಂದು ಪ್ರತಿಪಾದಿಸಲಾಗಿದೆ. ನಂತರ 'ವೀರಶೈವ' ಶಬ್ದದ ನಿರ್ವಚನವನ್ನು "ವಿಶಬ್ದೇನೋಚ್ಯತೇ ವಿದ್ಯಾ ಶಿವಜೀವೈಕ್ಯ ಬೋಧಿಕಾ..." (ಸಿ.ಶಿ.), ಕ್ರಿಯಾಸಾರದ 'ವಿರೋಧಾರ್ಥೇ ವಿ ಶಬ್ದಃ ಸ್ಯಾದ್ ರ ಶಬ್ದೋ ರಹಿತಾರ್ಥಕಃ' (ಭಾಗ-೧, ಪು. ೧೧) ಮತ್ತು "ಇದಂತಾ ರಿಪೋರಹಮಿ ಸಮರಾಂಗಣೇ ಪ್ರಲಯ

ಪ್ರತಿಪಾದನಪರಾ ವೀರಾಃ” ಎಂಬ ‘ಯೋಗಿನೀಹೃದಯದೀಪಿಕೆ’ಯ ವಾಕ್ಯಗಳನ್ನು ಉಲ್ಲೇಖಿಸಿ, ಪರಾಪಂಚಾಶಿಕಾ ಎಂಬ ಗ್ರಂಥದ ಪ್ರಾಮಾಣ್ಯದೊಂದಿಗೆ ಹೋಲಿಸಿ, ಶಿವ-ಜೀವರ ಐಕ್ಯವನ್ನು ಬೋಧಿಸುವ ವಿದ್ಯೆಯಲ್ಲಿ ಸಂತೋಷಪಡುವವರು ವೀರಶೈವರು. ವಿರೋಧರಹಿತವಾದುದೇ ವೀರಶೈವ ಅರ್ಥಾತ್ ಶಿವಜೀವೈಕ್ಯ ಅಥವಾ ಲಿಂಗಾಂಗಸಾಮರಸ್ಯ ಜ್ಞಾನವನ್ನು ಬೋಧಿಸುವ ಶಾಸ್ತ್ರ ವೀರಶೈವ. ಯಾವುದೇ ಮತ-ಸಿದ್ಧಾಂತಗಳನ್ನು ವಿರೋಧಿಸದೆ, ಎಲ್ಲ ಶ್ರುತಿಗಳ ಸಮನ್ವಯಬೋಧಕವಾದುದು ವೀರಶೈವ ಎನಿಸಿದೆ. ಅನಂತರ ‘ಲಿಂಗಾಯತ’ ಶಬ್ದವು ‘ವೀರಶೈವ’ ಶಬ್ದದ ಪರ್ಯಾಯವೇ! ಎಂಬುದನ್ನ ಚರ್ಚಿಸುತ್ತಾ, ಪ್ರಾಚೀನ ವೀರಶೈವ ಸಾಹಿತ್ಯದಲ್ಲಿ ಎಲ್ಲಿಯೂ ಲಿಂಗಾಯತ ಶಬ್ದ ಕಂಡುಬರುವುದಿಲ್ಲ. ಆದರೆ ಲಿಂಗಾಯತ ಶಬ್ದವನ್ನು ವೀರಶೈವಕ್ಕೆ ಪರ್ಯಾಯವಾಗಿ ಬಳಸಲಾಗುತ್ತಿದೆ. ಆದರೆ ಈ ಶಬ್ದ ಅಶುದ್ಧವಾಗಿದೆ. ‘ಲಿಂಗಾಯತ್ತ’ ಎಂಬುದು ಶುದ್ಧರೂಪವಾಗಿದೆ ಎಂಬುದನ್ನು ಆಗಮಗಳ ಆಧಾರದಿಂದ ಸಮರ್ಥಿಸಿ, ಲಿಂಗಾಯತ ಶಬ್ದವು ಎಂದಿಗೂ ಶಾಸ್ತ್ರದೃಷ್ಟಿಯಿಂದ ‘ವೀರಶೈವ’ದ ಪರ್ಯಾಯವಾಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಲಾಗಿದೆ.

ವೀರಶೈವ ದಾರ್ಶನಿಕ ತತ್ತ್ವವಿಮರ್ಶೆ ಎಂಬ ಎರಡನೆಯ ಪರಿಚ್ಛೇದದಲ್ಲಿ ವೀರಶೈವರು ಅಂಗೀಕರಿಸಿರುವ ಶಿವ-ಜೀವ-ಜಗತ್ತುಗಳೆಂಬ ತತ್ತ್ವತ್ರಯಗಳ ಸ್ವರೂಪವನ್ನು ಶಾಸ್ತ್ರೀಯವಾಗಿ ನಿರೂಪಿಸಿ, ಕಾಶ್ಮೀರಶೈವ, ಸಿದ್ಧಾಂತಶೈವರ ತತ್ತ್ವತ್ರಯಗಳೊಂದಿಗೆ ತುಲನಾತ್ಮಕವಾಗಿ ಸಾಮ್ಯ-ವೈಷಮ್ಯ-ವೈಶಿಷ್ಟ್ಯಾದಿಗಳನ್ನು ಪ್ರಸ್ತುತಪಡಿಸಲಾಗಿದೆ. ವಿಶಾಲವಾದ ಈ ಆಗಮ ವಾಙ್ಮಯದಲ್ಲಿ ದ್ವೈತವಾದಿಗಳು, ದ್ವೈತಾದ್ವೈತವಾದಿಗಳು ಮತ್ತು ಅದ್ವೈತವಾದಿಗಳ ಆಗಮಗಳಿವೆ. ಅವರಲ್ಲಿ ಸ್ಥಾಲೀಪುಲಕನ್ಯಾಯದಿಂದ ದ್ವೈತವಾದಿಗಳು ಸಿದ್ಧಾಂತಶೈವಮತವನ್ನು, ಅದ್ವೈತಿಗಳು ಪ್ರತ್ಯಭಿಜ್ಞಾದರ್ಶನವನ್ನು ಆಶ್ರಯಿಸಿದ್ದರೆ, ಶಕ್ತಿವಿಶಿಷ್ಟಾದ್ವೈತದರ್ಶನವು ತೌಲನಿಕ ಮೀಮಾಂಸೆಯನ್ನು ಪ್ರದರ್ಶಿಸಿದೆ. ಈ ದರ್ಶನದಲ್ಲಿ ಶಕ್ತಿವಿಶಿಷ್ಟನಾದ ಶಿವ ಹಾಗೂ ಜೀವರ ಸ್ವರೂಪವನ್ನು ಮೂರೂ ದರ್ಶನಗಳ ದೃಷ್ಟಿಯಿಂದ ವಿವೇಚಿಸಿ ನಿಷ್ಕರ್ಷೆಯನ್ನು ಮಾಡಲಾಗಿದೆ. ಇಲ್ಲಿ ಪ್ರತಿಯೊಂದು ವಿಷಯವನ್ನೂ ಸಿದ್ಧಾಂತಶೈವ ಪ್ರತ್ಯಭಿಜ್ಞಾದರ್ಶನಗಳೊಂದಿಗೆ ಪರಿಶೀಲಿಸಿ ಎಲ್ಲೆಡೆಯೂ ದ್ವೈತಾದ್ವೈತಮತವನ್ನು ಪ್ರತಿಪಾದಿಸುವ ಶಕ್ತಿವಿಶಿಷ್ಟಾದ್ವೈತದರ್ಶನದಲ್ಲಿ ಹೇಗೆ ಯಾವ ಅಂಶದಲ್ಲಿ ಸಮನ್ವಯವು ಕಂಡುಬರುತ್ತದೆ, ಯಾವ ರೀತಿಯಾಗಿ ಯಾವ ದರ್ಶನದ ವೈಶಿಷ್ಟ್ಯವಿದೆಯೆಂಬುದನ್ನು ಸ್ಪಷ್ಟವಾಗಿ, ಸಪ್ರಮಾಣವಾಗಿ ಪ್ರಸ್ತಾಪಿಲಾಗಿದೆ ಎಂಬುದು ಈ ಪರಿಚ್ಛೇದದಲ್ಲಿನ ಪರಶಿವ, ಕಾಶ್ಮೀರಶೈವದರ್ಶನದಲ್ಲಿ ಪರಶಿವಸ್ವರೂಪ, ಸಿದ್ಧಾಂತಶೈವದರ್ಶನದಲ್ಲಿ ಪರಶಿವಸ್ವರೂಪ, ವೀರಶೈವರು ಅಂಗೀಕರಿಸಿರುವ ಶಕ್ತಿಸ್ವರೂಪ, ಕಾಶ್ಮೀರಶೈವರು-ಸಿದ್ಧಾಂತಶೈವರು ಅಂಗೀಕರಿಸಿರುವ ಶಕ್ತಿಸ್ವರೂಪ, ವೀರಶೈವದರ್ಶನದಲ್ಲಿ ಶಿವ-ಶಕ್ತಿಯರ ಸಂಬಂಧ, ಕಾಶ್ಮೀರಶೈವ-ಸಿದ್ಧಾಂತ ಶೈವಗಳಲ್ಲಿ ಶಿವ-ಶಕ್ತಿಯರ ಸಂಬಂಧ ಇತ್ಯಾದಿ ಉಪಶೀರ್ಷಿಕೆಗಳ ಅವಲೋಕನದಿಂದ

ಸ್ಪಷ್ಟವಾಗುತ್ತದೆ. ಇದಲ್ಲದೆ ಶಕ್ತಿಪಾತಪ್ರಕ್ರಿಯೆ, ಮೋಕ್ಷಸ್ವರೂಪ, ಜ್ಞಾನಕರ್ಮ ಸಮುಚ್ಚಯವಾದ ಮೊದಲಾದ ಗಹನವಾದ ವಿಷಯಗಳನ್ನೂ ಸಹ ತುಲನಾತ್ಮಕವಾಗಿ ಸಮೀಕ್ಷಿಸಿರುವುದು ಭಾರತೀಯ ದರ್ಶನ ವಾಙ್ಮಯದ ಸಂಶೋಧನೆಯಲ್ಲಿ ವಿನೂತನವಾದ ಕ್ರಮವನ್ನು ಅನುಸರಿಸಿರುವುದು ಪರಮಪೂಜ್ಯ ಜಗದ್ಗುರುಗಳ ವಿದ್ವತ್ತುಸಮನ್ವಯದೃಷ್ಟಿಯ ಪ್ರತಿಬಿಂಬದಂತಿದೆ.

ಅಷ್ಟಾವರಣವಿಜ್ಞಾನವೆಂಬ ಮೂರನೆಯ ಪರಿಚ್ಛೇದದಲ್ಲಿ ವೀರಶೈವ ಸಿದ್ಧಾಂತದಲ್ಲಿ ಸಾಧಕನ ರಕ್ಷಾಕವಚಗಳೆಂದು ಅಂಗೀಕರಿಸಲಾಗಿರುವ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ಭಸ್ಮ, ರುದ್ರಾಕ್ಷ, ಮಂತ್ರಗಳೆಂಬ ಅಷ್ಟಾವರಣಗಳ ಶಾಸ್ತ್ರೀಯ ಸ್ವರೂಪದ ವಿವೇಚನೆಯನ್ನು ಮಾಡಲಾಗಿದೆ. ಇವುಗಳು ಯಾವ ರೀತಿಯಾಗಿ ಸಾಧಕನನ್ನು ರಕ್ಷಿಸುವ ಸಾಧನಗಳಾಗಿವೆ ಎಂಬುದನ್ನು ಸಶಾಸ್ತ್ರೀಯವಾಗಿ ವಿಸ್ತೃತವಾಗಿ ನಿರೂಪಿಸಲಾಗಿದೆ. ಈ ಪರಿಚ್ಛೇದವು ತುಂಬಾ ವಿಸ್ತೃತವಾಗಿದ್ದು, (೨೫೦ ಪುಟಗಳು) ಒಂದು ಸ್ವತಂತ್ರ ಗ್ರಂಥದಷ್ಟಿದೆ.

ಶ್ರೇಯೋಮಾರ್ಗದಲ್ಲಿ ಪ್ರವೃತ್ತರಾದ ಸಾಧಕರಿಗೆ ಅನೇಕ ವಿಘ್ನಗಳುಂಟಾಗುತ್ತವೆ. ಶಿವ-ಜೀವರ ಐಕ್ಯರೂಪ ಮೋಕ್ಷಮಾರ್ಗದಲ್ಲಿ ಪ್ರವೃತ್ತರಾದ ವೀರಶೈವ ಸಾಧಕರಿಗೆ ವಿಘ್ನಗಳ ನಿವಾರಣೆಗೋಸ್ಕರ ವೀರಶೈವಾಚಾರ್ಯರು ಎಂಟು ಬಗೆಯ ರಕ್ಷಾಕವಚಗನ್ನು ವ್ಯವಸ್ಥೆ ಮಾಡಿದ್ದು, ಅವುಗಳೇ ಈ ಸಿದ್ಧಾಂತದಲ್ಲಿ ಅಷ್ಟಾವರಣಗಳೆನಿಸಿವೆ ಎಂದು ನಿರೂಪಿಸಲಾಗಿದೆ. ತರುವಾಯ 'ಆವ್ರಿಯತೇ ದೇಹಾದಿಕಂ ಯೇನ ತದಾವರಣಮ್' ಎಂದು ಆವರಣ ಶಬ್ದದ ನಿಷ್ಪತ್ತಿಯನ್ನು ಕೊಡಲಾಗಿದೆ. ಈ ನಿಷ್ಪತ್ತಿಯಂತೆ ಆವರಣ ಶಬ್ದವು ಆಚ್ಛಾದನೆ, ಸಂಗೋಪನೆ, ಸಂವೇಷ್ಟನೆ ಇತ್ಯಾದಿ ಅರ್ಥವುಳ್ಳದ್ದೆಂದು ನಿರೂಪಿಸಲಾಗಿದೆ. ಅನಂತರ ವೀರಶೈವ ಸಿದ್ಧಾಂತದಲ್ಲಿನ 'ಆವರಣ' ಶಬ್ದವು 'ರಕ್ಷಾಕವಚ' ಎಂಬ ಅರ್ಥವನ್ನು ಹೊಂದಿದೆ ಹಾಗೂ ಅಷ್ಟಾವರಣಗಳಿಂದ ಜೀವಾತ್ಮನು ಸಾಂಸಾರಿಕ ದೋಷಗಳಿಂದ ರಕ್ಷಿಸಲ್ಪಡುತ್ತಾನೆ ಎಂಬ ಅರ್ಥವುಳ್ಳದ್ದೆಂದು ಚಂದ್ರಜ್ಞಾನಾಗಮದ ಆಧಾರದಿಂದ ಸಮರ್ಥಿಸಲಾಗಿದೆ. ಮತ್ತು ಆವರಣ ಶಬ್ದವು ಇತರ ದರ್ಶನಗಳಲ್ಲಿ ಈ ಅರ್ಥದಲ್ಲಿ ಪ್ರಯೋಗವಾಗದಿರುವ ಶಬ್ದವೆಂಬುದನ್ನು ಅದ್ವೈತ ವೇದಾಂತದ ದೃಷ್ಟಾಂತದ ಮೂಲಕ ಪ್ರತಿಪಾದಿಸಲಾಗಿದೆ. ಅದ್ವೈತದರ್ಶನದ ರೀತ್ಯಾ ಅವಿದ್ಯೆಯು ಆವರಣಶಕ್ತಿ ಮತ್ತ ವಿಕ್ಷೇಪಾತ್ಮಕಶಕ್ತಿ ಎಂದು ಎರಡು ಬಗೆಯಾಗಿದೆ. ಅವರ ಪ್ರಕಾರ ಆವರಣಶಕ್ತಿಯಿಂದ ಜೀವಾತ್ಮನ ವಾಸ್ತವಿಕ ಸ್ವರೂಪವು ಆವರಿಸಲ್ಪಟ್ಟಿದೆ. ಆದುದರಿಂದಲೇ ಜೀವಾತ್ಮನು ಸಂಸಾರದಲ್ಲಿ ಸುತ್ತುತ್ತಿರುತ್ತಾನೆ ಎಂದು ವೇದಾಂತಿಗಳು ಪ್ರತಿಪಾದಿಸಿದ್ದಾರೆ. ಇದಲ್ಲದೆ ಅಷ್ಟಾವರಣವು ಯಾವ ರೀತಿಯಾಗಿ ಯೋಗಶಾಸ್ತ್ರದ ಯಮ ನಿಯಮಾದಿ ಅಷ್ಟಾಂಗಯೋಗಗಳಿಗಿಂತಲೂ ಭಿನ್ನವೆಂಬುದನ್ನು ಶಾಸ್ತ್ರೀಯವಾಗಿ ಹೇಳಿ, 'ಅಷ್ಟಾವರಣ' ಎಂಬ ಶಬ್ದವು ವೀರಶೈವದ ಪಾರಿಭಾಷಿಕ ಶಬ್ದವೆಂಬುದನ್ನು ಯುಕ್ತಿಯುಕ್ತವಾಗಿ ಸಮರ್ಥಿಸಿ, ಗುರು - ಲಿಂಗ - ಜಂಗಮಾದಿ ಅಷ್ಟಾವರಣಗಳ

ಸ್ವರೂಪಾದಿಗಳನ್ನು ಶಾಸ್ತ್ರೀಯವಾಗಿ ವಿಸ್ತೃತವಾಗಿ ಪ್ರತಿಪಾದಿಸಲಾಗಿದೆ. ಪ್ರತಿಯೊಂದು ಆವರಣದ ವಿವೇಚನೆಯ ತರುವಾಯ ಆಯಾ ಆವರಣವು ಹೇಗೆ ವೀರಶೈವ ಸಾಧಕನನ್ನು ರಕ್ಷಿಸುವ ರಕ್ಷಾಕವಚವಾಗಿದೆ ಎಂಬುದನ್ನು ನಿರೂಪಿಸಲಾಗಿದೆ. ಮತ್ತು ಪರಿಚ್ಛೇದದ ಕೊನೆಯಲ್ಲಿ ಅಂತರಂಗದ ಅಷ್ಟಾವರಣಗಳೆಂಬ ಉಪಶೀರ್ಷಿಕೆಯಲ್ಲಿ ಈ ಎಂಟು ಆವರಣಗಳೇ ಹೇಗೆ ಸಾಧಕನ ಅಂತರಂಗವನ್ನು ರಕ್ಷಿಸುವ ರಕ್ಷಾಕವಚಗಳಾಗಿವೆ ಎಂಬ ಹೊಸ ವಿಚಾರವನ್ನು ಮಾಡಲಾಗಿದೆ.

ವೀರಶೈವದ ಅಷ್ಟಾವರಣಗಳಲ್ಲಿ ಮೊದಲನೆಯ ಆವರಣವೆಂದು ಪರಿಗಣಿತವಾಗಿರುವ 'ಗುರು' ತ್ರಿವಿಧ ದೀಕ್ಷೆಗಳಿಂದ ಮಲತ್ರಯಗಳನ್ನು ನಿವಾರಿಸಿ, ಶಿಷ್ಯನಿಗೆ ಲಿಂಗತ್ರಯಗಳನ್ನು ಉಪದೇಶಿಸಿ, ಸನ್ಮಾರ್ಗದಲ್ಲಿ ಪ್ರವರ್ತಿಸುವಂತೆ ಮಾಡುವ ಮೂಲಕ ಶಿಷ್ಯನನ್ನು ಕಾಮ-ಕ್ರೋಧಾದಿ ಅರಿಷಡ್ವೈರಿಗಳಿಂದ ರಕ್ಷಿಸುತ್ತಾನೆ ಹಾಗೂ ದೀಕ್ಷೆ, ಶಿಕ್ಷಣ, ಜ್ಞಾನೋಪದೇಶಗಳ ಮೂಲಕ ಸಾಧಕನು ದುರ್ಮಾರ್ಗದಲ್ಲಿ ಪ್ರವರ್ತಿಸದಂತೆ 'ಗುರು'ವು ರಕ್ಷಿಸುವುದರಿಂದ ಸ್ಥೂಲ ಆವರಣ ಅಥವಾ ಬಹಿರಂಗದ ಆವರಣವೆನಿಸುತ್ತಾನೆ. ಅಂತೆಯೇ ಗುರುವು ಬೋಧಿಸುವ ನೈತಿಕಜ್ಞಾನವು ಸಾಧಕನ ಅಂತರಂಗವನ್ನು ಸಂರಕ್ಷಿಸುತ್ತದೆ. ಆದ್ದರಿಂದ ನೈತಿಕಜ್ಞಾನವು ಸೂಕ್ಷ್ಮ ಅಥವಾ ಅಂತರಂಗದ ಆವರಣವೆನಿಸುತ್ತದೆ.

ಶ್ರೀಗುರುವು ತ್ರಿವಿಧ ದೀಕ್ಷೆಗಳ ಮೂಲಕ ಸಾಧಕನ ಮೂರು ಶರೀರಗಳಲ್ಲಿ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳನ್ನು ಸಂಸ್ಥಾಪಿಸುತ್ತಾನೆ. ಇಷ್ಟಲಿಂಗವು ಸ್ಥೂಲಶರೀರವನ್ನು ರಕ್ಷಿಸುವುದರಿಂದ ಸ್ಥೂಲ ಆವರಣ ಅಥವಾ ಬಹಿರಂಗದ ಆವರಣವಾದರೆ, ಪ್ರಾಣಲಿಂಗ ಮತ್ತು ಭಾವಲಿಂಗಗಳು ಕ್ರಮವಾಗಿ ಸಾಧಕನ ಮನಸ್ಸು ಮತ್ತು ಬುದ್ಧಿಗಳಲ್ಲಿ ವ್ಯಕ್ತವಾಗುವ ಕೆಟ್ಟ ಪ್ರವೃತ್ತಿಗಳಿಂದ ರಕ್ಷಿಸುವುದರಿಂದ ಅಂತರಂಗದ ಆವರಣಗಳೆನಿಸಿವೆ.

ಜಂಗಮವು ಮೂರನೆಯ ಆವರಣವಾಗಿದೆ. ಜ್ಞಾನಿಯಾದ ಜಂಗಮನು ಎಲ್ಲೆಡೆ ಸಂಚರಿಸುತ್ತಾ, ಭಕ್ತರಿಗೆ ಶಿವಜ್ಞಾನವನ್ನುಪದೇಶಿಸುತ್ತಾ, ಸತ್ಸಂಗದ ಮೂಲಕ ನಮ್ಮ ಸ್ಥೂಲಶರೀರವನ್ನು ಪ್ರಾಪಂಚಿಕ ಸುಖಗಳಿಂದ ಹಿಮ್ಮೆಟ್ಟಿಸಿ ರಕ್ಷಿಸುತ್ತಾನೆ. ಅಂತೆಯೇ ಆತನು ಉಪದೇಶಿಸಿದ ಜ್ಞಾನವೂ ಸಹ ಮನಸ್ಸು, ಬುದ್ಧಿಗಳನ್ನು ಶಬ್ದಾದಿ ಸಂಸಾರಿಕ ವಿಷಯಗಳಿಂದ ರಕ್ಷಿಸುತ್ತದೆ. ಆದುದರಿಂದ ಜಂಗಮನು ಉಪದೇಶಿಸಿದ ತತ್ತ್ವಜ್ಞಾನವು ಅಂತರಂಗದ ಆವರಣವಾಗುತ್ತದೆ.

ಗುರು - ಲಿಂಗ - ಜಂಗಮಗಳ ಚರಣಾಮೃತವೇ ಪಾದೋದಕವೆನಿಸುತ್ತದೆ. ಪಾದೋದಕ ಪ್ರೋಕ್ಷಣೆ ಮತ್ತು ಸ್ವೀಕಾರದಿಂದ ಸ್ಥೂಲಶರೀರ ಶುದ್ಧಿಯಾಗುತ್ತದೆ. ಆದ್ದರಿಂದ ಇಂದು ಬಹಿರಂಗದ ಆವರಣವೆನಿಸುತ್ತದೆ. ಅಂತೆಯೇ "ಪರಮಾನಂದ ಏವೋಕ್ತಃ ಪಾದಶಬ್ದೇನ ನಿರ್ಮಲಃ। ಜ್ಞಾನಂ ಚೋದಕಶಬ್ದೇನ ಪಾದೋದಕಮಿತಿ

ಸ್ಮೃತಮ್" (ಸಿ.ಶಿ, ೧೯.೩) ಎಂಬ ಸಿದ್ಧಾಂತ ಶಿಖಾಮಣಿಯ ಉಕ್ತಿಯಂತೆ ಪರಮಾತ್ಮನ ಆನಂದ ಸ್ವರೂಪದ ಜ್ಞಾನವೇ ಪಾದೋದಕ. ಇಂತಹ ಪಾದೋದಕದ ಸ್ವೀಕಾರದಿಂದ ಅಂತರಂಗದ ತೃಪ್ತಿ ಮತ್ತು ಪ್ರಾಪಂಚಿಕ ಸುಖಗಳ ರಕ್ಷಣೆಯಾಗುತ್ತದೆ. ಆದ್ದರಿಂದ ಪರಮಾನಂದಜ್ಞಾನವು ಅಂತರಂಗ ಪಾದೋದಕದ ಆವರಣವೆನಿಸುತ್ತದೆ.

ಗುರು - ಲಿಂಗ - ಜಂಗಮಗಳು ಭುಂಜಿಸಿ ಉಳಿದ ಅಥವಾ ನೈವೇದ್ಯ ಮಾಡಿದ ಅನ್ನವು ಪ್ರಸಾದವೆನಿಸುತ್ತದೆ. ಪ್ರಸಾದ ಸ್ವೀಕಾರದಿಂದ ಸ್ಥೂಲಶರೀರದ ಶುದ್ಧಿಯಾಗುವುದರಿಂದ ಬಹಿರಂಗದ ಆವರಣವೆನಿಸಿದರೆ, ಪ್ರಸಾದ ಸ್ವೀಕಾರದಿಂದ ಮನಸ್ಸಿಗೆ ಪ್ರಸನ್ನತೆಯುಂಟಾಗಿ, ಮನಸ್ಸಿನ ಚಂಚಲತೆಯನ್ನು ದೂರಮಾಡಿ, ಮನಸ್ಸನ್ನು ದೃಢವನ್ನಾಗಿ ಮಾಡಿ ಅದನ್ನು ರಕ್ಷಿಸುತ್ತದೆ. ಇದು ಪ್ರಸಾದದ ಅಂತರಂಗಾವರಣವೆನಿಸುತ್ತದೆ.

ಗೋಮಯದಿಂದ ತಯಾರಿಸಿದ ವಿಭೂತಿಯು ಭಸ್ಮವೆನಿಸುತ್ತದೆ. ಇದನ್ನು ಸ್ಥೂಲಶರೀರದಲ್ಲಿ ಧರಿಸುವುದರಿಂದ ನಾನಾ ಬಗೆಯ ಚರ್ಮರೋಗಗಳು ಉಪಶಮನವಾಗುತ್ತವೆ. ಆದುದರಿಂದ ಗೋಮಯ ಭಸ್ಮವು ಬಹಿರಂಗದ ಆವರಣವಾಗುತ್ತದೆ. ಮತ್ತು ಭಸ್ಮಧಾರಣೆಯು ಅಜ್ಞಾನವೆಂಬ ಅಂಧಕಾರವನ್ನು ನಿವಾರಣೆ ಮಾಡುವುದರ ಮೂಲಕ ಸಾಧಕನ ಅಂತರಂಗವನ್ನು ರಕ್ಷಿಸುತ್ತದೆ. ಆದುದರಿಂದ ಇದು ಅಂತರಂಗದ ಆವರಣವಾಗಿದೆ.

ರುದ್ರಾಕ್ಷವು ಒಂದು ವಿಶಿಷ್ಟ ಜಾತಿಯ ವನಸ್ಪತಿಯಾಗಿದ್ದು, ಶರೀರದ ಮೇಲೆ ಅವುಗಳನ್ನು ಧರಿಸುವುದರಿಂದ ಅನೇಕ ರೋಗಗಳು ಉಪಶಮನವಾಗುತ್ತವೆ. ಆದುದರಿಂದ ರುದ್ರಾಕ್ಷವು ಬಹಿರಂಗ ಆವರಣವೆನಿಸಿದೆ. 'ರುದ್ರಸ್ಯ ಅಕ್ಷಃ ರುದ್ರಾಕ್ಷಃ' ಎಂಬ ವ್ಯುತ್ಪತ್ತಿಯಂತೆ 'ರುದ್ರಾಕ್ಷ' ಎಂದರೆ 'ರುದ್ರದೃಷ್ಟಿ' ಎಂಬ ಅರ್ಥವೂ ಲಭ್ಯವಾಗುತ್ತದೆ. ಚರಾಚರಾತ್ಮಕವಾದ ಜಗತ್ತನ್ನು ರುದ್ರನ ರೂಪವೆಂದು ನೋಡುವುದೇ ರುದ್ರದೃಷ್ಟಿಯೆನಿಸುತ್ತದೆ. ಅರ್ಥಾತ್ ಇಡೀ ಜಗತ್ತನ್ನು ಸಮತಾಭಾವನೆಯಿಂದ ನೋಡುವುದು. ಇದರಿಂದ ಸಾಧಕನ ಭೇದಬುದ್ಧಿಯು ನಾಶವಾಗಿ ಅದ್ವೈತಭಾವನೆಯು ರಕ್ಷಿತವಾಗುವುದೇ ಅಂತರಂಗದ ಆವರಣ.

ದೀಕ್ಷಾಕಾಲದಲ್ಲಿ ಶ್ರೀಗುರುವಿನಿಂದ ಉಪದೇಶಿಸಲ್ಪಡುವ ಶಿವನ ನಾಮವೇ ಮಂತ್ರ. ಈ ಮಂತ್ರದ ಅಭ್ಯಾಸದಿಂದ ಸಾಧಕನು ದುಷ್ಟಶಕ್ತಿಗಳಿಂದ ರಕ್ಷಿತವಾಗುವುದರಿಂದ ಬಹಿರಂಗ ಆವರಣವೆನಿಸುತ್ತದೆ. 'ನಮಃ ಶಿವಾಯ' ಎಂಬ ಪಂಚಾಕ್ಷರಿ ಮಂತ್ರದಲ್ಲಿನ 'ನಮಃ' ಎಂದರೆ ಜೀವಾತ್ಮ, 'ಶಿವ' ಎಂದರೆ ಪರಮಾತ್ಮ, 'ಆಯ' ಎಂದರೆ ಶಿವ-ಜೀವರ ಐಕ್ಯವಾಚಿಯಾಗಿದೆ. ಈ ಮಂತ್ರವನ್ನು ಪದೇ ಪದೇ ಮನನ ಮಾಡುವುದರಿಂದ ಶಿವ-ಜೀವರ ಭೇದಜ್ಞಾನವು ನಿವಾರಣೆಯಾಗಿ, ಅವರಿಬ್ಬರ ಅಭೇದಜ್ಞಾನದ ರಕ್ಷಣೆ ಯಾಗುವುದರಿಂದ ಅಂತರಂಗದ ಆವರಣವೆನಿಸುತ್ತದೆ.

ಪಂಚಾಚಾರ ಮೀಮಾಂಸೆ ಎಂಬ ನಾಲ್ಕನೆಯ ಪರಿಚ್ಛೇದದಲ್ಲಿ ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರಗಳ ಸ್ವರೂಪಾದಿಗಳನ್ನು ನಿರೂಪಿಸಲಾಗಿದೆ. ಈ ಪಂಚಾಚಾರಗಳು ೬೪ ಶೀಲಗಳಿಂದ ಕೂಡಿದ್ದು, ಅವುಗಳು ಸಾಧಕನನ್ನು ನೀತಿವಂತನನ್ನಾಗಿ ಮಾಡುವ ಸಾಧನಗಳಾಗಿವೆ. ಈ ೬೪ ಶೀಲಗಳಲ್ಲಿ ಕಾಯ, ವಾಕ್ ಮತ್ತು ಮನಸ್ಸುಗಳೆಂಬ ಶೀಲಗಳನ್ನು ವರ್ಣಿಸಲಾಗಿದೆ. ತ್ರಿಕರಣ ಶುದ್ಧರಾದ ಜನಗಳು ನಿರಹಂಕಾರಿಗಳಾಗಿ ಭೃತ್ಯಭಾವದಿಂದ ಸೇವಾಮಾರ್ಗದಲ್ಲಿ ನಿರತರಾಗುತ್ತಾರೆಂಬ ಕಾರಣದಿಂದ ಈ ಪಂಚಾಚಾರಗಳು ಎಲ್ಲ ಕಡೆಯೂ ಸಮತಾಭಾವನೆಯು ವೃದ್ಧಿಯಾಗಲು ಹೇಗೆ ಉಪಯೋಗಿಗಳಾಗಿವೆ ಎಂಬುದನ್ನು ಸಾಧಾರವಾಗಿ, ಶಾಸ್ತ್ರೀಯವಾಗಿ ನಿರೂಪಿಸಲಾಗಿದೆ.

ಷಟ್‌ಸ್ಥಲಸೋಪಾನಕ್ರಮವೆಂಬ ಐದನೆಯ ಪರಿಚ್ಛೇದದಲ್ಲಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಎಂಬ ಆರು ಬಗೆಯ ಮುಕ್ತಿಯ ಸೋಪಾನಗಳಲ್ಲಿ ಶ್ರದ್ಧಾ, ನಿಷ್ಠಾ, ಅವಧಾನ, ಅನುಭವ, ಆನಂದ ಮತ್ತು ಸಮರಸ ಎಂಬ ಷಡ್ವಿಧ ಭಕ್ತಿಗಳ ಸಹಾಯದಿಂದ ಸಾಧಕನು ಕ್ರಮಿಸಬೇಕಾದ ವಿಕಾಸವು ಹೇಗೆ ಆಗುತ್ತದೆ ಎಂಬುದನ್ನು ಪ್ರತಿಪಾದಿಸಲಾಗಿದೆ. ಇದಕ್ಕೆ ಹಿನ್ನೆಲೆಯಾಗಿ ಮಾಯಿದೇವನು ನಿರೂಪಿಸಿರುವ "ಏಕಮೇವ ಪರಂಬ್ರಹ್ಮ ಸಚ್ಚಿದಾನಂದಲಕ್ಷಣಮ್। ಶಿವತತ್ತ್ವಂ ಶಿವಾಚಾರ್ಯಾಃ ಸ್ಥಲಮಿತ್ಯಾಹುರಾದರಾತ್॥" (ಅನುಭವಸೂತ್ರ, ೨.೨) ಎಂಬ ಸ್ಥಲ ಶಬ್ದದ ನಿರ್ವಚನದ ನಿರೂಪಣೆಯ ಮೂಲಕ ವಿಮರ್ಶಶಕ್ತಿ ವಿಶಿಷ್ಟನಾದ ಸ್ಥಲವಾಚ್ಯನಾದ ಪರಶಿವನು ಉಪಾಸ್ಯ-ಉಪಾಸಕಲೀಲೆಗೋಸ್ಕರ ಲಿಂಗಸ್ಥಲ ಮತ್ತು ಅಂಗಸ್ಥಲ ಎಂದು ಎರಡು ಬಗೆಯಾಗುತ್ತಾನೆ. ಶಿವನು ಲಿಂಗವೆನಿಸಿದರೆ, ಜೀವನು ಅಂಗವೆನಿಸುತ್ತಾನೆ. ಸ್ಥಲವು ಎರಡು ಬಗೆಯಾದಂತೆ ಶಕ್ತಿಯು ಕಲೆ ಮತ್ತು ಭಕ್ತಿ ಎಂದು ಎರಡು ವಿಧವಾಗಿ, ಇವುಗಳು ಕ್ರಮವಾಗಿ ಲಿಂಗಸ್ಥಲ ಮತ್ತು ಅಂಗಸ್ಥಲಗಳನ್ನಾಶ್ರಯಿಸಿವೆ ಎಂದು ಪ್ರಸ್ತುತಪಡಿಸಲಾಗಿದೆ. ತರುವಾಯ ಭಕ್ತಿ ಎಂಬ ಉಪಶೀರ್ಷಿಕೆಯಡಿಯಲ್ಲಿ ಶಾಂಡಿಲ್ಯ ಭಕ್ತಿಸೂತ್ರ, ನಾರದಭಕ್ತಿಸೂತ್ರ, ರಾಮಾಯಣ, ಮಹಾಭಾರತ, ಭಗವದ್ಗೀತೆ, ಪುರಾಣ, ಭಾಗವತ, ನ್ಯಾಯದರ್ಶನ, ವೈಶೇಷಿಕದರ್ಶನ, ಅದ್ವೈತ, ದ್ವೈತ, ವಿಶಿಷ್ಟಾದ್ವೈತ ಮೊದಲಾದವುಗಳಲ್ಲಿ ವಿಭಿನ್ನ ಸಂಪ್ರದಾಯಗಳಲ್ಲಿ ನಿರೂಪಿತವಾಗಿರುವ ಭಕ್ತಿಯ ಸ್ವರೂಪವನ್ನು ವಿಶದೀಕರಿಸಿ, ವೀರಶೈವ ಸಿದ್ಧಾಂತದಲ್ಲಿ ಭಕ್ತಿಯ ಸ್ವರೂಪ ಮತ್ತು ಪ್ರಭೇದಗಳನ್ನು ಹೇಳುವಾಗ ಈ ಷಟ್‌ಸ್ಥಲಗಳ ಸ್ವರೂಪಾದಿಗಳನ್ನು ಪ್ರತಿಪಾದಿಸಲಾಗಿದೆ. ಈ ಪರಿಚ್ಛೇದದ ಕೊನೆಯಲ್ಲಿ ಲಿಂಗ-ಅಂಗಗಳ ಪರ್ಯಾಯಗಳಾದ ಶಿವ-ಜೀವರ ಸಾಮರಸ್ಯ ಪ್ರಕ್ರಿಯೆಯನ್ನು ಶಾಸ್ತ್ರಾಧಾರದಿಂದ ನಿರೂಪಿಸಲಾಗಿದೆ.

ಎಲ್ಲ ಶೋಧಪ್ರಬಂಧಗಳಂತೆ ಈ ಗ್ರಂಥವೂ ಸಹ ಉಪಸಂಹಾರದಿಂದ ಅಲಂಕೃತವಾಗಿದೆ. ಹಿಂದಿನ ಪರಿಚ್ಛೇದಗಳಲ್ಲಿ ನಿರೂಪಿತವಾಗಿರುವ ಎಲ್ಲ ವಿಷಯಗಳನ್ನು

ಸಂಕ್ಷಿಪ್ತವಾಗಿ ತೌಲನಿಕ ದೃಷ್ಟಿಯಿಂದ ಪ್ರತಿಪಾದಿಸಲಾಗಿದೆ. ಈ ಅಧ್ಯಾಯವೊಂದನ್ನು ಅಧ್ಯಯನ ಮಾಡಿದರೆ, ಈ ಸಮಗ್ರ ಕೃತಿಯ ಸ್ಥೂಲಪರಿಚಯವಾಗುತ್ತದೆ. ಇಂತಹ ಅಪೂರ್ವ ಸಂಶೋಧನಾ ಗ್ರಂಥವನ್ನು ರಚಿಸಿ, ಲೋಕೋಪಕಾರ ಮಾಡಿರುವ ಪರಮಪೂಜ್ಯ ಜಗದ್ಗುರುಗಳಿಗೆ ಸಮಸ್ತ ಜನತೆ ಚಿರಋಣಿಗಳಾಗಿರಬೇಕು.

ಒಟ್ಟಿನಲ್ಲಿ 'ಶಕ್ತಿವಿಶಿಷ್ಟಾದ್ವೈತತತ್ತ್ವತ್ರಯವಿಮರ್ಶೆ' ಎಂಬ ಈ ಸಂಶೋಧನಾ ಗ್ರಂಥವು ವೀರಶೈವ ಸಾಹಿತ್ಯಕ್ಕೆ ಒಂದು ಅಮೂಲ್ಯವಾದ ಕೊಡುಗೆಯಾಗಿದೆ. ಈ ಕೃತಿಯಲ್ಲಿ ವೀರಶೈವಕ್ಕೆ ಸಂಬಂಧಿಸಿದ ವೇದ, ಉಪನಿಷತ್ತು, ಆಗಮ, ಪುರಾಣ, ಸಿದ್ಧಾಂತ ಶಿಖಾಮಣಿ ಮೊದಲಾದ ಪ್ರಾಚೀನ ಗ್ರಂಥಗಳ ಸಮಗ್ರ ಅಧ್ಯಯನ ವಿಸ್ತಾರವಾಗಿ ಶಾಸ್ತ್ರೀ ಶೈಲಿಯಲ್ಲಿ ರಚಿತವಾಗಿದೆ. ವೀರಶೈವ ಧರ್ಮ-ದರ್ಶನಗಳ ಅಧ್ಯಯನ ಮಾಡುವ ಸಂಶೋಧಕರು, ವಿದ್ವಾಂಸರುಗಳಿಗೆ ಎಲ್ಲ ಕಾಲಕ್ಕೂ ಆಕರ ಗ್ರಂಥವಾಗುವ ಎಲ್ಲ ಅರ್ಹತೆಗಳನ್ನು ಪಡೆದಿದೆ. ತಮ್ಮ ಅಧ್ಯಯನದ ಫಲ ಸಮಾಜಕ್ಕೆ ಲಭ್ಯವಾಗಬೇಕೆಂಬ ಉದ್ದೇಶದಿಂದ ಜಗದ್ಗುರುಗಳು ಈ ಕೃತಿರತ್ನವನ್ನು ತಮ್ಮ ಪೀಠದ ಶೈವಭಾರತೀ ಶೋಧ ಪ್ರತಿಷ್ಠಾನದಿಂದ ೧೯೯೬ರಲ್ಲಿ ಪ್ರಕಟಿಸಿದ್ದಾರೆ. ಸಂಸ್ಕೃತ ಭಾಷೆಯಲ್ಲಿದ್ದ ಇಂತಹ ಅಮೂಲ್ಯವಾದ ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಶಾಸ್ತ್ರೀಯ ಗ್ರಂಥದ ಪ್ರಯೋಜನ ಸಂಸ್ಕೃತ ವಿದ್ವಾಂಸರಿಗೆ ಮಾತ್ರ ಸೀಮಿತವಾಗಿದ್ದು, ಕರ್ನಾಟಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ವೀರಶೈವರಿಗೆ ಹಾಗೂ ವೀರಶೈವ ಸಾಹಿತ್ಯದ ಅಧ್ಯಯನ, ಅಧ್ಯಾಪನ, ಸಂಶೋಧನೆಯಲ್ಲಿ ನಿರತರಾಗಿರುವ ವಿದ್ವಾಂಸರುಗಳಿಗೆ ಯಾವುದೇ ರೀತಿಯಲ್ಲಿಯೂ ಪ್ರಯೋಜನವಾಗುತ್ತಿಲ್ಲವೆಂಬುದನ್ನು ಮನಗಂಡ ಪರಮಪೂಜ್ಯ ಜಗದ್ಗುರುಗಳವರು ಕನ್ನಡ ಭಾಷೆಗೆ ಅನುವಾದಿಸಲು ನಿರ್ಧರಿಸಿ, ಅದರ ಜವಾಬ್ದಾರಿಯನ್ನು ಬಹಳ ವಿಶ್ವಾಸದಿಂದ ನನಗೆ ವಹಿಸಿ, ಅನುಗ್ರಹಿಸಿದರು. ಅನುವಾದ ಕಾರ್ಯ ಮುಗಿಯುತ್ತಿದ್ದಂತೆಯೇ ಅನುವಾದವನ್ನು ಆಮೂಲಾಗ್ರವಾಗಿ ಪರಿಶೀಲಿಸಿದ ಜಗದ್ಗುರುಗಳು ನನಗೆ ಹೆಚ್ಚಿನ ಆತ್ಮವಿಶ್ವಾಸವುಂಟಾಗುವಂತೆ ಮಾಡಿದ್ದಾರೆ. ದೇವವಾಣಿಯಲ್ಲಿದ್ದ ಅಪೂರ್ವವಾದ ವೀರಶೈವ ಸಿದ್ಧಾಂತ ಪ್ರತಿಪಾದಕ **ಶಕ್ತಿವಿಶಿಷ್ಟಾದ್ವೈತತತ್ತ್ವತ್ರಯವಿಮರ್ಶಃ** ಎಂಬ ಸಂಸ್ಕೃತ ಸಂಶೋಧನಾ ಕೃತಿಯನ್ನು ಕನ್ನಡ ಭಾಷೆಗೆ ಯಥಾಮತಿ ಅನುವಾದಿಸಿದ್ದೇನೆ. ಇಂತಹ ಶ್ರೇಷ್ಠ ಕೃತಿಯನ್ನು ಅನುವಾದಿಸಲು ಮಹದನುಗ್ರಹಮಾಡಿದ ಶ್ರೀಮತ್ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರ ಪಾದಾರವಿಂದಗಳಿಗೆ ಕೃತಜ್ಞತಾಪೂರ್ವಕ ಶಿರಸಾಷ್ಟಾಂಗ ಪ್ರಣಾಮಗಳನ್ನು ಭಕ್ತಿಯಿಂದ ಸಮರ್ಪಿಸುತ್ತೇನೆ.

ಈ ಕೃತಿಯ ಅನುವಾದದ ಸಂದರ್ಭದಲ್ಲಿ ತಲೆದೋರಿದ ಎಲ್ಲ ಸಂದೇಹಗಳನ್ನು ಪರಿಹರಿಸಿದ ನನ್ನ ಗುರುವರ್ಯರೂ, ಖ್ಯಾತ ಸಂಸ್ಕೃತ ವಿದ್ವಾಂಸರೂ, ರಾಷ್ಟ್ರಪತಿ ಪ್ರಶಸ್ತಿ ಪುರಸ್ಕೃತರೂ ಆದ ಡಾ॥ ಎಂ. ಶಿವಕುಮಾರಸ್ವಾಮಿಗಳವರು ಈ ಕೃತಿಗೆ

ಮುನ್ನುಡಿಯನ್ನು ಬರೆದು, ಅನುವಾದದ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿ ನನ್ನನ್ನು ಪ್ರೋತ್ಸಾಹಿಸಿ ಹರಸಿದ್ದಾರೆ. ಗುರುವರ್ಯರಿಗೆ ಪ್ರಾಂಜಲ ಪ್ರಣಾಮಗಳು. ನನ್ನ ಸಂಶೋಧನ ವಿದ್ಯಾರ್ಥಿಯಾದ ಉರವಕೊಂಡ ಕ್ಷೇತ್ರದ ಸಂಸ್ಥಾನ ಮಠದ ಕಿರಿಯ ಶ್ರೀಗಳವರಾದ ಶ್ರೀ ಶ್ರೀ ಕರಿಬಸವ ರಾಜೇಂದ್ರ ಸ್ವಾಮಿಗಳು ನನ್ನೊಂದಿಗೆ ಹಲವು ದಿನಗಳ ಕಾಲ ಕುಳಿತು ಅನುವಾದವನ್ನು ಪರಿಶೀಲಿಸಿದ್ದಾರೆ. ಸ್ವಾಮೀಜಿಯವರ ಪಾದಗಳಿಗೆ ಪ್ರಣಾಮಗಳನ್ನು ಸಮರ್ಪಿಸುತ್ತೇನೆ.

ಈ ಅನುವಾದ ಕಾರ್ಯಕ್ಕೆ ಉಪನಿಷತ್ತುಗಳು, ಶೈವಾಗಮಗಳು, ಸಿದ್ಧಾಂತ ಶಿಖಾಮಣಿ, ಅನುಭವಸೂತ್ರ ಮೊದಲಾದ ಗ್ರಂಥಗಳ ಕನ್ನಡಾನುವಾದವನ್ನು ಬಳಸಿಕೊಂಡಿದ್ದೇನೆ. ಈ ಎಲ್ಲ ಗ್ರಂಥಗಳ ಸಂಪಾದಕರುಗಳಿಗೆ, ಅನುವಾದಕರಿಗೆ, ಪ್ರಕಾಶಕರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯ ಧನಸಹಾಯದಿಂದ ಈ ಕೃತಿ ಪ್ರಕಟವಾಗುತ್ತಿದೆ. ಧನಸಹಾಯ ಮಾಡಿದ ಆ ಸಂಸ್ಥೆಯ ನಿರ್ದೇಶಕರಾದ ಶ್ರೀಮತಿ ಉಷಾ ಸುರೇಶ್ ಅವರಿಗೆ ಹಾಗೂ ಇಲಾಖೆಯ ಎಲ್ಲ ಸಿಬ್ಬಂದಿ ವರ್ಗದವರಿಗೆ ವಂದನೆಗಳು. ಈ ಕೃತಿಯನ್ನು ಅತ್ಯಲ್ಪ ಕಾಲದಲ್ಲಿ ಛಾಯಾಕ್ಷರ ಜೋಡಣೆ ಕಾರ್ಯವನ್ನು ನೆರವೇರಿಸಿದ ಕುಮುದ ಗ್ರಾಫಿಕ್ಸ್‌ನ ಎಂ. ಮಹೇಶ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ಗೀತಾಂಜಲಿ ಗ್ರಾಫಿಕ್ಸ್‌ನ ಮಾಲೀಕರಾದ ಶ್ರೀ ನಾಗಸುಂದರ್ ಅವರಿಗೂ, ಅವರ ಸಿಬ್ಬಂದಿ ವರ್ಗದವರಿಗೂ ವಂದನೆಗಳನ್ನು ಸಮರ್ಪಿಸುತ್ತೇನೆ. ಸಹೃದಯರಾದ ವಿದ್ವಾಂಸರು ಹಾಗೂ ಧರ್ಮಾಭಿಮಾನಿಗಳು, ಸಂಶೋಧಕರು ಈ ಕೃತಿಯನ್ನು ಸ್ವಾಗತಿಸುವರೆಂದು ನಂಬಿದ್ದೇನೆ.

ಬೆಂಗಳೂರು
ದಿನಾಂಕ: ೧೫.೬.೨೦೦೯

ಇತಿ ಸಜ್ಜನ ವಿಧೇಯ
ಡಾ॥ ಸಿ. ಶಿವಕುಮಾರಸ್ವಾಮಿ
ಅನುವಾದಕ

ವಿಷಯಾನುಕ್ರಮಣಿಕೆ

	ಕಾಶೀ ಜಗದ್ಗುರುಗಳ ಆಶೀರ್ವಚನ	iii
	ಮುನ್ನುಡಿ	v
	ಅನಿಸಿಕೆಗಳು	vii
	ಭೂಮಿಕೆ	ix
೧.	ಮೊದಲನೆಯ ಪರಿಚ್ಛೇದ ಆಗಮಿಕ ದರ್ಶನಗಳ ಸಂಕ್ಷಿಪ್ತ ಇತಿಹಾಸ	೧
೨.	ಎರಡನೆಯ ಪರಿಚ್ಛೇದ ವೀರಶೈವದಾರ್ಶನಿಕ ತತ್ತ್ವವಿಮರ್ಶೆ	೨೭
೩.	ಮೂರನೆಯ ಪರಿಚ್ಛೇದ ಅಷ್ಟಾವರಣ ವಿಜ್ಞಾನ	೧೨೩
೪.	ನಾಲ್ಕನೆಯ ಪರಿಚ್ಛೇದ ಪಂಚಾಚಾರ ಮೀಮಾಂಸೆ	೩೭೩
೫.	ಐದನೆಯ ಪರಿಚ್ಛೇದ ಷಟ್‌ಸ್ಥಲಸೋಪಾನಕ್ರಮ	೩೯೩
೬.	ಉಪಸಂಹಾರ	೪೫೬
೭.	ಆಕರ ಗ್ರಂಥಗಳು	೫೦೫
೮.	ಸಂಕ್ಷೇತಾಕ್ಷರ ಸೂಚಿ	೫೧೨
೯.	ಕೃತಜ್ಞತೆಗಳು	೫೨೧

ಮೊದಲನೆಯ ಪರಿಚ್ಛೇದ

ಆಗಮಿಕ ದರ್ಶನಗಳ ಸಂಕ್ಷಿಪ್ತ ಇತಿಹಾಸ

ಈ ಲೋಕದಲ್ಲಿ ಮಾನವರ ಎಲ್ಲ ಪ್ರವೃತ್ತಿಗಳು ಸುಖಸಂಪಾದನೆಯ ಮೂಲವೇ ಆಗಿರುವುದು ಕಂಡುಬರುತ್ತದೆ. ಆದುದರಿಂದ ಸುಖವೇ ಪುರುಷಾರ್ಥ ಎಂದು ಹೇಳಬಹುದು. ಶಾಸ್ತ್ರಗಳಲ್ಲಿ ಧರ್ಮ - ಅರ್ಥ - ಕಾಮ - ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳು ಪ್ರತಿಪಾದಿತವಾಗಿವೆ. 'ಆಯುರ್ವೈ ಘೃತಮ್' (ತುಪ್ಪವೇ ಆಯುಸ್ಸು) ಎಂಬಂತೆ ಅವುಗಳು ಸುಖಸಾಧನಗಳಾದುದರಿಂದ 'ಪುರುಷಾರ್ಥ' ಎಂಬ ಶಬ್ದದಿಂದ ವ್ಯವಹರಿಸಲಾಗುತ್ತಿದೆ. ಇವುಗಳಲ್ಲಿ ಧರ್ಮ-ಅರ್ಥ-ಕಾಮಗಳೆಂಬ ತ್ರಿವರ್ಗಗಳಿಂದ ಉಂಟಾಗುವ ಸುಖ ಕ್ಷಣಿಕವಾದುದರಿಂದ ನಾಲ್ಕನೆಯದಾದ ಮೋಕ್ಷವು ಶ್ರೇಷ್ಠವಾದ ಪುರುಷಾರ್ಥವೆಂಬುವಾಗಿ ಎಲ್ಲ ದಾರ್ಶನಿಕರಿಂದಲೂ ಸ್ವೀಕೃತವಾಗಿದೆ. ಎಲ್ಲ ಭಾರತೀಯ ದರ್ಶನಗಳ ಮೂಲ ವೇದಾಗಮಗಳೇ ಎಂಬುದು ನಿಶ್ಚಿತವಾಗಿದೆ. ಶ್ರೇಷ್ಠ ಕರುಣಾಮಯಿಯಾದ ಶಿವನು ಲೋಕಕಲ್ಯಾಣಕ್ಕಾಗಿ ಅವುಗಳನ್ನು ಸೃಷ್ಟಿಸಿದನು.[೧] ಅವುಗಳಲ್ಲಿ ವೇದಗಳು ಶಿವನ ಉಸಿರಿನಂತೆಯೂ,[೨] ಆಗಮಗಳು ಅವನ ಮಾತಿನ[೩] ರೂಪದಲ್ಲಿಯೂ ಇವೆ ಎಂದು ಭಾರತೀಯ ದಾರ್ಶನಿಕರ ಅಭಿಪ್ರಾಯವಾಗಿದೆ. "ದೃಶ್ಯತೇ ಸಾಕ್ಷಾತ್ ಕ್ರಿಯತೇ ಪರಮತತ್ತ್ವಂ ಯೇನ ತದ್ ದರ್ಶನಮ್" ಎಂಬ ವ್ಯುತ್ಪತ್ತಿಯಿಂದ ತತ್ತ್ವಜ್ಞಾನ ಸಾಧನವಾದ ಶಾಸ್ತ್ರವನ್ನು ದರ್ಶನ ಎಂದು ಕರೆಯಲಾಗುತ್ತದೆ. ಎಲ್ಲ ದುಃಖ ನಿವಾರಕವೂ, ಪರಮಾನಂದವನ್ನುಂಟುಮಾಡುವ ಅಮೋಘ ಸಾಧನ ತತ್ತ್ವಜ್ಞಾನವೇ ಎಂಬ ವಿಷಯದಲ್ಲಿ ದಾರ್ಶನಿಕರಲ್ಲಿ ವಿರೋಧವೇನೂ ಇಲ್ಲ.

---

[೧] ಸದ್ಯೋಜಾತೇನ ಋಗ್ವೇದಂ ವಾಮದೇವೇನ ಯಾಜುಷಮ್।
ಅಘೋರೇಣ ತಥಾ ಸಾಮ ಪುರುಷೇಣ ತ್ವಥರ್ವಣಮ್॥
ಈಶಾನೇನ ಮುಖೇನೈವ ಕಾಮಿಕಾದ್ಯಾಗಮಾಂಸ್ತಥಾ।
ಜನಯಾಮಾಸ ವಿಶ್ವೇಶಃ ಸರ್ವಸಿದ್ಧಿಪ್ರದಾಯಕಃ॥
-(ಬ್ರಹ್ಮಸೂತ್ರ ಶ್ರೀಕರಭಾಷ್ಯ, ೧-೧-೩)

[೨] "ನಿಶ್ವಸಿತಮಸ್ಯ ವೇದಾಃ" (ಬ್ರಹ್ಮಸೂತ್ರಭಾಮತೀಟೀಕಾ, ಮಂಗಳ ಶ್ಲೋಕ, ೨)

[೩] ಆಗತಂ ಶಿವವಕ್ತ್ರಾತ್ತು ಗತಂ ಚ ಗಿರಿಜಾಮುಖೇ।
ಮತಂ ಶ್ರೀವಾಸುದೇವೇನ ಆಗಮಸ್ತೇನ ಕೀರ್ತಿತಃ॥ -(ಭಾಸ್ಕರೀ ಭಾಗ ೨, ಪು.೮೫)

ತತ್ತ್ವಜ್ಞಾನದ ಪ್ರತಿಪಾದನೆಗಾಗಿ ಭಾರತೀಯ ದಾರ್ಶನಿಕ ಪರಂಪರೆಯನ್ನು ಉಪನಿಷತ್ ಆಧಾರವಾದವುಗಳು ಮತ್ತು ಆಗಮಾಧಾರಿತವಾದವುಗಳು ಎಂದು ಎರಡು ವಿಭಾಗ ಮಾಡಲಾಗಿದೆ. ಅವುಗಳಲ್ಲಿ ವೇದಾಂತ ಪರಂಪರೆಯನ್ನು ಉಪನಿಷತ್ತುಗಳು ಪ್ರತಿಪಾದಿಸಿದರೆ ಶೈವಪರಂಪರೆಯನ್ನು ಆಗಮಗಳು ಪ್ರತಿಪಾದಿಸುತ್ತವೆ ಎಂದು ಹೇಳಲಾಗಿದೆ. ವೇದಾಂತ ಪರಂಪರೆಯು ಹೇಗೆ ಆಚಾರಭೇದದಿಂದ ಬಹುಶಾಖೆಗಳಿಂದ ಕೂಡಿದೆಯೋ ಹಾಗೆಯೇ ಆಗಮ ಪರಂಪರೆಯೂ ಕೂಡ ಅನೇಕ ಶಾಖೆಗಳಿಂದ ಕೂಡಿದೆ.

ಆಗಮಗಳು ಮತ್ತು ಅವುಗಳ ಪ್ರಭೇದಗಳು

ಶಿವನ ವೈಖರೀ ಉಪದೇಶ ರೂಪದಲ್ಲಿರುವ ಈ ಆಗಮವು ಭಾರತೀಯ ವಾಙ್ಮಯದ ಒಂದು ವಿಶೇಷವಾದ ಶಾಖೆ. ಕಾಲಾಂತರದಲ್ಲಿ ಇದೇ 'ತಂತ್ರ' ಶಬ್ದದಿಂದ ಕರೆಯಲ್ಪಟ್ಟಿದೆ ಎಂದು ಪ್ರೊ. ವ್ರಜವಲ್ಲಭದ್ವಿವೇದಿ ಅವರು ಪ್ರತಿಪಾದಿಸುತ್ತಾರೆ.[೪] ಆದುದರಿಂದ ಆಗಮ-ತಂತ್ರ ಶಬ್ದಗಳು ಪರ್ಯಾಯ ಪದಗಳೆಂದು ನಿಶ್ಚಯವಾಗುತ್ತದೆ. ಆಗಮಗಳು ವೈಷ್ಣವ-ಶೈವ-ಶಾಕ್ತ ಮುಂತಾದ ಭೇದದಿಂದ ಅನೇಕ ವಿಧವಾಗಿವೆ.[೫] ಅವುಗಳಲ್ಲಿ ವಿಶೇಷವಾಗಿ ವೈಷ್ಣವಾಗಮವು ವೈಖಾನಸ-ಭಾಗವತ-ಪಾಂಚರಾತ್ರ ಎಂದು ಮೂರು ವಿಧವಾಗಿದೆ. ವೈಖಾನಸ ಸಂಪ್ರದಾಯವು ಈಗ ಆಂಧ್ರಪ್ರದೇಶದಲ್ಲಿ, ಪಾಂಚರಾತ್ರ ಸಂಪ್ರದಾಯವು ತಮಿಳುನಾಡು ಪ್ರದೇಶದಲ್ಲಿ ಆಚರಣೆಯಲ್ಲಿದೆ. ಇದೇ ರೀತಿಯಲ್ಲಿ ಹತ್ತು ಮಹಾವಿದ್ಯೆಗಳನ್ನು ಪ್ರತಿಪಾದಿಸುವಂತಹ ಶಾಕ್ತಾಗಮವೂ ಸಹ ಅನೇಕ ವಿಧವಾಗಿದೆ. ಅವುಗಳಲ್ಲಿ ತ್ರಿಪುರಾ-ಕ್ರಮ-ಕುಲ-ತ್ರಿಕ ಎಂಬ ನಾಲ್ಕು ಆಗಮಗಳು ಮುಖ್ಯವಾದವುಗಳು.[೬]

ಶೈವಾಗಮಗಳು-ಅವುಗಳ ಕಾಲ ಮತ್ತು ವಿಷಯ

ಶಿವನಿಂದ ಉಪದೇಶಿಸಲ್ಪಟ್ಟ ಆಗಮಗಳು 'ಶೈವಾಗಮ' ಎಂದು ಕರೆಯಲ್ಪಟ್ಟಿವೆ. ಶಿವಮಹಾಪುರಾಣದ ವಾಯುಸಂಹಿತೆಯ ಅನುಸಾರವಾಗಿ ಶೈವಾಗಮಗಳನ್ನು ಶ್ರೌತ

---

[೪] ಆಗಮ ಮೀಮಾಂಸಾ, ಪು. ೧.

[೫] ಆಗಮಾ ಬಹುಧಾ ಪ್ರೋಕ್ತಾಃ ಶಿವೇನ ಪರಮಾತ್ಮನಾ।
ಶೈವಂ ಪಾಶುಪತಂ ಸೋಮಂ ಲಾಕುಲಂ ಚೇತಿ ಭೇದತಃ॥
ತೇಷು ಶೈವಂ ಚತುರ್ಭೇದಂ ತಂತ್ರಂ ಸರ್ವವಿನಿಶ್ಚಿತಮ್।
ವಾಮಂ ಚ ದಕ್ಷಿಣಂ ಚೈವ ಮಿಶ್ರಂ ಸಿದ್ಧಾಂತಸಂಜ್ಞಕಮ್॥
ಶಕ್ತಿಪ್ರಧಾನಂ ವಾಮಾಖ್ಯಂ ದಕ್ಷಿಣಂ ಭೈರವಾತ್ಮಕಮ್।
ಸಪ್ತಮಾತೃಪರಂ ಮಿಶ್ರಂ ಸಿದ್ಧಾಂತಂ ವೇದಸಮ್ಮತಮ್॥ -(ಸಿ.ಶಿ, ೫.೯-೧೧)

[೬] ವೈಷ್ಣವಾಗಮ ಮತ್ತು ಶಾಕ್ತಾಗಮಗಳ ಸ್ವರೂಪ ಮತ್ತು ದರ್ಶನವನ್ನು ಪ್ರೊ. ವ್ರಜವಲ್ಲಭ ದ್ವಿವೇದಿ ಅವರು ತಮ್ಮ 'ಆಗಮ ಮೀಮಾಂಸಾ' ಎಂಬ ಗ್ರಂಥದಲ್ಲಿ ವಿಸ್ತಾರವಾಗಿ ಚರ್ಚಿಸಿದ್ದಾರೆ. ವಿಶೇಷ ಜಿಜ್ಞಾಸುಗಳು ಆ ಗ್ರಂಥವನ್ನು ನೋಡಬಹುದು.

ಮತ್ತು ಸ್ವತಂತ್ರ ಎಂದು ಎರಡು ಬಗೆಯಾಗಿ ವಿಭಜಿಸಲಾಗಿದೆ. ಅವುಗಳಲ್ಲಿ ಕಾಮಿಕಾದಿ ವಾತುಲಾಂತ ಸಿದ್ಧಾಂತ ಪದ[೭]ವಾಚ್ಯಗಳಾದ ಇಪ್ಪತ್ತೆಂಟು ಆಗಮಗಳನ್ನು ಸ್ವತಂತ್ರಾಗಮಗಳು ಎಂದು ಕರೆಯಲಾಗಿದೆ. ಶ್ರೌತಾಗಮಗಳಾದರೋ ನೂರು ಕೋಟಿಯಷ್ಟು ವಿಸ್ತಾರವಾಗಿದ್ದು, ಅವುಗಳನ್ನು ಪಾಶುಪತ, ವ್ರತ ಮತ್ತು ಜ್ಞಾನ ಎಂದು ಕರೆಯಲಾಗಿದೆ. ಅದರಲ್ಲಿ ಕ್ರಿಯಾ, ತಪ, ಜಪ, ಧ್ಯಾನ ಮತ್ತು ದಾನ ಎಂಬ ಹೆಸರಿನ ಐದು ಪರ್ವಗಳಿವೆ. ಈ ಶಾಸ್ತ್ರವನ್ನು ರುರು - ದಧೀಚಿ - ಅಗಸ್ತ್ಯ-ಉಪಮನ್ಯು ಎಂಬ ಹೆಸರಿನ ನಾಲ್ವರು ಋಷಿಗಳು ಸಂಕ್ಷಿಪ್ತವಾಗಿ ಉಪದೇಶಿಸಿದ್ದಾರೆ. ಧೌಮ್ಯನ ಅಣ್ಣನಾದ ಉಪಮನ್ಯುವಿನಿಂದ ಶ್ರೀಕೃಷ್ಣನಿಗೆ ಉಪದೇಶಿಸಲ್ಪಟ್ಟ ಪಾಶುಪತ ಸಂಪ್ರದಾಯದ ಜ್ಞಾನವು ಮಹಾಭಾರತದ[೮] ವಾಯುಸಂಹಿತೆಯ ಉತ್ತರಭಾಗದಲ್ಲಿ ಸಂಗ್ರಹವಾಗಿದೆ ಎಂದು ಆಗಮಶಾಸ್ತ್ರ ವಿಶಾರದ ಪ್ರೊ. ವ್ರಜವಲ್ಲಭದ್ವಿವೇದಿ ಅವರು ಶ್ರೌತಾಗಮ ಪರಂಪರೆಯನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.

ಸಿದ್ಧಾಂತ ಪದದಿಂದ ಕರೆಯಲಾಗುವ ಕಾಮಿಕಾದಿ ಆಗಮಗಳು ಶಿವ ಮತ್ತು ರುದ್ರ ಇವರಿಂದ ನಿರೂಪಿತವಾಗಿವೆ. ಇವು ಸನಾತನವಾದವುಗಳು. ಐತಿಹಾಸಿಕ ದೃಷ್ಟಿಯಿಂದ ಇವುಗಳ ಕಾಲ ಈಗಿನ ಕಾಲದಿಂದ ೫೦೦೦ ವರ್ಷಗಳಷ್ಟು ಪ್ರಾಚೀನ ಎಂಬುದು ವಿದ್ವಾಂಸರ[೯] ಆಶಯವಾಗಿದೆ. ಶೈವಾಗಮಗಳಲ್ಲಿ ಕ್ರಿಯಾ, ಚರ್ಯಾ, ಯೋಗ ಮತ್ತು ಜ್ಞಾನ ಎಂಬ ನಾಲ್ಕು ಪಾದಗಳಿವೆ. ಕ್ರಿಯಾಪಾದದಲ್ಲಿ ದೇವಾಲಯಗಳ ಸ್ಥಾಪನೆ, ಮೂರ್ತಿರಚನೆ ಹಾಗೂ ಅವುಗಳ ಪ್ರತಿಷ್ಠಾಪನೆಯೇ ಮೊದಲಾದ ವಿಷಯಗಳೂ, ಚರ್ಯಾಪಾದದಲ್ಲಿ ಮಾನವರಿಂದ ಪ್ರತಿಷ್ಠಾಪಿತವಾದ ಮೂರ್ತಿಗಳ ಪೂಜೆ-ಉತ್ಸವಾದಿ ಪ್ರಕಾರಗಳೂ, ಯೋಗಪಾದದಲ್ಲಿ ಯೋಗಾಭ್ಯಾಸ ಪ್ರಕ್ರಿಯೆಯೂ ಮತ್ತು ಜ್ಞಾನಪಾದದಲ್ಲಿ ಪತಿ-ಪಶು-ಪಾಶ ಎಂಬ ಮೂರು ತತ್ತ್ವಗಳು ನಿರೂಪಿತವಾಗಿವೆ.

ಶೈವಮತ ಮತ್ತು ಅದರ ಪ್ರಭೇದಗಳು

ಶಿವಾಗಮಾನುಯಾಯಿಗಳ ಶೈವಮತವು ಐತಿಹಾಸಿಕ ದೃಷ್ಟಿಯಿಂದ ಮತ್ತು ದಾರ್ಶನಿಕ ದೃಷ್ಟಿಯಿಂದಲೂ ಹೆಚ್ಚು ಮಹತ್ತ್ವಪೂರ್ಣವಾದುದು. ಎಂಟು ಸಾವಿರ ವರ್ಷಗಳಷ್ಟು ಹಿಂದೆ ಪ್ರಚಲಿತವಿದ್ದ ಜರೋಷ್ಟ್ರಮತಕ್ಕಿಂತಲೂ ಪ್ರಾಚೀನವಾದುದೆಂದು ಶ್ರೀ ಕಾಂತಿಚಂದ್ರಪಾಂಡೇಯ ಅವರು ಅಭಿಪ್ರಾಯಪಡುತ್ತಾರೆ. ಈ ಶೈವಮತವು ಅನೇಕ

---

[೭] "ಸಿದ್ಧಾಂತ ಶಬ್ದಶ್ಚ ಪಂಕಜಾದಿಶಬ್ದವದ್ ಯೋಗರೂಢ್ಯಾ ಶಿವಪ್ರಣೀತೇಷು ಕಾಮಿಕಾದಿಷು ದಶಾಷ್ಟಾದಶತಂತ್ರೇಷು ಪ್ರಸಿದ್ಧಃ" (ಶ್ಲೋ. ೧೦) ಇತಿ ರತ್ನತ್ರಯೋಲ್ಲೇಖಿನ್ಯಾಮಘೋರ ಶಿವಾಚಾರ್ಯಃ। "ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ" (ಸಿ.ಶಿ. ೫.೧೪) ಇತಿ ಚ ಶಿವಯೋಗಿ ಶಿವಾಚಾರ್ಯಃ।

[೮] ಮಹಾಭಾರತ, ಅನುಶಾಸನಪರ್ವ, XIV.೬೪-೭೭.

[೯] ಆಗಮಮೀಮಾಂಸಾ, ಪು. ೨೯.

ಶಾಖೆಗಳಿಂದ ಕೂಡಿರುವಂತಹದ್ದು. ಇದರ ವಿಪುಲವಾದ ಸಾಹಿತ್ಯವು ನಶಿಸಿರುವುದರಿಂದ ಕೆಲವು ಶಾಖೆಗಳು ಕೇವಲ ಹೆಸರಿನಿಂದ ಮಾತ್ರ ತಿಳಿಯುವಂತಹವುಗಳಾಗಿವೆ. ಡಾ. ಕಾಂತಿಚಂದ್ರ ಪಾಂಡೇಯ ಅವರು ಹತ್ತು ಶೈವದರ್ಶನಗಳನ್ನು ಪರಿಶೀಲಿಸಿ, ಅವುಗಳನ್ನು ದ್ವೈತ - ದ್ವೈತಾದ್ವೈತ - ಅದ್ವೈತ ಎಂದು ಮೂರು ಭಾಗಗಳನ್ನಾಗಿ ವಿಂಗಡಿಸಿದ್ದಾರೆ. ಅದರಂತೆ ಪಾಶುಪತ ಸಿದ್ಧಾಂತ ಶೈವದರ್ಶನವು ದ್ವೈತಪರವಾಗಿಯೂ, ಲಕುಲೀಶಪಾಶುಪತ-ಶ್ರೀಕಂಠೀಯ ವಿಶಿಷ್ಟಾದ್ವೈತ-ವೀರಶೈವ-ರಸೇಶ್ವರ ದರ್ಶನಗಳು ದ್ವೈತಾದ್ವೈತಪರವಾಗಿಯೂ, ನಂದಿಕೇಶ್ವರದರ್ಶನ-ಪ್ರತ್ಯಭಿಜ್ಞಾ-ಕ್ರಮ-ಕುಲ ದರ್ಶನಗಳು ಅದ್ವೈತ ಪರವಾಗಿವೆಯೆಂದು ತಿಳಿದುಬರುತ್ತದೆ.[೧೦] ಶಿವಾದ್ವೈತ ಪ್ರತಿಪಾದಕವಾದ ದರ್ಶನವು ಪಾಶುಪತದರ್ಶನ ಮತ್ತು ಸಿದ್ಧಾಂತಶೈವದರ್ಶನ ಎಂದು ಎರಡು ವಿಧ. ಪಾಶುಪತದರ್ಶನವು ಸುಪ್ರಸಿದ್ಧವಾದ ಹತ್ತು ಆಗಮಗಳನ್ನು ಆಶ್ರಯಿಸಿದ್ದರೆ, ಸಿದ್ಧಾಂತಶೈವದರ್ಶನವು ಹದಿನೆಂಟು ಆಗಮಗಳನ್ನು ಆಶ್ರಯಿಸಿರುವುದು ಈ ಎರಡು ದರ್ಶನಗಳ ಮುಖ್ಯ ಭೇದವು. ಕಾಮಜ - ಯೋಗಜ - ಚಿಂತ್ಯ - ಮೌಕುಟ-ಅಂಶುಮತ್-ದೀಪ್ತ-ಕಾರಣ -ಅಜಿತ-ಸೂಕ್ಷ್ಮ-ಸಹಸ್ರ ಈ ಹತ್ತು ಆಗಮಗಳು ಪಾಶುಪತ ಸಮ್ಮತವಾಗಿದ್ದು ದ್ವೈತಾಗಮಗಳು. ಮುದ್ರಿತ ಮೃಗೇಂದ್ರಾಗಮ ಭೂಮಿಕಾನುಸಾರ ಎರಡು ಆಗಮಗಳ ಹೆಸರಿನಲ್ಲಿ ವ್ಯತ್ಯಾಸವು ಕಂಡುಬರುತ್ತದೆ. ಭೂಮಿಕೆಯಲ್ಲಿ 'ಕಾಮಜ'ದ ಸ್ಥಾನದಲ್ಲಿ 'ಕಾಮಿಕ' ಎಂದಿದೆ. ಇದು 'ಕಾಮಜ'ದ ನಾಮಾಂತರವಷ್ಟೆ. ಆದರೆ 'ಮುಕುಟ'ದ ಸ್ಥಾನದಲ್ಲಿ 'ಸುಪ್ರಭೇದ' ಎಂಬ ಹೆಸರಿನ ಮತ್ತೊಂದು ಆಗಮದ ಹೆಸರು ದೊರೆಯುತ್ತಿದ್ದು, ಇದು ವಿಚಾರಾರ್ಹವಾದ ವಿಷಯವೆಂದು ಕಾಂತಿಚಂದ್ರ ಪಾಂಡೇಯ ಅವರು ಪ್ರತಿಪಾದಿಸುತ್ತಾರೆ.[೧೧] 'ಕ್ರಿಯಾಸಾರ'[೧೨]ವೆಂಬ ವೀರಶೈವ ಗ್ರಂಥದಲ್ಲಿಯೂ ಕೂಡ ಮುಕುಟಾಗಮದ ಸ್ಥಾನದಲ್ಲಿ ಸುಪ್ರಭೇದಾಗಮದ ಗಣನೆಯು ಕಂಡುಬರುತ್ತದೆ. ಉಳಿದ ಯಾವ ಸಿದ್ಧಾಂತ ಶೈವದಾರ್ಶನಿಕರು ದ್ವೈತವನ್ನು ಪ್ರಮಾಣಪೂರ್ವಕವಾಗಿ

---

[೧೦] ಆಗಮಮೀಮಾಂಸಾ, ಪು. ೨೮; ಶೈವದರ್ಶನಬಿಂದುಃ, ಪು. ೨; ಬ್ರಹ್ಮಸೂತ್ರ ಶ್ರೀಕರಭಾಷ್ಯ ಭೂಮಿಕಾ, ಪು. ೩೪.

[೧೧] ಶೈವದರ್ಶನಬಿಂದುಃ, ಪು. ೩-೪.

[೧೨] ಕಾಮಿಕಂ ಯೋಗಜಂ ಚಿಂತ್ಯಂ ಕಾರಣಂ ತ್ವಜಿತಂ ತಥಾ।
ದೀಪ್ತಂ ಸೂಕ್ಷ್ಮಂ ಸಹಸ್ರಂ ಚ ಅಂಶುಮಾನ್ ಸುಪ್ರಭೇದಕಮ್॥
ವಿಜಯಂ ಚೈವ ನಿಶ್ವಾಸಂ ಸ್ವಾಯಂಭುವಮಥಾನಿಲಮ್।
ವೀರಂ ಚ ರೌರವಂ ಚೈವ ಮುಕುಟಂ ವಿಮಲಂ ತಥಾ॥
ಚಂದ್ರಜ್ಞಾನಂ ಚ ಬಿಂಬಂ ಚ ಪ್ರೋದ್ಗೀತಂ ಲಲಿತಂ ತಥಾ।
ಸಿದ್ಧಂ ಸಂತಾನಶರ್ವೋಕ್ತಂ ಪಾರಮೇಶ್ವರಮೇವ ಚ।
ಕಿರಣಂ ವಾತುಲಂ ಚೈವ ಅಷ್ಟಾವಿಂಶತಿಸಂಖ್ಯಯಾ॥

(ಕ್ರಿಯಾಸಾರ, ಭಾಗ-೧, ಪು.೧)

ಪ್ರತಿಪಾದಿಸಿ ಸ್ವೀಕರಿಸಿರುವರೋ ಅವರೂ ಸಹ ಅಭಿನವಗುಪ್ತ-ಜಯರಥ ಇವರ ಅನುಸಾರವಾಗಿ ದ್ವೈತ ಪ್ರತಿಪಾದಕರಾಗಿರದೆ ದ್ವೈತಾದ್ವೈತ ಪ್ರತಿಪಾದಕರು. ಎಲ್ಲ ಸಿದ್ಧಾಂತಾಗಮಗಳ ಪ್ರಾಮಾಣ್ಯವನ್ನು ಸ್ವೀಕರಿಸಿರುವ ವೀರಶೈವ ಆಚಾರ್ಯರುಗಳಿಂದ ದ್ವೈತಾದ್ವೈತ ಪರವಾದ ಸಿದ್ಧಾಂತವು ಪ್ರತಿಷ್ಠಾಪಿತವಾಗಿದೆ. ಒಂದು ವೇಳೆ ಈಗಿನ ಕಾಲದಲ್ಲಿ ವೀರಶೈವ ಆಚಾರ್ಯರಿಂದ ದ್ವೈತಾದ್ವೈತ ಪರವೆಂದು ಹೇಳಿರುವ ಆಗಮಗಳು ದೊರೆಯದಿದ್ದರೂ ಕೂಡ ಅವರಿಂದ ಪ್ರತಿಷ್ಠಾಪಿತವಾದ ಸಿದ್ಧಾಂತಾನುಸಾರವಾಗಿ ಎಲ್ಲ ಸಿದ್ಧಾಂತಾಗಮಗಳೂ ಕೂಡ ದ್ವೈತಾದ್ವೈತ ಪರವಾದವು ಎಂದು ಊಹಿಸಲಾಗಿದೆ. ಆದ್ದರಿಂದಲೇ ಪಾಂಡೇಯ ಮಹೋದಯರು ಹೀಗೆ ಹೇಳುತ್ತಾರೆ- "ಇದರಿಂದ ಸ್ಪಷ್ಟವಾಗುವುದೇನೆಂದರೆ ಯಾವ ರೀತಿಯಲ್ಲಿ ವೇದವಾಕ್ಯಗಳು ಮತ್ತು ಉಪನಿಷದ್ವಾಕ್ಯಗಳು ದ್ವೈತ - ದ್ವೈತಾದ್ವೈತ - ವಿಶಿಷ್ಟಾದ್ವೈತ - ಅದ್ವೈತ ಮತಗಳನ್ನು ಪ್ರತಿಪಾದಿಸುವ ಬೇರೆ ಬೇರೆ ವೈದಿಕ ದಾರ್ಶನಿಕರಿಂದ ತಮ್ಮ ತಮ್ಮ ಮತಾನುಸಾರ ವ್ಯಾಖ್ಯಾನ ಮಾಡಿವೆಯೋ ಅದೇ ರೀತಿಯಲ್ಲಿ ಶಿವಾಗಮಗಳೂ ಕೂಡ ಆಯಾಯ ಶೈವ ದಾರ್ಶನಿಕರಿಂದ ತಮ್ಮ ತಮ್ಮ ಮತಕ್ಕೆ ಪೋಷಕವಾಗುವಂತೆ ವ್ಯಾಖ್ಯಾನಗೊಂಡಿವೆ."[೧೩]

ಪ್ರಾಚೀನವಾದ ಪಾಶುಪತ ದ್ವೈತದರ್ಶನಸಿದ್ಧಾಂತ ಪ್ರತಿಪಾದಕರ ಒಂದು ಸ್ವತಂತ್ರ ಗ್ರಂಥವಾಗಲಿ ಅಥವಾ ಆಗಮವ್ಯಾಖ್ಯಾ ಪರವಾದ ಗ್ರಂಥಗಳಾಗಲಿ ದೊರೆಯುತ್ತಿಲ್ಲ. ಆದರೆ ಬಾದರಾಯಣರ ಬ್ರಹ್ಮಸೂತ್ರದಲ್ಲಿ ಮತ್ತು ಅದರ ಟೀಕಾ ಗ್ರಂಥದಲ್ಲಿ ಖಂಡನೆಯ ರೂಪದಲ್ಲಿ, ಹರಿಭದ್ರಸೂರಿ-ರಾಜಶೇಖರ ಇವರ ಷಡ್‌ದರ್ಶನಸಮುಚ್ಚಯ ಎಂಬ ಹೆಸರಿನ ಗ್ರಂಥಗಳಲ್ಲಿ ಆ ಸಿದ್ಧಾಂತವನ್ನು ಸಂಕ್ಷಿಪ್ತವಾಗಿ ಪ್ರತಿಪಾದಿಸಿರುವುದು ಕಂಡುಬರುತ್ತದೆ.[೧೪] ಶ್ರೌತಾಗಮದ ಪಾಶುಪತ ದರ್ಶನದ ಚರ್ಚೆಯು ಹಿಂದೆ ಈಗಾಗಲೇ ಬಂದಿರುತ್ತದೆ. ಶ್ರೀಕಂಠ ಎಂಬುವನು ಈ ದರ್ಶನದ ಪ್ರವರ್ತಕನಾಗಿದ್ದನೆಂದು ಮಹಾಭಾರತದ ನಾರಾಯಣೀಯೋಪಾಖ್ಯಾನದಲ್ಲಿ ಕಂಡುಬರುತ್ತದೆ.[೧೫]

ಸಿದ್ಧಾಂತಶೈವದರ್ಶನ

ಶೈವ ಶಾಖೆಗಳಲ್ಲಿ ಸಿದ್ಧಾಂತಶೈವದ ವಿಪುಲವಾದ ಸಾಹಿತ್ಯವು ದೊರೆಯುತ್ತದೆ. ಕ್ರಿ.ಶ. ಒಂಬತ್ತನೆಯ ಶತಮಾನದಿಂದ ಆರಂಭಿಸಿ ಹನ್ನೆರಡನೆಯ ಶತಮಾನದವರೆಗೆ ಕಾಶ್ಮೀರ-ಚೋಳ-ಲಾಟ-ಮಧ್ಯಪ್ರದೇಶ-ಕಾನ್ಯಕುಬ್ಜ ಮುಂತಾದ ಪ್ರದೇಶಗಳಲ್ಲಿ ಈ ದರ್ಶನದ ಪ್ರಚಾರವಿತ್ತು. ಈ ದರ್ಶನದ ಪರಂಪರೆಯು ರೌರವಾಗಮದ ದ್ರಷ್ಟಾರನಾದ

---

[೧೩] ಶೈವದರ್ಶನಬಿಂದುಃ, ಪು.೪.

[೧೪] ಶೈವದರ್ಶನಬಿಂದುಃ ಪು. ೫-೭.

[೧೫] ಉಮಾಪತಿರ್ಭೂತಪತಿಃ ಶ್ರೀಕಂಠೋ ಬ್ರಹ್ಮಣಃ ಸುತಃ।
ಉಕ್ತವಾನಿದಮವ್ಯಗ್ರೋ ಜ್ಞಾನಂ ಪಾಶುಪತಂ ಶಿವಃ॥
(ಮಹಾಭಾರತ, ೧೨.೩೪೯-೬೭)

'ರುರು'ವಿನ ಕಾಲದಿಂದ ಆರಂಭವಾಗಿ ಅತ್ರೇಯನ ಮೂಲಕ ಮೋಕ್ಷಕಾರಿಕಾ ಕರ್ತೃ 'ಸದ್ಯೋಜಾತ'ನವರೆಗೆ ನಿರಂತರವಾಗಿ ಇದ್ದಿತು.

ಸಿದ್ಧಾಂತಶೈವ ಪ್ರತಿಪಾದಕ ಆಚಾರ್ಯರು ಮತ್ತು ಅವರ ಸಾಹಿತ್ಯ

ಸಿದ್ಧಾಂತಶೈವದರ್ಶನವನ್ನನುಸರಿಸಿ ಅನೇಕ ಆಚಾರ್ಯರು ಸ್ವತಂತ್ರವಾಗಿ ಮತ್ತು ಟೀಕಾರೂಪವಾಗಿ ಪ್ರಕರಣ ಗ್ರಂಥಗಳನ್ನು ರಚಿಸಿದ್ದಾರೆ. ಅವರಲ್ಲಿ ಸದ್ಯೋಜ್ಯೋತಿ ಶಿವಾಚಾರ್ಯರು ಮೊದಲನೆಯವರೆಂದು ಪರಿಗಣಿಸಲಾಗಿದೆ. ಖೇಟಪಾಲ-ಖೇಟಕ ನಂದನ ಎಂಬ ಬೇರೆ ಎರಡು ಹೆಸರುಗಳಿಂದಲೂ ಇವರು ಪ್ರಸಿದ್ಧರಾಗಿದ್ದರು. ಅಭಿನವಗುಪ್ತರ ತಂತ್ರಾಲೋಕದಲ್ಲಿ ಮಲದ ದ್ರವ್ಯತ್ವವನ್ನು ಪ್ರತಿಪಾದಿಸುವ ಇವರ ಸಿದ್ಧಾಂತವು ಖಂಡಿಸಲ್ಪಟ್ಟಿರುವುದರಿಂದ, ಇವರು ಅಭಿನವಗುಪ್ತರಿಗಿಂತಲೂ ಹಿಂದಿನವರು. ಅಲ್ಲದೆ 'ಶಿವದೃಷ್ಟಿ' ಗ್ರಂಥದ ಕರ್ತೃವಾದ ಸೋಮಾನಂದರು ಖೇಟಪಾಲರ ಮತವನ್ನು ಆದರದಿಂದ ಸ್ಮರಿಸಿದ್ದಾರೆ.[೧೬] ಆದುದರಿಂದ ಅವರ ಕಾಲ ಕ್ರಿ.ಶ. ೯ನೆಯ ಶತಮಾನ ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.[೧೭] ಇವರಿಂದ ರಚಿತವಾದ ರೌರವಾಗಮಟೀಕಾ, ಸ್ವಾಯಂಭುವಾಗಮಟೀಕಾ, ತತ್ತ್ವಸಂಗ್ರಹಃ, ತತ್ತ್ವತ್ರಯನಿರ್ಣಯಃ, ಭೋಗಕಾರಿಕಾ, ಮೋಕ್ಷಕಾರಿಕಾ, ನರೇಶ್ವರಪರೀಕ್ಷಾ, ಪರಮೋಕ್ಷನಿರಾಸಕಾರಿಕಾ ಇತ್ಯಾದಿ ಗ್ರಂಥಗಳು ಪ್ರಸಿದ್ಧವಾಗಿವೆ. 'ಉಗ್ರಜ್ಯೋತಿ'ಯ ಶಿಷ್ಯರಾದ ಸದ್ಯೋಜ್ಯೋತಿ ಶಿವಾಚಾರ್ಯರು ಸಿದ್ಧಾಂತ ಶಿವಾಗಮಗಳ ವ್ಯಾಖ್ಯಾನ ಪದ್ಧತಿಯನ್ನು ಮೊಟ್ಟಮೊದಲಿಗೆ ಆರಂಭಿಸಿದರು. ಇವರು ಮೊದಲ ಬಾರಿಗೆ ರೌರವಾಗಮ ಪ್ರತಿಪಾದಿತ ಶೈವದರ್ಶನಕ್ಕಾಗಿ 'ಸಿದ್ಧಾಂತ' ಶಬ್ದವನ್ನು ಉಪಯೋಗಿಸಿದರು. ಹೇಗೆಂದರೆ-

ರುರುಸಿದ್ಧಾಂತಸಂಸಿದ್ಧೌ ಭೋಗಮೋಕ್ಷೌ ಸಸಾಧನಾ।
ವಚ್ಮಿ ಸಾಧಕಬೋಧಾಯ ಲೇಶತೋ ಯುಕ್ತಿಸಂಸ್ಕೃತಾ॥[೧೮]

"ರೌರವಾಗಮದಲ್ಲಿ ಸಾಧನ ಸಹಿತವಾಗಿರುವ ಭೋಗ-ಮೋಕ್ಷಗಳೆರಡನ್ನೂ ಸಿದ್ಧಾಂತವೆಂದು ಸಿದ್ಧಮಾಡಲಾಗಿದೆ. ಅದನ್ನು ಸಾಧಕನಿಗೆ ಬೋಧಿಸಲು ಯುಕ್ತಿಯಿಂದ ಕೂಡಿ ಸಂಕ್ಷಿಪ್ತವಾಗಿ ಹೇಳುತ್ತೇನೆ."

ಇದಾದ ನಂತರ ಶ್ರೀಕಂಠ ರಚಿತ 'ರತ್ನತ್ರಯಟೀಕಾ'ಕಾರರಾದ ಶ್ರೀಮದ್ ಅಘೋರ ಶಿವಾಚಾರ್ಯರ ಮಾತಿನಂತೆ " 'ಸಿದ್ಧಾಂತ' ಶಬ್ದವು ಪಂಕಜವೇ ಮುಂತಾದ ಶಬ್ದದಂತೆ ಯೋಗ ಮತ್ತು ರೂಢಿಯಿಂದ ಶಿವಪ್ರಣೀತವಾದ ಇಪ್ಪತ್ತೆಂಟು ತಂತ್ರಗಳಲ್ಲಿ ಪ್ರಸಿದ್ಧವಾಗಿವೆ"[೧೯] ಎಂದು ಶ್ರೀಕಾಂತಿಚಂದ್ರಪಾಂಡೇಯ ಮಹೋದಯರು

---

[೧೬] ಶಿವದೃಷ್ಟಿಃ, ಪು. ೧೩-೧೪.

[೧೭] ಶೈವದರ್ಶನಬಿಂದುಃ, ಪು. ೮.

[೧೮] ಭೋಗಕಾರಿಕಾ, ಶ್ಲೋಕ. ೨.

[೧೯] ಶೈವದರ್ಶನಬಿಂದುಃ, ಪು. ೮.

ಪ್ರತಿಪಾದಿಸಿದ್ದಾರೆ. ಆದರೆ ಸಿದ್ಧಾಂತ ಶಿಖಾಮಣಿಯ ಕರ್ತೃವಾದ ಶಿವಯೋಗಿ ಶಿವಾಚಾರ್ಯರು ಅದಕ್ಕೂ ಮೊದಲೇ-

> ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ।
> ನಿರ್ದಿಷ್ಟಮುತ್ತರೇ ಭಾಗೇ ವೀರಶೈವಮತಂ ಪರಮ್॥[೨೦]

ಎಂಬಲ್ಲಿ 'ಕಾಮಿಕ'ದಿಂದ 'ವಾತುಲ'ದವರೆಗೆ ಇರುವ ಇಪ್ಪತ್ತೆಂಟು ಶಿವಾಗಮಗಳು 'ಸಿದ್ಧಾಂತ' ಶಬ್ದದಿಂದ ಪ್ರತಿಪಾದಿತವಾಗಿವೆ ಎಂದು ಹೇಳಿರುವುದನ್ನೂ ಕೂಡ ಗಮನಿಸಬೇಕು.

ಸದ್ಯೋಜ್ಯೋತಿ ಶಿವಾಚಾರ್ಯರ ಸಮಕಾಲೀನರಾದ ಮತ್ತೊಬ್ಬ ಆಚಾರ್ಯರು 'ಬೃಹಸ್ಪತಿಪಾದ'ರು. ಸದ್ಯೋಜ್ಯೋತಿ ಶಿವಾಚಾರ್ಯ ಮತ್ತು ಬೃಹಸ್ಪತಿಪಾದ ಈ ಇಬ್ಬರು ಆಚಾರ್ಯರು ಸಿದ್ಧಾಂತ ಶಿವಾಗಮಗಳನ್ನು ಮೊದಲು ವ್ಯಾಖ್ಯಾನಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಆದುದರಿಂದ ಭಟ್ಟರಾಮಕಂಠರು-

> ಯಾಭ್ಯಾಂ ಪ್ರಕಾಶಿತಂ ವರ್ತ್ಮ ಸಿದ್ಧಾಂತೇ ಸಿದ್ಧಭಾವತಃ।
> ಗುರೂಣಾಮಪಿ ತೌ ವಂದ್ಯೌ ಸದ್ಯೋಜ್ಯೋತಿರ್ಬೃಹಸ್ಪತೀ॥[೨೧]

ಎಂದು ಆ ಇಬ್ಬರನ್ನೂ ಸಮಾನಭಾವದಿಂದ ಸ್ತುತಿಸಿದ್ದಾರೆ. ಬೃಹಸ್ಪತಿಪಾದರ ಶಿವತನುಶಾಸ್ತ್ರ ಮತ್ತು ರೌರವವಾರ್ತಿಕಮ್ ಎಂಬೆರಡು ಕೃತಿಗಳು ವಿವಿಧ ಗ್ರಂಥಗಳಲ್ಲಿ ಉಲ್ಲೇಖಗೊಂಡಿವೆ. ಅವರ ಮತದ ವಿದ್ಯಾಕಂಠ - ನಾರಾಯಣಕಂಠ - ಶ್ರೀಕಂಠ - ರಾಮಕಂಠ ಮೊದಲಾದ ಆಚಾರ್ಯರೂ ಸಹ ಕಾಶ್ಮೀರದಲ್ಲಿದ್ದರು.

ದ್ವೈತಶೈವಸಿದ್ಧಾಂತದ ಪ್ರಚಾರವು ಯಾವ ರೀತಿಯಾಗಿ ಕಾಶ್ಮೀರ ಪ್ರಾಂತ್ಯದಲ್ಲಿ ಇದ್ದಿತೋ ಅದೇ ರೀತಿಯಾಗಿ ಮಧ್ಯಪ್ರದೇಶದಲ್ಲಿಯೂ ಇತ್ತು. ಆದುದರಿಂದ ಅಲ್ಲಿಯ ರಾಜನಾದ ಭೋಜದೇವನಿಂದ 'ತತ್ತ್ವಪ್ರಕಾಶ' ಎಂಬ ಹೆಸರಿನ ಗ್ರಂಥವು ರಚಿತವಾಯಿತು. ಅದು ಇವತ್ತಿನವರೆಗೂ ಭೋಜನ ವಿದ್ವತ್ತು ಮತ್ತು ಶಿವಭಕ್ತಿಯನ್ನು ಖ್ಯಾತಿಗೊಳಿಸಿದೆ. ಈ ಗ್ರಂಥಕ್ಕೆ ಮೂರು ವ್ಯಾಖ್ಯಾನಗಳಿವೆ. ಅವುಗಳಲ್ಲಿ ಕುಮಾರ ವಿರಚಿತ 'ತಾತ್ಪರ್ಯದೀಪಿಕಾ' ಮೊದಲನೆಯದು, ಅಘೋರ ಶಿವಾಚಾರ್ಯರು ರಚಿಸಿದ 'ವೃತ್ತಿ' ಎರಡನೆಯದು ಮತ್ತು ಪರ್ವತೇಶ್ವರಸ್ವಾಮಿ ವಿರಚಿತ ಕರ್ನಾಟಕ ಭಾಷೆಯಲ್ಲಿನ ಟೀಕು[೨೨] ಮೂರನೆಯದು.

ದಕ್ಷಿಣ ಭಾರತದಲ್ಲಿಯೂ ಸಹ ಈ ದರ್ಶನದ ಪ್ರಚಾರವು ಹೆಚ್ಚಾಗಿದ್ದಿತು. ಆದುದರಿಂದಲೇ ಚೋಳದೇಶದ ಅಘೋರ ಶಿವಾಚಾರ್ಯರು ತತ್ತ್ವಪ್ರಕಾಶ -

---

[೨೦] ಸಿ.ಶಿ, ೫-೧೪.

[೨೧] ಮೋಕ್ಷಕಾರಿಕಾ ಟೀಕಾ, ಮಂಗಲಶ್ಲೋಕ. ೯.

[೨೨] ಈ ಗ್ರಂಥವು 'ವೀರಶೈವಗ್ರಂಥ ಪ್ರಕಾಶಿಕಾ, ಮೈಸೂರು' ಎಂಬ ಸಂಸ್ಥೆಯಿಂದ ೧೯೦೮ರಲ್ಲಿ ಪ್ರಕಾಶಿತವಾಗಿದೆ.

ತತ್ತ್ವಸಂಗ್ರಹ - ತತ್ತ್ವತ್ರಯನಿರ್ಣಯ - ರತ್ನತ್ರಯ - ಭೋಗಕಾರಿಕಾ - ನಾದಕಾರಿಕಾ ಮುಂತಾದ ಗ್ರಂಥಗಳ ವ್ಯಾಖ್ಯಾನ ಮಾಡಿದರು. ಈ ಗ್ರಂಥಗಳಲ್ಲದೆ ಆಶ್ಚರ್ಯಸಾರ, ಪಾಖಂಡಾಪಜಯ, ಭಕ್ತಪ್ರಕಾಶ ಇತ್ಯಾದಿ ಕಾವ್ಯಗಳನ್ನು ಅಭ್ಯುದಯ ಎಂಬ ಹೆಸರಿನ ನಾಟಕವನ್ನೂ ರಚಿಸಿದ್ದಾರೆ.[೨೩]

ಕಾನ್ಯಕುಬ್ಜ ಪ್ರಾಂತದ ಮತ್ತೊಬ್ಬ ರಾಮಕಂಠನಿಂದ ಭಗವದ್ಗೀತೆಗೆ ಸರ್ವತೋಭದ್ರ ಎಂಬ ಹೆಸರಿನ ಟೀಕೆಯು ರಚಿತವಾಯಿತು. ಇದರಿಂದ ಕಾನ್ಯಕುಬ್ಜದಲ್ಲಿಯೂ ಸಹ ಸಿದ್ಧಾಂತಶೈವದರ್ಶನದ ಪ್ರಚಾರವು ಇದ್ದಿತೆಂದು ನಿಶ್ಚಯವಾಗುತ್ತದೆ. ಇದೇ ರೀತಿಯಲ್ಲಿ ಶ್ರೀಕಂಠ ವಿರಚಿತ ರತ್ನತ್ರಯ, ವೈರೋಚನ ರಚಿತ ಪ್ರತಿಷ್ಠಾಲಕ್ಷಣಸಾರಸಮುಚ್ಚಯ, ಉಮಾಪತಿ ಶಿವಾಚಾರ್ಯ ಕೃತ ಶತರತ್ನಸಂಗ್ರಹ, ಅಪ್ಪಯ್ಯದೀಕ್ಷಿತ ವಿರಚಿತ ಶಿವಾರ್ಚನ ಚಂದ್ರಿಕಾ, ಶಿವಾಗ್ರಯೋಗೇಂದ್ರ ರಚಿತ ಶೈವಪರಿಭಾಷಾ, ಸೂರ್ಯಭಟ್ಟ ರಚಿತ ಶೈವಸಿದ್ಧಾಂತಪರಿಭಾಷಾ ಮತ್ತು ಶಿವರಹಸ್ಯಮ್, ಅಘೋರಶಿವ ವಿರಚಿತ ಕ್ರಿಯಾಕ್ರಮದ್ಯೋತಿಕಾ, ಕ್ರಿಯಾದೀಪಿಕಾ, ನಿತ್ಯಪೂಜಾಲಕ್ಷಣಸಂಗ್ರಹ, ಪರಾರ್ಥನಿತ್ಯಪೂಜಾಕ್ರಮ, ಪವಿತ್ರೋತ್ಸವವಿಧಿ, ಪ್ರತಿಷ್ಠಾಷ್ಟದಶಕ್ರಿಯಾಪಾದ, ಪ್ರಾಯಶ್ಚಿತ್ತವಿಧಿ, ವರ್ಣಾಶ್ರಮಚಂದ್ರಿಕಾ, ಶಿವಜ್ಞಾನ ಬೋಧಭಾಷ್ಯ, ಶಿವಯೋಗಸಾರ, ಶಿವಾಗಮಶೇಖರ, ಶಿವಮಾತ್ರಸಾರ, ಶಿವಧರ್ಮವಿವೇಕ, ಶೈವಸಂನ್ಯಾಸಪದ್ಧತಿ, ಸಕಲಾಗಮಸಾರಸಂಗ್ರಹ ಮತ್ತು ಸಿದ್ಧಾಂತಶಿಖಾಮಣಿ,[೨೪] ತ್ರಿಲೋಚನ ಶಿವಾಚಾರ್ಯ ವಿರಚಿತ ಸಿದ್ಧಾಂತಸಾರಾವಲಿ, ಕ್ರಿಯಾಕ್ರಮದೀಪಿಕಾ, ಕ್ರಿಯಾಕ್ರಮಪ್ರಕಾಶಿಕಾ, ಕ್ರಿಯಾನಿರ್ಣಯ, ಕ್ರಿಯಾಸಾರ,[೨೫] ಕ್ರಿಯಾಸಾರಸಾರಸಂಗ್ರಹ, ಜ್ಞಾನರತ್ನಾವಲೀ ಮತ್ತು ಪ್ರಾಯಶ್ಚಿತ್ತಸಮುಚ್ಚಯ, ದೇವಜ್ಞಾನ ಶಿವಾಚಾರ್ಯ ವಿರಚಿತ ದೀಕ್ಷಾದರ್ಶ, ಶೈವಪರಿಭಾಷಾಮಂಜರೀ, ಶೈವಸಿದ್ಧಾಂತಸಂಗ್ರಹ, ಸಾರರತ್ನಾವಲೀ ಮತ್ತು ಸಿದ್ಧಾಂತ ಪ್ರಕಾಶಿಕಾ, ಅನಂತಶಿವ ವಿರಚಿತ ಸಿದ್ಧಾಂತಸಾರಾವಲೀವ್ಯಾಖ್ಯಾ ಮತ್ತು ಸೋಮಶಂಭುಪದ್ಧತಿವ್ಯಾಖ್ಯಾ ಇತ್ಯಾದಿ ಬಹಳಷ್ಟು ಗ್ರಂಥಗಳು ದೊರೆಯುತ್ತಿವೆ. ಇವುಗಳಲ್ಲಿ ಹೆಚ್ಚಿನ ಸಂಖ್ಯೆಯ ಗ್ರಂಥಗಳು ದೇವನಾಗರೀ ಲಿಪಿಯಲ್ಲಿ ಮುದ್ರಿತವಾಗಿವೆ. ಕೆಲವು ಗ್ರಂಥಲಿಪಿಯಲ್ಲಿ ಪ್ರಕಾಶಿತವಾಗಿದ್ದರೆ ಮತ್ತೆ ಕೆಲವು ಹಸ್ತಲಿಪಿ ರೂಪದಲ್ಲಿ ದೊರೆಯುತ್ತವೆ.

ಈ ಸಿದ್ಧಾಂತದ ವ್ಯಾಖ್ಯಾನಕಾರರಲ್ಲಿ ರಾಮಕಂಠ - ಕುಮಾರದೇವ - ಅಘೋರಶಿವ ಮೊದಲಾದವರಿಗಿಂತ ರಾಮಕಂಠನೇ ಪ್ರಾಚೀನನು. ಸಿದ್ಧಾಂತಶೈವದ ಆಚಾರ್ಯರುಗಳ ಮತ್ತು ಅವರ ಸಾಹಿತ್ಯದ ವಿಷಯದ ವಿಸ್ತಾರವಾದ ವಿವೇಚನೆಯನ್ನು

---

[೨೩] ಬ್ರಹ್ಮಸೂತ್ರ ಶ್ರೀಕರಭಾಷ್ಯ, ಭೂಮಿಕೆ. ಪು. ೬೪-೬೫; ಶೈವದರ್ಶನ ಬಿಂದುಃ, ಪು.೧೨

[೨೪] ಈ ಗ್ರಂಥವು ವೀರಶೈವ ಸಿದ್ಧಾಂತ ಶಿಖಾಮಣಿಗಿಂತ ಭಿನ್ನವಾದುದು.

[೨೫] ಈ ಗ್ರಂಥವೂ ಸಹ ವೀರಶೈವ ಕ್ರಿಯಾಸಾರ ಗ್ರಂಥಕ್ಕಿಂತಲೂ ಭಿನ್ನವಾದುದು.

ಪ್ರೊ. ಕಾಂತಿಚಂದ್ರ ಪಾಂಡೇಯ,[೨೬] ಪ್ರೊ. ವ್ರಜವಲ್ಲಭದ್ವಿವೇದಿ,[೨೭] ಪ್ರೊ. ಎಂ.ಜಿ. ನಂಜುಂಡಾರಾಧ್ಯ[೨೮] ಇವರು ಬಹುವಾಗಿ ಚರ್ಚಿಸಿರುವುದರಿಂದ ಇಲ್ಲಿ ವಿಸ್ತಾರವಾಗಿ ಚರ್ಚಿಸುತ್ತಿಲ್ಲ.

ಲಕುಲೀಶಪಾಶುಪತಮತ

ಮಹೇಶ್ವರನ ಕೊನೆಯ ಅವತಾರರೂಪನಾದ ಲಕುಲೀಶನಿಂದ ಸ್ಥಾಪಿತವಾದ ದ್ವೈತಾದ್ವೈತ ಪರವಾದ ಶಾಸ್ತ್ರವೇ ಲಕುಲೀಶಪಾಶುಪತ. ಮಥುರಾ ಸ್ಥಂಭಲೇಖ, ಸೋಮನಾಥ ಶಿಲಾಲೇಖ, ವಾಯುಪುರಾಣ, ಲಿಂಗಪುರಾಣ, ಸೂತಸಂಹಿತೆ, ರಾಜಶೇಖರ ವಿರಚಿತ ಷಡ್‌ದರ್ಶನ ಸಮುಚ್ಚಯಗಳಲ್ಲಿ ಲಕುಲೀಶ ಹಾಗೂ ಅವನ ಶಿಷ್ಯಪರಂಪರೆಯ ಸೂಚನೆಯನ್ನು ಕೊಡಲಾಗಿದೆ. ಆದುದರಿಂದ ಲಕುಲೀಶನು ಕ್ರಿ.ಶ. ೨ನೆಯ ಶತಮಾನದಲ್ಲಿದ್ದನೆಂದು ವಿದ್ವಾಂಸರ ಅಭಿಪ್ರಾಯವಾಗಿದೆ.[೨೯] ಈ ದರ್ಶನದ ಪ್ರಚಾರವು ಗುಜರಾತ್, ಮಥುರೆಯಲ್ಲಿ ಹಾಗೂ ದಕ್ಷಿಣ ಭಾರತದಲ್ಲಿ ನಿರಂತರವಾಗಿತ್ತು. "ದ್ವಾವಾಪ್ತೌ ತತ್ರ ಚ ಶ್ರೀಮಚ್ಛ್ರೀಕಂಠಲಕುಲೇಶ್ವರೌ॥ ದ್ವಿಪ್ರವಾಹಮಿದಂ ಶಾಸ್ತ್ರಮ್"[೩೦] (ಶ್ರೀಕಂಠ, ಲಕುಲೇಶ್ವರರೆಂಬಿಬ್ಬರು ಆಪ್ತರು-ಪ್ರಾಮಾಣಿಕರು. ಈ ಶಾಸ್ತ್ರ ಎರಡು ಪ್ರವಾಹಗಳಾಗಿದೆ) ಎಂದು ಹೇಳಿ ಅಭಿನವಗುಪ್ತನೂ ಸಹ ಪಾಶುಪತ ಮತವನ್ನು ಲಕುಲೀಶಪಾಶುಪತಮತಕ್ಕಿಂತಲೂ ಭಿನ್ನವೆಂದು ಅಂಗೀಕರಿಸಿದ್ದಾನೆ. ಹೀಗೆ ಹಿಂದೆ ಹೇಳಿದ ಪಾಶುಪತಮತವು ದ್ವೈತಪರವಾಗಿಯೂ ಮತ್ತು ಇದು ದ್ವೈತಾದ್ವೈತ ಪರ ಎಂಬುದು ಎರಡರ ಭೇದವು ಸ್ಪಷ್ಟವಾಗಿಯೇ ಇದೆ.

ಲಕುಲೀಶಪಾಶುಪತ ಗ್ರಂಥಗಳು

ಹಿಂದೆ ವಿವರಿಸಿದ ದ್ವೈತಾದ್ವೈತ ಪರವಾದ ಹದಿನೆಂಟು ಆಗಮಗಳೇ ಇವುಗಳಿಗೆ ಆಧಾರ. ಇವಲ್ಲದೆ ಲಕುಲೀಶ ರಚಿತವಾದ ಪಾಶುಪತಸೂತ್ರ, ಕೌಂಡಿನ್ಯ ವಿರಚಿತ ಪಂಚಾರ್ಥಭಾಷ್ಯ ಎಂಬ ಹೆಸರಿನ ಪಾಶುಪತಸೂತ್ರಟೀಕೆ, ವಿಶುದ್ಧಮುನಿ ವಿರಚಿತ ಯಮಪ್ರಕರಣ ಮತ್ತು ಆತ್ಮಪ್ರಕರಣ, ಹರದತ್ತಾಚಾರ್ಯ ವಿರಚಿತ ಗಣಕಾರಿಕಾ, ಭಾಸರ್ವಜ್ಞಕೃತ ಗಣಕಾರಿಕಾಟೀಕಾ, ಸತ್ಕಾರ್ಯ-ವಿಚಾರಟೀಕೆಗಳು, ಅಜ್ಞಾತ ಕವಿಯ

---

[೨೬] ಶೈವದರ್ಶನಬಿಂದುಃ, ಪು. ೨-೧೩ (ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ, ೧೯೬೮).

[೨೭] ಆಗಮಮೀಮಾಂಸಾ, ಪು. ೩೪-೩೫ (ಲಾಲಬಹದ್ದೂರ್ ಶಾಸ್ತ್ರಿ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯ, ನವದೆಹಲಿ, ೧೯೮೨); ಲುಪ್ತಾಗಮಸಂಗ್ರಹಃ, ಭಾಗ-೨, ಉಪೋದ್ಘಾತ ಪು. ೮-೮೫ (ಸಂ. ಸಂ.ವಿ.ವಿ, ೧೯೮೩).

[೨೮] ಶ್ರೀಕರಭಾಷ್ಯ ಭೂಮಿಕಾ, ಪು. ೫೮-೭೬ (ಮೈಸೂರು ವಿಶ್ವವಿದ್ಯಾಲಯ, ೧೯೭೭)

[೨೯] ಶೈವದರ್ಶನಬಿಂದುಃ, ಪು. ೨೭-೩೩; ಬ್ರಹ್ಮಸೂತ್ರ ಶ್ರೀಕರಭಾಷ್ಯ ಭೂಮಿಕಾ, ಪು.೮೬-೮೭.

[೩೦] ತಂತ್ರಾಲೋಕಃ, ೩೭.೧೪-೧೫.

ಸಂಸ್ಕಾರಕಾರಿಕಾ, ಕಾರಣಪದಾರ್ಥ, ಪಂಚಾರ್ಥಭಾಷ್ಯದೀಪಿಕಾ ಮತ್ತು ಆದರ್ಶ ಎಂಬ ಗ್ರಂಥಗಳು ಲಕುಲೀಶ - ಪಾಶುಪತ ದರ್ಶನವನ್ನು ಪ್ರತಿಪಾದಿಸುತ್ತವೆ. ಶ್ರೀಕಾಂತಿಚಂದ್ರಪಾಂಡೇಯ ಅವರು ಈ ದರ್ಶನಗ್ರಂಥಗಳ ನಿರೂಪಣೆಯ ಸಂದರ್ಭದಲ್ಲಿ 'ಆಕರ' ಎಂಬುದೂ ಕೂಡ ವಿಶೇಷಗ್ರಂಥದ ಹೆಸರೆಂದು ನಿರೂಪಿಸಿದ್ದಾರೆ.[೩೧] ಆದರೆ 'ಆಕರ'ವು ಯಾವುದೇ ಗ್ರಂಥದ ಹೆಸರಾಗಿರದೆ ಸಮಗ್ರ ಸಾಹಿತ್ಯದ ವಾಚಕ ಎಂದು ಪ್ರೊ. ವ್ರಜವಲ್ಲಭದ್ವಿವೇದಿ ಅವರ ಆಶಯವಾಗಿದೆ. ನಮಗೂ ಸಹ ಅದೇ ಅಭಿಪ್ರಾಯವು ಸಂಮತವಾಗಿದೆ.

ಶ್ರೀಕಂಠವಿಶಿಷ್ಟಾದ್ವೈತಮ್

ಶ್ರೀಕಂಠವಿಶಿಷ್ಟಾದ್ವೈತವೂ ಸಹ ದ್ವೈತಾದ್ವೈತ ಸಿದ್ಧಾಂತ ಪ್ರತಿಪಾದಕವಾದುದು. ಇದರ ಕಾಲ ಕ್ರಿ.ಶ. ೧೦[೩೨] ಅಥವಾ ೧೧ನೇ[೩೩] ಶತಮಾನ ಎಂದು ನಿರೂಪಿಸುತ್ತಾರೆ. ಈ ಸಿದ್ಧಾಂತ ಪ್ರತಿಪಾದಕವಾದ ಗ್ರಂಥವೆಂದರೆ ಶ್ರೀ ಅಪ್ಪಯ್ಯದೀಕ್ಷಿತ ವಿರಚಿತ ಶಿವಾರ್ಕಮಣಿದೀಪಿಕಾಸಹಿತ ಬ್ರಹ್ಮಸೂತ್ರ ಶ್ರೀಕಂಠಭಾಷ್ಯವೇ ಸುಪ್ರಸಿದ್ಧವಾಗಿದೆ. ಶ್ರೀಕಂಠಾಚಾರ್ಯರು ಶೈವವಿಶಿಷ್ಟಾದ್ವೈತವನ್ನು ಸ್ಥಾಪಿಸಿದರು ಎಂದು ದರ್ಶನದ ಇತಿಹಾಸಜ್ಞರ ಅಭಿಪ್ರಾಯವಾಗಿದೆ.[೩೪]

ರಸೇಶ್ವರದರ್ಶನ

ಶೈವದ್ವೈತಾದ್ವೈತ ಶಾಖೆಗಳಲ್ಲಿ ರಸೇಶ್ವರದರ್ಶನವನ್ನು ಸಹ ಗಣನೆ ಮಾಡಲಾಗಿದೆ. ರೋಗಗ್ರಸ್ಥ ಶರೀರದಿಂದ ಪುರುಷಾರ್ಥ ಪ್ರಾಪ್ತಿಯು ಸಾಧ್ಯವಿಲ್ಲವೆಂದು ಯೋಚಿಸಿದ ಈ ದರ್ಶನದ ಅನುಯಾಯಿಗಳು ಶರೀರದ ಸ್ವಾಸ್ಥ್ಯ ಲಾಭಕ್ಕಾಗಿ ಪ್ರಯತ್ನ ಪಡುತ್ತಾರೆ. ಶುದ್ಧವಾದ ಪಾದರಸದಿಂದ ಪಿಂಡಸ್ಥೈರ್ಯವು ಇವರಿಂದ ಸಾಧಿತವಾಗಿದೆ. ಪಾದರಸದ ಈಶ್ವರ ಸ್ವರೂಪತ್ವದ ಅಂಗೀಕಾರದ ಕಾರಣದಿಂದ ಈ ದರ್ಶನವು 'ರಸೇಶ್ವರ ದರ್ಶನ' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಈ ಸಿದ್ಧಾಂತವನ್ನು ಪ್ರತಿಪಾದಿಸುವ ಅನೇಕ ಗ್ರಂಥಗಳಿವೆ. ಅವುಗಳಲ್ಲಿ ನಾಗಾರ್ಜುನನ ರಸರತ್ನಾಕರಃ, ಗೋವಿಂದಪಾದರ ರಸಹೃದಯಮ್, ವಿಷ್ಣುಸ್ವಾಮಿಯ ಸಾಕಾರಸಿದ್ಧಿಃ ಮುಂತಾದವುಗಳು ಪ್ರಸಿದ್ಧವಾಗಿವೆ.[೩೫]

ನಂದಿಕೇಶ್ವರದರ್ಶನ

ಅದ್ವೈತ ಶೈವದರ್ಶನದ ಇತಿಹಾಸದಲ್ಲಿ ನಂದಿಕೇಶ್ವರ ವಿರಚಿತ ಮಾಹೇಶ್ವರಸೂತ್ರ ದಾರ್ಶನಿಕ ವ್ಯಾಖ್ಯಾನರೂಪದ ನಂದಿಕೇಶ್ವರದರ್ಶನವು ಮೊದಲ ಸ್ಥಾನವನ್ನು

---

೩೧. ಶೈವದರ್ಶನಬಿಂಧುಃ, ಪೃ. ೩೩.

೩೨. ಬ್ರಹ್ಮಸೂತ್ರ ಶ್ರೀಕರಭಾಷ್ಯ ಭೂಮಿಕಾ, ಪೃ. ೧೧.

೩೩. ಶೈವದರ್ಶನಬಿಂಧುಃ, ಪೃ. ೪೯.

೩೪. ಬ್ರಹ್ಮಸೂತ್ರ ಶ್ರೀಕರಭಾಷ್ಯ ಭೂಮಿಕಾ, ಪೃ. ೧೧೨.

೩೫. ಭಾರತೀಯ ದರ್ಶನ, ಪೃ. ೫೭೧-೫೭೩.

ಅಲಂಕರಿಸುತ್ತದೆ. ನಂದಿಕೇಶ್ವರನ ವಿಷಯದಲ್ಲಿ ಪರಂಪರಾಗತವಾಗಿ ಬಂದಿರುವ ಈ ವೃತ್ತಾಂತವು ಉಪಮನ್ಯು ರಚಿಸಿದ 'ನಂದಿಕೇಶ್ವರಕಾಶಿಕಾಟೀಕೆ'ಯಲ್ಲಿ ದೊರೆಯುತ್ತದೆ. ನಂದಿಕೇಶ್ವರ-ವ್ಯಾಘ್ರಪಾದ ಮುಂತಾದವರನ್ನು ಉದ್ಧರಿಸಲು ಅಪೇಕ್ಷಿಸಿದ ಶಿವನು ತನ್ನ ಡಮರುಗ ನಾದದ ನೆಪದಿಂದ ಪಾಣಿನಿಯ ಅಷ್ಟಾಧ್ಯಾಯಿಯ ಆರಂಭದಲ್ಲಿ ದೊರೆಯುವ ಹದಿನಾಲ್ಕು ಸೂತ್ರರೂಪವಾದ ತತ್ತ್ವವನ್ನು ಉಪದೇಶಿಸಿದನು. ಆ ಸೂತ್ರದಿಂದುಂಟಾದ ತತ್ತ್ವದ ಅರ್ಥವನ್ನು ತಿಳಿಯಲು ಅಸಮರ್ಥರಾದ ವ್ಯಾಘ್ರಪಾದ ಮುಂತಾದವರು ತತ್ತ್ವಾರ್ಥವನ್ನು ವಿವರಿಸಬೇಕೆಂದು ನಂದಿಕೇಶ್ವರನನ್ನು ಪ್ರಾರ್ಥಿಸಿದರು. ಅವನು ಸೂತ್ರದಲ್ಲಿನ ರಹಸ್ಯವಾದ ಅರ್ಥವನ್ನು ಇಪ್ಪತ್ತಾರು ಕಾರಿಕೆಗಳಲ್ಲಿ ಉಪದೇಶಿಸಿದನು. ಹದಿನಾಲ್ಕು ಸೂತ್ರಗಳ ವ್ಯಾಖ್ಯಾನವು ಶಿವಾದ್ವೈತ ಸ್ಥಾಪನೆಗಾಗಿ 'ಧಾತುಮೂಲಕ' ಮತ್ತು 'ಶಬ್ದಶಾಸ್ತ್ರ ಪ್ರವೃತ್ತ್ಯರ್ಥ' ಎಂದು ಎರಡು ಪ್ರಕಾರವಾಗಿ ನಂದಿಕೇಶ್ವರನಿಂದ ಮಾಡಲ್ಪಟ್ಟಿತು. ಅವುಗಳಲ್ಲಿ ಒಂದೇ ಒಂದು ಕಾರಿಕೆಯು ಪಾಣಿನಿಯೇ ಮುಂತಾದ ವೈಯಾಕರಣರಿಂದ ರಚಿತವಾಯಿತು. ಹೇಗೆಂದರೆ-

ಅತ್ರ ಸರ್ವತ್ರ ಸೂತ್ರೇಷು ಅಂತ್ಯವರ್ಣಚತುರ್ದಶಮ್।
ಧಾತ್ವರ್ಥಂ ಸಮುಪಾದಿಷ್ಟಂ ಪಾಣಿನ್ಯಾದೋಷ್ಟಸಿದ್ಧಯೇ॥

"ಈ ಎಲ್ಲ ಸೂತ್ರಗಳಲ್ಲಿ ಕೊನೆಯ ಹದಿನಾಲ್ಕು ವರ್ಣಗಳು ಧಾತುವಿನ ಅರ್ಥವನ್ನು ಉಪದೇಶಿಸಲು ಪಾಣಿನಿಯಿಂದ ರಚಿತವಾಯಿತು" ಉಳಿದವುಗಳು ಶಿವಾದ್ವೈತ ಪ್ರತಿಪಾದನೆಯ ಪರವಾಗಿಯೇ ಇವೆ. ಪಾಣಿನಿಸೂತ್ರಗಳ ಭಾಷ್ಯಕಾರನಾದ ಪತಂಜಲಿಯಿಂದ, ವ್ಯಾಖ್ಯಾಕಾರನಾದ ಕೈಯಟನಿಂದ ಮತ್ತು ಉದ್ಯೋತಕಾರ ನಾಗೇಶಭಟ್ಟನಿಂದ ನಂದಿಕೇಶ್ವರ ಕಾರಿಕೆಗಳ ಪ್ರಾಮಾಣ್ಯವು ಸ್ವೀಕೃತವಾಗಿದೆ. ಇದರಿಂದ ನಂದಿಕೇಶ್ವರನು ಪಾಣಿನಿಯ ಗುರುವಾಗಿದ್ದನೆಂದು ಸಿದ್ಧವಾಗುತ್ತದೆ. ನಂದಿಕೇಶ್ವರನ ದರ್ಶನವನ್ನು "ಸ್ವಾತಂತ್ರ್ಯವಾದ" ಎಂದು ಕರೆಯಲಾಗಿದೆ. ಪ್ರತ್ಯಭಿಜ್ಞಾದರ್ಶನವಾದಿಗಳು ಮತ್ತು ಕಾಶ್ಮೀರಶೈವರು ಈ ಸ್ವಾತಂತ್ರ್ಯವಾದದ ಅನುಕರಣೆ ಮಾಡಿದ್ದಾರೆ.

ಕಾಶ್ಮೀರಶೈವದರ್ಶನ

ಅದ್ವೈತ ಶೈವದರ್ಶನದ ಪ್ರಧಾನ ಕೇಂದ್ರ ಕಾಶ್ಮೀರ ದೇಶವೇ ಆಗಿದ್ದಿತು. ಆದುದರಿಂದ ಇದರ ಹೆಸರು 'ಕಾಶ್ಮೀರಶೈವದರ್ಶನ' ಎಂದು ಖ್ಯಾತವಾಗಿದೆ. ಪ್ರತ್ಯಭಿಜ್ಞಾ, ಸ್ಪಂದಃ ಮತ್ತು ತ್ರಿಕ ಎಂಬ ಬೇರೆ ಹೆಸರುಗಳೂ ಸಹ ಈ ದರ್ಶನಕ್ಕೆ ಇವೆ. ಶಿವಾಗಮಗಳೇ ಈ ದರ್ಶನದ ಮೂಲವಾಗಿವೆ. ವೇದಗಳಂತೆ ಶಿವಾಗಮಗಳೂ ಕೂಡ ಈಶ್ವರನಿಂದಲೇ ಹೊರಹೊಮ್ಮಿವೆ. ಹಾಗೆಯೇ ಅವು ಅನಾದಿಗಳಾಗಿವೆ. ಇವುಗಳ ಅಸ್ತಿತ್ವವು ಹಿಂದು ಹಿಂದಿನ ಯುಗಗಳಲ್ಲಿಯೂ ಸಹ ಇದ್ದಿತು.

ವಾಲಿ-ರಾಮ-ಲಕ್ಷ್ಮಣ-ರಾವಣನೇ ಮೊದಲಾದ ರಾಜರುಗಳು ಹಾಗೂ ಅನೇಕ ಮಹರ್ಷಿಗಳು ಈ ದರ್ಶನವನ್ನು ಚೆನ್ನಾಗಿ ಅಧ್ಯಯನಮಾಡಿದ್ದರು.

ಕಾಲಾನುಕ್ರಮದಲ್ಲಿ ಕಲಿಯುಗದ ಆರಂಭದ ಕಾಲದಲ್ಲಿ ಆಗಮ ಪರಂಪರೆಯು ಮೂಲೋತ್ಪಾಟನೆಯಾಯಿತು. ಅನಂತರ ಒಮ್ಮೆ ಭಗವಾನ್ ಶಿವನು ಶ್ರೀಕಂಠನ ರೂಪದಲ್ಲಿ ದುರ್ವಾಸನಿಗೆ, ದುರ್ವಾಸನು ತನ್ನ ಮಾನಸಪುತ್ರನಾದ ತ್ರ್ಯಂಬಕಾದಿತ್ಯನಿಗೆ, ತ್ರ್ಯಂಬಕಾದಿತ್ಯನು ತ್ರ್ಯಂಬಕ ಎಂಬ ಹೆಸರಿನ ತನ್ನ ಮಾನಸಪುತ್ರನಿಗೆ ಶಿವಾಗಮಗಳನ್ನು ಉಪದೇಶಿಸಿದರು. ಹೀಗೆ ಪರಂಪರೆಯಿಂದ ಸೃಷ್ಟಿಯಾದ ಅಂತರ್ಮುಖಿಗಳಾದ ಹದಿನಾಲ್ಕು ಜನ ಮಾನಸಪುತ್ರರಿಂದ ಮತ್ತೊಮ್ಮೆ ಅನುಷ್ಠಾನಗೊಂಡವು. ಅಲ್ಲದೆ ಸಂಗಮಾದಿತ್ಯ ಎಂಬ ಹೆಸರಿನ ಹದಿನೈದನೆಯ ಮಗನು ಹೇಗೋ ಬಹಿರ್ಮುಖನಾಗಿ ಸುಲಕ್ಷಣಾ ಎಂಬ ಹೆಸರಿನ ಒಬ್ಬ ಬ್ರಾಹ್ಮಣಕನ್ಯೆಯನ್ನು ಬ್ರಾಹ್ಮಣ ವಿವಾಹಪದ್ಧತಿಯಿಂದ ಮದುವೆಯಾದನು. ಅವನ ಮಗ ವರ್ಷಾದಿತ್ಯ, ವರ್ಷಾದಿತ್ಯನ ಮಗ ಅರುಣಾದಿತ್ಯ, ಅರುಣಾದಿತ್ಯನ ಮಗ ಆನಂದ ಮತ್ತು ಆನಂದನ ಮಗ ಸೋಮಾನಂದ. ಈ ಸೋಮಾನಂದನು "ಶಿವದೃಷ್ಟಿ" ಎಂಬ ಹೆಸರಿನ ಪ್ರಕರಣ ಗ್ರಂಥದ ಕರ್ತೃವಾಗಿದ್ದನೆಂದು ಶ್ರೀ ಕಾಂತಿಚಂದ್ರಪಾಂಡೇಯ ಅವರು ಸೋಮಾನಂದ ವಿರಚಿತ ಶಿವದೃಷ್ಟಿ ಗ್ರಂಥದ ಆಧಾರದಿಂದ ಕಾಶ್ಮೀರಶೈವದ ಗುರುಪರಂಪರೆಯನ್ನು ನಿರೂಪಿಸಿದ್ದಾರೆ.[೩೬] ಈ ಗುರುಪರಂಪರೆಯಲ್ಲಿ ಸೋಮಾನಂದನು ಹತ್ತೊಂಬತ್ತನೆಯವನಾಗಿದ್ದನು. ಈತನು ಅಭಿನವಗುಪ್ತರ ಶ್ರೇಷ್ಠ ಗುರುವಾಗಿದ್ದನೆಂದು ಹೇಳಲ್ಪಟ್ಟಿದೆ. ಈ ದರ್ಶನದ ಮೊದಲನೆಯ ಪ್ರಚಾರಕ ತ್ರ್ಯಂಬಕ ಎನ್ನುವ ಕಾರಣದಿಂದ ಇದನ್ನು "ತ್ರೈಯಂಬಕದರ್ಶನ" ಅಥವಾ "ತ್ರಿಕದರ್ಶನ" ಎಂದು ಕರೆಯಲಾಗಿದೆ. ಸೋಮಾನಂದನು ಕ್ರಿ.ಶ. ೯ನೇ ಶತಮಾನದ ಮಧ್ಯಭಾಗದಲ್ಲಿದ್ದನೆಂದು ವಿದ್ವಾಂಸರ ಆಶಯವಾಗಿದೆ. ತ್ರಿಕದರ್ಶನದ ಆರಂಭದ ಕಾಲ ಕ್ರಿ.ಶ. ೫ನೇ ಶತಮಾನವೆಂದು ಇತಿಹಾಸಜ್ಞರು ಊಹಿಸಿದ್ದಾರೆ.

ಕಾಶ್ಮೀರಶೈವಾಚಾರ್ಯರು ಮತ್ತು ಸಾಹಿತ್ಯ

ಕಾಶ್ಮೀರಶೈವದರ್ಶನದ ಸಾಹಿತ್ಯವು ವಿಪುಲವಾಗಿದ್ದು, ಕಾಶ್ಮೀರ ಸಂಸ್ಕೃತ ಗ್ರಂಥಮಾಲೆಯಲ್ಲಿ ಪ್ರಕಟಗೊಂಡಿವೆ. ಆಗಮಶಾಸ್ತ್ರಗಳ ನಂತರ ಶಿವಸೂತ್ರವೇ ಈ ದರ್ಶನದ ಮೊದಲನೆಯ ಗ್ರಂಥ. ಪ್ರಾಚೀನಕಾಲದ ಶಿಲೆಗಳ ಮೇಲೆ ಬರೆದಿರುವ ಶಿವಸೂತ್ರಗಳನ್ನು ಭಗವಾನ್ ಶ್ರೀಕಂಠನ ಆದೇಶಾನುಸಾರವಾಗಿ ಆಚಾರ್ಯ ವಸುಗುಪ್ತನು (ಕ್ರಿ.ಶ. ೮೦೦) ರಕ್ಷಿಸಿದನು. ವಸುಗುಪ್ತನ ಇಬ್ಬರು ಶಿಷ್ಯರುಗಳಾದ ಕಲ್ಲಟ-ಸೋಮಾನಂದ ಎಂಬುವರು ಕ್ರಮವಾಗಿ ಸ್ಪಂದ-ಪ್ರತ್ಯಭಿಜ್ಞಾ ಎಂಬ ಹೆಸರಿನ ಪಂಥಗಳನ್ನು ಆರಂಭಿಸಿದರು. ಕಲ್ಲಟನ ಶ್ರೇಷ್ಠ ಕೃತಿ ವಸುಗುಪ್ತನ ಸ್ಪಂದಕಾರಿಕೆಯ ಮೇಲಿನ ವೃತ್ತಿ 'ಸ್ಪಂದಸರ್ವಸ್ವ' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಇದಲ್ಲದೆ ಶಿವಸೂತ್ರದ ನಾಲ್ಕನೆಯ ಖಂಡದ 'ತತ್ತ್ವಾರ್ಥಚಿಂತಾಮಣಿ' ಎಂಬ ಹೆಸರಿನ ವ್ಯಾಖ್ಯಾನ, ಮೊದಲ ಮೂರು ಖಂಡಗಳ ಮೇಲಿನ 'ಮಧುವಾಹಿನೀ' ಎಂಬ ಹೆಸರಿನ

---

[೩೬] ಶೈವದರ್ಶನಬಿಂದುಃ, ಪು. ೨-೩.

ವ್ಯಾಖ್ಯಾನಗಳನ್ನು ಕಲ್ಲಟನು ರಚಿಸಿದ್ದಾನೆ. ಪ್ರಾಕೃತಭಾಷೆಯಲ್ಲಿನ ಯಾವುದೋ ಒಂದು ಗ್ರಂಥ ಮತ್ತು 'ಸ್ವಸ್ವಭಾವ ಸಂಬೋಧನಾ' ಎಂಬ ಹೆಸರಿನ ಗ್ರಂಥವೂ ಸಹ ರಚಿತವಾಗಿದೆಯೆಂದು ತಿಳಿದುಬರುತ್ತದೆ.[೩೭] ಸೋಮಾನಂದನ ಶಿವದೃಷ್ಟಿ, ಪರಾತ್ರಿಂಶಿಕಾವೃತ್ತಿ ಎಂಬ ಹೆಸರಿನ ಎರಡು ಗ್ರಂಥಗಳು ಶ್ರೇಷ್ಠ ಕೃತಿಗಳೆಂದು ಪ್ರಸಿದ್ಧವಾಗಿವೆ. ಶಾಕ್ತವಿಜ್ಞಾನ ಎಂಬ ಒಂದು ಗ್ರಂಥವು ಇವನಿಂದ ಪ್ರಕಾಶಿತವಾಗಿದೆ. ಇವನು 'ಶಿವದೃಷ್ಟಿವಿವೃತಿ' ಎಂಬ ಗ್ರಂಥವನ್ನೂ ರಚಿಸಿದ್ದಾನೆಂದು ವಿದ್ವಾಂಸರು ಸೂಚಿಸಿದ್ದಾರೆ.[೩೮] ಉತ್ಪಲಾಚಾರ್ಯನ (ಕ್ರಿ.ಶ.೯೦೦) 'ಈಶ್ವರಪ್ರತ್ಯಭಿಜ್ಞಾಕಾರಿಕೆ' ತ್ರಿಕಸಿದ್ಧಾಂತದ ಮೌಲಿಕ ಗ್ರಂಥ. ಇವನ ಈಶ್ವರಪ್ರತ್ಯಭಿಜ್ಞಾವೃತ್ತಿ, ಈಶ್ವರಪ್ರತ್ಯಭಿಜ್ಞಾವಿವೃತಿ, ಸ್ತೋತ್ರಾವಲೀ, ಅಜಡಪ್ರಮಾತೃಸಿದ್ಧಿ, ಈಶ್ವರಸಿದ್ಧಿ, ಈಶ್ವರಸಿದ್ಧಿವೃತ್ತಿ, ಸಂಬಂಧಸಿದ್ಧಿ, ಸಂಬಂಧಸಿದ್ಧಿವೃತ್ತಿ, ಶಿವದೃಷ್ಟಿವೃತ್ತಿ ಎಂಬ ಶ್ರೇಷ್ಠ ಗ್ರಂಥಗಳು ಪ್ರಸಿದ್ಧವಾಗಿವೆ. ಈತನು ಪ್ರತ್ಯಭಿಜ್ಞಾದರ್ಶನದ ಸ್ಥಾಪಕನಾಗಿದ್ದನು.[೩೯] ಉತ್ಪಲನು ಸೋಮಾನಂದನ ಶಿಷ್ಯ.

ಕಾಶ್ಮೀರಶೈವಸಾಹಿತ್ಯದ ಇತಿಹಾಸದಲ್ಲಿ ಅಭಿನವಗುಪ್ತ (ಕ್ರಿ.ಶ. ೯೫೦-೧೦೦೦) ನ ಹೆಸರು ಹೆಚ್ಚು ಪ್ರಸಿದ್ಧವಾಗಿದೆ. ಇವನು ಲಕ್ಷ್ಮಣಗುಪ್ತನ ಶಿಷ್ಯನೂ, ಉತ್ಪಲಾಚಾರ್ಯನ ಪ್ರಶಿಷ್ಯನೂ ಆಗಿದ್ದನು. ಅಭಿನವಗುಪ್ತನು ಶ್ರೇಷ್ಠ ಸಾಹಿತ್ಯಶಾಸ್ತ್ರಜ್ಞನೂ ಮತ್ತು ದಾರ್ಶನಿಕನೂ ಆಗಿದ್ದನು. ಅಭಿನವಭಾರತೀ ಮತ್ತು ಲೋಚನ ಎಂಬ ಗ್ರಂಥಗಳು ಈತನ ಸಾಹಿತ್ಯಪ್ರಜ್ಞೆಗೆ ಉದಾಹರಣೆಗಳು. ತಂತ್ರಾಲೋಕ, ತಂತ್ರಸಾರ, ಮಾಲಿನೀ ವಿಜಯವಾರ್ತಿಕ, ಪರಮಾರ್ಥಸಾರ, ಪರಾತ್ರಿಂಶಿಕಾವೃತ್ತಿ ಎಂಬ ಗ್ರಂಥಗಳು ಅವನ ದಾರ್ಶನಿಕ ಪ್ರಜ್ಞೆಯನ್ನು ಪ್ರಸಿದ್ಧಿಗೊಳಿಸಿವೆ. ಅಭಿನವಗುಪ್ತರು ರಚಿಸಿದ ವಿವಿಧ ವಿಷಯಗಳನ್ನು ಕುರಿತಾದ ೪೪ ಗ್ರಂಥಗಳು ಇಲ್ಲಿಯವರೆಗೆ ದೊರೆಯುತ್ತವೆಂದು ವಿದ್ವಾಂಸರು ಸೂಚಿಸುತ್ತಾರೆ.[೪೦] ಕ್ಷೇಮರಾಜ (ಕ್ರಿ.ಶ. ೯೭೫-೧೦೨೫)ನು ಅಭಿನವಗುಪ್ತರ ಯೋಗ್ಯ ಶಿಷ್ಯನಾಗಿದ್ದನು. ಶಿವಸೂತ್ರವಿಮರ್ಶಿನೀ, ಪ್ರತ್ಯಭಿಜ್ಞಾಹೃದಯ, ಸ್ಪಂದಸಂದೋಹ, ಶಿವಸ್ತೋತ್ರಾವಲೀಟೀಕಾ, ಸ್ವಚ್ಛಂದತಂತ್ರ, ನೇತ್ರತಂತ್ರ, ವಿಜ್ಞಾನಭೈರವಾಣಾಮುದ್ಯೋತ ಎಂಬ ವ್ಯಾಖ್ಯಾನಗ್ರಂಥ ಇವು ಕ್ಷೇಮರಾಜನ ಮುಖ್ಯವಾದ ಕೃತಿಗಳು. ಭೈರವಾನುಕರಣಸ್ತೋತ್ರ ಎಂಬ ಅವನ ಗ್ರಂಥವು ಮುದ್ರಣವಾಗಿದ್ದು ದೊರೆಯುತ್ತಿದೆ. ಈ ಗ್ರಂಥಗಳಲ್ಲದೆ ಉತ್ಪಲವೈಷ್ಣವ ವಿರಚಿತ ಸ್ಪಂದಪ್ರದೀಪಿಕಾ, ಭಾಸ್ಕರ ಮತ್ತು ವರದರಾಜಕೃತ ಶಿವಸೂತ್ರವಾರ್ತಿಕ, ರಾಮಕಂಠ ವಿರಚಿತ ಸ್ಪಂದಕಾರಿಕಾವೃತ್ತಿ, ಯೋಗರಾಜನ ಪರಮಾರ್ಥಸಾರವೃತ್ತಿ, ಜಯರಥ ರಚಿಸಿದ ತಂತ್ರಾಲೋಕದ ಮೇಲಿನ 'ವಿವೇಕ' ಎಂಬ ಟೀಕೆ, 'ಗೋರಕ್ಷ'

---

[೩೭] ಲುಪ್ತಾಗಮಸಂಗ್ರಹ, ಭಾಗ-೨, ಉಪೋದ್ಘಾತ, ಪು. ೨೫.

[೩೮] ಅಭಿನವಗುಪ್ತ- ಆನ್ ಹಿಸ್ಟಾರಿಕಲ್ ಅಂಡ್ ಫಿಲಸಾಫಿಕಲ್ ಸ್ಟಡಿ, ಪು. ೧೬೨.

[೩೯] ಅಭಿನವಗುಪ್ತ- ಆನ್ ಹಿಸ್ಟಾರಿಕಲ್ ಅಂಡ್ ಫಿಲಸಾಫಿಕಲ್ ಸ್ಟಡಿ, ಪು. ೧೬೩-೧೬೪.

[೪೦] ಕ್ರಮತಾಂತ್ರಿಸಿಸಮ್ ಆಫ್ ಕಾಶ್ಮೀರ, ಪು. ೧೫೯.

('ಮಹೇಶ್ವರಾನಂದ')ನ ಪರಿಮಲಸಹಿತ ಮಹಾರ್ಥಮಂಜರೀ ಮುಂತಾದ ಗ್ರಂಥಗಳು ಪ್ರಸಿದ್ಧವಾಗಿಯೇ ಇವೆ."[೪೧]

ಕ್ರಮದರ್ಶನ

ಈ ದರ್ಶನವೂ ಸಹ ಕಾಶ್ಮೀರದಲ್ಲಿ ಜನ್ಮ ಪಡೆಯಿತು. ಮಹಾರ್ಥಮಂಜರೀ ಗ್ರಂಥದ ಕರ್ತೃವಾದ ಮಹೇಶ್ವರಾನಂದನು ಧಾರ್ಮಿಕ ದೃಷ್ಟಿಯಿಂದ 'ಭೈರವ'ನು ಕ್ರಮದರ್ಶನದ ಪ್ರವರ್ತಕ ಎಂದು ಅಂಗೀಕರಿಸಿ, ಶಿವಾನಂದನನ್ನು ಭೂಲೋಕದಲ್ಲಿ ಈ ದರ್ಶನದ ಮೊದಲನೆಯ ಪ್ರವರ್ತಕನೆಂದು ಸ್ವೀಕರಿಸುತ್ತಾನೆ. ಜಯರಥನು ಮೇಲಿನ ಧಾರ್ಮಿಕಕಥೆಯನ್ನು ಉಪೇಕ್ಷಿಸಿ ಐತಿಹಾಸಿಕದೃಷ್ಟಿಯಿಂದ ಶಿವಾನಂದನೇ ಕ್ರಮದರ್ಶನದ ಪ್ರವರ್ತಕನೆಂದು ಉಲ್ಲೇಖಿಸಿದ್ದಾನೆ. ಕೇಯೂರವತೀ, ಮದನಿಕೆ, ಕಲ್ಯಾಣಿಕೆ ಎಂಬ ಮೂವರು ಶಿವಾನಂದನ ಶಿಷ್ಯೆಯರಾಗಿದ್ದರು. ಅವರಿಗೆ ಅನೇಕರು ಶಿಷ್ಯರಾಗಿದ್ದರು. ಅವರಲ್ಲಿ ಗೋವಿಂದರಾಜ, ಭಾನುಕ, ಎರಕ ಎಂಬುವರು ಬಹು ಪ್ರಸಿದ್ಧರಾಗಿದ್ದರು. ಗೋವಿಂದರಾಜನು ಶಿವದೃಷ್ಟಿ ಗ್ರಂಥದ ಕರ್ತೃವಾದ ಸೋಮಾನಂದನ ಗುರುವಾಗಿದ್ದನು. ಸೋಮಾನಂದನು ಕ್ರಿ.ಶ. ೯ನೇ ಶತಮಾನದ ಮಧ್ಯಭಾಗದಲ್ಲಿದ್ದನೆಂದು ಸ್ವೀಕೃತವಾಗಿದೆ. ಸೋಮಾನಂದ, ಶಿವಾನಂದರ ಮಧ್ಯದಲ್ಲಿ ಪರಂಪರಾಗತವಾಗಿ ಇಬ್ಬರು ಗುರುಗಳು ಇದ್ದರು. ಆದುದರಿಂದ ಕ್ರಮದರ್ಶನಸಿದ್ಧಾಂತವು ಕ್ರಿ.ಶ. ೮ನೇ ಶತಮಾನದಲ್ಲಿ ಆರಂಭವಾಯಿತೆಂದು ನಿಶ್ಚಯವಾಗುತ್ತದೆ.

ಕ್ರಮದರ್ಶನ ಸಾಹಿತ್ಯವು ಎರಡು ಪ್ರಕಾರವಾಗಿದೆ- (೧) ಆಗಮಗಳು ಮತ್ತು (೨) ಆಗಮಾಶ್ರಿತವಾದ ಗ್ರಂಥಗಳು. ಅವುಗಳಲ್ಲಿ ಕ್ರಮಸದ್ಭಾವ, ಕ್ರಮಸಿದ್ಧಿ, ಬ್ರಹ್ಮಯಾಮಲ, ತಂತ್ರರಾಜಭಟ್ಟಾರಕ ಎಂಬ ಆಗಮಗಳು ಕ್ರಮದರ್ಶನದ ವಿಚಾರದಲ್ಲಿ ಕೊಟ್ಟಿರುವ ಉಲ್ಲೇಖಗಳಿಂದ ತಿಳಿಯುತ್ತದೆ. ಆಗಮಾಶ್ರಿತವಾದ ಅನೇಕ ಗ್ರಂಥಗಳು ಶಿವಾನಂದ ಮುಂತಾದವರಿಂದ ರಚಿತವಾಗಿದ್ದು, ದೊರೆತಿರುವ ಗ್ರಂಥಗಳಲ್ಲಿ ನಾಮಕೀರ್ತನ ಮಾತ್ರದಿಂದಲೂ ಸಹ ಇಲ್ಲಿಯವರೆಗೆ ಒಂದು ಗ್ರಂಥವೂ ದೃಷ್ಟಿಗೆ ಬಿದ್ದಿರುವುದಿಲ್ಲ. ಆದರೆ ಆ ಕೃತಿಗಳು ಇದ್ದವೆಂದು ಆ ಮತದ ಉಲ್ಲೇಖಗಳಿಂದ ತಿಳಿದುಬರುತ್ತದೆ ಎಂದು ಡಾ. ಕಾಂತಿಚಂದ್ರಪಾಂಡೇಯ ಅವರು ವಿಷಾದವನ್ನು ವ್ಯಕ್ತಪಡಿಸಿದ್ದಾರೆ."[೪೨] ಕ್ರಮದರ್ಶನವನ್ನಾಶ್ರಯಿಸಿ ರಚಿತವಾದ ಅನೇಕ ಗ್ರಂಥಗಳ ಹಾಗೂ ಆ ದರ್ಶನದ ಆಚಾರ್ಯರ ವಿಸ್ತೃತವಾದ ಪರಿಚಯವು ಡಾ. ನವಜೀವನರಸ್ತೋಗಿ ಅವರು ರಚಿಸಿರುವ "ಕ್ರಮತಾಂತ್ರಿಸಿಸಮ್" (Krama Tantricism) (ಪು. ೮೨-೨೪೮) ಎಂಬ ಗ್ರಂಥದಲ್ಲಿ ನೋಡಬಹುದು.

---

[೪೧] ಭಾರತೀಯ ದರ್ಶನ, ಪು. ೫೬೧-೫೬೪.

[೪೨] ಶೈವದರ್ಶನಬಿಂದುಃ, ಪು. ೧೨೨-೧೨೩.

ಕಾಲಿಕಾಕ್ರಮ, ಕ್ರಮಕೇಲಿ, ಕ್ರಮರಹಸ್ಯ, ಕ್ರಮವಾಸನಾ, ಕ್ರಮಸದ್ಭಾವ ಮುಂತಾದ ಮೂವತ್ತಕ್ಕೂ ಹೆಚ್ಚು ಕ್ರಮದರ್ಶನ ಗ್ರಂಥಗಳ ಹೆಸರುಗಳನ್ನು ಉಲ್ಲೇಖಿಸಿ, ಶಿವಾನಂದ, ಭೋಜರಾಜ, ಕಲ್ಲಟ, ಜಯರಥಪರಮಗುರು, ಜಯರಥಗುರು, ತಪಸ್ವಿರಾಜ, ದಾಮೋದರ, ನಾಥಪಾದ, ನಿಷ್ಕ್ರಿಯಾನಂದನಾಥ, ಭೂತಿರಾಜ, ಮಹಾವನಮುನಿ, ಮಹೇಶ್ವರಾನಂದ, ರತ್ನದೇವ, ವಾಮನನಾಥ ಮತ್ತು ಸೋಮರಾಜ ಮೊದಲಾದ ಕ್ರಮದರ್ಶನದ ಆಚಾರ್ಯರುಗಳಿದ್ದಾರೆಂದು ಪ್ರೊ. ವ್ರಜವಲ್ಲಭದ್ವಿವೇದಿ ಮಹೋದಯರು ನಿರೂಪಿಸಿದ್ದಾರೆ.[೪೩]

ಕುಲದರ್ಶನ

ಪರಮತತ್ತ್ವಂ ಕುಲಮ್ (ಕುಲ ಪರಮತತ್ತ್ವ) ಎಂಬುದನ್ನು ಅಂಗೀಕರಿಸಿರುವ ದರ್ಶನವೇ ಕುಲದರ್ಶನ. ಕೌಲ ಎಂಬುದು ಇದರ ಮತ್ತೊಂದು ಹೆಸರು. ಈ ದರ್ಶನವು ಕ್ರಿ.ಶ. ೫ನೇ ಶತಮಾನದಲ್ಲಿ ಜನ್ಮತಾಳಿತು. ಕುಲದರ್ಶನಸಾಹಿತ್ಯದ ಇತಿಹಾಸವು ಕ್ರಿ.ಶ. ೫ನೇ ಶತಮಾನದಿಂದ ಕ್ರಿ.ಶ. ೧೮ನೇ ಶತಮಾನದವರೆಗೆ ವಿಸ್ತೀರ್ಣವಾಗಿದೆಯೆಂದು ಪ್ರತಿಪಾದಿಸಲಾಗಿದೆ. ಕಾಲೀಕುಲ, ತ್ರಿಕಕುಲ, ತ್ರಿಕರತ್ನಕುಲ, ನಿಶಾಕುಲ, ಭೈರವಕುಲ, ಮಾಧವಕುಲ ಮೊದಲಾದ ಕುಲ ಶಬ್ದಾಂತವಾದ ಗ್ರಂಥಗಳು, ಊರ್ಮಿಕೌಲ, ಪ್ರಭಾಕೌಲ, ಯೋಗಿನೀಕೌಲ ಇತ್ಯಾದಿ ಕೌಲ ಶಬ್ದಾಂತವಾದ ಗ್ರಂಥಗಳು ಹಾಗೂ ಇತರೆ ಅನೇಕ ಗ್ರಂಥಗಳು ಕುಲದರ್ಶನಕ್ಕಿವೆ. ಪದ್ಮಹಸ್ತಭಟ್ಟಾರಕ, ವಾಸುದೇವ, ಸಿದ್ಧನಾಥಪಾದ ಎಂಬ ಆಚಾರ್ಯರು ಕುಲ ಮತ್ತು ಕೌಲ ಸಂಪ್ರದಾಯವನ್ನು ಅನುಸರಿಸುತ್ತಿದ್ದರೆಂದು ಪ್ರೊ. ವ್ರಜವಲ್ಲಭದ್ವಿವೇದಿ ಅವರು ಪ್ರತಿಪಾದಿಸಿದ್ದಾರೆ.[೪೫] ಈ ಸಂಪ್ರದಾಯದ ಗ್ರಂಥ ಹಾಗೂ ಗ್ರಂಥಕಾರರ ವಿಶೇಷವಾದ ಪರಿಚಯವನ್ನು ಡಾ. ಪಾಂಡೇಯ ಅವರ “ಅಭಿನವಗುಪ್ತ” (ಪು. ೩೪೨-೭೩೨) ಎಂಬ ಗ್ರಂಥದಲ್ಲಿ ನೋಡಬಹುದು.

ವೀರಶೈವಮತ

ವೀರಶೈವಮತವು ಅನೇಕ ಶೈವಶಾಖೆಗಳಲ್ಲಿ ಪ್ರಧಾನವಾದುದು. ಸಿದ್ಧಾಂತ ಶಬ್ದವಾಚ್ಯಗಳಾದ ಇಪ್ಪತ್ತೆಂಟು ಶಿವಾಗಮಗಳೇ ಈ ಮತಕ್ಕೆ ಆಧಾರ. ಅದನ್ನೇ ಶ್ರೀ ಸಿದ್ಧಾಂತ ಶಿಖಾಮಣಿಯು ಈ ರೀತಿಯಾಗಿ ನಿರೂಪಿಸಿದೆ:

> ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ।
> ನಿರ್ದಿಷ್ಟಮುತ್ತರೇ ಭಾಗೇ ವೀರಶೈವಮತಂ ಪರಮ್॥[೪೬]

---

೪೩. ಲುಪ್ತಾಗಮಸಂಗ್ರಹ, ಭಾಗ-೨, ಉಪೋದ್ಘಾತ, ಪು. ೧೦-೧೧.

೪೪. ಶೈವದರ್ಶನಬಿಂದುಃ, ಪು. ೧೨೨-೧೨೩.

೪೫. ಲುಪ್ತಾಗಮಸಂಗ್ರಹ, ಭಾಗ-೨, ಉಪೋದ್ಘಾತ, ಪು. ೧೨-೧೩.

೪೬. ಸಿದ್ಧಾಂತ ಶಿಖಾಮಣಿ, ೫.೧೪.

"ಶಿವನಿಂದ ಉಪದಿಷ್ಟವಾದ ಸಿದ್ಧಾಂತವೆಂದು ಕರೆಯಲಾಗುವ ಕಾಮಿಕ ಮುಂತಾದ ಶೈವಾಗಮಗಳ ಉತ್ತರಭಾಗದಲ್ಲಿ ಶ್ರೇಷ್ಠವಾದ ವೀರಶೈವಮತವು ಪ್ರತಿಪಾದಿಸಲ್ಪಟ್ಟಿವೆ."

ವೀರಶೈವರ ಇಷ್ಟಲಿಂಗಧಾರಣೆ, ಷಟ್‌ಸ್ಥಲೋಪಾಸನೆ ಮುಂತಾದ ಕೆಲವು ವಿಶಿಷ್ಟವಾದ ಆಚಾರಗಳ ನಿರೂಪಣೆಯು ವೇದಗಳಲ್ಲಿ,[೪೭] ಮಹಾಭಾರತದಲ್ಲಿ[೪೮] ಮತ್ತು ಪುರಾಣವೇ[೪೯] ಮೊದಲಾದವುಗಳಲ್ಲಿ ದೊರೆಯುತ್ತದೆ ಎನ್ನುವ ಕಾರಣದಿಂದ ಇವುಗಳನ್ನೂ ಪ್ರಮಾಣಗ್ರಂಥಗಳನ್ನಾಗಿ ಸ್ವೀಕರಿಸಲಾಗಿದೆ. ಶಿವಯೋಗಿ ಶಿವಾಚಾರ್ಯರು ಇದನ್ನೇ ಈ ರೀತಿಯಾಗಿ ಹೇಳಿದ್ದಾರೆ:

ವೇದಶಾಸ್ತ್ರಪುರಾಣೇಷು ಕಾಮಿಕಾದ್ಯಾಗಮೇಷು ಚ।
ಲಿಂಗಧಾರಣಮಾಖ್ಯಾತಂ ವೀರಶೈವಸ್ಯ ನಿಶ್ಚಯಾತ್॥[೫೦]

"ವೇದ, ಶಾಸ್ತ್ರ, ಪುರಾಣಗಳಲ್ಲಿ ; ಕಾಮಿಕಾದಿ ವಾತುಲಾಂತಗಳಾದ ಎಲ್ಲ ಶಿವಾಗಮಗಳಲ್ಲಿಯೂ ವೀರಶೈವನಿಗೆ ಲಿಂಗಧಾರಣೆಯು ಅವಶ್ಯವಾಗಿ ಹೇಳಲ್ಪಟ್ಟಿದೆ."

ಆದುದರಿಂದ ವೀರಶೈವಮತವು ವೇದ, ಆಗಮ, ಉಪನಿಷತ್ತುಗಳಲ್ಲಿ ಪ್ರಸಿದ್ಧವಾಗಿದ್ದು ಅತ್ಯಂತ ಪ್ರಾಚೀನವಾದುದು ಎಂದು ತಿಳಿದುಬರುತ್ತದೆ. ಆದರೂ ಸಹ ಆಗಮಗಳ ಪ್ರಾಮಾಣ್ಯ ಪ್ರಾಥಮಿಕವಾಗಿದ್ದು, ಅವುಗಳ ಆಧಾರದ ಮೇಲೆ ವೇದಗಳ

---

[೪೭] "ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ" (ಋಗ್ವೇದ, ೯-೮೩-೧), "ಅಯಂ ಮೇ ಹಸ್ತೋ ಭಗವಾನ್" (ಋಗ್ವೇದ, ೧೦-೬೦-೧೨), "ಯಾ ತೇ ರುದ್ರ ಶಿವಾ ತನೂರಘೋರಾ" (ತೈತ್ತಿರೀಯಸಂಹಿತಾ, ೪-೫-೧-೧), "ಪಾಣಿಮಂತ್ರಂ ಪವಿತ್ರಮ್" (ತೈತ್ತಿರೀಯ ಆರಣ್ಯಕ, ೧೦-೧೬), ಇತ್ಯಾದಿ ವೈದಿಕ ಮಂತ್ರಗಳ, ಸಿದ್ಧಾಂತ ಶಿಖಾಮಣಿ (೬.೫೮-೫೯,೬೧), ಲಿಂಗಧಾರಣಚಂದ್ರಿಕಾ (ಪು. ೩೫-೧೮೦) ಮುಂತಾದ ಗ್ರಂಥಗಳಲ್ಲಿ ಬಾಹ್ಯಲಿಂಗಧಾರಣಪರವಾದ ವಿಷಯವನ್ನು ಪ್ರತಿಪಾದಿಸಿ ಇಷ್ಟಲಿಂಗಧಾರಣೆಯ ವೈದಿಕತ್ವವನ್ನು ಸಮರ್ಥಿಸಲಾಗಿದೆ.

[೪೮] ಕಿಮಾಹುರ್ಭರತಶ್ರೇಷ್ಠ ಪಾತ್ರಂ ವಿಪ್ರಾಃ ಸನಾತನಾಃ।
ಬ್ರಾಹ್ಮಣಂ ಲಿಂಗಿನಂ ಚೈವ ಬ್ರಾಹ್ಮಣಂ ವಾಽಪ್ಯಲಿಂಗಿನಮ್॥
ಸ್ವವೃತ್ತಿಮಭಿಪನ್ನಾಯ ಲಿಂಗಿನೇ ಚೇತರಾಯ ಚ।
ದೇಯಮಾಹುರ್ಮಹಾರಾಜ ಉಭಾವೇತೌ ತಪಸ್ವಿನೌ॥
(ಮಹಾಭಾರತ, ಅನು.ಪರ್ವ, ೨೨.೧-೨)

[೪೯] ಆಚಾರಲಿಂಗಂ ಪ್ರಥಮಂ ಗುರುಲಿಂಗಂ ದ್ವಿತೀಯಕಮ್।
ಶಿವಲಿಂಗಂ ತೃತೀಯಂ ಸ್ಯಾಚ್ಚರಲಿಂಗಂ ಚತುರ್ಥಕಮ್॥
ಪ್ರಸಾದಂ ಪಂಚಮಂ ಲಿಂಗಂ ಮಹಾಲಿಂಗಂ ತು ಷಷ್ಠಕಮ್।
ಭಕ್ತೋ ಮಾಹೇಶ್ವರಶ್ಚೈವ ಪ್ರಸಾದೀ ಪ್ರಾಣಲಿಂಗಕಃ॥
ಶರಣೈಕ್ಯಸ್ಥಲೈಃ ಷಡ್‌ಭಿಃ ಕ್ರಮಾಲ್ಲಿಂಗಮುದಾಹೃತಮ್।
(ಲಿಂಗಪುರಾಣ, ೨.೨೧.೧೨೨-೧೨೪)

[೫೦] ಸಿ.ಶಿ, ೬.೫೮

ಪ್ರಾಮಾಣ್ಯವು ಅಂಗೀಕೃತವಾಗಿದೆ. ಆ ಕಾರಣದಿಂದ ಈ ಮತವು 'ತಾಂತ್ರಿಕವೈದಿಕ' ಎಂದು ಕರೆಯಲ್ಪಟ್ಟಿದೆ.

ವೀರಶೈವ ಶಬ್ದದ ಅರ್ಥನಿರ್ವಚನ

'ವೀರಶೈವ' ಶಬ್ದದಲ್ಲಿರುವ 'ವೀರ' ಎಂಬ ವಿಶೇಷಣವೇ ಬೇರೆ ಶೈವಮತಗಳಿಂದ ಇದನ್ನು ಪೃಥಕ್ಕರಿಸುತ್ತದೆ. ಇಲ್ಲಿ ಪ್ರಯೋಗಿಸಿರುವ 'ವೀರ' ಶಬ್ದದಿಂದ ಇದರ ದಾರ್ಶನಿಕ ಸಿದ್ಧಾಂತ, ಸಂಪ್ರದಾಯ ಮತ್ತು ಆಚಾರಗಳು ಸ್ಪಷ್ಟವಾಗುತ್ತವೆ. ಅದನ್ನು ಹೀಗೆ ಹೇಳಲಾಗಿದೆ-

> ವಿಶಬ್ದೇನೋಚ್ಯತೇ ವಿದ್ಯಾ ಶಿವಜೀವೈಕ್ಯಬೋಧಿಕಾ।
> ತಸ್ಯಾಂ ರಮಂತೇ ಯೇ ಶೈವಾ ವೀರಶೈವಾಸ್ತು ತೇ ಮತಾಃ॥[೫೧]
>
> ಇಷ್ಟಲಿಂಗವಿಯೋಗೇ ವಾ ವ್ರತಾನಾಂ ವಾ ಪರಿಚ್ಯುತೌ।
> ತೃಣವತ್ ಪ್ರಾಣಸಂತ್ಯಾಗ ಇತಿ ವೀರವ್ರತಂ ಮತಮ್॥
> ಭಕ್ತ್ಯುತ್ಸಾಹವಿಶೇಷೋಽಪಿ ವೀರತ್ವಮಿತಿ ಕಥ್ಯತೇ।
> ವೀರವ್ರತಸಮಾಯೋಗಾದ್ ವೀರಶೈವಂ ಪ್ರಕೀರ್ತಿತಮ್॥[೫೨]

" 'ವಿ' ಶಬ್ದವು ಶಿವ-ಜೀವರ ಐಕ್ಯರೂಪದ ವಿದ್ಯೆಯನ್ನು ಬೋಧಿಸುತ್ತದೆ. ಅಂತಹ ವಿದ್ಯೆಯಲ್ಲಿ ಯಾರು ವಿನೋದದಿಂದ ಕ್ರೀಡಿಸುತ್ತಾರೆಯೋ ಅವರು ವೀರಶೈವರು. ಇಷ್ಟಲಿಂಗವು ಕಳೆದುಹೋದರೆ ಮತ್ತು ವ್ರತಗಳ ಆಚರಣೆಯಲ್ಲಿ ಚ್ಯುತಿಯುಂಟಾದರೆ ತೃಣದಂತೆ ಪ್ರಾಣತ್ಯಾಗ ಮಾಡುವುದು ವೀರವ್ರತವೆಂದು ಕರೆಯಲ್ಪಟ್ಟಿದೆ. ಭಕ್ತಿಯ ಉತ್ಸಾಹ ವಿಶೇಷವೂ ಕೂಡ ವೀರತ್ವವೆಂದು ಕರೆಯಲ್ಪಡುತ್ತದೆ."

ವೀರಶೈವ ಸಿದ್ಧಾಂತದಲ್ಲಿ ಸಾಧಕನ ದೀಕ್ಷಾಸಂಪನ್ನತೆಯಿಂದಲೇ ಬ್ರಹ್ಮಜಿಜ್ಞಾಸೆಯ ಅಧಿಕಾರತ್ವವು ಪ್ರಾಪ್ತವಾಗುತ್ತದೆ. ಶಿವದೀಕ್ಷೆಯ ಕಾಲದಿಂದ ಇಷ್ಟಲಿಂಗ ಸಂಸ್ಕಾರವನ್ನು ಹೊಂದಿ ಆಜೀವ ಪರ್ಯಂತ ಶರೀರದ ಮೇಲೆ ಅದನ್ನು ಎಚ್ಚರಿಕೆಯಿಂದ ಧರಿಸಬೇಕೆಂದು ಗುರು ಉಪದೇಶಿಸುತ್ತಾನೆ. ಒಂದು ವೇಳೆ ಪ್ರಮಾದದಿಂದ ಇಷ್ಟಲಿಂಗವು ಶರೀರದಿಂದ ಬೇರ್ಪಟ್ಟರೆ ಪ್ರಾಣತ್ಯಾಗದಂತಹ ವೀರವ್ರತವನ್ನು ಉಪದೇಶಿಸುತ್ತಾನೆ. ಈ ರೀತಿಯಾಗಿ ಗುರುವು ಉಪದೇಶಿಸಿದ ಮಾರ್ಗದಿಂದ ಭಕ್ತಿ ಹಾಗೂ ಉತ್ಸಾಹದಿಂದ ಇಷ್ಟಲಿಂಗವನ್ನು ಶರೀರದ ಮೇಲೆ ನಿರಂತರವಾಗಿ ಧರಿಸಿ, ನಿಯಮಪೂರ್ವಕವಾಗಿ ಅದರ ಪೂಜೆಯನ್ನು ಮಾಡಿ, ಶಿವಜೀವೈಕ್ಯವನ್ನು ಬೋಧಿಸುವ ವಿದ್ಯೆಯಲ್ಲಿ ಯಾವ ಸಾಧಕನು ಸಂತೋಷದಿಂದಿರುವನೋ ಅವನೇ 'ವೀರಶೈವ' ಎಂಬುದು ಶಾಸ್ತ್ರ ರಹಸ್ಯ. ವೀರ ಶಬ್ದದ ವ್ಯುತ್ಪತ್ತಿಯ ಭೇದವು 'ಯೋಗಿನೀಹೃದಯದೀಪಿಕೆ'ಯಲ್ಲಿ ಕಂಡುಬರುತ್ತದೆ. ಹೇಗೆಂದರೆ- "ಇದಂತಾರಿಪೋರಹಮಿ ಸಮರಾಂಗಣೇ ಪ್ರಲಯಪ್ರತಿಪಾದನಪರಾ ವೀರಾಃ" (ಪು.೮೨) (ಯುದ್ಧಭೂಮಿಯಲ್ಲಿ ಶತ್ರುವನ್ನು ಸಂಹಾರ ಮಾಡುವವರು

---

೫೧. ಸಿ.ಶಿ, ೫.೧೫.

೫೨. ಚಂದ್ರಜ್ಞಾನಾಗಮ, ಕ್ರಿಯಾಪಾದ, ೧೦.೩೩-೩೪.

ಎಂದು ಇತರರಿಂದ ಹೊಗಳಿಸಿಕೊಳ್ಳುವವರು ವೀರರು). ಇಲ್ಲಿ 'ಪರಾಪಂಚಾಶಿಕಾ' ಎಂಬ ಗ್ರಂಥದ ಶ್ಲೋಕವನ್ನು ಪ್ರಮಾಣವಾಗಿ ಸ್ಮರಿಸಬಹುದು- "ಅಹಮಿ ಪ್ರಲಯಂ ಕುರ್ವನ್ನಿದಮಃ ಪ್ರತಿಯೋಗಿನಃ; ಪರಾಕ್ರಮಪರೋ ಭುಂಕ್ತೇ ಸ್ವಭಾವಮಶಿವಾಪಹಮ್."[೫೩] (ಎದುರಿಗಿರುವ ಶತ್ರುಗಳನ್ನು ಸಂಹರಿಸುತ್ತಾ ಸ್ವಾಭಾವಿಕವಾದ ಅಮಂಗಲವನ್ನು ನಾಶಪಡಿಸುವ ಪರಾಕ್ರಮಶಾಲಿಗಳಾಗಿ ಜೀವಿಸುತ್ತಾರೆ). ಇದಂತಾ ಎಂಬ ಶತ್ರುವನ್ನು ಅಹಂ ಎಂಬ ಸಮರಾಂಗಣದಲ್ಲಿ ನಾಶಪಡಿಸುವವನು. ಇದಂ ಎಂಬ ಪ್ರತಿಯೋಗಿಯನ್ನು ಅಹಂನಲ್ಲಿ ಪ್ರಲಯವನ್ನಾಗಿ ಮಾಡಿ, ಅಮಂಗಲವನ್ನು ದೂರಮಾಡುವ ತನ್ನತನವನ್ನು ಅನುಭವಿಸುತ್ತಾನೆ. ಅಂದರೆ ಇದಂ ಎಂದು ತೋರುವ ಸಮಸ್ತ ಪ್ರಪಂಚವನ್ನು ತನ್ನ ಅಹಂತಾದಲ್ಲಿ ಪ್ರಲಯವನ್ನು ಮಾಡಿಕೊಂಡು ಸರ್ವಮಹಮೇವ (ಎಲ್ಲವೂ ನಾನೇ ಎಂಬ) ಸರ್ವಾಹಂತಾ ಭಾವದಿಂದ ಇರುವವನೇ ವೀರನು. ತಾತ್ಪರ್ಯವೇನೆಂದರೆ- ಯುದ್ಧಭೂಮಿಯಲ್ಲಿ ತನ್ನ ಎಲ್ಲ ಎದುರಾಳಿಗಳನ್ನು ಸಂಹರಿಸಿ ತಾನೋರ್ವನೇ ಉಳಿದ ಆ ವೀರನು ಇದಂ ಎನ್ನುವ ಎಲ್ಲವೂ ಹೋಗಿ ಕೇವಲ ಅಹಂ ಎಂದು ತಾನೊಬ್ಬನೇ ಉಳಿಯುವಂತೆ ಸಮಸ್ತ ಪ್ರಪಂಚದಲ್ಲಿ ಇದಂ ಎಂದು ತೋರುವ ಎಲ್ಲ ಪ್ರಪಂಚವನ್ನು ಅಹಂ ಎಂದು ಭಾವಿಸಿ ಇದಂತೆಯನ್ನು ಸಂಹರಿಸುವುದರಿಂದ ಇವನಿಗೆ 'ವೀರ'ನೆಂದು ಕರೆಯುತ್ತಾರೆ. ಲಿಂಗಾಂಗಸಾಮರಸ್ಯದಿಂದ ಇದನ್ನು ಆಚರಿಸುವ ವೀರಶೈವರು ಸತ್ಯವಾಗಿಯೂ ವೀರರು ಎಂಬಲ್ಲಿ ಯಾವ ವಿವಾದವೂ ಇಲ್ಲ.

ಸ್ಥೂಲಶರೀರದ ಮೇಲೆ ಯಾವಾಗಲೂ ತನ್ನ ಇಷ್ಟಲಿಂಗವನ್ನು ಧರಿಸಿರುವುದು ವೀರಶೈವನ ಬಾಹ್ಯಚಿಹ್ನೆಯು, ಮತ್ತು ಶಿವಜೀವೈಕ್ಯಬೋಧವು ಅವನ ಆಂತರಿಕವಾದ ಚಿಹ್ನೆ. ಹೀಗೆ ಉಭಯಲಕ್ಷಣಗಳಿಂದ ವಿಶಿಷ್ಟವಾಗಿರುವುದೇ 'ವೀರಶೈವ' ಎಂದು ಶಾಸ್ತ್ರ ದೃಢಪಡಿಸಿದೆ.

ಅಲ್ಲದೆ, ಶ್ರೀ ನೀಲಕಂಠ ಶಿವಾಚಾರ್ಯರು- "ವಿರೋಧರಹಿತಂ ಶೈವಂ ವೀರಶೈವಮ್" (ವಿರೋಧವಿಲ್ಲದ ಶೈವ, ವೀರಶೈವ) ಎಂದು ವೀರಶೈವ ಪದವನ್ನು ವಿರೋಧರಹಿತ ಎಂಬ ಅರ್ಥದ ವ್ಯುತ್ಪತ್ತಿಯನ್ನು ಮಾಡಿ ವೀರಶೈವರ ಸಮನ್ವಯವಾದವನ್ನು ಸಮರ್ಥಿಸಿದ್ದಾರೆ. ಅವರು ಹೀಗೆ ಹೇಳಿದ್ದಾರೆ:

ವಿರೋಧಾರ್ಥೋ ವಿಶಬ್ದಃ ಸ್ಯಾದ್ ರಶಬ್ದೋ ರಹಿತಾರ್ಥಕಃ।
ವಿರೋಧರಹಿತಂ ಶೈವಂ ವೀರಶೈವಂ ವಿದುರ್ಬುಧಾಃ॥[೫೪]

" 'ವಿ' ಶಬ್ದವು ವಿರೋಧ ಎಂಬ ಅರ್ಥವನ್ನು 'ರ' ಶಬ್ದವು (ರಹಿತ) (ಇಲ್ಲ) ಎಂಬ ಅರ್ಥವನ್ನು ಹೊಂದಿವೆ. ವಿರೋಧವಿಲ್ಲದ ಶಿವಭಕ್ತನನ್ನು 'ವೀರಶೈವ' ಎಂದು ವಿದ್ವಾಂಸರು ತಿಳಿಯುತ್ತಾರೆ."

---

[೫೩] ಯೋಗಿನೀಹೃದಯದೀಪಿಕಾ, ಪು. ೮೨.

[೫೪] ಕ್ರಿಯಾಸಾರ, ಭಾಗ-೧, ಪು. ೧೧.

ವೀರಶೈವರ ಈ ಸಮನ್ವಯವಾದವನ್ನು ಉಪಸಂಹಾರದಲ್ಲಿ ನಿರೂಪಿಸಲಾಗುವುದು.

ವೀರಶೈವಮತಕ್ಕೆ ಮಹಾಪಾಶುಪತ ಎಂಬ ಮತ್ತೊಂದು ಹೆಸರು

ಸಮಸ್ತ ಲೋಕದಲ್ಲಿ ವಿಲಕ್ಷಣವಾದ ಶಿವಲಿಂಗನಿಷ್ಠವಾದ ವೀರಶೈವಕ್ಕೆ ಮಹಾಪಾಶುಪತ ಎಂಬ ಮತ್ತೊಂದು ಹೆಸರೂ ಸಹ ಇದೆ. ಹೇಗೆಂದರೆ-

ದ್ವಿಧಾ ಪಾಶುಪತಂ ಜ್ಞೇಯಂ ಪೂರ್ವಾಪರವಿಭೇದತಃ।
ಶಿವಾಗಮಾನುಸಾರೇಣ ಭಸ್ಮರುದ್ರಾಕ್ಷಧಾರಣಮ್॥

ಲಬ್ಧ್ವಾ ಶಿವಂ ಮಹಾದೇವಂ ಲಿಂಗರೂಪಮುಮಾಪತಿಮ್।
ಅರ್ಚಯೇತ್ ತು ತ್ರಿಕಾಲಂ ವೈ ಪೂರ್ವಂ ಪಾಶುಪತಂ ಹಿ ತತ್॥

ಶಿವಾಗಮಾನುಸಂಧಾನಶೈವದೀಕ್ಷಾಸಮನ್ವಿತಃ।
ಶಿವಲಿಂಗಂ ಕರೇ ಕಂಠೇ ಧೃತ್ವಾ ವಕ್ಷಃಸ್ಥಲೇಽಪಿ ವಾ।
ತ್ರಿಕಾಲಂ ಯೋಽರ್ಚಯೇದ್ ಭಕ್ತ್ಯಾ ಮಹಾಪಾಶುಪತೋ ಹಿ ಸಃ।[೫೫]

ಇಲ್ಲಿ ಪೂರ್ವ ಮತ್ತು ಉತ್ತರ ಎಂಬ ಭೇದದಿಂದ ಪಾಶುಪತದ ಎರಡು ವಿಧಗಳನ್ನು ಪ್ರತಿಪಾದಿಸಿ, ಯಾರು ಭಸ್ಮ-ರುದ್ರಾಕ್ಷಧಾರಿಗಳಾಗಿ ಶಿವಲಿಂಗದ ರೂಪದಲ್ಲಿ ಮಹಾದೇವನನ್ನು ಪೂಜಿಸುತ್ತಾರೆಯೋ ಅವರು ಪೂರ್ವಪಾಶುಪತರು; ಆದರೆ ಯಾರು ಶಿವದೀಕ್ಷಾಸಂಸ್ಕಾರದಿಂದ ಆರಂಭವಾಗಿ ಶಿವಲಿಂಗವನ್ನು ಸದ್ಗುರುವಿನಿಂದ ಪಡೆದು ಅದನ್ನು ಯಾವಾಗಲೂ ಕೈ-ಕುತ್ತಿಗೆ-ವಕ್ಷಃಸ್ಥಲವೇ ಮೊದಲಾದ ಭಾಗಗಳಲ್ಲಿ ಅಥವಾ ಶರೀರದ ಬೇರಾವುದಾದರೂ ಸ್ಥಾನದಲ್ಲಿ ಸಾವಧಾನದಿಂದ ಧರಿಸಿ ನಿಯಮದಿಂದ ಆ ಶಿವಲಿಂಗದ ಪೂಜೆಯನ್ನು ತ್ರಿಕಾಲದಲ್ಲಿ ಮಾಡುತ್ತಾರೆಯೋ ಅವರು ಉತ್ತರ ಪಾಶುಪತ ಸಂಪ್ರದಾಯದವರು; ಅವರನ್ನೇ ಮಹಾಪಾಶುಪತ ಎಂದು ಕರೆಯಲಾಗಿದೆ. ನಿಟ್ಟೂರ ನಂಜಣಾಚಾರ್ಯರು- "ಅಥ ವೀರಶೈವಾನಾಂ ಮಹಾಪಾಶುಪತಾನಾಂ ಕಥಮಂತ್ಯೇಷ್ಟಿ ಕ್ರಮಃ"[೫೬] (ವೀರಶೈವ ಮಹಾಪಾಶುಪತರ ಅಂತ್ಯಸಂಸ್ಕಾರ ಕ್ರಮವು ಹೇಗೆ?) ಎಂದು ವೀರಶೈವರನ್ನು ಕುರಿತು ಮಹಾಪಾಶುಪತ ಶಬ್ದವನ್ನು ಉಪಯೋಗಿಸಿದ್ದಾರೆ. ಆದುದರಿಂದ ವೀರಶೈವರು ಮಹಾಪಾಶುಪತ ಶಬ್ದದಿಂದಲೂ ಸಹ ಕರೆಯಲ್ಪಡುತ್ತಿದ್ದಾರೆ.

ಲಿಂಗಾಯತ ಶಬ್ದವು ವೀರಶೈವ ಶಬ್ದದ ಪರ್ಯಾಯವೇ?

ಕರ್ನಾಟಕದಲ್ಲಿ ವೀರಶೈವಮತಾನುಯಾಯಿಗಳು ಬಹುಸಂಖ್ಯೆಯಲ್ಲಿದ್ದಾರೆ. ಲೋಕರೂಢಿಯಲ್ಲಿ ಅವರನ್ನು ಲಿಂಗಾಯತ ಎಂದು ಕರೆಯಲಾಗುತ್ತಿದೆ. ಶರೀರದ ಮೇಲೆ ಯಾವಾಗಲೂ ಇಷ್ಟಲಿಂಗವನ್ನು ಧರಿಸುತ್ತಾರೆ ಎನ್ನುವ ಕಾರಣದಿಂದ

---

[೫೫] ಸಾರಸ್ವತೀ, ಸುಷಮಾ, ವ. ೧೫, ಅಂ. ೧-೪, ಪು. ೨೨೬.

[೫೬] ವೇದಾಂತಸಾರ ವೀರಶೈವ ಚಿಂತಾಮಣಿ. ಉತ್ತರಕಾಂಡ, ಪು. ೩೯೮.

ಈ ಶಬ್ದವು ವ್ಯವಹಾರದಲ್ಲಿ ರೂಢಿಯಾಗಿರುತ್ತದೆ. ಆದುದರಿಂದ ಈ ಶಬ್ದವು ರೂಢಿಗತವಾಗಿದೆಯೇ ಹೊರತು ಶಾಸ್ತ್ರೀಯವಾದುದಲ್ಲ. ಪ್ರಾಚೀನ ವೀರಶೈವ ವಾಙ್ಮಯವಾದ ಶಿವಾಗಮಗಳಲ್ಲಿ, ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಮತ್ತು ೧೨ನೇ ಶತಮಾನದ ಶರಣರ ಸಮಗ್ರ ವಚನ ಸಾಹಿತ್ಯದಲ್ಲಿ ಧರ್ಮವಾಚಕವಾಗಿ ವೀರಶೈವ ಪದವೇ ಪ್ರಯೋಗವಾಗಿದೆ. ಆದುದರಿಂದ ವೀರಶೈವ ಶಬ್ದವೇ ಶಾಸ್ತ್ರೀಯವಾದುದು. ಲಿಂಗಾಯತ ಪದವು ರೂಢನಾಮವಾಗಿದೆ ಎಂಬುದನ್ನು ವಿದ್ವಾಂಸರು ತಿಳಿದುಕೊಳ್ಳಬೇಕು. ಆದುದರಿಂದ ಪ್ರಾಚೀನ ವೀರಶೈವಸಾಹಿತ್ಯದಲ್ಲಿ ಎಲ್ಲಿಯೂ ಲಿಂಗಾಯತ ಪದಪ್ರಯೋಗವು ಕಂಡುಬರುವುದಿಲ್ಲ. ಎಲ್ಲೆಡೆಯೂ ವೀರಶೈವ ಶಬ್ದವೇ ನಮ್ಮ ದೃಷ್ಟಿಗೆ ಬೀಳುತ್ತದೆ. ವೀರಶೈವ ಶಬ್ದಕ್ಕಿರುವ ಅರ್ಥ ಗಾಂಭೀರ್ಯವು ಲಿಂಗಾಯತ ಶಬ್ದಕ್ಕಿರುವುದಿಲ್ಲ. ಈ ವಿಷಯ ಕುರಿತಾದ ಅನೇಕ ಲೇಖನಗಳನ್ನು, ಅನೇಕ ಭಾಷೆಗಳಲ್ಲಿ ಬಹುಶಾಸ್ತ್ರ ವಿಶಾರದರೂ, ಕಾಶೀಜ್ಞಾನಸಿಂಹಾಸನಾಧೀಶ್ವರರೂ ಆಗಿದ್ದ ಲಿಂಗೈಕ್ಯ ಪರಮಪೂಜ್ಯ ವೀರಭದ್ರಶಿವಾಚಾರ್ಯ ಮಹಾಸ್ವಾಮಿಗಳವರು ಬರೆದು ಪ್ರಚಾರ ಮಾಡಿದ್ದಾರೆ. ಆದರೂ ಕೂಡ "ಶಾಸ್ತ್ರಾದ್ ರೂಢಿರ್ಬಲೀಯಸೀ" (ಶಾಸ್ತ್ರಕ್ಕಿಂತಲೂ ರೂಢಿಯೇ ಶಕ್ತಿಯುತವಾದದ್ದು) ಎಂಬ ನ್ಯಾಯದಂತೆ ಲಿಂಗಾಯತ ಶಬ್ದದ ವ್ಯಾಪ್ತಿಯು ಈಗ ಆಧುನಿಕ ಸಾಹಿತ್ಯಮಾಧ್ಯಮದಿಂದ ಬೇರೆ ಪ್ರದೇಶಗಳಿಗೂ ಕೂಡ ಹಬ್ಬಿದೆ. ಈಗಿನ ಸಾಹಿತ್ಯದಲ್ಲಿ ಉಪಯೋಗಿಸುತ್ತಿರುವ ಲಿಂಗಾಯತ ಶಬ್ದವು ಅಶುದ್ಧವಾದದ್ದು, ಅದರ ಶುದ್ಧ ರೂಪವು "ಲಿಂಗಾಯತ್ತ" ಎಂದು. ವೀರಶೈವರ ಕ್ರಿಯಾದೀಕ್ಷಾ ಕಾಲದಲ್ಲಿ ಆಚರಿಸುವ ಏಳು ಆಂತರಿಕ ಸಂಸ್ಕಾರಗಳಲ್ಲಿ ಈ ಆಯತ್ತ ಸಂಸ್ಕಾರವು ಒಂದು. ಕ್ರಿಯಾದೀಕ್ಷೆಯಲ್ಲಿ ಸದ್ಗುರುವು (ಅಭಿಷೇಕಾದಿಗಳಿಂದ) ಸಂಸ್ಕರಿಸಲ್ಪಟ್ಟ ಶಿವಲಿಂಗವನ್ನು ಶಿಷ್ಯನ ವಾಮಹಸ್ತಪೀಠದಲ್ಲಿಟ್ಟು, ನೀನು ಇಂದಿನಿಂದ "ಲಿಂಗಾಯತ್ತನಾಗು", ಅಂದರೆ "ಲಿಂಗದ ಅಧೀನನಾಗು" ಎಂದು ಉಪದೇಶಿಸುತ್ತಾನೆ. ಅದೇ ಲಿಂಗಾಯತ್ತ ಸಂಸ್ಕಾರ. ಆದುದರಿಂದ ಲಿಂಗಾಯತ್ತ ಶಬ್ದವೇ ಕರ್ನಾಟಕದ ಪ್ರಾದೇಶಿಕ ಭಾಷೆಯಲ್ಲಿ ಲಿಂಗಾಯತ ಎಂದು ಉಪಯೋಗಿಸಲ್ಪಟ್ಟಿದೆ. ಆ ಕಾರಣದಿಂದ ಲಿಂಗಾಯತ್ತ ಶಬ್ದವು ದೀಕ್ಷೆಯ ಅಂಗಭೂತಗಳಲ್ಲಿ ಒಂದು ಸಂಸ್ಕಾರವೇ ಹೊರತು ಧರ್ಮವಾಚಕವಲ್ಲ. ಆ ಕಾರಣ ಧರ್ಮದ ದೃಷ್ಟಿಯಿಂದಲೂ ಮತ್ತು ದರ್ಶನದ ದೃಷ್ಟಿಯಿಂದಲೂ ವೀರಶೈವ ಶಬ್ದವೇ ಶುದ್ಧವಾದದ್ದು, ಲಿಂಗಾಯತ ಶಬ್ದವಲ್ಲ. ಆದುದರಿಂದ ಲಿಂಗಾಯತ ಶಬ್ದವು ವೀರಶೈವ ಶಬ್ದದ ಪರ್ಯಾಯವಾಗಲು ಹೇಗೂ ಅರ್ಹವಾಗುವುದಿಲ್ಲ ಎಂದು ವಿದ್ವಾಂಸರು ಅರಿಯಬೇಕು.

ವೀರಶೈವದ ಪ್ರಭೇದಗಳು

ವೀರಶೈವವು ಸಾಮಾನ್ಯ, ವಿಶೇಷ ಮತ್ತು ನಿರಾಭಾರಿ ಎಂದು ಮೂರು ವಿಧವಾಗಿದೆ. ಇದನ್ನು ಆಗಮದಲ್ಲಿ ಹೀಗೆ ಹೇಳಲಾಗಿದೆ:

ವೀತರಾಗಾದಿದೋಷತ್ವಾದಾತ್ಮತತ್ತ್ವವಿಚಾರಣಾತ್।
ವಿಕಲ್ಪಾಕಲ್ಪಶೂನ್ಯತ್ವಾದ್ ವೀರಶೈವಮಿತಿ ಸ್ಮೃತಮ್॥
ಸಾಮಾನ್ಯಂ ಪ್ರಥಮಂ ಪ್ರೋಕ್ತಂ ವಿಶೇಷಂ ಚ ದ್ವಿತೀಯಕಮ್।
ನಿರಾಭಾರಂ ತೃತೀಯಂ ಸ್ಯಾತ್ ಕ್ರಮಾಲ್ಲಕ್ಷಣಮುಚ್ಯತೇ॥[೫೭]

"ರಾಗ-ದ್ವೇಷಗಳಾದಿಯಾಗಿ ಸರ್ವದೋಷಗಳಿಲ್ಲದ, ಆತ್ಮತತ್ತ್ವ ವಿಚಾರವುಳ್ಳ, ಸಂಶಯ, ಅನಿಶ್ಚಯಗಳಿಲ್ಲದಿರುವುದೇ ವೀರಶೈವವೆಂದು ಹೇಳಲ್ಪಟ್ಟಿದೆ. ಈ ವೀರಶೈವವು ಸಾಮಾನ್ಯ, ವಿಶೇಷ ಮತ್ತು ನಿರಾಭಾರ ಎಂದು ಮೂರು ವಿಧವಾಗಿದ್ದು, ಅವುಗಳ ಲಕ್ಷಣಗಳನ್ನು ಕ್ರಮವಾಗಿ ಹೇಳಲಾಗುವುದು."

ಗುರು ನೀಡಿದ ಇಷ್ಟಲಿಂಗದಲ್ಲಿ ನಿಷ್ಠನಾಗಿದ್ದುಕೊಂಡು ಗುರು-ಲಿಂಗ-ಜಂಗಮರ ಸೇವಾರೂಪವಾದ ವೀರಶೈವರ ಸಾಮಾನ್ಯ ನಿಯಮಗಳನ್ನು ಯಾರು ಪಾಲಿಸುತ್ತಾರೆಯೋ, ಅವರನ್ನು 'ಸಾಮಾನ್ಯ ವೀರಶೈವ' ಎಂದು ಕರೆಯಲಾಗುತ್ತದೆ.[೫೮]

ವೀರಶೈವಾಗಮಗಳಲ್ಲಿ ಹೇಳಲಾಗಿರುವಂತೆ ಇಷ್ಟಲಿಂಗಪೂಜೆಯೇ ಮೊದಲಾದ ಕರ್ಮಗಳ ಅನುಷ್ಠಾನದಿಂದ ಪರಿಪಕ್ವವಾದ ಅಂತಃಕರಣವುಳ್ಳವನಾಗಿ "ವಿಶಿಷ್ಟ ಧರ್ಮಾನುಷ್ಠಾನಾದ್ ವಿಶೇಷ ಇತಿ ಕಥ್ಯತೇ" (ವಿಶಿಷ್ಟ ಧರ್ಮದ ಅನುಷ್ಠಾನದಿಂದ ವಿಶೇಷ ಎಂದು ಕರೆಯಲಾಗುತ್ತದೆ) ಎಂಬ ಆಗಮೋಕ್ತಿಯಂತೆ ಲಿಂಗ ಮತ್ತು ಅಂಗಗಳ ಅನುಸಂಧಾನಾತ್ಮಕವಾದ ನೂರೊಂದು ಸ್ಥಲಪ್ರಭೇದ ಭಿನ್ನವಾದ ಷಟ್‌ಸ್ಥಲ ರಹಸ್ಯವನ್ನು ಗುರುವಿನ ಮುಖದಿಂದ ಯಾರು ವಿಶೇಷವಾಗಿ ತಿಳಿಯುತ್ತಾನೆಯೋ, ಅವನನ್ನು 'ವಿಶೇಷ ವೀರಶೈವ' ಎಂದು ಕರೆಯಲಾಗಿದೆ.[೫೯]

ಈ ವಿಶೇಷ ವೀರಶೈವನೇ ಯಾವಾಗ "ನಿವೃತ್ತಕರ್ಮಭಾರತ್ವಾನ್ನಿರಾಭಾರ ಇತಿ ಸ್ಮೃತಃ" (ಭಾರಗಳಿಂದ ನಿವೃತ್ತನಾಗಿರುವುದರಿಂದ ಇವನಿಗೆ ನಿರಾಭಾರಿ ವೀರಶೈವ ಎಂದು ಹೇಳಲಾಗುತ್ತದೆ) ಎಂಬ ಆಗಮೋಕ್ತಿಯಂತೆ ಕೃತಕೃತ್ಯನಾಗಿ ತನ್ನೆಲ್ಲ ಅಭಿಮಾನದ ತ್ಯಾಗದಿಂದ ಮತ್ತು ನಿಸ್ಪೃಹ ವೃತ್ತಿಯಿಂದ ಜೀವನ್ಮುಕ್ತನಂತೆ ಯಾವಾಗ ಜೀವನವನ್ನು ಕಳೆಯುತ್ತಾನೆಯೋ, ಆಗ 'ನಿರಾಭಾರವೀರಶೈವ' ಎಂದು ಕರೆಯಲಾಗುತ್ತದೆ.[೬೦]

ವೀರಶೈವದರ್ಶನದ ಪರ್ಯಾಯ ಹೆಸರುಗಳು

ವೀರಶೈವದರ್ಶನ ಗ್ರಂಥಗಳಲ್ಲಿ ಈ ದರ್ಶನವನ್ನು ಶಿವಾದ್ವೈತ, ವಿಶೇಷಾದ್ವೈತ, ಶಕ್ತಿವಿಶಿಷ್ಟಾದ್ವೈತ ಎಂಬ ಪರ್ಯಾಯ ಹೆಸರುಗಳಿಂದ ಪ್ರತಿಪಾದಿಸಲಾಗಿದೆ. ಸಿದ್ಧಾಂತ

---

[೫೭] ಸೂಕ್ಷ್ಮಾಗಮ, ಕ್ರಿಯಾಪಾದ, ೭.೨೯-೩೦.

[೫೮] ಸೂಕ್ಷ್ಮಾಗಮ, ಕ್ರಿಯಾಪಾದ, ೭.೩೧-೩೮.

[೫೯] ಸೂಕ್ಷ್ಮಾಗಮ, ಕ್ರಿಯಾಪಾದ, ೭.೩೯-೬೩.

[೬೦] ಸೂಕ್ಷ್ಮಾಗಮ, ಕ್ರಿಯಾಪಾದ, ೭.೬೪-೯೧.

ಶಿಖಾಮಣಿಯಲ್ಲಿ ನಿರೂಪಿತವಾಗಿರುವಂತೆ ಭಗವಾನ್ ಶಿವನು ವೀರಶೈವಧರ್ಮ ಸ್ಥಾಪನೆಗೆ ಗಣೇಶ್ವರರಾದ ಶ್ರೀರೇಣುಕರನ್ನು ಭೂಲೋಕಕ್ಕೆ ಕಳುಹಿಸಿ-

ಮದದ್ವೈತಪರಂ ಶಾಸ್ತ್ರಂ ವೇದವೇದಾಂತಸಮ್ಮತಮ್।
ಸ್ಥಾಪಯಿಷ್ಯಸಿ ಭೂಲೋಕೇ ಸರ್ವೇಷಾಂ ಹಿತಕಾರಕಮ್॥[೬೧]

"ಭೂಲೋಕದಲ್ಲಿ ಎಲ್ಲರಿಗೂ ಹಿತಕಾರಿಯಾದ, ವೇದ-ವೇದಾಂತ ಸಮ್ಮತವಾದ ನನ್ನ ಅದ್ವೈತ (ಶಿವಾದ್ವೈತ) ಪರವಾದ ಶಾಸ್ತ್ರವನ್ನು ಸ್ಥಾಪಿಸು" ಎಂದು ಆದೇಶಿಸಿದನು. ಇಲ್ಲಿ ನನ್ನ ಅದ್ವೈತ ಪರವಾದ ಶಾಸ್ತ್ರವೆಂದರೆ ಶಿವಾದ್ವೈತಶಾಸ್ತ್ರ ಎಂದು ಅರ್ಥವಾಗುತ್ತದೆ. ಆದುದರಿಂದ ಸಿದ್ಧಾಂತ ಶಿಖಾಮಣಿಯ ಅನುಸಾರವಾಗಿ ಈ ದರ್ಶನದ ಹೆಸರು 'ಶಿವಾದ್ವೈತ' ಎಂದು ತಿಳಿದುಬರುತ್ತದೆ. "ಶಿವಶ್ಚ ಶಿವಶ್ಚ ಶಿವೌ, ತಯೋರದ್ವೈತಮ್=ಶಿವಾದ್ವೈತಮ್" ಎಂದು ಇದರ ವ್ಯುತ್ಪತ್ತಿ. ಇಲ್ಲಿಯ ಮೊದಲನೆಯ 'ಶಿವ' ಶಬ್ದಕ್ಕೆ ಸೂಕ್ಷ್ಮ ಚಿತ್ ಅಚಿತ್ ಶಕ್ತಿವಿಶಿಷ್ಟನಾದ 'ಪರಶಿವ' ಎಂದರ್ಥ. ಎರಡನೆಯ 'ಶಿವ' ಶಬ್ದಕ್ಕೆ ಸ್ಥೂಲಚಿತ್ ಅಚಿತ್‌ಶಕ್ತಿವಿಶಿಷ್ಟನಾದ 'ಜೀವ' ಎಂದರ್ಥ. ಹೀಗೆ ಸಂಸಾರದಶೆಯಲ್ಲಿ ಪರಸ್ಪರ ಭಿನ್ನವಾದ ಉಪಾಸನೆಯ ಮೂಲಕ ಹೇಳಲಾದ ಅದ್ವೈತ ಪ್ರತಿಪಾದಕವಾದ ಶಾಸ್ತ್ರವೇ ಶಿವಾದ್ವೈತ ಎಂದರ್ಥ. ಶ್ರೀಪತಿಪಂಡಿತಾರಾಧ್ಯರು ತಮ್ಮ ಭಾಷ್ಯದಲ್ಲಿ-

ದ್ವೈತಾದ್ವೈತಮತೇ ಶುದ್ಧೇ ವಿಶೇಷಾದ್ವೈತಸಂಜ್ಞಕೇ।
ವೀರಶೈವೈಕಸಿದ್ಧಾಂತೇ ಸರ್ವಶ್ರುತಿಸಮನ್ವಯಃ॥[೬೨]

"ವಿಶೇಷಾದ್ವೈತವೆಂದು ಕರೆಯಲಾಗುವ ಶುದ್ಧವಾದ ದ್ವೈತಾದ್ವೈತರೂಪವಾದ ವೀರಶೈವ ಸಿದ್ಧಾಂತವು ಎಲ್ಲ ಶ್ರುತಿಗಳ ಸಮನ್ವಯರೂಪದಲ್ಲಿದೆ" ಎಂಬ ಈ ಮಂಗಲ ಶ್ಲೋಕದಲ್ಲಿ ವೀರಶೈವ ದರ್ಶನದ ಹೆಸರನ್ನು 'ವಿಶೇಷಾದ್ವೈತ' ಎಂದು ಹೇಳಿ, ಅದೇ ಎಲ್ಲ ಶ್ರುತಿಗಳಿಗೂ ಸಮನ್ವಯಾತ್ಮಕವಾದುದು ಎಂದು ನಿರೂಪಿಸಿದ್ದಾರೆ. "ವಿಶ್ಚ ಶೇಷಶ್ಚ ವಿಶೇಷೌ=ಈಶಜೀವೌ (ಶಿವ-ಜೀವರು), ತಯೋರದ್ವೈತಂ=ವಿಶೇಷಾದ್ವೈತಮ್" ಎಂದು ಇದರ ವ್ಯುತ್ಪತ್ತಿಯನ್ನು ಕೊಡಲಾಗಿದೆ. ಇದರ ಭಾವಾರ್ಥ ಹೀಗಿದೆ- "ವಿಶ್ಚಕ್ಷುಷಿ ವ್ಯೋಮ್ನಿ ವಾತೇ ಪರಮಾತ್ಮನಿ ಪಕ್ಷಿಣಿ"[೬೩] (ಕಣ್ಣು, ಆಕಾಶ, ವಾಯು, ಪರಮಾತ್ಮ, ಪಕ್ಷಿ) ಎಂದು ನಿಘಂಟುಗಳಲ್ಲಿ 'ವಿ' ಶಬ್ದಕ್ಕೆ ಪರಮಾತ್ಮ ಎಂಬ ಅರ್ಥವೂ ಸೂಚಿತವಾಗಿದೆ ಮತ್ತು 'ವಾ' ಎಂದರೆ ಉತ್ಪಾದಯತಿ (ಉತ್ಪಾದಿಸುತ್ತದೆ) ಎಂಬ ವ್ಯುತ್ಪತ್ತಿಯಿಂದ 'ವಿ' ಶಬ್ದದಿಂದ ಜಗತ್ಕಾರಣನಾದ ಈಶ್ವರ ಎಂಬ ಅರ್ಥವೇ ಸಿದ್ಧವಾಗುತ್ತದೆ. ಅಲ್ಲದೆ "ದ್ವಾ ಸುಪರ್ಣಾ ಸಯುಜಾ ಸಖಾಯ"[೬೪] ಎಂಬ

---

[೬೧] ಸಿ.ಶಿ, ೩.೭

[೬೨] ಬ್ರಹ್ಮಸೂತ್ರ, ಶ್ರೀಕರಭಾಷ್ಯ, ಮಂಗಲಶ್ಲೋಕ. ೧೫.

[೬೩] ಏಕಾಕ್ಷರಕೋಶಃ, ಪು. ೧೮.

[೬೪] ಮುಂಡಕೋಪನಿಷತ್, ೩-೨-೮.

ಶ್ರುತಿವಾಕ್ಯವೂ ಸಹ ಪರಮಾತ್ಮನನ್ನು ಪಕ್ಷಿರೂಪದಿಂದ ವರ್ಣಿಸಿದೆ. ಆದುದರಿಂದ 'ವಿಃ' ಎಂಬ ಶಬ್ದವು ಪ್ರಕೃತದಲ್ಲಿ 'ಪರಮಾತ್ಮಾ' ಎಂಬ ಅರ್ಥವನ್ನು ಪಡೆಯುತ್ತದೆ. ಮತ್ತು 'ಶೇಷ' ಶಬ್ದದಿಂದ ಪರಮಾತ್ಮನ ಅಂಶವಾದ 'ಜೀವ' ಎಂಬ ಅರ್ಥವು ಅಭಿಪ್ರೀತವಾಗುತ್ತದೆ. "ಯಥಾಽಗ್ನೇಃ ಕ್ಷುದ್ರಾ ವಿಸ್ಫುಲಿಂಗಾ"[೬೫] (ಹೇಗೆ ಅಗ್ನಿಯಿಂದ ಸಣ್ಣದಾದ ಕಿಡಿಗಳು ಹಾರುತ್ತವೆಯೋ) ಎಂದು ದೃಷ್ಟಾಂತ ಸಹಿತವಾಗಿ ಜೀವ ಶಿವನ ಅಂಶ ಎಂದು ಕೇಳಿದ್ದೇವೆ. "ಯಥಾ ನದ್ಯಃ ಸ್ಯಂದಮಾನಾಃ"[೬೬] (ಹರಿಯುತ್ತಿರುವ ನದಿಗಳು ನಾಮರೂಪಗಳನ್ನು ಬಿಟ್ಟು ಸಮುದ್ರದಲ್ಲಿ ಅದೃಶ್ಯವಾಗುವುವೋ) ಎಂಬ ಶ್ರುತಿವಾಕ್ಯದಂತೆ ಈ ವಿಧವಾದ ಶಿವ-ಜೀವರ ಅದ್ವೈತವನ್ನು ಉಪದೇಶಿಸಲಾಗಿದೆ. ಈ ಪ್ರಕಾರವಾಗಿ ಸಂಸಾರಾವಸ್ಥೆಯಲ್ಲಿ ಪರಸ್ಪರ ಭಿನ್ನವಾದ ಅಂಶ - ಅಂಶಿಗಳಾದ ಶಿವ - ಜೀವರುಗಳಲ್ಲಿ ಮುಕ್ತ್ಯಾವಸ್ಥೆಯಲ್ಲಿ ಅಭೇದವನ್ನು ಪ್ರತಿಪಾದಿಸುವ ಈ ದರ್ಶನವನ್ನು 'ವಿಶೇಷಾದ್ವೈತ' ಎಂದು ಕರೆಯಲಾಗಿದೆ. ನೀಲಕಂಠ ಶಿವಾಚಾರ್ಯರು-

> ನ ಜೀವಬ್ರಹ್ಮಣೋರೈಕ್ಯಂ ಸೂತ್ರಸ್ವರಸತಃ ಸ್ಫುರೇತ್।
> ಇತಿ ವ್ಯಾಚಕ್ಷತೇ ಶಕ್ತಿವಿಶಿಷ್ಟಂ ವಿಷಯಸ್ಥಿತಿ॥
> ಯಥಾ ಘಟ ಇತಿ ಜ್ಞಾತೇ ಘಟತ್ವಂ ಸ್ಯಾದ್ವಿಶೇಷಣಮ್।
> ತಥಾ ಬ್ರಹ್ಮಣಿ ವೈಶಿಷ್ಟ್ಯಂ ಶಕ್ತೇರಿತ್ಯವಧಾರ್ಯತಾಮ್॥
> ತಸ್ಮಾಚ್ಛಕ್ತಿವಿಶಿಷ್ಟಸ್ಯ ಜಿಜ್ಞಾಸಾ ಬ್ರಹ್ಮಣಃ ಸ್ಫುಟಮ್।

ಎಂದು ಇಲ್ಲಿ ಈ ದರ್ಶನದ ಹೆಸರನ್ನು "ಶಕ್ತಿವಿಶಿಷ್ಟಾದ್ವೈತಮ್" ಎಂದು ನಿರೂಪಿಸಿದ್ದಾರೆ. ಇದರ ವ್ಯುತ್ಪತ್ತಿಯು ಈ ರೀತಿಯಾಗಿದೆ- "ಶಕ್ತಿಶ್ಚ ಶಕ್ತಿಶ್ಚ ಶಕ್ತೀ, ತಾಭ್ಯಾಂ ವಿಶಿಷ್ಟೌ ಜೀವೇಶೌ, ತಯೋರದ್ವೈತಂ ಶಕ್ತಿವಿಶಿಷ್ಟಾದ್ವೈತಮ್." ಜೀವನು ಸ್ಥೂಲಚಿತ್‌ಅಚಿತ್‌ರೂಪಶಕ್ತಿವಿಶಿಷ್ಟನು, ಶಿವನು ಸೂಕ್ಷ್ಮಚಿತ್ ಅಚಿತ್‌ರೂಪಶಕ್ತಿವಿಶಿಷ್ಟನು. ಇಲ್ಲಿ ಸ್ಥೂಲಚಿತ್ ಕಿಂಚಿಜ್ಞತ್ವರೂಪವುಳ್ಳದ್ದಾಗಿದ್ದರೆ, ಸ್ಥೂಲ ಅಚಿತ್ ಕಿಂಚಿತ್‌ಕರ್ತೃತ್ವರೂಪವುಳ್ಳದ್ದಾಗಿದೆ. ಅದೇ ರೀತಿಯಾಗಿ ಸೂಕ್ಷ್ಮಚಿತ್ ಸರ್ವಜ್ಞತ್ವರೂಪದಿಂದ ಕೂಡಿದ್ದರೆ, ಸೂಕ್ಷ್ಮ ಅಚಿತ್ ಸರ್ವಕರ್ತೃತ್ವರೂಪದಿಂದ ಕೂಡಿದೆ. ಅರ್ಥಾತ್ ಜೀವಾತ್ಮನು ಕಿಂಚಿಜ್ಞತ್ವ ಕಿಂಚಿತ್‌ಕರ್ತೃತ್ವರೂಪಶಕ್ತಿವಿಶಿಷ್ಟನು; ಶಿವನು ಸರ್ವಜ್ಞತ್ವ ಸರ್ವಕರ್ತೃತ್ವರೂಪಶಕ್ತಿವಿಶಿಷ್ಟನು ಎಂದು ಸಿದ್ಧವಾಗುತ್ತದೆ. ಈ ವಿಧವಾದ ಶಿವ-ಜೀವರ ಐಕ್ಯವು "ಜಲೇ ಜಲಮಿವ ನ್ಯಸ್ತಂ ವಹ್ನೌ ವಹ್ನಿರಿವಾರ್ಪಿತಮ್"[೬೭] (ನೀರಿನಲ್ಲಿ ನೀರು ಬೆರೆತಂತೆ, ಬೆಂಕಿಯಲ್ಲಿ ಬೆಂಕಿ ಬೆರೆತಂತೆ)

---

[೬೫] ಬೃಹದಾರಣ್ಯಕೋಪನಿತ್, ೨-೧-೨೦.

[೬೬] ಮುಂಡಕೋಪನಿಷತ್, ೩-೨-೮.

[೬೭] ಸಿ.ಶಿ, ೧೦-೬೧.

ಎಂಬ ಶ್ರೀ ರೇಣುಕಭಗವತ್ಪಾದರ ಉಕ್ತಿಯಂತೆ ಅದ್ವೈತವನ್ನು ಪ್ರತಿಪಾದಿಸುತ್ತದೆ ಎನ್ನುವ ಕಾರಣದಿಂದ ಈ ದರ್ಶನವನ್ನು ಶಕ್ತಿವಿಶಿಷ್ಟಾದ್ವೈತದರ್ಶನ ಎಂದು ಕರೆಯಲಾಗಿದೆ.

ಇದರ ತಾತ್ಪರ್ಯವಿಷ್ಟು- ಪರಶಿವನ ಇಚ್ಛಾ-ಜ್ಞಾನ-ಕ್ರಿಯಾ ಶಕ್ತಿಗಳು ಸಂಕುಚಿತ ಸ್ವಭಾವದವುಗಳಾಗಿದ್ದು ಸತ್ಯವಾಗಿಯೂ ಆಣವ-ಮಾಯೀಯ-ಕಾರ್ಮಿಕ ಎಂಬ ಮಲತ್ರಯಗಳ ರೂಪದ್ದಾಗಿದೆ. ಈ ಮಲತ್ರಯಗಳು ಅನಾದಿರೂಪದ್ದಾಗಿವೆ. ಈ ಮಲತ್ರಯಗಳಿಂದ ಆವೃತವಾದ ಶಿವನ ಅಂಶವೇ ಜೀವ ಎಂದು ಕರೆಯಲ್ಪಟ್ಟಿದೆ. ಈ ರೀತಿಯಾದ ಮಲತ್ರಯಗಳಿಂದಾವೃತವಾದ ಈ ಜೀವ ಅನಾದಿ ಕಾಲದಿಂದಲೂ ಪರಶಿವನಿಂದ ಭಿನ್ನವಾಗಿರುತ್ತದೆ. ಅನೇಕ ಜನ್ಮಗಳಲ್ಲಿ ಸಂಪಾದಿಸಿದ ಸತ್ಕರ್ಮಫಲವಾಗಿ ಯಾವಾಗ ಸಾಧಕನಿಗೆ ಶಿವಾನುಗ್ರಹವೆಂಬ ಶಕ್ತಿಪಾತ ಉಂಟಾಗುತ್ತದೆಯೋ, ಆಗ ಸದ್ಗುರುವು ಅವನಿಗೆ ದೀಕ್ಷಾಸಂಸ್ಕಾರವನ್ನು ಮಾಡುತ್ತಾನೆ. ಈ ವಿಧವಾಗಿ ದೀಕ್ಷಾ ಸಂಸ್ಕಾರದಿಂದ ಹಾಗೂ ತನ್ನ ಉಪಾಸನೆಯ ಶಕ್ತಿಯಿಂದ ಮಲತ್ರಯಗಳೆಂಬ ಸಂಕುಚಿತ ಶಕ್ತಿರೂಪಗಳು ಮತ್ತೆ ವಿಕಸಿತವಾಗುತ್ತವೆ. ಆಗ ಜೀವನೂ ಸಹ ಪರಶಿವನಂತೆ ಸರ್ವಜ್ಞತ್ವವೇ ಮೊದಲಾದವುಗಳಿಂದ ಶಕ್ತಿವಿಶಿಷ್ಟನಾಗುತ್ತಾನೆ. ಆಗ ಎರಡೂ ಸಮಾನವಾದ ಶಕ್ತಿವಿಶಿಷ್ಟತ್ವದಿಂದ ಮತ್ತು ಸಮಾನರೂಪತ್ವದಿಂದ ಜೀವ-ಶಿವರು ಉಂಟಾಗುತ್ತಾರೆ. ಈ ರೀತಿಯಾಗಿ ಒಂದೇ ವಿಧವಾದ ಶಕ್ತಿಸ್ವರೂಪತ್ವದಿಂದಲೇ ಇವುಗಳ ಸಮಾಗಮವು "ಜಲೇ ಜಲಮಿವ" (ನೀರಿನಲ್ಲಿ ನೀರಿನಂತೆ) ಎಂದು ಹೇಳಲಾಗಿದೆ. ಹೀಗೆ ಮೊದಲು ಅಲ್ಪಜ್ಞತ್ವವೇ ಮೊದಲಾದ ಶಕ್ತಿವಿಶಿಷ್ಟನು, ತರುವಾಯ ಉಪಾಸನೆಯಿಂದ ಪ್ರಾಪ್ತವಾದ ಸರ್ವಜ್ಞತ್ವವೇ ಮುಂತಾದವುಗಳಿಂದ ವಿಶಿಷ್ಟವಾದ ಜೀವನು ಸಹಜವಾಗಿಯೇ ಸರ್ವಜ್ಞತ್ವವೇ ಮುಂತಾದ ಶಕ್ತಿವಿಶಿಷ್ಟಗಳಿಂದ ಕೂಡಿದ ಪರಶಿವನೊಡನೆ ಮೋಕ್ಷಾವಸ್ಥೆಯಲ್ಲಿ ಐಕ್ಯಹೊಂದುತ್ತಾನೆ. ಈ ರೀತಿಯಾಗಿ ವಿಕಸಿತ ಶಕ್ತಿವಿಶಿಷ್ಟನಾದ ಜೀವ ಮತ್ತು ಸ್ವಾಭಾವಿಕ ಶಕ್ತಿವಿಶಿಷ್ಟನಾದ ಶಿವ ಇವರ ಅದ್ವೈತ ಪ್ರತಿಪಾದಕವಾದ ಶಾಸ್ತ್ರವೇ ಶಕ್ತಿವಿಶಿಷ್ಟಾದ್ವೈತದರ್ಶನ, ಅಥವಾ ಶಕ್ತಿವಿಶಿಷ್ಟಾದ್ವೈತ ವೇದಾಂತ. ಇಲ್ಲಿಯೂ ಸಹ ಬದ್ಧಾವಸ್ಥೆಯಲ್ಲಿ ಸಂಕುಚಿತಶಕ್ತಿಯ ಕಾರಣದಿಂದ ಪರಶಿವನಿಗಿಂತ ಜೀವ ಬೇರೆಯೇ ಆಗಿದ್ದು ಮೋಕ್ಷಾವಸ್ಥೆಯಲ್ಲಿ ವಿಕಸಿತಶಕ್ತಿಯುಳ್ಳವನಾಗಿ ಪರಶಿವನೊಂದಿಗೆ ಸಾಮರಸ್ಯವುಂಟಾಗುತ್ತದೆ ಎಂದು ಸ್ಪಷ್ಟವಾಗುತ್ತದೆ...

ಇಲ್ಲಿ ಹೇಳಿದ ಈ ದರ್ಶನದ ಪರ್ಯಾಯ ಹೆಸರುಗಳ ಚರ್ಚೆಯಿಂದ ಮೂರು ಶಬ್ದಗಳೂ ಸಮಾನವಾದ ಅರ್ಥವನ್ನು ಹೊಂದಿದ್ದರೂ ಕೂಡ ಶಿವಾದ್ವೈತ-ವಿಶೇಷಾದ್ವೈತ ಶಬ್ದಗಳಿಂದ ಈ ದರ್ಶನದ ಸ್ವರೂಪವು ಶೀಘ್ರವಾಗಿ ವ್ಯಕ್ತವಾಗುವುದಿಲ್ಲ. ಆದರೆ ಶಕ್ತಿವಿಶಿಷ್ಟಾದ್ವೈತ ಶಬ್ದದಿಂದ ಈ ದರ್ಶನದ ಸ್ವರೂಪವು ಶೀಘ್ರವಾಗಿ ವ್ಯಕ್ತವಾಗುತ್ತದೆ ಎನ್ನುವ ಕಾರಣದಿಂದ ಈ ಹೆಸರೇ (ಶಕ್ತಿವಿಶಿಷ್ಟಾದ್ವೈತ) ಈ ದರ್ಶನಕ್ಕೆ ಬಹಳ ಸುಂದರವಾಗಿರುವುದು ಗೊತ್ತಾಗುತ್ತದೆ. ಆದುದರಿಂದಲೇ ಈ ಹೆಸರಿನಿಂದಲೇ ವೀರಶೈವ ದರ್ಶನವು ಪ್ರಚಾರದಲ್ಲಿದೆ. ಈ ದರ್ಶನದ ವಿಶಿಷ್ಟ ವಿದ್ವಾಂಸರಾದ ಡಾ॥ ಟಿ.ಜಿ. ಸಿದ್ಧಪ್ಪಾರಾಧ್ಯರೂ ಸಹ ಇದೇ ಅಭಿಪ್ರಾಯವುಳ್ಳವರಾಗಿದ್ದಾರೆ.[೬೮]

---

[೬೮] ಶಕ್ತಿವಿಶಿಷ್ಟಾದ್ವೈತದರ್ಶನಮ್ (ಕನ್ನಡಾನುವಾದ), ಪು. ೨೧.

ಪದವಾಕ್ಯಪ್ರಮಾಣಜ್ಞರಾದ ಶ್ರೀ ಮರಿತೋಂಟದಾರ್ಯರೂ ಸಹ- “ವೀರಶೈವ ಸಿದ್ಧಾಂತಸ್ಯ ಲಿಂಗಾಂಗ ಸಾಮರಸ್ಯಾತ್ಮಕಪರಿಣಾಮ್ಯುಪಾದಾನರೂಪಶಕ್ತಿವಿಶಿಷ್ಟಾದ್ವೈತಸ್ಯ ಸಕಲಾದ್ವೈತ ವಿಲಕ್ಷಣತಯಾ ಸಾಧನೀಯತಯಾ”[೬೯] (ವೀರಶೈವ ಸಿದ್ಧಾಂತದ ಲಿಂಗಾಂಗ ಸಾಮರಸ್ಯಾತ್ಮಕ ಪರಿಣಾಮರೂಪವಾದ ಶಕ್ತಿವಿಶಿಷ್ಟಾದ್ವೈತವು ಎಲ್ಲ ಅದ್ವೈತಗಳಿಗಿಂತ ವಿಲಕ್ಷಣವಾಗಿರುವುದು ಸಾಧಿತವಾಗಿರುವುದರಿಂದ) ಎಂಬಲ್ಲಿ ಈ ದರ್ಶನದ ಹೆಸರನ್ನು ಶಕ್ತಿವಿಶಿಷ್ಟಾದ್ವೈತವೆಂದೇ ಪ್ರತಿಪಾದಿಸಿದ್ದಾರೆ.

ಆದರೂ ಕೂಡ ಶ್ರೀಕಂಠಶಿವಾಚಾರ್ಯರು ಸ್ಥಾಪಿಸಿ, ಅಪ್ಪಯ್ಯದೀಕ್ಷಿತರಿಂದ ಪೋಷಿಸಲ್ಪಟ್ಟ ಶೈವಮತವು ಶಕ್ತಿವಿಶಿಷ್ಟಾದ್ವೈತಮತವೆಂದೇ ಹೇಳಲ್ಪಟ್ಟಿದೆ. ಅನಂತರದಲ್ಲಿ ಅದು ರಾಮಾನುಜರಂತೆ ಮುಕ್ತಾವಸ್ಥೆಯಲ್ಲಿ ಜೀವ-ಶಿವ ಇವರ ಭೇದವನ್ನು ಪ್ರತಿಪಾದಿಸುವಂತಹದ್ದು. ಆದುದರಿಂದ ಹೆಸರಿನಲ್ಲಿ ಸಾಮ್ಯವಿದ್ದರೂ ಸಹ ಸಿದ್ಧಾಂತದಲ್ಲಿ ಭೇದವು ಇದ್ದೇ ಇದೆ. ಆದುದರಿಂದ ವೀರಶೈವರ ಶಕ್ತಿವಿಶಿಷ್ಟಾದ್ವೈತವು ಭೇದಾಭೇದ ಪರವೆಂದು ಇದರ ಅಂತರ್ಭಾವವು ಅದರಲ್ಲಿ ಸಾಧ್ಯವಿಲ್ಲ.

ವೀರಶೈವಧರ್ಮಸಂಸ್ಥಾಪಕ ಆಚಾರ್ಯರು

ಸಿದ್ಧಾಂತ ಎಂದು ಕರೆಯಲ್ಪಡುವ ಆಗಮಗಳಲ್ಲಿ ನಿರೂಪಿತವಾಗಿರುವ ವೀರಶೈವ ಸಿದ್ಧಾಂತದ ಉಪದೇಶವು ಪರಶಿವನ ದಿವ್ಯೌಘ-ಸಿದ್ಧೌಘ ಮುಂತಾದ ರೂಪದಿಂದ ನಿರಂತರವಾಗಿ ಹರಿದುಬಂದಿದೆ ಎಂಬ ಕಾರಣದಿಂದ ಇದು ಸನಾತನವಾದುದು ಎಂದು ತಿಳಿದುಬರುತ್ತದೆ. ಈ ಸನಾತನತ್ವದ ರಕ್ಷಣೆಗಾಗಿಯೇ ಶಿವನ ನಿಕಟವರ್ತಿಗಳಾದ ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣ ಎಂಬ ಹೆಸರಿನ ಐವರು ಗಣಗಳು ಶಿವನ ಅಪ್ಪಣೆಯ ಮೇರೆಗೆ ಪ್ರತಿಯೊಂದು ಯುಗದಲ್ಲಿಯೂ ಸದಾಶಿವನ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಮತ್ತು ಈಶಾನ ಎಂಬ ಐದು ಮುಖಗಳಿಂದ ದಿವ್ಯದೇಹಧಾರಿಗಳಾಗಿ ಭೂಮಂಡಲದಲ್ಲಿ ಅವತರಿಸಿ ಈ ಧರ್ಮದ ತತ್ತ್ವವನ್ನು ಉಪದೇಶಿಸಿದರೆಂದು ಆಗಮಗಳ ಪ್ರಾಮಾಣ್ಯದಿಂದ ತಿಳಿದುಬರುತ್ತದೆ.[೨೦] ಆದುದರಿಂದ ಈ ಐವರು ಆಚಾರ್ಯರನ್ನು ಈ ಧರ್ಮದ ಸ್ಥಾಪಕರೆಂದು ಕರೆಯಲಾಗಿದೆ. ಈ ಪಂಚಾಚಾರ್ಯರಿಂದ ಸ್ಥಾಪಿತವಾದ ಧರ್ಮಪೀಠಗಳು ಬಾಳೇಹೊನ್ನೂರು (ಕರ್ನಾಟಕ), ಉಜ್ಜಯಿನಿ (ಕರ್ನಾಟಕ), ಕೇದಾರ (ಉತ್ತರಾಂಚಲ), ಶ್ರೀಶೈಲ (ಆಂಧ್ರ) ಮತ್ತು ಕಾಶೀ (ಉತ್ತರಪ್ರದೇಶ) ಕ್ಷೇತ್ರಗಳಲ್ಲಿ ಇಂದಿಗೂ ಕೂಡ ಪ್ರಖ್ಯಾತವಾಗಿವೆ. ಈ ಎಲ್ಲ ಧರ್ಮಪೀಠಗಳಲ್ಲಿಯೂ ದಾನಶಾಸನಗಳು, ಶಿಲಾಲೇಖ ಇತ್ಯಾದಿಗಳು ಕಂಡುಬರುತ್ತವೆ. ಲಭ್ಯವಿರುವ ದಾನಶಾಸನ ಮೊದಲಾದ ಐತಿಹಾಸಿಕ ಸಾಮಗ್ರಿಗಳ ಆಧಾರದಿಂದ ಈ ಪಂಚಪೀಠಗಳ ಸ್ಥಾಪನೆಯ ಕಾಲ ಕ್ರಿ.ಶ. ೬ನೆಯ ಶತಮಾನಕ್ಕಿಂತಲೂ ಮೊದಲು ಎಂಬುದು ಅವಶ್ಯವಾಗಿ ತಿಳಿಯುತ್ತದೆ.[೨೧]

---

[೬೯] ಲಿಂಗಧಾರಣಚಂದ್ರಿಕೆ

[೨೦] ವೀರಶೈವ ಸದಾಚಾರ ಸಂಗ್ರಹ, ೧.೪೪-೪೫; ಹಿಂದುತ್ವ, ಪು. ೬೯೫-೬೯೬.

[೨೧] ಈ ವಿಷಯವನ್ನು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳ ‘ವೀರಶೈವ ಪಂಚಪೀಠ ಪರಂಪರೆ’ ಎಂಬ ಕನ್ನಡ ಗ್ರಂಥದಲ್ಲಿ ವಿಸ್ತಾರವಾಗಿ ನಿರೂಪಿಸಲಾಗಿದೆ.

ಅಲ್ಲದೆ, ಕ್ರಿ.ಶ. ೧೨ನೆಯ ಶತಮಾನದಲ್ಲಿದ್ದ ಚಾಲುಕ್ಯ ವಂಶದ ಬಿಜ್ಜಳ ಮಹಾರಾಜನ ಪ್ರಧಾನಮಂತ್ರಿಯಾಗಿದ್ದ ಶ್ರೀ ಬಸವೇಶ್ವರರಿಂದ ವೀರಶೈವ ಧರ್ಮವು ಸ್ಥಾಪಿತವಾಯಿತು ಎಂಬ ದಂತಕತೆಯು ಕೇಳಿಬರುತ್ತಿದೆ. ಈ ವಾದವು ಆಧಾರವಿಲ್ಲದ್ದು. ಬಸವೇಶ್ವರರು ಆ ಕಾಲದಲ್ಲಿದ್ದ ಜಾತವೇದ ಶಿವಾಚಾರ್ಯ ಎಂಬ ವೀರಶೈವ ಆಚಾರ್ಯರಿಂದ ವೀರಶೈವರಿಗೆ ಯೋಗ್ಯವಾದ ಲಿಂಗದೀಕ್ಷೆಯನ್ನು ಪಡೆದರೆಂದು ಅವರ ಚರಿತ್ರೆಯಿಂದ ತಿಳಿಯುತ್ತದೆ. ಆದುದರಿಂದ ಈ ಧರ್ಮದಲ್ಲಿ ದೀಕ್ಷಿತರಾದ ಅವರಿಂದ ಈ ಧರ್ಮವು ಹೆಚ್ಚಾಗಿ ಪ್ರಚಾರವಾಯಿತೆಂದು ಹೇಳಬಹುದು.

ವೀರಶೈವಸಾಹಿತ್ಯ ಮತ್ತು ಅದರ ರಚನಾಕಾರರು

ಕಾಮಿಕದಿಂದ ವಾತುಲದವರೆಗಿನ ಇಪ್ಪತ್ತೆಂಟು ಶಿವಾಗಮಗಳೇ ವೀರಶೈವರಿಗೆ ಆಧಾರವಾದವುಗಳು. ಇವಲ್ಲದೆ ಅಗಸ್ತ್ಯರ ಲಘುಸೂತ್ರವೃತ್ತಿ, ಶಿವಯೋಗಿ ಶಿವಾಚಾರ್ಯ (ಕ್ರಿ.ಶ. ೮೦೦)ರ ಸಿದ್ಧಾಂತ ಶಿಖಾಮಣಿ, ಶ್ರೀಪತಿಪಂಡಿತಾರಾಧ್ಯ (ಕ್ರಿ.ಶ. ೧೧೦೦)ರ ಶ್ರೀಕರಭಾಷ್ಯ, ಮಾಯಿದೇವ (ಕ್ರಿ.ಶ. ೧೫೦೦)ನ ಅನುಭವಸೂತ್ರ, ಸ್ವಪ್ರಭಾನಂದ ಶಿವಾಚಾರ್ಯ (ಕ್ರಿ.ಶ. ೧೭೦೦)ರ ಶಿವಾದ್ವೈತಮಂಜರೀ, ಮರಿತೋಂಟದಾರ್ಯ (ಕ್ರಿ.ಶ. ೧೭೦೦)ರ ವೀರಶೈವಾನಂದ ಚಂದ್ರಿಕೆ ಮುಂತಾದ ನೂರಕ್ಕೂ ಹೆಚ್ಚು ಗ್ರಂಥಗಳು ಸಂಸ್ಕೃತ ಭಾಷೆಯಲ್ಲಿ ದೊರೆಯುತ್ತವೆ. ಇವಲ್ಲದೆ ಕನ್ನಡ, ಮರಾಠೀ, ತೆಲುಗು, ತಮಿಳು ಮತ್ತು ಆಂಗ್ಲ ಭಾಷೆಗಳಲ್ಲಿಯೂ ವೀರಶೈವ ಸಾಹಿತ್ಯ ವಿಪುಲವಾಗಿದೆ.

ವೀರಶೈವದರ್ಶನದ ಇತಿಹಾಸ, ಅದರ ಆಚಾರಪರಂಪರೆ ಹಾಗೂ ಈ ದರ್ಶನದ ಸಂಸ್ಕೃತ ಭಾಷೆಯಲ್ಲಿರುವ ಸಮಗ್ರ ಸಾಹಿತ್ಯ ಇತ್ಯಾದಿಗಳನ್ನು 'ಸಿದ್ಧಾಂತ ಶಿಖಾಮಣಿ ಸಮೀಕ್ಷಾ'[೭೨] ಎಂಬ ನಮ್ಮ ಶೋಧ ಪ್ರಬಂಧದ ಪ್ರಥಮ ಪರಿಚ್ಛೇದದಲ್ಲಿ ವಿಸ್ತಾರವಾಗಿ ನಿರೂಪಿಸಲಾಗಿದೆ. ಇಲ್ಲಿ ಮತ್ತೊಮ್ಮೆ ಪ್ರತಿಪಾದಿಸುವುದರಿಂದ ಪುನರುಕ್ತಿ ದೋಷವಾಗಬಾರದೆಂದು ಇಲ್ಲಿ ಕೇವಲ ವೀರಶೈವ ದರ್ಶನದ ಇತಿಹಾಸವನ್ನು ನಿರೂಪಿಸಲಾಗಿದೆ.

ಪ್ರಕೃತ ಈ ಪ್ರಬಂಧದಲ್ಲಿ ವೀರಶೈವ ದರ್ಶನದ ತತ್ತ್ವತ್ರಯಗಳೊಡನೆ ಕಾಶ್ಮೀರ ಶೈವಸಿದ್ಧಾಂತ ಪರಂಪರೆಯಲ್ಲಿನ ಅದೇ ತತ್ತ್ವಗಳ ಸಾಮ್ಯ, ವೈಷಮ್ಯ, ವೈಶಿಷ್ಟ್ಯಗಳ ವಿಮರ್ಶೆ ಮಾಡಿರುವುದರಿಂದ ಪ್ರಕೃತ ಪರಿಚ್ಛೇದದಲ್ಲಿ ಈ ಎರಡು ದರ್ಶನಗಳ ಇತಿಹಾಸವು ಸ್ವಲ್ಪ ವಿಸ್ತಾರವಾಗಿದೆ. ಆದರೆ ಬೇರೆ ಶೈವದರ್ಶನಗಳ ಅತಿ ಸಂಕ್ಷಿಪ್ತವಾದ ಪರಿಚಯವನ್ನು ಮಾಡಿಕೊಡಲಾಗಿದೆ ಎಂಬುದನ್ನು ವಿದ್ವಾಂಸರು ಅರಿಯಬೇಕು.

■

---

[೭೨] ಈ ಗ್ರಂಥವು ಶೈವಭಾರತೀ ಶೋಧ ಪ್ರತಿಷ್ಠಾನ, ಜಂಗಮವಾಡಿಮಠ, ವಾರಾಣಸಿ, ಇಲ್ಲಿಂದ ೧೯೮೯ರಲ್ಲಿ ಪ್ರಕಟವಾಗಿದೆ.

ಎರಡನೆಯ ಪರಿಚ್ಛೇದ

ಶಕ್ತಿವಿಶಿಷ್ಟಾದ್ವೈತವಿಮರ್ಶೆ

ಶಕ್ತಿವಿಶಿಷ್ಟಾದ್ವೈತ ದರ್ಶನದ ಪರ್ಯಾಯವಾದ ವೀರಶೈವ ದರ್ಶನದ ದಾರ್ಶನಿಕ ತತ್ತ್ವಗಳನ್ನು ಇನ್ನು ಮುಂದೆ ವಿಮರ್ಶಿಸಲಾಗುವುದು. ಇಲ್ಲಿ ತತ್ತ್ವ ಶಬ್ದವು ಪದಾರ್ಥ ಎಂಬುದರ ಪರ್ಯಾಯ ಶಬ್ದವಾಗಿದೆ. 'ರುಚೀನಾಂ ವೈಚಿತ್ರ್ಯಾತ್'[೧] (ರುಚಿಭೇದದಿಂದ) ಎಂಬ ಪುಷ್ಪದಂತನ ಮಾತಿನಂತೆ ದಾರ್ಶನಿಕ ಪದಾರ್ಥಸ್ವರೂಪ ವಿಷಯದಲ್ಲಿ ಮತ್ತು ಅದರ ಸಂಖ್ಯೆಯ ವಿಷಯದಲ್ಲಿ ಭಾರತೀಯ ದಾರ್ಶನಿಕರಲ್ಲಿ ಸಾಮಾನ್ಯವಾಗಿ ಒಮ್ಮತವಿಲ್ಲ. ಒಂದು ವೇಳೆ ಪದಾರ್ಥ ಹಾಗೂ ಸಂಖ್ಯೆಯ ವಿಷಯದಲ್ಲಿ ಅಕಸ್ಮತ್ತಾಗಿ ಒಮ್ಮತ ಕಂಡುಬಂದರೂ ಸಹ ಅವುಗಳ ಸ್ವರೂಪ ನಿರೂಪಣೆಯ ವಿಷಯದಲ್ಲಿ ವೈಲಕ್ಷಣ್ಯವನ್ನು ವಿದ್ವಾಂಸರು ಗುರುತಿಸುತ್ತಾರೆ. ಆದುದರಿಂದ ಇಲ್ಲಿ ಅನೇಕ ದಾರ್ಶನಿಕ ಪಂಥಗಳಿವೆ. ಇವುಗಳ ಮಾರ್ಗದಲ್ಲಿ ಭೇದವಿದ್ದರೂ ಹುಡುಕುವ ವಸ್ತು ಒಂದೇ (ಸೇರುವ ಜಾಗವು ಒಂದೇ). ಇದೇ ಭಾರತೀಯ ದರ್ಶನಗಳ ವೈಶಿಷ್ಟ್ಯ. ತನ್ನ ಗುರಿಯನ್ನು ಮುಟ್ಟಲು ಪ್ರವೃತ್ತವಾದ ಅನೇಕ ಮಾರ್ಗಗಳಲ್ಲಿ ವೀರಶೈವದರ್ಶನದ ಪ್ರಾಮುಖ್ಯವೂ ಸಹ ಇದೆ. ಈ ದರ್ಶನದ ಸಮನ್ವಯ ದೃಷ್ಟಿಯೇ ಅಂತಹ ಪ್ರಾಮುಖ್ಯತೆಯ ಮುಖ್ಯ ಕಾರಣವಾಗಿದೆ. ದ್ವೈತ, ಅದ್ವೈತ ಹಾಗೂ ಜ್ಞಾನ, ಕರ್ಮ ಇವುಗಳ ಸಮನ್ವಯವು ಇಲ್ಲಿ ನಿರೂಪಿತವಾಗಿದೆ ಎಂಬುದನ್ನು ಆಯಾ ಪ್ರಸಂಗಕ್ಕೆ ತಕ್ಕಂತೆ ಅಲ್ಲಲ್ಲಿ ನಿರೂಪಿಸಲಾಗಿದೆ.

ಸಮನ್ವಯವನ್ನು ಹೇಳುವ ವೀರಶೈವ ಸಿದ್ಧಾಂತದಲ್ಲಿ ಪರಶಿವಬ್ರಹ್ಮ ಶಬ್ದದಿಂದ ಹೇಳುವ ಮುಖ್ಯವಾದ ತತ್ತ್ವವು ಒಂದೇ.[೨] ಅದೇ ಗುಣತ್ರಯಾತ್ಮಕ ಮಾಯಾಶಕ್ತಿಯ

---

೧. ಮಹಿಮ್ನಸ್ತೋತ್ರಮ್, ಶ್ಲೋಕ. ೭.

೨. ಅಸ್ತಿ ಸಚ್ಚಿತ್ಸುಖಾಕಾರಮಲಕ್ಷಣಪದಾಸ್ಪದಮ್।
ನಿರ್ವಿಕಲ್ಪಂ ನಿರಾಕಾರಂ ನಿರಸ್ತಾಶೇಷವಿಪ್ಲವಮ್॥
ಪರಿಚ್ಛೇದಕಥಾಶೂನ್ಯಂ ಪ್ರಪಂಚಾತೀತವೈಭವಮ್।
ಪ್ರತ್ಯಕ್ಷಾದಿಪ್ರಮಾಣಾನಾಮಗೋಚರಪದೇ ಸ್ಥಿತಮ್॥
ಶಿವರುದ್ರಮಹಾದೇವಭವಾದಿಪದಸಂಜ್ಞಿತಮ್।
ಅದ್ವಿತೀಯಮನಿರ್ದೇಶ್ಯಂ ಪರಂ ಬ್ರಹ್ಮ ಸನಾತನಮ್॥ -ಸಿ.ಶಿ, ೨.೩,೪,೬
ಏಕ ಏವ ಶಿವಃ ಸಾಕ್ಷಾಚ್ಚಿದಾನಂದಮಯೋ ವಿಭುಃ।
ನಿರ್ವಿಕಲ್ಪೋ ನಿರಾಕಾರೋ ನಿರ್ಗುಣೋ ನಿಷ್ಪ್ರಪಂಚಕಃ॥ -ಸಿ.ಶಿ, ೫.೩೨

ಉಪಾಧಿಯಿಂದ ಪ್ರೇರಯಿತಾ, ಭೋಕ್ತಾ ಮತ್ತು ಭೋಜ್ಯ ಎಂದು ಮೂರು ವಿಧವಾಗುತ್ತದೆ ಎಂದು ವೀರಶೈವಾಚಾರ್ಯರು ವಿವರಿಸಿದ್ದಾರೆ.[೩] ಇಲ್ಲಿ ಶಿವನು ಪ್ರೇರಯಿತಾ, ಜೀವ ಭೋಕ್ತಾ ಮತ್ತು ಜಗತ್ತು ಭೋಜ್ಯ ಎಂದು ತಿಳಿಯಬೇಕೆಂದು ಶ್ರೀ ರೇಣುಕಾಚಾರ್ಯರು ಈ ರೀತಿಯಾಗಿ ಹೇಳುತ್ತಾರೆ:

> ಅತ್ರ ಪ್ರೇರಯಿತಾ ಶಂಭುಃ ಶುದ್ಧೋಪಾಧಿರ್ಮಹೇಶ್ವರಃ।
> ಸಮಿಶ್ರೋಪಾಧಯಃ ಸರ್ವೇ ಭೋಕ್ತಾರಃ ಪಶವಃ ಸ್ಮೃತಾಃ॥
> ಭೋಜ್ಯಮವ್ಯಕ್ತಮಿತ್ಯುಕ್ತಂ ಶುದ್ಧತಾಮಸರೂಪಕಮ್।
> ಅತ್ಯಂತಗೂಢಚೈತನ್ಯಂ ಜಡಮವ್ಯಕ್ತಮುಚ್ಯತೇ॥[೪]

“ಇವುಗಳಲ್ಲಿ ಶುದ್ಧೋಪಾಧಿ ವಿಶಿಷ್ಟನಾದ ಮಹೇಶ್ವರನು ‘ಪ್ರೇರಕ’, ಮಿಶ್ರೋಪಾಧಿಯಿಂದ ಕೂಡಿದ ಎಲ್ಲ ಭೋಕ್ತೃಗಳು (ಜೀವರುಗಳು) ‘ಪಶು’ಗಳೆಂದು ಹೇಳಲ್ಪಟ್ಟಿದ್ದಾರೆ. ಶುದ್ಧತಾಮಸರೂಪವಾದ ಭೋಜ್ಯವನ್ನು ‘ಅವ್ಯಕ್ತ’ವೆಂದು ಅರ್ಥಾತ್ ಪ್ರಕೃತಿಯೆಂದು ಕರೆಯಲಾಗಿದೆ. ಈ ಅವ್ಯಕ್ತವು (ಮಾಯೆ ಅಥವಾ ಪ್ರಕೃತಿ) ಜಡವಾಗಿದ್ದು, ಅತ್ಯಂತ ಗೂಢಚೈತನ್ಯವುಳ್ಳದ್ದಾಗಿದೆ.”

ಆದುದರಿಂದ ಶಿವ, ಜೀವ ಮತ್ತು ಜಗತ್ತು ಎಂಬ ಮೂರು ಪದಾರ್ಥಗಳ ವಿಷಯವನ್ನು ಈಗ ಪರಿಶೀಲಿಸಬೇಕು. ಆದುದರಿಂದಲೇ ದಾರ್ಶನಿಕ ಪದದ ಅರ್ಥ ನಿರೂಪಣೆಯ ಸಂದರ್ಭದಲ್ಲಿ- “ಶಿವ, ಜೀವ, ಶಕ್ತಿ ಎಂದು ಪದಾರ್ಥಗಳು ಮೂರು”[೫] ಎಂದು ಶ್ರೀ ನೀಲಕಂಠ ಶಿವಾಚಾರ್ಯರು ವಿವರಿಸಿದ್ದಾರೆ. ಜಗತ್ತು ಶಕ್ತಿಯಂತೆ ಪರಿಣಾಮಭೂತವಾದುದರಿಂದ ಇಲ್ಲಿ ಶಕ್ತಿ ಶಬ್ದದಿಂದ ಜಗತ್ತು ಎಂದು ತಿಳಿಯಬೇಕೆಂದು “ಸೂಕ್ಷ್ಮಸ್ಥೂಲಾತ್ಮಕ ವಿಶ್ವಮೇವ ಶಕ್ತಿಃ”[೬] (ಸೂಕ್ಷ್ಮ, ಸ್ಥೂಲ ರೂಪವಾದ ವಿಶ್ವವೇ ಶಕ್ತಿ) ಎಂದು ಅವರೇ ಹೇಳಿದ್ದಾರೆ.

ವೀರಶೈವದರ್ಶನದಂತೆ ಕಾಶ್ಮೀರಶೈವದರ್ಶನ ಮತ್ತು ಸಿದ್ಧಾಂತಶೈವದಲ್ಲಿ ಮೂರು ತತ್ತ್ವಗಳಿವೆ. ಅವುಗಳನ್ನು ಇಲ್ಲಿ ಪತಿ, ಪಶು, ಪಾಶ[೭] ಶಬ್ದಗಳಿಂದ ಕರೆಯಲಾಗಿದೆ.

---

[೩] ಗುಣತ್ರಯಾತ್ಮಿಕಾ ಶಕ್ತಿರ್ಬ್ರಹ್ಮನಿಷ್ಠಾ ಸನಾತನೀ।
ತದ್ವೈಷಮ್ಯಾತ್ ಸಮುತ್ಪನ್ನಾ ತಸ್ಮಿನ್ ವಸ್ತುತ್ರಯಾಭಿಧಾ॥
ಭೋಕ್ತಾ ಭೋಜ್ಯಂ ಪ್ರೇರಯಿತಾ ವಸ್ತುತ್ರಯಮಿದಂ ಸ್ಮೃತಮ್॥
-ಸಿ.ಶಿ, ೫.೩೫,೩೭

[೪] ಸಿ.ಶಿ, ೫.೩೮-೩೯.

[೫] ಶಿವಾದ್ವೈತಪರಿಭಾಷಾ, ಪು. ೧.

[೬] ಶಿವಾದ್ವೈತಪರಿಭಾಷಾ, ಪು. ೨.

[೭] ಶೈವಾಗಮೇಷು ಮುಖ್ಯಂ ಪತಿಪಶುಪಾಶಾ ಇತಿ ಕ್ರಮಾತ್ ತ್ರಿತಯಮ್।
ತತ್ರ ಪತಿಃ ಶಿವ ಉಕ್ತಃ ಪಶವೋ ಹ್ಯಣವೋಽರ್ಥಪಂಚಕಮ್ ಪಾಶಃ॥
-ತತ್ತ್ವಪ್ರಕಾಶಃ, ಶ್ಲೋಕ-೫

ಪದಾರ್ಥಗಳ ಸಂಖ್ಯೆಯ ಎಣಿಕೆಯ ವಿಷಯದಲ್ಲಿ ವೀರಶೈವ, ಕಾಶ್ಮೀರಶೈವ, ಸಿದ್ಧಾಂತಶೈವ -ಇವುಗಳಲ್ಲಿ ಒಮ್ಮತವಿದ್ದರೂ ಸಹ ಅವುಗಳ ಸ್ವರೂಪದ ವಿಷಯದಲ್ಲಿ ಸ್ವಲ್ಪ ವೈಷಮ್ಯ ಮತ್ತು ಸ್ವಲ್ಪ ಸಾಮ್ಯವನ್ನು ವಿದ್ವಾಂಸರು ಗುರುತಿಸಿದ್ದಾರೆ. ಆದುದರಿಂದ ಈ ಪರಿಚ್ಛೇದದಲ್ಲಿ ವೀರಶೈವದರ್ಶನದಲ್ಲಿ ಅಂಗೀಕರಿಸಿರುವ ಮೂರು ಪದಾರ್ಥಗಳ ಸ್ವರೂಪವನ್ನು ಕಾಶ್ಮೀರಶೈವ-ಸಿದ್ಧಾಂತಶೈವರು ಅಂಗೀಕರಿಸಿರುವ ಮೂರು ಪದಾರ್ಥಗಳ ಸಾಮ್ಯ-ವೈಶಿಷ್ಟ್ಯಾದಿ ರೂಪಗಳೊಡನೆ ಹೋಲಿಸಿ, ಸಂಕ್ಷಿಪ್ತವಾಗಿ ವಿಮರ್ಶಿಸಲಾಗುವುದು.

ಪರಶಿವ

ಪರಶಿವ ವೀರಶೈವರ ಪರಮತತ್ತ್ವ. ಅದು ಲಿಂಗ, ಸ್ಥಲ, ಬ್ರಹ್ಮ ಮುಂತಾದ ಶಬ್ದಗಳಿಂದ ಕರೆಯಲ್ಪಡುತ್ತದೆ.[೮] ಅದು ಒಂದೇ "ಏಕಮೇವಽದ್ವಿತೀಯಮ್",[೯] "ಏಕೋ ರುದ್ರೋ ನ ದ್ವಿತೀಯಾಯತಸ್ಥೇ"[೧೦] ಮುಂತಾದ ಶ್ರುತಿವಾಕ್ಯಗಳಿಂದ ಪರಶಿವತತ್ತ್ವದ ಏಕತ್ವವು ತಿಳಿದುಬರುತ್ತದೆ. ಈ ದರ್ಶನದಲ್ಲಿ ಪರಶಿವನು ಸಗುಣ-ನಿರ್ಗುಣ ಎಂಬ ಉಭಯರೂಪಿಯಾಗಿದ್ದಾನೆ. ಸಗುಣ-ನಿರ್ಗುಣ ಶಬ್ದಗಳನ್ನು ಇಲ್ಲಿ ಸಕಲ-ನಿಷ್ಕಲ ಶಬ್ದಗಳಿಂದಲೂ ಸಹ ಕರೆಯಲಾಗುತ್ತಿದೆ. ತನ್ನ ಶಕ್ತಿಯ ಸಂಕೋಚದಿಂದ ಅದು ನಿರ್ಗುಣ ಎಂತಲೂ, ಮತ್ತು ಆ ಶಕ್ತಿಯ ವಿಕಾಸದಿಂದ ಸಗುಣ ಎಂದೂ ಪ್ರತಿಪಾದಿತವಾಗಿದೆ. ಭಾಷ್ಯಕಾರರಾದ ಶ್ರೀಪತಿಪಂಡಿತಾರಾಧ್ಯರು ಹೀಗೆ ಹೇಳುತ್ತಾರೆ:

> ಸೃಷ್ಟೇಃ ಪೂರ್ವಂ ಮಹಾದೇವಃ ಶಕ್ತಿಸಂಕೋಚಹೇತುನಾ।
> ನಿರ್ಗುಣತ್ವೇನ ಶಾಸ್ತ್ರೇಷು ಗೀಯತೇ ತತ್ತ್ವವೇದಿಭಿಃ॥
> ಸೃಷ್ಟ್ಯಾದೌ ಪರಮೇಶಸ್ಯ ಶಕ್ತೇಃ ಪ್ರಾಚುರ್ಯವೈಭವಾತ್।
> ಸರ್ವಜ್ಞತ್ವಾದಿಕಲ್ಯಾಣಗುಣವಾನಿತಿ ಕೀರ್ತ್ಯತೇ॥[೧೧]

"ಸೃಷ್ಟಿಗೆ ಮೊದಲು ಮಹಾದೇವನು ಶಕ್ತಿಯ ಸಂಕೋಚದಿಂದ ನಿರ್ಗುಣನಾಗಿದ್ದನೆಂದು ಶಾಸ್ತ್ರಗಳಲ್ಲಿ ತತ್ತ್ವಜ್ಞಾನಿಗಳು ಹೇಳಿದ್ದಾರೆ. ಸೃಷ್ಟಿ

---

[೮] ಲಯಗತ್ಯರ್ಥಹೇತುಭೂತತ್ವಾತ್ ಸರ್ವದೇಹಿನಾಮ್।
ಲಿಂಗಮಿತ್ಯುಚ್ಯತೇ ಸಾಕ್ಷಾಚ್ಛಿವಃ ಸಕಲನಿಷ್ಕಲಃ॥ -ಅನುಭವಸೂತ್ರ, ೩.೪
ಯತ್ರಾದೌ ಸ್ಥೀಯತೇ ವಿಶ್ವಂ ಪ್ರಾಕೃತಂ ಪೌರುಷಂ ಯತಃ।
ಲೀಯತೇ ಪುನರಂತೇ ಚ ಸ್ಥಲಂ ತತ್ಪ್ರೋಚ್ಯತೇ ತತಃ॥ -ಅನುಭವಸೂತ್ರ, ೨.೪
ಬ್ರಹ್ಮೇತಿ ವ್ಯಪದೇಶಸ್ಯ ವಿಷಯಂ ಯಂ ಪ್ರಚಕ್ಷತೇ।
ವೇದಾಂತಿನೋ ಜಗನ್ಮೂಲಂ ತನ್ನಮಾಮಿ ಪರಂ ಶಿವಮ್॥ -ಸಿ.ಶಿ, ೧.೨

[೯] ಛಾಂದೋಗ್ಯೋಪನಿಷತ್, ೬-೨-೧

[೧೦] ಶ್ವೇತಾಶ್ವತರೋಪನಿಷತ್, ೩.೨

[೧೧] ಬ್ರಹ್ಮಸೂತ್ರ ಶ್ರೀಕರಭಾಷ್ಯ, ೧-೩-೭

ಮೊದಲಾದವುಗಳಲ್ಲಿ ಪರಮೇಶ್ವರನು ಶಕ್ತಿಯ ಪ್ರಾಚುರ್ಯದ ವೈಭವದಿಂದ ಸರ್ವಜ್ಞತ್ವ ಮೊದಲಾದ ಮಂಗಳಕರವಾದ ಗುಣಗಳಿಂದ (ಸಗುಣ) ಕೂಡಿದ್ದನೆಂದು ಹೇಳಲಾಗಿದೆ."

ಆದುದರಿಂದ ವೀರಶೈವಸಿದ್ಧಾಂತದಲ್ಲಿ "ಅಶಬ್ದಮಸ್ಪರ್ಶಮರೂಪಮವ್ಯಯಮ್"[೧೨] "ಅಸ್ಥೂಲಮನಣ್ವಹ್ರಸ್ವಮದೀರ್ಘಮಲೋಹಿತಮ್"[೧೩] (ಅದು ಅಸ್ಥೂಲ, ಅನಣು, ಅಹ್ರಸ್ವ, ಅದೀರ್ಘ, ಅಲೋಹಿತ) ಇತ್ಯಾದಿ ನಿರ್ಗುಣ ಶ್ರುತಿವಾಕ್ಯಗಳು ಶಕ್ತಿಸಂಕೋಚ ಪರವಾಗಿಯೂ, "ಸ ಈಕ್ಷಾಂ ಚಕ್ರೇ"[೧೪] (ಅವನು ಮನಸ್ಸು ಮಾಡಿದನು), "ತದೈಕ್ಷತ ಬಹು ಸ್ಯಾಂ ಪ್ರಜಾಯೇಯ"[೧೫] (ಆ ಸದ್ವಸ್ತುವು ಬಹುವಾಗುವೆನು ಎಂದು ಯೋಚಿಸಿತು) ಮುಂತಾದ ನಿರ್ಗುಣ ಪ್ರತಿಪಾದಕ ಶ್ರುತಿವಾಕ್ಯಗಳು ಸೃಷ್ಟಿಗೆ ಮೊದಲು ಅದರ ಶಕ್ತಿವಿಕಾಸ ಪರವಾಗಿಯೂ ಇವೆಯೆಂಬುದನ್ನು ಸಿದ್ಧಪಡಿಸುತ್ತವೆ. ಇಲ್ಲಿ ಇಷ್ಟನ್ನು ತಿಳಿಯಬೇಕು- ಅದ್ವೈತ ವೇದಾಂತದಲ್ಲಿ ಹೇಳಿರುವ ಯಾವ ನಿರ್ಗುಣಬ್ರಹ್ಮವಿದೆಯೋ ಅದು ನಿರ್ವಿಶೇಷವೂ ಹೌದು. ಇಲ್ಲಿ ನಿರ್ಗುಣ ಪರಶಿವನು ನಿರ್ವಿಶೇಷನಲ್ಲ, ಆದರೆ ಶಕ್ತಿಯ ಇಚ್ಛಾ, ಜ್ಞಾನ, ಕ್ರಿಯಾ ಇತ್ಯಾದಿ ರೂಪ ವಿಕಾಸದ ಅಭಾವದಿಂದ ಅವನು ನಿರ್ಗುಣ ಎಂದು ಹೇಳಿದರೂ ಕೂಡ ಚಿತ್‌ಶಕ್ತಿಯ ವಿಶಿಷ್ಟತ್ವದಿಂದ ಸವಿಶೇಷನೂ ಹೌದು. ಆದುದರಿಂದಲೇ ಶ್ರೀ ರೇಣುಕಾಚಾರ್ಯರು-

> ಪರಿಚ್ಛೇದಕಥಾಶೂನ್ಯಂ ಪ್ರಪಂಚಾತೀತವೈಭವಮ್।
> ಪ್ರತ್ಯಕ್ಷಾದಿಪ್ರಮಾಣಾನಾಮಗೋಚರಪದೇ ಸ್ಥಿತಮ್॥
> ಸ್ವಪ್ರಕಾಶಂ ಪರಾಕಾಶಮನೌಪಮ್ಯಮನಾಮಯಮ್।
> ಸರ್ವಜ್ಞಂ ಸರ್ವಗಂ ಶಾಂತಂ ಸರ್ವಶಕ್ತಿನಿರಂಕುಶಮ್॥[೧೬]

"ಪರಿಚ್ಛೇದ ವಾರ್ತಾರಹಿತವೂ, ಪ್ರಪಂಚಾತೀತ ವೈಭವಯುತವೂ, ಪ್ರತ್ಯಕ್ಷಾದಿ ಪ್ರಮಾಣಗಳಿಗೆ ಅಗೋಚರವೂ, ಸ್ವಯಂ ಪ್ರಕಾಶಮಾನವೂ, ಪರಾಕಾಶ ಸ್ವರೂಪವೂ, ಉಪಮಾತೀತವೂ, ಜನನ-ಮರಣಾದಿ ದೋಷರಹಿತವೂ, ಸರ್ವಜ್ಞವೂ, ಸಮಸ್ತ ಪ್ರಪಂಚ ವ್ಯಾಪಕವೂ, ಶಾಂತವೂ, ಸರ್ವಶಕ್ತಿ ಸಮನ್ವಿತವೂ, ಪ್ರತಿಬಂಧ ರಹಿತವೂ ಆದ ಪರಶಿವಬ್ರಹ್ಮವು ಪ್ರಕಾಶಿಸುತ್ತಿರುವುದು" ಎಂದು ನಿರ್ಗುಣ ಪರಶಿವ ಸ್ವರೂಪ ನಿರೂಪಣೆಯ ಸಂದರ್ಭದಲ್ಲಿ ಅವನಿಗೆ ಶಕ್ತಿಯುಕ್ತನೆಂದು ಸೂಚಿಸಿದ್ದಾರೆ. ಆದ್ದರಿಂದ ಚಿತ್‌ಶಕ್ತಿ ವಿಶಿಷ್ಟನಾದ ಪರಶಿವನು ನಿರ್ಗುಣನೆಂದೂ, ಚಿತ್‌ಶಕ್ತಿ ಪರಿಣಾಮಭೂತವಾದ ಇಚ್ಛಾ, ಜ್ಞಾನ ಮುಂತಾದ ಶಕ್ತಿವಿಶಿಷ್ಟನು ಸಗುಣನೆಂದು ತಿಳಿಯುತ್ತದೆ.

---

[೧೨] ಕಠ.ಉ, ೧.೩.

[೧೩] ಬೃ.ಉ, ೩-೮-೮.

[೧೪] ಪ್ರ.ಉ, ೬.೩.

[೧೫] ಛಾಂ.ಉ, ೬-೨-೩.

[೧೬] ಸಿ.ಶಿ, ೨.೪-೫.

ಕಾಶ್ಮೀರಶೈವವೂ ಕೂಡ ಪರಶಿವನ ವಿಶ್ವೋತ್ತೀರ್ಣ ಮತ್ತು ವಿಶ್ವಮಯ ಎಂಬ ಎರಡು ರೂಪಗಳನ್ನು ಹೊಂದಿದೆ ಎಂದು ಅದ್ವೈತವಾದಿಗಳು ಅಂಗೀಕರಿಸಿದ್ದಾರೆ. ಅವುಗಳಲ್ಲಿ ವಿಶ್ವೋತ್ತೀರ್ಣನಾದ ಯಾವ ಪರಶಿವನಿರುವನೋ ಅವನೂ ಸಹ ವಿಮರ್ಶಶಕ್ತಿವಿಶಿಷ್ಟ ಎಂದೇ ಅವರಿಂದ ತಿಳಿಯಲ್ಪಡುತ್ತದೆ. ಈ ವಿಷಯದಲ್ಲಿ ಕಾಶ್ಮೀರಶೈವ, ವೀರಶೈವ ಇವುಗಳಲ್ಲಿ ವಿಚಾರ ಸಾಮ್ಯವು ಕಂಡುಬರುತ್ತದೆ. ಎರಡೂ ದರ್ಶನಗಳಲ್ಲಿಯೂ ಸಹ ವಿಶ್ವೋತ್ತೀರ್ಣ ಪರಶಿವನು ಮೂವತ್ತಾರು ತತ್ತ್ವಗಳನ್ನು ಅತಿಕ್ರಮಿಸಿದವನು. ಸಿದ್ಧಾಂತಶೈವದಲ್ಲಿ ಅಂಗೀಕರಿಸಿರುವ ತತ್ತ್ವತ್ರಯಗಳಲ್ಲಿ ಮೊದಲನೆಯ ತತ್ತ್ವವು ಪತಿರೂಪದಲ್ಲಿದ್ದು, ಅದು ಮೂವತ್ತಾರು ತತ್ತ್ವಗಳಲ್ಲಿ ಮೊದಲನೆಯ ಶಿವತತ್ತ್ವವೇ ಆಗಿದೆ.[೧೭] ಅದೂ ಸಹ ವಿಶ್ವೋತ್ತೀರ್ಣತ್ವ ಎಂದು ಅದ್ವೈತವಾದಿಗಳು ಅಭಿಪ್ರಾಯಪಡುತ್ತಾರೆ.

"ಲಕ್ಷಣಪ್ರಮಾಣಾಭ್ಯಾಂ ವಸ್ತುಸಿದ್ಧಿಃ" (ಲಕ್ಷಣ ಪ್ರಮಾಣಗಳಿಂದ ವಸ್ತುವಿನ ಸಿದ್ಧಿ) ಎಂಬ ನ್ಯಾಯದಂತೆ ಲಕ್ಷಣದ ಮೂಲಕವೇ ವಸ್ತುವಿನ ಸ್ವರೂಪವನ್ನು ನಿರೂಪಿಸಬೇಕು. ಇಲ್ಲಿ ಪ್ರತಿಪಾದಿಸುವ ಪರಶಿವನ ನಿರ್ದುಷ್ಟ ಲಕ್ಷಣವು ಏನೆಂದು ತಿಳಿಯಲು ಅಪೇಕ್ಷಿಸುವವರಿಗೆ ಶ್ರೀ ನೀಲಕಂಠ ಶಿವಾಚಾರ್ಯರು ಹೀಗೆ ಹೇಳಿದ್ದಾರೆ- "ತತ್ರ ಸೂಕ್ಷ್ಮಚಿದಚಿದ್ರೂಪಶಕ್ತಿವಿಶಿಷ್ಟತ್ವಂ ಪರಶಿವಸ್ಯ ಲಕ್ಷಣಮ್" (ಸೂಕ್ಷ್ಮ ಚಿತ್ ಅಚಿತ್ ರೂಪ ಶಕ್ತಿವಿಶಿಷ್ಟತ್ವವೇ ಪರಶಿವನ ಲಕ್ಷಣ). ಜೀವಾತ್ಮನಲ್ಲಿ ಅತಿವ್ಯಾಪ್ತಿಯ ನಿವಾರಣೆಯ ಉದ್ದೇಶದಿಂದ ಶಕ್ತಿಗೆ ಸೂಕ್ಷ್ಮ ಎಂಬ ವಿಶೇಷಣವನ್ನು ಕೊಡಲಾಗಿದೆ. ಸೂಕ್ಷ್ಮತ್ವ ಎಂದರೆ ನಿರ್ಮಲತ್ವ. ತ್ರಿಕಾಲದಲ್ಲಿಯೂ ಯಾವ ಬಾಧೆಯಿಲ್ಲದೆ (ನಿರಂತರವಾಗಿ) ಮಲದ ಅತ್ಯಂತಾಭಾವಯುಕ್ತವೇ ನಿರ್ಮಲತ್ವದ ಲಕ್ಷಣವು. ಇದರಿಂದ ಸ್ಪಷ್ಟವಾಗುವುದೇನೆಂದರೆ ಮುಕ್ತಿಗೂ ಮೊದಲೇ ಮಲವಿಶಿಷ್ಟವಾದ ಮುಕ್ತಾವಸ್ಥೆಯ ಮಲವು ಅತ್ಯಂತಾಭಾವರೂಪವಾದ ಮುಕ್ತಾವಸ್ಥೆಯ ಲಕ್ಷಣಕ್ಕೆ ಅತಿವ್ಯಾಪ್ತಿಯಾಗುತ್ತದೆ. ಆದುದರಿಂದ ಮುಕ್ತಾವಸ್ಥೆಯಲ್ಲಿ ಮಲಾತ್ಯಂತಾಭಾವವಿರುವ ಮುಕ್ತಾತ್ಮರಲ್ಲಿ ಅತಿವ್ಯಾಪ್ತಿ ಬರುವುದಿಲ್ಲ, ಮುಕ್ತಿಗೆ ಪೂರ್ವದಲ್ಲಿ ಮಲದಿಂದ ಕೂಡಿರುವುದರಿಂದ ಅವರೂ ಕೂಡ ಶಿವಸ್ವರೂಪಿಯಾದ್ದರಿಂದ ಬ್ರಹ್ಮನ ಲಕ್ಷಣವನ್ನು ಒಪ್ಪಿಕೊಳ್ಳುವುದರಿಂದ ಅನಂತ ಬ್ರಹ್ಮರನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಆಗಲಿ ಎಂದರೆ- ಏಕಮೇವಾದ್ವಿತೀಯಮ್[೧೮] ಇವೇ ಮೊದಲಾದ ನೂರಾರು ಶ್ರುತಿಗಳ ವಿರೋಧ ಬರುವುದು ಮತ್ತು ಅದ್ವೈತ ಹಾನಿಯಾಗುವುದು. ಈ ಮೇಲೆ ಹೇಳಿದ ಲಕ್ಷಣದಲ್ಲಿ ಶಕ್ತಿಯ ಸಂಬಂಧವು ಅವಿನಾಭಾವವೆಂದು ತಿಳಿಯಬೇಕು. ಆದುದರಿಂದ ಶಕ್ತಿ ಮತ್ತು ಶಕ್ತಿವಂತನಲ್ಲಿ ಅದ್ವೈತ ಹಾನಿಯು ಬರುವುದಿಲ್ಲ. ಏಕೆಂದರೆ ಧರ್ಮ ಮತ್ತು ಧರ್ಮಿಗಳು ಯಾವಾಗಲೂ

---

[೧೭] "ತತ್ರ ಪತಿಃ ಶಿವ ಉಕ್ತಃ" -ತತ್ತ್ವಪ್ರಕಾಶಃ, ೫.

[೧೮] ಛಾ.ಉ, ೬-೩೨-೧.

ಅಭೇದವಾಗಿರುತ್ತವೆ. ಸತ್-ಚಿತ್-ಆನಂದಗಳ ಲಕ್ಷಣವನ್ನು ಮತ್ತೊಮ್ಮೆ ಹೇಳಬೇಕಾದುದಿಲ್ಲ. ಏಕೆಂದರೆ ಪರಶಿವನ ಧರ್ಮಿಗಳಾದ ಅವುಗಳೂ ಕೂಡ ಪರಶಿವನ ಶಕ್ತಿಸ್ವರೂಪಗಳಾಗಿವೆ."[೧೯] ಇದು ಪರಶಿವನ ಸ್ವರೂಪ ಲಕ್ಷಣವು. ಅವನ ತಟಸ್ಥ ಲಕ್ಷಣವು ಜಗತ್ತಿನ ಸೃಷ್ಟಿ ಮೊದಲಾದವುಗಳಿಗೆ ಕಾರಣನು ಎಂದು ತಿಳಿಯಬೇಕು. ಅದನ್ನು- 'ಯತೋ ವಾ ಇಮಾನಿ ಭೂತಾನಿ ಜಾಯಂತೇ'[೨೦] 'ಜನ್ಮಾದ್ಯಸ್ಯ ಯತಃ'[೨೧] ಇತ್ಯಾದಿ ಶ್ರುತಿಸೂತ್ರಾದಿಗಳಿಂದ ಪ್ರತಿಪಾದಿಸಲಾಗಿದೆ. ಇದರಿಂದ ಪರಶಿವನ ಜಗತ್ಕರ್ತೃತ್ವವು ಸಿದ್ಧಿಯಾಗುತ್ತದೆ. ಅವನು ಶಕ್ತಿವಿಶಿಷ್ಟನಾಗಿರುವುದರಿಂದ ಶಕ್ತಿಯಲ್ಲಿ ಉಪಾದಾನ ಕಾರಣ, ಪರಶಿವನಲ್ಲಿ ನಿಮಿತ್ತಕಾರಣವಿದೆ ಎಂದು ತಿಳಿಯಬೇಕು. ಈ ರೀತಿಯಾಗಿ ಪರಶಿವನು ಜಗತ್ ಸೃಷ್ಟಿಯಲ್ಲಿ ಅಭಿನ್ನನಿಮಿತ್ತೋಪಾದಾನಕಾರಣನೆಂದು ಅಂತಿಮ ನಿರ್ಣಯವಾಗುತ್ತದೆ. ಅಲ್ಲದೆ, ನಾವು ನೋಡುತ್ತಿರುವ ಈ ಪ್ರಪಂಚದಲ್ಲಿ- ಭೂಮಿಯಲ್ಲಿ ಗುರುತ್ವಾಕರ್ಷಣಶಕ್ತಿ, ನೀರಿನಲ್ಲಿ ಆಪ್ಯಾಯನಶಕ್ತಿ, ಅಗ್ನಿಯಲ್ಲಿ ಜ್ವಲನಶಕ್ತಿ, ವಾಯುವಿನಲ್ಲಿ ಸ್ಪಂದನಶಕ್ತಿ, ಆಕಾಶದಲ್ಲಿ ವ್ಯಾಪನಶಕ್ತಿ, ಮರ-ಬಳ್ಳಿ ಇತ್ಯಾದಿಗಳಲ್ಲಿ ನೀರು ಮೊದಲಾದವುಗಳ ಆಕರ್ಷಣಶಕ್ತಿ, ವನಸ್ಪತಿಗಳಲ್ಲಿ ರೋಗನಿವಾರಣಶಕ್ತಿ -ಈ ವಿಧವಾಗಿ ವಸ್ತುವಿನಿಂದ ಜನಿಸಿದ ಎಲ್ಲವೂ ಕೂಡ ಶಕ್ತಿವಿಶಿಷ್ಟವನ್ನೇ ಅನುಭವಿಸುತ್ತಿವೆ. ಇದು ಅನುಭವದಿಂದಲೋ ಅಥವಾ ಯುಕ್ತಿಯಿಂದಲೋ ಪ್ರಪಂಚಕ್ಕೆ ಕಾರಣೀಭೂತನಾದ ಪರಶಿವನ ವಿಷಯದಲ್ಲಿಯೂ ಕೂಡ ವಿಲಕ್ಷಣದಿಂದ ಶಕ್ತಿವಿಶಿಷ್ಟತ್ವವನ್ನು ಅಂಗೀಕರಿಸಬೇಕು. ಇದನ್ನು 'ಮಹಾರ್ಥಮಂಜರಿ'ಯ 'ಪರಿಮಳ' ಎಂಬ ವ್ಯಾಖ್ಯಾನದಲ್ಲಿ ಸಂವಿದುಲ್ಲಾಸಕ್ಕೆ ಸಂಬಂಧಿಸಿದ ಶ್ಲೋಕದಲ್ಲಿ ಈ ರೀತಿಯಾಗಿ ಹೇಳಲಾಗಿದೆ:

ಔಷ್ಣ್ಯಂ ಹುತಾಶ ಇವ ಶೀತಲಿಮಾನಮಿಂದೌ
ಶಯ್ಯಾಸು ಮಾರ್ದವಮಿವಾಶ್ಮಸು ಕರ್ಕಶತ್ವಮ್।
ಬಾಹ್ಯೇಷು ಮೋಹ ಇವ ಯೋಗಿಷು ಚ ಪ್ರಬೋಧಃ
ಸ್ವಾತಂತ್ರ್ಯಮಸ್ತಿ ಹಿ ನಿಯಂತ್ರಯಿತುರ್ಮನ್ಮೇ॥

"ಬೆಂಕಿಯಲ್ಲಿ ಉಷ್ಣಗುಣವಿರುವಂತೆ ಚಂದ್ರನಲ್ಲಿ ತಂಪು ಗುಣವಿದೆ. ಹಾಸಿಗೆಯಲ್ಲಿ ಮೃದುತ್ವವಿರುವಂತೆ ಕಲ್ಲಿನಲ್ಲಿ ಕರ್ಕಶತ್ವವಿದೆ. ಬಾಹ್ಯವಸ್ತುಗಳಲ್ಲಿ ಮೋಹವಿರುವಂತೆ ಯೋಗಿಗಳಲ್ಲಿ ಶ್ರೇಷ್ಠವಾದ ಜ್ಞಾನವಿದೆ. ನಿಯಂತ್ರಯಿತುವಾದ ನನ್ನಲ್ಲಿ ಮಹತ್ತಾದ ಸ್ವಾತಂತ್ರ್ಯದಿಂದ ಕೂಡಿದ ಶಕ್ತಿಯಿದೆ."

ಆದುದರಿಂದ ಶಕ್ತಿವಿಶಿಷ್ಟವಾದ ಜಗತ್ತಿನ ಕರ್ತನಾದ ಪರಶಿವನೂ ಕೂಡ ಶಕ್ತಿವಿಶಿಷ್ಟ ಎಂಬ ವಿಷಯದಲ್ಲಿ ಯಾವುದೇ ಸಂದೇಹವಿರುವುದಿಲ್ಲ.

---

೧೯. ಶಿ.ಪ, ಪು. ೪

೨೦. ತೈ.ಉ, ೩.೧

೨೧. ಬ್ರ.ಸೂ, ೧-೧-೨

ವೀರಶೈವ ದರ್ಶನಾಂತರ್ಗತವಾದ ಪರಶಿವತತ್ತ್ವವು ಹೇಗೆ ಒಂದು ಶಕ್ತಿವಿಶಿಷ್ಟವೋ ಹಾಗೆಯೇ ಕಾಶ್ಮೀರಶೈವದರ್ಶನಾಂತರ್ಗತವಾದ ಪರಶಿವತತ್ತ್ವವು ಸಿದ್ಧಾಂತಶೈವರು ಅಂಗೀಕರಿಸಿರುವ ಪತಿ ಶಬ್ದದ ಪರ್ಯಾಯವಾದ ಶಿವತತ್ತ್ವವು ಶಕ್ತಿವಿಶಿಷ್ಟವೆಂದು ಅಂಗೀಕರಿಸಲಾಗಿದೆ. ಕಾಶ್ಮೀರಶೈವದಲ್ಲಿ ಈ ಶಕ್ತಿಯು 'ವಿಮರ್ಶರೂಪ'ವೆಂತಲೂ ಮತ್ತು ಸಿದ್ಧಾಂತಶೈವದಲ್ಲಿ ಅದೇ 'ಚಿದ್ರೂಪ'[೨೨] ಎಂತಲೂ ಪ್ರತಿಪಾದಿಸಲಾಗಿದೆ.

ಕಾಶ್ಮೀರಶೈವದರ್ಶನದಲ್ಲಿ ಪರಶಿವನ ಸ್ವರೂಪ

ಕಾಶ್ಮೀರಶೈವದರ್ಶನದಲ್ಲಿ ಶಿವನು ಪ್ರಕಾಶರೂಪನು ಮತ್ತು ಶಕ್ತಿಯು ಸ್ವಾತಂತ್ರ್ಯಾಪರ ಪರ್ಯಾಯವಾದ ವಿಮರ್ಶರೂಪಿಯಾಗಿದ್ದಾಳೆ. ವಿಮರ್ಶಶಕ್ತಿಯು ಅನನ್ಯಾಪೇಕ್ಷೆ[೨೩] ಎಂದು ಅದರ ಸ್ವಾತಂತ್ರ್ಯಶಕ್ತಿ ಎಂದು ಮತ್ತೊಂದು ಪ್ರಸಿದ್ಧವಾದ ಹೆಸರು. ವಿಮರ್ಶ ಶಬ್ದಕ್ಕೆ ಸ್ಫುರತ್ತಾ, ಮಹಾಸತ್ತಾ, ಸ್ಪಂದಃ, ಪರಾವಾಕ್ ಮುಂತಾದ ಪರ್ಯಾಯ ಹೆಸರುಗಳಿವೆ.[೨೪] "ಪ್ರಕಾಶವು ವಿಮರ್ಶಶೂನ್ಯವಾಗುವುದಿಲ್ಲ",[೨೫] "ಪ್ರಕಾಶಕ್ಕೆ ವಿಮರ್ಶವೇ ಜೀವಾಳ",[೨೬] "ಪ್ರಕಾಶವು ವಿಮರ್ಶಮಯವೂ ಹೌದು",[೨೭] "ವಿಮರ್ಶ ಶರೀರವೇ ಪ್ರಕಾಶಯುಕ್ತವಾಗಿದೆ"[೨೮] ಮುಂತಾದ ಅಭಿನವಗುಪ್ತರ ಮಾತುಗಳಿಂದ ಪ್ರಕಾಶ-ವಿಮರ್ಶಾಪರವಾದ ಪರ್ಯಾಯ ಶಬ್ದಗಳು ಶಿವ-ಶಕ್ತಿಯರ ಐಕ್ಯವನ್ನು ಪ್ರತಿಪಾದಿಸುತ್ತವೆ. ಆದುದರಿಂದ ಇಲ್ಲಿ ಪ್ರಕಾಶ-ವಿಮರ್ಶಾತ್ಮಕನಾದ ಶಿವನೇ ಶ್ರೇಷ್ಠ ತತ್ತ್ವವೆಂದು ತಿಳಿದುಬರುತ್ತದೆ. ಈ ರೀತಿಯಾಗಿ ಇಲ್ಲಿ ಶಬ್ದಾರ್ಥಾತ್ಮಕ ಶಿವ-ಶಕ್ತಿ ಸಾಮರಸ್ಯಾತ್ಮಕವಾದ ಪರತತ್ತ್ವವೇ ಪ್ರಕಾಶ ವಿಮರ್ಶಾತ್ಮದಿಂದ ವ್ಯಾಖ್ಯಾನಿಸಲಾಗಿದೆ ಎಂಬ ಕಾರಣದಿಂದ ಪ್ರಕಾಶ-ವಿಮರ್ಶ ಇವುಗಳಲ್ಲಿ ಅಂತಹ ಭೇದವೇನೂ ಇರುವುದಿಲ್ಲ. ಆದುದರಿಂದಲೇ "ಪರಮೇಶ್ವರನು ಹೇಗೆ ವಿಶ್ವಪ್ರಕಾಶಾತ್ಮನೋ ಹಾಗೆಯೇ ವಿಶ್ವವಿಮರ್ಶಾತ್ಮನೂ ಆಗಿದ್ದಾನೆ"[೨೯] ಎಂದು ಅಭಿನವಗುಪ್ತರು ಅದ್ವೈತವನ್ನು

---

[೨೨] ಶಕ್ತೋ ಯಯಾ ಸ ಶಂಭುರ್ಭುಕ್ತೌ ಮುಕ್ತೌ ಚ ಪಶುಗಣಸ್ಯಾಸ್ಯ।
ತಾಮೇಕಾಂ ಚಿದ್ರೂಪಾಮಾದ್ಯಾಂ ಸರ್ವಾತ್ಮನಾಽಸ್ಮಿ ನತಃ।। -ತ.ಪ್ರ, ೩

[೨೩] "ಅನನ್ಯಾಪೇಕ್ಷತಾ ಹಿ ವಿಮರ್ಶಃ ಸೈವ ಚ ಸ್ವತಂತ್ರತಾ"
-(ಈ.ಪ್ರ.ವಿ.ವಿ, ಭಾಗ-೨, ಪು.೪೩೬)

"ಪ್ರಕಾಶಸ್ಯ ಚ ವರದಶಾಯಾಂ ಚಮತ್ಕಾರಮಾತ್ರಾತ್ಮಾಯೋ ವಿಮರ್ಶಸ್ತದೇವ ಸ್ವಾತಂತ್ರ್ಯಮ್" -(ಈ.ಪ್ರ.ವಿ.ವಿ, ಭಾಗ-೩, ಪು.೨೫೧)

[೨೪] ಈ.ಪ್ರ.ವಿ.ವಿ, ಭಾಗ-೧, ಪು. ೨೫೦-೨೮೦

[೨೫] ಈ.ಪ್ರ.ವಿ.ವಿ, ಭಾಗ-೧, ಪು. ೧೫

[೨೬] ಈ.ಪ್ರ.ವಿ.ವಿ, ಭಾಗ-೧, ಪು. ೬೩

[೨೭] ಈ.ಪ್ರ.ವಿ.ವಿ, ಭಾಗ-೨, ಪು. ೨೧

[೨೮] ಈ.ಪ್ರ.ವಿ.ವಿ, ಭಾಗ-೨, ಪು. ೨೦೭

[೨೯] ಈ.ಪ್ರ.ವಿ.ವಿ, ಭಾಗ-೩, ಪು. ೯೪

ಹೇಳಿದ್ದಾರೆ.[೩೦] ಇಲ್ಲಿ 'ಪ್ರಕಾಶ'ವು ಜ್ಞಾನ ಮತ್ತು 'ವಿಮರ್ಶೆ'ಯು ಕ್ರಿಯೆ ಎಂದು ಹೇಳಲಾಗಿದೆ.[೩೧]

ಸಿದ್ಧಾಂತಶೈವದರ್ಶನದಲ್ಲಿ ಪತಿ ಸ್ವರೂಪ

ಸಿದ್ಧಾಂತಶೈವದರ್ಶನದಲ್ಲಿ ಪರಮತತ್ತ್ವವನ್ನು 'ಪತಿ' ಶಬ್ದದಿಂದ ಕರೆಯಲಾಗಿದೆ. ಅದು ಮೂವತ್ತಾರು ತತ್ತ್ವಗಳಲ್ಲಿ ಮೊದಲನೆಯ ಶಿವತತ್ತ್ವವೆಂದೂ ಹೇಳಲಾಗಿದೆ. "ಸೋಽನಾದಿಮುಕ್ತ ಏಕೋ ವಿಜ್ಞೇಯಃ ಪಂಚಮಂತ್ರತನುಃ",[೩೨] (ಅವನು ಅನಾದಿ ರಹಿತನಾದ ಪಂಚಮಂತ್ರ ಶರೀರವುಳ್ಳ ಒಬ್ಬನೆಂದು ತಿಳಿಯಬೇಕು), "ಅನಾದಿ ಮಲಯುಕ್ತತ್ವಾತ್ ಸರ್ವಜ್ಞೋಽಸೌ ತತಃ ಶಿವಃ"[೩೩] (ಅನಾದಿ ಮಲಯುಕ್ತನಾದುದರಿಂದ ಸರ್ವಜ್ಞ, ತರುವಾಯ ಅವನೇ ಶಿವ), "ಶುದ್ಧಾನಿ ಪಂಚತತ್ತ್ವಾನ್ಯಾದ್ಯಂ ತೇಷು ಸ್ಮರಂತಿ ಶಿವತತ್ತ್ವಮ್"[೩೪] (ಶುದ್ಧವಾದ ಪಂಚತತ್ತ್ವಗಳಲ್ಲಿ ಮೊದಲನೆಯ ಶಿವತತ್ತ್ವವೆಂದು ಸ್ಮರಿಸುತ್ತಿದ್ದಾರೆ), "ಸರ್ವಾನುಗ್ರಾಹಕಂ ಪ್ರಾಹುಃ"[೩೫] (ಎಲ್ಲರಿಗೂ ಅನುಗ್ರಹಕಾರಕನೆಂದು ಹೇಳುತ್ತಾರೆ), "ವ್ಯಾಪಕಮೇಕಂ ನಿತ್ಯಂ ಕಾರಣಮಖಿಲಸ್ಯ ತತ್ತ್ವಜಾತಸ್ಯ. ಜ್ಞಾನಕ್ರಿಯಾಸ್ವಭಾವಂ ಶಿವತತ್ತ್ವಂ ಜಗದುರಾಚಾರ್ಯಾಃ"[೩೬] (ಸಮಸ್ತ ತತ್ತ್ವಜ್ಞಾನದ ಕಾರಣನು, ಎಲ್ಲೆಡೆಯೂ ವ್ಯಾಪಿಸಿರುವ ನಿತ್ಯನು. ಈ ಶಿವತತ್ತ್ವವನ್ನು ಜ್ಞಾನ ಮತ್ತು ಕ್ರಿಯಾ ಸ್ವರೂಪದ್ದೆಂದು ಆಚಾರ್ಯರು ತಿಳಿದಿದ್ದಾರೆ). "ತತ್ತ್ವಂ ವಸ್ತುತ ಏಕಂ ಶಿವಸಂಜ್ಞಂ ಚಿತ್ರಶಕ್ತಿಶತಖಚಿತಮ್"[೩೭] (ವಸ್ತುತಃ ಈ ತತ್ತ್ವವು ಚಿತ್ರಶಕ್ತಿಶತಖಚಿತವಾದ ಒಂದು ಶಿವಸಂಜ್ಞೆ), "ಏಕಃ ಶಿವೋಽವಿಕಾರೀ"[೩೮] (ವಿಕಾರರಹಿತನಾದ ಶಿವನೊಬ್ಬನೇ) ಮೊದಲಾದ ರೂಪದಿಂದ ಶಿವತತ್ತ್ವದ ಲಕ್ಷಣವು ನಿರೂಪಿತವಾಗಿದೆ. ಈ ಪ್ರಮಾಣದಿಂದ ಈ ಸಿದ್ಧಾಂತದಲ್ಲಿ ಶಿವನು ಅನಾದಿಮಲಸಂಶ್ಲೇಷರಹಿತನು. ಆದುದರಿಂದಲೇ ಅನಾದಿಮುಕ್ತನು. ಮುಕ್ತಾತ್ಮನಾದರೂ ಕೂಡ ಇಲ್ಲಿ 'ಶಿವ' ಶಬ್ದದಿಂದ ಕರೆಯಲಾಗಿದೆ. ಆದರೆ ಅವರು ಮೊದಲು ಬದ್ಧರಾಗಿದ್ದು, ನಂತರದಲ್ಲಿ ಶಿವಾನುಗ್ರಹದಿಂದ ಮುಕ್ತನಾದುದರಿಂದ ಶಿವನ ಅನಾದಿಮುಕ್ತತ್ವ ಮತ್ತು

---

[೩೦] ಈ ವಿಷಯವನ್ನು ಪಂಡಿತ ವ್ರಜವಲ್ಲಭದ್ವಿವೇದಿ ಮಹೋದಯರು ಲುಪ್ತಾಗಮಸಂಗ್ರಹದ ದ್ವಿತೀಯ ಭಾಗದಿಂದ ಸಂಗ್ರಹಿಸಲಾಗಿದೆ. -(ಸಂಪೂರ್ಣಾನಂದ ಸಂ.ವಿ.ವಿ, ೧೯೮೩)

[೩೧] "ಪ್ರಕಾಶರೂಪಮ್ ಜ್ಞಾನಮ್, ವಿಮರ್ಶರೂಪಾ ಚ ಕ್ರಿಯಾ" -(ಈ.ಪ್ರ.ವಿ.ವಿ., ಭಾಗ-೧, ಪು. ೯೮)

[೩೨] ತ.ಪ್ರ, ೬

[೩೩] ಲು.ಸ, ಭಾಗ-೨, ಉಪೋದ್ಘಾತ, ಪು. ೧೨೪

[೩೪] ತ.ಪ್ರ, ೨೧

[೩೫] ತ.ಪ್ರ, ೨೬

[೩೬] ತ.ಪ್ರ, ೨೫

[೩೭] ತ.ಪ್ರ, ೩೩

[೩೮] ತ.ಸ, ೪೪

ಅನಾದಿಮಲರಹಿತತ್ತ್ವವು ಹೇಳಲಾಗಿದೆ. ಇದನ್ನು ವಾಯವೀಯಸಂಹಿತೆಯಲ್ಲಿ ಈ ರೀತಿಯಾಗಿ ವಿವರಿಸಲಾಗಿದೆ:

ಅನಾದಿಮಲಸಂಶ್ಲೇಷಪ್ರಾಗಭಾವಾತ್ ಸ್ವಭಾವತಃ।
ಅತ್ಯಂತ ಪರಿಶುದ್ಧಾತ್ಮೇತ್ಯತೋಽಯಂ ಶಿವ ಉಚ್ಯತೇ॥[೩೯]

"ಸ್ವಭಾವದಿಂದಲೇ ಮೊದಲು ಅನಾದಿಮಲಸಂಶ್ಲೇಷದ ಅಭಾವದಿಂದ, ಅತ್ಯಂತ ಪರಿಶುದ್ಧಾತ್ಮ ಎನ್ನುವ ಕಾರಣದಿಂದ ಈತನು 'ಶಿವ' ಎಂದು ಕರೆಯಲ್ಪಡುತ್ತಾನೆ."

ಐದು ಶುದ್ಧತತ್ತ್ವಗಳಲ್ಲಿ ಇದೇ ಮೊದಲನೆಯ ತತ್ತ್ವ. ಆದುದರಿಂದಲೇ ಇದು ವ್ಯಾಪಕ, ನಿತ್ಯ, ಎಲ್ಲ ಸತ್ತ್ವಗಳಿಗೂ ಕಾರಣಭೂತ, ಜ್ಞಾನ, ಕ್ರಿಯಾ ಮತ್ತು ಶಕ್ತಿಯುಕ್ತವಾಗಿದೆ. "ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥೇ"[೪೦] (ರುದ್ರನು ಒಬ್ಬನೇ ಎರಡನೆಯವನಲ್ಲ), "ಶಿವತತ್ತ್ವಮ್ ಪರಂ ಹ್ಯೇಕಮ್"[೪೧] (ಶ್ರೇಷ್ಠವಾದ ಶಿವತತ್ತ್ವವು ಒಂದೇ) ಮೊದಲಾದ ಶ್ರುತಿ, ಆಗಮ ಪುರಾಣಗಳಿಂದ ಶಿವನ ಏಕತ್ವವು ತಿಳಿದುಬರುತ್ತದೆ. ಇಲ್ಲದಿದ್ದರೆ-

ಬಹವೋ ಯತ್ರ ನೇತಾರಃ ಸರ್ವೇ ಪಂಡಿತಮಾನಿನಃ।
ಸರ್ವೇ ಮಹತ್ತ್ವಮಿಚ್ಛಂತಿ ತದ್ವ್ಯಕ್ತಮವಸೀದತಿ॥[೪೨]

"ಅನೇಕ ಜನ ನಾಯಕರು ಎಲ್ಲಿ ಇರುತ್ತಾರೆಯೋ ಅಲ್ಲಿ ಎಲ್ಲರೂ ಪಂಡಿತರೇ. ಎಲ್ಲರೂ ಪ್ರಾಮುಖ್ಯತೆಯನ್ನು ಅಪೇಕ್ಷಿಸುತ್ತಾರೆ. ಅದು ಅವ್ಯಕ್ತದಲ್ಲಿ ಕೊನೆಯಾಗುತ್ತದೆ" ಎಂಬ ಉಕ್ತಿಯ ಅನುಸಾರವಾಗಿ ಜಗತ್ತಿನ ಕಾರ್ಯಸಿದ್ಧಿಯಾಗುವುದಿಲ್ಲ ಮತ್ತು ಶಿವನು ಈ ಸಿದ್ಧಾಂತದಲ್ಲಿ ಸದ್ಯೋಜಾತ ಮುಂತಾದ ಪಂಚಮಂತ್ರತನುವೆಂದು ಕರೆಯಲ್ಪಟ್ಟಿದ್ದಾನೆ. ಜಗತ್ತಿನ ಸೃಷ್ಟಿಯೇ ಮೊದಲಾದ ಪಂಚಕೃತ್ಯಗಳನ್ನು ನಿರ್ವಹಿಸುವುದರಿಂದ ಅದನ್ನು ಅಂಗೀಕರಿಸಲಾಗಿದೆ. ಶಿವನು ಸ್ವಭಾವತಃ ನಿಷ್ಕ್ರಿಯನಾದುದರಿಂದ ಶಕ್ತಿಯ ಅಭಾವದಲ್ಲಿ ಜಗತ್ತಿನ ಸೃಷ್ಟಿಯೇ ಮುಂತಾದವುಗಳು ಸಂಭವಿಸುವುದಿಲ್ಲವೆನ್ನುವ ಕಾರಣದಿಂದ ಇಲ್ಲಿ 'ಶಕ್ತಿ'ಯನ್ನು ಒಪ್ಪಲಾಗಿದೆ. ಮತ್ತು ಶಕ್ತಿಯೂ ಕೂಡ ಶಿವನ ಮೊದಲ ಉನ್ಮೇಷರೂಪ.[೪೩] ಶಕ್ತಿಸಹಿತನಾದಾಗಲೇ ಶಿವನು ಎಲ್ಲ ಜೀವಿಗಳ ಭುಕ್ತಿ-ಮುಕ್ತಿಗಳನ್ನು ಮಾಡಲು ಶಕ್ತನಾಗುತ್ತಾನೆ.[೪೪] ಶಕ್ತಿಯೂ ಕೂಡ ಶಿವನಂತೆ ಚಿದ್ರೂಪಿ.

---

[೩೯] ಶಿವಮಹಾಪುರಾಣಮ್ (ಶಿ.ಪು.ವಾ.) ೧-೩೨-೨೯

[೪೦] ಅಥ.ಉ, ೨-೭

[೪೧] ರೌ.ವಿ, ೨-೪

[೪೨] ಅ.ಪ್ರ, ಪು. ೧೩೨

[೪೩] ಚಿದಚಿದನುಗ್ರಹೇತೋರಸ್ಯ ಸಿಸೃಕ್ಷೋರ್ಯಂ ಆದ್ಯ ಉನ್ಮೇಷಃ।
ತಚ್ಛಕ್ತಿ ತತ್ತ್ವಮಭಿಹಿತಮವಿಭಾಗಾಪನ್ನಮಸ್ಯೈವ॥ -(ತ.ಪ್ರ, ೨೭)

[೪೪] ಶಕ್ತೋ ಮಯಾ ಸ ಶಂಭುರ್ಭುಕ್ತೌ ಮುಕ್ತೌ ಚ ಪಶುಗಣಸ್ಯಾಸ್ಯ।
ತಾಮೇಕಾಂ ಚಿದ್ರೂಪಾಮಾದ್ಯಾಂ ಸರ್ವಾತ್ಮನಾಽಸ್ಮಿ ನತಃ॥ -(ತ.ಪ್ರ, ೩)

ಆದುದರಿಂದಲೇ ಪರಶಿವನು ಒಬ್ಬ, ಅನಾದಿಮುಕ್ತ, ಅನಾದಿಮಲಸಂಶ್ಲೇಷರಹಿತ ಮತ್ತು ಜಗತ್ತಿಗೆ ಕಾರಣೀಭೂತನೆಂದು ವೀರಶೈವ, ಕಾಶ್ಮೀರಶೈವ, ಸಿದ್ಧಾಂತ ಶೈವದಲ್ಲಿ ಸಮಾನತೆಯು ಇದೆ. ಶಿವನ ವಿಶ್ವೋತ್ತೀರ್ಣತ್ತ್ವವನ್ನು ಪ್ರತಿಪಾದಿಸುವ ಸಿದ್ಧಾಂತ ಶೈವರಿಂದಲೂ ಕೂಡ ಅವನು ಮೂವತ್ತಾರು ತತ್ತ್ವಗಳಲ್ಲಿ ಮೊದಲನೆಯ ತತ್ತ್ವರೂಪದಿಂದ ಸ್ವೀಕೃತನಾಗಿದ್ದಾನೆ. ವೀರಶೈವರಿಂದ ಮತ್ತು ಕಾಶ್ಮೀರಶೈವರಿಂದ ಅವನು ಮೂವತ್ತಾರು ತತ್ತ್ವಗಳನ್ನು ಮೀರಿಸಿದವನೆಂದು ಸ್ವೀಕರಿಸಿರುವುದು ಇಲ್ಲಿಯ ವಿಶೇಷ.

ವೀರಶೈವರು ಅಂಗೀಕರಿಸಿರುವ ಶಕ್ತಿಸ್ವರೂಪ

ಪರಶಿವನ ಈ ಶಕ್ತಿಯ ಸ್ವರೂಪವೇನು? ಎಂಬ ಜಿಜ್ಞಾಸೆಗೆ ಶ್ರೀ ಶಿವಯೋಗಿ ಶಿವಾಚಾರ್ಯರು- "ತದೀಯಾ ಪರಮಾ ಶಕ್ತಿಃ ಸಚ್ಚಿದಾನಂದಲಕ್ಷಣಾ"[೪೫] (ಶಿವನ ಸಂಬಂಧಿನಿಯಾದ ಪರಾಶಕ್ತಿಯಾದರೂ, ಸತ್ತು, ಚಿತ್ತು, ಆನಂದಗಳೇ ಸ್ವರೂಪವಾಗುಳ್ಳವಳಾಗಿರುವಳು), "ಗುಣತ್ರಯಾತ್ಮಿಕಾಶಕ್ತಿಬ್ರಹ್ಮನಿಷ್ಠಾ ಸನಾತನೀ"[೪೬] (ಗುಣತ್ರಯಗಳ ಸ್ವರೂಪಿಣಿಯಾದ ಶಕ್ತಿಯು ಪರಬ್ರಹ್ಮನಲ್ಲಿ ನಿಷ್ಠಳಾಗಿರುವಳು) ಎಂದು ಶಕ್ತಿಯ ಎರಡು ಸ್ವರೂಪಗಳನ್ನು ವರ್ಣಿಸಿದ್ದಾರೆ. ಒಂದು ವೇಳೆ ಶಕ್ತಿಯು ಒಬ್ಬಳೇ ಆದರೂ, ಅವಳಿಗೆ ಎರಡು ಅವಸ್ಥೆಗಳಿವೆ. ಅವುಗಳಲ್ಲಿ ಒಂದು ಅವಿಭಾಗಪರಾಮರ್ಶ ಮತ್ತು ಎರಡನೆಯದು ವಿಭಾಗಪರಾಮರ್ಶಾ ಎಂಬ ಹೆಸರಿನಿಂದ ಕೂಡಿವೆ. ಅವಿಭಾಗಪರಾಮರ್ಶ ದಶೆಯಲ್ಲಿ ಈ ಶಕ್ತಿಯು ಪರಶಿವನಂತೆ ಸಚ್ಚಿದಾನಂದ ಸ್ವರೂಪಳು ಅಂದರೆ ಆದರ ಬೋಧರೂಪಳಾಗುತ್ತಾಳೆ. ಪರಶಿವನ ಅಸ್ಮಿ (ಇದ್ದೇನೆ), ಪ್ರಕಾಶೇ (ಪ್ರಕಾಶವಾಗಿ ಇದ್ದೇನೆ), ನಂದಾಮಿ (ನಾನು ಆನಂದವನ್ನು ಅನುಭವಿಸುತ್ತೇನೆ) ಎಂಬ ತನ್ನ ಸಚ್ಚಿದಾನಂದದ ಯಾವ ಅನುಭವವಿದೆಯೋ ಅದೇ ಅವನ ಶಕ್ತಿ. ಇದನ್ನೇ ವಿಮರ್ಶಶಕ್ತಿ ಮತ್ತು ಚಿಚ್ಛಕ್ತಿ ಎಂದು ಕರೆಯಲಾಗಿದೆ.

ಮೇಲಿನ ಅಭಿಪ್ರಾಯದ ಸಾರಾಂಶವಿಷ್ಟು- "ಸತ್ಯಂ ಜ್ಞಾನಮನಂತಂ ಬ್ರಹ್ಮ"[೪೭] (ಸತ್ಯ ಸ್ವರೂಪವೂ, ಜ್ಞಾನಸ್ವರೂಪವೂ, ಅನಂತಸ್ವರೂಪವೂ ಆದುದು ಬ್ರಹ್ಮ) ಇತ್ಯಾದಿ ಶ್ರುತಿ ಪ್ರಾಮಾಣ್ಯದಿಂದ ಸಚ್ಚಿದಾನಂದ ರೂಪತ್ವವು ಬ್ರಹ್ಮನ ಸ್ವರೂಪದ ಲಕ್ಷಣವೆಂದು ಅದ್ವೈತ ವೇದಾಂತಿಗಳು ಪ್ರತಿಪಾದಿಸುತ್ತಾರೆ. ಅಲ್ಲಿ ಸಚ್ಚಿದಾನಂದದ ಗುಣತ್ವದಲ್ಲಿ ದ್ವೈತಾಪತ್ತಿಯುಂಟೆಂದು ಅಸತ್ತಿಗಿಂತ ಭಿನ್ನವಾದುದು ಸತ್, ಜಡಕ್ಕಿಂತ ಭಿನ್ನವಾದುದು ಚಿತ್ ಮತ್ತು ಆನಂದವು ದುಃಖಕ್ಕಿಂತಲೂ ಭಿನ್ನವಾದದ್ದೆಂದು ಬ್ರಹ್ಮನ ಅಸತ್ ಜಡದುಃಖ ಭಿನ್ನತ್ವ ಪ್ರತಿಪಾದನೆ ಮಾಡುವುದಕ್ಕೋಸ್ಕರವೇ ಅವನ ಸಚ್ಚಿದಾನಂದತ್ವದ ಕಥನ. ವಸ್ತುತಃ ಇಲ್ಲಿ ಯಾವುದೋ ವಿಧಾನದ ಅಭಾವ ಎಂದು ಅದ್ವೈತಿಗಳಿಂದ ಅಂಗೀಕರಿಸಲ್ಪಟ್ಟಿದೆ.

---

೪೫. ಸಿ.ಶಿ, ೨.೧೨

೪೬. ಸಿ.ಶಿ, ೫.೩೬

೪೭. ತೈ.ಉ, ೨.೧

ಶಕ್ತಿವಿಶಿಷ್ಟಾದ್ವೈತ ವೇದಾಂತವಾದರೋ ಸಚ್ಚಿದಾನಂದ ಪರಶಿವನ ಅನುಭವದ ಅಭಾವದಲ್ಲಿ ಸ್ವಪ್ರಕಾಶವಾದರೂ ಕೂಡ ಸ್ಫಟಿಕವೇ ಮೊದಲಾದವುಗಳಂತೆ ಜಡತ್ವಾಪತ್ತಿಯು ಇದೆ ಎಂದು ಪರಶಿವನಲ್ಲಿ ಇದ್ದೇನೆ (ಅಸ್ಮಿ), ಪ್ರಕಾಶದಲ್ಲಿ (ಪ್ರಕಾಶೇ), ಆನಂದ (ನಂದಾಮಿ) ಎಂಬ ಬೋಧರೂಪವಾದ ವಿಮರ್ಶಶಕ್ತಿಯು ಅಂಗೀಕೃತವಾಗಿದೆ. ಇಲ್ಲದಿದ್ದರೆ ಕುರುಡನ ಸೌಂದರ್ಯದಂತೆ ಪರಶಿವನ ಸಚ್ಚಿದಾನಂದರೂಪತ್ವವು ವ್ಯರ್ಥವಾಗುತ್ತದೆ. ಆದುದರಿಂದ ಶಿವನ ವಿಮರ್ಶಶಕ್ತಿಯನ್ನು ಅವಶ್ಯವಾಗಿ ಅಂಗೀಕರಿಸಬೇಕು. ಆದುದರಿಂದಲೇ ಶ್ರೀ ಶಿವಯೋಗಿ ಶಿವಾಚಾರ್ಯರು- “ವಂದೇ ತಾಂ ಪರಮಾನಂದಪ್ರಬೋಧಲಹರೀಂ ಶಿವಾಮ್”[೪೮] (ಪರಮಾನಂದ ಪ್ರತಾಪರೂಪಳಾದವಳೂ ಆದ ಪರಶಿವೆಯನ್ನು ನಮಸ್ಕರಿಸುತ್ತೇನೆ) ಎಂದು ಪರಮಾನಂದ ಪ್ರಬೋಧರೂಪತ್ವದಿಂದ ಅವಳನ್ನು (ಶಕ್ತಿಯನ್ನು) ಸ್ತುತಿಸಿದ್ದಾರೆ.

ಕಾಶ್ಮೀರಶೈವ-ಸಿದ್ಧಾಂತಶೈವ ಇವುಗಳ ಶಕ್ತಿಸ್ವರೂಪ

ಕಾಶ್ಮೀರಶೈವದರ್ಶನದಲ್ಲಿಯೂ ಕೂಡ ಪರಶಿವನು ಪ್ರಕಾಶರೂಪ ಮತ್ತು ಶಕ್ತಿಯು ವಿಮರ್ಶರೂಪಳು ಎಂದು ನಿರೂಪಿಸಲಾಗಿದೆ. ಶಕ್ತಿಯು ಪರಶಿವಪ್ರಕಾಶದ ಬೋಧರೂಪವೇ ಆಗಿದ್ದಾಳೆ. ಇಲ್ಲಿ- “ಪ್ರಕಾಶಮಾನಂ ನ ಪೃಥಕ್ ಪ್ರಕಾಶಾತ್ ಸ ಚ ಪ್ರಕಾಶೋ ನ ಪೃಥಗ್ ವಿಮರ್ಶಾತ್”[೪೯] (ಪ್ರಕಾಶಮಾನವು ಪ್ರಕಾಶದಿಂದ ಬೇರೆಯಲ್ಲ ಮತ್ತು ಆ ಪ್ರಕಾಶವು ವಿಮರ್ಶಕ್ಕಿಂತಲೂ ಬೇರೆಯಲ್ಲ) ಎಂಬ ಉಕ್ತಿಗನುಸಾರವಾಗಿ ಪ್ರಕಾಶ-ವಿಮರ್ಶಗಳಿಗೆ ಭೇದವಿಲ್ಲ. ಪರಶಿವನು ವಿಮರ್ಶಶಕ್ತಿಯಿಂದ ರಹಿತನಾದರೆ ಅವನು ಜಡನು ಮತ್ತು ಅನೀಶ್ವರನೂ ಆಗುವನು ಎಂದು ಕ್ಷೇಮರಾಜನು ಅಭಿಪ್ರಾಯಪಡುತ್ತಾನೆ.[೫೦] ಸೌಂದರ್ಯಲಹರಿಯಲ್ಲಿಯೂ ಸಹ ಈ ರೀತಿಯಾಗಿ ಹೇಳಲಾಗಿದೆ:

ಶಿವಃ ಶಕ್ತ್ಯಾ ಯುಕ್ತೋ ಯದಿ ಭವತಿ ಶಕ್ತಃ ಪ್ರಭವಿತುಮ್।
ನ ಚೇದೇವಂ ದೇವೋ ಭವತಿ ಕುಶಲಃ ಸ್ಪಂದಿತುಮಪಿ॥

“ಶಿವನು ಶಕ್ತಿಯಿಂದ ಕೂಡಿದವನಾಗಿ ಪ್ರಭುವಾಗಲು ಶಕ್ತನಾಗುವನು. ಈ ರೀತಿಯಾಗಿ ಶಕ್ತಿಯುಕ್ತನಾಗದಿದ್ದರೆ ದೇವನು ಅಲುಗಾಡಲೂ ಕೂಡ ಶಕ್ತನಾಗುವುದಿಲ್ಲ.” ನಿತ್ಯಾಷೋಡಶಿಕಾರ್ಣವದಲ್ಲಿಯೂ ಕೂಡ-

ಪರೋ ಹಿ ಶಕ್ತಿರಹಿತಃ ಶಕ್ತಃ ಕರ್ತುಂ ನ ಕಿಂಚನ।
ಶಕ್ತಸ್ತು ಪರಮೇಶಾನಿ ಶಕ್ತ್ಯಾ ಯುಕ್ತೋ ಯದಾ ಭವೇತ್॥[೫೧]

“ಪರಮಾತ್ಮನು ಶಕ್ತಿರಹಿತನಾದಾಗ ಏನನ್ನೂ ಮಾಡಲು ಸಮರ್ಥನಾಗಲಾರ. ಆದರೆ ಶಕ್ತಿಯುಕ್ತನಾದಾಗ ಎಲ್ಲವನ್ನೂ ಸಾಧಿಸಲು ಸಮರ್ಥನಾಗುತ್ತಾನೆ.”

---

[೪೮] ಸಿ.ಶಿ, ೧.೧೧

[೪೯] ವಿಜ್ಞಾನಭೈರವಮ್ (ವಿ.ಭೈ.ವಿ.) ಪು. ೧೨೨

[೫೦] “ಯದಿ ನಿರ್ವಿಮರ್ಶಃ ಸ್ಯಾದ್ ಅನೀಶ್ವರೋ ಜಡಶ್ಚ ಪ್ರಸಜ್ಯೇತ।”

[೫೧] ನಿತ್ಯಾಷೋಡಶಿಕಾರ್ಣವ, ೪.೬

'ಶಿವ' ಶಬ್ದದಲ್ಲಿರುವ 'ಇ'ಕಾರವೇ ವಿಮರ್ಶಶಕ್ತಿ. ಹೇಗೆಂದರೆ ಶಿವ ಶಬ್ದದಿಂದ 'ಇ' ಕಾರವನ್ನು ತೆಗೆದರೆ ಶಿವ ಶಬ್ದವು 'ಶವ' ಎಂದಾಗುವಂತೆ ವಿಮರ್ಶಭಾವದಲ್ಲಿಯೂ ಕೂಡ ಶಿವನು ಜಡನಾಗುತ್ತಾನೆ ಎಂದು ಶಿವ-ಶಕ್ತಿಯರ ಅಭೇದವು ಸ್ವೀಕರಿಸಲ್ಪಟ್ಟಿದೆ. ಅದು ಈ ರೀತಿಯಾಗಿ ಹೇಳಲ್ಪಟ್ಟಿದೆ:

> ನ ಶಿವಃ ಶಕ್ತಿರಹಿತೋ ನ ಶಕ್ತಿಃ ಶಿವವರ್ಜಿತಾ।
> ತಾದಾತ್ಮ್ಯಮನಯೋರ್ನಿತ್ಯಂ ವಹ್ನಿದಾಯಿಕಯೋರಿವ॥[೫೨]

"ಶಿವ-ಶಕ್ತಿ ಇವರು ಒಬ್ಬರು ಮತ್ತೊಬ್ಬರನ್ನು ಬಿಟ್ಟಿರುವುದಿಲ್ಲ. ಅವರ ತಾದಾತ್ಮ್ಯವು ಬೆಂಕಿ ಮತ್ತು ಸುಡುವ ಶಕ್ತಿಯಂತೆ ಶಾಶ್ವತವಾದುದು."

ಲೋಕದಲ್ಲಿ ಹೇಗೆ ಬೆಂಕಿಯಿಲ್ಲದೆ ಉಷ್ಣತ್ವದ ಶಕ್ತಿಯಿಲ್ಲವೋ ಮತ್ತು ಉಷ್ಣತ್ವವಿಲ್ಲದೆ ಅಗ್ನಿಯ ಅಸ್ತಿತ್ವಬೋಧವು ಸಾಧ್ಯವಿಲ್ಲವೋ ಹಾಗೆಯೇ ಶಿವನನ್ನು ಬಿಟ್ಟು ಶಕ್ತಿ, ಶಕ್ತಿಯನ್ನು ಬಿಟ್ಟು ಶಿವ ಇದ್ದರೆ ಅವರಿಬ್ಬರ ಅಸ್ತಿತ್ವದ ಬೋಧವೇ ಉಂಟಾಗುವುದಿಲ್ಲ.

ಶಿವನು ವಿಮರ್ಶಶಕ್ತಿಯಿಂದ ಯುಕ್ತನಾದ ಕಾರಣ ಅವನು ಸ್ವಯಂ ಪ್ರಕಾಶವುಳ್ಳವನಾದರೂ ವಿಶ್ವವನ್ನೂ ಕೂಡ ಪ್ರಕಾಶಿಸುವಂತೆ ಮಾಡುತ್ತಾನೆ.[೫೩] ವಿಮರ್ಶಶಕ್ತಿಯ ಅನೇಕ ವಿಧವಾದ ಪರ್ಯಾಯ ಹೆಸರುಗಳಲ್ಲಿ ಸ್ಪಂದಶಕ್ತಿ ಎಂಬ ನಾಮಾಂತರವೂ ಇದೆ. ಸ್ಪಂದಶಕ್ತಿಯುಕ್ತನಾದುದರಿಂದಲೇ ಶಿವನು ಸ್ವಭಾವತಃ ಸ್ಪಂದನಶೀಲನು.

ಸಿದ್ಧಾಂತಶೈವರು ಪತಿರೂಪ ಪರಶಿವತತ್ತ್ವದಲ್ಲಿ ಚಿದ್ರೂಪಶಕ್ತಿಯನ್ನು ಅಂಗೀಕರಿಸಿದ್ದಾರೆ. ಅವರೂ ಸಹ ಈ ಶಕ್ತಿಯಿಂದಲೇ ಅದರ ಬೋಧರೂಪತ್ವವನ್ನು ಹೇಳುತ್ತಾರೆ. ಪರಶಿವನ ಬೋಧರೂಪತ್ವದಲ್ಲಿ ಅದರ ಚಿಚ್ಛಕ್ತಿಯೇ ಕಾರಣವೆಂಬ ವಿಷಯದಲ್ಲಿ ವೀರಶೈವ, ಕಾಶ್ಮೀರಶೈವ, ಸಿದ್ಧಾಂತಶೈವರ ವಿಚಾರಸಾಮ್ಯವು ಪ್ರತೀಯಮಾನವಾದರೂ ಕೂಡ ಕಾಶ್ಮೀರಶೈವರಿಂದ ಶಿವ-ಶಕ್ತಿಯರ ಅಭೇದ, ಸಿದ್ಧಾಂತಶೈವ ಮತ್ತು ವೀರಶೈವರಿಂದ ಭೇದಾಭೇದವು ಅಂಗೀಕರಿಸಲ್ಪಟ್ಟಿದೆ ಎಂಬುದೊಂದು ವಿಶೇಷ. ಶಿವ-ಶಕ್ತಿಯರ ಸಂಬಂಧವು ಮುಂದೆ ಪ್ರತಿಪಾದಿಸಲ್ಪಡುತ್ತದೆ.

ವೀರಶೈವರು ಅಂಗೀಕರಿಸಿರುವ ಶಕ್ತಿಯ ಕಾರ್ಯ

ವೀರಶೈವ ಸಿದ್ಧಾಂತದಲ್ಲಿ ಅಂಗೀಕೃತವಾಗಿರುವ ಈ ವಿಮರ್ಶಶಕ್ತಿಯು ಪ್ರಪಂಚದ ಸೃಷ್ಟಿಯ ಸಂದರ್ಭದಲ್ಲಿ ಇಚ್ಛಾ-ಜ್ಞಾನಾದಿ ರೂಪದಿಂದ ವಿಭಾಗಪರಾಮರ್ಶದ ಅವಸ್ಥೆಯನ್ನು ಹೊಂದಿ ಸತ್ತ್ವಾದಿ ತ್ರಿಗುಣಾತ್ಮಕವಾದ ಮಾಯೆ ಎಂದು

---

[೫೨] ೫೨. ಶಿವದೃಷ್ಟಿಃ, ೩.೨-೩; ಶೈವದರ್ಶನಬಿಂದುಃ, ಪು. ೮೬

[೫೩] ೫೩. ಪ್ರತ್ಯಭಿಜ್ಞಾಹೃದಯಮ್ (ಪ್ರ.ಹೃ), ಪು. ೭

ಕರೆಯಿಸಿಕೊಳ್ಳುತ್ತದೆ. ಸಚ್ಚಿದಾನಂದರೂಪ ವಿಮರ್ಶಶಕ್ತಿ ವಿಶಿಷ್ಟನಾದ ಪರಶಿವನು ನಿರ್ಗುಣ ಎಂದೂ, ಮತ್ತು ಗುಣತ್ರಯಾತ್ಮಕ ಮಾಯಾಶಕ್ತಿವಿಶಿಷ್ಟನಾದ ಪರಶಿವನು ಸಗುಣ ಎಂತಲೂ ಇಲ್ಲಿ ಹೇಳಲ್ಪಟ್ಟಿದೆ.

ಈ ರೀತಿಯಾಗಿ ಶಕ್ತಿಯು ವಸ್ತುತಃ ಸಚ್ಚಿದಾನಂದರೂಪಿಣೀ, ಆದರೆ ಮಾಯೆಯು ಅದರ ಪರಿಣಾಮರೂಪವಾದದ್ದು. ಚಂದ್ರನಲ್ಲಿ ಚಂದ್ರಿಕೆ (ಬೆಳದಿಂಗಳು)ಯಂತೆ ಪರಶಿವನಿಷ್ಠವಾದ ಈ ವಿಮರ್ಶಶಕ್ತಿಯು ಪ್ರಪಂಚದ ವೈಚಿತ್ರ್ಯಕ್ಕೆ ಕಾರಣವಾಗುತ್ತದೆ ಎಂಬ ಕಾರಣದಿಂದ ಪರಶಿವಬ್ರಹ್ಮವು ವಿಶ್ವಭಾಜನವೆಂದು ವ್ಯಾಖ್ಯಾನಿಸಲ್ಪಡುತ್ತದೆ. ಅದನ್ನೇ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ-

> ವಿಮರ್ಶಾಖ್ಯಾ ಪರಾಶಕ್ತಿರ್ವಿಶ್ವವೈಚಿತ್ರ್ಯಕಾರಿಣೀ।
> ಯಸ್ಮಿನ್ ಪ್ರತಿಷ್ಠಿತಾ ಬ್ರಹ್ಮ ತದಿದಂ ವಿಶ್ವಭಾಜನಮ್॥
> ಯಥಾ ಚಂದ್ರೇ ಸ್ಥಿರಾ ಜ್ಯೋತ್ಸ್ನಾ ವಿಶ್ವವಸ್ತುಪ್ರಕಾಶಿನೀ।
> ತಥಾ ಶಕ್ತಿರ್ವಿಮರ್ಶಾಖ್ಯಾ ಪ್ರಕಾಶೇ ಬ್ರಹ್ಮಣಿ ಸ್ಥಿರಾ॥[೫೪]

"ವಿಶ್ವದ ವೈಚಿತ್ರ್ಯಕ್ಕೆ ಕಾರಣವಾದ ವಿಮರ್ಶನಾಮಕವಾದ ಪರಾಶಕ್ತಿಯು (ಪರಕುಂಡಲಿನಿ ಶಕ್ತಿಯು) ಯಾವುದರಲ್ಲಿ ಸ್ಥಾಪಿತವಾಗುತ್ತಿರುವುದೋ (ಆ ದೃಕ್-ಕ್ರಿಯಾ ಶಕ್ತಿಯೇ) ಬ್ರಹ್ಮಸ್ವರೂಪವು. ಚಂದ್ರನಲ್ಲಿ ಸ್ಥಿರವಾಗಿರುವ ಬೆಳದಿಂಗಳು (ತಾನು ಒಂದೆಡೆಯಲ್ಲಿದ್ದರೂ) ಜಗತ್ತನ್ನೆಲ್ಲಾ ಹೇಗೆ ಬೆಳಗುವುದೋ ಅದರಂತೆಯೇ (ಜ್ಞಾನ-ಕ್ರಿಯಾ-ಶಕ್ತ್ಯಾತ್ಮಕ) ಪರಶಿವನಲ್ಲಿ ಸ್ಥಿರವಾಗಿರುವ ವಿಮರ್ಶಶಕ್ತಿಯು ಸಕಲ ಜಗತ್ತನ್ನೂ ತನ್ನ ಅಂಶದಿಂದ ವ್ಯಾಪಿಸಿ ಪ್ರಕಾಶಪಡಿಸುತ್ತಿರುವುದು."

ಈ ರೀತಿಯಲ್ಲಿ ಪರಶಿವನಿಷ್ಠವಾದ ಈ ಶಕ್ತಿಯು ಜಗತ್ತಿನ ಉಪಾದಾನ ಕಾರಣವೆಂದು ತಿಳಿಯುತ್ತದೆ. ಆದುದರಿಂದಲೇ ಶ್ರೀ ನೀಲಕಂಠಶಿವಾಚಾರ್ಯರು ತಮ್ಮ ಶಿವಾದ್ವೈತಪರಿಭಾಷಾ ಎಂಬ ಗ್ರಂಥದಲ್ಲಿ "ಉಪಾದಾನತ್ವಮ್, ಅಪೃಥಕ್‌ಸಿದ್ಧ ಧರ್ಮವತ್ತ್ವಂ ವಾ ಶಕ್ತೇರ್ಲಕ್ಷಣಮ್"[೫೫] (ಉಪಾದಾನತ್ವ ಅಥವಾ ಬೇರೆಯಲ್ಲದ ಸಿದ್ಧಧರ್ಮವತ್ತ್ವವು ಶಕ್ತಿಯ ಲಕ್ಷಣ) ಎಂದು ಹೇಳಿದ್ದಾರೆ. ಮೂವತ್ತಾರು ತತ್ತ್ವಗಳಲ್ಲಿ ಸದಾಶಿವಾದಿ ಭೂಮ್ಯಂತಗಳವರೆಗಿನ[೫೬] ಎಲ್ಲ ತತ್ತ್ವಗಳೂ ಶಕ್ತಿಸ್ವರೂಪಗಳೇ ಆಗಿರುವುದರಿಂದ ಮುಂದು ಮುಂದಿನ ತತ್ತ್ವಗಳಿಗೆ ಅದರ ಹಿಂದು ಹಿಂದಿನ ಉಪಾದಾನತ್ವಗಳೆಂದು ಸ್ವೀಕರಿಸಲ್ಪಡುವುದರಿಂದ ಉಪಾದಾನತ್ವವೆಂಬ ಲಕ್ಷಣವು ಎಲ್ಲ ಕಡೆಗೆ ಸಂಭವಿಸುತ್ತದೆ. ಇಲ್ಲಿ ಸೂಕ್ಷ್ಮಚಿದಚಿದ್ರೂಪಶಕ್ತಿಯು ಪರಶಿವನಿಂದ ಬೇರೆಯಲ್ಲ (ಒಂದೇ) ಎಂಬ ಧರ್ಮವು ಸಿದ್ಧವಾಗಿರುವುದರಿಂದ, ಸ್ಥೂಲಚಿದಚಿದ್ರೂಪಶಕ್ತಿಯು

---

[೫೪] ಸಿ.ಶಿ, ೨೦.೩೧-೩೨

[೫೫] ಶಿವಾದ್ವೈತಪರಿಭಾಷಾ, ಪು. ೬

[೫೬] ಸದಾಶಿವಮುಖಾಶೇಷತತ್ತ್ವಮೌಕ್ತಿಕಶುಕ್ತಿಕಾಮ್।
ವಂದೇ ಮಾಹೇಶ್ವರೀಂ ಶಕ್ತಿಂ ಮಹಾಮಾಯಾದಿರೂಪಿಣೀಮ್॥ -(ಸಿ.ಶಿ, ೨.೨)

ಜೀವನಿಂದ ಬೇರೆಯಲ್ಲ ಎಂಬ ಧರ್ಮವು ಸಿದ್ಧವಾಗಿರುವುದರಿಂದ ಲಕ್ಷಣ ಸಮನ್ವಯವಿದೆ. ಆದುದರಿಂದ ವಿಶೇಷವಾಗಿ ಬ್ರಹ್ಮಪ್ರತಿಪಾದಕವಾದ ಈ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತದಲ್ಲಿ ಕಾರ್ಯಕಾರಣಭಾವದಿಂದ ಕೂಡಿರುವ ಎಲ್ಲ ಚರ ಮತ್ತು ಅಚರ ಜಗತ್ತಿನ ಶಕ್ತಿವೈಶಿಷ್ಟ್ಯದ ವಿಶೇಷದಿಂದ ಎಲ್ಲವೂ ಶಿವಶಕ್ತಿಮಯವೇ ಎಂದು ತೋರುತ್ತದೆ.

ಶಕ್ತಿಯ ಅಸ್ತಿತ್ವದ ಬಗ್ಗೆ ಪ್ರಮಾಣ

ಪರಶಿವನ ಹೊರತಾದ ಆ ಶಕ್ತಿ ಯಾವುದು? ಅದರ ಮಾನದಂಡವೇನು? ಎಂದು ಜಿಜ್ಞಾಸೆಗೆ ಲೋಕಾನುಭವದಿಂದ ಶ್ರುತಿಪ್ರಾಮಾಣ್ಯವು ಅಂಗೀಕರಿಸಲ್ಪಡುತ್ತದೆ. ಲೋಕದಲ್ಲಿ ಒಂದು ವೇಳೆ ಬೆಂಕಿಯು ದಹಿಸುವ ಶಕ್ತಿಯನ್ನು ಹೊಂದಿದ್ದರೆ, ಮತ್ತೆ ಕೆಲವು ವೇಳೆ ಮಣಿ-ಮಂತ್ರಾದಿಗಳ ಪ್ರತಿಬಂಧವಿದ್ದಾಗ ದಹಿಸದ ಶಕ್ತಿಯ ಅನುಭವವಾಗುತ್ತದೆ. ಇದೇ ರೀತಿಯಲ್ಲಿ ಇಲಿಯಿಂದ ಆಘ್ರಾಣಿಸಲ್ಪಟ್ಟ ಬೀಜವು ಇತರ ಬೀಜಗಳಂತೆ ತೋರಿದರೂ ಭೂಮಿಯಲ್ಲಿ ಬಿತ್ತನೆ ಮಾಡಿದಾಗ ಮೊಳಕೆಯೊಡೆಯುವುದಿಲ್ಲ. ಇದರಿಂದ ಅಗ್ನಿಸ್ವರೂಪಕ್ಕಿಂತ ಬೇರೆಯಾದ ಸುಡುವ ಶಕ್ತಿ, ಬೀಜಸ್ವರೂಪಕ್ಕಿಂತ ಭಿನ್ನವಾದ ಮೊಳಕೆಯೊಡೆಯುವ ಶಕ್ತಿಯು ಇದೆಯೆಂಬುದು ಯುಕ್ತಿಯಿಂದ ಸಿದ್ಧವಾಗುತ್ತದೆ. ಈ ವಿಧವಾದ ಶಕ್ತಿಗೂ ಮತ್ತು ಶಕ್ತಿಯುಳ್ಳಂಥಾ ವಸ್ತುವಿಗೂ ಅತ್ಯಂತ ಭೇದ ಅಥವಾ ಅಭೇದವಿರುವುದಿಲ್ಲ. ಆದರೆ ಇವೆರಡರ ಸಂಬಂಧವು ಭೇದಾಭೇದವೇ ಸರಿ. ಹೀಗೆ ಎಲ್ಲ ವಸ್ತುಗಳಲ್ಲಿ ಶಕ್ತಿಯು ಇದೆ ಎಂಬುದರ ಬಗ್ಗೆ "ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ"[೫೭] (ಪರಮಾತ್ಮನ ಪರಾಶಕ್ತಿಯು ನಾನಾವಿಧವಾಗಿ ಕೇಳಲ್ಪಡುತ್ತದೆ. ಅದು ಸ್ವಾಭಾವಿಕವೂ, ಜ್ಞಾನಶಕ್ತಿ, ಬಲ (ಇಚ್ಛಾಶಕ್ತಿ) ಮತ್ತು ಕ್ರಿಯಾಶಕ್ತಿಯೂ ಆಗಿದೆ ಎಂದು ನಾನಾವಿಧವೆಂದು ಕೇಳಲ್ಪಟ್ಟಿದೆ); "ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಮ್"[೫೮] (ಮಾಯೆಯನ್ನು ಪ್ರಕೃತಿ ಎಂದು ತಿಳಿಯಬೇಕು, ಮಾಯೆಯುಳ್ಳವನು ಮಹೇಶ್ವರನೆಂದು ತಿಳಿಯಬೇಕು); "ನ ಶಿವೇನ ವಿನಾ ಶಕ್ತಿರ್ನ ಶಕ್ತಿರಹಿತಃ ಶಿವಃ"[೫೯] (ಶಿವನಿಲ್ಲದೆ ಶಕ್ತಿಯಿಲ್ಲ, ಶಕ್ತಿಯಿಲ್ಲದೆ ಶಿವನಿಲ್ಲ) ಮುಂತಾದ ಶ್ರುತಿ-ಸ್ಮೃತಿವಾಕ್ಯಗಳು ಪರಶಿವನ ಶಕ್ತಿಸದ್ಭಾವಕ್ಕೆ ಮಾನದಂಡವಾಗಿವೆ.

ವೀರಶೈವದರ್ಶನದಲ್ಲಿ ಶಿವ-ಶಕ್ತಿಯರ ಸಂಬಂಧ

ವೀರಶೈವಸಿದ್ಧಾಂತದಲ್ಲಿ ಶಕ್ತಿಯು ಶಿವನ ಸಹಧರ್ಮಚಾರಿಣಿ[೬೦] ಎಂದು ಪ್ರತಿಪಾದಿತವಾಗಿದೆ. ಆದುದರಿಂದಲೇ ಅವರಿಬ್ಬರ ಸಂಬಂಧವು ಅವಿನಾಭಾವವೆನಿಸಿದೆ. ರೇಣುಕ ಭಗವತ್ಪಾದರು-

---

೫೭. ಶ್ವೇ.ಉ, ೬.೮

೫೮. ಶ್ವೇ.ಉ, ೪-೧೦

೫೯. ವೀ.ಚ, ಪು. ೭

೬೦. ಯಾಮಾಹುಃ ಸರ್ವಲೋಕಾನಾಂ ಪ್ರಕೃತಿಂ ಶಾಸ್ತ್ರಪಾರಗಾಃ।
ತಾಂ ಧರ್ಮಚಾರಿಣೀಂ ಶಂಭೋಃ ಪ್ರಣಮಾಮಿ ಪರಾಂ ಶಿವಾಮ್॥-(ಸಿ.ಶಿ, ೧-೮)

ಯಥಾ ಚಂದ್ರೇ ಸ್ಥಿರಾ ಜ್ಯೋತ್ಸ್ನಾ ವಿಶ್ವವಸ್ತು ಪ್ರಕಾಶಿನೀ।
ತಥಾ ಶಕ್ತಿರ್ವಿಮರ್ಶಾಖ್ಯಾ ಪ್ರಕಾಶೇ ಬ್ರಹ್ಮಣಿ ಸ್ಥಿರಾ॥[೬೧]

"ಚಂದ್ರನಲ್ಲಿ ಸ್ಥಿರವಾಗಿರುವ ಬೆಳದಿಂಗಳು (ತಾನು ಒಂದೇ ಕಡೆ ಇದ್ದರೂ) ಜಗತ್ತನ್ನೆಲ್ಲಾ ಹೇಗೆ ಬೆಳಗುವುದೋ, ಹಾಗೆಯೇ ಪರಶಿವನಲ್ಲಿ ಸ್ಥಿರವಾಗಿರುವ ವಿಮರ್ಶಶಕ್ತಿಯು ಸಕಲ ಜಗತ್ತನ್ನೂ ತನ್ನ ಅಂಶದಿಂದ ವ್ಯಾಪಿಸಿ ಪ್ರಕಾಶಪಡಿಸುತ್ತಿರುವುದು" ಎಂಬ ಶ್ಲೋಕದಲ್ಲಿ ಚಂದ್ರ - ಚಂದ್ರಿಕೆಯ ದೃಷ್ಟಾಂತದಿಂದ ಶಿವ-ಶಕ್ತಿಯರ ಅವಿನಾಭಾವಸಂಬಂಧವನ್ನು ಸೂಚಿಸಿದ್ದಾರೆ. ಶ್ರೀ ಮರಿತೋಂಟದಾರ್ಯರು-

ನ ಶಿವೇನ ವಿನಾ ಶಕ್ತಿರ್ನ ಶಕ್ತಿರಹಿತಃ ಶಿವಃ।
ಪುಷ್ಪಗಂಧವದನ್ಯೋನ್ಯಂ ಮಾರುತಾಂಬರಯೋರಿವ॥[೬೨]

"ಶಿವನಿಲ್ಲದೆ ಶಕ್ತಿಯಿಲ್ಲ, ಶಕ್ತಿರಹಿತನಾದ ಶಿವನೂ ಇರುವುದಿಲ್ಲ. ಹೂ ಮತ್ತು ಪರಿಮಳದಂತೆ ಹಾಗೂ ಗಾಳಿ ಮತ್ತು ಆಕಾಶದಂತೆ (ಅವರಿಬ್ಬರ ಸಂಬಂಧವು) ಅನ್ಯೋನ್ಯವಾದುದು" ಎಂದು ಹೂ-ಪರಿಮಳದ ದೃಷ್ಟಾಂತದಿಂದ ಅದೇ ಸಂಬಂಧವನ್ನು ನಿರೂಪಿಸಿದ್ದಾರೆ. ಹೂ-ಪರಿಮಳ ಮತ್ತು ಚಂದ್ರ-ಬೆಳದಿಂಗಳುಗಳಿಗೆ ಹೇಗೆ ಪರಸ್ಪರ ಅತ್ಯಂತ ಭೇದವಾಗಲೀ ಅಥವಾ ಅಭೇದವಾಗಲೀ ಇರದೆ ಭೇದಾಭೇದವು ತೋರುತ್ತದೆಯೋ ಹಾಗೆಯೇ ಪರಶಿವನ ಕೇವಲಾವಸ್ಥೆಯಲ್ಲಿ ಸ್ವಸ್ಥವೂ ಮತ್ತು ಅವನೊಂದಿಗೆ ಅಭಿನ್ನವೂ ಆಗಿರುವ ವಿಮರ್ಶಶಕ್ತಿಯು ಲೀಲಾವಸ್ಥೆಯಲ್ಲಿ ಅದೇ ಕ್ಷುಭಿತವಾದಾಗ ವಿಶ್ವದ ಆಕಾರವನ್ನು ಪಡೆಯುತ್ತದೆ ಎಂದು ಶಿವ-ಶಕ್ತಿಯರಿಗೆ ಅವಸ್ಥಾ ಭೇದದಿಂದ ಮತ್ತು ಕಾಲಭೇದದಿಂದ ಭೇದಾಭೇದವು ಸಂಭವಿಸುತ್ತದೆಂದು ಹಿಂದೆ ಹೇಳಿದ ಅವಿನಾಭಾವಸಂಬಂಧವು ಭೇದಾಭೇದದಲ್ಲಿ ಪರ್ಯವಸಾನ ಹೊಂದುತ್ತದೆ. ಅದನ್ನು ಕೂರ್ಮಪುರಾಣದಲ್ಲಿ ಹೀಗೆ ಹೇಳಲಾಗಿದೆ:

ಏಷಾ ಶಕ್ತಿಃ ಶಿವಾ ಹ್ಯೇತತ್ ಶಕ್ತಿಮಾನುಚ್ಯತೇ ಶಿವಃ।
ಶಕ್ತಿಶಕ್ತಿಮತೋರ್ಭೇದಂ ವದಂತಿ ಪರಮಾರ್ಥತಃ।
ಅಭೇದಂ ಚಾನುಪಶ್ಯಂತಿ ಯೋಗಿನಸ್ತತ್ತ್ವಚಿಂತಕಾಃ॥

"ಈ ಶಕ್ತಿಯೇ ಶಿವಾ ಮತ್ತು ಶಿವನೇ ಶಕ್ತಿಮಾನ್ ಎಂದು ಹೇಳಲ್ಪಟ್ಟಿದೆ. ಹೀಗೆ ಶಕ್ತಿ ಮತ್ತು ಶಕ್ತಿಮಾನ್ ಇವುಗಳ ಭೇದವನ್ನು ಪಾರಮಾರ್ಥಿಕವಾಗಿ ಹೇಳಿದ್ದಾರೆ. ಯೋಗಿಗಳು ಮತ್ತು ತತ್ತ್ವಚಿಂತಕರು ಅಭೇದವನ್ನೇ ಕಾಣುತ್ತಾರೆ."

ಕವಿಕುಲಗುರು ಕಾಳಿದಾಸನೂ ಕೂಡ-

ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ।
ಜಗತಃ ಪಿತರೌ ವಂದೇ ಪಾರ್ವತೀಪರಮೇಶ್ವರೌ॥[೬೩]

---

[೬೧] ಸಿ.ಶಿ, ೨೦.೩೨

[೬೨] ವೀ.ಚ, ಪು. ೭

[೬೩] ರಘುವಂಶ, ೧.೧

“ಶಬ್ದ ಮತ್ತು ಅರ್ಥಗಳಂತೆ ಕೂಡಿರುವ (ಅವಿನಾಭಾವಸಂಬಂಧದಿಂದಿರುವ) ಜಗತ್ತಿನ ತಂದೆ-ತಾಯಿಗಳಾದ ಪಾರ್ವತಿ-ಪರಮೇಶ್ವರರಿಗೆ ಶಬ್ದಾರ್ಥಗಳ ಜ್ಞಾನಕ್ಕಾಗಿ ನಮಸ್ಕರಿಸುತ್ತೇನೆ” ಎಂದು ಶಬ್ದಾರ್ಥಗಳಂತೆ ಶಿವಶಕ್ತಿಯರ ಭೇದಾಭೇದರೂಪವಾದ ಸಂಬಂಧವನ್ನು ಪ್ರತಿಪಾದಿಸಿದ್ದಾನೆ. ಶ್ರೀ ಶಿವಾನುಭವಶಿವಾಚಾರ್ಯರು ಸಚ್ಚಿದಾನಂದ ಪರಶಿವಬ್ರಹ್ಮನ ಧರ್ಮಗಳ ಶಕ್ತಿರೂಪತ್ವವನ್ನು ಅಂಗೀಕರಿಸಿ ಶಿವ-ಶಕ್ತಿಯರಲ್ಲಿ ಧರ್ಮಿ-ಧರ್ಮ ಭಾವರೂಪಸಂಬಂಧವನ್ನು ನಿರೂಪಿಸುತ್ತಾರೆ. ಹೇಗೆಂದರೆ- “ಸಚ್ಚಿದಾನಂದತ್ವವೇ ಅವರ ಸ್ವರೂಪ ಲಕ್ಷಣವಿರಲಿ. ಈ ರೀತಿಯಾಗಿ ಉಂಟಾದ ಲಕ್ಷಣದಿಂದೇನು ಪ್ರಯೋಜನ? ಎಂದರೆ ಹಾಗಲ್ಲ. ಶಕ್ತಿ-ಶಕ್ತಿಮತ ಮತ್ತು ಧರ್ಮ-ಧರ್ಮಿಭಾವ ವಿವಕ್ಷಣೆಯಿಂದ ಸಚ್ಚಿದಾನಂದರೂಪ ಪರಶಿವಬ್ರಹ್ಮನ ಧರ್ಮಗಳನ್ನು ಅನುಸರಿಸುವ ಒಂದು ಶಕ್ತಿಯ ಸ್ವರೂಪತ್ವದ ಜ್ಞಾನದಿಂದಲೇ ಆ ಆಕ್ಷೇಪವು ತಿರಸ್ಕೃತವಾಗುತ್ತದೆ. ಆನಂದಮಯಾಧಿಕರಣ ಭಾಷ್ಯದಲ್ಲಿಯೂ ಕೂಡ ಪ್ರಚುರಾನಂದ ರೂಪಾನಂದಮಯನಾದ ಪರಶಿವಬ್ರಹ್ಮನ ಧರ್ಮದ ಪರಬ್ರಹ್ಮವನ್ನಾಶ್ರಯಿಸಿದ ಪರಮಾಕಾಶರೂಪ ಪರಮಶಕ್ತಿಯ ಸ್ವರೂಪತ್ವವು ಭಗವತ್ಪಾದರಿಂದಲೇ[೬೪] ಸ್ವೀಕೃತವಾಗಿರುವುದೂ[೬೫] ಒಂದು ಕಾರಣವಾಗಿದೆ.” ಆದುದರಿಂದ ವೀರಶೈವ ಸಿದ್ಧಾಂತದಲ್ಲಿ ನಿರೂಪಿತವಾಗಿರುವ ಅವಿನಾಭಾವ ಸಂಬಂಧದ ಮತ್ತೊಂದು ಪರ್ಯಾಯ ಪದವಾದ ಭೇದಾಭೇದ ಎಂಬ ಹೆಸರಿನ ಸಂಬಂಧವು ಧರ್ಮಿ-ಧರ್ಮರೂಪ ಎಂದು ಅರಿಯಬೇಕು.

ಕಾಶ್ಮೀರಶೈವ-ಸಿದ್ಧಾಂತಶೈವದಲ್ಲಿ ನಿರೂಪಿತವಾಗಿರುವ ಶಿವ-ಶಕ್ತಿಯರ ಸಂಬಂಧ

ಕಾಶ್ಮೀರಶೈವದರ್ಶನದಲ್ಲಿ ಪ್ರಕಾಶರೂಪನಾದ ಶಿವನ ಮತ್ತು ವಿಮರ್ಶ ರೂಪಿಯಾದ ಶಕ್ತಿ ಇವರ ಅಭೇದವು ಪ್ರತಿಪಾದಿತವಾಗಿದೆ. ಆದುದರಿಂದ ಇಲ್ಲಿ

---

[೬೪] ಇಲ್ಲಿ ಭಗವತ್ಪಾದ ಶಬ್ದದಿಂದ ಶ್ರೀ ನೀಲಕಂಠಶಿವಾಚಾರ್ಯರೆಂದು ತಿಳಿಯಬೇಕು. ಇವರು ವೀರಶೈವಸಿದ್ಧಾಂತ ಪರವಾದ ನೀಲಕಂಠಭಾಷ್ಯವನ್ನು ರಚಿಸಿದ್ದಾರೆ. ಅದು ಶ್ರೀಕರಭಾಷ್ಯಕ್ಕಿಂತಲೂ ಹಿಂದಿನದು. ಶ್ರೀ ನೀಲಕಂಠ ಶಿವಾಚಾರ್ಯರು ಆದಿ ಶಂಕರಾಚಾರ್ಯರ ಸಮಕಾಲೀನರೆಂಬುದು “ಇತಿ ಯುಕ್ತಿಶತೈಃ ಸ ನೀಲಕಂಠಃ ಕವಿರಕ್ಷೋಭಯದದ್ವಿತೀಯ ಪಕ್ಷಮ್। ನಿಗಮಾಂತವಚಃ ಪ್ರಕಾಶ್ಯಮಾನಂ ಕಲಭಃ ಪದ್ಮವನಂ ಯಥಾ ಪ್ರಫುಲ್ಲಮ್॥” (ಶಂಕರದಿಗ್ವಿಜಯಃ, ೧೪.೪೯) (ನೂರಾರು ಯುಕ್ತಿಗಳಿಂದ ನೀಲಕಂಠ ಶಿವಾಚಾರ್ಯರು ಅದ್ವಿತೀಯ ಪಕ್ಷವನ್ನು ಕ್ಷೋಭೆಗೊಳಿಸಿದ್ದಾರೆ. ಆನೆಮರಿಯು ಕಮಲವನವನ್ನು ಅರಳಿಸುವಂತೆ ವೇದಾಂತದ ಉಕ್ತಿಗಳನ್ನು ಪ್ರಕಾಶಪಡಿಸಿದ್ದಾರೆ) -ಎಂಬ ಶಂಕರದಿಗ್ವಿಜಯ ವಚನದಿಂದ ತಿಳಿದುಬರುತ್ತದೆ. ಅವರ ನೀಲಕಂಠಭಾಷ್ಯವು ಇಂದು ದೊರೆಯುತ್ತಿಲ್ಲ. ಆದರೆ ಕಾರಿಕೆಯ ರೂಪದಲ್ಲಿ ಅವರ ವ್ಯಾಖ್ಯಾನಭೂತವಾದ ಕ್ರಿಯಾಸಾರ ಎಂಬ ಗ್ರಂಥವು ದೊರೆಯುತ್ತಿದೆ. ಇದು ಕ್ರಿ.ಶ. ೧೭ನೇ ಶತಕದ ಎರಡನೆಯ ನೀಲಕಂಠಶಿವಾಚಾರ್ಯರಿಂದ ರಚಿತವಾಗಿದೆ.

[೬೫] ಶಿವಾದ್ವೈತದರ್ಪಣ, ಪು. ೬-೭

ವಿಮರ್ಶ ಎಂದರೆ ಪರಾಹಂತಾರೂಪವಾದುದು. "ವಿಮರ್ಶೋ ನ ಕದಾಚಿದಿದಂತಾ ಭೂಮಿಮಾಸ್ಕಂದತಿ"[೧೬] (ವಿಮರ್ಶಶಕ್ತಿಯಲ್ಲಿ ಯಾವಾಗಲೂ ಅಹಂತಾ ಉತ್ಪತ್ತಿಯಾಗುತ್ತದೆ) ಎಂಬ ಅಭಿನವಗುಪ್ತರ ಉಕ್ತಿಯಂತೆ ಅಲ್ಲಿ ಇದಂತಾಭಾವದ ಹುಟ್ಟದಿರುವಿಕೆಯಿಂದ ಅವರಿಬ್ಬರೂ (ಶಿವ-ಶಕ್ತಿ) ಒಂದೇ.

ಸಿದ್ಧಾಂತಶೈವದರ್ಶನದಲ್ಲಿ- "ಶಕ್ತಿರ್ನಾಽಚೇತನಾ ಚಿತಃ"[೧೭] (ಶಕ್ತಿಯು ಅಚೇತನವಾದ ಚಿತ್‌ಗಿಂತಲೂ ಬೇರೆಯಲ್ಲ) ಎಂಬ ಮೃಗೇಂದ್ರಾಗಮದ ವಾಕ್ಯಾನುಸಾರವಾಗಿ ಚಿದ್ರೂಪ ಶಿವನ ಶಕ್ತಿಯು ಜಡಸ್ವರೂಪಿಯಲ್ಲ. ಆದರೆ ಅವಳೂ ಕೂಡ ಚಿದ್ರೂಪಳು ಎಂದು ಅವರಿಬ್ಬರ ಏಕತ್ವವನ್ನು ಪ್ರತಿಪಾದಿಸಿದರೂ ಕೂಡ ಶಕ್ತಿಯು ಶಿವನಲ್ಲಿ ಸಮವಾಯಸಂಬಂಧದಿಂದ ತಾದಾತ್ಮ್ಯವನ್ನು ಆಶ್ರಯಿಸಿದ್ದಾಳೆಂದು ಅಂಗೀಕರಿಸಲ್ಪಟ್ಟಿದೆ. ಅದು ಈ ರೀತಿಯಾಗಿ ಹೇಳಲ್ಪಟ್ಟಿದೆ-

> ಅನನ್ಯಾಽಪಿ ವಿಭಿನ್ನಾಽತಃ ಶಂಭೋಃ ಸಾ ಸಮವಾಯಿನೀ।
> ಸ್ವಾಭಾವಿಕೀ ಚ ತನ್ಮೂಲಾ ಪ್ರಭಾ ಭಾನೋರಿವಾಮಲಾ॥[೧೮]

ಸೂರ್ಯ ಮತ್ತು ಸೂರ್ಯಪ್ರಕಾಶಗಳಲ್ಲಿ ಹೇಗೆ ಧರ್ಮಿ-ಧರ್ಮಸ್ವರೂಪದಿಂದ ಭೇದವಿದೆಯೋ ಹಾಗೆಯೇ ಶಿವ-ಶಕ್ತಿಯರಲ್ಲಿ ವಸ್ತುತಃ ಅಭೇದವಿದ್ದರೂ ಸಹ, ಧರ್ಮ-ಧರ್ಮಿಗುಣದಿಂದ ಭೇದವು ಇಲ್ಲಿ ತಿಳಿಯಲ್ಪಡುತ್ತದೆ. ಈ ರೀತಿಯಾಗಿ ಶಿವ-ಶಕ್ತಿಯರಿಗೆ ಧರ್ಮ-ಧರ್ಮಿರೂಪವಾದ ಭೇದವಿದ್ದರೂ ಕೂಡ ತಾದಾತ್ಮ್ಯ ಸಂಬಂಧವಿರುವುದರಿಂದ ಬೇರೆ ಆತ್ಮದಂತೆ ಭೇದವಿರುವುದಿಲ್ಲವೆಂದು ಅಘೋರ ಶಿವಾಚಾರ್ಯರು ಸ್ಪಷ್ಟಪಡಿಸಿದ್ದಾರೆ.[೧೯]

ಒಂದು ವೇಳೆ ಶಕ್ತಿಯು ಶಿವನಿಂದ ಅತ್ಯಂತ ಭಿನ್ನಳಾದರೆ, ಆಗ ಶಿವನು ಏನನ್ನೂ ಅರಿಯಲು ಅಥವಾ ಏನನ್ನೂ ಮಾಡಲು ಸಮರ್ಥನಾಗುವುದಿಲ್ಲ.[೨೦] ಆದುದರಿಂದ ಚಿಚ್ಛಕ್ತಿ ಸಹಿತನಾದ ಕುಂಭಕಾರನಂತೆ ಸ್ವಸಮವಾಯಿ ಚಿದ್ರೂಪಶಕ್ತಿಯೊಡನೆ ಕೂಡಿರುವ ಶಿವನು ಬಿಂದುವೇ ಮುಂತಾದ ವಸ್ತುಗಳನ್ನು ವಿಷಯಗಳನ್ನಾಗಿ ಮಾಡಿ ಮತ್ತು ಅವುಗಳ ಕ್ಷೋಭೆಯೇ ಮೊದಲಾದವುಗಳನ್ನು ಉತ್ಪಾದಿಸಲು ಸಮರ್ಥನಾಗುತ್ತಾನೆ. ಈ

---

[೧೬] ಈ.ಪ್ರ.ವಿ.ವಿ, ಭಾಗ. ೧, ಪು. ೮೩

[೧೭] ಮೃಗೇಂದ್ರಾಗಮ, ವಿದ್ಯಾಪಾದ, ೩-೪

[೧೮] ರತ್ನತ್ರಯಪರೀಕ್ಷಾ, ೩೦೪-೩೦೫

[೧೯] ಅನನ್ಯಾಪಿ ತಥಾ ಶಂಭೋರ್ವಿಭಿನ್ನಾ ಶಕ್ತಿರಿಷ್ಯತೇ।
ಯಥಾ ಮಸೂರಾತ್ವ(ರಸ್ತ್ವ)ಂಗುಷ್ಠಾನ್ನಾಪಿ ಭಿನ್ನೋಕ್ತಹೇತುಭಿಃ॥
-(ರ.ತ್ರ, ೩೦೩-೩೦೪)

[೨೦] ನಹ್ಯೇಷ ಭಗವಾನ್ ಶಕ್ತ್ಯಾ ಸ್ವಾತ್ಮನೋಽತ್ಯಂತಭಿನ್ನಯಾ।
ಕದಾಚಿತ್ ಕುರುತೇ ಕಿಂಚಿನ್ನಾಪಿ ಜಾನಾತಿ ಕಿಂಚನ॥ -(ರ.ತ್ರ, ೩೦೫-೩೦೬)

ರೀತಿಯಾಗಿ ಶಕ್ತಿಯಿಲ್ಲದೆ ಶಿವನು ಏನನ್ನೂ ಮಾಡಲು ಸಮರ್ಥನಾಗದೇ ಇರಲು ಶಕ್ತಿಯೇ ಜಗತ್ತಿನ ಉತ್ಪತ್ತಿಗೆ ಕಾರಣೀಭೂತಳಾಗಲಿ, ಶಿವನಿಂದೇನು ಪ್ರಯೋಜನ? ಎಂದು ಆಕ್ಷೇಪವೆತ್ತಿದರೆ, ಹೀಗೆ ಉತ್ತರಿಸಲಾಗಿದೆ- ಶಕ್ತಿಯು ಒಂದು ಧರ್ಮವಾಗಿರುವುದರಿಂದ ಧರ್ಮವು ಆಶ್ರಯವಿಲ್ಲದೆ ಇರುವುದಿಲ್ಲ ಅದಕ್ಕೆ ಆಶ್ರಯವಾಗಿ ಶಿವನಿದ್ದಾನೆ. ಆದುದರಿಂದ ಶಕ್ತಿಗೆ ಆಶ್ರಯನಾಗಿರುವ ಶಿವನು ತನ್ನ ಸಂಕಲ್ಪಮಾತ್ರದಿಂದ ಜಗತ್ತನ್ನು ಸೃಷ್ಟಿಸುತ್ತಾನೆ, ರಕ್ಷಿಸುತ್ತಾನೆ ಮತ್ತು ನಾಶಪಡಿಸುತ್ತಾನೆ.

ಈ ರೀತಿಯಲ್ಲಿ ಸಿದ್ಧಾಂತಶೈವದರ್ಶನದಲ್ಲಿ ಶಿವ-ಶಕ್ತಿಯರ ಧರ್ಮ-ಧರ್ಮಿ ಭಾವವು ಸ್ವೀಕೃತವಾಗಿದೆ. ಮತ್ತು ಅದು ಭೇದಾಭೇದವೆಂಬ ಸಂಬಂಧದಲ್ಲಿ ಪರ್ಯವಸಾನವಾಗಿದೆ. ಹೀಗೆ ಶಿವ-ಶಕ್ತಿಯರ ಸಂಬಂಧದ ವಿಷಯದಲ್ಲಿ ಸಿದ್ಧಾಂತಶೈವ-ವೀರಶೈವ ದರ್ಶನಗಳಲ್ಲಿ ವಿಚಾರಸಾಮ್ಯವು ಕಂಡುಬರುತ್ತದೆ.

ವೀರಶೈವದರ್ಶನದಲ್ಲಿ ಶಕ್ತಿಯ ಭೇದಗಳು

ಪರಶಿವನಿಷ್ಠಳಾದ ಶಕ್ತಿಯ ಚಿಚ್ಛಕ್ತಿ, ಪರಾಶಕ್ತಿ, ಆದಿಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿ ಎಂಬ ಆರು ಭೇದಗಳನ್ನು ವೀರಶೈವರು ಅಂಗೀಕರಿಸಿದ್ದಾರೆ. ಇವುಗಳಲ್ಲಿ ಚಿಚ್ಛಕ್ತಿಯು ಪರಶಿವನ ಸಚ್ಚಿದಾನಂದರೂಪವೆಂದು ಅವಳು (ಶಕ್ತಿಯು) ಪರಶಿವನೊಡನೆ ಸಾಮರಸ್ಯ ಹೊಂದಿದ್ದಾಳೆ. ಸೃಷ್ಟಿಕಾಲದಲ್ಲಿ ಚಿಚ್ಛಕ್ತಿ ವಿಶಿಷ್ಟನಾದ ಪರಶಿವನಿಂದ ಐದು ಶಕ್ತಿಗಳು ಕ್ರಮೇಣ ಒಂದೊಂದರ ಈ ಸಹಸ್ರಾಂಶದಲ್ಲಿ ಉತ್ಪನ್ನವಾಗುತ್ತವೆ. ವಾತುಲಶುದ್ಧತಂತ್ರದಲ್ಲಿ-

> ಯೋಗಿನಾಮುಪಕಾರಾಯ ಸ್ವೇಚ್ಛಯಾ ಚಿಂತ್ಯತೇ ಶಿವಃ॥
> ತಚ್ಛಿವೇ ತು ಪರಾಶಕ್ತಿಃ ಸಹಸ್ರಾಂಶೇನ ಜಾಯತೇ।
> ತಚ್ಛೇಕ್ತೇಸ್ತು ಸಹಸ್ರಾಂಶಾದಾದಿಶಕ್ತಿಸಮುದ್ಭವಃ॥
> ಆದಿಶಕ್ತಿಸಹಸ್ರಾಂಶಾದ್ ಇಚ್ಛಾಶಕ್ತಿಸಮುದ್ಭವಃ।
> ಇಚ್ಛಾಶಕ್ತಿಸಹಸ್ರಾಂಶಾದ್ ಜ್ಞಾನಶಕ್ತಿಸಮುದ್ಭವಃ॥
> ಜ್ಞಾನಶಕ್ತಿಸಹಸ್ರಾಂಶಾತ್ ಕ್ರಿಯಾಶಕ್ತಿಸಮುದ್ಭವಃ।
> ಏತಾ ವೈ ಶಕ್ತಯಃ ಪಂಚ ನಿಷ್ಕಲಾಶ್ಚೇತಿ ಕೀರ್ತಿತಾಃ॥[೭೧]

"ಯೋಗಿಗಳ ಉಪಕಾರಕ್ಕಾಗಿ ಶಿವನು ಸ್ವೇಚ್ಛೆಯಿಂದ ಯೋಚಿಸಿದನು. ಶಿವನಲ್ಲಿ ಪರಾಶಕ್ತಿಯು ಸಾವಿರ ಭಾಗದಲ್ಲಿ ಒಂದು ಅಂಶದಿಂದ ಉಂಟಾಗುತ್ತದೆ. ಆ ಪರಾಶಕ್ತಿಯ ಸಾವಿರ ಭಾಗದಲ್ಲಿ ಒಂದು ಅಂಶದಿಂದ ಆದಿಶಕ್ತಿಯು ಹುಟ್ಟುತ್ತದೆ. ಆದಿಶಕ್ತಿಯ ಸಾವಿರ ಭಾಗದಲ್ಲಿ ಒಂದು ಅಂಶದಿಂದ ಇಚ್ಛಾಶಕ್ತಿಯು ಉದ್ಭವಿಸುತ್ತದೆ. ಇಚ್ಛಾಶಕ್ತಿಯ ಸಾವಿರ ಭಾಗದಲ್ಲಿ ಒಂದು ಅಂಶದಿಂದ ಜ್ಞಾನಶಕ್ತಿಯು ಹುಟ್ಟುತ್ತದೆ. ಜ್ಞಾನಶಕ್ತಿಯ ಸಾವಿರ ಭಾಗದಲ್ಲಿ ಒಂದು ಅಂಶದಿಂದ ಕ್ರಿಯಾಶಕ್ತಿಯು ಉಂಟಾಗುತ್ತದೆ. ಈ ಐದು ಶಕ್ತಿಗಳು ನಿಷ್ಕಲಾ ಎಂದು ಕರೆಯಲ್ಪಟ್ಟಿವೆ."

---

[೭೧] ವಾತುಲಶುದ್ಧತಂತ್ರ, ೧.೨೪-೨೭

ಮೇಲೆ ವಿವರಿಸಿದ ಪಂಚಶಕ್ತಿಗಳೆಂಬ ಪಂಚಾಂಗವಿಶಿಷ್ಟವಾದ, ಸಚ್ಚಿದಾನಂದ ರೂಪವಾದ ಪರಶಿವನೊಡನೆ ಸಾಮರಸ್ಯವನ್ನು ಹೊಂದಿದ ವಿಮರ್ಶಶಕ್ತಿಯ ಮತ್ತೊಂದು ಪರ್ಯಾಯವಾದ ಚಿಚ್ಛಕ್ತಿಯು ವಿಭಾಗಪರಾಮರ್ಶದ ದಶೆಯಲ್ಲಿ, ಅರ್ಥಾತ್ ಶಿವನ ಸೃಷ್ಟಿಯ ಉನ್ಮುಖಾವಸ್ಥೆಯಲ್ಲಿ ಸತ್ತ್ವ, ರಜಸ್ ಮತ್ತು ತಮಸ್ ಎಂಬ ಮೂರು ಗುಣವುಳ್ಳದ್ದಾಗುತ್ತದೆ. ಅವಳೇ (ಶಕ್ತಿಯೇ) ಈ ಸಿದ್ಧಾಂತದಲ್ಲಿ ಮಹಾಮಾಯೆ, ಪರಾಮಾಯೆ, ಊರ್ಧ್ವಮಾಯೆ ಮುಂತಾದ ಹೆಸರುಗಳಿಂದ ವ್ಯವಹರಿಸಲ್ಪಟ್ಟಿದ್ದಾಳೆ. ಇಂತಹ ಮಹಾಮಾಯೆಯೊಡನೆ ಸೇರಿದ ಪರಶಿವನೇ 'ಮಹೇಶ್ವರ' ಎಂದು ಕರೆಯಲ್ಪಟ್ಟಿದ್ದಾನೆ. ಇದನ್ನು ಉಪನಿಷತ್ತಿನಲ್ಲಿ-

ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಮ್।
ತಸ್ಯಾವಯವಭೂತೈಸ್ತು ವ್ಯಾಪ್ತಂ ಸರ್ವಮಿದಂ ಜಗತ್॥[೭೨]

"ಮಾಯೆಯನ್ನು ಪ್ರಕೃತಿಯೆಂದೂ, ಮಹೇಶ್ವರನನ್ನು ಮಾಯೆಯಿಂದ ಕೂಡಿದವನೆಂತಲೂ ಅರಿಯಬೇಕು. ಶಿವನ ಅವಯವರೂಪವಾದ ಈ ಜಗತ್ತು ಸರ್ವತ್ರ ವ್ಯಾಪಿಸಿದೆ" ಎಂದು ಹೇಳಲಾಗಿದೆ.

ಯಾವ ರೀತಿಯಾಗಿ ಮಾಯೆಯ ಸಂಬಂಧದಿಂದ ಪರಶಿವನಿಗೆ ಮಹೇಶ್ವರ ಎಂಬ ಹೆಸರು ಬಂದಿತೋ ಹಾಗೆಯೇ ಪರಶಿವನ ಸಂಬಂಧದಿಂದ ಶಕ್ತಿಯೂ ಕೂಡ ಮಾಯಾ ಶಬ್ದದಿಂದ ಕರೆಯಲ್ಪಡುತ್ತಾಳೆ ಎಂದು ಸಿದ್ಧಾಂತಾಗಮದಲ್ಲಿ ಹೇಳಲಾಗಿದೆ. ಉದಾಹರಣೆಗೆ-

ಮಂ ಶಿವಂ ಪರಮಂ ಬ್ರಹ್ಮ ಪ್ರಾಪ್ನೋತೀತಿ ಸ್ವಭಾವತಃ।
ಮಾಯೇತಿ ಪ್ರೋಚ್ಯತೇ ಲೋಕೇ ಬ್ರಹ್ಮನಿಷ್ಠಾ ಸನಾತನೀ॥[೭೩]

ಇಲ್ಲಿ "ಮಂ=ಶಿವಮ್, ಅಯತಿ=ಸ್ವಭಾವತಃ ಪ್ರಾಪ್ನೋತೀತಿ ಮಾಯಾ" (ಮಂ ಎಂದರೆ ಶಿವನನ್ನು, ಅಯತಿ ಅಂದರೆ ಸ್ವಭಾವತಃ ಸೇರುವುದರಿಂದ ಮಾಯೆ ಎಂದು ಕರೆಯಲ್ಪಟ್ಟಿದ್ದಾಳೆ) ಎಂದು ಉಪನಿಷತ್ತಿನಲ್ಲಿ ಪ್ರತಿಪಾದಿತವಾದ ವ್ಯುತ್ಪತ್ತಿಯಂತೆ ಮಾಯಾ ಶಕ್ತಿಯರ ನಿತ್ಯ ಶಿವಸಂಬಂಧವು ಸೂಚಿತವಾಯಿತು. ಹೀಗೆ ಶಕ್ತಿಯು ಶಿವನೊಂದಿಗಿನ ನಿತ್ಯ ಸಂಬಂಧದಿಂದ ಅವಳಿಗೆ 'ಮಾಯೆ' ಎಂತಲೂ, ಮತ್ತು ಮಾಯೆಯೊಡನೆ ಸೇರಿರುವ ಶಿವನಿಗೆ 'ಮಹೇಶ್ವರ' ಎಂಬ ಎರಡು ಹೆಸರುಗಳೂ ಅನ್ವರ್ಥವಾಗಿವೆ. ಇದರಿಂದ ಅವರಿಬ್ಬರ ಅನಾದಿತ್ವ ಮತ್ತು ನಿತ್ಯತ್ವವು ಸೂಚಿತವಾಯಿತು. ಮತ್ತು ಈ ಪರಾಮಾಯೆಯೇ ಶುದ್ಧ, ಆದುದರಿಂದಲೇ ಇವಳು ತನ್ನನ್ನು ಆಶ್ರಯಿಸಿರುವ ಮಹೇಶ್ವರನನ್ನು ಮೋಹಿಸುವುದಕ್ಕೆ ಬದಲಾಗಿ, ಸರ್ವಜ್ಞತ್ವವೇ ಮುಂತಾದ ಅವನ ಶ್ರೇಷ್ಠ ಗುಣಗಳನ್ನು ಸಂಪಾದಿಸುತ್ತಾಳೆ. ಅದನ್ನು ಶ್ರೀ ಶಿವಯೋಗಿ ಶಿವಾಚಾರ್ಯರು ಹೀಗೆ ಹೇಳಿದ್ದಾರೆ:

---

[೭೨] ಶ್ವೇ.ಉ, ೪.೧೦

[೭೩] ಶಕ್ತಿವಿಶಿಷ್ಟಾದ್ವೈತಸಿದ್ಧಾಂತ, ಪು. ೩

"ಉಪಾಧಿಃ ಪುನರಾಖ್ಯಾತಃ ಶುದ್ಧಾಶುದ್ಧವಿಭೇದತಃ।
ಶುದ್ಧೋಪಾಧಿಃ ಪರಾ ಮಾಯಾ ಸ್ವಾಶ್ರಯಾಽಮೋಹಕಾರಿಣೀ॥
ಮಾಯಾಶಕ್ತಿವಶಾದೀಶೋ ನಾನಾಮೂರ್ತಿಧರಃ ಪ್ರಭುಃ।
ಸರ್ವಜ್ಞಃ ಸರ್ವಕರ್ತಾ ಚ ನಿತ್ಯಮುಕ್ತೋ ಮಹೇಶ್ವರಃ॥[೭೪]"

"ಪೂರ್ವೋಕ್ತವಾದ ಮಾಯೋಪಾಧಿಯು ಶುದ್ಧ ಮತ್ತು ಅಶುದ್ಧ ಎಂದು ಎರಡು ವಿಧವಾಗಿದೆ. ಶುದ್ಧೋಪಾಧಿಯು ತನ್ನನ್ನಾಶ್ರಯಿಸಿದವರಿಗೆ ಮೋಹವನ್ನುಂಟು ಮಾಡದೆ ಇರುವುದರಿಂದ ಪರಾಮಾಯೆ (ಶ್ರೇಷ್ಠವಾದ ಮಾಯೆ) ಎನಿಸಿದೆ. ಪರಮೇಶ್ವರನು ಮಾಯಾಶಕ್ತಿಯ ಸಂಬಂಧವುಳ್ಳವನಾಗಿರುವುದರಿಂದ (ಸದ್ಯೋಜಾತ, ಚಂದ್ರಶೇಖರಾದಿ) ನಾನಾ ರೂಪಗಳನ್ನು (ಲೀಲೆಯಿಂದ) ಧರಿಸಿದ್ದಾನೆ. ಮಹೇಶ್ವರನು ಸದಸದ್ರೂಪವಾದ ಸಕಲ ಪದಾರ್ಥ ವಿಷಯಕವಾದ ಅನಾದಿ ಜ್ಞಾನವುಳ್ಳವನೂ, ಸಮಸ್ತ ಪ್ರಪಂಚದ ನಿರ್ಮಾಣಕ್ಕೆ ನಿಮಿತ್ತಕಾರಣನಾಗಿಯೂ, ಆಣವ ಮೊದಲಾದ ಅನಾದಿ ಮಲಗಳ ಸಂಬಂಧವಿಲ್ಲದವನಾಗಿಯೂ ಇರುವನು."

ಇಂತಹ ಮಾಯಾವಿಶಿಷ್ಟನಾದ ಪರಮೇಶ್ವರನು ಲೀಲಾವಸ್ಥೆಯನ್ನು ಹೊಂದಲು ಜಗತ್ತಿನ ಸೃಷ್ಟಿಯೇ ಮುಂತಾದ ವ್ಯಾಪಾರವನ್ನು ಅನುಸರಿಸಿದ್ದಾನೆ ಮತ್ತು ಭಕ್ತರನ್ನು ಅನುಗ್ರಹಿಸಿದ್ದಾನೆ. ಅದ್ವೈತ ವೇದಾಂತಿಗಳು- "ಯಾ ಮಾ (ನಾಸ್ತಿ) ಸಾ ಮಾಯಾ" (ಯಾವುದು ಇಲ್ಲವೋ ಅದು ಮಾಯೆ) ಎಂಬ ವ್ಯುತ್ಪತ್ತಿಯಿಂದ ಮಾಯೆಯ ಮಿಥ್ಯತ್ವವನ್ನು ಮತ್ತು ಬ್ರಹ್ಮನೊಡನೆ ಅವಳ ಸಂಬಂಧವು ಭ್ರಾಂತಿಯಿಂದ ಕಲ್ಪಿತವಾದ ವಸ್ತು (ಅಧ್ಯಾಸಿಕ) ಎಂದು ಪ್ರತಿಪಾದಿಸಿ, ಬ್ರಹ್ಮನ ಸಗುಣ ಸ್ವರೂಪವು ಪಾರಮಾರ್ಥಿಕವಲ್ಲ, ಆದರೆ ನಿರ್ಗುಣ ಸ್ವರೂಪವನ್ನೇ ಪಾರಮಾರ್ಥಿಕ ಎಂದು ಸಾಧಿಸಿದ್ದಾರೆ. ಒಂದು ವೇಳೆ ನಿರ್ಗುಣದ ಸತ್ಯತ್ವವನ್ನು ಮತ್ತು ಸಗುಣದ ಮಿಥ್ಯತ್ವವನ್ನು ಹೇಳಿದರೆ, ಆಗ "ಸ ಐಕ್ಷತ ಬಹು ಸ್ಯಾಂ ಪ್ರಜಾಯೇಯೇತಿ"[೭೫] (ಅನೇಕವನ್ನು ಸೃಷ್ಟಿಸಬೇಕೆಂದು ಅವನು ಯೋಚಿಸಿದನು) "ಸ ಈಕ್ಷಾಂ ಚಕ್ರೇ"[೭೬] (ಅವನು ಆಲೋಚನೆ ಮಾಡಿದನು) ಮುಂತಾದವುಗಳಿಂದ ಈಶ್ವರನ ಸಗುಣತ್ವ ಪ್ರತಿಪಾದಕವಾದ ನೂರಾರು ಶ್ರುತಿವಾಕ್ಯಗಳಿಗೆ ಅರ್ಥವೇ ಇಲ್ಲದಂತಾಗುತ್ತದೆ.

ಇದಲ್ಲದೆ, ಉಪಾಸಕರ ಅನುಗ್ರಹಕ್ಕಾಗಿ ಶಿವನ ಸಗುಣರೂಪವನ್ನು ಅಂಗೀಕರಿಸಲಾಗಿದೆ. ಒಂದು ವೇಳೆ ಉಪಾಸ್ಯನಾದ ಸಗುಣ ಶಿವನು ಸುಳ್ಳು ಎಂದರೆ ಉಪಾಸಕರಲ್ಲಿಯ ಶ್ರದ್ಧೆಯು ಇಲ್ಲದಂತಾಗಿ ಭಕ್ತಿಸಿದ್ಧಾಂತದ ಪ್ರತಿಪಾದನೆಯೇ ವ್ಯರ್ಥವಾಗುತ್ತದೆ. ಆದುದರಿಂದ ಸಗುಣರೂಪವನ್ನೂ ಕೂಡ ಸತ್ಯತ್ವವೆಂದೇ

---

[೭೪] ಸಿ.ಶಿ, ೫.೪೦-೪೨

[೭೫] ಬೃ.ಉ, ೧.೨.೫

[೭೬] ಪ್ರ.ಉ, ೬.೩

ಅಂಗೀಕರಿಸಬೇಕು. ಈ ವಿಷಯದಲ್ಲಿ ಅದ್ವೈತ ವೇದಾಂತಕ್ಕಿಂತಲೂ ಶಕ್ತಿವಿಶಿಷ್ಟಾದ್ವೈತವೇ ಮೋಕ್ಷಾಕಾಂಕ್ಷಿಗಳಾದ ಭಕ್ತರಿಂದ ಆದರಿಸಲ್ಪಡುತ್ತದೆ ಎಂದು ನಿಶ್ಚಯವಾದಂತಾಯಿತು.

ಕಾಶ್ಮೀರಶೈವ-ಸಿದ್ಧಾಂತಶೈವರಲ್ಲಿ ಶಕ್ತಿಯ ಭೇದ

ಕಾಶ್ಮೀರಶೈವಸಿದ್ಧಾಂತದಲ್ಲಿ- "ನ ಶಿವಃ ಶಕ್ತಿರಹಿತೋ ನ ಶಕ್ತಿಃ ಶಿವವರ್ಜಿತಾ"[೨೭] (ಶಕ್ತಿಯಿಲ್ಲದೆ ಶಿವನಿಲ್ಲ ಶಿವನಿಲ್ಲದೆ ಶಕ್ತಿಯಿಲ್ಲ) ಎಂಬ ಉಕ್ತಿಗನುಸಾರವಾಗಿ ಬೆಂಕಿ ಮತ್ತು ಸುಡುವ ಶಕ್ತಿಯಂತೆ ಅವರಿಬ್ಬರ ಐಕ್ಯವು ನಿತ್ಯವೆಂದು ಸಿದ್ಧವಾಗಿದೆ. ಹೀಗೆ ಪರಶಿವನೊಡನೆ ತಾದಾತ್ಮ್ಯವನ್ನು ಹೊಂದಿದ ಆ ಶಕ್ತಿಯು ಪ್ರಕಾಶಾನಂದರೂಪವಾಗಿದೆ. ಆ ರೀತಿಯಾದ ಶಕ್ತಿವಿಶಿಷ್ಟನಾದ ಅವನು ಪಾನಕರಸನ್ಯಾಯದಂತೆ ಸಮರಸರೂಪದಿಂದ ಒಬ್ಬನೇ ಆಗಿರುತ್ತಾನೆ. ಹೀಗೆ ಶಿವನ ಏಕತ್ವದ ಸಿದ್ಧಿಯ ಕಾರಣದಿಂದ ಈ ಸಿದ್ಧಾಂತದಲ್ಲಿ ಶಕ್ತಿಯೂ ಕೂಡ ಒಬ್ಬಳೇ. ಆದರೂ ಕೂಡ ಚಿಚ್ಛಕ್ತಿ, ಆನಂದಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿ ಎಂಬ ಐದು ಭೇದದಿಂದ ಶಕ್ತಿಯ ಐದು ಅವಸ್ಥೆಗಳು ಸ್ವೀಕೃತವಾಗಿವೆ.[೨೮] ಇವುಗಳಲ್ಲಿ ಮೊದಲಿನ ಎರಡು ಪರಶಿವಸ್ವರೂಪದವು, ಉಳಿದ ಮೂರು ಪ್ರಪಂಚದ ಉತ್ಪತ್ತಿಯೇ ಮೊದಲಾದವುಗಳಿಗೆ ಕಾರಣೀಭೂತವಾಗಿವೆ. ಚಿಚ್ಛಕ್ತಿಯುಕ್ತನಾದ ಶಿವನು ಸ್ವಯಂಪ್ರಕಾಶಮಾನನು ಮತ್ತು ಎಲ್ಲ ತತ್ತ್ವಗಳನ್ನು ಪ್ರಕಾಶಿಸುತ್ತಾನೆ. ಶಿವನು ಸ್ವಯಂಪ್ರಕಾಶಿಸದಿದ್ದಾಗ ಈ ಜಗತ್ತು ಅಂಧಕಾರಮಯವಾಗುತ್ತದೆ.[೨೯] ಹೀಗೆ ಆನಂದಶಕ್ತಿಯುಕ್ತನಾದ್ದರಿಂದ ಶಿವನು ಆನಂದಮಯ ಎಂದು ಕರೆಯಲ್ಪಡುತ್ತಾನೆ. ಲೋಕದಲ್ಲಿ ಯಾವ ರೀತಿಯಲ್ಲಿ ಆನಂದವನ್ನು ಪಡೆಯಲು ಬೇರೊಂದು ಭೋಗ್ಯ ವಸ್ತುವಿನ ಅಪೇಕ್ಷೆಯು ಉಂಟಾಗುತ್ತದೆಯೋ, ಅದೇ ರೀತಿಯಾಗಿ ಈ ಸಿದ್ಧಾಂತದಲ್ಲಿ ಶಿವನು ಆನಂದವನ್ನು ಪಡೆಯಲು ಮತ್ತೊಂದು ವಸ್ತುವನ್ನು ಅಪೇಕ್ಷಿಸುವುದಿಲ್ಲ ಎನ್ನುವ ಕಾರಣದಿಂದ ಶಿವನು ಪರಮ ಸ್ವತಂತ್ರನು ಮತ್ತು ಪರಿಪೂರ್ಣನು.

ಚಿದಾನಂದರೂಪನಾದ ಪರಶಿವನು ವಿಶ್ವರೂಪವಾಗಿ ಅಭಿವ್ಯಕ್ತನಾಗಲು ಬಯಸುವುದೇ ಇಚ್ಛಾಶಕ್ತಿಯು. "ತಚ್ಚಮತ್ಕಾರ ಇಚ್ಛಾಶಕ್ತಿಃ"[೩೦] (ಅದರ ಚಮತ್ಕಾರವೇ ಇಚ್ಛಾಶಕ್ತಿಯು) ಎಂದು ಅಭಿನವಗುಪ್ತರು ಆನಂದಶಕ್ತಿಯ ಚಮತ್ಕಾರವೇ ಇಚ್ಛಾಶಕ್ತಿ ಎಂದಿದ್ದಾರೆ. "ಪರತಸ್ತಸ್ಮಿನ್ ವಿಶ್ವಲಕ್ಷಣೇ ಕಾರ್ಯೇ ಯಜ್ಜ್ಞಾನಂ ತತ್‌ಪ್ರಕಾಶನಶಕ್ತಿರೂಪತಾ ಸಾ ಜ್ಞಾನಶಕ್ತಿಃ"[೩೧] (ಅವನಿಗಿಂತಲೂ ಮಿಗಿಲಾದ ವಿಶ್ವಲಕ್ಷಣ

---

[೨೭] ಶೈ.ದ.ಬಿ, ಪು. ೮೬

[೨೮] ತಂತ್ರಸಾರ, ಪು. ೨೫

[೨೯] "ಪ್ರಕಾಶಮಾನತಾ ಸ್ವಾತ್ಮನ್ಯಪಿ ನ ಸ್ಯಾದಿತ್ಯಂಧತಾ ಜಗತಃ"
-(ಈ.ಪ್ರ.ವಿ, ಭಾಗ.೧, ಪು.೧೧೫)

[೩೦] ತಂತ್ರಸಾರ, ಪು. ೬

[೩೧] ಶಿವದೃಷ್ಟಿವೃತ್ತಿ, ಪು. ೧೮

ಕಾರ್ಯದಲ್ಲಿ ಯಾವ ಜ್ಞಾನವು ಅದರ ಪ್ರಕಾಶನಶಕ್ತಿರೂಪದಿಂದಿರುವುದೋ ಅದೇ ಜ್ಞಾನಶಕ್ತಿ) ಎಂಬ ಉತ್ಪಲದೇವನ ಮಾತಿನಂತೆ ಇಚ್ಛಾಶಕ್ತಿಯೇ ವಿಕಸಿತವಾದಾಗ ವಿಶ್ವದ ಕಾರ್ಯವು ಪ್ರಕಾಶವಾಗುತ್ತದೆಯೋ ಆಗ ಅದನ್ನೇ ಜ್ಞಾನಶಕ್ತಿ ಎಂದು ಕರೆಯುತ್ತಾರೆ. ಪರಶಿವನ ಇಚ್ಛೆಯಂತೆ ನಾನಾರೂಪಗಳನ್ನು ಧರಿಸಿ ವಿಶ್ವಾತ್ಮನಲ್ಲಿ ಬೆಳಗುವ ಶಕ್ತಿಯೇ ಕ್ರಿಯಾಶಕ್ತಿ.[೮೨]

ಹೀಗೆ ಕಾಶ್ಮೀರಶೈವದರ್ಶನದಲ್ಲಿ ಶಕ್ತಿಯ ಐದು ಪ್ರಕಾರಗಳು[೮೩] ಪ್ರತಿಪಾದಿತವಾಗಿವೆ. ಇಲ್ಲಿ ಚಿಚ್ಛಕ್ತಿ ಮತ್ತು ಆನಂದಶಕ್ತಿಗಳು ಪರಶಿವನ ಸ್ವರೂಪಭೂತವಾದವು. ಸ್ವಾತಂತ್ರ್ಯಶಕ್ತಿ ಎಂಬ ಮತ್ತೊಂದು ಪರ್ಯಾಯದಿಂದ ಇಚ್ಛಾಶಕ್ತಿಯೇ ಜಗತ್ತನ್ನು ಬೆಳಗುವ ಸಂದರ್ಭದಲ್ಲಿ ಜ್ಞಾನರೂಪದಿಂದ ಮತ್ತು ಕ್ರಿಯಾರೂಪದಿಂದ ಪರಿಣಮಿಸುತ್ತದೆ ಎಂದು ತಿಳಿದುಬರುತ್ತದೆ.

ಸಿದ್ಧಾಂತಶೈವದರ್ಶನದಲ್ಲಿ ಶಕ್ತಿಯು ಶಿವನಂತೆ ಚಿದ್ರೂಪಳು ಮತ್ತು ಶಿವನ ಧರ್ಮರೂಪಳು. ಶಕ್ತಿಯು ಕೆಲವೆಡೆ ಜ್ಞಾನ-ಕ್ರಿಯಾರೂಪದಿಂದ, ಮತ್ತೆ ಕೆಲವೆಡೆ ಇಚ್ಛಾ-ಜ್ಞಾನ-ಕ್ರಿಯಾರೂಪದಿಂದ ಮತ್ತು ಮತ್ತೆ ಕೆಲವೆಡೆ ಸೃಷ್ಟಿ-ಸ್ಥಿತಿ-ಲಯ-ಪಿಧಾನ-ಅನುಗ್ರಹರೂಪದಿಂದ ಇರುವಳೆಂದು (ಶಕ್ತಿಯ) ವಿಭಾಗವು ನಿರೂಪಿತವಾಗಿದೆ.[೮೪]

ಶಕ್ತಿಭೇದ ವಿಮರ್ಶೆ

ಇದನ್ನೇ ಸೂಕ್ಷ್ಮವಾಗಿ ಯೋಚಿಸುವುದರಿಂದ ವೀರಶೈವದರ್ಶನದಲ್ಲಿ ಶಕ್ತಿಯ ಆರು ಬಗೆಗಳು, ಕಾಶ್ಮೀರಶೈವದರ್ಶನದಲ್ಲಿ ಐದು ಭೇದಗಳು ಮತ್ತು ಸಿದ್ಧಾಂತ ಶೈವದರ್ಶನದಲ್ಲಿಯೂ ಸಹ ಐದು ಭೇದಗಳು ಸ್ವೀಕೃತವಾಗಿರುವುದು ತಿಳಿದುಬರುತ್ತದೆ. ಇಲ್ಲಿ ಶಕ್ತಿಯ ಇಚ್ಛಾ-ಜ್ಞಾನ-ಕ್ರಿಯೆಗಳ ಸ್ವರೂಪದ ವಿಷಯದಲ್ಲಿ ಮೂರು ದರ್ಶನಗಳಲ್ಲಿಯೂ ಒಮ್ಮತವು ಕಂಡುಬಂದಿದೆ. ಚಿಚ್ಛಕ್ತಿಯ ಸ್ವರೂಪದ ವಿಷಯದಲ್ಲಿ ವಿಚಾರಸಾಮ್ಯವಿದ್ದರೂ ಸಹ, ಕಾಶ್ಮೀರಶೈವರಲ್ಲಿ ಶಿವ-ಶಕ್ತಿಯರ ಅಭೇದ ಸಂಬಂಧ, ವೀರಶೈವ-ಸಿದ್ಧಾಂತಶೈವರಲ್ಲಿ ಅವರಿಬ್ಬರ ಧರ್ಮ-ಧರ್ಮಿಭಾವ ಸಂಬಂಧವು ಸ್ವೀಕೃತವಾಗಿದೆ. ಈ ರೀತಿಯಾದ ಸಂಬಂಧದ ವಿಷಯದಲ್ಲಿ ವೀರಶೈವ ಮತ್ತು ಸಿದ್ಧಾಂತಶೈವರಲ್ಲಿ ಒಮ್ಮತವಿದೆ ಎಂದು ತಿಳಿಯಬೇಕು.

ಷಟ್‌ಸ್ಥಲೋಪಾಸನೆಯಿಂದ ಪರಶಿವತತ್ತ್ವಪ್ರಾಪ್ತಿಯನ್ನು ಪ್ರತಿಪಾದಿಸುವ ವೀರಶೈವ ಸಿದ್ಧಾಂತದಲ್ಲಿ ಸ್ಥಲತತ್ತ್ವವೇ ಉಪಾಸನೆಗೋಸ್ಕರ ಮಹಾಲಿಂಗ,

---

[೮೨] ಸರ್ವಾಕಾರಯೋಗಿತ್ವಂ ಕ್ರಿಯಾಶಕ್ತಿಃ, ತಂತ್ರಸಾರ, ಪು. ೬

[೮೩] "ಪರಮೇಶ್ವರಃ ಪಂಚಭಿಃ ಶಕ್ತಿಭಿರ್ನಿರ್ಭರಃ" -ತಂತ್ರಸಾರ, ಪು. ೭೩
ಅತ್ರ ನಿರ್ಭರೋ ನಾಮ ಪರಿಪೂರ್ಣ ಇತ್ಯರ್ಥಃ।

[೮೪] ಶೈವದರ್ಶನಬಿಂದುಃ, ಪು. ೧೭-೧೮

ಪ್ರಸಾದಲಿಂಗ, ಜಂಗಮಲಿಂಗ, ಶಿವಲಿಂಗ, ಗುರುಲಿಂಗ, ಆಚಾರಲಿಂಗ ಭೇದದಿಂದ ಆರು ವಿಧವಾಗುತ್ತದೆಂದು ಅಂಗೀಕರಿಸಿರುವುದರಿಂದ, ಇವೆಲ್ಲವೂ ಶಕ್ತಿಯುಕ್ತತ್ವವಾಗಿವೆ ಎಂದು ಸ್ವೀಕರಿಸುವುದರಿಂದ ಇಲ್ಲಿ ಶಕ್ತಿಯ ಆರು ಭೇದಗಳು ಪ್ರತಿಪಾದಿತವಾದವೆಂಬುದು ಈ ದರ್ಶನದ ವಿಶೇಷ. ಆರು ವಿಧ ಶಕ್ತಿಗಳೊಂದಿಗೆ ಯುಕ್ತವಾಗಿರುವ ಆರು ಲಿಂಗಗಳ ಸ್ವರೂಪ ವಿವರಣೆಯನ್ನು ಐದನೆಯ ಪರಿಚ್ಛೇದದಲ್ಲಿ ವಿಚಾರಮಾಡಲಾಗುವುದು.

ಹೀಗೆ ವೀರಶೈವ, ಕಾಶ್ಮೀರಶೈವ, ಸಿದ್ಧಾಂತಶೈವ ದರ್ಶನಗಳಲ್ಲಿ ಪರಶಿವತತ್ತ್ವವು ಶಕ್ತಿಯುಕ್ತವಾಗಿದೆಯೆಂದು ಪ್ರತಿಪಾದಿತವಾಯಿತು. ಆ ಶಕ್ತಿಯು ವಸ್ತುತಃ ಒಬ್ಬಳೇ ಆದರೂ ಕೂಡ ಬೇರೆ ಬೇರೆ ವ್ಯವಹಾರ-ವ್ಯವಸ್ಥೆಗಾಗಿ ಅವಳ ಭೇದಗಳುಂಟಾಗಿವೆ ಎಂದು ತಿಳಿದುಬರುತ್ತದೆ. ವಿಮರ್ಶಶಕ್ತಿಯು ಪರಶಿವಸ್ವರೂಪಭೂತವಾದದ್ದು ಎಂಬ ವಿಷಯದಲ್ಲಿ ವೀರಶೈವ-ಕಾಶ್ಮೀರಶೈವರಲ್ಲಿ ಸಾಮ್ಯವಿದೆ. ಆದರೆ ಅವರಿಬ್ಬರ ಸಂಬಂಧದ ವಿಷಯದಲ್ಲಿ ಒಮ್ಮತವಿಲ್ಲ. ಅವರಿಬ್ಬರ ಸಂಬಂಧವು ಭೇದಾಭೇದಾತ್ಮಕ ಎಂದು ವೀರಶೈವರೂ ಮತ್ತು ಅಭೇದಾತ್ಮಕ ಎಂದು ಕಾಶ್ಮೀರಶೈವರೂ ಅಭಿಪ್ರಾಯಪಡುತ್ತಾರೆ. ಪರಶಿವನ ಸ್ವಸ್ಥಾವಸ್ಥೆಯ ಸಮರಸೀಭೂತವಾದ ವಿಮರ್ಶಶಕ್ತಿಯೇ ತನ್ನಲ್ಲಿರುವ ಸತ್ತ್ವ, ರಜಸ್ ಮತ್ತು ತಮಸ್ ಎಂಬ ಮೂರು ಗುಣಗಳ ಲೀಲಾವಸ್ಥೆಯಿಂದ 'ಮಾಯೆ' ಎಂದು ಕರೆಯಲ್ಪಡುತ್ತದೆ. ಈ ಪ್ರಪಂಚವೇ ಉಪಾದಾನಭೂತವಾಗಿದೆ. ಮಾಯಾ ಶಕ್ತಿಯ ಯೋಗದಿಂದ ಮಹೇಶ್ವರ ಎಂಬ ಹೆಸರುಳ್ಳ ಪರಶಿವನು ಪ್ರಪಂಚದ ಉತ್ಪತ್ತಿಯ ವಿಷಯದಲ್ಲಿ ನಿಮಿತ್ತಕಾರಣನಾಗುತ್ತಾನೆ. ಮಾಯೆ-ಮಹೇಶ್ವರರಲ್ಲಿ ಅತ್ಯಂತ ಭೇದವಾಗಲಿ ಅಥವಾ ಅಭೇದವಾಗಲಿ ಇಲ್ಲವೆಂದು ಮಾಯಾವಿಶಿಷ್ಟನಾದ ಮಹೇಶ್ವರನು ಜಗತ್ತಿನ ಉತ್ಪತ್ತಿಯ ವಿಷಯದಲ್ಲಿ ಅಭಿನ್ನನಿಮಿತ್ತೋಪಾದಾನಕಾರಣನು ಎಂದು ವೀರಶೈವರು ಪ್ರತಿಪಾದಿಸುತ್ತಾರೆ. ಸರ್ವಜ್ಞತ್ವವೇ ಮೊದಲಾದ ದಿವ್ಯಗುಣಗಳನ್ನು ಹೊಂದಿರುವ ಮಹೇಶ್ವರನು ಪರಶಿವನ ಸಗುಣ ಸ್ವರೂಪವುಳ್ಳವನು. ಆದುದರಿಂದ ಅವನು ಮುಮುಕ್ಷುಗಳಿಂದ ಪೂಜಿಸಲ್ಪಡುತ್ತಾನೆ. ಭಕ್ತಿಸಿದ್ಧಾಂತದ ಸಾರ್ಥಕತೆಯಿರುವುದು ಇದರಿಂದ ಸ್ಪಷ್ಟವಾಗುತ್ತದೆ. ಆದೇ ಇಲ್ಲಿ ವಿಮರ್ಶಶಕ್ತಿಯುಕ್ತನಾದ ಪರಶಿವನು ವಿಶ್ವೋತ್ತೀರ್ಣ ಮತ್ತು ಮಾಯಾಶಕ್ತಿವಿಶಿಷ್ಟನಾಗಿ ವಿಶ್ವಮಯನೆಂದು ತಿಳಿಯಬೇಕು. ಮತ್ತು ವಿಶ್ವೋತ್ತೀರ್ಣನಾದ ಪರಶಿವನು ಈ ಸಿದ್ಧಾಂತದಲ್ಲಿ ಮೂವತ್ತಾರು ತತ್ತ್ವಗಳಿಂದ ಬೇರೆಯಾದ ಘನಲಿಂಗವೆಂಬ ಪರ್ಯಾಯ ನಾಮವುಳ್ಳ ಮುಕ್ತಾತ್ಮಪ್ರಾಪ್ಯನು.

ಕಾಶ್ಮೀರಶೈವಸಿದ್ಧಾಂತದಲ್ಲಿ ಪರಶಿವನು ಪ್ರಕಾಶರೂಪನು ಮತ್ತು ಅವನಲ್ಲಿರುವ ಶಕ್ತಿಯು ವಿಮರ್ಶರೂಪಿಯು. 'ವಿಮರ್ಶಶರೀರ ಏವ ಪ್ರಕಾಶಯುಕ್ತಃ'[೬೫] (ವಿಮರ್ಶಶರೀರವೇ ಪ್ರಕಾಶಯುಕ್ತವಾಗಿದೆ) ಎಂಬ ಅಭಿನವಗುಪ್ತರ ಉಕ್ತಿಯಂತೆ ಇಲ್ಲಿ ಪ್ರಕಾಶ-ವಿಮರ್ಶ ಗಳೆಂಬ ಶಿವ-ಶಕ್ತಿಯರ ಐಕ್ಯವು ತಿಳಿದುಬರುತ್ತದೆ. ಇದೂ

---

[೬೫] ಈ.ಪ್ರ.ವಿ.ವಿ, ಭಾಗ.೨, ಪು.೨೦೭

ಕೂಡ ಈ ಸಿದ್ಧಾಂತದಲ್ಲಿ ವಿಶ್ವೋತ್ತೀರ್ಣ ಮತ್ತು ಮೂವತ್ತಾರು ತತ್ತ್ವಗಳನ್ನು ಮೀರಿದವನು. ಈ ವಿಶ್ವೋತ್ತೀರ್ಣನೇ ತನ್ನ ಸ್ವಾತಂತ್ರ್ಯಶಕ್ತಿಯಿಂದ ಮೂವತ್ತಾರು ತತ್ತ್ವಗಳ ರೂಪದಲ್ಲಿ ಬೆಳಗುತ್ತಾನೆ. ಶಿವ-ಶಕ್ತಿಯರ ಅಭಿನ್ನತೆಯ ಕಾರಣದಿಂದ ಇಲ್ಲಿಯೂ ಕೂಡ ಪ್ರಪಂಚದ ಉತ್ಪತ್ತಿಯ ಕಾಲದಲ್ಲಿ ಪರಶಿವನು ಅಭಿನ್ನನಿಮಿತ್ತ ಉಪಾದಾನ ಕಾರಣನು. ಅವನೇ ವಿಶ್ವಮಯನು. ಇಲ್ಲಿ ವಿಶ್ವೋತ್ತೀರ್ಣ-ವಿಶ್ವಮಯ ಇವರ ವಿಷಯದಲ್ಲಿ ಸಾಗರತರಂಗನ್ಯಾಯದಂತೆ ಅಭೇದವೇ ಸ್ವೀಕೃತವಾಗಿದೆ. ವೀರಶೈವ ಸಿದ್ಧಾಂತದಲ್ಲಿ ಪರಶಿವನು ಒಂದಾನೊಂದು ಕಾಲದಲ್ಲಿ ವಿಶ್ವಲೀಲಾ ವ್ಯಾಪಾರರಹಿತನಾಗಿ ಸ್ವಸ್ಥಾವಸ್ಥೆಯಲ್ಲಿರುವನೆಂದು ಸ್ವೀಕರಿಸಲ್ಪಟ್ಟಿದೆ. ಆದರೆ ಕಾಶ್ಮೀರಶೈವ ಸಿದ್ಧಾಂತದಲ್ಲಿ ಪರಶಿವನು ತನ್ನ ಸ್ವಾತಂತ್ರ್ಯ ಬಲದಿಂದ ಯಾವಾಗಲೂ ಲೀಲೆಯನ್ನು ಅಭಿನಯಿಸುತ್ತಲೇ ಇರುತ್ತಾನೆ ಎಂದು ಸ್ವೀಕರಿಸುವುದರಿಂದ ಇಲ್ಲಿ ಪರಶಿವನ ಸ್ವಸ್ಥಾವಸ್ಥೆಯು ಇರುವುದಿಲ್ಲ. ಆದುದರಿಂದ ಜಗಜ್ಜನ್ಮಾದಿಕಾರಣತ್ವವೇ (ಪ್ರಪಂಚದ ಸೃಷ್ಟಿ ಮುಂತಾದ ಕಾರಣತ್ವವೇ) ಪರಶಿವನ ತಟಸ್ಥ ಲಕ್ಷಣವಲ್ಲ, ಆದರೆ ಅವನ ಸ್ವರೂಪಲಕ್ಷಣವೇ ಆಗಿದೆ.

ಸಿದ್ಧಾಂತಶೈವದರ್ಶನದಲ್ಲಿ ಪರಶಿವನು 'ಪತಿ' ಶಬ್ದದಿಂದ ಕರೆಯಲ್ಪಡುತ್ತಾನೆ. ವಿಶ್ವೋತ್ತೀರ್ಣ[೮೬] ಎಂದು ಕರೆಯಲ್ಪಟ್ಟರೂ ಸಹ ಅವನು ಮೂವತ್ತಾರು ತತ್ತ್ವಗಳನ್ನು ಮೀರಿದವನಲ್ಲ. ಆದರೆ ಮೂವತ್ತಾರು ತತ್ತ್ವಗಳಲ್ಲಿ ಮೊದಲನೆಯ ತತ್ತ್ವವೇ ಆಗಿದ್ದಾನೆ. ಆ ಶಿವನು ಮೊದಲಿಗೆ ತನ್ನ ಕಣ್ಣುಗಳನ್ನು ತೆರೆಯುವ ರೂಪದಿಂದ[೮೭] ಚಿಚ್ಛಕ್ತಿಯೊಡನೆ ಸೇರುತ್ತಾನೆ. ಇಲ್ಲಿ ಶಿವ-ಚಿಚ್ಛಕ್ತಿಯರ ನಡುವೆ ಭೇದಾಭೇದರೂಪ ಸಮವಾಯ ಸಂಬಂಧವು ಅಂಗೀಕೃತವಾಗಿದೆ. ಚಿಚ್ಛಕ್ತಿಯುಕ್ತನಾಗಿರುವುದರಿಂದಲೇ ಶಿವನು ಯಾವಾಗಲೂ ಸ್ವರೂಪಜ್ಞಾನಸಂಪನ್ನನಾಗಿರುತ್ತಾನೆ. ಈ ಶಿವನು ತನ್ನ ಶಕ್ತಿಯಿಂದ 'ಮಾಯೆ' ಎಂಬ ಬಿಂದುತತ್ತ್ವವನ್ನು ಕ್ಷೋಭೆಗೊಳಿಸುತ್ತಾ ಸೃಷ್ಟಿಯೇ ಮುಂತಾದ ಪಂಚಕೃತ್ಯಗಳನ್ನು ನಿರ್ವಹಿಸುತ್ತಾನೆ. ಪಂಚಕೃತ್ಯಗಳಲ್ಲಿ ಚಿಚ್ಛಕ್ತಿಯುಕ್ತನಾದ ಶಿವನು ನಿಮಿತ್ತಕಾರಣ ಮತ್ತು ಬಿಂದು ಉಪಾದಾನ ಕಾರಣ. ಶಿವನ ಅಭಿನ್ನನಿಮಿತ್ತೋಪಾದಾನ ಕಾರಣತ್ವವನ್ನು ಇವರು ಅಂಗೀಕರಿಸುವುದಿಲ್ಲ. ಪಂಚಮಂತ್ರಗಳಿಂದ ಕೂಡಿದ ಶರೀರವುಳ್ಳವನೆಂದು ಕರೆಯಲ್ಪಟ್ಟರೂ[೮೮] ಕೂಡ ಶಿವನು ಅಶರೀರನೆಂದೇ ಇವರು ಪ್ರತಿಪಾದಿಸುತ್ತಾರೆ. ಆದರೂ ಸಹ ಉಪಾಸನೆಗೋಸ್ಕರ ಇಲ್ಲಿ ಶಿವನ ಸಗುಣ

---

[೮೬] "ಪತಿಃ ವಿಶ್ವೋತ್ತೀರ್ಣಃ ಶಿವಃ" -(ಶೈವದರ್ಶನಬಿಂದುಃ, ಪು. ೧೭)

[೮೭] ಚಿದನುಗ್ರಹಹೇತೋರಸ್ಯ ಸಿಸೃಕ್ಷೋರ್ಯ ಆದ್ಯ ಉನ್ಮೇಷಃ।
ತಚ್ಛಕ್ತಿತತ್ತ್ವಮಭಿಹಿತಮವಿಭಾಗಾಪನ್ನಮಸ್ಯೈವ॥ -(ತತ್ತ್ವಪ್ರಕಾಶ, ೨೭)

[೮೮] "ಅತಃ ಪಂಚಮಂತ್ರಾತ್ಮಿಕಾಃ ಪಂಚಕೃತ್ಯೋಪಯೋಗಿನ್ಯ ಈಶಾನಾದ್ಯಾಃ ಶಕ್ತಯ ಏವ ಶರೀರಕಾರ್ಯಂ ಕುರ್ವಾಣಾಸ್ತನುರಿತ್ಯುಪಚಾರಾದುಚ್ಯಂತೇ" -(ತತ್ತ್ವಪ್ರಕಾಶವೃತ್ತಿ, ೬)

ರೂಪತ್ವವನ್ನು ಅಂಗೀಕರಿಸಲಾಗಿದೆ.[೮೯] ಶಿವನ ಸಗುಣರೂಪವನ್ನು ಮುಮುಕ್ಷುಗಳು ಸತ್ಯವಾಗಿಯೂ ಉಪಾಸಿಸುತ್ತಾರೆ ಎನ್ನುವುದರಿಂದ ಈ ವಿಷಯದಲ್ಲಿ ವೀರಶೈವ-ಸಿದ್ಧಾಂತಶೈವರಲ್ಲಿ ಒಮ್ಮತವು ಕಂಡುಬರುತ್ತದೆ.

ಹೀಗೆ ಇಲ್ಲಿ ಶಕ್ತಿವಿಶಿಷ್ಟಾದ್ವೈತತತ್ತ್ವವನ್ನು ವಿಮರ್ಶಿಸಲಾಯಿತು. ಪರಶಿವನ ಶಕ್ತಿಸ್ವರೂಪದ ನಿರೂಪಣೆಯ ನಂತರ ಕ್ರಮವಾಗಿ ಜೀವಸ್ವರೂಪವನ್ನು ನಿರೂಪಿಸಬೇಕು. ಆದುದರಿಂದ ಮೂರು, ನಾಲ್ಕು, ಐದನೆಯ ಪರಿಚ್ಛೇದಗಳಲ್ಲಿ ಜೀವಾತ್ಮನ ಮುಕ್ತಿಗೆ ಸಹಕಾರಿ ಸಾಧನಭೂತವಾದ ಅಷ್ಟಾವರಣ-ಪಂಚಾಚಾರ, ಹಾಗೆಯೇ ಉಪಾಸನೆಯ ಸೋಪಾನಭೂತವಾದ ಷಟ್‌ಸ್ಥಲಗಳ ಸ್ವರೂಪವನ್ನು ವಿವೇಚಿಸಲಾಗುವುದು. ಈ ವಿಷಯಗಳು ಜೀವಾತ್ಮನಿಗೆ ಸಂಬಂಧಿಸಿವೆ. ಪರಿಚ್ಛೇದದ ಕೊನೆಯಲ್ಲಿ ಜೀವಾತ್ಮ ಸ್ವರೂಪ ನಿರೂಪಣೆಯಿಂದ ಮುಂದಿನ ಪರಿಚ್ಛೇದಗಳಲ್ಲಿ ಪ್ರಸ್ತಾಪಿಸುವ ಈ ವಿಷಯಗಳ ಸಂಬಂಧವನ್ನು ಸಾಧಾರವಾಗಿ ಸ್ಥಾಪಿಸಲಾಗಿದೆ. ಆದುದರಿಂದ ಈಗ ಜೀವಾತ್ಮ ಸ್ವರೂಪವನ್ನು ಬಿಟ್ಟು ಮೊದಲಿಗೆ ಜಗತ್ತಿನ ಸ್ವರೂಪವನ್ನು ನಿರೂಪಿಸಲಾಗುವುದು.

ಜಗತ್ತಿನ ಸ್ವರೂಪ ವಿಮರ್ಶೆ

ದಾರ್ಶನಿಕ ಸಮಾಜದಲ್ಲಿ ಜಗತ್ತಿನ ಸೃಷ್ಟಿಸ್ವರೂಪವನ್ನು ವ್ಯವಸ್ಥೆಗೊಳಿಸುವುದಕ್ಕೋಸ್ಕರ ಅನೇಕ ವಾದಗಳು ಬಂದಿವೆ. "ತನ್ನ ಇಷ್ಟದಂತೆ ಹೇಳುವುದು" ಎಂದು ಇಲ್ಲಿ 'ವಾದ' ಶಬ್ದದ ಅರ್ಥ. ಈ ವಿಷಯದಲ್ಲಿ ವೀರಶೈವ ಸಿದ್ಧಾಂತದಲ್ಲಿ ಅವಿಕೃತಪರಿಣಾಮವಾದದಿಂದ, ಕಾಶ್ಮೀರಶೈವದರ್ಶನದಲ್ಲಿ ಆಭಾಸವಾದದಿಂದ ಮತ್ತು ಸಿದ್ಧಾಂತ ಶೈವದರ್ಶನದಲ್ಲಿ ಸತ್ಕಾರ್ಯವಾದದಿಂದ ಸೃಷ್ಟಿಯ ವಿಷಯವು ಸ್ಥಾಪಿಸಲ್ಪಟ್ಟಿದೆ. ಈಗ ವೀರಶೈವರು ಅಂಗೀಕರಿಸಿರುವ ಅವಿಕೃತ ಪರಿಣಾಮವಾದದ ರೀತಿಯಲ್ಲಿ ಸೃಷ್ಟಿಯ ಸ್ವರೂಪವನ್ನು ನಿರೂಪಿಸಲಾಗುವುದು. ಕೊನೆಯಲ್ಲಿ ಆಭಾಸವಾದ ಮತ್ತು ಸತ್ಕಾರ್ಯವಾದಗಳ ಸ್ವರೂಪವನ್ನು ವಿಮರ್ಶಿಸಲಾಗುವುದು.

ವೀರಶೈವಸಿದ್ಧಾಂತದಲ್ಲಿ ತತ್ತ್ವಾತ್ಮಕವಾದ ಸೃಷ್ಟಿಯು ಅಂಗೀಕೃತವಾಗಿದೆ. ಅನಾರೋಪಿತವಾದ (ಆರೋಪಿತವಾಗದ) ರೂಪವು ತತ್ತ್ವವಾಗುತ್ತದೆ. (ಅನಾರೋಪಿತಂ ರೂಪಂ ತತ್ತ್ವಂ ಭವತಿ). ಆದುದರಿಂದ ಇಲ್ಲಿ ತತ್ತ್ವಾತ್ಮಕವಾದ ಈ ಪ್ರಪಂಚವು ಶಿವ-ಶಕ್ತಿಯರ ವಿಲಾಸರೂಪವಾಗಿದೆ. ಈ ವಿಲಾಸವು- ೧. ಶಿವ, ೨. ಶಕ್ತಿ, ೩. ಸದಾಶಿವ, ೪. ಈಶ್ವರ, ೫. ಶುದ್ಧವಿದ್ಯಾ, ೬. ಮಾಯಾ, ೭. ಕಲಾ, ೮. ವಿದ್ಯಾ, ೯. ರಾಗ, ೧೦. ಕಾಲ, ೧೧. ನಿಯತಿ, ೧೨. ಪುರುಷ, ೧೩. ಪ್ರಕೃತಿ, ೧೪. ಮಹತ್, ೧೫. ಅಹಂಕಾರ, ೧೬. ಮನಸ್ಸು, ೧೭. ಶ್ರೋತ್ರ (ಕಿವಿ), ೧೮. ತ್ವಕ್ (ಚರ್ಮ), ೧೯. ಚಕ್ಷು (ಕಣ್ಣು), ೨೦. ಜಿಹ್ವೆ (ನಾಲಿಗೆ), ೨೧. ಘ್ರಾಣ

---

[೮೯] "ಧ್ಯಾನಾರ್ಥಮೇವೇಶ್ವರಸ್ಯ ಪಂಚವಕ್ತ್ರಾದ್ಯಾಕಾರಃ ಶ್ರೂಯತೇ, ನಿರಾಕಾರೇ ಧ್ಯಾನಪೂಜಾದ್ಯಯೋಗಾತ್।" -(ತತ್ತ್ವಪ್ರಕಾಶವೃತ್ತಿ, ಪು. ೬)

(ಮೂಗು), ೨೨. ವಾಕ್ (ಮಾತು), ೨೩. ಪಾಣಿ (ಕೈ), ೨೪. ಪಾದ (ಕಾಲು), ೨೫. ಪಾಯು (ಗುದ), ೨೬. ಉಪಸ್ಥ (ಜನನೇಂದ್ರಿಯ), ೨೭. ಶಬ್ದ, ೨೮. ಸ್ಪರ್ಶ, ೨೯. ರೂಪ, ೩೦. ರಸ, ೩೧.ಗಂಧ, ೩೨. ಆಕಾಶ, ೩೩. ವಾಯು, ೩೪. ಅಗ್ನಿ, ೩೫. ಜಲ ಮತ್ತು ೩೬. ಪೃಥಿವೀ ಎಂಬ ಮೂವತ್ತಾರು ತತ್ತ್ವಗಳಿಂದ ಕೂಡಿದೆ.

ಇಲ್ಲಿ ಉಕ್ತವಾಗಿರುವ ಎರಡನೆಯದಾದ ಯಾವ ಶಕ್ತಿತತ್ತ್ವವಿದೆಯೋ ಅದೇ ಸದಾಶಿವತತ್ತ್ವದಿಂದ ಮೊದಲ್ಗೊಂಡು ಭೂತತ್ತ್ವದವರೆಗಿನ ಮೂವತ್ತನಾಲ್ಕು ತತ್ತ್ವಗಳಾಗಿ ಪರಿಣಮಿಸುತ್ತದೆ. ಅದನ್ನೇ ಶಕ್ತಿಸ್ತುತಿಯ ನೆಪದಲ್ಲಿ ಶಿವಯೋಗಿ ಶಿವಾಚಾರ್ಯರು ಹೀಗೆ ಹೇಳಿದ್ದಾರೆ:

ಸದಾಶಿವಮುಖಾಶೇಷತತ್ತ್ವಮೌಕ್ತಿಕಶುಕ್ತಿಕಾಮ್।
ವಂದೇ ಮಾಹೇಶ್ವರೀಂ ಶಕ್ತಿಂ ಮಹಾಮಾಯಾದಿರೂಪಿಣೀಮ್॥[೬೦]

"ಸದಾಶಿವಾದಿ ಭೂಮಂತ್ಯವಾದ ಸಕಲ ತತ್ತ್ವಗಳೆಂಬ ಮುತ್ತುಗಳಿಗೆ ಶುಕ್ತಿ (ಚಿಪ್ಪಿನ) ರೂಪಳಾದ, ಮಹಾಮಾಯೆ ಮೊದಲಾದ ಹೆಸರುಳ್ಳವಳೂ ಆದ ಶಿವಸಮವೇತಳಾದ ಚಿಚ್ಛಕ್ತಿಯನ್ನು ನಮಸ್ಕರಿಸುತ್ತೇನೆ."

ಆದುದರಿಂದ ಈ ಜಗತ್ತು ಶಕ್ತಿಯ ವಿಲಾಸವೇ ಆಗಿದೆ. ಆದ ಕಾರಣದಿಂದಲೇ- "ಶಕ್ತಿರೇತಜ್ಜಗತ್ಸರ್ವಮ್"[೬೧] (ಈ ಜಗತ್ತೆಲ್ಲವೂ ಶಕ್ತಿಯಿಂದ ವ್ಯಾಪಿಸಿದೆ), "ಸೂಕ್ಷ್ಮಸ್ಥೂಲಾತ್ಮಕವಿಶ್ವಮೇವ ಶಕ್ತಿಃ" (ವಿಶ್ವವೆಲ್ಲವೂ ಶಕ್ತಿಯ ಸೂಕ್ಷ್ಮ ಮತ್ತು ಸ್ಥೂಲ ಶರೀರದ ರೂಪದ್ದಾಗಿದೆ) ಎಂದು ಹೇಳಲ್ಪಟ್ಟಿರುವುದು. ಇಲ್ಲಿ ಪ್ರಪಂಚ ಮತ್ತು ಶಕ್ತಿ ಇವರಿಬ್ಬರ ಅವಿನಾಭಾವರೂಪವಾದ ಶಿವ-ಶಕ್ತಿಯರ ವಿಶ್ವದ ವಿಲಾಸರೂಪತ್ವವು ಹೇಳಲ್ಪಟ್ಟಿದೆ.

ಇಲ್ಲಿ ಸ್ಪಷ್ಟವಾಗುವುದೇನೆಂದರೆ ಪರಶಿವನ ನಿರ್ಗುಣಾವಸ್ಥೆಯ (ಸ್ವಸ್ಥಾವಸ್ಥೆಯ) ಸಮರಸೀಭೂತವಾದ ವಿಮರ್ಶಶಕ್ತಿಯೇ ಅವನ ಲೀಲಾವಸ್ಥೆಯ ಸತ್ತ್ವ, ರಜಸ್ ಮತ್ತು ತಮಸ್ ಎಂಬ ಮೂರು ಗುಣವಾದಾಗ ಅದೇ ಮಾಯೆ ಎಂದು ಕರೆಯಲ್ಪಡುತ್ತದೆ. ಆ ಮಾಯಾಶಕ್ತಿಯ ಸಂಬಂಧದಿಂದ ಪರಶಿವನು ಘೃತಕಾಠಿನ್ಯ ನ್ಯಾಯದಿಂದ, ಅರ್ಥಾತ್ ದ್ರವರೂಪವಾದ ಅಪರಿಮಿತ ತುಪ್ಪವು ಒಂದೆಡೆ ಹೇಗೆ ಘನರೂಪವಾಗುತ್ತದೆಯೋ ಅದೇ ರೀತಿಯಾಗಿ ಅಪರಿಮಿತ ಸುಖಸ್ವರೂಪವು ಸ್ವೇಚ್ಛೆಯಿಂದ ಸುಖಬಾಹುಲ್ಯವನ್ನು ಬಯಸಿ ಯಾವುದೋ ಒಂದು ರೂಪವನ್ನು ಧರಿಸುತ್ತದೆ.[೬೨] ಅದೇ ಸಗುಣ ಸ್ವರೂಪವು ಮಹೇಶ್ವರ ಎಂದಾಗಿದೆ. ಅವನೇ ಮಾಯಾಶಕ್ತಿಯುಕ್ತನಾಗಿ ಸದಾಶಿವನೇ ಮೊದಲಾದ ತತ್ತ್ವವಾಗಿ ಪರಿಣಮಿಸುತ್ತಾನೆ.

---

[೬೦] ಸಿ.ಶಿ, ೨.೨

[೬೧] ಶಿವಾದ್ವೈತಪರಿಭಾಷಾ, ಪು.೨

[೬೨] ಶಿವಾಭಿಧಂ ಪರಂ ಬ್ರಹ್ಮ ಜಗನ್ನಿರ್ಮಾತುಮಿಚ್ಛಯಾ।
ಸ್ವರೂಪಮಾದಧೇ ಕಿಂಚಿತ್ಸುಖಸ್ಫೂರ್ತಿವಿಜೃಂಭಿತಮ್॥

ಪೂರ್ವೋಕ್ತ ಮೂವತ್ತಾರು ತತ್ತ್ವಗಳಲ್ಲಿ ‘ಶಿವ’ನಿಂದ ‘ಶುದ್ಧವಿದ್ಯೆ’ಗೆ ಕೊನೆಗೊಳ್ಳುವ ತತ್ತ್ವಗಳು ಶುದ್ಧವೆಂತಲೂ, ‘ಮಾಯೆ’ಯಿಂದ ‘ಪುರುಷ’ತತ್ತ್ವದವರೆಗಿನ ತತ್ತ್ವಗಳು ಶುದ್ಧಾಶುದ್ಧವೆಂತಲೂ ಮತ್ತು ‘ಪ್ರಕೃತಿ’ಯಿಂದ ಆರಂಭವಾಗಿ ‘ಪೃಥ್ವಿ’ಗೆ ಕೊನೆಗೊಳ್ಳುವ ತತ್ತ್ವಗಳು ಅಶುದ್ಧತತ್ತ್ವಗಳೆಂದು ನಿರೂಪಿತವಾಗಿವೆ.[೬೩] ಕಾಶ್ಮೀರಶೈವರು ಮತ್ತು ಸಿದ್ಧಾಂತ ಶೈವರು ಪೂರ್ವೋಕ್ತ ಮೂವತ್ತಾರು ತತ್ತ್ವಗಳನ್ನು ಅಂಗೀಕರಿಸಿದ್ದಾರೆ. ತತ್ತ್ವಗಳ ಸ್ವರೂಪ ವಿಮರ್ಶೆಯನ್ನು ನಾವು “ಸಿದ್ಧಾಂತ ಶಿಖಾಮಣಿ ಸಮೀಕ್ಷಾ” ಎಂಬ ಶೋಧ ಪ್ರಬಂಧದಲ್ಲಿ ವಿಸ್ತಾರವಾಗಿ ನಿರೂಪಿಸಿದ್ದೇವೆ. ಇದರ ವಿಶೇಷವೇನೆಂದರೆ- ಕಾಶ್ಮೀರಶೈವ-ವೀರಶೈವ ದರ್ಶನದಲ್ಲಿ ತತ್ತ್ವಗಳ ಕ್ರಮ ಮತ್ತು ಸ್ವರೂಪವು ಒಂದೇ ವಿಧವಾಗಿದ್ದರೂ ಕೂಡ ಸಿದ್ಧಾಂತಶೈವದರ್ಶನದಲ್ಲಿ ಶುದ್ಧಾಶುದ್ಧ ತತ್ತ್ವಗಳ ಕ್ರಮವು ಬೇರೆಯಾಗಿದೆ. ಅಲ್ಲಿ ಮಾಯೆ, ಕಲೆ, ವಿದ್ಯೆ, ನಿಯತಿ ಮತ್ತು ರಾಗ - ಈ ಕ್ರಮವು ಸಿದ್ಧಾಂತಶೈವರಿಗೆ ಇಷ್ಟವಾದುದು. ಇಲ್ಲಿ ಶುದ್ಧಾಶುದ್ಧತತ್ತ್ವ ಕ್ರಮದ ವಿಷಯದಲ್ಲಿ ಅನೇಕ ಅಭಿಪ್ರಾಯಗಳಿವೆ. ಅವುಗಳನ್ನು ತಂತ್ರಾಲೋಕದ ಒಂಬತ್ತನೆಯ ಆಹ್ನಿಕದಲ್ಲಿ ನೋಡಬಹುದಾಗಿದೆ.

ಅಲ್ಲಿ ಅಹಂಕಾರ ತತ್ತ್ವದ ಸೃಷ್ಟಿಯ ಕ್ರಮದಲ್ಲಿಯೂ ಕೂಡ ವೈಲಕ್ಷಣ್ಯವು ಕಂಡುಬರುತ್ತದೆ. ಉದಾಹರಣೆಗೆ, ತೇಜಸ್ ಎಂಬ ಹೆಸರಿನ ಅಹಂಕಾರದಿಂದ ರಾಜಸಚಲಸ್ವಭಾವದ ಮನಸ್ಸು ಹುಟ್ಟುತ್ತದೆ. ಸಾತ್ವಿಕ ಸ್ವಭಾವದ ವಿಕಾರದಿಂದ ಪ್ರಕಾಶ-ಲಾಘವದೊಡನೆ ಕೂಡಿದ ಹತ್ತು ಇಂದ್ರಿಯಗಳು ಹುಟ್ಟುತ್ತವೆ. ತಾಮಸ ಸ್ವಭಾವದ ಪಂಚಮಹಾಭೂತಗಳಿಂದ ತಮೋಬಾಹುಲ್ಯವುಳ್ಳ ಪಂಚತನ್ಮಾತ್ರಗಳು (ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧ) ಹುಟ್ಟುತ್ತವೆ. ಸಾತ್ವಿಕ ಸ್ವಭಾವದ ತೇಜಸ್ಸಿನಿಂದ ಸ್ವಚ್ಛವೂ, ಲಘುವೂ ಆದ ಮನಸ್ಸು ಹುಟ್ಟುತ್ತದೆ ಎಂದು ಮತ್ತೆ ಕೆಲವರು ಅಭಿಪ್ರಾಯಪಡುತ್ತಾರೆ. ಸಾತ್ವಿಕದೊಡನಿರುವ ರಾಜಸ ಸ್ವಭಾವದ ವಿಕಾರದಿಂದ ಜ್ಞಾನಸಾಧನೆಗೋಸ್ಕರ ಬುದ್ಧಿ, ಇಂದ್ರಿಯ ಮುಂತಾದವುಗಳು ಹುಟ್ಟುತ್ತವೆ. ತಾಮಸ ಸ್ವಭಾವದ ವಿಕಾರಗಳಿಂದ ಕರ್ಮೇಂದ್ರಿಯಗಳು ಹುಟ್ಟುತ್ತವೆ. “ಸಾತ್ವಿಕ ಸ್ವಭಾವದ ಅಹಂಕಾರದಿಂದಲೇ ಹನ್ನೊಂದು ಇಂದ್ರಿಯಗಳು ಮತ್ತು ಅವುಗಳ ತನ್ಮಾತ್ರಗಳು ಹುಟ್ಟುತ್ತವೆ ಎಂದು ಸಾಂಖ್ಯರು ತಿಳಿಯುತ್ತಾರೆ”[೬೪] ಎಂದು ಕುಮಾರಿಲಭಟ್ಟರು ವಿವರಿಸುತ್ತಾರೆ. ಅಘೋರ ಶಿವಾಚಾರ್ಯರು- ತೇಜಸ್ ಸ್ವಭಾವದ ಅಹಂಕಾರದಿಂದ ಮನಸ್ಸು, ಬುದ್ಧಿ ಇಂದ್ರಿಯಗಳು ಹುಟ್ಟುತ್ತವೆ, ಅವುಗಳ ವಿಕಾರದಿಂದ ಕರ್ಮೇಂದ್ರಿಯಗಳು, ಅರ್ಥಾತ್

ವಿಶುದ್ಧಜ್ಞಾನಕರಣಂ ವಿಷಯಂ ಸರ್ವಯೋಗಿನಾಮ್।
ಕೋಟಿಸೂರ್ಯಪ್ರತೀಕಾಶಂ ಚಂದ್ರಕೋಟಿಸಮಪ್ರಭಮ್॥
ಅಪ್ರಾಕೃತಗುಣಾಧರಮನಂತಮಹಿಮಾಸ್ಪದಮ್॥ -(ಸಿ.ಶಿ, ೨.೮.೧೧)

[೬೩] ಶಿವಾದ್ವೈತಪರಿಭಾಷಾ, ಪು. ೨

[೬೪] ತತ್ತ್ವಪ್ರಕಾಶ ತಾತ್ಪರ್ಯದೀಪಿಕಾ, ಶ್ಲೋಕ, ೫೫

ಪಂಚಮಹಾಭೂತಗಳಿಂದ ತನ್ಮಾತ್ರಗಳು ಹುಟ್ಟುತ್ತವೆ. ತೇಜಸ್ಸಿನಿಂದ ಮನಸ್ಸು ಮಾತ್ರವಲ್ಲ, ಅದರ ವಿಕಾರದಿಂದ ಉಭಯರೂಪವಾದ ಇಂದ್ರಿಯಗಳು ಎಂದು ವ್ಯಾಖ್ಯಾನಿಸಬೇಕೆಂದು ಹೇಳುತ್ತಾರೆ."[೯೫] "ಉತ್ಪತ್ತಿರಹಂಕಾರಾಚ್ಚಿತ್ತ ಬಹಿಷ್ಕರಣಭೂತಯೋನೀನಾಮ್" ಎಂಬ ವಾಕ್ಯದ ವಿವರಣೆಯನ್ನು ಮಾಡುತ್ತಾ ಅವರೇ ಹೀಗೆ ಹೇಳುತ್ತಾರೆ- "ಅಲ್ಲಿ ಮನಸ್ಸು, ಬುದ್ಧಿ ಮತ್ತು ಇಂದ್ರಿಯಗಳ ಸಾತ್ತ್ವಿಕ ಸ್ವಭಾವದಿಂದ ತೇಜಸ್ ಎಂಬ ಹೆಸರಿನ ಅಹಂಕಾರ ಸ್ಕಂಧವು ಹುಟ್ಟುತ್ತದೆ. ಕರ್ಮೇಂದ್ರಿಯಗಳಾದರೋ ರಾಜಸ ಸ್ವಭಾವದ ವಿಕಾರಗಳಿಂದ (ಹುಟ್ಟುತ್ತವೆ), ಮತ್ತು ಭೂತಯೋನಿಗಳು ಮತ್ತು ತನ್ಮಾತ್ರಗಳು ತಾಮಸ ಸ್ವಭಾವದ ಭೂತಾದಿ ಸಂಜ್ಞೆಯಿಂದ ಹುಟ್ಟುತ್ತವೆ. ಹೀಗೆ ಮೂರು ವಿಧ ಅಹಂಕಾರದಿಂದ ಇವುಗಳು ಹುಟ್ಟುತ್ತವೆ." ಇದರ ವಿವರವಾದ ವಿವೇಚನೆಯು ಶೈವಶಾಕ್ತತಂತ್ರ ವಿಶೇಷಜ್ಞರಾದ ಪ್ರೊ. ವ್ರಜವಲ್ಲಭದ್ವಿವೇದಿ ಅವರಿಂದ ತಮ್ಮ 'ಅಷ್ಟಪ್ರಕರಣ' ಗ್ರಂಥದ ಉಪೋದ್ಘಾತದಲ್ಲಿ ಮಾಡಲ್ಪಟ್ಟಿದೆ.[೯೬]

ಇಲ್ಲಿ ಈ ವಿಷಯವನ್ನು ಗಮನಿಸಬೇಕು- ತೈಜಸ ರಾಜಸದಿಂದ (ತೈಜಸಾತ್ ರಾಜಸಾತ್) ಮತ್ತು ತೈಜಸ ಸಾತ್ತ್ವಿಕದಿಂದ (ತೈಜಸಾತ್ ಸಾತ್ತ್ವಿಕಾತ್) ಎಂಬ ಎರಡು ಪಕ್ಷಗಳನ್ನು ಕುಮಾರಿಲಭಟ್ಟರು ಹೇಳುತ್ತಾರೆ. ಅವುಗಳಲ್ಲಿ ಮೊದಲನೆಯ ಪಕ್ಷವು ಸಾಂಖ್ಯರಿಗೂ ಸಹ ಒಪ್ಪಿಗೆಯಾಗಿದೆ. ಮತ್ತು ಎರಡನೆಯ ಪಕ್ಷವು ಆಗಮ ಮೂಲದ್ದೆಂದು ಅಘೋರ ಶಿವಾಚಾರ್ಯರ ವ್ಯಾಖ್ಯಾನದಿಂದ ತಿಳಿಯುತ್ತದೆ. ಎರಡೂ ಪಕ್ಷಗಳು ಬಹು ಹಿಂದಿನಿಂದಲೂ ಚೆನ್ನಾಗಿ ಬೆಳೆದಿವೆ ಎನ್ನುವ ಕಾರಣದಿಂದ ಶಾಸ್ತ್ರಾನುಸಾರವಾಗಿ ವ್ಯವಸ್ಥೆಯನ್ನು ವಿಧಿಸಬೇಕು.

ಬೇರೆಲ್ಲ ತತ್ತ್ವಗಳ ಸ್ವರೂಪ, ಲಕ್ಷಣ, ಕ್ರಮ ಇತ್ಯಾದಿಗಳು ಎಲ್ಲ ದರ್ಶನಗಳಲ್ಲಿಯೂ ಸಮಾನವಾಗಿವೆ. ಪೂರ್ವೋಕ್ತ ಸ್ಥಳದಲ್ಲಿ ಅವುಗಳನ್ನು ನಾವು ಈಗಾಗಲೇ ನಿರೂಪಿಸಿದ್ದೇವೆ ಎಂದು ಈಗ ಸೃಷ್ಟಿ ತತ್ತ್ವದ ಬಗ್ಗೆ ಎದ್ದಿರುವ ವಾದಗಳ ಸ್ವರೂಪ ವಿಮರ್ಶೆಯನ್ನು ಮಾಡಲಾಗುವುದು.

ಅವಿಕೃತಪರಿಣಾಮವಾದ

ಸ್ವರೂಪದಲ್ಲಿ ಸ್ವಲ್ಪವೂ ವಿಕಾರವಿಲ್ಲದೆ ಬೇರೊಂದು ರೂಪದಿಂದ ಪರಿಣಾಮವಾಗುವುದನ್ನು ಅವಿಕೃತಪರಿಣಾಮ ಎಂದು ಕರೆಯಲಾಗಿದೆ. ವೀರಶೈವ ಸಿದ್ಧಾಂತದಲ್ಲಿ ಶಕ್ತಿಯ ವಿಕಾಸದಿಂದ ಸೃಷ್ಟಿ ಎಂತಲೂ, ಮತ್ತು ಶಕ್ತಿಯ ಸಂಕೋಚದಿಂದ ಪ್ರಲಯ ಎಂದು ವಿಕಾಸ-ಸಂಕೋಚಗಳಿಂದ ಸೃಷ್ಟಿ-ಪ್ರಲಯಗಳು ಸ್ಥಾಪಿತವಾಗಿವೆ. ಯಾವ ರೀತಿಯಲ್ಲಿ ಆಮೆಯು ಒಮ್ಮೆ ತನ್ನ ಅವಯವಗಳನ್ನು ಸಂಕೋಚಗೊಳಿಸಿಕೊಂಡು

---

[೯೫] ತತ್ತ್ವಪ್ರಕಾಶವೃತ್ತಿ, ಶ್ಲೋಕ. ೫೫

[೯೬] ಅಷ್ಟಪ್ರಕರಣ, ಉಪೋದ್ಘಾತ, ಪೃ. ೩೭-೩೮

ಮೌನವಾಗಿದ್ದರೆ, ಮತ್ತೆ ಕೆಲವು ವೇಳೆ ಅವುಗಳ (ಅವಯವಗಳ) ವಿಸ್ತಾರದಿಂದ ನೀರು ಅಥವಾ ನೆಲದ ಮೇಲೆ ವಿಹರಿಸುತ್ತದೆಯೋ ಅದೇ ರೀತಿಯಲ್ಲಿ ಪರಶಿವನೂ ಕೂಡ ಪ್ರಳಯಕಾಲದಲ್ಲಿ ತನ್ನ ಶಕ್ತಿಯ ಸಂಕೋಚದಿಂದ ಪ್ರಪಂಚವನ್ನು ವಿಲಯಗೊಳಿಸುತ್ತಾನೆ ಮತ್ತು ಸೃಷ್ಟಿಯ ಸಂದರ್ಭದಲ್ಲಿ ಲೀಲೆಗೋಸ್ಕರ ತನ್ನ ಶಕ್ತಿಯ ವಿಕಾಸದ ಮೂಲಕ ಜಗತ್ತನ್ನು ಸೃಷ್ಟಿಸುತ್ತಾನೆ. ಆದುದರಿಂದ ಯಾವ ರೀತಿಯಲ್ಲಿ ತನ್ನ ಶರೀರದ ಸಂಕೋಚ-ವಿಕಾಸಗಳಿಂದ ಆಮೆಯಲ್ಲಿ ಯಾವುದೇ ರೀತಿಯ ವಿಕಾರವನ್ನು ಆರೋಪಿಸುವುದಿಲ್ಲವೋ, ಅದೇ ರೀತಿಯಲ್ಲಿ ತನ್ನ ಶಕ್ತಿಯ ಸಂಕೋಚ-ವಿಕಾಸಗಳಿಂದ ಪರಶಿವನಲ್ಲಿಯೂ ಕೂಡ ವಿಕಾರವು ಉಂಟಾಗುವುದಿಲ್ಲ ಎಂದು (ಇದನ್ನು) ಅವಿಕೃತ ಪರಿಣಾಮವಾದ ಎಂದು ಕರೆಯಲಾಗಿದೆ. ಇದೇ ಅವಿಕೃತಪರಿಣಾಮವಾದವನ್ನು ಶ್ರೀ ಶಿವಯೋಗಿ ಶಿವಾಚಾರ್ಯರು-

ಆತ್ಮಶಕ್ತಿವಿಕಾಸೇನ ಶಿವೋ ವಿಶ್ವಾತ್ಮನಾ ಸ್ಥಿತಃ।
ಕುಟೀಭಾವಾದ್ಯಥಾ ಭಾತಿ ಪಟಃ ಸ್ವಸ್ಯ ಪ್ರಸಾರಣಾತ್॥[೯೭]

“ಬಟ್ಟೆಯು ತನ್ನಲ್ಲಿರುವ ಹರಡುವಿಕೆಯ ರೂಪವಾದ ಶಕ್ತಿಯಿಂದ ಗುಡಾರ ಮೊದಲಾದ ವಿಕಾರಗಳನ್ನು ಹೇಗೆ ಹೊಂದುವುದೋ ಅದರಂತೆ ಶಿವನು ಕೂಡ ತನ್ನಲ್ಲಿರುವ ಶಕ್ತಿಯ ವಿಕಾಸದಿಂದ ಜಗತ್ ಸ್ವರೂಪನಾಗಿರುವನು” ಎಂದು ಬಟ್ಟೆಯ ದೃಷ್ಟಾಂತದಿಂದ ವಿವರಿಸಿದ್ದಾರೆ.

ಇದರ ಅರ್ಥ ಹೀಗಿದೆ- ಬಟ್ಟೆಯನ್ನು ವಿಲಕ್ಷಣವಾಗಿ ಹರಡಿದಾಗ ಗುಡಾರದ ರೂಪವನ್ನು ಪಡೆಯುತ್ತದೆ ಮತ್ತು ಅದನ್ನು ಮಡಿಚಿದಾಗ ಬಟ್ಟೆಯ ರೂಪದಲ್ಲಿಯೇ ಉಳಿಯುತ್ತದೆ, ಮತ್ತು ಹರಡುವಿಕೆ-ಮಡಿಚುವಿಕೆಗಳು ಬಟ್ಟೆಯ ಸ್ವರೂಪಕ್ಕೆ ವಿಕಾರವನ್ನು ಹೇಗೆ ಉಂಟುಮಾಡುವುದಿಲ್ಲವೋ, ಅದೇ ರೀತಿಯಲ್ಲಿ ಶಿವನು ಕೂಡ ತನ್ನಲ್ಲಿರುವ ಶಕ್ತಿಯ ವಿಕಾಸದಿಂದ ಜಗತ್ ಸ್ವರೂಪಿಯಾಗಿದ್ದು, (ತನ್ನ ಮೂಲಸ್ವರೂಪದಲ್ಲಿ) ವಿಕಾರವನ್ನು ಹೊಂದುವುದಿಲ್ಲ. ಇದಲ್ಲದೆ ಶ್ರೀ ರೇಣುಕ ಭಗವತ್ಪಾದರು-

ಪತ್ರಶಾಖಾದಿರೂಪೇಣ ಯಥಾ ತಿಷ್ಠತಿ ಪಾದಪಃ।
ತಥಾ ಭೂಮ್ಯಾದಿರೂಪೇಣ ಶಿವ ಏಕೋ ವಿರಾಜತೇ॥[೯೮]

“ಎಲೆ, ಕೊಂಬೆ ಮುಂತಾದ ರೂಪದಿಂದ ಮರವು ಹೇಗೆ ಇದೆಯೋ (ಪತ್ರ ಶಾಖಾದಿಗಳು ಮರದಿಂದಲೇ ಹುಟ್ಟಿದರೂ, ಎಲೆ-ಕೊಂಬೆ ಮೊದಲಾದವುಗಳೆಂಬ ಭಿನ್ನ ಭಿನ್ನ ವ್ಯವಹಾರಕ್ಕೆ ಒಳಗಾಗಿರುವಂತೆ), ಅದರಂತೆ (ತನ್ನಲ್ಲಿರುವ ಶಕ್ತಿಯ ಕಾರ್ಯಗಳಾದ) ಭೂಮಿ ಇತ್ಯಾದಿಗಳ ರೂಪದಿಂದ ಶಿವನೊಬ್ಬನೇ

---

[೯೭] ಸಿ.ಶಿ, ೧೦.೬೫

[೯೮] ಸಿ.ಶಿ, ೧೦.೬೬

ಪ್ರಕಾಶಿಸುತ್ತಿರುವನು” ಎಂದು ಮರದ ದೃಷ್ಟಾಂತದಿಂದಲೂ ಕೂಡ ಅವಿಕೃತಪರಿಣಾಮವಾದವನ್ನು ಸಾಧಿಸಿದ್ದಾರೆ.

ಇದೇ ಅರ್ಥವನ್ನು ಶ್ರೀ ಮರಿತೋಂಟದಾರ್ಯರೂ ಸಹ- “ಮರವು ಹೇಗೆ ಕಾಲಶಕ್ತಿಯಿಂದ ವಿಕಾರವಿಲ್ಲದೆ ತನ್ನಲ್ಲಿ ಲೀನವಾಗಿರುವ ಬೇರೆಯಾದ ಎಲೆ, ಹೂ ಇತ್ಯಾದಿ ಭೇದ ವಿಶೇಷದಿಂದ ಪ್ರಕಾಶಿಸುತ್ತದೆಯೋ, ಅದರಂತೆ ತನ್ನಲ್ಲಿ ಸಮವೇತವಾಗಿರುವ ಶಕ್ತಿಯ ತಾದ್ಮತ್ಮ್ಯಕ್ರೀಡೆಯಿಂದಾದ ಭೂಜಲಾದಿಗಳ ರೂಪದಿಂದ ಶಿವನೇ ಮಿಂಚಿನಂತೆ ಬೆಳಗುತ್ತಿರುವನು. ಅಲ್ಲಿ ಧೈರ್ಯದಿಂದ ಭೂಮಿ, ಕರುಣೆಯಿಂದ ನೀರು, ಬೆಳಗುವಿಕೆಯಿಂದ ತೇಜಸ್ಸು, ಪರಮಾನಂದಸ್ಪಂದದಿಂದ ವಾಯು, ಚಿದ್ವ್ಯಾಪ್ತಿಯಿಂದ ಆಕಾಶ, ಚಿತಿಸಂಕೋಚ ಚಿತ್ತವಿಶಿಷ್ಟವಾದ ಜೀವದಿಂದ ವಿವೇಕ”[೯೯] ಎಂದು ಹೇಳಿದ್ದಾರೆ.

ಮರವು ಸಾವಯವ ಗುಣದಿಂದ ಎಲೆ-ಕೊಂಬೆ ಮೊದಲಾದ ರೂಪದಿಂದ ಪರಿಣಾಮಹೊಂದುವ ಸಂಭವವಿದ್ದರೂ ಕೂಡ ಪರಶಿವನ ನಿರವಯವ ಗುಣದಿಂದ ಅವನು ಹೇಗೆ ವಿಶ್ವಾತ್ಮನಾಗಿ ಪರಿಣಾಮ ಹೊಂದುವನು? ಎಂದು ಆಕ್ಷೇಪಿಸಿದರೆ, ಇದು ಹಾಗಲ್ಲ. ಈ ಸಿದ್ಧಾಂತದಲ್ಲಿ ಪರಶಿವನಿಷ್ಠಶಕ್ತಿಯೇ ತತ್ತ್ವಗಳಿಂದ ವಿಶ್ವಾತ್ಮನಾಗಿ ಪರಿಣಾಮವನ್ನು ಹೊಂದುವುದು, ಪರಶಿವಬ್ರಹ್ಮನ ಪರಿಣಾಮದಿಂದಲ್ಲ. ಆದುದರಿಂದ ‘ಶಕ್ತಿ’ಯೇ ಮೊದಲ್ಗೊಂಡು ‘ಪೃಥ್ವೀ’ ಪರ್ಯಂತ ಎಲ್ಲ ತತ್ತ್ವಗಳ ಸಮುದಾಯದ ಶಕ್ತಿಯು ಅವನ ಸಂಪೂರ್ಣ ಜಗತ್ತು, ಆದರೆ ಮಹೇಶ್ವರನು ಶಕ್ತಿಯುಕ್ತನಾದವನು (ಶಕ್ತಿರಸ್ಯ ಜಗತ್‌ಕೃತ್ಸ್ನಂ ಶಕ್ತಿಮಾಂಸ್ತು ಮಹೇಶ್ವರಃ)[೧೦೦] ಎಂದು ಶಕ್ತಿಯ ರೂಪತ್ವವೇ ಪ್ರತಿಪಾದಿತವಾಗಿದೆ.

ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಮ್।
ತಸ್ಯಾವಯವಭೂತೈಸ್ತು ವ್ಯಾಪ್ತಂ ಸರ್ವಮಿದಂ ಜಗತ್।।[೧೦೧]

“ಪ್ರಕೃತಿಯನ್ನು ಮಾಯೆಯೆಂದೂ, ಮಹೇಶ್ವರನನ್ನೇ ಮಾಯಾವಿಯೆಂದೂ ತಿಳಿಯಬೇಕು. ಈ ಜಗತ್ತೆಲ್ಲವೂ ಅವನ ಅವಯವಗಳಿಂದ ವ್ಯಾಪ್ತವಾಗಿದೆ” ಎಂದು ಶ್ರುತಿವಾಕ್ಯವೂ ಕೂಡ ಪ್ರಪಂಚದ ಶಕ್ತಿರೂಪತ್ವವನ್ನು ನಿರೂಪಿಸಿದೆ.

ಶಕ್ತಿವಿಶಿಷ್ಟ ಪರಶಿವನ ಜಗದುಭಯಕಾರಣತ್ವ

ಪೂರ್ವೋಕ್ತ ಪ್ರಮಾಣಗಳಿಂದ ಶಕ್ತಿಯೊಡನೆ ಅವಿನಾಭಾವಸಂಬಂಧವನ್ನು ಹೊಂದಿದ ಪರಶಿವನಲ್ಲಿ ಜಗತ್ತಿನ ನಿಮಿತ್ತ ಉಪಾದಾನಕಾರಣತ್ವವು ಅಂಗೀಕೃತವಾಗಿದೆ ಎಂಬಲ್ಲಿ ಯಾವುದೇ ವಿವಾದವಿಲ್ಲ. ಎಲ್ಲರೂ ಕೂಡ ಚಿದ್ರೂಪನಾದ ಈಶ್ವರನ ನಿಮಿತ್ತಕಾರಣತ್ವವನ್ನೇ ಅಂಗೀಕರಿಸುತ್ತಾರೆ. ಘಟವನ್ನು ಮಾಡುವ ಕುಂಬಾರನು ತಾನೇ

---

[೯೯] ಅದೇ, ೧೦.೯; ತತ್ತ್ವಪ್ರದೀಪಿಕಾ ವ್ಯಾಖ್ಯಾ, ಪು. ೧೮೯

[೧೦೦] ಬ್ರಹ್ಮಸೂತ್ರ ಶ್ರೀಕರಭಾಷ್ಯ, ೧.೪.೧೦

[೧೦೧] ಶ್ವೇ.ಉ, ೪.೧೦

ಸ್ವತಃ ಮಣ್ಣಿನ ಮುದ್ದೆಯಾಗಿ ಘಟವನ್ನು ಮಾಡುವುದಿಲ್ಲ. ಆದುದರಿಂದ ಉಪಾದಾನತ್ವವು ಕೂಡ ನಿಮಿತ್ತಭೂತನಾದ ಪರಶಿವನೊಂದಿಗೆ ಹೇಗೆ ಸಮಾಗಮ ಹೊಂದುತ್ತದೆ? ಎಂದು ಆಕ್ಷೇಪಿಸಿದರೆ, ಇದು ಹಾಗಲ್ಲ "ವಿಶ್ವಾಧಿಪೋ ರುದ್ರೋ ಮಹರ್ಷಿಃ"[೧೦೨] (ರುದ್ರನು ವಿಶ್ವಪಾಲಕನೂ, ಸರ್ವಜ್ಞನೂ ಆಗಿದ್ದಾನೆ) ಮುಂತಾದ ಉಪನಿಷದ್ವಾಕ್ಯಗಳಿಂದ ವಿಶ್ವದ ಅಧಿಪತ್ವದಿಂದ ಪರಮಾತ್ಮನ ನಿಮಿತ್ತತ್ವವು ಹೇಗೆ ತಿಳಿದುಬರುತ್ತದೆಯೋ ಅದರಂತೆಯೇ "ಸರ್ವಂ ಖಲ್ವಿದಂ ಬ್ರಹ್ಮ"[೧೦೩] (ಈ ಜಗತ್ತೆಲ್ಲವೂ ಬ್ರಹ್ಮಮಯವಾಗಿದೆ) "ಸರ್ವೋ ವೈ ರುದ್ರಃ"[೧೦೪] (ಎಲ್ಲವೂ ರುದ್ರಮಯ) ಮುಂತಾದವುಗಳಿಂದ ಅಲ್ಲಿ ಪ್ರಕೃತಿತ್ವ ವಿಶ್ವರೂಪತ್ವಗಳ ಶ್ರವಣದಿಂದ (ಅದು ಹಾಗಲ್ಲ). ಆದುದರಿಂದಲೇ ಶ್ರೀ ರೇಣುಕಾಚಾರ್ಯರು-

> ಯಸ್ಮಾದೇತತ್ ಸಮುತ್ಪನ್ನಂ ಮಹಾದೇವಾಚ್ಚರಾಚರಮ್।
> ತಸ್ಮಾದೇತನ್ನ ಭಿದ್ಯೇತ ಯಥಾ ಕುಂಭಾದಿಕಂ ಮೃದಃ॥
> ಯಥಾ ತಂತುಭಿರುತ್ಪನ್ನಃ ಪಟಸ್ತಂತುಮಯಃ ಸ್ಮೃತಃ।
> ತಥಾ ಶಿವಾತ್ ಸಮುತ್ಪನ್ನಂ ಶಿವ ಏವ ಚರಾಚರಮ್॥[೧೦೫]

"ಮಣ್ಣಿನಿಂದ ಹುಟ್ಟಿದ ಘಟ ಮೊದಲಾದ ವಸ್ತುಗಳು ಆ ಮಣ್ಣಿಗಿಂತ ಹೇಗೆ ಬೇರೆಯಾಗಿರುವುದಿಲ್ಲವೋ, ಹಾಗೆಯೇ ಪರಶಿವನ ದೆಸೆಯಿಂದ ಹುಟ್ಟಿದ ಈ ಚರಾಚರ ಜಗತ್ತು ನಿಮಿತ್ತೋಪಾದಾನಕಾರಣಭೂತವಾದ ಆ ಶಿವನಿಗಿಂತ ಬೇರೆಯಾಗಿರುವುದಿಲ್ಲ. ನೂಲಿನಿಂದ ತಯಾರಿಸಿದ ಬಟ್ಟೆಯು ನೂಲಿನ ಮಯವೇ ಆಗಿರುವುದೋ, ಹಾಗೆಯೇ ಶಿವನಿಂದ ಹುಟ್ಟಿದ ಸ್ಥಾವರಜಂಗಮಾತ್ಮಕ ಪ್ರಪಂಚವೆಲ್ಲವು ಶಿವನೇ ಆಗಿರುವುದು" ಎಂದು ಮಣ್ಣು ಮತ್ತು ನೂಲುಗಳ ಉಪಮಾನದಿಂದ ಪರಶಿವನ ಜಗದುಪಾದಾನಕಾರಣವನ್ನು ನಿರೂಪಿಸಿದ್ದಾರೆ. ಉದಾಹರಣೆಗೆ-

> ಜಗತ್ ಸಿಸೃಕ್ಷುಃ ಪ್ರಥಮಂ ಬ್ರಹ್ಮಾಣಂ ಸರ್ವದೇಹಿನಾಮ್।
> ಕರ್ತಾರಂ ಸರ್ವಲೋಕಾನಾಂ ವಿದಧೇ ವಿಶ್ವನಾಯಕಃ॥[೧೦೬]

"ಜಗತ್ತನ್ನು ಸೃಷ್ಟಿಸಲು ಬಯಸಿದ ಪರಶಿವಬ್ರಹ್ಮನು ಮೊದಲಿಗೆ ಎಲ್ಲ ಜೀವಿಗಳನ್ನು ಸೃಷ್ಟಿಸಿದನು. ಮೂರು ಲೋಕಗಳು ಕರ್ತಾರನನ್ನು ವಿಶ್ವನಾಯಕನೆಂದು ತಿಳಿಯಬೇಕು" ಎಂಬಲ್ಲಿ ಶಿವನ ನಿಮಿತ್ತ ಕಾರಣವನ್ನೇ ಪ್ರತಿಪಾದಿಸುತ್ತಾರೆ. ಇದಲ್ಲದೆ, "ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ"[೧೦೭] (ಜೇಡರ ಹುಳ ಬಲೆಯನ್ನು ಸೃಷ್ಟಿಸುತ್ತದೆ

---

[೧೦೨] ಶ್ವೇ.ಉ, ೩.೪

[೧೦೩] ಛಾ.ಉ, ೩.೧೪.೧

[೧೦೪] ಮಹಾನಾರಾಯಣೋಪನಿಷತ್, ೧೦.೧೧

[೧೦೫] ಸಿ.ಶಿ, ೧೦.೬೨,೬೪

[೧೦೬] ಸಿ.ಶಿ, ೨.೧೩

[೧೦೭] ಮುಂಡ.ಉ, ೧.೧.೭

ಮತ್ತು ಅದರಲ್ಲಿ ತಾನೇ ಬಂಧಿಯಾಗುತ್ತದೆ) ಎಂಬ ಶ್ರುತಿವಾಕ್ಯವೂ ಕೂಡ ಇದನ್ನೇ ಪ್ರತಿಪಾದಿಸುತ್ತದೆ. ಜೇಡರ ಹುಳ ತಾನು ನಿಮಿತ್ತ ಉಪಾದಾನವನ್ನು ಹೊಂದಿ, ತನ್ನ ಶರೀರದಿಂದ ನೂಲಿನ ಜಾಲವನ್ನು ಹೇಗೆ ಹೊರಹೊಮ್ಮಿಸುತ್ತದೆ ಮತ್ತು ತೆಗೆದುಕೊಳ್ಳುತ್ತದೆಯೋ, ಹಾಗೆಯೇ ಪರಶಿವನು ಕೂಡ ನಿಮಿತ್ತ ಉಪಾದಾನವನ್ನು ಹೊಂದಿ ತನ್ನೊಡನೆ ಅವಿನಾಭಾವದಿಂದಿರುವ ಪರಾಶಕ್ತಿಯಿಂದ ಸಮಸ್ತ ಪ್ರಪಂಚವನ್ನು ಸೃಷ್ಟಿಸುತ್ತಾನೆ ಮತ್ತು ನಾಶಪಡಿಸುತ್ತಾನೆ ಎಂದು ಅಭಿನ್ನನಿಮಿತ್ತ ಉಪಾದಾನತ್ವವನ್ನು ಸಮರ್ಥಿಸುತ್ತಾರೆ.

ಮತ್ತೊಂದು (ದೃಷ್ಟಾಂತ), ಛಾಂದೋಗ್ಯೋಪನಿಷತ್ತಿನಲ್ಲಿ ಒಂದು ವಿಶೇಷ ಜ್ಞಾನದಿಂದ ಎಲ್ಲ ವಿಶೇಷ ಜ್ಞಾನಗಳೆಂದು ಅಂಗೀಕರಿಸಲ್ಪಟ್ಟಿದೆ- "ಯಥಾ ಸೋಮ್ಯೈಕೇನ ಮೃತ್ಪಿಂಡೇನ ಸರ್ವಂ ಮೃನ್ಮಯಂ ವಿಜ್ಞಾತಂ"[೧೦೮] (ಒಂದು ಮಣ್ಣಿನ ಮುದ್ದೆಯಿಂದ ಎಲ್ಲವೂ ಮಣ್ಣಿನಿಂದ ಕೂಡಿದೆ ಎಂದು ತಿಳಿಯುವುದೋ ಹಾಗೆ.) ಘಟವನ್ನು ತಯಾರಿಸುವ ಮಣ್ಣಿನ ಮುದ್ದೆಯ ದೃಷ್ಟಾಂತದ ಅನ್ವಯಿಸುವಿಕೆಯಿಂದ ಬ್ರಹ್ಮನು ನಿಮಿತ್ತ ಮಾತ್ರನಾದಾಗ ಆ ವಿಶೇಷಜ್ಞಾನದಿಂದ ಸಮಸ್ತ ಪ್ರಪಂಚದ ವಿಶೇಷ ಜ್ಞಾನವು ಸಂಭವಿಸುವುದಿಲ್ಲ. ಕುಂಬಾರನ (ಅಸ್ತಿತ್ವದ) ಜ್ಞಾನದಿಂದ ಘಟಾದಿ ಕಾರ್ಯಗಳು ತಿಳಿಯುವುದಿಲ್ಲ. ಆದರೆ ಅದಕ್ಕೆ (ಘಟಾದಿಗಳಿಗೆ) ಉಪಾದಾನಕಾರಣವಾದ ಮಣ್ಣಿನ ಮುದ್ದೆಯ ಜ್ಞಾನದಿಂದ ಘಟಾದಿ ಕಾರ್ಯಗಳು ತಿಳಿಯುತ್ತವೆ. ಆದುದರಿಂದ ನಿಮಿತ್ತಭೂತ ಪರಶಿವನು ತನಗಿಂತ ಬೇರೆಯಲ್ಲದ ಸಿದ್ಧವಾದ ಶಕ್ತಿಯ ಪರಿಣಾಮಭೂತವಾದ ಎಲ್ಲ ಪ್ರಪಂಚದ ಉಪಾದಾನತ್ವಕ್ಕೆ ತೊಡಕಾಗಿರುವುದಿಲ್ಲ.

ಸೂಕ್ಷ್ಮ ಚಿತ್ ಅಚಿತ್‌ರೂಪ ಶಕ್ತಿವಿಶಿಷ್ಟ ಪರಶಿವನು ಕಾರಣ ಮತ್ತು ಸ್ಥೂಲಚಿತ್ ಅಚಿತ್‌ರೂಪ ಶಕ್ತಿವಿಶಿಷ್ಟ ಪ್ರಪಂಚವು ಕಾರ್ಯ ಎಂದು ಕಾರ್ಯಕಾರಣಭಾವವನ್ನು ತಿಳಿಯಬೇಕು. ಈ ಶಕ್ತಿವಿಶಿಷ್ಟ ಪರಶಿವನು 'ಶಿವ'ನಿಂದ 'ಭೂಮಿ'ಯವರೆಗಿನ ಮೂವತ್ತಾರು ತತ್ತ್ವಗಳಿಂದ ಪರಿಣಾಮವನ್ನು ಹೊಂದಿ ಲೀಲಾವಿನೋದವನ್ನು ಅನುಭವಿಸುತ್ತಾನೆ. ಮತ್ತು ಲೀಲಾವ್ಯಾಪಾರದ ಕೊನೆಯಲ್ಲಿ ತನ್ನ ಶಕ್ತಿಯ ಸಂಕೋಚದಿಂದ ಎಲ್ಲ ಸ್ಥಾವರ ಜಂಗಮಾತ್ಮಕ ವಿಶ್ವವನ್ನು ತನ್ನಲ್ಲಿ ಲೀನವಾಗಿಸಿಕೊಂಡು ಕೇವಲಾವಸ್ಥೆಯನ್ನು ಆಶ್ರಯಿಸಿ ಇರುತ್ತಾನೆ.

ಇದರಿಂದ ಅರ್ಥವಾಗುವುದೇನೆಂದರೆ- ಶಕ್ತಿವಿಶಿಷ್ಟಾದ್ವೈತದ ಮತ್ತೊಂದು ಪರ್ಯಾಯವಾದ ವೀರಶೈವಸಿದ್ಧಾಂತದಲ್ಲಿ ಪ್ರಪಂಚದ ಉತ್ಪತ್ತಿಯಲ್ಲಿ ಶಕ್ತಿ ಉಪಾದಾನ ಕಾರಣ ಮತ್ತು ಶಿವ ನಿಮಿತ್ತಕಾರಣ. ಇಲ್ಲಿ ಚಂದ್ರ-ಬೆಳದಿಂಗಳಿನಂತೆ ಶಿವ-ಶಕ್ತಿ

---

೧೦೮. ಛಾ.ಉ, ೬.೧.೪

ಇವರಲ್ಲಿ ಹೆಚ್ಚು ಭೇದವಿಲ್ಲವೆಂದು ಅಂಗೀಕರಿಸುವುದರಿಂದ ಶಕ್ತಿವಿಶಿಷ್ಟ ಶಿವನ ಅಭಿನ್ನನಿಮಿತ್ತೋಪಾದಾನಕಾರಣತ್ವವು ಪ್ರತಿಪಾದಿತವಾಯಿತು.

ಪ್ರಪಂಚದ ಸತ್ಯತ್ವ

ಶಿವ-ಶಕ್ತಿಯರ ವಿಲಾಸರೂಪವಾದ ಈ ಜಗತ್ತು ಶಿವ-ಶಕ್ತಿಮಯವಾಗಿದೆ.[೧೦೯] ಆದುದರಿಂದ ಶಿವ-ಶಕ್ತಿಯರಂತೆ ಪ್ರಪಂಚದ ಸತ್ಯತ್ವವನ್ನು ಕೂಡ ಅಂಗೀಕರಿಸಲಾಗಿದೆ. ಆದುದರಿಂದ ಶ್ರೀರೇಣುಕಾಚಾರ್ಯರು- "ಶಿವತತ್ತ್ವಾತ್ಸಮುತ್ಪನ್ನಂ ಜಗದಸ್ಮಾನ್ನಭಿದ್ಯತೇ"[೧೧೦] (ಶಿವತತ್ತ್ವದಿಂದ ಹುಟ್ಟಿದ ಜಗತ್ತು ಈ ಶಿವನಿಗಿಂತ ಭಿನ್ನವಾಗಿರುವುದಿಲ್ಲ), "ತಥಾ ಶಿವಾತ್ಸಮುತ್ಪನ್ನಂ ಶಿವ ಏವ ಚರಾಚರಮ್"[೧೧೧] (ಹಾಗೆ ಶಿವನಿಂದ ಹುಟ್ಟಿದ ಸ್ಥಾವರ ಜಂಗಮಾತ್ಮಕ ಪ್ರಪಂಚವೆಲ್ಲವು ಶಿವನೇ ಆಗಿರುವುದು) ಮುಂತಾದ ಮಾತುಗಳಿಂದ ಶಿವನ ಜಗನ್ಮಯತ್ವವನ್ನು ನಿರೂಪಿಸಿ, ಜಗತ್ತಿನ ಸತ್ಯತ್ವವನ್ನು ಘೋಷಿಸಿದ್ದಾರೆ.

ಶಕ್ತಿವಿಶಿಷ್ಟನಾದ ಶಿವನು ಮಾಯಾಶಕ್ತಿಯ ಸತ್ತ್ವ, ರಜಸ್ ಮತ್ತು ತಮಸ್ ಎಂಬ ಮೂರು ಗುಣಭೇದದಿಂದ ಭೋಕ್ತೃ, ಭೋಜ್ಯ ಮತ್ತು ಪ್ರೇರಕ ಎಂದು ಮೂರು ರೂಪವಾಗಿ ಪರಿಣಮಿಸುತ್ತಾನೆ. ಅದನ್ನು ಶ್ರೀ ರೇಣುಕ ಭಗವತ್ಪಾದರು ಈ ರೀತಿ ವಿವರಿಸಿದ್ದಾರೆ:

> ಭೋಕ್ತಾ ಭೋಜ್ಯಂ ಪ್ರೇರಯಿತಾ ವಸ್ತುತ್ರಯಮಿದಂ ಸ್ಮೃತಮ್।
> ಅತ್ರ ಪ್ರೇರಯಿತಾ ಶಂಭುಃ ಶುದ್ಧೋಪಾಧಿರ್ಮಹೇಶ್ವರಃ॥
> ಸಮ್ಮಿಶ್ರೋಪಾಧಯಃ ಸರ್ವೇ ಭೋಕ್ತಾರಃ ಪಶವಃ ಸ್ಮೃತಾಃ।
> ಭೋಜ್ಯಮವ್ಯಕ್ತಮಿತ್ಯುಕ್ತಂ ಶುದ್ಧತಾಮಸರೂಪಕಮ್॥[೧೧೨]

"(ಪರಬ್ರಹ್ಮ ಪರಶಿವಾದಿ ಪರ್ಯಾಯ ನಾಮವುಳ್ಳ ಅಖಂಡ ಮಹಾಲಿಂಗ ಚೈತನ್ಯದಲ್ಲಿ) ಭೋಕ್ತೃ, ಭೋಜ್ಯ ಮತ್ತು ಪ್ರೇರಕ ಎಂದು ಈ ವಸ್ತುಗಳು ಮೂರು ಎಂದು ಅರಿಯಬೇಕು. ಈ ವಸ್ತುತ್ರಯದಲ್ಲಿ ಸಂಪೂರ್ಣ ಶುದ್ಧತತ್ತ್ವಗುಣೋಪಾಧಿಯುಳ್ಳ ಮಹೇಶ್ವರನೇ ಪ್ರೇರಕನು. ಸತ್ತ್ವತಮೋಮಿಶ್ರ ರಜೋಗುಣೋಪಾಧಿಯುಳ್ಳ ಎಲ್ಲ ಆತ್ಮರುಗಳು ಭೋಕ್ತರು ಎನಿಸಿಕೊಂಡಿರುವರು. ಕೇವಲ ತಮೋಗುಣೋಪಾಧಿಯುಳ್ಳ ಪ್ರಕೃತಿತತ್ತ್ವವು ಭೋಗ್ಯವಸ್ತುವೆನಿಸಿಕೊಂಡಿದೆ."

---

[೧೦೯] ಶಕ್ತಿರಸ್ಯ ಜಗತ್ಕೃತ್ಸ್ನಂ ಶಕ್ತಿಮಾಂಸ್ತು ಮಹೇಶ್ವರಃ।
ಶಕ್ತಿಸ್ತು ಶಕ್ತಿಮದ್ರೂಪಾದ್ ವ್ಯತಿರಿಕ್ತಾ ಹಿ ನ ಕ್ವಚಿತ್॥
-ಬ್ರಹ್ಮಸೂತ್ರ ಶ್ರೀಕರಭಾಷ್ಯ, ೧.೪.೧೦

[೧೧೦] ಸಿ.ಶಿ, ೧೦.೬೩

[೧೧೧] ಸಿ.ಶಿ, ೧೦.೬೪

[೧೧೨] ಸಿ.ಶಿ, ೫.೩೭-೩೮

ಶುದ್ಧಸತ್ವಗುಣೋಪಾಧಿಯಿಂದ ಶಿವನು ಪ್ರೇರಕನೆಂತಲೂ, ಸತ್ತ್ವ ರಜೋ ತಮೋಗುಣೋಪಾಧಿಯಿಂದ ಎಲ್ಲ ಆತ್ಮರುಗಳು ಭೋಕ್ತೃವೆಂತಲೂ ಮತ್ತು ಕೇವಲ ತಮೋಗುಣೋಪಾಧಿಯಿಂದ ಭೋಜ್ಯನೆಂದು ಕರೆಯಲ್ಪಟ್ಟಿರುವುದರಿಂದ ಶಿವನೊಬ್ಬನೇ ಮೂರು ರೂಪವಾಗಿರುವುದರಿಂದ ವೀರಶೈವ ದರ್ಶನದಲ್ಲಿ ಶಿವನಂತೆ ಜೀವ ಮತ್ತು ಜಗತ್ತುಗಳ ಸತ್ಯತ್ವವು ಅಂಗೀಕೃತವಾಗಿದೆ. ಶ್ರೀಪತಿಪಂಡಿತ ಭಗವತ್ಪಾದರೂ ಕೂಡ ತಮ್ಮ ಭಾಷ್ಯದಲ್ಲಿ-

ಜೀವಃ ಸತ್ಯಂ ಜಗತ್ ಸತ್ಯಂ ಶಿವಃ ಸತ್ಯಂ ಸ್ವಭಾವತಃ।
ತಯೋರಭೇದಃ ಸತ್ಯಂ ವಾ ಕ್ರಿಮಿಭ್ರಮರಯೋರಿವ॥[೧೧೩]

"ಶಿವ, ಜೀವ ಮತ್ತು ಜಗತ್ತುಗಳು ಸ್ವಭಾವತಃ ಸತ್ಯ. ಕ್ರಿಮಿ-ದುಂಬಿಗಳಂತೆ ಅವುಗಳ ಅಭೇದವೂ ಕೂಡ ಸತ್ಯವೇ ಆಗಿದೆ" ಎಂದು ಆಗಮೋಕ್ತಿಯ ಉಲ್ಲೇಖದಿಂದ ಶಿವ-ಜೀವ-ಜಗತ್ತುಗಳ ಸತ್ಯತ್ವವನ್ನು ಸ್ಥಾಪಿಸಿದ್ದಾರೆ. ಆದುದರಿಂದ ಈ ದರ್ಶನದಲ್ಲಿ "ಸರ್ವಂ ಖಲ್ವಿದಂ ಬ್ರಹ್ಮ"[೧೧೪] (ಈ ಜಗತ್ತೆಲ್ಲವೂ ಬ್ರಹ್ಮಮಯವಾಗಿದೆ), "ಸರ್ವೋ ವೈ ರುದ್ರ"[೧೧೫] (ಈ ಜಗತ್ತೆಲ್ಲವೂ ರುದ್ರಮಯವಾಗಿದೆ) ಇತ್ಯಾದಿ ನೂರಾರು ಶ್ರುತಿ ಪ್ರಮಾಣಗಳಿಂದ ಮುಖ್ಯ ಸಮಾನಾಧಿಕರಣ ಸಂಬಂಧದಿಂದ ಪ್ರಪಂಚದ ಶಿವ-ಶಕ್ತಿ ಸ್ವರೂಪತ್ವವನ್ನು ಅಂಗೀಕರಿಸಲಾಗಿದೆ.

ಕಾಶ್ಮೀರಶೈವರ ಆಭಾಸವಾದ

ಕಾಶ್ಮೀರಶೈವರು ಆಭಾಸವಾದದಿಂದ ಸೃಷ್ಟಿಯ ಪ್ರಕ್ರಿಯೆಯನ್ನು ಸ್ಥಾಪಿಸುತ್ತಾರೆ. ಇಲ್ಲಿ ಸಾಗರತರಂಗ ನ್ಯಾಯದಿಂದ ವಿಶ್ವೋತ್ತೀರ್ಣ ಪರಶಿವನೇ ತನ್ನ ಸ್ವತಂತ್ರ ಬಲದಿಂದ ವಿಶ್ವದ ರೂಪದಲ್ಲಿ ಪ್ರಕಾಶಿಸುತ್ತಾನೆ ಎಂದು ಸ್ವೀಕರಿಸಲ್ಪಟ್ಟಿದೆ. ಆದುದರಿಂದ ಈ ಆಭಾಸ ವಾದವು ಅದ್ವೈತ ವೇದಾಂತದಂತೆ ಮಿಥ್ಯಾರೂಪವಲ್ಲ (ಬ್ರಹ್ಮ ಸತ್ಯಾ ಜಗನ್ಮಿಥ್ಯಾ -ಎಂಬುದು ಅದ್ವೈತ ವೇದಾಂತಿಗಳ ಜಗತ್ ತತ್ತ್ವ). ಹೇಗೆ ಸಮುದ್ರ ಸ್ವರೂಪವಾದ ನೀರು ಗಾಳಿಯಿಂದ ಕ್ಷೋಭೆಗೊಳ್ಳಲು ಅಲೆಗಳ ರೂಪದಿಂದ ತೋರುತ್ತದೆಯೋ, ಹಾಗೆ ಆನಂದಘನ ಪರಶಿವನು ಸ್ಪಂದರೂಪ ಇಚ್ಛಾಶಕ್ತಿಯಿಂದ ವಿಶ್ವದ ರೂಪದಲ್ಲಿ ಕಾಣಿಸುತ್ತಾನೆ. ಆದುದರಿಂದ ವಿಶ್ವೋತ್ತೀರ್ಣ-ವಿಶ್ವಮಯ ಇವರಿಬ್ಬರಲ್ಲಿ ವ್ಯವಹಾರ ಭೇದವಿದ್ದರೂ ಕೂಡ ವಸ್ತುತಃ ಅವರಿಬ್ಬರೂ ಒಂದೇ ರೂಪವುಳ್ಳವರು.[೧೧೬]

---

[೧೧೩] ಬ್ರಹ್ಮಸೂತ್ರ ಶ್ರೀಕರಭಾಷ್ಯ, ೨.೩.೪

[೧೧೪] ಛಾ.ಉ, ೩.೧೪.೧

[೧೧೫] ಮಹಾನಾರಾಯಣೋಪನಿಷತ್, ೧೦.೧೧

[೧೧೬] "ಯಥಾಂಬುಧೇಸ್ತರಂಗಾಣಾಂ ಚೈಕ್ಯೇಽಪಿ ವ್ಯವಹಾರಭೇದಸ್ತಥಾ ಶಿವಸ್ಯ ವಿಶ್ವಸ್ಯ ಚ"
-ಶಿವದೃಷ್ಟಿ, ವೃತ್ತಿ, ಪು. ೧೧೩

'ಶಿವಃ ಪರಮಕಾರಣಮ್'[೧೧೭] (ಶಿವನು ಶ್ರೇಷ್ಠ ಕಾರಣ) ಎಂಬ ತಂತ್ರಾಲೋಕದ ಉಕ್ತ್ಯನುಸಾರವಾಗಿ ಈ ಸಿದ್ಧಾಂತದಲ್ಲಿ ಪ್ರಪಂಚದ ಸೃಷ್ಟಿಯ ವಿಷಯದಲ್ಲಿ ಶಿವನ ಇಚ್ಛೆಯ ಹೊರತಾಗಿ ಮತ್ತೇನನ್ನೂ ಬಯಸುವುದಿಲ್ಲ. ನಾನು ನಾನಾ ರೂಪದಲ್ಲಿದ್ದೇನೆ ಮುಂತಾಗಿ ಅವನ (ಶಿವನ) ಇಚ್ಛೆಯಿಂದಲೇ ಘಟ-ಪಟ ಇತ್ಯಾದಿ ಆಕಾರದಿಂದ ಜಗತ್ತು ತನ್ನಲ್ಲಿಯೇ ಬೆಳಗುತ್ತಿದೆ.[೧೧೮] ಕೇವಲ ಇಚ್ಛೆಯಿಂದ ಜಗತ್ತಿನ ನಿರ್ಮಾಣವೆಂದು ಯೋಗಿಗಳ ಈ ದೃಷ್ಟಾಂತದಿಂದ ಸಮರ್ಥಿಸಲಾಗಿದೆ:

ಯೋಗಿನಾಮಪಿ ಮೃದ್ಬೀಜೇ ವಿನೈವೇಚ್ಛಾವಶೇನ ಯತ್।
ಘಟಾದಿ ಜಾಯತೇ ತತ್ತತ್ ಸ್ಥಿರಭಾವಕ್ರಿಯಾಕರಮ್॥[೧೧೯]

ಇದರ ಭಾವವೇನೆಂದರೆ- ಸಂಕಲ್ಪಸಿದ್ಧರಾದ ಯೋಗಿಗಳು ಇಚ್ಛೆಯಿಲ್ಲದಿದ್ದರೂ ಕೂಡ ಮಣ್ಣಿನಿಂದ ಪ್ರಯೋಜನಭೂತವಾದ ನೀರನ್ನು ಸಂಗ್ರಹಿಸಿ ತೆಗೆದುಕೊಂಡು ಹೋಗುವ ಇತ್ಯಾದಿ ಕ್ರಿಯೆಗಳನ್ನು ಮಾಡಲು ಸಮರ್ಥವಾದ ಘಟವನ್ನು ಹೇಗೆ ಉತ್ಪಾದಿಸುತ್ತಾರೆಯೋ, ಬೀಜವಿಲ್ಲದೆ ಮರವನ್ನು ಸೃಷ್ಟಿಸಬಹುದೆಂದು ಪುರಾಣಾದಿಗಳಲ್ಲಿ ಹೇಗೆ ಕೇಳಿದ್ದೇವೆಯೋ, ಹಾಗೆಯೇ ಶಿವನೂ ಕೂಡ ಮುಖ್ಯವಾದ ಪರಮಾಣು ಮುಂತಾದವುಗಳನ್ನು ಅಪೇಕ್ಷಿಸದೆ ತನ್ನ ಇಚ್ಛೆಯಿಂದ ಜಗತ್ತನ್ನು ಸೃಷ್ಟಿಸುತ್ತಾನೆಂದು ಸಿದ್ಧವಾಗುತ್ತದೆ. ಅದನ್ನು ವಸುಗುಪ್ತಾಚಾರ್ಯರು-

ನಿರುಪಾದಾನಸಂಭಾರಮಭಿತ್ತಾವೇವ ತನ್ವತೇ।
ಜಗಚ್ಚಿತ್ರಂ ನಮಸ್ತಸ್ಮೈ ಕಲಾನಾಥಾಯ ಶೂಲಿನೇ॥[೧೨೦]

"ಯಾವುದೇ ರೀತಿಯ ಸಾಮಗ್ರಿಯಿಲ್ಲದೆ ಶಕ್ತಿಯ ವಿಕಾಸರೂಪವಾದ ಜಗತ್ತಿನ ಚಿತ್ರಕ್ಕೆ ಕಾರಣನಾದ ಕಲಾಕಾರನಾದ ಶಿವನಿಗೆ ನಮಸ್ಕರಿಸುತ್ತೇನೆ" ಎಂದು ವಿವರಿಸಿದ್ದಾರೆ.

ಈ ಸಿದ್ಧಾಂತದಲ್ಲಿ "ನರ್ತಕ ಆತ್ಮಾ"[೧೨೧] (ಆತ್ಮವು ನಟ) ಎಂಬ ಶಿವಸೂತ್ರದ ಉಕ್ತಿಯಂತೆ ಶಿವನು ನಟನೆಂದು ಕರೆಯಲ್ಪಟ್ಟಿದ್ದಾನೆ. "ಆಂತರಿಕವಾಗಿ ರಹಸ್ಯವಾಗಿರುವ ತನ್ನ ಸ್ವರೂಪದ ಅಹಂಕಾರಕ್ಕೆ ಮೂಲವಾದ ಆಯಾ ಜಾಗ್ರತ್ ಮುಂತಾದ ನಾನಾ

---

೧೧೭. ತಂತ್ರಾಲೋಕ, ೧.೮೮

೧೧೮. ಏಷ ಚಾನಂದಶಕ್ತಿತ್ವಾದೇವಮಾಭಾಸಯತ್ಯಮೂನ್।
ಭಾವಾನಿಚ್ಛಾವಶಾದೇಷಾಂ ಕ್ರಿಯಾ ನಿರ್ಮಾತೃತಾಸ್ಯ ಸಾ॥
ಇತ್ಥಂ ತಥಾ ಘಟಪಟಾದ್ಯಾಕಾರಜಗದಾತ್ಮನಾ।
ತಿಷ್ಠಾಸೋರೇವಮಿಚ್ಛೈವ ಹೇತುಕರ್ತೃಕೃತಾ ಕ್ರಿಯಾ॥
-(ಸರ್ವದರ್ಶನಸಂಗ್ರಹ, ಪು. ೧೯೬-೯೭)

೧೧೯. ಸ.ದ.ಸಂ, ಪು. ೧೯೭

೧೨೦. ಸ.ದ.ಸಂ, ಪು. ೧೯೯

೧೨೧. ಶಿವಸೂತ್ರ, ೩.೯

ಭೂಮಿಕೆಯ ಪ್ರಪಂಚವನ್ನು ತನ್ನ ಪರಿಸ್ಪಂದ ರೂಪದ ಲೀಲೆಯಿಂದಲೇ ತನ್ನ ಗೋಡೆಯ ಮೇಲೆ ಪ್ರಕಟಿಸುತ್ತಾನೆ ಎಂದು ಆತ್ಮವು ನಟ''[೧೨೨] ಎಂದು ಕ್ಷೇಮರಾಜನು ಈ ಸೂತ್ರವನ್ನು ವ್ಯಾಖ್ಯಾನಿಸಿ ಶಿವನ ನಟತ್ವವನ್ನು ಸಮರ್ಥಿಸಿದ್ದಾನೆ. ಆದುದರಿಂದ ನಾವು ನೋಡುತ್ತಿರುವ ಯಾವ ಪ್ರಪಂಚವಿದೆಯೋ ಅದೆಲ್ಲವೂ ಶಿವನೊಬ್ಬನ ಸ್ವಾತಂತ್ರ್ಯ ಶಕ್ತಿಯ ಲೀಲೆಯೇ ಆಗಿದೆ. "ಶಕ್ತಯೋಽಸ್ಯ ಜಗತ್ ಕೃತ್ಸ್ನಂ ಶಕ್ತಿಮಾಂಸ್ತು ಮಹೇಶ್ವರಃ''[೧೨೩] (ಈ ಜಗತ್ತೆಲ್ಲವೂ ಅವನ ಶಕ್ತಿ, ಶಕ್ತಿಯಾದರೂ ಸಾಕ್ಷಾತ್ ಮಹೇಶ್ವರ) ಎಂಬ ಉಕ್ತಿಗನುಸಾರವಾಗಿ ಇಲ್ಲಿಯೂ ಕೂಡ ವೀರಶೈವದರ್ಶನದಂತೆ ಶಕ್ತಿಯ ವಿಕಾಸದಿಂದ ಸೃಷ್ಟಿ ಮತ್ತು ಸಂಕೋಚದಿಂದಲೇ ಪ್ರಲಯ. ಈ ಶಕ್ತಿಸಂಕೋಚ ವಿಕಾಸ ವಾದವನ್ನು ಅಭಿನ್ನನಿಮಿತ್ತೋಪಾದಾನತ್ವವೆಂದೇ ಶಿವ-ಶಕ್ತಿಯರ ಅಭೇದದಿಂದ ಸಮರ್ಥಿಸುತ್ತಾರೆ. ಆಟವಾಡುವುದು ಹೇಗೆ ಮಕ್ಕಳ ಸ್ವಭಾವವೋ, ಹಾಗೆಯೇ ಪಂಚಕೃತ್ಯಗಳು ಕೂಡ ಶಿವನ ಸ್ವಭಾವ. ಶಿವನು ಯಾವಾಗಲೂ ಪಂಚಕೃತ್ಯಗಳಿಂದ ಆಟವಾಡುತ್ತಲೇ ಇರುತ್ತಾನೆ. ಆದುದರಿಂದ ಕಾಶ್ಮೀರಶೈವಸಿದ್ಧಾಂತಕ್ಕನುಗುಣವಾಗಿ ಪಂಚಕೃತ್ಯಗಳು ಶಿವನ ಸ್ವರೂಪಲಕ್ಷಣವೆಂದು ಹೇಳಬಹುದು. ಇದನ್ನು ವೀರಶೈವರು ತಟಸ್ಥಲಕ್ಷಣವೆಂದು ಕರೆದಿದ್ದಾರೆ.

ಅವಿಕೃತಪರಿಣಾಮವಾದ-ಆಭಾಸವಾದಗಳ ಸ್ವರೂಪ ವಿಮರ್ಶೆ

ಶಿವ-ಶಕ್ತಿಯರ ವಿಲಾಸರೂಪವಾದ ಈ ಜಗತ್ತಿನ ಸತ್ಯತ್ವವನ್ನು ವೀರಶೈವರಂತೆ ಕಾಶ್ಮೀರಶೈವರೂ ಕೂಡ ಅಂಗೀಕರಿಸಿದ್ದಾರೆ. ಶಕ್ತಿಯ ವಿಕಾಸ ರೂಪ ಜಗತ್ತಿನ ಚಿತ್ರಕ್ಕೆ ಆಧಾರವಾದ ಗೋಡೆ ಶಿವನೆಂದು ಕಾಶ್ಮೀರಶೈವರು ಹೇಗೆ ಪ್ರತಿಪಾದಿಸಿದ್ದಾರೆಯೋ, ಹಾಗೆಯೇ ವೀರಶೈವಾಚಾರ್ಯರೂ ಕೂಡ ಹೇಳಿದ್ದಾರೆ. ಉದಾಹರಣೆಗೆ-

ತ್ರೈಲೋಕ್ಯಸಂಪದಾಲೇಖ್ಯ ಸಮುಲ್ಲೇಖನಭಿತ್ತಯೇ।
ಸಚ್ಚಿದಾನಂದರೂಪಾಯ ಶಿವಾಯ ಬ್ರಹ್ಮಣೇ ನಮಃ॥[೧೨೪]

"ಸ್ವರ್ಗ, ಮರ್ತ್ಯ, ಪಾತಾಳವೆಂಬ ಮೂರು ಲೋಕಗಳ ಸಂಪತ್ತೆಂಬ ಚಿತ್ರವನ್ನು ಬರೆಯುವುದಕ್ಕೆ ಯಾವಾತನು ಗೋಡೆಯಂತಿರುವನೋ, ಯಾರು ಸತ್, ಚಿತ್ ಮತ್ತು ಆನಂದಗಳ ಸ್ವರೂಪನಾಗಿರುವನೋ, (ವೇದಾಂತದಲ್ಲಿ) ಪರಬ್ರಹ್ಮನೆಂದು ಪ್ರತಿಪಾದಿತನಾಗಿರುವ ಪರಶಿವನಿಗೆ ನಮಸ್ಕಾರ."

ಮೇಲಿನ ಅಂಶಗಳ ಅವಲೋಕನದಿಂದ ವೀರಶೈವರ ಅವಿಕೃತಪರಿಣಾಮ ವಾದದಲ್ಲಿ ಮತ್ತು ಕಾಶ್ಮೀರಶೈವರ ಆಭಾಸವಾದದಲ್ಲಿ ಜಗತ್ತು ಶಕ್ತಿಯ ವಿಕಾಸತ್ವ,

---

೧೨೨. ಶಿವಸೂತ್ರ ವಿವೃತಿ, ೩.೯

೧೨೩. ಶಿವಸೂತ್ರ ವಿವೃತಿ, ೩.೯, ಪು. ೮೯

೧೨೪. ಸಿ.ಶಿ, ೧.೧

ಶಕ್ತಿವಿಶಿಷ್ಟನಾದ ಶಿವನ ಅಭಿನ್ನನಿಮಿತ್ತೋಪಾದಾನತ್ವ, ಪ್ರಪಂಚದ ಸತ್ಯತ್ವ, ಪ್ರಪಂಚದ ಚಿತ್ರಕ್ಕೆ ಶಿವನು ಗೋಡೆಯೋಪಾದಿಯಲ್ಲಿರುವನು ಇತ್ಯಾದಿ ವಿಷಯಗಳಲ್ಲಿ ವಿಚಾರ ಸಾಮ್ಯವು ಕಂಡುಬರುತ್ತದೆ. ಪ್ರಪಂಚದ ಸೃಷ್ಟಿಗೆ ಕಾರಣವನ್ನು ವೀರಶೈವರು ತಟಸ್ಥ ಲಕ್ಷಣವನ್ನು ಹೇಳಿದರೆ, ಕಾಶ್ಮೀರಶೈವರು ಶಿವನ ಸ್ವರೂಪ ಲಕ್ಷಣವೆಂದು ಹೇಳುವುದೇ ವಿಶೇಷ.

ಸಿದ್ಧಾಂತಶೈವರ ಸತ್ಕಾರ್ಯವಾದ

ಸಿದ್ಧಾಂತಶೈವರು ಸೃಷ್ಟಿವ್ಯವಸ್ಥೆಯ ವಿಷಯದಲ್ಲಿ ಸತ್ಕಾರ್ಯವಾದವನ್ನು ಒಪ್ಪುತ್ತಾರೆ. ಲೋಕದಲ್ಲಿ ಅಸತ್ತಿನ ಉತ್ಪತ್ತಿಯು ಅಸಂಭವವಾದ್ದರಿಂದ ಹೇಗೆ ಸತ್ ರೂಪವಾದ ಹಾಲು ಮೊಸರಾಗಿ ಪರಿವರ್ತಿತವಾಗುತ್ತದೆಯೋ, ಅದೇ ಸತ್‌ರೂಪವಾದ ಮೊಸರು ಮಜ್ಜಿಗೆಯಾಗುತ್ತದೆಯೋ, ಹಾಗೆಯೇ ಮಹಾಪ್ರಳಯದ ಸಂದರ್ಭದಲ್ಲಿ ಕಲೆಯೇ ಮೊದಲಾದ ಕಾರ್ಯಗಳು ಸೂಕ್ಷ್ಮರೂಪದಿಂದ ಮಾಯೆಯಲ್ಲಿರುವ ಸೃಷ್ಟಿಯ ಆದಿಯಲ್ಲಿ ವ್ಯಕ್ತವಾಗುತ್ತದೆಂದು ಅವರ ಆಶಯ. "ಮತ್ತು ಈ ಸತ್ಕಾರ್ಯವಾದವನ್ನು ಮೃಗೇಂದ್ರವೃತ್ತಿದೀಪಿಕೆಯಲ್ಲಿ ನಾವು ವಿಸ್ತಾರವಾಗಿ ಚರ್ಚಿಸಿದ್ದೇವೆ"[೧೨೫] ಎಂದು ಅಘೋರ ಶಿವಾಚಾರ್ಯರು ಪ್ರತಿಪಾದಿಸಿರುವುದರಿಂದ ಜಿಜ್ಞಾಸುಗಳು ಈ ವಾದದ ವಿಸ್ತಾರವನ್ನು ಅಲ್ಲಿಯೇ ಗಮನಿಸಬಹುದು. ಸತ್ಕಾರ್ಯವಾದದ ದೃಷ್ಟಿಯಿಂದ ಕಲೆ ಮುಂತಾದ ಅವಸ್ಥಾ ಭೇದದಿಂದ ಸೃಷ್ಟಿ ಪ್ರಳಯ ರೂಪವನ್ನು ತಳೆಯುವುದರಿಂದ ಮಾಯೆಯೇ ಕಲೆ ಮುಂತಾದ ಕಾರ್ಯದ ಮೂಲಕ ಪರಿಣಮಿಸುತ್ತದೆ ಎಂದು ಈ ಸತ್ಕಾರ್ಯವಾದವು ಪರಿಣಾಮವಾದವೆಂತಲೂ ಕೂಡ ಕರೆಯಲ್ಪಟ್ಟಿದೆ. ಹಾಲು ಮೊಸರಾಗಿ ಪರಿಣಮಿಸುವಂತೆ, ಹಿಂದಿನ ಅವಸ್ಥೆಯನ್ನು ಬಿಟ್ಟು ಮತ್ತೊಂದು ಅವಸ್ಥೆಯನ್ನು ಪಡೆಯುವುದೇ ಇಲ್ಲಿ ಪರಿಣಾಮ ಶಬ್ದದ ಅರ್ಥ.[೧೨೬] ಇಲ್ಲಿ ಹೇಳಲ್ಪಡುವ ಮಾಯೆಯ ಪರಿಣಾಮವಾದರೋ ಹಾಲಿನಂತೆ ಸರ್ವಾತ್ಮವಾಗಿರದೆ, ಘೃತಕೀಟನ್ಯಾಯದಂತೆ ಏಕದೇಶವಾಗಿರುತ್ತದೆಂದು ತಿಳಿಯಬೇಕು. ಅದನ್ನು ಅಘೋರ ಶಿವಾಚಾರ್ಯರು ಈ

---

[೧೨೫] ತತ್ತ್ವಸಂಗ್ರಹ ಟೀಕಾ, ಶ್ಲೋಕ. ೨೬

[೧೨೬] ಪರಿಣಾಮೋ ಹಿ ವಸ್ತೂನಾಂ ಪೂರ್ವಾವಸ್ಥಾಪರಿಚ್ಯುತೇಃ।
ಅವಸ್ಥಾಂತರಸಂಪ್ರಾಪ್ತಿಃ ಕ್ಷೀರಸ್ಯ ದಧಿಭಾವವತ್॥
ದಧ್ನಶ್ಚ ತಕ್ರವತ್ ತತ್ರ ತಕ್ರಾವಸ್ಥಾ ನಿರೂಪ್ಯತೇ।
ನ ದಧ್ನೋ ನಾಪಿ ದುಗ್ಧಸ್ಯ ಪೂರ್ವಾವಸ್ಥೇ ಹಿ ತೇ ಮತೇ॥
ಸದವಸ್ಥಂ ಹಿ ವಸ್ತ್ವೇಕಂ ಪೂರ್ವಂ ಕ್ಷೀರಂ ತತೋ ದಧಿ।
ಪಶ್ಚಾತ್ ತಕ್ರಂ ತಥಾ ಮಾಯಾ ವಿಚಿತ್ರಪರಿಣಾಮತಃ।
ತತ್ತ್ವ ತಾತ್ತ್ವಿಕಭಾವಾನಾಮುಪಾದಾನಮನಶ್ವರಮ್॥
-(ರತ್ನತ್ರಯಪರೀಕ್ಷಾ, ಶ್ಲೋ. ೩೫-೩೮)

ರೀತಿಯಾಗಿ ಹೇಳಿದ್ದಾರೆ- "ಒಂದು ವೇಳೆ ಹಾಲಿನಂತೆ" ಮಾಯೆಯು ಸಂಪೂರ್ಣ ಪರಿಣಾಮವಾಗುತ್ತದೆ ಎಂದರೆ ಮಾಯೆಗೆ ಅನಿತ್ಯತ್ವವು ಬರುತ್ತದೆ. ಅದು ಸರಿಯಲ್ಲ. ಇಲ್ಲಿ ಕೊಟ್ಟಿರುವ ಹಾಲಿನ ದೃಷ್ಟಾಂತವು ಸರ್ವತ್ರ ಅನ್ವಯವಾಗುವುದಿಲ್ಲ. ಕೇವಲ ಪರಿಣಾಮವಾಗುತ್ತದೆ ಎಂಬ ವಿಷಯದಲ್ಲಿ ಮಾತ್ರ ದೃಷ್ಟಾಂತವನ್ನಾಗಿ ಸ್ವೀಕರಿಸಬೇಕು. ಮತ್ತು ಘೃತಕೀಟನ್ಯಾಯದಂತೆ ಮಾಯೆಯು ಏಕದೇಶ ಪರಿಣಾಮವಾಗುತ್ತದೆ ಎಂದು ಹೇಳುವುದರಿಂದ ದೋಷವಿಲ್ಲ."[೧೨೭]

ಹೀಗೆ ಸತ್ಕಾರ್ಯವಾದಿಗಳು, ವೀರಶೈವರು ಮತ್ತು ಕಾಶ್ಮೀರಶೈವರು ಒಪ್ಪಿರುವ ಅಭಿನ್ನನಿಮಿತ್ತೋಪಾದಾನಕಾರಣವಾದವನ್ನು ಒಪ್ಪುವುದಿಲ್ಲ. ಸತ್ಕಾರ್ಯವಾದಿಗಳು ಹೇಳುತ್ತಾರೆ- ಈಶ್ವರನ ಉಪಾದಾನತ್ವವನ್ನು ಒಪ್ಪಿದರೆ ಅವನಿಗೆ ಪರಿಣಾಮವನ್ನು ಮತ್ತು ಅಚಿದ್ರೂಪವನ್ನು ಹೇಳಬೇಕಾಗುತ್ತದೆ. ಉಪಾದೇಯನಾದ ಅವನಿಂದ ಆದ ಸಮಸ್ತ ಪ್ರಪಂಚಕ್ಕೂ ಕೂಡ ಚಿದ್ರೂಪವನ್ನು ಹೇಳಬೇಕಾಗುತ್ತದೆ. ಆದುದರಿಂದ ಶಿವನಲ್ಲಿರುವ ಶಕ್ತಿಯೂ ಕೂಡ ಉಪಾದಾನಕಾರಣವಾಗಲಾರದು. ಚಿತ್‌ಸ್ವರೂಪವೇ ವಿವರ್ತವಾಗುತ್ತದೆಂದು ಅಂಗೀಕರಿಸಿದರೂ ಜಗತ್ತು ಅಸತ್ಯವೆಂದು ಒಪ್ಪಬೇಕಾಗುತ್ತದೆ. ಹಾಗೆಯೇ ಆಗಲೆನ್ನುವಂತಿಲ್ಲ, ಸರ್ವಪ್ರಮಾಣ ಸಿದ್ಧವಾದ ಜಗತ್ತನ್ನು ಅಸತ್ಯವೆನ್ನುವಂತಿಲ್ಲ.[೧೨೮] ಆದುದರಿಂದ ಲೋಕದಲ್ಲಿ ಹೇಗೆ ಘಟದ ತಯಾರಿಕೆಯಲ್ಲಿ ದಂಡ-ಚಕ್ರಾದಿಗಳು ಸಹಕಾರಿಕಾರಣವೋ ಹಾಗೆಯೇ ಪ್ರಪಂಚದ ಸೃಷ್ಟಿಯ ಕಾರ್ಯದಲ್ಲಿ ಮೂರೂ ಕಾರಣಗಳು ಅವಶ್ಯಕವೆಂದು ಹೇಳುವ ಅವರಿಗೆ ಈಶ್ವರನು ನಿಮಿತ್ತಕಾರಣ, ಬಿಂದು ಅಥವಾ ಮಾಯೆ[೧೨೯] ಉಪಾದಾನಕಾರಣ ಮತ್ತು ಸೃಷ್ಟಿಸಬೇಕಾದ ಪ್ರಾಣಿಗಳ ಅದೃಷ್ಟ ಸಹಕಾರಿಕಾರಣವೆಂದು ಹೇಳಲ್ಪಟ್ಟಿದೆ. ಪೌಷ್ಕರಾಗಮದಲ್ಲಿ ಹೀಗೆ ವಿವರಿಸಲಾಗಿದೆ-

> ನಿಮಿತ್ತಮೀಶ್ವರಸ್ತೇಷಾಮುಪಾದಾನಂ ಚ ಬಿಂದುರಾಟ್।
> ನೃಕರ್ಮ ಸಹಕಾರಿ ಸ್ಯಾತ್ ಕಾರ್ಯಮೇತತ್ ತ್ರಿಹೇತುಕಮ್॥[೧೩೦]

---

[೧೨೭] ರತ್ನತ್ರಯಪರೀಕ್ಷಾ ಟೀಕಾ, ಶ್ಲೋಕ. ೩೮

[೧೨೮] ನಾಸ್ತಿಶಕ್ತಿರುಪಾದಾನಂ ಚಿದ್ರೂಪದ್ವಾದ್ ಯಥಾ ಶಿವಃ।
ಪರಿಣಾಮೋಽಚಿತಃ ಪ್ರೋಕ್ತಶ್ಚೇತನಸ್ಯ ನ ಯುಜ್ಯತೇ॥
ಚಿತೋ ವಿವರ್ತ ಏವೋಕ್ತಸ್ತಥಾತ್ವೇ ಕಾರ್ಯಶೂನ್ಯತಾ।
ಸರ್ವಪ್ರಣಾಮಸಂಸಿದ್ಧಂ ಚಿದ್ವಿವರ್ತಃ ಕಥಂ ಜಗತ್॥

[೧೨೯] ಶುದ್ಧೇಽಧ್ವನಿ ಶಿವಃ ಕರ್ತಾ ಪ್ರೋಕ್ತೋಽನಂತೋಽಸಿತೇ ಪ್ರಭುಃ" (ವಿವೃತಿ, ೩.೨೭) ಇತಿ ಕಿರಣಾಗಮವಚನಾನುಸೃತ್ಯ ಭಗವಾನ್ ಶಿವೋ ಬಿಂದುಮುಪಾದಾಯ ಶುದ್ಧಸೃಷ್ಟಿಮಾತನುತೇ, ಅನಂತಶ್ಚ ಮಾಯಾಮುಪಾದಾಯಾಽಶುದ್ಧಸೃಷ್ಟಿಮ್। -(ಲುಪ್ತಾಗಮ ಸಂಗ್ರಹ, ಭಾಗ. ೨, ಉಪೋದ್ಘಾತ, ಪು. ೧೨೯-೧೩೦)

[೧೩೦] ಲು.ಸಂ, ಭಾಗ-೨, ಉಪೋದ್ಘಾತ, ಪು. ೧೨೯-೧೩೦.

"ಈಶ್ವರನು ನಿಮಿತ್ತಕಾರಣ, ಬಿಂದು ಉಪಾದಾನಕಾರಣ ಮತ್ತು ನೃಕರ್ಮ ಸಹಕಾರಿಕಾರಣವೆಂದು ಸೃಷ್ಟಿಯ ಕಾರ್ಯಕ್ಕೆ ಈ ಮೂರು ಕಾರಣಗಳನ್ನು ಹೇಳುತ್ತಾರೆ."

ಈ ಸಿದ್ಧಾಂತದಲ್ಲಿ ನಿಮಿತ್ತಕಾರಣನಾದ ಈಶ್ವರನ "ಕರಣಂ ಚ ನ ಶಕ್ತ್ಯನ್ಯಚ್ಛಕ್ತಿರ್ನಾಚೇತನಾ ಚಿತಃ"[೧೩೧] (ಶಕ್ತಿಗಿಂತಲೂ ಭಿನ್ನವಾದ ಕರಣವಿಲ್ಲ, ಶಕ್ತಿಯು ಅಚೇತನವೂ ಅಲ್ಲ, ಚೈತನ್ಯವಾಗಿರುವುದರಿಂದ) ಎಂಬ ಆಗಮೋಕ್ತಿಗನುಸಾರವಾಗಿ ಶಕ್ತಿಯೇ ಕರಣವೆಂದು ತಿಳಿದುಬರುತ್ತದೆ. ಮತ್ತು ಇಂದ್ರಿಯಾದಿ ಕರಣಗಳ ಅಭಾವದಲ್ಲಿ ಕರ್ತೃತ್ವ ಸಿದ್ಧವಾಗುತ್ತದೆಂದು ಹೇಳಬಾರದು. ಕುರುಡನಿಗೂ ಕೂಡ ಅಯಸ್ಕಾಂತದ ಲೋಹಾಕರ್ಷಣ ಶಕ್ತಿಯ ಕರ್ತೃತ್ವದಂತೆ ಅದರ ಉಪಪತ್ತಿಯುಂಟಾಗುತ್ತದೆ. ಅದು ಕಿರಣಾಗಮದಲ್ಲಿ ಹೀಗೆ ಹೇಳಲ್ಪಟ್ಟಿದೆ- "ಶಲ್ಯಾಕೃಷ್ಟಿಕರೋ ದೃಷ್ಟೋ ಹ್ಯಕ್ಷಹೀನೋಽಪಿ ಕರ್ಷಕಃ"[೧೩೨] (ಬಾಣವನ್ನು ಎಳೆದಿರುವ ಕೈಯುಳ್ಳವನು ಕಣ್ಣಿಲ್ಲದಿದ್ದರೂ ಕರ್ಷಕನೆಂದು ಕರೆಯಿಸಿಕೊಳ್ಳುತ್ತಾನೆ). ಆದುದರಿಂದ ಶಿವನ ಇಚ್ಛೆಯೇ ಯೋಗಿಯಂತೆ ಎಲ್ಲ ಕ್ರಿಯೆಗಳಲ್ಲಿ ಕರಣ. ಅದನ್ನೇ ತತ್ತ್ವಪ್ರಕಾಶದಲ್ಲಿ- "ಸೋಽನಾದಿಮುಕ್ತ ಏಕೋ ವಿಜ್ಞೇಯಃ ಪಂಚಮಂತ್ರ ತನುಃ"[೧೩೩] (ಅನಾದಿಮುಕ್ತನಾದ ಶಿವನೊಬ್ಬನೇ ಪಂಚಮಂತ್ರರೂಪನೆಂದು ತಿಳಿಯಬೇಕು) ಎಂದು ಶಿವನ ಶರೀರವು ಸದ್ಯೋಜಾತಾದಿ ಮಂತ್ರಯುಕ್ತವೆಂದು ಹೇಳಲಾಗಿದೆ. ವಸ್ತುತಃ ಈಶ್ವರನು ಶರೀರವಿಲ್ಲದವನು. ಇಲ್ಲಿಯೂ ಕೂಡ ಈಶಾನ ಮೊದಲಾದ ಪಂಚಶಕ್ತಿಗಳು ಶರೀರದಂತೆ ಪಂಚಕೃತ್ಯೋಪಯೋಗಿಗಳಾಗುತ್ತವೆಂದು ಈ ವ್ಯವಹಾರ ಕೇವಲ ಔಪಚಾರಿಕವಷ್ಟೆ. ಅದನ್ನು ಅಘೋರ ಶಿವಾಚಾರ್ಯರು ಹೀಗೆ ಹೇಳಿದ್ದಾರೆ- "ಆದುದರಿಂದ ಪಂಚಮಂತ್ರಯುಕ್ತವಾದ, ಪಂಚಕೃತ್ಯೋಪಯೋಗಿಗಳಾದ ಈಶಾನಾದಿ ಶಕ್ತಿಗಳೇ ಶರೀರದ ಕಾರ್ಯವನ್ನು ಮಾಡುತ್ತಿದ್ದು, ಶರೀರವೆಂದು ಕೇವಲ ಉಪಚಾರಕ್ಕಾಗಿ ಹೇಳಲ್ಪಟ್ಟಿದೆ."[೧೩೪]

ಮಾಧವಾಚಾರ್ಯರು ಕೂಡ ಹೀಗೆ ಹೇಳಿದ್ದಾರೆ- "ಮಲಕರ್ಮಾದಿಪಾಶ ಜಾಲಗಳು ತಗುಲದಿರುವುದರಿಂದ ಪರಮೇಶ್ವರನು ಪ್ರಾಕೃತಶರೀರಿಯಾಗದೆ, ಶಾಕ್ತ ಶರೀರಿಯಾಗುತ್ತಾನೆ. ಶಕ್ತಿಯ ರೂಪಗಳಿಂದ ಈಶಾನಾದಿ ಪಂಚಮಂತ್ರಗಳಿಂದ ಮಸ್ತಕಾದಿಗಳ ಕಲ್ಪನೆಯಿಂದ ಈಶಾನ ಮಸ್ತಕ (ಶಿರಸ್ಸು), ತತ್ಪುರುಷ ಮುಖ, ಅಘೋರ ಹೃದಯ, ವಾಮದೇವ ಗುಹ್ಯ ಮತ್ತು ಸದ್ಯೋಜಾತ ಪಾದರೂಪಿ ಈಶ್ವರನೆಂಬ ಪ್ರಸಿದ್ಧಿಯಿಂದ ಕ್ರಮವಾಗಿ ಅನುಗ್ರಹ, ತಿರೋಭಾವ, ಆದಾನ, ಲಕ್ಷಣ ಮತ್ತು ಸ್ಥಿತಿಲಕ್ಷಣೋದ್ಭವ ಎಂಬ ಲಕ್ಷಣ ಯೋಗ್ಯವಾದ ಪಂಚಕಾರಣಗಳಿಂದ ಅವನ ಶರೀರವು ಸ್ವಇಚ್ಛೆಯಿಂದ ನಿರ್ಮಿತವಾಗಿದೆಯೇ ಹೊರತು ನಮ್ಮ ಶರೀರ ಸದೃಶವಾಗಿಯಲ್ಲ."[೧೩೫]

---

೧೩೧. ಮೃಗೇಂದ್ರಾಗಮ, ವಿದ್ಯಾಪಾದ, ೩.೪

೧೩೨. ಲುಪ್ತಾಗಮಸಂಗ್ರಹ, ಭಾಗ.೨, ಉಪೋದ್ಘಾತ, ಪು. ೧೨೬

೧೩೩. ತತ್ತ್ವಪ್ರಕಾಶ, ಶ್ಲೋಕ. ೬

೧೩೪. ತತ್ತ್ವಪ್ರಕಾಶವೃತ್ತಿ, ಶ್ಲೋಕ. ೭

೧೩೫. ಸರ್ವದರ್ಶನಸಂಗ್ರಹ, ಪು. ೧೭೮-೧೭೯

ಪಂಚಮುಖ, ಹದಿನೈದು ಕಣ್ಣುಗಳು ಮುಂತಾದವುಗಳಿಂದ ಈಶ್ವರನ ಶರೀರ ಮತ್ತು ಇಂದ್ರಿಯಗಳ ಸಂಬಂಧವು ಮುಖ್ಯವಾಗಿ ಕೇಳಲ್ಪಟ್ಟಿದ್ದು, ಅವನು ಧ್ಯಾನ, ಪೂಜೆ ಇತ್ಯಾದಿ ಪ್ರಯೋಜಕನೆಂದು ತಿಳಿಯಬೇಕು. ಅದನ್ನು ಅಘೋರ ಶಿವಾಚಾರ್ಯರು ಹೀಗೆ ಹೇಳುತ್ತಾರೆ- "(ನಿರಾಕಾರ ರೂಪದಲ್ಲಿ ಧ್ಯಾನಪೂಜಾದಿಗಳ ಸಂಬಂಧವಿರುವುದಿಲ್ಲವಾದ್ದರಿಂದ) ಧ್ಯಾನವೆಂಬ ಪ್ರಯೋಜನವೇ ಈಶ್ವರನ ಪಂಚಮುಖಾದಿಗಳ ಆಕಾರವೆಂದು ಹೇಳಲ್ಪಟ್ಟಿದೆ."[೧೩೬] ಇದರ ಭಾವಾರ್ಥವಿಷ್ಟು- ಉಪಾಸನೆಯೇ ವಿಶೇಷಸೇವೆ ಮತ್ತು ಸೇವೆಯು ಕಾಯಿಕ, ವಾಚಿಕ, ಮಾನಸಿಕ ಎಂದು ಮೂರು ವಿಧ. ಬುದ್ಧಿಯು ನಿರಾಕಾರ ವಸ್ತುವನ್ನು ಸ್ವೀಕರಿಸುವುದಿಲ್ಲ. ಬುದ್ಧಿಯಿಂದ ವಸ್ತುಗಳ ವಿಷಯೀಕರಣ ಮತ್ತು ವಸ್ತುಗಳ ಆಕಾರಕ್ಕೆ ಸದೃಶವಾದ ಆಕಾರಗಳ ಗ್ರಹಣವಾಗುತ್ತದೆ. ಮತ್ತು ನಿರಾಕಾರ ರೂಪಿಯ ಧ್ಯಾನಾದಿರೂಪದಿಂದ ಮಾನಸಿಕ ಸೇವೆಯು ಸಂಭವಿಸುವುದಿಲ್ಲ. ಬುದ್ಧಿಯಿಂದ ವಿಷಯೀಕರಣದ ಅಭಾವದಿಂದಲೇ ಅದರ ಸ್ತೋತ್ರ-ಪಠನಾದಿ ರೂಪವಾದ ವಿಚಾರ ಸೇವೆಯೂ ಕೂಡ ಅಸಾಧ್ಯ. ಅರ್ಘ್ಯಪಾದ್ಯಾದಿ ರೂಪವಾದ ಕಾಯಿಕ ಸೇವೆಯೂ ಕೂಡ ನಿರಾಕಾರ ರೂಪಿಯ ವಿಷಯದಲ್ಲಿ ಅಸಂಭವವೆಂಬುದು ಸ್ಪಷ್ಟವಾಗಿಯೇ ಇದೆ.

ಮೇಲಿನ ಅಂಶಗಳನ್ನು ಗಮನಿಸಿದಾಗ ಶಿವನು ಪಂಚಮಂತ್ರರೂಪವಾದ ಶರೀರಿಯಾಗಿದ್ದು ಜಗತ್ತಿನ ಸೃಷ್ಟಿ, ಸ್ಥಿತಿ, ಲಯ, ತಿರೋಭಾವ ಮತ್ತು ವಿಮುಕ್ತಿ ಎಂಬ ಪಂಚಕೃತ್ಯಗಳನ್ನು ನಿರ್ವಹಿಸುತ್ತಾನೆ ಮತ್ತು ದಿವ್ಯಸಾಕಾರದೇಹದಿಂದ ಉಪಾಸ್ಯನಾಗಿದ್ದು ಭಕ್ತರನ್ನು ಅನುಗ್ರಹಿಸುತ್ತಾನೆ ಎಂದು ತಿಳಿದುಬರುತ್ತದೆ. ಈ ರೀತಿಯಾದ ಶಿವನು ಪಂಚಕೃತ್ಯಗಳ ವಿಷಯದಲ್ಲಿ ನಿಮಿತ್ತಕಾರಣ, ಬಿಂದುರೂಪಿಯಾದ ಶಕ್ತಿಯು ಉಪಾದಾನಕಾರಣ ಮತ್ತು ಸೃಷ್ಟಿಯಾಗುವ ಪ್ರಾಣಿಗಳ ಕರ್ಮಗಳ ವಿಷಯದಲ್ಲಿ ಸಹಕಾರಿಕಾರಣನಾಗುತ್ತಾನೆ.

ಇಲ್ಲಿ ಇಷ್ಟನ್ನು ತಿಳಿಯಬೇಕು- ಸಿದ್ಧಾಂತಶೈವದರ್ಶನದಲ್ಲಿ ಶಿವನ ಎರಡು ಶಕ್ತಿಗಳು ಅಂಗೀಕೃತವಾದವು. ಅವುಗಳಲ್ಲಿ ಒಂದು ಸಮವಾಯಿನೀ ಮತ್ತು ಮತ್ತೊಂದು ಪರಿಗ್ರಹ ರೂಪದ್ದು. ಶಕ್ತಿತತ್ತ್ವವೇ ಅವನ ಸಮವಾಯಿನೀ ಚಿಚ್ಛಕ್ತಿ ಮತ್ತು ಇದು ಯಾವಾಗಲೂ ಪರಶಿವನೊಂದಿಗಿರುವ ಸ್ವರೂಪಶಕ್ತಿಯೇ ಆಗಿದೆ. ಇದು ಶಿವನಂತೆ ನಿರ್ವಿಕಾರವಾಗುತ್ತದೆ. ಎರಡನೆಯದಾದ ಪರಿಗ್ರಹರೂಪ ಶಕ್ತಿಯು ಅಚೇತನ ಮತ್ತು ಪರಿಣಾಮಶಾಲಿನಿ ರೂಪದ್ದು. ಅದೇ ಬಿಂದು ಎಂದು ಕರೆಯಲ್ಪಟ್ಟಿದೆ. ಬಿಂದು ಕೂಡ ಶುದ್ಧ, ಅಶುದ್ಧವೆಂದು ಎರಡು ಬಗೆಯನ್ನು ಇಲ್ಲಿ ಅಂಗೀಕರಿಸಲಾಗಿದೆ. ಈ ಎರಡರಲ್ಲಿ ಶುದ್ಧಬಿಂದು ಮಹಾಮಾಯೆ ಎಂದೂ, ಮತ್ತು ಅಶುದ್ಧಬಿಂದು ಮಾಯೆ ಎಂದು

---

[೧೩೬] ತತ್ತ್ವಪ್ರಕಾಶವೃತ್ತಿ, ಶ್ಲೋಕ, ೬.

ಕರೆಯಲ್ಪಟ್ಟಿದೆ.[೧೩೭] ಇವೆರಡರಲ್ಲಿ ಮಹಾಮಾಯೆಯು ಶುದ್ಧಾಧ್ವವುಳ್ಳವರಿಗೆ ಉಪಾದಾನಕಾರಣವು. ಅಶುದ್ಧಾಧ್ವವುಳ್ಳವರಿಗೆ ಮಾಯೆಯು ಉಪಾದಾನಕಾರಣ. ಅಯಸ್ಕಾಂತ ಶಕ್ತಿಯಿಂದ ಕಬ್ಬಿಣದಲ್ಲಿ ಕ್ರಿಯೆಯುಂಟಾಗುವಂತೆ ಚಿಚ್ಛಕ್ತಿ ವಿಶಿಷ್ಟ ಶಿವನ ಸಾನ್ನಿಧ್ಯದಿಂದ ಬಿಂದುವಿನಲ್ಲಿ ಕ್ರಿಯೆಯುಂಟಾಗುತ್ತದೆ ಎಂದು ಅಘೋರ ಶಿವಾಚಾರ್ಯರು ನಿರೂಪಿಸಿದ್ದಾರೆ.[೧೩೮] ಚಿಚ್ಛಕ್ತಿಯುಕ್ತನಾದ ಶಿವನು ಮಾಯೆ ಎಂಬ ಬಿಂದುವನ್ನು ಕ್ಷೋಭೆಗೊಳ್ಳುವಂತೆ ಮಾಡಿ ಸೃಷ್ಟಿಯನ್ನು ನೆರವೇರಿಸುತ್ತಾನೆ ಎಂದು ಸದ್ಯೋಜ್ಯೋತಿ ಶಿವಾಚಾರ್ಯರೂ ಕೂಡ ಪ್ರತಿಪಾದಿಸಿದ್ದಾರೆ. ಅದು ಈ ರೀತಿಯಾಗಿದೆ-

ನಿರ್ಮುಕ್ತಾತಿಶಯೈಶ್ವರ್ಯೋ ಮಾಯಾಂ ವಿಕ್ಷೋಭ್ಯ ಶಕ್ತಿಭಿಃ।
ಭೋಗಿನಾಂ ಭುಕ್ತಯೇ ವಿಶ್ವಂ ವಿಚಿತ್ರಂ ಕುರುತೇ ಶಿವಃ॥[೧೩೯]

"ನಿರ್ಮುಕ್ತನಾದ ಅತಿಶಯವಾದ ಐಶ್ವರ್ಯವನ್ನು ಹೊಂದಿದ ಶಿವನು ಶಕ್ತಿಗಳಿಂದ ಮಾಯೆಯನ್ನು ಕ್ಷೋಭೆಗೊಳಿಸಿ ಭೋಗಜೀವಿಗಳಿಗೆ ಭೋಗಿಸುವುದಕ್ಕೋಸ್ಕರ ವಿಚಿತ್ರವಾದ ವಿಶ್ವವನ್ನು ಸೃಷ್ಟಿಸುತ್ತಾನೆ." ಶ್ರೀಕಂಠಸೂರಿಗಳೂ ಇದೇ ವಿಷಯವನ್ನು ಕುರಿತು ಹೀಗೆ ಹೇಳಿದ್ದಾರೆ-

ಬಿಂದುಃ ಪ್ರಲೀನಕಾರ್ಯೋಽಸೌ ಶಿವಶಕ್ತಸಮೀರಿತಃ॥
ಸರ್ಗಾಯ ಸ್ಥಿತಯೇ ಸೃಷ್ಟಪ್ರಪಂಚವಿಲಯಾಯ ಚ।
ಚಿರಸ್ಥಾಪಿತವಿಶ್ವೋ ಹಿ ಬಿಂದುರೇವ ಪ್ರವರ್ತತೇ॥[೧೪೦]

"ಶಿವ-ಶಕ್ತಿಯರಿಂದ ಪ್ರೇರೇಪಿಸಲ್ಪಟ್ಟ ಬಿಂದುವು ಚಿರಸ್ಥಾಯಿಯಾದ ಸೃಷ್ಟಿ, ಸ್ಥಿತಿ, ಲಯಗಳಿಗೆ ಬಿಂದುವೇ ಕಾರ್ಯೋನ್ಮುಖವಾಗುತ್ತದೆ." ಹೀಗೆ ಜಗತ್ತಿನ ಸೃಷ್ಟ್ಯಾದಿಗಳಲ್ಲಿ ಶಿವನು ನಿಮಿತ್ತಕಾರಣ ಮತ್ತು ಬಿಂದು ಉಪಾದಾನಕಾರಣ ಎಂದು ನಿಶ್ಚಯವಾಯಿತು.

ಅವಿಕೃತಪರಿಣಾಮವಾದ-ಸತ್ಕಾರ್ಯವಾದಗಳ ವಿಮರ್ಶೆ

ಅವಿಕೃತಪರಿಣಾಮವಾದಿಗಳಾದ ವೀರಶೈವರು ಪ್ರಪಂಚದ ಸೃಷ್ಟಿಯ ವಿಷಯದಲ್ಲಿ ಘೃತಕಾಠಿನ್ಯನ್ಯಾಯವನ್ನು ಮತ್ತು ಸತ್ಕಾರ್ಯವಾದಿಗಳಾದ ಸಿದ್ಧಾಂತಶೈವರು ಘೃತಕೀಟನ್ಯಾಯವನ್ನು ಆಶ್ರಯಿಸಿದ್ದಾರೆ. ಇದರಿಂದ ಎರಡು ವಾದಗಳ ವೈಲಕ್ಷಣ್ಯವು ಸ್ಪಷ್ಟವಾಗಿಯೇ

---

[೧೩೭] ಜಾಯತೇಽಧ್ವಾ ಯತಃ ಶುದ್ಧೋ ವರ್ತತೇ ಯತ್ರ ಲೀಯತೇ।
ಸ ಬಿಂದುಃ ಪರನಾದಾಖ್ಯಃ ನಾದಬಿಂದ್ವರ್ಣಕಾರಣಮ್॥
-(ರತ್ನತ್ರಯಪರೀಕ್ಷಾ, ಶ್ಲೋಕ. ೨೨)

[೧೩೮] ತತಶ್ಚಾಯಮಯಸ್ಕಾಂತಶಕ್ತೇರಿವಾಯಸಿ ಶಿವಶಕ್ತೇಃ ಸನ್ನಿಧಿಮಾತ್ರೇಣ ಬಿಂದಾವೇವ ಕ್ರಿಯಾವೇಶಃ। -(ರತ್ನತ್ರಯ ಪರೀಕ್ಷಾ ಟೀಕಾ, ಶ್ಲೋಕ. ೨೨)

[೧೩೯] ಮೋಕ್ಷಕಾರಿಕಾ, ಶ್ಲೋಕ. ೨.

[೧೪೦] ರತ್ನತ್ರಯಪರೀಕ್ಷಾ, ಶ್ಲೋಕ. ೩೦೭-೩೦೮.

ಗೋಚರಿಸುತ್ತದೆ. ಘೃತಕಾಠಿನ್ಯವೆಂದರೆ ಅಪರಿಮಿತ (ಅಳತೆಗೆ ಸಿಗದಷ್ಟು) ದ್ರವರೂಪವಾದ ತುಪ್ಪವು ಒಂದೆಡೆ ಘನರೂಪದ ಅವಸ್ಥೆಯನ್ನು ಪಡೆಯುವುದೇ ಆಗಿದೆ. ಘೃತಕೀಟನ್ಯಾಯವೆಂದರೆ ಅಪರಿಮಿತವಾದ ತುಪ್ಪವು ಒಂದೆಡೆ ಕೀಟರೂಪದಿಂದ ವಿಜಾತೀಯವಾಗಿ ಪರಿಣಾಮ ಹೊಂದುವುದೇ ಆಗಿದೆ. ಇವುಗಳಿಂದ ಸ್ಪಷ್ಟವಾಗುವುದೇನೆಂದರೆ ವೀರಶೈವ ಸಿದ್ಧಾಂತದ ರೀತ್ಯಾ ಸೃಷ್ಟಿ ಎಂದರೆ ಶಕ್ತಿವಿಶಿಷ್ಟ ಪರಶಿವನ ವಿಕಾರವು ಆಂತರಿಕವಾಗಿ ಮತ್ತೊಂದು ಅವಸ್ಥೆಯನ್ನು ಪಡೆಯುವುದೆಂದರ್ಥ. ಮತ್ತು ಸಿದ್ಧಾಂತ ಶೈವದ ಪ್ರಕಾರ ಸೃಷ್ಟಿ ಎಂದರೆ 'ಬಿಂದು'ವೆಂಬ ಶಕ್ತಿಯ ಒಂದೆಡೆ ವಿಜಾತೀಯ ಪರಿಣಾಮವೆಂದು ತಿಳಿದುಬರುತ್ತದೆ.

ಪ್ರಪಂಚದ ಸೃಷ್ಟಿಯ ವಿಷಯದಲ್ಲಿ ಸೃಷ್ಟಿಯಾಗಲಿರುವ ಪ್ರಾಣಿಗಳ ಅದೃಷ್ಟವು ಸಹಕಾರಿಕಾರಣವೆಂದು ಸಿದ್ಧಾಂತಶೈವರಿಂದ ಹೇಗೆ ಅಂಗೀಕರಿಸಲ್ಪಟ್ಟಿದೆಯೋ ಹಾಗೆಯೇ ವೀರಶೈವರಿಂದಲೂ ಕೂಡ ಅಂಗೀಕೃತವಾಗಿರುವುದರಿಂದ ಈ ವಿಷಯದಲ್ಲಿ[೧೪೧] ಇಬ್ಬರಲ್ಲಿಯೂ ಸಾಮ್ಯವು ಕಂಡುಬರುತ್ತದೆ. ಹೀಗೆ ಸೃಷ್ಟಿಯ ವ್ಯವಸ್ಥೆಯನ್ನು ಅಂಗೀಕರಿಸಿರುವ ಅವಿಕೃತಪರಿಣಾಮವಾದ-ಆಭಾಸವಾದ-ಸತ್ಕಾರ್ಯವಾದಗಳಲ್ಲಿ ಎಲ್ಲೆಡೆಯೂ ಪ್ರಪಂಚದ ಸತ್ಯತ್ವವೇ ಅಂಗೀಕರಿಸಲ್ಪಟ್ಟಿದೆ.

ಸೃಷ್ಟಿಯ ಲೀಲಾರೂಪದ ವಿಮರ್ಶೆ

ಸೃಷ್ಟಿ ರಚನೆಯಲ್ಲಿ ಈಶ್ವರನ ಪ್ರಯೋಜನವಿರುವುದು ಅವನ ನಿತ್ಯತೃಪ್ತಿಯಹಾನಿ ಮತ್ತು ಪ್ರಯೋಜನದ ಅಭಾವದಲ್ಲಿ ಮೂಢಪ್ರವೃತ್ತಿಯ ಪ್ರಸಂಗ ಇರಬಹುದು ಎಂಬ ಆಕ್ಷೇಪಕ್ಕೆ ಪರಿಹಾರವು ಶಕ್ತಿವಿಶಿಷ್ಟಾದ್ವೈತವೇದಾಂತದಲ್ಲಿ ಲೀಲಾವಾದದಿಂದ ನಿವಾರಿಸಲ್ಪಡುತ್ತದೆ. ಇಲ್ಲಿ ಪರಶಿವನ ಲೀಲಾವಸ್ಥೆ ಮತ್ತು ಕೈವಲ್ಯಾವಸ್ಥೆ ಎಂಬ ಎರಡು ಅವಸ್ಥೆಗಳು ಅಂಗೀಕರಿಸಲ್ಪಟ್ಟಿವೆ. ಅವುಗಳಲ್ಲಿ ಸರ್ವವ್ಯಾಪಾರಶೂನ್ಯತೆ (ನಿರಾಕಾರ) ಕೈವಲ್ಯಾವಸ್ಥೆ, ಸೃಷ್ಟಿಯೇ ಮುಂತಾದ ಪಂಚಕೃತ್ಯ ಕರ್ತೃತ್ವವು ಲೀಲಾವಸ್ಥೆ ಎನಿಸಿವೆ. ಅದನ್ನು ಶ್ರೀಪತಿ ಪಂಡಿತಾರಾಧ್ಯರು ಹೀಗೆ ವಿವರಿಸಿದ್ದಾರೆ- "ಪರಬ್ರಹ್ಮ ಶಿವನು ಒಮ್ಮೆ ಲೀಲಾವಿಲಾಸದಿಂದಲೂ, ಮತ್ತೊಮ್ಮೆ ಕೈವಲ್ಯದಿಂದಲೂ, ತಾನೇ ಸ್ವತಃ ಅವಸ್ಥೆಯನ್ನು ನಿರ್ಧರಿಸಿಕೊಳ್ಳುತ್ತಾನೆ. ಪ್ರಪಂಚದಲ್ಲಿ ಎಲ್ಲ ಐಶ್ವರ್ಯ, ಧೈರ್ಯ, ವೀರ್ಯ, ಪರಾಕ್ರಮಗಳಿಂದ ಶ್ರೇಷ್ಠನಾದ, ಏಳು ದ್ವೀಪಗಳಿಂದ ಸುತ್ತುವರಿಯಲ್ಪಟ್ಟ ಎಲ್ಲ ರಾಜರುಗಳ ಮಹಾರಾಜನು ಒಮ್ಮೆ ವಿಲಾಸದಿಂದ ಕಾರ್ಯವನ್ನು ಆರಂಭಿಸುತ್ತಲೂ, ಮತ್ತೊಮ್ಮೆ ಮೌನವಾಗಿರುವ ಅವಸ್ಥೆಯಲ್ಲಿರುವುದು ಕಂಡುಬರುತ್ತದೆ. ಅದಲ್ಲದೆ ಎಲ್ಲ ಚೇತನ ವಸ್ತುಗಳು ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನವೆಂಬ ವಾಯು ಸಂಚಾರವನ್ನು ಹೇಗೆ ಸಹಜವಾಗಿ ನಿರ್ವಹಿಸುತ್ತವೆಯೋ ಹಾಗೆಯೇ ಪರಮಾನಂದಕಂದ ಪರಶಿವನು ಸಹಜವಾಗಿ ಜಗತ್ತಿನ ಸೃಷ್ಟಿಯೇ ಮೊದಲಾದ ಕಾರ್ಯಗಳನ್ನು

---

[೧೪೧] ಚಕ್ರನೇಮಿಕ್ರಮೇಣೈವ ಭ್ರಮಂತಿ ಹಿ ಶರೀರಿಣಃ।
ಜಾತ್ಯಾಯುರ್ಭೋಗವೈಷಮ್ಯಕಾರಣಂ ಕರ್ಮ ಕೇವಲಮ್॥ -ಸಿ.ಶಿ, ೫.೪೫

ನಿರ್ವಹಿಸುತ್ತಾನೆ ಅಥವಾ ನಿರ್ವಹಿಸಬಹುದು. ಎಲ್ಲ ಕಾಮನೆಗಳು ಪೂರ್ತಿಯಾಗಿರುವ ಪರಮಾನಂದ ಸ್ವಭಾವದ ಶಿವನು ತನ್ನ ಲೀಲೆಯಿಂದ ಜಗತ್ತಿನ ಸೃಷ್ಟಿಯೇ ಮೊದಲಾದ ಕಾರ್ಯಾರಂಭವನ್ನು ಮಾಡಿ ಪ್ರಳಯದಿಂದ ಸೃಷ್ಟಿಯವರೆಗೆ ತಾನೇ ಸ್ವತಃ ಮುಗಿಸಿದ್ದಾನೆ."[೧೪೨]

ಕಡಿಮೆ ಶ್ರಮದಿಂದ ಸಾಧ್ಯವಾದ ತನ್ನಿಚ್ಛೆಯಂತೆ ಕೇವಲ ಸೃಷ್ಟಿಯನ್ನು ಮಾಡುವ ಫಲವುಳ್ಳ ಪರಮಾತ್ಮನ ಉದ್ದೇಶದ ಫಲೋತ್ಪಾದನೆಯಿಲ್ಲದ ಕ್ರಿಯೆ 'ಲೀಲೆ' ಎಂಬ ಪದದ ಅರ್ಥ. ಪ್ರಕೃತದಲ್ಲಿ ಪಂಚಕೃತ್ಯಗಳು ಪರಶಿವನ ಇಚ್ಛೆಯಿಂದ ಸಂಭವಿಸುವುದರಿಂದ ಅವುಗಳು ಕಡಿಮೆ ಶ್ರಮದಿಂದ ಫಲೋತ್ಪಾದನೆ ಮಾಡುವುದರಿಂದಲೂ ಮತ್ತು ಅವುಗಳ ಸಂಪಾದನೆಯಿಂದ ಪರಶಿವನಿಗೆ ಯಾವುದೇ ರೀತಿಯ ಪ್ರಯೋಜನವು ಸಿದ್ಧಿಸುವುದಿಲ್ಲವೆಂದು ಅವುಗಳ ವಿಷಯದಲ್ಲಿ ವಿಧೇಯನಿಷ್ಪತ್ತಿಮಾತ್ರಫಲ (ತನ್ನಿಚ್ಛೆಯಂತೆ ಕೇವಲ ಸೃಷ್ಟಿಯನ್ನು ಮಾಡುವ ಫಲ) ಮತ್ತು ಪರಮಾತ್ಮನ ಉದ್ದೇಶದ ಅಭಾವವಿದೆಯೆಂದು ಅವುಗಳಿಗೆ 'ಲೀಲೆ' ಎಂಬ ಹೆಸರು ಬಂದಿದೆ. ಶಿವಯೋಗಿ ಶಿವಾಚಾರ್ಯರು-

ಸ್ವೇಚ್ಛಾವಿಗ್ರಹಯುಕ್ತಾಯ ಸ್ವೇಚ್ಛಾವರ್ತನವರ್ತಿನೇ।
ಸ್ವೇಚ್ಛಾಕೃತತ್ರಿಲೋಕಾಯ ನಮಃ ಸಾಂಬಾಯ ಶಂಭವೇ॥[೧೪೩]

"ತಾನೇ ನಾನಾ ಲೀಲಾಮೂರ್ತಿಗಳನ್ನು ಧರಿಸಿದ, ತನ್ನ ಇಚ್ಛೆಗೆ ತಡೆಯಿಲ್ಲದಂತೆ ನಡೆಯುವ, ತನ್ನ ಇಚ್ಛಾಶಕ್ತಿಯಿಂದ ಮೂರು ಲೋಕಗಳನ್ನು ಸೃಷ್ಟಿಸಿದ ಪರಶಿವನಿಗೆ ನಮಸ್ಕಾರ" ಎಂಬಲ್ಲಿ ಕೇವಲ ತನ್ನ ಇಚ್ಛಾಶಕ್ತಿಯಿಂದ ಜಗತ್ತಿನ ಕರ್ತೃತ್ವ ಹಾಗೂ ಶಿವನ ಕಡಿಮೆ ಶ್ರಮದ ಫಲವನ್ನು ಪ್ರತಿಪಾದಿಸಿದ್ದಾರೆ ಮತ್ತು ಆದುದರಿಂದಲೇ ಶಿವನ ಲೀಲಾರೂಪತ್ವವನ್ನು ಸೂಚಿಸಿದ್ದಾರೆ. ಇದರ ಅಭಿಪ್ರಾಯವಿಷ್ಟು- ಲೀಲೆಯಿಂದ ಬೇರೆಯಾದ ಯಾವ ಪ್ರವೃತ್ತಿಗಳಿವೆಯೋ, ಆ ಉದ್ದೇಶದಿಂದಲೇ ವಿಶೇಷ ಪ್ರಯೋಜನದ ಪ್ರತಿಸಂಧಾನದ ಅವಶ್ಯಕತೆ ಮತ್ತು ಲೀಲಾರೂಪದಿಂದ ಕೂಡಿರುವ ಯಾವ ಪ್ರವೃತ್ತಿಗಳಿವೆಯೋ ಅವು ಪ್ರಯೋಜನವನ್ನು ಅಪೇಕ್ಷಿಸುವುದೇ ಇಲ್ಲ. ಲೋಕದಲ್ಲಿ ಒಬ್ಬ ರಾಜನಿಗೆ ತನ್ನ ಆತ್ಮೀಯ ಮಂತ್ರಿ ಮೊದಲಾದವರೊಡನೆ ಯಾವುದೇ ಪ್ರಯೋಜನವಿಲ್ಲದೆ ಕ್ರೀಡಾದಿಗಳಲ್ಲಿ ಹೇಗೆ ಪ್ರವೃತ್ತಿಯುಂಟಾಗುತ್ತದೆಯೋ ಹಾಗೆಯೇ ಶಿವನಿಗೂ ಕೂಡ ಪ್ರವೃತ್ತಿಯುಂಟಾಗುತ್ತದೆ.

ಕಠಿಣವಾದ ಈ ಪ್ರಪಂಚದ ಸೃಷ್ಟಿಯ ವಿಷಯವನ್ನು ಹೇಗೆ ಲೀಲೆ ಎಂದು ಕರೆಯಲ್ಪಟ್ಟಿದೆ? ಎಂದು ಆಕ್ಷೇಪವೆತ್ತಿದರೆ, ಉತ್ತರವಾಗಿ ಹೌದು, (ಈ ಆಕ್ಷೇಪ ಸತ್ಯ). ಅಲ್ಪಜ್ಞರೂ, ಅಲ್ಪಶಕ್ತಿಯುಳ್ಳವರೂ ಆದ ನಮಗೆ ಪ್ರಪಂಚದ ಸೃಷ್ಟಿಯು

---

೧೪೨. ಬ್ರಹ್ಮಸೂತ್ರ ಶ್ರೀಕರಭಾಷ್ಯ, ೨.೧.೩೩

೧೪೩. ಸಿ.ಶಿ, ೧.೬

ದೊಡ್ಡದಾಗಿರುವಂತೆ (ಕಠಿಣವಾಗಿರುವಂತೆ) ತೋರುತ್ತದೆ. ಆದರೂ ಕೂಡ ಸರ್ವಜ್ಞನೂ, ಸರ್ವಶಕ್ತಿ ಸಮನ್ವಿತನೂ ಆದ ಈಶ್ವರನಿಗೆ ಅದು ಕೇವಲ ಲೀಲೆಯೇ ಆಗಿದೆ. ಒಂದು ವೇಳೆ ಲೌಕಿಕ ಲೀಲೆಗಳಲ್ಲಿ ಸ್ವಲ್ಪವಾದರೂ ಕೂಡ ಪ್ರಯೋಜನವನ್ನು ಉತ್ಪ್ರೇಕ್ಷಿಸಲು ಸಾಧ್ಯವಾದರೂ ಕೂಡ "ಆಪ್ತಕಾಮಸ್ಯ ಕಾ ಸ್ಪೃಹಾ"[೧೪೪] (ನಿತ್ಯತೃಪ್ತನಾದವನಿಗೆ ಯಾವ ಆಸೆಯಿದೆ?) ಎಂದು ಶಿವನ ನಿತ್ಯತೃಪ್ತತ್ವದ ಪ್ರತಿಪಾದನೆಯಿಂದ, ಅದು ಈಶ್ವರನ ಲೀಲೆಯಲ್ಲ. ಮತ್ತು "ಯತೋ ವಾ ಇಮಾನಿ ಭೂತಾನಿ ಜಾಯಂತೇ"[೧೪೫] (ಬ್ರಹ್ಮದಿಂದಲೇ ಈ ಪ್ರಾಣಿಗಳು ಹುಟ್ಟುತ್ತವೆ) ಎಂಬ ಶ್ರುತಿವಾಕ್ಯದಂತೆ ಪ್ರಪಂಚದ ರಚನೆಯಲ್ಲಿ ಈಶ್ವರನ ಪ್ರವೃತ್ತಿಯನ್ನು ಕೇಳಿರುವುದರಿಂದ ಅದು ಸತ್ಯಪ್ರವೃತ್ತಿಯಲ್ಲ. "ಯಃ ಸರ್ವಜ್ಞಃ ಸರ್ವವಿತ್"[೧೪೬] (ಪರಶಿವನು ಸರ್ವಜ್ಞ, ಸರ್ವವಿದನು) ಎಂಬ ವಾಕ್ಯದಿಂದ ಅವನ ಸರ್ವಜ್ಞತ್ವದ ಪ್ರತಿಪಾದನೆ ಮಾಡಿರುವುದರಿಂದ ಆತನದು ಉನ್ಮತ್ತಪ್ರವೃತ್ತಿಯೂ ಅಲ್ಲ. ಆದುದರಿಂದಲೇ ಜಗತ್ತಿನ ಸೃಷ್ಟಿಯು ಕೇವಲ ಲೀಲೆ ಎಂಬುದು ಸ್ಪಷ್ಟವಾಗುತ್ತದೆ. ಭಗವಾನ್ ಬಾದರಾಯಣರೂ ಕೂಡ "ಲೋಕವತ್ತು ಲೀಲಾಕೈವಲ್ಯಮ್"[೧೪೭] (ಪ್ರಪಂಚವು ಲೀಲೆಯ ಪರಿಣಾಮ) ಎಂದು ಜಗತ್ತಿನ ಸೃಷ್ಟಿಯ ವಿಚಾರದಲ್ಲಿ ಲೀಲಾರೂಪತ್ವವನ್ನೇ ಸಮರ್ಥಿಸಿದ್ದಾರೆ.

ಕಾಶ್ಮೀರಶೈವದರ್ಶನದಲ್ಲಿಯೂ ಕೂಡ ಲೀಲಾವಾದವು ಅಂಗೀಕೃತವಾಗಿದೆ. ಪರಮಾನಂದ ತುಂದಿಲನಾದ ಪರಶಿವನಿಗಾಗುವ ಪ್ರಯೋಜನವನ್ನು ಅವರೂ ಕೂಡ ಒಪ್ಪಿರುವುದಿಲ್ಲ. ಜಗತ್ತನ್ನು ಸೃಷ್ಟಿಸುವ ಕಾರಣ ತನಗೆ ಯಾವುದೇ ರೀತಿಯ ಪ್ರಯೋಜನವಾಗದಿದ್ದರೂ ಕೂಡ ಸತ್ಯವಾಗಿಯೂ ಆನಂದಾತಿರೇಕವೆಂಬ ಪರಮಸ್ವಾತಂತ್ರ್ಯರೂಪ ಸ್ವೇಚ್ಛಾಶಕ್ತಿಯಿಂದ ಯಾವಾಗಲೂ ಪಂಚಕೃತ್ಯಗಳೆಂಬ ಲೀಲೆಯನ್ನು ಪರಶಿವನು ಮಾಡುತ್ತಲೇ ಇರುತ್ತಾನೆ ಎನ್ನುವ ಕಾರಣ, ಅವನು ಈ ಸಿದ್ಧಾಂತದಲ್ಲಿ 'ನಟ'[೧೪೮] ಎಂದು ಕರೆಯಲ್ಪಟ್ಟಿದ್ದಾನೆ. ಅವನ ನೃತ್ಯರೂಪ ಲೀಲೆಯು ಎಂದಿಗೂ ಮುಗಿಯುವುದಿಲ್ಲ. ಲೀಲಾವಾದವನ್ನೊಪ್ಪುವ ಇವರು ಪರಶಿವನ ಕೈವಲ್ಯಾವಸ್ಥೆಯನ್ನು ಒಪ್ಪಿರುವುದಿಲ್ಲ. ಆದರೆ ವೀರಶೈವರು ಅದನ್ನು ಒಪ್ಪಿದ್ದಾರೆ. ಇದು ಇಬ್ಬರಿಗೂ (ಕಾಶ್ಮೀರಶೈವರಿಗೂ ವೀರಶೈವರಿಗೂ) ಇರುವ ವ್ಯತ್ಯಾಸ.

ಸಿದ್ಧಾಂತಶೈವದರ್ಶನದಲ್ಲಿಯೂ ಕೂಡ ಜಗತ್ತಿನ ಸೃಷ್ಟಿಯು ಶಿವನ ಲೀಲೆಯೇ ಆಗಿದೆ. ಈ ಲೀಲೆಯಿಂದ ಶಿವನಿಗೆ ಯಾವುದೇ ರೀತಿಯ ಪ್ರಯೋಜನವಿರದಿದ್ದರೂ

---

[೧೪೪] ಮಾ.ಕಾ. ಆಗಮ, ೯

[೧೪೫] ತೈತ್ತಿ.ಉ, ೩.೩.೧

[೧೪೬] ಮುಂಡ, ೧.೧.೯

[೧೪೭] ಬ್ರಹ್ಮಸೂತ್ರ, ೨.೧.೩೩

[೧೪೮] "ನರ್ತಕ ಆತ್ಮಾ" (ಶಿವಸೂತ್ರ, ೩.೯)

ಕೂಡ ಪಶುವಿನ ಅನುಗ್ರಹವನ್ನು ಇಲ್ಲಿ ಪ್ರಯೋಜನ ರೂಪದಲ್ಲಿ ನಿರೂಪಿಸಲಾಗಿದೆ. ಇಲ್ಲಿ ಅನುಗ್ರಹ ಎಂಬ ಶಬ್ದದಿಂದ ಭೋಗ-ಮೋಕ್ಷಗಳೆಂದು ತಿಳಿದುಬರುತ್ತದೆ. ಸುಖ-ದುಃಖಗಳ ಅನುಭವವು ಭೋಗವೆನಿಸಿದರೆ ನಿರತಿಶಯಾನಂದವು ಮೋಕ್ಷವೆನಿಸುತ್ತದೆ. ಶಿವನು ಭೋಗ-ಮೋಕ್ಷಗಳನ್ನು ನೀಡುವುದರಿಂದ ಪಶುಗಳನ್ನು ಅನುಗ್ರಹಿಸುತ್ತಾನೆ. ಅದನ್ನು ಭೋಜರಾಜನು ಹೀಗೆ ವಿವರಿಸಿದ್ದಾನೆ-

ಭುಕ್ತಿಂ ಮುಕ್ತಿಮಣೂನಾಂ ಸ್ವವ್ಯಾಪಾರೇ ಸಮರ್ಥತಾಧಾನಮ್।
ಜಡವರ್ಗಸ್ಯ ವಿಧತ್ತೇ ಸರ್ವಾನುಗ್ರಾಹಕಃ ಶಂಭುಃ॥[೧೪೯]

"ಸರ್ವಾನುಗ್ರಾಹಕನಾದ ಶಂಭುವು ಜೀವಿಗಳಿಗೆ ಭೋಗ-ಮೋಕ್ಷಗಳನ್ನು ನೀಡುತ್ತಾನೆ. ಹಾಗೆಯೇ ಜಡವರ್ಗಕ್ಕೂ ಕೂಡ ನೀಡುತ್ತಾನೆ." ಮೋಕ್ಷವನ್ನು ನೀಡುವುದರಿಂದ ಅನುಗ್ರಾಹಕತ್ವದ ಸಂಭವವಿದ್ದರೂ ಕೂಡ ಸಾಂಸಾರಿಕ ಸುಖ-ದುಃಖಗಳನ್ನು ಅನುಭವಗಳನ್ನು ಹೇಗೆ ಅನುಗ್ರಾಹಕನಾಗುತ್ತಾನೆ ಎಂಬ ಸಂದೇಹವನ್ನು ನಿವಾರಿಸಿ, ಶ್ರೀಕುಮಾರದೇವನು ಅವೆರಡನ್ನೂ ಅನುಗ್ರಹಿಸುತ್ತಾನೆಂದು ಅದನ್ನು ನೀಡುವ ಶಿವನು ಅನುಗ್ರಾಹಕನಾಗುತ್ತಾನೆಂದು ಸಮರ್ಥಿಸಿದ್ದಾರೆ. ಅದು ಹೇಗೆಂದರೆ- ಸುಖ-ದುಃಖಗಳೆರಡರ ಅನುಭವವನ್ನು ನೀಡುವಲ್ಲಿ ಹೇಗೆ ಅನುಗ್ರಹರೂಪ ಉಂಟಾಗುತ್ತದೆ ಎಂದು ಪ್ರಶ್ನೆ ಎತ್ತಿದರೆ, ಉತ್ತರವಾಗಿ ನಿತ್ಯನಿರತಿಶಯಾನಂದರೂಪವು ಅವನಲ್ಲಿರಲು ವಿಷಮಿಶ್ರಿತ ಬುತ್ತಿಯು ಕಲ್ಪಸುಖಲೇಶವನ್ನು ನೀಡುವ ಅನುಗ್ರಹವು ಅಸಂಭವವಾಗುತ್ತದೆ. ದುಃಖಾನುಭವವನ್ನು ಕೊಡುವುದಿಲ್ಲ ಎನ್ನುವುದು ಎಲ್ಲರಿಗೂ ಸಮ್ಮತವೇ? ಎಂದದ್ದಾದರೆ, ಸುಖಾನುಭವ ಮತ್ತು ಅದನ್ನು ಅನುಭವಿಸುವವನಿಗೆ ನಿತ್ಯಸುಖದಲ್ಲಿ ಪ್ರೀತಿಯನ್ನು ಉಂಟುಮಾಡುವುದರ ಮೂಲಕ ಮೋಕ್ಷಕ್ಕೆ ಕಾರಣವಾಗುವ ರೀತಿಯಲ್ಲಿ ಅನುಗ್ರಹಿಸುತ್ತಾನೆ. ದುಃಖಾನುಭವದಲ್ಲಿಯೂ ಕೂಡ ಸಂಸಾರದಲ್ಲಿ ವೈರಾಗ್ಯ ಉಂಟಾಗುವಂತೆ ಮಾಡಿ ಮೋಕ್ಷಕ್ಕೆ ಹೇತುವಾಗುವಂತೆ ಅನುಗ್ರಹಿಸುತ್ತಾನೆ. ಆಗ ಅವನಿಗೆ (ಪರಶಿವನಿಗೆ) ಅನುಗ್ರಾಹಕತ್ವ ಬರುತ್ತದೆಂದು ಹೇಳಲಾಗಿದೆ."[೧೫೦]

ಭೋಗ-ಮೋಕ್ಷಗಳ ಶಿವಾನುಗ್ರಹತ್ವ ವಿಮರ್ಶೆ

ಭೋಗ-ಮೋಕ್ಷಗಳ ಅನುಗ್ರಹದ ವಿಷಯದಲ್ಲಿ ನಿಃಶ್ರೇಯಸ್ಸೇ ಮುಖ್ಯವಾದದ್ದಲ್ಲವೇ? ಎಂದು ಪ್ರಶ್ನಿಸಿದರೆ, ಅದೇ ಅವೆರಡರ ವಿಷಯದಲ್ಲಿ ತಿಳಿಯುವುದರಿಂದ ಭೋಗಾತ್ಮಕವು ಮುಖ್ಯವಲ್ಲ ಎಂದು ಜಿಜ್ಞಾಸೆಯಿಂದ ಶ್ರೀಕುಮಾರದೇವನಿಂದ ಹೀಗೆ ಹೇಳಲ್ಪಟ್ಟಿದೆ- ಸಂಸಾರದ ಮೋಕ್ಷ ಪ್ರದಾನವೇ ಮುಖ್ಯವಾದ ಅನುಗ್ರಹವೇ ಹೊರತು ಭೋಗಪ್ರದಾನವಲ್ಲ ಎಂಬುದು ಸತ್ಯ. ಆದರೂ

---

[೧೪೯] ತತ್ತ್ವಪ್ರಕಾಶ, ಶ್ಲೋಕ. ೩೫

[೧೫೦] ತತ್ತ್ವಪ್ರಕಾಶತಾತ್ಪರ್ಯದೀಪಿಕಾ, ಶ್ಲೋಕ. ೩೫

ಕೂಡ ಉಂಟಾಗುವ ಜಾತಿ-ಆಯಸ್ಸು- ಭೋಗ ಇತ್ಯಾದಿ ಫಲಗಳು ಅನಾದಿಭೂತವಾದ ಕರ್ಮಗಳ ಫಲಭೋಗವಿಲ್ಲದೆ ನಾಶವಾಗುವುದರಿಂದ, ಆ ವಿಧ ನಾಶವಿಲ್ಲದೆ ನಿಃಶ್ರೇಯಸ್ಸಿನ ಕಾರಣವಿಲ್ಲದೆ, ಆ ಉದ್ದೇಶದಿಂದಲೇ ಭೋಗವನ್ನಾಶ್ರಯಿಸಬೇಕು."[೧೫೧]

ಆದುದರಿಂದ ಶಿವನು ಅನಾದಿಮಲರಹಿತನು. ಆ ಕಾರಣದಿಂದಲೇ ರಾಗ-ದ್ವೇಷಗಳನ್ನು ಬಿಟ್ಟಿರುವ ಶಿವನು ತನ್ನ (ಪ್ರತಿಯೊಬ್ಬ ವ್ಯಕ್ತಿಯ) ಯೋಗ್ಯತಾನುಸಾರ ಬಂಧ-ಮೋಕ್ಷಗಳನ್ನು ನೀಡುತ್ತಾನೆ. "ಲೋಕದಲ್ಲಿ ಒಂದೇ ಆಕಾರವುಳ್ಳ ಸೂರ್ಯನು ತನ್ನ ಸಾನಿಧ್ಯದಿಂದ ಹೇಗೆ ದ್ರವತ್ವಯೋಗ್ಯವಾದ ಜೇನಿನಲ್ಲಿ ದ್ರವವನ್ನೂ, ಮತ್ತು ಒಣಗುವ ಯೋಗ್ಯತೆಯುಳ್ಳ ಮಣ್ಣನ್ನು ಒಣಗಿಸುತ್ತಾನೆಯೋ, ಹಾಗೆಯೇ ಶಿವನೂ ಕೂಡ ಮಲದಿಂದ ಪಕ್ವರಾಗಿ ಮೋಕ್ಷಕ್ಕೆ ಯೋಗ್ಯರಾದವರಿಗೆ ಮುಕ್ತಿಯನ್ನು ನೀಡುತ್ತಾನೆ, ಬಂಧಯೋಗ್ಯರಾದ ಅಪಕ್ವಮಲರಿಗೆ ಪಕ್ವರನ್ನಾಗಿ ಮಾಡಲು ಬಂಧನವನ್ನು ಮಾಡುತ್ತಾನೆಂಬುದರಲ್ಲಿ ವಿರೋಧವಿಲ್ಲ"[೧೫೨] ಎಂದು ಅಘೋರ ಶಿವಾಚಾರ್ಯರು ಶ್ರೀಕಂಠ ಶಿವಾಚಾರ್ಯರ[೧೫೩] ಉಕ್ತಿಯನ್ನು ವಿಮರ್ಶಿಸುತ್ತಾ ಭೋಗ-ಮೋಕ್ಷಗಳೆರಡು ಅನುಗ್ರಹ ಶಬ್ದವಾಚ್ಯಗಳೆಂಬುದನ್ನು ಸಮರ್ಥಿಸಿದ್ದಾರೆ.

ಸಿದ್ಧಾಂತಶೈವರು ಲೀಲಾವಾದದೊಂದಿಗೆ ಅನುಗ್ರಹವಾದವನ್ನು ಅಂಗೀಕರಿಸಿದ್ದಾರೆ. ಈ ಅಭಿಪ್ರಾಯವು ವೀರಶೈವರಿಗೂ ಸಂಮತವಾಗಿದೆ. ಅದನ್ನು ಸಿದ್ಧಾಂತಶಿಖಾಮಣಿಯು ಹೀಗೆ ನಿರೂಪಿಸಿದೆ:

> ಜಾತ್ಯಾಯುರ್ಭೋಗವೈಷಮ್ಯಕಾರಣಂ ಕರ್ಮ ಕೇವಲಮ್॥
> ದೇಹಿನಾಂ ಪ್ರೇರಕಃ ಶಂಭುರ್ಹಿತಮಾರ್ಗೋಪದೇಶಕಃ।
> ಪುನರಾವೃತ್ತಿರಹಿತೋ ಮೋಕ್ಷಮಾರ್ಗೋಪದೇಶಕಃ॥[೧೫೪]
>
> ಶಂಭೋರೇವ ಪ್ರಸಾದೇನ ಸಂಸಾರಚ್ಛೇದಕಾರಿಣಾ।
> ಮೋಹಗ್ರಂಥಿಂ ವಿನಿರ್ಭಿದ್ಯ ಮುಕ್ತಿಂ ಯಾಂತಿ ವಿವೇಕಿನಃ॥[೧೫೫]

"ಜಾತಿ-ಆಯುಷ್ಯ-ಸುಖ-ದುಃಖ ಇತ್ಯಾದಿಗಳಿಗೆಲ್ಲಾ ಜೀವರ ಕರ್ಮವೇ ಮೂಲಕಾರಣವಾಗಿದೆ. ಪ್ರೇರಕನಾದ ಪರಮೇಶ್ವರನು ಜೀವರಿಗೆ ಹಿತಕಾರಕ

---

೧೫೧. ತ.ಪ್ರ.ತಾ, ಶ್ಲೋಕ. ೩೬

೧೫೨. ರತ್ನತ್ರಯಪರೀಕ್ಷಾಟೀಕಾ, ಶ್ಲೋಕ. ೩೧೩-೩೧೪

೧೫೩. ಯಥಾ ಮದೂಚ್ಛಿಷ್ಟಮೃದೋರನಪೇಕ್ಷಃ ಕ್ಷಣೇನ ಚ।
ದ್ರವತಾಶುಷ್ಕತಾಹೇತುರವಿಕಾರೋಽಪಿ ಭಾಸ್ಕರಃ॥
ತಥಾ ಸಮಾಸಮಾತ್ಮೀಯಪುಣ್ಯಾಪುಣ್ಯಾಖ್ಯ ಕರ್ಮಣಾಮ್।
ಅಣೂನಾಮವಿಕಾರೋಽಪಿ ಬಂಧಮೋಕ್ಷಕರಃ ಶಿವಃ॥
-ರತ್ನತ್ರಯಪರೀಕ್ಷಾ, ಶ್ಲೋಕ. ೩೧೩-೩೧೪

೧೫೪. ಸಿ.ಶಿ, ೫.೪೫,೪೭

೧೫೫. ಸಿ.ಶಿ, ೧೮.೫೯

ಮಾರ್ಗವನ್ನುಪದೇಶಿಸುವವನೂ, ಪುನರಾವೃತ್ತಿರಹಿತವಾದ ಮೋಕ್ಷಮಾರ್ಗವನ್ನು ಉಪದೇಶಿಸುವವನೂ ಆಗಿದ್ದಾನೆ. ವಿವೇಕಿಗಳು ಸಂಸಾರನಾಶಕ್ಕೆ ಮೂಲ ಕಾರಣೀಭೂತವಾದ ಶಿವಪ್ರಸಾದದಿಂದಲೇ ಅಜ್ಞಾನ ಗ್ರಂಥಿಯನ್ನು ಭೇದಿಸಿ, ಮೋಕ್ಷವನ್ನು ಪಡೆಯುವರು" ಎಂದು ಎಲ್ಲ ಜೀವಿಗಳ ಸುಖ-ದುಃಖ ಕರ್ಮಗಳಿಗೆ ಕಾರಣವನ್ನು ಹೇಳಿ ಶಿವಾನುಗ್ರಹದಿಂದ ಜೀವಿಗಳಿಗೆ ಮೋಕ್ಷ ಎಂಬುದನ್ನು ಪ್ರತಿಪಾದಿಸಿ ಅನುಗ್ರಹವಾದವನ್ನು ಸೂಚಿಸಿದ್ದಾರೆ. ಈ ವಿಷಯದಲ್ಲಿ ವೀರಶೈವರಿಗೆ ಹಾಗೂ ಸಿದ್ಧಾಂತಶೈವರಿಗೆ ಇರುವ ಐಕಮತ್ಯವು ಕಂಡುಬರುತ್ತದೆ.

ವೈಷಮ್ಯ (ದುಃಖ) ನೈರ್ಘೃಣ್ಯ (ದಯಾಹೀನತೆ)ಗಳಲ್ಲಿರುವ ದೋಷಪರಿಹಾರ ವಿಮರ್ಶೆ

ಶಿವಕರ್ತೃತ್ವದಿಂದಾದ ಜಗತ್ ಸೃಷ್ಟಿಯ ವೈಚಿತ್ರ್ಯದಿಂದ ಶಿವನ ವೈಷಮ್ಯ-ನೈರ್ಘೃಣ್ಯಗಳಲ್ಲಿ ದೋಷವುಂಟೆಂಬ ಆಕ್ಷೇಪಕ್ಕೆ ಪರಿಹಾರವು ವೀರಶೈವ ಸಿದ್ಧಾಂತದಲ್ಲಿ ಸೃಷ್ಟಿಯಾಗುವ ಪ್ರಾಣಿಗಳ ಕರ್ಮಸಾಪೇಕ್ಷದಿಂದ ನಿವಾರಿಸಲ್ಪಡುತ್ತದೆ. ಅದನ್ನು ಶ್ರೀ ರೇಣುಕಭಗವತ್ಪಾದರು- "ಜಾತ್ಯಾಯುರ್ಭೋಗವೈಷಮ್ಯಕಾರಣಂ ಕರ್ಮ ಕೇವಲಮ್"[೧೫೬] (ಜಾತಿ-ಆಯುಷ್ಯ-ಸುಖ-ದುಃಖ ಇತ್ಯಾದಿಗಳಿಗೆಲ್ಲಾ ಜೀವರ ಕರ್ಮವೇ ಮೂಲಕಾರಣವಾಗಿದೆ) ಎಂದು ಹೇಳಿದ್ದಾರೆ. ಇದರ ಭಾವವಿಷ್ಟು- "ಪುಣ್ಯಃ ಪುಣ್ಯೇನ ಕರ್ಮಣಾ ಭವತಿ, ಪಾಪಃ ಪಾಪೇನ"[೧೫೭] (ಪುಣ್ಯಕರ್ಮದಿಂದ ಪುಣ್ಯವಂತನೂ ಮತ್ತು ಪಾಪಕರ್ಮದಿಂದ ಪಾಪಿಯೂ ಆಗುತ್ತಾನೆ) ಎಂದು ಸೃಷ್ಟಿಯಲ್ಲಿರುವ ವೈಷಮ್ಯದ ಅಸಾಧಾರಣವಾದ ಕಾರಣಗಳನ್ನು ಸೃಷ್ಟಿಸಲ್ಪಡುವ ಜೀವಿಗಳ ಕರ್ಮಗಳೆಂದು ಶ್ರುತಿ ವಾಕ್ಯದಿಂದ ಸಿದ್ಧಮಾಡಲಾಗಿದೆ. ಆದುದರಿಂದ ಹೇಗೆ ವಿದ್ಯುತ್ ಬೀಸಣಿಗೆ, ಹಿಟ್ಟಿನ ಯಂತ್ರ ಇತ್ಯಾದಿಗಳಲ್ಲಿ ವಿದ್ಯುಚ್ಛಕ್ತಿಯು ಆಯಾ ಯಂತ್ರಗಳ ಕರ್ಮಗಳಿಗೆ ಪ್ರೇರಕತ್ವವಾಗಿದ್ದು ಸಹಾಯಕವಾಗಿದ್ದರೂ ಕೂಡ ಗಾಳಿ ಬೀಸುವಿಕೆ ಮುಂತಾದ ಕಾರ್ಯ ವೈಚಿತ್ರ್ಯ ವಿಷಯದಲ್ಲಿ ಆಯಾ ಯಂತ್ರಗಳೇ ಅಸಾಧಾರಣಕಾರಣಗಳಾಗುತ್ತವೆಯೋ ಹಾಗೆಯೇ ಸೃಷ್ಟಿಕ್ರಿಯೆಯಲ್ಲಿ ಈಶ್ವರನು ಸಾಧಾರಣಕಾರಣನಾದರೂ ಕೂಡ ಸೃಷ್ಟಿ ವೈಚಿತ್ರ್ಯದ ವಿಷಯದಲ್ಲಿ ಆಯಾ ಪ್ರಾಣಿಗಳ ಅದೃಷ್ಟವೇ ಅಸಾಧಾರಣಕಾರಣವೆಂದು ತಿಳಿಯಬೇಕು. ಆದುದರಿಂದ ಸೃಷ್ಟಿಯ ವೈಷಮ್ಯದಲ್ಲಿ ಶಿವನ ಅನಾದಿಮಲಸಂಶ್ಲೇಷ ರಹಿತತ್ವದ ಕಾರಣದಿಂದಲೂ ಮತ್ತು ರಾಗ-ದ್ವೇಷಗಳ ಶೂನ್ಯತೆಯಿಂದಲೂ, ಅವನ ಪಕ್ಷಪಾತವೇನೂ ಇರುವುದಿಲ್ಲ.

ಶಿವನ ಪರಮ ಸ್ವಾತಂತ್ರ್ಯವನ್ನು ಅಂಗೀಕರಿಸುವ ಕಾಶ್ಮೀರಶೈವರು ಸೃಷ್ಟಿಯ ವೈಚಿತ್ರ್ಯದಲ್ಲಿ ಮತ್ತೊಂದು ಕಾರಣವನ್ನು ಅಪೇಕ್ಷಿಸುವುದರಿಂದ ಅವನ ಸ್ವಾತಂತ್ರ್ಯದ ಪೂರ್ಣತೆಯ ಹಾನಿಯುಂಟೆಂದು ಹೇಳುತ್ತಾರೆ:

---

[೧೫೬] ಸಿ.ಶಿ, ೫.೪೫

[೧೫೭] ಬೃ.ಉ, ೪-೪-೫

ಏಷ ದೇವೋಽನಯಾ ದೇವ್ಯಾ ನಿತ್ಯಂ ಕ್ರೀಡಾರಸೋತ್ಸುಕಃ।
ವಿಚಿತ್ರಾನ್ ಸೃಷ್ಟಿಸಂಹಾರಾನ್ ವಿಧತ್ತೇ ಯುಗಪದ್ ವಿಭುಃ॥[೧೫೮]

"ಈ ದೇವನು (ಶಿವನು) ಈ ದೇವಿಯೊಡನೆ (ಶಕ್ತಿಯೊಡನೆ) ಯಾವಾಗಲೂ ಲೀಲಾಸಕ್ತನಾಗಿರುವುದರಿಂದ ಪರಮಾತ್ಮನು ಏಕಕಾಲದಲ್ಲಿ ವಿಚಿತ್ರವಾದ ಸೃಷ್ಟಿ-ಸಂಹಾರಗಳನ್ನು ಮಾಡುತ್ತಾನೆ" ಎಂದು ಸ್ವಾತಂತ್ರ್ಯವಾದದಿಂದ ವೈಷಮ್ಯ-ನೈರ್ಘೃಣ್ಯಗಳ ದೋಷವನ್ನು ನಿವಾರಿಸುತ್ತಾರೆ. ಎಲ್ಲವೂ ಕೂಡ ಪರಶಿವನ ಸ್ವರೂಪವೆಂದು ಪ್ರತಿಪಾದಿಸುವ ಅವರ ಅಭಿಪ್ರಾಯದಿಂದ ವೈಷಮ್ಯ-ನೈರ್ಘೃಣ್ಯ ದೋಷಗಳ ಪ್ರಸ್ತಾಪವೇ ಇಲ್ಲವೆಂಬಂತೆ ಕಾಣುತ್ತದೆ.

ಸಿದ್ಧಾಂತಶೈವರು ಸೃಷ್ಟಿಯ ಕ್ರಿಯೆಯಲ್ಲಿ ಸೃಷ್ಟಿಯಾಗುವ ಪ್ರಾಣಿಗಳ ಕರ್ಮಗಳು ಸಹಕಾರಿಕಾರಣಗಳೆಂದು ಅಂಗೀಕರಿಸಿದ್ದಾರೆ. ಆದುದರಿಂದ ಅವುಗಳೇ ಸೃಷ್ಟಿಯ ವೈಚಿತ್ರ್ಯಕ್ಕೆ ಅಸಾಧಾರಣಕಾರಣಗಳಾಗುವುದರಿಂದ, ಶಿವನು ವೈಷಮ್ಯ-ನೈರ್ಘೃಣ್ಯಗಳ ದೋಷಕ್ಕೆ ಕಾರಣನಾಗುವುದಿಲ್ಲ. ಈ ವಿಷಯದಲ್ಲಿ ವೀರಶೈವರಿಗೆ ಮತ್ತು ಸಿದ್ಧಾಂತಶೈವರಿಗೆ ಒಮ್ಮತವಿದೆ. ಈ ವಾದವು ಬೇರೆಯವರಿಗೂ ಒಪ್ಪಿಗೆಯಾಗಿದೆ.[೧೫೯]

ಜೀವಸ್ವರೂಪ ವಿಮರ್ಶೆ

ದಾರ್ಶನಿಕ ಪ್ರಪಂಚದಲ್ಲಿ ಜೀವಾತ್ಮನಿಗೆ ಪ್ರಮುಖ ಸ್ಥಾನವಿದೆ. ಜೀವಾತ್ಮನ ಬಂಧ-ಮೋಕ್ಷಾದಿ ವ್ಯವಸ್ಥೆಯನ್ನು ಮಾಡುವುದಕ್ಕಾಗಿಯೇ ಎಲ್ಲ ಶಾಸ್ತ್ರಗಳೂ ಪ್ರವೃತ್ತವಾಗಿವೆ. ಆದುದರಿಂದ ಇಲ್ಲಿ ವೀರಶೈವ, ಕಾಶ್ಮೀರಶೈವ, ಸಿದ್ಧಾಂತಶೈವರ ಮತದಂತೆ ಜೀವಾತ್ಮನ ಸ್ವರೂಪವನ್ನು ಕ್ರಮವಾಗಿ ನಿರೂಪಿಸಿ, ವಿಮರ್ಶಿಸಲಾಗುವುದು.

ವೀರಶೈವದರ್ಶನದಲ್ಲಿ ಜೀವಾತ್ಮನ ಲಕ್ಷಣ

ಶ್ರೀ ರೇಣುಕ ಭಗವತ್ಪಾದರು

ನೇಂದ್ರಿಯಾಣಾಂ ನ ದೇಹಸ್ಯ ನ ಬುದ್ಧೇರಾತ್ಮತಾ ಭವೇತ್।
ಅಹಂ ಪ್ರತ್ಯಯವೇದ್ಯತ್ವಾದನುಭೂತಸ್ಮೃತೇರಪಿ॥
ಶರೀರೇಂದ್ರಿಯಬುದ್ಧಿಭ್ಯೋ ವ್ಯತಿರಿಕ್ತಃ ಸನಾತನಃ।[೧೬೦]

---

[೧೫೮] ಬೋಧಪಂಚದಶಿಕಾ, ಶ್ಲೋಕ. ೬

[೧೫೯] "ನ ಚ ಸ್ವಾತಂತ್ರ್ಯಭಂಗಃ ಶಂಕನೀಯಃ, ಸ್ವಾಂಗಂ ಸ್ವವ್ಯಾಘಾತಕಂ ನ ಭವತೀತಿ ನ್ಯಾಯೇನ ಪ್ರತ್ಯುತ ತನ್ನಿರ್ವಾಹಾತ್" (ಸರ್ವದರ್ಶನ ಸಂಗ್ರಹ, ಪು. ೫೧೦) ಇತಿ ನೈಯಾಯಿಕ-ವೈಶೇಷಿಕಾಃ" (ಯೋಗಸೂತ್ರ, ತತ್ತ್ವವೈ. ೧.೨೫) ಇತಿ ವಾಚಸ್ಪತಿಮಿಶ್ರ ಮಹಾಭಾಗಾಃ, "ಅತಃ ಸೃಜ್ಯಮಾನ ಪ್ರಾಣಿಧರ್ಮಾಧರ್ಮಾಪೇಕ್ಷಾ ವಿಷಮಾ ಸೃಷ್ಟಿರಿತಿ ನಾಯಮೀಶ್ವರಸ್ಯಾಪರಾಧಃ। ಈಶ್ವರಸ್ತು ಪರ್ಜನ್ಯವದ್ ದ್ರಷ್ಟವ್ಯಃ" (ಬ್ರ.ಸೂ.ಶಾ.ಭಾ. ೨-೧-೩೪) ಇತಿ ಭಗವತ್ಪಾದಶಂಕರಾಚಾರ್ಯಾಃ, "ನ ಚ ಕರ್ಮಾಪೇಕ್ಷಾಯಾಮೀಶ್ವರಸ್ಯ ಐಶ್ವರ್ಯವ್ಯಾಘಾತಃ। ನಹಿ ಸೇವಾದಿಕರ್ಮಭೇದಾಪೇಕ್ಷಃ ಫಲಪ್ರದಃ ಪ್ರಭುರಪ್ರಭುರ್ಭವತಿ" (ಬ್ರ.ಸೂ. ಭಾಮತೀ. ೨-೧-೩೪) ಇತಿ ವಾಚಸ್ಪತಿಮಿಶ್ರ ಮಹಾಭಾಗಾಃ ಕರ್ಮಸಾಪೇಕ್ಷೇಣ ವೈಷಮ್ಯ- ನೈರ್ಘೃಣ್ಯದೋಷಂ ಪರಿಹೃತವಂತಃ। ಏತದ್ವಿಷಯೇ ಸರ್ವೈರೇಭಿರ್ದಾರ್ಶನಿಕೈಃ ಸಾಕಂ ವೀರಶೈವದರ್ಶನಸ್ಯ ವಿಚಾರಸಾಮ್ಯಂ ದೃಷ್ಟಿಪಥಮಾಯಾತಿ।

[೧೬೦] ಸಿ.ಶಿ, ೫.೫೨-೫೩.

"ನಾನು ಸ್ಥೂಲನು, ನಾನು ಕೃಶನು, ನಾನು ಸುಖಿಯು, ನಾನು ದುಃಖಿಯು, ಪೂರ್ವದಲ್ಲಿ ನಾನು ಬಾಲನಾಗಿದ್ದೆನು, ಈಗ ತರುಣನಾಗಿದ್ದೇನೆ, ಮುಂದೆ ವೃದ್ಧನಾಗುತ್ತೇನೆ ಎಂಬ ವ್ಯವಹಾರವು ಸಾಮಾನ್ಯವಾಗಿ ಎಲ್ಲರಲ್ಲಿಯೂ ಕಂಡು ಬರುವುದರಿಂದ ಶರೀರವೂ ಆತ್ಮನಲ್ಲ, ಇಂದ್ರಿಯಗಳೂ ಆತ್ಮನಲ್ಲ, ಬುದ್ಧಿಯೂ ಆತ್ಮನಲ್ಲ. ಶರೀರ, ಇಂದ್ರಿಯ, ಬುದ್ಧಿ ಇವೆಲ್ಲವುಗಳಿಗಿಂತಲೂ ವ್ಯತಿರಿಕ್ತನಾದವನು ಅನಾದಿಸಂಸಿದ್ಧನು" ಎಂಬಲ್ಲಿ ಶರೀರ ಮೊದಲ್ಗೊಂಡು ಬುದ್ಧಿಪರ್ಯಂತವಾದ ಎಲ್ಲವನ್ನೂ ಚಾರ್ವಾಕಾದಿಗಳು ಆತ್ಮವೆಂದು ಅಂಗೀಕರಿಸಿದ್ದಾರೆ. ಅವರೆಲ್ಲರ ಅಭಿಪ್ರಾಯವನ್ನು ಅನಾತ್ಮವೆಂದು ತಿರಸ್ಕಾರ ಮಾಡುವುದರ ಮೂಲಕ, ಅದಕ್ಕಿಂತಲೂ ಭಿನ್ನವಾದ ಆತ್ಮನ ಸ್ವರೂಪವನ್ನು ಸಾಮಾನ್ಯವಾಗಿ ನಿರೂಪಿಸಿ, ಅದರ ಅಸಾಧಾರಣ ಸ್ವರೂಪದ ಜಿಜ್ಞಾಸೆಯನ್ನು ಮಾಡಲು,

ಏಕ ಏವ ಶಿವಃ ಸಾಕ್ಷಾಚ್ಚಿದಾನಂದಮಯೋ ವಿಭುಃ।
ನಿರ್ವಿಕಲ್ಪೋ ನಿರಾಕಾರೋ ನಿರ್ಗುಣೋ ನಿಷ್ಪ್ರಪಂಚಕಃ॥
ಅನಾದ್ಯವಿದ್ಯಾಸಂಬಂಧಾತ್ ತದಂಶೋ ಜೀವನಾಮಕಃ।[೧೬೧]

"ಪರಶಿವನು ಚಿದಾನಂದ ಸ್ವರೂಪನೂ, ಸರ್ವವ್ಯಾಪಕನೂ, ಭೇದರಹಿತನೂ, ಆಕಾರರಹಿತನೂ, ನಿರ್ಗುಣನೂ, ಮಾಯಿಕದೂರಪ್ರಪಂಚಕನೂ, ಹೀಗೆ ಒಬ್ಬನೇ ಒಬ್ಬನೂ ಆಗಿರುವನು. ತನ್ನಲ್ಲಿ ನಿತ್ಯಸಂಬಂಧದಿಂದಿರುವ ವಿಮರ್ಶಶಕ್ತಿಯಲ್ಲಿ ಅಡಕವಾಗಿರುವ ಅನಾದಿಮಾಯೆಯ ಸಂಬಂಧದಿಂದ ಆ ಪರಶಿವನ ಅಂಶವು ಜೀವನೆನಿಸಿಕೊಳ್ಳುವುದು" ಎಂದು ಜೀವನ ಲಕ್ಷಣವನ್ನು ಹೇಳಿದ್ದಾರೆ. ಇದರ ಭಾವವಿಷ್ಟು- ಅಕುಂಠಿತ, ಇಚ್ಛಾದಿ ಅನೇಕ ಕಲ್ಯಾಣಗುಣಗಳಿಂದ ಪರಿಪೂರ್ಣನಾದ ಪರಶಿವನೇ ತನ್ನಲ್ಲಿ ನಿತ್ಯಸಂಬಂಧದಿಂದಿರುವ ವಿಮರ್ಶಶಕ್ತಿಯಲ್ಲಿ ಅಂಶಭೂತವಾಗಿ ಅಡಕವಾಗಿರುವ ಅನಾದಿಮಾಯೆಯ ಸಂಬಂಧದಿಂದ 'ಜೀವ' ಎಂಬ ಹೆಸರನ್ನು ಪಡೆಯುತ್ತಾನೆ. ಆದುದರಿಂದ ಪರಶಿವನ ಅಂಶವೇ ಜೀವ ಎಂದು ತಿಳಿದುಬರುತ್ತದೆ. ಅಂಶತ್ವವೆಂದರೆ ಅವಿಷ್ಕೃತವಾಗದ ಸಮಸ್ತಶಕ್ತಿ ಎಂದರ್ಥ. ಆದುದರಿಂದಲೇ ಈ ಜೀವನು ಸರ್ವಕರ್ತೃತ್ವ, ಸರ್ವಜ್ಞತ್ವ, ಪರಿಪೂರ್ಣತ್ವ, ನಿತ್ಯತ್ವ, ವ್ಯಾಪಕತ್ವರೂಪ ಪರಶಿವಶಕ್ತಿಸ್ವರೂಪ ಸಂಕೋಚಗಳಿಂದ, ಕಲೆ, ಅವಿದ್ಯೆ, ರಾಗ, ಕಾಲ, ನಿಯತಿರೂಪ ಪಂಚಕಂಚುಕಗಳಿಂದ ಆವೃತನಾಗಿ ಕಿಂಚಿತ್‌ಕರ್ತೃತ್ವ, ಕಿಂಚಿಜ್‌ಜ್ಞತ್ವ, ಅಪೂರ್ಣತ್ವ, ಅನಿತ್ಯತ್ವ, ಅವ್ಯಾಪಕತ್ವ ಧರ್ಮವುಳ್ಳವನಾಗಿ ಸಂಸಾರಬಂಧದಲ್ಲಿ ಸುತ್ತುತ್ತಿರುತ್ತಾನೆ. ಅದನ್ನು ಶ್ರೀರೇಣುಕ ಭಗವತ್ಪಾದರು ಹೀಗೆ ಹೇಳಿದ್ದಾರೆ-

ಕಿಂಚಿತ್ಕರ್ತಾ ಚ ಕಿಂಚಿಜ್‌ಜ್ಞೋ ಬದ್ಧೋಽನಾದಿಶರೀರವಾನ್।
ಅವಿದ್ಯಾ ಮೋಹಿತಾ ಜೀವಾ ಬ್ರಹ್ಮೈಕ್ಯಜ್ಞಾನವರ್ಜಿತಾಃ॥

---

೧೬೧. ಸಿ.ಶಿ, ೫.೩೨-೩೩

ಪರಿಭ್ರಮಂತಿ ಸಂಸಾರೇ ನಿಜಕರ್ಮಾನುಸಾರತಃ।
ದೇವತಿರ್ಯಙ್ಮನುಷ್ಯಾದಿನಾನಾಯೋನಿವಿಭೇದತಃ॥[೧೬೨]

“ಜೀವನು ಕಿಂಚಿತ್ಕರ್ತೃವೂ, ಕಿಂಚಿಜ್‌ಜ್ಞನೂ, ಆಣವಾದಿ ಅನಾದಿಮಲಪಾಶಬದ್ಧನೂ, ಅನಾದಿಕಾಲದಿಂದ ಪ್ರಾಪ್ತವಾದ ಶರೀರಾಭಿಮಾನವುಳ್ಳವನೂ ಆಗಿರುವನು. ಅವಿದ್ಯೆಯಿಂದ ಮೋಹಿತರಾದ ಜೀವರು ಬ್ರಹ್ಮೈಕ್ಯಜ್ಞಾನ (ಬ್ರಹ್ಮ-ಶಿವನೂ ನಾನೂ ಒಂದೇ ಎಂಬ ಅರಿವು) ಇಲ್ಲದವರಾಗಿರುವರು. ಜೀವರು ತಮ್ಮ ತಮ್ಮ ಕರ್ಮಾನುಸಾರವಾಗಿ ದೇವ, ಮನುಷ್ಯ, ಪಶು, ಪಕ್ಷಿ ಮೊದಲಾದ ಯೋನಿಗಳಲ್ಲಿ ಜನಿಸಿ, ಚಕ್ರದ ಅರಗಳಂತೆ ಸಂಸಾರದಲ್ಲಿ ಯಾವಾಗಲೂ ಸುತ್ತುತ್ತಿರುತ್ತಾರೆ.”

ಆದುದರಿಂದಲೇ ಈ ದರ್ಶನದಲ್ಲಿ ‘ಜೀವ’ನ ಅಂಶತ್ವವನ್ನು ಆಪಾದಿಸುವ ಅಜ್ಞಾನದಲ್ಲಿ ಪ್ರಯೋಗವಾಗಿರುವ ‘ನ’ಕಾರವು ಜ್ಞಾನವಿರೋಧಿಭಾವರೂಪ ‘ಅಜ್ಞಾನ’ವೆಂಬ ಅರ್ಥವನ್ನು ಕೊಡದೆ ‘ಈಷಜ್‌ಜ್ಞಾನಮಜ್ಞಾನಮ್’ ಎಂಬ ನಿರ್ವಚನದಂತೆ ಸಂಕುಚಿತಜ್ಞಾನವೆಂಬ ಅರ್ಥವನ್ನು ಕೊಡುತ್ತದೆ. ಆದುದರಿಂದ ಇಲ್ಲಿ ‘ನ’ಕಾರವು ನಿಷೇಧಾರ್ಥಕವಾಗಿರದೆ ಪರ್ಯುದಾಸಾರ್ಥಕವಾಗಿದೆ. ಮುಕ್ತಾವಸ್ಥೆಯಲ್ಲಾದರೂ ಜ್ಞಾನಾದಿಗಳ ಸಂಕೋಚಕ್ಕೆ ಕಾರಣೀಭೂತವಾದ ಆಣವಾದಿ ಮಲತ್ರಯಗಳ ನಿವೃತ್ತಿಯಾದಾಗ ಜೀವನ (ಆತ್ಮನ) ಜ್ಞಾನಾದಿ ಶಕ್ತಿಗಳ ಪುನರ್ವಿಕಾಸವಾಗುತ್ತದೆ. ಅದನ್ನು ಶ್ರೀ ಸಿದ್ಧಾಂತ ಶಿಖಾಮಣಿ ಹೀಗೆ ನಿರೂಪಿಸಿದೆ:

ಜೀವತ್ವಂ ದುಃಖಸರ್ವಸ್ವಂ ತದಿದಂ ಮಲಕಲ್ಪಿತಮ್।
ನಿರಸ್ಯತೇ ಗುರೋರ್ಬೋಧಾತ್ ಜ್ಞಾನಶಕ್ತಿಃ ಪ್ರಕಾಶತೇ॥[೧೬೩]

“ಜೀವತ್ವವು ದುಃಖದಿಂದ ತುಂಬಿದೆ. ಆ ದುಃಖವು ಆಣವಾದಿ ಮಲಗಳಿಂದ ಉಂಟಾಗುತ್ತದೆ. ಅದು ಶ್ರೀಗುರುವಿನ ಬೋಧೆಯಿಂದ ತೊಲಗಿ ಜ್ಞಾನಶಕ್ತಿಯು ಪ್ರಕಾಶಿಸುವುದು.”

ಆದುದರಿಂದ ಜ್ಞಾನಾದಿ ಶಕ್ತಿಗಳ ಸಂಕೋಚ-ವಿಕಾಸದಿಂದ ಜೀವಾತ್ಮನ ಬಂಧ-ಮೋಕ್ಷಗಳು ಸ್ಥಾಪಿಸಲ್ಪಟ್ಟಿವೆ. ಆ ಕಾರಣದಿಂದಲೇ ವೃತ್ತಿಕಾರರಾದ ಶಂಕರಶಾಸ್ತ್ರಿಗಳು- “ನಮ್ಮ ಅಭಿಪ್ರಾಯದಲ್ಲಿ ಶಿವ-ಜೀವರ ಭೇದವು ಮಿಥ್ಯಾಜ್ಞಾನದಿಂದುಂಟಾದದ್ದು ಎನ್ನುವುದಿಲ್ಲ. ಅದು ಶಿವನ ಶಕ್ತಿಯಿಂದ ಸ್ವತಂತ್ರವಾಗಿ ಸಂಕೋಚವಾದದ್ದು. ಶಿವ-ಜೀವರ ಅಭೇದವೂ ಕೂಡ ಶಕ್ತಿಯು ವಿಕಾಸದಶೆಯನ್ನು ಹೊಂದಿದಾಗ ಉಂಟಾಗುತ್ತದೆ. ಕೂರ್ಮಾಂಗಭಂಗಿ, ಸರ್ಪಕುಂಡಲ, ಸ್ವರ್ಣಕುಂಡಲ ನ್ಯಾಯಗಳಿಂದ ಸ್ವಸ್ವರೂಪದ ಸ್ವೇಚ್ಛೆಯಿಂದ ಸಂಕೋಚವೂ, ಸ್ವಸ್ವರೂಪದ

---

[೧೬೨] ಸಿ.ಶಿ, ೫.೪೩-೪೪

[೧೬೩] ಸಿ.ಶಿ, ೧೮.೧೭

ಆವಿರ್ಭಾವ"[೧೬೪]ವೆಂದು ಸಂಕುಚಿತ ಶಕ್ತಿಯುಳ್ಳ ಶಿವನಿಗೆ ಜೀವತ್ವವೆಂದೂ, ಮತ್ತು ಪುನಃ ಶಕ್ತಿಯು ವಿಕಾಸವಾದಾಗ ಶಿವತ್ವವೆಂದೂ ಸಮರ್ಥಿಸಿದ್ದಾರೆ.

ಶ್ರೀ ನೀಲಕಂಠ ಶಿವಾಚಾರ್ಯರೂ ಸಹ- "ಸ್ಥೂಲಚಿದಚಿದ್ರೂಪಶಕ್ತಿವಿಶಿಷ್ಟತ್ತ್ವವು ಜೀವಾತ್ಮನ ಲಕ್ಷಣ. ಪರಮಾತ್ಮನಲ್ಲಿ ಅತಿವ್ಯಾಪ್ತಿಯನ್ನು ನಿವಾರಿಸಲು ಸ್ಥೂಲ ಎಂದು ಶಕ್ತಿಗೆ ವಿಶೇಷಣವನ್ನು ಹೇಳಲಾಗಿದೆ. ಸ್ಥೂಲತ್ವವು ಮಲತ್ರಯಗಳಿಂದ ಕೂಡಿರುವಂತಹದ್ದು. ಆದುದರಿಂದ ಅದು ಶುದ್ಧಾಶುದ್ಧ ತತ್ತ್ವಾಂತರ್ಭೂತವಾಗಿದೆ. ಅಭೇದ ಸಂಬಂಧವೇ ಇದರ ವೈಶಿಷ್ಟ್ಯ. ಮಲತ್ರಯಶಕ್ತಿವಿಶಿಷ್ಟನಾದ ಜೀವಾತ್ಮನನ್ನು ಸಂಸಾರಿ ಎಂದು ಕರೆಯಲಾಗಿದೆ. ಜ್ಞಾನಾದಿಗಳನ್ನು ಮತ್ತು ಜೀವಾತ್ಮನ ಧರ್ಮಗಳ ಲಕ್ಷಣವನ್ನು ಬೇರೆಯಾಗಿ ನಿರೂಪಿಸುವುದು ಪ್ರಯೋಜನವಾಗುವುದಿಲ್ಲ. ಚಿಚ್ಛಕ್ತಿಯು ಜ್ಞಾನಶಕ್ತಿ ಸ್ವರೂಪ ಮತ್ತು ಅಚಿಚ್ಛಕ್ತಿಯು ಕ್ರಿಯಾಶಕ್ತಿಸ್ವರೂಪ ಎಂದು ತಿಳಿಯುವುದರಿಂದ ಜ್ಞಾನಾದಿಗಳೂ ಸಹ ಶಕ್ತಿಯ ಸ್ವರೂಪದ ವಿಷಯದಲ್ಲಿ ಬಾಧಕವಾಗುವುದಿಲ್ಲ. ಇದ್ದೇನೆ (ಅಸ್ಮಿ), ಬೆಳಗುತ್ತಿದ್ದೇನೆ (ಪ್ರಕಾಶೇ), ಆನಂದಿಸುತ್ತಿದ್ದೇನೆ (ನಂದಾಮಿ) ಎಂಬ ಸಚ್ಚಿದಾನಂದ ಧರ್ಮಗಳಲ್ಲಿಯೂ ಕೂಡ ಅದು ಅಂತರ್ಭೂತವಾಗಿರುವುದು ಸತ್ಯವಾದ ಮಾತು. ಬೆಂಕಿ ಮತ್ತು ಅದರಲ್ಲಿರುವ ಕಿಡಿಗಳಂತೆ ಶಿವ-ಜೀವರ ಅಂಶ-ಅಂಶಿಭಾವದ ವಿವಕ್ಷೆಯಿಂದ ಸಚ್ಚಿದಾನಂದ ಸ್ವರೂಪಿಯಾದ ಪರಶಿವನ ಯಾವ ಯಾವ ಧರ್ಮಗಳು ಸೂಕ್ಷ್ಮಾವಸ್ಥೆಯನ್ನು ಹೊಂದಿವೆಯೋ ಅವುಗಳೆಲ್ಲವೂ ಶಿವನ ಅಂಶೀಭೂತವಾದ ಜೀವಾತ್ಮನಲ್ಲಿ ಸ್ಥೂಲಾವಸ್ಥೆಯನ್ನು ಹೊಂದಿ, ಅವನಲ್ಲಿರುವ ಶಕ್ತಿವಿಶಿಷ್ಟಸ್ವರೂಪದಿಂದ ಪ್ರಕಾಶಿಸುತ್ತಿವೆ ಎಂಬುದೆಲ್ಲವೂ ನಿಷ್ಕಳಂಕವಾಗಿದೆ. ಮತ್ತು ಈ ಲಕ್ಷಣವು ಜೀವಾತ್ಮನ ಸ್ವರೂಪ ಲಕ್ಷಣವೆಂದು ಹೇಳಲ್ಪಡುತ್ತದೆ. ಇವನು ಸುಖಿ, ಇವನು ದುಃಖಿ ಮೊದಲಾದ ವ್ಯವಹಾರಗಳು ಗೋಚರಿಸುವುದರಿಂದ ಸುಖ-ದುಃಖಾದಿಗಳಿಂದ ಕೂಡಿರುವುದೇ ಜೀವಾತ್ಮನ ತಟಸ್ಥಲಕ್ಷಣ. "ಶಾಖಾಗ್ರೇ ಚಂದ್ರಃ" (ರೆಂಬೆಗಳ ತುದಿಯಲ್ಲಿ ಚಂದ್ರನು) ಎಂಬ ತಟಸ್ಥ ಲಕ್ಷಣದಂತೆ ಸುಖ-ದುಃಖಾದಿಗಳು ಜೀವಾತ್ಮನ ತಾಟಸ್ಥ್ಯ ಲಕ್ಷಣ. ಸುಖ-ದುಃಖಾದಿಗಳು ಆಯಾಯ ಸಾಮಗ್ರಿಗಳ ಪ್ರಾಪ್ತಿಯ ದಶೆಯಲ್ಲಿ ಆಯಾಯ ಶರೀರಾದಿ ಸಂಬಂಧದಿಂದ ಜೀವನಲ್ಲಿ ಪರ್ಯವಸಾನ ಹೊಂದುತ್ತವೆ. ಏಕೆಂದರೆ ಸುಖ-ದುಃಖಾದಿಗಳಲ್ಲಿ ಇರುವಂತಹ ಉಪಭೋಗ್ಯತ್ವದಿಂದ ಸೂಚಿತವಾದ ಉಪಭೋಕ್ತೃತ್ವವು ಆಯಾಯ ಸಾಮಗ್ರಿ ಪ್ರಾಪ್ತಿ ದಶೆಯಲ್ಲಿ ಶರೀರಾದಿ ಸಂಬಂಧದಿಂದ ಜೀವನಲ್ಲಿ ಆಗಿ ಪರ್ಯವಸಾನ ಹೊಂದುತ್ತದೆ. ಆದುದರಿಂದ ಸುಖ-ದುಃಖಾದಿಗಳ ವಿಷಯದಲ್ಲಿ ಭೋಜ್ಯತ್ವ, ಜೀವಾತ್ಮನ ವಿಷಯದಲ್ಲಿ ಭೋಕ್ತೃತ್ವ ಎಂಬುದು ಎಲ್ಲರಿಗೂ ಗೊತ್ತು"[೧೬೫] ಎಂದು ವಿಸ್ತಾರವಾಗಿ ಜೀವಾತ್ಮನ ಸ್ವರೂಪ ಮತ್ತು ತಟಸ್ಥಲಕ್ಷಣವನ್ನು ಪ್ರತಿಪಾದಿಸುವುದರ ಮೂಲಕ ಸಂಕುಚಿತಶಕ್ತಿವಿಶಿಷ್ಟತ್ವವೇ ಜೀವಾತ್ಮನೆಂದು

---

[೧೬೪] ೧೬೪. ಬ್ರಹ್ಮಸೂತ್ರ ಶಾಂಕರೀವೃತ್ತಿ, ೧.೩-೧೯

[೧೬೫] ೧೬೫. ಶಿವಾದ್ವೈತಪರಿಭಾಷಾ, ಪು. ೫

ಸಮರ್ಥಿಸಲಾಯಿತು. "ಚಿತಿಸಂಕೋಚಚಿತ್ತವಿಶಿಷ್ಟೋ ಜೀವಃ"[೧೬೬] ಎಂದು ಶ್ರೀ ಮರಿತೋಂಟದಾರ್ಯರೂ ಸಹ ಪೂರ್ವೋಕ್ತ ಜೀವಾತ್ಮನ ಲಕ್ಷಣವನ್ನು ಅನುಮೋದಿಸಿದ್ದಾರೆ. ಈ ರೀತಿಯಾಗಿ ಸಂಕುಚಿತ ಶಕ್ತಿಯುಕ್ತನಾದುದರಿಂದಲೇ ಅವನನ್ನು ಶಿವನ ಅಂಶವೆಂದು ಕರೆಯಲಾಗಿದೆ. ಜೀವಾತ್ಮನು ಶಿವನ ಅಂಶ ಎಂಬುದನ್ನು

ಯಥಾ ಸುದೀಪ್ತಾತ್ ಪಾವಕಾದ್ವಿಸ್ಫುಲಿಂಗಾಃ ಸಹಶ್ರಶಃ ಪ್ರಭವಂತೇ ಸರೂಪಾಃ।
ತಥಾಕ್ಷರಾದ್ವಿವಿಧಾಃ ಸೋಮ್ಯ ಭಾವಾಃ ಪ್ರಜಾಯಂತೇ ತತ್ರ ಚೈವಾಪಿಯಂತಿ॥[೧೬೭]

"ಪ್ರಜ್ವಲಿತವಾದ ಅಗ್ನಿಯಿಂದ ಅಗ್ನಿಯ ಕಿಡಿಗಳು ಹೇಗೆ ಸಾವಿರಾರು ಸಂಖ್ಯೆಯಲ್ಲಿ ಹುಟ್ಟುತ್ತವೆಯೋ ಹಾಗೆಯೇ ಎಲೈ ಸೌಮ್ಯ, ಅಕ್ಷರದಿಂದ ವಿವಿಧ ಜೀವಿಗಳು ಹುಟ್ಟುತ್ತವೆ ಮತ್ತು ಅದರಲ್ಲಿಯೇ ಲೀನವಾಗುತ್ತವೆ."

"ಅಂಶೋ ನಾನಾ ವ್ಯಪದೇಶಾತ್"[೧೬೮] (ಶಿವನ ಅಂಶವು ನಾನಾ ಹೆಸರುಗಳಿಂದ ಪ್ರಸಿದ್ಧವಾಗಿದೆ). "ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ"[೧೬೯] (ಈ ಜೀವಲೋಕದಲ್ಲಿರುವ ಎಲ್ಲ ಪ್ರಾಣಿಗಳೂ ನನ್ನ ಅಂಶಗಳೇ ಆಗಿವೆ) ಇತ್ಯಾದಿ ಶ್ರುತಿ, ಸೂತ್ರ, ಸ್ಮೃತಿಗಳಲ್ಲಿಯೂ ಸಹ ಪ್ರಮಾಣಗಳೆಂದು ತಿಳಿಯಬೇಕು.

ಈ ಪ್ರಕಾರವಾಗಿ ಪರಮಾತ್ಮನ ಅಂಶವಾದ ಕಾರಣದಿಂದಲೇ ವೀರಶೈವ ಸಿದ್ಧಾಂತದಲ್ಲಿ ಜೀವಾತ್ಮನನ್ನು 'ಅಂಗ'[೧೭೦] ಎಂದು ಕರೆಯಲಾಗಿದೆ. 'ಅಂಗ' ಎಂಬ ಪದದ ಅರ್ಥವು ರೂಢಿಯಲ್ಲಿ 'ಶರೀರ' ಎಂಬ ಅರ್ಥವನ್ನು ಹೊಂದಿದ್ದರೂ ಸಹ "ಯಸ್ಯ ಚ ಆತ್ಮಾಶರೀರಮ್" (ಯಾರ ಶರೀರವು ಆತ್ಮವಾಗಿದೆಯೋ), "ಯಸ್ಯ ಚ ಅವ್ಯಕ್ತಂ ಶರೀರಮ್" (ಯಾರ ಶರೀರವು ಗೋಚರವಾಗಿರುವುದಿಲ್ಲವೋ) ಇತ್ಯಾದಿ ಪರಶಿವಬ್ರಹ್ಮನಲ್ಲಿ ಅಂತರ್ಯಾಮಿಯಾದ ಭೂಮಿಯಿಂದ ಮೊದಲ್ಗೊಂಡು ಜೀವಾತ್ಮ ಪರ್ಯಂತಗಳಾದ ಎಲ್ಲ ವಸ್ತುಗಳಿಗೂ ಬ್ರಹ್ಮನು ಕಾರಣನೆಂದು ಬೋಧಿಸಿರುವುದರಿಂದ ಜೀವಾತ್ಮನನ್ನೂ 'ಅಂಗ' ಎಂಬ ಪದದಿಂದ ಕರೆಯುವುದರಲ್ಲಿ ಯಾವುದೇ ರೀತಿಯ ತೊಂದರೆಯಿರುವುದಿಲ್ಲ[೧೭೧] ಎಂದು ಶ್ರೀ ನೀಲಕಂಠ ಶಿವಾಚಾರ್ಯರು ಜೀವಾತ್ಮನನ್ನು 'ಅಂಗ' ಎಂಬ ಪದದಿಂದ ಕರೆಯುವುದನ್ನು ಸಮರ್ಥಿಸಿದ್ದಾರೆ. ಆದುದರಿಂದಲೇ

---

[೧೬೬] ಸಿ.ಶಿ, ೧೦.೯,. ತತ್ತ್ವಪ್ರದೀಪಿಕೆ, ಪು. ೧೮೧

[೧೬೭] ಮುಂಡ, ೨-೧-೧

[೧೬೮] ಬ್ರಹ್ಮಸೂತ್ರ, ೨-೩-೧೫

[೧೬೯] ಭಗವದ್ಗೀತಾ, ೧೫.೭

[೧೭೦] ಅನಾದ್ಯಂತಮಜಂ ಲಿಂಗಂ ತತ್ಪರಂ ಪರಮಂ ಪ್ರತಿ।
ಯದ್ಗಚ್ಛತಿ ಮಹಾಭಕ್ತ್ಯಾ ತದಂಗಮಿತಿ ನಿಶ್ಚಿತಮ್॥ -(ಅನುಭವಸೂತ್ರ, ೪.೨)

[೧೭೧] ಶಿವಾದ್ವೈತದರ್ಪಣ, ಪು. ೪೦, ಟಿಪ್ಪಣಿ. ೧

ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಮ್।
ತಸ್ಯಾವಯವಭೂತೈಸ್ತು ವ್ಯಾಪ್ತಂ ಸರ್ವಮಿದಂ ಜಗತ್॥[೧೭೨]

"ಪ್ರಕೃತಿಯನ್ನೇ ಮಾಯೆಯೆಂದೂ, ಮಹೇಶ್ವರನನ್ನೇ ಮಾಯಾವಿಯೆಂದೂ ತಿಳಿಯಬೇಕು. ಈ ಜಗತ್ತೆಲ್ಲವೂ ಅವನ ಅವಯವಗಳಾದ ಅಂಶಗಳಿಂದ ವ್ಯಾಪ್ತವಾಗಿದೆ" ಎಂಬ ಶ್ರುತಿವಾಕ್ಯವನ್ನು ಪ್ರಮಾಣವನ್ನಾಗಿ ಒಪ್ಪಿರುವ ಶ್ರೀಪತಿ ಪಂಡಿತಾರಾಧ್ಯರೂ ಸಹ "ತಸ್ಮಾನ್ಮಾಯಿನಃ ಪರಮಶಿವಾವಯವಲೇಶಃ ಪುರುಷೋ ಜೀವಃ" (ಮಾಯಿಯಾದ ಪರಶಿವನ ಅವಯವದ ಅಂಶನಾದ ಪುರುಷನು ಜೀವಾತ್ಮನು) ಜೀವನು ಪರಶಿವನ ಅವಯವರೂಪಿ ಎಂಬುದನ್ನು ನಿರೂಪಿಸಿದ್ದಾರೆ. ಆದುದರಿಂದ ಜೀವಾತ್ಮ- ಪರಮಾತ್ಮರ ಅವಯವ-ಅವಯವಿರೂಪವೇ ಈ ಅಂಶ-ಅಂಶಿಭಾವವು.

ಪರಶಿವನು ನಿರವಯವಿಯಾದ್ದರಿಂದ ಜೀವಾತ್ಮ-ಪರಮಾತ್ಮರ ಅವಯವ-ಅವಯವಿರೂಪದ ಅಂಶ-ಅಂಶಿಭಾವವು ಹೇಗೆ ಸಂಭವಿಸುತ್ತದೆ ಎಂದು ಪೂರ್ವಪಕ್ಷಕಾರರು ಆಕ್ಷೇಪಿಸಿದರೆ, ಅದಕ್ಕೆ ಹೀಗೆ ಉತ್ತರಿಸಲಾಗಿದೆ- ಅದು ಹಾಗಲ್ಲ. ನಮ್ಮಂತೆ ಪ್ರಾಕೃತ ಅವಯವಗಳ ಅಭಾವವಿದ್ದರೂ ಸಹ-

ಸರ್ವಜ್ಞತಾ ತೃಪ್ತಿರನಾದಿಬೋಧಃ ಸ್ವತಂತ್ರತಾ ನಿತ್ಯಮಲುಪ್ತಶಕ್ತಿಃ।
ಅನಂತಶಕ್ತಿಶ್ಚ ವಿಭೋರ್ವಿದಿಜ್ಞಾಃ ಷಡಾಹುರಂಗಾನಿ ಮಹೇಶ್ವರಸ್ಯ॥[೧೭೩]

"ಸರ್ವಜ್ಞತೆ, ನಿತ್ಯತೃಪ್ತಿತ, ಅನಾದಿಬೋಧತೆ, ಸ್ವತಂತ್ರತೆ, ಅಲುಪ್ತಶಕ್ತಿ ಮತ್ತು ಅನಂತಶಕ್ತಿ ಈ ಆರು ಪರಶಿವನ ಅಂಗಗಳೆಂದು ಶಾಸ್ತ್ರಕಾರರು ತಿಳಿದಿದ್ದಾರೆ" ಇತ್ಯಾದಿ ಪ್ರಮಾಣದಿಂದ ವಿಲಕ್ಷಣವಾದ ಶಾಶ್ವತವಾದ ಅಂಗಗಳನ್ನು ಹೊಂದಿರುವುದರಿಂದ ಇಲ್ಲಿ ದೋಷವು ಬರುವುದಿಲ್ಲ.

ಜೀವಾತ್ಮ-ಪರಮಾತ್ಮರ ಭೋಗಸಾಂಕರ್ಯದ ತಿರಸ್ಕಾರ

ಈ ರೀತಿಯಾಗಿ ಜೀವಾತ್ಮನು ಪರಮಾತ್ಮನ ಅಂಗವೆಂದು ಒಪ್ಪಿಕೊಂಡಿರುವುದರಿಂದ "ಬೆಳ್ಳುಳ್ಳಿಯನ್ನು ತಿಂದರೂ ಸಹ ಕಾಯಿಲೆಯು ಶಮನವಾಗಲಿಲ್ಲ" ಎಂಬ ಗಾದೆಯಂತೆ ಕೈ ಮೊದಲಾದ ಅವಯವಗಳಿಗೆ ವ್ರಣ (ಗಾಯ) ಮೊದಲಾದವುಗಳಿಂದ ಉಂಟಾದ ದುಃಖದಿಂದ ದೇವದತ್ತನು ದುಃಖಿಯಾಗಿರುವುದು ಹೇಗೆ ಕಂಡುಬರುತ್ತದೆಯೋ ಹಾಗೆಯೇ ಪರಶಿವನ ಅಂಗವಾದ ಜೀವಾತ್ಮನ ಸುಖ-ದುಃಖಗಳಲ್ಲಿ, ಅವನ ಅಂಗಿರೂಪವಾದ ಪರಶಿವನೂ ಸುಖ-ದುಃಖಗಳನ್ನು ಅನುಭವಿಸುತ್ತಾನೆ ಎಂಬ ಆಕ್ಷೇಪವನ್ನು ಹೀಗೆ ನಿರಾಕರಿಸಲಾಗಿದೆ. ಆ ರೀತಿಯಾಗಿ ಹೇಳುವುದು ಸರಿಯಲ್ಲ. ಏಕೆಂದರೆ ದುಃಖ, ಮೋಹ ಮೊದಲಾದವುಗಳು ಆಣವಾದಿ ಮಲತ್ರಯಗಳ ಕಾರ್ಯವಾಗಿರುತ್ತವೆ. ಆದರೆ ಶಿವನು

---

[೧೭೨] ಶ್ವೇ.ಉ, ೪.೧೦

[೧೭೩] ವಾಯುಪುರಾಣ, ೧೨.೩೧

ಅನಾದಿಮಲಸ್ಪರ್ಶರಹಿತನಾದುದರಿಂದ ಜೀವಾತ್ಮನ ದುಃಖಗಳಲ್ಲಿ ಭಾಗಿಯಾಗುವುದಿಲ್ಲ. ಶ್ರೀ ರೇಣುಕ ಭಗವತ್ಪಾದರು- "ಏತೇಷಾಂ ದೇಹಿನಾಂ ಸಾಕ್ಷೀ ಪ್ರೇರಕಃ ಪರಮೇಶ್ವರಃ"[೧೭೪] (ಸಂಸಾರಚಕ್ರದಲ್ಲಿ ಸುತ್ತುತ್ತಿರುವ ಜೀವರಿಗೆ ಪರಮೇಶ್ವರನು ಪ್ರೇರಕನೂ ಸಾಕ್ಷಿಭೂತನೂ ಆಗಿರುವನು) ಎಂದು ಶಿವನ ಪ್ರೇರಕತ್ವವನ್ನು ಹೇಳಿದ್ದಾರೆಯೇ ಹೊರತು ಅವನ ಸುಖ-ದುಃಖಗಳ ಭೋಗದಲ್ಲಿ ಸಹಕಾರಿತ್ವವನ್ನಲ್ಲ. ಈಶ್ವರನ ಅಭೋಕ್ತೃತ್ವವನ್ನು ಮುಂಡಕೋಪನಿಷತ್ತಿನಲ್ಲಿ ಹೀಗೆ ಪ್ರತಿಪಾದಿಸಲಾಗಿದೆ:

ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ।
ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನನ್ಯೋ ಅಭಿಚಾಕಶೀತಿ॥[೧೭೫]

"ಯಾವಾಗಲೂ ಜೊತೆಯಲ್ಲಿರುವ ಮಿತ್ರರಾದ ಎರಡು ಪಕ್ಷಿಗಳು ಒಂದೇ ಮರವನ್ನು ಆಶ್ರಯಿಸಿಕೊಂಡಿವೆ. ಅವೆರಡರಲ್ಲಿ ಒಂದು ಸವಿಯಾದ ಹಣ್ಣನ್ನು ತಿನ್ನುತ್ತಿದೆ. ಮತ್ತೊಂದು ತಿನ್ನದೆ ನೋಡುತ್ತಿದೆ."

ಈ ವಿಷಯವನ್ನು ಶ್ರೀಕರಭಾಷ್ಯವು ವಿಸ್ತಾರವಾಗಿ ನಿರೂಪಿಸಿದೆ.[೧೭೬] ಆದುದರಿಂದ ಜೀವಾತ್ಮನು ಈಶ್ವರನ ಅಂಗರೂಪಿಯಾದರೂ ಸಹ ಜೀವಾತ್ಮನಲ್ಲಿರುವ ಸುಖ-ದುಃಖಗಳನ್ನು ಪರಶಿವನು ಭೋಗಿಸುವುದಿಲ್ಲ. ಶ್ರೀವಿದ್ಯಾರಣ್ಯ ಸ್ವಾಮಿಗಳೂ ಸಹ-

ಈಶಕಾರ್ಯಂ ಜೀವಭೋಗ್ಯಂ ಜಗದ್ ದ್ವಾಭ್ಯಾಂ ಸಮನ್ವಿತಮ್।
ಪಿತೃಜನ್ಯಾ ಭರ್ತೃಭೋಗ್ಯಾ ಯಥಾ ಯೋಷಿತ್ ತಥೇಷ್ಯತಾಮ್॥[೧೭೭]

"ಪರಮಾತ್ಮನ ಸೃಷ್ಟಿಕಾರ್ಯ, ಜೀವಾತ್ಮನ ಭೋಗ -ಜಗತ್ತು ಈ ಎರಡರಿಂದ ಕೂಡಿದೆ. ಸ್ತ್ರೀಯು ತಂದೆಯಿಂದ ಜನ್ಮಕ್ಕೂ, ಪತಿಯ ಭೋಗ್ಯಕ್ಕೂ ಹೇಗೆ ಪಾತ್ರಳೋ ಹಾಗೆಯೇ ಎಂದು ತಿಳಿಯಬೇಕು."

ಪರಶಿವನಿಂದ ನಿರ್ಮಿತವಾದ ಈ ಪ್ರಪಂಚದಲ್ಲಿ ಭೋಕ್ತೃತ್ವವು ಜೀವಾತ್ಮನಿಗೆ ಮಾತ್ರ ಸಂಬಂಧಿಸಿರುವುದನ್ನು ಸ್ತ್ರೀ ದೃಷ್ಟಾಂತದಿಂದ ನಿರೂಪಿಸಿದ್ದಾರೆ. ಆದುದರಿಂದಲೇ ಭಾಷ್ಯಕಾರರಾದ ಶ್ರೀಪತಿಪಂಡಿತಾರಾಧ್ಯರು- "ಅನಾದಿ ಮಾಯಾಪಾಶಬದ್ಧನಾದ, ಘೋರವೂ ಅಪಾರವೂ ಆದ ಸಂಸಾರವ್ಯಾಪಾರದ ತಾಪತ್ರಯಗಳಲ್ಲಿ ಬೆಂಕಿಯಲ್ಲಿ ದಹಿಸಲ್ಪಟ್ಟು ನಾನಾ ಶರೀರಪ್ರವೇಶ-ನಿರ್ಗಮನ, ವರ್ಣಾಶ್ರಮಗಳ ಅಭಿಮಾನದಿಂದ ಕೂಡಿರುವ, ಕಾಮ - ಕ್ರೋಧಾದಿಗಳಿಂದ ನಿರಂತರವಾಗಿ ಸುಖ - ದುಃಖಗಳನ್ನು

---

[೧೭೪] ಸಿ.ಶಿ, ೫.೪೭

[೧೭೫] ಮುಂಡ, ೩-೧-೧

[೧೭೬] ಬ್ರಹ್ಮಸೂತ್ರ ಶ್ರೀಕರಭಾಷ್ಯ, ೨-೩-೨೪

[೧೭೭] ಪಂಚದಶೀ, ೪.೧೮

ಆಶ್ರಯಿಸಿರುವುದೇ ಜೀವತ್ವ"[೧೭೮] ಎಂದು ಜೀವಾತ್ಮನ ಲಕ್ಷಣವನ್ನು ನಿರೂಪಿಸುವ ಮೂಲಕ ಜೀವಾತ್ಮನ ಸುಖ-ದುಃಖ-ಭೋಕ್ತೃತ್ವವನ್ನು ಪ್ರತಿಪಾದಿಸಿದ್ದಾರೆ.

ಜೀವಾತ್ಮನು ಅಣುರೂಪಿಯು

ಜೀವಾತ್ಮನ ಗಾತ್ರದ ವಿಷಯದಲ್ಲಿ ಅಣು, ಮಧ್ಯಮ, ವಿಭು ಎಂಬ ಭೇದಗಳಿಂದ ಕೂಡಿದ ವಾದಗಳು ಭಾರತೀಯ ದಾರ್ಶನಿಕರಲ್ಲಿವೆ. ವೀರಶೈವಾಚಾರ್ಯರು ಅಣುವಾದವನ್ನು ಅಂಗೀಕರಿಸುತ್ತಾರೆ. ಅದನ್ನು ಶ್ರೀರೇಣುಕಾಚಾರ್ಯರು:

> ವಾಲಾಗ್ರಶತಭಾಗೇನ ಸದೃಶೋ ಹೃದಯೇ ಸ್ಥಿತಃ।
> ಅಶ್ನನ್ ಕರ್ಮಫಲಂ ಸರ್ವಮಾತ್ಮಾ ಸ್ಫುರತಿ ದೀಪವತ್॥[೧೭೯]

"ಕೂದಲಿನ ಅಗ್ರಭಾಗದ ನೂರರಲ್ಲೊಂದು ಭಾಗಕ್ಕೆ ಸಮಾನವಾಗಿ ಅತ್ಯಂತ ಸೂಕ್ಷ್ಮನೆನಿಸಿರುವ ಆತ್ಮನು ಸಮಸ್ತ ಪ್ರಾಣಿಗಳ ಹೃದಯದಲ್ಲಿದ್ದುಕೊಂಡು, ತನ್ನ ಕರ್ಮಫಲವನ್ನು ಅನುಭವಿಸುತ್ತಾ ದೀಪದಂತೆ ಪ್ರಕಾಶಿಸುತ್ತಿರುವನು" ಎಂದು ಜೀವಾತ್ಮರುಗಳು ಬಹಳ ಸೂಕ್ಷ್ಮವಾಗಿರುವುದರಿಂದಲೇ ಅವರಿಗೆ ನಾನಾತ್ವವೆಂದು ಅತ್ಯಂತ ಸುಂದರವಾಗಿ ನಿರೂಪಿಸಿದ್ದಾರೆ. ಆದುದರಿಂದಲೇ ವೀರಶೈವ ಸಿದ್ಧಾಂತದಲ್ಲಿ ಜೀವಾತ್ಮನೆಂದರೆ ಶರೀರ-ಇಂದ್ರಿಯಾದಿಗಳಿಂದ ಬೇರೆಯಾದ, ಪರಶಿವನ ಅಂಶನಾದ, ಅನಾದಿಮಲಗಳಿಂದ ಆವರಿಸಿರುವ, ಅಣುರೂಪಿಯಾದ, ಸಂಕುಚಿತ ಶಕ್ತಿಯಿಂದ ಕೂಡಿದ, ಸುಖ-ದುಃಖಗಳನ್ನು ಅನುಭವಿಸುವವನೆಂದು ತಿಳಿಯಬೇಕು.

ಕಾಶ್ಮೀರಶೈವದರ್ಶನದಲ್ಲಿ ಪಶುಲಕ್ಷಣ

ಕಾಶ್ಮೀರಶೈವದರ್ಶನದಲ್ಲಿ ಜೀವಾತ್ಮನು ಪಶು, ಪುದ್ಗಲ, ಅಣು, ಕ್ಷೇತ್ರವಿತ್, ಭೋಕ್ತಾ ಮೊದಲಾದ ಶಬ್ದಗಳಿಂದ ವ್ಯವಹರಿಸಲ್ಪಟ್ಟಿದ್ದಾನೆ. ಆಣವ, ಮಾಯೀಯ ಮತ್ತು ಕಾರ್ಮಿಕ ಎಂಬ ಮಲತ್ರಯರೂಪವಾದ ಪಾಶಗಳಿಂದ ಬಂಧಿತನಾಗಿರುವುದರಿಂದ ಪಶು ಎಂತಲೂ, "ಪುಥಾ ಹಿಂಸಯಾ ಪರತಾಬುದ್ಧ್ಯಾ ಕ್ಲೇಶೇನ ಚ ಗಲತೀತಿ ಪುದ್ಗಲಃ"[೧೮೦] ಎಂಬ ವ್ಯುತ್ಪತ್ತಿಯಂತೆ ಕ್ಲೇಶಾದಿಗಳಿಂದ ಪೀಡಿತನಾಗುವುದರಿಂದ ಪುದ್ಗಲ ಎಂದೂ, ಪರಿಪೂರ್ಣನಾದರೂ ಕೂಡ ಆಣವಮಲದಿಂದ ಆವೃತನಾಗಿರುವ ಕಾರಣದಿಂದ ತನ್ನ ಸಂಪೂರ್ಣ ಸ್ವರೂಪವನ್ನು ಮರೆತು ತಾನು ಅಣುಸ್ವರೂಪಿ ಎಂದು ತಿಳಿಯುವುದರಿಂದ ಅಣು ಎಂದೂ, ತನ್ನ ಕರ್ಮದ ಬೀಜವು ಬೆಳೆಯುವ ಕ್ಷೇತ್ರವಾದ ಶರೀರವನ್ನೇ ಆತ್ಮವೆಂದು ತಿಳಿಯುವುದರಿಂದ ಕ್ಷೇತ್ರವಿತ್ ಎಂದೂ ಮತ್ತು ತನ್ನ ಕರ್ಮಫಲಭೂತವಾದ ಸುಖ-ದುಃಖಾದಿಗಳನ್ನು ಅನುಭವಿಸುವುದರಿಂದ ಭೋಕ್ತಾ ಎಂದೂ ಜೀವಾತ್ಮನನ್ನು ಕರೆಯಲಾಗಿದೆ.

---

೧೭೮. ಬ್ರಹ್ಮಸೂತ್ರ ಶ್ರೀಕರಭಾಷ್ಯ, ೧-೧-೧, ಪು. ೪

೧೭೯. ಸಿ.ಶಿ, ೧೮.೬

೧೮೦. ತಂತ್ರಾಲೋಕಟೀಕಾ, ೯.೧೪೪, ಪು. ೧೧೩

ಈ ಸಿದ್ಧಾಂತದಲ್ಲಿ (ಕಾಶ್ಮೀರಶೈವ) ಪರಮಾತ್ಮನಿಲ್ಲದೆ ಪರಮಾರ್ಥರೂಪದ ಯಾವುದೇ ಪದಾರ್ಥವು ಉಂಟಾಗುವುದಿಲ್ಲ. ಆದುದರಿಂದ ಪರಮಾತ್ಮನು ತನ್ನ ಸ್ವಾತಂತ್ರ್ಯ ಬಲದಿಂದ ಭೋಕ್ತೃ ಮತ್ತು ಭೋಗ್ಯರೂಪದಿಂದ ತನ್ನ ಲೀಲಾವಿನೋದವನ್ನು ಮಾಡುತ್ತಾನೆ.[೧೮೧] ಅದನ್ನು ಅಭಿನವಗುಪ್ತರು-

ಭೋಕ್ತಾ ಚ ತತ್ರ ದೇಹೀ ಶಿವ ಏವ ಗೃಹೀತಪಶುಭಾವಃ॥[೧೮೨]
ಆಣವೋ ನಾಮ ನೈವಾನ್ಯತ್ ಪ್ರಕಾಶಾತ್ಮಾ ಮಹೇಶ್ವರಃ।
ಚಿದಚಿದ್ರೂಪತಾಭಾಸೀ ಪುದ್ಗಲಃ ಕ್ಷೇತ್ರವಿತ್ ಪಶುಃ॥[೧೮೩]

"ದೇಹವನ್ನು ಧರಿಸಿ ಪಶುಭಾವವನ್ನು ತಳೆದಿರುವ ಶಿವನೇ ಭೋಕ್ತನು. ಮಹೇಶ್ವರನ ಪ್ರಕಾಶಿಸುವ ಆತ್ಮವೇ ಅಣು ಎನಿಸಿದೆಯೇ ಹೊರತು ಬೇರೇನೂ ಅಲ್ಲ, ಚಿದಚಿದ್ರೂಪದಿಂದ ಕಂಡುಬರುವ ಪುದ್ಗಲವೇ ಕ್ಷೇತ್ರಜ್ಞನಾದ ಜೀವ (ಪಶು)."

ಈ ಲೀಲೆಯ ಸಂದರ್ಭದಲ್ಲಿ ಮತ್ತು ಅದರ ಸ್ವರೂಪದ ವಿಷಯದಲ್ಲಿ ಯಾವುದೇ ವಿರೋಧವೂ ಕಂಡುಬರುವುದಿಲ್ಲ, ಆ ಕಾರಣದಿಂದ ಇದೇ ಪರಮೇಶ್ವರನ ನಿರತಿಶಯ ಸ್ವಾತಂತ್ರ್ಯವು. ಈ ವಿಷಯವನ್ನು ಅಭಿನವಗುಪ್ತರು ಸ್ಫಟಿಕದ ದೃಷ್ಟಾಂತದಿಂದ ಹೀಗೆ ಸಮರ್ಥಿಸಿದ್ದಾರೆ:

ನಾನಾವಿಧವರ್ಣಾನಾಂ ರೂಪಂ ಧತ್ತೇ ಯಥಾಽಮಲಃ ಸ್ಫಟಿಕಃ।
ಸುರಮಾನುಷಪಶುಪಾದಪರೂಪತ್ವಂ ತದ್ವದೀಶೋಽಪಿ॥[೧೮೪]

"ಶುದ್ಧವಾದ ಸ್ಫಟಿಕವು ನಾನಾವಿಧ ವರ್ಣಗಳ ರೂಪವನ್ನು ಹೇಗೆ ಪಡೆಯುತ್ತದೆಯೋ ಹಾಗೆಯೇ ಪರಶಿವನೂ ಕೂಡ ದೇವತೆ, ಮನುಷ್ಯ, ಪ್ರಾಣಿ, ಮರ ಮೊದಲಾದ ರೂಪಗಳನ್ನು ಪಡೆಯುತ್ತಾನೆ."

ಇದರ ತಾತ್ಪರ್ಯವಿಷ್ಟು- ಸ್ಫಟಿಕಮಣಿಯು ಕೆಂಪು, ನೀಲಿ ಮೊದಲಾದ ಸಾವಿರಾರು ಬಗೆಯ ವೈಚಿತ್ರ್ಯದ ಉಪಾಧಿಯಿಂದ ಆಯಾ ಆಕಾರದಲ್ಲಿಯೇ ಕಂಡರೂ ಸಹ ಸ್ಫಟಿಕದ ಗುಣಧರ್ಮಗಳನ್ನು ಹೇಗೆ ಬಿಡುವುದಿಲ್ಲವೋ, ಹಾಗೆಯೇ ಚಿದಾನಂದವೊಂದನ್ನೇ ದೃಢವಾಗಿವುಳ್ಳ ಶಿವನು ನಿರ್ಮಲವಾದ ತನ್ನ ಕನ್ನಡಿಯಲ್ಲಿ ದೇವ, ಮನುಷ್ಯ, ಪಶು, ಪಕ್ಷಿ, ಸ್ಥಾವರವೇ ಮೊದಲಾದ ಅಸಂಖ್ಯಾತ ರುದ್ರ, ಕ್ಷೇತ್ರಜ್ಞ ಇತ್ಯಾದಿ ತಾನೇ ಸ್ವತಃ ಸೃಷ್ಟಿಸಿದ ವಿಶೇಷ ಪದಾರ್ಥರೂಪ ವಿಶೇಷಗಳಲ್ಲಿ ವರ್ಣಗಳ

---

[೧೮೧] "ಪರಮೇಶ್ವರಃ ಸ್ವರೂಪಾಚ್ಛಾದನಕ್ರೀಡಯಾ ಪಶುಃ ಪುದ್ಗಲೋಽಣುಃ ಸಂಪನ್ನಃ"
-ತಂತ್ರಸಾರಃ, ಪು.೧೧೮

[೧೮೨] ಪರಮಾರ್ಥಸಾರಃ, ಶ್ಲೋ. ೫

[೧೮೩] ತಂತ್ರಾಲೋಕಃ, ೯.೧೪೪, ಪು. ೧೩೩

[೧೮೪] ಪರಮಾರ್ಥಸಾರಃ, ಶ್ಲೋಕ. ೬

ವೈಚಿತ್ರ್ಯವು ಸ್ಫಟಿಕಮಣಿಯಂತೆ ತನಗೆ ಅಭೇದದಿಂದ ಧರಿಸುತ್ತಿದ್ದರೆ ಅಖಂಡ ಚಮತ್ಕಾರದಿಂದ ವ್ಯಾಪ್ತವಾದ ನಾನಾರೂಪವನ್ನು ಹೊಂದಿದರೂ ಸಹ ತನ್ನ ಆತ್ಮನನ್ನು 'ಅಹಮ್' (ನಾನು) ಎಂದು ಸ್ಮರಿಸುತ್ತದೆ. ಆದುದರಿಂದ ಶಿವನ ಈ ಜೀವಭಾವವು ಉಪಾಧಿಯಿಂದುಂಟಾದುದು. ಹೇಗೆಂದರೆ ನೀರಿನಲ್ಲಿ ಪ್ರತಿಬಿಂಬಿತನಾದ ಚಂದ್ರನಿಗೆ ನೀರಿನಲ್ಲಿರುವ ಕೆಸರುಗಳು ಹೇಗೆ ಅಂಟಲಾರವೋ ಹಾಗೆಯೇ ಉಪಾಧಿಭೇದಗಳಾದ ಶರೀರೇಂದ್ರಿಯಗಳ ಗುಣಗಳು ಜೀವಾತ್ಮನಿಗೆ ಅಂಟುವುದಿಲ್ಲ.

ವೀರಶೈವ-ಕಾಶ್ಮೀರಶೈವಗಳ ಜೀವಸ್ವರೂಪ ವಿಮರ್ಶೆ

ಪರಶಿವನೇ ಸ್ವಸ್ವರೂಪದಲ್ಲಿ ಸ್ವಲ್ಪ ವಿಕಾರಭೇದದಿಂದ ಜೀವ, ಜಗತ್ತುಗಳಲ್ಲಿ ಪ್ರಕಾಶಿಸುತ್ತಾನೆ ಎಂಬ ವಿಷಯದಲ್ಲಿ ವೀರಶೈವ-ಕಾಶ್ಮೀರಶೈವಗಳಲ್ಲಿ ವಿಚಾರಸಾಮ್ಯವಿದೆ. ಆದರೆ ಈ ವಿಶೇಷವು ಪರಶಿವನ ಈ ಜೀವಭಾವವು ಅಣುಭಾವವೂ, ಉಪಾಧಿಕವೂ ಆಗಿದೆ. ಆದುದರಿಂದಲೇ ಅವಾಸ್ತವಿಕವಾಗಿದೆ ಮತ್ತು ಅದು ಜ್ಞಾನಮಾತ್ರದಿಂದ ನಿವಾರಣೆಯಾಗುತ್ತದೆ ಎಂದು ಕಾಶ್ಮೀರಶೈವರು ಪ್ರತಿಪಾದಿಸುತ್ತಾರೆ.[೧೮೫] ವೀರಶೈವ ಸಿದ್ಧಾಂತದಲ್ಲಿ ಅನಾದಿಮಲ ಸಂಬಂಧದಿಂದ ಪ್ರಾಪ್ತವಾದ ಜೀವಭಾವವು ಮತ್ತು ಅದರಲ್ಲಿರುವ ಅಣುಭಾವವು ಸತ್ಯವೆಂದು ಸ್ವೀಕರಿಸಲಾಗಿದೆ. ಆದುದರಿಂದ ಸತ್ಯ ಹಾಗೂ ಬಂಧಗಳ ನಿವೃತ್ತಿಯು ಕೇವಲ ಜ್ಞಾನದಿಂದ ಸಂಭವಿಸುವುದಿಲ್ಲ. ಕಾರಣದಿಂದ ಜ್ಞಾನದೊಂದಿಗೆ ಕರ್ಮ ಮತ್ತು ಭಕ್ತಿಯನ್ನು ಅಂಗೀಕರಿಸಲಾಗಿದೆ.

ಸಿದ್ಧಾಂತಶೈವದರ್ಶನದಲ್ಲಿ ಪಶುಲಕ್ಷಣ

ಸಿದ್ಧಾಂತ ಶೈವದರ್ಶನದಲ್ಲಿ "ಪಶುಃ ಪಶುತ್ವಸಂಯೋಗಾತ್"[೧೮೬] (ಪಶುಗುಣಗಳಿಂದ ಕೂಡಿರುವುದರಿಂದ ಪಶು), "ತೇ ಪಾಶಬದ್ಧಾಃ ಪಶವಃ"[೧೮೭] (ಪಾಶಬದ್ಧರಾದ ಅವರು ಪಶುಗಳು) ಮೊದಲಾದ ಶ್ರುತಿ, ಸಿದ್ಧಾಂತಹೃದಯಗಳ ಉಕ್ತಿಯಂತೆ ಜೀವಾತ್ಮನು ಪಶುವೆನಿಸುತ್ತಾನೆ. ಆದುದರಿಂದ ಈ ಸಂದರ್ಭದಲ್ಲಿ 'ಪಶು' ಎಂದರೆ ನಾಲ್ಕು ಕಾಲಿನ ಪ್ರಾಣಿಗಳು ಮಾತ್ರವಾಗಿರದೆ, ಸಂಸಾರವಶವರ್ತಿಗಳಾದ ಎರಡು ಕಾಲಿನ ಮಾನವರೂ ಎಂದು ಸ್ವೀಕರಿಸಬೇಕು. "ಏತಾವಂತೋ ವೈ ಪಶವೋ ದ್ವಿಪಾದಶ್ಚತುಷ್ಪಾದಶ್ಚ"[೧೮೮] ಎಂಬ ಶ್ರುತಿವಾಕ್ಯಗಳಲ್ಲಿಯೂ ಎರಡು ಕಾಲಿನ ಪ್ರಾಣಿಗಳನ್ನು (ಮಾನವರನ್ನು) ಪಶುಧರ್ಮಿಗಳೆಂದು ಪ್ರತಿಪಾದಿಸಲಾಗಿದೆ. ಭಗವಾನ್ ವ್ಯಾಸ ಮಹರ್ಷಿಗಳು-

---

[೧೮೫] ಪರಮಾರ್ಥಸಾರವಿವೃತಿಃ, ಶ್ಲೋ. ೬೦

[೧೮೬] ತತ್ತ್ವಪ್ರಕಾಶ ವೃತ್ತಿಃ, ಶ್ಲೋಕ ೬, ಪು. ೨೪

[೧೮೭] ತತ್ತ್ವಪ್ರಕಾಶ ತಾತ್ಪರ್ಯದೀಪಿಕಾ, ಶ್ಲೋಕ. ೫, ಪು. ೧೭

[೧೮೮] ತೈತ್ತಿರೀಯಸಂಹಿತಾ, ೨.೩.೧೩-೧

ಬ್ರಹ್ಮಾದ್ಯಾಃ ಸ್ಥಾವರಾಂತಾಶ್ಚ ದೇವದೇವಸ್ಯ ಧೀಮತಃ।
ಪಶವಃ ಪರಿಕೀರ್ತ್ಯಂತೇ ಸಂಸಾರವಶವರ್ತಿನಃ॥
ತೇಷಾಂ ಪತಿತ್ವಾದ್ ಭಗವಾನ್ ರುದ್ರಃ ಪಶುಪತಿಃ ಸ್ಮೃತಃ॥[೧೮೯]

"ಬ್ರಹ್ಮಾದಿ ಸ್ಥಾವರಾಂತಗಳಾದ ಸಂಸಾರವಶವರ್ತಿಗಳಾದ ಎಲ್ಲವೂ ಪಶುಗಳೆಂದು ಕರೆಯಲ್ಪಟ್ಟಿವೆ. ಭಗವಾನ್ ರುದ್ರನು ಅವುಗಳೆಲ್ಲಕ್ಕೂ ಪತಿಯಾದುದರಿಂದ ಪಶುಪತಿ ಎನಿಸಿದ್ದಾನೆ" ಎಂದು ಹೇಳಿ ಶಿವನನ್ನು ಹೊರತುಪಡಿಸಿ ಎಲ್ಲವನ್ನೂ ಸಹ ಪಶುಗಳೆಂದು ಪರಿಗಣಿಸಿದ್ದಾರೆ. ಆದುದರಿಂದ ಪಶು ಶಬ್ದವು ಜೀವಾತ್ಮನ ಪರ್ಯಾಯವೆಂದು ಹೇಳುವ ಸಿದ್ಧಾಂತಶೈವರ ಅಭಿಪ್ರಾಯವು ಪ್ರಾಮಾಣಿಕವಾದುದು.

ದೇಹಾನ್ಯೋಽನಶ್ವರೋ ವ್ಯಾಪೀ ವಿಭಿನ್ನಃ ಸಮಲೋಽಜಡಃ।
ಸ್ವಕರ್ಮಫಲಭುಕ್ ಕರ್ತಾ ಕಿಂಚಿಜ್ಞಃ ಸೇಶ್ವರಃ ಪಶುಃ॥[೧೯೦]

"ದೇಹಕ್ಕಿಂತ ಭಿನ್ನನೂ, ಅನಶ್ವರನೂ, ವ್ಯಾಪಿಯೂ, ವಿಭಿನ್ನನೂ, ಮಲಸಹಿತನೂ, ಅಜಡನೂ, ಸ್ವಕರ್ಮಫಲಭೋಕ್ತೃವೂ, ಕರ್ತೃವೂ, ಕಿಂಚಿಜ್ಞನೂ, ಸೇಶ್ವರನೂ, ಪಶುವೂ ಆಗಿದ್ದಾನೆ" ಎಂದು ಪರಾಖ್ಯಸಂಹಿತೆಯಲ್ಲಿ ಪಶುಲಕ್ಷಣವು ನಿರೂಪಿತವಾಗಿದೆ. ಇಲ್ಲಿ 'ದೇಹಾನ್ಯ' ಎಂಬ ಪದದಿಂದ ಚಾರ್ವಾಕ ಪಕ್ಷವನ್ನು ನಿರಾಕರಿಸಲಾಗಿದೆ. 'ಅನಶ್ವರ' ಎಂಬುದರಿಂದ ಬೌದ್ಧರ ಕ್ಷಣಭಂಗವಾದವನ್ನು, 'ವ್ಯಾಪೀ' ಎಂಬ ಪದದಿಂದ ಜೈನಮತವನ್ನು, 'ವಿಭಿನ್ನ' ಎಂಬ ಪದದಿಂದ ವೇದಾಂತವಾದವನ್ನು ತಿರಸ್ಕರಿಸಲಾಗಿದೆ. 'ಸಮಲ' ಎಂಬಲ್ಲಿನ 'ಮಲ' ಶಬ್ದದಿಂದ ಜ್ಞಾನವನ್ನು ಆವರಿಸಿರುವ ಕರ್ಮಕ್ಕಿಂತ ಬೇರೆಯಾದ ರಾಗಕಾರಣವೇ ಅಜ್ಞಾನವೆಂದು ಹೇಳಲಾಗಿದೆ. 'ಅಜಡ' ಎಂದರೆ ಜ್ಞಾನ-ಕ್ರಿಯೆಗಳ ಸ್ವಭಾವ. 'ಸ್ವಕರ್ಮಫಲಭುಕ್' ಎಂದರೆ ತನ್ನ ಕರ್ಮವನ್ನು ಎಂದರೆ ಧರ್ಮಾಧರ್ಮಾತ್ಮಕವಾದ ಕರ್ಮಫಲವನ್ನು ಅನುಭವಿಸುತ್ತಾನೆ ಎಂದರ್ಥ. ಏಕಕಾಲದಲ್ಲಿಯೇ ಸೇವೆ, ಕೃಷಿ ಮೊದಲಾದವುಗಳಲ್ಲಿ ಪ್ರವೃತ್ತರಾಗಿರುವ ಇಬ್ಬರು ಪುರುಷರಲ್ಲಿ ಒಬ್ಬನಿಗೆ ಫಲ ದೊರೆತಾಗ ಇನ್ನೊಬ್ಬನಿಗೆ ಅದು ದೊರೆಯದಿರುವುದನ್ನು ಕಂಡು ಹೀಗೆ ತಿಳಿಯಬೇಕು. ಅದನ್ನು ಪೌಷ್ಕರಾಗಮದಲ್ಲಿ ಹೀಗೆ ಹೇಳಲಾಗಿದೆ-

ಉಭಯೋಃ ಕೃಷಿಸಾಮ್ಯೇಽಪಿ ಕಶ್ಚಿದ್ ಧಾನ್ಯಾನಿ ಗಚ್ಛತಿ।
ನ ಕಿಂಚಿದಪರಸ್ತಸ್ಯ ಕರ್ಮಕಾರಣಕಂ ದ್ವಿಜಾಃ॥

"ಎಲೈ ದ್ವಿಜರೇ, ಇಬ್ಬರು ಕೃಷಿಕರ ಕರ್ಮವು ಸಮಾನವಾದರೆ ಒಬ್ಬನು ಧಾನ್ಯವನ್ನು ಪಡೆಯುತ್ತಾನೆ. ಮತ್ತೊಬ್ಬನು ಪಡೆಯುವುದಿಲ್ಲ. ಅದಕ್ಕೆ ಅವರ ಕರ್ಮವೇ ಕಾರಣವಾಗಿದೆ."

ಕರ್ತನು ಪೂರ್ವೋಕ್ತ ಕರ್ಮಗಳನ್ನು ಸಂಪಾದಿಸುವವನು. ಅಲ್ಪವನ್ನು ಮಾತ್ರ ತಿಳಿದಿದ್ದಾನೆ ಎಂಬ ಕಾರಣದಿಂದ ಕಿಂಚಿಜ್‌ಜ್ಞನು. ಈಶ್ವರನ ಪ್ರೇರಣೆಯಿಂದ

---

೧೮೯. ಲಿಂಗಪುರಾಣ, ೨.೯.೧೧-೧೨

೧೯೦. ಲುಪ್ತಾಗಮಸಂಗ್ರಹ, ಭಾಗ-೨, ಉಪೋದ್ಘಾತ, ಪು. ೧೩೧

ಕೂಡಿದ್ದಾನೆಂಬ ಕಾರಣದಿಂದ ಈಶ್ವರಸಹಿತನು. ಸಾಂಖ್ಯರಂತೆ ಪುರುಷ ಸ್ವತಂತ್ರನಲ್ಲ, "ಈಶ್ವರಾಧಿಷ್ಠಿತಾತ್ಮಾಽಸಾವಸ್ವತಂತ್ರೋ ಯತಸ್ತು ಸಃ" (ಈಶ್ವರನ ನಿಯಮನಕ್ಕೆ ಒಳಪಟ್ಟ ಜೀವಾತ್ಮನು) ಅಸ್ವತಂತ್ರನು ಎಂಬ ಪರಾಖ್ಯವೆಂಬ ಇನ್ನೊಂದು ವಚನವಿರುವುದು. "ತತಃ ಕಲಾಸಮಾಯುಕ್ತೋ ಭೋಗೇಽಣುಃ ಕರ್ತೃಕಾರಕಃ" (ಹಾಗಾಗಿ ಕಲೆಯಿಂದ ಕೂಡಿದವನಾದ ಅಣುರೂಪ ಆತ್ಮನು ಭೋಗದಲ್ಲಿ ಕರ್ತೃಕಾರಕನಾಗುತ್ತಾನೆ) ಎಂಬ ಪರಾಖ್ಯ ಆಗಮದ ಮಾತಿನಲ್ಲಿ ಅಣುವಿಗೆ ಅಂದರೆ ಆಣವಮಲದಿಂದ ಕೂಡಿದ ಜೀವನಿಗೆ ಕರ್ತೃತ್ವವು ಹೇಳಲ್ಪಟ್ಟಿದೆ.[೧೯೧] ಶೈವಶಾಕ್ತತಂತ್ರಾಗಮ ವಿಶಾರದರಾದ ಪಂ. ವ್ರಜವಲ್ಲಭದ್ವಿವೇದಿ ಮಹೋದಯರು ಪ್ರತಿಯೊಂದು ಪದವನ್ನು ವ್ಯಾಖ್ಯಾನಿಸಿ ಪಶುವಿನ ಲಕ್ಷಣವನ್ನು ನಿರೂಪಿಸಿದ್ದಾರೆ. ಅವರೇ ನಿರ್ದೇಶನ ಮಾಡಿರುವಂತೆ ಪಶುವಿನ ವಿಸ್ತೃತವಾದ ವಿವೇಚನೆಯು ಬೇರೆಡೆಗಳಲ್ಲಿಯೂ ಸಹ ಕಾಣಿಸುತ್ತದೆ.[೧೯೨] ಇದರಿಂದ ಸ್ಪಷ್ಟವಾಗುವುದೇನೆಂದರೆ ಈ ಪಶುವು ದೇಹ, ಇಂದ್ರಿಯಾದಿಗಳಿಗಿಂತ ಭಿನ್ನನೂ, ವ್ಯಾಪಕನೂ, ಅನೇಕನೂ, ಸ್ವಾಭಾವಿಕವಾಗಿ ಮಲದಿಂದ ಕೂಡಿದವನೂ, ಜ್ಞಾನ-ಕ್ರಿಯಾಸ್ವಭಾವಗಳಿಂದ ಕೂಡಿದವನೂ, ಕರ್ಮಗಳನ್ನು ಮಾಡುವವನೂ, ಕರ್ಮಫಲವನ್ನು ಅನುಭವಿಸುವವನೂ, ಕಿಂಚಿಜ್ಜ್ಞನು ಮತ್ತು ಈಶ್ವರನಿಂದ ಪ್ರೇರಿತನಾದವನೆಂದು ತಿಳಿಯುತ್ತದೆ.

ಮೂರು ಬಗೆಯ ಪಶುಗಳು

ಈ ಸಿದ್ಧಾಂತದಲ್ಲಿ ಪಶುವು ವಿಜ್ಞಾನಾಕಲ, ಪ್ರಲಯಾಕಲ ಮತ್ತು ಸಕಲ ಎಂದು ಮೂರು ವಿಧವಾಗಿದೆ.[೧೯೩] ಅವುಗಳಲ್ಲಿ ಮಲದಿಂದ ಮಾತ್ರ ಕೂಡಿದವನು ವಿಜ್ಞಾನಾಕಲ ಜೀವನು, ಮಲಕರ್ಮದಿಂದ ಕೂಡಿದವನು ಪ್ರಲಯಾಕಲ ಜೀವ ಮತ್ತು ಮಲ, ಮಾಯಾ ಮತ್ತು ಕರ್ಮವೆಂಬ ಮೂರು ಬಗೆಯ ಬಂಧನಗಳಿಂದ ಕೂಡಿದವನು ಸಕಲ ಜೀವನು. ವಿಜ್ಞಾನಾಕಲ ಜೀವನು ಸಮಾಪ್ತಕಲುಷ ಮತ್ತು ಅಸಮಾಪ್ತಕಲುಷ ಎಂದು ಮತ್ತೊಮ್ಮೆ ಎರಡು ಬಗೆಯಾಗುತ್ತಾನೆ. ಸಮಾಪ್ತಕಲುಷರಾದ ಪುರುಷಶ್ರೇಷ್ಠರನ್ನು ಶಿವನು ತನ್ನ ಅನುಗ್ರಹದಿಂದ ಅನಂತ, ಸೂಕ್ಷ್ಮ, ಶಿವೋತ್ತಮ, ಏಕನೇತ್ರ, ಏಕರುದ್ರ, ತ್ರಿಮೂರ್ತಿ, ಶ್ರೀಕಂಠ, ಶಿಖಂಡಿ ಎಂಬ ಎಂಟು ವಿದ್ಯೇಶ್ವರ ಪದವಿಗೆ ತಲುಪಿಸುತ್ತಾನೆ. ಇವರು ಪಂಚಕೃತ್ಯಗಳಿಗೆ ಅಧಿಕಾರಿಗಳಾಗುತ್ತಾರೆ ಮತ್ತು ಈಶ್ವರತತ್ತ್ವದಲ್ಲಿ ನೆಲೆಸುತ್ತಾರೆ. ಅಸಮಾಪ್ತಕಲುಷರಾದ ಅವರನ್ನು ಏಳುಕೋಟಿ ಮಹಾಮಂತ್ರಗಳ ಅನುಗ್ರಹಕ್ಕೆ ಕಾರಣರನ್ನಾಗಿ ಮಾಡಲಾಗುತ್ತದೆ[೧೯೪] ಮತ್ತು ಇವರು ವಿದ್ಯಾತತ್ತ್ವದಲ್ಲಿ ನೆಲೆಸಿರುತ್ತಾರೆ.

ಇದೇ ರೀತಿಯಾಗಿ ಪ್ರಲಯಾಕಲ ಜೀವನೂ ಸಹ ಪಕ್ವಪಾಶದ್ವಯ ಮತ್ತು ಅಪಕ್ವಪಾಶದ್ವಯ ಎಂಬ ಭೇದದಿಂದ ಎರಡು ವಿಧವಾಗಿದ್ದಾನೆ. ಅವುಗಳಲ್ಲಿ

---

[೧೯೧] ಅದೇ, ಭಾಗ-೨, ಉಪೋದ್ಘಾತ, ಪು. ೧೩೧

[೧೯೨] ತತ್ತ್ವಸಂಗ್ರಹಃ, ಶ್ಲೋ. ೨೭-೪೩; ಶೈವದರ್ಶನಬಿಂದುಃ, ಪು. ೨೫

[೧೯೩] ಪಶವಸ್ತ್ರಿವಿಧಾ ಜ್ಞೇಯಾ ವಿಜ್ಞಾನಪ್ರಲಯಕೇವಲೌ ಸಕಲಃ। -ತತ್ತ್ವಪ್ರಕಾಶಃ, ಶ್ಲೋ. ೮

[೧೯೪] ತತ್ತ್ವಪ್ರಕಾಶವೃತ್ತಿಃ, ಶ್ಲೋ. ೯-೧೦; ರತ್ನತ್ರಯ, ಶ್ಲೋ. ೨೩-೨೯

ಮೊದಲನೆಯ ಜೀವಾತ್ಮ(ಪಕ್ವಪಾಶದ್ವಯ)ನು ಶಿವಾನುಗ್ರಹದಿಂದ ಮೋಕ್ಷವನ್ನು ಪಡೆಯುತ್ತಾನೆ. ಎರಡನೆಯ ಜೀವಾತ್ಮನು (ಅಪಕ್ವಪಾಶದ್ವಯ) ಪುರ್ಯಷ್ಟಕ[೧೯೫] ಎಂಬ ಸೂಕ್ಷ್ಮ ಶರೀರಿಯಾಗಿ ತನ್ನ ಕರ್ಮವಶದಿಂದ ನಾನಾಯೋನಿಗಳಲ್ಲಿ ಸುತ್ತುತ್ತಿರುತ್ತಾನೆ. ಪುರ್ಯಷ್ಟಕಯುತರಾದವರು ವಿಶಿಷ್ಟವಾದ ಪುಣ್ಯಕ್ಕೆ ಪಾತ್ರರಾಗುತ್ತಾರಲ್ಲದೆ ಮಹೇಶ್ವರನ ಅನುಗ್ರಹದಿಂದ ಭೂಮಂಡಲದ ಪತಿಯ ಪದವಿಯನ್ನು ಪಡೆಯುತ್ತಾರೆ.[೧೯೬]

ಸಕಲ ಜೀವಾತ್ಮನೂ ಸಹ ಪಕ್ವಕಲುಷ ಮತ್ತು ಅಪಕ್ವಕಲುಷ ಎಂಬ ಭೇದದಿಂದ ಎರಡು ವಿಧವಾಗುತ್ತಾನೆ. ಅವರಲ್ಲಿ ಪಕ್ವಕಲುಷರಾದ ಎಲ್ಲ ಜೀವಿಗಳನ್ನೂ ಪರಮೇಶ್ವರನು ತನ್ನ ಪರಿಪಾಕಾನುಗುಣಶಕ್ತಿಪಾತದಿಂದ ಮಂಡಲವೇ ಮೊದಲಾದ ೧೧೮ ಮಂತ್ರೇಶ್ವರರ ಪದವಿಗೆ ತಲುಪಿಸುತ್ತಾನೆ. ಆ ಪರಿಪಾಕಾಧಿಕ್ಯತೆಯಿಲ್ಲದಿರುವುದರಿಂದ ಶಕ್ತಿಯ ಉಪಸಂಹಾರವಾಗಿ ಪರಮೇಶ್ವರನು ಆಚಾರ್ಯಸ್ವರೂಪವನ್ನು ಹೊಂದಿ ದೀಕ್ಷೆಯನ್ನು ಅನುಗ್ರಹಿಸುವುದರಿಂದ ಮೋಕ್ಷವನ್ನುಂಟುಮಾಡುತ್ತದೆ. ಅಪಕ್ವಕಲುಷ ಸಕಲ ಜೀವಾತ್ಮರು ತಮ್ಮ ಕರ್ಮಾನುಸಾರವಾಗಿ ಸಾಂಸಾರಿಕ ಭೋಗಗಳನ್ನು ಅನುಭವಿಸುತ್ತಾ ಪರಮೇಶ್ವರನ ಆದೇಶಾನುಸಾರವಾಗಿ (ಸಂಸಾರ ಚಕ್ರದಲ್ಲಿ) ಅಲೆದಾಡುತ್ತಾರೆ.[೧೯೭]

ಪಶುವಿನ ಮೂರು ಅವಸ್ಥೆಗಳು

ಈ ಸಿದ್ಧಾಂತದಲ್ಲಿ ಮತ್ತೊಂದು ಪ್ರಕಾರದಿಂದ ಪಶುವಿನ ಕೇವಲ, ಸಕಲ ಮತ್ತು ಅಮಲ ಭೇದದಿಂದ ಮೂರು ಅವಸ್ಥೆಗಳನ್ನು ಅಂಗೀಕರಿಸಲಾಗಿದೆ.[೧೯೮] ಅವುಗಳಲ್ಲಿ ಮಾಯಾಭೋಗಗಳಲ್ಲಿ ರಂಜಿತನಾಗಿ ಮೋಹಗ್ರಸ್ತನೂ, ಕರ್ಮವಶದಿಂದ ಸಂಸಾರವೆಂಬ ಅರಣ್ಯದಲ್ಲಿ ಅಲೆದಾಡುತ್ತಾ ಯಾವ ಬಂಧಗಳಿಂದಲೂ ಬಂಧಿಸಲ್ಪಡದಿರುವುದರಿಂದ 'ಕೇವಲ' ಎಂದು ಕರೆಯಲ್ಪಡುತ್ತಾನೆ.[೧೯೯] ಕಲೆಯೇ ಮೊದಲಾದ ಬಂಧಗಳಿಂದ

---

೧೯೫. ಪುರ್ಯಷ್ಟಕ ಎಂದರೆ ಪ್ರತಿಯೊಬ್ಬ ಪುರುಷನಲ್ಲಿ ಶಾಶ್ವತವಾಗಿ ಇರುವ ಸೃಷ್ಟಿಯಿಂದ ಪ್ರಳಯದವರೆಗೆ ಅಥವಾ ಮೋಕ್ಷದವರೆಗೆ ಪೃಥ್ವಿಯಿಂದ ಕಲಾಂತವಾದ ಮೂವತ್ತು ತತ್ತ್ವಗಳಿಂದ ಕೂಡಿರುವ ಅಸಾಧಾರಣವಾದ ಸೂಕ್ಷ್ಮಶರೀರ.

-ತತ್ತ್ವಪ್ರಕಾಶವೃತ್ತಿ, ಶ್ಲೋ.೧೨

೧೯೬. ತತ್ತ್ವಪ್ರಕಾಶಃ, ಶ್ಲೋ. ೧೧-೧೨

೧೯೭. ಅದೇ, ೧೩-೧೬

೧೯೮. ತ್ರ್ಯವಸ್ಥಃ ಪುರುಷಃ ಪ್ರೋಕ್ತಃ ಶುದ್ಧಃ ಸಕಲಃ ಕೇವಲಃ।
ಶುದ್ಧಾವಸ್ಥಾನಮಾತ್ಮಾನಂ ಶಿವರೂಪಮಿತಿ ಸ್ಮೃತಮ್॥ -(ಸುಪ್ರಭೇದಾಗಮ)

-ಲುಪ್ತಾಗಮಸಂಗ್ರಹ, ಭಾಗ-೨, ಉಪೋ. ಪು.೧೩೪

೧೯೯. ಕಲಾನಾಂ ನಿಲಯೋ ಯಸ್ಮಾತ್ ತೇನಾಸೌ ಕೇವಲಃ ಸ್ಮೃತಃ।

(ಸರ್ವಜ್ಞಾನೋತ್ತರ) -ಲು.ಸಂ.ಭಾಗ-೨, ಪು. ೧೩೫

ಬದ್ಧನಾದವರು ಸಕಲ ಜೀವಾತ್ಮನು.[೨೦೦] ಈ ಸಕಲಾವಸ್ಥೆಯಲ್ಲಿರುವ ಜೀವಾತ್ಮನು ನಾನು ಕಲಾದಿ ಬಂಧಗಳಿಂದ ಬದ್ಧನು ಎಂದು ತಿಳಿಯುತ್ತಾನೆ ಮತ್ತು ಬಂಧ-ಮೋಕ್ಷಗಳನ್ನು ಬಯಸುತ್ತಾನೆ. ದೀಕ್ಷಾಸಂಸ್ಕಾರದಿಂದ ಕಲಾದಿ ಬಂಧನಗಳಿಂದ ಮುಕ್ತನಾದವನು ಅಮಲ ಜೀವಾತ್ಮ ಎನಿಸುತ್ತಾನೆ. ಪರಿಶುದ್ಧನಾದ ಈ ಜೀವಾತ್ಮನು ಶಿವನಿಗೆ ಸಮಾನ ರೂಪವಾದ ಮೋಕ್ಷವನ್ನು ಪಡೆಯುತ್ತಾನೆ.[೨೦೧]

ವೀರಶೈವ-ಸಿದ್ಧಾಂತಶೈವಗಳ ಜೀವಾತ್ಮ ಸ್ವರೂಪ ವಿಮರ್ಶೆ

ಸಿದ್ಧಾಂತಶೈವದಲ್ಲಿ ಅಂಗೀಕೃತವಾಗಿರುವ ಪಶುಲಕ್ಷಣದಲ್ಲಿ ದೇಹ, ಇಂದ್ರಿಯಾದಿ ಭಿನ್ನತ್ವ, ಅನೇಕತ್ವ, ಸ್ವಾಭಾವಿಕಮಲಯುಕ್ತತ್ವ, ಕರ್ಮಕರ್ತೃತ್ವ, ಕರ್ಮಫಲಭೋಕ್ತೃತ್ವ, ಕಿಂಚಿಜ್‌ಜ್ಞತ್ವ, ಈಶ್ವರಪ್ರೇರಿತತ್ವ ಇತ್ಯಾದಿ ಧರ್ಮಗಳು ವೀರಶೈವರಿಂದಲೂ ಅಂಗೀಕೃತವಾಗಿವೆ ಎಂಬ ವಿಷಯದಲ್ಲಿ ಉಭಯದರ್ಶನಗಳ ಸಾಮ್ಯತೆಯು ಕಂಡುಬಂದರೂ ಸಹ ಅದರ ಪರಿಮಾಣದ ವಿಷಯದಲ್ಲಿ ವೈಷಮ್ಯವು ಕಂಡುಬರುತ್ತದೆ. ಸಿದ್ಧಾಂತಶೈವರು ಪರಿಮಾಣದಲ್ಲಿ ವ್ಯಾಪಕತ್ವವನ್ನು, ವೀರಶೈವರು ಅಣುಪರಿಮಾಣತ್ವವನ್ನು ಅಂಗೀಕರಿಸಿದ್ದಾರೆ. ಜೀವಾತ್ಮನ ವಿಭುತ್ವ, ಅನೇಕತ್ವಗಳ ಪ್ರತಿಪಾದನೆಗಿಂತಲೂ, ಅವನ ಅಣುತ್ವ, ಅನೇಕತ್ವಗಳನ್ನು ಪ್ರತಿಪಾದಿಸುವುದೇ ಉಚಿತವೆಂದು ತೋರುತ್ತದೆ.

ಜೀವಾತ್ಮನ ಅಣುಪರಿಮಾಣದ ವಿಮರ್ಶೆ

ಪರಮಾತ್ಮನ ಅಂಶನಾದ ಜೀವಾತ್ಮನ ಅಣುಪರಿಮಾಣತ್ವದ ವಿಷಯದಲ್ಲಿ ಶಿರಸ್ಸು, ಪಾದವೇ ಮೊದಲಾದವುಗಳಿಂದ ಬೇರೆಯಾದ ಸುಖ-ದುಃಖ ಜ್ಞಾನಗಳು ಹೇಗೆ ಉಂಟಾಗುತ್ತವೆ? ಎಂಬ ಪೂರ್ವಪಕ್ಷಕಾರರ ಆಕ್ಷೇಪಕ್ಕೆ ಹೀಗೆ ಸಮಾಧಾನ ಹೇಳಲಾಗಿದೆ. ಅದು ಹಾಗಲ್ಲ, ಮನೆಯ ಒಂದು ಕೋಣೆಯಲ್ಲಿರುವ ದೀಪದಿಂದ ಮನೆಯ ಒಳಗಡೆಯಿರುವ ಎಲ್ಲ ವಸ್ತುಗಳು ಹೇಗೆ ಕಾಣಿಸುತ್ತವೆಯೋ ಹಾಗೆಯೇ ಅಣುವಿನಿಂದಲೂ ಸಹ ಜೀವಾತ್ಮನು ತನ್ನ ಜ್ಞಾನಪ್ರಭೆಯಿಂದ ತನ್ನ ಶರೀರವನ್ನು ವ್ಯಾಪಿಸಿದ ಕಾರಣದಿಂದ ತನ್ನ ಅವಯವಗಳಿಂದ ಭಿನ್ನವಾದ ಸುಖ-ದುಃಖಾದಿಗಳ ಜ್ಞಾನವು ಅವಶ್ಯವಾಗಿ ಉಂಟಾಗುತ್ತದೆ. ಆದುದರಿಂದಲೇ ಶ್ರೀ ಸಿದ್ಧಾಂತ ಶಿಖಾಮಣಿಯು-

> ವಾಲಾಗ್ರಶತಭಾಗೇನ ಸದೃಶೋ ಹೃದಯಸ್ಥಿತಃ।
> ಅಶ್ನನ್ ಕರ್ಮಫಲಂ ಸರ್ವಮಾತ್ಮಾ ಸ್ಫುರತಿ ದೀಪವತ್॥[೨೦೨]

---

[೨೦೦] ತ್ರಿಮಲೈರ್ಬಧ್ಯತೇ ಚಾತ್ಮಾ ಸಕಲಃ ಪರಿವಾರಿತಃ।
ಸಕಲಶ್ಚೇತಿ ಬದ್ಧಾತ್ಮಾ ಸಂಸಾರೀ ವಿಷಯೀ ತಥಾ॥
(ಸುಪ್ರಭೇದಾಗಮ) -ಲು.ಸಂ, ಭಾಗ-೨, ಉಪೋ. ಪು.೧೩೫

[೨೦೧] ಸ ದೇಶಿಕಮನುಪ್ರಾಪ್ಯ ದೀಕ್ಷಾವಿಚ್ಛಿನ್ನಬಂಧನಃ।
ಪ್ರಯಾತಿ ಶಿವಸಾಯುಜ್ಯಂ ನಿರ್ಮಲೋ ನಿರುಪಪ್ಲವಃ॥
-ಲು.ಸಂ, ಭಾಗ-೨, ಉಪೋ, ಪು.೧೩೫

[೨೦೨] ಸಿ.ಶಿ, ೧೮.೬

"ಕೂದಲಿನ ಅಗ್ರಭಾಗದ ನೂರರಲ್ಲೊಂದು ಭಾಗಕ್ಕೆ ಸಮಾನವಾಗಿರುವ ಆತ್ಮನು ಸಮಸ್ತ ಪ್ರಾಣಿಗಳ ಹೃದಯದಲ್ಲಿದ್ದುಕೊಂಡು, ತನ್ನ ಕರ್ಮಫಲವನ್ನು ಅನುಭವಿಸುತ್ತ, ದೀಪದಂತೆ ಪ್ರಕಾಶಿಸುತ್ತಿರುವನು" ಎಂದು ಪ್ರತಿಪಾದಿಸಿದೆ.

ಮತ್ತು ಪೂಜ್ಯ ಬಾದರಾಯಣರೂ ಸಹ- "ಅವಿರೋಧಶ್ಚಂದನವತ್",[೨೦೩] "ಗುಣಾದ್ ವಾಽಽಲೋಕವತ್"[೨೦೪] ಎಂಬ ಸೂತ್ರಗಳಲ್ಲಿ ಶ್ರೀಗಂಧ ಮತ್ತು ಬೆಳಕಿನ ದೃಷ್ಟಾಂತಗಳ ಮೂಲಕ ಜೀವಾತ್ಮನು ಅಣುವಾಗಿದ್ದರೂ ಸಹ ತನ್ನ ಜ್ಞಾನಪ್ರಭೆಯಿಂದ ಸಮಸ್ತ ಶರೀರವನ್ನು ವ್ಯಾಪಿಸಿದ್ದಾನೆ ಎಂದು ಸಮರ್ಥಿಸಿದ್ದಾರೆ.

ಗುಣವು ಗುಣಿಯನ್ನು ಬಿಟ್ಟಿರಲಾರದಷ್ಟೆ. ವಸ್ತ್ರದಲ್ಲಿರುವ ಶುಕ್ಲ ಗುಣವು ವಸ್ತ್ರವನ್ನು ಬಿಟ್ಟು ಬೇರೆಡೆಗೆ ಇರುವುದು ಕಂಡುಬರುತ್ತದೆಯಲ್ಲವೆ? ಎಂದರೆ ಹಾಗಲ್ಲ. ಶುಕ್ಲಾದಿ ಗುಣಗಳು ತನ್ನ ದ್ರವ್ಯವಿರುದ್ಧ ಸ್ಥಳದಲ್ಲಿ ಇರಲಾರದೆ ಇದ್ದರೂ ಕೂಡ ಗಂಧ-ಪ್ರಕಾಶಗಳಲ್ಲಿ ಅದು ಸಂಭವಿಸುತ್ತದೆ. ರಸವೆಂಬ ಗುಣವು ನಾಲಿಗೆಯಿಂದ ಗ್ರಹಿಸಲ್ಪಡುತ್ತದೆ ಎಂದು ರೂಪಾದಿ ಗುಣಗಳೂ ಸಹ ನಾಲಿಗೆಯಿಂದಲೇ ಗ್ರಹಿಸಬೇಕೆಂದು ನಿಯಮವನ್ನು ಮಾಡಲು ಸಾಧ್ಯವಿಲ್ಲವಷ್ಟೆ. ಫಲ, ಬಲ ಕಲ್ಪನೆಗೆ ಸ್ವಭಾವವೇ ಶರಣು ಎಂಬ ಲೋಕಾನುಭವದ ರೀತ್ಯಾ ಪ್ರದೀಪಪ್ರಭೆಯಂತೆ ಜ್ಞಾನಪ್ರಭೆಯೂ ಶರೀರವ್ಯಾಪಕವಾಗಿರುತ್ತದೆ ಎಂದು ಅಂಗೀಕರಿಸುವುದರಿಂದ ಯಾವ ದೋಷವೂ ಬರುವುದಿಲ್ಲ. ಆದುದರಿಂದಲೇ- "ಆ ಲೋಮಭ್ಯ ಆ ನಖೇಭ್ಯಃ"[೨೦೫] (ಕೂದಲಿನಿಂದ ಉಗುರಿನವರೆಗೆ), "ಪ್ರಜ್ಞಯಾ ಶರೀರಂ ಸಮಾರುಹ್ಯ ಶರೀರೇಣ ಸುಖದುಃಖೇ ಆಪ್ನೋತಿ"[೨೦೬] (ಪ್ರಜ್ಞಾಸ್ವರೂಪದಿಂದ ಶರೀರವನ್ನು ತಲುಪಿ, ಶರೀರದಿಂದ ಸುಖದುಃಖಗಳನ್ನು ಅನುಭವಿಸುತ್ತಾನೆ) ಇತ್ಯಾದಿ ಶ್ರುತಿವಾಕ್ಯಗಳು ಜೀವಾತ್ಮನು ಚೈತನ್ಯಗುಣದಿಂದ ಸಮಸ್ತ ಶರೀರವನ್ನು ವ್ಯಾಪಿಸಿದ್ದಾನೆಂದು ತಿಳಿಸುತ್ತವೆ.

ಮತ್ತು ಜೀವಾತ್ಮನು ವಿಭುವೆಂದು ಯಾವಾಗಲೂ, ಎಲ್ಲಾ ಕಡೆಯೂ ಇರುವನೆಂದು ಒಪ್ಪಿಕೊಂಡರೆ ಅವನ ಉತ್ಕ್ರಾಂತಿ (ಮೇಲೇಳುವುದು), ಹೋಗುತ್ತಾನೆ, ಬರುತ್ತಾನೆ ಎಂದು ಪ್ರತಿಪಾದಿಸುವ ಶ್ರುತಿಗಳಿಗೆ ಅರ್ಥವೇ ಇಲ್ಲದಂತಹ ಪ್ರಸಂಗ ಉಂಟಾಗುತ್ತದೆ. ಶ್ರುತಿಗಳಲ್ಲಿ- "ತೇನ ಪ್ರದ್ಯೋತೇನೈಷ ಆತ್ಮಾ ನಿಷ್ಕ್ರಾಮತಿ ಚಕ್ಷುಷೋ ವಾ ಮೂರ್ಧ್ನೋ ವಾಽನ್ಯೇಭ್ಯೋ ವಾ ಶರೀರದೇಶೇಭ್ಯಃ"[೨೦೭] (ಆ ಜ್ಯೋತಿಯ ಸಹಾಯದಿಂದ ಈ ಆತ್ಮನು ಕಣ್ಣಿನ ಮೂಲಕ ಅಥವಾ ತಲೆಯ ಮೂಲಕ ಅಥವಾ ಯಾವುದಾದರೂ ಶರೀರ ದೇಶದ ಮೂಲಕ ನಿಷ್ಕ್ರಮಿಸುತ್ತಾನೆ) ಎಂಬುದರಿಂದ

---

೨೦೩. ಬ್ರಹ್ಮಸೂತ್ರ, ೨-೩-೨೨

೨೦೪. ಬ್ರಹ್ಮಸೂತ್ರ, ೨-೩-೨೪

೨೦೫. ಛಾ.ಉ, ೮-೮-೧

೨೦೬. ಕೌಷೀತಕೀ ಉಪನಿಷತ್, ೩.೬

೨೦೭. ಬೃ.ಉ, ೪-೪-೨

ಉತ್ಕ್ರಾಂತಿಯನ್ನು, "ಯೇ ವೈಕೆ ಚಾಸ್ಮಾಲ್ಲೋಕಾತ್ ಪ್ರಯಂತಿ ಚಂದ್ರಮಸಮೇವ ತೇ ಸರ್ವೇ ಗಚ್ಛಂತಿ"[೨೦೮] (ಈ ಲೋಕದಿಂದ ಯಾರು ಪ್ರಯಾಣ ಮಾಡುತ್ತಾರೋ ಅವರು ಚಂದ್ರಲೋಕವನ್ನೇ ಸೇರುವರು) ಎಂದು ಗತಿಯನ್ನೂ, "ತಸ್ಮಾಲ್ಲೋಕಾತ್ ಪುನರೈತ್ಯಸ್ಮೈ ಲೋಕಾಯ ಕರ್ಮಣೇ"[೨೦೯] (ಆ ಲೋಕದಿಂದ ಈ ಲೋಕಕ್ಕೆ ಹೊಸ ಕರ್ಮಕ್ಕಾಗಿ ಹಿಂತಿರುಗುತ್ತಾನೆ) ಎಂದು ಅಗತಿಯನ್ನೂ (ಆಗಮನವನ್ನು) ಜೀವಾತ್ಮನಿಗೆ ಪರಲೋಕಗಮನಾಗಮನಗಳನ್ನು ಹೇಳಿದೆ. ಅವನಿಗೆ (ಜೀವಾತ್ಮನಿಗೆ) ವಿಭುತ್ವವನ್ನು ಒಪ್ಪಿಕೊಂಡರೆ ಶರೀರ ವಿಯೋಗವು ಸಂಭವಿಸುವುದಿಲ್ಲ. ಪುರ್ಯಷ್ಟಕವೆಂದು ಬೇರೆ ಹೆಸರಿರುವ ಕಾರಣಶರೀರದ ಗಮನಾಗಮನದಿಂದ ಆತ್ಮನಲ್ಲಿ ಗಮನಾಗಮನವು ಉಪಚಾರದಿಂದ ಹೇಳಿದೆಯೆನ್ನುವಂತಿಲ್ಲ. "ತಮುತ್ಕ್ರಾಮಂತಂ ಪ್ರಾಣೋಽನೂತ್ಕ್ರಾಮತಿ"[೨೧೦] (ಉತ್ಕ್ರಮಿಸುತ್ತಿರುವ ಅವನನ್ನು ಅನುಸರಿಸಿ ಪ್ರಾಣವೂ ಉತ್ಕ್ರಮಿಸುತ್ತದೆ) ಎಂಬ ಶ್ರುತಿಯಂತೆ ಮೊದಲು ಜೀವನ ಗಮನ, ಅನಂತರ ಆ ಪ್ರಾಣಪದದಿಂದ ಉಪಲಕ್ಷಿತವಾದ ಕಾರಣಶರೀರದ ಗಮನವನ್ನು ಹೇಳಿದೆ. ಆದುದರಿಂದಲೇ-

ದ್ವಾವಿಮೌ ಪುರುಷೌ ಲೋಕೇ ಸೂರ್ಯಮಂಡಲಭೇದಿನೌ।
ಪರಿವ್ರಾಡ್ ಯೋಗಯುಕ್ತಶ್ಚ ರಣೇ ಚಾಭಿಮುಖೋ ಹತಃ॥[೨೧೧]

"ಇಬ್ಬರು ಪುರುಷರು ಸೂರ್ಯಮಂಡಲಭೇದಿಗಳು. ಅವರು ಯೋಗಯುಕ್ತನಾದ ಪರಿವ್ರಾಟ್ (ಸನ್ಯಾಸಿ) ಮತ್ತು ರಣರಂಗದಲ್ಲಿ ಅಭಿಮುಖನಾಗಿ ಮರಣ ಹೊಂದುವನು" ಎಂದು ಜೀವಾತ್ಮನೇ ಸೂರ್ಯಮಂಡಲವನ್ನು ಭೇದಿಸುವವನು ಎಂದು ಸ್ಮೃತಿಯಿದೆ. ಆದುದರಿಂದ "ಏಷೋಽಣುರಾತ್ಮಾ ಚೇತಸಾ ವೇದಿತವ್ಯಃ"[೨೧೨] (ಯಾವುದರಲ್ಲಿ ಈ ಅಣುವಾದ ಆತ್ಮವು ಚೇತಸ್ಸಿನಿಂದ ತಿಳಿಯಲ್ಪಡತಕ್ಕವನು), "ಅಂಗುಷ್ಠಮಾತ್ರಃ ಪುರುಷೋಽಂತರಾತ್ಮಾ"[೨೧೩] (ಪುರುಷರ ಅಂತರಾತ್ಮವು ಹೆಬ್ಬೆರಳಿನಷ್ಟಿರುವುದು) ಇತ್ಯಾದಿ ಶ್ರುತಿಸಮ್ಮತವಾದ ಅಣುತ್ವವನ್ನೇ ಜೀವಾತ್ಮನಿಗೆ ಅಂಗೀಕರಿಸಬೇಕು. "ಸ ವಾ ಏಷಾ ಮಹಾಜನ ಆತ್ಮಾ"[೨೧೪] (ಆ ಇವನೇ ಮಹಾನ್ ಆದ ಜನ್ಮರಹಿತನಾದ ಆತ್ಮನು), "ಆಕಾಶವತ್ ಸರ್ವಗತಂ ಸುಸೂಕ್ಷ್ಮಮ್"[೨೧೫] (ಆಕಾಶದಂತೆ ಸರ್ವಗತನಾದ ಅವನು

---

[೨೦೮] ಕೌಶೀತಕೀ ಉಪನಿಷತ್, ೧.೨

[೨೦೯] ಬೃ.ಉ, ೪-೪-೬

[೨೧೦] ಬೃ.ಉ, ೪-೪-೨

[೨೧೧] ಪಾರಾಶರಸ್ಮೃತಿ, ೨.೩೨

[೨೧೨] ಮುಂಡ, ೩-೧-೯

[೨೧೩] ಕಠೋಪನಿಷತ್, ೨-೬-೧೭

[೨೧೪] ಬೃ.ಉ, ೪-೪-೨೨

[೨೧೫] ಶಾಂಡಿಲ್ಯೋಪನಿಷತ್, ೨-೧-೩

ಅತ್ಯಂತ ಸೂಕ್ಷ್ಮವಾಗಿರುವನು) ಇತ್ಯಾದಿ ವಿಭುತ್ವವನ್ನು ಹೇಳುವ ಶ್ರುತಿವಾಕ್ಯಗಳೂ ಸಹ ಪರಮಾತ್ಮನ ಪರವೆಂದು ತಿಳಿಯಬೇಕು.[೨೧೬] ಈ ರೀತಿಯಾಗಿ ಜೀವಾತ್ಮನ ಅಣುತ್ವದಿಂದಲೇ ಅವನ ನಿತ್ಯತ್ವ ಮತ್ತು ಪ್ರತಿಯೊಂದು ಶರೀರದಲ್ಲಿನ ಭಿನ್ನತ್ವವು ಸಂಭವಿಸುತ್ತದೆ. ಆದುದರಿಂದ ಶಕ್ತಿವಿಶಿಷ್ಟಾದ್ವೈತವೇದಾಂತವೆಂದು ಕರೆಯಲಾಗುವ ವೀರಶೈವ ಸಿದ್ಧಾಂತದಲ್ಲಿ ಜೀವಾತ್ಮನ ಅಣುತ್ವವನ್ನು ಅಂಗೀಕರಿಸಿ ಬೇರೆ ಶರೀರಗಳಲ್ಲಿ ವ್ಯಾಪಿಸಿರುವ ಅವನ ಜ್ಞಾನಪ್ರಭೆಯಿಂದ ಶರೀರಕ್ಕೆ ಸಂಬಂಧಿಸಿದ ಸುಖ-ದುಃಖಗಳ ಸಾಕ್ಷಾತ್ಕಾರವಾಗುತ್ತದೆಂದು ಸಿದ್ಧಮಾಡಲಾಯಿತು. ಆದುದರಿಂದ ಭೋಗಸಾಂಕರ್ಯ ನಿವಾರಣೆಗೋಸ್ಕರ, ಪ್ರಪಂಚದ ವೈಚಿತ್ರ್ಯದ ವ್ಯವಸ್ಥಾಪನೆಯ ಸಲುವಾಗಿ, ಊರ್ಧ್ವಗಮನ ಮತ್ತು ನಿಶ್ಚಲತೆ(ಅಗತಿ)ಗಳನ್ನು ನಿರ್ಣಯಿಸುವುದಕ್ಕೋಸ್ಕರ ಜೀವಾತ್ಮನ ಅಣುತ್ವವನ್ನು ಪ್ರತಿಪಾದಿಸುವ ಶಕ್ತಿವಿಶಿಷ್ಟಾದ್ವೈತಸಿದ್ಧಾಂತವೇ ತತ್ತ್ವಜ್ಞಾನಿಗಳಿಂದ ಬಹಳವಾಗಿ ಅಂಗೀಕೃತವಾಗಿದೆ ಎಂಬ ವಿಷಯದಲ್ಲಿ ಯಾವುದೇ ರೀತಿಯ ವಿವಾದಗಳಿರುವುದಿಲ್ಲ.

ಪಶುವಿನ ಭೇದ ವಿಮರ್ಶೆ

ಕಾಶ್ಮೀರಶೈವದರ್ಶನ ಮತ್ತು ಸಿದ್ಧಾಂತಶೈವದರ್ಶನಗಳಲ್ಲಿ ವಿಜ್ಞಾನಾಕಲ, ಪ್ರಲಯಾಕಲ ಮತ್ತು ಸಕಲ ಎಂದು ಪಶುವಿನ ಮೂರು ಬಗೆಯನ್ನು ನಿರೂಪಿಸಲಾಗಿದೆ. ಅವುಗಳಲ್ಲಿ ಆಣವಮಲದಿಂದ ಮಾತ್ರ ಕೂಡಿದವನು ವಿಜ್ಞಾನಾಕಲ, ಆಣವ-ಕಾರ್ಮಿಕ ಮಲಗಳಿಂದ ಕೂಡಿರುವ ಜೀವಾತ್ಮನು ಪ್ರಲಯಾಕಲ ಮತ್ತು ಮಲ, ಮಾಯೆ ಮತ್ತು ಕರ್ಮಗಳೆಂಬ ಬಂಧತ್ರಯಗಳಿಂದ ಕೂಡಿದವನು ಸಕಲ ಎನಿಸುತ್ತಾನೆ. ಪಕ್ವಮಲ, ಅಪಕ್ವಮಲ ಎಂದು ವಿಜ್ಞಾನಕಲಾದಿಗಳು ಮತ್ತೆ ಎರಡು ವಿಧವೆಂದು ಪ್ರತಿಪಾದಿಸಲಾಗಿದೆ. ಹೀಗೆ ಸ್ಥೂಲವಾಗಿ ಮೂರು ಬಗೆಯ ಪಶುಗಳು, ಸೂಕ್ಷ್ಮವಾಗಿ ಆರು ವಿಧ ಪಶುಗಳಾಗಿ ತಿಳಿದುಬರುತ್ತವೆ.

ವೀರಶೈವ ಸಿದ್ಧಾಂತದಲ್ಲಿಯೂ ಸಹ 'ಅಂಗ' ಎಂದು ಕರೆಯಲ್ಪಡುವ ಜೀವಾತ್ಮನು ಯೋಗಾಂಗ, ಭೋಗಾಂಗ ಮತ್ತು ತ್ಯಾಗಾಂಗ ಎಂದು ಮೊದಲಿಗೆ ಮೂರು ವಿಧವಾಗಿಯೂ; ಮತ್ತೆ ಯೋಗಾಂಗವು ಐಕ್ಯ, ಶರಣ ಎಂದೂ; ಭೋಗಾಂಗವು ಪ್ರಾಣಲಿಂಗಿ, ಪ್ರಸಾದಿ ಎಂತಲೂ ಮತ್ತು ತ್ಯಾಗಾಂಗವು ಮಾಹೇಶ್ವರ, ಭಕ್ತ ಎಂದು ಎರಡೆರಡು ಪ್ರಕಾರವೆಂದು ಹೇಳಿ ಜೀವಾತ್ಮನು ಆರು ವಿಧವೆಂದು ಮಾಯಿದೇವನು ನಿರೂಪಿಸಿದ್ದಾನೆ.[೨೧೭]

ಕಾಶ್ಮೀರಶೈವದರ್ಶನ ಮತ್ತು ಸಿದ್ಧಾಂತಶೈವದರ್ಶನಗಳಲ್ಲಿ ಮಲಗಳ ತಾರತಮ್ಯದಿಂದ ಮತ್ತು ಅವುಗಳ ಪಕ್ವತೆಯ ತಾರತಮ್ಯದಿಂದ ಪಶುಗಳ ವಿಭಾಗವನ್ನು

---

[೨೧೬] ಬ್ರಹ್ಮಸೂತ್ರ ಶ್ರೀಕರಭಾಷ್ಯ, ೨.೩, ೧೮-೧೯

[೨೧೭] ಅನುಭವಸೂತ್ರ, ೪.೩-೧೯

ಮಾಡಲಾಗಿದೆ. ವೀರಶೈವ ದರ್ಶನದಲ್ಲಾದರೋ ಭಕ್ತಿಯ ವೈಲಕ್ಷಣ್ಯದಿಂದ ಮತ್ತು ಉಪಾಸನೆಯ ತಾರತಮ್ಯದಿಂದ ಪಶುಗಳ ವಿಭಾಗವನ್ನು ಮಾಡಲಾಗಿದೆ. ಈ ಷಟ್‌ಸ್ಥಲಗಳ ಸ್ವರೂಪ ಮತ್ತು ಅವುಗಳ ಉಪಾಸನಾ ಪದ್ಧತಿಯನ್ನು 'ಷಟಸ್ಥಲಸೋಪಾನ' ವೆಂಬ ಈ ಗ್ರಂಥದ ಐದನೆಯ ಪರಿಚ್ಛೇದದಲ್ಲಿ ವಿಸ್ತಾರವಾಗಿ ನಿರೂಪಿಸಲಾಗಿದೆ.

ಪಶುವಿನ ಮೂರು ಅವಸ್ಥೆಗಳ ವಿಮರ್ಶೆ

ಸಿದ್ಧಾಂತಶೈವದರ್ಶನದಲ್ಲಿ ಕೇವಲ, ಸಕಲ ಮತ್ತು ಅಮಲ ಎಂದು ಮತ್ತೊಂದು ರೀತಿಯಿಂದ ಪಶುವಿನ ಮೂರು ಅವಸ್ಥೆಗಳನ್ನು ಹೇಳಲಾಗಿದೆ. ಅವುಗಳಲ್ಲಿ ಬಂಧನ ಬೋಧವಿಲ್ಲದ ತನ್ನ ಚೇತನಭಾವದ ಶೂನ್ಯತೆಯು ಕೇವಲ, ಬಂಧನ ಜ್ಞಾನದಿಂದ ಕೂಡಿ ಕಲಾದಿಬಂಧಧಿಂದ ಬದ್ಧವಾದದ್ದು ಸಕಲ ಮತ್ತು ದೀಕ್ಷಾಸಂಸ್ಕಾರದಿಂದ ಕಲೆ ಮೊದಲಾದ ಬಂಧನದಿಂದ ಮುಕ್ತವಾದದ್ದು ಅಮಲ ಎಂದು ಪಶುವಿನ ಮೂರು ಅವಸ್ಥೆಗಳು ವರ್ಣಿತವಾಗಿವೆ.[೨೧೮]

ವೀರಶೈವ ಸಿದ್ಧಾಂತದಲ್ಲಿಯೂ ಸಹ ಬದ್ಧ, ಶುದ್ಧ ಮತ್ತು ಮುಕ್ತ ಎಂದು ಜೀವಾತ್ಮನ ಮೂರು ಅವಸ್ಥೆಗಳಿವೆ. ಅವುಗಳಲ್ಲಿ ದೀಕ್ಷಾರಹಿತನೂ, ಶಿವಭಕ್ತಿರಹಿತನೂ ಮತ್ತು ಕರ್ತೃತ್ವಾಭಿಮಾನಿಯೂ ಆದ ಜೀವಾತ್ಮನು ಬದ್ಧ ಎನಿಸುತ್ತಾನೆ. ದೀಕ್ಷಾ ಸಂಸ್ಕಾರವನ್ನು ಪಡೆದು ಗುರು, ಲಿಂಗ, ಜಂಗಮಗಳಲ್ಲಿ ಕೈಂಕರ್ಯ ಭಕ್ತಿಯುಳ್ಳ, ಗುಣವಂತನಾದ, ರಾಗವರ್ಜಿತನಾದ ಮುಮುಕ್ಷು ಶುದ್ಧಜೀವ ಎನಿಸುತ್ತಾನೆ ಮತ್ತು ಶಿವನ ಆಕಾರವಾದ ಪರಾಕಾಶದಲ್ಲಿ ಮಗ್ನವಾದ ಚಿತ್ತವೃತ್ತಿಯುಳ್ಳವನು ಮುಕ್ತಜೀವ ಎಂದು ಕರೆಯಲ್ಪಡುತ್ತಾನೆ.[೨೧೯]

ಸಿದ್ಧಾಂತಶೈವದ ಕೇವಲ ಮತ್ತು ಸಕಲ ಎಂಬ ಜೀವಾತ್ಮರು ವೀರಶೈವಸಿದ್ಧಾಂತದ ಬದ್ಧ ಜೀವಾತ್ಮನ ಬದ್ಧತ್ವದ ವಿಷಯದಲ್ಲಿ ಸಾಮ್ಯವಿದ್ದರೂ ಸಹ ಬಂಧಸ್ವರೂಪದ

---

[೨೧೮] "ವಿಜ್ಞೇಯಃ ಸ ತ್ರಿಧಾವಸ್ಥಃ ಕೇವಲಃ ಸಕಲೋಽಮಲಃ" (ಸ್ವಾಯಂಭುವಾಗಮೇ)
-(ಲುಪ್ತಾಗಮಸಂಗ್ರಹಃ, ಭಾಗ-೨, ಉಪೋ. ಪು. ೧೩೪

[೨೧೯] ಬದ್ಧಶುದ್ಧಾದಿಭೇದೇನ ಜೀವತ್ರಯಮಿದಂ ಸ್ಮೃತಮ್।
ಗುರುದೀಕ್ಷಾವಿಹೀನಶ್ಚ ಶಿವಭಕ್ತಿವಿವರ್ಜಿತಃ॥
ಸ್ವಕರ್ತೃತ್ವಾಭಿಮಾನೀ ತು ಬದ್ಧಃ ಸ ಪಶುರುಚ್ಯತೇ।
ಗುರುದೀಕ್ಷಾಂ ಪರಾಂ ಲಬ್ಧ್ವಾ ಕೈಂಕರ್ಯತ್ರಯಸಂಯುತಃ॥
ಶಕ್ತ್ಯಾದಿಸದ್ಗುಣೋಪೇತೋ ಮುಮುಕ್ಷೂ ರಾಗವರ್ಜಿತಃ।
ಶಿವಾಧೀನಃ ಸುಧೀರ್ಭಕ್ತಃ ಶುದ್ಧಜೀವ ಇತಿ ಸ್ಮೃತಃ॥
ಶಿವಾಕಾರೇ ಪರಾಕಾಶೇ ಕೋಟಿಸೂರ್ಯಪ್ರಕಾಶಕೇ।
ವಿಲೀನಚಿತ್ತವೃತ್ತಿಸ್ತು ಮುಕ್ತಜೀವ ಇತಿ ಸ್ಮೃತಃ॥
-ಬ್ರಹ್ಮಸೂತ್ರ ಶ್ರೀಕರಭಾಷ್ಯ, ೨-೩-೪೬

ವಿಷಯದಲ್ಲಿ ವ್ಯತ್ಯಾಸವಿದೆ. ಅದೇ ರೀತಿಯಾಗಿ ಅಮಲಪಶು ಮತ್ತು ಮುಕ್ತಜೀವಾತ್ಮ ಇವರ ಮುಕ್ತಿಯ ವಿಷಯದಲ್ಲಿ ಐಕಮತ್ಯವಿದ್ದರೂ ಸಹ ಮುಕ್ತಿಸ್ವರೂಪದ ವಿಷಯದಲ್ಲಿ ದೊಡ್ಡ ವ್ಯತ್ಯಾಸವಿದೆ. ಕಾಶ್ಮೀರಶೈವ-ವೀರಶೈವರ ಬಂಧ-ಮೋಕ್ಷಗಳ ಸ್ವರೂಪದ ವಿಷಯದಲ್ಲಿ ಅತಿಶಯವಾದ ಸಾಮ್ಯವು ಇದ್ದರೂ ಸಹ ಅದ್ವೈತವಾದಿಗಳಾದ ಶೈವರು ಜ್ಞಾನವೇ ಮೋಕ್ಷಕ್ಕೆ ಸಾಧನವೆಂದೂ, ದ್ವೈತಾದ್ವೈತವಾದಿಗಳಾದ ವೀರಶೈವರು ಜ್ಞಾನ-ಕರ್ಮಗಳ ಸಮುಚ್ಚಯದಿಂದ ಮೋಕ್ಷವೆಂದು ತಮ್ಮ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಹೀಗೆ ಮೋಕ್ಷಸಾಧನೆಯ ವಿಷಯದಲ್ಲಿಯೂ ಸಹ ವ್ಯತ್ಯಾಸವಿದೆ. ಅದನ್ನು ಮುಂದೆ ಸ್ಪಷ್ಟಪಡಿಸಲಾಗುವುದು.

ವೀರಶೈವಸಿದ್ಧಾಂತದಲ್ಲಿ ಜೀವಾತ್ಮನ ಬಂಧ

ಶಕ್ತಿವಿಶಿಷ್ಟಾದ್ವೈತವೆಂಬ ಮತ್ತೊಂದು ಪರ್ಯಾಯ ನಾಮವುಳ್ಳ ವೀರಶೈವ ಸಿದ್ಧಾಂತದಲ್ಲಿ ಜೀವಾತ್ಮನ ಬಂಧ-ಮೋಕ್ಷಗಳು ವಿವಿಧ ಶಕ್ತಿಗಳ ಸಂಕೋಚ-ವಿಕಾಸವಾದಗಳಿಂದ ಪ್ರತಿಪಾದಿತವಾಗಿವೆ. ಅರ್ಥಾತ್ ಇಚ್ಛಾ, ಜ್ಞಾನ, ಕ್ರಿಯಾಶಕ್ತಿಗಳ ಸಂಕೋಚರೂಪ ಮಲತ್ರಯಗಳ ಆವೃತಿಯಿಂದ (ಮುಚ್ಚುವಿಕೆಯಿಂದ) ಬಂಧವು, ದೀಕ್ಷಾದಿ ಸಂಸ್ಕಾರಗಳಿಂದ ಆ ಮೂರು ಶಕ್ತಿಗಳ ವಿಕಾಸವಾಗಲು ಮೋಕ್ಷ ಎಂಬುದು ಸಿದ್ಧಾಂತ. ಅದನ್ನು ಶ್ರೀ ರೇಣುಕ ಭಗವತ್ಪಾದರು ಹೀಗೆ ಹೇಳಿದ್ದಾರೆ:

ಜೀವತ್ವಂ ದುಃಖಸರ್ವಸ್ವಂ ತದಿದಂ ಮಲಕಲ್ಪಿತಮ್।
ನಿರಸ್ಯತೇ ಗುರೋರ್ಬೋಧಾತ್ ಜ್ಞಾನಶಕ್ತಿಃ ಪ್ರಕಾಶತೇ॥[೨೨೦]

“ಆಣವಾದಿ ಮಲಬದ್ಧವೂ, ದುಃಖಮಯವೂ ಆದ ಈ ಜೀವಭಾವವು ಶ್ರೀಗುರುವಿನ ಉಪದೇಶದಿಂದ ನಾಶವಾಗಿ ಜ್ಞಾನಶಕ್ತಿಯಾಗಿ ಪ್ರಕಾಶಿಸುವುದು.”

ಶಂಕರಶಾಸ್ತ್ರಿಗಳೂ ಸಹ- “ಸಂಕುಚಿತಶಕ್ತಿತ್ರಯರೂಪಮಲತ್ರಯನಿವೃತ್ತಿಃ ಶಕ್ತಿವಿಕಾಸರೂಪಶಿವತ್ವಪ್ರಾಪ್ತಿರ್ಮೋಕ್ಷಃ”[೨೨೧] (ಸಂಕುಚಿತವಾದ ಇಚ್ಛಾ, ಜ್ಞಾನ, ಕ್ರಿಯಾ ಎಂಬ ಮೂರು ಶಕ್ತಿಗಳ ರೂಪದ ಆಣವಾದಿ ಮಲತ್ರಯಗಳು ನಾಶವಾಗಿ ಶಕ್ತಿವಿಕಾಸ ರೂಪದ ಶಿವಭಾವದ ಪ್ರಾಪ್ತಿಯೇ ಮೋಕ್ಷ) ಎಂದಿದ್ದಾರೆ. ಆದುದರಿಂದ ಈ ಸಿದ್ಧಾಂತದ ಪ್ರಕಾರ ಬಂಧನಕಾರಕಗಳಾದ ಮಲತ್ರಯಗಳ ಸ್ವರೂಪ ಮತ್ತು ಅವುಗಳನ್ನು ನಿವಾರಣೆ ಮಾಡುವ ಉಪಾಯಗಳನ್ನು ಕುರಿತು ವಿಚಾರ ಮಾಡಲಾಗುವುದು.

ಮಲತ್ರಯ(ಪಾಶ)ಗಳ ಸ್ವರೂಪ

ಜೀವಾತ್ಮನ ಬಂಧನಕ್ಕೆ ಕಾರಣೀಭೂತಗಳಾದ ಆಣವಾದಿ ಮಲಗಳು ಆಗಮ ಶಾಸ್ತ್ರದಲ್ಲಿ ‘ಪಾಶ’ ಎಂದೂ ಸಹ ಕರೆಯಲಾಗಿದೆ. ಅವುಗಳಿಂದ ಆವೃತನಾಗಿರುವ ಕಾರಣದಿಂದಲೇ ಜೀವಾತ್ಮನು ‘ಪಶು’ವೆಂದು ಕರೆಯಲ್ಪಟ್ಟಿದ್ದಾನೆ. ವೀರಶೈವ ಸಿದ್ಧಾಂತದಲ್ಲಿ ಆಣವ, ಮಾಯೀಯ ಮತ್ತು ಕಾರ್ಮಿಕ ಎಂದು ಮೂರು ಬಗೆಯ

---

೨೨೦. ಸಿ.ಶಿ, ೧೮.೧೭

೨೨೧. ಈಶಾವಾಸ್ಯೋಪನಿಷತ್ ಶಾಂಕರೀ ವ್ಯಾಖ್ಯಾ, ಪು. ೨೪

ಮಲಗಳನ್ನು ಅಂಗೀಕರಿಸಲಾಗಿದೆ. ಆದುದರಿಂದಲೇ ಶ್ರೀ ಶಿವಾನುಭವ ಶಿವಾಚಾರ್ಯರು- "ಸ್ಥೂಲಚಿದಚಿದ್ರೂಪಶಕ್ತಿವಿಶಿಷ್ಟೋ ಜೀವಃ।... ಸ್ಥೂಲತ್ವಂ ಚ ಮಲತ್ರಯವಿಶಿಷ್ಟತ್ವಮ್"[೨೨೨] (ಜೀವಾತ್ಮನು ಸ್ಥೂಲಚಿದಚಿದ್ರೂಪಶಕ್ತಿವಿಶಿಷ್ಟನು... ಮತ್ತು ಸ್ಥೂಲತ್ವವು ಮಲತ್ರಯಗಳಿಂದ ವಿಶಿಷ್ಟವಾದುದು) ಎಂದು ಜೀವಾತ್ಮನ ಲಕ್ಷಣವನ್ನು ನಿರೂಪಿಸುವ ಸಂದರ್ಭದಲ್ಲಿ ಆತನು ಮಲತ್ರಯಗಳಿಂದ ಕೂಡಿದ್ದಾನೆ ಎಂದು ಪ್ರತಿಪಾದಿಸಿ ಮೂರು ಬಗೆಯ ಪಾಶಗಳನ್ನು ಸೂಚಿಸಿದ್ದಾರೆ.

೧. **ಆಣವಮಲ:** ಪರಶಿವನ ಇಚ್ಛಾಶಕ್ತಿಯ ಸಂಕೋಚವೇ ಆಣವಮಲ. ಈ ಮಲದಿಂದ ಆವೃತನಾದ ಜೀವಾತ್ಮನು ತನ್ನ ವಿಭುತ್ವ(ಸರ್ವಗತತ್ವ)ವನ್ನು ಮರೆತು 'ನಾನು ಅಪೂರ್ಣನಾಗಿದ್ದೇನೆ' ಎಂದು ತನ್ನನ್ನು ಅಣುತ್ವ (ಅಣುಭಾವದಿಂದ ಕೂಡಿದ್ದೇನೆ) ದಿಂದ ವ್ಯವಹರಿಸುತ್ತಾನೆ. ಇದನ್ನು ಶಿವಾದ್ವೈತದರ್ಪಣಕಾರರು- "ಅಸ್ಯಾಪ್ರತಿಹತ ಸ್ವಾತಂತ್ರ್ಯರೂಪೇಚ್ಛಾಶಕ್ತಿಃ ಸಂಕುಚಿತಾ ಸತೀ ಅಪೂರ್ಣಮನ್ಯತಾರೂಪಮಾಣವಮಲ ಮಿತ್ಯುಚ್ಯತೇ"[೨೨೩] ಎಂದು ವಿವರಿಸಿದ್ದಾರೆ.

೨. **ಮಾಯೀಯಮಲ :** ಪರಶಿವನ ಸಂಕುಚಿತವಾದ ಜ್ಞಾನಶಕ್ತಿಯೇ ಮಾಯೀಯಮಲವು. ಪರಶಿವನ ಅಪರಿಮಿತವಾದ ಜ್ಞಾನವು ಸಂಕುಚಿತವಾಗಲು ಬಂಧನಕಾರಕವಾಗಿ ಪರಿಣಮಿಸುತ್ತದೆ. ಆದುದರಿಂದಲೇ ಜೀವಾತ್ಮನು 'ಕಿಂಚಿಜ್ಜ್ಞ' ಎನಿಸುತ್ತಾನೆ. ಈ ಮಾಯೀಯಮಲದ ಆವರಣದಿಂದ ಜೀವಾತ್ಮನು ತನ್ನನ್ನು ಪರಶಿವನಿಂದ ಬೇರೆಯಾದವನೆಂದು ತಿಳಿದು ಶರೀರ, ಇಂದ್ರಿಯ ಮತ್ತು ಬುದ್ಧಿ ಮೊದಲಾದವುಗಳಲ್ಲಿ 'ನಾನು' (ಅಹಂ) ಎಂದೂ; ಹೆಂಡತಿ, ಮಕ್ಕಳು, ಮನೆ ಮೊದಲಾದವುಗಳನ್ನು 'ನನ್ನದು' (ಮಮ) ಎಂದೂ ವ್ಯವಹರಿಸುತ್ತಾನೆ. ಇದರ ಲಕ್ಷಣವನ್ನು ಶಿವಾದ್ವೈತದರ್ಪಣದಲ್ಲಿ ಹೀಗೆ ನಿರೂಪಿಸಲಾಗಿದೆ- "ಜ್ಞಾನಶಕ್ತಿಃ ಸಂಕುಚಿತಾ ಸತೀ ಸರ್ವಜ್ಞತ್ವಸ್ಯ ಕಿಂಚಜ್ಞತ್ವಾಪ್ತೇಃ ಅಂತಃಕರಣಬುದ್ಧೀಂದ್ರಿಯ ಸಂಬಂಧವಶಾದ್ ಭೇದವೇದ್ಯ ಪ್ರಥಾರೂಪಂ ಮಾಯೀಯಮಲಮಿತ್ಯುಚ್ಯತೇ."[೨೨೪]

೩. **ಕಾರ್ಮಿಕಮಲ:** ಪರಶಿವನ ಸಂಕುಚಿತ ಕ್ರಿಯಾಶಕ್ತಿಯೇ ಕಾರ್ಮಿಕಮಲ ಎನಿಸುತ್ತದೆ. ಇದು ಜನ್ಮಾಂತರದ (ವಾಸನಾ) ಶುಭಾಶುಭ ವಿಷಯವನ್ನು ಸ್ಮರಣೆಗೆ ತರುವಂತಹದ್ದಾಗಿದೆ. ಈ ವಾಸನಾಬಲದಿಂದ ಶುಭಾಶುಭ ಕರ್ಮಗಳನ್ನು ಮಾಡುತ್ತಾ ಅವುಗಳ ಫಲರೂಪ ಸುಖ-ದುಃಖಗಳನ್ನು ಅನುಭವಿಸುತ್ತಾ ದೇವತೆ, ಪಶು-ಪಕ್ಷಿ, ಮನುಷ್ಯಾದಿ ನಾನಾ ಯೋನಿಗಳಲ್ಲಿ ಜೀವಾತ್ಮನು ಅಲೆದಾಡುತ್ತಿರುತ್ತಾನೆ.[೨೨೫] ಶಿವಾದ್ವೈತ ದರ್ಪಣವು ಕಾರ್ಮಿಕಮಲದ ಸ್ವರೂಪವನ್ನು ಹೀಗೆ ಹೇಳಿದೆ- "ಕ್ರಿಯಾಶಕ್ತಿಃ ಸಂಕುಚಿತಾ

---

[೨೨೨] ಶಿವಾದ್ವೈತದರ್ಪಣಮ್, ಪು. ೨೨

[೨೨೩] ಶಿವಾದ್ವೈತದರ್ಪಣಮ್, ಪು. ೩೫

[೨೨೪] ಶಿವಾದ್ವೈತದರ್ಪಣಮ್, ಪು. ೩೫

[೨೨೫] ಚಕ್ರನೇಮಿಕ್ರಮೇಣೈವ ಭ್ರಮಂತಿ ಹಿ ಶರೀರಿಣಃ।
ಜಾತ್ಯಾಯುರ್ಭೋಗವೈಷಮ್ಯಕಾರಣಂ ಕರ್ಮಕೇವಲಮ್॥ -ಸಿ.ಶಿ, ೫.೪೫

ಸತೀ ಸರ್ವಕರ್ತೃತ್ವಸ್ಯ ಕಿಂಚಿತ್ಕರ್ತೃತ್ವಾಪ್ತೇಃ ಕರ್ಮೇಂದ್ರಿಯಸಂಬಂಧವಶಾತ್ ಶುಭಾಶುಭಾನುಷ್ಠಾನಮಯಕಾರ್ಮಮಲಮಿತ್ಯುಚ್ಯತೇ."[೨೨೬]

ಈ ರೀತಿಯಾಗಿ ಆಣವಮಲವು ಅಣುತ್ವಭಾವನೆಯನ್ನುಂಟುಮಾಡುವುದರಿಂದ, ಮಾಯೀಯಮಲವು ಅಖಂಡತೆಯ ಭಾವವನ್ನು ಮೊಟಕುಗೊಳಿಸಿ ಅಣುವಾದ ಅಂಶಕ್ಕೆ ದೇಹಸಂಬಂಧವನ್ನುಂಟುಮಾಡುವುದರಿಂದ ಮತ್ತು ಕಾರ್ಮಿಕ ಮಲವು ಶುಭಾಶುಭ ಕರ್ಮಕ್ಕೆ ಗುರಿಮಾಡುವುದರಿಂದ ಜೀವನಿಗೆ ಮೂರು ಮಲಗಳು ಬಂಧನ ಕಾರಣಗಳಾಗುತ್ತವೆ. ಈ ಮಲತ್ರಯಗಳು ಅನಾದಿಯಾದವುಗಳು. ಆದುದರಿಂದ ಶಿವನು ಸ್ವಾಭಾವಿಕವಾಗಿ ಪರಿಪೂರ್ಣನಾಗಿದ್ದು ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿಗಳಿಂದ ಹೇಗೆ ವಿಶಿಷ್ಟನಾಗುವನೋ ಹಾಗೆಯೇ ಜೀವಾತ್ಮನೂ ಸಹ ಈ ಮೂರು ಶಕ್ತಿಗಳ ಸಂಕೋಚದಿಂದ ಕೂಡಿರುವ ಆಣವ, ಮಾಯೀಯ ಮತ್ತು ಕಾರ್ಮಿಕ ಎಂಬ ಮಲತ್ರಯಗಳಿಂದ ಸಹಜವಾಗಿ ಆವೃತನಾಗಿದ್ದಾನೆ. ಆದುದರಿಂದ ಜೀವಾತ್ಮನು ಸ್ವಾಭಾವಿಕವಾಗಿ ಪರಮಾತ್ಮನಿಗಿಂತ ಭಿನ್ನನು. ಆ ಕಾರಣದಿಂದ ಹೇಗೆ ಶಿವನು ಸತ್ಯವೋ ಅಂತೆಯೇ ಜೀವನೂ ಸತ್ಯ ಎಂದು ಸಂಸಾರದಶೆಯಲ್ಲಿ ಅವರಿಬ್ಬರ ಭೇದವು ಸುಳ್ಳಾಗಿರದೆ ವಾಸ್ತವಿಕವೇ ಆಗಿದೆ. ಮುಕ್ತಾವಸ್ಥೆಯಲ್ಲಿ ಅವರಿಬ್ಬರಿಗೂ ಅಭೇದವು ಕೂಡ ಸತ್ಯವೆಂದೇ ಅಂಗೀಕರಿಸಲಾಗಿದೆ. ಅದನ್ನು ಶ್ರೀಪತಿಪಂಡಿತರು ಹೀಗೆ ವಿವರಿಸಿದ್ದಾರೆ:

ಶಿವಃ ಸತ್ಯಂ ಜಗತ್ ಸತ್ಯಂ ಜೀವಃ ಸತ್ಯಂ ಸ್ವಭಾವತಃ।
ತೇಷಾಮಭೇದಃ ಸತ್ಯೋ ವಾ ಕ್ರಿಮಿಭ್ರಮರಯೋರಿವ॥[೨೨೭]

"ಶಿವ, ಜೀವ, ಜಗತ್ತು -ಈ ಎಲ್ಲವೂ ಸ್ವಾಭಾವಿಕವಾಗಿ ಸತ್ಯವು. ಕ್ರಿಮಿ-ಭ್ರಮರಗಳಂತೆ ಅವರ ಅಭೇದವೂ ಸತ್ಯವೇ ಆಗಿದೆ."

ಈ ರೀತಿಯಾಗಿ ಜೀವಾತ್ಮನ ಉಪಾಧಿಭೂತವಾದ ಮಲತ್ರಯವಿಶಿಷ್ಟ ಸ್ಥೂಲಚಿದಚಿದ್ರೂಪಶಕ್ತಿಯ ಆವರಣದ ಮಹಿಮೆಯಿಂದ ಕಿಂಚಿತ್‌ಕರ್ತೃತ್ವ, ಕಿಂಚಿಜ್‌ಜ್ಞತ್ವ, ಅಪೂರ್ಣತ್ವ, ಅನಿತ್ಯತ್ವ, ಅವ್ಯಾಪಕತ್ವ ರೂಪದ ಕಲೆ, ವಿದ್ಯೆ, ರಾಗ, ಕಾಲ, ನಿಯತಿ ಎಂಬ ಪಂಚಕಂಚುಕಗಳಿಂದ ಆವೃತನಾಗಿರುವ ಈ ಜೀವಾತ್ಮನು 'ಪುರುಷ' ಎಂದು ಕರೆಯಲ್ಪಟ್ಟಿದ್ದಾನೆ. ಅಂತೆಯೇ ಪರಶಿವನ ಉಪಾಧಿಭೂತವಾದ ಸೂಕ್ಷ್ಮಚಿಚ್ಛಕ್ತಿಯ ಪರಿಣಾಮರೂಪ ಶಕ್ತಿಯ ಔನ್ಮುಖ್ಯ[೨೨೮]ದ ಮಹಿಮೆಯಿಂದ ಸತ್ತ್ವ, ರಜಸ್, ತಮಸ್ ಎಂಬ ಮೂರು ಗುಣಗಳಿಂದ; ಬುದ್ಧಿ, ಅಹಂಕಾರ, ಮನಸ್ಸುಗಳೆಂಬ ತ್ರಿಕರಣಗಳಿಂದ; ಪಂಚಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯ, ಪಂಚತನ್ಮಾತ್ರ ಮತ್ತು ಪಂಚಮಹಾಭೂತಗಳಿಂದ ಕೂಡಿ ಸಂಸಾರಿ ಎಂದು ಹೇಳಲಾಗಿದೆ. ಅದನ್ನು ಶಿವಾದ್ವೈತದರ್ಪಣವು ಹೀಗೆ ನಿರೂಪಿಸಿದೆ:

---

[೨೨೬] ಶಿವಾದ್ವೈತದರ್ಪಣಮ್, ಪು. ೩೫

[೨೨೭] ಬ್ರಹ್ಮಸೂತ್ರ ಶ್ರೀಕರಭಾಷ್ಯ, ೨-೩-೪೦

[೨೨೮] ಔನ್ಮುಖ್ಯಶಕ್ತಿರ್ನಾಮ ವಿಕ್ಷೇಪಶಕ್ತಿರಿತಿ ವೇದ್ಯಮ್॥

ಮಲೋಪಹತಚೈತನ್ಯಂ ಕಲಾವಿದ್ಯಾಸಮಾಶ್ರಯಮ್।
ರಾಗೇಣ ರಂಜಿತಾತ್ಮಾನಂ ಕಾಲೇನ ಕಲಿತಂ ತಥಾ॥
ನಿಯತ್ಯಾ ಯಮಿತಂ ಭೂಯಃ ಪುಂಭಾವೇನೋಪಬೃಂಹಿತಮ್।
ಪ್ರಧಾನಾಶಯಸಂಪನ್ನಂ ಗುಣತ್ರಯಸಮನ್ವಿತಮ್॥
ಬುದ್ಧಿತತ್ತ್ವಸಮಾಸೀನಮಹಂಕಾರಸಮಾವೃತಮ್।
ಮನಸಾ ಬುದ್ಧಿಕರ್ಮಾಕ್ಷೈಸ್ತನ್ಮಾತ್ರೈಃ ಸ್ಥೂಲಭೂತಕೈಃ॥
ಸಂಯುತಂ ಜೀವಮಿತ್ಯಾಹುಃ ಸಂಸಾರಾವೃತಲಕ್ಷಣಮ್॥[೨೨೯]

"ಮಲತ್ರಯಗಳಿಂದ ಕಲುಷಿತವಾದ ಚೈತನ್ಯವುಳ್ಳ, ಕಲೆ ಮತ್ತು ಅವಿದ್ಯೆಗಳಿಗಾಶ್ರಯವಾದ, ರಾಗದಿಂದ ಪ್ರಭಾವಿತವಾದ ಸ್ವರೂಪವುಳ್ಳ, ಕಾಲದಿಂದ ಅಳೆಯಲ್ಪಡುವ, ನಿಯತಿಯಿಂದ ನಿಯಂತ್ರಿಸಲ್ಪಟ್ಟ ಮತ್ತೆ ಪುರುಷಭಾವದಿಂದ ಕೂಡಿಕೊಂಡ, ಗಣತ್ರಯಿಗಳಿಂದ ಕೂಡಿದ ಪ್ರಕೃತಿಯೇ ಆಶ್ರಯವಾದ, ಬುದ್ಧಿತತ್ತ್ವದಲ್ಲಿ ನಿಂತಿರುವ, ಅಹಂಕಾರದಿಂದ ಆವೃತವಾದ, ಮನಸ್ಸು, ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳಿಂದ, ಪಂಚತನ್ಮಾತ್ರಗಳಿಂದ (ಸೂಕ್ಷ್ಮಭೂತಗಳು) ಮತ್ತು ಪಂಚಸ್ಥೂಲಭೂತಗಳಿಂದ ಕೂಡಿಕೊಂಡಿರುವ ಜೀವಾತ್ಮನನ್ನು ಸಂಸಾರದಿಂದ ಆವರಿಸಲ್ಪಟ್ಟ ಸ್ವರೂಪವುಳ್ಳವನೆಂದು ಹೇಳುತ್ತಾರೆ." ಹೀಗೆ ಮಲತ್ರಯಗಳಿಂದ ಆವೃತನಾಗಿರುವುದರಿಂದಲೇ ಜೀವಾತ್ಮನು ಕಲಾದಿ ಭೂಮ್ಯಂತಗಳಾದ ಮೂವತ್ತು ತತ್ತ್ವಗಳಿಂದ ಕೂಡಿದವನಾಗಿ ದುಃಖತ್ರಯಗಳಿಂದ ಪೀಡಿತನಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

ಕಾಶ್ಮೀರಶೈವದರ್ಶನದಲ್ಲಿ ಪಾಶಸ್ವರೂಪ

ಕಾಶ್ಮೀರಶೈವಸಿದ್ಧಾಂತದಲ್ಲಿಯೂ ಸಹ ಆಣವಾದಿ ಮಲತ್ರಯಗಳನ್ನೇ ಪಾಶ ಶಬ್ದದಿಂದಲೇ ಕರೆಯಲಾಗಿದೆ. ಈ ಪಾಶಗಳಿಗೆ ಭಾಜನನಾಗಿರುವುದರಿಂದಲೇ ಜೀವಾತ್ಮನು ಪಶುವಾಗಿದ್ದಾನೆ. ಅದನ್ನು ಅಭಿನವಗುಪ್ತಾಚಾರ್ಯರು "ಪಶುರಾಣವ ಮಾಯೀಯಕಾರ್ಮಮಲಸ್ವಭಾವಾನಾಂ ಪಾಶಾನಾಂ ಭಾಜನಮ್"[೨೩೦] ಎಂದು ನಿರೂಪಿಸಿದ್ದಾರೆ. ಈಗ ಪಾಶತ್ರಯಗಳ ಸ್ವರೂಪವನ್ನು ನಿರೂಪಿಸಲಾಗುವುದು.

೧. **ಮಲ:** ಈ ಸಿದ್ಧಾಂತದ ಪ್ರಕಾರ ಮಲ ಶಬ್ದವು ಆಣವಮಲದ ಪರ್ಯಾಯವಾಗಿದೆ. "ಮಲಮಜ್ಞಾನಮಿಚ್ಛಂತಿ ಸಂಸಾರಾಂಕುರಕಾರಣಮ್"[೨೩೧] (ಸಂಸಾರಾಂಕುರಕ್ಕೆ ಕಾರಣವಾದ ಅಜ್ಞಾನವನ್ನು ಮಲವೆನ್ನುತ್ತಾರೆ), "ಅಖ್ಯಾತಿರೂಪಮಾಣವಂ ಮಲಮ್"[೨೩೨] (ಆಣವಮಲವು ಅಖ್ಯಾತಿರೂಪವಾದದ್ದು), "ಅಪೂರ್ಣಮನ್ಯತಾ ಚೇಯಂ ತಥಾರೂಪಾವಭಾಸನಮ್"[೨೩೩]

---

[೨೨೯] ಶಿವಾದ್ವೈತದರ್ಪಣಮ್, ಪು. ೩೫
[೨೩೦] ಪರಮಾರ್ಥಸಾರಃ, ಪು. ೪೬
[೨೩೧] ತಂತ್ರಾಲೋಕಃ, ೯.೧೨೦
[೨೩೨] ಪರಮಾರ್ಥಸಾರ ವಿವೃತಿ, ಪು. ೪೫
[೨೩೩] ತಂತ್ರಾಲೋಕಃ, ೯.೬೫

(ಅಪೂರ್ಣವೆಂದು ಅಭಿಮಾನಪಡುವ ಹಾಗಲ್ಲದಿದ್ದರೂ ಹಾಗೆ ತೋರುವುದು), "ಸ್ವಾತ್ಮಪ್ರಚ್ಛಾದನೇಚ್ಛೈವ ವಸ್ತುಭೂತಸ್ತಥಾ ಮಲಃ"[೨೩೪] (ತನ್ನ ಆತ್ಮನನ್ನು ಮುಚ್ಚುವ ಇಚ್ಛೆಯೇ ವಸ್ತುಭೂತವಾದ ಮಲವು) ಇತ್ಯಾದಿ ರೂಪಗಳಿಂದ ಆಣವಮಲದ ಸ್ವರೂಪವನ್ನು ವಿವರಿಸಲಾಗಿದೆ. ಇದರಿಂದ ಪರಮೇಶ್ವರನ ಉಲ್ಲಸಿತವಾದ ಸ್ವರೂಪ ಸ್ವಾತಂತ್ರ್ಯ ಮಾತ್ರವನ್ನು ಮುಚ್ಚುವ ತತ್ತ್ವವುಳ್ಳ, ಆತ್ಮ-ಅನಾತ್ಮಗಳಲ್ಲಿ ಅನ್ಯಥಾಭಿಮಾನವನ್ನುಂಟುಮಾಡುವ ಸ್ವಭಾವವುಳ್ಳ, ಅಪೂರ್ಣಜ್ಞಾನವೇ ಆಣವಮಲವೆಂದು ತಿಳಿದುಬರುತ್ತದೆ.[೨೩೫] "ಜ್ಞಾನಂ ಬಂಧಃ"[೨೩೬] (ಜ್ಞಾನವೇ ಬಂಧವು) ಎಂಬ ಶಿವಸೂತ್ರದಿಂದಲೂ ಅದರ ಸ್ವರೂಪವನ್ನು ತಿಳಿಸಿದೆ. ಈ ಸೂತ್ರಕ್ಕೆ ವ್ಯಾಖ್ಯಾನ ಮಾಡುವಾಗ- "ಅವನೇ ಶಿವಾಭೇದ ಎಂಬ ಹೆಸರುಳ್ಳ ಆತ್ಮನು ಅಜ್ಞಾನ ಸ್ವಭಾವದವನು, ಅಪೂರ್ಣನೆಂದು ಅಭಿಮಾನಾತ್ಮಕನಾದ ಆಣವಮಲತತ್ತ್ವದಿಂದ ಸಂಕುಚಿತ ಜ್ಞಾನಸ್ವರೂಪ ಆತ್ಮನು ಬಂಧನು"[೨೩೭] ಎಂದು ಕ್ಷೇಮರಾಜನು ಸಂಕುಚಿತಜ್ಞಾನವೇ ಬಂಧವೆಂದು ವಿವರಿಸಿದ್ದಾನೆ. ಕೃಷ್ಣದ್ವೈಪಾಯನ ವ್ಯಾಸರೂ ಕೂಡ-

> ಜ್ಞಾನಂ ಬಂಧ ಇತೀದಂ ತು ದ್ವಿತೀಯಂ ಸೂತ್ರಮೀಶಿತುಃ।
> ಜ್ಞಾನಮಿತ್ಯಾತ್ಮನಸ್ತಸ್ಯ ಕಿಂಚಿಜ್ಜ್ಞಾನಕ್ರಿಯಾತ್ಮಕಮ್॥[೨೩೮]

ಎಂದು ಸೂತ್ರದಲ್ಲಿ ಹೇಳಿರುವ 'ಜ್ಞಾನಂ' ಎಂಬುದಕ್ಕೆ ಕಿಂಚಿಜ್ಜ್ಞಾನವೆಂದೂ, ಅದಕ್ಕೆ ಸಂಕುಚಿತಾರ್ಥವನ್ನೇ ದೃಢಪಡಿಸಿದ್ದಾರೆ. ಜಯರಥನೂ ಸಹ- "ಪರಮೇಶ್ವರನು ಪೂರ್ಣಜ್ಞಾನಕ್ರಿಯಾತ್ಮಕವಾದ ಸ್ವಸ್ವರೂಪವನ್ನು ತನ್ನಿಚ್ಛೆಯಂತೆ ಮುಚ್ಚಿ ತನ್ನನ್ನು ಸಂಕುಚಿತವಾದವನಂತೆ ತೋರಿಸುತ್ತಿದ್ದಾನೆ. ಆದುದರಿಂದ ಸಂಕುಚಿತಜ್ಞಾನವೇ ಅವನ ರೂಪವೆಂದು ಎಲ್ಲೆಡೆಯೂ ಹೇಳಲ್ಪಟ್ಟಿದೆ"[೨೩೯] ಎಂದು ಅದನ್ನೇ ಸಮರ್ಥಿಸಿದ್ದಾರೆ. ತನ್ನ ಇಚ್ಛೆಯಿಂದ ಸ್ವಸ್ವರೂಪವನ್ನು ಮುಚ್ಚುತ್ತದೆ ಎಂಬುದರಿಂದ ಮಲ ಎಂದರೆ ಅದರ ಸಂಕುಚಿತ ಇಚ್ಛೆಯೇ ಆಗಿದೆ. ಆ ಸಂಕುಚಿತೇಚ್ಛೆಯಿಂದ ತನ್ನ ಜ್ಞಾನವನ್ನು ಮುಚ್ಚುವುದರಿಂದ ಜ್ಞಾನವೂ ಕೂಡ ಸಂಕುಚಿತವಾಗುತ್ತದೆ ಎಂದು ಅರ್ಥವಾಗುತ್ತದೆ. ಆದುದರಿಂದ ಇಲ್ಲಿ ಅಜ್ಞಾನವೆಂದರೆ ಸಂಕುಚಿತಜ್ಞಾನವೆಂದರ್ಥ. "ಪ್ರಧಾನಂ ಕಾರಣಂ ಪ್ರೋಕ್ತಮಜ್ಞಾನಾತ್ಮಾಣವೋ ಮಲಂ"[೨೪೦] (ಅಜ್ಞಾನಾತ್ಮ ಸ್ವರೂಪವಾದ ಆಣವಮಲವು

---

[೨೩೪] ತಂತ್ರಾಲೋಕಃ, ೯.೬೬

[೨೩೫] ಶಿವಸೂತ್ರ ವಿವೃತಿಟೀಕಾ, ಪು. ೧೧

[೨೩೬] ಶಿವಸೂತ್ರ, ೧.೨

[೨೩೭] ಶಿವಸೂತ್ರ ವಿವೃತಿ, ೧.೨

[೨೩೮] ಶಿವಪುರಾಣ, ೬.೧೬.೪೬-೩೭

[೨೩೯] ತಂತ್ರಾಲೋಕ ವಿವೃತಿ, ೯.೬., ಪು. ೬೦

[೨೪೦] ತಂತ್ರಾಲೋಕಃ, ೯.೧೪೨

ಪ್ರಧಾನ ಕಾರಣವೆಂದು ಹೇಳಿದೆ) ಎಂಬ ಅಭಿನವಗುಪ್ತರ ಮಾತಿನಂತೆ ಈ ಆಣವಮಲವೇ ಮಾಯೀಯ ಮತ್ತು ಕಾರ್ಮಮಲಕ್ಕೆ ಕಾರಣವಾಗುತ್ತದೆ ಎಂಬುದರಿಂದ ಇದು ಪ್ರಧಾನ ಪಾಶವಾಗಿದೆ. ಇದು ತಾದಾತ್ಮ್ಯವನ್ನು ಹೊಂದುವುದರಿಂದ ಶ್ರೇಷ್ಠವಾದ ಆವರಣವೆಂದು ಕರೆಯುತ್ತಾರೆ.[೨೪೧]

೨. **ಮಾಯೀಯಮಲ:** ಕಲೆಯಿಂದ ಮೊದಲ್ಗೊಂಡು ಭೂಮ್ಯಂತಗಳಾದ ತತ್ತ್ವಗಳಿಗೆ ಉಪಾದಾನಭೂತವಾದ ಪರಶಿವನ ಸ್ವಾತಂತ್ರ್ಯಶಕ್ತಿಯೇ ಮಾಯೆ. ಆದುದರಿಂದಲೇ "ಮೀಯತೇ ಪರಿಚ್ಛಿದ್ಯತೇ ಧರಾಂತಃ ಪ್ರಮಾತೃಪ್ರಮೇಯಪ್ರಪಂಚೋ ಯಯಾ ಸಾ ಮಾಯಾ" (ಭೂಮ್ಯಂತವಾದ ಪ್ರಮಾತೃ-ಪ್ರಮೇಯ ಪ್ರಪಂಚವು ಯಾವುದರಿಂದ ಊಹಿಸಲ್ಪಡುತ್ತದೆ ಮತ್ತು ಭೇದಿಸಲ್ಪಡುತ್ತದೆಯೋ ಅದು ಮಾಯೆ), "ವಿಶ್ವಮೋಹಕತಯಾ ವಾ ಮಾಯಾ" (ವಿಶ್ವಮೋಹಕವಾದ್ದರಿಂದ ಮಾಯೆಯೆಂದೂ) ಇತ್ಯಾದಿ ವ್ಯುತ್ಪತ್ತಿಗಳು ಸಂಭವಿಸುತ್ತವೆ. ಇದೇ ಮಾಯೆಯು ತನ್ನಿಚ್ಛೆಯಿಂದ ಪಶುಭಾವವನ್ನು ಹೊಂದಿದ ಶಿವನ ಸ್ವರೂಪವನ್ನು ಮುಚ್ಚಿರುವ ಆವರಣವು. ಈ ಮಾಯೆಯೇ ಮಾಯೀಯಮಲವೆಂದು ಕರೆಯಲ್ಪಟ್ಟಿದೆ. "ಭಿನ್ನವೇದ್ಯಪ್ರಥಾರೂಪಂ ಮಾಯೀಯಂ ಮಲಮ್"[೨೪೨] ಎಂಬ ಉಕ್ತಿಯಂತೆ ಮಾಯೀಯಮಲವು ಭೇದಜ್ಞಾನಕ್ಕೆ ಕಾರಣವಾಗಿದೆ. ಈ ರೀತಿಯಾಗಿ ಭೇದಜ್ಞಾನವನ್ನುಂಟುಮಾಡುವುದರ ಮೂಲಕ ಮಾಯೆಯು ಪಶುವನ್ನು ಹಿಂಸಿಸುತ್ತಿದೆ. "ಅಪೂರ್ಣತಾಪ್ರಥನೇನ ಮೀನಾತಿ ಹಿನಸ್ತೀತಿ ಮಾಯಾ"[೨೪೩] ಎಂಬ ಮಾಯಾ ಶಬ್ದದ ವ್ಯುತ್ಪತ್ತಿಯಿಂದಲೂ ಸಹ ಅದೇ ಅರ್ಥವೇ ನಿರೂಪಿತವಾಗಿದೆ. ಈ ಪ್ರಕಾರವಾದ ಮಾಯಾಪರಿಗ್ರಹವಶದಿಂದ ಮಲಿನಜ್ಞಾನವುಳ್ಳ ಈ ಪಶುವು ಕಾಲ, ಕಲೆ, ನಿಯತಿ, ರಾಗ, ವಿದ್ಯೆ ಎಂಬ ಹೆಸರುಳ್ಳ ಪಂಚಕಂಚುಕಗಳಿಂದ ದೃಢವಾಗಿ ಬಂಧಿತನಾಗಿದ್ದಾನೆ. ಅದೇ ಮಾಯೆಯಿಂದ ಮೊದಲ್ಗೊಂಡು ವಿದ್ಯೆಯಿಂದ ಅಂತ್ಯವಾಗುವ ಆರು ಕಂಚುಕಗಳು ಅಕ್ಕಿಯ ಮೇಲಿರುವ ಸಿಪ್ಪೆಯಂತೆ ಪಶುವಿನ ಸೂಕ್ಷ್ಮವಾದ ಅಂತರಂಗದ ಆವರಣವಾಗುತ್ತದೆ.[೨೪೪] ಈ ಮಾಯೀಯ ಮಲಾವರಣದಿಂದ ಜೀವನು "ನಾನು, ನನ್ನದು" ಎಂಬ ಅಭಿಮಾನವುಳ್ಳವನಾಗಿದ್ದಾನೆ. ಆದುದರಿಂದಲೇ "ಶರೀರಂ ಭುವನಾಕಾರಂ ಮಾಯೀಯಂ ಪರಿಕೀರ್ತಿತಮ್" (ಶರೀರವು ಭುವನಾಕಾರವಾಗಿದ್ದು ಮಾಯೀಯ ಎಂದು ಕರೆಯಲ್ಪಟ್ಟಿದೆ) ಎಂದು ಹೇಳಿದೆ.

---

[೨೪೧] "ಪರಮಾವರಣಂ ಶಿವಸ್ಯೈತತ್" -ಪರಮಾರ್ಥಸಾರ, ಶ್ಲೋ. ೨೪

[೨೪೨] ಪ್ರತ್ಯಭಿಜ್ಞಾವಿಮರ್ಶಿನೀ, ಸೂತ್ರ-೯

[೨೪೩] ತಂತ್ರಸಾರಃ, ಪು. ೭೭, ಟಿಪ್ಪಣಿ. ೩೮

[೨೪೪] ಮಾಯಾಸಹಿತಂ ಕಂಚುಕಷಟ್ಕಮಣೋರಂತರಂಗಮಿದಮುಕ್ತಮ್।
-ಪರಮಾರ್ಥಸಾರ, ಶ್ಲೋ.೧೭

೩. ಕಾರ್ಮಿಕಮಲ: ಧರ್ಮಾಧರ್ಮಾತ್ಮಕಂ ಕರ್ಮ ಸುಖದುಃಖಾದಿ ಲಕ್ಷಣಮ್"[೨೪೫] (ಧರ್ಮಾಧರ್ಮಾತ್ಮಕವಾದ ಸುಖ-ದುಃಖಾದಿಗಳ ಲಕ್ಷಣವೇ ಕಾರ್ಮಿಕಮಲ) ಎಂಬ ಅಭಿನವಗುಪ್ತರ ಉಕ್ತಿಯಂತೆ ಸುಖ-ದುಃಖಗಳಿಗೆ ಕಾರಣೀಭೂತವಾದ ಧರ್ಮಾಧರ್ಮಾತ್ಮಕವಾದ ಕರ್ಮವೇ ಕಾರ್ಮಿಕಮಲ ಎನಿಸುತ್ತದೆ. ಈ ಮಲವು ಶುಭಾಶುಭವಾಸನಾರೂಪವುಳ್ಳದ್ದು. ಈ ವಾಸನಾಶಕ್ತಿ (ಜನ್ಮಜನ್ಮಾಂತರದ ಸ್ಮರಣೆ)ಯಿಂದ ಪ್ರೇರಿತನಾದ ಪಶುವು ಶುಭಾಶುಭಕರ್ಮಗಳನ್ನು ಮಾಡುತ್ತಾನೆ ಮತ್ತು ಅವುಗಳ ಭೋಗಕ್ಕೋಸ್ಕರ ಅವುಗಳಿಗನುರೂಪವಾದ ಶರೀರಗಳನ್ನು ಧರಿಸುತ್ತಾನೆ. ಶರೀರಧಾರಿಯಾಗಿ ಮತ್ತೆ ಕರ್ಮಗಳನ್ನು ಮಾಡುತ್ತಾನೆ. ಕಾರ್ಮಿಕಮಲದ ಕಾರ್ಯಭೂತವಾದ ಸ್ಥೂಲಶರೀರವನ್ನೂ ಸಹ ಕಾರ್ಮಿಕಮಲ ಎಂದೇ ವ್ಯವಹರಿಸಲಾಗುತ್ತದೆ. ಅದನ್ನು ಯೋಗರಾಜಾಚಾರ್ಯರು- "ಹೊರಗಿನ ಸಿಪ್ಪೆಯಂತಿರುವ ಪ್ರಕೃತಿಜನ್ಯವಾದ ಶರೀರದ ಇರುವಿಕೆಯ ಸ್ವರೂಪದ ಆವರಣವೇ ಸ್ಥೂಲ. ಅದು ಚರ್ಮ, ಮಾಂಸ ಮುಂತಾದ ರೂಪದಲ್ಲಿರುವುದರಿಂದ ಇದು ಮೂರನೆಯದಾದ ಕಾರ್ಮಿಕಮಲವು. ಅದರಿಂದ ಜೀವನು ಶುಭಾಶುಭಕರ್ಮ ಸಮೂಹಕ್ಕೆ ಆಶ್ರಯವಾಗುತ್ತಾನೆ." (ಬಾಹ್ಯಂ ತುಷಸ್ಥಾನೀಯಂ ಪ್ರಾಧಾನಿಕಂ ಶರೀರಸತ್ತಾ ಲಕ್ಷಣಮಾವರಣಂ ಸ್ಥೂಲಮ್, ತ್ವಙ್ಮಾಂಸಾದಿರೂಪತ್ವಾತ್। ಏಷಃ ತೃತೀಯಃ ಕಾರ್ಮೋ ಮಲಃ, ಯೇನ ಪ್ರಮಾತಾ ಶುಭಾಶುಭಕರ್ಮಸಂಚಯಭಾಜನಂ ಭವತಿ.)

ಈ ರೀತಿಯಾಗಿ ಕಾಶ್ಮೀರಶೈವದರ್ಶನದಲ್ಲಿ ಪರಶಿವನೇ ತನ್ನ ಲೀಲಾವಿನೋದ ಕ್ಕೋಸ್ಕರ ಮಲ, ಮಾಯಾ, ಕಾರ್ಮಿಕ ಎಂಬ ಪಾಶತ್ರಯಗಳಿಂದ ಆವೃತಶರೀರಿಯಾಗಿ ಪಶು ಎನಿಸಿದ್ದಾನೆ.

ಸಿದ್ಧಾಂತಶೈವದರ್ಶನದಲ್ಲಿ ಪಾಶಸ್ವರೂಪ

"ಪಶೂನಾಂ ಬಂಧಕಾಃ ಪಾಶಾಃ"[೨೪೬] (ಪಶುಗಳಿಗೆ ಬಂಧಕವಾಗಿರುವುದೇ ಪಾಶ) ಎಂಬ ಕುಮಾರದೇವನ ಉಕ್ತಿಯಂತೆ ಪಶುವಿನ ಬಂಧನಕ್ಕೆ ಕಾರಣವಾಗಿರುವಂತಹದ್ದು ಪಾಶ ಎಂದು ಕರೆಯಲ್ಪಟ್ಟಿದೆ. "ಅರ್ಥಪಂಚಕಂ ಪಾಶಃ"[೨೪೭] ಎಂಬ ಉಕ್ತಿಯಂತೆ ಸಿದ್ಧಾಂತಶೈವದರ್ಶನದಲ್ಲಿ ಪಾಶದ ಐದು ಬಗೆಗಳು ಪ್ರತಿಪಾದಿತವಾಗಿವೆ. ಅವುಗಳೆಂದರೆ- ಮಲ, ತಿರೋಧಾನಶಕ್ತಿ, ಮಹಾಮಾಯೆ, ಮಾಯೆ ಮತ್ತು ಕರ್ಮ ಎಂಬುದಾಗಿ. ಈಗ ಪಾಶಪಂಚಕಗಳ ಸ್ವರೂಪವನ್ನು ಕ್ರಮವಾಗಿ ತಿಳಿಯೋಣ.

---

೨೪೫. ತಂತ್ರಾಲೋಕಃ, ಭಾಗ-೬, ಪು. ೭೫

೨೪೬. ತತ್ತ್ವಪ್ರಕಾಶತಾತ್ಪರ್ಯ, ಶ್ಲೋ. ೧೭

೨೪೭. ಮಾಲಿನೀ ವಿಜಯೋತ್ತರಮ್, ೧.೨೩

೧. **ಮಲ:** ಈ ಸಿದ್ಧಾಂತದ ಪ್ರಕಾರ 'ಮಲ' ಶಬ್ದವು ಆಣವಮಲವನ್ನು ಸೂಚಿಸುತ್ತದೆ. ಇದು ಮೊದಲನೆಯ ಪಾಶವು. "ಮಲಿನೀಕರೋತಿ ದೃಕ್ಕ್ರಿಯಾತ್ಮಕಂ ತೇಜಃ ಪ್ರಚ್ಛಾದಯತೀತಿ ಮಲಃ" ಎಂಬ ನಿರ್ವಚನದಂತೆ ಜ್ಞಾನಶಕ್ತಿ ಮತ್ತು ಕ್ರಿಯಾ ಶಕ್ತಿಗಳನ್ನು ಮುಚ್ಚುವ ಅಜ್ಞಾನವೇ ಆಣವಮಲ. ಆದುದರಿಂದ "ಮಲಮಜ್ಞಾನಮಿಚ್ಛಂತಿ ಸಂಸಾರಾಂಕುರಕಾರಣಮ್"[೨೪೯] ಎಂಬ ಲಕ್ಷಣವು. ಇದು ಮಾಯಾಪಾಶದಂತೆ ಹೊಸದಾಗಿ ಬಂದದ್ದಾಗಿರದೆ, ಅನಾದಿಕಾಲದಿಂದಲೂ ಇರುವಂತಹದ್ದು. ಈ ಮಲವು ಚಕ್ಷುಪಟಲದಂತೆ ದ್ರವಸ್ವರೂಪವುಳ್ಳದ್ದು. ಈ ಮಲದ ನಿವೃತ್ತಿಯು ಪತಿ ಎಂಬ ವೈದ್ಯನ ಕ್ರಿಯೆಯಿಂದ ಸಾಧ್ಯವಾಗುವಂತಹದ್ದಾಗಿದೆ. ವೈದ್ಯನು ದೋಷವನ್ನು ನಿವಾರಿಸಲು ಚಕ್ಷುಃಪಟಲದ ಪಕ್ವತೆಯನ್ನು ಅಪೇಕ್ಷಿಸುವಂತೆ ಈಶ್ವರನ ವ್ಯಾಪಾರವೂ ಸಹ ಮಲದ ಪಕ್ವತೆಯನ್ನು ಬಯಸುತ್ತದೆ. ಆ ಪಕ್ವತೆಯು ಶೈವಾಗಮಗಳಲ್ಲಿ ನಿರೂಪಿತವಾಗಿರುವ ಕ್ರಿಯೆ, ಚರ್ಯೆ ಮತ್ತು ಯೋಗಾನುಷ್ಠಾನಗಳಿಂದ ಸಾಧ್ಯವಾಗುತ್ತದೆ.

೨. **ತಿರೋಧಾನಶಕ್ತಿ:** ಇದು ಎರಡನೆಯ ಪಾಶವು. ತಿರೋಧಾನಶಕ್ತಿಯನ್ನು ಪಾಶಗಳಲ್ಲಿ ಮಾತ್ರ ಪರಿಗಣಿಸಿರದೆ, ಪರಮೇಶ್ವರನ ಶಕ್ತಿಗಳಲ್ಲಿಯೂ ಒಂದೆಂದು ಪರಿಗಣಿಸಲಾಗಿದೆ. ಮುಖ್ಯವಾಗಿ ಇದು ಪರಮೇಶ್ವರನ ಶಕ್ತಿಯಾಗಿದೆ ಎಂಬ ಕಾರಣದಿಂದ ಇದರ ಪಾಶತ್ವವು ಕೇವಲ ಔಪಚಾರಿಕವಾಗಿದೆ. ಹೇಗೆಂದರೆ ಎಲ್ಲವನ್ನೂ ಅನುಗ್ರಹಿಸುವ, ಸಮಸ್ತ ಪ್ರಪಂಚವನ್ನು ಅನುಗ್ರಹಿಸುವ ಸ್ವಭಾವವುಳ್ಳ ಶಕ್ತಿಗೆ ಮುಖ್ಯವಾದ ಪಾಶತ್ವವು ಇರುವುದಿಲ್ಲ. ಆವರಣ ಶಕ್ತಿಯು ಮಲಪರಿಪಾಕವಾಗುವವರೆಗೆ ಮಾತ್ರ ತಿರೋಧಾನ ಸ್ವಭಾವವುಳ್ಳದ್ದಾಗಿದೆ. ಅನಂತರ ಜೀವವರ್ಗಗಳಿಗೆ ಸಂಕೋಚ-ವಿಕಾಸಕ್ಕೆ ಕಾರಣವಾಗಿರುವುದರಿಂದ ಅನುಗ್ರಾಹಕತ್ವವೂ ಇವಳಿಗೆ ಪ್ರಾಪ್ತವಾಗಿದೆ. ಇದೇ ಪರಮೇಶ್ವರನ ಶಕ್ತಿಯು ಮಲಪರಿಪಾಕವಾಗುವವರೆಗೆ ಅಚಿತ್‌ಸ್ವರೂಪದ ಮಲಕರ್ಮ ಮಾಯಾಕಾರ್ಯಗಳನ್ನು ನಡೆಸಿ ಜೀವಾತ್ಮನ ಚಿದ್ರೂಪತ್ವವನ್ನು ಮರೆಮಾಡುತ್ತದೆ. ಮತ್ತೆ ಪರಿಪಾಕದ ಅನಂತರ ಜೀವಾತ್ಮನನ್ನು ಅನುಗ್ರಹಿಸುತ್ತದೆ, ಪಾಶವನ್ನು ಮರೆಮಾಡುತ್ತದೆ ಎಂದು ಎಲ್ಲ ಚಿತ್ ಮತ್ತು ಅಚಿತ್‌ಗಳಿಗೆ ಅನುಗ್ರಹಿಸುವವಳಾದ ಕಾರಣ ಎಲ್ಲರಿಗೂ ಅನುಗ್ರಹಿಸುವವಳೂ ಆಗಿದ್ದಾನೆ. ಭೋಜದೇವನು ಹೀಗೆ ಹೇಳಿದ್ದಾನೆ:

> **ಪಾಶಾನುಗ್ರಾಹಿತ್ವಾತ್ ಪುರುಪತಿರೋಧಾಯಿಕಾ ವಿಭೋಃ ಶಕ್ತಿಃ।**
> **ಪಾಶತ್ವೇನಾಭಿಹಿತಾ ಪಾಶಾಶ್ಚ ಚತುರ್ವಿಧಾಸ್ತ್ವೇವಮ್॥**[೨೫೦]

"ಪಾಶಗಳಿಗೆ ಅನುಗ್ರಹಿಸುವ ಜೀವಾತ್ಮನ ಸ್ವರೂಪವನ್ನು ಮರೆಮಾಡುವ ಪರಮಾತ್ಮನ ಶಕ್ತಿಯು ಪಾಶವೆಂದು ಕರೆಯಲ್ಪಟ್ಟಿದೆ." ಇದರಿಂದ ಮುಖ್ಯಪಾಶಗಳು ನಾಲ್ಕು ವಿಧವೆಂದೂ ಸಹ ತಿಳಿಯುತ್ತದೆ.

---

[೨೪೯] ಶೈವದರ್ಶನಬಿಂದು, ೧೯-೨೦; ಲುಪ್ತಾಗಮಸಂಗ್ರಹ, ಭಾಗ-೨, ಉಪೋ. ಪು. ೧೩೬-೧೩೭

[೨೫೦] ಶೈ.ದ.ಬಿ, ಪು. ೨೦-೨೧; ಲು.ಸ, ಭಾಗ-೨, ಉಪೋ, ಪು. ೧೩೮-೧೩೯

೩. **ಮಹಾಮಾಯೆ:** 'ಬಿಂದು' ಎಂಬುದು ಮಹಾಮಾಯೆಯ ಮತ್ತೊಂದು ಹೆಸರು. ಇದು ಮೂರನೆಯ ಪಾಶ. ಬಿಂದುವು ಕೇವಲ ಪಾಶವಾಗಿರದೆ, ಶುದ್ಧ ಸೃಷ್ಟಿಯ ಉಪಾದಾನಕಾರಣವೂ ಆಗಿದೆ. ಇದರ ಪಾಶರೂಪಭಾವವನ್ನು ಪ್ರತಿಪಾದಿಸಲು ಸಿದ್ಧಾಂತಶೈವರ ಆಶಯವನ್ನು ಶ್ರೀ ಕಾಂತಿಚಂದ್ರಪಾಂಡೇಯ ಅವರು ಹೀಗೆ ನಿರೂಪಿಸಿದ್ದಾರೆ- "ಮಲಸ್ವರೂಪವಾದ ಬಿಂದುವಿಗೂ ಮೋಕ್ಷವಿಚಾರಧಾರೆಗೂ ಅತಿ ಹೆಚ್ಚಾದ ಸಂಬಂಧವಿದೆ. ಮೋಕ್ಷವು ಪರ ಮತ್ತು ಅಪರ ಎಂದು ಎರಡು ವಿಧ. ಮಾಯಾ ಮತ್ತು ಕಾರ್ಮಿಕವೆಂಬ ಎರಡು ಪಾಶಗಳಿಂದ ಮುಕ್ತನಾದ ಪಶುವು ಸರ್ವಥಾ ಮುಕ್ತರಾಗಿರದೆ ಆಣವ ಎಂಬ ಮತ್ತೊಂದು ಮಲದಿಂದ ಕೂಡಿರುತ್ತದೆ. ಆದುದರಿಂದ ಇದು ಪಶುವಿನ ಅಪರಮೋಕ್ಷ. ಸಿದ್ಧಾಂತಶೈವರು ಈ ಅಭಿಪ್ರಾಯವನ್ನು ಅಂಗೀಕರಿಸಿದ್ದಾರೆ. (ಕ) ಈ ಲೋಕದ ಮೇಲ್ಭಾಗದಲ್ಲಿ ಅನೇಕ ಲೋಕಗಳಿದ್ದು, ಕಾರ್ಮಿಕಾದಿ ಪಾಶಗಳಿಂದ ಬದ್ಧರಾದ ಜೀವರುಗಳು ಕರ್ಮಭೋಗಗಳನ್ನು ಅಲ್ಲಿ ಅನುಭವಿಸುತ್ತಾರೆ. (ಖ) ಮಾಯೆಯ ಊರ್ಧ್ವಭಾವಿಗಳಾದ ಐದು ಪದಾರ್ಥಗಳಿವೆ. ಅವುಗಳಲ್ಲಿ ಸದಾಶಿವ, ಈಶ್ವರ ಮತ್ತು ವಿದ್ಯೆ -ಈ ಮೂರನ್ನೂ ಪರಿಗಣಿಸಲಾಗಿದೆ. (ಗ) ಮಾಯೀಯ ಮತ್ತು ಕಾರ್ಮಿಕ ಎಂಬ ಎರಡು ಪಾಶಗಳಿಂದ ಮುಕ್ತರಾಗಿ, ಅನಾದಿ ಅವಸ್ಥೆಯ ಕಾರಣ ಉಳಿದಿರುವ ಆಣವಮಲವು ನಾಶವಾಗಲು ಕ್ರಮವಾಗಿ ವಿದ್ಯೆ, ಈಶ್ವರ ಮತ್ತು ಸದಾಶಿವ ಎಂಬ ಮೂರು ತತ್ತ್ವಗಳನ್ನು ಅನುಭವಿಸುತ್ತ ಮಾಯೀಯ ಲೋಕದ ಮೇಲು ಮೇಲಿನ ಮೂರು ಲೋಕಗಳಲ್ಲಿ ಕ್ರಮವಾಗಿ ವಾಸಿಸುತ್ತಾರೆ. ಅವರು ಕ್ರಮವಾಗಿ ಮಂತ್ರ, ಮಂತ್ರೇಶ ಮತ್ತು ಮಂತ್ರಮಹೇಶ ಎಂದು ಕರೆಯಲ್ಪಡುತ್ತಾರೆ. ಇವರ ಶರೀರಾದಿಗಳಿಗೆ ಬಿಂದು ಉಪಾದಾನಕಾರಣವಾಗಿದೆ. ಈ ಪ್ರಕಾರವಾಗಿ ಈ ಪ್ರಕರಣಗಳಲ್ಲಿ ಬಿಂದು ಉಪಾದಾನ ಸ್ವರೂಪದಿಂದ ಸೃಷ್ಟಿಗೆ ಕಾರಣವೆಂದು ವ್ಯಾಖ್ಯಾನಿಸಲಾಯಿತು. ಆದರೆ ಎಲ್ಲಿಯವರೆಗೆ ಬಿಂದುವಿನ ಕಾರಣದಿಂದ ಶರೀರದಿಂದ ಮುಕ್ತಿಯಾಗುವುದಿಲ್ಲವೋ ಅಲ್ಲಿಯವರೆಗೆ ಪರಮೋಕ್ಷವಿರುವುದಿಲ್ಲ. ಆದುದರಿಂದ ಬಿಂದುವು ಮಲತ್ವದಿಂದ ಕೂಡಿದೆ ಎಂದು ಹೇಳಲ್ಪಟ್ಟಿದೆ"[೨೫೧] ಎಂದು. ಈ ರೀತಿಯಾಗಿ ಕಾರಣದಿಂದ ಬಿಂದುಯುಕ್ತವಾದ ಶರೀರವು ಪರಮೋಕ್ಷಕ್ಕೆ ವಿಘ್ನವಾಗಿದೆ ಎಂಬ ಕಾರಣದಿಂದ ಬಿಂದುವನ್ನು ಪಾಶವೆಂದು ಸಿದ್ಧಾಂತಶೈವರು ಪರಿಗಣಿಸಿದ್ದಾರೆ.

೪. **ಮಾಯೆ:** ಇದು ನಾಲ್ಕನೆಯ ಪಾಶವು. ಅಶುದ್ಧ ಸೃಷ್ಟಿಗೆ ಸಂಬಂಧಿಸಿರುವ ಕಲಾ, ಭುವನ, ಸೂಕ್ಷ್ಮ, ಸ್ಥೂಲಶರೀರಗಳ ಉಪಭೋಗಕ್ಕೆ ಮಾಯೆಯು ಉಪಾದಾನ ಕಾರಣವಾಗಿದೆ. "ಮಯತ್ಯಸ್ಮಾಜ್ಜಗತ್ ಸರ್ವಂ ತೇನ ಮಾಯಾ ಪ್ರಕೀರ್ತಿತಾಃ"[೨೫೨] (ಈ ಜಗತ್ತೆಲ್ಲವೂ ಅದರಿಂದ ಕೂಡಿರುವುದರಿಂದ ಮಾಯೆ ಎನಿಸಿದೆ),

---

[೨೫೧] ಶೈವದರ್ಶನಬಿಂದುಃ, ಪು. ೨೧

[೨೫೨] ಲುಪ್ತಾಗಮಸಂಗ್ರಹ, ಭಾಗ-೨, ಉಪೋ. ಪು. ೧೪೪

"ತದ್ಭಾವಭಾವಿನೋ ಭಾವಾಃ ಸರ್ವೇ ಮಾಯಾತ್ಮಕಾಃ ಪಶೋಃ"[೨೫೩] (ಅದರ ಭಾವದಿಂದ ಕೂಡಿರುವುದರಿಂದ ಎಲ್ಲ ಪಶುಗಳೂ ಮಾಯಾತ್ಮಕವಾಗಿವೆ) ಇತ್ಯಾದಿ ಪೌಷ್ಕರ, ಸ್ವಾಯಂಭುವ ಮೊದಲಾದ ಆಗಮೋಕ್ತಿಗಳಿಂದ ಮಾಯೆಯ ಉಪಾದಾನಕಾರಣವು ಪ್ರತಿಪಾದಿತವಾಗಿದೆ. ಈ ಸಿದ್ಧಾಂತದಲ್ಲಿ ಪರಮಾಣು ಮೊದಲಾದವುಗಳ ಉಪಾದಾನತ್ವವನ್ನು ತಿರಸ್ಕರಿಸಿ, ಮಾಯಾತತ್ತ್ವವೇ ಉಪಾದಾನ ಕಾರಣವೆಂದು ನಿರೂಪಿಸಲಾಗಿದೆ.[೨೫೪] ಅದು ಹೇಗೆಂದರೆ ಒಂದೇ ಹತ್ತಿ ಮುಂತಾದ ಪದಾರ್ಥಗಳಿಂದ ಅನೇಕ ಆಕಾರದ ಬಟ್ಟೆಯು ಉತ್ಪತ್ತಿಯಾಗುತ್ತದೆಯೋ ಹಾಗೆಯೇ ಎಲ್ಲಕ್ಕೂ ಪರಮಕಾರಣವಾದ ಸೃಷ್ಟಿ, ಸ್ಥಿತಿ, ಲಯಗಳಿಗೆ ಆಧಾರವಾದ ಒಂದೇ ಮಾಯಾತತ್ತ್ವ ಸೃಷ್ಟಿಯ ಆದಿಯಲ್ಲಿ ನಾನಾಭೇದದಿಂದ ಬೇರೆಯಾಗಿರುವ ಪ್ರಪಂಚದ ಉತ್ಪತ್ತಿಯಾಗುತ್ತದೆಂದು ಪ್ರತಿಪಾದಿಸಲಾಗಿದೆ. ಮಾಯೆಯನ್ನು ಗ್ರಂಥಿ, ಗಹನ ಮೊದಲಾದ ಹೆಸರುಗಳಿಂದಲೂ ಸಹ ಕರೆಯಲಾಗುತ್ತದೆ. ಬಂಧನ ಸ್ವರೂಪವಾದ ಇದನ್ನು ಮಾಯೀಯಮಲ ಎಂದು ಹೇಳಲಾಗಿದೆ. ಮಾಯೀಯಮಲವು ಜೀವಾತ್ಮನಿಗೆ ಬುದ್ಧಿ ಮೊದಲಾದವುಗಳೊಂದಿಗೆ ತಾದಾತ್ಮ್ಯವನ್ನು ಉಂಟುಮಾಡುತ್ತದೆ. ಅದಿಲ್ಲದಿದ್ದರೆ ಬೇರೆ ರೀತಿಯಲ್ಲಿ ಕಾಣಿಸುವಂತೆ ಮಾಡುತ್ತದೆ.

೫. **ಕರ್ಮ:** ಧರ್ಮಾಧರ್ಮಾತ್ಮಕವಾದ ಕರ್ಮವು ಐದನೆಯ ಪಾಶವು. ಪಶುಗಳ ಜಾತಿ, ಆಯುಸ್ಸು, ಭೋಗ ಎಂಬ ಭೇದಗಳಿಗೆ ಇದೇ ಕಾರಣವು. ಅದನ್ನು ಶೈವಾಗಮವು ಹೀಗೆ ನಿರೂಪಿಸಿದೆ:

ಧರ್ಮಾಧರ್ಮಾತ್ಮಕಂ ಕರ್ಮ ತಚ್ಚ ತ್ರಿವಿಧಮರ್ಥತಃ।
ಜಾತ್ಯಾಯುರ್ಭೋಗದಂ ಯೇನ ನಾ ಮಿಶ್ರಂ ಪಚ್ಯತೇ ಕ್ವಚಿತ್॥[೨೫೫]

"ಪಾಪ-ಪುಣ್ಯ (ಧರ್ಮ ಮತ್ತು ಅಧರ್ಮ) ಸ್ವರೂಪವುಳ್ಳದ್ದು ಕರ್ಮ. ಅದು ಮೂರು ವಿಧ. ಅದೇ ಜಾತಿ, ಆಯುಷ್ಯ ಭೋಗಗಳನ್ನು ಕೊಡುತ್ತದೆ."

"ಸತಿ ಮೂಲೇ ತದ್ವಿಪಾಕೋ ಜಾತ್ಯಾಯುರ್ಭೋಗಾಃ'[೨೫೬] (ಮೂಲ ಕಾರಣವಾದ ಕರ್ಮವೊಂದಿದ್ದರೆ, ಅದರ ಪರಿಣಾಮವೇ ಜಾತಿ, ಆಯುಸ್ಸು ಮತ್ತು ಭೋಗ) ಎಂದು ಪತಂಜಲಿ ಮಹರ್ಷಿಗಳೂ ಸಹ ಹೇಳಿದ್ದಾರೆ. ಇವುಗಳಲ್ಲಿ ದೇವತ್ವಾದಿಗಳು ಜಾತಿ, ನೂರು ವರ್ಷಗಳ ಕಾಲ ಜೀವಿಸುವುದು ಆಯುಸ್ಸು, ಸುಖ-ದುಃಖಾದಿ ಅನುಭವವೇ ಭೋಗ. ಹೀಗೆ ಜಾತಿ, ಆಯುಸ್ಸು ಮತ್ತು ಭೋಗಗಳು ಕ್ರಮವಾಗಿ ಉತ್ತಮಾದಿ ಭೇದದಿಂದ ಮೂರು ವಿಧವಾಗಿವೆ. ಜಾತಿಯ ವೈಚಿತ್ರ್ಯವು

---

[೨೫೩] ಉ.ಸಂ, ಪು. ೧೪೪

[೨೫೪] ಭೋಗಕಾರಿಕಾ, ಶ್ಲೋ. ೧೧೪-೧೨೦

[೨೫೫] ಲುಪ್ತಾಗಮಸಂಗ್ರಹ, ಭಾಗ-೨, ಉಪೋ. ಪು. ೧೪೭

[೨೫೬] ಯೋಗಸೂತ್ರ, ೨.೧೩

ಲೋಕಪ್ರಸಿದ್ಧವಾದುದು. ಇಂದ್ರಿಯಗಳ ವೈಚಿತ್ರ್ಯವು ಹೀಗಿದೆ- ಸರ್ಪಗಳಂತೆ ಕಿವಿಗಳಿಂದ ಶಬ್ದವನ್ನು ಕೇಳುವುದು, ಗೂಬೆಗಳಂತೆ ನೋಡುವುದು ನೋಡದಿರುವುದು. ವಿಷಯ ವೈಚಿತ್ರ್ಯಕ್ಕೆ ಉದಾಹರಣೆ- ಮೋಡದಿಂದ ಬೀಳುವ ಮಳೆಯ ನೀರಿನಿಂದ ಜೀವಿಸುವ ಚಾತಕ ಪಕ್ಷಿಗಳು, ನವಿಲು, ಕೋಳಿ ಮೊದಲಾದವುಗಳಿಗೆ ಕಾಳು-ಕಸವು ಆಹಾರವು, ಕಮಲದ ಕೇಸರಗಳ ರಸಾಸ್ವಾದನೆಯನ್ನು ಮಾಡುವ ದುಂಬಿ, ಸಾರಸಪಕ್ಷಿ ಮೊದಲಾವುಗಳನ್ನು ಊಹಿಸಬಹುದು.[೨೫೭]

ಉಭಯೋಃ ಕೃಷಿಸಾಮ್ಯೇऽಪಿ ಕಶ್ಚಿದ್ ಧಾನ್ಯಾನಿ ಗಚ್ಛತಿ।
ನ ಕಿಂಚಿದಪರಸ್ತಸ್ಯ ಕರ್ಮ ಕಾರಣಕಂ ದ್ವಿಜಾಃ॥[೨೫೮]

"ಇಬ್ಬರು ಕೃಷಿಕರ ಕರ್ಮವು ಸಮಾನವಾದರೆ ಒಬ್ಬನು ಧಾನ್ಯವನ್ನು ಪಡೆಯುತ್ತಾನೆ. ಮತ್ತೊಬ್ಬನು ಪಡೆಯುವುದಿಲ್ಲ. ಅದಕ್ಕೆ ಅವರ ಕರ್ಮವೇ ಕಾರಣವಾಗಿದೆ" ಎಂಬ ಪೌಷ್ಕರಾಗಮದ ವಚನದಂತೆ ಒಂದೇ ಬಗೆಯ ಕೃಷಿಯನ್ನು ಮಾಡುತ್ತಿರುವ ಇಬ್ಬರು ಪುರುಷರಲ್ಲಿ ಒಬ್ಬನಿಗೆ ಫಲ ಕಂಡುಬಂದರೆ, ಮತ್ತೊಬ್ಬನಿಗೆ ಕಾಣದು. ಇಲ್ಲಿ ತಾನು ಸಂಪಾದಿಸಿದ ಧರ್ಮಾಧರ್ಮಾತ್ಮಕವಾದ ಕರ್ಮವೇ ಕಾರಣವೆಂದು ಅಂಗೀಕರಿಸಬೇಕು. ಈ ಕರ್ಮವು ಪ್ರಾರಬ್ಧ, ಆಗಾಮಿ ಮತ್ತು ಸಂಚಿತ ಎಂದು ಮೂರು ವಿಧವಾಗಿದೆ. ಸಂಚಿತಕರ್ಮವು ದೀಕ್ಷಾಸಂಸ್ಕಾರ, ಪುರಶ್ಚರಣೆಯಿಂದ ಸಾಧಿಸಿದ ಮಂತ್ರಗಳ ಬಲದಿಂದ ಸುಟ್ಟು, ಹುರಿದಬೀಜದಂತೆ ಫಲವನ್ನು ನೀಡಲು ಸಮರ್ಥವಾಗುವುದಿಲ್ಲ. ಆಗಾಮಿಕರ್ಮವೂ ಸಹ ಮಂತ್ರಶಕ್ತಿಯಿಂದ ಬಂಧಿತವಾಗಿರುತ್ತದೆ. ಪ್ರಾರಬ್ಧ ಕರ್ಮವು ಭೋಗದಿಂದ ಶಾಂತವಾಗುತ್ತದೆ. ಅದನ್ನು ಪೌಷ್ಕರಾಗಮವು ಹೀಗೆ ನಿರೂಪಿಸಿದೆ- "ನಾ ಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿಶತೈರಪಿ"[೨೫೯] (ನೂರು ಕೋಟಿ ಕಲ್ಪಗಳು ಕಳೆದರೂ ಪ್ರಾರಬ್ಧಕರ್ಮವು ಅನುಭವಿಸದೆ ನಾಶವಾಗುವುದಿಲ್ಲ). ಪ್ರಾರಬ್ಧ ಕರ್ಮಕ್ಕಿಂತಲೂ ಬೇರೆಯಾದ ಕರ್ಮಗಳು ದೀಕ್ಷಾದಿ ಸಂಸ್ಕಾರಗಳಿಂದ ನಿವಾರಿಸಲ್ಪಡುತ್ತವೆಂದು ತಿಳಿದುಬರುತ್ತದೆ.

ಈ ರೀತಿಯಾಗಿ ಇಲ್ಲಿಯವರೆಗೆ ನಿರೂಪಿಸಲಾದ ಮಲ, ತಿರೋಧಾನಶಕ್ತಿ, ಮಹಾಮಾಯೆ, ಮಾಯೆ ಮತ್ತು ಕರ್ಮ ಎಂಬ ಐದು ಪಾಶಗಳೂ ಸಹ ಪುರುಷನನ್ನು ಬಂಧಿಸುವ ರೂಪದಲ್ಲಿರುವುದರಿಂದ ಈ ಸಿದ್ಧಾಂತದಲ್ಲಿ ಇವುಗಳು ಪಂಚಪಾಶಗಳೆಂದು ಪ್ರಸಿದ್ಧವಾಗಿವೆ.[೨೬೦]

---

[೨೫೭] ಮೃಗೇಂದ್ರಾಗಮ, ವಿದ್ಯಾಪಾದ, ೮.೨; ಲುಪ್ತಾಗಮಸಂಗ್ರಹ, ಭಾಗ-೨, ಉಪೋ, ಪು. ೧೪೭-೧೪೮

[೨೫೮] ಲುಪ್ತಾಗಮಸಂಗ್ರಹ, ಭಾಗ-೨, ಉಪೋ. ಪು, ೧೪೮

[೨೫೯] ಲುಪ್ತಾಗಮಸಂಗ್ರಹ, ಪು. ೧೪೮

[೨೬೦] ಮಲಃ ಕರ್ಮ ಮಹಾಮಾಯಾ ಮಾಯೋತ್ಥಮಖಿಲಂ ಜಗತ್।
ತಿರೋಧಾನಕರೀ ಶಕ್ತಿಃ ಪಾಶತ್ವೇನಾರ್ಥಪಂಚಕಮ್॥ -ಲು.ಸಂ, ಪು. ೧೫೦

ಮಹಾಮಾಯೆಯು ಶುದ್ಧ ಸೃಷ್ಟಿಗೆ ಉಪಾದಾನಕಾರಣವಾಗಿರುವುದರಿಂದಲೂ, ತಿರೋಧಾನಶಕ್ತಿಯೂ ಸಹ ಪಾಶಗಳಲ್ಲಿ ಒಂದೆಂದು ಔಪಚಾರಿಕವಾಗಿರುವುದರಿಂದ ಪಾಶಗಳು ಮುಖ್ಯವಾಗಿ ಮಲ, ಕರ್ಮ ಮತ್ತು ಮಾಯೆಯ ರೂಪದಿಂದ ಮೂರು ವಿಧವಾಗಿವೆ. ಅದನ್ನು ಸ್ವಾಯಂಭುವಾಗಮವು- "ಮಾಯೇಯಮಾಣವಂ ಕರ್ಮ ಚೈತಾವದನುಬಂಧನಮ್"[೨೬೧] ಎಂದು ಸ್ಪಷ್ಟಪಡಿಸಿದೆ.

ಪಾಶಸ್ವರೂಪ ವಿಮರ್ಶೆ

ಈ ರೀತಿಯಾಗಿ ಪೂರ್ವೋಕ್ತ ಮೂರು ದರ್ಶನಗಳಲ್ಲಿ ಹೇಳಿದ ಪಾಶಸ್ವರೂಪ ವಿಚಾರದಿಂದ ಆಣವ, ಮಾಯೀಯ, ಕಾರ್ಮಿಕ ಎಂಬ ಮಲತ್ರಯಗಳೇ ಮುಖ್ಯವಾದ ಪಾಶಗಳೆಂದು ತಿಳಿದುಬರುತ್ತದೆ. ಈ ಪಾಶಗಳಿಂದ ಬದ್ಧನಾದ ಶಿವನೇ ಪಶುವೆಂದು ಕರೆಯಲ್ಪಡುತ್ತಾನೆ. ಈ ಅಂಶವು ಮೂರು ದಶನಗಳಲ್ಲಿಯೂ ಸಮಾನವಾಗಿದೆ. ಆಣವ ಮಲದಿಂದ ಪ್ರಾಪ್ತವಾದ ಅಣುತ್ವವು ವಾಸ್ತವಿಕವೆಂದು ತಿಳಿದು ಜೀವಾತ್ಮನಿಗೆ ಅಣುಪರಿಮಾಣತ್ವವನ್ನು ವೀರಶೈವರು ಒಪ್ಪಿರುತ್ತಾರೆ. ಆದರೆ ಕಾಶ್ಮೀರಶೈವ, ಸಿದ್ಧಾಂತಶೈವ ಮತದಲ್ಲಿ ಆತ್ಮನು ಅಣುರೂಪನಾಗಿರದೆ, ವಿಭುವೇ ಆಗಿದ್ದಾನೆ. ಆದರೂ ಸಹ ಆಣವ ಮಲಾವರಣದ ನಂತರ ಅವನಿಗೆ ಅಣುಭಾವವು ಬರುತ್ತದೆ ಎಂದು ಹೇಳಿದೆ. ಆದುದರಿಂದ ಈ ಎರಡೂ ದರ್ಶನಗಳಲ್ಲಿಯೂ ಆಣವಮಲವು ಸ್ವಸ್ವರೂಪ ಅಜ್ಞಾನರೂಪವೆಂದೂ, ಮತ್ತು ಅದು ಜ್ಞಾನದಿಂದಲೇ ನಿವಾರಣೆಯಾಗುತ್ತದೆ ಎಂದೂ ಹೇಳಿದೆ. ವೀರಶೈವದರ್ಶನದಲ್ಲಿ ಪರಶಿವನ ಸಂಕುಚಿತ ಇಚ್ಛಾಶಕ್ತಿಯೇ ಆಣವಮಲವೆಂದು ಕರೆಯಲಾಗಿದೆ. ಇಚ್ಛಾಶಕ್ತಿ ಸಂಕೋಚರೂಪವಾದ ಈ ಮಲವು ಕೇವಲ ಶಿವಜ್ಞಾನದಿಂದ ನಿವಾರಣೆಯಾಗುವುದಿಲ್ಲವೆಂದು ಆ ಶಕ್ತಿವಿಕಾಸಕ್ಕೆ ಶಕ್ತಿವಿಕಾಸವನ್ನು ಹೊಂದಿದ ಶಿವನೊಂದಿಗೆ ಅಭೇದವನ್ನು ಚಿಂತನೆ ಮಾಡುವ ರೂಪದ ಉಪಾಸನೆಯು ಈ ದರ್ಶನದಲ್ಲಿ ಹೇಳಲಾಗಿದೆ. ಮಾಯೀಯ ಮಲಾವರಣದಿಂದ ಜೀವನು 'ನಾನು, ನನ್ನದು' ಎಂದು ಅಭಿಮಾನಹೊಂದುವನು. ಕಾರ್ಮಿಕಮಲದಿಂದ ಶುಭಾಶುಭಕರ್ಮಗಳಲ್ಲಿ ಪ್ರವರ್ತಿಸುತ್ತಿರುತ್ತಾನೆ ಎಂಬ ಅಂಶವು ಮೂರು ದರ್ಶನಗಳಲ್ಲಿಯೂ ಸಮಾನವಾಗಿದೆ.

ಮೂರು ಮಲಗಳ ಸ್ವರೂಪದ ವಿಷಯದಲ್ಲಿ ವೀರಶೈವ, ಕಾಶ್ಮೀರಶೈವಗಳು ಪ್ರತಿಪಾದಿಸುವ ಪ್ರಕ್ರಿಯೆ ಒಂದೇ ವಿಧವಾಗಿದೆ. ಅದು ಈ ರೀತಿಯಾಗಿದೆ- ಪರಶಿವನು ತಾನೇ ಯಾವಾಗ ಪೂಜ್ಯ-ಪೂಜಕರೂಪದಿಂದ ಲೀಲೆಯನ್ನು ಅಭಿನಯಿಸಲು ಬಯಸುವನೋ ಆಗ ಅವನ ಇಚ್ಛಾ, ಜ್ಞಾನ, ಕ್ರಿಯೆ ಎಂಬ ಶಕ್ತಿಗಳು ಸಂಕುಚಿತವಾಗುತ್ತವೆ. ಆ ಸಂಕುಚಿತ ಶಕ್ತಿಗಳೇ ಕ್ರಮವಾಗಿ ಆಣವ, ಮಾಯೀಯ ಮತ್ತು ಕಾರ್ಮಿಕವೆಂಬ ಹೆಸರಿನ ಮಲಗಳೆಂದು ಕರೆಯಲಾಗಿದೆ. ಅವುಗಳಿಂದ ಆವೃತವಾಗಿರುವುದರಿಂದಲೇ ಶಿವನ ಅಂಶವೇ 'ಜೀವ' ಎಂದು ಕರೆಯಲ್ಪಡುತ್ತಾನೆ.

---

[೨೬೧] ಉಪ್ತಾಗಮಸಂಗ್ರಹ, ಭಾಗ-೨, ಉಪೋದ್ಘಾತ, ಪು. ೧೫೦

ಇದೇ ರೀತಿಯಾಗಿ ಕಲಾ, ವಿದ್ಯಾ, ರಾಗ, ಕಾಲ, ನಿಯತಿ ರೂಪವಾದ ಪಂಚಕಂಚುಕಗಳೂ ಕೂಡ ಪರಶಿವನ ಸರ್ವಕರ್ತೃತ್ವ, ಸರ್ವಜ್ಞತ್ವ, ಪೂರ್ಣತ್ವ, ನಿತ್ಯತ್ವ, ವ್ಯಾಪಕತ್ವ ರೂಪವಾದ ಶಕ್ತಿಗಳ ಸಂಕೋಚರೂಪವೆಂದು ವೀರಶೈವಾಚಾರ್ಯರು ಪ್ರತಿಪಾದಿಸಿದ್ದಾರೆ.[೨೬೨]

ಕಾಶ್ಮೀರ ಶೈವದರ್ಶನದಲ್ಲಿಯೂ ಸಹ- "ಚಿದ್ವತ್ತಚ್ಛಕ್ತಿಸಂಕೋಚಾದ್ ಮಲಾವೃತಃ ಸಂಸಾರೀ"[೨೬೩] (ಚಿತ್ತದಂತೆ ಅದರ ಶಕ್ತಿಸಂಕೋಚದಿಂದ ಮಲಾವೃತನಾದವನು ಸಂಸಾರೀ) ಎಂಬ ಸೂತ್ರದ ವ್ಯಾಖ್ಯಾನದಲ್ಲಿ ಇಚ್ಛಾ, ಜ್ಞಾನ, ಕ್ರಿಯಾಶಕ್ತಿಗಳ ಸಂಕೋಚ ಸ್ವರೂಪವೇ ಆಣವಾದಿ ಮಲಗಳೆಂದು ನಿರೂಪಿಸಿ, ಮತ್ತೆ - ಸರ್ವಕರ್ತೃತ್ವ, ಸರ್ವಜ್ಞತ್ವ, ಪೂರ್ಣತ್ವ, ನಿತ್ಯತ್ವ, ವ್ಯಾಪಕತ್ವಶಕ್ತಿಗಳು ಸಂಕೋಚವನ್ನು ಹೊಂದುವ ಕಲಾ, ವಿದ್ಯಾ, ರಾಗ, ಕಾಲ, ನಿಯತಿರೂಪದಿಂದ ತೋರುತ್ತವೆ. ಆ ವಿಧವಾದ ಈ ಶಕ್ತಿಯು ದರಿದ್ರವೆಂದೂ, ಸಂಸಾರಿಯೆಂದೂ ಕರೆಯಲ್ಪಟ್ಟಿದೆ. ತನ್ನ ಶಕ್ತಿಯು ವಿಕಾಸವಾದಾಗ ಶಿವನೇ"[೨೬೪] ಎಂದು ಪಂಚಕಂಚುಕಾದಿಗಳೂ ಸಹ ಸರ್ವಕರ್ತೃತ್ವಾದಿಗಳ ಸಂಕುಚಿಕರೂಪವೆಂದು ಸ್ಪಷ್ಟವಾಗಿ ಪ್ರತಿಪಾದಿಸಲಾಗಿದೆ. ಇದರಿಂದ ಮಲತ್ರಯಗಳ ಸ್ವರೂಪವನ್ನು ನಿರೂಪಿಸುವ ಪ್ರಕ್ರಿಯೆಯು ವೀರಶೈವ-ಕಾಶ್ಮೀರಶೈವರಲ್ಲಿ ಸಮಾನವಾಗಿದೆ ಎಂದು ತೋರುತ್ತದೆ. ಹಾಗಿದ್ದರೂ ಕೂಡ ಇದು ವಿಶೇಷವಾಗಿದೆ- ವೀರಶೈವರು ಇಚ್ಛಾದಿಶಕ್ತಿಗಳ ಸಂಕೋಚವನ್ನು ವಾಸ್ತವವೆಂದು ಪರಿಗಣಿಸಿದ್ದಾರೆ. ಕಾಶ್ಮೀರಶೈವರಾದರೊ, ವಾಸ್ತವವಾಗಿ ಅಸಂಕುಚಿತವಾದರೂ ಕೂಡ ಸಂಕುಚಿತವಾದಂತೆ ತೋರುತ್ತವೆಯೆಂದು ಪ್ರತಿಪಾದಿಸಿದ್ದಾರೆ. ಅದನ್ನು ಕ್ಷೇಮರಾಜನು- "ತದೀಯಾ ಇಚ್ಛಾದಿಶಕ್ತಯೋಽಸಂಕುಚಿತಾ ಅಪಿ ಸಂಕೋಚವತ್ಯೋ ಭಾಂತಿ"[೨೬೫] (ಅದರ ಇಚ್ಛಾದಿ ಶಕ್ತಿಗಳು ಅಸಂಕುಚಿತವಾದರೂ ಕೂಡ ಸಂಕೋಚವಾದಂತೆ ತೋರುತ್ತವೆ) ಎಂದಿದ್ದಾನೆ.

ಮೋಕ್ಷೋಪಾಯದಲ್ಲಿ ಶಕ್ತಿಪಾತ ಮತ್ತು ದೀಕ್ಷೆ

ವೀರಶೈವ ಸಿದ್ಧಾಂತದಲ್ಲಿ ಪರಶಿವಬ್ರಹ್ಮ ಜಿಜ್ಞಾಸೆಯ ವಿಷಯದಲ್ಲಿ ಸಾಧಕನಿಗೆ ದೀಕ್ಷಾ ಸಂಸ್ಕಾರವು ಉಪದಿಷ್ಟವಾಗಿದೆ. ವೇದಾಂತವು ಹೇಳುವ ವಿವೇಕಾದಿ ಸಾಧನ ಚತುಷ್ಟಯ ಸಂಪತ್ತಿಯಿಂದ ಮಾತ್ರ ಮಲತ್ರಯವು ನಿವಾರಣೆಯಾಗದು. ಮಲತ್ರಯಗಳ ನಿವೃತ್ತಿಯಾಗದೆ ಬ್ರಹ್ಮಜಿಜ್ಞಾಸೆಯಲ್ಲಿ ಅಧಿಕಾರವು ಅಸಂಭವವಾದ್ದರಿಂದ ಅದರ ನಿವಾರಣೆಗೆ ದೀಕ್ಷಾಸಂಸ್ಕಾರವು ಹೇಳಿದೆ. ಭಾಷ್ಯಕಾರರಾದ ಶ್ರೀಪತಿ ಪಂಡಿತಾರಾಧ್ಯರೂ-

---

[೨೬೨] "ಅಸ್ಮನ್ಮತೇ ಶಿವಜೀವಯೋರ್ಭೇದಸ್ಯ ಮಿಥ್ಯಾಜ್ಞಾನಕೃತತ್ವಾಭಾವಾತ್, ಶಿವಶಕ್ತಿ ಸ್ವಾತಂತ್ರ್ಯ ಪರಿಕಲ್ಪಿತಸಂಕೋಚಕೃತತ್ವಾತ್ ತಯೋರಭೇದಸ್ಯ ವಿಕಸಿತಸ್ವಶಕ್ತಿ ದಶಾಯಾಮುಪಪನ್ನ ತ್ವಾತ್" -ಬ್ರಹ್ಮಸೂತ್ರ, ಶಾಬರಿ ವೃತ್ತಿ, ೧-೩-೧೯

[೨೬೩] ಪ್ರತ್ಯಭಿಜ್ಞಾಹೃದಯ, ಭಾಗ-೩, ಪು. ೨೧

[೨೬೪] ಪ್ರತ್ಯಭಿಜ್ಞಾಹೃದಯ, ಭಾಗ-೩, ಪು. ೨೨

[೨೬೫] ಪ್ರತ್ಯಭಿಜ್ಞಾಹೃದಯ, ಭಾಗ-೩, ಪು. ೨೧

"ಅಥಾಽತೋ ಬ್ರಹ್ಮಜಿಜ್ಞಾಸಾ"[೨೬೬] ಎಂಬ ಸೂತ್ರದ 'ಅಥ' ಎಂಬ ಶಬ್ದಾರ್ಥವನ್ನು ದೀಕ್ಷಿತನಲ್ಲದವನಿಗೆ ಮಲತ್ರಯನಾಶವಾಗದು. ಆದುದರಿಂದ ಸಾಧನಚತುಷ್ಟಯಾನಂತರದಲ್ಲಿ... ಸದ್ಗುರುವಿನ ಕೃಪಾದೃಷ್ಟಿಯಿಂದ ಲಬ್ಧವಾದ ಶಕ್ತಿಪಾತಾದಿಗಳಿಂದ ಬೇರ್ಪಡಿಸಲ್ಪಟ್ಟ ಪರಶಿವರೂಪಿ ಇಷ್ಟಲಿಂಗಧಾರಣಾತ್ಮಕವಾದ ಪಾಶುಪತ ದೀಕ್ಷಾನಂತರವೆಂದು ನಿರ್ಣಯಿಸಿದ್ದಾರೆ.[೨೬೭] ಈ ರೀತಿಯಾಗಿ ಇದೇ ಅರ್ಥವನ್ನು ಇಲ್ಲಿ ತೋರಿಸಲಾಗಿದೆ. ದೀಕ್ಷಾಸಂಸ್ಕಾರದಿಂದ ಪಾಶಬಂಧನವು ನಾಶವಾಗಿ ಶಿವಜ್ಞಾನವುಂಟಾಗುತ್ತದೆ. ಅದನ್ನು ಶ್ರೀ ರೇಣುಕ ಭಗವತ್ಪಾದರು ಹೀಗೆ ಹೇಳಿದ್ದಾರೆ-

ದೀಯತೇ ಚ ಶಿವಜ್ಞಾನಂ ಕ್ಷೀಯತೇ ಪಾಶಬಂಧನಮ್।
ಯಸ್ಮಾದತಃ ಸಮಾಖ್ಯಾತಾ ದೀಕ್ಷೇತೀಯಂ ವಿಚಕ್ಷಣೈಃ॥[೨೬೮]

"ಶಿವಜ್ಞಾನವನ್ನುಂಟುಮಾಡುತ್ತದೆ, ಪಾಶಬಂಧವನ್ನು ನಾಶಪಡಿಸುತ್ತದೆ. ಆದುದರಿಂದ ಅದನ್ನು ದೀಕ್ಷೆ ಎಂದು ಪಂಡಿತರು ಕರೆದಿದ್ದಾರೆ."

ಈ ದೀಕ್ಷೆಯು ಸರ್ವರಿಗೂ ಸುಲಭವಲ್ಲ. ಆದರೆ- "ಶಕ್ತಿಪಾತಂ ಸಮಾಲೋಕ್ಯ ದೀಕ್ಷಯಾ ಯೋಜನೆಯೇದಮುಮ್"[೨೬೯] (ಶಕ್ತಿಪಾತವನ್ನು ಚೆನ್ನಾಗಿ ನೋಡಿ ಶಿವದೀಕ್ಷೆಯನ್ನು ಅನುಗ್ರಹಿಸಬೇಕು) ಎಂಬ ಆಚಾರ್ಯರ ಉಕ್ತಿಯಂತೆ ಶಕ್ತಿಪಾತದಿಂದ ವಿಶಿಷ್ಟರಾದವರಿಗೆ ದೀಕ್ಷೆಯು ಲಭ್ಯವಾಗುತ್ತದೆ. ಶಕ್ತಿಪಾತವೆಂದರೆ ಶಿವಾನುಗ್ರಹ. ಆ ಶಕ್ತಿಪಾತದ ವಶದಿಂದಲೇ ಸಾಧಕನಲ್ಲಿ ಪ್ರತಿಕ್ಷಣವೂ ರೋಮಾಂಚ, ಶರೀರಕಂಪನ, ಅಶ್ರುಪಾತಾದಿಗಳು ಸಂಭವಿಸುತ್ತವೆ. ಇದೇ ಶಕ್ತಿಪಾತದ ಲಕ್ಷಣವು.

ಶಿವಾನುಗ್ರಹರೂಪವಾದ ಈ ಶಕ್ತಿಪಾತವು ಜೀವನಿಗೆ ಮಲಪರಿಪಾಕವನ್ನು ಅಪೇಕ್ಷಿಸುತ್ತದೆಂದು ವೀರಶೈವರ ಸಿದ್ಧಾಂತವು. ಅದನ್ನು ಆಚಾರ್ಯರು ಈ ರೀತಿಯಾಗಿ ಹೇಳಿದ್ದಾರೆ:

ಸ್ವಕರ್ಮಪರಿಪಾಕೇನ ಪ್ರಕ್ಷೀಣಮಲವಾಸನಃ।
ಶಿವಪ್ರಸಾದಾಜ್ಜೀವೋಽಯಂ ಜಾಯತೇ ಶುದ್ಧಮಾನಸಃ॥[೨೭೦]

"ಜೀವನು ತನ್ನ ಕರ್ಮಪರಿಪಾಕದಿಂದ ಅನಾದಿಮಲವಾಸನೆಯನ್ನು ಕಳೆದುಕೊಂಡು, ಶಿವಪ್ರಸಾದದಿಂದ ಶುದ್ಧಾಂತಃಕರಣವುಳ್ಳವನಾಗುವನು."

ಇಲ್ಲಿ ಆದು ಅಂತಿಮವಾದದ್ದು- ಜೀವನಿಗೆ ಆಣವಾದಿ ಮಲವು ಆಮವೆಂದೂ, ಪಕ್ವವೆಂದೂ ಎರಡು ಪ್ರಕಾರವಾಗುತ್ತದೆ. ಅಲ್ಲಿ ತಪಸ್ಸಿನಿಂದ ಪ್ರಕ್ಷೀಣವಾದದ್ದು

---

[೨೬೬] ಬ್ರಹ್ಮಸೂತ್ರ, ೧-೧-೧

[೨೬೭] ಬ್ರಹ್ಮಸೂತ್ರ ಶ್ರೀಕರಭಾಷ್ಯ, ೧-೧-೧

[೨೬೮] ಸಿ.ಶಿ, ೬.೧೧

[೨೬೯] ಸಿ.ಶಿ, ೬.೧೦

[೨೭೦] ಸಿ.ಶಿ, ೫.೪೮

ಪಕ್ವವೆಂದೂ, ಅದಕ್ಕಿಂತ ವಿಪರೀತರಾದದ್ದು ಆಮವೆಂದೂ ಕರೆಯಲಾಗಿದೆ. ಜನ್ಮ ಜನ್ಮಾಂತರಾನುಷ್ಠಾನದಿಂದುಂಟಾದ ಪುಣ್ಯಕರ್ಮವಶದಿಂದ ಯಾವಾಗ ಜೀವನು ಶುದ್ಧಾಂತಃಕರಣನಾಗುತ್ತಾನೆಯೋ ಆಗ ಅವನು ಪರಿಪಕ್ವಮಲನಾಗುತ್ತಾನೆ. ಇದೇ ಶಿವಾನುಗ್ರಹಕ್ಕೆ ಪಾತ್ರನನ್ನಾಗಿ ಮಾಡುತ್ತದೆ. ಶಿವಾನುಗ್ರಹದಿಂದಲೇ ಅವನ ಮನಸ್ಸಿನಲ್ಲಿ ಶಿವಭಕ್ತಿಯು ವ್ಯಕ್ತವಾಗುತ್ತದೆ. ಈ ರೀತಿಯಾಗಿ ವ್ಯಕ್ತವಾದ ಭಕ್ತಿಯುಳ್ಳ ಸಾಧಕನೇ ವೀರಶೈವ ಸಿದ್ಧಾಂತದಲ್ಲಿ ದೀಕ್ಷಾಧಿಕಾರಿಯೆಂದು ಕರೆಯಲ್ಪಟ್ಟಿದ್ದಾನೆ. ದೀಕ್ಷೆಯಿಂದ ಜೀವನು ಈ ಜನ್ಮದಲ್ಲಿಯೇ ಮುಕ್ತಿಯನ್ನು ಹೊಂದುತ್ತಾನೆಂದು, ಈ ಶರೀರವು ಅಂತಿಮವೆಂದು ಹೇಳಲ್ಪಟ್ಟಿದೆ. ಅದನ್ನು ಸಿದ್ಧಾಂತ ಶಿಖಾಮಣಿಯಲ್ಲಿ ಹೀಗೆ ಹೇಳಲಾಗಿದೆ:

> ಶುದ್ಧಾಂತಃಕರಣೇ ಜೀವೇ ಶುದ್ಧಕರ್ಮವಿಪಾಕತಃ।
> ಜಾಯತೇ ಶಿವಕಾರುಣ್ಯಾತ್ ಪ್ರಸ್ಫುಟಾ ಭಕ್ತಿರೈಶ್ವರೀ॥
> ಜಂತುರಂತ್ಯಶರೀರೋಽಸೌ ಪಿಂಡಶಬ್ದಾಭಿಧೇಯಕಃ॥[೨೭೧]

"ಶುದ್ಧಕರ್ಮವಿಪಾಕದಿಂದ ಜೀವನು ಶುದ್ಧಾಂತಃಕರಣವುಳ್ಳವನಾಗಲು, ಶಿವಕಾರುಣ್ಯದಿಂದ ಶಿವಸಂಬಂಧವಾದ ಶುದ್ಧಭಕ್ತಿಯು ಉತ್ಪನ್ನವಾಗುವುದು. ಈ ರೀತಿಯಾದ ಶುದ್ಧ ಶಿವಭಕ್ತಿಯುಕ್ತನಾದ ಜೀವನು ಚರಮಶರೀರಿಯಾಗಿ 'ಪಿಂಡ' ಶಬ್ದವಾಚ್ಯನಾಗುವನು."

ವೀರಶೈವ ಸಿದ್ಧಾಂತದಲ್ಲಿ ಮೂರು ಬಗೆಯ ಮಲಗಳ ನಿವಾರಣೆಗೆ ವೇಧಾ, ಮಾಂತ್ರೀ ಮತ್ತು ಕ್ರಿಯಾ ಎಂಬ ಮೂರು ವಿಧದ ದೀಕ್ಷೆಗಳನ್ನು ಅಂಗೀಕರಿಸಲಾಗಿದೆ. ಅಲ್ಲಿ ವೇಧಾದೀಕ್ಷೆಯಿಂದ ಆಣವಮಲ ನಿವೃತ್ತಿಯೂ, ಮಾಂತ್ರೀದೀಕ್ಷೆಯಿಂದ ಮಾಯೀಯಮಲ ನಿವೃತ್ತಿ ಮತ್ತು ಕ್ರಿಯಾದೀಕ್ಷೆಯಿಂದ ಕಾರ್ಮಿಕಮಲದ ನಿವೃತ್ತಿಯಾಗುತ್ತದೆ ಎಂದು ತಿಳಿಯಬೇಕು. ಇಲ್ಲಿ ನಿರೂಪಿತವಾದ ದೀಕ್ಷೆಗಳಲ್ಲಿ ಭಾವಲಿಂಗ, ಪ್ರಾಣಲಿಂಗ ಮತ್ತು ಇಷ್ಟಲಿಂಗಗಳೆಂಬ ಲಿಂಗತ್ರಯಗಳ ಸ್ವರೂಪದ ಉಪದೇಶ ಮತ್ತು ಅವುಗಳ ಉಪಾಸನಾಪದ್ಧತಿಯು ಪ್ರತಿಪಾದಿತವಾಗಿದೆ. ಇದು ವೀರಶೈವದ ವೈಶಿಷ್ಟ್ಯ. ಸದ್ಗುರುವಿನ ಉಪದೇಶದಂತೆ ಸಾಧಕನು ಶರೀರದಿಂದ ಇಷ್ಟಲಿಂಗಪೂಜೆಯನ್ನೂ, ಮನಸ್ಸಿನಿಂದ ಪ್ರಾಣಲಿಂಗಾರ್ಚನೆಯನ್ನೂ ಮತ್ತು ಬುದ್ಧಿಯಿಂದ ಭಾವಲಿಂಗಾನುಸಂಧಾನವನ್ನು ಮಾಡುತ್ತಾ, ಶಿವಾನುಗ್ರಹದ ಬಲದಿಂದ ಶಿವಸ್ವರೂಪಿಯಾಗುತ್ತಾನೆ.

ವೀರಶೈವ ಸಿದ್ಧಾಂತಕ್ಕೆ ಅಭಿಮತವಾದ ಮಲಪರಿಪಾಕ ಪ್ರಕ್ರಿಯೆ, ಶಕ್ತಿಪಾತ ಸ್ವರೂಪ, ಮೂರು ಬಗೆಯ ದೀಕ್ಷೆ, ತ್ರಿವಿಧ ಲಿಂಗಗಳ ಸ್ವರೂಪ ಮತ್ತು ಅವುಗಳ ಉಪಾಸನಾಪದ್ಧತಿ ಇತ್ಯಾದಿಗಳು ಈ ಪ್ರಬಂಧದ ಮೂರನೆಯ ಪರಿಚ್ಛೇದದಲ್ಲಿ

---

[೨೭೧] ಸಿ.ಶಿ, ೫.೪೯

ವಿಸ್ತಾರವಾಗಿ ನಿರೂಪಿಸಲಾಗಿದೆ. ಈಗ ಕಾಶ್ಮೀರಶೈವ-ಸಿದ್ಧಾಂತಶೈವರಿಗೆ ಅಭಿಮತವಾದ ಶಕ್ತಿಪಾತದ ಸ್ವರೂಪವನ್ನು ಸಂಕ್ಷಿಪ್ತವಾಗಿ ವಿಚಾರಮಾಡಲಾಗುತ್ತದೆ.

ಕಾಶ್ಮೀರ ಶೈವಸಿದ್ಧಾಂತದಲ್ಲಿಯೂ ಕೂಡ ಪಶುವಿನ ಪಾಶನಿವಾರಣೆಗೆ ದೀಕ್ಷಾ ಸಂಸ್ಕಾರವು ಅಂಗೀಕೃತವಾಗಿದೆ. ಸದ್ಗುರುವಿನಿಂದ ಮಾಡಲ್ಪಡುವ ಈ ದೀಕ್ಷಾಸಂಸ್ಕಾರವು ಶಿವಾನುಗ್ರಹರೂಪ ಶಕ್ತಿಪಾತವನ್ನು ಅಪೇಕ್ಷಿಸುತ್ತದೆ. ಆದರೂ ಸಹ ಈ ಶಕ್ತಿಪಾತವು ಕರ್ಮಸಾಮ್ಯ ಅಪೇಕ್ಷೆಯುಳ್ಳದ್ದಲ್ಲ ಅಥವಾ ಮಲಪರಿಪಾಕಾಪೇಕ್ಷೆಯುಳ್ಳದ್ದೂ ಅಲ್ಲ. ಆದುದರಿಂದಲೇ ಶ್ರೀ ಅಭಿನವಗುಪ್ತರು- "ಮುಂದೆ ಹೇಳುವ ದೀಕ್ಷೆಗೆ ಅಧಿಕಾರಿ ಯಾರು? ಎಂದು ನಿರೂಪಿಸಲು ಹೊರಟು ಶಕ್ತಿಪಾತವನ್ನು ವಿಚಾರಮಾಡಲಾಗುವುದು" ಎಂದು ಆರಂಭಿಸಿ "ಕರ್ಮಸಾಮ್ಯದ ನಂತರ ಶಕ್ತಿಪಾತ ಎಂದರೆ ಹಾಗಲ್ಲ. ಒಂದಾದ ಮೇಲೊಂದು ಎಂಬ ಕ್ರಮಿಕತ್ವಕ್ಕೆ ವಿರೋಧವಿಲ್ಲ. ಅನಂತರ ಮಲಪರಿಪಾಕದಲ್ಲಿ ಶಕ್ತಿಪಾತವು, ಅದೂ ಕೂಡ ಯಾವ ಸ್ವರೂಪದ್ದು? ಅದರ ನಿಮಿತ್ತವೇನು? ಭೇದವಾದಿಗಳಿಗೆ ಎಲ್ಲವೂ ಅಸಂಬದ್ಧವಾದುದು" ಎಂದು ಅಂತ್ಯವಾಗುವಲ್ಲಿ ಕರ್ಮಸಾಮ್ಯಕ್ಕೆ ಮತ್ತು ಮಲಪರಿಪಾಕಕ್ಕೆ ಶಕ್ತಿಪಾತಹೇತುವೆಂಬುದನ್ನು ಖಂಡಿಸುತ್ತಾ- "ಪರಮೇಶ್ವರನು ಸ್ವರೂಪಾಚ್ಛಾದನ ಕ್ರೀಡೆಯಿಂದ ಪಶುವು, ಪುದ್ಗಲನು ಅಣುವಾಗುತ್ತಾನೆ. ಅವನಿಗೆ ದೇಶ, ಕಾಲ, ಸ್ವರೂಪಗಳ ವಿರೋಧವಿಲ್ಲ. ಹಾಗೆಯೇ ಸ್ವರೂಪವನ್ನು ಮುಚ್ಚಿಡುವ ನಿವೃತ್ತಿಯಿಂದ ಸ್ವರೂಪವನ್ನು ಕೂಡಲೇ ಅಥವಾ ಕ್ರಮವಾಗಿ ಪುನಃ ಪಡೆದು ಶಕ್ತಿಪಾತಕ್ಕೆ ಪಾತ್ರನಾಗುವುದರಿಂದ ಅಣುವೆಂದು ಕರೆಯಿಸಿಕೊಳ್ಳುತ್ತದೆ. ಸ್ವಾತಂತ್ರ್ಯ ಮಾತ್ರ ಸಾರವುಳ್ಳ ಈ ಪರಶಿವನು ಶಕ್ತಿಯನ್ನು ಪತನ ಮಾಡುವವನೆಂದು ನಿರಪೇಕ್ಷವೇ ಶಕ್ತಿಪಾತ ಸ್ವರೂಪದ ಖ್ಯಾತಿಯ ಫಲವು"[೨೭೨] ಎಂದು ಕರ್ಮಸಾಮ್ಯಮಲಪರಿಪಾಕ ನಿರಪೇಕ್ಷವೇ ಶಕ್ತಿಪಾತವೆಂದು ಸಮರ್ಥಿಸಲಾಗಿದೆ. ಈ ರೀತಿಯಾಗಿ ನಿರಪೇಕ್ಷವಾದ ಶಕ್ತಿಪಾತದಲ್ಲಿ ಯಾವುದೋ ಕಾರಣದಿಂದ ಯಾವನೋ ಒಬ್ಬ ಪುರುಷನಲ್ಲಿ ಶಕ್ತಿಪಾತವೆಂಬ ಸಂದೇಹವನ್ನೂ ಕೂಡ ಇಲ್ಲಿ ಮಾಡಲು ಸಾಧ್ಯವಿಲ್ಲ. ಏಕೆಂದರೆ ಎಲ್ಲವೂ ಪರಶಿವನ ಸ್ವರೂಪವಾದ್ದರಿಂದ ವೈಷಮ್ಯದೋಷವೇ ಬರುವುದಿಲ್ಲವೆಂದು ಅವರ ಸಿದ್ಧಾಂತವು. ಈ ಸಿದ್ಧಾಂತದಲ್ಲಿ ತೀವ್ರ, ಮಧ್ಯ, ಮಂದ ಎಂಬ ಭೇದದಿಂದ ಶಕ್ತಿಪಾತವು ಮೂರು ವಿಧವಾಗಿದೆ. ಈ ಮೂರು ಮತ್ತೆ ಪ್ರತ್ಯೇಕವಾಗಿ ತೀವ್ರ, ಮಧ್ಯ, ಮಂಧ ಎಂದು ಮೂರು ತೆರನಾಗಿ ಶಕ್ತಿಪಾತವು ಒಂಬತ್ತು ವಿಧವೆಂದು ಪ್ರತಿಪಾದಿಸಿದೆ.[೨೭೩] ಈ ಪ್ರಸಂಗದಲ್ಲಿ ಪತಂಜಲಿ ಮಹರ್ಷಿಗಳು ಪ್ರತಿಪಾದಿಸಿರುವ ಮೃದು, ಮಧ್ಯ, ತೀವ್ರ ಮೊದಲಾದ ಭೇದದಿಂದ ಒಂಬತ್ತು ಪ್ರಕಾರಗಳು ಸಮಾಧಿ ಸಾಧಕಯೋಗಿಗಳ ಅವಸ್ಥೆಯನ್ನೂ ಕೂಡ ಸ್ಮರಿಸಬೇಕು.[೨೭೪]

---

೨೭೨. ತಂತ್ರಸಾರಃ, ಪು. ೧೧೫-೧೧೮

೨೭೩. ತಂತ್ರಸಾರಃ, ಪು. ೧೧೯-೧೨೫

೨೭೪. ಯೋಗಸೂತ್ರಭಾಷ್ಯ, ೧.೨೧-೨೨

ಸಿದ್ಧಾಂತ ಶೈವದರ್ಶನಲ್ಲಿ ಪೂರ್ವೋಕ್ತಗಳಾದ ಕೇವಲ, ಸಕಲ, ಅಮಲಗಳೆಂಬ ಮೂರು ಬಗೆಯ ಪಶುಗಳಲ್ಲಿ ಕೇವಲನು ಯಾವಾಗಲೂ ಮೋಹಗ್ರಸ್ತನಾಗಿ ಎಂದಿಗೂ ಚೇತನಗೊಳ್ಳುವುದಿಲ್ಲ, ಅಮಲನು ಮುಕ್ತನೇ ಸರಿ. ಆದುದರಿಂದ ಉಳಿದಿರುವ ಸಕಲನೇ ಮೋಕ್ಷಾಧಿಕಾರಿಯಾಗುತ್ತಾನೆ. 'ಅವನು ನಾನು ಬದ್ಧನು' ಎಂದು ತಿಳಿದು ಬಂಧದಿಂದ ಮೋಕ್ಷಕ್ಕೆ ಪ್ರಯತ್ನಿಸುತ್ತಾನೆ. ಈ ರೀತಿಯಾಗಿ ಪ್ರಯತ್ನಿಸುತ್ತಿರುವ ಪಶುವನ್ನು ಪರಶಿವನು ಅನುಗ್ರಹಿಸುತ್ತಾನೆ. ಶಿವಾನುಗ್ರಹವೇ ಇಲ್ಲಿ ಶಕ್ತಿಪಾತ ಶಬ್ದದಿಂದ ಕರೆಯಲ್ಪಟ್ಟಿದೆ. ಸಿದ್ಧಾಂತ ಶೈವದರ್ಶನದಲ್ಲಿ ಶಕ್ತಿಪಾತವನ್ನು ಸ್ವತಂತ್ರವಾಗಿ ಅಂಗೀಕರಿಸಿಲ್ಲ. ಅದಕ್ಕಾಗಿ ಮಲಪರಿಪಾಕವನ್ನು ಅಂಗೀಕರಿಸಲಾಗಿದೆ. ಭೋಗ-ಮೋಕ್ಷಗಳ ವ್ಯವಸ್ಥೆಗೋಸ್ಕರ ಜೀವಿಗಳಿಗೆ ಕರ್ಮದಲ್ಲಿ ಅಪೇಕ್ಷೆಯಿಲ್ಲದಿದ್ದರೆ ಎಲ್ಲವೂ ಅಸಮಂಜಸವಾಗಿದೆಯೆಂದು ಭಟ್ಟರಾಮಕಂಠರು ಅಭಿಪ್ರಾಯಪಟ್ಟಿದ್ದಾರೆ. ಅದು ಈ ರೀತಿಯಾಗಿದೆ- "ಸ್ವತಂತ್ರವಾಗಿ ಕರ್ಮಾಪೇಕ್ಷೆಯಿಲ್ಲದಿರುವುದರಿಂದ ಒಂದೇ ಆಗಿರುವ ಸತ್‌ಸ್ವರೂಪವೇ ಜಗತ್ತಿನ ಸೃಷ್ಟಿ-ಸಂಹಾರಗಳಲ್ಲಿ, ಕರ್ಮಹೀನನಿಗೂ ಸಹಭೋಗ, ಕೆಟ್ಟ ಕೆಲಸ ಮಾಡಿದವನಿಗೂ ಮೋಕ್ಷ, ಮುಕ್ತನಿಗೂ ಕೂಡ ಸಂಸಾರವನ್ನು ಈಶ್ವರನು ಮಾಡಬೇಕಾದೀತು ಎಂದು ಹುಚ್ಚರ ಚೇಷ್ಟೆಯಂತೆ ಈ ಜಗತ್ತು ಅಸಂಬದ್ಧವಾಗುವುದು. ಆದುದರಿಂದ ಅಸಮಂಜಸತೆಯನ್ನು ನಿವಾರಿಸಲು ಕರ್ಮಾದಿಪಾಕದ ಅಪೇಕ್ಷೆಯುಳ್ಳ ಸರ್ವಕರ್ತೃವಾದ ಪರಶಿವನನ್ನು ಒಪ್ಪಬೇಕು. (ಕರ್ಮ) ಅವನನ್ನು ಅಪೇಕ್ಷಿಸುವುದೇ ಅಸ್ವಾತಂತ್ರ್ಯವಲ್ಲ, ಆದರೆ ಅದು ಇನ್ನೊಬ್ಬ ಈಶ್ವರನಿಗೆ ಅಧೀನವೆಂಬುದು. ಅಂತಹ ಅಧೀನತೆ ಅವನೇ ಪರಮೇಶ್ವರನಾದ್ದರಿಂದ ಅವನಿಗಿಲ್ಲವಾದ್ದರಿಂದ ಅವನೊಬ್ಬನೇ ಸ್ವತಂತ್ರನು. ಸ್ಥಿತಿಯ ಅವಸ್ಥೆ ಇದ್ದಾಗ ಅಕಸ್ಮಾತ್ತಾಗಿ ಸಂಹಾರಾದಿಗಳು, ಕರ್ಮಾದಿಗಳು ಮತ್ತು ಭೋಗಾದಿಗಳನ್ನು, ಕರ್ಮಹೀನತ್ವಾದಿಗಳನ್ನು ಯಾವುದೋ ಒಂದು ಸಂದರ್ಭದಲ್ಲಿ ಮಾಡುವುದಿಲ್ಲವೆಂಬ ಸಾಪೇಕ್ಷತ್ವವೇ ಶಕ್ತಿಪಾತವು."[೨೭೫]

ಶಾಸ್ತ್ರವಿಹಿತಕರ್ಮಾನುಷ್ಠಾನದಿಂದುಂಟಾದ ಪುಣ್ಯವಿಶೇಷದಿಂದ ಮಲಗಳ ಪರಿಪಾಕವಾಗುತ್ತದೆ. ಪಕ್ವವಾದ ಮಲವುಳ್ಳವರಿಗೆ ಶಿವಾನುಗ್ರಹವೆಂಬ ಶಕ್ತಿಪಾತವುಂಟಾಗುತ್ತದೆ. ಈ ರೀತಿಯಾಗಿ ಶಕ್ತಿಪಾತದಿಂದ ಪವಿತ್ರವಾದ ಜೀವನು ಸದ್ಗುರುವನ್ನು ಸಮೀಪಿಸಿ ದೀಕ್ಷೆಯನ್ನು ಅನುಗ್ರಹಿಸುವಂತೆ ಪ್ರಾರ್ಥಿಸುತ್ತಾನೆ. ಶ್ರೀಗುರುವು ಅವನನ್ನು ಪರೀಕ್ಷಿಸಿ ದೀಕ್ಷೆಯನ್ನು ನೀಡುತ್ತಾನೆ ಮತ್ತು ಶಕ್ತಿಪಾತಕ್ಕೆ ಮಲಪರಿಪಾಕವು ಹೇಗೆ ಕಾರಣವಾಗುತ್ತದೆಯೋ ಹಾಗೆಯೇ ಕರ್ಮಸಾಮ್ಯವೂ ಸಹ ಕಾರಣವೆಂದು ಸಿದ್ಧಾಂತ ಶೈವದರ್ಶನದಲ್ಲಿ ಬೇರೊಂದು ಪಕ್ಷವು ಇದೆ. ಇಲ್ಲಿ ಇದನ್ನು ತಿಳಿಯಬೇಕು- ಉಪಕಾರಾತ್ಮಕ ಮತ್ತು ಅಪಕಾರಾತ್ಮಕ ಎಂದು ಕರ್ಮವು ಎರಡು ವಿಧವಾಗಿದೆ. ಉಪಕಾರದಿಂದ ಯಾವನು ಸಂತೋಷಪಡುವುದಿಲ್ಲವೋ ಮತ್ತು ಅಪಕಾರದಿಂದ ಯಾವನು ಕೋಪಗೊಳ್ಳುವುದಿಲ್ಲವೋ ಅವನು ಕರ್ಮಸಾಮ್ಯವುಳ್ಳವನಾಗುತ್ತಾನೆ. ಅದನ್ನು ಹೀಗೆ ಹೇಳಲಾಗಿದೆ:

---

[೨೭೫] ಮೋಕ್ಷಕಾರಿಕಾಟೀಕಾ, ಶ್ಲೋ. ೬೯

ನ ಹೃಷ್ಯತ್ಯುಪಕಾರೇಣ ನಾಪಕಾರೇಣ ಕುಪ್ಯತಿ।
ಯಃ ಸಮಃ ಸರ್ವಭೂತೇಷು ಜೀವನ್ಮುಕ್ತಃ ಸ ಉಚ್ಯತೇ॥[೨೭೬]

"ಯಾರು ಉಪಕಾರ ಮಾಡುವುದರಿಂದ ಸಂತೋಷಗೊಳ್ಳುವುದಿಲ್ಲವೋ, ಬೇರೆಯವರು ಮಾಡಿದ ಅಪಕಾರದಿಂದ ಕೋಪಗೊಳ್ಳುವುದಿಲ್ಲವೋ, ಯಾರು ಎಲ್ಲ ಪ್ರಾಣಿಗಳನ್ನು ಸಮಾನ ದೃಷ್ಟಿಯಿಂದ ಕಾಣುತ್ತಾನೆಯೋ ಅವನು ಜೀವನ್ಮುಕ್ತ ಎನಿಸುತ್ತಾನೆ."

ಈ ರೀತಿಯಾಗಿ ಮಲಪರಿಪಾಕವಶದಿಂದ ಕರ್ಮಸಾಮ್ಯರೂಪ ಬುದ್ಧಿಯ ಉತ್ಪತ್ತಿಯಲ್ಲಿ ಶಕ್ತಿಪಾತ ಹೊಂದಿದವನು ದೀಕ್ಷೆಗೆ ಅಧಿಕಾರಿಯಾಗುತ್ತಾನೆ. ಅಲ್ಲಿ ಮಲಪರಿಪಾಕ ಸಾಪೇಕ್ಷಪಕ್ಷವು ಖೇಟಪಾಲನದು. ಮತ್ತು ಕರ್ಮಸಾಮ್ಯ ಸಾಪೇಕ್ಷಪಕ್ಷವು ಯಾವನೋ ಒಬ್ಬ ಕಿರಣಾಗಮ ವ್ಯಾಖ್ಯಾನಕಾರನಾದ ಆಚಾರ್ಯನದೆಂದು ಪ್ರೊ. ವ್ರಜವಲ್ಲಭದ್ವಿವೇದಿ ಅವರು ಅಭಿಪ್ರಾಯಪಟ್ಟಿದ್ದಾರೆ.[೨೭೭]

ಈ ಪ್ರಕಾರವಾಗಿ ಮಲಪರಿಪಾಕದಿಂದಲೂ, ಕರ್ಮಸಾಮ್ಯದಿಂದಲೂ ಶಿವಾನುಗ್ರಹವನ್ನು ಪಡೆದ ಸಾಧಕನು ಸದ್ಗುರುವಿನಿಂದ ಮಲನಾಶಕವಾದ ದೀಕ್ಷೆಯನ್ನು ಪಡೆಯುತ್ತಾನೆ. ಇಲ್ಲಿಯೂ ದೀಕ್ಷಾ ಶಬ್ದಕ್ಕೆ- "ದೀಯತೇ ಜ್ಞಾನಸದ್ಭಾವಃ ಕ್ಷೀಯತೇ ಚ ಮಲತ್ರಯಮ್" (ಜ್ಞಾನ ಸದ್ಭಾವವನ್ನು ನೀಡುತ್ತದೆ, ಮಲತ್ರಯವನ್ನು ನಾಶಪಡಿಸುತ್ತದೆ) ಎಂಬ ಉಕ್ತಿಯಂತೆ ದಾನ-ಕ್ಷಪಣಾತ್ಮಕ ಎಂಬ ಎರಡರ್ಥಗಳೂ ನಿರೂಪಿತವಾಗಿವೆ. ಸೂರ್ಯನ ಪ್ರಕಾಶವು ಹೇಗೆ ಸುಡುತ್ತದೆ ಹಾಗೂ ಪ್ರಕಾಶಗೊಳಿಸುತ್ತದೆಯೋ ಹಾಗೆಯೇ ಈ ದೀಕ್ಷಾಸಂಸ್ಕಾರವು ಮಲಕ್ಷಯವನ್ನು ಮಾಡಿ ಶಿವಜ್ಞಾನವನ್ನು ಪ್ರಕಾಶಗೊಳಿಸುತ್ತದೆ. ಇಲ್ಲಿ ಮಲಕ್ಷಯ ಎಂದರೆ- "ಮಲದ ವಿಭಾಗವಾಗಲಿ, ನಾಶವಾಗಲಿ, ಮಾಯವಾಗುವಿಕೆಯಾಗಲಿ ಎಂದರ್ಥವಲ್ಲ. ಆದರೆ ಅಗ್ನಿಗೆ ಹೇಗೆ ಉಷ್ಣಸ್ಪರ್ಶ ಮತ್ತು ದಹನಶಕ್ತಿಯು ಮಂತ್ರದಿಂದ ತಡೆಯಲ್ಪಡುತ್ತದೆಯೋ ಹಾಗೆಯೇ ಮಲದ ವ್ಯಾಪಾರದ ಶಕ್ತಿಯು ಉಪಾಯಗಳಿಂದ ತಡೆಯಲ್ಪಡುತ್ತದೆ"[೨೭೮] ಎಂದು ಉಮಾಪತಿ ಶಿವಾಚಾರ್ಯರಿಂದ ಸಂಸಾರೋತ್ಪಾದಕ ಶಕ್ತಿಪ್ರತಿಬಂಧಕತ್ವವೇ ಮಲಕ್ಷಯ ಶಬ್ದಾರ್ಥವು ಎಂದು ವ್ಯವಸ್ಥಾಪಿತವಾಗಿದೆ. ಈ ರೀತಿಯಾಗಿ ದೀಕ್ಷಾಸಂಸ್ಕಾರದಿಂದ ಮಲಕ್ಷಯವಾಗಲು ಜೀವಾತ್ಮನ ಸಂಚಿತಕರ್ಮವು ಹುರಿದ ಬೀಜದಂತೆ ಪುನರ್ಜನ್ಮಕ್ಕೆ ಕಾರಣವಾಗುವುದಿಲ್ಲ. ಮತ್ತು ಪ್ರಾರಬ್ಧಕರ್ಮವು ಭೋಗದಿಂದ ನಾಶವಾಗಿ ಜೀವಾತ್ಮನು ಮುಕ್ತನಾಗುತ್ತಾನೆ.

ಕಾಶ್ಮೀರಶೈವದರ್ಶನ ಮತ್ತು ಸಿದ್ಧಾಂತಶೈವದರ್ಶನದಲ್ಲಿ ಸಂಕ್ಷೇಪವಾಗಿ ಎಪ್ಪತ್ತನಾಲ್ಕು (೭೪), ವಿಸ್ತಾರವಾಗಿ ಒಂದು ಸಾವಿರ ದೀಕ್ಷಾಭೇದಗಳು

---

[೨೭೬] ರತ್ನತ್ರಯಟೀಕಾ, ಶ್ಲೋ. ೩೧೪

[೨೭೭] ಲುಪ್ತಾಗಮಸಂಗ್ರಹಃ, ಭಾಗ-೨, ಉಪೋದ್ಘಾತ, ಪು. ೧೫೭

[೨೭೮] ಶತರತ್ನಸಂಗ್ರಹಃ, ಪು. ೯೦

ನಿರೂಪಿತವಾಗಿವೆಯೆಂದು ಪ್ರೊ. ವ್ರಜವಲ್ಲಭದ್ವಿವೇದ ಅವರು ಪ್ರಸ್ತಾಪ ಮಾಡಿರುತ್ತಾರೆ.[೨೭೯] ಜಿಜ್ಞಾಸುಗಳು ಆ ನಿರ್ದಿಷ್ಟ ಸ್ಥಳಗಳಲ್ಲಿ ನೋಡಬಹುದಾಗಿದೆ.

ಶಕ್ತಿಪಾತಪ್ರಕ್ರಿಯಾ ವಿಮರ್ಶೆ

ಪರಶಿವಬ್ರಹ್ಮಜಿಜ್ಞಾಸುವಾದ ಸಾಧಕನಿಗೆ ದೀಕ್ಷಾಸಂಸ್ಕಾರ ಆವಶ್ಯಕವಾಗಿದೆ. ಆ ಸಂಸ್ಕಾರವು ಪರಶಿವಾನುಗ್ರಹರೂಪವಾದ ಶಕ್ತಿಪಾತಸಾಪೇಕ್ಷವಾದದ್ದು. ಈ ವಿಷಯದಲ್ಲಿ ವೀರಶೈವ, ಕಾಶ್ಮೀರಶೈವ, ಸಿದ್ಧಾಂತಶೈವರಲ್ಲಿ ಐಕಮತ್ಯವಿದೆಯೆಂದು ತೋರುತ್ತದೆ. ಆ ಶಕ್ತಿಪಾತವು ಪರಶಿವಸ್ವಾತಂತ್ರ್ಯ ಪ್ರಯುಕ್ತವೆಂದು ಪ್ರತಿಪಾದಿಸುವ ಕಾಶ್ಮೀರಶೈವರು ಮಲಪರಿಪಾಕ ಮತ್ತು ಕರ್ಮಸಾಮ್ಯವನ್ನು ಬಯಸುವುದಿಲ್ಲ. ಪ್ರಾಣಿಗಳ ಭೋಗ-ಮೋಕ್ಷಕ್ಕೆ ಪ್ರಾಣಿಕರ್ಮಾಪೇಕ್ಷೆಯಿಲ್ಲದಿದ್ದರೆ ಶಿವನ ಎಲ್ಲ ವ್ಯವಹಾರವೂ ಹುಚ್ಚನ ವ್ಯವಹಾರದಂತೆ ಆಗುತ್ತದೆ. ಅವನು ವೈಷಮ್ಯ-ನೈರ್ಘೃಣ್ಯ ದೋಷವುಳ್ಳವನಾಗುತ್ತಾನೆ ಎಂದು ಅಭಿಪ್ರಾಯಪಡುವ ವೀರಶೈವರು ಮತ್ತು ಸಿದ್ಧಾಂತಶೈವರು ಹೇಗೆ ಭೋಗಕ್ಕೆ ಕರ್ಮಸಾಪೇಕ್ಷೆಯಿದೆಯೋ ಹಾಗೆಯೇ ಈಶ್ವರಾನುಗ್ರಹರೂಪ ಶಕ್ತಿಪಾತಕ್ಕೋಸ್ಕರ ಮಲಪರಿಪಾಕಾಪೇಕ್ಷೆಯು ಅವಶ್ಯಕವೆಂದು ಅಂಗೀಕರಿಸಿದ್ದಾರೆ. ಈ ವಿಷಯದಲ್ಲಿ ವೀರಶೈವ-ಸಿದ್ಧಾಂತಶೈವಗಳಲ್ಲಿ ವಿಚಾರಸಾಮ್ಯವು ಕಂಡುಬರುತ್ತದೆ. ಸಿದ್ಧಾಂತ ಶೈವದರ್ಶನದಲ್ಲಿಯೂ ಸಹ ಕೆಲವರು ಕರ್ಮಸಾಮ್ಯವನ್ನು ಶಕ್ತಿಪಾತಕ್ಕೆ ಕಾರಣವೆಂದು ನಿರೂಪಿಸಿದ್ದಾರೆ. ಆದರೆ ಈ ವಿಷಯವು ವೀರಶೈವರಿಗೆ ಒಮ್ಮತವಾಗಿರುವುದಿಲ್ಲ. ದೀಕ್ಷಾಸಂಸ್ಕಾರದಿಂದ ಮಲಕ್ಷಯವು, ಸಂಚಿತಕರ್ಮಗಳು ಸುಡುತ್ತವೆ ಮತ್ತು ಪ್ರಾರಬ್ಧ ಕರ್ಮಗಳು ಮಾತ್ರ ಉಳಿಯುತ್ತವೆ. ಅವುಗಳ ಭೋಗದಿಂದ ಕಾಲಾಂತರದಲ್ಲಿ ಕ್ಷಯವಾಗಿ ಪಶುವಿನ ಶರೀರಪಾತವಾಗುತ್ತದೆ. ಆಗ ಜೀವನು ವಿದೇಹಮುಕ್ತನೆಂದು ಕರೆಯಲ್ಪಡುತ್ತಾನೆ. ಪ್ರಾರಬ್ಧಕರ್ಮವು ಉಳಿದಿರುವವರೆಗೆ ಅವನು ಜೀವನ್ಮುಕ್ತನೆಂದು ಕರೆಯಲ್ಪಡುತ್ತಾನೆ. ಪ್ರಾರಬ್ಧಕರ್ಮಗಳು ಭೋಗದಿಂದಲೇ ಕ್ಷಯವಾಗುತ್ತವೆ ಎಂಬ ವಿಷಯದಲ್ಲಿ ಈ ಮೂರು ವಿಧ ದಾರ್ಶನಿಕರಿಗೂ ಐಕಮತ್ಯವಿದೆ. ವೀರಶೈವ ಸಿದ್ಧಾಂತದಲ್ಲಿ ಮುಖ್ಯರೂಪವಾಗಿ ಮೂರು ಬಗೆಯ ದೀಕ್ಷೆಗಳನ್ನು ಅಂಗೀಕರಿಸಲಾಗಿದೆ. ಅವುಗಳ ಅವಾಂತರ ಸಂಸ್ಕಾರಗಳು ಇಪ್ಪತ್ತೊಂದು ಬಗೆಯೆಂದು ಪ್ರತಿಪಾದಿಸಲಾಗಿದೆ. ಕಾಶ್ಮೀರಶೈವರು ಮತ್ತು ಸಿದ್ಧಾಂತಶೈವರು ಬಹುಸಂಖ್ಯೆಯ ದೀಕ್ಷಾಸಂಸ್ಕಾರಗಳನ್ನು ನಿರೂಪಿಸಿದ್ದಾರೆ. ಇದರಿಂದ ಅವರ ದೃಷ್ಟಿಯಲ್ಲಿ ಅತಿಸೂಕ್ಷ್ಮತೆಯಿರುವುದು ಗೋಚರಿಸುತ್ತದೆ. ದೀಕ್ಷಿತನಾದ ವೀರಶೈವ ಸಾಧಕನು ಸ್ಥೂಲಶರೀರದಲ್ಲಿ ಆಜೀವ ಪರ್ಯಂತ ಇಷ್ಟಲಿಂಗವನ್ನು ಧರಿಸಿ, ಅದನ್ನು ಪೂಜಿಸುವ ಮೂಲಕ ಅಂತರ್ಲಿಂಗಾನುಸಂಧಾನವನ್ನು ಸಾಧಿಸುತ್ತಾನೆಂದು ಎಲ್ಲ ಶೈವರಿಗಿಂತ ವೀರಶೈವದರ್ಶನದ ವೈಶಿಷ್ಟ್ಯವೆಂದು ತಿಳಿಯಬೇಕು.

---

[೨೭೯] ಲುಪ್ತಾಗಮಸಂಗ್ರಹ, ಭಾಗ-೨, ಪು. ೧೬೧-೧೬೨

ಮೋಕ್ಷಸ್ವರೂಪ ವಿಮರ್ಶೆ

ವೀರಶೈವ ಸಿದ್ಧಾಂತದಲ್ಲಿ ಶಕ್ತಿಯ ಸಂಕೋಚದಿಂದ ಬಂಧನವೂ, ಶಕ್ತಿಯ ವಿಕಾಸದಿಂದ ಮೋಕ್ಷವೆಂದೂ ನಿರೂಪಿಸಲಾಗಿದೆ. ಸಂಕುಚಿತವಾದ ಇಚ್ಛಾದಿಶಕ್ತಿಗಳೇ ಆಣವಾದಿ ಮಲಗಳೆಂದು ವ್ಯವಹರಿಸಲಾಗಿದೆ. ದೀಕ್ಷಾಸಂಸ್ಕಾರದಿಂದ ಮಲಕ್ಷಯವಾಗಲು ಕ್ಷೀಣಿಸಿದ ಮಲವುಳ್ಳ ಜೀವಾತ್ಮನು ಕೀಟ-ಭ್ರಮರನ್ಯಾಯದಿಂದ ಈ ಸಿದ್ಧಾಂತದಲ್ಲಿ ಉಕ್ತವಾದ ಷಟ್‌ಸ್ಥಲೋಪಾಸನೆಯ ಮಾರ್ಗದಿಂದ ಕ್ರಮವಾಗಿ ತನ್ನ ಶಕ್ತಿಗಳ ವಿಕಾಸವನ್ನು ಪಡೆದು ಪರಶಿವನಂತೆ ಸರ್ವಕರ್ತೃತ್ವ, ಸರ್ವಜ್ಞತ್ವ, ಪರಿಪೂರ್ಣತ್ವ, ನಿತ್ಯತ್ವ, ವ್ಯಾಪಕತ್ವರೂಪಶಕ್ತಿವಿಶಿಷ್ಟನಾಗುತ್ತಾನೆ ಮತ್ತು ಅಂತಹ ಶಕ್ತಿವಿಶಿಷ್ಟ ಪರಶಿವನಲ್ಲಿ-

ಜಲೇ ಜಲಮಿವ ನ್ಯಸ್ತಂ ವಹ್ನೌ ವಹ್ನಿರಿವಾರ್ಪಿತಮ್।
ಪರೇ ಬ್ರಹ್ಮಣಿ ಲೀನಾತ್ಮಾ ವಿಭಾಗೇನ ನ ದೃಶ್ಯತೇ॥[೨೮೦]

"ನೀರಿನಲ್ಲಿ ನೀರನ್ನು ಬೆರೆಸಿದಂತೆಯೂ, ಬೆಂಕಿಯಲ್ಲಿ ಬೆಂಕಿಯನ್ನು ಬೆರೆಸಿದಂತೆಯೂ ಪರಬ್ರಹ್ಮಸ್ವರೂಪ ಮಹಾಲಿಂಗದಲ್ಲಿ ಆತ್ಮನನ್ನು ಲಯಗೊಳಿಸಿದ ಶಿವಯೋಗಿಯು, ಪರಬ್ರಹ್ಮಸ್ವರೂಪಕ್ಕಿಂತ ಬೇರೆಯಾಗಿ ತೋರುವುದಿಲ್ಲ" ಎಂಬ ಸಿದ್ಧಾಂತ ಶಿಖಾಮಣಿಯ ಉಕ್ತಿಯಂತೆ ಸಮರಸವನ್ನು ಹೊಂದುತ್ತಾನೆ. ಈ ಸಾಮರಸ್ಯವೇ ವೀರಶೈವರ ಮುಕ್ತಿಯು.

ಕಾಶ್ಮೀರಶೈವಸಿದ್ಧಾಂತದಲ್ಲಿಯೂ ಸಹ ಇಚ್ಛಾದಿಶಕ್ತಿಗಳ ಸಂಕೋಚದಿಂದ ಮಲಾವೃತನಾಗಿ ಸಂಸಾರಿ ಎಂದು ಕರೆಯಲ್ಪಡುವ ಪಶುವು ದೀಕ್ಷಾಸಂಸ್ಕಾರದಿಂದ ಮಲಕ್ಷಯನಾಗಿ ಸದ್ಗುರುವು ಉಪದೇಶಿಸಿದ ಜ್ಞಾನದಿಂದ ಸ್ವಸ್ವರೂಪಜ್ಞಾನಸಂಪನ್ನನಾಗಿ ದ್ವೈತಭಾವವನ್ನು ತ್ಯಜಿಸಿ-

ಇತ್ಥಂ ದ್ವೈತವಿಕಲ್ಪೇ ಗಲಿತೇ ಪ್ರವಿಲಂಘ್ಯ ಮೋಹಿನೀಂ ಮಾಯಾಮ್।
ಸಲಿಲೇ ಸಲಿಲಂ ಕ್ಷೀರೇ ಕ್ಷೀರಮಿವ ಬ್ರಹ್ಮಣಿ ಲಯೀ ಸ್ಯಾತ್॥[೨೮೧]

"ಈ ರೀತಿಯಾಗಿ ದ್ವೈತ ವಿಕಲ್ಪವು ನಾಶವಾಗಿ, ಮೋಹವೆಂಬ ಮಾಯೆಯನ್ನು ದಾಟಿ ನೀರಿನಲ್ಲಿ ನೀರು, ಹಾಲಿನಲ್ಲಿ ಹಾಲು ಬೆರೆತಂತೆ ಪರಬ್ರಹ್ಮನಲ್ಲಿ ಬೆರೆಯುತ್ತಾನೆ" ಎಂಬ ಪರಮಾರ್ಥಸಾರದ ಉಕ್ತಿಯಂತೆ ಪರಶಿವನಲ್ಲಿ ಒಂದಾಗುತ್ತಾನೆ.

ಸಿದ್ಧಾಂತ ಶೈವದರ್ಶನದಲ್ಲಿ ದೀಕ್ಷೆಯಿಂದ ಕಲ್ಮಷಗಳು ನಾಶವಾಗಿ ಪರಿಶುದ್ಧನಾದ ಜೀವಾತ್ಮನಿಗೆ "ಪರೇಹ ಶಿವಸಮತಾ"[೨೮೨] (ಶಿವಸಮತೆಯು ಇಲ್ಲಿ ಶ್ರೇಷ್ಠವಾದದ್ದು) ಎಂಬ ಸದ್ಯೋಜ್ಯೋತಿ ಶಿವಾಚಾರ್ಯರ ಉಕ್ತಿಯಂತೆ ಶಿವಸಾಮ್ಯವೆಂಬ ಶ್ರೇಷ್ಠವಾದ

---

[೨೮೦] ಸಿ.ಶಿ, ೨೦-೬೧

[೨೮೧] ಪರಮಾರ್ಥಸಾರಃ, ಶ್ಲೋ. ೫೧

[೨೮೨] ತಂತ್ರಸಂಗ್ರಹಃ, ಶ್ಲೋ. ೫೧

ಮುಕ್ತಿಯು ಲಭಿಸುತ್ತದೆ. ಈ ಸಿದ್ಧಾಂತದ ಪ್ರಕಾರ ಜೀವಾತ್ಮನೂ ಸಹ ಶಿವನಂತೆ ಸರ್ವಜ್ಞತ್ವ ಮೊದಲಾದ ವಿಶಿಷ್ಟಗುಣವುಳ್ಳವನಾಗಿದ್ದಾನೆ. ಆದರೂ ಸಹ ಸಂಸಾರಾವಸ್ಥೆಯಲ್ಲಿ ಮಲಾವರಣದಿಂದ ಗೋಚರವಾಗದ ಗುಣವುಳ್ಳವನಾಗಿ, ಮುಕ್ತಾವಸ್ಥೆಯಲ್ಲಿ ಮಲಗಳ ನಾಶವಾಗಿರುವುದರಿಂದ ಗೋಚರನಾಗುತ್ತಾನೆ. ಆದುದರಿಂದ ತನ್ನ ಗುಣಗಳ ಅಭಿವ್ಯಕ್ತಿಯಿಂದ ಶಿವನಿಗೆ ಸಮಾನನೆಂದು ಸಿದ್ಧಾಂತಶೈವರು ಅಭಿವ್ಯಕ್ತಿಯಿಂದ ಶಿವಸಾಮ್ಯವನ್ನು ಒಪ್ಪಿಕೊಳ್ಳುತ್ತಾರೆ.[೨೮೩] ಈ ಸಿದ್ಧಾಂತಾನುಸಾರವಾಗಿ ಮೋಕ್ಷಾವಸ್ಥೆಯಲ್ಲಿಯೂ ಪಶುವು ಶಿವನಿಗಿಂತ ಬೇರೆಯಾಗಿ ಇರುವನು. ಈ ಸ್ಥಿತಿಯು ತತ್ತ್ವಪ್ರಕಾಶದಲ್ಲಿ ಹೀಗೆ ಸ್ಪಷ್ಟಪಡಿಸಲಾಗಿದೆ:

> ಮುಕ್ತಾತ್ಮಾನೋಽಪಿ ಶಿವಾಃ ಕಿಂತ್ವೇತೇ ಯತ್ಪ್ರಸಾದತೋ ಮುಕ್ತಾಃ।
> ಸೋಽನಾದಿಮುಕ್ತ ಏಕೋ ವಿಜ್ಞೇಯಃ ಪಂಚಮಂತ್ರತನುಃ॥[೨೮೪]

"ಮುಕ್ತಾತ್ಮ ಕೂಡ ಶಿವರೇ ಇವರು ಯಾರ ಅನುಗ್ರಹದಿಂದ ಮುಕ್ತರಾದರೋ ಆತನು ಮಾತ್ರ ಅನಾದಿಮುಕ್ತನು, ಪಂಚಬ್ರಹ್ಮಮಂತ್ರ ಶರೀರವುಳ್ಳವನು ಎಂದು ತಿಳಿಯಬೇಕು."

ಅವಧೂತಸಿದ್ಧರೂ ಸಹ- "ಪರಮಶಿವಃ ಸಿದ್ಧಾನ್ ಪ್ರತ್ಯುಪರತಾಧಿಕಾರೋಽಪ್ಯನ್ಯೇಷ್ವನುಪರತಾಧಿಕಾರಃ", "ಸಿದ್ಧಃ ಪುನರೇಕಾಂತೇನ ಸರ್ವತ್ರ ಏವೋಪರತಾಧಿಕಾರ ಇತಿ ಭೇದಃ"[೨೮೫] (ಪರಶಿವನು ಸಿದ್ಧರನ್ನು ಕುರಿತು ಅಧಿಕಾರವಿಲ್ಲದಿರುವವನಾಗಿರುತ್ತಾನೆ. ಇನ್ನುಳಿದವರಿಗೆ ಕ್ರಿಯಾಧಿಕಾರವನ್ನು ಹೊಂದಿರುತ್ತಾನೆ. ಸಿದ್ಧರು ಏಕಾಂತದಿಂದಲೂ ಅಧಿಕಾರರಹಿತರಾಗಿರುತ್ತಾರೆ ಎಂದು ಭೇದವು) ಎಂದು ಪರಶಿವನಲ್ಲಿ ಮತ್ತು ಮುಕ್ತನಲ್ಲಿ ಶಾಶ್ವತವಾದ ಭೇದವನ್ನು ಹೇಳುವರು. ಆದುದರಿಂದಲೇ ಇದನ್ನು ದ್ವೈತಮತವೆಂದು ಕರೆಯುತ್ತಾರೆ.

ಈ ಪ್ರಕಾರವಾಗಿ ಮುಕ್ತಿಸ್ವರೂಪದ ಪರ್ಯಾಲೋಚನೆಯಿಂದ ವೀರಶೈವರು ಮತ್ತು ಕಾಶ್ಮೀರಶೈವರು ಶಕ್ತಿಯ ವಿಕಾಸದಿಂದ ಮುಕ್ತಿ ಎಂದೂ, ಸಿದ್ಧಾಂತಶೈವರು ಗುಣಗಳ ಅಭಿವ್ಯಕ್ತಿಯಿಂದ ಮುಕ್ತಿ ಎಂದೂ, ವಿಕಾಸವಾದ ಮತ್ತು ಅಭಿವ್ಯಕ್ತಿವಾದದಿಂದ ಮೋಕ್ಷಸ್ವರೂಪವನ್ನು ಸ್ಥಾಪಿಸಿರುವುದು ಕಂಡುಬರುತ್ತದೆ. ವೀರಶೈವ ಮತ್ತು ಕಾಶ್ಮೀರ ಶೈವರ ಮುಕ್ತಿಸ್ವರೂಪದ ವಿಷಯದಲ್ಲಿ ಸಮಾನತೆಯಿದ್ದರೂ ಸಹ ಕಾಶ್ಮೀರಶೈವರು- "ಸಂಕೋಚಗೊಳ್ಳದಿದ್ದರೂ ಸಂಕೋಚಗೊಂಡಂತೆ ಕಾಣಿಸುತ್ತದೆ" ಎಂದು ಇಚ್ಛಾದಿ ಶಕ್ತಿಗಳ ಸಂಕೋಚ-ವಿಕಾಸಗಳು ಅರ್ಥಾತ್ ಬಂಧ-ಮೋಕ್ಷಗಳು ಅವಾಸ್ತವಗಳೆಂದು ತಿಳಿದಿದ್ದಾರೆ. ಆದರೆ ವೀರಶೈವರು ಬಂಧ-ಮೋಕ್ಷಗಳೆರಡನ್ನೂ ಸತ್ಯವೆಂದು

---

[೨೮೩] ಆಗಮಮೀಮಾಂಸಾ, ಪು. ೫೧-೫೨

[೨೮೪] ತತ್ತ್ವಪ್ರಕಾಶಃ, ಶ್ಲೋ. ೬

[೨೮೫] ಪ.ಮೋ.ನಿ.ಕಾ, ಶ್ಲೋ. ೩

ಅಂಗೀಕರಿಸಿದ್ದಾರೆ. ಆದುದರಿಂದಲೇ ಇಲ್ಲಿ ಅವಾಸ್ತವಿಕ ಭೇದಗಳನ್ನು ಹೋಗಲಾಡಿಸುವುದರ ಮೂಲಕ ವಾಸ್ತವಿಕವಾದ ಅದ್ವೈತವನ್ನು ತಲುಪಲು ವಿಶಿಷ್ಟವಾದ ಷಟ್‌ಸ್ಥಲ ಸೋಪಾನ ಪದ್ಧತಿಯನ್ನು ಅಂಗೀಕರಿಸಲಾಗಿದೆ. ಇದೇ ರೀತಿಯಾಗಿ ಸತ್ಯ ಬಂಧಗಳ ನಿವೃತ್ತಿಯು ಕೇವಲ ಜ್ಞಾನದಿಂದ ಸಂಭವಿಸದೇ ಜ್ಞಾನ-ಕರ್ಮಗಳ ಸಮಸಮುಚ್ಚಯವಾದವನ್ನೂ ಸಹ ಅಂಗೀಕರಿಸಿದ್ದಾರೆ.

ಜ್ಞಾನ-ಕರ್ಮಗಳ ಸಮಸಮುಚ್ಚಯ

ಶಕ್ತಿವಿಶಿಷ್ಟಾದ್ವೈತ ವೇದಾಂತದಲ್ಲಿ ಕೇವಲ ಕರ್ಮ ಅಥವಾ ಕೇವಲ ಜ್ಞಾನ ಪ್ರತ್ಯೇಕವಾಗಿ ಮೋಕ್ಷಕ್ಕೆ ಕಾರಣಗಳೆಂದು ಅಂಗೀಕರಿಸುವುದಿಲ್ಲ. ಆದರೆ "ಭಾವಕರ್ಮ ಸಮಾಯುಕ್ತಂ ಜ್ಞಾನಮೇವ ವಿಮುಕ್ತಿದಮ್"[೨೮೬] (ಭಾವ-ಕರ್ಮಗಳಿಂದ ಕೂಡಿದ ಜ್ಞಾನವೇ ಮೋಕ್ಷದಾಯಕವಾಗಿರುವುದು) ಎಂಬ ಆಚಾರ್ಯೋಕ್ತಿಯಂತೆ ಭಾವ-ಕರ್ಮಗಳಿಂದ ಕೂಡಿದ ಜ್ಞಾನವೇ ಮೋಕ್ಷಕ್ಕೆ ಕಾರಣವೆಂದು ಒಪ್ಪಲಾಗಿದೆ. ಇಲ್ಲಿನ ಭಾವವು ಕರ್ಮ- ಜ್ಞಾನಗಳೆರಡಕ್ಕೂ ಅನ್ವಯವಾಗುವಂತಹದ್ದಾಗಿದೆ. ಅರ್ಥಾತ್ ಕರ್ಮದ ಆಚರಣೆಯಲ್ಲಿ ಮತ್ತು ಜ್ಞಾನಪ್ರಾಪ್ತಿಯ ವಿಷಯದಲ್ಲಿ ಭಾವದ ಅವಶ್ಯಕತೆಯಿದೆ. ಕರ್ಮವನ್ನು ಆಶ್ರಯಿಸಿರುವ ಭಾವನೆಯು ಭಕ್ತಿ ಎಂದೂ ಮತ್ತು ಜ್ಞಾನವನ್ನು ಆಶ್ರಯಿಸಿರುವ ಭಾವನೆಯು ನಿದಿಧ್ಯಾಸನವೆಂದೂ ಕರೆಯಲ್ಪಡುತ್ತವೆ. ಆದುದರಿಂದಲೇ ಶ್ರೀರೇಣುಕ ಭಗವತ್ಪಾದರು- ಅರ್ಥವಿಲ್ಲದ ಮಾತು, ಪತಿಯಿಲ್ಲದ ಸತಿ, ವೇದಾದಿ ಜ್ಞಾನವಿಲ್ಲದ ಬುದ್ಧಿ ಹೇಗೆ ನಿಷ್ಫಲವೋ ಹಾಗೆಯೇ ಭಾವಹೀನವಾದ ಕರ್ಮವೂ ಸಹ ನಿಷ್ಫಲವೆಂದು ಹೇಳಿ, ಭಾವನಾಸಹಿತವಾದ ಕರ್ಮದ ಪ್ರಾಶಸ್ತ್ಯವನ್ನು ಹೇಳಿ[೨೮೭]-

> ಚಕ್ಷುರ್ಹೀನೋ ಯಥಾ ರೂಪಂ ನ ಕಿಂಚಿದ್ವೀಕ್ಷಿತುಂ ಕ್ಷಮಃ।
> ಭಾವಹೀನಸ್ತಥಾ ಯೋಗೀ ನ ವಿಶ್ವಂ ದ್ರಷ್ಟುಮೀಶ್ವರಃ।।[೨೮೮]

"ಕಣ್ಣಿಲ್ಲದವನು ರೂಪವನ್ನು ನೋಡಲು ಹೇಗೆ ಸಮರ್ಥನಾಗುವುದಿಲ್ಲವೋ, ಹಾಗೆಯೇ ಭಾವಶೂನ್ಯನಾದ ಯೋಗಿಯು ಶಿವನನ್ನು ನೋಡಲು

---

[೨೮೬] ಸಿ.ಶಿ, ೧೬.೨೫

[೨೮೭] ಅರ್ಥಹೀನಾ ಯಥಾ ವಾಣೀ ಪತಿಹೀನಾ ಯಥಾ ಸತೀ।
ಶ್ರುತಿಹೀನಾ ಯಥಾ ಬುದ್ಧಿರ್ಭಾವಹೀನಾ ತಥಾ ಕ್ರಿಯಾ।।
ಭಾವನಾವಿಹಿತಂ ಕರ್ಮ ಪಾವನಾದಪಿ ಪಾವನಮ್।
ತಸ್ಮಾದ್ ಭಾವನಯಾ ಯುಕ್ತಂ ಪರಧರ್ಮಂ ಸಮಾಚರೇತ್।।
ಭಾವೇನ ಹಿ ಮನಃಶುದ್ಧಿರ್ಭಾವಶುದ್ಧಿಶ್ಚ ಕರ್ಮಣಾ।
ಇತಿ ಸಂಚಿಂತ್ಯ ಮನಸಾ ಯೋಗೀ ಭಾವಂ ನ ಸಂತ್ಯಜೇತ್।।
ಶಿವಭಾವನಯಾ ಸರ್ವಂ ನಿತ್ಯನೈಮಿತ್ತಿಕಾದಿಕಮ್।
ಕುರ್ವನ್ನಪಿ ಮಹಾಯೋಗೀ ಗುಣದೋಷೈರ್ನ ಬಾಧ್ಯತೇ।।
-ಸಿ.ಶಿ, ೧೬.೧೯, ೬೮-೬೯

[೨೮೮] ಸಿ.ಶಿ, ೧೬.೨೦

ಸಮರ್ಥನಾಗುವುದಿಲ್ಲ" ಎಂದು ನಿಷೇಧ ವಿಧಿಯ ಮೂಲಕ ಭಾವನಾವಿಶಿಷ್ಟವಾದ ಜ್ಞಾನದ ಉತ್ಕೃಷ್ಟತೆಯನ್ನು ನಿರೂಪಿಸಿದ್ದಾರೆ. ಆದುದರಿಂದ ಭಾವಕರ್ಮದಿಂದ ಕೂಡಿದ ಜ್ಞಾನವು ಮೋಕ್ಷಕ್ಕೆ ಸಾಧನವೆಂದು ನಿಶ್ಚಯವಾಗುತ್ತದೆ.

ಕರ್ಮವು ಎರಡು ವಿಧ

ಒಂದು ವೇಳೆ ಜ್ಞಾನ, ಕರ್ಮ ಮತ್ತು ಭಾವನೆ -ಈ ಮೂರೂ ಸಹ ಮೋಕ್ಷ ಸಾಧನಗಳೆಂದು ಹೇಳಿದರೆ, "ತಮೇವ ವಿದಿತ್ವಾಽತಿಮೃತ್ಯುಮೇತಿ ನಾನ್ಯಃ ಪಂಥಾ ವಿದ್ಯತೇಽಯನಾಯ"[೨೮೯] (ಪರಬ್ರಹ್ಮನನ್ನು ಅರಿತ ಮನುಷ್ಯನು ಮೃತ್ಯುವನ್ನು ದಾಟುತ್ತಾನೆ. ಪರಮಪದ ಪ್ರಾಪ್ತಿಗೆ ಇದಕ್ಕಿಂತ ಬೇರೆ ದಾರಿಯಿಲ್ಲ) ಎಂದು ಜ್ಞಾನವನ್ನು ಹೊರತು ಪಡಿಸಿದ ಮೋಕ್ಷಸಾಧನೆಯ ಮಾರ್ಗವನ್ನು ನಿರಾಕರಿಸಿ ಜ್ಞಾನವೊಂದರಿಂದಲೇ ಮೋಕ್ಷ ಸಾಧನವೆಂದು ಪ್ರತಿಪಾದಿಸಿರುವ ಶ್ರುತಿವಾಕ್ಯಕ್ಕೆ ವಿರೋಧವಲ್ಲವೇ? ಎಂದು ಪೂರ್ವಪಕ್ಷಕಾರರು ಆಕ್ಷೇಪಿಸಿದರೆ, ಅದಕ್ಕೆ ಹೀಗೆ ಸಮಾಧಾನ ಹೇಳಲಾಗಿದೆ- ಅದು ಹಾಗಲ್ಲ, ಜ್ಞಾನ-ಕರ್ಮಗಳ ಸಮಸಮುಚ್ಚಯದಿಂದ ಮತ್ತು ಜ್ಞಾನ-ಕರ್ಮಗಳ ಅಂಗ-ಅಂಗಿಭಾವ ಸಮುಚ್ಚಯದಿಂದ ಎಂದು ಎರಡು ವಿಧವೆಂದು ಹೇಳಲು ಸಾಧ್ಯವಿದೆ. ಅದು ಹೇಗೆಂದರೆ- ಶ್ರೀ ರೇಣುಕಾಚಾರ್ಯರು ಅಗಸ್ತ್ಯ ಮಹರ್ಷಿಗಳನ್ನು ಕುರಿತು ಕುರುಡ-ಕುಂಟರನ್ಯಾಯದಿಂದ (ಅಂಧಪಂಗುನ್ಯಾಯೇನ) ಜ್ಞಾನ-ಕರ್ಮಗಳ ಸಮ ಸಮುಚ್ಚಯವಾದವನ್ನು ಉಪದೇಶಿಸಿ,[೨೯೦]

> ಜ್ಞಾನಹೀನಂ ಸದಾ ಕರ್ಮ ಪುಂಸಾಂ ಸಂಸಾರಕಾರಣಮ್।
> ತದೇವ ಜ್ಞಾನಯೋಗೇನ ಸಂಸಾರವಿನಿವರ್ತಕಮ್॥[೨೯೧]

"ಜ್ಞಾನಹೀನವಾದ ಕರ್ಮವು ಯಾವಾಗಲೂ ಮಾನವರ ಸಂಸಾರಪ್ರವೃತ್ತಿಗೆ ಕಾರಣವಾಗಿರುವುದು. ಆ ಕರ್ಮವೇ ಜ್ಞಾನದ ಸಂಬಂಧದಿಂದ ಸಂಸಾರನಿವೃತ್ತಿಗೆ ಕಾರಣ ವಾಗುತ್ತದೆ" ಎಂದು ಕೇವಲ ಕರ್ಮವು ಬಂಧನಕ್ಕೆ ಕಾರಣವಾದರೂ ಸಹ, ಜ್ಞಾನ ಸಹಿತವಾದಾಗ ಮೋಕ್ಷಸಾಧನವೆಂದು ಸಮರ್ಥಿಸಿದ್ದಾರೆ.

---

[೨೮೯] ಶ್ವೇತಾಶ್ವತರೋಪನಿಷತ್, ೩.೮

[೨೯೦] ಅಂಧಪಂಗುವದನ್ಯೋನ್ಯಸಾಪೇಕ್ಷೇ ಜ್ಞಾನಕರ್ಮಣೀ।
ಫಲೋತ್ಪತ್ತೌ ವಿರಕ್ತಸ್ತು ತಸ್ಮಾತ್ತದ್ದ್ವಯಮಾಚರೇತ್॥
ಜ್ಞಾನೇ ಸಿದ್ಧೇಽಪಿ ವಿದುಷಾಂ ಕರ್ಮಾಪಿ ವಿನಿಯುಜ್ಯತೇ।
ಫಲಾಭಿಸಂಧಿರಹಿತಂ ತಸ್ಮಾತ್ ಕರ್ಮ ನ ಸಂತ್ಯಜೇತ್॥
ಆಚಾರ ಏವ ಸರ್ವೇಷಾಮಲಂಕಾರಾಯ ಕಲ್ಪ್ಯತೇ।
ಆಚಾರಹೀನಃ ಪುರುಷೋ ಲೋಕೇ ಭವತಿ ನಿಂದಿತಃ॥
ಜ್ಞಾನೇನಾಚಾರಯುಕ್ತೇನ ಪ್ರಸೀದತಿ ಮಹೇಶ್ವರಃ।
ತಸ್ಮಾದಾಚಾರವಾನ್ ಜ್ಞಾನೀ ಭವೇದಾದೇಹಪಾತನಮ್॥ -ಸಿ.ಶಿ, ೧೬.೧೧-೧೪

[೨೯೧] ಸಿ.ಶಿ, ೧೬.೨೭

ಇದರ ರಹಸ್ಯವಿಷ್ಟು- ಕರ್ಮವು ಪತಿಕರ್ಮ ಮತ್ತು ಪಶುಕರ್ಮವೆಂದು ಎರಡು ವಿಧ. ಅಗ್ನಿಷ್ಟೋಮದಿಂದ ಮೊದಲ್ಗೊಂಡು ಅಶ್ವಮೇಧಾಂತಗಳಾದ ಎಲ್ಲ ಯಜ್ಞಗಳು ಸ್ವರ್ಗವೇ ಮೊದಲಾದವುಗಳನ್ನು ಪಡೆಯುವ ಸಾಧನಗಳು. ಅವುಗಳಿಂದ ಮೋಕ್ಷಪ್ರಾಪ್ತಿಯು ಆಗುವುದಿಲ್ಲ. ಆದ್ದರಿಂದ ಅವುಗಳಿಗೆ ಪಶುಕರ್ಮವೆಂದು ಕರೆಯಲಾಗಿದೆ. ಇಷ್ಟಲಿಂಗಧಾರಣೆ, ಇಷ್ಟಲಿಂಗಾರ್ಪಿತ ಪ್ರಸಾದ ಸ್ವೀಕಾರ, ಗುರು-ಜಂಗಮರ ಪೂಜೆ, ಅವರ ಪಾದೋದಕ-ಪ್ರಸಾದಗಳ ಸೇವನೆ, ಪಂಚಾಕ್ಷರ ಮಂತ್ರ ಜಪ, ಭಸ್ಮ-ರುದ್ರಾಕ್ಷಧಾರಣೆ ಎಂಬ ಅಷ್ಟಾವರಣಗಳು ಮತ್ತು ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರಗಳೆಂಬ ಪಂಚಾಚಾರಗಳು ವೀರಶೈವರ ವಿಶೇಷ ಆಚರಣೆಗಳು ಪಾಶವನ್ನು ನಾಶಗೊಳಿಸುವುದರಿಂದ ಅವುಗಳು ಪತಿಕರ್ಮಗಳೆನಿಸಿವೆ. ಪತಿಕರ್ಮಗಳೆಂದು ಕರೆಯಲಾಗಿರುವ ವೀರಶೈವರ ವಿಶೇಷ ಆಚರಣೆಗಳ ವಿವೇಚನೆಯನ್ನು ಮೂರು ಮತ್ತು ನಾಲ್ಕನೆಯ ಪರಿಚ್ಛೇದಗಳಲ್ಲಿ ಕಾಣಬಹುದು.

ನೀಲಕಂಠ ಶಿವಾಚಾರ್ಯರು- "ಅಥಾತೋ ಬ್ರಹ್ಮಜಿಜ್ಞಾಸಾ"[೨೯೨] ಎಂಬ ಶಾರೀರಿಕಸೂತ್ರಕ್ಕೆ ವ್ಯಾಖ್ಯಾನಮಾಡುವ ಸಂದರ್ಭದಲ್ಲಿ 'ಅಥ' ಶಬ್ದಕ್ಕೆ ಧರ್ಮಾನಂತರವೆಂದು ಹೇಳಿ-

> ಧರ್ಮಾನಂತರ್ಯಮೇವಾತೋ ವಾಚ್ಯಂ ಧರ್ಮೋ ದ್ವಿಧಾ ಮತಃ।
> ಪಶುಧರ್ಮಃ ಪ್ರಾಥಮಿಕಃ ಪತಿಧರ್ಮೋ ದ್ವಿತೀಯಕಃ॥
> ಪಶುಧರ್ಮ ಇತಿ ಪ್ರಾಹುರ್ಯಸ್ತು ಕಾಮ್ಯಫಲಪ್ರದಃ।
> ನಿಷ್ಕಾಮೇನ ಸ್ವಪಾಪಸ್ಯ ವಿಚ್ಛಿತ್ತ್ಯೈ ಸಮನುಷ್ಠಿತಃ॥
> ಯೋ ಧರ್ಮಸ್ತಂ ತು ಶಾಸ್ತ್ರೇಷು ಪತಿಧರ್ಮಂ ಪ್ರಚಕ್ಷತೇ॥[೨೯೩]

ಧರ್ಮವು ಎರಡು ವಿಧ. ಮೊದಲನೆಯದು ಪಶುಧರ್ಮ, ಎರಡನೆಯದು ಪತಿಧರ್ಮ. ಕಾಮ್ಯಫಲಪ್ರದವಾದುದನ್ನು ಪಶುಧರ್ಮವೆಂದು ಹೇಳುವರು. ತನ್ನ ಪಾಪನಾಶಕ್ಕೆ ನಿಷ್ಕಾಮದಿಂದ ಮಾಡುವ ಕರ್ಮವು ಪತಿಧರ್ಮವೆಂದು ಶಾಸ್ತ್ರಗಳಲ್ಲಿ ಹೇಳಿದೆ. ಅದೇ ಧರ್ಮವು" ಎಂದು ಪತಿಕರ್ಮದ ವಿಭಾಗ ಮತ್ತು ವೈಶಿಷ್ಟ್ಯವನ್ನು ಹೇಳಿ, ಭಸ್ಮ-ರುದ್ರಾಕ್ಷಗಳ ಧಾರಣೆ, ಇಷ್ಟಲಿಂಗದ ತ್ರಿಕಾಲಪೂಜೆ, ಎಲ್ಲ ಶ್ರುತಿಗಳಿಗೂ ಮಕುಟದಂತಿರುವ ಪಂಚಾಕ್ಷರ ಮಹಾಮಂತ್ರದ ಜಪ, ಗುರು-ಲಿಂಗ-ಜಂಗಮರ ಪಾದೋದಕ-ಪ್ರಸಾದಗಳ ಸೇವನೆ ಇತ್ಯಾದಿಗಳು ಪಾಶವಿಮೋಚಕಗಳೆಂದು ಅವುಗಳನ್ನು ಪತಿಧರ್ಮಗಳೆಂದು ಉಪದೇಶಿಸಿದ್ದಾರೆ.[೨೯೪]

---

[೨೯೨] ಬ್ರಹ್ಮಸೂತ್ರ, ೧-೧-೧

[೨೯೩] ಕ್ರಿಯಾಸಾರ, ಭಾಗ-೧, ಪು. ೧೬-೧೭

[೨೯೪] ಭಸ್ಮಧಾರಣಮುಖ್ಯಂ ಹಿ ಕಾಲಾಗ್ನ್ಯುಪನಿಷನ್ಮುಖೈಃ।
ಬೃಹಜ್ಜಾಬಾಲಮುಖ್ಯೈಶ್ಚ ವಿಹಿತಂ ತತ್ ಪದೇ ಪದೇ॥

ಮತ್ತು ಅದೇ ಶಿವಾಚಾರ್ಯರು-

ಅನುತಿಷ್ಠನ್ ಪಶೋರ್ಧರ್ಮಾನ್ ಪತಿಧರ್ಮಾನ್ ಸ ಚಾರ್ಹತಿ।
ಯಥಾ ಪಿಪೀಲಿಕಾ ವೃಕ್ಷಮೂಲಮಾಘ್ರಾಯ ತತ್ಫಲಮ್॥
ಆರುಹ್ಯ ಲಭತೇ ತದ್ವತ್ ಪತಿಧರ್ಮೈಕತತ್ಪರಃ।
ಯಥಾ ವಿಹಂಗಃ ಪಕ್ಷಾಭ್ಯಾಂ ಫಲಿತಂ ವೃಕ್ಷಮಾಗತಃ॥
ಪಶ್ಯನ್ ಫಲಮವಾಪ್ನೋತಿ ತದ್ವಚ್ಛೀಘ್ರಂ ತದರ್ಹತಿ।[೨೧೫]

"ಇರುವೆಯು ಮರದ ಬುಡವನ್ನು ಮೂಸಿ ನೋಡಿ ಮರವನ್ನೇರಿ ಅದರ ಫಲವನ್ನು ಹೇಗೆ ಪಡೆಯುತ್ತದೆಯೋ ಹಾಗೆಯೇ ಪಶುಧರ್ಮವನ್ನು ಆಚರಿಸುತ್ತಿರಲು ಪತಿಧರ್ಮವನ್ನು ಆಚರಿಸಲು ಅರ್ಹನಾಗುತ್ತಾನೆ. ಪಕ್ಷಿಯು ಎರಡು ರೆಕ್ಕೆಗಳಿಂದ ಫಲದಿಂದ ಸಮೃದ್ಧವಾದ ಮರವನ್ನೇರಿ, ಫಲವನ್ನು ನೋಡಿ ಅದನ್ನು ಶೀಘ್ರವಾಗಿ ಹೇಗೆ ಪಡೆಯುತ್ತದೆಯೋ ಹಾಗೆಯೇ ಪತಿಧರ್ಮವೊಂದನ್ನೇ ಆಶ್ರಯಿಸುವವನು ಶೀಘ್ರವಾಗಿ ಫಲವನ್ನು ಪಡೆಯುತ್ತಾನೆ."

ಮೊದಲಾದವುಗಳಿಂದ ಪಶುಧರ್ಮವನ್ನು ಅನುಷ್ಠಾನ ಮಾಡುವ ನಿಷ್ಕಾಮನು ಇರುವೆಗೆ ಸಮಾನವಾಗಿಯೂ, ಪತಿಧರ್ಮವನ್ನು ಅನುಷ್ಠಾನ ಮಾಡುವವನು ಪಕ್ಷಿಗೆ ಸಮಾನನೆಂದು ಹೇಳಲಾಯಿತು. ಈ ಪಶುಧರ್ಮಗಳನ್ನು ನಿಷ್ಕಾಮ ಬುದ್ಧಿಯಿಂದ ಅನುಷ್ಠಾನ ಮಾಡುವವರಿಗೂ ಸಹ ಪತಿಧರ್ಮದ ಸಮರ್ಪಕತೆಯ ಪರಂಪರೆಯಿಂದ ಮುಕ್ತಿಗೆ ಸಾಧನವು. ಆದರೆ ಪತಿಧರ್ಮಗಳು ಜ್ಞಾನದ ಸಂಬಂಧದಿಂದ ಸಾಕ್ಷಾತ್ತಾಗಿ ಮುಕ್ತಿಯ ಸಾಧನತ್ವದಲ್ಲಿ ಪರ್ಯವಸಾನಗೊಳ್ಳುತ್ತವೆ. ಆದುದರಿಂದ ಪಶುಕರ್ಮಗಳಾದ ಯಜ್ಞಾದಿಗಳೊಂದಿಗೆ ಜ್ಞಾನದ ಸಮಸಮುಚ್ಚಯಕ್ಕೆ ವಿರೋಧವಿದ್ದರೂ ಸಹ ಪತಿ ಕರ್ಮಗಳಾದ ಅಷ್ಟಾವರಣ, ಪಂಚಾಚಾರಗಳೆಂಬ ವಿಶೇಷ ಆಚರಣೆಗಳಿಗೂ ಜ್ಞಾನಕ್ಕೂ ಎಂದಿಗೂ ವಿರೋಧ ಬರುವುದಿಲ್ಲ.

ಶ್ರುತಿಸ್ಮೃತಿಗಳು ಅಂಗೀಕರಿಸಿರುವ ಸಮಸಮುಚ್ಚಯವಾದ

ವಿದ್ಯಾಂ ಚಾವಿದ್ಯಾಂ ಚ ಯಸ್ತದ್ವೇದೋಭಯಂ ಸಹ।
ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಽಮೃತಮಶ್ನುತೇ॥[೨೧೬]

ರುದ್ರಾಕ್ಷಧಾರಣಂ ಚೈವ ದಹರೋಪಾಸನಾದಿಕಮ್।
ಕಾಲಯೋಃ ಶಿವಪೂಜಾ ಚ ತ್ರಿಷು ಕಾಲೇಷು ವಾ ಸದಾ॥
ವಿದ್ಯಾಸು ಶ್ರುತಿರುತ್ಕೃಷ್ಟಾ ರುದ್ರೈಕಾದಶಿನೀ ಶ್ರುತೌ।
ತತ್ರ ಪಂಚಾಕ್ಷರೋ ಮಂತ್ರಃ ಶಿವ ಇತ್ಯಕ್ಷರದ್ವಯಮ್॥
ಇತಿ ಶ್ರುತಿಶಿರೋರತ್ನ ಶಿರೋರತ್ನ ಮನೋರ್ಜಪಃ।
ಆಚಾರ್ಯದೇವ ಇತ್ಯುಕ್ತಂ ಮಂತ್ರದೇಶಿಕಪೂಜನಮ್॥
ಪ್ರಸಾದಗ್ರಹಣಂ ತಸ್ಯೇತ್ಯಾದ್ಯಾಃ ಪಾಶವಿಮೋಚಕಾಃ।
ಪತಿಧರ್ಮಾ ಇಮೇ ಜ್ಞೇಯಾಸ್ತದಾನಂತರ್ಯಮತ್ರ ಚ॥

-ಕ್ರಿ.ಸಾ, ಭಾಗ-೧, ಪು.೧೭

[೨೧೫] ಕ್ರಿ.ಸಾ, ಭಾಗ-೧, ಪು.೧೭

[೨೧೬] ಈಶಾವಾಸ್ಯೋಪನಿಷತ್, ೧೧

"ಯಾವನು ವಿದ್ಯೆ ಮತ್ತು ಅವಿದ್ಯೆ -ಇವೆರಡನ್ನೂ ಒಟ್ಟುಗೂಡಿಸಿ ಅರಿಯುತ್ತಾನೋ (ಅವನು) ಅವಿದ್ಯೆಯ ಮೂಲಕ ಮೃತ್ಯುವನ್ನು ದಾಟಿ, ವಿದ್ಯೆಯ ಮೂಲಕ ಅಮೃತವನ್ನು ಪಡೆಯುತ್ತಾನೆ" ಎಂದು ಶ್ರುತಿಯಲ್ಲಿಯೂ ಸಹ ಜ್ಞಾನಕರ್ಮಗಳ ಸಮಸಮುಚ್ಚಯವನ್ನು ಪ್ರತಿಪಾದಿಸಲಾಗಿದೆ. ಈ ಶ್ರುತಿವಾಕ್ಯವನ್ನು ವ್ಯಾಖ್ಯಾನಿಸುವಾಗ ಶ್ರೀ ಉಮಚಿಗಿ ಶಂಕರಶಾಸ್ತ್ರಿಗಳು ವೀರಶೈವದರ್ಶನದ ವೈಶಿಷ್ಟ್ಯವನ್ನು ಈ ರೀತಿಯಾಗಿ ಪ್ರತಿಪಾದಿಸಿದ್ದಾರೆ- "ವಿದ್ಯೆಯು ಬ್ರಹ್ಮನಲ್ಲಿ ಆತ್ಮವು ಐಕ್ಯವಾಗುವ ಜ್ಞಾನ ಮತ್ತು ಅವಿದ್ಯೆಯು ವಿದ್ಯೆಗಿಂತ ಭಿನ್ನವಾದ ಕ್ರಿಯೆಯು ಶಿವಲಿಂಗದ ಪೂಜೆ, ಪ್ರಾರ್ಥನೆಯ ರೂಪವುಳ್ಳದ್ದು. ಈ ಎರಡೂ ಒಟ್ಟಿಗೆ ಸೇರಿಕೊಂಡು ಪರಸ್ಪರ ಸಮಾನವಾದ ಆಶ್ರಯವನ್ನು ಪಡೆಯುತ್ತವೆ. ಯಾವನು ಪರಮಪುರುಷಾರ್ಥವನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲು ವೇದವನ್ನು ತಿಳಿದಿರುತ್ತಾನೆಯೋ, ಅವನು ಅವಿದ್ಯೆಯಾ=ಶಿವಲಿಂಗಕ್ಕೆ ಅರ್ಪಿತವಾದ ಪತಿಕರ್ಮದಿಂದ, ಮೃತ್ಯುಂ=ಹುಟ್ಟು, ಸಾವು ಮೊದಲಾದ ಪ್ರವಾಹಕ್ಕೆ ಮೂಲವಾದ ಮಲತ್ರಯಗಳನ್ನು, ತೀರ್ತ್ವಾ=ದಾಟಿ, ವಿದ್ಯಯಾ=ಸ್ವಸ್ವರೂಪ ಶಿವಜ್ಞಾನದಿಂದ ಅಮೃತಂ=ಶಕ್ತಿಯ ವಿಕಾಸರೂಪವಾದ ಅಮೃತವನ್ನು, ಅಶ್ನುತೇ=ಪಡೆಯುತ್ತಾನೆ."[೨೯೭]

ಇಲ್ಲೊಂದು ಆಕ್ಷೇಪ. ಉತ್ಪತ್ತಿ, ಪ್ರಾಪ್ತಿ, ವಿಕೃತಿ, ಸಂಸ್ಕೃತಿಗಳು ಕರ್ಮಫಲಗಳು ಹಾಗೂ ಅವಿದ್ಯಾನಿವೃತ್ತಿಯು ಜ್ಞಾನದ ಫಲವು. ಆದ್ದರಿಂದ ಕರ್ಮ ಹಾಗೂ ವಿದ್ಯೆಗೂ ಸಮಾನ ಆಧಾರವನ್ನು ಹೇಳುವುದು ಹೇಗೆ? ಕಪ್ಪೆ ಚಿಪ್ಪಿನ ಚೂರಿನಲ್ಲಿ ಸಂಪೂರ್ಣವಾಗಿ ತೋರುವ ಬೆಳ್ಳಿಯ ಭ್ರಮೆಯ ನಿವೃತ್ತಿಯು ಸ್ನಾನಾಚಮನ ಕರ್ಮವನ್ನು ಅಪೇಕ್ಷಿಸುವುದಿಲ್ಲವಷ್ಟೆ. ಆದುದರಿಂದ ಬ್ರಹ್ಮಸಾಕ್ಷಾತ್ಕಾರಕ್ಕೆ ಮಾತ್ರ ಅವಿದ್ಯಾನಿವೃತ್ತಿ ಫಲವೆಂದು ಒಪ್ಪಿಕೊಳ್ಳಬೇಕು. ಅದನ್ನು ಶ್ರುತಿಯು- "ತಮೇವ ವಿದಿತ್ವಾಽತಿಮೃತ್ಯುಮೇತಿ ನಾನ್ಯಃ ಪಂಥಾ ವಿದ್ಯತೇಽಯ ನಾಯ"[೨೯೮] (ಅದನ್ನೇ ತಿಳಿದರೆ ಮೃತ್ಯುವನ್ನು ದಾಟುತ್ತಾನೆ. ಅದನ್ನು ಹೊಂದಲು ಬೇರೆ ಮಾರ್ಗವೇ ಇಲ್ಲ) ಎಂದು. ಈ ಮಾತನ್ನು ಸಮರ್ಥಿಸುವ ಸ್ಮೃತಿವಾಕ್ಯವೂ ಇದೆ-

> ಜ್ಞಾನಾದೇವ ತು ಕೈವಲ್ಯಂ ಪ್ರಾಪ್ಯತೇ ಯೇನ ಮುಚ್ಯತೇ।
> ತಸ್ಮಾತ್ಕರ್ಮ ನ ಕುರ್ವಂತಿ ಯತಯಃ ಪಾರದರ್ಶಿನಃ॥

"ಜ್ಞಾನದಿಂದಲೇ ಮಕ್ತಿಯು, ಬಂಧದಿಂದ ಬಿಡುಗಡೆಯೂ. ಆದುದರಿಂದ ಪಾರದರ್ಶಿಗಳಾದ ಯತಿಗಳು ಅಂತಹ ಕರ್ಮವನ್ನು ಮಾಡುವುದಿಲ್ಲ" ಎಂದು ಆಕ್ಷೇಪವೆತ್ತಿದರೆ, ಅದಕ್ಕೆ ಹೀಗೆ ಉತ್ತರಿಸಲಾಗಿದೆ- "ಅದು ಹಾಗಲ್ಲ. ಮೇಲೆ ಹೇಳಿದ ವಾಕ್ಯಗಳಿಗೆ ಕೇವಲ ಸ್ಥೂಲಕರ್ಮಗಳಿಗೆ ಕೈವಲ್ಯ ಸಾಧನವನ್ನು ನಿರಾಕರಿಸುವವರ

---

[೨೯೭] ಈಶಾವಾಸ್ಯೋಪನಿಷತ್, ೧೧ (ಶಾಂಕರೀ ವ್ಯಾಖ್ಯಾನ)

[೨೯೮] ಶ್ವೇತಾಶ್ವತರೋಪನಿಷತ್, ೩.೮

ಪರವಾದ ಶ್ರುತಿ- ಸ್ಮೃತಿವಾಕ್ಯಗಳು ಸಮುಚ್ಚಿತರ ಕರ್ಮಗಳಿಗೆ ಹೊಂದುವುದರಿಂದ ಮೋಕ್ಷಸಾಧನವಾಗಿವೆ. ಹಾಗಿಲ್ಲದಿದ್ದರೆ "ಅಂಧಂ ತಮಃ ಪ್ರವಿಶಂತಿ"[೨೯೯] (ಕಡು ಕತ್ತಲೆಯನ್ನು ಪ್ರವೇಶಿಸುತ್ತಾರೆ) ಇತ್ಯಾದಿ ಉಕ್ತಿಗಳು ಒಂದೊಂದರ ನಿಂದೆಯನ್ನು ಮುಂದಿಟ್ಟುಕೊಂಡು "ವಿದ್ಯಾಂ ಚಾವಿದ್ಯಾಂ ಚ"[೩೦೦] (ವಿದ್ಯೆ ಮತ್ತು ಅವಿದ್ಯೆಗಳ) ಇತ್ಯಾದಿ ವಾಕ್ಯಗಳಿಂದ ಜ್ಞಾನಕರ್ಮಗಳ ಸಮುಚ್ಚಯವು ಮೋಕ್ಷಸಾಧನವೆಂದು ಪ್ರತಿಪಾದಿಸಲು ಸಾಧ್ಯವಾಗುವುದಿಲ್ಲ. ಹಾಗೆಯೇ ಸಂಕುಚಿತ ಶಕ್ತಿತ್ರಯರೂಪ ಮಲತ್ರಯಗಳ ನಿವೃತ್ತಿಯು ಶಕ್ತಿವಿಕಾಸರೂಪ ಶಿವತ್ವ ಪ್ರಾಪ್ತಿಯೇ ಮೋಕ್ಷವು. ಮೃತ್ಯುಶಬ್ದದಿಂದ ಸೂಚಿತವಾದ ಕರ್ಮಾದಿಮಲಗಳ ಫಲವುಳ್ಳ, ಅವಿದ್ಯಾ ಶಬ್ದದಿಂದ ಸೂಚಿತವಾದ ಕರ್ಮಗಳು. ಹೃದಯಾಕಾಶದ ಮಧ್ಯದಲ್ಲಿ ಲಿಂಗಧಾರಣಾದಿ ಸೂಕ್ಷ್ಮಕರ್ಮಗಳು, ವಿದ್ಯೆಯಾದರೋ ಸೂರ್ಯನನ್ನು ಮುಚ್ಚಿದ್ದ ಮೋಡವನ್ನು ವಾಯುವು ಸರಿಸುವಂತೆ ತಿರೋಹಿತವಾದ ತನ್ನ ಶಕ್ತಿಯು ಮರೆಮಾಡಿದ್ದನ್ನು ವಿಕಾಸಗೊಳಿಸುವ ಫಲವುಳ್ಳದ್ದಾಗಿದೆ.

ಮತ್ತು "ತೇನೈತಿ ಬ್ರಹ್ಮವಿತ್ ಪುಣ್ಯಕೃತ್ ತೈಜಸಶ್ಚ"[೩೦೧] (ಪುಣ್ಯವನ್ನು ಮಾಡಿದವನೂ ಪರಮಾತ್ಮನ ತೇಜಸ್ಸಿನಲ್ಲಿ ಏಕೀಭೂತನೂ ಆದ (ಬೇರೆ) ಬ್ರಹ್ಮವಿದನೂ ಈ ಮಾರ್ಗದಿಂದ ಹೋಗುತ್ತಾನೆ), "ಸತ್ಯೇನ ಲಭ್ಯಸ್ತಪಸಾ ಹ್ಯೇಷ ಆತ್ಮಾ ಸಮ್ಯಗ್‌ಜ್ಞಾನೇನ ಬ್ರಹ್ಮಚರ್ಯೇಣ ನಿತ್ಯಮ್"[೩೦೨] (ಈ ಆತ್ಮನು ನಿತ್ಯವೂ ಸತ್ಯದಿಂದಲೂ, ತಪಸ್ಸಿನಿಂದಲೂ, ಸಮ್ಯಗ್‌ಜ್ಞಾನದಿಂದಲೂ, ಬ್ರಹ್ಮಚರ್ಯದಿಂದಲೂ ಲಭ್ಯನು), "ತತ್ಪ್ರಾಪ್ತಿಹೇತುರ್ಜ್ಞಾನಂ ಚ ಕರ್ಮ ಚೋಕ್ತಂ ಮಹಾಮುನೇ"[೩೦೩] (ಎಲೈ ಮಹಾಮುನಿಯೆ, ಪರಮಪದ ಪ್ರಾಪ್ತಿಗೆ ಕಾರಣವಾದ ಜ್ಞಾನ-ಕರ್ಮಗಳನ್ನು ಹೇಳುತ್ತೇನೆ), "ಯಥಾನ್ನಂ ಮಧುಸಂಯುಕ್ತಂ ಮಧುಚಾನ್ನೇನ ಸಂಯುತಮ್। ಏವಂ ತಪಶ್ಚ ವಿದ್ಯಾ ಚ ಸಂಯುಕ್ತಂ ಭೇಷಜಂ ಮಹತ್" (ಹೇಗೆ ಜೇನಿನೊಂದಿಗೆ ಸೇರಿದ ಅನ್ನ, ಅನ್ನದೊಂದಿಗೆ ಬೆರೆತ ಜೇನು ಶ್ರೇಷ್ಠವಾದ ಔಷಧವಾಗುತ್ತದೆಯೋ ಹಾಗೆಯೇ ಜ್ಞಾನ-ಕರ್ಮಗಳ ಸಮಾಗಮ ಶ್ರೇಷ್ಠವಾದುದು) ಮೊದಲಾದ ಶ್ರುತಿ-ಸ್ಮೃತಿವಾಕ್ಯಗಳೂ ಸಹ ಜ್ಞಾನ-ಕರ್ಮಗಳ ಸಮಸಮುಚ್ಚಯವನ್ನು ಪ್ರತಿಪಾದಿಸುತ್ತವೆ. ಆದುದರಿಂದ ಕರ್ಮನಿಂದೆಯನ್ನು ಪ್ರತಿಪಾದಿಸುವ ವಾಕ್ಯಗಳು ಕೇವಲ ಜ್ಯೋತಿಷ್ಟೋಮಾದಿ ಸ್ಥೂಲಕರ್ಮಗಳ ವಿಷಯದ ಧರ್ಮಗಳೆಂದು ನಿರ್ಧಾರವಾಗುತ್ತದೆ. ಜ್ಞಾನದ

---

[೨೯೯] ಈಶಾವಾಸ್ಯೋಪನಿಷತ್, ೧೨

[೩೦೦] ಈಶಾವಾಸ್ಯೋಪನಿಷತ್, ೧೧

[೩೦೧] ಬೃಹದಾರಣ್ಯಕೋಪನಿಷತ್, ೪-೪-೯

[೩೦೨] ಮುಂಡಕೋಪನಿಷತ್, ೩.೫

[೩೦೩] ಭವಸಂತರಣೋಪನಿಷತ್, ೧.೩೨

ಸಹಕಾರದಿಂದ ಲಿಂಗಧಾರಣಾದಿ ಪತಿಕರ್ಮದಿಂದುಂಟಾದ ಮೋಕ್ಷದ ಉತ್ಪತ್ತಿ, ಪ್ರಾಪ್ತಿ, ವಿಕೃತಿ, ಸಂಸ್ಕೃತಿಗಳು ಜ್ಞಾನದೊಂದಿಗೆ ಇರದ ಪಶುಕರ್ಮಗಳ ಫಲಗಳಾಗಿರಲಿ. ಜ್ಞಾನ ವಿಶಿಷ್ಟ ಪತಿಕರ್ಮಗಳಾದರೋ ಮರಳಿಬಾರದ ಸರ್ವಜ್ಞತ್ವ ಇತ್ಯಾದಿ ಆರು ಅಂಗಗಳಿಂದ ಕೂಡಿದ ಶಿವತ್ವವನ್ನು ಹೊಂದುವುದೆ ಫಲವೆಂದು ನಿರ್ಣಯಿಸಲಾಗಿದೆ.

ಡಾ. ಟಿ.ಜಿ. ಸಿದ್ಧಪ್ಪಾರಾಧ್ಯರು ಈ ವಿಷಯವನ್ನು ಬೇರೊಂದು ರೀತಿಯಾಗಿ ನಿರೂಪಿಸಿದ್ದಾರೆ. ಅದು ಹೀಗಿದೆ- "ಈ ವಿಷಯದಲ್ಲಿ ಕೆಲವರು ಪುರುಷಾರ್ಥಗಳಿಗೆ ಸಂಬಂಧಿಸಿದ ಕರ್ಮ ಮತ್ತು ವಿಹಿತಕರ್ಮಗಳಿಗೆ ಸಂಬಂಧಿಸಿದ್ದು ಎಂದು ಕರ್ಮವನ್ನು ಜ್ಞಾನದ ಅಂಗವೆಂದು ಭಾಷ್ಯದಲ್ಲಿ ಸ್ಪಷ್ಟವಾಗಿ ಪ್ರತಿಪಾದಿಸಿದ್ದಾರೆ. ಆದರೂ ಸಹ ಜ್ಞಾನ-ಕರ್ಮಗಳೆರಡರ ಅನುಷ್ಠಾನವು ಎಲ್ಲ ಆಶ್ರಮದವರಿಗೂ ವಿಧೇಯವಾಗಿದೆ ಎಂದು ಭಾಷ್ಯದಲ್ಲಿ ಜ್ಞಾನ-ಕರ್ಮಗಳ ಸಮುಚ್ಚಯವಾದವು ಪ್ರಸ್ತಾಪವಾಗಿದ್ದರೂ ಆರಂಭ ಮತ್ತು ಅಂತ್ಯದಲ್ಲಿ ಕರ್ಮ ಮತ್ತು ಜ್ಞಾನಗಳು ಅಂಗವೆಂದು ನಿರೂಪಿಸಿರುವ ಕಾರಣದಿಂದ ಇವೆರಡರ ಸಮುಚ್ಚಯವು ಸಮಸಮುಚ್ಚಯವಾಗಿರದೆ, ಅಂಗಾಂಗಿಭಾವ ಸಮುಚ್ಚಯವೇ ಆಗಿದೆ. ಕರ್ಮ-ಜ್ಞಾನಗಳೆರಡು ಅಂಗಾಂಗಿಭಾವಗಳಾದರೂ ಸಹ ಅಂಗಿಯಿಂದ ಯಾವ ಫಲವುಂಟಾಗುತ್ತದೆಯೋ ಅದೇ ಫಲವು ಅಂಗದಿಂದಲೂ ಸಂಭವಿಸುತ್ತದೆ ಎಂಬ ನ್ಯಾಯದಂತೆ ಕರ್ಮವೂ ಸಹ ಮೋಕ್ಷಕ್ಕೆ ಸಾಧನವೆಂಬುದಕ್ಕೆ ವಿರೋಧವಾಗಲಾರದು. ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ- "ಅಂಧಪಂಗುವದನ್ಯೋನ್ಯಸಾಪೇಕ್ಷೇ ಜ್ಞಾನ ಕರ್ಮಣೀ"[೩೦೪] (ಕರ್ಮ ಮತ್ತು ಜ್ಞಾನಗಳೆರಡೂ ಕುರುಡ ಮತ್ತು ಕುಂಟರಂತೆ ಪರಸ್ಪರವಾಗಿ ಅಪೇಕ್ಷೆಯುಳ್ಳವುಗಳಾಗಿರುತ್ತವೆ) ಎಂದು ಹೇಳಿದ್ದರೂ ಕೂಡ ಕೊನೆಯಲ್ಲಿ "ಜ್ಞಾನೇನಾಚಾರಯುಕ್ತೇನ ಪ್ರಸೀದತಿ ಮಹೇಶ್ವರಃ"[೩೦೫] (ಆಚಾರಯುಕ್ತವಾದ ಜ್ಞಾನದಿಂದಲೇ ಮಹೇಶ್ವರನು ಪ್ರಸನ್ನನಾಗುವನು) ಎಂಬಲ್ಲಿ ಆಚಾರಯುಕ್ತವಾದ ಜ್ಞಾನವೆಂದು ನಿರ್ದೇಶಿಸುವಲ್ಲಿ ಜ್ಞಾನದ ಪ್ರಾಧಾನ್ಯವು ಸ್ಪಷ್ಟವಾಗುತ್ತದೆ. ಜ್ಞಾನದ ಪ್ರಾಧಾನ್ಯದಿಂದ ಕರ್ಮವು ಅಂಗವೆಂದು ಸ್ವಯಂ ಸಿದ್ಧವಾಗುತ್ತದೆ. ಒಂದು ವೇಳೆ 'ಅಂಧಪಂಗುವತ್' (ಕುರುಡ-ಕುಂಟರಂತೆ) ಎಂಬ ಶ್ಲೋಕವೊಂದರಿಂದಲೇ ಜ್ಞಾನ-ಕರ್ಮಗಳೆರಡೂ ಸಹ ಮೋಕ್ಷಕ್ಕೆ ಸಾಧನವು ಹೇಳಲ್ಪಟ್ಟಿತು ಎಂದು ಆಗ್ರಹಪಡಿಸಿದರೆ ಆಗ "ಶಿವೋಽಹಮಿತಿ ಭಾವೋ ಹಿ ಶಿವತಾಪತ್ತಿಕಾರಣಮ್। ನ ಜ್ಞಾನಮಾತ್ರಂ ನಾಚಾರೋ ಭಾವಯುಕ್ತಃ ಶಿವೋ ಭವೇತ್"[೩೦೬] (ನಾನೇ ಶಿವನೆಂಬ ಭಾವವೇ ಶಿವತ್ವ ಪ್ರಾಪ್ತಿಗೆ ಕಾರಣವಾಗುವುದು. ಕೇವಲ ಜ್ಞಾನವಾಗಲಿ, ಕೇವಲ ಆಚಾರವಾಗಲಿ ಶಿವತ್ವ ಪ್ರಾಪ್ತಿಗೆ ಕಾರಣವಾಗದೆ, ಶಿವಭಾವವುಳ್ಳವನೇ ಶಿವನಾಗುವನು) ಎಂಬಲ್ಲಿ ಭಾವವೂ ಕೂಡ ಮೋಕ್ಷಕ್ಕೆ ಸಾಧನವೆಂದು ಹೇಳಿರುವುದರಿಂದ ಜ್ಞಾನ,

---

[೩೦೪] ಸಿ.ಶಿ, ೧೬.೧೧

[೩೦೫] ಸಿ.ಶಿ, ೧೬.೧೪

[೩೦೬] ಸಿ.ಶಿ,೧೬.೧೬

ಕರ್ಮ, ಭಾವ -ಈ ಮೂರೂ ಸಮುಚ್ಚಯವನ್ನು ಹೇಳಿದಂತಾಗುತ್ತದೆ. ಆದುದರಿಂದ ಜ್ಞಾನವೇ ಸಾಕ್ಷಾತ್ ಮೋಕ್ಷ ಸಾಧನ, ಕರ್ಮ ಮತ್ತು ಭಾವಗಳು ಅದರ ಅಂಗಗಳು. "ಅಂಗಿಫಲಮಂಗಸ್ಯಾಪಿ" (ಅವಯವದ ಫಲ ಅವಯವಿಗೂ) ಎಂಬ ನ್ಯಾಯದಂತೆ ಜ್ಞಾನಕರ್ಮಗಳೆರಡೂ ಸಹ ಮೋಕ್ಷಸಾಧನಗಳೆಂದು ತಿಳಿಯಬೇಕು. ಆದುದರಿಂದ ಜ್ಞಾನಕರ್ಮಗಳ ಅಂಗ- ಅಂಗಿಭಾವ ಸಮುಚ್ಚಯವು ಇಲ್ಲಿ ವಿವಕ್ಷಿತವಾಯಿತೇ ಹೊರತು, ಸಮಸಮುಚ್ಚಯವಲ್ಲ. ಅದೇ ರೀತಿಯಾಗಿ ಕರ್ಮದ ಅಪ್ರಾಧಾನ್ಯತೆ ಮತ್ತು ಸ್ವಾತಂತ್ರ್ಯದಿಂದ ಅದು ಮೋಕ್ಷ ಸಾಧನೆಗೆ (ಸ್ವತಂತ್ರವಾಗಿ) ಕಾರಣ ಆಗುವುದಿಲ್ಲವಾದುದರಿಂದ "ನಾನ್ಯಃ ಪಂಥಾ ವಿದ್ಯತೇಽಯನಾಯ" (ಮೋಕ್ಷಕ್ಕೆ ಹೋಗಲು ಬೇರೆ ಮಾರ್ಗವಿಲ್ಲ) ಎಂಬಲ್ಲಿ ಜ್ಞಾನಕ್ಕಿಂತ ಬೇರೆಯಾದದ್ದು (ಕರ್ಮವು) ಮೋಕ್ಷಕ್ಕೆ ಸಾಧನವಲ್ಲ ಎಂಬ ನಿಷೇಧಕ್ಕೆ ವಿರೋಧವಾಗುವುದಿಲ್ಲ ಎಂದು ಶ್ರುತಿ, ಸೂತ್ರ, ಆಗಮಗಳ ಸಾಮರಸ್ಯವೆಂದು ಹೇಳುತ್ತಾರೆ.

ನಾನ್ಯಃ ಪಂಥೇತಿ ವಾಕ್ಯೇನ ಮಾರ್ಗಾಂತರ ನಿಷೇಧತಃ।
ತೇಷಾಂ ವಿದ್ಯಾಂಗತಾ ಪ್ರೋಕ್ತಾ ನಾನ್ಯಥೇತಿ ವಿನಿಶ್ಚಯಃ॥

"(ಮೋಕ್ಷಸಾಧನೆಗೆ) ಬೇರೆ ಮಾರ್ಗವಾವುದೂ ಇಲ್ಲವೆಂಬ ಮಾತಿನಿಂದ ಇತರೆ ಮಾರ್ಗಗಳೆಲ್ಲವೂ ನಿಷೇಧವಾಗಿರುವುದರಿಂದ ಅವುಗಳು (ಕರ್ಮಾದಿಗಳು) ಜ್ಞಾನದ ಅಂಗಗಳೆಂದು ಹೇಳಲ್ಪಟ್ಟವು. ಬೇರೆ ಯಾವುದೂ ಅಲ್ಲವೆಂದು ನಿರ್ಧಾರವಾಯಿತು" ಎಂದು ಕ್ರಿಯಾಸಾರದಲ್ಲಿಯೂ ಸಹ ಕರ್ಮವು ಜ್ಞಾನಕ್ಕೆ ಅಂಗವೆಂದು ನಿರೂಪಿತವಾಗಿದೆ.[೩೦೭]

ಶಿವಾನುಗ್ರಹವೇ ಮೋಕ್ಷಕ್ಕೆ ಕಾರಣ

ವಸ್ತುತಃ ಶಕ್ತಿವಿಶಿಷ್ಟಾದ್ವೈತ ವೇದಾಂತದಲ್ಲಿ ಪರಶಿವನ ಅನುಗ್ರಹದಿಂದಲೇ ಮೋಕ್ಷವೆಂದು ಒಪ್ಪಲಾಗಿದೆ. ಅದನ್ನು ಶ್ರೀ ರೇಣುಕಾಚಾರ್ಯರು ಹೀಗೆ ನಿರೂಪಿಸಿದ್ದಾರೆ-

ಶಂಭೋಃ ಶಿವಪ್ರಸಾದೇನ ಸಂಸಾರಚ್ಛೇದಕಾರಿಣಾ।
ಮೋಹಗ್ರಂಥಿಂ ವಿನಿರ್ಭಿದ್ಯ ಮುಕ್ತಿಂ ಯಾಂತಿ ವಿವೇಕಿನಃ॥
ವಿನಾ ಪ್ರಸಾದಮೀಶಸ್ಯ ಸಂಸಾರೋ ನ ನಿವರ್ತತೇ।
ವಿನಾ ಸೂರ್ಯೋದಯಂ ಲೋಕೇ ಕುತಃ ಸ್ಯಾತ್ತಮಸೋ ಲಯಃ॥
ಸರ್ವಾನುಗ್ರಾಹಕಃ ಶುಂಭುಃ ಕೇವಲಂ ಕೃಪಯಾ ಪ್ರಭುಃ।
ಮೋಚಯೇತ್ ಸಕಲಾನ್ ಜಂತೂನ್ನ ಕಿಂಚಿದಿಹ ಕಾರಣಮ್॥[೩೦೮]

"ವಿವೇಕಿಗಳು ಸಂಸಾರನಾಶಕ್ಕೆ ಮೂಲಕಾರಣೀಭೂತವಾದ ಶಿವಪ್ರಸಾದದಿಂದಲೇ ಅಜ್ಞಾನಗ್ರಂಥಿಯನ್ನು ಭೇದಿಸಿ, ಮೋಕ್ಷವನ್ನು ಪಡೆಯುವರು.

---

[೩೦೭] ಶಕ್ತಿವಿಶಿಷ್ಟಾದ್ವೈತದರ್ಶನಮ್, ಪು. ೧೨೮-೧೨೯

[೩೦೮] ಸಿ.ಶಿ, ೧೮.೫೯-೬೧

ಶಿವನ ಪ್ರಸಾದವಿಲ್ಲದೆ ಸಂಸಾರವು ನಿವೃತ್ತಿಯನ್ನು ಹೊಂದುವುದಿಲ್ಲ. ಲೋಕದಲ್ಲಿ ಸೂರ್ಯೋದಯವಿಲ್ಲದೆ ಕತ್ತಲೆಯು ಹೇಗೆ ತಾನೆ ನಾಶವಾಗುವುದು? ಸರ್ವರನ್ನೂ ಅನುಗ್ರಹಿಸುವ ಶಿವನು ಕೇವಲ ತನ್ನ ಕೃಪೆಯಿಂದಲೇ ಸಮಸ್ತ ಪ್ರಾಣಿಗಳನ್ನು ಸಂಸಾರಬಂಧನದಿಂದ ಬಿಡಿಸುವನು. ಈ ವಿಷಯದಲ್ಲಿ ಅವನ ಅನುಗ್ರಹವೇ ಮುಖ್ಯ ಕಾರಣವಲ್ಲದೆ ಮತ್ತಾವ ಕಾರಣವೂ ಇರುವುದಿಲ್ಲ."

ಆ ಶಿವಾನುಗ್ರಹವು ಕೇವಲ ಪರಶಿವನ ಜ್ಞಾನದಿಂದ ಉಂಟಾಗದೆ, ಅದನ್ನು ಪಡೆಯಲು ಬೇಕಾಗುವ ಶಿವಾರ್ಚನೆಯ ರೂಪದ ಕರ್ಮವನ್ನೂ ಬಯಸುತ್ತದೆ. ಆದುದರಿಂದಲೇ ಭಗವತ್ಪಾದರು- "ಶಿವಾರ್ಚಾ ಕರ್ಮ ವಿಜ್ಞೇಯಂ ಬಾಹ್ಯಂ ಯಾಗಾದಿ ನೋಚ್ಯತೇ"[೩೦೯] (ಶಿವಾರ್ಚನೆಯೇ ಕರ್ಮವಲ್ಲದೆ ಕಷ್ಟಸಾಧ್ಯವಾದ ಜ್ಯೋತಿಷ್ಟೋಮಾದಿ ಬಾಹ್ಯಯಾಗಗಳು ಕರ್ಮವಲ್ಲ) ಎಂದು ಕರ್ಮವನ್ನು, "ಶಿವಾತ್ಮಕಮಿದಂ ಸರ್ವಂ ಶಿವಾದನ್ಯನ್ನ ವಿದ್ಯತೇ। ಶಿವೋಽಹಮಿತಿ ಯಾ ಬುದ್ಧಿಸ್ತದೇವ ಜ್ಞಾನಮುತ್ತಮಮ್॥"[೩೧೦] (ಸಮಸ್ತ ಪ್ರಪಂಚವೂ ಶಿವಸ್ವರೂಪವಾದುದು, ಶಿವನನ್ನು ಹೊರತುಪಡಿಸಿ ಯಾವುದೂ ಇರುವುದಿಲ್ಲ. 'ನಾನು ಶಿವನು' ಎಂಬ ಯಾವ ಬುದ್ಧಿಯುಂಟೋ ಅದೇ ಉತ್ತಮವಾದ ಜ್ಞಾನವೆನಿಸುವುದು) ಎಂದು ಜ್ಞಾನದ ಲಕ್ಷಣವನ್ನು ನಿರೂಪಿಸಿದ್ದಾರೆ. ಆದುದರಿಂದ ಶಿವಜ್ಞಾನಸಂಪನ್ನನಾದವನು ಶಿವಾರ್ಚನೆಯಿಂದ ಶಿವಾನುಗ್ರಹವನ್ನು ಪಡೆದು ಮುಕ್ತನಾಗುತ್ತಾನೆ ಎಂದು ಶಿವಾನುಗ್ರಹವನ್ನು ಪಡೆಯಲು ಬೇಕಾಗುವ ಜ್ಞಾನ-ಕರ್ಮಗಳೆರಡು ಮೋಕ್ಷಕ್ಕೆ ಕಾರಣವೆಂದು ಅಂಗೀಕರಿಸಿ ಜ್ಞಾನ-ಕರ್ಮಗಳ ಸಮಸಮುಚ್ಚಯವನ್ನು ಇಲ್ಲಿ ಪ್ರತಿಪಾದಿಸಲಾಗಿದೆ.

ಲೋಕಸಂಗ್ರಹಕ್ಕಾಗಿ ನಿತ್ಯನೈಮಿತ್ತಿಕಕರ್ಮಾನುಷ್ಠಾನ

ಈ ಜಗತ್ತಿನಲ್ಲಿ "ಕಶ್ಚಿದ್ಧೀರಃ ಪ್ರತ್ಯಗಾತ್ಮಾನಮೈಕ್ಷತ್"[೩೧೧] (ಯಾರೋ ಒಬ್ಬ ವಿವೇಕಿಯು ಆತ್ಮವನ್ನು ತಮ್ಮ ಅಂತರಂಗದಲ್ಲಿ ಕಾಣುತ್ತಾನೆ) ಎಂಬ ಶ್ರುತಿಪ್ರಮಾಣದಂತೆ ಜ್ಞಾನಿಗಳ ಸಂಖ್ಯೆಯು ಅಲ್ಪವೇ ಸರಿ. ಶಿವಾತ್ಮೈಕ್ಯ ಜ್ಞಾನಸಂಪನ್ನನಾದ ಯಾವನಾದರೂ 'ನಾನು ಶಿವನು' ಎಂದು ಸ್ವೇಚ್ಛೆಯಾಗಿ ವರ್ತಿಸಿದರೆ ಆಗ ಸಾಮಾನ್ಯ ಜನಗಳೂ ಸಹ ಅವನನ್ನು ನೋಡಿ ಸ್ವೈರಾಚಾರಿಗಳಾಗಿ ಸಾಮಾಜಿಕ ವ್ಯವಸ್ಥೆಯನ್ನು ನಾಶಗೊಳಿಸುತ್ತಾರೆ. ಈ ದೋಷವನ್ನು ದೂರಮಾಡಲು ವೀರಶೈವ ಸಿದ್ಧಾಂತದಲ್ಲಿ ಜ್ಞಾನಾಮೃತದಿಂದ ತೃಪ್ತನಾಗಿದ್ದರೂ ಶಿವಯೋಗಿಯು ಆಜೀವಪರ್ಯಂತ ಆಚರಿಸಬೇಕಾದ ನಿತ್ಯನೈಮಿತ್ತಿಕ ಕರ್ಮಾನುಷ್ಠಾನವನ್ನು ಆಚಾರ್ಯರು ಅಪ್ಪಣೆ ಮಾಡಿರುತ್ತಾರೆ. ಅದು ಹೇಗೆಂದರೆ-

> ಅಧರ್ಮಂ ನ ಸ್ಪೃಶೇತ್ ಕಿಂಚಿತ್ ವಿಹಿತಂ ಧರ್ಮಮಾಚರೇತ್।
> ತಂ ಚ ಕಾಮವಿನಿರ್ಮುಕ್ತಂ ತಮಪಿ ಜ್ಞಾನಪೂರ್ವಕಮ್॥

---

[೩೦೯] ಸಿ.ಶಿ, ೯.೨೨

[೩೧೦] ಸಿ.ಶಿ, ೧೬.೩೧

[೩೧೧] ಕಠೋಪನಿಷತ್, ೪.೧

ಧರ್ಮ ಏವ ಸಮಸ್ತಾನಾಂ ಯತಃ ಸಂಸಿದ್ಧಿಕಾರಣಮ್।
ನಿಃಸ್ಪೃಹೋಽಪಿ ಮಹಾಯೋಗೀ ಧರ್ಮಮಾರ್ಗಂ ಚ ನ ತ್ಯಜೇತ್॥
ಜ್ಞಾನಾಮೃತೇನ ತೃಪ್ತೋಽಪಿ ಯೋಗೀ ಧರ್ಮಂ ನ ಸಂತ್ಯಜೇತ್।
ಆಚಾರಂ ಮಹತಾಂ ದೃಷ್ಟ್ವಾ ಪ್ರವರ್ತಂತೇ ಹಿ ಲೌಕಿಕಾಃ॥
ಸದಾಚಾರಪ್ರಿಯಃ ಶಂಭುಃ ಸದಾಚಾರೇಣ ಪೂಜ್ಯತೇ।
ಸದಾಚಾರಂ ವಿನಾ ತಸ್ಯ ಪ್ರಸಾದೋ ನೈವ ಜಾಯತೇ॥[೩೧೨]

"ಜ್ಞಾನಿಯು ಅಧರ್ಮವನ್ನು ಸ್ವಲ್ಪವೂ ಸ್ಪರ್ಶಿಸಬಾರದು, ಶಿವಾಗಮಗಳಲ್ಲಿ ನಿರೂಪಿತವಾಗಿರುವ ಧರ್ಮವನ್ನು ಆಚರಿಸಬೇಕು. ಆ ಧರ್ಮವನ್ನಾದರೋ, ನಿಷ್ಕಾಮಬುದ್ಧಿಯಿಂದಲೂ, ಜ್ಞಾನಪೂರ್ವಕವಾಗಿಯೂ ಆಚರಿಸಬೇಕು. ಧರ್ಮವೇ ಸಮಸ್ತ ಜನರ ಭೋಗಮೋಕ್ಷ ಪ್ರಾಪ್ತಿಗೆ ಕಾರಣವಾಗಿರುವುದು. ಆದುದರಿಂದ ಯೋಗಿಯು ತಾನು ನಿಸ್ಪೃಹನಾದರೂ ಧರ್ಮಮಾರ್ಗವನ್ನು ಬಿಡಬಾರದು. ಯೋಗಿಯು ತಾನು ಜ್ಞಾನಾಮೃತದಿಂದ ತೃಪ್ತನಾಗಿದ್ದರೂ ಧರ್ಮವನ್ನು ಬಿಡಬಾರದು. ಏಕೆಂದರೆ ಲೌಕಿಕರು ದೊಡ್ಡವರ ಆಚಾರವನ್ನು ನೋಡಿ ಅವರಂತೆ ವರ್ತಿಸುವರಷ್ಟೆ. ಶಿವನು ಸದಾಚಾರ ಪ್ರಿಯನಾಗಿರುವನು, ಸದಾಚಾರದಿಂದಲೇ ಪೂಜಿಸಲ್ಪಡುವನು. ಸದಾಚಾರವಿಲ್ಲದೆ ಅವನ ಪ್ರಸಾದವೇ ಸಿದ್ಧಿಸುವುದಿಲ್ಲ."

ಆದುದರಿಂದ ಶಿವಾನುಗ್ರಹ ಮತ್ತು ಲೋಕಸಂಗ್ರಹಾರ್ಥವಾಗಿ ಜ್ಞಾನಿಗಳೂ ಸಹ ನಿತ್ಯಕರ್ಮವನ್ನು ಅವಶ್ಯವಾಗಿ ಆಚರಿಸಬೇಕೆಂಬ ಕಾರಣದಿಂದ ಜ್ಞಾನ-ಕರ್ಮಗಳ ಸಮಸಮುಚ್ಚಯವು ಅವಶ್ಯಕವಾಗಿದೆ.

ಹೀಗೆ ಜ್ಞಾನ-ಕರ್ಮ ಸಮಸಮುಚ್ಚಯವಾದದಿಂದ ಮೋಕ್ಷವುಂಟಾಗುತ್ತದೆ ಎಂದು ಪ್ರತಿಪಾದಿಸುವ ವೀರಶೈವಾಚಾರ್ಯರು ಅವುಗಳ ಸಹಕಾರಿ ಸಾಧನರೂಪದಲ್ಲಿ ಅಷ್ಟಾವರಣ ಮತ್ತು ಪಂಚಾಚಾರಗಳನ್ನು ಪ್ರತಿಪಾದಿಸಿದ್ದಾರೆ. ಈ ಸಿದ್ಧಾಂತದಲ್ಲಿ ಅಷ್ಟಾವರಣಗಳು ಸಾಧಕನ ಅಂಗಗಳೆಂದೂ, ಪಂಚಾಚಾರಗಳು ಪ್ರಾಣಗಳೆಂದೂ ಪ್ರತಿಪಾದಿಸಲಾಗಿದೆ. ಆದುದರಿಂದ ಸಾಧಕನು ಅಷ್ಟಾವರಣಸಂಪನ್ನನೂ, ಪಂಚಾಚಾರ ಪರಾಯಣನೂ ಆಗಿ ಜ್ಞಾನ-ಕರ್ಮಗಳ ಸಹಾಯದಿಂದ ಷಟ್‌ಸ್ಥಲೋಕ್ತಮಾರ್ಗದಿಂದ ಉಪಾಸನೆಯನ್ನು ಮಾಡುತ್ತಲೇ ಶಿವನೊಂದಿಗೆ ಬೆರೆಯುತ್ತಾನೆ.

ಈ ಸಿದ್ಧಾಂತದಲ್ಲಿ ಅಂಗೀಕರಿಸಿರುವ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳೆಂಬ ತತ್ತ್ವತ್ರಯಗಳು ಇತರ ದರ್ಶನಗಳಲ್ಲಿ ಕಂಡುಬರದ ಕಾರಣದಿಂದ ಅವುಗಳ ಸ್ವರೂಪವನ್ನು ವಿಮರ್ಶಾತ್ಮಕವಾಗಿ ಕ್ರಮವಾಗಿ ಪ್ರಸ್ತಾಪಿಸಲಾಗುವುದು. ■

---

[೩೧೨] ಸಿ.ಶಿ, ೧೬.೬೧, ೬೪-೬೬

ಮೂರನೆಯ ಪರಿಚ್ಛೇದ

ಅಷ್ಟಾವರಣವಿಜ್ಞಾನ

"ಶ್ರೇಯಾಂಸಿ ಬಹುವಿಘ್ನಾನಿ" ಎಂಬ ಉಕ್ತಿಯಂತೆ ಶ್ರೇಯೋಮಾರ್ಗದಲ್ಲಿ ಪ್ರವೃತ್ತರಾದ ಸಾಧಕರು ತಮ್ಮ ಸಾಧನೆಗಳಲ್ಲಿ ಅನೇಕ ಬಗೆಯ ವಿಘ್ನಗಳನ್ನು ಎದುರಿಸುತ್ತಾರೆ. ವಿಘ್ನಗಳ ಪರಿಹಾರವಾಗದೆ ಯಾವೊಬ್ಬನೂ ಸಹ ತಮ್ಮ ಗುರಿಯನ್ನು ಮುಟ್ಟಲಾರರು. ಆದುದರಿಂದ ಷಟ್‌ಸ್ಥಲಮಾರ್ಗದಿಂದ ಶಿವ-ಜೀವರ ಐಕ್ಯರೂಪ ಲಿಂಗಾಂಗಸಾಮರಸ್ಯವೆಂಬ ಮೋಕ್ಷವನ್ನು ಪಡೆಯುವ ಇಚ್ಛೆಯಿಂದ ಪ್ರವೃತ್ತರಾದ ಸಾಧಕರ ವಿಘ್ನಗಳ ಬಾಧೆಯ ನಿವಾರಣೆಗೋಸ್ಕರ ವೀರಶೈವಾಚಾರ್ಯರು ಎಂಟು ಬಗೆಯ ರಕ್ಷಾಕವಚಗಳ ವ್ಯವಸ್ಥೆಯನ್ನು ಮಾಡಿರುತ್ತಾರೆ. ಅವುಗಳನ್ನು ವೀರಶೈವ ಸಿದ್ಧಾಂತದಲ್ಲಿ "ಅಷ್ಟಾವರಣ"ಗಳು ಎಂದು ಕರೆಯಲ್ಪಟ್ಟಿವೆ. ಚಂದ್ರಜ್ಞಾನಾಗಮದಲ್ಲಿ-

> ಗುರುರ್ಲಿಂಗಂ ಜಂಗಮಶ್ಚ ತೀರ್ಥಂ ಚೈವ ಪ್ರಸಾದಕಃ।
> ಭಸ್ಮ-ರುದ್ರಾಕ್ಷ-ಮಂತ್ರಾಶ್ಚೇತ್ಯಷ್ಟಾವರಣಸಂಜ್ಞಿತಾಃ॥[೧]

ಎಂದು ಅಷ್ಟಾವರಣಗಳ ಹೆಸರುಗಳು ಉಲ್ಲೇಖವಾಗಿವೆ. ಅದರಂತೆ- (೧) ಗುರು, (೨) ಲಿಂಗ, (೩) ಜಂಗಮ, (೪) ಪಾದೋದಕ, (೫) ಪ್ರಸಾದ, (೬) ಭಸ್ಮ, (೭) ರುದ್ರಾಕ್ಷ, (೮) ಮಂತ್ರ -ಇವೇ ಅಷ್ಟಾವರಣಗಳು. ಮತ್ತು ಪೂಜ್ಯರಾದ ಶ್ರೀಪತಿ ಪಂಡಿತಾರಾಧ್ಯರೂ ಸಹ ಹೀಗೆ ಹೇಳಿದ್ದಾರೆ-

> ಭಸ್ಮ ರುದ್ರಾಕ್ಷಕಂ ಲಿಂಗಂ ಗುರುರ್ಮಂತ್ರಂ ತಥಾ ಚರಃ।
> ಪಾದೋದಕಂ ಪ್ರಸಾದಶ್ಚ ಶೈವಾಷ್ಟಾವರಣಾನಿ ಹಿ॥[೨]

"ಭಸ್ಮ, ರುದ್ರಾಕ್ಷ, ಲಿಂಗ, ಗುರು, ಮಂತ್ರ, ಜಂಗಮ, ಪಾದೋದಕ ಮತ್ತು ಪ್ರಸಾದ -ಇವು ಶೈವರ (ವೀರಶೈವರ ಅಷ್ಟಾವರಣಗಳು)."

ಈಗ ಮೊದಲಿಗೆ ಅಷ್ಟಾವರಣ ಶಬ್ದದ ಅರ್ಥವನ್ನು ನಿರೂಪಿಸಿ ಕ್ರಮವಾಗಿ ಅವುಗಳ ಸ್ವರೂಪವನ್ನು ವಿಮರ್ಶಿಸಲಾಗುವುದು.

---

೧. ಚ.ಜ್ಞಾ, ಕ್ರಿ.ಪಾ, ೨.೧

೨. ಬ್ರಹ್ಮಸೂತ್ರ ಶ್ರೀಕರಭಾಷ್ಯ, ೧-೨-೨, ಪು. ೧೬೬

ಆವರಣ ಶಬ್ದದ ಅರ್ಥವಿಚಾರ

"ಆವ್ರಿಯತೇ ದೇಹಾದಿಕಂ ಯೇನ ತದಾವರಣಮ್" (ಯಾವುದರಿಂದ ದೇಹಾದಿಗಳು ಆವರಿಸಿವೆಯೋ ಅದು ಆವರಣ) ಎಂಬುದು ಆವರಣ ಶಬ್ದದ ವ್ಯುತ್ಪತ್ತಿ. ಈ ವ್ಯುತ್ಪತ್ತಿಯಂತೆ ಹೊದಿಕೆ, ಮುಚ್ಚಿಡುವಿಕೆ, ಸುತ್ತುವರಿಯಲ್ಪಟ್ಟ ಇತ್ಯಾದಿ ಅನೇಕಾರ್ಥಗಳಾಗುತ್ತವೆ. ಲೋಕದಲ್ಲಿ ಆವರಣದ ಪ್ರಾಮುಖ್ಯತೆಯಿಂದ ಎರಡು ಪ್ರಯೋಜನಗಳಾಗುತ್ತವೆ. ಅವುಗಳಲ್ಲಿ ಮೊದಲನೆಯದು ಸ್ವರೂಪದ ಆಚ್ಛಾದನೆ (ಹೊದಿಕೆ) ಮತ್ತು ಎರಡನೆಯದು ಸ್ವರೂಪದ ಸಂರಕ್ಷಣೆ.

ಅವುಗಳಲ್ಲಿ ಅದ್ವೈತ ವೇದಾಂತದ ಪ್ರಕಾರ ಅವಿದ್ಯೆಯ ಆವರಣ ಮತ್ತು ವಿಕ್ಷೇಪಾತ್ಮಕ ಎಂಬ ಎರಡು ಶಕ್ತಿಗಳು ಅಂಗೀಕೃತವಾಗಿವೆ. ಅಲ್ಲಿ ಆವರಣ ಶಕ್ತಿಯಿಂದ ಆತ್ಮನ ವಾಸ್ತವಿಕ ಸ್ವರೂಪವು ಆವರಿಸಲ್ಪಟ್ಟಿದೆ. ಆದುದರಿಂದಲೇ ಜೀವವು ಸಂಸಾರದಲ್ಲಿ ಸುತ್ತುತ್ತಿರುತ್ತದೆ ಎಂದು ವೇದಾಂತಿಗಳು ಪ್ರತಿಪಾದಿಸಿದ್ದಾರೆ. ವೀರಶೈವ ಸಿದ್ಧಾಂತದಲ್ಲಿ ಅಷ್ಟಾವರಣ ಎಂಬಲ್ಲಿ ಪ್ರಯೋಗವಾಗಿರುವ ಆವರಣ ಶಬ್ದಕ್ಕೆ ರಕ್ಷಾಕವಚ ಎಂಬ ಅರ್ಥವನ್ನು ಸ್ವೀಕರಿಸುವುದರಿಂದ, ಈ ಅಷ್ಟಾವರಣಗಳಿಂದ ಜೀವವು ಸಾಂಸಾರಿಕ ದೋಷಗಳಿಂದ ರಕ್ಷಿಸಲ್ಪಡುತ್ತದೆ ಎಂದರ್ಥವಾಗುತ್ತದೆ. ಅದನ್ನು ಆಗಮದಲ್ಲಿ ಹೀಗೆ ಹೇಳಲಾಗಿದೆ-

> ಇಮಾನಿ ಶಿವಭಕ್ತಾನಾಂ ಭವದೋಷತತೇಃ ಸದಾ।
> ನಿವಾರಣೈಕಕಾರ್ಯಾಣಿ ಖ್ಯಾತಾನ್ಯಾವರಣಾಖ್ಯಯಾ॥[೩]

"ಇವುಗಳು ಶಿವಭಕ್ತರ ಜನನ-ಮರಣಗಳೆಂಬ ದೋಷಗಳನ್ನು ಯಾವಾಗಲೂ ನಿವಾರಿಸುವುದರಿಂದ 'ಆವರಣ' ಎಂಬ ಹೆಸರಿನಿಂದ ಪ್ರಸಿದ್ಧವಾಗಿವೆ."

ಯುದ್ಧಭೂಮಿಯಲ್ಲಿ ಯೋಧನು ಶತ್ರುಗಳ ಶಸ್ತ್ರಪ್ರಹಾರದಿಂದ ತನ್ನ ಶರೀರವನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಹೇಗೆ ಕವಚದಿಂದ ಶರೀರವನ್ನು ಮುಚ್ಚಿರುತ್ತಾನೆಯೋ ಹಾಗೆಯೇ ಇವುಗಳಿಂದ ಶಿವಭಕ್ತನು ಕಾಮಕ್ರೋಧಾದಿ ಅರಿಷಡ್ವರ್ಗಗಳಿಂದ ರಕ್ಷಿಸಲ್ಪಡುತ್ತಾನೆಂದು ಇವುಗಳು ಅಷ್ಟಾವರಣಗಳೆಂದು ಕರೆಯಲ್ಪಟ್ಟಿವೆ. ಆದುದರಿಂದ ಹೇಗೆ "ಮಶಕಾರ್ಥೋ ಧೂಮಃ" (ಸೊಳ್ಳೆಗಳ ನಿರ್ಮೂಲನೆಗೆ ಧೂಮ) ಎಂಬಲ್ಲಿ "ಅರ್ಥವೆಂದರೆ ಪ್ರತಿಪಾದ್ಯ ವಸ್ತುಪ್ರಯೋಜನದ ನಿವೃತ್ತಿಗಾಗಿ" (ಅರ್ಥೋಽಭಿಧೇಯವಸ್ತುಪ್ರಯೋಜನ ನಿವೃತ್ತಿಷು") ಎಂಬ ಕೋಶ ಪ್ರಮಾಣದಿಂದ ಸೊಳ್ಳೆಗಳ ನಿರ್ಮೂಲನೆಗಾಗಿ ಧೂಮ ಎಂಬ ಅರ್ಥೋಪಲಬ್ಧಿಯುಂಟಾಗುತ್ತದೆಯೋ, ಹಾಗೆಯೇ ಆವರಣದ ಉದ್ದೇಶಕ್ಕಾಗಿ ಆವರಣ, ಅರ್ಥಾತ್ ಅಜ್ಞಾನಾದಿ ಆವರಣಗಳ ನಿವಾರಣೆಗೋಸ್ಕರ ಇವು ಸಾಧನಗಳಾಗುತ್ತವೆ ಎಂದು 'ಆವರಣ' ಶಬ್ದದಿಂದ ವ್ಯವಹರಿಸುತ್ತಿದ್ದಾರೆ.

---

೩. ಚಂ.ಜ್ಞಾ, ಕ್ರಿ.ಪಾ, ೨.೩

ಆದರೂ ಸಹ ಯೋಗಶಾಸ್ತ್ರದಲ್ಲಿ ಅಂಗೀಕರಿಸಲ್ಪಟ್ಟಿರುವ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿ -ಎಂಬ ಎಂಟು ಯೋಗಾಂಗಗಳು ಸಾಧಕನ ದೇಹ, ಮನಸ್ಸು, ಬುದ್ಧಿ ಮುಂತಾದವುಗಳನ್ನು ದುರ್ವೃತ್ತಿಗಳಿಂದ ರಕ್ಷಿಸುತ್ತವೆಯಾದರೂ ಸಹ ಅವುಗಳನ್ನು 'ಆವರಣ' ಶಬ್ದದಿಂದ ವ್ಯವಹರಿಸುವುದಿಲ್ಲ.

ಆದುದರಿಂದ ಇಲ್ಲಿ ಪ್ರಯೋಗವಾಗಿರುವ ಆವರಣ ಶಬ್ದವು ಬೇರೆ ದರ್ಶನಗಳು ಮುಟ್ಟದ ಪಾರಿಭಾಷಿಕ ಶಬ್ದವೆಂದು ತಿಳಿಯಬೇಕು. ಈ ರೀತಿಯಾಗಿ ಆವರಣ ಶಬ್ದದಿಂದ ವ್ಯವಹರಿಸಲ್ಪಡುತ್ತಿರುವ ಅಷ್ಟಾವರಣಗಳಲ್ಲಿ ಗುರು, ಲಿಂಗ ಮತ್ತು ಜಂಗಮ -ಈ ಮೂರೂ ಪೂಜಿಸಲ್ಪಡತಕ್ಕವುಗಳು. ವಿಭೂತಿ, ರುದ್ರಾಕ್ಷ ಮತ್ತು ಮಂತ್ರ -ಈ ಮೂರು ಪೂಜಾಸಾಮಗ್ರಿಗಳು; ಪಾದೋದಕ ಮತ್ತು ಪ್ರಸಾದ -ಇವು ಪೂಜೆಯ ಫಲರೂಪದಲ್ಲಿವೆ.

ಈ ಅಷ್ಟಾವರಣಗಳು ವೀರಶೈವ ಸಿದ್ಧಾಂತದಲ್ಲಿ ಸಾಧಕನ ಅಂಗಗಳೆಂದು ವ್ಯವಹರಿಸಲಾಗಿದೆ. ಲೋಕದಲ್ಲಿ ಕೈ, ಕಾಲು ಮೊದಲಾದ ಎಲ್ಲ ಅವಯವಗಳಿಂದ ಕೂಡಿರುವ ಶರೀರದಿಂದ ಹೇಗೆ ಲೌಕಿಕ ವ್ಯವಹಾರಗಳು ಸರಿಯಾಗಿ ನಿರ್ವಹಿಸಲ್ಪಡುತ್ತವೆಯೋ ಹಾಗೆಯೇ ಪೂರ್ವೋಕ್ತ ಅಷ್ಟಾವರಣಗಳಿಂದ ಕೂಡಿದ ಸಾಧಕನ ಪಾರಮಾರ್ಥಿಕ ವ್ಯವಹಾರವು ಸರಿಯಾಗಿ ನಿರ್ವಹಿಸಲ್ಪಡುತ್ತದೆ ಎನ್ನುವ ಕಾರಣದಿಂದ ಅವುಗಳು ಸಾಧಕನ ಅಂಗಗಳೆಂದು ತಿಳಿಯಬೇಕು. ಅವುಗಳಲ್ಲಿ ಯಾವುದಾದರೂ ಒಂದರ (ಒಂದು ಆವರಣದ) ಕೊರತೆಯಾದಲ್ಲಿ ಸಾಧಕನು ತನ್ನ ಗುರಿಯನ್ನು ತಲುಪಲಾರನು. ಆದುದರಿಂದ ವೀರಶೈವರು ಅಷ್ಟಾವರಣಗಳಲ್ಲಿ ನಿಷ್ಠಾವಂತರಾಗಿರುತ್ತಾರೆ. ಇಲ್ಲಿ ಕ್ರಮವಾಗಿ ಸ್ವರೂಪ ಮತ್ತು ಅವುಗಳ ಸಂಬಂಧದಿಂದ ಸಾಧಕನಿಗೆ ಹೇಗೆ ರಕ್ಷಣೆಯುಂಟಾಗುತ್ತದೆ ಎಂಬುದನ್ನು ಶಾಸ್ತ್ರಗ್ರಂಥಗಳಲ್ಲಿ ನಿರೂಪಿತವಾಗಿರುವಂತೆ ವಿಮರ್ಶಿಸಲಾಗುವುದು. ಈಗ ಮೊದಲನೆಯ ಆವರಣವಾದ 'ಗುರು'ವಿನ ಸ್ವರೂಪವನ್ನು ವಿಚಾರಮಾಡೋಣ.

೧. ಶ್ರೀಗುರು

ಚತುರ್ವಿಧ ಪುರುಷಾರ್ಥಗಳಲ್ಲಿ ಮೋಕ್ಷವೇ ಶ್ರೇಷ್ಠವಾದ ಪುರುಷಾರ್ಥವೆಂದು ಎಲ್ಲ ದಾರ್ಶನಿಕರೂ ಒಪ್ಪಿದ್ದಾರೆ ಮತ್ತು ಆ ಮೋಕ್ಷವು ಲಿಂಗಾಂಗ ಸಾಮರಸ್ಯಾತ್ಮಕವಾದುದು. ಲಿಂಗಾಂಗಸಾಮರಸ್ಯಾತ್ಮಕವಾದ ಈ ಜ್ಞಾನವು ಸದ್ಗುರುವಿನ ಕರುಣೆಯಿಲ್ಲದೆ ದೊರಕುವುದಿಲ್ಲವೆಂದು "ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಮ್"[೪] (ಅದನ್ನು ತಿಳಿಯುವುದಕ್ಕಾಗಿ ಅವನು ಸಮಿತ್ತುಗಳ

---

[೪] ಮುಂಡ, ೧-೨-೧೨

ಕಂತೆಯನ್ನು ಕೈಯಲ್ಲಿ ಹಿಡಿದುಕೊಂಡು ಶ್ರೋತ್ರಿಯನೂ, ಬ್ರಹ್ಮನಿಷ್ಠನೂ ಆದ ಗುರುವಿನಲ್ಲಿಗೆ ಹೋಗಬೇಕು) ಎಂಬ ಉಪನಿಷದ್ವಾಕ್ಯದ ಪ್ರಾಮಾಣ್ಯದಿಂದ ಈ ಸಿದ್ಧಾಂತದಲ್ಲಿ ಗುರುವಿನ ಸಂಬಂಧವು ವಿಹಿತವಾಗಿದೆ. ಹೇಗೆಂದರೆ-

ಜಿಜ್ಞಾಸುಃ ಸರ್ವಸಂಸಾರದೋಷಧ್ವಂಸಕರಂ ಶಿವಮ್॥
ಉಪೈತಿ ಲೋಕವಿಖ್ಯಾತಂ..
.... ಶ್ರೀಗುರುಂ ಶಿವವಾದಿನಮ್॥[೫]

“ಸಮಸ್ತ ಸಂಸಾರದೋಷಗಳನ್ನು ನಾಶಮಾಡುವ ಮಹಾಲಿಂಗ ಸ್ವರೂಪವನ್ನು ತಿಳಿಯಲು ಇಚ್ಛೆಯುಳ್ಳವನಾಗಿ ಜಗದ್ವಿಖ್ಯಾತನೂ, ಲೋಭ-ಮೋಹಗಳನ್ನು ತ್ಯಜಿಸಿದವನೂ, ಜೀವಾತ್ಮ-ಪರಮಾತ್ಮರ ಸ್ವರೂಪವನ್ನು ತಿಳಿದವನೂ, ವಿಷಯಭ್ರಮೆಯಿಂದ ಮುಕ್ತನಾದವನೂ, ...ಆದ ಶ್ರೀಗುರುವನ್ನು ಆಶ್ರಯಿಸಬೇಕು.”

ಆ ಸದ್ಗುರುವಿನ ಸ್ವರೂಪವೇನು? ಗುರುವಿನ ಲಕ್ಷಣವೇನು? ಗುರುವಿನ ಸೇವೆಯನ್ನು ಹೇಗೆ ಮಾಡಬೇಕು? ಮತ್ತು ಅವನು ಯಾವ ರೀತಿಯಲ್ಲಿ ತನ್ನ ಶಿಷ್ಯನನ್ನು ಸಂಸಾರಸಾಗರದಿಂದ ಮೇಲೆತ್ತುತ್ತಾನೆ? -ಇನ್ನೂ ಅನೇಕ ಜಿಜ್ಞಾಸೆಗಳು ಉಂಟಾಗುತ್ತವೆ. ಈ ಎಲ್ಲ ಪ್ರಶ್ನೆಗಳಿಗೆ ಸಮಾಧಾನವನ್ನು ಯಥಾಮತಿ ಆಧಾರ ಸಹಿತ ಪ್ರಸ್ತಾಪಿಸಲಾಗುವುದು.

ಶಿವನು ಮೊದಲನೆಯ ಗುರು

ಮಹರ್ಷಿ ಪತಂಜಲಿಗಳು- “ಸ ಪೂರ್ವೇಷಾಮಪಿ ಗುರುಃ ಕಾಲೇನಾನವಚ್ಛೇದಾತ್”[೬] ಎಂಬ ಯೋಗಸೂತ್ರದಲ್ಲಿ ಶಿವನೇ ಪ್ರಪಂಚದ ಮೊದಲನೆಯ ಗುರುವೆಂದು ಪ್ರತಿಪಾದಿಸಿದ್ದಾರೆ. ಅದು ಸತ್ಯವೆಂದೇ ತೋರುತ್ತದೆ. ಹೇಗೆಂದರೆ, ಸಂಸಾರವೆಂಬ ಸರ್ಪದಿಂದ ಕಚ್ಚಲ್ಪಟ್ಟ ಅಜ್ಞ ಜೀವಗಳ ಅಜ್ಞಾನ ನಿವಾರಣೆಗೋಸ್ಕರವೇ ಭಗವಾನ್ ಶಿವನು ವೇದಾಗಮಗಳನ್ನು ಸೃಷ್ಟಿಸಿದನು. ಅದನ್ನು ಶ್ರೀಪತಿ ಪಂಡಿತರು ಹೀಗೆ ಹೇಳಿದ್ದಾರೆ-

ಸದ್ಯೋಜಾತೇನ ಋಗ್ವೇದಂ ವಾಮದೇವೇನ ಯಾಜುಷಮ್।
ಅಘೋರೇಣ ತಥಾ ಸಾಮ ಪುರುಷೇಣ ತ್ವಥರ್ವಣಮ್॥
ಈಶಾನೇನ ಮುಖೇನೈವ ಕಾಮಿಕಾದ್ಯಾಗಮಾಂಸ್ತಥಾ।
ಜನಯಾಮಾಸ ವಿಶ್ವೇಶಃ ಸರ್ವಸಿದ್ಧಿಪ್ರದಾಯಕಃ॥[೭]

“(ಪರಶಿವನ) ಸದ್ಯೋಜಾತಮುಖದಿಂದ ಋಗ್ವೇದ, ವಾಮದೇವಮುಖದಿಂದ ಯಜುರ್ವೇದ, ಅಘೋರಮುಖದಿಂದ ಸಾಮವೇದ, ತತ್ಪುರುಷಮುಖದಿಂದ

---

[೫] ಸಿ.ಶಿ, ೬.೧-೬

[೬] ಯೋ.ಸೂ, ೧.೨೬

[೭] ಬ್ರಹ್ಮಸೂತ್ರ ಶ್ರೀಕರಭಾಷ್ಯ, ೧-೧-೩

ಅಥರ್ವಣವೇದ ಮತ್ತು ಈಶಾನಮುಖದಿಂದ ಕಾಮಿಕಾದಿ ಆಗಮಗಳನ್ನು ಸರ್ವಸಿದ್ಧಿ ಪ್ರದಾಯಕನಾದ ಶಿವನು ಸೃಷ್ಟಿಸಿದನು.”

ಈ ವೇದಾಗಮಗಳ ಅಧ್ಯಯನದಿಂದ ಮಾನವನು ಒಂದು ವೇಳೆ ಗುರುವೆನಿಸುವುದಾದರೆ, ವೇದಾಗಮಗಳ ಸೃಷ್ಟಿಕರ್ತನಾದ ಶಿವನು ಹೇಗೆ ತಾನೆ ಗುರುವಾಗುವುದಿಲ್ಲ? ಆದುದರಿಂದ “ಜ್ಞಾನಧರ್ಮೋಪದೇಶೇನ ಕಲ್ಪಪ್ರಲಯಮಹಾಪ್ರಲಯೇಷು ಸಂಸಾರಿಣಂ ಉದ್ಧರಿಷ್ಯಾಮಿ”[೮] (ಜ್ಞಾನ ಧರ್ಮೋಪದೇಶದಿಂದ ಕಲ್ಪಪ್ರಲಯ-ಮಹಾಪ್ರಲಯದ ಸಂದರ್ಭಗಳಲ್ಲಿ ಸಂಸಾರಿಗಳನ್ನು ಉದ್ಧಾರಮಾಡುತ್ತೇನೆ) ಎಂದು ಸಂಕಲ್ಪ ಮಾಡಿರುವ ಶಿವನು ಪ್ರಪಂಚದ ಮೊದಲನೆಯ ಗುರು. ಆದುದರಿಂದಲೇ- “ಗೃಣಾತಿ ಉಪದಿಶತಿ ವೇದಶಾಸ್ತ್ರಾಣಿ ಇಂದ್ರಾದಿದೇವೇಭ್ಯಃ” (ಇಂದ್ರಾದಿ ದೇವತೆಗಳಿಗೆ ವೇದಶಾಸ್ತ್ರಗಳನ್ನು ಉಪದೇಶಿಸುತ್ತಾನೆ), ಎಂದೂ ಇಲ್ಲದಿದ್ದರೆ “ಗೀರ್ಯತೇ ಸ್ತೂಯತೇ ದೇವಮನುಷ್ಯ ಗಂಧರ್ವಾದಿಭಿರಿತಿಗುರುರೀಶ್ವರಃ”[೯] (ದೇವತೆಗಳಿಂದ, ಮನುಷ್ಯರಿಂದ, ಗಂಧರ್ವಾದಿ ಗಳಿಂದ ಈಶ್ವರನು ಗುರುವೆಂದು ಸ್ತುತಿಸಲ್ಪಟ್ಟಿದ್ದಾನೆ) ಇತ್ಯಾದಿ ಉಕ್ತಿಗಳೂ ಸಹ ಸಹಾಯಕವಾಗಿವೆ.

ಅಜ್ಞಾನ ನಾಶದ ಮೂಲಕ ಧರ್ಮೋಪದೇಶಕನಾದ ಪರಶಿವನಿಂದ ಪ್ರಸಾರವಾದ ಈ ಜ್ಞಾನಪ್ರವಾಹವು ಗುರುಪರಂಪರೆಯ ಮೂಲಕ ಇಂದಿಗೂ ಕೂಡ ಹರಿಯುತ್ತಿದೆ. ಈ ಜ್ಞಾನಪ್ರವಾಹವನ್ನು ‘ಓಘ’ (ಪ್ರವಾಹ) ಎಂದು ಕರೆಯಲಾಗಿದೆ. ಆಗಮಶಾಸ್ತ್ರದಲ್ಲಿ ಈ ಓಘವು ದಿವ್ಯೌಘ, ಸಿದ್ಧೌಘ ಮತ್ತು ಮಾನವೌಘ ಎಂದು ಮೂರು ವಿಧವಾಗಿ ವಿಭಜಿಸಲಾಗಿದೆ. ಶಿವನು ಉಪದೇಶಿಸಿದ ಜ್ಞಾನವನ್ನು ಆತನ ನಿಕಟವರ್ತಿಗಳಾದ ಗಣಗಳು ಮತ್ತು ದೇವತೆಗಳು ಮೊದಲಿಗೆ ಕೇಳಿದರು ಮತ್ತು ಆ ದೇವತೆಗಳು ಸಿದ್ಧರಿಗೆ, ಸಿದ್ಧರು ಮನುಷ್ಯರಿಗೆ ಉಪದೇಶಿಸಿದರು. ಈ ಪ್ರಕಾರ ನಿರಂತರವಾಗಿ ಅನಾದಿ ಕಾಲದಲ್ಲಿ ಆರಂಭವಾದ ಜ್ಞಾನಪ್ರವಾಹವು ಮುಂದುವರಿಯುತ್ತಿದೆ.

೧. ದಿವ್ಯೌಘ ವೀರಶೈವರು

ಶಿವನಿಗೆ ನಂದಿಯೇ ಮೊದಲಾದ ಅನಂತ ಪ್ರಮಥ ಗಣಗಳಿವೆ. ಆ ಪ್ರಮಥ ಗಣಗಳಲ್ಲಿ ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣರೆಂಬ ಐವರು ಪ್ರಮಥಗಣಗಳು ಶಿವನ ಅತ್ಯಂತ ನಿಕಟವರ್ತಿಗಳು. ಅವರಿಗೆ ಶಿವನು ತನ್ನ (ಶಿವ) ಜ್ಞಾನವನ್ನು ಚೆನ್ನಾಗಿ ಉಪದೇಶಿಸಿ ಭೂಲೋಕದಲ್ಲಿ ಅದನ್ನು ಪ್ರತಿಷ್ಠಾಪಿಸಲು ಅವರನ್ನು ಕಳುಹಿಸಿದನು. ಆ ಗಣಾಧೀಶ್ವರರು ಶಿವನ ಆದೇಶದಂತೆ ರೇವಣಾರಾಧ್ಯ, ಮರುಳಾರಾಧ್ಯ, ಏಕೋರಾಮಾರಾಧ್ಯ, ಪಂಡಿತಾರಾಧ್ಯ, ವಿಶ್ವಾರಾಧ್ಯ ಎಂಬ ನಾಮಾಂಕಿತದಿಂದ ಭೂಲೋಕದಲ್ಲಿ ಪ್ರಸಿದ್ಧವಾದ ಶಿವನ ಪಂಚಲಿಂಗಗಳಿಂದ ಆವಿರ್ಭವಿಸಿದರು. ಅದನ್ನು ಸ್ವಾಯಂಭುವಾಗಮದಲ್ಲಿ ಹೀಗೆ ನಿರೂಪಿಸಲಾಗಿದೆ-

---

೮. ಯೋಗಸೂತ್ರ ಭಾಷ್ಯ, ೧.೨೫

೯. ಆಗಮ ಔರ್ ತಂತ್ರಶಾಸ್ತ್ರ, ಪು. ೧೦೦

ಶ್ರೀಮದ್ರೇವಣಸಿದ್ಧಸ್ಯ ಕುಲ್ಯಪಾಕಪುರೋತ್ತಮೇ।
ಸೋಮೇಶಲಿಂಗಾಜ್ಜನನಮಾವಾಸಃ ಕದಲೀಪುರೇ॥
ತದ್ವನ್ಮರುಲಸಿದ್ಧಸ್ಯ ವಟಕ್ಷೇತ್ರೇ ಮಹತ್ತರೇ।
ಸಿದ್ಧೇಶಲಿಂಗಾಜ್ಜನನಂ ಸ್ಥಾನಮುಜ್ಜಯಿನೀಪುರಮ್॥
ದ್ರಾಕ್ಷಾರಾಮೇ ರಾಮನಾಥಲಿಂಗಾದ್ಯುಗಚತುಷ್ಟಯೇ।
ಏಕೋರಾಮಸ್ಯ ಜನನಮಾವಾಸಸ್ತು ಹಿಮಾಲಯೇ॥
ಸುಧಾಕುಂಡಾಖ್ಯಸುಕ್ಷೇತ್ರೇ ಮಲ್ಲಿಕಾರ್ಜುನಲಿಂಗತಃ।
ಜನನಂ ಪಂಡಿತಾರ್ಯಸ್ಯ ನಿವಾಸಃ ಶ್ರೀಗಿರೌ ಶಿವೇ॥
ಕಾಶ್ಯಾಂ ವಿಶ್ವೇಶ್ವರೇ ಲಿಂಗೇ ವಿಶ್ವಾರಾಧ್ಯಸ್ಯ ಸಂಭವಃ।
ಸ್ಥಾನಂ ಶ್ರೀಕಾಶಿಕಾಕ್ಷೇತ್ರಂ ಶೃಣು ಪಾರ್ವತಿ ಸಾದರಮ್॥[೧೦]

ಈ ಶ್ಲೋಕಗಳ ಭಾವವಿಷ್ಟು- ಪೂರ್ವೋಕ್ತ ಸ್ವಾಯಂಭುವಾಗಮದ ಉಕ್ತಿಯಂತೆ ಆಂಧ್ರಪ್ರದೇಶದ ಕುಲ್ಯಪಾಕ (ಕೋಲನುಪಾಕ) ಕ್ಷೇತ್ರದಲ್ಲಿರುವ ಸೋಮೇಶ್ವರಲಿಂಗದಿಂದ ದಿವ್ಯದೇಹಧಾರಿಯಾದ ಶ್ರೀ ರೇವಣಾರಾಧ್ಯರು ಆವಿರ್ಭವಿಸಿದರು. ಧರ್ಮಪ್ರಚಾರಕ್ಕಾಗಿ ಕರ್ನಾಟಕದ ಬಾಳೇಹೊನ್ನೂರು ಗ್ರಾಮದಲ್ಲಿ ಈ ಆಚಾರ್ಯರು ಪೀಠವೊಂದನ್ನು ಸ್ಥಾಪಿಸಿದರು. ಆ ಪೀಠವು ಈಗ 'ರಂಭಾಪುರೀಪೀಠ' ಎಂಬ ಅಭಿಧಾನದಿಂದ ಪ್ರಸಿದ್ಧವಾಗಿದೆ.

ಮಧ್ಯಪ್ರದೇಶದ ಉಜ್ಜಯಿನಿ ನಗರದ ವಟಕ್ಷೇತ್ರದಲ್ಲಿರುವ ಶ್ರೀ ಸಿದ್ಧೇಶ್ವರ ಲಿಂಗದಿಂದ ಆವಿರ್ಭವಿಸಿದ ಮರುಳಾರಾಧ್ಯರು ಅಲ್ಲಿಯೇ ಒಂದು ಪೀಠವನ್ನು ಸ್ಥಾಪಿಸಿದರು. ಆ ಪೀಠವು ಈಗ ಕರ್ನಾಟಕದ ಬಳ್ಳಾರಿ ಜಿಲ್ಲೆಯ ಉಜ್ಜಯಿನಿ ಗ್ರಾಮದಲ್ಲಿದೆ. ಆ ಪೀಠವು ಈಗ 'ಸದ್ಧರ್ಮಪೀಠ'ವೆಂದು ಪ್ರಸಿದ್ಧವಾಗಿದೆ.

ದ್ರಾಕ್ಷಾರಾಮ ಕ್ಷೇತ್ರದಲ್ಲಿರುವ ರಾಮನಾಥಲಿಂಗದಿಂದ ಏಕೋರಾಮಾರಾಧ್ಯರು ಆವಿರ್ಭವಿಸಿ, ಧರ್ಮಪ್ರಚಾರಕ್ಕಾಗಿ ಹಿಮಾಲಯದಲ್ಲಿ ಪೀಠವೊಂದನ್ನು ಸ್ಥಾಪಿಸಿದರು. ಉತ್ತರಾಂಚಲದ ಓಖಿಮಠದಲ್ಲಿ ಆ ಪೀಠವು 'ವೈರಾಗ್ಯಪೀಠ' ಎಂಬ ಹೆಸರಿನಲ್ಲಿ ಇಂದಿಗೂ ವಿರಾಜಿಸುತ್ತಿದೆ. ಆಂಧ್ರಪ್ರದೇಶದ ಶ್ರೀಶೈಲಕ್ಷೇತ್ರದ ಮಲ್ಲಿಕಾರ್ಜುನ ಲಿಂಗದಿಂದ ಪಂಡಿತಾರಾಧ್ಯರು ಆವಿರ್ಭವಿಸಿ, ಅಲ್ಲಿಯೇ ಪೀಠವೊಂದನ್ನು ಸ್ಥಾಪಿಸಿದರು. ಆ ಪೀಠವು ಈಗ 'ಸೂರ್ಯಸಿಂಹಾಸನಪೀಠ'ವೆಂಬ ಹೆಸರಿನಲ್ಲಿ ಪ್ರಸಿದ್ಧವಾಗಿದೆ.

ಉತ್ತರ ಪ್ರದೇಶದ ಕಾಶೀಕ್ಷೇತ್ರದ ವಿಶ್ವನಾಥಲಿಂಗದಿಂದ ವಿಶ್ವಾರಾಧ್ಯರು ಆವಿರ್ಭವಿಸಿದರು. ಧರ್ಮಪ್ರಚಾರಕ್ಕಾಗಿ ಅವರು ಕಾಶಿಯಲ್ಲಿಯೇ ಪೀಠವೊಂದನ್ನು ಸ್ಥಾಪಿಸಿದರು. ಆ ಪೀಠವನ್ನು 'ಜ್ಞಾನಸಿಂಹಾಸನಪೀಠ' ಎಂಬ ಹೆಸರಿನಿಂದ ಕರೆಯಲಾಗುತ್ತಿದೆ. ಅದು ಈಗ ರೂಢಿಯಲ್ಲಿ 'ಜಂಗಮವಾಡಿಮಠ' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ.

---

೧೦. ವೀರಶೈವರತ್ನಮ್, ಪು. ೩೦

ಈ ಪಂಚಪೀಠಗಳು ವೀರಶೈವ ಧರ್ಮದ ಪ್ರಧಾನ ಕೇಂದ್ರಗಳಾಗಿವೆ. ಈ ಪೀಠಗಳ ಆಚಾರ್ಯರೇ ಈ ಧರ್ಮದ ಜಗದ್ಗುರುಗಳು. ಇವರು 'ಪಂಚಾಚಾರ್ಯರು' ಎಂದು ಖ್ಯಾತನಾಮರಾಗಿದ್ದಾರೆ. ಇವರೇ ವೀರಶೈವ ಧರ್ಮದ ಸ್ಥಾಪಕರು.

ಶಿವನ ಅಪ್ಪಣೆಯಂತೆ ಪಂಚಾಚಾರ್ಯರು ದಿವ್ಯದೇಹಧಾರಿಗಳಾಗಿ, ಪೂರ್ವೋಕ್ತ ಶಿವಲಿಂಗಗಳಿಂದ ಆವಿರ್ಭವಿಸಿ, ಭೂಲೋಕದಲ್ಲಿ ವೀರಶೈವ ಧರ್ಮವನ್ನು ಸ್ಥಾಪಿಸಿ, ಮತ್ತೆ ಅದೇ ಶಿವಲಿಂಗಗಳಲ್ಲಿಯೇ ಐಕ್ಯವಾಗಿ ಶಿವಸಾನ್ನಿಧ್ಯವನ್ನು ತಲುಪಿದರು ಎಂದು ಆಗಮಗಳಿಂದ ತಿಳಿದುಬರುತ್ತದೆ.

ಸಾಕ್ಷಾತ್ ಪರಶಿವನಿಂದ ಜ್ಞಾನವನ್ನು ಸಂಪಾದಿಸಿ, ದಿವ್ಯದೇಹಧಾರಿಗಳಾಗಿ ಸುಪ್ರಸಿದ್ಧ ಸಿದ್ಧರಿಗೆ ಮತ್ತು ಅಗಸ್ತ್ಯಾದಿ ಮಹರ್ಷಿಗಳಿಗೆ ವೀರಶೈವ ಧರ್ಮದ ತತ್ತ್ವವನ್ನು ಉಪದೇಶಿಸಿದ ಪಂಚಾಚಾರ್ಯರುಗಳು ತಾವು ಆವಿರ್ಭವಿಸಿದ ಶಿವಲಿಂಗಗಳಲ್ಲಿಯೇ ದಿವ್ಯದೇಹದೊಡನೆ ಐಕ್ಯವಾದರು ಎಂಬ ಕಾರಣದಿಂದ ಈ ಪಂಚಾಚಾರ್ಯರುಗಳು 'ದಿವ್ಯೌಘ' ಎಂದು ಕರೆಯಲ್ಪಟ್ಟಿದ್ದಾರೆ.

೨. ಸಿದ್ಧೌಘ ವೀರಶೈವರು

ಪೂರ್ವೋಕ್ತ ದಿವ್ಯೌಘ ಪದವಾಚ್ಯರಾದ ಪಂಚಾಚಾರ್ಯರುಗಳಿಂದ ಅನೇಕ ಮಹರ್ಷಿಗಳು ವೀರಶೈವ ಸಿದ್ಧಾಂತವನ್ನು ಅಧ್ಯಯನ ಮಾಡಿದ್ದರು. ಅವರಲ್ಲಿ ಅಗಸ್ತ್ಯ, ದಧೀಚಿ, ವ್ಯಾಸ, ಸದಾನಂದ, ದುರ್ವಾಸ ಮೊದಲಾದ ಮಹರ್ಷಿಗಳು ಸುಪ್ರಸಿದ್ಧರಾಗಿದ್ದಾರೆ.

ರಂಭಾಪುರೀಪೀಠದ ಶ್ರೀ ರೇಣುಕಾಚಾರ್ಯರು ಅಗಸ್ತ್ಯ ಮಹರ್ಷಿಗಳಿಗೆ ವೀರಶೈವ ಸಿದ್ಧಾಂತವನ್ನು ಉಪದೇಶಿಸಿದರೆಂಬ ವಿಷಯವು ಸಿದ್ಧಾಂತ ಶಿಖಾಮಣಿ ಗ್ರಂಥದಿಂದ ತಿಳಿದುಬರುತ್ತದೆ. ಈ ಗ್ರಂಥವು ರೇಣುಕ-ಅಗಸ್ತ್ಯರ ಸಂವಾದರೂಪದಲ್ಲಿದೆ. ಉಪದೇಶದ ಕೊನೆಯಲ್ಲಿ ರೇಣುಕಾಚಾರ್ಯರು ಅಗಸ್ತ್ಯರಿಗೆ ಹೀಗೆ ಅಪ್ಪಣೆ ಮಾಡಿದ್ದಾರೆ-

> ಅಗಸ್ತ್ಯ ಮುನಿಶಾರ್ದೂಲ ತಪಃಸಿದ್ಧಿಮನೋರಥ।
> ತ್ವಾಂ ವಿನಾ ಶಿವಶಾಸ್ತ್ರಸ್ಯ ಕಃ ಶ್ರೋತುಮಧಿಕಾರವಾನ್॥
> ಸ್ಥಾಪ್ಯತಾಂ ಸರ್ವಲೋಕೇಷು ತಂತ್ರಮೇತತ್ ತ್ವಯಾ ಮುನೇ।
> ಈದೃಶಂ ಶಿವಬೋಧಸ್ಯ ಸಾಧನಂ ನಾಸ್ತಿ ಕುತ್ರಚಿತ್॥[೧೧]

"ಮುನಿಶ್ರೇಷ್ಠನೂ, ತಪಸ್ಸಿದ್ಧ ಮನೋರಥನೂ ಆದ ಎಲೈ ಅಗಸ್ತ್ಯನೇ! ಶಿವಾದ್ವೈತ ಶಾಸ್ತ್ರವನ್ನು ಶ್ರವಣಮಾಡುವುದಕ್ಕೋಸ್ಕರ ನಿನ್ನ ಹೊರತು ಯಾವನು ಅಧಿಕಾರಿಯಾಗಿರುವವನು? ಎಲೈ ಮುನಿಶ್ರೇಷ್ಠನೇ! ನೀನು ಈ ವೀರಶೈವಶಾಸ್ತ್ರವನ್ನು ಎಲ್ಲ ಲೋಕಗಳಲ್ಲಿ ಪ್ರಕಾಶಪಡಿಸು; ಶಿವಜ್ಞಾನಕ್ಕೆ ಇಂತಹ ಸಾಧನವು ಎಲ್ಲಿಯೂ

---

[೧೧] ಸಿ.ಶಿ, ೨೦.೭೨,೭೪

ಇರುವುದಿಲ್ಲ.” ಈ ಗುರ್ವಾಜ್ಞೆಯನ್ನು ಗಮನದಲ್ಲಿಟ್ಟುಕೊಂಡ ಮಹರ್ಷಿ ಅಗಸ್ತ್ಯರು ವೈಯಾಸಿಕ ಸೂತ್ರಗಳಿಗೆ ವೀರಶೈವ ಸಿದ್ಧಾಂತ ಪರವಾದ ವೃತ್ತಿಯನ್ನು ಬರೆದಿದ್ದಾರೆ. ಆ ವೃತ್ತಿಯನ್ನು ಆಧರಿಸಿ ಶ್ರೀಪತಿ ಪಂಡಿತಾರಾಧ್ಯರಿಂದ ಶ್ರೀಕರಭಾಷ್ಯವು ರಚಿಸಲ್ಪಟ್ಟಿತೆಂದು ಅವರ-

ಅಗಸ್ತ್ಯಮುನಿಚಂದ್ರೇಣ ಕೃತಾಂ ವೈಯಾಸಿಕೀಂ ಶುಭಾಮ್।
ಸೂತ್ರವೃತ್ತಿಂ ಸಮಾಲೋಕ್ಯ ಕೃತಂ ಭಾಷ್ಯಂ ಶಿವಂಕರಮ್॥[೧೨]

ಎಂಬ ಪ್ರತಿಜ್ಞಾ ಶ್ಲೋಕದಿಂದ ತಿಳಿದುಬರುತ್ತದೆ. ಮತ್ತು ಅದು ಲಘುಸೂತ್ರವೃತ್ತಿ ಅಥವಾ ಮುನಿಚಂದ್ರವೃತ್ತಿ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಈ ಗ್ರಂಥವು ಈಗ ದೊರೆಯುತ್ತಿಲ್ಲ. ಆದರೂ ಸಹ ಕುಂಭಕೋಣ ನಗರದಲ್ಲಿ ಆ ಗ್ರಂಥದ ಒಂದು ಪ್ರತಿಯು ಇದೆಯೆಂದು ಕೇಳಿದ್ದೇವೆ.[೧೩]

ಇದೇ ರೀತಿಯಲ್ಲಿ ಉಜ್ಜಯಿನೀ ಪೀಠಾಚಾರ್ಯರಾದ ದಾರುಕಾಚಾರ್ಯರಿಂದ ದಧೀಚಿ ಮಹರ್ಷಿ, ಓಖಿಮಠದ ವೈರಾಗ್ಯಪೀಠಾಧಿಕಾರಿಗಳಾದ ಘಂಟಾಕರ್ಣದಿಂದ ಮಹರ್ಷಿ ವ್ಯಾಸ, ಶ್ರೀಶೈಲ ಪೀಠಾಧ್ಯಕ್ಷರಾದ ಧೇನುಕರ್ಣ ಆಚಾರ್ಯರಿಂದ ಮಹರ್ಷಿ ಸದಾನಂದ ಮತ್ತು ಕಾಶೀಪೀಠದ ಅಧಿಪತಿಗಳಾದ ವಿಶ್ವಕರ್ಣರಿಂದ ದುರ್ವಾಸ ಮಹರ್ಷಿಗಳು ವೀರಶೈವ ಸಿದ್ಧಾಂತವನ್ನು ಅಧ್ಯಯನ ಮಾಡಿದರೆಂಬ ವಿಷಯವು ಪಾಶುಪತತಂತ್ರ, ಕಾಶೀಖಂಡ, ಶ್ರೀಶೈಲಖಂಡ, ಶಂಕರಸಂಹಿತೆ ಮೊದಲಾದ ಗ್ರಂಥಗಳಲ್ಲಿ ಪ್ರತಿಪಾದಿತವಾಗಿದೆ.[೧೪] ಹೀಗೆ ಸಿದ್ಧೌಘ ಪದವಾಚ್ಯರಾದ ಮಹರ್ಷಿಗಳಿಗೆ ಉಪದಿಷ್ಟವಾದ ಈ ವೀರಶೈವ ಜ್ಞಾನಪ್ರವಾಹವು ಕ್ರಮವಾಗಿ ಮಾನವೌಘ ರೂಪದಿಂದ ಚೆನ್ನಾಗಿ ಬೆಳೆಯಿತು.

೩. ಮಾನವೌಘ ವೀರಶೈವರು

ಪೂರ್ವೋಕ್ತ ಮಹರ್ಷಿಗಳಿಂದ ಪ್ರತ್ಯಕ್ಷವಾಗಿ ಅಥವಾ ಅವರು ಬರೆದಿರುವ ಗ್ರಂಥಗಳ ಅಭ್ಯಾಸದ ಮೂಲಕ ಆ ಜ್ಞಾನಪ್ರವಾಹವು ಋಷಿಸಮೂಹವನ್ನು ಮತ್ತು ಮಾನವಶ್ರೇಷ್ಠರನ್ನು ತಲುಪಿತು. ಈ ಮಾನವೌಘದಲ್ಲಿ ಶಿವಯೋಗಿ ಶಿವಾಚಾರ್ಯ, ನೀಲಕಂಠ ಶಿವಾಚಾರ್ಯ, ಶ್ರೀಪತಿ ಪಂಡಿತಾರಾಧ್ಯ, ಮಾಯಿದೇವ, ನಂದಿಕೇಶ್ವರ ಶಿವಾಚಾರ್ಯ, ಸಿದ್ಧನಾಥ ಶಿವಾಚಾರ್ಯ, ಸ್ವಪ್ರಭಾನಂದ ಶಿವಾಚಾರ್ಯ, ಶಿವಾನುಭವ ಶಿವಾಚಾರ್ಯ, ತ್ರಿಲೋಚನ ಶಿವಾಚಾರ್ಯ, ಸೋಸಲೆ ರೇವಣರಾಧ್ಯ -ಇತ್ಯಾದಿ ನೂರಕ್ಕೂ ಹೆಚ್ಚು ಆಚಾರ್ಯರಿದ್ದಾರೆ. ಈ ಮಹಾನುಭಾವರಿಂದಲೇ ವೀರಶೈವ ಸಾಹಿತ್ಯವು ರಕ್ಷಿಸಲ್ಪಟ್ಟಿತು ಹಾಗೂ ಬೆಳೆಸಲ್ಪಟ್ಟಿತು.

---

[೧೨] ಬ್ರಹ್ಮಸೂತ್ರ ಶ್ರೀಕರಭಾಷ್ಯ, ಮಂಗಳಶ್ಲೋಕ. ೧೭

[೧೩] ಬ್ರಹ್ಮಸೂತ್ರ ಶ್ರೀಕರಭಾಷ್ಯ, ಭೂಮಿಕಾ, ಪು. ೧೧೫

[೧೪] ವೀರಶೈವರತ್ನಮ್, ಪು. ೮

ಈ ರೀತಿಯಾಗಿ ಪರಶಿವನಿಂದ ದಿವ್ಯೌಘ, ಸಿದ್ಧೌಘ ಮಾನವೌಘ ರೂಪದಿಂದ ಪ್ರಾಪ್ತವಾದ ಜ್ಞಾನಪ್ರವಾಹದ ಅಧ್ಯಯನ, ಉಪದೇಶ ಹಾಗೂ ಆಚರಣೆಗಳ ಪ್ರಚಾರಕ್ಕಾಗಿ ಪೂರ್ವೋಕ್ತ ಪಂಚ ಪ್ರಧಾನ ಪೀಠಗಳಲ್ಲದೆ ಆ ಪೀಠಗಳ ಸಹಸ್ರಾರು ಶಾಖಾಮಠಗಳು ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ ಮೊದಲಾದ ಪ್ರಾಂತ್ಯಗಳಲ್ಲಿವೆ. ಆ ಎಲ್ಲ ಮಠಗಳಲ್ಲಿಯೂ ಸಹ ಶಿವಾಚಾರ್ಯರು ಮಠಾಧಿಪತಿಗಳಾಗಿದ್ದಾರೆ. ಅವರೆಲ್ಲರೂ ತಮ್ಮ ತಮ್ಮ ಕ್ಷೇತ್ರಗಳಲ್ಲಿರುವ ವೀರಶೈವ ಧರ್ಮಾನುಯಾಯಿ ಭಕ್ತರಿಗೆ ದೀಕ್ಷಾಸಂಸ್ಕಾರವನ್ನು ನೀಡಿ ತತ್ತ್ವಜ್ಞಾನೋಪದೇಶವನ್ನು ಮಾಡುತ್ತಿದ್ದಾರೆ. ಪೂರ್ವೋಕ್ತ ಪಂಚಪೀಠಾಧ್ಯಕ್ಷರನ್ನು ಜಗದ್ಗುರುಗಳು ಮತ್ತು ಆ ಪೀಠಗಳ ಶಾಖಾಮಠಾಧ್ಯಕ್ಷರು ಗುರುಗಳು ಎಂಬ ವಿಭಾಗವಿದೆ. ಗುರುಪೀಠಗಳಿಗೆ ಮತ್ತು ಜಗದ್ಗುರು ಪೀಠಗಳಿಗೆ ಪಟ್ಟಾಭಿಷಿಕ್ತರಾಗಲು ಅರ್ಹರಾದ ಗುರುವರ್ಯರ ಲಕ್ಷಣವನ್ನು ಈಗ ನಿರೂಪಿಸಲಾಗುವುದು.

'ಗುರು' ಶಬ್ದದ ಅರ್ಥ

'ಗುಣಾನ್ ರುಂಧೇ ಇತಿ ಗುರುಃ' ಎಂಬ ವ್ಯುತ್ಪತ್ತಿಯಂತೆ ಯಾವಾತನು ಶಿಷ್ಯನ ಪ್ರಾಕೃತ ರಾಜಸಾದಿ ಗುಣಗಳನ್ನು ತೊಲಗಿಸಿ ಶಿವತತ್ತ್ವವನ್ನು ಬೋಧಿಸುತ್ತಾನೆಯೋ ಆತನು 'ಗುರು' ಎಂದು ಕರೆಯಲ್ಪಟ್ಟಿದ್ದಾನೆ. ಅದನ್ನು ನೀಲಕಂಠ ಶಿವಾಚಾರ್ಯರು ಹೀಗೆ ನಿರೂಪಿಸಿದ್ದಾರೆ-

ಗುಣಾನ್ ರುಂಧ ಇತಿ ಪ್ರೋಕ್ತೋ ಗುರುಶಬ್ದಸ್ಯ ವಿಗ್ರಹಃ।
ಸವಿಕಾರಾನ್ ರಾಜಸಾದೀನ್ ಗುಣಾನ್ ರುಂದೇ ವ್ಯಪೋಹತಿ॥
ಗುಣತ್ರಯಾನ್ ವ್ಯಪೋಹ್ಯಾಗ್ರೇ ಶಿವಂ ಬೋಧಯತೀತಿ ಸಃ।
ವಿಶ್ವಸ್ತಾನಾಂ ತು ಶಿಷ್ಯಾಣಾಂ ಗುರುರಿತ್ಯಭಿಧೀಯತೇ॥[೧೫]

"ಗುರು ಶಬ್ದದಲ್ಲಿರುವ 'ಗು' ಎಂದರೆ ಸಾತ್ವಿಕಾದಿ ಗುಣಗಳನ್ನು, 'ರು' ಎಂದರೆ ಪ್ರತಿಬಂಧಿಸುವುದು ಎಂದು ವಿಗ್ರಹವಾಗುತ್ತದೆ. ರಾಜಸಾದಿ ಗುಣಗಳ ವಿಕಾರಗಳನ್ನು ಪ್ರತಿಬಂಧಿಸಿ ಭಗವಂತನ ಸ್ವರೂಪಾದಿಗಳನ್ನು ತನ್ನ ಎಲ್ಲ ಶಿಷ್ಯರಿಗೆ ಬೋಧಿಸುವುದರಿಂದ 'ಗುರು' ಎಂದು ಕರೆಯಲಾಗಿದೆ."

ಗುರು ಶಬ್ದದ ಅರ್ಥವನ್ನು ಶಿವಯೋಗಿ ಶಿವಾಚಾರ್ಯರು ಬೇರೆ ವಿಧವಾಗಿ ಪ್ರತಿಪಾದಿಸಿದ್ದಾರೆ. ಹೇಗೆಂದರೆ-

ಗುಣಾತೀತಂ ಗುವರ್ಣಂ ಚ ರೂಪಾತೀತಂ ರುವರ್ಣಕಮ್।
ಗುಣಾತೀತಮರೂಪಂ ಚ ಯೋ ದದ್ಯಾತ್ ಸ ಗುರು ಸ್ಮೃತಃ॥[೧೬]

---

[೧೫] ಕ್ರಿ.ಸಾ, ೧೬.೧೩೮-೧೩೯, ಪು. ೨೧

[೧೬] ಸಿ.ಶಿ, ೧೫.೮

"'ಗುರು' ಎಂಬ ಶಬ್ದದಲ್ಲಿರುವ 'ಗು' ಎಂಬ ಅಕ್ಷರವು ಪ್ರಾಕೃತಗುಣರಾಹಿತ್ಯವನ್ನು, 'ರು' ಎಂಬ ಅಕ್ಷರವು ಪ್ರಾಕೃತರೂಪರಾಹಿತ್ಯವನ್ನೂ ಬೋಧಿಸುವುವು. ಇಂತಹ ಪ್ರಾಕೃತ ಗುಣಾತೀತವೂ ಪ್ರಾಕೃತ ರೂಪಾತೀತವೂ ಆದ ಪರಶಿವನ ಬ್ರಹ್ಮಸ್ವರೂಪವನ್ನು ಯಾರು ಅನುಗ್ರಹಿಸುವನೋ, ಅವನು ಗುರುವೆಂದು ಹೇಳಿಸಿಕೊಳ್ಳುವನು."

ಈ ಶ್ಲೋಕದ ಭಾವವಿಷ್ಟು- ಗುರು ಶಬ್ದವು ದ್ವ್ಯಕ್ಷರಾತ್ಮಕವಾದುದು. ಮೊದಲನೆಯ ದಾದ 'ಗು' ಅಂದರೆ ಪ್ರಾಕೃತಗುಣಾತೀತ, ಎರಡನೆಯದಾದ 'ರು' ಅಂದರೆ ಅಶುದ್ಧಮಾಯಾರೂಪಾತೀತ ಎಂದರ್ಥ. ಹೀಗೆ ನಿರ್ಗುಣ ಮತ್ತು ನಿರಾಕಾರ ರೂಪವಾದ ಮಹಾಲಿಂಗದ ಸ್ವರೂಪವನ್ನು ಯಾವಾತನು ಉಪದೇಶಿಸುತ್ತಾನೆಯೋ ಅವನು 'ಗುರು' ಎನಿಸುತ್ತಾನೆ. ಆದುದರಿಂದ-

ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನಶಲಾಕಯಾ।
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರವೇ ನಮಃ॥[೧೭]

ಅಜ್ಞಾನವೆಂಬ ಕತ್ತಲೆಯಿಂದ ಅಂಧನಾದವನಿಗೆ ಜ್ಞಾನವೆಂಬ ಅಂಜನದ ಶಲಾಕೆಯಿಂದ ಕಣ್ಣು ತೆರೆಯಿಸಿದ ಆ ಗುರುವಿಗೆ ನಮಸ್ಕಾರವು ಎಂಬ ಗುರುಸ್ತುತಿಯ ನೆಪದಲ್ಲಿ ಗುರುವಿನ ಸ್ವರೂಪವನ್ನು ವರ್ಣಿಸಲಾಗಿದೆ. ನಿರಂತರ ಶಾಸ್ತ್ರಾಧ್ಯಯನ-ಅಧ್ಯಾಪನಗಳಲ್ಲಿ ನಿರತನಾಗಿರುವುದರಿಂದ 'ಆಚಾರ್ಯ' ಎಂಬ ಮತ್ತೊಂದು ಹೆಸರು ಗುರುವಿಗೆ ಇದೆ. ಶ್ರೀ ರೇಣುಕ ಭಗವತ್ಪಾದರು ಆಚಾರ್ಯನ ಲಕ್ಷಣವನ್ನು ಹೀಗೆ ವಿವರಿಸಿದ್ದಾರೆ-

ಆಚಿನೋತಿ ಚ ಶಾಸ್ತ್ರಾರ್ಥಮಾಚಾರೇ ಸ್ಥಾಪಯತ್ಯಪಿ।
ಸ್ವಯಮಾಚರತೇ ಯಸ್ತು ಸ ಆಚಾರ್ಯ ಇತಿ ಸ್ಮೃತಃ॥[೧೮]

"ಯಾವಾತನು ಶಿಷ್ಯರಿಗೆ (ವೀರಶೈವ) ಶಾಸ್ತ್ರರಹಸ್ಯಾರ್ಥಗಳನ್ನು ಬೋಧಿಸುತ್ತಾನೆಯೋ, ಶಿಷ್ಯರನ್ನು ವೀರಶೈವಾಚಾರದಲ್ಲಿ ನೆಲೆಗೊಳಿಸುತ್ತಾನೆಯೋ ಹಾಗೂ ತಾನೂ ಸಹ ವೀರಶೈವಾಚಾರವನ್ನು ಆಚರಿಸುತ್ತಾನೆಯೋ ಅವನು 'ಆಚಾರ್ಯ' ಎನಿಸಿಕೊಳ್ಳುವನು."

ಗುರು-ಶಿವ ಇವರ ಅಭೇದ

"ಸಾಕ್ಷಾದ್ಭರ್ಗೋ ನರಾಕೃತಿಃ", (ಗುರುವು ಸಾಕ್ಷಾತ್ ಪರಶಿವನು), "ಯೋ ಗುರುಃ ಸ ಶಿವಃ ಪ್ರೋಕ್ತೋ ಯಃ ಶಿವಃ ಸ ಗುರುಃ ಸ್ಮೃತಃ"[೧೯] (ಗುರು ಸಾಕ್ಷಾತ್ ಶಿವನೇ ಸರಿ ಮತ್ತು ಶಿವನು ಗುರುವೆಂದು ಕರೆಯಲ್ಪಟ್ಟಿದ್ದಾನೆ) ಇತ್ಯಾದಿ ಪ್ರಮಾಣ

---

೧೭. ವೀರಶೈವ ಚಿಂತಾಮಣಿಃ, ಪು. ೧೦

೧೮. ಸಿ.ಶಿ, ೧೫.೯

೧೯. ಚ.ಜ್ಞಾ, ಕ್ರಿ.ಪಾ, ೨.೭

ವಚನಗಳಲ್ಲಿ ಗುರು-ಶಿವ ಇವರಿಬ್ಬರ ಅಭೇದವೇ ಪ್ರತಿಪಾದಿತವಾಗಿದೆ. ಮಾಯಾಶಕ್ತಿಯ ಕಾರಣದಿಂದ ಎಲ್ಲರಿಗೂ ಪ್ರತ್ಯಕ್ಷವಾಗಿ ಗೋಚರಿಸದ ಶಿವನು ಭಕ್ತರ ಅನುಗ್ರಹಕ್ಕಾಗಿ ಗುರುರೂಪದಲ್ಲಿ ಗೋಚರಿಸುತ್ತಾನೆ. ಅದನ್ನು ಶ್ರೀ ರೇಣುಕಾಚಾರ್ಯರು ಹೀಗೆ ನಿರೂಪಿಸಿದ್ದಾರೆ-

ಅಪ್ರತ್ಯಕ್ಷೋ ಮಹಾದೇವಃ ಸರ್ವೇಷಾಮಾತ್ಮಮಾಯಯಾ।
ಪ್ರತ್ಯಕ್ಷೋ ಗುರುರೂಪೇಣ ವರ್ತತೇ ಭಕ್ತಿಸಿದ್ಧಯೇ॥[೨೦]

"ಶಿವನು ತನ್ನ ಮಾಯೆಯಿಂದ ಸರ್ವರಿಗೂ ಪ್ರತ್ಯಕ್ಷನಾಗದಿದ್ದರೂ, ಭಕ್ತಿಸಿದ್ಧಿಗಾಗಿ ಗುರುರೂಪದಿಂದ ಪ್ರತ್ಯಕ್ಷನಾಗಿದ್ದಾನೆ."

ಗುರುವಿನ ಅನುಗ್ರಹವಿಲ್ಲದೆ ಜೀವಕ್ಕೆ ಶಿವತ್ವವು ದೊರಕದಿರುವುದರಿಂದ ಶಿವಭಕ್ತಿಗೂ ಮೊದಲು ಗುರುಭಕ್ತಿಯ ಅವಶ್ಯಕತೆಯಿದೆ. ಆದುದರಿಂದ ಶಿವನಿಗಿಂತಲೂ ಗುರುವಿನಲ್ಲಿ ಹೆಚ್ಚು ಭಕ್ತಿಯುಳ್ಳವರಾಗಬೇಕು. ಆ ಕಾರಣದಿಂದಲೇ ಗುರು-ಶಿವ ಇವರ ಅಭೇದವನ್ನು ಹೀಗೆ ಹೇಳಲಾಗಿದೆ-

ಗುರುಪೂಜೈವ ಪೂಜಾ ಸ್ಯಾಚ್ಛಿವಸ್ಯ ಪರಮಾತ್ಮನಃ।[೨೧]
ಗುರೋರಭ್ಯರ್ಚನೇನಾಪಿ ಸಾಕ್ಷಾದಭ್ಯರ್ಚಿತಃ ಶಿವಃ।
ನಾಸ್ತಿ ಭೇದಸ್ತಯೋಃ ಕಶ್ಚಿದೇಕತ್ವಾತ್ತತ್ತ್ವರೂಪತಃ॥[೨೨]

"ಗುರುಪೂಜೆಯೇ ಶಿವನ ಪೂಜೆ. ಗುರುವನ್ನು ಪೂಜಿಸುವುದರಿಂದ ಶಿವನನ್ನು ಪ್ರತ್ಯಕ್ಷವಾಗಿ ಪೂಜಿಸಿದಂತಾಗುವುದು. ಗುರು ಮತ್ತು ಶಿವ ಇಬ್ಬರೂ ಒಂದೇ ಸ್ವರೂಪಿಗಳಾಗಿರುವುದರಿಂದ ಇವರಲ್ಲಿ ಸ್ವಲ್ಪವೂ ಭೇದವಿರುವುದಿಲ್ಲ."

ಗುರುವಿನ ವೈಶಿಷ್ಟ್ಯ

"ಸ್ವಾತ್ಯಾಂ ಸಾಗರಶುಕ್ತಿಮಧ್ಯಪತಿತಂ ತನ್ಮೌಕ್ತಿಕಂ ಜಾಯತೇ" ಎಂಬ ಸುಭಾಷಿತೋಕ್ತಿಯಂತೆ ಸ್ವಾತಿನಕ್ಷತ್ರದ ಮೇಘಜಲವು ಸಾಗರದೊಳಗಿನ ಚಿಪ್ಪಿನಲ್ಲಿ ಬಿದ್ದು ಮುತ್ತಾಗಿ ಪರಿವರ್ತಿತವಾಗುವುದು ಪ್ರಕೃತಿಯ ನಿಯಮ. ಮಳೆಯ ನೀರೇ ಮುತ್ತಾಗಿ ಪರಿಣಮಿಸಿದ್ದರೂ ಸಹ, ನೀರಿಗಿಂತಲೂ ಮುತ್ತು ಹೇಗೆ ಹೆಚ್ಚು ಬೆಲೆ ಬಾಳುತ್ತದೆಯೋ ಹಾಗೆಯೇ ಶಿವನೇ ಗುರುವಾಗಿ ಪರಿಣಮಿಸಿದ್ದರೂ ಸಹ ಶಿವನಿಗಿಂತಲೂ ಗುರುವಿನ ಮಹಿಮೆಯು ಅಧಿಕವೆಂದು ಶಾಸ್ತ್ರಗಳಲ್ಲಿ ವರ್ಣಿಸಲಾಗಿದೆ. ಉದಾಹರಣೆಗೆ-

ಶಿವೇ ರುಷ್ಟೇ ಗುರುಸ್ತ್ರಾತಾ ನ ರುಷ್ಟೇ ನಿಜಸದ್ಗುರೌ।
ತ್ರಾತಾ ಶಿವಸ್ತದೇತಸ್ಮಾದ್ ಗುರುಪೂಜಾರತೋ ಭವೇತ್॥[೨೩]

---

೨೦. ಸಿ.ಶಿ, ೯.೫೩

೨೧. ಚ.ಜ್ಞಾ, ಕ್ರಿ.ಪಾ, ೨.೯೪

೨೨. ಸಿ.ಶಿ, ೯.೫೧

೨೩. ಚ.ಜ್ಞಾ, ಕ್ರಿ.ಪಾ, ೨.೮೨

"ಶಿವನು ಕೋಪಗೊಂಡರೆ ಗುರು (ಶಿಷ್ಯನನ್ನು) ರಕ್ಷಿಸುತ್ತಾನೆ, ಆದರೆ ಗುರು ಕೋಪಿಸಿಕೊಂಡರೆ ಶಿವನು ಅವನನ್ನು ರಕ್ಷಿಸಲಾರನು. ಆದುದರಿಂದ ಶಿಷ್ಯನು ಸದಾ ಗುರುಪೂಜೆಯಲ್ಲಿ ನಿರತನಾಗಿರಬೇಕು."

ಈ ಭಾವವನ್ನು ಮನಸ್ಸಿನಲ್ಲಿಟ್ಟುಕೊಂಡು ಶಿವನೇ ಪಾರ್ವತಿಯನ್ನು ಕುರಿತು-

ತಸ್ಮಾತ್ತಸ್ಮಾಚ್ಚ ಗಿರಿಜೇ ಪಂಚಾನನಸಮುದ್ಭವಾಃ।
ಮದಾದಿಸರ್ವಲೋಕಾನಾಂ ಜಗದ್ಗುರುವರೋತ್ತಮಾಃ॥[೨೪]

"ಹೇ ಗಿರಿಜೆ! (ಪರಶಿವನ) ಪಂಚಮುಖಗಳಿಂದ ಆವಿರ್ಭವಿಸಿರುವ ಪಂಚಾಚಾರ್ಯರು ಎಲ್ಲ ಲೋಕಗಳಲ್ಲಿಯೂ ನನಗಿಂತಲೂ ಶ್ರೇಷ್ಠರು" -ಎಂದು ಸುಪ್ರಭೇದಾಗಮದಲ್ಲಿ ಉಪದೇಶಿಸಿದ್ದಾನೆ.

ಪ್ರಪಂಚದಲ್ಲಿ ನಮ್ಮ ತಂದೆ-ತಾಯಿಗಳಿಗಿಂತಲೂ ಸದ್ಗುರು ಅಧಿಕವೆಂಬುದು ಕೌಮುತಿಕ ನ್ಯಾಯದಿಂದ ಸಿದ್ಧವಾಗಿದೆ. ನೀಲಕಂಠ ಶಿವಾಚಾರ್ಯರು- 'ನ ಗುರೋಃ ಸದೃಶೀ ಮಾತಾ ನ ಗುರೋಃ ಸದೃಶಃ ಪಿತಾ'[೨೫] (ಗುರುವಿಗೆ ಸಮನಾದ ತಂದೆಯಾಗಲಿ ಅಥವಾ ತಾಯಿಯಾಗಲಿ ಇರುವುದಿಲ್ಲ) ಎಂದು ಹೇಳಿದ್ದಾರೆ. ನಮ್ಮ ತಂದೆ-ತಾಯಿಗಳು ಸಾಂಸಾರಿಕ ಮೋಹೋತ್ಪತ್ತಿಗೆ ಕಾರಣೀಭೂತರಾಗಿದ್ದು ಭವಹೇತುಗಳಾಗಿದ್ದಾರೆ. ಆದರೆ ಸದ್ಗುರುವು ಮೋಹಪಾಶವನ್ನು ಕತ್ತರಿಸುವುದರ ಮೂಲಕ ಭವನಿವೃತ್ತಿಗೆ ಸಹಾಯಕನಾಗುತ್ತಾನೆ ಎನ್ನುವ ಕಾರಣದಿಂದ ತಂದೆ-ತಾಯಿಗಳಿಗಿಂತಲೂ ಆತನು ಶ್ರೇಷ್ಠ. ಕ್ರಿಯಾಸಾರದಲ್ಲಿ ಈ ರೀತಿಯಾಗಿ ನಿರೂಪಿಸಲಾಗಿದೆ-

ಶಿಷ್ಯಃ ಪುತ್ರ ಇತಿ ಪ್ರೋಕ್ತಃ ಶಿಷ್ಯಃ ಶಿಷ್ಯತ್ವಯೋಗತಃ।
ಜಿಹ್ವಾಲಿಂಗಾನ್ಮಂತ್ರಶುಕ್ಲಂ ಕರ್ಣಯೋನೌ ನಿಷಿಚ್ಯ ವೈ॥
ಜಾತಃ ಪುತ್ರೋ ಮಂತ್ರಪುತ್ರಃ ಪಿತರಂ ಪೂಜಯೇದ್ ಗುರುಮ್।
ನಿಮಜ್ಜಯತಿ ಪುತ್ರಂ ವೈ ಸಂಸಾರೇ ಜನಕಃ ಪಿತಾ॥
ಸಂತಾರಯತಿ ಸಂಸಾರಾದ್ ಗುರುರ್ವೈ ಸಾಧಕಃ ಪಿತಾ।
ಉಭಯೋರಂತರಂ ಜ್ಞಾತ್ವಾ ಪಿತರಂ ಸಂಪ್ರಪೂಜಯೇತ್॥[೨೬]

"ಗುರು ಶಿಷ್ಯನ ಕಿವಿಯಲ್ಲಿ ಪವಿತ್ರ ಪಂಚಾಕ್ಷರೀ ಮಂತ್ರವನ್ನುಸುರಿ, ಶಿಷ್ಯತ್ವವನ್ನೀಯುವುದರಿಂದ ಶಿಷ್ಯನನ್ನು ಮಗನೆಂದು ಹೇಳಲಾಗಿದೆ. ಹೀಗೆ ಜನಿಸುವ ಮಂತ್ರಪುತ್ರನು ಗುರುವನ್ನು ತಂದೆಯಂತೆ ಪೂಜಿಸಬೇಕು. ಸಂಸಾರ ಬಂಧನದಲ್ಲಿ ಮಗನನ್ನು ತೊಡಗುವಂತೆ ಮಾಡುವವನು ಜನ್ಮನೀಡಿದ ತಂದೆಯಾದರೆ, ಸಂಸಾರ ಬಂಧನದಿಂದ ಬಿಡುಗಡೆ ಮಾಡಿಸುವಂತಹ ಗುರು ಸಾಧಕ ತಂದೆ ಎನಿಸುತ್ತಾನೆ. ಹೀಗೆ ತಂದೆ-ಗುರು ಇವರಿಬ್ಬರ ವ್ಯತ್ಯಾಸವನ್ನು ಅರಿತು ಗುರುರೂಪ ತಂದೆಯನ್ನು ಪೂಜಿಸಬೇಕು."

---

[೨೪] ವೀರಶೈವರತ್ನಮ್, ಪು. ೫

[೨೫] ಕ್ರಿ.ಸಾ, ೧೬.೧೦೪, ಪು. ೧೯

[೨೬] ಕ್ರಿ.ಸಾ, ೧೬.೧೪೪-೪೬, ಪು.೨೨

ಗುರುವಿನ ಲಕ್ಷಣ

"ಗುಣಾಃ ಪೂಜಾಸ್ಥಾನಂ ಗುಣೆಷು ನ ಚ ಲಿಂಗಂ ನ ಚ ವಯಃ" ಎಂಬ ಸುಭಾಷಿತೋಕ್ತಿಯಂತೆ ಜಗತ್ತಿನಲ್ಲಿ ಸದ್ಗುಣಗಳ ವಿಷಯದಲ್ಲಿನ ಗೌರವವು ಕಂಡುಬರುತ್ತದೆ. ಆ ಬಗೆಯ ವಿಶಿಷ್ಟ ಗುಣಗಳ ಕಾರಣದಿಂದಲೇ ವಿಶಿಷ್ಟ ವ್ಯಕ್ತಿಗಳು ಪೂಜ್ಯರಾಗುತ್ತಾರೆ. ಇದೇ ರೀತಿಯಲ್ಲಿಯೇ ಜಗತ್ತಿಗೆ ಪೂಜ್ಯನಾದ ಗುರು ಸಹ- "ಗುರುಶ್ಚ ಗುಣವಾನ್ ಪ್ರಾಜ್ಞಃ ಪರಮಾನಂದಭಾಸಕಃ"[೨೭] (ಗುಣವಂತನೂ, ಬುದ್ಧಿವಂತನೂ, ಪರಮಾನಂದವನ್ನುಂಟುಮಾಡುವ ಸಾಮರ್ಥ್ಯವುಳ್ಳವನು ಗುರು) ಎಂಬ ಆಗಮೋಕ್ತಿಯಂತೆ ಗುರುವು ಸದ್ಗುಣಿಯೇ ಆಗಿರುತ್ತಾನೆ. ಇಲ್ಲದಿದ್ದರೆ ಗುರುವಿಗೆ ಗೌರವವನ್ನು ತರುವ ಗುಣಗಳಾವುವು? ಎಂಬ ಜಿಜ್ಞಾಸೆಯುಂಟಾದರೆ ಚಂದ್ರಜ್ಞಾನಾಗಮದಲ್ಲಿ ಕರುಣಾಮೂರ್ತಿಯೂ, ವೀತರಾಗನೂ, ಮಾತ್ಸರ್ಯರಹಿತನೂ, ಸಂಪ್ರದಾಯದಿಂದ ಬಂದಂತಹ ಜ್ಞಾನಿಯೂ, ಲಿಂಗಾಂಗಸ್ಥಲಭೇದವನ್ನು ತಿಳಿದವನೂ, ಷಟ್‌ಸ್ಥಲ ಜ್ಞಾನತತ್ಪರನೂ, ದೀಕ್ಷಾದಿ ಕರ್ಮಗಳಲ್ಲಿ ಕುಶಲನೂ, ಷಡಧ್ವಜ್ಞಾನವತ್ಸಲನೂ, ಶಿವನಲ್ಲಿ ಮಾತ್ರ ನೆಟ್ಟ ಮನಸ್ಸುಳ್ಳ ಮತ್ತು ಗುರುವಂಶ ಸಂಭೂತ ಇತ್ಯಾದಿ ಗುಣಗಳಿಂದ ಕೂಡಿದವನೇ 'ಗುರು' ಎಂಬ ಪದದಿಂದ ಕರೆಯಲ್ಪಡುತ್ತಾನೆ ಎಂದು ಪ್ರತಿಪಾದಿಸಿ, ವ್ಯಸನೀ, ವಾಮನ (ಕುಳ್ಳ), ಕುಬ್ಜ (ಗೂನು ಬೆನ್ನಿನವನು), ಕೋಪಿಷ್ಠ, ಕುಟಿಲ ಸ್ವಭಾವವುಳ್ಳ, ದುಷ್ಟ, ಅಧಿಕ ಚಪಲವುಳ್ಳ, ಅಂಗವಿಕಲ, ಪಾಪಿ, ಸೂಚಕ (ಚಾಡಿಕೋರ), ರೋಗಗ್ರಸ್ಥ, ಕಾಗೆಯಂತೆ ಬಾಯುಳ್ಳ, ದೊಡ್ಡದಾದ ತುಟಿಯುಳ್ಳ, ವಕ್ರವಾದ ಮೂಗುಳ್ಳ, ಕೆಳಗಡೆ ನೋಡುವ, ಶಠ, ಸುಳ್ಳು ಹೇಳುವ, ವಿನೀತ (ಬೇರೆಯವರು ಹೇಳಿದಂತೆ ಕೇಳುವವನು) ಮೊದಲಾದ ದುರ್ಗುಣಗಳುಳ್ಳ ವ್ಯಕ್ತಿಯು 'ಗುರು'ವೆನಿಸಲು ಅನರ್ಹನೆಂದು 'ಗುರು'ವಿನ ಲಕ್ಷಣವನ್ನು ಸ್ಪಷ್ಟವಾಗಿ ನಿರೂಪಿಸಲಾಗಿದೆ.[೨೮] ಈ ಪ್ರಕಾರವಾಗಿಯೇ ಶ್ರೀ ರೇಣುಕ ಭಗವತ್ಪಾದರೂ ಸಹ-

ಉತ್ಪೈತಿ ಲೋಕವಿಖ್ಯಾತಂ ಲೋಭಮೋಹವಿವರ್ಜಿತಮ್।
ಆತ್ಮತತ್ತ್ವವಿಚಾರಜ್ಞಂ ವಿಮುಕ್ತವಿಷಯಭ್ರಮಮ್॥
ಶಿವಸಿದ್ಧಾಂತತತ್ತ್ವಜ್ಞಂ ಛಿನ್ನಸಂದೇಹವಿಭ್ರಮಮ್।
ಸರ್ವತಂತ್ರಪ್ರಯೋಗಜ್ಞಂ ಧಾರ್ಮಿಕಂ ಸತ್ಯವಾದಿನಮ್॥
ಕುಲಕ್ರಮಾಗತಾಚಾರಂ ಕುಮಾರ್ಗಾಚಾರವರ್ಜಿತಮ್।
ಶಿವಧ್ಯಾನಪರಂ ಶಾಂತಂ ಶಿವತತ್ತ್ವವಿವೇಕಿನಮ್॥
ಭಸ್ಮೋದ್ಧೂಲನನಿಷ್ಣಾತಂ ಭಸ್ಮತತ್ತ್ವವಿವೇಕಿನಮ್।
ತ್ರಿಪುಂಡ್ರಧಾರಣೋತ್ಕಂಠಂ ಧೃತರುದ್ರಾಕ್ಷಮಾಲಿಕಮ್॥

---

[೨೭] ಚ.ಜ್ಞಾ, ಕ್ರಿ.ಪಾ, ೨.೪೮

[೨೮] ಚ.ಜ್ಞಾ, ಕ್ರಿ.ಪಾ, ೨.೪೮-೬೬

ಲಿಂಗಧಾರಣಸಂಯುಕ್ತಂ ಲಿಂಗಪೂಜಾಪರಾಯಣಮ್।
ಲಿಂಗಾಂಗಯೋಗತತ್ತ್ವಜ್ಞಂ ನಿರೂಢಾದ್ವೈತವಾಸನಮ್॥
ಲಿಂಗಾಂಗಸ್ಥಲಭೇದಜ್ಞಂ ಶ್ರೀಗುರುಂ ಶಿವವಾದಿನಮ್॥[೨೯]

"ಜಗದ್ವಿಖ್ಯಾತನೂ, ಲೋಭ-ಮೋಹಗಳನ್ನು ತ್ಯಜಿಸಿದವನೂ, ಜೀವಾತ್ಮ-ಪರಮಾತ್ಮ ಸ್ವರೂಪವನ್ನು ತಿಳಿದವನೂ, ವಿಷಯಭ್ರಮೆಯಿಂದ ಮುಕ್ತನಾದವನೂ, ಶಿವಾದ್ವೈತ ಸಿದ್ಧಾಂತವನ್ನು ತಿಳಿದವನೂ, ನಾನಾ ಬಗೆಯ ಸಂಶಯಗಳಿಂದುತ್ಪನ್ನವಾದ ವಿಭ್ರಮೆಗಳನ್ನು ಬಿಟ್ಟವನೂ, ಎಲ್ಲ ತಂತ್ರಗಳ ಪ್ರಯೋಗವನ್ನು ಬಲ್ಲವನೂ, ಶಿವಧರ್ಮಿಷ್ಠನೂ, ಸತ್ಯವಾದಿಯೂ, ವಂಶಪಾರಂಪರ್ಯವಾಗಿ ಬಂದ ಆಚಾರಸಂಪನ್ನನೂ, ಕುತ್ಸಿತಾಚಾರಗಳನ್ನು ತ್ಯಜಿಸಿದವನೂ, ಶಿವಧ್ಯಾನಿಯೂ, ಶಾಂತನೂ, ಶಿವಸ್ವರೂಪವನ್ನು ಬಲ್ಲವನೂ, ಭಸ್ಮೋದ್ಧೂಲನದಲ್ಲಿ ನಿಷ್ಣಾತನೂ, ಭಸ್ಮಸ್ವರೂಪವನ್ನು ಬಲ್ಲವನೂ, ಭಸ್ಮ ತ್ರಿಪುಂಡ್ರ ಧಾರಣೆಯಲ್ಲಿ ಇಚ್ಛೆಯುಳ್ಳವನೂ, ರುದ್ರಾಕ್ಷಮಾಲೆಗಳನ್ನು ಧರಿಸಿದವನೂ, ಲಿಂಗಧಾರಣೆಯಿಂದ ಯುಕ್ತನಾದವನೂ, ಶಿವಲಿಂಗಪೂಜೆಯಲ್ಲಿ ನಿರತನಾದವನೂ, ಲಿಂಗಾಂಗ ಸಾಮರಸ್ಯವನ್ನು ತಿಳಿದವನೂ, ಶಿವಾದ್ವೈತವಾಸನೆಯಲ್ಲಿ ಮಗ್ನನಾದವನೂ, ಅಂಗಸ್ಥಲ-ಲಿಂಗಸ್ಥಲಗಳ ಭೇದವನ್ನು ತಿಳಿದವನೂ, ಸದಾ ಮಂಗಲವನ್ನಾಡುವವನೂ ಆದ ಶ್ರೀಗುರುವನ್ನು (ಶಿಷ್ಯನು) ಆಶ್ರಯಿಸಬೇಕು" ಇತ್ಯಾದಿಯಾಗಿ ವೀರಶೈವ ಗುರುಗಳ ಲಕ್ಷಣವನ್ನು ಪ್ರತಿಪಾದಿಸಿದ್ದಾರೆ. ಈ ಲಕ್ಷಣದ ಪರೀಕ್ಷೆಯಿಂದ ಶಿವಸಿದ್ಧಾಂತತತ್ತ್ವಜ್ಞ ಇತ್ಯಾದಿ ಶಬ್ದಗಳಿಂದ ಗುರುವಿನ ಶ್ರೋತ್ರಿಯತ್ವ, ಲಿಂಗಾಂಗಯೋಗತತ್ತ್ವಜ್ಞ, ನಿರೂಢಾದ್ವೈತವಾಸನಮ್ ಇತ್ಯಾದಿಗಳಿಂದ ಅವನ ಬ್ರಹ್ಮನಿಷ್ಠೆಯು ನಿಶ್ಚಯವಾಗುತ್ತದೆ. ಗುರು ಜ್ಞಾನೋಪದೇಶದಿಂದ ಮತ್ತು ವೀರಶೈವ ಸಿದ್ಧಾಂತ ಗ್ರಂಥಗಳಲ್ಲಿ ಪ್ರತಿಪಾದಿತವಾಗಿರುವ ಆಚಾರಗಳನ್ನು ಸ್ವಯಂ ತಾನು ಆಚರಿಸುವುದರಿಂದ ಅಜ್ಞರಿಗೆ ಮಾರ್ಗದರ್ಶಕನಾಗುತ್ತಾನೆ. ಆದುದರಿಂದ ಈ ಸಿದ್ಧಾಂತದ ಪ್ರಕಾರ ಗುರು ಶಿಷ್ಟಾಚಾರಸಂಪನ್ನನೂ ಸಹ ಆಗಿರಬೇಕಾಗುತ್ತದೆ. ಆದುದರಿಂದಲೇ ಧಾರ್ಮಿಕ, ಸತ್ಯವಾದಿ, ದುಷ್ಟ ಆಚಾರಗಳನ್ನು ಬಿಟ್ಟ, ಭಸ್ಮೋದ್ಧೂಲನದಲ್ಲಿ ನಿಷ್ಣಾತ, ಲಿಂಗಧಾರಣೆಮಾಡಿಕೊಂಡಿರುವ, ಲಿಂಗಪೂಜಾಪರಾಯಣ ಮೊದಲಾದ ಶಬ್ದಗಳಿಂದ ಅವನ ಧರ್ಮಾಚರಣೆಯ ಶೀಲತ್ವವೂ ಸಹ ನಿರೂಪಿತವಾಗಿದೆ. ಆದುದರಿಂದಲೇ ಶ್ರೀರೇಣುಕ ಭಗವತ್ಪಾದರು-

ಜ್ಞಾನಾಮೃತೇನ ತೃಪ್ತೋಽಪಿ ಯೋಗೀ ಧರ್ಮಂ ನ ಸಂತ್ಯಜೇತ್।
ಆಚಾರಂ ಮಹತಾಂ ದೃಷ್ಟ್ವಾ ಪ್ರವರ್ತಂತೇ ಹಿ ಲೌಕಿಕಾಃ॥[೩೦]

"ಯೋಗಿಯು ತಾನು ಜ್ಞಾನಾಮೃತದಿಂದ ತೃಪ್ತನಾಗಿದ್ದರೂ ಧರ್ಮವನ್ನು ಬಿಡಬಾರದು; ಏಕೆಂದರೆ ಲೌಕಿಕರು ದೊಡ್ಡವರ ಆಚಾರವನ್ನು ನೋಡಿ ಅವರಂತೆ

---

[೨೯] ಸಿ.ಶಿ, ೬.೨-೬

[೩೦] ಸಿ.ಶಿ, ೧೬.೬೫

ವರ್ತಿಸುತ್ತಾರೆ” ಎಂದು ಜನಗಳ ಪ್ರಯೋಜನಕ್ಕಾಗಿ ಜ್ಞಾನಿಗಳೂ ಸಹ ಆಚಾರವಂತರಾಗಬೇಕೆಂದು ಉಪದೇಶಿಸಿದ್ದಾರೆ.

ಇಂತಹ ಜ್ಞಾನ-ಆಚರಣಾದಿ ಗುಣಗಳು ಕೆಲವು ವಿಶಿಷ್ಟ ವಂಶಸ್ಥರಲ್ಲಿ ಸಹಜವಾಗಿ ಬಂದಿರುತ್ತವೆಯಾದ್ದರಿಂದ ಇತರ ಧರ್ಮಗಳಂತೆ ವೀರಶೈವ ಧರ್ಮದಲ್ಲಿಯೂ ಸಹ ಗುರುವನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಅಂತಹ ವಿಶಿಷ್ಟ ಧರ್ಮಗಳಲ್ಲಿ ಜನಿಸಿದವರಿಗೆ ಪ್ರಾಶಸ್ತ್ಯವನ್ನು ನೀಡಲಾಗುತ್ತದೆ. ಆದುದರಿಂದಲೇ ಇಲ್ಲಿ “ಕುಲಕ್ರಮಾಗತಾ ಚಾರಮ್” (ಆಚಾರವು ವಂಶಪಾರಂಪರ್ಯವಾಗಿ ಬರುವಂತಹದ್ದು) ಎಂದು ಹೇಳಿದೆ. ವ್ಯಾಖ್ಯಾನಕಾರರಾದ ಶ್ರೀ ಮರಿತೋಂಟದಾರ್ಯರು- “ಕುಲಕ್ರಮಾಗತಾಚಾರೋ ಗುರುವಂಶಕ್ರಮಾಗತಾಚಾರವಾನ್”[೩೧] ಎಂಬಲ್ಲಿ ‘ಕುಲ’ ಶಬ್ದಕ್ಕೆ ‘ಗುರುವಂಶ’ ಎಂದು ವ್ಯಾಖ್ಯಾನಿಸಿದ್ದಾರೆ. ‘ಗುರುವಂಶ’ಕ್ಕೆ ‘ವೀರಮಾಹೇಶ್ವರವಂಶ’ ಮತ್ತು ‘ಜಂಗಮವಂಶ’ ಎಂಬ ಇತರ ಹೆಸರುಗಳೂ ಸಹ ಇವೆ. ಇಂತಹ ಗುರುವಂಶೋತ್ಪನ್ನರಿಗೆ ಮಠಸ್ಥಲ ಸಮುತ್ಪನ್ನ ಎಂದೂ ಸಹ ಕರೆಯಲಾಗುತ್ತದೆ. ಆದುದರಿಂದಲೇ-

> ಮಠಸ್ಥಲಸಮುತ್ಪನ್ನಃ ಶಾಂತಃ ಶೈವಾಗಮಾರ್ಥವಿತ್।
> ಅನೂಚಾನಃ ಪ್ರಸನ್ನಾತ್ಮಾ ಶಿವದೀಕ್ಷಾಭಿಷೇಚಿತಃ॥[೩೨]

“ಮಠಸ್ಥಲದಲ್ಲಿ ಜನಿಸಿದವನೂ, ಶಾಂತಚಿತ್ತನೂ, ಶೈವಾಗಮಗಳ ಅರ್ಥಾನುಸಂಧಾನ ಬಲ್ಲವನೂ, ವೇದ-ವೇದಾಂಗಗಳ ಅಧ್ಯಯನ ಮಾಡಿದವನೂ, ಪ್ರಸನ್ನವಾದ ಆತ್ಮವುಳ್ಳವನೂ, ಶಿವದೀಕ್ಷೆಯಿಂದ ಅಭಿಷಿಕ್ತನಾದವನೂ (ಗುರುವೆನಿಸುತ್ತಾನೆ)” ಎಂದು ವೀರಶೈವ ಗುರುಗಳ ಲಕ್ಷಣ ನಿರೂಪಣೆಯ ಸಂದರ್ಭದಲ್ಲಿ ಶ್ರೀ ನೀಲಕಂಠ ಶಿವಾಚಾರ್ಯರು ಪೂರ್ವೋಕ್ತ ಗುರುವಿನ ಗುಣಗಳ ಜೊತೆಗೆ ಮಠಸ್ಥಲದಲ್ಲಿ ಜನಿಸುವುದನ್ನೂ ಸಹ ಒಂದು ಗುಣವೆಂದು ಪರಿಗಣಿಸಿದ್ದಾರೆ.

ಇದರ ಭಾವವಿಷ್ಟು- ವೀರ, ನಂದಿ, ಭೃಂಗಿ, ವೃಷಭ, ಸ್ಕಂದ ಎಂಬ ಹೆಸರುಳ್ಳ ಶಿವನ ಐದು ಗಣಗಳ ಗೋತ್ರದಲ್ಲಿ ಜನಿಸಿದವರು ‘ವೀರಮಾಹೇಶ್ವರ’ ಅಥವಾ ‘ಜಂಗಮ’ರೆಂದು ಕರೆಯಲ್ಪಟ್ಟಿದ್ದಾರೆ. ಇವರು ಗ್ರಾಮದಲ್ಲಿರುವ ಪವಿತ್ರಕ್ಷೇತ್ರಗಳಾದ ಮಠಗಳಲ್ಲಿ ಪ್ರತ್ಯೇಕವಾಗಿ ವಾಸಿಸುತ್ತಾರೆ. ಆದುದರಿಂದ ಅವರು ಹಿರೇಮಠ, ಪುರಾಣಮಠ, ಸ್ಥಾವರಮಠ, ಬೃಹನ್ಮಠ ಇತ್ಯಾದಿ ಉಪಾಧಿಗಳಿಗೆ ಪಾತ್ರರಾಗಿದ್ದಾರೆ. ಆದುದರಿಂದ ವೀರಮಾಹೇಶ್ವರ ಪರ್ಯಾಯವಾಚಿಗಳಾದ ಜಂಗಮರಿಗೆ[೩೩] ಮಠದಲ್ಲಿ

---

[೩೧] ಸಿ.ಶಿ, ೬.೪, ತತ್ತ್ವಪ್ರಕಾಶ, ಪು. ೮೩, ಸೋಲಾಪುರ ಪ್ರಕಾಶನಮ್, ೧೯೦೫

[೩೨] ಕ್ರಿ.ಸಾ, ಭಾಗ-೩, ಪು. ೧೩೩

[೩೩] ಅತೋ ವಿಶಿಷ್ಟವೀರೇತಿ ವೀರಮಾಹೇಶ್ವರೇತಿ ಚ।
ಪರ್ಯಾಯೋ ವರ್ತತೇ ದೇವಿ ಜಂಗಮಸ್ಯ ಮಹಾತ್ಮನಃ॥
(ವೀ.ಸ.ಸ, ೧೧.೪೫)

ಜನಿಸಬೇಕೆಂದು ಶಾಸ್ತ್ರಗಳು ನಿರ್ದೇಶಿಸುತ್ತವೆ. ಗುರುವಾಗಲು ಸದ್ಗುಣಗಳ ಜೊತೆಗೆ ಸತ್ಕುಲ ಪ್ರಸೂತಿಯೂ ಆವಶ್ಯಕವೆಂದು ಮೇಲಿನ ಚರ್ಚೆಯಿಂದ ತಿಳಿದುಬರುತ್ತದೆ. ಆ ಕಾರಣ ವೀರಶೈವ ಧರ್ಮದ ಪಂಚ ಪ್ರಧಾನ ಪೀಠಗಳಿಗೆ ಮತ್ತು ಅವುಗಳ ಶಾಖಾಮಠಗಳಿಗೆ ಜಂಗಮ ವಂಶೋದ್ಭವರಾದ ನೈಷ್ಠಿಕಬ್ರಹ್ಮಚಾರಿಗಳಾದ ವಟುಗಳನ್ನೇ ಗುರುಸ್ಥಾನದಲ್ಲಿ ಪಟ್ಟಾಧಿಕಾರ ಮಾಡಲಾಗುತ್ತದೆ. ಈ ಧರ್ಮದಲ್ಲಿ ಪಟ್ಟಾಭಿಷಿಕ್ತರಾದ ಆಚಾರ್ಯರುಗಳು "ಶಿವಾಚಾರ್ಯರು" ಎಂದು ಕರೆಯಲ್ಪಟ್ಟಿದ್ದಾರೆ.

ವೀರಶೈವ ಪರಂಪರೆಯಲ್ಲಿ ಕೆಲವು ಶಿಷ್ಯವರ್ಗದ ಮಠಗಳಿವೆ. ಆ ಮಠಗಳಲ್ಲಿ ಶಿವನ ಪಂಚಮುಖ ಗಣೇಶ್ವರರ ವಂಶದಲ್ಲಿ ಜನಿಸಿದ 'ಪಂಚಮಶಾಲಿ' ಎಂಬ ಉಪನಾಮವುಳ್ಳ ನೈಷ್ಠಿಕ ಬ್ರಹ್ಮಚಾರಿ ವಟುಗಳಿಗೆ ಜಂಗಮದೀಕ್ಷೆಯನ್ನು ಕೊಟ್ಟು ಪಟ್ಟಾಧಿಕಾರವನ್ನು ನಡೆಸಲಾಗುತ್ತದೆ. ಮೂಲತಃ ಸಾಮಾನ್ಯವಾಗಿ ಜಂಗಮ ವಂಶದಲ್ಲಿ ಜನಿಸಿದ ವಟುಗಳು ವೀರಶೈವ ಧರ್ಮದ ಪಂಚ ಜಗದ್ಗುರು ಪೀಠಗಳಿಗೆ ಮತ್ತು ಅವುಗಳ ಶಾಖಾಮಠಗಳಿಗೆ ಪಟ್ಟಾಭಿಷಿಕ್ತರಾಗುತ್ತಾರೆ. ಪಂಚಮಶಾಲಿ ವಂಶದಲ್ಲಿ ಜನಿಸಿದ ವಟುಗಳು ಕೇವಲ ಪಂಚಪೀಠಗಳ ಕೆಲವು ಶಾಖಾಮಠಗಳಿಗೆ ಪಟ್ಟಾಭಿಷಿಕ್ತರಾಗಿದ್ದಾರೆಂಬುದು ವಿಶೇಷ.

ಈ ಪ್ರಕಾರ ವೀರಶೈವರಿಗೆ ಪ್ರಧಾನವಾಗಿ ಪಂಚಪೀಠಗಳಿದ್ದು, ಆ ಪೀಠಗಳಿಗೆ ಅಭಿಷಿಕ್ತರಾಗುವವರನ್ನು "ಜಗದ್ಗುರುಗಳು" ಎಂದೂ, ಮತ್ತು ಶಾಖಾಮಠಗಳಿಗೆ ಅಭಿಷಿಕ್ತರಾಗುವವರನ್ನು 'ಗುರುಗಳು' ಅಥವಾ 'ಶಿವಾಚಾರ್ಯರು' ಎಂದು ಕರೆಯಲಾಗುತ್ತದೆ. ಆದುದರಿಂದ ವೀರಶೈವ ಪರಂಪರೆಯಲ್ಲಿ ಐವರು ಜಗದ್ಗುರುಗಳು ಹಾಗೂ ಪಂಚಪೀಠಗಳ ಅನುಯಾಯಿಗಳಾದ ಅಸಂಖ್ಯಾತ ಶಿವಾಚಾರ್ಯರುಗಳಿದ್ದಾರೆ.

ಸಾಮಾನ್ಯವಾಗಿ ದಕ್ಷಿಣ ಭಾರತದ ಪ್ರತಿಯೊಂದು ಗ್ರಾಮದಲ್ಲಿಯೂ ವೀರಶೈವ ಧರ್ಮದ ಗುರುವರ್ಗ ಮಠಗಳಿವೆ. ಪ್ರತಿಯೊಂದು ಮಠದಲ್ಲಿಯೂ ಪಟ್ಟಾಭಿಷಿಕ್ತರಾದ ಶಿವಾಚಾರ್ಯರಿದ್ದಾರೆ. ಅವರುಗಳೇ ತಮ್ಮ ಶಾಖಾನುಯಾಯಿಗಳಾದ ವೀರಶೈವ ಭಕ್ತರಿಗೆ ದೀಕ್ಷಾದಿ ಸಂಸ್ಕಾರಗಳನ್ನು ಕರುಣಿಸಿ ಷಟ್‌ಸ್ಥಲಜ್ಞಾನೋಪದೇಶದ ಮೂಲಕ ಅವರನ್ನು ಸಂಸಾರ ಸಾಗರದಿಂದ ಮೇಲೆತ್ತುತ್ತಾರೆ.

ಅನೇಕ ಗುರುವಾದದ ತಿರಸ್ಕಾರ

> ಆಮೋದಾರ್ಥೀ ಯಥಾ ಭೃಂಗಃ ಪುಷ್ಪಾತ್ ಪುಷ್ಪಾಂತರಂ ವ್ರಜೇತ್।
> ವಿಜ್ಞಾನಾರ್ಥೀ ತಥಾ ಶಿಷ್ಯೋ ಗುರೋರ್ಗುರ್ವಂತರಂ ವ್ರಜೇತ್॥[೩೪]

"ಪರಿಮಳಕ್ಕಾಗಿ ದುಂಬಿಯು ಹೇಗೆ ಒಂದು ಹೂವಿನಿಂದ ಮತ್ತೊಂದು ಹೂವಿಗೆ ಹಾರಿಹೋಗುತ್ತದೆಯೋ ಹಾಗೆಯೇ ವಿಶೇಷ ಜ್ಞಾನಾರ್ಥಿಯಾದ ಶಿಷ್ಯನು ಗುರುವಿನಿಂದ ಮತ್ತೊಬ್ಬ ಗುರುವಿನಲ್ಲಿಗೆ ಹೋಗುತ್ತಾನೆ" ಎಂಬ ಆಗಮೋಕ್ತಿಯಲ್ಲಿ ಒಂದು ವೇಳೆ

---

[೩೪] ಭಾರತೀಯ ಸಂಸ್ಕೃತಿ ಔರ್ ಸಾಹಿತ್ಯ, ಪು. ೨೬೩

ಒಬ್ಬ ಗುರುವಿನಿಂದ ಎಲ್ಲ ಜಿಜ್ಞಾಸೆಗಳಿಗೂ ಸಮಾಧಾನವಾಗದಿದ್ದರೆ ಶಿಷ್ಯನು ಮತ್ತೊಬ್ಬ ಗುರುವಿನಲ್ಲಿ ಆ ಜಿಜ್ಞಾಸೆಗಳ ಸಮಾಧಾನಕ್ಕಾಗಿ ಪ್ರಯತ್ನಿಸಬೇಕೆಂದು ದುಂಬಿಯ ದೃಷ್ಟಾಂತದ ಮೂಲಕ ಅನೇಕ ಗುರುಗಳ ಉಪಾಸನೆಯು ಸೂಚಿತವಾಗಿದೆ. ದತ್ತಾತ್ರೇಯನಿಗೆ ಇಪ್ಪತ್ತನಾಲ್ಕು ಜನ ಗುರುಗಳಿದ್ದರೆಂದು ಶ್ರೀಮದ್ಭಾಗವತದಲ್ಲಿ ನಿರೂಪಿತವಾಗಿದೆ. ವೀರಶೈವ ಸಿದ್ಧಾಂತದಲ್ಲಿ ಅನೇಕ ಗುರುವಾದವು ಅಂಗೀಕೃತವಾಗಿದೆಯೋ ಅಥವಾ ಇಲ್ಲವೋ ಎಂದು ಸಂದೇಹವನ್ನು ವ್ಯಕ್ತಪಡಿಸಿದರೆ, ಹೀಗೆ ಉತ್ತರಿಸಲಾಗಿದೆ- ಸದಾಚಾರ ಹೀನತೆಯ ಕಾರಣದಿಂದ ಈ ಅನೇಕ ಗುರುವಾದವು ಈ ಸಿದ್ಧಾಂತದಲ್ಲಿ ಸಮ್ಮತಿಯನ್ನು ಪಡೆದಿಲ್ಲ. ಸೂಕ್ಷ್ಮಾಗಮದಲ್ಲಿ ಹೀಗೆ ನಿರೂಪಿಸಲಾಗಿದೆ-

> ಪಿತೃ-ಭ್ರಾತೃ-ಕಲತ್ರಾಣಾಂ ಪುತ್ರಾದೀನಾಂ ತಥೈವ ಚ।
> ದೀಕ್ಷಾ ಶಿಕ್ಷಾವಿಧಾನಾರ್ಥಮೇಕ ಏವ ಗುರುರ್ಭವೇತ್॥
> ಗುರವೋ ಯತ್ರ ಬಹವೋ ಭವಂತ್ಯನ್ಯೋನ್ಯಭೇದತಃ।
> ವೀರಶೈವಸದಾಚಾರಸ್ತತ್ರ ನಾಸ್ತೀತಿ ನಿಶ್ಚಯಃ॥[೩೪]

"ತಂದೆ, ಸೋದರ, ಹೆಂಡತಿ ಹಾಗೂ ಪುತ್ರಾದಿಗಳ ದೀಕ್ಷೆ ಹಾಗೂ ಶಿಕ್ಷಣಕ್ಕಾಗಿ ಒಬ್ಬನೇ ಗುರುವಿರಬೇಕು. ಎಲ್ಲಿ ಅನೇಕ ಜನ ಗುರುಗಳಿರುತ್ತಾರೆಯೋ ಅಲ್ಲಿ ವೀರಶೈವ ಧರ್ಮದ ಸದಾಚಾರವು ಇರುವುದಿಲ್ಲವೆಂಬುದು ಸತ್ಯ."

ಇದರ ತಾತ್ಪರ್ಯವಿಷ್ಟು- ವೀರಶೈವ ಸಿದ್ಧಾಂತದಲ್ಲಿ ಐದು ಬಗೆಯ ಆಚಾರಗಳು ಪ್ರತಿಪಾದಿತವಾಗಿವೆ. ಅವುಗಳಲ್ಲಿ ಒಂದು ಸದಾಚಾರ. ಈ ಆಚಾರಕ್ಕೆ ಸಂಬಂಧಿಸಿದಂತೆ ಎಂಟು ವಿಧ ಶೀಲಗಳು[೩೫] ನಿರೂಪಿತವಾಗಿವೆ. ಅದರಂತೆ ಒಂದು ವಂಶಕ್ಕೆ ಒಬ್ಬನೇ ಗುರು. ಆ ಗುರುವಿನ ವಿಷಯದಲ್ಲಿ ಶ್ರದ್ಧೆಯಿಂದಿರಬೇಕು ಮತ್ತು ಅವನಿಂದಲೇ ಎಲ್ಲ ದೀಕ್ಷಾದಿ ಸಂಸ್ಕಾರಗಳನ್ನು ಪಡೆಯತಕ್ಕದ್ದು ಎಂದು ಒಂದು ಶೀಲವು ಪ್ರತಿಪಾದಿತವಾಗಿದೆ. ಪತಿವ್ರತೆಯಾದ ಸ್ತ್ರೀ ಒಬ್ಬನೇ ಪತಿಯಲ್ಲಿ ವ್ರತಶೀಲೆಯಾಗಿರುವಂತೆ ವೀರಶೈವ ಭಕ್ತನೂ ಸಹ ಸದಾಚಾರದಲ್ಲಿ ಉಕ್ತವಾಗಿರುವ ಶೀಲಪರಿಪಾಲನೆಯ ಮೂಲಕ ಒಬ್ಬನೇ ಗುರುವಿನ ಉಪಾಸಕನಾಗಿರುತ್ತಾನೆ. ಆದುದರಿಂದ ವೀರಶೈವರು ಸದಾಚಾರ ಪಾಲನೆಗೋಸ್ಕರ ತಮ್ಮ ವಂಶದ ಪರಂಪರೆಯಿಂದ ಬಂದ ಯಾವ ಗುರುಗಳಿರುತ್ತಾರೆಯೋ, ಅವರಿಂದಲೇ ದೀಕ್ಷೆಯನ್ನು, ಶಿಕ್ಷಣವನ್ನು ಮತ್ತು ಜ್ಞಾನವನ್ನು ಪಡೆಯುತ್ತಾರೆ. ಒಬ್ಬನೇ ಗುರುವು ದೀಕ್ಷೆಯನ್ನು ನೀಡುವುದರಿಂದ ದೀಕ್ಷಾಗುರು, ಶಾಸ್ತ್ರೋಪದೇಶ ಮಾಡುವುದರಿಂದ ಶಿಕ್ಷಾಗುರು ಮತ್ತು ಶಿವಾದ್ವೈತ ಜ್ಞಾನೋಪದೇಶ ಮಾಡುವುದರಿಂದ ಜ್ಞಾನಗುರು ಎಂದು ಕರೆಯಲಾಗಿದೆ.

---

[೩೪] ಸೂ.ಆ, ಕ್ರಿ.ಪಾ, ೫.೨೯-೩೦

[೩೫] ಸದಾಚಾರೋಽಷ್ಟಶೀಲಾಢ್ಯಃ ಸೇವಿತಃ ಕಲ್ಪಪಾದಪಃ।
ಸದ್ಭಕ್ತಾನಾಂ ಸುಮನಸಾಂ ದದಾತೀಷ್ಟಫಲಂ ಮಹತ್॥ -(ಚ.ಜ್ಞಾ, ಕ್ರಿ.ಪಾ, ೯.೨೨)

೧. ದೀಕ್ಷಾಗುರು

ದೀಯತೇ ಪರಮಂ ಜ್ಞಾನಂ ಕ್ಷೀಯತೇ ಪಾಶಬಂಧನಮ್।
ಯಯಾ ದೀಕ್ಷೇತಿ ಸಾ ತಸ್ಯಾಂ ಗುರುರ್ದೀಕ್ಷಾಗುರುಃ ಸ್ಮೃತಃ॥[೩೭]

"ಯಾವುದರಿಂದ ಶ್ರೇಷ್ಠವಾದ ಶಿವಜ್ಞಾನವು ಅನುಗ್ರಹಿಸಲ್ಪಡುವುದೋ, ಯಾವುದರಿಂದ ಮಲಮಾಯಾದಿಪಾಶಬಂಧವು ನಾಶಮಾಡಲ್ಪಡುವುದೋ, ಅದು ದೀಕ್ಷೆಯೆನಿಸಿಕೊಳ್ಳುವುದು. ಅಂತಹ ದೀಕ್ಷೆಯನ್ನು ಅನುಗ್ರಹಿಸುವವನು ದೀಕ್ಷಾಗುರು ಎನಿಸಿಕೊಳ್ಳುವನು" ಎಂಬ ಶ್ರೀ ರೇಣುಕಾಚಾರ್ಯರ ಉಕ್ತಿಯಂತೆ ಆಣವ, ಮಾಯಾ ಮತ್ತು ಕಾರ್ಮಿಕ ಎಂಬ ಮಲತ್ರಯರೂಪ ಪಾಶವನ್ನು ಕತ್ತರಿಸುವ ಮತ್ತು ಶಿವಜ್ಞಾನವನ್ನು ನೀಡುವ ಸಂಸ್ಕಾರ ವಿಶೇಷವು ದೀಕ್ಷೆ ಎನಿಸುತ್ತದೆ. ಆ ಬಗೆಯ ದೀಕ್ಷೆಯನ್ನು ಕರುಣಿಸುವ ಗುರುವನ್ನು ದೀಕ್ಷಾಗುರು ಎಂದು ಕರೆಯಲಾಗುತ್ತದೆ.

೨. ಶಿಕ್ಷಾಗುರು

ದೀಕ್ಷಾಗುರುರಸೌ ಶಿಕ್ಷಾಹೇತುಃ ಶಿಷ್ಯಸ್ಯ ಬೋಧಕಃ।
ಪ್ರಶ್ನೋತ್ತರಪ್ರವಕ್ತಾ ಚ ಶಿಕ್ಷಾಗುರುರಿತೀರ್ಯತೇ॥[೩೮]

"ಈ ದೀಕ್ಷಾ ಗುರುವೇ ಶಿಷ್ಯನಿಗೆ ಬೋಧಕನೂ, ಶಿಷ್ಯನ ಪ್ರಶ್ನೆಗಳಿಗೆ ಉತ್ತರಿಸುವವನೂ, ವೇದೋಪನಿಷದಾದಿ ಶಿಕ್ಷಣಕಾರಣನೂ ಆಗಿ ಶಿಕ್ಷಾಗುರು ಎಂದು ಕರೆಯಿಸಿಕೊಳ್ಳುವನು" ಎಂಬ ಉಕ್ತಿಯಂತೆ ಪೂರ್ವೋಕ್ತ ದೀಕ್ಷಾಗುರುವೇ ಲಿಂಗಪೂಜಾದಿ ವಿಧಾನವನ್ನು ಮತ್ತು ಲಿಂಗವನ್ನು ಪ್ರಾಣದಂತೆ ಧರಿಸಬೇಕೆಂಬುದನ್ನು ಉಪದೇಶಿಸುವುದರಿಂದ ಅವನು ಶಿಕ್ಷಾಗುರು ಎನಿಸುತ್ತಾನೆ. ಈ ಗುರುವು ಮಂತ್ರಜಪವಿಧಿಯನ್ನು ಮತ್ತು ಪ್ರಾಣಲಿಂಗಾನುಸಂಧಾನ ಪದ್ಧತಿಯನ್ನು ಬೋಧಿಸುತ್ತಾನೆ. ಹೀಗೆ ಆಧ್ಯಾತ್ಮಿಕ ಶಿಕ್ಷಣವನ್ನು ಬೋಧಿಸುವ ಈ ಗುರುವನ್ನು ಶಿಕ್ಷಾಗುರುವೆಂದು ತಿಳಿಯಬೇಕು.

೩. ಜ್ಞಾನಗುರು

ಉಪದೇಷ್ಟೋಪದೇಶಾನಾಂ ಸಂಶಯುಚ್ಛೇದಕಾರಕಃ।
ಸಮ್ಯಗ್ಜ್ಞಾನಪ್ರದಃ ಸಾಕ್ಷಾದೇಷ ಜ್ಞಾನಗುರುಃ ಸ್ಮೃತಃ॥[೩೯]

"ಉಪದೇಶಯೋಗ್ಯವಾದ ವೇದಾಂತವಾಕ್ಯರಹಸ್ಯಾರ್ಥಗಳನ್ನು ಉಪದೇಶಿಸುವವನೂ, ಶಿಷ್ಯರ ಸಂದೇಹಗಳನ್ನು ನಿವಾರಿಸುವವನೂ ಆದ ಶಿಕ್ಷಾಗುರುವೇ ಜ್ಞಾನವನ್ನು ಚೆನ್ನಾಗಿ ಅನುಗ್ರಹಿಸುವುದರಿಂದ ಜ್ಞಾನಗುರುವೆಂದು ಕರೆಯಿಸಿಕೊಳ್ಳುವನು" ಎಂಬ ಉಕ್ತಿಯಂತೆ ಶೈವಾಗಮಗಳಲ್ಲಿ ಪ್ರತಿಪಾದಿತವಾಗಿರುವ ವಿಷಯಗಳನ್ನು ಸ್ವಾನುಭವದಿಂದ ಯುಕ್ತಿ-ಪ್ರಯುಕ್ತಿಗಳಿಂದ ಚೆನ್ನಾಗಿ ನಿರೂಪಿಸಿ, ಶಿಷ್ಯನ ಸಂದೇಹಗಳನ್ನು

---

[೩೭] ಸಿ.ಶಿ, ೧೫.೭

[೩೮] ಸಿ.ಶಿ, ೧೫.೧೨

[೩೯] ಸಿ.ಶಿ, ೧೫.೨೧

ನಿವಾರಿಸಿ, ಅವನ ಮೋಕ್ಷಕ್ಕೆ ಕಾರಣವಾದ ತತ್ತ್ವಜ್ಞಾನವನ್ನು ಯಾರು ಉಪದೇಶಿಸುತ್ತಾನೆಯೋ ಅವನು ಜ್ಞಾನಗುರು ಎನಿಸುತ್ತಾನೆ. ಈ ರೀತಿಯಲ್ಲಿ ತಮ್ಮ ವಂಶಪರಂಪರೆಯಿಂದ ಬಂದ ಒಬ್ಬನೇ ಗುರು ದೀಕ್ಷೆಯನ್ನು ಅನುಗ್ರಹಿಸುವುದರಿಂದ ದೀಕ್ಷಾಗುರು, ಶಾಸ್ತ್ರಗಳನ್ನು ಬೋಧಿಸುವುದರಿಂದ ಶಿಕ್ಷಾಗುರು ಮತ್ತು ತತ್ತ್ವಜ್ಞಾನವನ್ನು ಅನುಗ್ರಹಿಸುವುದರಿಂದ ಜ್ಞಾನಗುರುವೆಂದು ಕರೆಯಲ್ಪಡುತ್ತಾನೆ. ಈ ಪ್ರಕಾರ ಸನಾತನವಾದ ಈ ವೀರಶೈವ ಸಿದ್ಧಾಂತದಲ್ಲಿ ಕುಲಗುರು ಪರಂಪರೆಯು ಅನಾದಿಕಾಲದಿಂದ ಇಲ್ಲಿಯವರೆಗೂ ಮುಂದುವರಿಯುತ್ತಿದೆ.

ಸುಶಿಷ್ಯಲಕ್ಷಣ ಮತ್ತು ಸದ್ಗುರು ಕೃಪೆ

"ಕಿಂ ವಾ ಶಿಷ್ಯಸ್ಯ ಲಕ್ಷಣಮ್"[೪೦] (ಶಿಷ್ಯನ ಲಕ್ಷಣವೇನು?) ಎಂಬ ಪಾರ್ವತಿಯ ಪ್ರಶ್ನೆಗೆ ಶಿವನು-

> ಅಥ ಶಿಷ್ಯಸ್ವರೂಪಂ ಚ ವಕ್ಷ್ಯೇ ಸಂಕ್ಷೇಪತಃ ಶೃಣು।
> ಶುಚಿಃ ಸುಶೀಲೋ ಧರ್ಮಿಷ್ಠಃ ಸತ್ಯವಾಗ್ವಿಜಿತೇಂದ್ರಿಯಃ॥
> ಅಹಂಕಾರವಿನಿರ್ಮುಕ್ತೋ ರಾಗದ್ವೇಷಾದಿವರ್ಜಿತಃ।
> ಗುರುಭಕ್ತೋ ಜಿತಕ್ರೋಧೋ ಗುರ್ವಾಜ್ಞಾಪರಿಪಾಲಕಃ॥
> ವಿಷಯಾಸಂಗನಿರ್ಮುಕ್ತೋ ವಿನಿರ್ಜಿತಮದಾಷ್ಟಕಃ।
> ಕಾ ವಾ ಗತಿರ್ಮಮೇತ್ಯೇವಂ ಧ್ಯಾಯಮಾನೋ ದಿವಾನಿಶಮ್॥
> ಏವಂ ಗುಣಾನ್ವಿತಂ ಶಿಷ್ಯಂ ಪರೀಕ್ಷ್ಯ ಗುರುರಾದರಾತ್।
> ಶಿಕ್ಷಯೇತ್ತಸ್ಯ ವೈ ಚಿತ್ತಂ ಯಥಾ ಭವತಿ ನಿರ್ಮಲಮ್॥[೪೧]

"ಶಿಷ್ಯನ ಸ್ವರೂಪವನ್ನು ಸಂಕ್ಷೇಪವಾಗಿ ಹೇಳುತ್ತೇನೆ. ಸಾವಧಾನದಿಂದ ಕೇಳು. ಶಿಷ್ಯನು ದೈಹಿಕವಾಗಿ ಮತ್ತು ಮಾನಸಿಕವಾಗಿ ಶುಚಿಯಾಗಿಯೂ, ಸಚ್ಚಾರಿತ್ರ್ಯನೂ, ಧರ್ಮಿಷ್ಠನೂ, ಸತ್ಯವಾದಿಯೂ, ಜಿತೇಂದ್ರಿಯನೂ, ಅಹಂಕಾರರಹಿತನೂ, ರಾಗ-ದ್ವೇಷಾದಿಗಳಿಂದ ಮುಕ್ತನೂ, ಗುರುಭಕ್ತನೂ, ಕ್ರೋಧರಹಿತನೂ, ಗುರುವಿನ ಆಜ್ಞೆಯನ್ನು ಪಾಲಿಸುವವನೂ, ವಿಷಯಾಸಕ್ತಿಗಳಿಂದ ಮುಕ್ತನೂ, ಅಣಿಮಾದಿ ಅಷ್ಟಮದಗಳನ್ನು ಬಿಟ್ಟವನೂ, ನನಗೆ ಯಾವ ಗತಿಯುಂಟಾಗುತ್ತದೆ? ಎಂದು ಹಗಲು-ರಾತ್ರಿ ಯೋಚಿಸುವವನೂ -ಇಂತಹ ಸದ್ಗುಣಗಳಿಂದ ಕೂಡಿದ ಶಿಷ್ಯನನ್ನು ಗುರುವು ಎಚ್ಚರಿಕೆಯಿಂದ ಪರೀಕ್ಷಿಸಿ, ಪರಿಶುದ್ಧವಾದ ಮನಸ್ಸಿನಿಂದ ಗುರುವು ಆತನ ಮನಸ್ಸು ನಿರ್ಮಲವಾಗುವಂತಹ ಶಿಕ್ಷಣವನ್ನು ನೀಡಬೇಕು." -ಈ ವಿಧವಾಗಿ ಸುಶಿಷ್ಯನ ಲಕ್ಷಣವನ್ನು ಉಪದೇಶಿಸಿದ್ದಾನೆ. ಸಿದ್ಧಾಂತ ಶಿಖಾಮಣಿಯಲ್ಲಿ ಶ್ರೀ ರೇಣುಕ ಭಗವತ್ಪಾದರು- ವಿವೇಕಸಂಪನ್ನತೆ, ವಿರಾಗಿ, ಪರಿಶುದ್ಧ ಮನಸ್ಸು ಮತ್ತು ಜಿಜ್ಞಾಸೆ

---

[೪೦] ಸೂ.ಆ, ಕ್ರಿ.ಪಾ, ೫.೨

[೪೧] ಸೂ.ಆ, ಕ್ರಿ.ಪಾ, ೫.೩೧-೩೩

ಇವುಗಳು ಸುಶಿಷ್ಯನ ಲಕ್ಷಣಗಳೆಂದು ನಿರೂಪಿಸಿದ್ದಾರೆ. ಈ ಲಕ್ಷಣಗಳ ಅವಲೋಕನೆಯಿಂದ ವಿವೇಕಾದಿ ಸಾಧನಚತುಷ್ಟಯಸಂಪನ್ನನಾದವನು ಮಾತ್ರ ಸುಶಿಷ್ಯನೆಂದು ನಿಶ್ಚಯವಾಗುತ್ತದೆ.

ಅದ್ವೈತ ವೇದಾಂತದಲ್ಲಿ- "ಅಥಾಽತೋ ಬ್ರಹ್ಮಜಿಜ್ಞಾಸಾ"[೪೨] ಎಂಬ ಶಾರೀರಿಕ ಸೂತ್ರದ ವ್ಯಾಖ್ಯಾನದ ಸಂದರ್ಭದಲ್ಲಿ 'ಅಥ' ಎಂದರೆ 'ಆನಂತರ್ಯ' ಎಂದು ಅರ್ಥೈಸಿ, ಯಾವುದರ ಅನಂತರ? ಎಂಬ ಜಿಜ್ಞಾಸೆಗೆ ವಿವೇಕ, ವೈರಾಗ್ಯ, ಶಮಾದಿಷಟ್ಕಸಂಪತ್ತಿ, ಮೋಕ್ಷವೆಂಬ ಸಾಧನಚತುಷ್ಟಯದ ಅನಂತರ ಎಂದು ಪ್ರತಿಪಾದಿಸಲಾಗಿದೆ. ಆದುದರಿಂದಲೇ ಅಲ್ಲಿ ಈ ಸಾಧನದ ಜೊತೆಯಲ್ಲಿಯೇ ಶಿಷ್ಯನು ಬ್ರಹ್ಮಜ್ಞಾನದ ಅಧಿಕಾರಿಯಾಗುತ್ತಾನೆಂದು ನಿರೂಪಿಸಲಾಗಿದೆ.

ವೀರಶೈವ ಸಿದ್ಧಾಂತದಲ್ಲಿ ಜೀವನು ಆಣವಾದಿ ಮಲತ್ರಯಗಳಿಂದ ಆವೃತನು ಎಂದು ಒಪ್ಪಿರುವುದರಿಂದ ಮತ್ತು ಮಲಗಳ ಅಜ್ಞಾನರೂಪದ ಅಭಾವದಿಂದ ಅವುಗಳು ಕೇವಲ ಉಪದೇಶದಿಂದ ನಿವೃತ್ತಿಯಾಗುವುದಿಲ್ಲ. ದ್ರವ್ಯರೂಪದಲ್ಲಿರುವ ಮಲಗಳ ನಿವೃತ್ತಿಯು, ದೃಷ್ಟಿಶಕ್ತಿಯನ್ನು ಆವರಿಸಿರುವ ನೇತ್ರದಲ್ಲಿರುವ ದ್ರವ್ಯರೂಪದ ವಸ್ತುವು ಶಸ್ತ್ರಚಿಕಿತ್ಸೆಯಿಂದ ನಿವೃತ್ತಿಯಾಗುವಂತೆ ತ್ರಿವಿಧ ದೀಕ್ಷಾರೂಪದಿಂದುಂಟಾಗುವ ಸಂಸ್ಕಾರ ವಿಶೇಷದಿಂದಲೇ ನಾಶವಾಗುತ್ತವೆ.[೪೩] ಆದುದರಿಂದ ಈ ಸಿದ್ಧಾಂತದಲ್ಲಿ ಸಾಧನ ಸಂಪತ್ತಿಯ ನಂತರ ದೀಕ್ಷಾಧಿಕಾರಿಯಾಗುತ್ತಾನೆ ಮತ್ತು ದೀಕ್ಷೆಯ ನಂತರ ಬ್ರಹ್ಮಜ್ಞಾನಕ್ಕೆ ಅಧಿಕಾರಿಯಾಗುತ್ತಾನೆಂದು ಅಂಗೀಕರಿಸಲಾಗಿದೆ. ಬ್ರಹ್ಮಸೂತ್ರದ 'ಅಥ' ಶಬ್ದವನ್ನು ಶ್ರೀಪತಿ ಪಂಡಿತರು ಹೀಗೆ ನಿರೂಪಿಸಿದ್ದಾರೆ- "ಮಂಗಲದ ಜಿಜ್ಞಾಸೆಯ ಕಾರಣ ಅನ್ವಯದ ಅಭಾವದಿಂದ ಮಂಗಲಾರ್ಥ ಬರುವುದಿಲ್ಲ, ದೀಕ್ಷಿತನಾಗದವನು ಮಲತ್ರಯಗಳನ್ನು ನಾಶಪಡಿಸಲಾಗದ ಕಾರಣ ಸಾಧನಚತುಷ್ಟಯಗಳ ನಂತರ ಎಂದಾಗುವುದಿಲ್ಲ, ವೇದಾಗಮ-ಉಭಯ ವೇದಾಂತಗಳಲ್ಲಿ ಪ್ರತಿಪಾದಿತವಾದ ಭಕ್ತಿ, ಕ್ರಿಯೆ, ಜ್ಞಾನಕಾಂಡಗಳಲ್ಲಿ ವಿಹಿತವಾದ ಸ್ಥೂಲ-ಸೂಕ್ಷ್ಮ, ಚಿತ್-ಅಚಿತ್ ಪ್ರಪಂಚವನ್ನು ಬೆಳಗುವ ಷಟ್‌ಸ್ಥಲರೂಪಿ ಪರಶಿವನ ಸಾಕ್ಷಾತ್ಕಾರಕ್ಕೆ ಕಾರಣವಾದ, ಅನೇಕ ಜನ್ಮಗಳಲ್ಲಿ ಶಿವಾರ್ಪಿತವಾದ ಯಜನ-ಯಾಜನ, ತಪಸ್ಸು-ಧ್ಯಾನಾದಿ ಅನೇಕ ಪುಣ್ಯಗಳ ಪರಿಣಾಮದಿಂದುಂಟಾದ ಅಪೂರ್ವ ಫಲಸ್ವರೂಪಿ ಸ್ಥೂಲ, ಸೂಕ್ಷ್ಮ, ಕಾರಣವೆಂಬ ಶರೀರತ್ರಯಗಳಲ್ಲಿರುವ ಆಣವ-ಮಾಯಾ ಮತ್ತು ಕಾರ್ಮಿಕವೆಂಬ ಮಲತ್ರಯಗಳನ್ನು ನಾಶಪಡಿಸುವ, ಕಾರುಣ್ಯ, ಕಲ್ಯಾಣ, ಕೈವಲ್ಯಗಳೆಂಬ ಐಶ್ವರ್ಯತ್ರಯಗಳನ್ನು ಅನುಗ್ರಹಿಸುವ ಅಷ್ಟಾವರಣ, ಪಂಚಾಚಾರ, ಸದ್ಗುರು ಕರುಣಾಕಟಾಕ್ಷದಿಂದುಂಟಾಗುವ

---

[೪೨] ಬ್ರಹ್ಮಸೂತ್ರ, ೧-೧-೧

[೪೩] "ಮಲಸ್ಯ ದ್ರವ್ಯತ್ವಾಚ್ಚಾಕ್ಷುಷಪಟಲಾದೇರಿವ ನ ಜ್ಞಾನಮಾತ್ರಾನ್ನಿವೃತ್ತಿಃ ಸಂಭವತಿ, ಅಪಿ ತು ಚಕ್ಷುರ್ವೈದ್ಯವ್ಯಾಪಾರೇಣೇವ ದೀಕ್ಷಾಖ್ಯೇನೇಶ್ವರವ್ಯಾಪಾರೇಣೈವ" (ತತ್ತ್ವಸಂಗ್ರಹ ಟೀಕಾ, ಪು. ೨೮) ಇತ್ಯಘೋರಶಿವಾಚಾರ್ಯೇಣಾಪ್ಯುಕ್ತಮ್।

ಶಕ್ತಿಪಾತಾದಿಗಳಿಂದ ಕೂಡಿಕೊಂಡಿರುವ ಪರಶಿವನ ಇಷ್ಟಲಿಂಗಧಾರಣಾತ್ಮಕ ಪಾಶುಪತ ದೀಕ್ಷಾನಂತರ" ಎಂದು 'ಅಥ' ಶಬ್ದದ ಅರ್ಥವನ್ನು ನಿರ್ಣಯಿಸಿದ್ದಾರೆ."[೪೪] ಆದುದರಿಂದ ವೀರಶೈವ ಸಿದ್ಧಾಂತದಲ್ಲಿ ದೀಕ್ಷಾಸಂಸ್ಕಾರವಿಲ್ಲದೆ ಯಾವೊಬ್ಬನೂ ಮೋಕ್ಷಕ್ಕೆ ಅಧಿಕಾರಿಯಾಗಲಾರನು. ಆ ದೀಕ್ಷಾಸಂಸ್ಕಾರವೇ ಇಲ್ಲಿ ಗುರುಕಾರುಣ್ಯವೆಂದು ಕರೆಯಲ್ಪಟ್ಟಿವೆ.

"ಅಷ್ಟವರ್ಷಂ ಬ್ರಾಹ್ಮಣಮುಪನೀಯತ ತಮಧ್ಯಾಪಯೀತ" (ಎಂಟು ವರ್ಷದ ಬ್ರಾಹ್ಮಣನಿಗೆ ಉಪನಯನ ಸಂಸ್ಕಾರ ಮಾಡಿ ಅವನನ್ನು ವೇದಾಧ್ಯಯನ ನಿರತನನ್ನಾಗಿ ಮಾಡಬೇಕು) ಎಂಬ ವಿಧಿವಾಕ್ಯಾನುಸಾರ ವೀರಶೈವ ಧರ್ಮದಲ್ಲಿಯೂ ಸಹ ಎಂಟನೇ ವರ್ಷಕ್ಕೆ ದೀಕ್ಷಾಸಂಸ್ಕಾರವು ನೆರವೇರುತ್ತದೆ. ಆ ಸಂದರ್ಭದಲ್ಲಿ ವೀರಶೈವ ಗುರುವರ್ಗ ಮಠಗಳಲ್ಲಿ ಪಟ್ಟಾಭಿಷಿಕ್ತರಾಗಿರುವ ಶಿವಾಚಾರ್ಯರು ದೀಕ್ಷಿತರಾಗುವ ಸ್ವಗೋತ್ರ ಶಿಷ್ಯರಿಗೆ ಉಪಾಸನೆ ಮಾಡಲು ಇಷ್ಟಲಿಂಗವನ್ನು, ಜಪ ಮಾಡಲು ಪಂಚಾಕ್ಷರ ಮಹಾಮಂತ್ರವನ್ನು ಅನುಗ್ರಹಿಸುತ್ತಾರೆ. ಈ ಸಂಸ್ಕಾರವು ಪುರುಷರಿಗೆ ಮಾತ್ರ ಸೀಮಿತವಾಗಿರದೆ ಸ್ತ್ರೀಯರಿಗೂ ನಡೆಯುತ್ತದೆ. ಇದು ವೀರಶೈವ ಧರ್ಮದ ವೈಶಿಷ್ಟ್ಯ.

ತ್ರಿಪುಂಡ್ರಂ ಚೈವ ರುದ್ರಾಕ್ಷಂ ನಿತ್ಯಾರ್ಚನಜಪಂ ತಥಾ।
ಹೋಮಧ್ಯಾನಾದಿಕಂ ಸರ್ವಂ ದೀಕ್ಷಾಹೀನಸ್ಯ ನಿಷ್ಫಲಮ್॥
ಯಥಾ ಮೃಗಪತಿಂ ದೃಷ್ಟ್ವಾ ಭೀತೋ ಯಾತಿ ವನೇ ಗಜಃ।
ಅದೀಕ್ಷಿತೋಽರ್ಚಯೇಲ್ಲಿಂಗಂ ತಥೈವಾಹಂ ಮಹೇಶ್ವರಿ॥

"ತ್ರಿಪುಂಡ್ರಧಾರಣೆ, ರುದ್ರಾಕ್ಷಧಾರಣೆ, ನಿತ್ಯಾರ್ಚನೆ, ಜಪ, ಹೋಮ, ಧ್ಯಾನಾದಿಗಳೆಲ್ಲವೂ ದೀಕ್ಷಾಸಂಸ್ಕಾರವಿಲ್ಲದವನಿಗೆ ನಿಷ್ಫಲವನ್ನುಂಟುಮಾಡುತ್ತವೆ. ಕಾಡಿನಲ್ಲಿ ಸಿಂಹವನ್ನು ನೋಡಿದ ಗಜರಾಜನು ಹೇಗೆ ಹೆದರಿ ಓಡುತ್ತಾನೆಯೋ, ಹಾಗೆಯೇ ಅದೀಕ್ಷಿತನು ಇಷ್ಟಲಿಂಗವನ್ನು ಪೂಜಿಸಿದರೆ ನಾನೂ ಓಡಿಹೋಗುತ್ತೇನೆ" ಎಂದು ದೀಕ್ಷಾಬೋಧೆಯಲ್ಲಿ ದೀಕ್ಷಾಸಂಸ್ಕಾರವಿಲ್ಲದ ವ್ಯಕ್ತಿಯ ಎಲ್ಲ ಧಾರ್ಮಿಕ ಕ್ರಿಯೆಗಳು ನಿಷ್ಫಲವಾಗುತ್ತವೆ. ಶಿವನೂ ಸಹ ಅಂತಹ ವ್ಯಕ್ತಿಯ ಪೂಜೆಯನ್ನು ಒಪ್ಪಿಕೊಳ್ಳುವುದಿಲ್ಲವೆಂದು ಪ್ರತಿಪಾದಿಸಿ, ಶಿವದೀಕ್ಷೆಯ ಮಹಿಮೆಯನ್ನು ನಿರೂಪಿಸಲಾಗಿದೆ. ಸಾಧನಮಾರ್ಗದಲ್ಲಿ ಪ್ರವೃತ್ತರಾಗುವ ವೀರಶೈವರಿಗೆ ದೀಕ್ಷಾಸಂಸ್ಕಾರವು ಅನಿವಾರ್ಯವೆಂದು ಸ್ಪಷ್ಟವಾಗುತ್ತದೆ.

ಗುರುಸೇವೆ ಮತ್ತು ಗುರುಕಾರುಣ್ಯಪ್ರಾಪ್ತಿ

ಯಂ ಯಂ ಲೋಕಂ ಮನಸಾ ಸಂವಿಭಾತಿ
ವಿಶುದ್ಧಸತ್ತ್ವಃ ಕಾಮಯತೇ ಯಾಂಶ್ಚ ಕಾಮಾನ್।
ತ್ತಂ ತಂ ಲೋಕಂ ಜಯತೇ ತಾಂಶ್ಚ ಕಾಮಾನ್
ತಸ್ಮಾದಾತ್ಮಜ್ಞಂ ಹ್ಯರ್ಚಯೇದ್ ಭೂತಿಕಾಮಃ॥[೪೫]

---

[೪೪] ಬ್ರಹ್ಮಸೂತ್ರ ಶ್ರೀಕರಭಾಷ್ಯ, ೧-೧-೧, ಪು. ೧೦,೩೩

[೪೫] ಮುಂಡ, ೩-೧-೧೦

“ವಿಶುದ್ಧಸತ್ತ್ವನು ಯಾವ ಯಾವ ಲೋಕವನ್ನು ಮನಸ್ಸಿನಿಂದ ಸಂಕಲ್ಪಿಸುವನೋ ಮತ್ತು ಯಾವ ಕಾಮಗಳನ್ನು ಬಯಸುವನೋ ಆಯಾ ಲೋಕವನ್ನೂ, ಆ ಕಾಮಗಳನ್ನೂ ಪಡೆಯುತ್ತಾನೆ. ಆದುದರಿಂದ ವಿಭೂತಿಯನ್ನು ಬಯಸುವವನು ಆತ್ಮಜ್ಞನನ್ನು ಪೂಜಿಸಬೇಕು” ಎಂದು ಶ್ರುತಿಯಲ್ಲಿ ಅಭ್ಯುದಯ-ಆನಂದಗಳನ್ನು ಬಯಸುವವರು ಗುರುಸೇವೆ ಮಾಡಬೇಕೆಂದು ಉಪದೇಶಿಸಲ್ಪಟ್ಟಿದೆ.

ಸೇವೇತ ಪರಮಾಚಾರ್ಯಂ ಶಿಷ್ಯೋ ಭಕ್ತಿಭಯಾನ್ವಿತಃ।
ಷಣ್ಮಾಸಾನ್ ವತ್ಸರಂ ವಾಪಿ ಯಾವದೇಷ ಪ್ರಸೀದತಿ॥[೪೬]

“ಭಯ ಭಕ್ತಿಗಳಿಂದ ಕೂಡಿದ ಶಿಷ್ಯನು ಆರು ತಿಂಗಳು, ಒಂದು ವರ್ಷ ಅಥವಾ ಗುರುವು ಪ್ರಸನ್ನನಾಗುವವರೆಗೆ ಗುರುವರ್ಯನ ಸೇವೆಯನ್ನು ಮಾಡಬೇಕು” -ಎಂದು ಶ್ರೀ ರೇಣುಕ ಭಗವತ್ಪಾದರೂ ಸಹ ಗುರುಕಾರುಣ್ಯಪ್ರಾಪ್ತಿಗಾಗಿ ಸೇವೆಯೇ ಬಹುಮುಖ್ಯವೆಂದು ಹೇಳಿ, ಗುರುವು ತೃಪ್ತನಾಗುವವರೆಗೆ ಸೇವೆಮಾಡುವುದು ಶಿಷ್ಯನ ಕರ್ತವ್ಯವೆಂದು ಉಪದೇಶಿಸಿದ್ದಾರೆ. ಗುರುವಿನ ಸಂತೋಷಕ್ಕಾಗಿ ಧನಾದಿಗಳಿಗಿಂತಲೂ ಸೇವೆಯೇ ಪರಮೋತ್ಕೃಷ್ಟ ಸಾಧನ. ಆದುದರಿಂದಲೇ-

ಗುರುಶುಶ್ರೂಷಯಾ ವಿದ್ಯಾ ಪುಷ್ಕಲೇನ ಧನೇನ ವಾ।
ಅಥವಾ ವಿದ್ಯಯಾ ವಿದ್ಯಾ ಚತುರ್ಥಂ ನಾಸ್ತಿ ಸಾಧನಮ್॥

“ಗುರು ಸೇವೆಯಿಂದ, ಹೇರಳವಾದ ಧನದಿಂದ ಅಥವಾ ವಿದ್ಯೆಯಿಂದ ವಿದ್ಯೆ ಕಲಿಯಬೇಕು, ನಾಲ್ಕನೆಯ ಸಾಧನವೆಂಬುದಿಲ್ಲ” -ಎಂಬ ಸುಭಾಷಿತದಲ್ಲಿ ಗುರುವಿನ ಅನುಗ್ರಹವನ್ನುಂಟುಮಾಡುವ ಸಾಧನತ್ರಯಗಳಲ್ಲಿ ಗುರುಸೇವೆಯೇ ಮೊದಲಿಗೆ ಸೂಚಿತವಾಗಿದೆ. ಭಗವಾನ್ ಶ್ರೀಕೃಷ್ಣನೂ ಸಹ-

ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ।
ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ॥[೪೭]

“ದೀರ್ಘದಂಡ ನಮಸ್ಕಾರದಿಂದಲೂ, ಬಹುವಿಧವಾದ ಪ್ರಶ್ನೆಗಳಿಂದಲೂ, ಗುರುಸೇವೆಯಿಂದಲೂ ಅದನ್ನು (ಬ್ರಹ್ಮಜ್ಞಾನವನ್ನು) ತಿಳಿದುಕೊ. ತತ್ತ್ವವನ್ನು ಅರಿತ ಜ್ಞಾನಿಗಳು ನಿನಗೆ ಜ್ಞಾನವನ್ನು ಉಪದೇಶ ಮಾಡುವರು” -ಎಂದು ತತ್ತ್ವಜ್ಞಾನ ಪ್ರಾಪ್ತಿಗಾಗಿ ದೀರ್ಘದಂಡ ನಮಸ್ಕಾರ ಮತ್ತು ಗುರುಸೇವೆಯು ಆವಶ್ಯಕವೆಂದು ಹೇಳಲಾಯಿತು. ದೀಕ್ಷಾರೂಪ ಅನುಗ್ರಹದ ಪ್ರಾಪ್ತಿಗಾಗಿ ತ್ರಿಕರಣಪೂರ್ವಕ[೪೮] ಗುರುಸೇವೆ ಮಾಡಬೇಕೆಂದು ಮೇಲಿನ ಉಲ್ಲೇಖಗಳಿಂದ ತಿಳಿದುಬರುತ್ತದೆ.

---

[೪೬] ಸಿ.ಶಿ, ೬.೭

[೪೭] ಭಗವದ್ಗೀತಾ, ೪.೩೪

[೪೮] ಕಾಯೇನ ವಾಚಾ ಮನಸಾ ಚ ಕ್ರಿಯಮಾಣಾ ಸೇವಾ ತ್ರಿಕರಣಸೇವಾ।

ಗುರುಸೇವೆಯು ಆಪ್ತ, ಅಂಗ, ಸ್ಥಾನ ಮತ್ತು ಸದ್ಭಾವ -ಎಂದು ನಾಲ್ಕು ವಿಧವಾಗಿದೆ. 'ಆಪ್ತ' ಎಂದರೆ ಸ್ವಜನರು (ಬಂಧುಗಳು). ಸ್ವಜನರ ಆಗಮನದಿಂದ ಮನಸ್ಸಿಗೆ ಸಂತೋಷವಾಗುತ್ತದೆ ಹಾಗೂ ಆಗಮಿಸಿದ ಅತಿಥಿಯ ಸೇವೆಯನ್ನು ಪ್ರೀತಿಯಿಂದ ಮಾಡುವುದು ಹೇಗೆ ಲೋಕದಲ್ಲಿ ವಿಹಿತವಾಗಿದೆಯೋ ಹಾಗೆಯೇ ಸದ್ಗುರುವಿನ ಆಗಮನದಿಂದ ಸಂತೋಷಗೊಂಡು ಸ್ವಜನರ ಸೇವೆಯನ್ನು ಪ್ರೀತಿಯಿಂದ ಮಾಡುವಂತೆ ಮಾಡುವ ಗುರುಶುಶ್ರೂಷೆಯು ಆಪ್ತಸೇವೆ ಎಂದು ಕರೆಯಲ್ಪಟ್ಟಿದೆ.

ಕೈ, ಕಾಲು ಮೊದಲಾದ ಅವಯವಗಳನ್ನು ಅಂಗಗಳೆಂದು ಕರೆಯುತ್ತೇವೆ. ಮಾನವನು ತನ್ನ ಶರೀರ ಮತ್ತು ಆ ಶರೀರದಲ್ಲಿರುವ ಅವಯವಗಳ ವಿಷಯದಲ್ಲಿ ಹೇಗೆ ಪ್ರೀತಿಯಿಂದಿರುತ್ತಾನೋ ಹಾಗೆಯೇ ಗುರುವಿನ ಪಾದಾದಿ ಅವಯವಗಳ ವಿಷಯದಲ್ಲಿ ಪ್ರೀತಿಯಿಂದಿದ್ದು ಪಾದ ತೊಳೆಯುವುದು, ಸ್ನಾನ ಮಾಡಿಸುವುದು, ರೋಗ-ರುಜಿನಗಳ ಸಂದರ್ಭಗಳಲ್ಲಿ ಅಂಗಸಂವಾಹನೆ (ಶರೀರವನ್ನು ಒತ್ತುವುದು) ಇತ್ಯಾದಿಯಾಗಿ ಮಾಡುವ ಸೇವೆಯು ಅಂಗಸೇವೆ ಎಂದು ಕರೆಯಲ್ಪಟ್ಟಿದೆ. "ಪಾದಾದಿಕೇಶಪರ್ಯಂತಂ ಲಿಂಗಾನ್ಯಂಗಾನಿ ಸದ್ಗುರೋಃ"[೪೯] (ಪಾದದಿಂದ ಕೇಶದವರೆಗಿನ ಸದ್ಗುರುವಿನ ಎಲ್ಲ ಅಂಗಗಳು ಶಿವಲಿಂಗಗಳು) ಎಂಬ ಉಕ್ತಿಯ ಅನುಸಾರ ತತ್ತ್ವಜ್ಞನೂ, ಸದಾಚಾರ ಶೀಲನೂ ಮತ್ತು ಕರುಣಾಮಯಿಯೂ ಆದ ಸದ್ಗುರುವಿನ ಪ್ರತಿಯೊಂದು ಅಂಗವೂ ಪವಿತ್ರವಾದ ಶಿವಲಿಂಗದಂತೆ ಪೂಜನೀಯ. ಆದುದರಿಂದ ವೀರಶೈವ ಸಿದ್ಧಾಂತದಲ್ಲಿ ಗುರುವನ್ನು 'ಗುರುಲಿಂಗ'ವೆಂದು ಕರೆಯಲಾಗಿದೆ.

ತಸ್ಮಾದ್ ಗುರುಶರೀರಂ ತು ಗುರುಲಿಂಗಂ ಭವೇದ್ ಬುಧಾಃ।
ಗುರುಲಿಂಗಸ್ಯ ಪೂಜಾ ತು ಗುರುಶುಶ್ರೂಷಣಂ ಭವೇತ್॥[೫೦]

"ಆದುದರಿಂದ ಗುರುವಿನ ಶರೀರವನ್ನು ಜ್ಞಾನಿಗಳು ಗುರುಲಿಂಗವೆಂದು ತಿಳಿದಿದ್ದಾರೆ. ಗುರುಸೇವೆಯೇ ಗುರುಲಿಂಗದ ಪೂಜೆಯಾಗುತ್ತದೆ."

ಆದುದರಿಂದ ಲೋಕದಲ್ಲಿ ಹೇಗೆ ಉಪಚಾರಗಳಿಂದ ಶಿವಲಿಂಗದ ಪೂಜೆಯು ನಡೆಯುತ್ತದೆಯೋ ಹಾಗೆಯೇ ಶಿವಲಿಂಗದಂತೆ ಪೂಜನೀಯನಾದ ಗುರುಲಿಂಗ ಎಂಬ ಅಭಿಧಾನವುಳ್ಳ ಸದ್ಗುರುವಿನ ಅಂಗದ ಸೇವೆಯೇ ಅವನ ಸೇವೆಯೆಂದು ತಿಳಿದು ಮೋಕ್ಷಾಕಾಂಕ್ಷಿಗಳೆಲ್ಲರೂ ಗುರುವಿನ ಅಂಗಸೇವೆಯನ್ನು ಮಾಡಬೇಕು. ಹೀಗೆ ಗುರುವಿನ ಅಂಗಸ್ಪರ್ಶದಿಂದ ಮತ್ತು ಪಾದಾಮೃತಪಾನದಿಂದ ಎಲ್ಲ ಬಗೆಯ ಅನಿಷ್ಟಗಳು ನಾಶವಾಗಿ ಶಿಷ್ಯನು ಪರಿಶುದ್ಧನಾಗುತ್ತಾನೆ. ಇದನ್ನು ಚಂದ್ರಜ್ಞಾನಾಗಮದಲ್ಲಿ ಹೀಗೆ ನಿರೂಪಿಸಲಾಗಿದೆ-

---

[೪೯] ಕ್ರಿ.ಸಾ, ಭಾಗ-೩, ಪು. ೨೨

[೫೦] ಕ್ರಿ.ಸಾ, ಭಾಗ-೩, ಪು. ೨೨

ಯಥೈವ ವಹ್ನಿಸಂಪರ್ಕಾನ್ಮಲಂ ತ್ಯಜತಿ ಕಾಂಚನಮ್।
ತಥೈವ ಗುರುಸಂಪರ್ಕಾತ್ ಪಾಪಂ ತ್ಯಜತಿ ಮಾನವಃ।
ಸ್ವಾಚಾರ್ಯಚರಣದ್ವಂದ್ವಪ್ರಕ್ಷಾಲಿತಜಲಂ ಸದಾ।
ಯಃ ಪಿಬೇದ್ಧಾರಯೇದ್ಭಕ್ತ್ಯಾ ಸರ್ವಪಾಪೈಃ ಪ್ರಮುಚ್ಯತೇ॥[೫೧]

"ಚಿನ್ನವು ಬೆಂಕಿಯ ಸಂಪರ್ಕದಿಂದ ಹೇಗೆ ತನ್ನಲ್ಲಿರುವ ಕೊಳೆಯನ್ನು ತ್ಯಜಿಸುತ್ತದೆಯೋ ಹಾಗೆಯೇ ಗುರುಸಂಪರ್ಕದಿಂದ ಮಾನವನು ಪಾಪವಿಮುಕ್ತನಾಗುತ್ತಾನೆ. ಯಾರು ಗುರುವಿನ ಪಾದೋದಕವನ್ನು ಯಾವಾಗಲೂ ಸ್ವೀಕರಿಸುತ್ತಾನೆಯೋ ಹಾಗೂ ಭಕ್ತಿಯಿಂದ ಧರಿಸುತ್ತಾನೆಯೋ ಅಂಥವನು ಎಲ್ಲ ಪಾಪಗಳಿಂದಲೂ ಮುಕ್ತನಾಗುತ್ತಾನೆ."

ಈ ರೀತಿಯಾಗಿ ಅಂಗಸೇವೆಯಲ್ಲಿ ನಿರತನಾದ ಶಿಷ್ಯನು ಗುರುವಿನೊಂದಿಗೆ ಪ್ರಿಯವೂ-ಮಧುರವೂ ಆದ ಮಾತುಗಳನ್ನಾಡುತ್ತಾ ಪ್ರತಿದಿನವೂ ದೀರ್ಘದಂಡ ನಮಸ್ಕಾರವನ್ನು ಮಾಡಬೇಕು. ಕಾರಣವೇನೆಂದರೆ, ಗುರುವಿನ ಉಪಚಾರದಲ್ಲಿ ಪ್ರಿಯವಾದ ಮಾತು ಮತ್ತು ಪ್ರಣಾಮಗಳಿಗೆ ಪ್ರಾಮುಖ್ಯವಿದೆ. ಗುರು ನಮಸ್ಕಾರದ ಪ್ರಕಾರಗಳು ಆಗಮದಲ್ಲಿ ಹೀಗೆ ವರ್ಣಿತವಾಗಿವೆ-

ಶ್ರೀಮಾನಪಿ ತಪಸ್ವೀ ಚ ಶಾಸ್ತ್ರಜ್ಞಃ ಕುಲಶೀಲವಾನ್।
ಕುರ್ಯಾದ್ದಂಡನಮಸ್ಕಾರಂ ನಿರ್ಲಜ್ಜೋ ಗುರುಸನ್ನಿಧೌ॥[೫೨]

"(ಶಿಷ್ಯನು) ಸದ್ಗುಣಿಯೂ, ತಪಸ್ವಿಯೂ, ಶಾಸ್ತ್ರಜ್ಞನೂ ಹಾಗೂ ಸತ್ಕುಲ ಪ್ರಸೂತನಾಗಿದ್ದರೂ ಸಹ ಗುರುಸಾನ್ನಿಧ್ಯದಲ್ಲಿ ನಿರ್ಲಜ್ಜೆಯಿಂದ ದೀರ್ಘದಂಡ ನಮಸ್ಕಾರ ಮಾಡಬೇಕು."

ಹೀಗೆ ನಮಸ್ಕಾರವನ್ನು ಮಾಡಿ ಪ್ರಸನ್ನ ಮನಸ್ಸಿನಿಂದ ಕೂಡಿದ ಶಿಷ್ಯನು ಗುರುವಿನ ಪ್ರದಕ್ಷಿಣೆಯನ್ನೂ ಸಹ ಮಾಡಬೇಕು. ಈ ಬಗೆಯ ನಮಸ್ಕಾರ ಹಾಗೂ ಸದ್ಗುರುವಿನ ಅಂಗಸೇವೆಯಿಂದ ಶಿಷ್ಯನ ಆಯುಸ್ಸು, ಜ್ಞಾನ, ಯಶಸ್ಸು, ಶಕ್ತಿ -ಇವುಗಳ ವೃದ್ಧಿಯಾಗುತ್ತದೆ. ಅದನ್ನು ಮನುಸ್ಮೃತಿಯು ಹೀಗೆ ನಿರೂಪಿಸಿದೆ-

ಅಭಿವಾದನಶೀಲಸ್ಯ ನಿತ್ಯಂ ವೃದ್ಧೋಪಸೇವಿನಃ।
ಚತ್ವಾರಿ ತಸ್ಯ ವರ್ಧಂತೇ ಆಯುರ್ವಿದ್ಯಾ ಯಶೋಬಲಮ್॥[೫೩]

"ಪ್ರತಿದಿನವೂ ವೃದ್ಧರ ಸೇವೆಯನ್ನು ಮಾಡುವ ಅಭಿವಾದನಶೀಲನ ಆಯುಸ್ಸು, ವಿದ್ಯೆ, ಯಶಸ್ಸು ಮತ್ತು ಬಲ -ಈ ನಾಲ್ಕು ವೃದ್ಧಿಸುತ್ತವೆ."

ಈ ಬಗೆಯ ಸದ್ಗುರುವಿನ ಅಂಗಸೇವೆಯು ಶಿಷ್ಯನಿಗೆ ಎಲ್ಲ ವಿಧದ ಮಂಗಲ ಪರಂಪರೆಯನ್ನುಂಟುಮಾಡುತ್ತದೆಂದು ನಿಶ್ಚಯವಾಗುತ್ತದೆ.

---

೫೧. ಚ.ಜ್ಞಾ, ಕ್ರಿ.ಪಾ, ೨.೧೪,೨೨

೫೨. ಚ.ಜ್ಞಾ, ಕ್ರಿ.ಪಾ, ೨.೩೩

೫೩. ಮನುಸ್ಮೃತಿ, ೨.೧೨೧

ಮೂರನೆಯ ಗುರುಸೇವೆಯೇ ಸ್ಥಾನ ಸೇವೆ. ಇಲ್ಲಿ 'ಸ್ಥಾನ' ಎಂದರೆ ಸದ್ಗುರುವಿನ ವಾಸಕ್ಷೇತ್ರ. "ಗುರುರ್ದೇವೋ ಯತಃ ಸಾಕ್ಷಾತ್ ತದ್‌ಗೃಹಂ ದೇವಮಂದಿರಮ್"[೫೪] (ಗುರುವು ಸಾಕ್ಷಾತ್ ದೇವನಾದುದರಿಂದ ಆತನ ಮನೆಯು ದೇವಾಲಯ) ಎಂಬ ಆಗಮೋಕ್ತಿಯಂತೆ ಗುರುವಿನ ವಾಸಕ್ಷೇತ್ರವನ್ನು ದೇವಮಂದಿರದಂತೆ ಶ್ರದ್ಧೆಯಿಂದ ತಿಳಿಯಬೇಕು. ಆದುದರಿಂದ-

ಗುರುಯಾತ್ರಾ ದೇವಯಾತ್ರಾ ತೀರ್ಥಯಾತ್ರೇತಿ ಚ ತ್ರಿಧಾ।
ಆಸಾಂ ತ್ರಿವಿಧಯಾತ್ರಾಣಾಂ ಗುರುಯಾತ್ರಾ ಫಲಾಧಿಕಾ॥[೫೫]

"ಗುರುಯಾತ್ರೆ, ದೇವಯಾತ್ರೆ ಮತ್ತು ತೀರ್ಥಯಾತ್ರೆ -ಎಂಬ ತ್ರಿವಿಧ ಯಾತ್ರೆಗಳಲ್ಲಿ ಗುರುಯಾತ್ರೆ ಅಧಿಕ ಫಲವನ್ನು ನೀಡುವಂತಹದ್ದು" -ಎಂಬ ಆಗಮೋಕ್ತಿಯಂತೆ ಶ್ರದ್ಧಾನ್ವಿತನಾದ ಶಿಷ್ಯನಿಂದ ಹೆಚ್ಚು ಫಲವು ಲಭಿಸುವ ಗುರುಯಾತ್ರೆಯನ್ನು ಅವಶ್ಯವಾಗಿ ಮಾಡಬೇಕು. ಗುರುವಿನ ವಾಸಸ್ಥಾನಕ್ಕೆ ಯಾತ್ರಾರ್ಥಿಯಾಗಿ ಹೋದ ಶಿಷ್ಯರು ಅಲ್ಲಿ ಇರುವಷ್ಟು ಕಾಲವೂ ತನ್ನ ಮನೆಯಲ್ಲಿ ಮಾಡುತ್ತಿದ್ದಂತಹ ಕಸ ಗುಡಿಸುವುದು, ಮನೆಯನ್ನು ನೀರಿನಿಂದ ತೊಳೆಯುವುದು ಇತ್ಯಾದಿ ಕೃತ್ಯಗಳನ್ನು ನಿರ್ವಂಚನೆಯಿಂದ ಗುರುಸ್ಥಾನದಲ್ಲಿಯೂ ಮಾಡುವ ಸೇವೆಯು ಸದ್ಗುರುವಿನ ಸ್ಥಾನಸೇವೆ ಎಂದು ಕರೆಯಲ್ಪಟ್ಟಿದೆ. ವೀರಶೈವ ಪರಂಪರೆಯಲ್ಲಿ ಶಿಷ್ಯರು ಪ್ರತಿವರ್ಷ ವಿಶೇಷ ಹಬ್ಬಗಳಲ್ಲಿ ಗುರುಸ್ಥಾನಕ್ಕೆ ಹೋಗಿ ಸೇವಾಕಾರ್ಯವನ್ನು ನಿರ್ವಹಿಸುತ್ತಾರೆ.

ನಾಲ್ಕನೆಯ ಸೇವೆಯನ್ನು ಸದ್ಭಾವಸೇವೆ ಎಂದು ಕರೆಯುತ್ತಾರೆ. "ಭಾವೋ ಮಾನಸಚೇಷ್ಟಾತ್ಮಾ ಪರಿಪೂರ್ಣಃ ಶಿವಾಶ್ರಯಃ"[೫೬] ಎಂಬ ಆಚಾರ್ಯೋಕ್ತ್ಯನುಸಾರ "ಶಿವಾಶ್ರಿತವಾದ ಮನೋವ್ಯಾಪಾರವೇ ಭಾವ" ಎಂದು ಕರೆಯಲ್ಪಟ್ಟಿದೆ. ಆದುದರಿಂದ "ಗುರು ಸಾಕ್ಷಾತ್ ಪರಬ್ರಹ್ಮ" (ಗುರುವು ಸಾಕ್ಷಾತ್ ಪರಬ್ರಹ್ಮನು). ಈ ರೀತಿಯಾದ ಗುರುವಿಷಯಕ ವಿಶ್ವಾಸವೂ ಸದ್ಭಾವ ಎನಿಸುತ್ತದೆ. ಆಧ್ಯಾತ್ಮಿಕ ಕ್ಷೇತ್ರದಲ್ಲಿ ಭಾವಕ್ಕೆ ತನ್ನದೇ ಆದ ಪ್ರಾಶಸ್ತ್ಯವಿದೆ. ಭಾವರಹಿತವಾಗಿ ನೆರವೇರಿಸಿದ ಕರ್ಮಗಳೆಲ್ಲವೂ ನಿಷ್ಫಲವಾಗುತ್ತವೆ. ಆದುದರಿಂದಲೇ-

ಭಾವನಾವಿಹಿತಂ ಕರ್ಮ ಪಾವನಾದಪಿ ಪಾವನಮ್।
ತಸ್ಮಾದ್ಭಾವನಯಾ ಯುಕ್ತಂ ಪರಧರ್ಮಂ ಸಮಾಚರೇತ್॥[೫೭]

---

[೫೪] ಚ.ಜ್ಞಾ, ಕ್ರಿ.ಪಾ, ೨.೧೨

[೫೫] ಚ.ಜ್ಞಾ, ಕ್ರಿ.ಪಾ, ೨.೨೮

[೫೬] ಸಿ.ಶಿ, ೧೬.೬೭

[೫೭] ಸಿ.ಶಿ, ೧೬.೬೮

"ಭಾವಯುಕ್ತವಾದ ಶಿವಪೂಜಾದಿಕರ್ಮವು ಅತ್ಯಂತ ಪವಿತ್ರವಾಗಿರುವುದು. ಆದುದರಿಂದ ಶ್ರೇಷ್ಠವಾದ ಆಚಾರ ಧರ್ಮವನ್ನು ಭಾವಸಹಿತವಾಗಿಯೇ ಆಚರಿಸಬೇಕು" -ಎಂಬಲ್ಲಿ ಶ್ರೀ ರೇಣುಕ ಭಗವತ್ಪಾದರು ಭಾವದ ಪ್ರಾಶಸ್ತ್ಯವನ್ನು ಉಪದೇಶಿಸಿದ್ದಾರೆ. ಗುರುವಿನ ಆಪ್ತಸೇವೆ, ಅಂಗಸೇವೆ ಹಾಗೂ ಸ್ಥಾನಸೇವೆಗಳನ್ನು ಭಾವವಿಲ್ಲದೆ ಕೇವಲ ಭಯದಿಂದ ಮಾಡುವವರು ಹೆಚ್ಚಾಗಿದ್ದಾರೆ, ಆದರೆ ಸದ್ಭಾವದಿಂದ ಸೇವೆ ಸಲ್ಲಿಸುವವರು ದುರ್ಲಭವೇ ಸರಿ. ಆದುದರಿಂದ ಗುರುವಿನ ವಿಷಯದಲ್ಲಿ ಶಿಷ್ಯನು ಭಯಾನ್ವಿತನೂ ಹಾಗೂ ಭಾವಾನ್ವಿತನೂ ಆಗಿರಬೇಕು.

ಹೀಗೆ ಪೂರ್ವೋಕ್ತ ಚತುರ್ವಿಧ ಸೇವೆಗಳಿಂದ ಗುರುವು ಶಿಷ್ಯನ ವಿಷಯದಲ್ಲಿ ಸಂತುಷ್ಟನಾದಾಗ, ಶಿಷ್ಯನು ಗುರುವನ್ನು ಕುರಿತು-

> ಭೋ! ಕಲ್ಯಾಣಮಹಾಭಾಗ ಶಿವಜ್ಞಾನಮಹೋದಧೇ।
> ಆಚಾರ್ಯವರ್ಯ ಸಂಪ್ರಾಪ್ತಂ ರಕ್ಷ ಮಾಂ ಭವರೋಗಿಣಮ್॥[೫೮]

"ಎಲೈ ಕಲ್ಯಾಣಮೂರ್ತಿಯೇ! ಮಹಾಭಾಗನೇ! ಶಿವಜ್ಞಾನಸಮುದ್ರನೇ! ಗುರುವರ್ಯನೇ! ಭವರೋಗದಿಂದ ನರಳುತ್ತಿರುವ ನನ್ನನ್ನು ಕಾಪಾಡು" -ಈ ವಿಧವಾಗಿ ದೀಕ್ಷಾನುಗ್ರಹಕ್ಕಾಗಿ ಗುರುವನ್ನು ಪ್ರಾರ್ಥಿಸಬೇಕು. ಆಗ ಶಿಷ್ಯನ ಸೇವೆಯಿಂದ ಸಂತುಷ್ಟನಾಗಿರುವ ಗುರು-

> ಇತಿ ಶುದ್ಧೇನ ಶಿಷ್ಯೇಣ ಪ್ರಾರ್ಥಿತಃ ಪರಮೋ ಗುರುಃ।
> ಶಕ್ತಿಪಾತಂ ಸಮಾಲೋಕ್ಯ ದೀಕ್ಷಯಾ ಯೋಜಯೇದಮುಮ್॥[೫೯]

"ಎಂದು ಶುದ್ಧಾಂತಃಕರಣನಾದ ಶಿಷ್ಯನು ಪರಮಾಚಾರ್ಯನನ್ನು ಪ್ರಾರ್ಥಿಸಲು, ಆಗ ಶ್ರೀಗುರುವು ಶಿಷ್ಯನ ಶಕ್ತಿಪಾತವನ್ನು ಪರಾಮರ್ಶಿಸಿ, ಅವನಿಗೆ ಶಿವದೀಕ್ಷೆಯನ್ನು ಅನುಗ್ರಹಿಸಬೇಕು" -ಎಂಬ ರೇಣುಕಾಚಾರ್ಯರ ಅಪ್ಪಣೆಯಂತೆ ಶಿಷ್ಯನಲ್ಲಿ ಶಕ್ತಿಪಾತದ ಚಿಹ್ನೆಗಳನ್ನು ಗುರುತಿಸಿ, ಅದಕ್ಕೆ ಅನುಗುಣವಾದ ದೀಕ್ಷೆಯನ್ನು ಗುರುವು ನೀಡುತ್ತಾನೆ.

ದೀಕ್ಷೆಯ ಅಂಗವಾಗಿರುವ ಮಲಪರಿಪಾಕ

ದೀಕ್ಷಾರೂಪದ ಈ ಗುರುವಿನ ಅನುಗ್ರಹವು ಎಲ್ಲರಿಗೂ ಸುಲಭವಾಗಿ ದೊರಕದೆ, ಈಶ್ವರಾನುಗ್ರಹರೂಪ ಶಕ್ತಿಪಾತವಿಶಿಷ್ಟರಾದ ಮಲಪರಿಪಾಕವುಳ್ಳವರಿಗೆ ಮಾತ್ರ ದೊರೆಯುತ್ತದೆ. ಆದುದರಿಂದಲೇ-

> ಪರಿಪಕ್ವಮಲಾ ಯೇ ತಾನುತ್ಪಾದನಹೇತುಶಕ್ತಿಪಾತೇನ।
> ಯೋಜಯತಿ ಪರೇ ತತ್ತ್ವೇ ಸ ದೀಕ್ಷಯಾಚಾರ್ಯಮೂರ್ತಿಸ್ಥಃ॥[೬೦]

---

೫೮. ಸಿ.ಶಿ, ೬.೯

೫೯. ಸಿ.ಶಿ, ೬.೧೦

೬೦. ತತ್ತ್ವಪ್ರಕಾಶಃ, ೧೫

"ಶ್ರೀಗುರುವು ಮಲಪರಿಪಾಕವುಳ್ಳವರನ್ನು ಶಕ್ತಿಪಾತದ ಮೂಲಕ ಮುಂದುವರಿಸಿ ಪರತತ್ತ್ವದಲ್ಲಿ ಯೋಜಿಸುತ್ತಾನೆ" -ಎಂದು ಹೇಳಲ್ಪಟ್ಟಿದೆ. ಇದರ ಅಭಿಪ್ರಾಯವಿಷ್ಟು- "ಜೀವತ್ವಂ ದುಃಖಸರ್ವಸ್ವಂ ತದಿದಂ ಮಲಕಲ್ಪಿತಮ್"[೬೧] (ಜೀವತ್ವವು (ಜೀವಭಾವವು) ಆಣವಾದಿ ಮಲಬದ್ಧವೂ, ದುಃಖಮಯವೂ ಆಗಿದೆ) ಎಂಬ ಶ್ರೀ ರೇಣುಕ ಭಗವತ್ಪಾದರ ಉಕ್ತಿಯಂತೆ ಜೀವಭಾವವು ಆಣವಾದಿ ಮಲತ್ರಯಗಳಿಂದ ಆವೃತವಾಗಿದೆ ಎಂದು ನಿಶ್ಚಯವಾಗುತ್ತದೆ. ಇಚ್ಛಾಶಕ್ತಿ ಸಂಕೋಚವೇ ಆಣವಮಲ, ಜ್ಞಾನಶಕ್ತಿಸಂಕೋಚವು ಮಾಯೀಯಮಲ ಮತ್ತು ಕ್ರಿಯಾಶಕ್ತಿಸಂಕೋಚವು ಕಾರ್ಮಿಕಮಲ ಎಂದು ಕರೆಯಲ್ಪಟ್ಟಿವೆ. ಈ ಮಲತ್ರಯಗಳ ಪರಿಪಾಕವಾಗದ ಹೊರತು ಶಕ್ತಿಪಾತವುಂಟಾಗುವುದಿಲ್ಲ. "ಮಲೋಽಪ್ಯಾಮಶ್ಚ ಪಕ್ವಶ್ಚ ಭವೇತ್ ಸಂಸಾರಕಾರಣಮ್"[೬೨] (ಸಂಸಾರದ ದೆಸೆಯಿಂದ ಮಲವು ಆಮ (ಪಕ್ವವಾಗದ) ಮತ್ತು ಪಕ್ವ (ಪಕ್ವ) ಎಂದಾಗುತ್ತದೆ) ಎಂಬ ಮಹರ್ಷಿ ವ್ಯಾಸರ ವಾಣಿಯಂತೆ ಜೀವರ ಜನನ-ಮರಣರೂಪ ಸಂಸಾರಕ್ಕೆ ಕಾರಣೀಭೂತವಾದ ಆಣವಾದಿ ಮಲಗಳು 'ಆಮ' (ಪಕ್ವವಾಗದ) ಮತ್ತು 'ಪಕ್ವ' (ಪಕ್ವವಾಗಿರುವ) ಎಂದು ಎರಡು ಬಗೆಯಾಗುತ್ತವೆ. ಅವುಗಳಲ್ಲಿ ತಪಸ್ಸಿನಿಂದ ಕ್ಷೀಣವಾದುದು ಪಕ್ವ ಎನಿಸಿದರೆ, ಅದಕ್ಕೆ ವಿರೋಧವಾದದ್ದು ಆಮ ಎನಿಸಿದೆ. ಪಕ್ವಮಲನಾದ ಸಾಧಕನನ್ನು 'ತಪ್ತತನು' ಎಂದು ಕರೆಯಲಾಗಿದೆ. ಅಪಕ್ವಮಲನಾದ ಸಾಧಕನನ್ನು 'ಅತಪ್ತತನು' ಎಂದು ಕರೆಯಲಾಗಿದೆ.

ತಪಸ್ತಪ್ತಾ ತನುರ್ಯಸ್ಯ ಸ ತಪ್ತತನುರುಚ್ಯತೇ।
ಪರಿಪಕ್ವೋ ವಿಮೋಕ್ಷಾಯ ಸೋಽಶ್ನುತೇ ಲಿಂಗಧಾರಣಮ್॥
ನ ಕರೋತಿ ತಪಃ ಪೂರ್ವಂ ಸೋಽತಪ್ತತನುರುಚ್ಯತೇ।
ಅಪಕ್ವೋಽಯಂ ವಿಮೋಕ್ಷಾಯ ನಾಶ್ನುತೇ ಲಿಂಗಧಾರಣಮ್॥[೬೩]

"ಯಾರ ಶರೀರವು ತಪಸ್ಸಿನಿಂದ ತಪ್ತವಾಗಿದೆಯೋ ಅವನು ತಪ್ತತನು ಎಂದು ಕರೆಯಲ್ಪಟ್ಟಿದ್ದಾನೆ. ಮೋಕ್ಷದ ಕಾರಣದಿಂದ ಮಲಪರಿಪಕ್ವನು ಲಿಂಗಧಾರಣೆಯನ್ನು ಪಡೆಯುತ್ತಾನೆ. ಈ ಮೊದಲು ತಪಸ್ಸನ್ನಾಚರಿಸದವನು ಅತಪ್ತತನು ಎಂದು ಕರೆಯಲ್ಪಟ್ಟಿದ್ದಾನೆ. ಸಂಸಾರ ಬಂಧನದಿಂದ ಬಿಡುಗಡೆ ಹೊಂದಲು ಅಪಕ್ವನಾದ ಈತನು ಲಿಂಗಧಾರಣೆಯನ್ನು ಹೊಂದುವುದಿಲ್ಲ" -ಎಂದು ಹೇಳಲ್ಪಟ್ಟಿದೆ. ಆದುದರಿಂದಲೇ ರೇಣುಕ ಭಗವತ್ಪಾದರು-

ಅತಪ್ತತನುರಜ್ಞೋ ವೈ ಆಮಃ ಸಂಸ್ಕಾರವರ್ಜಿತಃ।
ದೀಕ್ಷಯಾ ರಹಿತಃ ಸಾಕ್ಷಾನ್ನಾಪ್ನುಯಾಲ್ಲಿಂಗಧಾರಣಮ್॥[೬೪]

---

[೬೧] ಸಿ.ಶಿ, ೧೮.೧೭
[೬೨] ಶಿವಪುರಾಣಮ್, ೭.೧.೩೧-೭೨
[೬೩] ವೀರಶೈವಾನಂದಚಂದ್ರಿಕಾ, ಪು. ೭೮
[೬೪] ಸಿ.ಶಿ, ೬.೬೦

"ವೇಧಾ-ಮನು-ಕ್ರಿಯಾರೂಪ ದೀಕ್ಷೆಯಿಂದ ತಪ್ತನಾಗದಿದ್ದವನು ಅಜ್ಞನೂ, ಷಡಧ್ವಾದಿ ಸಂಸ್ಕಾರಶೂನ್ಯನೂ, ಶಿವದೀಕ್ಷಾರಹಿತನೂ ಉತ್ತಮವಾದ ಶಿವಲಿಂಗವನ್ನು ಹೊಂದುವುದಿಲ್ಲ" -ಎಂಬಲ್ಲಿ ಅಪಕ್ವಮಲನ, ಆ ಕಾರಣ ಈಶ್ವರಾನುಗ್ರಹವಿಲ್ಲದ ಶಿವದೀಕ್ಷೆಯಿಲ್ಲದವರು ವೀರಶೈವ ಸಿದ್ಧಾಂತದ ಕ್ರಿಯಾದೀಕ್ಷೆಯ ಕಾಲದಲ್ಲಿ ಸದ್ಗುರುವಿನಿಂದ ಅನುಗ್ರಹಿಸಲ್ಪಡುವ ಇಷ್ಟಲಿಂಗವನ್ನು ಧರಿಸಲು ಅನರ್ಹರೆಂಬುದನ್ನು ಸೂಚಿಸಿದ್ದಾರೆ. ಆದುದರಿಂದಲೇ ಪಕ್ವಮಲನಾದ ಮುಮುಕ್ಷು ಮಾತ್ರ ಈಶ್ವರಾನುಗ್ರಹರೂಪ ಶಕ್ತಿಪಾತವನ್ನು ಪಡೆಯುತ್ತಾನೆ. ಅದನ್ನು ಶ್ರೀ ರೇಣುಕ ಭಗವತ್ಪಾದರು ಹೀಗೆ ನಿರೂಪಿಸಿದ್ದಾರೆ-

> ಸ್ವಕರ್ಮಪರಿಪಾಕೇನ ಪ್ರಕ್ಷೀಣಮಲವಾಸನಃ।
> ಶಿವಪ್ರಸಾದಾಜ್ಜೀವೋಽಯಂ ಜಾಯತೇ ಶುದ್ಧಮಾನಸಃ॥
> ಶುದ್ಧಾಂತಃಕರಣೇ ಜೀವೇ ಶುದ್ಧಕರ್ಮವಿಪಾಕತಃ।
> ಜಾಯತೇ ಶಿವಕಾರುಣ್ಯಾತ್ ಪ್ರಸ್ಫುಟಾ ಭಕ್ತಿರೈಶ್ವರೀ॥[೬೫]

"ಜೀವನು ತನ್ನ ಕರ್ಮಪರಿಪಾಕದಿಂದ ಅನಾದಿಮಲವಾಸನೆಯನ್ನು ಕಳೆದುಕೊಂಡು, ಶಿವಪ್ರಸಾದದಿಂದ ಶುದ್ಧಾಂತಃಕರಣವುಳ್ಳವನಾಗುವನು. ಜೀವನು ಶುದ್ಧಾಂತಃಕರಣವುಳ್ಳವನಾಗಲು, ಶಿವಕಾರುಣ್ಯದಿಂದ ಶಿವಸಂಬಂಧವಾದ ಶುದ್ಧಭಕ್ತಿಯು ಉತ್ಪನ್ನವಾಗುವುದು."

ಈ ರೀತಿಯಾಗಿ ಜೀವನು ಅನೇಕ ಜನ್ಮಗಳಲ್ಲಿ ಸಂಪಾದಿಸಿದ ಸುಕೃತದಿಂದುಂಟಾದ ಕರ್ಮಪರಿಪಾಕದಿಂದ ಆಣವಾದಿ ಮಲಗಳು ನಾಶವಾದಾಗ ಈಶ್ವರಾನುಗ್ರಹರೂಪ ಶಕ್ತಿಪಾತವು ಜೀವನಿಗೆ ಸಂಭವಿಸುತ್ತದೆ. ಜ್ಞಾನೋದಯವಾದಾಗ, ಕರ್ಮಸಾಮ್ಯದಲ್ಲಿ ಮತ್ತು ಮಲಪರಿಪಾಕವಾದಾಗ ಶಕ್ತಿಪಾತವು[೬೬] ಸಂಭವಿಸುತ್ತದೆ ಎಂಬ ಮೂರು ಅಭಿಪ್ರಾಯಗಳಿವೆ. ಅವುಗಳ ಪೈಕಿ ವೀರಶೈವಾಚಾರ್ಯರು ಶಕ್ತಿಪಾತಕ್ಕೆ ಮಲಪರಿಪಾಕವೇ ಕಾರಣವೆಂದು ಒಪ್ಪಿದ್ದಾರೆ.

ಶಕ್ತಿಪಾತ

ಭಗವಂತನ ವಿಷಯದಲ್ಲಿ ಉಂಟಾಗುವ ಭಕ್ತಿಯು ಶಕ್ತಿಪಾತದ ಮುಖ್ಯಲಕ್ಷಣವೆಂದು ತಿಳಿಯಬೇಕು. ಆದುದರಿಂದಲೇ-

> ಪ್ರಸಾದಾದೇವ ಸಾ ಭಕ್ತಿಃ ಪ್ರಸಾದೋ ಭಕ್ತಿಸಂಭವಃ।
> ಯಥೈವಾಂಕುರತೋ ಬೀಜಂ ಬೀಜತೋ ವಾ ಯಥಾಂಕುರಃ॥[೬೭]

---

[೬೫] ಸಿ.ಶಿ, ೫.೪೮-೪೯

[೬೬] ಆಗಮ ಔರ್ ತಂತ್ರಶಾಸ್ತ್ರ, ಪೃ. ೧೦೮-೧೧೦

[೬೭] ಸಿ.ಶಿ, ೯.೧೧

"ಅಂಕುರ(ಮೊಳಕೆ)ದಿಂದ ಹೇಗೆ ಬೀಜವು ಉತ್ಪನ್ನವಾಗುವುದೋ, ಬೀಜದಿಂದ ಅಂಕುರವು ಹೇಗೆ ಉತ್ಪನ್ನವಾಗುವುದೋ ಹಾಗೆಯೇ ಭಕ್ತಿಯು ಶಿವಾನುಗ್ರಹದಿಂದ ಉತ್ಪನ್ನವಾಗುವುದು; ಶಿವಾನುಗ್ರಹವು ಭಕ್ತಿಯಿಂದ ಉತ್ಪನ್ನವಾಗುವುದು" -ಎಂಬಲ್ಲಿ ಶ್ರೀ ರೇಣುಕ ಭಗವತ್ಪಾದರು ಈಶ್ವರಾನುಗ್ರಹರೂಪ ಶಕ್ತಿಪಾತ ಹಾಗೂ ಭಕ್ತಿ ಇವು ಪರಸ್ಪರ ಒಂದು ಮತ್ತೊಂದನ್ನವಲಂಬಿಸಿವೆ ಎಂದು ಪ್ರತಿಪಾದಿಸಿದ್ದಾರೆ. ಇದರ ತಾತ್ಪರ್ಯವಿಷ್ಟು- ಸಾಮಾನ್ಯವಾಗಿ ಮೊದಲಿಗೆ ಸಾಧಕನ ಮನಸ್ಸಿನಲ್ಲಿ ಭಕ್ತಿಯುಂಟಾಗುತ್ತದೆ. ಆ ಭಕ್ತಿಯಿಂದ ಸಂತುಷ್ಟನಾದ ಈಶ್ವರನು ಯಾವಾಗ ಆ ಭಕ್ತನ ಮೇಲೆ ಶಕ್ತಿಪಾತವನ್ನು ಮಾಡುತ್ತಾನೆಯೋ ಆಗ ಅವನ ಮನಸ್ಸಿನಲ್ಲಿರುವ ಭಕ್ತಿಯು ದ್ವಿಗುಣವಾಗುತ್ತದೆ ಮತ್ತು ಅದು ಶಕ್ತಿಪಾತದ ವಶದಿಂದಲೇ ಪ್ರತಿಕ್ಷಣವೂ ರೋಮಾಂಚ, ಅಂಗಾಂಗಗಳ ಕಂಪನ, ಅಶ್ರುಪಾತಾದಿಗಳು ಉಂಟಾಗುತ್ತವೆ. ಕ್ರಿಯಾಸಾರದಲ್ಲಿ ಶಕ್ತಿಪಾತದ ಲಕ್ಷಣವನ್ನು ಹೀಗೆ ನಿರೂಪಿಸಲಾಗಿದೆ-

ಲಕ್ಷಣಂ ಶಕ್ತಿಪಾತಸ್ಯ ಪ್ರಬೋಧಾನಂದಸಂಭವಃ।
ಸಾ ಯಸ್ಮಾತ್ ಪರಮಾ ಶಕ್ತಿಃ ಪ್ರಬೋಧಾನಂದರೂಪಿಣೀ॥
ಆನಂದಬೋಧಯೋರ್ಲಿಂಗಮಂತಃಕರಣವಿಕ್ರಿಯಾ।
ಯಥಾ ಸ್ಯಾತ್ ಕಂಪರೋಮಾಂಚಸ್ವರನೇತ್ರಾಂಗವಿಕ್ರಿಯಾ॥[೬೮]

"(ಭಗವಂತನ ವಿಷಯದಲ್ಲಿನ) ಪರಮಾನಂದದ ಸಂಭವವೇ ಶಕ್ತಿಪಾತದ ಲಕ್ಷಣವೆನಿಸುತ್ತದೆ. ಆ ಶ್ರೇಷ್ಠವಾದ ಶಕ್ತಿಯು ಪ್ರಬೋಧಾನಂದರೂಪವುಳ್ಳದ್ದು. (ಶಿಷ್ಯನಿಗೆ) ಆನಂದ ಮತ್ತು ಬೋಧೆಗಳಿಗೆ ಕಾರಣವೇನೆಂದರೆ ಅಂತಃಕರಣದ ಪರಿವರ್ತನೆಯೇ ಆಗಿದೆ. ಹೇಗೆಂದರೆ ಶರೀರದಲ್ಲಿ ಕಂಪನ, ರೋಮಾಂಚನ, ಗದ್ಗದಸ್ವರ, ಆನಂದಭಾಷ್ಪಗಳು ಉಂಟಾಗುತ್ತವೆ."

ಶಕ್ತಿಪಾತದ ಚಿಹ್ನೆಗಳು

ಯೇಷಾಂ ಶರೀರಿಣಾಂ ಶಕ್ತಿಃ ಪತತ್ಯೇವ ನಿವೃತ್ತಯೇ।
ತೇಷಾಂ ತಲ್ಲಿಂಗಮೌತ್ಸುಕ್ಯಂ ಮುಕ್ತೌ ದ್ವೇಷೋ ಭವಸ್ಥಿತೌ॥
ಭಕ್ತಿಶ್ಚ ಶಿವಭಕ್ತೇಷು ಶ್ರದ್ಧಾ ತಚ್ಛಾಸಕೇ ಶಿವೇ।
ಏಭಿರ್ಲಕ್ಷೈರವಿಚ್ಛಿನ್ನೈಃ ಶಕ್ತಿಪಾತೋ ಮಹಾತ್ಮಭಿಃ॥
ಅನುಮೇಯಃ ಸದೀಕ್ಷೈಶ್ಚ ಶಕ್ತಿಪಾತಾನುಸಾರತಃ॥[೬೯]

"ಯಾರ ಶರೀರದಲ್ಲಿ ಮುಕ್ತಿಗೋಸ್ಕರ ಶಕ್ತಿಪಾತವಾಗುತ್ತದೆಯೋ ಅವರಿಗೆ ಶಕ್ತಿಪಾತದ ಚಿಹ್ನೆಗಳಾದ ಮುಕ್ತಿಯಲ್ಲಿ ಉತ್ಸಾಹ, ಸಂಸಾರದಲ್ಲಿ ದ್ವೇಷ, ಶಿವಭಕ್ತರಲ್ಲಿ ಭಕ್ತಿ, ಶಿವನಲ್ಲಿ ಶ್ರದ್ಧೆ -ನಿರಂತರವಾದ ಈ ಲಕ್ಷಣಗಳಿಂದ ಕೂಡಿದ ಮಹಾತ್ಮರಿಗೆ

---

[೬೮] ಕ್ರಿ.ಸಾ, ಭಾಗ-೨, ಪು. ೧೯೫

[೬೯] ವೇದಾಂತಸಾರ ವೀರಶೈವಚಿಂತಾಮಣಿ, ೬.೭-೮; ಮೃಗೇಂದ್ರಾಗಮ, ವಿದ್ಯಾಪಾದ, ೫.೪-೫

ಶಕ್ತಿಪಾತವಾಗಿದೆ ಎಂದು ನಿಶ್ಚಯವಾಗುತ್ತದೆ" ಎಂಬ ಪಾರಮೇಶ್ವರ-ಮೃಗೇಂದ್ರಾಗಮದ ಉಕ್ತಿಗಳ ಉಲ್ಲೇಖದಿಂದ ನಿಟ್ಟೂರು ನಂಜನಾಚಾರ್ಯರು ಶಕ್ತಿಪಾತದ ಚಿಹ್ನೆಗಳನ್ನು ಹೇಳಿ, ಮತ್ತೆ-

ಯತ್ರ ಶಕ್ತಿರ್ನಪತಿತಾ ತತ್ರ ಶುದ್ಧಿರ್ನಜಾಯತೇ।
ನ ವಿದ್ಯಾ ನ ಶಿವಾಚಾರೋ ನ ಮುಕ್ತಿರ್ನ ಚ ಸಿದ್ಧಯಃ॥
ತಸ್ಮಾಲ್ಲಿಂಗಾನಿ ಸಂವೀಕ್ಷ್ಯ ಶಕ್ತಿಪಾತಸ್ಯ ಭೂರಿಶಃ।
ಜ್ಞಾನೇನ ಕ್ರಿಯಯಾ ವಾಥ ಗುರುಃ ಶಿಷ್ಯಂ ವಿಶೋಧಯೇತ್॥

"ಎಲ್ಲಿ ಶಕ್ತಿಪಾತವಾಗುವುದಿಲ್ಲವೋ ಅಲ್ಲಿ ಶುದ್ಧಿ, ವಿದ್ಯೆ, ಶಿವಾಚಾರ, ಮುಕ್ತಿ ಮತ್ತು ಸಿದ್ಧಿಗಳಾವುವೂ ಉಂಟಾಗುವುದಿಲ್ಲ. ಆದುದರಿಂದ ಈ ಎಲ್ಲ ಶಕ್ತಿಪಾತದ ಚಿಹ್ನೆಗಳನ್ನು ವೀಕ್ಷಿಸಿದ ಸದ್ಗುರುವು ಜ್ಞಾನದಿಂದಾಗಲಿ ಅಥವಾ ಕ್ರಿಯೆಯಿಂದಾಗಲಿ ಶಿಷ್ಯನನ್ನು ದೀಕ್ಷಾಸಂಸ್ಕಾರಯುಕ್ತನನ್ನಾಗಿ ಮಾಡಬೇಕು" -ಎಂದು ಪೂರ್ವೋಕ್ತ ಶಕ್ತಿಪಾತರಹಿತರಾದ ಸಾಧಕರು ದೀಕ್ಷಾಸಂಸ್ಕಾರಕ್ಕೆ ಅನರ್ಹರೆಂದು ಪ್ರತಿಪಾದಿಸಿದ್ದಾರೆ. ಭಗವಂತನ ಅನುಗ್ರಹದಿಂದ ಯಾರ ಮನಸ್ಸಿನಲ್ಲಿ ಭಕ್ತಿಯುಂಟಾಗುತ್ತದೆಯೋ ಅವನೇ ದೀಕ್ಷಾಧಿಕಾರಿ ಎಂಬುದು ಮೇಲಿನ ನಿರೂಪಣೆಯಿಂದ ತಿಳಿದುಬರುತ್ತದೆ. ಆದುದರಿಂದಲೇ- "ಕಿಮತ್ರ ಬಹುನೋಕ್ತೇನ ಭಕ್ತಾಃ ಸರ್ವೇಽಧಿಕಾರಿಣಃ" (ಹೆಚ್ಚು ಹೇಳುವುದೇನು ಬಂತು? ಎಲ್ಲ ಭಕ್ತರೂ ದೀಕ್ಷಾಸಂಸ್ಕಾರಕ್ಕೆ ಅಧಿಕಾರಿಗಳು) ಎಂದು ಹೇಳಲಾಗಿದೆ.

ಭಕ್ತರ ವರ್ಣಾಶ್ರಮದ ನಿರಾಕರಣೆ

ಶೈವಸಿದ್ಧಾಂತದ ಪ್ರಕಾರ ಮೋಕ್ಷಮಾರ್ಗದಲ್ಲಿ ಪ್ರವೃತ್ತರಾದವರ ವಿಷಯದಲ್ಲಿ ಭಕ್ತಿಯನ್ನು ಮಾತ್ರ ಪರೀಕ್ಷಿಸಲಾಗುತ್ತದೆಯೇ ಹೊರತು ವರ್ಣಾಶ್ರಮಗಳನ್ನಲ್ಲ. ಆದುದರಿಂದಲೇ-

ಭಗವನ್ಮೋಕ್ಷಮಾರ್ಗೋಽಯಂ ತ್ವಯಾ ಸಮ್ಯಗುದಾಹೃತಃ।
ತತ್ರಾಧಿಕಾರಿಣಂ ಬ್ರೂಹಿ ತತ್ರ ಮೇ ಸಂಶಯೋ ಮಹಾನ್॥

"ಭಗವನ್! ಮೋಕ್ಷಮಾರ್ಗವು ನಿನ್ನಿಂದ ಸೊಗಸಾಗಿ ಉಪದೇಶಿಸಲ್ಪಟ್ಟಿತು. ಮೋಕ್ಷಕ್ಕೆ ಅಧಿಕಾರಿಗಳಾರು? ಎಂಬ ವಿಷಯದಲ್ಲಿ ನನಗೆ ಸಂದೇಹವಿದೆ. ಅದನ್ನು ನನಗೆ ಹೇಳು" -ಎಂದು ಶ್ರೀರಾಮನು ಪ್ರಶ್ನಿಸಲು, ಭಗವಾನ್ ಶಿವನು-

ಬ್ರಹ್ಮಕ್ಷತ್ರವಿಶಃ ಶೂದ್ರಾಃ ಸ್ತ್ರಿಯಶ್ಚಾತ್ರಾಧಿಕಾರಿಣಃ।
ಬ್ರಹ್ಮಚಾರೀ ಗೃಹಸ್ಥೋ ವಾಽನುಪನೀತೋಽಥವಾ ದ್ವಿಜಃ॥
ವನಸ್ಥೋ ವಾಽವನಸ್ಥೋ ವಾ ಯತಿಃ ಪಾಶುಪತವ್ರತೀ।
ಬಹುನಾತ್ರ ಕಿಮುಕ್ತೇನ ಯಸ್ಯ ಭಕ್ತಿಃ ಶಿವಾರ್ಚನೇ॥
ಸ ಏವಾತ್ರಾಧಿಕಾರೀ ಸ್ಯಾನ್ನಾನ್ಯಚಿತ್ತಃ ಕಥಂಚನ।[೨೦]

---

[೨೦] ಶಿವಗೀತಾ, ೧೬.೧-೪

"ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಹಾಗೂ ಹೆಂಗಸರು ಮೋಕ್ಷಕ್ಕೆ ಅಧಿಕಾರಿಗಳು. ಬ್ರಹ್ಮಚಾರಿ, ಗೃಹಸ್ಥ, ಉಪನಯನ ಸಂಸ್ಕಾರವಾಗದ ದ್ವಿಜರು, ವಾನಪ್ರಸ್ಥ ಅಥವಾ ವಾನಪ್ರಸ್ಥರಲ್ಲದ ಯತಿಗಳು, ಪಾಶುಪತವ್ರತಧಾರಿಗಳು -ಈ ವಿಷಯದಲ್ಲಿ ಹೆಚ್ಚಿಗೆ ಏನನ್ನು ತಾನೆ ಹೇಳಲಿ. ಯಾರು ಭಕ್ತಿಯಿಂದ ಶಿವಾರ್ಚನೆ ಮಾಡುತ್ತಾರೆಯೋ ಅವರೆಲ್ಲರೂ ಮೋಕ್ಷಕ್ಕೆ ಅಧಿಕಾರಿಗಳು, ಬೇರೆ ದೇವತೆಗಳಲ್ಲಿ ಆಸಕ್ತರಾದವರಲ್ಲ" ಎಂದು ವರ್ಣಾಶ್ರಮಗಳ ಭೇದವಿಲ್ಲದೆ ಎಲ್ಲ ಭಕ್ತರೂ ಮೋಕ್ಷಕ್ಕೆ ಅಧಿಕಾರಿಗಳೆಂದು ಸ್ಪಷ್ಟವಾಗಿ ಉಪದೇಶಿಸಿದ್ದಾನೆ. ಇದರಿಂದ ನಿಶ್ಚಯವಾಗುವುದಿಷ್ಟು-

ವಿಶುದ್ಧಾಃ ಪ್ರಾಕೃತಾಶ್ಚೇತಿ ದ್ವಿವಿಧಾಃ ಮಾನುಷಾಃ ಸ್ಮೃತಾಃ।
ಶಿವಸಂಸ್ಕಾರಿಣಃ ಶುದ್ಧಾಃ ಪ್ರಾಕೃತಾ ಇತರೇ ಮತಾಃ॥[೨೧]

"ಮಾನವರು ಶುದ್ಧರು ಮತ್ತು ಪ್ರಾಕೃತರು ಎಂದು ಎರಡು ಬಗೆ. ಶಿವಸಂಸ್ಕಾರಿಗಳು ಶುದ್ಧರು ಮತ್ತು ಇತರರು ಪ್ರಾಕೃತರು" -ಎಂಬ ಶ್ರೀ ರೇಣುಕ ಭಗವತ್ಪಾದರ ಉಪದೇಶಾನುಸಾರವಾಗಿ ಮಾನವಸಮಾಜವನ್ನು ಶುದ್ಧರು ಮತ್ತು ಪ್ರಾಕೃತರು ಎಂದು ಎರಡು ವಿಭಾಗಮಾಡಲಾಗಿದೆ. ಶಿವಸಂಸ್ಕಾರವುಳ್ಳ ಶಿವಭಕ್ತರು ಶುದ್ಧರೆನಿಸಿದರೆ, ಶಿವಸಂಸ್ಕಾರವಿಲ್ಲದವರು ಪ್ರಾಕೃತರು ಎಂದು ತಿಳಿಯಬೇಕು. ಆದುದರಿಂದ ಶಿವಸಂಸ್ಕಾರವುಳ್ಳ ಶುದ್ಧರು ಮಾತ್ರ ಮೋಕ್ಷಕ್ಕೆ ಅಂಗವಾಗಿರುವ ದೀಕ್ಷಾಸಂಸ್ಕಾರಕ್ಕೆ ಅಧಿಕಾರಿಗಳು.

ಮಾನವಸಮಾಜವನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂದು ನಾಲ್ಕು ವಿಭಾಗಮಾಡಲಾಗಿದೆ. ಹಾಗಾದರೆ ಹೇಗೆ ಶುದ್ಧರು ಮತ್ತು ಪ್ರಾಕೃತರು ಎಂದು ವಿಭಾಗಗಳೆರಡರ ಪ್ರತಿಪಾದನೆ ಎಂಬ ಜಿಜ್ಞಾಸೆಗೆ, ರೇಣುಕಾಚಾರ್ಯರೇ ಹೀಗೆ ಉಪದೇಶಿಸಿದ್ದಾರೆ-

ವರ್ಣಾಶ್ರಮಾದಿಧರ್ಮಾಣಾಂ ವ್ಯವಸ್ಥಾ ಹಿ ದ್ವಿಧಾ ಮತಾ।
ಏಕಾ ಶಿವೇನ ನಿರ್ದಿಷ್ಟಾ ಬ್ರಹ್ಮಣಾ ಕಥಿತಾಽಪರಾ॥
ಶಿವೋಕ್ತಧರ್ಮನಿಷ್ಠಾ ತು ಶಿವಾಶ್ರಮನಿಷೇವಿಣಾಮ್।
ಶಿವಸಂಸ್ಕಾರಹೀನಾನಾಂ ಧರ್ಮಃ ಪೈತಾಮಹಃ ಸ್ಮೃತಃ॥[೨೨]

"ವರ್ಣಾಶ್ರಮಾದಿ ಧರ್ಮಗಳ ವ್ಯವಸ್ಥೆಯು ಎರಡು ವಿಧವಾಗಿದೆ. ಒಂದು ಶಿವನಿಂದ ಹೇಳಲ್ಪಟ್ಟಿದೆ. ಮತ್ತೊಂದು ಬ್ರಹ್ಮನಿಂದ ಹೇಳಲ್ಪಟ್ಟಿದೆ. ಶಿವನಿಂದ ಹೇಳಲ್ಪಟ್ಟ ಧರ್ಮಾಚರಣೆಯು, ಶಿವವರ್ಣಾಶ್ರಮಧರ್ಮಗಳನ್ನನುಷ್ಠಿಸುವವರಿಗೆ ಹೇಳಲ್ಪಟ್ಟಿವೆ. ಶಿವಸಂಸ್ಕಾರ ಶೂನ್ಯರಿಗೆ ಬ್ರಹ್ಮನಿಂದ ಹೇಳಲ್ಪಟ್ಟ ಧರ್ಮಾಚರಣೆಯು ಹೇಳಲ್ಪಟ್ಟಿವೆ."

---

[೨೧] ಸಿ.ಶಿ, ೧೦.೩೪

[೨೨] ಸಿ.ಶಿ, ೧೦.೩೫-೩೬

ಇದರ ಭಾವವಿಷ್ಟು- ವರ್ಣಾಶ್ರಮ ವ್ಯವಸ್ಥೆಯು ಶಿವನಿಂದ ಹೇಳಲ್ಪಟ್ಟಿರುವುದು ಮತ್ತು ಬ್ರಹ್ಮನಿಂದ ಹೇಳಲ್ಪಟ್ಟಿರುವುದು ಎಂದು ಎರಡು ಬಗೆಯಾಗಿದೆ. ಶಿವಸಿದ್ಧಾಂತವನ್ನು ಅನುಸರಿಸುವುದು ಶೈವಮಾರ್ಗಾವಲಂಬಿಗಳ ಕರ್ತವ್ಯ. ಶಿವಸಿದ್ಧಾಂತದ ಪ್ರಕಾರ ಸಮಾಜವು ಶುದ್ಧ ಮತ್ತು ಪ್ರಾಕೃತ ಎಂದು ಎರಡು ವಿಧವಾಗಿ ನಿರೂಪಿತವಾಗಿದೆ. ಶುದ್ಧರು ಮಾತ್ರ ದೀಕ್ಷಾಸಂಸ್ಕಾರಕ್ಕೆ ಅಧಿಕಾರಿಗಳು, ಪ್ರಾಕೃತರಲ್ಲವೆಂದು ಅರಿಯಬೇಕು. ಆದುದರಿಂದ ಶುದ್ಧನು ವರ್ಣದಲ್ಲಿ ಚಾಂಡಾಲನಾದರೂ ಸಹ ದೀಕ್ಷಾಸಂಸ್ಕಾರಕ್ಕೆ ಅಧಿಕಾರಿಯಾದರೆ, ವರ್ಣದಲ್ಲಿ ಬ್ರಾಹ್ಮಣನಾದರೂ ಸಹ ಪ್ರಾಕೃತನಾಗಿದ್ದರೆ ದೀಕ್ಷಾ ಸಂಸ್ಕಾರಕ್ಕೆ ಅನರ್ಹನೆಂದು ನಿಶ್ಚಯವಾಗುತ್ತದೆ. ಆದುದರಿಂದಲೇ "ಶಿವಭಕ್ತಿವಿಹೀನಸ್ತು ಬ್ರಾಹ್ಮಣಃ ಶ್ವಪಚಾಧಮಃ"[೨೨(ಎ)] (ಶಿವನಲ್ಲಿ ಭಕ್ತಿಯಿಲ್ಲದವನು ಬ್ರಾಹ್ಮಣನಾದರೂ ಆತನು ಚಾಂಡಾಲನಂತೆ ನೀಚನು) ಎಂದು ಶ್ರೀಪತಿ ಪಂಡಿತರು ಹೇಳಿದ್ದಾರೆ-

> ಬ್ರಾಹ್ಮಣಃ ಕ್ಷತ್ರಿಯೋ ವಾಽಪಿ ವೈಶ್ಯೋ ವಾ ಶೂದ್ರ ಏವ ವಾ।
> ಅಂತ್ಯಜೋ ವಾ ಶಿವೇ ಭಕ್ತಃ ಶಿವವನ್ಮಾನ್ಯ ಏವ ಸಃ॥
> ಶಿವಭಕ್ತಸಮಾವೇಶೇ ಕ್ವ ಜಾತಿ ಪರಿಕಲ್ಪನಾ।
> ಇಂಧನೇಷ್ವಗ್ನಿದಗ್ಧೇಷು ಕೋ ವಾ ಭೇದಃ ಪ್ರಕೀರ್ತ್ಯತೇ॥[೨೩]

"ಬ್ರಾಹ್ಮಣನಾಗಲಿ, ಕ್ಷತ್ರಿಯನಾಗಿರಲಿ, ವೈಶ್ಯನಾಗಿರಲಿ, ಶೂದ್ರನಾಗಿರಲಿ ಅಥವಾ ಅಂತ್ಯಜನಾಗಿರಲಿ ಶಿವಭಕ್ತನಾಗಿದ್ದಲ್ಲಿ ಅವನನ್ನು ಶಿವನೆಂದೇ ಪರಿಗಣಿಸಬೇಕು. ಬ್ರಾಹ್ಮಣಾದಿ ಜನರಲ್ಲಿ ಶಿವಭಕ್ತಿಯು ಸಮಾವೇಶವಾಗಲು ಜಾತಿ ಕಲ್ಪನೆಯೇನು ಬಂತು. ಅಗ್ನಿಯಲ್ಲಿ ದಹಿಸಿ ಬೂದಿಯಾದ ಕಟ್ಟಿಗೆಗಳಲ್ಲಿ ಯಾರು ತಾನೇ ಕಟ್ಟಿಗೆಯ ಭೇದವನ್ನು ಹೇಳುತ್ತಾರೆ" -ಎಂದು ಶ್ರೀ ರೇಣುಕಾಚಾರ್ಯರೂ ಸಹ ಶಿವಭಕ್ತರ ವಿಷಯದಲ್ಲಿ ಜಾತಿಭೇದವನ್ನು ನಿರಾಕರಿಸಿದ್ದಾರೆ. ಈ ಪ್ರಕಾರವಾಗಿಯೇ ಮಕುಟಾಗಮದಲ್ಲಿಯೂ ಸಹ-

> ದ್ವಿಜೋಽಪಿ ಮಾಯೀ ತ್ಯಾಜ್ಯಸ್ತು ಮ್ಲೇಚ್ಛೋ ಗ್ರಾಹ್ಯೋ ಹ್ಯಮಾಯಕಃ।
> ಸ ಪ್ರಿಯಸ್ತು ಮಹೇಶಸ್ಯ ಚತುರ್ವೇದೋ ನ ದಾಂಭಿಕಃ॥
> ಬ್ರಾಹ್ಮಣೇನ ಕೃತಂ ಪಾಪಂ ಶೂದ್ರೇಣ ಸುಕೃತಂ ಕೃತಮ್।
> ಕಿಂ ತತ್ರ ಕಾರಣಂ ಜಾತಿರ್ಧರ್ಮಾಧರ್ಮೇಷು ಶಸ್ಯತೇ॥[೨೪]

"ಮಾಯೀಯ ಮಲಯುಕ್ತನಾದ ದ್ವಿಜನೂ ಕೂಡ ದೀಕ್ಷೆಗೆ ಅರ್ಹನಲ್ಲ; ಮಾಯಾಮಲ ರಹಿತನಾದ ಮ್ಲೇಚ್ಛನೂ ಸಹ ಶಿವನಿಗೆ ಪ್ರಿಯನು. ಚತುರ್ವೇದಿಯಾಗಿದ್ದರೂ ಡಾಂಭಿಕ ಗುಣಗಳಿಂದ ಕೂಡಿದವನು ದೀಕ್ಷಾರ್ಹನಲ್ಲ,

---

[೨೨(ಎ)] ಬ್ರಹ್ಮಸೂತ್ರ ಶ್ರೀಕರಭಾಷ್ಯ, ಭೂಮಿಕೆ, ಪು. ೨೯

[೨೩] ಸಿ.ಶಿ, ೧೧.೧೦-೧೧, ಪು. ೨೦೯, ಸೋಲಾಪುರ ಪ್ರಕಾಶನಮ್, ೧೯೦೫.

[೨೪] ತಂತ್ರಾಲೋಕ ಟೀಕಾ, ಭಾಗ-೯, ಆಹ್ನಿಕ-೧೫, ಪು. ೨೫೫

ಬ್ರಾಹ್ಮಣನಿಂದ ಪಾಪವು ಮಾಡಲ್ಪಟ್ಟಿದೆ. ಶೂದ್ರನು ಪುಣ್ಯವನ್ನು ಮಾಡಿದ್ದಾನೆ. ಧರ್ಮಾಧರ್ಮಗಳ ವಿಷಯದಲ್ಲಿ ಜಾತಿಯು ಶ್ರೇಷ್ಠವೆಂದು ನಿರ್ಣಯಿಸಲ್ಪಡುವುದಿಲ್ಲ" ಮೊದಲಾದವುಗಳಿಂದ ಶಿವದೀಕ್ಷೆಯಲ್ಲಿ ವರ್ಣಾಶ್ರಮ ವ್ಯವಸ್ಥೆಯು ನಿರಾಕರಿಸಲ್ಪಟ್ಟಿದೆ. ಆದುದರಿಂದ ಶಿವಸಿದ್ಧಾಂತವನ್ನನುಸರಿಸಿರುವ ವೀರಶೈವ ಸಿದ್ಧಾಂತದಲ್ಲಿ ಪಿತೃ-ಪಿತಾಮಹರಿಂದ ಬರುವ ವಂಶಪಾರಂಪರ್ಯ ವರ್ಣವ್ಯವಸ್ಥೆಯನ್ನು ಬಿಟ್ಟು ಶಿವನಿಂದ ಉಪದೇಶಿಸಲ್ಪಟ್ಟ ವರ್ಣಾಶ್ರಮ ವ್ಯವಸ್ಥೆಯ ರೀತ್ಯಾ ಶಿವಸಂಸ್ಕಾರವುಳ್ಳ ಶಿವಭಕ್ತರನ್ನು ಪರೀಕ್ಷಿಸಿ ಶಿವದೀಕ್ಷೆಯನ್ನು ನೀಡಬೇಕು.

ಶಿಷ್ಯನ ಪರೀಕ್ಷೆ

ಗುರುಸ್ತು ಸ್ವಾಶ್ರಿತಂ ಶಿಷ್ಯಂ ಪರೀಕ್ಷೇದ್ ವರ್ಷಮೇಕಕಮ್।
ಬ್ರಾಹ್ಮಣಂ ಕ್ಷತ್ರಿಯಂ ವೈಶ್ಯಂ ದ್ವಿತ್ರಿವರ್ಷಕಮೇವ ವಾ॥
ಪ್ರಾಣದ್ರವ್ಯಪ್ರದಾನಾದ್ಯೈರಾದೇಶೈಶ್ಚ ಸಮಾಸಮೈಃ।
ಉತ್ತಮಾಂಶ್ಚಾಧಮೇ ಕೃತ್ವಾ ನೀಚಾನುತ್ತಮಕರ್ಮಣಿ॥
ಆಕೃಷ್ಟಾಸ್ತಾಡಿತಾ ವಾ ಯೇ ವಿಷಾದಂ ನೈವ ಯಾಂತ್ಯಪಿ।
ತೇ ಯೋಗ್ಯಾ ಸತತಂ ಶುದ್ಧಾಃ ಶಿವಸಂಸ್ಕಾರಕರ್ಮಣಿ॥[೭೫]

"ಗುರುವು ತನ್ನನ್ನು ಆಶ್ರಯಿಸಿರುವ ಶಿಷ್ಯರಲ್ಲಿ ಬ್ರಾಹ್ಮಣನನ್ನು ಒಂದು ವರ್ಷ ಕಾಲ, ಕ್ಷತ್ರಿಯನನ್ನು ಎರಡು ವರ್ಷ ಮತ್ತು ವೈಶ್ಯನನ್ನು ಮೂರು ವರ್ಷಗಳ ಕಾಲ ಪರೀಕ್ಷಿಸಬೇಕು. ಗುರುವು ಶಿಷ್ಯನಿಗೆ ಆತನ ಪ್ರಾಣ, ದ್ರವ್ಯಾದಿಗಳನ್ನು ನೀಡುವಂತೆ ಆಜ್ಞೆ ಮಾಡಬೇಕು. ಉತ್ತಮ ಜಾತಿಯ ಶಿಷ್ಯನು ನೀಚಕಾರ್ಯವನ್ನೂ, ಕೀಳುಜಾತಿಯ ಶಿಷ್ಯನು ಉತ್ತಮ ಕಾರ್ಯವನ್ನು ಮಾಡುವಂತೆ ಆದೇಶಿಸಬೇಕು. ಯಾವ ಶಿಷ್ಯನು ಗುರುವಿನ ನಿಂದನೆ, ದೈಹಿಕ ಶಿಕ್ಷೆ ಮೊದಲಾದವುಗಳನ್ನು ತಾಳ್ಮೆಯಿಂದ ಸಹಿಸುತ್ತಾನೆಯೋ ಅವನು ಶುದ್ಧ ಹಾಗೂ ಶಿವದೀಕ್ಷೆಗೆ ಅರ್ಹನೆಂದು ತಿಳಿಯಬೇಕು" -ಎಂಬ ಆಗಮೋಕ್ತಿಯ ರೀತ್ಯಾ ಶಿವದೀಕ್ಷೆಯನ್ನು ಸ್ವೀಕರಿಸಲು ಆಗಮಿಸುವ ಶಿಷ್ಯರನ್ನು ಗುರುವು ಸರಿಯಾಗಿ ಪರೀಕ್ಷಿಸಿ, ಆ ಪರೀಕ್ಷೆಯಲ್ಲಿ ಯಾರು ಉತ್ತೀರ್ಣರಾಗುತ್ತಾರೆಯೋ ಅವರಿಗೆ ಮಲಪಾಶನಿವಾರಕವೂ ಮತ್ತು ಶಿವಜ್ಞಾನಪ್ರದವೂ ಆದ ದೀಕ್ಷಾಸಂಸ್ಕಾರವನ್ನು ಅನುಗ್ರಹಿಸಬೇಕು.

ದೀಕ್ಷೆಯ ಸ್ವರೂಪ ಮತ್ತು ಪ್ರಕಾರಗಳು

ವೀರಶೈವ ಸಿದ್ಧಾಂತದಲ್ಲಿ ಶಕ್ತಿಪಾತಾದಿಗಳೊಂದಿಗೆ ಶ್ರೀಗುರುವಿನ ಕರುಣಾ ಕಟಾಕ್ಷದಿಂದ ಲಬ್ಧವಾದ ಲಿಂಗಧಾರಣರೂಪದ ಶಿವದೀಕ್ಷೆಯನ್ನು ಪಡೆದವರೇ ಬ್ರಹ್ಮವಿದ್ಯೆಯನ್ನು ಸ್ವೀಕರಿಸಲು ಅರ್ಹರಾಗಿರುವುದರಿಂದ ಆಗಮಾದಿ ಶಾಸ್ತ್ರಗಳಲ್ಲಿ

---

೭೫. ಚ.ಜ್ಞಾ, ಕ್ರಿ.ಪಾ, ೨.೭೬-೭೮

ಪ್ರತಿಪಾದಿತವಾಗಿರುವ ದೀಕ್ಷೆಯ ಸ್ವರೂಪ ಮತ್ತು ಪ್ರಕಾರಗಳನ್ನು ಈಗ ನಿರೂಪಿಸಲಾಗುವುದು.

ದೀಯತೇ ಲಿಂಗಸಂಬಂಧಃ ಕ್ಷೀಯತೇ ಚ ಮಲತ್ರಯಮ್।
ದೀಯತೇ ಕ್ಷೀಯತೇ ಯಸ್ಮಾತ್ ಸಾ ದೀಕ್ಷೇತಿ ನಿಗದ್ಯತೇ॥[೨೬]

"ಲಿಂಗಸಂಬಂಧವನ್ನುಂಟುಮಾಡುವ, ಮಲತ್ರಯವನ್ನು ನಾಶಗೊಳಿಸುವ ವಿಧಾನಕ್ಕೆ ದೀಕ್ಷೆಯೆಂದು ಕರೆಯುತ್ತಾರೆ. ದೀಯತೇ (ಕೊಡಲ್ಪಡುತ್ತದೆ) ಮತ್ತು ಕ್ಷೀಯತೇ (ನಾಶ ಮಾಡಲ್ಪಡುತ್ತದೆ) ಎಂದು ಇದನ್ನು ದೀಕ್ಷೆಯೆಂದು ಕರೆಯಲಾಗುತ್ತದೆ."

ದೀಯತೇ ಚ ಶಿವಜ್ಞಾನಂ ಕ್ಷೀಯತೇ ಪಾಶಬಂಧನಮ್।
ಯಸ್ಮಾದತಃ ಸಮಾಖ್ಯಾತಾ ದೀಕ್ಷೇತೀಯಂ ವಿಚಕ್ಷಣೈಃ॥[೨೭]

"ಯಾವುದು ಶಿವಜ್ಞಾನವನ್ನುಂಟುಮಾಡುವುದೋ ಮತ್ತು ಮಲತ್ರಯಕರ್ಮ ಬಂಧವನ್ನು ನಾಶಮಾಡುವುದೋ ಅದನ್ನು ಶಾಸ್ತ್ರಜ್ಞರು ದೀಕ್ಷೆಯೆಂದು ಕರೆಯುತ್ತಾರೆ" -ಮುಂತಾಗಿ ಕಾರಣಾಗಮ ಹಾಗೂ ಸಿದ್ಧಾಂತ ಶಿಖಾಮಣಿಗಳಲ್ಲಿ ದೀಕ್ಷೆಯ ಲಕ್ಷಣವು ಉಕ್ತವಾಗಿದೆ. ಈ ಶ್ಲೋಕಗಳ ತಾತ್ಪರ್ಯವಿಷ್ಟು- "ದೀಕ್ಷಾ" ಶಬ್ದದಲ್ಲಿ ದಾ=ದಾನೇ, ಕ್ಷೀ=ಕ್ಷಯ (ನಾಶ) ಎಂಬ ಎರಡು ಧಾತುಗಳಿವೆ. ದಾ=ದಾನೇ ಎಂಬ ಧಾತುವಿನಿಂದ ಶಿವಜ್ಞಾನವು ಅರ್ಥಾತ್ ಪರಬ್ರಹ್ಮ-ಪರಶಿವ ಎಂಬ ಹೆಸರುಳ್ಳ ಮಹಾಲಿಂಗದ ಜ್ಞಾನವು ಯಾವುದರಿಂದ ಕೊಡಲ್ಪಡುತ್ತದೆಯೋ, ಹಾಗೆಯೇ ಕ್ಷಾ=ಕ್ಷಯ (ನಾಶ) ಎಂಬ ಧಾತುವಿನಿಂದ ಪಾಶಬಂಧನದ ನಾಶವು, ಅರ್ಥಾತ್ ಆಣವ, ಕಾರ್ಮಿಕ ಮತ್ತು ಮಾಯೆ ಎಂಬ ಮಲತ್ರಯಗಳು ಯಾವುದರಿಂದ ನಾಶಮಾಡಲ್ಪಡುತ್ತವೆಯೋ, ಅಂತಹ ಜ್ಞಾನಕ್ರಿಯಾರೂಪ ಶಕ್ತಿಯೇ "ದೀಕ್ಷಾ" ಎಂದು ಹೇಳಲ್ಪಟ್ಟಿದೆ. ಗುರುವಿನ ಕೃಪಾಕಟಾಕ್ಷದಿಂದ ಪ್ರಾಪ್ತವಾಗುವಂತಹ ವಿಲಕ್ಷಣವಾದ ಸಂಸ್ಕಾರವಿದು. ಈ ಸಂಸ್ಕಾರದಿಂದ ಯೋಗಾಂಗ, ಭೋಗಾಂಗ, ತ್ಯಾಗಾಂಗಗಳೆಂಬ ಕಾರಣ, ಸೂಕ್ಷ್ಮ ಮತ್ತು ಸ್ಥೂಲಗಳೆಂಬ ಶರೀರತ್ರಯಗಳಲ್ಲಿರುವ ಆಣವ, ಮಾಯೀಯ ಮತ್ತು ಕಾರ್ಮಿಕಗಳೆಂಬ ಮಲತ್ರಯಗಳ ನಾಶದಿಂದ ಸಾಧಕನಿಗೆ ಭಾವಲಿಂಗ, ಪ್ರಾಣಲಿಂಗ ಮತ್ತು ಇಷ್ಟಲಿಂಗಗಳೆಂಬ ಲಿಂಗತ್ರಯಗಳು ಪ್ರಾಪ್ತವಾಗುತ್ತವೆ. ಅದನ್ನು ಮಾಯಿದೇವನು ಹೀಗೆ ಪ್ರತಿಪಾದಿಸಿದ್ದಾನೆ-

ತನುತ್ರಯಗತಾನಾದಿಮಲತ್ರಯಮಸೌ ಗುರುಃ।
ದೀಕ್ಷಾತ್ರಯೇಣ ನಿರ್ದಗ್ಧ್ವಾ ಲಿಂಗತ್ರಯಮುಪಾದಿಶತ್॥[೨೮]

"ಶ್ರೀಗುರುವು ಸ್ಥೂಲ, ಸೂಕ್ಷ್ಮ ಮತ್ತು ಕಾರಣಗಳೆಂಬ ಶರೀರತ್ರಯಗಳಲ್ಲಿರುವ ಅನಾದಿಯಾದ ಆಣವಾದಿ ಮಲತ್ರಯಗಳನ್ನು ದೀಕ್ಷಾತ್ರಯಗಳಿಂದ ದಹಿಸಿ ಲಿಂಗತ್ರಯಗಳನ್ನು (ಶಿಷ್ಯನಿಗೆ) ಅನುಗ್ರಹಿಸಬೇಕು."

---

೨೬. ಕಾ.ಆ, ಕ್ರಿ.ಪಾ, ೧-೧೨
೨೭. ಸಿ.ಶಿ, ೬.೧೧
೨೮. ಅ.ಸೂ, ೫.೫೨

ಮಲತ್ರಯಗಳನ್ನು ನಾಶಪಡಿಸುವ ಸಂಸ್ಕಾರವು ತ್ರಿವಿಧವಾದುದರಿಂದ ತ್ರಿವಿಧ ದೀಕ್ಷೆಗಳನ್ನು ಅಂಗೀಕರಿಸಲಾಗಿದೆ. ಅದನ್ನು ಕಾರಣಾಗಮವು ಹೀಗೆ ಪ್ರತಿಪಾದಿಸುತ್ತದೆ-

ಸಾ ದೀಕ್ಷಾ ಪರಮಾ ಶೈವೀ ತ್ರಿಧಾ ಭವತಿ ನಿರ್ಮಲಾ।
ಏಕಾ ವೇಧಾತ್ಮಿಕಾ ಸಾಕ್ಷಾದನ್ಯಾ ಮಂತ್ರಾತ್ಮಿಕಾ ಮತಾ।
ಕ್ರಿಯಾತ್ಮಿಕಾ ಪರಾ ಕಾಚಿದೇವಮೇವ ತ್ರಿಧಾ ಭವೇತ್॥[೭೯]

"ಶ್ರೇಷ್ಠವೂ, ನಿರ್ಮಲವೂ ಆದ ಈ ಶೈವೀದೀಕ್ಷೆಯು ಮೂರು ವಿಧವಾಗಿದೆ- ಮೊದಲನೆಯದು ವೇಧಾದೀಕ್ಷೆ, ಎರಡನೆಯದು ಮಾಂತ್ರೀದೀಕ್ಷೆ ಮತ್ತು ಮೂರನೆಯದು ಕ್ರಿಯಾದೀಕ್ಷೆ."

ಈಗ ಕ್ರಮವಾಗಿ ಈ ಮೂರು ವಿಧ ದೀಕ್ಷೆಯ ಸ್ವರೂಪವನ್ನು ಪರಾಮರ್ಶಿಸಲಾಗುವುದು.

೧. ವೇಧಾದೀಕ್ಷೆ

"ಹಸ್ತಮಸ್ತಕಸಂಯೋಗಾದ್ ದೃಷ್ಟೇರ್ವೇಧೇತಿ ಕೀರ್ತ್ಯತೇ"[೮೦] (ಹಸ್ತಮಸ್ತಕ ಸಂಯೋಗದಿಂದಲೂ ಮತ್ತು ದೃಷ್ಟಿ(ನಿರೀಕ್ಷಣ)ಯಿಂದಲೂ ಬೋಧಿಸುವುದಕ್ಕೆ ವೇಧಾದೀಕ್ಷೆಯೆನ್ನುತ್ತಾರೆ) ಎಂಬ ಆಗಮವಾಕ್ಯದಂತೆ ಶ್ರೀಗುರುವು ಶಿಷ್ಯನನ್ನು ಕೃಪಾದೃಷ್ಟಿಯಿಂದ ನೋಡಿ, ಆತನ ಮಸ್ತಕದ ಮೇಲೆ ಹಸ್ತವನ್ನಿಟ್ಟು, ಆತನ ಮನಸ್ಸಿನಲ್ಲಿ ಚಿನ್ಮಯಸ್ವರೂಪಜ್ಞಾನಕಾರಕವಾದ ಸಂಸ್ಕಾರವಿಶೇಷವನ್ನುಂಟುಮಾಡುವುದು ವೇಧಾದೀಕ್ಷೆ ಎಂದು ಕರೆಯಲ್ಪಟ್ಟಿದೆ. ಅದನ್ನು ಶ್ರೀ ರೇಣುಕ ಭಗವತ್ಪಾದರು ಈ ಪ್ರಕಾರವಾಗಿ ನಿರೂಪಿಸಿದ್ದಾರೆ-

ಗುರುರಾಲೋಕಮಾತ್ರೇಣ ಹಸ್ತಮಸ್ತಕಯೋಗತಃ।
ಯಃ ಶಿವತ್ವಸಮಾವೇಶೋ ವೇಧಾದೀಕ್ಷೇತಿ ಸಾ ಮತಾ॥[೮೧]

"ಶ್ರೀಗುರುವಿನ ಕೃಪಾಕಟಾಕ್ಷದಿಂದಲೂ ಮತ್ತು ಹಸ್ತಮಸ್ತಕ ಸಂಯೋಗದಿಂದಲೂ ಯಾವ ಜ್ಞಾನಕ್ರಿಯಾತ್ಮಕ ಶಿವತತ್ತ್ವ ಸಮಾವೇಶವು ಉತ್ಪನ್ನವಾಗುವುದೋ, ಅದು ವೇಧಾದೀಕ್ಷೆಯೆನಿಸುವುದು."

ಈ ದೀಕ್ಷೆಯಿಂದ ಶಿಷ್ಯನ ಆಣವ ಮಲವು ನಾಶವಾಗಿ, "ಶಿವೋಽಹಂ" ಎಂಬ ಭಾವನೆಯೇ ಭಾವಲಿಂಗವೆಂದು ಕರೆಯಲ್ಪಟ್ಟಿದೆ. ಈ ರೀತಿಯಾಗಿ ವೇಧಾದೀಕ್ಷೆಯಿಂದ ಶಿಷ್ಯನಲ್ಲಿ ಆಣವಮಲ ನಾಶವಾದರೂ, "ಶಿವೋಽಹಂ" ಎಂಬ ಭಾವನೆಯಿಂದ ಶಿವ-ಜೀವರ ಸಮರಸರೂಪ ಯೋಗಪ್ರಾಪ್ತವಾಗುತ್ತದೆ ಎಂಬ ಕಾರಣದಿಂದ

---

[೭೯] ಕಾ.ಆ, ಕ್ರಿ.ಪಾ, ೧.೧೩

[೮೦] ಕಾ.ಆ, ಕ್ರಿ.ಪಾ, ೧.೧೪

[೮೧] ಸಿ.ಶಿ, ೬.೧೩

ವೇಧಾದೀಕ್ಷೆಯ ಪರಿಣಾಮದಿಂದುಂಟಾದ "ಶಿವೋಽಹಂ" ಎಂಬ ಭಾವರೂಪ ಶುದ್ಧಜೀವವಾದ ಈ ಭಾವಲಿಂಗವು ಈ ಸಿದ್ಧಾಂತದಲ್ಲಿ "ಯೋಗಾಂಗ" ಎಂದು ಕರೆಯಲ್ಪಟ್ಟಿದೆ. ಆದುದರಿಂದಲೇ-

ಸಂಯುಯೋಜ ತ್ರಿಧಾಭೂತಂ ಪರಾದೀಕ್ಷಾಬಲೇನ ತು।
ಯೋಗಾಂಗೇ ಭಾವಲಿಂಗಂ ತು ವೇಧಾದೀಕ್ಷಾಬಲೇನ ವೈ॥[೮೨]

"ತ್ರಿವಿಧ ದೀಕ್ಷೆಗಳ ಬಲದಿಂದ ತ್ರಿವಿಧ ಲಿಂಗಗಳನ್ನು ತ್ರಿವಿಧ ಅಂಗಗಳಲ್ಲಿ ಸಂಯೋಜಿಸು. ವೇಧಾದೀಕ್ಷೆಯ ಬಲದಿಂದ ಭಾವಲಿಂಗವನ್ನು ಯೋಗಾಂಗದಲ್ಲಿ ಸಂಯೋಜಿಸು" -ಎಂದು ಮಾಯಿದೇವನೂ ಸಹ ವೇಧಾದೀಕ್ಷೆಯಿಂದ ಶಿಷ್ಯನು ಯೋಗಾಂಗದಲ್ಲಿ ಭಾವಲಿಂಗವನ್ನು ಧರಿಸಬೇಕೆಂದು ಉಪದೇಶಿಸಿದ್ದಾನೆ. ವೇಧಾದೀಕ್ಷೆಯು ಏಳು ಬಗೆಯ ಉಪದೇಶಗಳಿಂದ ಗರ್ಭಿತವಾಗಿದೆ.

ವೇಧಾದೀಕ್ಷೆಯ ಏಳು ವಿಧ ಉಪದೇಶಗಳು

ಸಮಯ, ನಿಸ್ಸಂಸಾರ, ನಿರ್ವಾಣ, ತತ್ತ್ವ, ಅಧ್ಯಾತ್ಮ, ತತ್ತ್ವ ವಿಶೋಧನ ಮತ್ತು ತತ್ತ್ವಬೋಧ ಎಂಬ ಹೆಸರಿನ ವೇಧಾದೀಕ್ಷಾಂತರ್ಗತವಾದ ಏಳು ಉಪದೇಶಗಳು ಕಾರಣಾಗಮದಲ್ಲಿ ನಿರೂಪಿತವಾಗಿವೆ.[೮೩] ಅವುಗಳ ಸ್ವರೂಪವನ್ನು ಆ ಆಗಮದ ಆಧಾರದ ಮೇಲೆ ಪ್ರತಿಪಾದಿಸಲಾಗುವುದು.

೧. ಸಮಯೋಪದೇಶ : "ಸಮಯಃ ಶಪಥಾಚಾರಕಾಲಸಿದ್ಧಾಂತಸಂವಿದಃ"[೮೪] ಎಂಬ ಅಮರಸಿಂಹನ ವಾಕ್ಯದಲ್ಲಿನ ಅನೇಕಾರ್ಥವುಳ್ಳ 'ಸಮಯ' ಶಬ್ದಕ್ಕೆ 'ಸಿದ್ಧಾಂತ' ಎಂಬ ಅರ್ಥವು ಪ್ರಕೃತದಲ್ಲಿ ಅನ್ವಯವಾಗುತ್ತದೆ. ವೇಧಾದೀಕ್ಷಾ ವಿಧಾನ ಕಾಲದಲ್ಲಿ ಶ್ರೀಗುರುವು ಸಂಯಮ ಸಂಸ್ಕಾರವನ್ನು ಮಾಡುವೆನೆಂದು ಸಂಕಲ್ಪಿಸಿಕೊಂಡು ತನ್ನ ಬಲಹಸ್ತವನ್ನು ಆರು ಬಾರಿ ಷಡಕ್ಷರ ಮಹಾಮಂತ್ರದಿಂದ ಅಭಿಮಂತ್ರಿಸಿ, ಅದನ್ನು ಶಿವಹಸ್ತವೆಂದು ಭಾವಿಸಿ ಶಿಷ್ಯನ ತಲೆಯ ಮೇಲಿಟ್ಟು "ಅಯಂ ಮೇ ಹಸ್ತೋ ಭಗವಾನ್"[೮೫] (ಭಗವಂತನು ನನ್ನ ಹಸ್ತಗತನು) ಎಂಬ ಮಂತ್ರವನ್ನು ಪಠಿಸುತ್ತಾ ಶಿಷ್ಯನನ್ನು ಕೃಪಾದೃಷ್ಟಿಯಿಂದ ನೋಡುತ್ತಾ-

ಹಿತ್ವಾ ಬಂಧುಜನೇ ಪ್ರೀತಿಂ ತಾಂ ಭಕ್ತೇಷು ಸ್ಥಿರಾಂ ಕುರು।
ಏವಂ ಸಮಯಮಾದಿಶ್ಯ ನಿಸ್ಸಂಸಾರಾಂ ನಿಬೋಧಯೇತ್॥[೮೬]

---

[೮೨] ಅ.ಸೂ, ೫.೫೭

[೮೩] ಕಾ.ಆ, ಕ್ರಿ.ಪಾ, ೧.೯೬-೯೭

[೮೪] ಅಮರಕೋಶ, ನಾನಾರ್ಥವರ್ಗಃ, ೧೩೫೦ (ಸುವಿದ್ಯಾ ಪ್ರಕಾಶನ, ಬೆಂಗಳೂರು, ೧೯೯೬)

[೮೫] ಋಗ್ವೇದ, ೧೦-೬೦-೧೨

[೮೬] ಕಾ.ಆ, ಕ್ರಿ.ಪಾ, ೧.೧೦೧

"ಶಿವದೀಕ್ಷಾ ಸಂಸ್ಕಾರವನ್ನು ಹೊಂದುವುದಕ್ಕೆ ಮೊದಲು ತನ್ನ ಬಂಧುಗಳಲ್ಲಿ ತೋರುತ್ತಿದ್ದ ಪ್ರೀತಿಯನ್ನು ಇನ್ನು ಮುಂದೆ ಶಿವಭಕ್ತರಲ್ಲಿ ತೋರತಕ್ಕದ್ದು" ಎಂದು ಉಪದೇಶಿಸುವುದೇ ವೇಧಾದೀಕ್ಷಾಂತರ್ಗತವಾದ ಸಮಯೋಪದೇಶವೇ ಅರ್ಥಾತ್ ಸಿದ್ಧಾಂತವೇ ಸಮಯ ದೀಕ್ಷೆಯೆಂದು ಕರೆಯಲ್ಪಟ್ಟಿದೆ.

೨. **ನಿಸ್ಸಂಸಾರೋಪದೇಶ :** ಶರೀರೇಂದ್ರಿಯಾದಿಗಳಲ್ಲಿ ಮಮಕಾರ ಬುದ್ಧಿಯಿಂದ ಮಾಡುವ ವ್ಯವಹಾರವೇ ಸಂಸಾರ. ಸಂಸಾರಿಗಳು ಯಾವಾಗಲೂ ಶರೀರಾದ್ಯುಪಚಾರಗಳಲ್ಲಿ ನಿರತರಾಗಿರುತ್ತಾರೆ. ಇಂತಹ ಪ್ರಾಕೃತಿಕೋಪಚಾರವನ್ನು ಪರಿಹರಿಸಿ ಭಗವಂತನ ಪೂಜೋಪಚಾರವನ್ನು ಉಪದೇಶಿಸುವುದೇ ನಿಸ್ಸಂಸಾರೋಪದೇಶ ಅಥವಾ ನಿಸ್ಸಂಸಾರ ದೀಕ್ಷೆಯೆಂದು ಕರೆಯಲ್ಪಟ್ಟಿದೆ. ಅದನ್ನು ಕಾರಣಾಗಮವು-

ದೇಹೇಂದ್ರಿಯಾದಿಸಂಸಾರಂ ಪರಿಹೃತ್ಯ ಸದಾ ಮಮ।
ಪೂಜೋಪಚಾರಃ ಸಂಸಾರ ಇತಿ ಭಾವಯ ಚೇತಸಿ॥[೮೭]

"ದೇಹ-ಇಂದ್ರಿಯ ಮುಂತಾದ ಸಂಸಾರವನ್ನು ತ್ಯಜಿಸಿ, ಶಿವಪೂಜೆಯೇ ಸಂಸಾರವೆಂದು ಮನಸ್ಸಿನಲ್ಲಿ ಭಾವಿಸು" -ಎಂದು ನಿರೂಪಿಸಿದೆ.

೩. **ನಿರ್ವಾಣೋಪದೇಶ :** ನಿರ್ವಾಣವೆಂದರೆ ಮುಕ್ತಿ. "ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ"[೮೮] (ಮನವೇ ಮನುಷ್ಯರ ಬಂಧಮೋಕ್ಷಗಳಿಗೆ ಕಾರಣ) ಎಂಬ ಉಪನಿಷದ್ವಾಕ್ಯಾನುಸಾರವಾಗಿ ವಿಷಯಾಸಕ್ತವಾದ ಮನಸ್ಸು ಭವಬಂಧನದಿಂದ ಬಿಡುಗಡೆ ಹೊಂದುವುದೇ ನಿರ್ವಾಣ. ಆದುದರಿಂದ ತಾಪತ್ರಯ ಭಯಾಕುಲವಾದ ಸಂಸಾರದಲ್ಲಿ ಮನಸ್ಸನ್ನು ತೊಡಗಿಸಬೇಡ, ಪ್ರಯತ್ನಪೂರ್ವಕವಾಗಿ ಅದನ್ನು ನಿಗ್ರಹಿಸು ಎಂದು ತಿಳಿಸುವ ಉಪದೇಶವೇ ನಿರ್ವಾಣೋಪದೇಶ ಅಥವಾ ನಿರ್ವಾಣದೀಕ್ಷೆ. ಅದರ ಸ್ವರೂಪವು ಕಾರಣಾಗಮದಲ್ಲಿ ಈ ರೀತಿಯಾಗಿದೆ:

ಇತ್ಯಾದಿಶ್ಯ ಚ ದದ್ಯಾಚ್ಚ ದೀಕ್ಷಾಂ ನಿರ್ವಾಣಸಂಜ್ಞಿತಾಮ್।
ಮಲತ್ರಯಸಮುದ್ಭೂತೇ ತಾಪತ್ರಯಭಯಾಕುಲೇ॥
ದುರಂತೇ ದುರ್ಭವೋಪಾಂತೇ ಮನೋ ನ ಕುರು ಯತ್ನತಃ।
ಇತಿ ನಿರ್ವಾಣಮಾದಿಶ್ಯ......................................॥[೮೯]

"ಆಣವಾದಿ ಮಲತ್ರಯಗಳಿಂದ ಉತ್ಪನ್ನವಾಗುವ (ಆಧಿಭೌತಿಕ, ಆಧಿದೈವಿಕ ಮತ್ತು ಆಧ್ಯಾತ್ಮಿಕ ಎಂಬ) ತಾಪತ್ರಯದ ಭಯದಿಂದ ವ್ಯಾಕುಲಗೊಂಡ, ದುರಂತಕರವಾದ, ದುಃಖಮಯ ಭವದ ಕಡೆ ಪ್ರಯತ್ನಪೂರ್ವಕವಾಗಿ ಮನಸ್ಸನ್ನು ತಿರುಗಿಸದಿರು" ಎಂದು ನಿರ್ವಾಣದೀಕ್ಷೆಯನ್ನು ಉಪದೇಶಿಸಬೇಕು."

---

೮೭. ಕಾ.ಆ, ಕ್ರಿ.ಪಾ, ೧.೧೦೧-೧೦೨

೮೮. ಬ್ರಹ್ಮಬಿಂದೂಪನಿಷತ್, ೨; ಶಾಟ್ಯಾಯ ೧

೮೯. ಕಾ.ಆ, ಕ್ರಿ.ಪಾ, ೧.೧೦೨-೧೦೩

೪. ತತ್ತ್ವೋಪದೇಶ : "ಅನಾರೋಪಿತಂ ರೂಪಂ ತತ್ತ್ವಮ್" (ಆರೋಪಿತವಾಗದ ರೂಪವೇ ತತ್ತ್ವ) ಎಂಬ ಉಕ್ತಿಯಂತೆ ವೀರಶೈವ ಸಿದ್ಧಾಂತದಲ್ಲಿ ಪ್ರಪಂಚದ ಸೃಷ್ಟಿ-ಸ್ಥಿತಿ-ಸಂಹಾರಾದಿಗಳಿಗೆ ಕಾರಣೀಭೂತವಾದುದೇ ಲಿಂಗತತ್ತ್ವ. ಲಿಂಗತತ್ತ್ವದ ಅಂಶಭೂತವೇ ಅಂಗತತ್ತ್ವ. ಅನಾದಿಕಾಲದಿಂದಲೂ ಪರಸ್ಪರ ಭಿನ್ನವಾಗದ ಲಿಂಗಾಂಗ ತತ್ತ್ವಗಳ ಸಾಮರಸ್ಯವನ್ನು ಉಪದೇಶಿಸುವುದನ್ನು ತತ್ತ್ವೋಪದೇಶ ಅಥವಾ ತತ್ತ್ವದೀಕ್ಷೆ ಎಂದು ಕರೆಯಲಾಗಿದೆ. ಕಾರಣಾಗಮದಲ್ಲಿ ಈ ದೀಕ್ಷೆಯ ಸ್ವರೂಪವು ಇಂತಿದೆ-

> ....ದದ್ಯಾತ್ ತತ್ತ್ವಾಭಿಧಾಯಿನೀಮ್।
> ಲಿಂಗಾಂಗತತ್ತ್ವಂ ವಿಜ್ಞಾಯ ಲಿಂಗಸಾಯುಜ್ಯವಾನ್ ಭವ।
> ಉಪದಿಶ್ಯೈವಮ್..॥[೬೦]

"ಲಿಂಗಾಂಗ ತತ್ತ್ವವನ್ನರಿತು ಲಿಂಗದೊಂದಿಗೆ ಸಾಯುಜ್ಯವನ್ನು ಹೊಂದು" ಎಂದು ತತ್ತ್ವೋಪದೇಶದೀಕ್ಷೆಯನ್ನು ನೀಡಬೇಕು."

೫. ಅಧ್ಯಾತ್ಮೋಪದೇಶ : ವೀರಶೈವ ಸಿದ್ಧಾಂತದಲ್ಲಿ ಮೋಕ್ಷಾಕಾಂಕ್ಷಿಗಳೆಲ್ಲರೂ ಶಿವಲಿಂಗದ ಉಪಾಸನೆ ಮಾಡುತ್ತಾರೆ. ಉಪಾಸ್ಯವಾದ ಆ ಲಿಂಗದಲ್ಲಿ ತನ್ನ ಪ್ರಾಣವನ್ನು, ತನ್ನ ಪ್ರಾಣದಲ್ಲಿ ಆ ಲಿಂಗವನ್ನು, ಈ ಪ್ರಕಾರ ಪರಸ್ಪರ ಸಾಮರಸ್ಯವನ್ನು ಮಾಡಿಕೊಂಡವನು ಲಿಂಗಪ್ರಾಣಿಯಾಗುತ್ತಾನೆ. ಆತನ ಜೀವನವು ಆಧ್ಯಾತ್ಮಿಕವಾಗುತ್ತದೆ. ಈ ವಿಧವಾದ ಆಧ್ಯಾತ್ಮೋಪದೇಶವೇ ಅಧ್ಯಾತ್ಮದೀಕ್ಷೆ:

> ....ಅಥ ಚ ದದ್ಯಾದಧ್ಯಾತ್ಮಸಂಜ್ಞಿತಾಮ್।
> ಪ್ರಾಣೇ ಲಿಂಗಂ ಪ್ರತಿಷ್ಠಾಪ್ಯ ಲಿಂಗೇ ಪ್ರಾಣಂ ನಿಧಾಯ ಚ॥
> ಲಿಂಗಂ ನಿರೀಕ್ಷಮಾಣಃ ಸನ್ ಲಿಂಗಪ್ರಾಣೀ ಸದಾ ಭವ।[೬೧]

"ನಿನ್ನ ಪ್ರಾಣದಲ್ಲಿ ಇಷ್ಟಲಿಂಗವನ್ನು ಪ್ರತಿಷ್ಠಾಪಿಸಿ, ಲಿಂಗದಲ್ಲಿ ಪ್ರಾಣವನ್ನಿರಿಸಿ ಅಲ್ಲಿ ಆ ಇಷ್ಟಲಿಂಗವನ್ನು ನೋಡುತ್ತ ಸದಾ ಲಿಂಗಪ್ರಾಣಿ (ಪ್ರಾಣಲಿಂಗಿ) ಆಗು ಎಂದು ಉಪದೇಶಿಸಿ ಅಧ್ಯಾತ್ಮೋಪದೇಶ ಎಂಬ ದೀಕ್ಷೆಯನ್ನು ನೀಡಬೇಕು."

೬. ತತ್ತ್ವಸಂಶೋಧನೋಪದೇಶ : ವೀರಶೈವ ಸಿದ್ಧಾಂತದಲ್ಲಿ ಖಾದ್ಯ-ಲೇಹ್ಯ-ಚೋಷ್ಯಾದಿ ಆಹಾರ ಪದಾರ್ಥಗಳನ್ನು ಶಿವಲಿಂಗಕ್ಕೆ ನೈವೇದ್ಯ ಮಾಡಿ ಪ್ರಸಾದರೂಪದಿಂದ ಸ್ವೀಕರಿಸಲಾಗುತ್ತದೆ. ಇಷ್ಟೇ ಅಲ್ಲದೆ ವಿಶೇಷರೂಪದಿಂದ ಗಂಧ - ರಸ - ರೂಪ - ಸ್ಪರ್ಶ - ಶಬ್ದ - ತೃಪ್ತಿಯೆಂಬ ಯಾವ ಷಡ್ವಿಷಯಗಳುಂಟೋ ಅವುಗಳನ್ನೂ ಸಹ ಲಿಂಗಾರ್ಪಿತಮಾಡಿ ಪ್ರಸಾದರೂಪದಿಂದ ಸ್ವೀಕರಿಸಬೇಕೆಂದು ಗುರುವು ಉಪದೇಶಿಸುತ್ತಾನೆ. ಇಂತಹ ಪ್ರಸಾದವನ್ನು ಸ್ವೀಕರಿಸಬೇಕಾದರೆ ಪೂರ್ವೋಕ್ತ ವಿಷಯ ಗ್ರಾಹಕಗಳಲ್ಲಿ ಘ್ರಾಣ-ಜಿಹ್ವಾ-ಚಕ್ಷುಸ್-ಚರ್ಮ-ಶ್ರೋತ್ರ-ಮನಸ್ಸೆಂಬ ಷಡಿಂದ್ರಿಯಗಳಲ್ಲಿ

---

[೬೦] ಕಾ.ಆ, ಕ್ರಿ.ಪಾ, ೧.೧೧೩-೧೧೪

[೬೧] ಕಾ.ಆ, ಕ್ರಿ.ಪಾ, ೧.೧೧೪-೧೧೫

ಕ್ರಮವಾಗಿ ಆಚಾರಲಿಂಗ - ಗುರುಲಿಂಗ - ಶಿವಲಿಂಗ - ಜಂಗಮಲಿಂಗ-ಪ್ರಸಾದಲಿಂಗ-ಮಹಾಲಿಂಗವೆಂಬ ಷಡ್‌ಲಿಂಗವನ್ನು ಪರಿಭಾವಿಸಿ, ಆಯಾಯ ವಿಷಯಗಳನ್ನು ಆಯಾ ಇಂದ್ರಿಯಗಳಲ್ಲಿ ಅಧಿಷ್ಠಿತವಾದ ಲಿಂಗಗಳಿಗೆ ನಿವೇದಿಸಬೇಕು. ಇಂತಹ ರಹಸ್ಯೋಪದೇಶವೇ ತತ್ತ್ವಸಂಶೋಧನೋಪದೇಶ ಅಥವಾ ತತ್ತ್ವಸಂಶೋಧನದೀಕ್ಷೆ ಎನಿಸಿದೆ. ಇದು ಕಾರಣಾಗಮದಲ್ಲಿ ಈ ರೀತಿಯಾಗಿ ನಿರೂಪಿತವಾಗಿದೆ-

> ....ತತೋ ದದ್ಯಾತ್ ತತ್ತ್ವಸಂಶೋಧನಾತ್ಮಿಕಾಮ್।
> ಶಬ್ದಾದೀನ್ ವಿಷಯಾನ್ ಸರ್ವಾಂಸ್ತತ್ತದಿಂದ್ರಿಯಗೋಚರಾನ್॥
> ಆಚಾರಲಿಂಗಮುಖ್ಯೇಭ್ಯಃ ಷಡ್ಲಿಂಗೇಭ್ಯಃ ಸಮರ್ಪಯನ್।
> ವರ್ತಸ್ವ ಶುದ್ಧಧೀರ್ನಿತ್ಯಂ ಪ್ರಯತೋಽಪಿ ಜಿತೇಂದ್ರಿಯಃ॥
> ಉಪದಿಶ್ಯೈವಮಪಿ ಚ..।[೯೨]

"ಆಯಾ ಇಂದ್ರಿಯ ಗೋಚರವಾದ ಶಬ್ದಾದಿ ವಿಷಯಗಳನ್ನೆಲ್ಲ ಆಚಾರಾದಿ ಆರು ಲಿಂಗಗಳಿಗೆ ಸಮರ್ಪಿಸಿ, ಯಾವಾಗಲೂ ಶುದ್ಧಬುದ್ಧಿಯಿಂದ ಕೂಡಿದವನಾಗಿ ಇಂದ್ರಿಯಗಳ ಮೇಲೆ ವಿಜಯವನ್ನು ಪಡೆದು ಆಚರಣೆಮಾಡು ಎಂದು ಉಪದೇಶಿಸಿದ ಗುರುವು ತತ್ತ್ವಸಂಶೋಧಿನೀ ಎಂಬ ದೀಕ್ಷೆಯನ್ನು ಅನುಗ್ರಹಿಸಬೇಕು."

೨. **ತತ್ತ್ವೋಪದೇಶ:** ಶಿವ-ಜೀವರ ಐಕ್ಯವನ್ನು ಬೋಧಿಸುವುದೇ ತತ್ತ್ವೋಪದೇಶ. ಅದನ್ನು ಲಿಂಗಾಂಗಸಾಮರಸ್ಯವೆನ್ನುತ್ತಾರೆ. ಶ್ರೀಗುರುವು 'ತತ್ತ್ವಮಸಿ' ಎಂಬ ಮಹಾವಾಕ್ಯದಿಂದ ಲಿಂಗಾಂಗಸಾಮರಸ್ಯವನ್ನು ಉಪದೇಶಿಸುತ್ತಾನೆ. ಹೀಗೆ ಗುರೂಪದೇಶವನ್ನು ಪಡೆದ ಸಾಧಕನು 'ಆ ಪರಬ್ರಹ್ಮವೇ ನಾನು' ಎಂಬ ಭಾವನೆಯಿಂದ ಸದಾ ಧ್ಯಾನಿಸುತ್ತಿರುತ್ತಾನೆ. ಈ ರೀತಿಯಾಗಿ ಲಿಂಗಾಂಗಸಾಮರಸ್ಯವನ್ನು ಬೋಧಿಸುವ ಉಪದೇಶವೇ ತತ್ತ್ವೋಪದೇಶ ಅಥವಾ ತತ್ತ್ವೋಪದೇಶಿನೀದೀಕ್ಷಾ. ಈ ದೀಕ್ಷೆಯ ಸ್ವರೂಪವನ್ನು ಕಾರಣಾಗಮವು ಹೀಗೆ ನಿರೂಪಿಸಿದೆ:

> ....ದದ್ಯಾತ್ ತತ್ತ್ವೋಪದೇಶಿನೀಮ್।
> ಸಚ್ಚಿತ್ಸುಖನಿಜಾಕಾರಂ ಲಿಂಗಂ ಯದ್ ಬ್ರಹ್ಮಸಂಜ್ಞಿತಮ್॥
> ತದಸಿ ತ್ವಮುಪಾಸ್ವಾತಸ್ತದೇವಾಹಮಿತಿ ಧ್ರುವಮ್।
> ವೇಧಾಖ್ಯಯಾ ದೀಕ್ಷಯೈವಂ ಶಿಷ್ಯಮಾದಿಶ್ಯ ದೇಶಿಕಃ॥[೯೩]

"ಇಷ್ಟಲಿಂಗವು ಸಚ್ಚಿದಾನಂದ ಸ್ವರೂಪನಾದ ಆತ್ಮಸ್ವರೂಪವಾಗಿದೆ. ಅದಕ್ಕೆ 'ಬ್ರಹ್ಮ' ಎಂದು ಕರೆಯಲಾಗುತ್ತಿದ್ದು, ಅದು ನೀನೇ ಆಗಿರುವೆ. ಆದುದರಿಂದ ನಿಶ್ಚಯವಾಗಿಯೂ ಶಿವನಾಗಿರುವೆನೆಂದು ಉಪಾಸನೆ ಮಾಡು -ಈ ರೀತಿಯಾಗಿ ಗುರುವು ಶಿಷ್ಯನಿಗೆ ಉಪದೇಶಿಸಿದ ಗುರುವು ವೇಧಾದೀಕ್ಷೆಯನ್ನು ನೀಡಬೇಕು."

---

[೯೨] ಕಾ.ಆ, ಕ್ರಿ.ಪಾ, ೧.೧೦೫-೧೦೭

[೯೩] ಕಾ.ಆ, ಕ್ರಿ.ಪಾ, ೧.೧೦೭-೧೦೮

ಹೀಗೆ ವೇಧಾದೀಕ್ಷೆಯಲ್ಲಿ ಏಳು ಬಗೆಯ ಉಪದೇಶಾತ್ಮಕವಾದ ಅವಾಂತರ ದೀಕ್ಷೆಗಳುಂಟಾಗುತ್ತವೆ. ತೀವ್ರ ಶಕ್ತಿಪಾತಯುಕ್ತರಾದ ಸಾಧಕರಿಗೆ ಈ ದೀಕ್ಷೆಯು ಫಲವನ್ನು ನೀಡುತ್ತದೆ.

೨. ಮಂತ್ರದೀಕ್ಷೆ

“ಗುರುಣೋದೀರಿತಾ ಕರ್ಣೇ ಸಾ ಹಿ ಮಂತ್ರಾತ್ಮಿಕಾ ಭವೇತ್”[೯೪] (ಶಿಷ್ಯನ ಕಿವಿಯಲ್ಲಿ ಪಂಚಾಕ್ಷರೀ ಅಥವಾ ಷಡಕ್ಷರೀ ಮಂತ್ರವನ್ನು ಉಚ್ಚರಿಸಿ ಕೊಡುವ ದೀಕ್ಷೆ ಮಾಂತ್ರೀದೀಕ್ಷೆ ಎನಿಸುತ್ತದೆ). “ಮಂತ್ರದೀಕ್ಷೇತಿ ಸಾ ಪ್ರೋಕ್ತಾ ಮಂತ್ರಮಾತ್ರೋಪದೇಶಿನೀ”[೯೫] (ಶಿವಪಂಚಾಕ್ಷರೀ ಮಂತ್ರೋಪದೇಶವನ್ನು ಮಾಡುವುದರಿಂದ ಅದು ಮಂತ್ರದೀಕ್ಷೆ ಎನಿಸುತ್ತದೆ) ಇತ್ಯಾದಿ ಉಕ್ತಿಗಳ ಅನುಸಾರವಾಗಿ ಶಿವದೀಕ್ಷಾಂಗವಾಗಿ ಗುರುವು ಶಿಷ್ಯನ ಬಲಗಿವಿಯಲ್ಲಿ ರಹಸ್ಯವಾಗಿ ಉಪದೇಶಿಸುವ ಯಾವ ಪಂಚಾಕ್ಷರ ಮಹಾಮಂತ್ರವಿದೆಯೋ ಅದನ್ನು ಮನನಮಾಡುವ ಅಧಿಕಾರವನ್ನು ಕೊಡುವದೇ ಮಂತ್ರದೀಕ್ಷೆ ಎಂದು ಕರೆಯಲ್ಪಟ್ಟಿದೆ. ಶಿವನು ಪಂಚಾಕ್ಷರಮಂತ್ರಸ್ವರೂಪನು. ಆದುದರಿಂದ ಈ ಮಂತ್ರವು ಗುರುವಿನ ಉಪದೇಶದಂತೆ ಪ್ರಾಣಾಯಾಮಪೂರ್ವಕವಾಗಿ ಮತ್ತೆ ಮತ್ತೆ ಮನನ ಮಾಡುವುದರಿಂದ ಸಾಧಕನ ಸೂಕ್ಷ್ಮಶರೀರದಲ್ಲಿ ಅರ್ಥಾತ್ ಮನಸ್ಸಿನಲ್ಲಿರುವ ಮೋಹರೂಪ ಮಾಯೀಯಮಲವು ನಿವಾರಣೆಯಾಗುತ್ತದೆ. ಅಲ್ಲದೆ ಈ ದೀಕ್ಷೆಯಿಂದ ಶಿಷ್ಯನಿಗೆ ‘ನಾನು ಚಿದ್ರೂಪನು’ ಎಂಬ ಜ್ಞಾನೋದಯವಾಗುತ್ತದೆ. ಇದನ್ನೇ ‘ಪ್ರಾಣಲಿಂಗ’ ವೆಂದು ಕರೆಯಲಾಗಿದೆ. ಈ ರೀತಿಯಾಗಿ ಶಿಷ್ಯನ ಮಾಯಾಮಲವನ್ನು ನಿವಾರಿಸಿ ಪ್ರಾಣಲಿಂಗವನ್ನು ಬೋಧಿಸುವ ದೀಕ್ಷೆಯು ಮಂತ್ರದೀಕ್ಷೆಯೆನಿಸಿದೆ. ಇಂತಹ ದೀಕ್ಷಾ ಸಂಪನ್ನನಾದ ಸಾಧಕನು ಎಲ್ಲ ಆಹಾರ ಪದಾರ್ಥಗಳನ್ನು ಪರಶಿವನಿಗೆ ಅರ್ಪಿಸಿ ಪ್ರಸಾದರೂಪವಾಗಿ ಸ್ವೀಕರಿಸುತ್ತಾನೆಂದು ಇದನ್ನು ‘ಭೋಗಾಂಗ’ ಎಂದು ಕರೆಯಲಾಗಿದೆ. ಆದುದರಿಂದಲೇ “ಮಂತ್ರದೀಕ್ಷಾಬಲೇನೈವ ಭೋಗಾಂಗೇ ಪ್ರಾಣಲಿಂಗಕಮ್”[೯೬] (ಭೋಗಾಂಗ (ಸೂಕ್ಷ್ಮಶರೀರ)ದಲ್ಲಿ ಮಂತ್ರದೀಕ್ಷೆಯ ಬಲದಿಂದ ಪ್ರಾಣಲಿಂಗವನ್ನು ಸ್ಥಾಪಿಸಬೇಕು) ಎಂದು ಶಿವಯೋಗಿ ಮಾಯಿದೇವನು ಭೋಗಾಂಗದ ಮತ್ತೊಂದು ಪರ್ಯಾಯವಾಚಿಯಾದ ಸೂಕ್ಷ್ಮಶರೀರದಲ್ಲಿ ಮಂತ್ರದೀಕ್ಷೆಯಿಂದ ಪ್ರಾಣಲಿಂಗಧಾರಣೆಯನ್ನು ಮಾಡಬೇಕೆಂದು ಉಪದೇಶಿಸಿದ್ದಾನೆ.

ಮಂತ್ರದೀಕ್ಷೆಯ ಏಳು ಅವಾಂತರ ದೀಕ್ಷೆಗಳು

ವೇಧಾದೀಕ್ಷೆಯಲ್ಲಿ ಅಳವಡಿಸಿರುವ ಏಳು ಉಪದೇಶಗಳಂತೆಯೇ ಮಂತ್ರದೀಕ್ಷೆಯಲ್ಲಿಯೂ ಸಹ ಚಿತ್ತೈಕಾಗ್ರತಾ, ದೃಢವ್ರತತಾ, ಪಂಚೇಂದ್ರಿಯಾರ್ಪಣಾ, ಅಹಿಂಸಾ,

---

[೯೪] ಕಾ.ಆ, ಕ್ರಿ.ಪಾ, ೧.೧೪

[೯೫] ಸಿ.ಶಿ, ೬.೧೪

[೯೬] ಅ.ಸೂ, ೫.೫೮

ಲಿಂಗನಿಷ್ಠಾ, ಲಿಂಗಮನೋಲಯ ಮತ್ತು ಸದ್ಯೋಮುಕ್ತಿಗಳೆಂಬ ಸಪ್ತವಿಧ[೯೭] ಉಪದೇಶಗಳಿವೆ. ಆಗಮಸಿದ್ಧಾಂತಾನುಸಾರವಾಗಿ ಕ್ರಮವಾಗಿ ಅವುಗಳ ಸ್ವರೂಪವನ್ನು ವಿಚಾರಮಾಡಲಾಗುವುದು.

೧. ಚಿತ್ತೈಕಾಗ್ರತದೀಕ್ಷೆ : ಚಾಂಚಲ್ಯ ಚಿತ್ತದ ಸಹಜ ಸ್ವಭಾವ. ಆ ಚಾಂಚಲ್ಯದ ಕಾರಣ ಸಾಧಕನು ಏಕದೇವೋಪಾಸನೆ ಮಾಡಲು ಅರ್ಹನಾಗುವುದಿಲ್ಲ. ಆದುದರಿಂದ ಗುರುವು ಶಿಷ್ಯನಿಗೆ ಏಕದೇವೋಪಾಸನೆಯ ಮಹತ್ತ್ವವನ್ನು ತಿಳಿಸಿ ಚಿತ್ತೈಕಾಗ್ರತೆಯನ್ನುಂಟು ಮಾಡುತ್ತಾನೆ ಎಂದು ಈ ಉಪದೇಶವನ್ನು ಚಿತ್ತೈಕಾಗ್ರತೋಪದೇಶ ಅಥವಾ ಏಕಾಗ್ರಮತಿದೀಕ್ಷಾ ಎಂದು ಕರೆಯಲಾಗಿದೆ:

> ಇಷ್ಟಲಿಂಗಾತ್ ಪರಂ ವಸ್ತು ಶಿಷ್ಯ ತ್ವಂ ನಾವಲೋಕಯ।
> ಇತ್ಯೇಕಾಗ್ರಮತಿಂ ದತ್ವಾ.......................................॥[೯೮]

"(ಎಲೈ ಶಿಷ್ಯನೆ) ಯಾವುದೇ ವಸ್ತುವನ್ನು ಇಷ್ಟಲಿಂಗಕ್ಕಿಂತಲೂ ಶ್ರೇಷ್ಠವೆಂದು ತಿಳಿಯಬೇಡ ಎಂದು ಏಕಾಗ್ರಮತಿದೀಕ್ಷೆಯನ್ನು ಉಪದೇಶಿಸಬೇಕು."

೨. ದೃಢವ್ರತದೀಕ್ಷೆ : 'ಶ್ರೇಯಾಂಸಿ ಬಹುವಿಘ್ನಾನಿ' ಎಂಬ ವಾಕ್ಯಾನುಸಾರವಾಗಿ ಶಿವಭಕ್ತನು ಅನುಸರಿಸುತ್ತಿರುವ ವ್ರತಗಳು ವಿಘ್ನಗಳಿಂದ ಬಂಧಿಸಲ್ಪಟ್ಟರೂ ಆ ವ್ರತಗಳಿಗೆ ಲೋಪವುಂಟಾಗುತ್ತದೆ. ಒಂದು ಪಕ್ಷ ಸಾಧಕನು ದೃಢಮನಸ್ಕನಾಗಿದ್ದರೆ ವಿಘ್ನಗಳಿಂದ ಮತ್ತೆ ಮತ್ತೆ ಬಾಧಿಸಲ್ಪಟ್ಟರೂ ಹಿಡಿದ ವ್ರತವನ್ನು ಎಂದಿಗೂ ಬಿಡುವುದಿಲ್ಲ. ಈ ರೀತಿಯಾಗಿ ಹಿಡಿದ ವ್ರತವನ್ನು ದೇಹವಿರುವವರೆಗೆ ಲೋಪಬಾರದಂತೆ ಪರಿಪಾಲಿಸುವುದೇ ದೃಢವ್ರತವೆಂದು ಕರೆಯಲ್ಪಟ್ಟಿದೆ. ಇಂತಹ ದೃಢವ್ರತದ ಉಪದೇಶವೇ ದೃಢವ್ರತದೀಕ್ಷೆ:

> ....ದೀಕ್ಷಾಂ ದದ್ಯಾದ್ ದೃಢವ್ರತಾಮ್॥
> ಶರೀರಪಾತಪರ್ಯಂತಂ ನ ಜಹೀಹಿ ವ್ರತಾನ್ಯಪಿ।
> ದೃಢವ್ರತಾಮಿತಿ ಪ್ರೋಕ್ತ್ವಾ.....................................॥[೯೯]

"ಶರೀರ ಬಿದ್ದುಹೋಗುವವರೆಗೂ ವ್ರತಗಳನ್ನು ಬಿಡಬೇಡ ಎಂದು ದೃಢವ್ರತೋಪದೇಶವನ್ನು ನೀಡಬೇಕು."

೩. **ಪಂಚೇಂದ್ರಿಯಾರ್ಪಣದೀಕ್ಷೆ** : ಪಂಚಜ್ಞಾನೇಂದ್ರಿಯಗಳು ಮತ್ತು ಪಂಚ ಕರ್ಮೇಂದ್ರಿಯಗಳು ಸ್ವಭಾವತಃ ತಮ್ಮ ತಮ್ಮ ವಿಷಯಗಳಲ್ಲಿ ಪ್ರವರ್ತಿಸುತ್ತವೆ. ಇವುಗಳ ವಿಷಯ ಪ್ರವೃತ್ತಿಯನ್ನು ನಿರೋಧಿಸಿ ಭಗವಂತನಿಗೆ ಅರ್ಪಿಸುವುದೇ

---

[೯೭] ಕಾ.ಆ, ಕ್ರಿ.ಪಾ, ೧.೧೦೯-೧೧೧

[೯೮] ಕಾ.ಆ, ಕ್ರಿ.ಪಾ, ೧.೧೧೨

[೯೯] ಕಾ.ಆ, ಕ್ರಿ.ಪಾ, ೧.೧೧೨-೧೧೩

ಪಂಚೇಂದ್ರಿಯಾರ್ಪಣವೆಂದು ಕರೆಯಲಾಗಿದೆ. ಪತಿವ್ರತೆಯು ತನ್ನ ಕರ್ಮೇಂದ್ರಿಯ ಮತ್ತು ಜ್ಞಾನೇಂದ್ರಿಯಗಳಿಂದ ಹೇಗೆ ಪತಿಪರಾಯಣಳಾಗಿರುವಳೋ ಹಾಗೆಯೇ ವೀರಶೈವ ಸಾಧಕನು ತನ್ನ ಇಷ್ಟದೇವನನ್ನು ಪತಿಯೆಂದು ಭಾವಿಸಿ ಸದಾ ತನ್ನ ಶರೀರ, ಇಂದ್ರಿಯ ಹಾಗೂ ಮನಸ್ಸುಗಳಿಂದ ಭಗವಂತನ ಸೇವೆಯನ್ನು ಮಾಡಬೇಕೆಂದು ಯಾವ ಗುರುವಿನ ಉಪದೇಶವಿದೆಯೋ ಅದೇ ಪಂಚೇಂದ್ರಿಯಾರ್ಪಣದೀಕ್ಷೆ ಎನಿಸಿದೆ:

..........................ದದ್ಯಾತ್ ಪಂಚೇಂದ್ರಿಯಾರ್ಪಣಾಮ್।
ಸತ್ಯಹಂ ಮತ್ಪತಿರ್ಲಿಂಗಮತಿ ನಿಶ್ಚಿತ್ಯ ಚೇತಸಿ॥
ಸದಾ ತನುಮನೋಭಾವಾನಿಷ್ಟಾದಿಭ್ಯಃ ಸಮರ್ಪಯ।
ಇತ್ಯಾದಿಶ್ಯ..॥[೧೦೦]

“ನಾನು ಸತಿಯಾಗಿದ್ದು ಲಿಂಗವೇ ನನ್ನ ಪತಿಯಾಗಿದೆ ಎಂದು ಮನಸ್ಸಿನಲ್ಲಿ ನಿರ್ಧರಿಸಿ, ಸದಾ ಶರೀರ ಮನೋಭಾವಗಳನ್ನು ಇಷ್ಟ, ಪ್ರಾಣ, ಭಾವಲಿಂಗಗಳಿಗೆ ಸಮರ್ಪಿಸು -ಎಂದು ಹೇಳಿ ಪಂಚೇಂದ್ರಿಯಾರ್ಪಣದೀಕ್ಷೆಯನ್ನು ಅನುಗ್ರಹಿಸಬೇಕು.”

೪. ಅಹಿಂಸಾದೀಕ್ಷೆ : ಯೋಗಶಾಸ್ತ್ರದಲ್ಲಿ ಭಾಷ್ಯಕಾರರಾದ ಭಗವಾನ್ ವ್ಯಾಸರು “ತತ್ರಾಹಿಂಸಾ ಸರ್ವಥಾ ಸರ್ವದಾ ಸರ್ವಭೂತಾನಾಮನಭಿದ್ರೋಹಃ”[೧೦೧] (ಅಹಿಂಸೆ ಎಂದರೆ ಯಾವಾಗಲೂ ಎಲ್ಲ ಭೂತಗಳಿಗೆ ದ್ರೋಹ ಮಾಡದಿರುವುದು) ಎಂದು ಅಹಿಂಸೆಯ ಲಕ್ಷಣವನ್ನು ಕೊಟ್ಟಿರುತ್ತಾರೆ. ಇಂತಹ ಅಹಿಂಸೆಯನ್ನು ಪರಿಪಾಲಿಸಲು ಎಲ್ಲ ಜೀವಿಗಳಲ್ಲಿ ಆತ್ಮದೃಷ್ಟಿಯನ್ನು ಬೆಳೆಸಿಕೊಳ್ಳುವುದು ಅವಶ್ಯಕ. ಆದುದರಿಂದಲೇ ವೀರಶೈವಾಚಾರ್ಯರು-

.....................ತತೋ ದದ್ಯಾದಹಿಂಸಾಸಂಜ್ಞಿತಾಂ ಗುರುಃ॥
ಸರ್ವಾಣೀಮಾನಿ ಭೂತಾನ್ಯಪ್ಯಾತ್ಮವತ್ ಪರಿಭಾವಯನ್।
ಮಾ ಹಿಂಸೀರಿತ್ಯುಪಾದಿಶ್ಯ.......................................॥[೧೦೨]

“ಈ ಎಲ್ಲ ಪ್ರಾಣಿಗಳನ್ನು ನಿನ್ನಂತೆಯೇ ಎಂದು ಭಾವಿಸಿ, ಅವುಗಳನ್ನು ಹಿಂಸಿಸಬೇಡ -ಎಂದು ಉಪದೇಶಿಸುವುದೇ ಅಹಿಂಸಾದೀಕ್ಷೆ ಎನಿಸುತ್ತದೆ” ಎಂಬ ಆಗಮೋಕ್ತಿಯಾನುಸಾರವಾಗಿ ಶಿಷ್ಯನಿಗೆ ಸಕಲ ಜೀವಿಗಳಲ್ಲಿ ಆತ್ಮದೃಷ್ಟಿಯನ್ನು ಉಪದೇಶಿಸಿದ್ದಾರೆ. ಈ ಉಪದೇಶವೇ ಅಹಿಂಸಾದೀಕ್ಷೆಯೆನಿಸಿದೆ.

೫. ಲಿಂಗನಿಷ್ಠಾದೀಕ್ಷೆ : ನಮ್ಮ ದೃಷ್ಟಿಗೆ ಗೋಚರಿಸುವ ಈ ಪ್ರಪಂಚದ ಲಯ ಗಮನಗಳಿಗೆ ಕಾರಣೀಭೂತವಾದ ಆದ್ಯಂತರಹಿತವಾದ ಪರಶಿವಬ್ರಹ್ಮವು ಲಿಂಗವೆನಿಸಿದೆ. ಅಂತಹ ಲಿಂಗದಲ್ಲಿರುವ ದೃಢವಾದ ಭಕ್ತಿಯೇ ಲಿಂಗನಿಷ್ಠೆ ಎಂದು

---

೧೦೦. ಕಾ.ಆ, ಕ್ರಿ.ಪಾ, ೧.೧೧೩-೧೧೪

೧೦೧. ಯೋಗಸೂತ್ರಭಾಷ್ಯ, ೨.೩೦

೧೦೨. ಕಾರಣಾಗಮ, ಕ್ರಿಯಾಪಾದ, ೧.೧೧೪-೧೧೫

ಕರೆಯಲ್ಪಟ್ಟಿದೆ. ಗುರುವು ಸದ್ಗುಣಿಯಾದ ಸಾಧಕನಿಗೆ ಉಪದೇಶಿಸುವ ಈ ನಿಷ್ಠೆಯೇ ಲಿಂಗನಿಷ್ಠಾದೀಕ್ಷೆಯೆಂದು ತಿಳಿಯಬೇಕು. ಕಾರಣಾಗಮವು ಈ ದೀಕ್ಷೆಯ ಸ್ವರೂಪವನ್ನು ಹೀಗೆ ಪ್ರಸ್ತುತಪಡಿಸಿದೆ:

> ....ಲಿಂಗನಿಷ್ಠಾಮುಪಾದಿಶೇತ್।
> ಆದಿಮಧ್ಯಾಂತರಹಿತಂ ಲಿಂಗಂ ಯದ್‌ಬ್ರಹ್ಮಸಂಜ್ಞಿತಮ್।
> ತನ್ನಿಷ್ಠೋ ಭವ ಸದ್ಬುದ್ಧ ಇತ್ಯುಪಾದಿಶ್ಯ ಸದ್ಗುರುಃ॥
> ದೀಕ್ಷಾಮುಪಾದಿಶೇದ್.....................................॥[೧೦೩]

"ಯಾವ ಇಷ್ಟಲಿಂಗವನ್ನು 'ಬ್ರಹ್ಮ'ವೆಂದು ಕರೆಯಲಾಗುತ್ತದೆಯೋ, ಯಾವುದಕ್ಕೆ ಆದಿ, ಮಧ್ಯ, ಅಂತ್ಯಗಳಿಲ್ಲವೋ ಅಂತಹ ಲಿಂಗದಲ್ಲಿ ನಿಷ್ಠೆಯಿಂದಿರು ಎಂದು ಉಪದೇಶಿಸುವುದೇ ಲಿಂಗನಿಷ್ಠಾದೀಕ್ಷೆ ಎನಿಸುತ್ತದೆ."

೬. **ಲಿಂಗಮನೋಲಯದೀಕ್ಷೆ** : ಸ್ವಾಭಾವಿಕವಾಗಿ ಚಂಚಲವಾದ ಮನಸ್ಸು ಸಂಕಲ್ಪವಿಕಲ್ಪಾತ್ಮಕವಾದುದು. ಇಂತಹ ಮನಸ್ಸನ್ನು ತನ್ನ ಆರಾಧ್ಯದೈವವಾದ ಮಹಾಲಿಂಗದಲ್ಲಿ ಲಯಗೊಳಿಸುವ ಉಪದೇಶವೇ ಲಿಂಗಮನೋಲಯ ದೀಕ್ಷೆ.

> ....ಭೂಯೋ ಲಿಂಗರೂಪಮನೋಲಯಾಮ್॥
> ಲಿಂಗರೂಪಮಭಿಧ್ಯಾಯನ್ನಮನಸ್ಕಶ್ಚಿರಂ ಭವ।
> ಇತ್ಯಾದಿಶ್ಯ ಪುನರ್ದದ್ಯಾತ್.................................॥[೧೦೪]

"ಇಷ್ಟಲಿಂಗದ ಧ್ಯಾನವನ್ನು ಮಾಡುವಾಗ ಸಂಕಲ್ಪ-ವಿಕಲ್ಪರಹಿತನಾಗು ಎಂದು ಉಪದೇಶಿಸುವುದೇ ಲಿಂಗಮನೋಲಯದೀಕ್ಷೆ ಎನಿಸುತ್ತದೆ."

೭. **ಸದ್ಯೋಮುಕ್ತಿದೀಕ್ಷೆ** : ಮಂತ್ರದೀಕ್ಷೆಯ ಅಂತಿಮೋಪದೇಶವೇ ಸದ್ಯೋಮುಕ್ತಿ. "ಮದುಕ್ತಾರ್ಥೇ ಸ್ಥಿರಮತಿಃ ಪ್ರವರ್ತಸ್ವ ವಿಸಂಶಯಃ"[೧೦೫] (ನಾನು ಹೇಳಿದ ಮಾತಿನಲ್ಲಿ ಸಂಶಯರಹಿತವಾಗಿ ದೃಢಬುದ್ಧಿಯಿಂದ ಪ್ರವರ್ತಿಸು) ಎಂಬ ಆಗಮೋಕ್ತಿಯಾನುಸಾರವಾಗಿ ಶ್ರೀಗುರುವು ಜೀವನ್ಮುಕ್ತಿಯ ಸ್ವರೂಪವನ್ನು ಉಪದೇಶಿಸಿ ಅದರಲ್ಲಿಯೇ ಶಿಷ್ಯನ ಮನಸ್ಸನ್ನು ಸ್ಥಿರಗೊಳಿಸುತ್ತಾನೆ. ಗುರೂಪದೇಶದಲ್ಲಿನ ಸಂಶಯವನ್ನು ನಿವಾರಿಸಿಕೊಂಡು ಮುಂದುವರಿಯುವ ಸಾಧಕನಿಗೆ ಜೀವನ್ಮುಕ್ತಿಯ ಅವಸ್ಥೆಯು ಸಹಜವಾಗಿಯೇ ಉಂಟಾಗುತ್ತದೆ. ಹೀಗೆ ಜೀವನ್ಮುಕ್ತಿಯ ಅವಸ್ಥೆಯನ್ನು ದೊರಕಿಸಿಕೊಡುವ ಉಪದೇಶವೇ ಸದ್ಯೋಮುಕ್ತಿ ದೀಕ್ಷೆಯೆಂದು ಕರೆಯಲ್ಪಟ್ಟಿದೆ. ಇದು ಮಂತ್ರದೀಕ್ಷೆಯ ಏಳು ಉಪದೇಶಗಳಲ್ಲಿ ವಿಶಿಷ್ಟವಾದುದೆಂದು ತಿಳಿಯಬೇಕು.

---

[೧೦೩] ಕಾ.ಆ, ಕ್ರಿ.ಪಾ, ೧.೧೧೫-೧೧೬

[೧೦೪] ಕಾ.ಆ, ಕ್ರಿ.ಪಾ, ೧.೧೧೬-೧೧೭

[೧೦೫] ಕಾ.ಆ, ಕ್ರಿ.ಪಾ, ೧.೧೧೮

೩. ಕ್ರಿಯಾದೀಕ್ಷೆ

ಈಗ ಕ್ರಿಯಾದೀಕ್ಷೆ ಮತ್ತು ಆದರ ಅವಾಂತರಭೇದಗಳನ್ನು ಶಾಸ್ತ್ರೋಕ್ತವಾಗಿ ನಿರೂಪಿಸಲಾಗುವುದು. "ಕುಂಡಮಂಡಲಿಕೋಪೇತಾ ಕ್ರಿಯಾದೀಕ್ಷಾ ಕ್ರಿಯೋತ್ತರಾ"[೧೦೬] (ಹೋಮಕುಂಡ, ಸ್ವಸ್ತಿಕಮಂಡಲ, ಪಂಚಕಲಶ ಮೊದಲಾದ ದೀಕ್ಷಾಂಗಭೂತ ಕ್ರಿಯೆಗಳಿಂದ ಯುಕ್ತವಾದುದು ಕ್ರಿಯಾದೀಕ್ಷೆಯೆನಿಸಿಕೊಳ್ಳುವುದು) ಎಂಬ ಶ್ರೀ ರೇಣುಕ ಭಗವತ್ಪಾದರ ಉಕ್ತಿಯಂತೆ ಮಂಟಪ-ದೇವತಾದಿ ಪ್ರತಿಷ್ಠಾಪೂರ್ವಕ ಕ್ರಿಯಾಪ್ರಧಾನ ದೀಕ್ಷೆಯೇ ಕ್ರಿಯಾದೀಕ್ಷೆಯೆನಿಸಿದೆ. ವೀರಶೈವಸಿದ್ಧಾಂತದಲ್ಲಿ ಈ ಸಂಪ್ರದಾಯ ಪ್ರವರ್ತಕರಾದ ರೇವಣಸಿದ್ಧ, ಮರುಳಸಿದ್ಧ, ಏಕೋರಾಮ, ಪಂಡಿತಾರಾಧ್ಯ, ವಿಶ್ವಾರಾಧ್ಯರೆಂಬ ಪಂಚಾಚಾರ್ಯರ ಸಂಪ್ರದಾಯದ ಅನುವರ್ತಿಗಳಾದ ಆಚಾರ್ಯ ಪಟ್ಟಾಭಿಷಿಕ್ತರಾದ ಪರಂಪರಾಗತವಾಗಿ ಮಠಸ್ಥಲದಲ್ಲಿ ಜನಿಸಿದ ಗುರುಗಳು[೧೦೭] ದೀಕ್ಷೆಯನ್ನು ಅನುಗ್ರಹಿಸುತ್ತಾರೆ. ಆ ಆಚಾರ್ಯರು ಒಂದು ಶುಭಮುಹೂರ್ತದಲ್ಲಿ ಮಠ-ಮಂದಿರಾದಿ ಪವಿತ್ರಸ್ಥಳಗಳಲ್ಲಿ ಮಂಟಪವನ್ನು ರಚಿಸಿ, ಅದರ ಮಧ್ಯದಲ್ಲಿ ಪೂರ್ವೋಕ್ತ ಪಂಚಾಚಾರ್ಯರೂಪ ಪಂಚಕಲಶಗಳನ್ನು ಸ್ಥಾಪಿಸಿ, ಅವುಗಳಲ್ಲಿ ಆಯಾ ಆಚಾರ್ಯರನ್ನು ಆವಾಹನೆ ಮಾಡಿ, ಅದಕ್ಕೆ ಸಾಕ್ಷಿಯಾಗಿ ಆ ಕಲಶಗಳಲ್ಲಿರುವ ಪವಿತ್ರೋದಕದಿಂದ ಶಿಷ್ಯನನ್ನು ಮೂರು ಸಲ ಅಭಿಷೇಕಿಸಿ, ಶಿಷ್ಯನ ಮಾಂಸಪಿಂಡ ದೇಹವನ್ನು ಮಂತ್ರಪಿಂಡವನ್ನಾಗಿ ಮಾಡಲು ಅವನ ಬಲಗಿವಿಯಲ್ಲಿ ಶಿವಪಂಚಾಕ್ಷರೀ ಮಹಾಮಂತ್ರವನ್ನು ಗುಪ್ತವಾಗಿ ಅರ್ಥಾತ್ ಇತರರ ಕಿವಿಗೆ ಬೀಳದಂತೆ ಬೋಧಿಸುತ್ತಾರೆ. ಮತ್ತು ಆ ಮಹಾಮಂತ್ರದ ಸ್ವರೂಪವನ್ನೂ, ಋಷಿ-ದೇವತಾ-ಛಂದಸ್ಸು-ಶಕ್ತಿ-ಬೀಜ ಮೊದಲಾದವುಗಳನ್ನೂ ಅಂಗನ್ಯಾಸ - ಕರನ್ಯಾಸ - ದೇಹನ್ಯಾಸ ಪದ್ಧತಿಯನ್ನೂ ಬೋಧಿಸುತ್ತಾರೆ.[೧೦೮]

ಈ ಪ್ರಕಾರ ಮಂತ್ರೋಪದೇಶದಿಂದ ಶಿಷ್ಯನ ಶರೀರವನ್ನು ಸಂಸ್ಕಾರಮಾಡಿ (ಪರಿಶುದ್ಧಗೊಳಿಸಿ) ಪಂಚಸೂತ್ರ ಘಟಿತವಾದ ಅಂಗುಷ್ಠ ಪ್ರಮಾಣದ ಶೈಲಜ ಲಿಂಗವನ್ನು ಅಥವಾ ನರ್ಮದಾ ಬಾಣವನ್ನು ತೆಗೆದುಕೊಂಡು, ಜಲಾಧಿವಾಸ-ಧ್ಯಾನಾಧಿವಾಸ ಕ್ರಿಯೆಗಳಿಂದಲೂ, ಪಂಚಗವ್ಯ ಮತ್ತು ಪಂಚಾಮೃತಾಭಿಷೇಕಗಳಿಂದ ಆ ಲಿಂಗದಲ್ಲಿನ ಶಿಲೆಯ ಗುಣವನ್ನು ತೊಡೆದುಹಾಕಿ, ಪಂಚಾಕ್ಷರ ಮಹಾಮಂತ್ರದಿಂದ ಸಂಸ್ಕಾರಗೊಂಡ ಆ ಶಿವಲಿಂಗದಲ್ಲಿ ಶಿವಕಲೆಯನ್ನು ನಿಯೋಜಿಸುವ ಮೂಲಕ ಪ್ರಾಣಪ್ರತಿಷ್ಠೆಯನ್ನು ಮಾಡಿ ಆ ಲಿಂಗವನ್ನು ಶಿಷ್ಯನ ಹಸ್ತದಲ್ಲಿರಿಸಿ-

---

[೧೦೬] ಸಿ.ಶಿ, ೬.೧೪

[೧೦೭] ಕ್ರಿ.ಸಾ, ಭಾಗ-೩, ಪು. ೧೩೩

[೧೦೮] ಸಿ.ಶಿ, ೬.೧೯-೨೦

ಪ್ರಾಣವದ್ಧಾರಣೀಯಂ ತತ್ಪ್ರಾಣಲಿಂಗಮಿದಂ ತವ।
ಕದಾಚಿತ್ಕುತ್ರಚಿದ್ವಾಪಿ ನ ವಿಯೋಜಯ ದೇಹತಃ॥
ಯದಿ ಪ್ರಮಾದಾತ್ಪತಿತೇ ಲಿಂಗೇ ದೇಹಾನ್ಮಹೀತಲೇ।
ಪ್ರಾಣಾನ್ ವಿಮುಂಚ ಸಹಸಾ ಪ್ರಾಪ್ತಯೇ ಮೋಕ್ಷಸಂಪದಃ॥[109]

"ಈ ಶಿವಲಿಂಗವನ್ನು ನಿನ್ನ ಪ್ರಾಣಲಿಂಗವೆಂದು ತಿಳಿ! ಈ ಶಿವಲಿಂಗವನ್ನು ನಿನ್ನ ಪ್ರಾಣದಂತೆ ಧರಿಸು. ಯಾವ ಕಾಲದಲ್ಲಿಯೂ, ಯಾವ ಸ್ಥಳದಲ್ಲಿಯೂ ಇದನ್ನು ನಿನ್ನ ದೇಹದಿಂದ ಅಗಲಿಸಬೇಡ. ಒಂದು ವೇಳೆ ನಿನ್ನ ದೇಹದಿಂದ ಈ ಶಿವಲಿಂಗವು ಪ್ರಮಾದದಿಂದ ಭೂಮಿಯ ಮೇಲೆ ಬಿದ್ದರೆ, ಕೂಡಲೇ ಮೋಕ್ಷವನ್ನು ಸಂಪಾದಿಸಲು ಪ್ರಾಣವನ್ನು ಬಿಡು" -ಎಂದು ಉಪದೇಶಿಸುತ್ತಾನೆ. ಹೀಗೆ ಕ್ರಿಯಾದೀಕ್ಷೆಯಿಂದ ಪ್ರಾಪ್ತವಾಗುವ ಈ ಶಿವಲಿಂಗವನ್ನು ಇಷ್ಟಲಿಂಗವೆಂದು ಕರೆಯುತ್ತಾರೆ. ಇಷ್ಟಲಿಂಗಪ್ರದಾನವೇ ಕ್ರಿಯಾದೀಕ್ಷೆಯ ಪರಮೋದ್ದೇಶ. "ಶಿಷ್ಯಪಾಣಿತಲೇ ದತ್ತಾ ಯಾ ದೀಕ್ಷಾ ಸಾ ಕ್ರಿಯಾ ಭವೇತ್"[110] (ಶಿಷ್ಯನ ಪಾಣಿಯಲ್ಲಿ ಇಷ್ಟಲಿಂಗವನ್ನು ದಯಪಾಲಿಸುವ ದೀಕ್ಷೆ ಕ್ರಿಯಾದೀಕ್ಷೆ) ಎಂದು ಕಾರಣಾಗಮ ಪ್ರತಿಪಾದಿಸಿದೆ. ಈ ದೀಕ್ಷೆಯಿಂದ ಕಾರ್ಮಿಕ ಮಲವು ಅರ್ಥಾತ್ ಶುಭಾಶುಭಭಾವನೆಗಳ ನಿವೃತ್ತಿಯುಂಟಾಗುತ್ತದೆ.

ಕ್ರಿಯಾದೀಕ್ಷಾಂತರ್ಗತ ಏಳು ಸಂಸ್ಕಾರಗಳು

ಆಜ್ಞೋಪಮಾ ಚ ಕಲಶಾಭಿಷೇಕಾಖ್ಯಾ ತತಃ ಪರಮ್।
ಸ್ವಸ್ತಿಕಾರೋಹಣಂ ಭೂತಿಪಟ್ಟಮಾಯತ್ತಮೇವ ಚ।
ಸ್ವಾಯತ್ತಮಿತಿ ಸಪ್ತೈತಾಃ ಕ್ರಿಯಾದೀಕ್ಷಾಂತರಾ ಮತಾಃ॥[111]

ಕ್ರಿಯಾದೀಕ್ಷೆಯಲ್ಲಿಯೂ ಸಹ ಆಜ್ಞಾ, ಉಪಮಾ, ಕಲಶಾಭಿಷೇಕ, ಸ್ವಸ್ತಿಕಾರೋಹಣ, ಭೂತಿಪಟ್ಟ, ಆಯತ್ತ ಮತ್ತು ಸ್ವಾಯತ್ತ ಎಂಬ ಏಳು ಸಂಸ್ಕಾರಗಳಿವೆ. ಕ್ರಮವಾಗಿ ಅವುಗಳ ಸ್ವರೂಪವನ್ನು ನಿರೂಪಿಸಲಾಗುವುದು.

೧. ಆಜ್ಞಾದೀಕ್ಷೆ:

ಪರಿತ್ಯಜ್ಯ ಸದಾಚಾರಂ ಮಾ ವರ್ತಸ್ವ ಸರ್ವದಾ।
ಇತ್ಯಾಜ್ಞಾದೀಕ್ಷಯಾಽಽದಿಶ್ಯ ತತ್ರಸ್ತ್ವೇವಂ ವದೇದ್ಗುರುಃ॥[112]

"ನೀನು ಎಂದಿಗೂ ಸದಾಚಾರವನ್ನು ಬಿಟ್ಟು ವರ್ತಿಸಬೇಡ ಎಂದು ಆಜ್ಞಾದೀಕ್ಷೆಯಿಂದ (ಶಿಷ್ಯನಿಗೆ) ಆದೇಶ ನೀಡಿ, ಗುರುವು ಮತ್ತೆ ಹೀಗೆ ಉಪದೇಶ ಮಾಡಬೇಕು" ಎಂಬ ಆಗಮದ ಅಪ್ಪಣೆಯಂತೆ ಶ್ರೀಗುರುವು ದೀಕ್ಷೆಯನ್ನು ಪಡೆಯಲು

---

೧೦೯. ಸಿ.ಶಿ, ೬.೨೫-೨೬
೧೧೦. ಕಾ.ಆ, ಕ್ರಿ.ಪಾ, ೧.೧೪
೧೧೧. ಕಾ.ಆ, ಕ್ರಿ.ಪಾ, ೧.೪೩
೧೧೨. ಕಾ.ಆ, ಕ್ರಿ.ಪಾ, ೧.೪೪

ತನ್ನಲ್ಲಿಗೆ ಬಂದ ಶಿಷ್ಯನಿಗೆ ಮೊದಲು ವೀರಶೈವ ಧರ್ಮದ ಸದಾಚಾರವನ್ನು ಮತ್ತು ಅಹಿಂಸಾದಿ ದಶವಿಧ ಧರ್ಮಸ್ವರೂಪವನ್ನು ಚೆನ್ನಾಗಿ ಉಪದೇಶಿಸುತ್ತಾನೆ. ಅನಂತರ ಆಜೀವಪರ್ಯಂತವಾಗಿ ಉಪದೇಶವನ್ನು ಪಾಲಿಸಬೇಕೆಂದು ಅಪ್ಪಣೆಮಾಡುತ್ತಾನೆ. ಸದ್ಗುರುವಿನ ಈ ಆಜ್ಞೆಯೇ ಆಜ್ಞಾದೀಕ್ಷೆಯೆಂದು ಕರೆಯಲ್ಪಟ್ಟಿದೆ.

೨. ಉಪಮಾದೀಕ್ಷೆ:

ಪುರಾತನಕೃತಾಚಾರಸದೃಶಂ ಕುರ್ವಿತಿ ಸ್ಫುಟಮ್।
ಉಪಮಾದೀಕ್ಷಯಾऽऽದಿಶ್ಯ ಶಿಷ್ಯಪಾಪಾಪನುತ್ತಯೇ।
ಪ್ರಾಣಾನಾಯಮ್ಯ ವಿಧಿವತ್ಪಂಚಗವ್ಯಾನಿ ಸಾಧಯೇತ್॥[೧೧೩]

"ಪುರಾತನರು ನಡೆಸುತ್ತಿದ್ದ ಆಚಾರಕ್ಕೆ ಸದೃಶವಾದ ಆಚಾರವನ್ನು ನೀನು ಮಾಡಬೇಕು?" ಎಂದು ಉಪಮಾದೀಕ್ಷೆಯಿಂದ ಉಪದೇಶಿಸಿ, ಗುರು ಶಿಷ್ಯನ ಪಾಪಗಳನ್ನು ದೂರಮಾಡಲು ವಿಧಿವತ್ತಾಗಿ ಪ್ರಾಣಾಯಾಮ ಆಚರಿಸಿ ಪಂಚಗವ್ಯಗಳನ್ನು ಸಿದ್ಧಪಡಿಸಬೇಕು" ಎಂಬ ಉಕ್ತಿಯಂತೆ ಶ್ರೀಗುರುವು ತಾನು ಉಪದೇಶಿಸಿದ ಸದಾಚಾರದಲ್ಲಿ ಮತ್ತು ಧರ್ಮಮಾರ್ಗದಲ್ಲಿ ವಿಶ್ವಾಸವನ್ನು ಬಲಪಡಿಸುವುದಕ್ಕಾಗಿ ಸದಾಚಾರ ಸಂಪನ್ನರಾದ ಅನೇಕ ಮಹಾತ್ಮರ ಚರಿತೆಗಳನ್ನು ಶಿಷ್ಯನಿಗೆ ತಿಳಿಸುತ್ತಾನೆ. ಈ ರೀತಿಯಾದ ಆಚಾರವಂತರ ದೃಷ್ಟಾಂತಗಳನ್ನು ಕೇಳುವುದರಿಂದ ಶ್ರೋತೃಗಳ ಮನಸ್ಸಿನಲ್ಲಿ ತಾವೂ ಆಚಾರಶೀಲರಾಗಬೇಕೆಂಬ ಉತ್ಕಟಭಾವನೆಯುಂಟಾಗುತ್ತದೆ. ಆದುದರಿಂದ ಇಂತಹ ದೃಷ್ಟಾಂತ ಮಾಧ್ಯಮದಿಂದ ಸದಾಚಾರವನ್ನು ಉಪದೇಶಿಸುವ ಸಂಸ್ಕಾರವು ಉಪಮಾದೀಕ್ಷೆ ಎಂದು ಕರೆಯಲ್ಪಟ್ಟಿದೆ.

೩. ಕಲಶಾಭಿಷೇಕದೀಕ್ಷೆ:

ಕಲಶೋದಕಗಳಿಂದ ಲಿಂಗಾಂಗಗಳಿಗೆ ಅಭಿಷೇಕ ಮಾಡುವ ಸಂಸ್ಕಾರವಿಶೇಷವೇ ಕಲಶಾಭಿಷೇಕದೀಕ್ಷೆ. ಈ ಅಭಿಷೇಕ ವಿಧಾನದಿಂದ ಲಿಂಗದ ಶಿಲಾಧರ್ಮದ ನಿವೃತ್ತಿಯಾಗುತ್ತದೆ ಮತ್ತು ಅಂಗದ ಪಂಚತತ್ತ್ವ ಶುದ್ಧಿಯುಂಟಾಗುತ್ತದೆ. ಲಿಂಗಾಂಗಗಳ ಶುದ್ಧಿಯ ಕ್ರಮವು ಹೀಗಿದೆ- ಮೊದಲು ದೀಕ್ಷಾಮಂಟಪದ ಮಧ್ಯಭಾಗದಲ್ಲಿ ಪಂಚಾಚಾರ್ಯರ ಪ್ರತೀಕಭೂತವಾದ ಪಂಚಬ್ರಹ್ಮಕಲಶಗಳನ್ನು ಸ್ಥಾಪಿಸಲಾಗುತ್ತದೆ. ಪೂರ್ವದಿಕ್ಕಿನಲ್ಲಿ ಸದ್ಯೋಜಾತ ಕಲಶ, ದಕ್ಷಿಣದಲ್ಲಿ ವಾಮದೇವ ಕಲಶ, ಉತ್ತರದಲ್ಲಿ ತತ್ಪುರುಷ ಕಲಶ, ಪಶ್ಚಿಮದಲ್ಲಿ ಅಘೋರಕಲಶ ಮತ್ತು ಮಧ್ಯದಲ್ಲಿ ಈಶಾನಕಲಶವನ್ನು ಸ್ಥಾಪಿಸಬೇಕೆಂದು ವಿಧಿಯಿದೆ. ಹೀಗೆ ಸ್ಥಾಪಿಸಲ್ಪಟ್ಟ ಕಲಶಗಳಲ್ಲಿ ಸದ್ಯೋಜಾತಾದಿ ಪಂಚಬ್ರಹ್ಮ ದೇವತೆಗಳನ್ನು ಹಾಗೂ ಶ್ರೀ ರೇಣುಕಾದಿ ಪಂಚಾಚಾರ್ಯರನ್ನು ಆವಾಹನೆ ಮಾಡಲಾಗುತ್ತದೆ. ಅನಂತರ ಪಂಚಸೂತ್ರ ಪ್ರಕ್ರಿಯೆಯಿಂದ ನಿರ್ಮಿತವಾದ ಅಂಗುಷ್ಠ ಪರಿಮಾಣದ ಶಿಲಾಮಯವಾದ ಶಿವಲಿಂಗವನ್ನು ತೆಗೆದುಕೊಂಡು-

---

೧೧೩. ಕಾ.ಆ, ಕ್ರಿ.ಪಾ, ೧.೪೫

ಘರ್ಷಣಾದಿಕ್ರಿಯಾಜಾತಜಾತದೋಷೋಪಶಾಂತಯೇ।
ಹಿರಣ್ಯಶೃಂಗಪ್ರಮುಖೈರನುವಾಕ್ಯೈರನುಕ್ರಮಾತ್॥
ಶಿವಲಿಂಗಂ ಸ್ನಾಪಯಾಮೀತ್ಯಭಿಪಿಂಚೇದನಂತರಮ್।[೧೧೪]

"ಉಜ್ಜುವುದು ಮುಂತಾದ ಅನೇಕ ಕ್ರಿಯೆಗಳಿಂದ ಉಂಟಾದ ದೋಷಗಳನ್ನು ದೂರಮಾಡಲು "ಹಿರಣ್ಯಶೃಂಗ ಇತ್ಯಾದಿ ಅನುವಾಕಗಳಿಂದ ಕ್ರಮವಾಗಿ ಶಿವಲಿಂಗಕ್ಕೆ ಸ್ನಾನಮಾಡಿಸುವೆನು" ಎಂದು ಹೇಳಿ ಅನಂತರ ಅಭಿಷೇಕ ಮಾಡಿಸಬೇಕು. ಸಿದ್ಧಪಡಿಸಲಾದ ಪಂಚಗವ್ಯದಿಂದಲೂ ಮತ್ತು ಉತ್ತಮವಾದ ಪಂಚಾಮೃತಗಳಿಂದಲೂ ಅಭಿಷೇಕಮಾಡಿ ಪೂರ್ವೋಕ್ತ ಪಂಚಕಲಶಗಳಲ್ಲಿರುವ ಶುದ್ಧೋದಕದಿಂದ ಪಂಚಬ್ರಹ್ಮ ಮಂತ್ರೋಚ್ಚಾರಣಪೂರ್ವಕವಾಗಿ ಪುನಃ ಶಿವಲಿಂಗವನ್ನು ಅಭಿಷೇಕ ಮಾಡಲಾಗುತ್ತದೆ. ಅನಂತರ ಸರ್ವದೋಷೋಪಶಾಂತಿಗೋಸ್ಕರ ಜಲಾಧಿವಾಸ ಮತ್ತು ಸಪ್ತಧಾತುಗಳ ವೃದ್ಧಿಗಾಗಿ ಧಾನ್ಯಾದಿವಾಸಗಳನ್ನು ಮಾಡಲಾಗುತ್ತದೆ.[೧೧೫] ತದನಂತರ ಶಾಸ್ತ್ರೋಕ್ತ ರೀತಿಯಲ್ಲಿ ಷಡಧ್ವನ್ಯಾಸವನ್ನು ಪೂರೈಸಲಾಗುತ್ತದೆ.[೧೧೬] ಶಿವಲಿಂಗದಲ್ಲಿ ಪ್ರತಿಷ್ಠಾಪಿತವಾದ ಕಲೆಗಳ ಸ್ಥೈರ್ಯಕ್ಕಾಗಿ ೩೨೪ ಸಲ ಪಂಚಾಕ್ಷರಮಂತ್ರದಿಂದ ಪ್ರಧಾನಕುಂಡದಲ್ಲಿ ಹೋಮವಿಧಿಯು ನೆರವೇರುತ್ತದೆ. ಈ ಪ್ರಕಾರ ಶಿವಲಿಂಗ ಸಂಸ್ಕಾರದ ಬಳಿಕ ದೀಕ್ಷೆಯನ್ನು ಪಡೆಯಲು ಬಂದಿರುವ ಶಿಷ್ಯನನ್ನು ಕರೆದು ಭದ್ರಾಸನದಲ್ಲಿ ಕುಳ್ಳಿರಿಸಿ ಪಂಚಕಲಶೋದಕದಿಂದ ಅವನಿಗೆ ಅಭಿಷೇಕ ಮಾಡಿಸಲಾಗುತ್ತದೆ. ಹೀಗೆ ಸಾಧಕನ ಶರೀರದಲ್ಲಿರುವ ಪಾಂಚಭೌತಿಕತತ್ತ್ವಗಳ ಶುದ್ಧಿಗೋಸ್ಕರ ಮಾಡುವ ಅಭಿಷೇಕವೇ ಕಲಶಾಭಿಷೇಕದೀಕ್ಷೆ ಎಂದು ಹೇಳಲ್ಪಟ್ಟಿದೆ.

ಅಥ ಶಿಷ್ಯಸ್ಯಾಭಿಷೇಕದೀಕ್ಷಾಂ ದದ್ಯಾದ್ ಗುರೂತ್ತಮಃ।
ಅನಾದಿಭವಸಂಪನ್ನಸರ್ವದೋಷೋಪಶಾಂತಯೇ॥
ಪಂಚಕುಂಭೋದಕೈಃ ಶುದ್ಧೈಃ ಶಿಷ್ಯಂ ಸಂಸ್ನಾಪಯೇದಪಿ।
ಪಂಚತತ್ತ್ವವಿಶುದ್ಧ್ಯರ್ಥಂ ಪಂಚಬ್ರಹ್ಮಮನೂನ್ ಜಪನ್॥[೧೧೭]

೪. ಸ್ವಸ್ತಿಕಾರೋಹಣದೀಕ್ಷೆ:

ಷಡಧ್ವಶೋಧನದ್ವಾರಾ ಮಾಂಸಪಿಂಡನಿವೃತ್ತಯೇ।
ಸ್ವಸ್ತಿಕಾರೋಹಣಾಭಿಖ್ಯಾಂ ದೀಕ್ಷಾಂ ದದ್ಯಾದ್ಯಥಾವಿಧಿ॥[೧೧೮]

ಎಂಬ ಆಗಮ ವಾಕ್ಯದ ಪ್ರಮಾಣದಂತೆ ಶಿಷ್ಯನ ಮಾಂಸಪಿಂಡನಿವೃತ್ತಿಗಾಗಿ ಮಾಡುವ ಷಡಧ್ವಶೋಧನವೇ ಸ್ವಸ್ತಿಕಾರೋಹಣದೀಕ್ಷೆ ಎಂದು ಕರೆಯಲ್ಪಟ್ಟಿದೆ. ಶಿವಪುರಾಣದಲ್ಲಿ ಷಡಧ್ವದ ಹೆಸರುಗಳು ಹೀಗೆ ನಿರೂಪಿತವಾಗಿವೆ:

---

[೧೧೪] ಕಾ.ಆ, ಕ್ರಿ.ಪಾ, ೧.೫೦-೫೧
[೧೧೫] ಕಾ.ಆ, ಕ್ರಿ.ಪಾ, ೧.೫೪-೬೪
[೧೧೬] ಕಾ.ಆ, ಕ್ರಿ.ಪಾ, ೧.೬೬-೭೦
[೧೧೭] ಕಾ.ಆ, ಕ್ರಿ.ಪಾ, ೧.೭೪-೭೫
[೧೧೮] ಕಾ.ಆ, ಕ್ರಿ.ಪಾ, ೧.೭೭

ಕಲಾಂ ತತ್ತ್ವಂ ಚ ಭುವನಂ ವರ್ಣಂ ಪದಮತಃ ಪರಮ್।
ಮಂತ್ರಶ್ಚೇತಿ ಸಮಾಸೇನ ಷಡಧ್ವಾ ಪರಿಪಠ್ಯತೇ॥[೧೧೯]

“ಕಲಾ, ತತ್ತ್ವ, ಭುವನ, ವರ್ಣ, ಪದ ಮತ್ತು ಮಂತ್ರ ಎಂದು ಸಂಕ್ಷಿಪ್ತವಾಗಿ ಷಡಧ್ವಗಳು ಹೇಳಲ್ಪಟ್ಟಿವೆ.” ಈ ಷಡಧ್ವಗಳಲ್ಲಿ ವರ್ಣ, ಪದ ಮತ್ತು ಮಂತ್ರಗಳೆಂಬ ಮೂರು ಶಬ್ದಾಧ್ವಗಳೆಂದೂ ಮತ್ತು ಕಲಾ, ತತ್ತ್ವ ಮತ್ತು ಭುವನಗಳು ಅರ್ಥಾಧ್ವಗಳೆಂದು ವಿಭಾಗಿಸಲಾಗಿದೆ. ಸಾಧಕನ ಪಾದದಿಂದ ಶಿರಸ್ಸಿನವರೆಗಿನ ಅಂಗಾಂಗಗಳಲ್ಲಿ ಅವುಗಳ ನ್ಯಾಸದಿಂದ ಅರ್ಥಾತ್ ದೃಢವಾದ ಭಾವನೆಯ ಸಂಬಂಧದಿಂದ ಆತನ ಶರೀರವು ಅಧ್ವಾತ್ಮಕವಾಗಿ, ಆ ಶರೀರದ ಮಾಂಸಪಿಂಡತ್ವವು ದೂರವಾಗುತ್ತದೆ. ಆ ಅಧ್ವಗಳ ಸಂಬಂಧವು ಈ ರೀತಿಯಾಗಿ ನಿರೂಪಿತವಾಗಿದೆ:

ಸಂಹಾರಕ್ರಮತೋ ವಿದ್ವಾನ್ ಶಬ್ದಾರ್ಥಾತ್ಮಷಡಧ್ವನಃ।
ಪಾದಾದಿಷು ತು ವಿನ್ಯಸ್ಯೇಚ್ಛಿಷ್ಯಸ್ಯ ನಿಯತಾತ್ಮನಃ॥
ವರ್ಣಾಧ್ವಾನಂ ಶಬ್ದರೂಪಂ ವಿನ್ಯಸ್ಯೇತ್ ಪಾದಯೋರ್ಬುಧಃ।
ಅರ್ಥರೂಪಂ ಕಲಾಧ್ವಾನಂ ಮೇಢ್ರೇ ನ್ಯಸ್ಯೇದನಂತರಮ್॥
ಶಬ್ದರೂಪಂ ಪದಾಧ್ವಾನಂ ನಾಭೌ ವಿನ್ಯಸ್ಯ ದೇಶಿಕಃ।
ತತ್ತ್ವಾಧ್ವಾನಂ ತ್ವರ್ಥರೂಪಂ ಹೃದಿ ನ್ಯಸ್ಯೇದತಂದ್ರಿತಃ॥
ಮಂತ್ರಾಧ್ವಾನಂ ಶಬ್ದರೂಪಂ ವಿನ್ಯಸ್ಯೈವ ಮುಖೇ ತಥಾ।
ಅರ್ಥರೂಪಂ ಚ ಭುವನಾಧ್ವಾನಂ ನ್ಯಸ್ಯೇಚ್ಛಿರಸ್ಯಪಿ॥[೧೨೦]

“ವಿದ್ವಾಂಸನಾದ ಗುರುವು ಶಬ್ದಾರ್ಥರೂಪದ ಷಡಧ್ವದ ನ್ಯಾಸವನ್ನು ಸಂಹಾರ ಕ್ರಮದಿಂದ (ಪಾದಗಳಿಂದ ಆರಂಭಿಸಿ ಶಿರಸ್ಸಿನವರೆಗೆ ಮಾಡುವ ಕ್ರಮವು ಸಂಹಾರಕ್ರಮ) ಸಂಯಮಿಯಾದ ಶಿಷ್ಯನ ಪಾದ ಮುಂತಾದವುಗಳಲ್ಲಿ ಮಾಡಬೇಕು. ಶಬ್ದರೂಪದ ವರ್ಣಾಧ್ವ ವಿನ್ಯಾಸವನ್ನು ಗುರುವು ಶಿಷ್ಯನ ಎರಡು ಪಾದಗಳಲ್ಲಿ ಮಾಡಬೇಕು. ಅರ್ಥರೂಪದ ಕಲಾಧ್ವದ ನ್ಯಾಸವನ್ನು ಅನಂತರ ಜನನೇಂದ್ರಿಯದ ಮೇಲೆ ಮಾಡಬೇಕು. ಶಬ್ದರೂಪದ ಪದಾಧ್ವ ನ್ಯಾಸವನ್ನು ಗುರುವು ಶಿಷ್ಯನ ನಾಭಿಯಲ್ಲಿ ಮಾಡಿ, ಆಲಸ್ಯವಿಲ್ಲದೆ ಅರ್ಥರೂಪದ ತತ್ತ್ವಾಧ್ವ ನ್ಯಾಸವನ್ನು ಶಿಷ್ಯನ ಹೃದಯದಲ್ಲಿ ಮಾಡಬೇಕು. ಶಬ್ದರೂಪದ ಮಂತ್ರಾಧ್ವ ನ್ಯಾಸವನ್ನು ಶಿಷ್ಯನ ಮುಖದಲ್ಲಿ ಮತ್ತು ಅರ್ಥರೂಪದ ಭುವನಾಧ್ವ ನ್ಯಾಸವನ್ನು ಗುರುವು ಶಿಷ್ಯನ ಶಿರಸ್ಸಿನಲ್ಲಿ ಮಾಡಬೇಕು.”

ಈ ರೀತಿಯಾಗಿ ಅಧ್ವಸಂಬಂಧಾನಂತರ ಪೂರ್ವೋಕ್ತ ಪಾದಾದಿಶಿಖಾಂತವಾದ ಆರು ಸ್ಥಾನಗಳಲ್ಲಿ ಪುನಃ ಷಡಕ್ಷರಮಂತ್ರವನ್ನು ಸಂಬಂಧಗೊಳಿಸಲಾಗುತ್ತದೆ. ಈ ಪ್ರಕಾರವಾಗಿ ಮಾಡಲಾಗುವ ಅಧ್ವಸಂಬಂಧವೇ ಸ್ವಸ್ತಿಕಾರೋಹಣದೀಕ್ಷೆಯೆಂದು ಕರೆಯಲ್ಪಟ್ಟಿದೆ.

---

೧೧೯. ಶಿವಪುರಾಣ, ೭-೨-೧೭-೨

೧೨೦. ಕಾ.ಆ, ಕ್ರಿ.ಪಾ, ೧.೭೮-೮೧

೫. ಭೂತಿಪಟ್ಟದೀಕ್ಷೆ:

ಭೂತಿಯೆಂದರೆ ವಿಭೂತಿ. ಶುದ್ಧವಾದ ಗೋಮಯದಿಂದ ನಿರ್ಮಿತವಾದ ವಿಭೂತಿಯ ಧಾರಣೆಯಿಂದ ಶಾರೀರಿಕವಾದ ಮತ್ತು ಮಾನಸಿಕವಾದ ಮಾಲಿನ್ಯವು ನಿವಾರಣೆಯಾಗುತ್ತದೆ. ಆದುದರಿಂದಲೇ ವೀರಶೈವ ಸಿದ್ಧಾಂತದಲ್ಲಿ ಭಸ್ಮಸ್ನಾನ, ಭಸ್ಮೋದ್ಧೂಲನ ಮತ್ತು ತ್ರಿಪುಂಡ್ರಧಾರಣೆಗಳು ವಿಹಿತವಾಗಿವೆ. ದೀಕ್ಷಾಸಂದರ್ಭದಲ್ಲಿ ಸದ್ಗುರುವು ವಿಭೂತಿಯ ಮಾಹಾತ್ಮ್ಯವನ್ನು ಬೋಧಿಸಿ, ತನ್ನ ಅಮೃತಹಸ್ತದಿಂದ ಶಿಷ್ಯನ ಶರೀರದಲ್ಲಿ ವಿಭೂತಿಯನ್ನು ಧರಿಸುತ್ತಾನೆ.

ಅನಾದಿಮಲಸಂಹತ್ಯೈ ಭೂತಿಪಟ್ಟಾಖ್ಯದೀಕ್ಷಯಾ।
ಸ್ನಾನಮುದ್ಧೂಲನಂ ಭೂತ್ಯಾ ಧಾರಣಂ ಚಾಪಿ ಕಾರಯೇತ್॥[೧೨೧]

“ಅನಾದಿ ಮಲಗಳನ್ನು ನಾಶಮಾಡಲು ಭೂತಿಪಟ್ಟದೀಕ್ಷೆಯ ಮೂಲಕ ಗುರುವು ಶಿಷ್ಯನಿಗೆ ಭಸ್ಮಸ್ನಾನವನ್ನು ಮಾಡಿಸಬೇಕು. ಶರೀರಕ್ಕೆ ಭಸ್ಮದ ಉದ್ಧೂಲನ ಮತ್ತು ತ್ರಿಪುಂಡ್ರಧಾರಣ ಮಾಡಿಸಬೇಕು.” ಈ ವಿಧವಾಗಿ ಮಲಪರಿಹಾರಕವಾದ ಭಸ್ಮದಿಂದ ಮಾಡುವ ಶಿಷ್ಯನ ಶರೀರಸಂಸ್ಕಾರವು ಭೂತಿಪಟ್ಟದೀಕ್ಷೆಯೆಂದು ಹೆಸರಾಗಿದೆ. ಇಲ್ಲಿ ವಿಭೂತಿಯೊಡನೆ ರುದ್ರಾಕ್ಷಧಾರಣವೂ ಸಹ ನಿರೂಪಿತವಾಗಿದೆ.

೬. ಆಯತ್ತದೀಕ್ಷೆ:

ಪೂರ್ವೋಕ್ತ ರೀತಿಯಿಂದ ಅಭಿಷೇಕಾದಿಗಳಿಂದ ಸುಸಂಸ್ಕೃತವಾದ ಹಾಗೂ ಪಂಚಸೂತ್ರ ಪ್ರಕ್ರಿಯೆಯಿಂದ ನಿರ್ಮಿತವಾದ ಅಂಗುಷ್ಠ ಪರಿಮಾಣದ ಯಾವ ಶಿವಲಿಂಗವಿದೆಯೋ ಅದರಲ್ಲಿ ಪ್ರಾಣಪ್ರತಿಷ್ಠಾಪನಾದಿಗಳನ್ನು ಮಾಡಲು ಗುರುವು ಆ ಶಿವಲಿಂಗವನ್ನು ತನ್ನ ವಾಮಹಸ್ತಪೀಠದಲ್ಲಿ ಇಟ್ಟುಕೊಂಡು ಶಿಷ್ಯನಿಗೆ ತೋರಿಸುತ್ತಾನೆ:

ಇಷ್ಟಲಿಂಗಂ ಸಮಾದಾಯ ವಾಮಹಸ್ತೇಽಭಿಪೂಜ್ಯ ಚ।
ಸೌಮ್ಯೈತಲ್ಲಿಂಗಮೀಕ್ಷಸ್ವೇತೀಷ್ಟಲಿಂಗಂ ಪ್ರದರ್ಶಯೇತ್॥[೧೨೨]

“ಇಷ್ಟಲಿಂಗವನ್ನು ತನ್ನ ಎಡಗೈಯಲ್ಲಿ ಸ್ಥಾಪಿಸಿ ಪೂಜಿಸಿದ ಮೇಲೆ “ಸೌಮ್ಯನೇ! ಈ ಇಷ್ಟಲಿಂಗವನ್ನು ನೋಡು” ಎಂದು ನುಡಿದು ಶಿಷ್ಯನಿಗೆ ಇಷ್ಟಲಿಂಗವನ್ನು ತೋರಿಸಬೇಕು.”

ಈ ಪ್ರಕಾರ ಗುರುವು ಶಿಷ್ಯನಿಗೆ ಇಷ್ಟಲಿಂಗವನ್ನು ತೋರಿಸಿ, ತಮ್ಮಿಬ್ಬರ ಮಧ್ಯೆ ಜವನಿಕಾಪಟವನ್ನು ಹಿಡಿಸಿ ಮಂಗಲಾಷ್ಟಕವನ್ನು ಉಚ್ಚರಿಸಿ, ಮಂಗಲಾಕ್ಷತೆಗಳನ್ನು ಎರಚಿ, ಶಿಷ್ಯನನ್ನು ಕುರಿತು- “ಸ್ಥೂಲ, ಸೂಕ್ಷ್ಮ ಮತ್ತು ಕಾರಣಗಳೆಂಬ ಅಂಗತ್ರಯದಲ್ಲಿ ಯಾವಾಗಲೂ ಇಷ್ಟಲಿಂಗ-ಭಾವಲಿಂಗ-ಪ್ರಾಣಲಿಂಗಗಳೆಂಬ ಲಿಂಗತ್ರಯಸಂಪನ್ನನಾಗು” ಎಂದು ಉಪದೇಶಿಸಿ ಜವನಿಕಾಪಟವನ್ನು ತೆಗೆಯುತ್ತಾನೆ. ಹೀಗೆ ಇಲ್ಲಿ “ಎಲೈ ಶಿಷ್ಯ!

---

೧೨೧. ಕಾ.ಆ, ಕ್ರಿ.ಪಾ, ೧.೮೩

೧೨೨. ಕಾ.ಆ, ಕ್ರಿ.ಪಾ, ೧.೮೯

ಇಂದಿನಿಂದ ನೀನು ಲಿಂಗಾಯತ್ತನಾಗಿರುವೆ" ಎಂದು ಹೇಳಿ ಇಷ್ಟಲಿಂಗವನ್ನು ತೋರಿಸುತ್ತಾನೆ. ಈ ಸಂಸ್ಕಾರವು ಗುರುವಿನಿಂದ ಉಪದೇಶಿಸಲ್ಪಡುವ ಕಾರಣದಿಂದ ಆಯತ್ತದೀಕ್ಷೆಯೆಂದು ಕರೆಯಲಾಗಿದೆ.

೨. ಸ್ವಾಯತ್ತದೀಕ್ಷೆ:

> ವಾಮಹಸ್ತಂ ತು ಶಿಷ್ಯಸ್ಯ ಮೂಲೇನೈವಾಭಿಮಂತ್ರ್ಯ ಚ॥
> ಸಪ್ತವಾರಂ ಸುಸಂಪೂಜ್ಯ ಸ್ವವಾಮಕರಸಂಸ್ಥಿತಮ್।
> ನಿಕ್ಷಿಪೇತ್ತತ್ರ ತಲ್ಲಿಂಗಂ ತ್ರಿಯಂಬಕಮನುಂ ಸ್ಮರನ್॥[೧೨೩]

"ಶಿಷ್ಯನ ಎಡಗೈಯನ್ನು ಮೂಲಮಂತ್ರ(ಪಂಚಾಕ್ಷರೀಮಂತ್ರ)ದಿಂದ ಅಭಿಮಂತ್ರಿಸಿ, ತನ್ನ ಎಡಗೈಯಲ್ಲಿರುವ ಇಷ್ಟಲಿಂಗವನ್ನು ಏಳು ಸಲ ಪೂಜಿಸಿ 'ತ್ರಿಯಂಬಕ' ಮಂತ್ರವನ್ನು ಸ್ಮರಿಸುತ್ತ ಆ ಇಷ್ಟಲಿಂಗವನ್ನು ಶಿಷ್ಯನ ಹಸ್ತದಲ್ಲಿ ಇರಿಸಬೇಕು" -ಎಂಬ ಆಗಮೋಕ್ತಿಯಂತೆ ತನ್ನ ಹಸ್ತದಲ್ಲಿರುವ, ಸಂಸ್ಕಾರಗೊಂಡಿರುವ ಇಷ್ಟಲಿಂಗವನ್ನು ಗುರುವು ಮಂತ್ರೋಪದೇಶದ ಮೂಲಕ ಶಿಷ್ಯನ ವಾಮಹಸ್ತಪೀಠದಲ್ಲಿ ಸ್ಥಾಪಿಸುತ್ತಾನೆ. ಆಗ ಇಷ್ಟಲಿಂಗವು ಶಿಷ್ಯನ ಅಧೀನವಾಗುತ್ತದೆ. ಈ ಪ್ರಕಾರ ಇಷ್ಟಲಿಂಗವು ಶಿಷ್ಯನ ಸ್ವಾಧೀನವಾಗುವ ಸಂಸ್ಕಾರವೇ ಸ್ವಾಯತ್ತದೀಕ್ಷೆ ಎನಿಸುತ್ತದೆ.

ಪೂರ್ವೋಕ್ತ ಪ್ರಕಾರವಾಗಿ ವೇಧಾ-ಮನು-ಕ್ರಿಯೆಯೆಂಬ ತ್ರಿವಿಧ ದೀಕ್ಷೆಗಳಲ್ಲಿ ಒಟ್ಟು ಇಪ್ಪತ್ತೊಂದು ಸಂಸ್ಕಾರಗಳಾಗುತ್ತವೆ. ಈ ಸಂಸ್ಕಾರಗಳಿಂದ ಸುಸಂಸ್ಕೃತನಾದ ಜೀವನು ಅಂಗತ್ರಯಗಳಲ್ಲಿ ಮಲತ್ರಯರಹಿತನಾಗಿ ಷಟ್‌ಸ್ಥಲಬ್ರಹ್ಮಜಿಜ್ಞಾಸೆಗೆ ಅಧಿಕಾರಿಯಾಗುತ್ತಾನೆ.

ಗುರುವಿನ ಆವರಣ ಶಬ್ದವಾಚ್ಯತ್ವ

ವೀರಶೈವ ಧರ್ಮದ ಅಷ್ಟಾವರಣಗಳಲ್ಲಿ ಮೊದಲನೆಯ ಆವರಣವೆಂದು ಪರಿಗಣಿಸಿರುವ 'ಗುರು' ತ್ರಿವಿಧ ದೀಕ್ಷೆಗಳಿಂದ ಮಲತ್ರಯಗಳನ್ನು ನಿವಾರಿಸಿ ಶಿಷ್ಯನಿಗೆ ಲಿಂಗತ್ರಯಗಳನ್ನು ಉಪದೇಶಿಸಿ, ಸನ್ಮಾರ್ಗದಲ್ಲಿ ಪ್ರವರ್ತಿಸುವಂತೆ ಮಾಡುವುದರ ಮೂಲಕ ಶಿಷ್ಯನನ್ನು ಅರಿಷಡ್ವೈರಿಗಳಿಂದ ರಕ್ಷಿಸುತ್ತಾನೆ ಎನ್ನುವ ಕಾರಣದಿಂದ ಗುರುವು ರಕ್ಷಾಕವಚರೂಪ ಆವರಣಶಬ್ದವಾಚಿಯಾಗುತ್ತಾನೆಂದು ತಿಳಿಯಬೇಕು.

೨. ಲಿಂಗ

ವೀರಶೈವ ಅಷ್ಟಾವರಣಗಳಲ್ಲಿ ಲಿಂಗವು ಎರಡನೆಯ ಆವರಣವೆಂದು ಪರಿಗಣಿತವಾಗಿದೆ. ಲಿಂಗವೆಂದರೇನು? ಅದು ಎಷ್ಟು ವಿಧ? ಅದನ್ನು ಪಡೆಯುವ ವಿಧಾನವಾವುದು? ಅದರ ಪೂಜಾವಿಧಿ ಹೇಗೆ? ಮತ್ತು ಅದರ ಪೂಜಾಫಲವೇನು? ಮುಂತಾದವುಗಳನ್ನು ಶಾಸ್ತ್ರೋಕ್ತ ರೀತಿಯಲ್ಲಿ ವಿವರಿಸಲಾಗುವುದು.

---

[೧೨೩] ಕಾ.ಆ, ಕ್ರಿ.ಪಾ, ೧.೯೪-೯೫

'ಲಿಂಗ' ಶಬ್ದದ ಅರ್ಥ

ಲಯಂ ಗಚ್ಛತಿ ಯತ್ರೈವ ಜಗದೇತಚ್ಚರಾಚರಮ್।
ಪುನಃ ಪುನಃ ಸಮುತ್ಪತ್ತಿಂ ತಲ್ಲಿಂಗಂ ಬ್ರಹ್ಮ ಶಾಶ್ವತಮ್॥[೧೨೪]

"ಯಾವ ವಸ್ತುವಿನಲ್ಲಿ ಈ ಚರಾಚರಾತ್ಮಕವಾದ ಜಗತ್ತು ಲಯವನ್ನು ಹೊಂದುವುದೋ, ಯಾವ ವಸ್ತುವಿನಲ್ಲಿ ಪುನಃ ಪುನಃ ಉತ್ಪತ್ತಿಯನ್ನು ಹೊಂದುವುದೋ ಆ ನಿತ್ಯವಾದ ಪರಬ್ರಹ್ಮವೇ ಲಿಂಗ" ಎಂಬ ಶ್ರೀ ರೇಣುಕ ಭಗವತ್ಪಾದರ ಉಕ್ತಿಯಂತೆ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣೀಭೂತವಾದ ಯಾವ ಪರಶಿವಬ್ರಹ್ಮ ಇರುವುದೋ, ಅದೇ ಈ ಸಿದ್ಧಾಂತದಲ್ಲಿ 'ಲಿಂಗ'ವೆಂದು ಕರೆಯಲ್ಪಟ್ಟಿದೆ. ಸೂಕ್ಷ್ಮಾಗಮದಲ್ಲಿ:

ಲಿಕಾರೋ ಲಯಬುದ್ಧಿಸ್ಸ್ಯೋ ಬಿಂದುನಾ ಸ್ಥಿತಿರುಚ್ಯತೇ।
ಗಕಾರಾತ್ ಸೃಷ್ಟಿರಿತ್ಯುಕ್ತಾ ಲಿಂಗಂ ಸೃಷ್ಟ್ಯಾದಿಕಾರಣಮ್॥[೧೨೫]

" 'ಲಿ'ಕಾರವು ಲಯವನ್ನು, ಬಿಂದು(ಅನುಸ್ವಾರ=ಂ)ವು ಸ್ಥಿತಿಯನ್ನು ಮತ್ತು 'ಗ'ಕಾರವು ಸೃಷ್ಟಿಯನ್ನು ತಿಳಿಸುತ್ತವೆ. ಹೀಗೆ 'ಲಿಂಗ'ವು ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣ" ಎಂದು ಅಕ್ಷರದ ಅರ್ಥದಿಂದಲೂ ಕೂಡ ಮೇಲಿನ ಅಭಿಪ್ರಾಯವನ್ನೇ ವ್ಯಕ್ತಪಡಿಸಲಾಗಿದೆ. ಜಗತ್ತಿಗೆ ಕಾರಣೀಭೂತವಾದ ಲಿಂಗತತ್ತ್ವವು ಶಿವ-ಶಕ್ತಿಯರ ಸಂಯುಕ್ತರೂಪ, ಅದರ ಕೇವಲ ಶಿವರೂಪದಲ್ಲಿ ಜಗತ್ತಿನ ಕಾರಣತ್ವವೆಂದು ಪ್ರತಿಪಾದಿತವಾಗಿದೆ. ಆಗಮಗಳಲ್ಲಿ 'ಶಿವ'ನನ್ನು 'ನಾದ'ವೆಂತಲೂ, ಶಕ್ತಿಯನ್ನು 'ಬಿಂದು'ವೆಂದು ಕರೆಯಲಾಗಿದೆ. ಶಿವ- ಶಕ್ತಿಯರ (ನಾದ-ಬಿಂದುಗಳ) ಸಂಯುಕ್ತರೂಪವೇ ಲಿಂಗ. ಹೇಗೆಂದರೆ-

ಬಿಂದುನಾದಾತ್ಮಕಂ ಸರ್ವಂ ಜಗತ್ ಸ್ಥಾವರಜಂಗಮಮ್।
ಬಿಂದುಃ ಶಕ್ತಿಃ ಶಿವೋ ನಾದಃ ಶಿವಶಕ್ತ್ಯಾತ್ಮಕಂ ಜಗತ್॥
ಬಿಂದುನಾದಾತ್ಮಕಂ ಲಿಂಗಂ ಜಗತ್ಕಾರಣಮುಚ್ಯತೇ।[೧೨೬]

"ಚರಾಚರಾತ್ಮಕವಾದ ಈ ಜಗತ್ತೆಲ್ಲವೂ ಬಿಂದು-ನಾದಾತ್ಮಕವಾಗಿದೆ. ಶಕ್ತಿಯು ಬಿಂದು, ಶಿವನು ನಾದ. ಹೀಗೆ ಈ ಜಗತ್ತು ಶಿವ-ಶಕ್ತ್ಯಾತ್ಮಕವಾಗಿದೆ. ಬಿಂದು-ನಾದಾತ್ಮಕವಾದ ಲಿಂಗವು ಜಗತ್ತಿಗೆ ಕಾರಣವೆಂದು ಹೇಳಲಾಗಿದೆ."

ಹೀಗೆ ಶಿವ-ಶಕ್ತ್ಯಾತ್ಮಕವಾದ ಲಿಂಗದಿಂದ ಸೃಷ್ಟಿಯು ಅನೇಕ ಪ್ರಕಾರವಾಯಿತು ಎಂದು ಹೇಳಲಾಗಿದೆ.

ದಕ್ಷಿಣಾಂಗಾತ್ ತತೋ ಬ್ರಹ್ಮಾ ವಿಷ್ಣುರ್ವಾಮಾಂಗತಸ್ತಥಾ।
ಸಮಸ್ತದೇವಜನನೀ ಗಾಯತ್ರೀ ಹೃದಯಾದಭೂತ್॥

---

[೧೨೪] ಸಿ.ಶಿ, ೬.೩೬

[೧೨೫] ಸೂ.ಆ, ಕ್ರಿ.ಪಾ, ೬.೫

[೧೨೬] ಚ.ಜ್ಞಾ, ಕ್ರಿ.ಪಾ, ೩.೧೩,೧೬.

ವೇದಾಃ ಶಿರಸ್ಸಮುದ್ಭೂತಾಃ ಸಾಂಗೋಪಾಂಗಾಃ ಸಹಸ್ರಶಃ।
ಉತ್ಪದ್ಯತೇ ಲೀಯತೇ ಚ ಲಿಂಗೇಽಸ್ಮಿನ್ ಸಚರಾಚರಮ್॥[೧೨೭]

"ಶರೀರದ ಬಲಭಾಗದಿಂದ ಬ್ರಹ್ಮ, ಎಡಭಾಗದಿಂದ ವಿಷ್ಣು, ಎಲ್ಲ ದೇವತೆಗಳ ಮಾತೆಯಾದ ಗಾಯತ್ರಿಯು ಹೃದಯದಿಂದ ಜನಿಸಿದಳು. ಸಹಸ್ರಾರು ಅಂಗ (ವೇದಾಂಗ), ಉಪಾಂಗ ಸಹಿತವಾದ ವೇದಗಳು ಶಿರಸ್ಸಿನಿಂದ ಹುಟ್ಟಿದವು. ಚರಾಚರಾತ್ಮಕವಾದ ಎಲ್ಲವೂ ಈ ಲಿಂಗದಿಂದ ಉತ್ಪತ್ತಿಯಾಗುತ್ತವೆ ಮತ್ತು ಲಯ ಹೊಂದುತ್ತವೆ." ಆದುದರಿಂದ "ಯತೋ ವಾ ಇಮಾನಿ ಭೂತಾನಿ ಜಾಯಂತೇ"[೧೨೮] (ಯಾವುದರಿಂದ ಈ ಪ್ರಾಣಿಗಳು ಹುಟ್ಟುತ್ತವೆಯೋ) ಇತ್ಯಾದಿ ಬ್ರಹ್ಮಸ್ವರೂಪ ನಿರೂಪಣೆಯ ಪರವಾದ ಶ್ರುತಿವಾಕ್ಯಗಳೂ ಕೂಡ ಲಿಂಗಸ್ವರೂಪವನ್ನೇ ವರ್ಣಿಸುತ್ತಿವೆ ಎಂದು ತಿಳಿಯಬೇಕು. "ಲಿಂಗಂ ತದ್ ಬ್ರಹ್ಮಸಂಜ್ಞಿತಮ್"[೧೨೯] (ಲಿಂಗವನ್ನು ಬ್ರಹ್ಮವೆಂದು ಕರೆಯಲಾಗಿದೆ), "ಲಿಂಗಂ ಬ್ರಹ್ಮ ಸನಾತಮ್"[೧೩೦] (ಲಿಂಗವು ಶಾಶ್ವತವಾದ ಬ್ರಹ್ಮ) ಮುಂತಾದೆಡೆಗಳಲ್ಲಿ ಲಿಂಗ-ಬ್ರಹ್ಮ ಪದಗಳು ಪರ್ಯಾಯಾರ್ಥದಲ್ಲಿ ಪ್ರಯೋಗಿಸಿರುವುದೇ ಇದಕ್ಕೆ ಕಾರಣ. ಇದೇ ರೀತಿಯಾಗಿ ಉಪನಿಷತ್ತುಗಳಲ್ಲಿ ಯಾವುದನ್ನು "ಬ್ರಹ್ಮ" ಎಂಬ ಪದದಿಂದ ಕರೆಯಲಾಗಿದೆಯೋ, ಅದೇ ಆಗಮಗಳಲ್ಲಿ 'ಲಿಂಗ' ಪದದಿಂದ ಕರೆಯಲಾಗಿದೆ ಎಂಬುದು ಸಿದ್ಧವಾಗಿದೆ.

ಲಿಂಗಂ ಶೈಮಿದಂ ಸಾಕ್ಷಾಚ್ಛಿವಶಕ್ತ್ಯುಭಯಾತ್ಮಕಮ್।
ಧ್ಯಾತವ್ಯಮರ್ಚನೀಯಂ ಚ ಭುಕ್ತಿಮುಕ್ತಿಫಲೇಚ್ಛುನಾ॥[೧೩೧]

"ಭುಕ್ತಿ ಮತ್ತು ಮುಕ್ತಿ ಫಲಾಪೇಕ್ಷೆಯು, ಶಿವ-ಶಕ್ತಿಯರಿಬ್ಬರ ರೂಪವಾದ ಈ ಶಿವಲಿಂಗವನ್ನು ಧ್ಯಾನಿಸಬೇಕು ಮತ್ತು ಪೂಜಿಸಬೇಕು" ಎಂಬ ಸೂಕ್ಷ್ಮಾಗಮದ ಉಕ್ತಿಯಂತೆ ವೀರಶೈವಾಚಾರ್ಯರು ಶಿವಲಿಂಗದ ಉಪಾಸನೆಯನ್ನು ಮಾಡಿ, ಅದರ ಉಪಾಸನಾಪದ್ಧತಿಯನ್ನು ಪ್ರಚಾರಮಾಡಿದರು. ಈ ಉಪಾಸನೆಯು ಬಹಿರಂಗ ಮತ್ತು ಅಂತರಂಗವೆಂದು ಎರಡು ವಿಧ. ಆಧಾರಚಕ್ರ[೧೩೨] ಹೃದಯ, ಭ್ರೂಮಧ್ಯದ ಸ್ಥಾನಗಳಲ್ಲಿ ಜ್ಯೋತಿರೂಪದಿಂದ ಬೆಳಗುವ ಶಿವನ ಪರಾತ್ಪರ ಲಿಂಗದ ಉಪಾಸನೆ ಅಂತರಂಗ ಎಂದೆನಿಸಿದೆ. ಹೃದಯದಲ್ಲಿರುವ ಜ್ಯೋತಿರ್ಲಿಂಗದ ಪ್ರತಿಕೃತಿಯ ರೂಪದಿಂದ ಶಿಲೆ

---

೧೨೭. ಸೂ.ಆ, ಕ್ರಿ.ಪಾ, ೬.೧೪-೧೫

೧೨೮. ತೈತ್ತಿ.ಉ, ೩.೩.೧

೧೨೯. ಲಿಂ.ಚ, ಪು. ೧೧೮

೧೩೦. ಸಿ.ಶಿ, ೬.೩೫

೧೩೧. ಸೂ.ಆ, ಕ್ರಿ.ಪಾ, ೬.೭

೧೩೨. ಆಧಾರೇ ಹೃದಯೇ ವಾಪಿ ಭ್ರೂಮಧ್ಯೇ ವಾ ನಿರಂತರಮ್।
ಜ್ಯೋತಿರ್ಲಿಂಗಾನುಸಂಧಾನಮಾಂತರಂ ಲಿಂಗಧಾರಣಮ್॥ -ಸಿ.ಶಿ, ೬.೩೮

ಇತ್ಯಾದಿಗಳಿಂದ ನಿರ್ಮಿತವಾದ ಇಷ್ಟಲಿಂಗದ ಪೂಜಾದಿಗಳು ಬಹಿರಂಗವೆಂದು ತಿಳಿಯಬೇಕು. ಇತರ ದರ್ಶನಗಳಂತೆ ವೀರಶೈವ ದರ್ಶನದಲ್ಲಿಯೂ ಕೂಡ ಜೀವಾತ್ಮನ ಸ್ಥೂಲ-ಸೂಕ್ಷ್ಮ-ಕಾರಣಗಳೆಂಬ ಮೂರು ವಿಧ ಶರೀರಗಳನ್ನು ಒಪ್ಪಿಕೊಳ್ಳಲಾಗಿದೆ. ಎಷ್ಟು ಶರೀರಗಳೋ ಅಷ್ಟು ಲಿಂಗಗಳು ಎಂಬ ನಿಯಮದಂತೆ ಈ ದರ್ಶನದಲ್ಲಿ ಪ್ರತ್ಯೇಕವಾಗಿ ಜೀವನ ಮೂರು ವಿಧ ಲಿಂಗಗಳ ಉಪಾಸನೆಯು ವಿಹಿತವಾಗಿದೆ. ಅದರಂತೆ ಸ್ಥೂಲಶರೀರದಲ್ಲಿ ಇಷ್ಟಲಿಂಗ, ಸೂಕ್ಷ್ಮಶರೀರದಲ್ಲಿ ಪ್ರಾಣಲಿಂಗ ಮತ್ತು ಕಾರಣಶರೀರದಲ್ಲಿ ಭಾವಲಿಂಗದ ಉಪಾಸನೆಯು ನಿರೂಪಿತವಾಗಿದೆ:

> ಇಷ್ಟಂ ಸ್ಥೂಲತನೋಃ ಪ್ರೋಕ್ತಂ ಪ್ರಾಣಂ ಸೂಕ್ಷ್ಮತನೋಃ ಸ್ಮೃತಮ್।
> ಭಾವಾಖ್ಯಂ ಕಾರಣಸ್ಯೈವ ತನುತ್ರಯಗತಂ ತ್ರಯಮ್॥
> ಪೂಜಯನ್ನಿಷ್ಟಲಿಂಗಂ ತು ನಿಧ್ಯಾಯನ್ ಪ್ರಾಣಲಿಂಗಕಮ್।
> ಭಾವಯನ್ ಭಾವಲಿಂಗಂ ವೈ ಮೃತ್ಯುಪಾಶಾಂಶ್ಛಿನತ್ತಿ ಸಃ॥[೧೩೩]

"ಇಷ್ಟಲಿಂಗವು ಸ್ಥೂಲಶರೀರಕ್ಕೆ, ಪ್ರಾಣಲಿಂಗವು ಸೂಕ್ಷ್ಮಶರೀರಕ್ಕೆ ಮತ್ತು ಭಾವಲಿಂಗವು ಕಾರಣಶರೀರಕ್ಕೆ ಸಂಬಂಧಿಸಿವೆ ಎಂದು ತಿಳಿಯಬೇಕು. ಹೀಗೆ ಮೂರು ವಿಧ ಲಿಂಗಗಳು ಮೂರು ಶರೀರಗಳಿಗೆ ಸಂಬಂಧಿಸಿವೆ. ಇಷ್ಟಲಿಂಗವನ್ನು ಪೂಜಿಸಿ, ಪ್ರಾಣಲಿಂಗದಲ್ಲಿ ಧ್ಯಾನಾಸಕ್ತನಾಗಿ ಮತ್ತು ಭಾವಲಿಂಗವನ್ನು ಭಾವಿಸುವ ಸಾಧಕನ ಮೃತ್ಯುಪಾಶವು ಕತ್ತರಿಸುತ್ತದೆ." ಇಂತಹ ಮೂರು ಪ್ರಕಾರದ ಲಿಂಗಗಳ ಉಪಾಸನೆಯಿಂದ ಅಂಗನೆನಿಸುವ ಜೀವನೂ ಕೂಡ ಲಿಂಗರೂಪಿಯಾಗುತ್ತಾನೆ ಮತ್ತು ಮೃತ್ಯುಪಾಶದಿಂದ ಬಿಡುಗಡೆ ಹೊಂದುತ್ತಾನೆ. ಈ ರೀತಿಯಾಗಿ ಜೀವಾತ್ಮನ ಮೃತ್ಯುಪಾಶಚ್ಛೇದಕ್ಕೆ ಕಾರಣೀಭೂತವಾದ ಇಷ್ಟಲಿಂಗ, ಪ್ರಾಣಲಿಂಗ ಮತ್ತು ಭಾವಲಿಂಗಗಳೆಂಬ ತ್ರಿವಿಧ ಲಿಂಗಗಳ ಸ್ವರೂಪವನ್ನು ಕ್ರಮವಾಗಿ ಚರ್ಚಿಸಲಾಗುವುದು.

ಇಷ್ಟಲಿಂಗ: ಕ್ರಿಯಾದೀಕ್ಷೆಯಲ್ಲಿ ಸದ್ಗುರುವಿನಿಂದ ಸಂಸ್ಕರಿಸಿ ಕೊಡಲ್ಪಟ್ಟ ಅಂಗುಷ್ಠ ಗಾತ್ರದ ಶಿಲಾಮಯ ಶಿವಲಿಂಗವನ್ನು ವೀರಶೈವ ಸಿದ್ಧಾಂತದಲ್ಲಿ "ಇಷ್ಟಲಿಂಗ" ಎಂದು ಕರೆಯಲಾಗುತ್ತದೆ. ಅದನ್ನು ನಿಷ್ಠೆಯಿಂದ ಪೂಜಿಸುವುದರಿಂದ ಪೂಜಕನ (ಭಕ್ತನ) ಇಷ್ಟಾರ್ಥವು ಸಿದ್ಧಿಸುತ್ತದೆ ಎಂಬ ಕಾರಣದಿಂದ ಅದನ್ನು "ಇಷ್ಟಲಿಂಗ"ವೆಂದು ಕರೆಯುವುದು ಸರಿಯಾಗಿದೆ ಎನಿಸುತ್ತದೆ. ಉಪನಯನ ಸಂಸ್ಕಾರವಾದ ವ್ಯಕ್ತಿಗೆ ಹೇಗೆ ಯಜ್ಞೋಪವೀತವು ಬಾಹ್ಯಚಿಹ್ನೆಯೋ, ಹಾಗೆಯೇ ಇಷ್ಟಲಿಂಗವು ಕ್ರಿಯಾದೀಕ್ಷೆಯಿಂದ ಸಂಪನ್ನನಾದ ವೀರಶೈವನನ್ನು ಪರಿಚಯಿಸುವ ಒಂದು ಬಾಹ್ಯಚಿಹ್ನೆಯೆಂದು ತಿಳಿಯಬೇಕು. ಅದನ್ನು ಭಗವಾನ್ ವ್ಯಾಸರು ಶಂಕರಸಂಹಿತೆಯಲ್ಲಿ ಹೀಗೆ ಹೇಳಿದ್ದಾರೆ:

> ಯೋ ಹಸ್ತಪೀಠೇ ನಿಜಮಿಷ್ಟಲಿಂಗಂ ವಿನ್ಯಸ್ಯ ತಲ್ಲೀನಮನಃಪ್ರಚಾರಃ।
> ಬಾಹ್ಯಕ್ರಿಯಾಸಂಕುಲನಿಸ್ಪೃಹಾತ್ಮಾ ಸಂಪೂಜಯತ್ಯಂಗ ಸ ವೀರಶೈವಃ॥[೧೩೪]

---

೧೩೩. ಚ.ಜ್ಞಾ, ಕ್ರಿ.ಪಾ, ೩.೪೫,೪೮

೧೩೪. ವೀ.ಆ.ಚಂ, ಪು. ೮೩

"ಯಾರು ತನ್ನ ವಾಮಹಸ್ತಪೀಠದಲ್ಲಿ ಇಷ್ಟಲಿಂಗವನ್ನಿಟ್ಟುಕೊಂಡು ಭಕ್ತಿಪರವಶನಾಗುವುದರಿಂದ ಬಾಹ್ಯಕ್ರಿಯೆಯ ಗೋಚರವಿಲ್ಲದೆ, ನಿಸ್ಪೃಹತೆಯಿಂದ ಪೂಜಿಸುತ್ತಾನೆಯೋ ಅವನೇ ವೀರಶೈವನು."

ದೀಕ್ಷಾಸಂಪನ್ನನಾದ ಭಕ್ತನು ಹಸ್ತಪೀಠದಲ್ಲಿ ಇಷ್ಟಲಿಂಗವನ್ನಿಟ್ಟು ಪೂಜಿಸುತ್ತಿರುವಾಗ "ಕದಾಚಿತ್ ಕುತ್ರಚಿದ್ವಾಪಿ ನ ವಿಯೋಜಯದೇಹತಃ"[೧೩೫] (ಒಮ್ಮೆಯೂ, ಎಲ್ಲಿಯೂ ಕೂಡ ನಿನ್ನ ದೇಹದಿಂದ ಇಷ್ಟಲಿಂಗವನ್ನು ತೆಗೆಯಬೇಡ) ಎಂಬ ಶ್ರೀಗುರುವಿನ ಅಪ್ಪಣೆಯಂತೆ ಪೂಜೆ ಮುಗಿದ ನಂತರವೂ ಆ ಇಷ್ಟಲಿಂಗವನ್ನು ತನ್ನ ಶರೀರದ ಮೇಲೆ ನಾಭಿಯ ಮೇಲ್ಭಾಗದಲ್ಲಿ, ಕುತ್ತಿಗೆ, ವಕ್ಷಃಸ್ಥಲ ಇತ್ಯಾದಿ ಸ್ಥಾನಗಳಲ್ಲಿ ಯಾವಾಗಲೂ ಧರಿಸಿರುತ್ತಾನೆ.

ವಿನಾ ವಿಧಾನಮೀಶಾನಿ ನ ಕುರ್ಯಾಲ್ಲಿಂಗಧಾರಣಮ್।
ಕೃತಂ ಚೇದಕೃತಂ ವಿದ್ಧಿ ನ ತಚ್ಛೈವಮತಂ ಭವೇತ್॥[೧೩೬]

"ಎಲೈ ಪಾರ್ವತಿ, ಕ್ರಮವನ್ನು ತಿಳಿಯದೆ ಲಿಂಗಧಾರಣೆಯನ್ನು ಮಾಡಬಾರದು. ಮಾಡಿದ್ದಾದರೆ ಮಾಡದಂತೆಯೇ ಸರಿ. ಅದು ಶಿವಮತ ಅರ್ಥಾತ್ ವೀರಶೈವ ಮತವಾಗುವುದಿಲ್ಲ" ಎಂಬ ಆಗಮೋಕ್ತಿಯಂತೆ ಪೂರ್ವೋಕ್ತ ದೀಕ್ಷಾಸಂಸ್ಕಾರವಿಲ್ಲದೆ ಒಂದು ವೇಳೆ ಅಂಗಡಿಯಲ್ಲಿ ದೊರೆಯುವ ಶಿವಲಿಂಗವನ್ನು ಕೊಂಡು ಸಂಸ್ಕಾರವಿಲ್ಲದೆ ತಾನೇ ಧರಿಸಿದ್ದೇ ಆದರೆ, ಅದನ್ನು ಇಷ್ಟಲಿಂಗವೆಂದು ಕರೆಯಲಾಗುವುದಿಲ್ಲ. ವಿವಾಹ ಸಂಸ್ಕಾರವಿಲ್ಲದ ಒಬ್ಬ ಕನ್ಯೆಯು ತಾನೇ ಸ್ವಹಸ್ತದಿಂದ ತನ್ನ ಕೊರಳಿಗೆ ಮಂಗಲಸೂತ್ರವನ್ನು ಧರಿಸುವುದರಿಂದ ಅಥವಾ ಸೀಮಂತ ಕಾರ್ಯದಲ್ಲಿ ತಾನೇ ತನ್ನ ಹಣೆಗೆ ಕುಂಕುಮ ಧರಿಸುವುದರಿಂದ ಆಕೆಯು ಸೌಭಾಗ್ಯವತಿಯಾಗುವುದಿಲ್ಲ. ಏಕೆಂದರೆ ಸೌಭಾಗ್ಯವನ್ನು ನೀಡುವ ಪತಿಯು ಆಕೆಗಿರುವುದಿಲ್ಲ. ಅದೇ ರೀತಿಯಾಗಿ ಇಲ್ಲಿಯೂ ಕೂಡ ಸಂಸ್ಕಾರ ಮಾಡಬೇಕಾಗಿರುವ ಸದ್ಗುರುವಿಲ್ಲದೆ ದೊರೆತ ಲಿಂಗವು ಇಷ್ಟಲಿಂಗವಾಗಲು ಅರ್ಹವಾಗುವುದಿಲ್ಲ. ಆದುದರಿಂದ ಮೋಕ್ಷಾಕಾಂಕ್ಷಿಗಳಾದ ವೀರಶೈವರು ದೀಕ್ಷಾಸಂಸ್ಕಾರದ ಮೂಲಕವೇ ಇಷ್ಟಲಿಂಗವನ್ನು ಧರಿಸಬೇಕು.

ಇಷ್ಟಲಿಂಗ ಶಬ್ದದ ಅರ್ಥಪರಿಶೀಲನೆ

ಪೂರ್ವೋಕ್ತ ರೀತಿಯಲ್ಲಿ ಸದ್ಗುರುವಿನಿಂದ ಪ್ರಾಪ್ತವಾದ, ಶರೀರದ ಮೇಲೆ ಸದಾ ಧರಿಸಬೇಕಾದ ಯಾವ ಲಿಂಗವಿದೆಯೋ ಅದು ಇಷ್ಟಾರ್ಥವನ್ನು ನೀಡುವುದರಿಂದ 'ಇಷ್ಟಲಿಂಗ'ವೆಂದು ಹೇಳಿದ್ದು ಸರಿಯಲ್ಲ. ಏಕೆಂದರೆ ಭೂಮಿಯ (ನೆಲದ) ಮೇಲೆ ಸ್ಥಾಪಿತವಾಗಿರುವ ಶಿವಲಿಂಗಗಳಲ್ಲಿಯೂ ಕೂಡ ಆ ವಿಧವಾದ ಇಷ್ಟಾರ್ಥವನ್ನು ನೀಡುವ ಸಾಮರ್ಥ್ಯವಿದೆ. ಒಂದು ಪಕ್ಷ ಅಂತಹ ಸಾಮರ್ಥ್ಯವಿರದಿದ್ದಲ್ಲಿ ಕಾಶೀ-ರಾಮೇಶ್ವರ ಮುಂತಾದ ಶಿವಕ್ಷೇತ್ರಗಳ ಯಾತ್ರೆಯು ವ್ಯರ್ಥವೆಂದು ಪೂರ್ವಪಕ್ಷದವರ ಆಕ್ಷೇಪಕ್ಕೆ

---

[೧೩೫] ಸಿ.ಶಿ, ೬.೨೫

[೧೩೬] ಪಾರಮೇಶ್ವರ ತಂತ್ರಮ್, ೧.೭೭

ಹೀಗೆ ಉತ್ತರಿಸಲಾಗಿದೆ. ಅದು ಹಾಗಲ್ಲ. ಯೌಗಿಕವಾಗಿ ಮತ್ತು ರೂಢ್ಯಾರ್ಥದಿಂದಲೂ ಸಮಾಧಾನ ಕೊಡುತ್ತೇವೆ. ಅದು ಹೇಗೆಂದರೆ- ಇಷ್ಟಲಿಂಗ ಎಂಬಲ್ಲಿ ಯೌಗಿಕಾರ್ಥ ಮಾತ್ರ ಧ್ವನಿತವಾಗದೆ, ಪಂಕಜ ಶಬ್ದದಂತೆ ರೂಢಿಯ ಅರ್ಥವೂ ಧ್ವನಿತವಾಗುತ್ತದೆ. ಆದುದರಿಂದ ಇಷ್ಟಾರ್ಥವನ್ನು ನೀಡುವ ಶಕ್ತಿಯು ಭೂಮಿಯ (ನೆಲದ) ಮೇಲೆ ಸ್ಥಾಪಿತವಾಗಿರುವ ಶಿವಲಿಂಗಗಳಲ್ಲಿ ಇದ್ದರೂ ಕೂಡ ಒಂದು ಲಿಂಗವನ್ನಾದರೂ ಇಲ್ಲಿಯವರೆಗೆ ಇಷ್ಟಲಿಂಗವೆಂದು ಕರೆಯದೆ, ಅವುಗಳನ್ನು ವಿಶ್ವೇಶ್ವರಲಿಂಗ, ರಾಮೇಶ್ವರಲಿಂಗ ಮುಂತಾದ ಹೆಸರುಗಳಿಂದಲೇ ಕರೆಯಲಾಗುತ್ತಿದೆ. ಮತ್ತು ಇದಲ್ಲದೆ 'ಇಷ್ಟ'ವು ಲೌಕಿಕ ಮತ್ತು ಪಾರಮಾರ್ಥಿಕ ಎಂದು ಎರಡು ವಿಧ. ಅವುಗಳಲ್ಲಿ ಐಹಿಕ-ಆಮುಷ್ಮಿಕ ಸುಖದ ಬಯಕೆ ಲೌಕಿಕ ಮತ್ತು ಮೋಕ್ಷವು ಪಾರಮಾರ್ಥಿಕ. ಕಾಶೀ ಮುಂತಾದ ಕ್ಷೇತ್ರಗಳಲ್ಲಿನ ವಿಶ್ವೇಶ್ವರಲಿಂಗ ಮೊದಲಾದ ಶಿವಲಿಂಗಗಳ ಪೂಜೆಯಿಂದ ಧರ್ಮಾರ್ಥಕಾಮಗಳೆಂಬ ತ್ರಿವರ್ಗಗಳ ಲೌಕಿಕ ಫಲರೂಪದ ಪ್ರಾಪ್ತಿಯುಂಟಾಗುತ್ತದೆ. ಆದರೆ ಆ ಲಿಂಗಗಳು ಪ್ರತೀಕೋಪಾಸನೆಯ ರೂಪದವುಗಳಾದ್ದರಿಂದ ಪರಮಪುರುಷಾರ್ಥ (ಮೋಕ್ಷ) ಪ್ರಾಪ್ತಿಯಾಗುವುದಿಲ್ಲ.

ಮೇಲಿನ ಚರ್ಚೆಯ ಸಾರವಿಷ್ಟು- ಪ್ರತೀಕೋಪಾಸನೆ ಮತ್ತು ಅಹಂಗ್ರಹೋಪಾಸನೆ ಎಂದು ಉಪಾಸನೆಯ ಎರಡು ಪ್ರಕಾರಗಳನ್ನು ಶಾಸ್ತ್ರಗಳು ಪ್ರತಿಪಾದಿಸುತ್ತವೆ. ಅವುಗಳಲ್ಲಿ ಉಪಾಸ್ಯ (ಪೂಜಿಸಲ್ಪಡುವ) - ಉಪಾಸಕ (ಪೂಜಿಸುವವನು) ಭೇದ ಜ್ಞಾನದಿಂದ ಮತ್ತು ಲೌಕಿಕ ಫಲಪ್ರಾಪ್ತಿಯ ಇಚ್ಛೆಯಿಂದ ಮಾಡುವ ಉಪಾಸನೆಯು "ಪ್ರತೀಕೋಪಾಸನೆ" ಎಂದು ಹೇಳಲ್ಪಟ್ಟಿದೆ. ಸೋಽಹಂ (ಅವನೇ ನಾನು) ಎಂದು ಉಪಾಸ್ಯ-ಉಪಾಸಕಗಳೆರಡರ ಅಭೇದ ಜ್ಞಾನದಿಂದ ಮಾಡುವ ಉಪಾಸನೆಯು "ಅಹಂಗ್ರಹೋಪಾಸನೆ". ಇದನ್ನೇ ವೇದಾಂತದಲ್ಲಿ 'ಮನನ' ಎಂದು ಕರೆಯಲಾಗಿದೆ. ವೀರಶೈವ ಸಿದ್ಧಾಂತದಲ್ಲಿ ಪ್ರತಿಪಾದಿತವಾದ ಇಷ್ಟಲಿಂಗೋಪಾಸನೆಯು ಪ್ರತೀಕೋಪಾಸನೆಯಲ್ಲ. ಆದರೆ ಅದು ಅಹಂಗ್ರಹೋಪಾಸನೆ. ಏಕೆಂದರೆ ಇಷ್ಟಲಿಂಗವು ತನ್ನ ಆತ್ಮದ ಜ್ಯೋತಿಯ ಪ್ರತಿಕೃತಿಯ ರೂಪದ ಕಾರಣದಿಂದಲೂ ಮತ್ತು ಆ ಲಿಂಗದಲ್ಲಿ ಸದ್ಗುರುವು ಶಿಷ್ಯನ ಪ್ರಾಣಗಳನ್ನು ಪ್ರತಿಷ್ಠಾಪನೆ ಮಾಡಿರುತ್ತಾನೆ.[೧೩೭] ಪ್ರತಿಯೊಬ್ಬ ವೀರಶೈವನೂ ಕೂಡ ತಮ್ಮ ತಮ್ಮ ಎಡ ಅಂಗೈಯಲ್ಲಿರುವ ಇಷ್ಟಲಿಂಗವನ್ನು ಸೋಽಹಂ ಭಾವದಿಂದ ಪೂಜಿಸುತ್ತಾನೆ. ನಿರಂತರವಾಗಿ ಮಾಡುವ ಈ ರೀತಿಯ ಉಪಾಸನೆಯಿಂದ ಲಿಂಗಾಂಗ ಸಾಮರಸ್ಯ ರೂಪ ಐಕ್ಯವು ಅರ್ಥಾತ್ ಮೋಕ್ಷ ಪ್ರಾಪ್ತವಾಗುತ್ತದೆ. ಇದೇ ಪಾರಮಾರ್ಥಿಕ ಫಲ ಮತ್ತು ಪರಮ ಪ್ರಯೋಜನ. ಈ ರೀತಿಯಾದ ಪರಮಾರ್ಥಿಕ ಫಲವನ್ನು ನೀಡುವ ಈ ಇಷ್ಟಲಿಂಗೋಪಾಸನೆಯಿಂದ ಲೌಕಿಕ ಫಲ ಕೂಡ ಕೈಮುತಿಕ ನ್ಯಾಯದಂತೆ ಸಿದ್ಧಿಸುತ್ತದೆ. ಆದುದರಿಂದ ಲೌಕಿಕಫಲವನ್ನು ಮಾತ್ರ ನೀಡುವ ಭೂಮಿಯ

---

[೧೩೭] ಶಿಷ್ಯಸ್ಯ ಪ್ರಾಣಮಾದಾಯ ಲಿಂಗೇ ತತ್ರ ನಿಧಾಪಯೇತ್।
ತಲ್ಲಿಂಗಂ ತಸ್ಯ ತು ಪ್ರಾಣೇ ಸ್ಥಾಪಯೇದೇಕಭಾವತಃ॥
ಏವಂ ಕೃತ್ವಾ ಗುರುರ್ಲಿಂಗಂ ಶಿಷ್ಯಹಸ್ತೇ ನಿಧಾಪಯೇತ್। -ಸಿ.ಶಿ, ೬.೨೩-೨೪

(ನೆಲದ) ಮೇಲೆ ಪ್ರತಿಷ್ಠಾಪನೆಮಾಡಿರುವ ಶಿವಲಿಂಗಗಳಿಗಿಂತಲೂ, ಲೌಕಿಕ ಹಾಗೂ ಪಾರಮಾರ್ಥಿಕವಾದ ಉಭಯ ಫಲದಾಯಕವಾದ, ವೀರಶೈವರು ತಮ್ಮ ಶರೀರದ ಮೇಲೆ ಸದಾ ಧರಿಸಿರುವ ಶಿವಲಿಂಗಗಳನ್ನು 'ಇಷ್ಟಲಿಂಗ'ವೆಂದು ಕರೆಯುವುದು ಬಹಳ ಸೊಗಸಾಗಿ ತೋರುತ್ತದೆ. ಹೀಗೆ ಇಷ್ಟಫಲಗಳನ್ನು ನೀಡುವ ನಮ್ಮ ಶಿವಲಿಂಗದಿಂದಲೇ ಸಂಸಾರರೂಪಿ ಅನಿಷ್ಟಗಳು ಕೂಡ ನಿವಾರಣೆಯಾಗುತ್ತವೆ. ಆದುದರಿಂದಲೇ ಪ್ರತಿಯೊಬ್ಬ ವೀರಶೈವನೂ ಇಷ್ಟಲಿಂಗವನ್ನು ಧರಿಸುತ್ತಾನೆ. ಇದಕ್ಕೆ ಶ್ರೀ ರೇಣುಕ ಭಗವತ್ಪಾದರ ಉಕ್ತಿಯೇ ಪ್ರಮಾಣ:

ಇಷ್ಟಲಿಂಗಮಿದಂ ಸಾಕ್ಷಾದನಿಷ್ಟಪರಿಹಾರಕಮ್।
ಧಾರಯೇದವಧಾನೇನ ಶರೀರೇ ಸರ್ವದಾ ಬುಧಃ॥[೧೩೮]

"ಪ್ರತ್ಯಕ್ಷವಾಗಿ ಸಂಸಾರಪಾಶರೂಪವಾದ ಅನಿಷ್ಟವನ್ನು ಪರಿಹರಿಸುವ ಈ ಇಷ್ಟಲಿಂಗವನ್ನು ಜ್ಞಾನಿಯು ಯಾವಾಗಲೂ ಶರೀರದಲ್ಲಿ ಸಾವಧಾನವಾಗಿ ಧರಿಸಬೇಕು."

ಮೊಗ್ಗೆಯ ಮಾಯಿದೇವನೂ ಕೂಡ-

ಇಷ್ಟಿಃ ಪೂಜಾ ತಯಾ ನಿತ್ಯಮಿಷ್ಟಂ ಪೂಜಿತಮಾದರಾತ್।
ಇಷ್ಟಲಿಂಗಮಿತಿ ಪ್ರೋಕ್ತಮಾಚಾರ್ಯೈರ್ಲಿಂಗಪೂಜಕೈಃ॥
ಇಷ್ಟಮರ್ಥಂ ಸ್ವಭಕ್ತಾನಾಮನುಯಚ್ಛತಿ ಸರ್ವದಾ॥[೧೩೯]

"ಇಚ್ಛಾ ಪ್ರಾಪ್ತಿಗಾಗಿ ಇಷ್ಟಲಿಂಗವನ್ನು ಆದರದಿಂದ ಪ್ರತಿದಿನವೂ ಪೂಜಿಸುವುದರಿಂದ, ಲಿಂಗಪೂಜಕರಾದ ಆಚಾರ್ಯರಿಂದ ಇಷ್ಟಲಿಂಗವೆಂದು ಹೇಳಲ್ಪಟ್ಟಿತು. ಅದು ಯಾವಾಗಲೂ ಶಿವಭಕ್ತರಿಗೆ ಇಷ್ಟ ಫಲವನ್ನು ನೀಡುತ್ತದೆ." ಹೀಗೆ ಇಷ್ಟಲಿಂಗ ಶಬ್ದವು ಪ್ರತಿದಿನವೂ ಪೂಜ್ಯತ್ವರೂಪದಿಂದ ಕೂಡಿರುತ್ತದೆ ಎಂಬ ವ್ಯುತ್ಪತ್ತಿಯ ವೈಶಿಷ್ಟ್ಯದಿಂದ ನಿರೂಪಿಸಲಾಯಿತು. "ಇಷ್ಟಿಃ = ಪೂಜೆ, ತಯಾ ನಿತ್ಯಮಿಷ್ಟಮ್ = ಪ್ರತಿದಿನವೂ ಪೂಜಿಸುವ ಯಾವ ಲಿಂಗವಿದೆಯೋ ಅದು ಇಷ್ಟಲಿಂಗ" ಎಂಬುದು ಅದರ ಸ್ಪಷ್ಟವಾದ ವ್ಯುತ್ಪತ್ತಿ. ಪ್ರತಿದಿನವೂ ನಿಯಮಬದ್ಧವಾಗಿ ಪೂಜಿಸುವ ಲಿಂಗವೇ ಇಷ್ಟಲಿಂಗವೆಂದರ್ಥ. "ಅಹರಹಃ ಸಂಧ್ಯಾಮುಪಾಸೀತ" (ಪ್ರತಿದಿನವೂ ಸಂಧ್ಯಾವಂದನೆಯನ್ನು ಮಾಡು) ಎಂಬ ವಿಧಿವಾಕ್ಯಾನುಸಾರವಾಗಿ ನಿತ್ಯಕರ್ಮವನ್ನು ಮಾಡಬೇಕಾದ್ದು ಪ್ರತಿಯೊಬ್ಬನ ಕರ್ತವ್ಯ, ಅನ್ಯಥಾ (ಹಾಗೆ ಮಾಡದಿದ್ದಲ್ಲಿ) ಪಾಪ ಉಂಟಾಗುತ್ತದೆ. ವೀರಶೈವ ಸಿದ್ಧಾಂತದಲ್ಲಿ ಶರೀರದಲ್ಲಿ ಲಿಂಗಧಾರಣೆ ಮತ್ತು ಅದರ ಪೂಜೆ ನಿತ್ಯಕರ್ಮವೆಂದು ಹೇಳಲಾಗಿದೆ. ಈ ರೀತಿಯಾಗಿ ಶರೀರದಲ್ಲಿ ಧರಿಸಿರುವ ಶಿವಲಿಂಗವನ್ನು ವೀರಶೈವರು ಪ್ರತಿನಿತ್ಯವೂ ಆದರದಿಂದ ಪೂಜಿಸುವುದರಿಂದ ಅದು ಇಷ್ಟಲಿಂಗವೆಂದು ಕರೆಯಲ್ಪಟ್ಟಿದೆ.

---

೧೩೮. ಸಿ.ಶಿ, ೬.೫೦

೧೩೯. ಅ.ಸೂ, ೩.೯-೧೦

ಗ್ರಾಮ ದೇವಾಲಯಗಳಲ್ಲಿ ಪ್ರತಿಷ್ಠಾಪಿಸಿರುವ ಶಿವಲಿಂಗಗಳಿಗೂ ಕೂಡ ಪ್ರತಿದಿನವೂ ಪೂಜೆಯು ನಡೆಯುವುದರಿಂದ ಅವುಗಳಿಗೂ 'ಇಷ್ಟಲಿಂಗ' ಎಂಬ ಹೆಸರು ಅನ್ವಯವಾಗುತ್ತದೆ ಎಂಬ ಪೂರ್ವಪಕ್ಷದವರ ಆಕ್ಷೇಪಕ್ಕೆ ಹೀಗೆ ಉತ್ತರಿಸಲಾಗಿದೆ- ಶಿವಲಿಂಗದ ಪೂಜೆಯು ಪ್ರತಿನಿತ್ಯ ನಡೆಯುತ್ತಿದ್ದರೂ ಕೂಡ, ಅಲ್ಲಿ ಪೂಜಿಸುವವನ ನಿತ್ಯಕರ್ಮದ ಅಭಾವವು ಎದ್ದುಕಾಣುತ್ತದೆ. ಯಾವುದಾದರೂ ಕಾರಣದಿಂದ ಅರ್ಚಕನು ಬೇರೆ ಗ್ರಾಮಕ್ಕೋ ಅಥವಾ ಬೇರೊಂದು ದೇಶಕ್ಕೋ ಹೋದಾಗ ಆ ಶಿವಲಿಂಗದ ಪೂಜೆ ಅವನಿಂದಲೇ ನಡೆಯುವುದಿಲ್ಲ. ಆದುದರಿಂದ ಒಬ್ಬನೇ ಸಾಧಕನಿಂದ ಪ್ರತಿದಿನವೂ ಪೂಜಿಸಲ್ಪಡುವ ಲಿಂಗವೇ ಇಷ್ಟಲಿಂಗವೆಂದು ತಿಳಿಯಬೇಕು. ವೀರಶೈವರಿಗೆ ಒಪ್ಪಿಗೆಯಾಗಿರುವ ಈ ಲಿಂಗವನ್ನು ಸಾಧಕರು ಯಾವಾಗಲೂ ಶರೀರದ ಮೇಲೆ ಧರಿಸುವುದರಿಂದ ಬೇರೆ ಗ್ರಾಮಕ್ಕೆ ಅಥವಾ ದೇಶಾಂತರ ಹೋಗಿರುವ ಸಾಧಕನು ಅದರ ಪೂಜೆಯನ್ನು ಮಾಡಲು ಸಾಧ್ಯವಿರುವುದರಿಂದ ನಿತ್ಯಕರ್ಮಲೋಪದ ಪ್ರಸಂಗ ಬರುವುದಿಲ್ಲ. ಆದುದರಿಂದ ದೇವಾಲಯದಲ್ಲಿ ಸ್ಥಾಪಿತವಾಗಿರುವ ಲಿಂಗವು ಇಷ್ಟಲಿಂಗವಲ್ಲ. ಆದರೆ ಶರೀರದಲ್ಲಿ ಧರಿಸಿರುವ ಲಿಂಗವು ಇಷ್ಟಲಿಂಗವೆಂದು ನಿಶ್ಚಯವಾಯಿತು.

ಸಾಧಕನು ಸದಾ ಶರೀರದ ಮೇಲೆ ಧರಿಸಿರುವ, ಪ್ರತಿದಿನವೂ ಆದರದಿಂದ ಪೂಜಿಸುವ, ಆದುದರಿಂದಲೇ ಹುಟ್ಟು-ಸಾವುಗಳೆಂಬ ಸಂಸಾರರೂಪದ ಅನಿಷ್ಟಗಳನ್ನು ನಿವಾರಿಸುವ ಲಿಂಗಾಂಗಸಾಮರಸ್ಯ ರೂಪವಾದ ಮತ್ತು ಇಷ್ಟಪ್ರಾಪ್ತಿಯನ್ನುಂಟು ಮಾಡುವ ಲಿಂಗವೇ ಇಷ್ಟಲಿಂಗವೆಂದು ಮೇಲಿನ ಚರ್ಚೆಯಿಂದ ತಿಳಿದುಬರುತ್ತದೆ.

ಸ್ಥೂಲೋಪಾಸನೆಯ ಪ್ರಾಶಸ್ತ್ಯ

"ಬೀಜೇ ಯಥಾಂಕುರಃ ಸಿದ್ಧಸ್ತಥಾತ್ಮನಿ ಶಿವಃ ಸ್ಥಿತಃ"[೧೪೦] (ಬೀಜದಲ್ಲಿ ಮೊಳಕೆಯು ಹೇಗೆ ಸ್ವಾಭಾವಿಕವಾಗಿರುವುದೋ, ಹಾಗೆಯೇ ಜೀವನಲ್ಲಿ ಪರಶಿವನು ಸ್ವಾಭಾವಿಕವಾಗಿರುವನು)", "ಅನಾದ್ಯವಿದ್ಯಾಸಂಬಂಧಾತ್ ತದಂಶೋ ಜೀವ ನಾಮಕಃ"[೧೪೧] (ಅನಾದಿ ಮಾಯೆಯ ಸಂಬಂಧದಿಂದ ಆ ಪರಶಿವನ ಅಂಶವು ಜೀವನೆನಿಸಿಕೊಳ್ಳುವುದು) ಮುಂತಾದ ವಚನಗಳಲ್ಲಿ ಶಿವ-ಜೀವರಿಬ್ಬರೂ ಕೂಡ ಹೃದಯ ಪೀಠದಲ್ಲಿರುವರೆಂದು ಪ್ರತಿಪಾದಿಸಿರುವುದರಿಂದ ಅಲ್ಲಿಯೇ ಅವರಿಬ್ಬರ ಅಭೇದದ ಚಿಂತನೆಯಿಂದ ಶಿವಸಾಯುಜ್ಯ ದೊರಕುವ ಸಂಭವವಿರಲು, ವೀರಶೈವರು ಏತಕ್ಕೆ ಸ್ಥೂಲರೂಪವಾದ ಇಷ್ಟಲಿಂಗೋಪಾಸನೆಯನ್ನು ಮಾಡುತ್ತಾರೆ ಎಂದು ಪೂರ್ವಪಕ್ಷದವರ ಆಕ್ಷೇಪವನ್ನು ಹೀಗೆ ತಿರಸ್ಕರಿಸಲಾಗಿದೆ. ಅದರ ರಹಸ್ಯವನ್ನು ಕೇಳಿ- ವೀರಶೈವ ಸಿದ್ಧಾಂತದಲ್ಲಿ ಲಿಂಗೋಪಾಸನೆಯು ಅಂತರಂಗ ಮತ್ತು ಬಹಿರಂಗ ಎಂದು ಎರಡು ವಿಧವಾಗಿದೆ. ಅಂತರಂಗೋಪಾಸನೆಯು ಸ್ಥಿರಮನಸ್ಕರಾದ ಯೋಗಿಗಳಿಗೆ ಮಾತ್ರ ಸಾಧ್ಯವಾಗಿದ್ದು, ಇತರರಿಗೆ ಸುಲಭವಲ್ಲ. ಆದುದರಿಂದ ವೀರಶೈವಾಚಾರ್ಯರು

---

[೧೪೦] ಸಿ.ಶಿ, ೫.೩೪

[೧೪೧] ಸಿ.ಶಿ, ೫.೩೩

ಎಲ್ಲರಿಗೂ ಅಂತರಂಗೋಪಾಸನೆಯಲ್ಲಿ ಪ್ರವೃತ್ತಿಯನ್ನುಂಟುಮಾಡುವುದಕ್ಕೋಸ್ಕರ ಮೊದಲಿಗೆ ಸ್ಥೂಲೋಪಾಸನೆಯನ್ನು ಹೇಳಿ, ತನ್ಮೂಲಕ ಅಂತರಂಗೋಪಾಸನೆಯನ್ನು ನಿರೂಪಿಸಿದ್ದಾರೆ.

ಇದಲ್ಲದೆ "ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ"[೧೪೨] (ಕರ್ಮ ಮಾಡುತ್ತಲೇ ನೂರು ವರ್ಷ ಬದುಕಬೇಕು) ಎಂಬ ಉಪನಿಷದ್ವಾಕ್ಯದಂತೆ ದೇಹಪಾತವಾಗುವವರೆಗೆ ಕರ್ಮಗಳನ್ನು ಮಾಡಬೇಕು. ಈ ವಿಷಯದಲ್ಲಿ ಶ್ರೀ ರೇಣುಕ ಭಗವತ್ಪಾದರು- "ಶಿವಾರ್ಚಾ ಕರ್ಮ ವಿಜ್ಞೇಯಂ ಬಾಹ್ಯಂ ಯಾಗಾದಿ ನೋಚ್ಯತೇ"[೧೪೩] (ಶಿವಪೂಜೆಯೇ ಕರ್ಮವಲ್ಲದೆ, ಕಷ್ಟಸಾಧ್ಯವಾದ ಜ್ಯೋತಿಷ್ಟೋಮಾದಿ ಬಾಹ್ಯಯಾಗಗಳು ಕರ್ಮವಲ್ಲ) ಎಂದು ಶಿವಾರ್ಚನರೂಪವಾದ ಕರ್ಮವೇ ಕರ್ತವ್ಯವೆಂದು ಹೇಳಿ, ಪೂಜಾದಿಗಳನ್ನು ಮಾಡಲು ಮೂರ್ತಿಯು[೧೪೪] ಆವಶ್ಯಕವೆಂದು ಸಾರಿ ಇಷ್ಟಲಿಂಗೋಪಾಸನೆಯನ್ನು ವ್ಯವಸ್ಥೆ ಮಾಡಿರುತ್ತಾರೆ.

ಶಿಲೆಯಲ್ಲಿರುವ ಶ್ರೇಷ್ಠ ಗುಣಗಳು

ಜಗದ್ವ್ಯಾಪಕನೂ ಮತ್ತು ಜಗದಂತರ್ಯಾಮಿಯಾದ ಪರಶಿವನು ಚೈತನ್ಯದ ಚಿತ್ ಮತ್ತು ಜಡವಸ್ತುಗಳಲ್ಲಿ ವ್ಯಾಪಿಸಿರುವುದರಿಂದ ಚೇತನ ರೂಪವಾದ ಅವನ ಪೂಜೆ ಮಾಡುವುದನ್ನು ಬಿಟ್ಟು ಜಡರೂಪವಾದ ಶಿಲೆಯ ಶಿವಲಿಂಗಕ್ಕೆ ಪೂಜೆ ಸಲ್ಲಿಸುವುದು ಸರಿಯಲ್ಲ ಎಂದು ಆಕ್ಷೇಪ ಎತ್ತಿದರೆ ಹೀಗೆ ಉತ್ತರಿಸಲಾಗಿದೆ- ಜಡವಾಗಿ ಕಾಣುವ ಶಿಲೆ ಮುಂತಾದವುಗಳಲ್ಲಿಯೂ ಕೂಡ ಕೆಲವು ಉತ್ಕೃಷ್ಟವಾದ ಗುಣಗಳಿರುವುದರಿಂದ ಮೇಲಿನ ಆಕ್ಷೇಪ ಸಾಧುವಲ್ಲ, ಅದನ್ನು ಸುಭಾಷಿತಕಾರನೊಬ್ಬನು ಹೀಗೆ ಹೇಳುತ್ತಾನೆ:

> ನ ದ್ವಿಷಂತಿ ನ ಯಾಚಂತೇ ಪರನಿಂದಾಂ ನ ಕುರ್ವತೇ।
> ಅನಾಹೂತಾ ನ ಚಾಯಾಂತಿ ತೇನಾಽಶ್ಮಾನೋಽಪಿ ದೇವತಾಃ॥[೧೪೫]

"ಯಾರನ್ನೂ ದ್ವೇಷಿಸುವುದಿಲ್ಲ, ಯಾಚಿಸುವುದಿಲ್ಲ, ಪರನಿಂದೆಯನ್ನು ಮಾಡುವುದಿಲ್ಲ, ಆಹ್ವಾನವಿಲ್ಲದೆ (ಎಲ್ಲಿಗೂ) ಹೋಗುವುದಿಲ್ಲ- ಆದುದರಿಂದ ಶಿಲೆಗಳೂ ಸಹ ದೇವತೆಗಳಾಗಿವೆ."

ಇದರ ಅರ್ಥವಿಷ್ಟು- (ಬೇರೆಯವರನ್ನು) ದ್ವೇಷಿಸದ, ಯಾಚಿಸದ, ಬೇರೆಯವರನ್ನು ನಿಂದಿಸದ, ಆಹ್ವಾನವಿಲ್ಲದೆಡೆ ಹೋಗದ ಮುಂತಾದವುಗಳು ಉತ್ಕೃಷ್ಟ

---

[೧೪೨] ಈಶಾವಾಸ್ಯೋಪನಿಷತ್, ೨

[೧೪೩] ಸಿ.ಶಿ, ೯.೨೨

[೧೪೪] ಆಲಂಬನಂ ವಿನಾ ತಸ್ಯ ಪದಮುಚ್ಚೈಃ ಸುದುಷ್ಕರಮ್।
ನಿರ್ಗುಣಪ್ರಾಪ್ತಯೇ ನೃಣಾಂ ಪ್ರತಿಮಾಲಂಬನಂ ಕೃತಮ್॥ -ಶಿ.ಪು, ವಿ.೧೨.೬೪

[೧೪೫] ಸುಭಾಷಿತ ರತ್ನಾಭಾಂಡಾಗಾರಮ್, ಪು. ೧೫೯

ಗುಣಗಳೆಂದು ಪರಿಗಣಿಸಲ್ಪಟ್ಟಿವೆ ಮತ್ತು ಇಂತಹ ಗುಣಗಳು ಶಿಲೆಯಿಂದ ನಿರ್ಮಿತವಾದ ವಿಗ್ರಹಗಳಲ್ಲಿಯೂ ಕಂಡುಬರುತ್ತದೆ. ಒಂದೇ ದೇವಾಲಯದಲ್ಲಿ ಸ್ಥಾಪಿತವಾಗಿರುವ ಹರಿ-ಹರ ವಿಗ್ರಹಗಳು ನೋಡುವ ಯಾರಿಗಾದರೂ ಅವುಗಳು ಪರಸ್ಪರ ದ್ವೇಷಿಸುವಂತೆ ಕಾಣುವುದಿಲ್ಲ. ದೇವಾಲಯದಲ್ಲಿ ಅಥವಾ ಮನೆಯಲ್ಲಿರುವ ಭಗವಂತನ ವಿಗ್ರಹವು ಭೋಜನಾದಿಗಳನ್ನು ಯಾಚಿಸುವುದಿಲ್ಲ. ಯಾವ ರೀತಿಯಲ್ಲಿ ಮನುಷ್ಯನು ಸಾಮಾನ್ಯವಾಗಿ ಪರನಿಂದೆಯನ್ನು ಮಾಡುತ್ತಾನೆಯೋ ಹಾಗೆಯೇ ಶಿಲಾವಿಗ್ರಹವು ಪರನಿಂದೆಯನ್ನು ಮಾಡಿರುವುದು ನಮ್ಮ ಕಿವಿಗಳಿಗೆ ಬಿದ್ದಿರುವುದಿಲ್ಲ. ಪ್ರಪಂಚದಲ್ಲಿ ದೇವತಾ ವಿಗ್ರಹವನ್ನು ಭಕ್ತರು ತಂದು ದೇವಾಲಯಗಳಲ್ಲಿ ಸ್ಥಾಪಿಸುತ್ತಾರೆಯೇ ಹೊರತು, ವಿಗ್ರಹವೇ ತಾನಾಗಿ ಬಂದು ಸ್ಥಾಪಿತವಾಗಿರುವುದಿಲ್ಲ. ಈ ವಿಧವಾದ ಗುಣಗಳ ಸತ್ತ್ವದಿಂದಲೇ ಜಡರೂಪವಾದ ಶಿಲೆಗಳಲ್ಲಿಯೂ ಕೂಡ ಪೂಜ್ಯತ್ವವು ಉಂಟಾಗುತ್ತದೆ. ಆದುದರಿಂದಲೇ "ಗುಣಾಃ ಪೂಜಾಸ್ಥಾನಂ ಗುಣಿಷು ನ ಚ ಲಿಂಗಂ ನ ಚ ವಯಃ" (ಸದ್ಗುಣಿಗಳಲ್ಲಿ ಪೂಜಾರ್ಹವಾದದ್ದು ಗುಣಗಳೇ ಹೊರತು ಲಿಂಗ ಅಥವಾ ವಯಸ್ಸಲ್ಲ) ಎಂದು ಸುಭಾಷಿತಕಾರರು ಹೇಳಿರುವುದು. ಆದುದರಿಂದ ಗುಣಗಳ ಮಹಿಮೆಯಿಂದ ಜಡವಾದ ದ್ರವ್ಯವೂ ಕೂಡ ದೇವತೆಯಂತೆ ಪೂಜಿಸಲ್ಪಡುತ್ತದೆ ಎಂದು ಪೂಜಕನೂ ಕೂಡ ಅದೇ ರೀತಿಯ ಉತ್ಕೃಷ್ಟವಾದ ಗುಣಶಾಲಿಯಾಗುತ್ತಾನೆ ಎಂಬ ಅಭಿಪ್ರಾಯದಿಂದಲೇ ಭಾರತೀಯ ಋಷಿಗಳು ಮೂರ್ತಿಪೂಜಾ ಪದ್ಧತಿಯನ್ನು ಉಪದೇಶಿಸಿದ್ದಾರೆ. ಇದಲ್ಲದೆ-

ಪತ್ರಶಾಖಾದಿರೂಪೇಣ ಯಥಾ ತಿಷ್ಠತಿ ಪಾದಪಃ।
ತಥಾ ಭೂಮ್ಯಾದಿರೂಪೇಣ ಶಿವ ಏಕೋ ವಿರಾಜತೇ॥[೧೪೬]

"ಮರವು ಹೇಗೆ ಎಲೆ-ರೆಂಬೆಗಳ ರೂಪದಲ್ಲಿ ನಿಂತಿದೆಯೋ ಹಾಗೆಯೇ ಶಿವನೊಬ್ಬನೇ ಭೂಮಿ ಮುಂತಾದ ರೂಪದಲ್ಲಿ ವಿರಾಜಿಸುತ್ತಿದ್ದಾನೆ" ಎಂಬ ರೇಣುಕಾಚಾರ್ಯರ ಉಕ್ತಿಯಂತೆ ಸಮಸ್ತ ಪ್ರಪಂಚವನ್ನೂ ಕೂಡ ಈಶ್ವರನ ಶರೀರವೆಂದು ಪ್ರತಿಪಾದಿಸಿರುವುದರಿಂದ ಶಿಲೆ ಮುಂತಾದವುಗಳೂ ಕೂಡ ಅವನ ಸ್ಥೂಲ ರೂಪವೆಂದು, ಅದರ ಮೂಲಕವೇ ಸೂಕ್ಷ್ಮಸ್ವರೂಪ ಪ್ರಾಪ್ತಿ ಎಂಬ ಅಭಿಪ್ರಾಯದಿಂದ ಶಿಲೆಯಿಂದ ನಿರ್ಮಿತವಾದ ಶಿವಲಿಂಗಾದಿಗಳನ್ನು ಪೂಜಿಸತಕ್ಕದ್ದೆಂದು ತಿಳಿಯಬೇಕು.

ಶಿವಲಿಂಗ ನಿರ್ಮಾಣಯೋಗ್ಯವಾದ ಶಿಲೆಗಳು

ಗಂಧ, ಪುಷ್ಪ, ಗೋಮಯ, ಉಪ್ಪು, ಭಸ್ಮ, ಬೆಲ್ಲ, ಸಕ್ಕರೆ, ಧಾನ್ಯ, ಹಣ್ಣು, ಗರಿಕೆ, ಕರ್ಪೂರ, ಬೆಣ್ಣೆ, ಅಯಸ್ಕಾಂತ, ಸ್ಫಟಿಕ, ವೈಡೂರ್ಯವೇ ಮೊದಲಾದ ಮೂವತ್ತೆರಡು ದ್ರವ್ಯಗಳು ಲಿಂಗನಿರ್ಮಾಣ ಯೋಗ್ಯವೆಂದು ಗರುಡಪುರಾಣದಲ್ಲಿ

---

[೧೪೬] ಸಿ.ಶಿ, ೧೦.೬೬

ನಿರೂಪಿತವಾಗಿದೆ.[೧೪೭] ಲಿಂಗಪುರಾಣದಲ್ಲಿ- "ಷಡ್ವಿಧಂ ಲಿಂಗಮಿತ್ಯಾಹುರ್ದ್ರವ್ಯಾಣಾಂ ಚ ಪ್ರಭೇದತಃ" (ದ್ರವ್ಯಗಳ ಪ್ರಭೇದದಿಂದ ಆರು ವಿಧ ಲಿಂಗಗಳಿವೆ) ಎಂದು ಹೇಳುವ ಸಂದರ್ಭದಲ್ಲಿ ಶೈಲಜ (ಶಿಲೆಯಿಂದ ಮಾಡಿದ್ದು), ರತ್ನಜ (ರತ್ನದಿಂದ ಮಾಡಿದ್ದು), ಧಾತುಜ (ಧಾತುವಿನಿಂದ ಮಾಡಿದ್ದು), ದಾರುಜ (ಮರದಿಂದ ಮಾಡಿದ್ದು), ಮೃಣ್ಮಯ (ಮಣ್ಣಿನಿಂದ ಮಾಡಿದ್ದು) ಮತ್ತು ಕ್ಷಣಿಕ ಭೇದದಿಂದ ಶಿವಲಿಂಗ ನಿರ್ಮಾಣಕ್ಕೆ ಉಪಯೋಗಿಸುವ ಆರು ಬಗೆಯ ದ್ರವ್ಯಗಳನ್ನು ಪ್ರತಿಪಾದಿಸಲಾಗಿದೆ. ಎಲ್ಲ ಬಗೆಯ ವಸ್ತುಗಳೂ ಶಿವಲಿಂಗ ನಿರ್ಮಾಣಕ್ಕೆ ಯೋಗ್ಯವಾದವುಗಳೆಂದು ಮೇಲಿನ ಪುರಾಣೋಕ್ತಿಯಿಂದ ನಿಶ್ಚಯವಾಗುತ್ತದೆ. ಆದುದರಿಂದಲೇ "ಸರ್ವಂ ಲಿಂಗಮಯಂ ಜಗತ್" (ಈ ಜಗತ್ತೆಲ್ಲವೂ ಲಿಂಗಮಯವಾಗಿದೆ) ಎಂದು ಹೇಳಲಾಗಿದೆ. ವೀರಶೈವ ಆಚಾರ್ಯರು-

ಸ್ಫಾಟಿಕಂ ಶೈಲಜಂ ವಾಪಿ ಚಂದ್ರಕಾಂತಮಯಂ ತು ವಾ।
ಬಾಣಂ ವಾ ಸೂರ್ಯಕಾಂತಂ ವಾ ಲಿಂಗಮೇಕಂ ಸಮಾಹರೇತ್॥[೧೪೮]

ಸ್ಫಟಿಕ, ಸೂರ್ಯಕಾಂತ, ಚಂದ್ರಕಾಂತ, ಬಾಣ ಮತ್ತು ಶೈಲಜ ಎಂಬ ಐದು ಶಿಲೆಗಳ ಹೆಸರುಗಳನ್ನು ಉಲ್ಲೇಖಿಸಿ, ಅವುಗಳಲ್ಲಿ ಯಾವುದಾದರೂ ಒಂದು ಶಿಲೆಯಿಂದ ಇಷ್ಟಲಿಂಗವನ್ನು ನಿರ್ಮಿಸಬೇಕೆಂದು ಉಪದೇಶಿಸಿದ್ದಾರೆ. ಈಗ ಸೂರ್ಯಕಾಂತ, ಚಂದ್ರಕಾಂತ ಶಿಲೆಗಳು ದೊರೆಯದಿರುವುದರಿಂದ, ನರ್ಮದಬಾಣ, ಸ್ಫಟಿಕ, ಶೈಲಜ ಶಿಲೆಯನ್ನು ತೆಗೆದುಕೊಳ್ಳುತ್ತಾರೆ. ಅವುಗಳಲ್ಲಿಯೂ ಕೂಡ-

ಶ್ರೀಶೈಲಜಂ ಮಹಾದೇವಿ ಹ್ಯೈಹಿಕಾಮುಷ್ಮಿಕಪ್ರದಮ್।
ಸರ್ವೋತ್ತಮೋತ್ತಮಂ ಲಿಂಗಂ ಸರ್ವಾಭೀಷ್ಟಾರ್ಥದಾಯಕಮ್॥[೧೪೯]

"ಮಹಾದೇವಿ! ಶ್ರೀಶೈಲ ಶಿಲೆಯು ಐಹಿಕ-ಆಮುಷ್ಮಿಕಪ್ರದವಾಗಿದ್ದು, ಸರ್ವೋತ್ತಮೋತ್ತಮ ಲಿಂಗವಾಗಿದ್ದು ಎಲ್ಲ ಇಷ್ಟಾರ್ಥಗಳನ್ನು ನೀಡುತ್ತದೆ" ಎಂದು ಪಾರಮೇಶ್ವರತಂತ್ರದಲ್ಲಿ ಶ್ರೀಶೈಲಪರ್ವತದ ಶಿಲೆಯಿಂದ ನಿರ್ಮಿಸಿದ ಲಿಂಗವನ್ನು ಹೆಚ್ಚಾಗಿ ಪ್ರಶಂಸಿಸಲಾಗಿದೆ. ಆದುದರಿಂದ ಶೈಲಜ ಲಿಂಗಗಳ ಹೆಚ್ಚು ಉಪಯೋಗವು ಕಂಡುಬರುತ್ತದೆ.

ಇಷ್ಟಲಿಂಗದ ಪರಿಮಾಣ (ಗಾತ್ರ)

ವೀರಶೈವರು ಶರೀರದ ಮೇಲೆ ಧರಿಸುವ ಪೂಜ್ಯವಾದ ಇಷ್ಟಲಿಂಗವು ಹೃದಯದಲ್ಲಿನ ಆತ್ಮದ ಜ್ಯೋತಿಯ ಪ್ರತಿರೂಪ ಎಂದು ಈ ಹಿಂದೆಯೇ ಪ್ರತಿಪಾದಿಸಿರುವುದರಿಂದ ಈ ಇಷ್ಟಲಿಂಗವು ಆ ಜ್ಯೋತಿಯ ಪ್ರಮಾಣವೇ ಆಗಿದೆ. ಶ್ವೇತಾಶ್ವತರೋಪನಿಷತ್ತಿನಲ್ಲಿ-

---

[೧೪೭] ಶಿವಾಂಕ, ಪೃ. ೧೫೦

[೧೪೮] ಸಿ.ಶಿ, ೬.೨೧

[೧೪೯] ಪಾ.ತ, ೨.೧೧

ಅಂಗುಷ್ಠಮಾತ್ರಃ ಪುರುಷೋಽಂತರಾತ್ಮಾ ಸದಾ ಜನಾನಾಂ ಹೃದಯೇ ಸನ್ನಿವಿಷ್ಟಃ।
ಹೃದಾ ಮನೀಷಾ ಮನಸಾಭಿಕ್ಲ್ಪಪ್ತೋ ಯ ಏತದ್ ವಿದುರಮೃತಾಸ್ತೇ ಭವಂತಿ॥[೧೫೦]

"(ಇವನು) ಅಂಗುಷ್ಠ ಮಾತ್ರನು, ಪೂರ್ಣನು, ಅಂತರಾತ್ಮನು, ಜನರ ಹೃದಯದಲ್ಲಿ ಸದಾ ಪ್ರತಿಷ್ಠಿತನಾಗಿರುತ್ತಾನೆ. (ಇವನು) ಜ್ಞಾನೇಶನು, ಹೃದಯದಲ್ಲಿರುವ ಮನಸ್ಸಿನಿಂದ ಅಭಿರಕ್ಷಿತನಾಗಿರುತ್ತಾನೆ. ಯಾರು ಇದನ್ನು ಅರಿತಿರುವರೋ ಅವರು ಅಮರರಾಗುತ್ತಾರೆ" ಎಂದು ಆತ್ಮದ ಜ್ಯೋತಿಯು ಒಂದು ಅಂಗುಷ್ಠ ಪರಿಮಾಣ(ಗಾತ್ರ)ದ್ದೆಂದು ಪ್ರತಿಪಾದಿಸಲಾಗಿದೆ. ಶ್ರೀ ಅಪ್ಪಯ್ಯದೀಕ್ಷಿತರೂ ಸಹ- "ಮನುಷ್ಯಹೃದಯಾಬ್ಜಕೋಶಾನಾಮಂಗುಷ್ಠ ಪರಿಮಾಣತ್ವಾತ್" (ಮನುಷ್ಯನ ಹೃದಯಕಮಲದ ಕೋಶವು ಒಂದು ಅಂಗುಷ್ಠ ಪರಿಮಾಣವಳ್ಳದ್ದು) ಎಂದು ಹೃದಯದ ವಿಸ್ತಾರವನ್ನೂ ಸಹ ಅಂಗುಷ್ಠ ಪರಿಮಾಣವೆಂದು ನಿರೂಪಿಸಿದ್ದಾರೆ. ಹೀಗೆ ಜೀವಾತ್ಮನ ಹೃದಯಕಮಲದಲ್ಲಿನ ಶಿವಸಾನ್ನಿಧ್ಯವನ್ನು ಬಹುವಾಗಿ ಬೇರೆ ಸ್ಥಳಗಳಲ್ಲಿಯೂ[೧೫೧] ವರ್ಣಿಸಿರುವುದರಿಂದ, ಈ ಇಷ್ಟಲಿಂಗವೂ ಕೂಡ ಹೃದಯಕಮಲದಲ್ಲಿರುವ ಜ್ಯೋತಿಯಂತೆ ಅಂಗುಷ್ಠ ಪರಿಮಾಣವೇ ಆಗಿದೆ.

ಪಂಚಸೂತ್ರಲಿಂಗ

ಲಿಂಗವೃತ್ತಸಮಂ ಪೀಠಂ ದೈರ್ಘ್ಯಂ ವಿಸ್ತಾರ ಏವ ಚ।
ತದರ್ಧಂ ಗೋಮುಖಂ ಚೈವ ಪ್ರೋಕ್ತಂ ಲಿಂಗಸ್ಯ ಲಕ್ಷಣಮ್॥[೧೫೨]

"ಲಿಂಗದ ಪೀಠ, ಉದ್ದ, ಅಗಲ ಮತ್ತು ಎತ್ತರ ಲಿಂಗದ ಸುತ್ತಳತೆಗೆ ಸಮನಾಗಿರಬೇಕು. ಗೋಮುಖವು ಲಿಂಗದ ಸುತ್ತಳತೆಯ ಅರ್ಧದಷ್ಟಿರಬೇಕು. ಈ ಐದು ಲಕ್ಷಣಗಳಿಂದ ಕೂಡಿರುವ ಲಿಂಗವನ್ನು 'ಪಂಚಸೂತ್ರಲಿಂಗ'ವೆಂದು ಕರೆಯಲಾಗಿದೆ" ಎಂಬ ಶ್ರೀಕಂಠಶಿವಾಚಾರ್ಯರ ಉಕ್ತಿಯಂತೆ ಈ ಇಷ್ಟಲಿಂಗವು ಪಂಚಸೂತ್ರ ಪ್ರಕ್ರಿಯೆಯಿಂದ ನಿರ್ಮಾಣವಾಗಿದೆ. ಇದರ ಭಾವವಿಷ್ಟು- ಶಿವಲಿಂಗವು ಶಿವ-ಶಕ್ತಿ ಇವರಿಬ್ಬರ ರೂಪ. ಅದರಂತೆ ಶಿವಲಿಂಗದ ಮೇಲಿರುವ ಬಾಣವು ಶಿವಸ್ವರೂಪ, ಶಿವಲಿಂಗದ ಕೆಳಗಿರುವ ಪೀಠವು ಶಕ್ತಿಸ್ವರೂಪ. ಶಿವಲಿಂಗದ ನಿರ್ಮಾಣದ ಸಂದರ್ಭದಲ್ಲಿ ಮೊದಲಿಗೆ ಬಾಣಲಿಂಗವನ್ನು ನಿರ್ಮಿಸಿ, ಅನಂತರ ಲಿಂಗದ ಸುತ್ತಳತೆ, ಗಾತ್ರ ಮತ್ತು ಪೀಠವನ್ನು ರಚಿಸಲಾಗುತ್ತದೆ. ಪೀಠದ ಉದ್ದ - ಅಗಲ - ಎತ್ತರಗಳು ಲಿಂಗದ ಸುತ್ತಳತೆಗೆ ಸಮನಾಗಿರುತ್ತವೆ. ಆದರೆ ಗೋಮುಖವು ಅದರ (ಸುತ್ತಳತೆಯ)

---

[೧೫೦] ಶ್ವೇ.ಉ, ೩.೧೩

[೧೫೧] ಸಮಸ್ತಜಗದಾತ್ಮಾಪಿ ಶಂಕರಃ ಪರಮೇಶ್ವರಃ।
ಭಕ್ತಾನಾಂ ಹೃದಯಾಂಭೋಜೇ ವಿಶೇಷೇಣ ವಿರಾಜತೇ॥ -ಸಿ.ಶಿ, ೧೦.೬೭
ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ। -ಭ.ಗೀ, ೧೮.೬೧

[೧೫೨] ಕ್ರಿಯಾಸಾರ, ಭಾಗ-೩, ಪು. ೪೧; ಮಕುಟಾಗಮ, ಕ್ರಿ.ಪಾ, ೪.೪೬

ಅರ್ಧದಷ್ಟಿರುತ್ತದೆ. ಹೀಗೆ ಲಿಂಗದ ಸುತ್ತಳತೆ, ಪೀಠದ ಉದ್ದ, ಪೀಠದ ಕೆಳಭಾಗದ ವಿಸ್ತಾರ ಮತ್ತು ಪೀಠದ ಮೇಲ್ಭಾಗದ ವಿಸ್ತಾರ-ಲಿಂಗದ ಈ ನಾಲ್ಕು ಅವಯವಗಳ ಪರಿಮಾಣವು (ಅಳತೆ ಅಥವಾ ಗಾತ್ರವು) ಸಮಾನವಾಗಿರುತ್ತವೆ. ಗೋಮುಖದ ಪರಿಮಾಣವು ಮಾತ್ರ ಲಿಂಗದ ಸುತ್ತಳತೆಯ ಅರ್ಧದಷ್ಟಿರುತ್ತದೆ. ಇದೇ ಪಂಚಸೂತ್ರ ಪ್ರಕ್ರಿಯೆ. ಈ ಪಂಚಸೂತ್ರ ಪ್ರಕ್ರಿಯೆಯ ಪರಿಮಾಣದಲ್ಲಿ ಸ್ವಲ್ಪವೂ ಹೆಚ್ಚಾಗಿಯೂ, ಕಡಿಮೆಯಾಗಿಯೂ ಇರಬಾರದು. ಈ ಪ್ರಕ್ರಿಯೆಯಲ್ಲಿ ವ್ಯತ್ಯಾಸವಾದರೆ-

ಲಿಂಗಾಧಿಕ್ಯೇ ಭವೇನ್ಮೃತ್ಯುಃ ಶಕ್ತ್ಯಾಧಿಕ್ಯೇ ಧನಕ್ಷಯಃ।
ಲಿಂಗಶಕ್ತ್ಯೋಃ ಸಮತ್ವಂ ಹಿ ಭೋಗಮೋಕ್ಷಫಲಪ್ರದಮ್॥[೧೫೩]

"ಲಿಂಗ ದೊಡ್ಡದಾಗಿದ್ದರೆ ಸಾವು, ಶಕ್ತಿ ದೊಡ್ಡದಾಗಿದ್ದರೆ ಸಂಪತ್ತಿನ ನಾಶವಾಗುತ್ತದೆ. ಲಿಂಗ ಮತ್ತು ಶಕ್ತಿ ಸಮನಾಗಿರುವ ಲಿಂಗವು ಭೋಗ ಮತ್ತು ಮೋಕ್ಷ ಫಲವನ್ನು ನೀಡುತ್ತದೆ" ಎಂಬ ಪ್ರಮಾಣವಾಕ್ಯದಂತೆ ದೊಡ್ಡ ಅನರ್ಥವುಂಟಾಗುತ್ತದೆ. ಆದುದರಿಂದ ಭಕ್ತನಿಗೆ ಭೋಗ-ಮೋಕ್ಷ ಫಲಗಳುಂಟಾಗಲು ಸದ್ಗುರುವು ಶಿವಲಿಂಗವನ್ನು ಪರೀಕ್ಷಿಸಿ ಪಂಚಸೂತ್ರ ಪ್ರಮಾಣಾನುಸಾರವಾಗಿ ನಿರ್ಮಾಣವಾಗಿರುವ ಲಿಂಗವನ್ನು ಅನುಗ್ರಹಿಸುತ್ತಾನೆ. ಇದಲ್ಲದೆ-

ನಕಾರಶ್ಚಾದಿಪೀಠಂ ಚ ಮಕಾರೋ ಮಧ್ಯಮೇವ ಚ।
ಶಿಕಾರೋ ವರ್ತುಲಂ ಚೈವ ವಾಕಾರೋ ಗೋಮುಖ ತಥಾ।
ಯಕಾರೋ ಬಿಂದುರೇವಂ ಸ್ಯಾತ್ ಪ್ರಣವೋ ಲಿಂಗಮುಚ್ಯತೇ॥[೧೫೪]

"ನಕಾರವು ಆದಿಪೀಠ, ಮಕಾರ ಮಧ್ಯ, ಶಿಕಾರ ಸುತ್ತಳತೆ, ವಾಕಾರ ಗೋಮುಖ, ಯಕಾರ ಬಿಂದು ಮತ್ತು ಪ್ರಣವಾಕಾರವನ್ನು ಲಿಂಗವೆಂದು ಕರೆಯಲಾಗಿದೆ."

ಈ ಶ್ಲೋಕದಲ್ಲಿ ಕೆಳದಿಯ ಬಸವಭೂಪಾಲನು ಪೂರ್ವೋಕ್ತ ಲಿಂಗದ ಐದು ಅವಯವಗಳನ್ನು ಪಂಚಾಕ್ಷರ ಮಂತ್ರದ ರೂಪವೆಂದು ವರ್ಣಿಸಿ ಇಷ್ಟಲಿಂಗ-ಪಂಚಾಕ್ಷರ ಮಂತ್ರಗಳ ಅಭೇದವನ್ನು ಪ್ರತಿಪಾದಿಸಿದ್ದಾನೆ. ಹೀಗೆ ತಾತ್ತ್ವಿಕ ದೃಷ್ಟಿಯಿಂದ ಪಂಚಾಕ್ಷರಗಳೇ ಪಂಚಸೂತ್ರಗಳು, ಅವುಗಳಿಂದ ನಿರ್ಮಿತವಾದ ಈ ಲಿಂಗ ಪಂಚಸೂತ್ರಲಿಂಗ. ಪಂಚಾಕ್ಷರಗಳು ಹೇಗೆ ಶಿವಸೂಚಕವಾಗಿವೆಯೋ ಹಾಗೆಯೇ ಈ ಪಂಚಸೂತ್ರಲಿಂಗವೂ ಕೂಡ "ಸೂಚನಾತ್ ಪರಮೇಶಸ್ಯ ಲಿಂಗಂ ಸೂತ್ರಮಿತೀರಿತಮ್" (ಪರಮೇಶ್ವರನ ಸೂಚನೆಯ ಮೇರೆಗೆ ಲಿಂಗವು ಸೂತ್ರವೆಂದು ಕರೆಯಲ್ಪಟ್ಟಿದೆ) ಎಂಬ ಕಿರಣಾಗಮದ ಉಕ್ತಿಯಂತೆ ಪರಶಿವನ ಸೂಚಕವೇ ಆಗುತ್ತದೆ. ಆದುದರಿಂದ ಮುಖದಲ್ಲಿ ಪಂಚಾಕ್ಷರಮಂತ್ರವನ್ನು ಜಪಿಸುತ್ತಾ, ಹಸ್ತಪೀಠದಲ್ಲಿ ಶಿವನ ಮಂತ್ರ ಸ್ವರೂಪವಾದ ಪಂಚಸೂತ್ರಾತ್ಮಕವಾದ ಇಷ್ಟಲಿಂಗವನ್ನು ಪೂಜಿಸುತ್ತಾ ಮತ್ತು

---

೧೫೩. ಕ್ರಿ.ಸಾ, ಭಾಗ-೩, ಪು.೪೧; ಮಕುಟಾಗಮ, ಕ್ರಿ.ಪಾ, ೪.೪೭

೧೫೪. ಶಿವತತ್ತ್ವರತ್ನಾಕರ, ೧.೪.೩೯-೪೦

ಹೃದಯದಲ್ಲಿ ಶಿವನಾಮಸ್ಮರಣೆಯನ್ನು ಮಾಡುತ್ತಾ ಸಾಧಕನು ಒಟ್ಟಿಗೆ ತ್ರಿಕರಣ ಪೂಜೆಯನ್ನು ನೆರವೇರಿಸುತ್ತಾನೆಂದು ವೀರಶೈವಾಚಾರ್ಯರು ಕ್ರಿಯಾದೀಕ್ಷೆಯ ಸಂದರ್ಭದಲ್ಲಿ ಈ ಪಂಚಸೂತ್ರಲಿಂಗವನ್ನು ಸಂಸ್ಕರಿಸಿ ದಯಪಾಲಿಸುತ್ತಾರೆ.

ಇಷ್ಟಲಿಂಗಸಂಸ್ಕಾರವಿಧಿ

ಕ್ರಿಯಾದೀಕ್ಷೆಯಲ್ಲಿ ಹೇಳಲಾಗಿರುವ ವಿಧಿಯಿಂದ ಶೈಲಜ (ಶ್ರೀಶೈಲದ ಶಿಲೆಯಿಂದ ಮಾಡಿದ) ಪಂಚಸೂತ್ರಾತ್ಮಕವಾದ ಶಿವಲಿಂಗದಲ್ಲಿರುವ ಶಿಲೆಯ ಗುಣವು ನಿವಾರಣೆಯಾಗಲು ಜಲಾಧಿವಾಸ, ಧಾನ್ಯಾದಿವಾಸ, ಶಯನಾಧಿವಾಸ, ಅಷ್ಟತ್ರಿಂಶತ್ಕಲಾನ್ಯಾಸ, ಷಡಧ್ವಶುದ್ಧಿ ಮೊದಲಾದ ಕ್ರಿಯೆಗಳನ್ನು ಮಾಡಿ ಪಂಚಾಮೃತ-ಪಂಚಕಳಶಾಭಿಷೇಕದಿಂದ ಅಭಿಷೇಕಮಾಡಿ ಷೋಡಶೋಪಚಾರಪೂಜೆಯನ್ನು ನೆರವೇರಿಸಬೇಕು. ಅನಂತರ-

ಸರ್ವಲಕ್ಷಣಸಂಪನ್ನೇ ತಸ್ಮಿನ್ ಲ್ಲಿಂಗೇ ವಿಶೋಧಿತೇ।
ಪೀಠಸ್ಥಿತೇಽಭಿಷಿಕ್ತೇ ಚ ಗಂಧಪುಷ್ಪಾದಿಪೂಜಿತೇ॥
ಮಂತ್ರಪೂತೇ ಕಲಾಂ ಶೈವೀಂ ಯೋಜಯೇದ್ವಿಧಿನಾ ಗುರುಃ।
ಶಿಷ್ಯಸ್ಯ ಪ್ರಾಣಮಾದಾಯ ಲಿಂಗೇ ತತ್ರ ನಿಧಾಪಯೇತ್॥
ತಲ್ಲಿಂಗಂ ತಸ್ಯ ತು ಪ್ರಾಣೇ ಸ್ಥಾಪಯೇದೇಕಭಾವತಃ।
ಏವಂ ಕೃತ್ವಾ ಗುರುರ್ಲಿಂಗಂ ಶಿಷ್ಯಹಸ್ತೇ ನಿಧಾಪಯೇತ್॥[೧೫೫]

"ಶಿಲ್ಪಶಾಸ್ತ್ರಾನುಸಾರವಾಗಿ ಸರ್ವಲಕ್ಷಣಸಂಪನ್ನವಾದ ಆ ಲಿಂಗವನ್ನು ವಿಶೋಧಿಸಿ, ಪಂಚಾಮೃತಾದಿಗಳಿಂದ ಅಭಿಷಿಕ್ತವೂ, ಗಂಧ-ಪತ್ರ-ಪುಷ್ಪಾದಿಗಳಿಂದ ಪೂಜಿತವೂ ಆದ ಕರಪೀಠದಲ್ಲಿ ವಿರಾಜಿತವಾದ ಆ ಶಿವಲಿಂಗದಲ್ಲಿ ಶ್ರೀಗುರುವು ಶಿಷ್ಯನ ಮಸ್ತಕದಲ್ಲಿರುವ ಶಿವಕಲೆಯನ್ನು ಶಾಸ್ತ್ರವಿಧಿಗನುಸಾರವಾಗಿ ಯೋಜಿಸಬೇಕು. ಶಿಷ್ಯನ ಪ್ರಾಣವನ್ನು ಸರ್ವಸಂಸ್ಕಾರ ಸಂಸ್ಕೃತವಾದ ಶಿವಲಿಂಗದಲ್ಲಿ ನಿಯೋಜಿಸಬೇಕು. ಹಾಗೂ ಆ ಶಿವಲಿಂಗವನ್ನು ಶಿಷ್ಯನ ಪ್ರಾಣಕಲೆಯಲ್ಲಿ ಏಕಾಕಾರದಿಂದ ನಿಯೋಜಿಸಬೇಕು. ಈ ಪ್ರಕಾರವಾಗಿ ಆಚಾರ್ಯನು ಶಿವಕಲಾ-ಜೀವಕಲಾ ಸಾಮರಸ್ಯವನ್ನಾಗಿ ಮಾಡಿ ಶಿವಲಿಂಗವನ್ನು ಶಿಷ್ಯನ ಹಸ್ತದಲ್ಲಿ ಸ್ಥಾಪಿಸಬೇಕು" -ಎಂಬ ರೇಣುಕ ಭಗವತ್ಪಾದರ ಆದೇಶದಂತೆ ಸದ್ಗುರುವು ಶಿಷ್ಯನ ಮಸ್ತಕದಲ್ಲಿ ಪಂಚಕೋಣ ಚಕ್ರವನ್ನು ಬರೆದು, ಆ ಐದು ದಲಗಳಲ್ಲಿ ನಕಾರಾದಿ ಪಂಚಾಕ್ಷರಗಳನ್ನೂ, ಮಧ್ಯದಲ್ಲಿ ಓಂಕಾರವನ್ನೂ ಬರೆದು, ಅದರ ಮೇಲೆ ತನ್ನ ಬಲಹಸ್ತವನ್ನಿಟ್ಟು, ಶಿಷ್ಯನ ಮಸ್ತಕದ ಪಶ್ಚಿಮಶಿಖಾಚಕ್ರದಲ್ಲಿರುವ ಚಿತ್ಕಲೆಯನ್ನು ಧ್ಯಾನಿಸಿ, ತನ್ನ ಯೋಗದ ಮಹಿಮೆಯಿಂದ ಮತ್ತು ಸಂಕಲ್ಪ ಶಕ್ತಿಯಿಂದ ಆ ಚಿತ್ಕಲೆಯನ್ನು ಅಂಕುಶಮುದ್ರೆಯಿಂದ ಆವಾಹಿಸಿ ಸ್ಥಾಪಿಸಿ, ಶಿಷ್ಯನ ಪ್ರಾಣವನ್ನು ಸರ್ವಸಂಸ್ಕಾರ ಸಂಸ್ಕೃತವಾದ ಶಿವಲಿಂಗದಲ್ಲಿ ಸ್ಥಾಪಿಸಬೇಕು.

---

೧೫೫. ಸಿ.ಶಿ, ೬.೨೨-೨೪

ಈ ರೀತಿಯಾಗಿ ಶಿವಕಲೆಯಿಂದ ಕೂಡಿದ ಲಿಂಗವನ್ನು ಶಿಷ್ಯನ ಜೀವಕಲಾರೂಪ ಪ್ರಾಣದಲ್ಲಿ ಆಕರ್ಷಣಪೂರ್ವಕವಾಗಿ ಆವಾಹಿಸಿ ಸ್ಥಾಪಿಸಿ, ಆ ಶಿವಲಿಂಗವನ್ನು ಶಿಷ್ಯನ ಹಸ್ತದಲ್ಲಿ ಸ್ಥಾಪಿಸಬೇಕು. ಹೀಗೆ ಶ್ರೀಗುರುವಿನಿಂದ ಸಂಸ್ಕಾರಗೊಂಡು ಪ್ರಾಪ್ತವಾದ ಶಿವಕಲೆ-ಜೀವಕಲೆಗಳಿಂದ ಕೂಡಿದ ಶಿವಲಿಂಗವು ಈಗ ಮೊದಲಿನಂತೆ ಜಡರೂಪವಾಗಿರದೆ ಚಿತ್ಕಲಾ ಸ್ವರೂಪದ್ದಾಗಿರುತ್ತದೆ. ಆದುದರಿಂದಲೇ ಈ ಶಿವಲಿಂಗವು ಇಷ್ಟಾರ್ಥ ನೀಡುವಂತಹದ್ದು ಮತ್ತು ಅನಿಷ್ಟ ನಿವಾರಕವೂ ಆಗಿದೆ.

ಇಷ್ಟಲಿಂಗದಲ್ಲಿ ಚೈತನ್ಯಾಭಿವ್ಯಕ್ತಿಯ ವೈಜ್ಞಾನಿಕತ್ವ

ವಿಶೇಷವಾದ ಸಂಸ್ಕಾರದಿಂದ ಶಿಲಾಮಯವಾದ ಇಷ್ಟಲಿಂಗದಲ್ಲಿಯೂ ಕೂಡ ಚೈತನ್ಯದ ಅಭಿವ್ಯಕ್ತಿಯುಂಟಾಗುತ್ತದೆ ಎಂಬ ಪೂರ್ವೋಕ್ತ ವಾಕ್ಯವು ಕಾಲ್ಪನಿಕವಾಗಿರದೆ ವೈಜ್ಞಾನಿಕವಾದುದು. ಆದುದರಿಂದಲೇ "ತಸ್ಮಾದ್ವಾ ಏತಸ್ಮಾದಾತ್ಮನಃ ಆಕಾಶಃ ಸಂಭೂತಃ। ಆಕಾಶಾದ್ವಾಯುಃ। ವಾಯೋರಗ್ನಿಃ। ಅಗ್ನೇರಾಪಃ। ಅದ್ಭ್ಯಃ ಪೃಥಿವೀ। ಪೃಥಿವ್ಯಾ ಓಷಧಯಃ। ಓಷಧಿಭ್ಯೋಽನ್ನಂ। ಅನ್ನಾತ್ಪುರುಷಃ। ಸ ವಾ ಏಷ ಪುರುಷೋಽನ್ನ ರಸಮಯಃ"[೧೫೬] (ಸಚ್ಚಿದಾನಂದ ಸ್ವರೂಪಿಯಾದ ಪರಬ್ರಹ್ಮನಿಂದ (ಈ ಆತ್ಮನಿಂದ) ಆಕಾಶವು ಹುಟ್ಟಿತು. ಆಕಾಶದಿಂದ ವಾಯು; ವಾಯುವಿನಿಂದ ಅಗ್ನಿ; ಅಗ್ನಿಯಿಂದ ನೀರು; ನೀರಿನಿಂದ ಪೃಥ್ವೀ; ಪೃಥ್ವಿಯಿಂದ ಗಿಡಮೂಲಿಕೆಗಳು; ಗಿಡಮೂಲಿಕೆಗಳಿಂದ ಅನ್ನ; ಅನ್ನದಿಂದ ಮಾನವನು ಹುಟ್ಟಿದವು. ಆ ಮಾನವನು ಅನ್ನರಸಮಯನು ಇತ್ಯಾದಿ ಅನೇಕ ಶ್ರುತಿವಾಕ್ಯಗಳಲ್ಲಿ[೧೫೭] ಜಡವಸ್ತುವಿನಲ್ಲಿ ಚೈತನ್ಯದ ಅಭಿವ್ಯಕ್ತಿಯ ಪ್ರಕಾರವು ಸ್ಪಷ್ಟವಾಗಿ ಪ್ರತಿಪಾದಿತವಾಗಿದೆ. ಇದರ ಅಭಿಪ್ರಾಯವಿಷ್ಟು- ತಿಂದ ಅನ್ನವು ರಸ, ರಕ್ತ, ಮಾಂಸ, ಮೇದಸ್ಸು, ಮೂಳೆ ಮತ್ತು ಮಜ್ಜಾ -ರೂಪವಾಗಿ ಪರಿಣಮಿಸಿ ನಲವತ್ತನೇ ದಿನ ತಂದೆಯ ಶರೀರದಲ್ಲಿ ವೀರ್ಯವಾಗಿಯೂ ಮತ್ತು ತಾಯಿಯ ಶರೀರದಲ್ಲಿ ರಜಸ್ಸಾಗಿಯೂ ಪರಿಣಮಿಸುತ್ತದೆ. ಆ ಮಾತಾಪಿತೃಗಳ ರೇತಸ್ಸು ಮತ್ತು ರಕ್ತಗಳ ಪುನರ್ಮಿಲನ ತಾಯಿಯ ಉದರದಲ್ಲಿ ಶಿಶುವಾಗಿ ಪರಿಣಮಿಸುತ್ತದೆ. ಹೇಗೆಂದರೆ- "ಪಂಚಮ್ಯಾಮಾಹುತಾವಾಪಃ ಪುರುಷವಚಸೋ ಭವಂತಿ"[೧೫೮] (ಐದನೇ ಆಹುತಿಯಲ್ಲಿ ನೀರು ಪುರುಷನೆಂಬ ಹೆಸರನ್ನು ಪಡೆಯುತ್ತದೆ) ಎಂದು ಉಪನಿಷತ್ತಿನಲ್ಲಿ ಪ್ರತಿಪಾದಿತವಾದ ಪುರುಷೋತ್ಪತ್ತಿ ಪ್ರಕಾರದಿಂದ ಜಡವಸ್ತುವಿನಲ್ಲಿ ಚೈತನ್ಯಾಭಿವ್ಯಕ್ತಿಯ ವೈಜ್ಞಾನಿಕವಾದ ಅಂಶವನ್ನು ಸಾಧಿಸಲಾಗಿದೆ. ಈ ಪ್ರತ್ಯಕ್ಷ, ಅನುಮಾನ ಮತ್ತು ದೃಷ್ಟಾಂತದ ಮೂಲಕವಾಗಿಯೇ ಸದ್ಗುರುವು ಆಚರಿಸುವ ಸಂಸ್ಕಾರ ವಿಶೇಷದಿಂದ ಶಿಲಾಮಯವಾದ ಶಿವಲಿಂಗದಲ್ಲಿಯೂ ಕೂಡ ಚೈತನ್ಯದ ಅಭಿವ್ಯಕ್ತಿಯುಂಟಾಗುತ್ತದೆ

---

೧೫೬. ತೈತ್ತಿ.ಉ, ೨.೧.೧

೧೫೭. "ಅನ್ನಂ ವೈ ಪ್ರಜಾಪತಿಸ್ತತೋ ಹ ವೈ ತದ್ರೇತಸ್ತಸ್ಮಾದಿಮಾಃ ಪ್ರಜಾಃ ಪ್ರಾಜಾಯಂತ"
-(ಪ್ರಶ್ನೋಪನಿಷತ್, ೧.೧೪)

೧೫೮. ಛಾಂ.ಉ, ೫.೯.೧.

ಎಂಬುದು ನಿಶ್ಚಯವಾಗುತ್ತದೆ. ಆದುದರಿಂದ ಇಷ್ಟಲಿಂಗದಲ್ಲಿ ಸಂಸ್ಕಾರ ವಿಶೇಷದಿಂದ ಉಂಟಾಗುವ ಚೈತನ್ಯದ ಅಭಿವ್ಯಕ್ತಿಯು ವೈಜ್ಞಾನಿಕವೆಂದು ತಿಳಿಯಬೇಕು.

ಇಷ್ಟಲಿಂಗದಲ್ಲಿ ಶಿಷ್ಯನ ಪ್ರಾಣಸಂಬಂಧದ ರಹಸ್ಯ

ಸಾಮಾನ್ಯವಾಗಿ ಎಲ್ಲ ಪ್ರಾಣಿಗಳ ಪ್ರಾಣಸಂಬಂಧವು ತಮ್ಮ ತಮ್ಮ ಸೂಕ್ಷ್ಮ ಶರೀರಗಳೊಡನೆ ಇರುತ್ತದೆ. ಆ ರೀತಿಯಾದ ಸೂಕ್ಷ್ಮಶರೀರದ ಸಂಬಂಧದಿಂದ ಸ್ಥೂಲಶರೀರವೂ ಕೂಡ ಪ್ರಾಣದಂತೆ ಕಂಡುಬರುತ್ತದೆ. ಸೂಕ್ಷ್ಮ ಶರೀರದಲ್ಲಿ ಮನಸ್ಸು-ಬುದ್ಧಿಗಳ ಪ್ರಾಬಲ್ಯವಿರುತ್ತದೆ. ಅವುಗಳ ನಿರ್ದೇಶದಂತೆ ಪ್ರಾಣ ಮತ್ತು ಇಂದ್ರಿಯಗಳ ವ್ಯಾಪಾರವು ನಡೆಯುತ್ತದೆ. ಆದುದರಿಂದಲೇ ಯೋಗಿಗಳು ದೃಢವಾದ ಮಾನಸಿಕ ಸಂಕಲ್ಪ ಬಲದಿಂದ ತಮ್ಮ ಶರೀರವನ್ನು ತ್ಯಜಿಸಿ ಬೇರೆಯವರ ಶರೀರವನ್ನು ಪ್ರವೇಶಿಸಿ ಮತ್ತೆ ತಮ್ಮ ಶರೀರಕ್ಕೆ ಆಗಮಿಸುತ್ತಾರೆ ಎಂಬುದು ಶ್ರೀ ಶಂಕರಾಚಾರ್ಯ ಮೊದಲಾದವರ ಚರಿತ್ರೆಯಿಂದ ತಿಳಿದುಬರುತ್ತದೆ. ಇದರಿಂದ ಸ್ಪಷ್ಟವಾಗುವುದೇನೆಂದರೆ-ಎಲ್ಲಿ ಮನಸ್ಸು- ಬುದ್ಧಿಗಳು ಆಸಕ್ತಿಯಿಂದ ಇರುತ್ತವೆಯೋ ಅಲ್ಲಿ ಪ್ರಾಣಗಳೂ ಕೂಡ ಇರುತ್ತವೆ. ಪ್ರಪಂಚದಲ್ಲಿ ತನ್ನ ಶರೀರದಿಂದ ಬೇರೆಡೆಗಳಲ್ಲಿ ಧನ, ಭೂಮಿ, ಹೆಂಡತಿ, ಮಕ್ಕಳು ಮುಂತಾದವರಲ್ಲಿ ಅತಿಯಾದ ಆಸಕ್ತಿಯಿಂದ ಕೂಡಿರುವ ಅನೇಕ ಅಜ್ಞಾನಿಗಳು ಕಾಣಸಿಗುತ್ತಾರೆ. ಆದುದರಿಂದ ಅವರೆಲ್ಲರಿಗೆ ಹೆಚ್ಚು ಪ್ರೀತಿಗೆ ಕಾರಣವಾದ ಹಣ, ಭೂಮಿ ಮುಂತಾದವುಗಳು ನಾಶವಾದಾಗ ಅಥವಾ ಹೆಂಡತಿ, ಮಕ್ಕಳು ಮರಣ ಹೊಂದಿದಾಗ, ಅವರೂ ಕೂಡ ಮೃತರಾದಂತೆ ತೋರುತ್ತಾರೆ. ಆದುದರಿಂದ ಪ್ರಾಣಸಂಬಂಧದ ವಿಷಯದಲ್ಲಿ ಹೆಚ್ಚು ಪ್ರೀತಿಯಿರುವುದು ಸ್ವಾಭಾವಿಕ.

ಅಜ್ಞಜೀವಗಳ ಪ್ರೇಮಾಧಿಕ್ಯವು ಸಾಂಸಾರಿಕವಾದ ವಸ್ತುಗಳಲ್ಲಿ ಹೇಗೆ ಇದೆಯೋ ಹಾಗೆಯೇ ಭಕ್ತರ ಪ್ರೇಮಾಧಿಕ್ಯವು ತನ್ನ ಇಷ್ಟಲಿಂಗದಲ್ಲಿರುತ್ತದೆ ಎಂಬ ವಿಷಯದಲ್ಲಿ ಯಾವುದೇ ಸಂದೇಹವಿರುವುದಿಲ್ಲ. ಆದುದರಿಂದ ಇಹಲೋಕ-ಪರಲೋಕಗಳ ಫಲಭೋಗ ವಿರಕ್ತರಾದ ಪರಿಶುದ್ಧ ಅಂತಃಕರಣವುಳ್ಳ ಭಗವಂತನ ಅನುಗ್ರಹರೂಪ ಶಕ್ತಿಪಾತದಿಂದ ವಿಶಿಷ್ಟರಾದ ಭಕ್ತರಿಗೆ ಕ್ರಿಯಾದೀಕ್ಷೆಯ ಸಂದರ್ಭದಲ್ಲಿ ಶ್ರೀಗುರುವು ಶಿವಕಲೆಯ ನಿಯೋಜನ ಪೂರ್ವಕವಾಗಿ ಇಷ್ಟಲಿಂಗವನ್ನು ಯಾವಾಗ ಕೊಡುತ್ತಾನೆಯೋ ಆಗ ಅದರ ವಿಷಯದಲ್ಲಿ ಅವನಿಗೆ ಪ್ರೇಮಾಧಿಕ್ಯವು ಉಂಟಾಗುತ್ತದೆ. ನಿಸ್ಪೃಹರಾದ ಅವರ ಪ್ರೀತಿಗೆ ಆಸ್ಪದವಾದ ಮತ್ತೊಂದು ವಸ್ತುವು ಇಲ್ಲದಿರುವುದರಿಂದ ಇಷ್ಟಲಿಂಗವೇ ಪರಮಪ್ರೀತಿಗೆ ಆಸ್ಪದವಾಗುತ್ತದೆ. ಪರಮಪ್ರೀತಿಗೆ ಆಸ್ಪದವಾದ ವಸ್ತುವಿನೊಡನೆ ಪ್ರಾಣಸಂಬಂಧವು ಉಂಟಾಗುತ್ತದೆ ಎಂಬ ನಿಯಮದಂತೆ-

> ಪ್ರಾಣವದ್ಧಾರಣೀಯಂ ತತ್ ಪ್ರಾಣಲಿಂಗಮಿದಂ ತವ।
> ಕದಾಚಿತ್ ಕುತ್ರಚಿದ್ವಾಪಿ ನ ವಿಯೋಜಯ ದೇಹತಃ॥[೧೫೯]

---

[೧೫೯] ಸಿ.ಶಿ, ೬.೨೫

"ಎಲೈ ಶಿಷ್ಯನೇ! ಈ ಶಿವಲಿಂಗವನ್ನು ನಿನ್ನ ಪ್ರಾಣಲಿಂಗವೆಂದು ತಿಳಿ, ಇದನ್ನು ನಿನ್ನ ಪ್ರಾಣದಂತೆ ಧರಿಸು. ಯಾವ ಕಾಲದಲ್ಲಿಯೂ, ಯಾವ ಸ್ಥಳದಲ್ಲಿಯೂ ಈ ಶಿವಲಿಂಗವನ್ನು ನಿನ್ನ ಶರೀರದಿಂದ ಅಗಲಿಸಬೇಡ" ಎಂಬ ಶ್ರೀಗುರುವಿನ ಉಪದೇಶದಿಂದ ದೀಕ್ಷಿತನಾದ ಭಕ್ತನು ಪ್ರಾಣಲಿಂಗಿಯಾಗುತ್ತಾನೆ. ಇದಲ್ಲದೆ ವೀರಶೈವರಿಗೆ ಈ ಶಿವಲಿಂಗದ ದೀಕ್ಷಾಸಂಸ್ಕಾರವು ಒಂದು ಬಗೆಯ ಆಧ್ಯಾತ್ಮಿಕ ವಿವಾಹ ಸಂಸ್ಕಾರವೇ ಆಗಿದೆ. ಆಚಾರ್ಯರು ಅದನ್ನು ಈ ರೀತಿಯಾಗಿ ಹೇಳಿದ್ದಾರೆ-

ಅಂಗಲಿಂಗೀ ಜ್ಞಾನರೂಪಃ ಸತೀ ಜ್ಞೇಯಃ ಶಿವಃ ಪತಿಃ।
ಯತ್ಸೌಖ್ಯಂ ತತ್ಸಮಾವೇಶೇ ತದ್ವಾನ್ ಶರಣನಾಮವಾನ್॥[೧೬೦]

"ಶಿವಜ್ಞಾನ ಸ್ವರೂಪನೂ, ಲಿಂಗಾಂಗಸಾಮರಸ್ಯವುಳ್ಳವನೂ ಆದ ಪ್ರಾಣಲಿಂಗಿಯು ತಾನು ಸತಿಯೆಂದೂ, ಶಿವನು ಪತಿಯೆಂದೂ ತಿಳಿಯಬೇಕು. ಸ್ತ್ರೀ-ಪುರುಷರ ಸಂಬಂಧದಲ್ಲಿ ಯಾವ ಸೌಖ್ಯವು ಉತ್ಪನ್ನವಾಗುವುದೋ, ಅಂಗಲಿಂಗರೂಪ ಸತಿಪತಿ ಭಾವದಿಂದುತ್ಪನ್ನವಾದ ಅಂತಹ ಸೌಖ್ಯವುಳ್ಳವನೇ ಶರಣನೆನಿಸುವನು."

ಇಲ್ಲಿ ಶಿವನು ಪತಿ ಮತ್ತು ಜೀವನು ಸತಿ. ಪ್ರಪಂಚದಲ್ಲಿ ಪತಿವ್ರತೆಯಾದ ಸತಿಯು ವಿವಾಹದ ನಂತರ ತನ್ನ ಪತಿಯಲ್ಲಿ ಅನನ್ಯ ಮನಸ್ಸುಳ್ಳವಳಾಗಿದ್ದು ಯಾವಾಗಲೂ ಪತಿಗೆ ನಿಷ್ಠಳೂ ಹಾಗೂ ಪತಿಯ ಪ್ರಾಣವೂ ಆಗಿರುತ್ತಾಳೆ. ಅದೇ ರೀತಿಯಾಗಿ ದೀಕ್ಷಾಸಂಪನ್ನನಾದ ಅಂಗನೆನಿಸುವ ಜೀವನು ಬೇರೆ ದೇವತೆಗಳ ವಿಷಯದಲ್ಲಿ ವಿಮುಖನಾಗಿದ್ದುಕೊಂಡು ತನ್ನ ಇಷ್ಟಲಿಂಗದಲ್ಲಿ ನಿಷ್ಠನಾಗಿ ಪ್ರಾಣಲಿಂಗಿಯಾಗುತ್ತಾನೆ ಅರ್ಥಾತ್ ಇಷ್ಟಲಿಂಗದ ವಿಷಯದಲ್ಲಿ ಅತಿಶಯವಾದ ಪ್ರೀತಿಯುಳ್ಳವನಾಗುತ್ತಾನೆ. ವೀರಶೈವ ಸಿದ್ಧಾಂತದಲ್ಲಿ "ಲಿಂಗಾಂಗಸಂಗಿನಾಂ ತತ್ರಾಜನ್ಮಾಂತದೀಕ್ಷಾ"[೧೬೧] (ಲಿಂಗಾಂಗ ಸಂಗಿಗಳಿಗೆ ಬದುಕಿರುವವರೆಗೆ ದೀಕ್ಷೆ) ಎಂಬ ಉಪನಿಷದ್ವಾಕ್ಯದಂತೆ ಈ ಇಷ್ಟಲಿಂಗವನ್ನು ಬದುಕಿರುವವರೆಗೆ ಧರಿಸಬೇಕು. ಆದುದರಿಂದ ದೀಕ್ಷಾಸಂಪನ್ನರಾದ ಎಲ್ಲ ವೀರಶೈವರೂ ಕೂಡ ಇಷ್ಟಲಿಂಗವನ್ನು ಬದುಕಿರುವವರೆಗೆ ಪ್ರಾಣದಂತೆ ಧರಿಸಬೇಕು.

ಇಷ್ಟಲಿಂಗವಿಯೋಗವಾದರೆ ಪ್ರಾಣಬಿಡಬೇಕು

"ಯಾವಜ್ಜೀವಮಗ್ನಿಹೋತ್ರಂ ಜುಹುಯಾತ್" (ಆಜೀವ ಪರ್ಯಂತ ಅಗ್ನಿಹೋತ್ರ ಹೋಮವನ್ನು ನೆರವೇರಿಸಬೇಕು) ಎಂಬ ವಿಧಿವಾಕ್ಯದಂತೆ ಅಗ್ನಿಹೋತ್ರ ಹೋಮವು ನಿತ್ಯಕರ್ಮವಾದುದರಿಂದ ಅದನ್ನು ಆಜೀವ ಪರ್ಯಂತ ಹೇಗೆ ಆಚರಿಸಲಾಗುತ್ತದೆಯೋ ಹಾಗೆಯೇ ಇಷ್ಟಲಿಂಗಧಾರಣೆ ಮತ್ತು ಅದರ ಪೂಜೆಯು ವೀರಶೈವರ ದೈನಂದಿನ ಕರ್ಮ. ಆದುದರಿಂದ ಇಷ್ಟಲಿಂಗಧಾರಣೆ ಮತ್ತು ಪೂಜೆಯನ್ನು ಆಜೀವ ಪರ್ಯಂತ ಆಚರಿಸಬೇಕೆಂದು ಸಿದ್ಧಾಂತ ಶಿಖೋಪನಿಷತ್ ಹೀಗೆ ನಿರೂಪಿಸಿದೆ:

---

[೧೬೦] ಸಿ.ಶಿ, ೧೩.೨

[೧೬೧] ಸಿದ್ಧಾಂತ ಶಿಖೋಪನಿಷತ್, ಶ್ಲೋಕ. ೧೨

ಲಿಂಗಸ್ಯ ಧಾರಣಂ ಯಸ್ಯ ಸ್ಥೂಲದೇಹೇ ನ ವಿದ್ಯತೇ।
ತದ್ದೇಹಂ ನಿಷ್ಫಲಂ ಜ್ಞೇಯಂ ಜೀವತ್ಯಕ್ತಶರೀರವತ್॥
ತಸ್ಮಾತ್ತದ್ಧಾರಣಂ ಪ್ರೋಕ್ತಂ ಯಾವಜ್ಜೀವಾಗ್ನಿಹೋತ್ರವತ್॥[೧೬೨]

"ಯಾರ ಸ್ಥೂಲಶರೀರದ ಮೇಲೆ ಲಿಂಗಧಾರಣೆಯಿರುವುದಿಲ್ಲವೋ, ಅಂಥವರ ಶರೀರವು ಪ್ರಾಣವನ್ನು ತ್ಯಜಿಸಿದ ಶರೀರದಂತೆ ನಿಷ್ಫಲವೆಂದು ತಿಳಿಯಬೇಕು. ಆದುದರಿಂದ ಆಜೀವ ಪರ್ಯಂತ ಅಗ್ನಿಹೋತ್ರಹೋಮದಂತೆ ಇಷ್ಟಲಿಂಗವನ್ನು ಶರೀರದ ಮೇಲೆ ಧರಿಸಿ ಅದನ್ನು ನಿತ್ಯವೂ ಪೂಜಿಸಬೇಕೆಂದು ಹೇಳಲಾಗಿದೆ."

ಈ ರೀತಿಯಾದ ನಿತ್ಯ ವ್ರತದಲ್ಲಿ ಒಂದು ವೇಳೆ ಪ್ರಮಾದದಿಂದ ಲೋಪವಾದಲ್ಲಿ ಅರ್ಥಾತ್ ಇಷ್ಟಲಿಂಗವು ಶರೀರದಿಂದ ಬೇರ್ಪಟ್ಟರೆ ಮೋಕ್ಷ ಪ್ರಾಪ್ತಿಗಾಗಿ ಪ್ರಾಣತ್ಯಾಗವಲ್ಲದೆ ಬೇರೆ ಯಾವುದೇ ರೀತಿಯ ಪ್ರಾಯಶ್ಚಿತ್ತವು ವಿಹಿತವಾಗಿಲ್ಲ. ಇದನ್ನು ವಾತುಲಶುದ್ಧತಂತ್ರದಲ್ಲಿ ಹೀಗೆ ವಿವರಿಸಲಾಗಿದೆ:

ವೀರಶೈವಕ್ರಮಃ ಪ್ರೋಕ್ತಃ ಪ್ರಾಯಶ್ಚಿತ್ತವಿವರ್ಜಿತಃ।
ಪ್ರಾಣಲಿಂಗೇ ವ್ರತೇ ಲುಪ್ತೇ ಹಸ್ತಖಡ್ಗಾದವಂಚಯನ್॥
ಮುಖಂ ಪಂಕಜವಚ್ಛಿಂದ್ಯಾದ್ ವೀರಭೃತ್ಯಸ್ಯ ಲಕ್ಷಣಮ್॥[೧೬೩]

"ಪ್ರಾಯಶ್ಚಿತ್ತವಿಲ್ಲದ ವೀರಶೈವದ ಕ್ರಮವು ನಿರೂಪಿತವಾಯಿತು. ಪ್ರಾಣಲಿಂಗಿಯು ತನ್ನ ವ್ರತವು ಲುಪ್ತವಾಗಲು ಕೈಯಲ್ಲಿರುವ ಖಡ್ಗದಿಂದ ತನ್ನ ಮುಖವನ್ನು ಕಮಲದಂತೆ ಕತ್ತರಿಸಿಕೊಳ್ಳಬೇಕು. ಇದು ವೀರಭೃತ್ಯನ ಲಕ್ಷಣ."

ಇಂತಹ ಅನೇಕ[೧೬೪] ಪ್ರಮಾಣವಾಕ್ಯಗಳ ಆಧಾರದಿಂದ ಈ ವ್ರತವು ಅತಿಕಠಿಣವೆಂದು ತೋರುತ್ತದೆ. ಆದುದರಿಂದ ಈ ವ್ರತವು 'ವೀರವ್ರತ' ಎಂದು ಪ್ರಸಿದ್ಧವಾಗಿದೆ. ಈ ವೀರವ್ರತವನ್ನು ನಿಷ್ಠೆಯಿಂದ ಅನುಸರಿಸಬೇಕಾದುದರಿಂದ ಈ ಮತಕ್ಕೆ 'ವೀರಶೈವ' ಎಂಬ ಹೆಸರು ಸಾರ್ಥಕವಾಗಿದೆ. ಈ ವಿಷಯವನ್ನು ಚಂದ್ರಜ್ಞಾನಾಗಮದಲ್ಲಿ ಹೀಗೆ ನಿರೂಪಿಸಲಾಗಿದೆ:

ಇಷ್ಟಲಿಂಗವಿಯೋಗೇ ವಾ ವ್ರತಾನಾಂ ವಾ ಪರಿಚ್ಯುತೌ।
ತೃಣವತ್ ಪ್ರಾಣಸಂತ್ಯಾಗ ಇತಿ ವೀರವ್ರತಂ ಮತಮ್॥
ಭಕ್ತ್ಯುತ್ಸಾಹವಿಶೇಷೋಽಪಿ ವೀರತ್ವಮಿತಿ ಕಥ್ಯತೇ।
ವೀರವ್ರತಸಮಾಯೋಗಾದ್ ವೀರಶೈವಂ ಪ್ರಕೀರ್ತಿತಮ್॥[೧೬೫]

---

[೧೬೨] ಸಿ.ಶಿ, ವೀ.ಭಾ, ಪು. ೨೯

[೧೬೩] ವಾತುಲಶುದ್ಧತಂತ್ರ, ೧೦.೫೪-೫೫

[೧೬೪] (ಕ) ಯದಿ ಪ್ರಮಾದಾತ್ ಪತಿತೇ ಲಿಂಗೇ ದೇಹಾನ್ಮಹೀತಲೇ।
ಪ್ರಾಣಾನ್ ವಿಮುಂಚ ಸಹಸಾ ಪ್ರಾಪ್ತಯೇ ಮೋಕ್ಷಸಂಪದಃ॥ -ಸಿ.ಶಿ,೬.೨೬
(ಖ) ಪಾರಮೇಶ್ವರತಂತ್ರ, ೨.೧೦೨-೧೦೩
(ಗ) ಪರಮರಹಸ್ಯ, ೩.೨

[೧೬೫] ಚ.ಜ್ಞಾ, ಕ್ರಿ.ಪಾ, ೧೦.೩೩-೩೪

"ಇಷ್ಟಲಿಂಗವು ಶರೀರದಿಂದ ಬೇರ್ಪಟ್ಟರೆ ಅಥವಾ ವ್ರತದ ಸಂದರ್ಭದಲ್ಲಿ ಕೆಳಗೆ ಬಿದ್ದರೆ ಹಲ್ಲಿನಂತೆ ಪ್ರಾಣವನ್ನು ಬಿಡಬೇಕು. ಅದನ್ನು ವೀರವ್ರತವೆಂದು ಕರೆಯುತ್ತಾರೆ. ಭಕ್ತಿಯ ಉತ್ಸಾಹ ವಿಶೇಷವೂ ಕೂಡ ವೀರತ್ವವೆಂದು ಕರೆಯಲಾಗಿದೆ. ವೀರವ್ರತದ ಆಯೋಜನೆಯಿಂದ ಈ ಮತವನ್ನು ವೀರಶೈವ ಎಂದು ಕರೆಯಲಾಗಿದೆ."

ಈ ರೀತಿಯಾಗಿ ಪ್ರಾಣಬಿಡುವುದು ಆತ್ಮಹತ್ಯೆ ಎನಿಸುವುದಿಲ್ಲವೇ ಎಂದು ಪೂರ್ವಪಕ್ಷಕಾರರು ಆಕ್ಷೇಪಿಸಿದಲ್ಲಿ, ಅದು ಹಾಗಲ್ಲವೆಂದು ಉತ್ತರಿಸಲಾಗಿದೆ:

ಯಲ್ಲಿಂಗಂ ಗುರುಣಾ ದತ್ತಂ ಪ್ರಾಣಲಿಂಗಂ ತದೇವ ಹಿ।
ಮಧ್ಯೇ ನಷ್ಟೇ ಪ್ರಮಾದೇನ ದೇಹಂ ತ್ಯಕ್ತ್ವಾ ಶಿವಂ ವ್ರಜೇತ್॥[೧೬೬]
ಗತೇ ಲಿಂಗೇ ತ್ಯಜೇತ್ ಪ್ರಾಣಂ ವೀರಶೈವಃ ಸ ಏವ ಹಿ।[೧೬೭]

"ಶ್ರೀಗುರುವು ನೀಡಿದ ಇಷ್ಟಲಿಂಗವೇ ಪ್ರಾಣಲಿಂಗ. ಪ್ರಮಾದದಿಂದ ಮಧ್ಯದಲ್ಲಿ (ಬದುಕಿದ್ದಾಗ) ಕಳೆದುಹೋದರೆ ಪ್ರಾಣವನ್ನು ಬಿಟ್ಟು ಸ್ವರ್ಗಕ್ಕೆ ಹೋಗಬೇಕು. ಶಿವಲಿಂಗವು ಕಳೆದು ಹೋದರೆ ಪ್ರಾಣ ಬಿಡುವವನೇ ವೀರಶೈವ" -ಇತ್ಯಾದಿ ಶಾಸ್ತ್ರಗಳಲ್ಲಿ ವಿಹಿತವಾಗಿರುವುದರಿಂದ ಇಷ್ಟಲಿಂಗ ದೇಹದಿಂದ ಬೇರ್ಪಟ್ಟಾಗ ಪ್ರಾಣಬಿಡುವುದು ದೋಷವಾಗುವುದಿಲ್ಲ. ಈ ವಿಷಯದಲ್ಲಿ ಹೀಗೆ ಅಭಿಪ್ರಾಯಪಡುವುದು- ಸಾಂಸಾರಿಕ ವಿಷಯ ವ್ಯಾಮೋಹದಿಂದ, ಯಾವುದೋ ಭಯದಿಂದ, ಅಪರಿಹಾರ್ಯವಾದ ಯಾವುದಾದರೂ ರೋಗದಿಂದ ಪೀಡಿತನಾದ ಪುರುಷನೊಬ್ಬನು ಹಗ್ಗ ಮೊದಲಾದವುಗಳಿಂದ ನೇಣುಹಾಕಿಕೊಂಡು ತಾನೇ ಸ್ವತಃ ಮೃತನಾದರೆ, ಅದು ಆತ್ಮಹತ್ಯೆ ಎನಿಸುತ್ತದೆ. ಈ ವಿಧವಾಗಿ ಮೃತರಾದ ವ್ಯಕ್ತಿಗಳಿಗೆ ದುರ್ಗತಿ ಮತ್ತು ಪುನರ್ಜನ್ಮವು ಅವಶ್ಯವಾಗಿ ಉಂಟಾಗುತ್ತದೆ. ಆದರೆ ಭಗವಂತನಲ್ಲಿರುವ ವಿಶೇಷವಾದ ಭಕ್ತಿಯಿಂದ ಮಾಡಿದ ಆತ್ಮಾರ್ಪಣೆಯು ಪೂರ್ವೋಕ್ತ ಶಾಸ್ತ್ರ ಪ್ರಾಮಾಣ್ಯದಂತೆ "ಅಂತೇ ಯಾ ಮತಿಃ ಸಾ ಗತಿಃ" (ಅಂತ್ಯಕಾಲ ದಲ್ಲಿನ ಮತಿಯಂತೆ ಗತಿ) ಎಂಬ ಉಕ್ತಿಯಂತೆ ಭಗವಂತನ ಸ್ವರೂಪವನ್ನು ತಲುಪುವ ಸಾಧನವಾಗುತ್ತದೆ. ಈ ರೀತಿಯಾದ ಆತ್ಮಾರ್ಪಣೆಯು ಭಗವಂತನಲ್ಲಿರುವ ನಿರತಿಶಯವಾದ ಪ್ರೀತಿಯನ್ನು ಸ್ಪಷ್ಟಪಡಿಸುತ್ತದೆ. ಲೋಕದಲ್ಲಿ ತಮಗೆ ಪ್ರೀತಿಗೆ ಪಾತ್ರವಾದ ವ್ಯಕ್ತಿಯಾಗಲಿ ಅಥವಾ ವಸ್ತುವಾಗಲಿ ಕೂಡಲೇ ವಿಯೋಗವಾದರೆ ಹೃದಯಾಘಾತದಿಂದ ಕೂಡಲೇ ಬಹಳಷ್ಟು ಜನಗಳು ಸತ್ತಿರುವುದನ್ನು ನೋಡಿದ್ದೇವೆ. ಈ ದುರ್ಘಟನೆಗೆ ಶಾಸ್ತ್ರ ಕಾರಣವಾಗಿರದೆ, ಸ್ವಾಭಾವಿಕವಾದ ಘಟನೆಯಾಗಿರುತ್ತದೆ. ಹೀಗೆ ಸಾಂಸಾರಿಕ ವಸ್ತುಗಳ ವಿಷಯದಲ್ಲಿರುವ ನಿರತಿಶಯವಾದ ಪ್ರೀತಿಯು ಒಂದು ಪಕ್ಷ ತಮ್ಮ ಇಷ್ಟಲಿಂಗದ ವಿಷಯದಲ್ಲಿ ಇದ್ದದ್ದೇ ಆದರೆ, ಆಗ ಇಷ್ಟಲಿಂಗದ ವಿಯೋಗವಾದಾಗಲೂ ಕೂಡ ಅವನ ಪ್ರಾಣವು ಸಹಜವಾಗಿಯೇ ಹೋಗಬೇಕು.

---

೧೬೬. ಪರಮರಹಸ್ಯ, ೩.೨

೧೬೭. ಪಾರಮೇಶ್ವರತಂತ್ರ, ೨.೧೦೨-೧೦೩

ಇಷ್ಟಲ್ಲದೆ "ಗತೇ ಲಿಂಗೇ ತ್ಯಜೇತ್ ಪ್ರಾಣಮ್" (ಲಿಂಗವು ನಷ್ಟವಾದರೆ ಪ್ರಾಣವನ್ನು ಬಿಡಬೇಕು) ಎಂಬ ಪ್ರಾಣಾರ್ಪಣೆಯನ್ನು ವಿಧಿಸುವ ಶಾಸ್ತ್ರದ ತಾತ್ಪರ್ಯವು ಪ್ರಾಣಾರ್ಪಣೆಯಲ್ಲ. ಆದರೆ ಇಷ್ಟಲಿಂಗದಲ್ಲಿನ ನಿಷ್ಠೆಯ ದಾರ್ಢ್ಯತೆ ಅದು ಎಂದು ತಿಳಿಯಬೇಕು. ಲೌಕಿಕ ವಸ್ತುಗಳಲ್ಲಿ ಯಾವ ವಿಧವಾದ ಪ್ರೀತಿಯು ಸಹಜವಾಗಿ ಉಂಟಾಗುತ್ತದೆಯೋ, ಅದೇ ವಿಧವಾದ ಪ್ರೇಮವು ಒಂದು ವೇಳೆ ಭಗವಂತನ ವಿಷಯದಲ್ಲಿ ಉಂಟಾದರೆ ಆಗ ಅಂತಹ ವ್ಯಕ್ತಿಯ ಜೀವನವೇ ಬದಲಾಗುತ್ತದೆ. ಅನಾದಿಕಾಲದಿಂದಲೂ ಸಾಂಸಾರಿಕ ಪ್ರೀತಿಯಿಂದ ಸಂಸಾರಚಕ್ರದಲ್ಲಿ ಸುತ್ತುತ್ತಿರುವ ಜೀವದ ಉದ್ಧಾರಕ್ಕಾಗಿ ಭಗವಂತನ ವಿಷಯದಲ್ಲಿನ ಪ್ರೀತಿಯ ಪ್ರಶಿಕ್ಷಣವಿದು. ಪೂಜ್ಯರ ವಿಷಯದಲ್ಲಿರುವ ನಿರತಿಶಯವಾದ ಪ್ರೀತಿಯೇ ಭಕ್ತಿ ಎನಿಸಿದೆ. ಈ ಭಕ್ತಿಯೇ ಶ್ರದ್ಧಾ, ನಿಷ್ಠಾ, ಅವಧಾನ, ಅನುಭವ, ಆನಂದ ಮತ್ತು ಸಮರಸ ರೂಪದಿಂದ ಕ್ರಮವಾಗಿ ವಿಕಾಸವಾಗುತ್ತಾ ಭಕ್ತನನ್ನು ಭಗವಂತನ ಸ್ವರೂಪದಲ್ಲಿ ಸಮರಸವನ್ನುಂಟುಮಾಡುತ್ತದೆ. ಹೀಗೆ ಭಗವಂತನ ಸ್ವರೂಪವನ್ನು ಪಡೆಯಲು ಭಕ್ತಿಯೇ ಮೂಲಕಾರಣವಾದುದರಿಂದಲೂ, ಮತ್ತು ಭಗವಂತನಲ್ಲಿ ಭಕ್ತನ ನಿರತಿಶಯವಾದ ಪ್ರೇಮದ ರೂಪದಿಂದಲೂ ಸಾಂಸಾರಿಕ ವಸ್ತುಗಳಲ್ಲಿ ಸಹಜವಾಗಿರುವ ಈ ಪ್ರೇಮವು ಭಗವಂತನಲ್ಲಿರಬೇಕು ಎಂಬ ಗೂಢವಾದ ಆಶಯದಿಂದ ಇಷ್ಟಲಿಂಗವು ಶರೀರದಿಂದ ವಿಯೋಗವಾದಾಗ ಪ್ರಾಣತ್ಯಾಗ ರೂಪವಾದ ಕಠಿಣವಾದ ವ್ರತವು ಆಚಾರ್ಯರಿಂದ ಹೇಳಲ್ಪಟ್ಟಿದೆ.

ಲೋಕದಲ್ಲಿ ಪ್ರಾಣವಿಲ್ಲದ ಸ್ಥೂಲಶರೀರವನ್ನು ಪ್ರೇತವೆಂದು ಹೇಗೆ ಕರೆಯಲಾಗುತ್ತದೆಯೋ ಹಾಗೆಯೇ ಪ್ರಾಣಸ್ವರೂಪದ ಇಷ್ಟಲಿಂಗವಿಲ್ಲದಿದ್ದಲ್ಲಿ ವೀರಶೈವನ ಶರೀರವೂ ಕೂಡ ಪ್ರೇತದಂತೆ ಅಸ್ಪೃಶ್ಯವಾಗುತ್ತದೆ. ಅದನ್ನು ಮಹಾರಾಷ್ಟ್ರ ಪ್ರಾಂತದ ಸಂತಶಿರೋಮಣಿ ಮನ್ಮಥಸ್ವಾಮಿಯು ಹೀಗೆ ವಿವರಿಸಿದ್ದಾರೆ:

> **ಜಯಾ ಚಾ ಪ್ರಾಣಲಿಂಗೀ ಭರಲಾ। ತೋ ಕೈಸೇ ಅಸಾ ದೇಹೀ ಉರಲಾ॥**
> **ಲಿಂಗ ಗೆಲಿಯಾ ದೇಹೀ ಸಂಚರಲಾ। ಪಿಶಾಚವತ್ ಜಾಣಿಜೇ॥**[೧೬೮]

ಆದುದರಿಂದ ಪ್ರೇತದ ಕಲಂಕವನ್ನು ತೊಳೆದುಕೊಳ್ಳಲು ಎಲ್ಲ ವೀರಶೈವರೂ ಕೂಡ ಪ್ರಾಣದಂತೆ ಇಷ್ಟಲಿಂಗವನ್ನು ಧರಿಸುವುದು ಆದ್ಯಕರ್ತವ್ಯ.

ಶಾಸ್ತ್ರನಿಯಮದ ವಿಪರೀತಾರ್ಥ ಪರಿಹಾರ*

"ಪ್ರಾಣಾನ್ ವಿಮುಂಚ ಸಹಸಾ ಪ್ರಾಪ್ತಯೇ ಮೋಕ್ಷಸಂಪದಃ" ಲಿಂಗವು ದೇಹದಿಂದ ಅಗಲಿದರೆ ಪ್ರಾಣವನ್ನೇ ತ್ಯಾಗಮಾಡಬೇಕು ಎಂದು ಆಜ್ಞಾಪಿಸಿದ

---

೧೬೮. ಪರಮರಹಸ್ಯ, ೩.೧೪

* ಈ ವಿಷಯ ಮೂಲ ಕೃತಿಯಲ್ಲಿ ಬರುವುದಿಲ್ಲ. ಆದರೆ ಈ ವಿಷಯದ ಮಹತ್ವವನ್ನು ಗಮನಿಸಿ ಮೂಲ ಲೇಖಕರ ಸಿದ್ಧಾಂತ ಶಿಖಾಮಣಿ ಪ್ರವಚನ ಪ್ರಭೆ, ಕಿರಣ ೫, ಪು.೫೩-೫೫ ರಿಂದ ತೆಗೆದುಕೊಳ್ಳಲಾಗಿದೆ.

ಆಚಾರ್ಯರ ಆದೇಶದ ಮುಖ್ಯ ತಾತ್ಪರ್ಯವು ಶಿಷ್ಯನ ಪ್ರಾಣಹರಣವಾಗಬೇಕೆಂಬುದಲ್ಲ; ಆದರೆ “ಯಾಜ್ಞೀ ಹಿಂಸಾ ಹಿಂಸಾ ನ ಭವತಿ” ಯಜ್ಞದಲ್ಲಿ ಮಾಡಿದ ಪ್ರಾಣಿಹಿಂಸೆಯು ಹಿಂಸೆಯಾಗುವುದಿಲ್ಲವೆಂದು ಆಜ್ಞಾಪಿಸಿದ ವೇದವು ಮನುಷ್ಯನನ್ನು ಹಿಂಸೆಯಲ್ಲಿ ಪ್ರವರ್ತಿಸುತ್ತದೆ ಎಂದು ತಿಳಿದುಕೊಳ್ಳುವುದು ಸರಿಯಲ್ಲ. ಸ್ವಾಭಾವಿಕವಾದ ಮನುಷ್ಯನ ಹಿಂಸಾಪ್ರವೃತ್ತಿಯನ್ನು ತಡೆಗಟ್ಟುವುದಕ್ಕಾಗಿ ಯಜ್ಞವನ್ನು ವಿಧಿಸಿದೆ. ಹೀಗೆ ಯಜ್ಞದ ಹಿಂಸೆಯು ಹಿಂಸೆಯಲ್ಲವೆಂದು ಹೇಳಿದ ವೇದದ ತಾತ್ಪರ್ಯವು ಹಿಂಸೆಯ ನಿರೋಧಕ್ಕಾಗಿ ಇರುವಂತೆ ಇಷ್ಟಲಿಂಗದ ವಿಯೋಗವಾದಾಗ ಪ್ರಾಣತ್ಯಾಗ ಮಾಡಬೇಕೆಂಬುದರ ತಾತ್ಪರ್ಯವು ಇಷ್ಟಲಿಂಗವನ್ನು ಅಷ್ಟೊಂದು ಜಾಗರೂಕವಾಗಿ ಧರಿಸಿಕೊಂಡಿರಬೇಕೆಂಬುದಾಗಿದೆ ಎಂದು ಸರ್ವರೂ ತಿಳಿದುಕೊಳ್ಳಬೇಕು.

ಇದೊಂದು ವೀರಶೈವರ ಅತಿ ಕಠಿಣವಾದ ವೀರವ್ರತವು. ಇದರ ಈ ಕಠಿಣ ನಿಯಮವನ್ನು ತಿಳಿದೋ ಏನೋ ಈಗಿನ ಬಹಳಷ್ಟು ಜನ ವೀರಶೈವರು ಈ ಇಷ್ಟಲಿಂಗವನ್ನು ಧರಿಸುವುದೂ ಬೇಡ. ಅದು ವಿಯೋಗವಾದಾಗ ಪ್ರಾಣತ್ಯಾಗ ಮಾಡುವುದೂ ಬೇಡವೆಂಬ ಭಾವನೆಯಿಂದ ಇಷ್ಟಲಿಂಗದ ಬಗ್ಗೆ ಉದಾಸೀನ ಭಾವನೆಯನ್ನು ತಾಳಿದ್ದಾರೆಯೋ ಏನೋ ತಿಳಿಯದಾಗಿದೆ.

ಇನ್ನು ಶಾಸ್ತ್ರದ ನಿಯಮಗಳು ಸಮಾಜದ ಹಿತಕ್ಕಾಗಿಯೇ ಇದ್ದರೂ ಅವುಗಳ ಮರ್ಮವನ್ನರಿಯದ ಅಜ್ಞಜೀವಿಗಳು ಒಮ್ಮೊಮ್ಮೆ ಅವುಗಳನ್ನು ಅಪಾರ್ಥವಾಗಿಯೇ ಪರಿಗ್ರಹಿಸುತ್ತಾರೆ. ಪ್ರಾಚೀನ ಆಚಾರ್ಯರ ಆದೇಶದಂತೆ ಅನೇಕ ಜನ ಮಹನೀಯರು ಪ್ರಾಣಲಿಂಗಿಗಳಾಗಿ ಬದುಕಿರಬಹುದು. ಅಕಸ್ಮಾತ್ ಆ ಲಿಂಗವು ದೇಹದಿಂದ ಜಾರಿಬಿದ್ದಾಗ ಅದರ ಮೇಲಿನ ಅತಿಯಾದ ಮಮತೆಯಿಂದ ಆಚಾರ್ಯೋಪದೇಶದಂತೆ ಅವರ ಪ್ರಾಣಪಕ್ಷಿಯಾದರೂ ಹಾರಿಹೋಗಿರಬೇಕು. ಪರಂತು ಈ ಸ್ಥಿತಿಯು ಸಮಸ್ತ ಲಿಂಗಧಾರಿಗಳೆಲ್ಲರಿಗೂ ಸಹಜವಾಗಿ ಪ್ರಾಪ್ತವಾಗುವಂತಹದಲ್ಲ. ಇಂತಹ ಪ್ರಸಂಗದಲ್ಲಿ ಇಷ್ಟಲಿಂಗದಲ್ಲಿ ಅಷ್ಟೊಂದು ಮಮತೆ ಬೆಳೆಯದಿರುವ ಸಾಧಕನ ಇಷ್ಟಲಿಂಗವು ದೇಹದಿಂದ ಜಾರಿಬಿದ್ದರೆ ಸಹಜವಾಗಿ ಪ್ರಾಣಹೋಗದೇ ಇದ್ದಾಗ ಲೋಕಾಪವಾದಕ್ಕೆ ಅಂಜಿ ಕೆಲಜನರು ಇಚ್ಛೆ ಇಲ್ಲದೇ ಆತ್ಮಹತ್ಯಾದಿಗಳನ್ನು ಮಾಡಿಕೊಳ್ಳಲಾರಂಭಿಸಿರಬಹುದು. ಪತ್ನಿಯು ಪತಿಯ ಮೇಲೆ ಅತ್ಯಂತ ಆಸಕ್ತಳಾಗಿದ್ದರೆ ಪತಿಯ ಪ್ರಾಣವಿಯೋಗವಾದೊಡನೇ ಪತ್ನಿಯ ಪ್ರಾಣವಾದರೂ ವಿಯೋಗವಾಗುವುದು ಒಂದು ಸಹಜ ನಿಯಮ. ಪ್ರಾಚೀನ ಕಾಲದಲ್ಲಿ ಇಂತಹ ಅನೇಕ ಘಟನೆಗಳು ಆಗಿರಬಹುದು. ಮುಂದೆ ಕಾಲಾಂತರದಲ್ಲಿ ಪತಿಯ ಮೇಲೆ ಅಷ್ಟೊಂದು ಆಸಕ್ತಿ ಇಲ್ಲದ ಪತ್ನಿಯು ಪತಿಯ ಮರಣದ ನಂತರ ಜೀವಂತವಾಗಿ ಉಳಿದರೆ ಲೋಕಾಪವಾದ ಬಂದೀತೆಂಬ ಭಯದಿಂದ ಇಚ್ಛೆ ಇರದಿದ್ದರೂ ಪತ್ನಿಯು ಗಂಡನ ಚಿತೆಯಲ್ಲಿ ಹಾರಿಕೊಂಡು ಪ್ರಾಣತ್ಯಾಗ ಮಾಡುವ ರೂಢಿಯು ಕಾಲಾಂತರದಲ್ಲಿ ಬೆಳೆಯಿತು. ಮುಂದೆ ಅದೇ ಒಂದು ಹೇಯ “ಸತೀ ಪದ್ಧತಿ”ಯಾಗಿ ಬೆಳೆದುಬಂದಿತು. “ಗತಾನುಗತಿಕೋ ಲೋಕೋ

ನ ಲೋಕಃ ಪಾರಮಾರ್ಥಿಕಃ" ಎಂಬ ವಾಕ್ಯದಂತೆ ಸಮಾಜವು ಯಾವಾಗಲೂ ಶಾಸ್ತ್ರದ ನಿಯಮಗಳನ್ನು ಅಂಧ ಪರಂಪರೆಯಲ್ಲಿ ಬೆಳೆಸುತ್ತ ಬರುತ್ತದೆ. ಅಂತೆಯೇ ಸಮಾಜವನ್ನು ಮೇಲಿಂದ ಮೇಲೆ ಎಚ್ಚರಗೊಳಿಸಬೇಕಾಗುತ್ತದೆ.

ಸತೀಪದ್ಧತಿಯ ಅನಿಷ್ಟ ಪರಂಪರೆಯನ್ನು ನಿಲ್ಲಿಸಲು ರಾಜರಾಮ ಮೋಹನ ರಾಯರಂಥವರು ಬಹಳಷ್ಟು ಶ್ರಮಿಸಿದರು. ಅಂತೆಯೆ ಗಂಡ ಸತ್ತಾಗ ಸಾಯಲು ಇಚ್ಛೆಯಿಲ್ಲದೆ ಸತಿಯನ್ನು ಬಲಾತ್ಕಾರವಾಗಿ ಚಿತೆಯಲ್ಲಿ ಹಾಕುವ ಅಸಾಮಾಜಿಕ ತತ್ತ್ವಗಳು ಈಗ ಬಹಳಷ್ಟು ಕಡಿಮೆಯಾಗಿವೆ. ಸಂಪೂರ್ಣ ನಿರ್ಮೂಲನೆಗೊಂಡಿದೆ ಎಂದರೂ ಅಡ್ಡಿಯಿಲ್ಲ.

ದ್ವಾವಿಮೌ ಪುರುಷೌ ಲೋಕೇ ಸೂರ್ಯಮಂಡಲಭೇದಿನೌ।
ಪರಿವ್ರಾಡ್ಯೋಗಯುಕ್ತಶ್ಚ ರಣೇಚ್ಬಾಭಿಮುಖೇ ಹತಃ॥

ಎಂಬ ಪ್ರಮಾಣವಾಕ್ಯದಂತೆ ದೇಶದ ರಕ್ಷಣೆಗಾಗಿ ಕಾದಾಡುತ್ತಿರುವ ಸೈನಿಕನು ತನ್ನ ಪ್ರಾಣಭಯವಿಲ್ಲದೆ ಶತ್ರುವಿಗೆ ಎದುರಾಗಿ ಕಾದಾಡುತ್ತ ಧೈರ್ಯವಾಗಿಯೇ ಪ್ರಾಣತ್ಯಾಗವನ್ನು ಮಾಡಿದರೆ ಆ ವೀರಸೈನಿಕನಿಗೆ ಸದ್ಗತಿಯೇ ಪ್ರಾಪ್ತವಾಗುತ್ತದೆ. ಆದರೆ ತನ್ನ ಪ್ರಾಣವನ್ನುಳಿಸಿಕೊಳ್ಳುವುದಕ್ಕಾಗಿ ದೇಶಾಭಿಮಾನವನ್ನು ತ್ಯಾಗಮಾಡಿ ಶತ್ರುಗಳಿಗೆ ಬೆನ್ನು ತೋರಿಸಿ ಓಡಿಹೋಗುವಾಗ ಒಂದು ವೇಳೆ ಶತ್ರುಗಳಿಂದ ಆಹತನಾಗಿ ರಣರಂಗದಲ್ಲಿ ಮಡಿದರೂ ಸದ್ಗತಿಯ ಬದಲಾಗಿ ಅವನಿಗೆ ದುರ್ಗತಿಯೇ ಪ್ರಾಪ್ತವಾಗುತ್ತದೆ.

ಅದರಂತೆ ಇಷ್ಟಲಿಂಗ ಕಳೆದಾಗ ಲಿಂಗದಲ್ಲಿಯ ಅತ್ಯಾಸಕ್ತಿಯಿಂದ ಸಾಧಕನ ಪ್ರಾಣವು ಸಹಜವಾಗಿಯೇ ಹೋಗಲಿ ಅಥವಾ ವೀರವ್ರತವನ್ನು ಪರಿಪಾಲಿಸುವ ಸಂತೋಷದಲ್ಲಿ ಪ್ರಾಣದ ಭಯವಿಲ್ಲದೇ ತಾನಾಗಿಯೇ ಪ್ರಾಣಾರ್ಪಣೆ ಮಾಡಲಿ ಇವೆರಡರಲ್ಲಿ ಯಾವ ದೋಷವೂ ಇರುವುದಿಲ್ಲ. ಅವನಿಗೆ ಸದ್ಗತಿಯೇ ಪ್ರಾಪ್ತವಾಗುವುದು. ಆದರೆ ನಮ್ಮ ಪೂರ್ವಜರು ಇಷ್ಟಲಿಂಗ ವಿಯೋಗವಾದಾಗ ಪ್ರಾಣವನ್ನು ಕಳೆದುಕೊಂಡಿದ್ದಾರೆ. ಈಗ ನಾನು ಪ್ರಾಣ ಕಳೆದುಕೊಳ್ಳದಿದ್ದರೆ ಜನಾಪವಾದಕ್ಕೆ ಗುರಿಯಾಗುವೆನಲ್ಲಾ? ಎಂಬ ಅಪವಾದದ ಭಯದಿಂದ ಪ್ರಾಣದಲ್ಲಿ ಅತಿಯಾದ ಮಮತೆ ಇದ್ದರೂ ಬಲಾತ್ಕಾರವಾಗಿ ಪ್ರಾಣವನ್ನು ತ್ಯಜಿಸಿದರೆ; ಅಥವಾ ಸಮಾಜದವರೇ ಅವನನ್ನು ಒತ್ತಾಯಪೂರ್ವಕವಾಗಿ ಕೊಂದರೆ ಆ ರೀತಿ ಸತ್ತವನಿಗೂ ಹಾಗೂ ಕೊಂದವರಿಗೂ ದುರ್ಗತಿಯೇ ಪ್ರಾಪ್ತವಾಗುತ್ತದೆ.

ಆದುದರಿಂದ ಎಲ್ಲವನ್ನು ತರ್ಕದ ಒರೆಗಲ್ಲಿಗೆ ತಿಕ್ಕಿ ನೋಡುವುದು ಸರಿಯಲ್ಲ. "ನೈಷಾ ತರ್ಕೇಣ ಮತಿರಾಪನೇಯಾ" ಎಂದಿದೆ ಶ್ರುತಿಯು. ಭಕ್ತಸ್ಥಲದ ಸಾಧಕನಿಗೆ ತರ್ಕಪಕ್ಷಕ್ಕಿಂತಲೂ ಭಾವಪಕ್ಷ ಪ್ರಧಾನವಾದದ್ದು. ಭಾವಾನುಕೂಲ ತರ್ಕಗಳು ಗ್ರಾಹ್ಯಗಳೇ ವಿನಹ, ಭಾವವನ್ನು ಹಾಳುಮಾಡುವ ಕುತರ್ಕಗಳು ಗ್ರಾಹ್ಯಗಳಲ್ಲ. "ಇಷ್ಟಲಿಂಗ

ವಿಯೋಗವಾದಾಗ ಪ್ರಾಯಶ್ಚಿತ್ತವಿಲ್ಲದೇ ಪ್ರಾಣವನ್ನೇ ತ್ಯಾಗಮಾಡಬೇಕೆಂಬ" ಶ್ರೀ ಜಗದ್ಗುರು ರೇಣುಕ ಭಗವತ್ಪಾದರ ಆದೇಶವನ್ನು ಪ್ರಾಣತ್ಯಾಗ ಮಾಡುವುದು ಆತ್ಮಘಾತವಲ್ಲವೇ? ಹೀಗೆ ಮಾಡುವುದು ಯೋಗ್ಯವೇ? ಮುಂತಾದ ಸುತೀಕ್ಷ್ಣ ಒರೆಗಲ್ಲಿಗೆ ತಿಕ್ಕಿ ನೋಡುವುದೆಂದರೆ ಸುಂದರವೂ-ಸುಗಂಧಭರಿತವೂ ಆಗ ಗುಲಾಬಿ ಹೂವನ್ನು ತಿಕ್ಕಿ ಪರೀಕ್ಷಿಸಿದಂತಾಗುತ್ತದೆ. ಇದರಿಂದ ಹೂವಿನ ವಿನಾಶವಲ್ಲದೇ ಬೇರಾವ ಪ್ರಯೋಜನವು ಪ್ರಾಪ್ತವಾಗದಂತೆ ಆಚಾರ್ಯೋಕ್ತಿಯ ಅವಹೇಳನವೇ ಪ್ರಾಪ್ತವಾಗುವುದು. ಹೂವಿಗೆ ಯಾವುದೇ ಹಿಂಸೆಯನ್ನು ಕೊಡದೇ ಘ್ರಾಣೇಂದ್ರಿಯಕ್ಕೆ ಸಂಪರ್ಕಿಸಿ ಕಣ್ಣುಗಳನ್ನು ಮುಚ್ಚಿ ಏಕಾಗ್ರ ಮನಸ್ಸಿನಿಂದ ಆಘ್ರಾಣಿಸಿದರೆ ಮಹಾನ್ ಪ್ರಾಕೃತಿಕ ಸುಗಂಧವು ಪ್ರಾಪ್ತವಾಗುವಂತೆ ಮೇಲೆ ಹೇಳಿದ ಆಚಾರ್ಯರ ಆದೇಶವೆಂಬ ಪುಷ್ಪವನ್ನು ಭಾವದಿಂದ ಪರೀಕ್ಷಿಸಲಾಗಿ, ಇಷ್ಟಲಿಂಗದಲ್ಲಿ ಅತ್ಯಂತ ನಿಷ್ಠೆ ಇರಬೇಕೆಂಬ ಅಮೂಲ್ಯ ಸುಗಂಧವು ಪ್ರಾಪ್ತವಾಗುವುದು. ಈ ಸುಗಂಧವನ್ನು ಸವಿದು ಬದುಕುವುದೇ ವೀರಶೈವಾನುಯಾಯಿ ಭಕ್ತ-ಭ್ರಮರಗಳ ಆದ್ಯಕರ್ತವ್ಯವು.

ಇಷ್ಟಲಿಂಗವಿಯೋಗದಲ್ಲಿ ಪ್ರಾಯಶ್ಚಿತ್ತ ವಿಚಾರ*

ವಾತುಲಶುದ್ಧಾಗಮದಲ್ಲಿ ಇಷ್ಟಲಿಂಗವಿಯೋಗವಾದಾಗ ಪ್ರಾಯಶ್ಚಿತ್ತ ವಿಧಾನವನ್ನು ತಿಳಿಸಲಾಗಿದೆ. ಇದು ವೀರವ್ರತಕ್ಕೆ ವಿಕಲ್ಪವಾಗಿದೆ-

> ಶುದ್ಧಶೈವೋ ವಿಶೇಷೇಣ ಮಂತ್ರಯಂತ್ರ ಪ್ರಚಾರಣಾತ್॥
> ಶುದ್ಧೋ ಭವತಿ ಲೋಪೇಷು ಪ್ರಾಯಶ್ಚಿತ್ತ ವಿಧಾನತಃ।
> ಸ್ವೇಷ್ಟಲಿಂಗೇ ಪರಿಭ್ರಷ್ಟೇ ನಷ್ಟೇ ದಗ್ಧೇ ಹೃತೇಽಪಿ ವಾ॥
> ನೀತೇ ವಾ ಮೂಷಿಕಾದ್ಯೈಶ್ಚ ಕಾಕಕೌಲೇಯ ವಾನರೈಃ।
> ಜಪ್ತ್ವಾ ಲಕ್ಷಮಘೋರಸ್ಯ ವಿಧಿನಾ ಲಿಂಗಕಾಂತರಮ್॥
> ಪ್ರತಿಷ್ಠಾಪ್ಯ ನಯೇತ್ ಶುದ್ಧಿಂ ಪಿಂಡಿಕಾಯಾಂ ತಥೈವ ಚ॥[೧೬೯]

"ಸಾಧಕನ ಇಷ್ಟಲಿಂಗವು ದೇಹದಿಂದ ಚ್ಯುತವಾದರೆ, ನಷ್ಟವಾದರೆ, ದಗ್ಧವಾದರೆ, ಅಪಹರಿಸಲ್ಪಟ್ಟರೆ ಅಥವಾ ಇಲಿ, ಕಾಗೆ, ನಾಯಿ ಮತ್ತು ಮಂಗಗಳಿಂದ ಒಯ್ಯಲ್ಪಟ್ಟರೆ "ಓಂ ಅಘೋರೇಭ್ಯೋಽಥ ಘೋರೇಭ್ಯೋ ಘೋರಘೋರತರೇಭ್ಯಃ। ಸರ್ವೇಭ್ಯಸ್ಸರ್ವ ಶರ್ವೇಭ್ಯೋ ನಮಸ್ತೇ ಅಸ್ತು ರುದ್ರರೂಪೇಭ್ಯಃ॥" ಎಂಬ ಅಘೋರಮಂತ್ರವನ್ನು ಒಂದು ಲಕ್ಷ ಜಪ ಮಾಡಿ ಪುನಃ ಸದ್ಗುರುಗಳಿಂದ ಬೇರೊಂದು ಲಿಂಗವನ್ನು ಸಂಸ್ಕಾರ ಪೂರ್ವಕವಾಗಿ ಪಡೆಯತಕ್ಕದ್ದು.

---

* ಈ ವಿಚಾರವು ಮೂಲಗ್ರಂಥದಲ್ಲಿ ಪ್ರಸ್ತಾಪವಾಗಿರುವುದಿಲ್ಲ. ಇದರ ಆವಶ್ಯಕತೆಯನ್ನು ಗಮನಿಸಿ ಮೂಲ ಲೇಖಕರ ಸಿದ್ಧಾಂತ ಶಿಖಾಮಣಿ, ಪ್ರವಚನ ಪ್ರಭೆ, ಕಿರಣ-೫, ಪು. ೫೯-೬೧ ರಿಂದ ಸ್ವೀಕರಿಸಲಾಗಿದೆ.

[೧೬೯] ವಾತುಲ ಶುದ್ಧಾಗಮ, ಪಟಬ ೧೦.೫೭-೬೦

ಹೀಗೆ ಒಂದು ಲಕ್ಷ ಅಘೋರಮಂತ್ರವನ್ನು ಜಪಿಸಿ ಪರಿಶುದ್ಧನಾಗಿ ಬೇರೊಂದು ಇಷ್ಟಲಿಂಗವನ್ನು ಸದ್ಗುರುವಿನಿಂದ ಪಡೆದ ವ್ಯಕ್ತಿಗೆ ವಾತುಲಶುದ್ಧಾಗಮವು "ಶುದ್ಧಶೈವ" ಎಂಬ ಶಬ್ದವನ್ನು ಪ್ರಯೋಗಿಸಿದೆ. ವೀರಶೈವನಿಗೆ ಮಾತ್ರ ಆಗಮಗಳಲ್ಲಿ ಪ್ರಾಯಶ್ಚಿತ್ತ ಕರ್ಮಗಳನ್ನು ಹೇಳಿರುವುದಿಲ್ಲ. ಅರ್ಥಾತ್ ಇವರು ಎಂದೂ ಪ್ರಮಾದವನ್ನು ಮಾಡಬಾರದೆಂಬುದೇ ಅಭಿಪ್ರಾಯವು. ಇಂದಿನ ಪರಿಸ್ಥಿತಿಯಲ್ಲಿ ಈ ವೀರವ್ರತವನ್ನು ಪರಿಪಾಲಿಸುವ ಸಾಮರ್ಥ್ಯವು ಸಾಧಕರಲ್ಲಿ ಇರದ ಕಾರಣ ತಮ್ಮಿಂದ ಇಷ್ಟಲಿಂಗ ವಿಯೋಗ ಅಥವಾ ವ್ರತಗಳ ಲೋಪಗಳುಂಟಾದಾಗ ಸದ್ಗುರುಗಳಲ್ಲಿಗೆ ಹೋಗಿ ತನ್ನ ಅಪರಾಧವನ್ನು ಅವರಿಗೆ ನಿವೇದಿಸಿಕೊಂಡು ಅವರು ಉಪದೇಶಿಸಿದ ಮಾರ್ಗದಲ್ಲಿ ನಡೆಯುವುದು ಸೂಕ್ತವಾದದ್ದು.

ಲಿಂಗಧಾರಣೆಯಿಂದ ಪಾಪದ ನಾಶ

ಭಗವಾನ್ ಶಿವನೇ ಜೀವಿಗಳ ಬಾಹ್ಯ ಹಾಗೂ ಆಂತರಿಕವಾದ ಎಲ್ಲ ಬಗೆಯ ದೋಷಗಳ ನಿವಾರಕನು. ಪೃಥ್ವಿಯೇ ಮೊದಲಾದ ಪಂಚಮಹಾಭೂತಗಳ ರೂಪದಿಂದ ಮತ್ತು ಸೂರ್ಯ, ಚಂದ್ರ, ಯಜ್ಞ ದೀಕ್ಷಿತನಾದ ಯಜಮಾನ ಈ ಎಂಟು ವಿಧ ರೂಪಗಳಿಂದ ಪ್ರತ್ಯಕ್ಷವಾಗಿ ಗೋಚರಿಸುವ ಅವನು ಜೀವಾತ್ಮನ ಬಾಹ್ಯ ಮಾಲಿನ್ಯವನ್ನು ದೂರಮಾಡುತ್ತಾನೆಂಬುದು ಎಲ್ಲರ ಅನುಭವಕ್ಕೂ ಬಂದ ವಿಷಯವೇ ಆಗಿದೆ. "ಜಪತೋ ನಾಸ್ತಿ ಪಾತಕಮ್" (ಜಪದಿಂದ ಪಾಪವಿಲ್ಲ) ಎಂಬಲ್ಲಿ ಅದೇ ಶಿವನ ನಾಮಸ್ಮರಣೆಯಿಂದ ಅಂತರಂಗ ಮಾಲಿನ್ಯವು ನಿವಾರಣೆಯಾಗುತ್ತದೆಂಬುದೂ ಕೂಡ ಪ್ರತಿಪಾದಿತವಾಗಿದೆ. ವೀರಶೈವರು ಧರಿಸಿರುವ ಇಷ್ಟಲಿಂಗವು ಪರಶಿವ ವಾಚಕವಾದ ಶಿವಪಂಚಾಕ್ಷರೀ ಮಂತ್ರದ ಪ್ರತಿಕೃತಿರೂಪವಾಗಿರುವ ಕಾರಣದಿಂದ ಅದನ್ನು ಧರಿಸುವುದರಿಂದಲೂ ಸಹ ಎಲ್ಲ ಬಗೆಯ ಪಾಪಗಳು ಪರಿಹಾರವಾಗುತ್ತವೆ. ಆದುದರಿಂದಲೇ ಶ್ರೀ ರೇಣುಕ ಭಗವತ್ಪಾದರು- "ಲಿಂಗಸ್ಯ ಧಾರಣಂ ಪುಣ್ಯಂ ಸರ್ವಪಾಪ ಪ್ರಣಾಶನಮ್"[೧೭೦] (ಲಿಂಗಧಾರಣೆಯು ಪುಣ್ಯ, ಎಲ್ಲ ಪಾಪಗಳನ್ನು ನಾಶಪಡಿಸುತ್ತದೆ) ಎಂದು ಉಪದೇಶಿಸಿದ್ದಾರೆ. ಮತ್ತು ಸೂಕ್ಷ್ಮಾಗಮದಲ್ಲಿ-

> **ದರ್ಶನಾತ್ ಸರ್ವಪಾಪಘ್ನಂ ಸ್ಪರ್ಶನಾದಖಿಲಾರ್ಥದಮ್।**
> **ಅರ್ಚನಾನ್ಮೋಕ್ಷದಂ ದೇವಿ ಲಿಂಗಂ ಕೋ ವಾ ನ ಪೂಜಯೇತ್॥**[೧೭೧]

"(ಇಷ್ಟಲಿಂಗದ) ದರ್ಶನದಿಂದ ಎಲ್ಲ ಪಾಪಗಳು ಪರಿಹಾರವಾಗುತ್ತವೆ; ಸ್ಪರ್ಶದಿಂದ ಎಲ್ಲ ಫಲಗಳು ಸಿದ್ಧಿಸುತ್ತವೆ; ಅರ್ಚನೆಯಿಂದ (ಪೂಜಿಸುವುದರಿಂದ) ಮೋಕ್ಷವುಂಟಾಗುತ್ತದೆ. ದೇವಿ! ಇಷ್ಟಲಿಂಗವನ್ನು ಯಾರು ತಾನೆ ಪೂಜಿಸುವುದಿಲ್ಲ"

---

[೧೭೦] ಸಿ.ಶಿ, ೬.೨೮

[೧೭೧] ಸೂ.ಆ, ಕ್ರಿ.ಪಾ, ೬.೬೧

ಎಂದು ಇಷ್ಟಲಿಂಗದ ದರ್ಶನ, ಸ್ಪರ್ಶನ ಮತ್ತು ಅರ್ಚನೆಯಿಂದ ಮೋಕ್ಷ ಉಂಟಾಗುತ್ತದೆಂದು ಪ್ರತಿಪಾದಿಸ ಲಾಗಿದೆ.

ಮಲ್ಲಿಂಗಧಾರಣಾತ್ ಪ್ರೀತಿರ್ಯಾ ಪುನರ್ಜಾಯತೇ ಮಮ।
ಸಾ ಪ್ರೀತಿರ್ನೈವ ವಿಜ್ಞಾನಾತ್ ಕೇವಲಾನ್ಮಮ ಪೂಜನಾತ್॥[೧೭೨]

"ಯಾರು ಶಿವಲಿಂಗವನ್ನು ಧರಿಸಿರುವುದರಿಂದ ನನಗೆ ಪ್ರೀತಿಯುಂಟಾಗುತ್ತದೆಯೋ ಆ ಪ್ರೀತಿಯು ವಿಶೇಷವಾದ ಜ್ಞಾನದಿಂದ ಉಂಟಾದದ್ದಲ್ಲ, ಕೇವಲ ನನ್ನ ಪೂಜೆಯಿಂದ ಉಂಟಾದದ್ದು" -ಎಂದು ಕಾಮಿಕೋತ್ತರ ಉಕ್ತಿಯನ್ನು ಪ್ರಮಾಣವನ್ನಾಗಿ ಉಲ್ಲೇಖಿಸುವುದರ ಮೂಲಕ ನೀಲಕಂಠ ಶಿವಾಚಾರ್ಯರು ಲಿಂಗಧಾರಣೆಯು ಶಿವನಿಗೆ ಪ್ರೀತಿಯನ್ನುಂಟುಮಾಡುತ್ತದೆ ಎಂದು ನಿರೂಪಿಸಿದ್ದಾರೆ. ಶಿವನಿಗೆ ಲಿಂಗಧಾರಿಯ ವಿಷಯದಲ್ಲಿ ಉಂಟಾಗಿರುವ ಪ್ರೀತಿಯ ಕಾರಣದಿಂದಲೇ (ಶಿವಾನುಗ್ರಹದಿಂದ) ಎಲ್ಲ ಬಗೆಯ ದೋಷಗಳ ಪರಿಹಾರವೆಂದು ತಿಳಿಯಬೇಕು. ಆದುದರಿಂದಲೇ ಲಿಂಗಾಷ್ಟಕದಲ್ಲಿ "ಸಂಚಿತಪಾಪವಿನಾಶಕಲಿಂಗಮ್"[೧೭೩] (ಲಿಂಗವು ಸಂಚಿತವಾದ ಪಾಪಗಳನ್ನು ನಿವಾರಿಸುವಂತಹದ್ದು) ಎಂದು ಹೇಳಲಾಗಿದೆ. ಭೂಮಿಯ ಮೇಲೆ ಶಿವಲಿಂಗ ಸ್ಥಾಪನೆಯಿಂದ ಆ ಸ್ಥಳವು ಹೇಗೆ ಪುಣ್ಯಕ್ಷೇತ್ರವಾಗುತ್ತದೆಯೋ ಹಾಗೆಯೇ ಶಿವಲಿಂಗಧಾರಿಗಳ ಶರೀರವೂ ಕೂಡ ಪುಣ್ಯಕ್ಷೇತ್ರವೇ ಆಗುತ್ತದೆ. "ಇದಂ ಶರೀರಂ ಕೌಂತೇಯ ಕ್ಷೇತ್ರಮಿತ್ಯಭಿಧೀಯತೇ"[೧೭೪] (ಎಲೈ ಅರ್ಜುನ! ಈ ಶರೀರವನ್ನು ಕ್ಷೇತ್ರವೆಂದು ಕರೆಯಲಾಗಿದೆ) ಎಂಬ ಗೀತೋಕ್ತಿಯಲ್ಲಿಯೂ ಕೂಡ ಶಿವಪೂಜಕನ ಮತ್ತು ಶಿವಧ್ಯಾನ ಪರಾಯಣನ ಶರೀರವನ್ನು ಕ್ಷೇತ್ರವೆಂದು ಕರೆಯಲಾಗಿದೆ. ಆದುದರಿಂದ ಶಿವಲಿಂಗಧಾರಿಗಳ ಶರೀರಗಳು ಜಂಗಮ ಶಿವಾಲಯಗಳು. ಆ ಶರೀರಗಳು ಸ್ವಯಂ ಪವಿತ್ರವಾಗಿದ್ದು ಇತರರನ್ನೂ ಕೂಡ ಪಾವನವನ್ನಾಗಿಸುತ್ತವೆ.

ಅವಧಾನದಿಂದ ಇಷ್ಟಲಿಂಗವನ್ನು ಧರಿಸಬೇಕು

ಇಷ್ಟಲಿಂಗಮಿದಂ ಸಾಕ್ಷಾದನಿಷ್ಟಪರಿಹಾರಕಮ್।
ಧಾರಯೇದವಧಾನೇನ ಶರೀರೇ ಸರ್ವದಾ ಬುಧಃ॥[೧೭೫]

"ಪ್ರತ್ಯಕ್ಷವಾಗಿ ಸಂಸಾರಪಾಶರೂಪವಾದ ಅನಿಷ್ಟವನ್ನು ಪರಿಹರಿಸುವ ಈ ಇಷ್ಟಲಿಂಗವನ್ನು ಜ್ಞಾನಿಯು ಯಾವಾಗಲೂ ಶರೀರದಲ್ಲಿ ಸಾವಧಾನವಾಗಿ ಧರಿಸಬೇಕು" ಎಂಬ ಶ್ರೀರೇಣುಕ ಭಗವತ್ಪಾದರ ಅಪ್ಪಣೆಯಂತೆ ಪರಮಪಾವನವೂ ಮತ್ತು ಅನಿಷ್ಟ ಪರಿಹಾರಕವೂ ಆದ ಈ ಇಷ್ಟಲಿಂಗವನ್ನು ಶರೀರದಲ್ಲಿ ಯಾವಾಗಲೂ ಅವಧಾನದಿಂದ

---

[೧೭೨] ಕ್ರಿ.ಸಾ, ಭಾಗ-೨, ಪು. ೪೯

[೧೭೩] ಲಿಂಗಾಷ್ಟಕ, ಶ್ಲೋಕ. ೫

[೧೭೪] ಭ.ಗೀ, ೧೩.೧

[೧೭೫] ಸಿ.ಶಿ, ೬.೫೦

ಧರಿಸಬೇಕು. 'ಅವಧಾನ' ಎಂದರೆ ದಕ್ಷತೆ ಅಥವಾ ಜಾಗೃತಿ ಎಂದರ್ಥವಾಗುತ್ತದೆ. ಆದುದರಿಂದ ಲಿಂಗಧಾರಿಗಳು ಸದಾ ಜಾಗರೂಕರಾಗಿರಬೇಕು, ಅರ್ಥಾತ್ ನನ್ನ ಶರೀರದಲ್ಲಿ ಶಿವಲಿಂಗವಿದೆ ಎಂಬುದನ್ನು ಒಮ್ಮೆಯೂ ಕೂಡ ಮರೆಯದಂತೆ ಎಚ್ಚರದಿಂದಿರಬೇಕು. ಆ ವಿಸ್ಮೃತಿಯಿಂದಲೇ ಪ್ರಮಾದಗಳಾಗುತ್ತವೆ. ಲೋಕದಲ್ಲಿ ಮನುಷ್ಯನು ಯಾವುದೇ ದುರ್ವ್ಯವಹಾರವನ್ನು ಎಲ್ಲರ ಎದುರಿನಲ್ಲಿ ಮಾಡಲು ಅಸಮರ್ಥನಾಗಿದ್ದು, ರಹಸ್ಯವಾಗಿ ಮಾಡಲು ಬಯಸುತ್ತಾನೆ. ದುರಾಚಾರಿಗಳ ದುರ್ವ್ಯವಹಾರವು ಇತರರಿಗೆ ತಿಳಿಯದಿದ್ದರೂ ಕೂಡ ತನ್ನ ಮನಸ್ಸಿಗೆ ತಿಳಿದೇ ತಿಳಿಯುತ್ತದೆ. ನಮ್ಮ ದುರ್ವ್ಯವಹಾರವು ನಮ್ಮ ಮನಸ್ಸಿಗೆ ಯಾವಾಗಲೂ ಹೇಗೆ ತಿಳಿದಿರುತ್ತದೆಯೋ, ಹಾಗೆಯೇ ಎಲ್ಲೆಡೆ ವ್ಯಾಪಿಸಿರುವ ಪರಶಿವನಿಗೆ ಎಲ್ಲರ ದುರ್ವ್ಯವಹಾರಗಳು ತಿಳಿದೇ ತಿಳಿದಿರುತ್ತವೆ. ಸರ್ವವ್ಯಾಪಕನಾದ ಅವನು ಅಪ್ರತ್ಯಕ್ಷನಾಗಿರುವುದರಿಂದ ಜನಗಳು ತಮ್ಮ ವ್ಯವಹಾರವನ್ನು ಯಾರೂ ನೋಡಿರುವುದಿಲ್ಲವೆಂಬ ಭ್ರಮೆಯಲ್ಲಿರುತ್ತಾರೆ. ಈ ರೀತಿಯಾದ ಭ್ರಮೆಯ ನಿವಾರಣೆಗಾಗಿ ವೀರಶೈವಾಚಾರ್ಯರು ಪರಶಿವನ ಪ್ರತಿಕೃತಿರೂಪವಾದ ಇಷ್ಟಲಿಂಗವನ್ನು ದಯಪಾಲಿಸಿದ್ದಾರೆ. ಆದುದರಿಂದ ತನ್ನ ಶರೀರದಲ್ಲಿ ಅಪರೋಕ್ಷ ರೂಪದಿಂದಿರುವ ಇಷ್ಟಲಿಂಗದ ವಿಷಯದಲ್ಲಿ ಯಾರು ಅವಧಾನದಿಂದಿರುತ್ತಾರೆಯೋ, ಅಂಥವರು ತಪ್ಪನ್ನು ಎಸಗುವುದೇ ಇಲ್ಲ. ಬಾಹ್ಯ ವಿಷಯಾಸಕ್ತಿಯಾದ ಅನವಧಾನಿಯು ಯಾವಾಗಲೂ ಲಿಂಗಧಾರಿಯಾಗಿದ್ದರೂ ಕೂಡ ತಪ್ಪುಗಳನ್ನು ಮಾಡುತ್ತಾರೆ ಎಂದು ಆಚಾರ್ಯರು ಅಂತಹವರನ್ನು ಎಚ್ಚರಿಸಿದ್ದಾರೆ. ತಾನು ಎಲ್ಲಿ ಹೇಗೆ ಇದ್ದರೂ ಕೂಡ ಆದೇ ತಾನೇ ಹುಟ್ಟಿದ ತನ್ನ ಕರುವನ್ನು ಹಸುವು ಹೇಗೆ ಪ್ರತಿಕ್ಷಣವೂ ಸ್ಮರಿಸಿಕೊಳ್ಳುತ್ತದೆಯೋ ಹಾಗೆಯೇ ಶಿವದೀಕ್ಷೆಯನ್ನು ಪಡೆದ ಮನುಷ್ಯನೂ ಕೂಡ ತನ್ನ ಶರೀರದ ಮೇಲಿರುವ ಇಷ್ಟಲಿಂಗದ ವಿಷಯದಲ್ಲಿ ಅವಧಾನದಿಂದಿರಬೇಕು. ಈ ರೀತಿಯಾಗಿ ಇಷ್ಟಲಿಂಗದ ವಿಷಯದಲ್ಲಿ ಯಾವಾಗಲೂ ಇರುವ ಸ್ಮರಣೆಯೇ "ಸಾವಧಾನ ಲಿಂಗಧಾರಣೆ" ಎಂದು ಹೇಳಲ್ಪಟ್ಟಿದೆ. ಇಂತಹ ಅವಧಾನದಿಂದಲೇ ಪ್ರಮಾದಗಳು ಸಂಭವಿಸುವುದಿಲ್ಲ ಹಾಗೂ ಸಾಧಕನಿಗೆ ಸನ್ಮಾರ್ಗದ ಪ್ರವೃತ್ತಿಯುಂಟಾಗುತ್ತದೆ. ಈ ಬಗೆಯ ಅವಧಾನವೇ ವೀರಶೈವ ಸಿದ್ಧಾಂತದಲ್ಲಿ "ಅವಧಾನಭಕ್ತಿ" ಎಂದು ಕರೆಯಲ್ಪಟ್ಟಿದೆ.

ಇಷ್ಟಲಿಂಗ ಧರಿಸುವ ಸ್ಥಾನಗಳು

ಇಷ್ಟಲಿಂಗವನ್ನು ಸ್ಥೂಲಶರೀರದಲ್ಲಿ ಅವಧಾನದಿಂದ ಧರಿಸಬೇಕೆಂದು ವಿವರಿಸಲಾಯಿತು. ಆದರೆ ಸ್ಥೂಲ ಶರೀರದಲ್ಲಿ ಎಲ್ಲಿ ಧರಿಸಬೇಕು? ಅಥವಾ ಹೇಗೆ ಧರಿಸಬೇಕೆಂಬ ಜಿಜ್ಞಾಸೆಗೆ ಶ್ರೀ ರೇಣುಕಾಚಾರ್ಯರು ಹೀಗೆ ಉತ್ತರಿಸಿದ್ದಾರೆ:

> **ಮೂರ್ಧ್ನಿ ವಾ ಕಂಠದೇಶೇ ವಾ ಕಕ್ಷೇ ವಕ್ಷಃಸ್ಥಲೇಽಪಿ ವಾ।**
> **ಕುಕ್ಷೌ ಹಸ್ತಸ್ಥಲೇ ವಾಪಿ ಧಾರಯೇಲ್ಲಿಂಗಮೈಶ್ವರಮ್॥**[೧೭೬]

---

[೧೭೬]. ಸಿ.ಶಿ, ೬.೫೧

"ಮಸ್ತಕದಲ್ಲಾಗಲಿ, ಕಂಠದಲ್ಲಾಗಲಿ, ಬಾಹುಮೂಲದಲ್ಲಾಗಲಿ, ಎದೆಯಲ್ಲಾಗಲಿ, ಹೊಟ್ಟೆಯ ಮೇಲಾಗಲಿ ಅಥವಾ ಕರತಲ (ಅಂಗೈ)ದಲ್ಲಾಗಲಿ- ಸ್ಥೂಲಶರೀರದ ಈ ಆರು ಸ್ಥಾನಗಳಲ್ಲಿ ಯಾವುದಾದರೊಂದರಲ್ಲಿ ನಮ್ಮ ಇಷ್ಟದಂತೆ ಶಿವಲಿಂಗವನ್ನು ಧರಿಸುವುದು ಕರ್ತವ್ಯವೆಂದು ಆದೇಶಿಸಿದ್ದಾರೆ."

ಸ್ಥೂಲಶರೀರದ ಆರು ಸ್ಥಾನಗಳಲ್ಲಿಯೇ ಲಿಂಗಧಾರಣೆಯನ್ನು ಮಾಡಬೇಕೆಂದು ಹೇಳಿರುವ ಕಾರಣವಿಷ್ಟು. ಕಿವಿ, ಚರ್ಮ, ಕಣ್ಣು, ನಾಲಿಗೆ ಮತ್ತು ಮೂಗು ಎಂಬ ಐದು ಜ್ಞಾನೇಂದ್ರಿಯಗಳು ಮತ್ತು ಮನೋರೂಪದ ಅಂತಃಕರಣವೆಂಬ ಆರು ಇಂದ್ರಿಯಗಳು ಪ್ರಸಿದ್ಧವಾಗಿವೆ. ಅವುಗಳಲ್ಲಿ ಪಂಚಜ್ಞಾನೇಂದ್ರಿಯಗಳು ಕ್ರಮವಾಗಿ ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧಗಳೆಂಬ ಪಂಚವಿಷಯಗಳನ್ನು ಅನುಭವಿಸುತ್ತವೆ. ಆದರೆ ಮನಸ್ಸು ಎಲ್ಲ ವಿಷಯಗಳಿಗೂ ಸಾಮಾನ್ಯವಾದುದು. ಅರ್ಥಾತ್ ಅಂತಃಕರಣದಲ್ಲಿದ್ದುಕೊಂಡು ಕಿವಿ ಮುಂತಾದ ಪಂಚೇಂದ್ರಿಯಗಳ ಮೂಲಕ ಶಬ್ದವೇ ಮೊದಲಾದ ಎಲ್ಲ ವಿಷಯಗಳನ್ನು ಅನುಭವಿಸುತ್ತದೆ. ವೀರಶೈವ ದರ್ಶನದಲ್ಲಿ ಎಲ್ಲ ವಿಷಯಗಳೂ ಇಷ್ಟಲಿಂಗಕ್ಕೆ ಅರ್ಪಣೆಯಾಗಿ ಪ್ರಸಾದರೂಪದಲ್ಲಿ ಸ್ವೀಕರಿಸಬೇಕೆಂಬ ನಿಯಮವಿದೆ. ಆದುದರಿಂದ ವಿಷಯಗಳನ್ನು ಸ್ವೀಕರಿಸುವ ಆರು ಇಂದ್ರಿಯಗಳಲ್ಲಿ ಕ್ರಮವಾಗಿ ಮನಸ್ಸಿನಲ್ಲಿ ಮಹಾಲಿಂಗವನ್ನು, ಕಿವಿಗಳಲ್ಲಿ ಪ್ರಸಾದಲಿಂಗವನ್ನು, ಚರ್ಮದಲ್ಲಿ ಜಂಗಮಲಿಂಗವನ್ನು, ಕಣ್ಣುಗಳಲ್ಲಿ ಶಿವಲಿಂಗವನ್ನು, ನಾಲಿಗೆಯಲ್ಲಿ ಗುರುಲಿಂಗವನ್ನು ಮತ್ತು ಮೂಗಿನಲ್ಲಿ ಆಚಾರಲಿಂಗವನ್ನು ಭಾವಿಸುತ್ತಾ ಆಯಾ ಇಂದ್ರಿಯಗಳ ವಿಷಯಗಳನ್ನು ಆಯಾ ಲಿಂಗಗಳಿಗೆ ನೈವೇದ್ಯ ಮಾಡಿ ಸಾಧಕನು ಪ್ರಸಾದವನ್ನು ಸ್ವೀಕರಿಸುತ್ತಾನೆ. ಇದೇ ರೀತಿಯಾಗಿ ಸೂಕ್ಷ್ಮಶರೀರದಲ್ಲಿ ಭಾವಿತವಾಗುವ ಆರು ಲಿಂಗಗಳ ಸ್ಥಾನಗಳು ಸ್ಥೂಲಶರೀರದಲ್ಲಿಯೂ ಕೂಡ ಇರುತ್ತವೆ ಎಂಬ ಧ್ವನಿತಾರ್ಥವು ಸ್ಥೂಲಶರೀರದ ಆರು ಸ್ಥಾನಗಳಲ್ಲಿಯೇ ಲಿಂಗಧಾರಣೆ ಮಾಡಬೇಕೆಂದು ಹೇಳುತ್ತದೆ. ಮಸ್ತಕ ಮಹಾಲಿಂಗಸ್ಥಾನ, ಕಂಠ ಪ್ರಸಾದ ಲಿಂಗಸ್ಥಾನ, ಬಾಹುಗಳು ಜಂಗಮಲಿಂಗಸ್ಥಾನ, ವಕ್ಷಃಸ್ಥಲ ಶಿವಲಿಂಗಜ್ಞಾನ, ಹೃದಯ ಗುರುಲಿಂಗಸ್ಥಾನ ಮತ್ತು ಕೈಗಳು ಆಚಾರಲಿಂಗಸ್ಥಾನವೆಂದು ತಿಳಿಯಬೇಕು. ವಾತುಲಶುದ್ಧಾಗಮದಲ್ಲಿಯೂ ಕೂಡ-

ಮೂರ್ಧ್ನಿ ಕಂಠೇ ಭುಜೇ ಹಸ್ತೇ ಹೃತ್‌ಸ್ಥಲೇ ನಾಭಿಮಂಡಲೇ।
ಏತೇಷಾಮೇಕದೇಶೇ ತು ಧಾರಯೇತ್ ಶಿವಲಿಂಗಕಮ್॥[೧೭೭]

"ಮಸ್ತಕದಲ್ಲಿ, ಕುತ್ತಿಗೆಯಲ್ಲಿ, ಭುಜದಲ್ಲಿ, ಕೈಯಲ್ಲಿ, ಹೃದಯದಲ್ಲಿ ಅಥವಾ ನಾಭಿಯಲ್ಲಿ -ಇವುಗಳಲ್ಲಿ ಯಾವುದಾದರೊಂದು ಸ್ಥಾನದಲ್ಲಿ ಶಿವಲಿಂಗವನ್ನು ಧರಿಸಬೇಕು." ಈ ಆರು ಸ್ಥಾನಗಳ ಹೊರತು, ಜಟೆಯ ತುದಿಯಲ್ಲಿ, ಪೃಷ್ಠಭಾಗದಲ್ಲಿ ಮತ್ತು ನಾಭಿಯ ಕೆಳಭಾಗದಲ್ಲಿ ಲಿಂಗಧಾರಣೆ ನಿಷಿದ್ಧವಾಗಿದೆ.

---

೧೭೭. ವಾತುಲಶುದ್ಧಾಗಮ, ೧೦.೩೬

ನಾಭೇರಧಸ್ತಾಲ್ಲಿಂಗಸ್ಯ ಧಾರಣಂ ಪಾಪಕಾರಣಮ್।
ಜಟಾಗ್ರೇ ತ್ರಿಕಭಾಗೇ ಚ ಮಲಸ್ಥಾನೇ ನ ಧಾರಯೇತ್॥[೧೭೮]

"ನಾಭಿಯ ಕೆಳಗೆ ಲಿಂಗಧಾರಣೆ ಮಾಡುವುದು ಪಾಪಕ್ಕೆ ಕಾರಣವಾಗುವುದು. ಜಟೆಯ ತುದಿಯಲ್ಲಿ, ಬೆನ್ನಿನಲ್ಲಿ ಮತ್ತು ಮಲಸ್ಥಾನದಲ್ಲಿ ಲಿಂಗವನ್ನು ಧರಿಸಬಾರದು."

ಆದುದರಿಂದ ನಿಷಿದ್ಧಸ್ಥಾನಗಳನ್ನು ಬಿಟ್ಟು, ವಿಹಿತವಾಗಿರುವ ಸ್ಥಾನಗಳಲ್ಲಿ ಯಾವುದಾದರೊಂದು ಸ್ಥಾನದಲ್ಲಿ ತಮ್ಮ ಇಚ್ಛಾನುಸಾರ ಶಿವಭಕ್ತರು ಲಿಂಗವನ್ನು ಧರಿಸಬೇಕು.

ಇಷ್ಟಲಿಂಗಧಾರಣೆಯ ವಿಧಾನ

ಪೂರ್ವೋಕ್ತ ಸ್ಥಾನಗಳಲ್ಲಿ ಇಷ್ಟಲಿಂಗವನ್ನು ಹೇಗೆ ಧರಿಸಬೇಕು? ಆ ವಿಧಾನವು ಎಂತಹದು? ಎಂದು ಜಿಜ್ಞಾಸೆಯುಂಟಾದರೆ, ಪಾರಮೇಶ್ವರತಂತ್ರದಲ್ಲಿ ಹೀಗೆ ಉತ್ತರಿಸಲಾಗಿದೆ:

ಅಥ ಕುರ್ಯಾನ್ ಮಹಾದೇವಿ ಸಜ್ಜಿಕಾಖ್ಯಂ ತದಾಲಯಮ್।
ಪಂಚಸೂತ್ರೋತ್ಥಲಿಂಗಸ್ಯ ಯಾವತ್ಪೂರ್ಣಂ ತಥಾ ಭವೇತ್॥
ಸೌವರ್ಣಮುತ್ತಮಂ ದೇವಿ ಯದಿ ಶಕ್ತಸ್ತಥಾ ಚರೇತ್।
ರಾಜತಂ ಪಿತ್ತಲಂ ತಾಮ್ರಂ ನೈವ ಕಾಂಸ್ಯೇನ ಕಾರಯೇತ್॥
ಸೀಸೇನ ತ್ರಪುಣಾ ದೇವಿ ತಾನ್ತವೀ ಪಾಟಕಾಪಿ ವಾ।
ಏತೇಷ್ವನ್ಯತಮಂ ನಿತ್ಯಂ ನಾನ್ಯತ್ ಕುರ್ಯಾದನಾರತಮ್॥
ಪರಿತ್ಯಜ್ಯಾಪಿ ಯತ್ನೇನ ಪ್ರಾಣಮಾನಧನಾದಿಕಮ್।
ಸಂರಕ್ಷಣೀಯಂ ಗಿರಿಜೇ ಲಿಂಗಮೇವಂ ನ ಸಂಶಯಃ॥[೧೭೯]

"ಹೇ ಮಹಾದೇವಿ, (ಇಷ್ಟಲಿಂಗದ ವಾಸಕ್ಕಾಗಿ) ಕರಡಿಗೆ (ಸಜ್ಜಿಕೆ) ಎಂಬ ಶಿವಾಲಯವನ್ನು ಪಂಚಸೂತ್ರ ಘಟಿತವಾದ ಲಿಂಗಕ್ಕೆ ಪೂರ್ಣ ಅವಕಾಶವಿರುವಂತೆ ಮಾಡಿಸಬೇಕು. ಕರಡಿಗೆ ಚಿನ್ನದ್ದಾದರೆ ಉತ್ತಮ. ಆದುದರಿಂದ ಶಕ್ತಿಯಿದ್ದರೆ ಅದನ್ನೇ ಮಾಡಿಸಬೇಕು, ಬೆಳ್ಳಿ, ಹಿತ್ತಾಳೆ, ತಾಮ್ರ (ದ ಕರಡಿಗೆಯನ್ನು ಮಾಡಿಸಬಹುದು). ಆದರೆ ಕಂಚು, ಸೀಸ, ತ್ರಪು (ತವರ), ಕರಡಿಗೆಯನ್ನು ಮಾಡಿಸಬಾರದು. ತನಗೆ ಧಾತುಗಳ ಕರಡಿಗೆಯನ್ನು ಮಾಡಿಸುವದು ಸಾಧ್ಯವಿರದಿದ್ದರೆ ದಾರ ಇಲ್ಲವೆ ಬಟ್ಟೆಯ ಕರಡಿಗೆಯನ್ನು ಮಾಡಿಸಿಕೊಳ್ಳಬಹುದು. ಹೀಗೆ ಶಾಸ್ತ್ರ ವಿಹಿತವಾದ ಯಾವುದಾದರೊಂದು ಆಪತ್ಕಾಲದ ಹೊರತಾಗಿ ಬೇರೆ ಯಾವುದರಿಂದಲೂ ಅದನ್ನು ಮಾಡಿಸಬಾರದು. ಹೇ ಗಿರಿಜೆ! ಪ್ರಾಣ, ಮಾನ, ಧನ ಮುಂತಾದುವನ್ನು ತ್ಯಜಿಸಿಯಾದರೂ ಪ್ರಯತ್ನದಿಂದ ಲಿಂಗವನ್ನು ಸಂರಕ್ಷಿಸಲೇಬೇಕು."

ಈ ಶ್ಲೋಕಗಳ ಭಾವವಿಷ್ಟು- ಶರೀರದ ಮೇಲೆ ಇಷ್ಟಲಿಂಗವನ್ನು ಧರಿಸಲು ಆ ಲಿಂಗದ ಗಾತ್ರಕ್ಕೆ ಅನುಗುಣವಾದ ಲೋಹದ ಮನೆಯನ್ನು ನಿರ್ಮಿಸಬೇಕು. ಆ

---

೧೭೮. ಸಿ.ಶಿ, ೬.೫೨

೧೭೯. ಪಾರಮೇಶ್ವರತಂತ್ರ, ೨.೩೪-೩೭

ಇಷ್ಟಲಿಂಗವನ್ನಿಡುವ ಲೋಹದ ಮನೆ ಸಜ್ಜಿಗೆ, ಕರಡಿಗೆ ಎಂದು ಹೆಸರು. ಮತ್ತು ಆ ಕರಡಿಗೆಯು ತಮ್ಮ ಶಕ್ತ್ಯಾನುಸಾರ ಚಿನ್ನ, ಬೆಳ್ಳಿ, ಹಿತ್ತಾಳೆ, ತಾಮ್ರ ಮುಂತಾದ ಲೋಹಗಳಿಂದ ನಿರ್ಮಿಸಿರಬೇಕು. ಕಂಚು, ಸೀಸಗಳಿಂದ ನಿರ್ಮಿಸಿದ ಕರಡಿಗೆಯು ನಿಷೇಧವಾಗಿದೆ. ಚಿನ್ನ ಮುಂತಾದ ಲೋಹಗಳಿಂದ ಕರಡಿಗೆಯನ್ನು ಮಾಡಿಸಲು ಅಶಕ್ತನಾದರೆ ಬಟ್ಟೆಯ ಕರಡಿಗೆಯನ್ನು ಉಪಯೋಗಿಸಬೇಕೆಂದು ಆಗಮವು ಬೋಧಿಸುತ್ತದೆ.

ಕರಡಿಗೆಯ ಆಕಾರದ ವಿಷಯದಲ್ಲಿ ಅದೇ ಆಗಮದಲ್ಲಿ ಹೀಗೆ ವಿವರಿಸಲಾಗಿದೆ- ಕರಡಿಗೆಯು ನಂದೀಶ್ವರನ ಆಕಾರದಲ್ಲಿದ್ದರೆ ಸ್ವರ್ಗ-ಮೋಕ್ಷಗಳ ಫಲ; ಮಾವಿನಹಣ್ಣಿನ ಆಕಾರದಲ್ಲಿದ್ದರೆ ಆಯುರಾರೋಗ್ಯ ಫಲಗಳು; ಮೋದಕಾಕಾರದಲ್ಲಿದ್ದರೆ ದೀರ್ಘಾಯಸ್ಸು, ಪುತ್ರ ಸೌಭಾಗ್ಯ ಫಲಗಳು; ಬಿಲ್ವಕಾಯಿಯ ಆಕಾರದಲ್ಲಿದ್ದರೆ ಸಂಪತ್ತು, ವಿಜಯ, ದೀರ್ಘಾಯುಸ್ಸು ಮುಂತಾದ ಫಲಗಳು ಹಾಗೂ ಶಿವಲಿಂಗದ ಆಕಾರವಿದ್ದರೆ ಭೋಗ-ಮೋಕ್ಷ ಫಲಗಳುಂಟಾಗುತ್ತವೆ ಎಂದು ವಿಸ್ತಾರವಾಗಿ ನಿರೂಪಿಸಲಾಗಿದೆ. ಆದುದರಿಂದ ಶಿಷ್ಯನು ಗುರುವಿನ ಅಪ್ಪಣೆಯಂತೆ ತನಗಿಷ್ಟವಾದ ಫಲವನ್ನು ಪಡೆಯಲು ನಂದೀಶ್ವರ ಮೊದಲಾದ ಆಕಾರವುಳ್ಳ ಕರಡಿಗೆಯನ್ನು ತೆಗೆದುಕೊಂಡು ಅದರಲ್ಲಿ ಇಷ್ಟಲಿಂಗವನ್ನು ಬಟ್ಟೆಯಲ್ಲಿ ಸುತ್ತಿ ಇಟ್ಟು, ಇಷ್ಟಲಿಂಗವಿರುವ ಆ ಕರಡಿಗೆಯನ್ನು ಶಿವದಾರದಿಂದ ಕಟ್ಟಿ ಪೂರ್ವೋಕ್ತ ಆರು ಸ್ಥಾನಗಳ ಪೈಕಿ ಯಾವುದಾದರೊಂದು ಸ್ಥಾನದಲ್ಲಿ ಧರಿಸಬೇಕು.

ಕರಡಿಗೆಯನ್ನು ಕಟ್ಟಲು ಉಪಯೋಗಿಸುವ ಶಿವದಾರವು ಲೋಹ ಅಥವಾ ದಾರದ್ದಾಗಿರಬಹುದು. ಲೋಹದಿಂದ ಮಾಡಿದ ಶಿವದಾರಗಳ ಪೈಕಿ ಚಿನ್ನದಿಂದ ಮಾಡಿರುವ ಶಿವದಾರವು ಸೌಭಾಗ್ಯವನ್ನು ನೀಡುವಂತಹದ್ದು; ಬೆಳ್ಳಿಯದು ಪುತ್ರ, ಕೀರ್ತಿಗಳನ್ನು ನೀಡುವಂತಹದ್ದು; ತಾಮ್ರದ್ದು ಧನ-ಧಾನ್ಯಾದಿಗಳನ್ನು; ಹಿತ್ತಾಳೆಯದು ಸರ್ವಭೋಗಪ್ರದ; ಕಂಚಿನದು ಕಲ್ಮಷನಾಶಕ; ತ್ರಪುಸೀಸಗಳಿಂದ ಮಾಡಿರುವಂತಹದ್ದು; ಇಷ್ಟಫಲವನ್ನು ನೀಡುತ್ತದೆ. ನೂಲಿನಿಂದ ಮಾಡಿದ ಶಿವದಾರವು ಎಲ್ಲ ಬಗೆಯ ಅಭೀಷ್ಟಪ್ರದವೆಂದು ಅದೇ ಆಗಮದಲ್ಲಿ ನಿರೂಪಿತವಾಗಿದೆ.

ಇಲ್ಲಿ ಈ ವಿಷಯವನ್ನೂ ಸಹ ತಿಳಿಯುವುದವಶ್ಯ. ಅದೇನೆಂದರೆ ನೂಲಿನ ಶಿವದಾರವು ಒಂದು ಪಕ್ಷ ಬಿಳಿಯ ಬಣ್ಣದ್ದಾಗಿದ್ದಲ್ಲಿ ಜ್ಞಾನಪ್ರದ, ಕೆಂಪು ವಶೀಕಾರಕ, ಕಪ್ಪು ಶತ್ರುಭಯದಾಯಕ, ಹಳದಿ ಪುತ್ರದಾಯಕ ಮತ್ತು ಮಿಶ್ರವರ್ಣದ್ದಾದರೆ ನಾನಾ ಫಲಗಳನ್ನು ನೀಡುತ್ತದೆ. ಈ ಶಿವದಾರವು ಮೂವತ್ತಾರು ಎಳೆಗಳಿಂದ ಕೂಡಿರುತ್ತದೆ. ಮೂವತ್ತಾರು ಸಂಖ್ಯೆಯ ರಹಸ್ಯವು ಇಷ್ಟಲಿಂಗವಿಜ್ಞಾನವೆಂಬ ಗ್ರಂಥದಲ್ಲಿ ಹೀಗೆ ನಿರೂಪಿತವಾಗಿದೆ:

> ಜ್ಞಾನಕರ್ಮಸಮುಚ್ಚಿತ್ಯ ಶ್ರೀಗುರುರ್ಲಿಂಗಜಂಗಮಾಃ।
> ಷಡ್ವಿಧಾಃ ಷಟ್‌ಸ್ಥಲೈರುಕ್ತಾಃ ಷಟ್‌ತ್ರಿಂಶತ್ತತ್ತ್ವತೋ ಮತಾಃ॥

ಅತೋ ದ್ವಾಭ್ಯಾಂ ಸಮುಚ್ಚಿತ್ಯ ತ್ರಿರಾವೃತ್ಯ ಪ್ರಕಲ್ಪಯೇತ್।
ಷಟ್‌ಸೂತ್ರಂ ತಚ್ಛಿವಂ ಪ್ರೋಕ್ತಂ ರುದ್ರಗ್ರಂಥಿಸಮಾಯುತಮ್॥
ಅಪ್ರಮತ್ತೇನ ತದ್ಧಾರ್ಯಂ ಶಿವಸಜ್ಞಿಕಯಾ ಸದಾ॥[೧೮೦]

ತಾತ್ಪರ್ಯವೇನೆಂದರೆ- ವೀರಶೈವಸಿದ್ಧಾಂತದಲ್ಲಿ ಗುರು, ಲಿಂಗ, ಜಂಗಮ -ಈ ಮೂವರು ಪೂಜ್ಯರು ಹಾಗೂ ಜ್ಞಾನ-ಕರ್ಮಗಳೆರಡು ಮುಕ್ತಿಯ ಸಾಧನಗಳು. ಷಟ್‌ಸ್ಥಲವು ಮುಕ್ತಿಯ ಸೋಪಾನ. ಹೀಗೆ ಗುರು, ಲಿಂಗ, ಜಂಗಮರನ್ನು ಜ್ಞಾನ-ಕರ್ಮಗಳಿಂದ ಗುಣಿಸಿ ಬಂದ ಮೊತ್ತವನ್ನು ಷಟ್‌ಸ್ಥಲದಿಂದ ಗುಣಿಸಲಾಗಿ (೩x೨=೬; ೬x೬=೩೬) ಮೂವತ್ತಾರು ಸಂಖ್ಯೆಯು ಬರುತ್ತದೆ. ಗುರು, ಲಿಂಗ, ಜಂಗಮರನ್ನು ಜ್ಞಾನ-ಕರ್ಮಗಳಿಂದಾರಾಧಿಸಿ ಷಟ್‌ಸ್ಥಲದಲ್ಲಿ ನಡೆದು ಶಿವಸಾಯುಜ್ಯವನ್ನು ಪಡೆಯುವ ದೃಢಸಂಕಲ್ಪವೆಂಬ ಸೂತ್ರದಿಂದ ಇಷ್ಟಲಿಂಗವನ್ನು ಧರಿಸಿಕೊಂಡಿದ್ದೇನೆಂಬುದರ ಪ್ರತೀಕವಾಗಿಯೇ ಶಿವದಾರದಲ್ಲಿ ಮೂವತ್ತಾರು ಎಳೆಗಳನ್ನಿರಿಸುವುದು. ಇದಲ್ಲದೆ ಶಿವಾದಿ ಭೂಮ್ಯಂತಗಳಾದ ಮೂವತ್ತಾರೂ ತತ್ತ್ವಗಳ ಪ್ರತೀಕವಾಗಿಯಾದರೂ ಹೇಳಬಹುದು.

ಹೀಗೆ ತನ್ನ ಇಚ್ಛಾನುಸಾರ ಕರಡಿಗೆ ಮತ್ತು ಶಿವದಾರವನ್ನು ತೆಗೆದುಕೊಂಡು, ಕರಡಿಗೆಯಲ್ಲಿ ಇಷ್ಟಲಿಂಗವನ್ನಿಟ್ಟು, ಅದನ್ನು ಶಿವದಾರದಿಂದ ಕಟ್ಟಿ, ಶಾಸ್ತ್ರೋಕ್ತವಾದ ಶರೀರದ ಯಾವುದಾದರೊಂದು ಸ್ಥಾನದಲ್ಲಿ ಧರಿಸಿ, ಇಷ್ಟಲಿಂಗಪೂಜಾರೂಪ ನಿತ್ಯಕರ್ಮವನ್ನು ಪ್ರತಿದಿನವೂ ವೀರಶೈವಮತಾನುಯಾಯಿಗಳು ಆಚರಿಸಬೇಕು.

ವೀರಶೈವರ ನಿತ್ಯಕರ್ಮ

ವೀರಶೈವರ ನಿತ್ಯಕರ್ಮಗಳಿಗೆ ಸಂಬಂಧಿಸಿದಂತೆ ವಿಹಿತ ಮತ್ತು ನಿಷಿದ್ಧ ಎಂದು ಎರಡು ವಿಧ ಕರ್ಮಗಳು ಶಾಸ್ತ್ರಗಳಲ್ಲಿ ನಿರೂಪಿತವಾಗಿವೆ. ಅವುಗಳಲ್ಲಿ ವೇದಾಗಮಗಳು ಅಂಗೀಕರಿಸಿರುವ ಕರ್ಮಗಳು ವಿಹಿತ ಮತ್ತು ವೇದಾಗಮಗಳು ಒಪ್ಪದಿರುವ ಕರ್ಮಗಳು ನಿಷಿದ್ಧ ಕರ್ಮಗಳೆನಿಸಿವೆ. ವಿಹಿತಕರ್ಮವು ನಿತ್ಯ, ನೈಮಿತ್ತಿಕ, ಕಾಮ್ಯ ಮತ್ತು ಪ್ರಾಯಶ್ಚಿತ್ತ ಎಂಬ ಭೇದದಿಂದ ನಾಲ್ಕು ವಿಧವಾಗಿದೆ. ನಿತ್ಯಕರ್ಮವನ್ನು ಅನುಷ್ಠಾನ ಮಾಡಿದರೆ ವಿಶೇಷ ಪುಣ್ಯವಿಲ್ಲ, ಮಾಡದಿದ್ದರೆ ದುರಿತಪ್ರಾಪ್ತಿಯಾಗುವುದು. ಆ ಕಾರಣ ಈ ಕರ್ಮಲೋಪದಿಂದ ಬರಬಹುದಾದ ದುರಿತವನ್ನು ತಡೆಯುವುದೇ ನಿತ್ಯಕರ್ಮದ ಪ್ರಯೋಜನ. ಅದನ್ನು ನ್ಯಾಯಕೋಶವು ಹೀಗೆ ವಿವರಿಸಿದೆ:

ನಿತ್ಯಂ ಸದಾ ಯಾವದಾಯುರ್ನ ಕದಾಚಿದತಿಕ್ರಮೇತ್।
ಉಪೇತ್ಯಾತಿಕ್ರಮೇ ದೋಷಶ್ರುತೇರತ್ಯಾಗದರ್ಶನಾತ್।
ಫಲಾಶ್ರುತೇರ್ವೀಪ್ಸಯಾ ಚ ತನ್ನಿತ್ಯಮಿಹ ಕೀರ್ತಿತಮ್॥[೧೮೧]

---

೧೮೦. ಇಷ್ಟಲಿಂಗವಿಜ್ಞಾನ, ಪು. ೮೨

೧೮೧. ನ್ಯಾಯಕೋಶ, ಪು. ೪೧೭-೪೧೮

ವೈದಿಕರಿಗೆ ಸಂಧ್ಯಾವಂದನೆ ಮತ್ತು ಪಂಚಮಹಾಯಜ್ಞ[೧೮೨] ಮುಂತಾದವುಗಳು ಹೇಗೆ ನಿತ್ಯಕರ್ಮವೋ ಹಾಗೆಯೇ ಆಗಮಿಕರಿಗೆ ಅದರಲ್ಲಿಯೂ ವೀರಶೈವರಿಗೆ ತಮ್ಮ ಇಷ್ಟಲಿಂಗಪೂಜೆಯೇ ನಿತ್ಯಕರ್ಮ. ಅದನ್ನು ಸೂಕ್ಷ್ಮಾಗಮದಲ್ಲಿ ಹೀಗೆ ನಿರೂಪಿಸಲಾಗಿದೆ:

> ಏಕಕಾಲಂ ದ್ವಿಕಾಲಂ ವಾ ತ್ರಿಕಾಲಂ ವಾಪಿ ಶಾಂಕರಿ।
> ಪೂಜಯೇನ್ನಿಯತಂ ಲಿಂಗಂ ಪ್ರಾಣಲಿಂಗಪರಾಯಣಃ॥
> ಏವಂ ಯಃ ಕುರುತೇ ಭಕ್ತ್ಯಾ ನಿತ್ಯಮಾಪ್ರಾಣಸಂಚರಾತ್।
> ವೀರಶೈವಃ ಸ ವಿಜ್ಞೇಯಃ ಸರ್ವಶೈವೋತ್ತಮೋತ್ತಮಃ॥[೧೮೩]

"ಪ್ರಾಣಲಿಂಗ ಪರಾಯಣನು ನಿಯತವಾಗಿ ಇಷ್ಟಲಿಂಗವನ್ನು ಒಂದು ಸಲವಾಗಲಿ, ಎರಡು ಸಲವಾಗಲಿ, ಮೂರು ಸಲವಾಗಲಿ ತಪ್ಪದೆ ಪೂಜಿಸಬೇಕು. ಹೀಗೆ ಭಕ್ತಿಯಿಂದ ಸದಾ ಪ್ರಾಣಲಿಂಗವನ್ನು ಯಾರು ಉಪಾಸನೆ ಮಾಡುತ್ತಾನೆಯೋ ಅವನು ಸರ್ವಶೈವೋತ್ತಮನಾದ ವೀರಶೈವನೆನಿಸುವನು."

ಆದುದರಿಂದ ಪೂರ್ವಜನ್ಮದ ಪುಣ್ಯದ ಫಲದಿಂದ ಮತ್ತು ಗುರುವಿನ ಕರುಣೆಯಿಂದ ಪ್ರಾಪ್ತವಾದ ಇಷ್ಟಲಿಂಗವನ್ನು ತನ್ನ ಶಕ್ತ್ಯಾನುಸಾರ ಪ್ರತಿದಿನವೂ ಒಂದು ವೇಳೆ, ಎರಡು ವೇಳೆ ಅಥವಾ ಮೂರು ವೇಳೆ ಷೋಡಶೋಪಚಾರಾದಿಗಳಿಂದ ಅವಶ್ಯವಾಗಿ ನಿಷ್ಠೆಯಿಂದ ಪೂಜಿಸಬೇಕು. ಹೀಗೆ ಪೂಜಿಸುವವನೇ ವೀರಶೈವನು. ಇವನು ಎಲ್ಲ ಶೈವರಲ್ಲಿ ಉತ್ತಮೋತ್ತಮನು. ಪ್ರತಿದಿನವೂ ತಾನು ಬದುಕಿರುವವರೆಗೆ ವೇದಾಗಮಗಳಲ್ಲಿ ವಿಹಿತವಾಗಿರುವ ಕರ್ಮಗಳನ್ನು ಆಚರಿಸಲೇಬೇಕಾಗುವುದರಿಂದ ಜಿಜ್ಞಾಸು ಅಥವಾ ಜ್ಞಾನಿಯು ಆ ಕರ್ಮಗಳ ವಿಷಯದಲ್ಲಿ ಲೋಪಮಾಡಬಾರದು. ಹಾಗೆ ಮಾಡಿದಲ್ಲಿ ಪಾಪವುಂಟಾಗುತ್ತದೆ.

ಯಾವನಾದರೂ ವ್ಯಕ್ತಿಯು ವಿಹಿತವಾದ ಕರ್ಮಗಳಿಗೆ ಅಧಿಕಾರಿಯಾಗಿದ್ದರೂ ಸಹ, ಅವುಗಳನ್ನು ಅತಿಕ್ರಮಿಸಿದಲ್ಲಿ (ಆಚರಿಸದಿದ್ದಲ್ಲಿ) ಅವನ ಪಾಪವು ಪ್ರತಿದಿನವೂ ವೃದ್ಧಿಯಾಗುತ್ತದೆ. ಮತ್ತು ಆ ಬಗೆಯ ಪಾಪದ ವೃದ್ಧಿಯಿಂದ ಆತನು ಮೋಕ್ಷಕ್ಕೆ ಅರ್ಹನಾಗುವುದಿಲ್ಲ. ಸಂಶಯ ಮತ್ತು ವಿಪರ್ಯಯಗಳು ತತ್ತ್ವಜ್ಞಾನದಿಂದ ನಾಶವಾದರೂ ಕೂಡ ನಿತ್ಯ ಮಾಡಬೇಕಾದ ಕರ್ಮಗಳನ್ನು ಮಾಡದಿರುವುದರಿಂದ ಉಂಟಾದ ಪ್ರತ್ಯವಾಯ ಎಂಬ ದೋಷವು ಪ್ರತಿಬಂಧಕವಾಗಿರುವುದರಿಂದ ಮೋಕ್ಷಕ್ಕೆ ಅಧಿಕಾರಿಯಾಗಲಾರನು. ಮತ್ತು ಆತ್ಮಜ್ಞಾನವು ಕರ್ಮಗಳನ್ನು ವಿರೋಧಿಸಿ

---

೧೮೨. ಅಧ್ಯಾಪನಂ ಬ್ರಹ್ಮಯಜ್ಞಃ ಪಿತೃಯಜ್ಞಸ್ತು ತರ್ಪಣಮ್।
ಹೋಮೋ ದೈವೀ ಬಲಿರ್ಭೌತೋ ನೃಯಜ್ಞೋಽತಿಥಿಪೂಜನಮ್॥
-ಮನುಸ್ಮೃತಿ, ೩.೭೦

೧೮೩. ಸೂ.ಆ, ಕ್ರಿ.ಪಾ, ೬.೫೧-೫೨

ಹೋಗಲಾಡಿಸುತ್ತದೆ ಎಂದರೆ ಆಗ ಪ್ರಾರಬ್ಧಕರ್ಮವನ್ನು ಕೂಡ ಕಳೆಯಬೇಕಾಗುತ್ತದೆ. ಶಾಸ್ತ್ರಸಿದ್ಧವಾದ ಜೀವನ್ಮುಕ್ತಿಯೇ ಮೊದಲಾದ ವಿಷಯಗಳಲ್ಲಿ ಅತಿಯಾದ ಆಲಾಪವು ಸರಿಯಲ್ಲ.

ವಿಹಿತಕರ್ಮಗಳನ್ನು ಮಾಡದಿರುವುದು ಅಭಾವರೂಪವು, ಅಭಾವದಿಂದ ಭಾವೋತ್ಪಾದನ ಸಾಮರ್ಥ್ಯವು ಲೋಕದಲ್ಲಿ ಕಾಣಿಸುವುದಿಲ್ಲ? ಎಂದು ಪೂರ್ವಪಕ್ಷಕಾರರು ಆಕ್ಷೇಪಿಸಿದಲ್ಲಿ, ಹೀಗೆ ಉತ್ತರಿಸಲಾಗಿದೆ- ಅದು ಹಾಗಲ್ಲ, ಶರೀರದಲ್ಲಿರುವ ಆತ್ಮವು ಕಾಯೇನ, ವಾಚಾ ಮತ್ತು ಮನಸಾ ಯಾವಾಗಲೂ ಏನನ್ನಾದರೂ ಮಾಡುತ್ತಲೇ ಇರುತ್ತದೆ. ಸಂಧ್ಯಾವಂದನೆಯ ಸಂದರ್ಭದಲ್ಲಿ ವಿಹಿತವಾದ ಕರ್ಮವನ್ನು ಮಾಡದೇ ಮತ್ತೊಂದು ಕರ್ಮವನ್ನು ಮಾಡಿದರೆ, ಅದರಿಂದಲೇ ಪಾಪವುಂಟಾಗುತ್ತದೆ ಎಂಬ ಕಾರಣದಿಂದ, ಅಭಾವದಿಂದ ಭಾವೋತ್ಪತ್ತಿಯ ಪ್ರಸಂಗ ಉಂಟಾಗುವುದಿಲ್ಲ ಎಂಬುದನ್ನು ನ್ಯಾಯಕಂದಲೀ ಎಂಬ ಗ್ರಂಥದಲ್ಲಿ ಹೀಗೆ ವಿವರಿಸಲಾಗಿದೆ-

ಕರ್ಮಣಾಂ ಪ್ರಾಗಭಾವೋ ಯೋ ವಿಹಿತಾಕರಣಾದಿಷು।
ನ ಚಾನರ್ಥಕರತ್ವೇನ ವಸ್ತುತ್ವಾನ್ನಾಪನೀಯತೇ॥
ಸ್ವಕಾಲೇ ಯದಕುರ್ವಂಸ್ತತ್ಕರೋತ್ಯನ್ಯದಚೇತನಃ।
ಪ್ರತ್ಯವಾಯೋಽಸ್ಯ ತೇನೈವ ನಾಭಾವೇನ ಸ ಜನ್ಯತೇ॥[೧೮೪]

ಸಂಧ್ಯಾವಂದನೆಯ ಸಂದರ್ಭದಲ್ಲಿ ನಿಷಿದ್ಧ ಕರ್ಮಗಳನ್ನು ಮಾಡುವುದು ಪಾಪಕ್ಕೆ ಕಾರಣವಾಗುವುದಾದರೆ, ಯಾವನಾದರೂ ವ್ಯಕ್ತಿಯು ಆ ಸಮಯದಲ್ಲಿ ಯಾವುದೇ ನಿಷಿದ್ಧ ಕರ್ಮಗಳನ್ನು ಮಾಡದೆ ಸುಮ್ಮನಿರುತ್ತಾನೆ, ಅಥವಾ ಯೋಗಾಭ್ಯಾಸ ನಿರತನಾಗಿರುತ್ತಾನೆ. ಅಂತಹ ಸಂದರ್ಭದಲ್ಲಿ ನಿಷಿದ್ಧ ಕರ್ಮಗಳ ಆಚರಣೆಯ ಅಭಾವದಿಂದ ಅವನಿಗೆ ಪಾಪವು ಬರುತ್ತದೆ ಎಂದು ಪೂರ್ವಪಕ್ಷಕಾರರು ಆಕ್ಷೇಪಿಸಿದರೆ ಹೀಗೆ ಉತ್ತರಿಸಲಾಗಿದೆ. ಅದು ಹಾಗಲ್ಲ. ಕೇವಲ ಶರೀರಧಾರಿಗಳಿಂದ ಯೋಗಾಭ್ಯಾಸವನ್ನು ಮಾಡಿದರೂ ಸಹ ಅಥವಾ ಮನುಷ್ಯರು ಅವಶ್ಯವಾಗಿ ಮಾಡಲೇಬೇಕಾಗಿರುವ ವಿಧಿಯ ಉಲ್ಲಂಘನೆಯಿಂದ ಪಾಪವು ಬರುತ್ತದೆ. ಆದುದರಿಂದ ವಿಹಿತಕರ್ಮಗಳನ್ನು ಮಾಡದಿರುವುದರಿಂದ ಅವನಿಗೆ ಪಾಪವು ಬರುವುದರಿಂದ ಮತ್ತು ಬಂಧನ ಕಾರಣದಿಂದಲೂ, ಇನ್ನೊಂದು ಕಡೆ ಆಸಕ್ತಿಯಿಲ್ಲದಿರುವುದರಿಂದ, ಪಾಪದ ಪರಿಹಾರಕ್ಕಾಗಿ ಮೋಕ್ಷವನ್ನು ಬಯಸುವ ಪುರುಷನಿಂದ ಯೋಗಾಭ್ಯಾಸಕ್ಕೆ ವಿರೋಧವಲ್ಲದ ಭಿಕ್ಷಾಟನೆಯಿಂದ ಭೋಜನಾದಿಗಳನ್ನು ಮಾಡುವಂತೆ ಆಯಾ ಕಾಲಕ್ಕನುಗುಣವಾಗಿ ಎಲ್ಲ ವೀರಶೈವರೂ ಸಹ ಇಷ್ಟಲಿಂಗಪೂಜಾರೂಪದ ನಿತ್ಯಕರ್ಮವನ್ನು ಆಚರಿಸಬೇಕು. ಆದುದರಿಂದಲೇ- "ಜ್ಞಾನಾಮೃತೇನ ತೃಪ್ತೋಽಪಿ

---

[೧೮೪] ನ್ಯಾಯಕಂದಲೀ, ಪು. ೬೮೪

ಯೋಗೀ ಧರ್ಮಂ ನ ಸಂತ್ಯಜೇತ್"[೧೮೫] (ಜ್ಞಾನಾಮೃತದಿಂದ ತೃಪ್ತನಾದರೂ ಸಹ ಯೋಗಿಯು ಧರ್ಮವನ್ನು ಬಿಡಬಾರದು) ಎಂದು ಶ್ರೀ ರೇಣುಕಾಚಾರ್ಯರು ಅಪ್ಪಣೆ ಮಾಡಿದ್ದಾರೆ.

ಇಷ್ಟಲಿಂಗಪೂಜಾ ವಿಧಾನ

ಲಿಂಗಧಾರೀ ಸದಾ ಶುದ್ಧೋ ನಿಜಲಿಂಗಂ ಮನೋರಮಮ್।
ಅರ್ಚಯೇದ್ ಗಂಧಪುಷ್ಪಾದ್ಯೈಃ ಕರಪೀಠೇ ಸಮಾಹಿತಃ॥[೧೮೬]

"ಇಷ್ಟಲಿಂಗಧಾರಿಯು ಯಾವಾಗಲೂ ಪವಿತ್ರನಾಗಿರುತ್ತಾನೆ. ಆದುದರಿಂದ ಮನೋಹರವಾದ ತನ್ನ ಇಷ್ಟಲಿಂಗವನ್ನು ವಾಮಹಸ್ತ ಪೀಠದಲ್ಲಿಟ್ಟುಕೊಂಡು ಏಕಾಗ್ರ ಮನಸ್ಸಿನಿಂದ ಗಂಧ-ಪುಷ್ಪಾದಿ ಉಪಚಾರಗಳಿಂದ ಪೂಜಿಸಬೇಕು" ಎಂಬ ಆಚಾರ್ಯರ ಉಕ್ತಿಯಂತೆ ಸಮಸ್ತ ವೀರಶೈವರು ಈ ಇಷ್ಟಲಿಂಗವನ್ನು ಒಮ್ಮೆಯೂ ಬಾಹ್ಯಪೀಠದಲ್ಲಿ ಇಡದೆ, ತಮ್ಮ ವಾಮಹಸ್ತ ಪೀಠದಲ್ಲಿರಿಸಿ ಪೂಜಿಸಬೇಕು.[೧೮೭] ಏಕೆಂದರೆ ಅದೇ ಇಷ್ಟಲಿಂಗಪೂಜಾ ವಿಧಾನ. ವಾಮಹಸ್ತವು ಅಧಮವಾದುದರಿಂದ ಅದರಲ್ಲಿ ಇಷ್ಟಲಿಂಗವನ್ನಿಟ್ಟು ಪೂಜಿಸುವುದು ಸರಿಯಲ್ಲ ಎಂಬ ಜಿಜ್ಞಾಸುಗಳ ಆಕ್ಷೇಪಕ್ಕೆ ಶ್ರೀ ನಂದಿಕೇಶ್ವರ ಶಿವಾಚಾರ್ಯರು ಹೀಗೆ ಉತ್ತರಿಸಿದ್ದಾರೆ- "ಅಂಜಲಿನಾ ವಾ ಪಿಬೇದಖರ್ವೇಣ ಪಾತ್ರೇಣ" (ಬೊಗಸೆಯಿಂದ ಅಥವಾ ದೊಡ್ಡದಾದ ಪಾತ್ರೆಯಿಂದ (ನೀರನ್ನು) ಕುಡಿಯಬೇಕು) ಎಂಬ ಶ್ರುತಿವಾಕ್ಯದಂತೆ ನೀರು ಕುಡಿಯಲು ಬೊಗಸೆ ಮಾಡುವುದಕ್ಕೋಸ್ಕರ ವಾಮಹಸ್ತವು ಸಹಕರಿಸುವಂತೆ, ಇಲ್ಲಿಯೂ ಸಹ ವಾಮಹಸ್ತವನ್ನು ಉಪಯೋಗಿಸಿರುವ ವಿಧಾನದಿಂದ, ಸಮಸ್ತ ವೈದಿಕರಿಗೆ ಆವಶ್ಯಕವಾದ ಅಗ್ನಿಯ ಬಾಯಲ್ಲಿ ವಿನಿಯೋಗಿಸುವ "ಅಂಜಲೌ ಪೂರ್ಣಪಾತ್ರಮಾನಯತಿ" ಎಂಬ ಶ್ರುತಿವಾಕ್ಯದಂತೆ ಪೂರ್ಣಪಾತ್ರೆಗೆ ಆಧಾರವಾದ, ಬೊಗಸೆಯನ್ನು ಸೇರಿದ ವಾಮಹಸ್ತದ ಉಪಯೋಗವು ಅವಶ್ಯವಾಗಿ ಆಗಬೇಕೆಂಬ ಭಾವನೆಯಿಂದ-

ಉರಸಾ ಶಿರಸಾ ದೃಷ್ಟ್ಯಾ ಮನಸಾ ವಚಸಾ ತಥಾ।
ಪದ್ಭ್ಯಾಂ ಕರಾಭ್ಯಾಂ ಕರ್ಣಾಭ್ಯಾಂ ಪ್ರಣಾಮೋಽಷ್ಟಾಂಗ ಉಚ್ಯತೇ॥

"ಹೊಟ್ಟೆ, ಶಿರಸ್ಸು, ನೇತ್ರಗಳು, ಮನಸ್ಸು, ಮಾತು, ಪಾದಗಳು, ಕೈಗಳು ಮತ್ತು ಕಿವಿಗಳಿಂದ ಮಾಡುವ ಪ್ರಣಾಮವು ಅಷ್ಟಾಂಗಪ್ರಣಾಮ ಎಂದು ಕರೆಯಲ್ಪಟ್ಟಿದೆ" ಎಂಬ ಬೋಧಾಯನರ ಉಕ್ತಿಯಂತೆ ರುದ್ರನ್ಯಾಸದಲ್ಲಿ ಎರಡೂ ಕೈಗಳು ಪರಶಿವನನ್ನು ನಮಸ್ಕಾರ ಮಾಡಲು ಯೋಗ್ಯತೆಯುಳ್ಳವು ಎಂಬುದನ್ನು ತೋರಿಸಲು ಪೀಠವನ್ನು

---

[೧೮೫] ಸಿ.ಶಿ, ೧೬.೬೫

[೧೮೬] ಸಿ.ಶಿ, ೬.೫೩

[೧೮೭] ಬಾಹ್ಯಪೀಠಾರ್ಚನಾದೇತತ್ ಕರಪೀಠಾರ್ಚನಂ ವರಮ್।
ಸರ್ವೇಷಾಂ ವೀರಶೈವಾನಾಂ ಮುಮುಕ್ಷೂಣಾಂ ನಿರಂತರಮ್॥ -ಸಿ.ಶಿ, ೬.೫೪

ಪೂಜಿಸುವವರೂ ಸಹ ಎರಡೂ ಕೈಗಳಿಂದ ಪುಷ್ಪಾಂಜಲಿಯನ್ನು ಅರ್ಪಿಸಿ ಶಿವಪೂಜೆ ಮಾಡುವ ಸಂದರ್ಭದಲ್ಲಿ (ಎರಡೂ ಕೈಗಳ ಉಪಯೋಗವು) ದೋಷವಾಗುವುದಿಲ್ಲ.[೧೮೮] ಇನ್ನೂ ಮುಂತಾದ ಉತ್ತಮವಾದ ಪ್ರಮಾಣಗಳಿಂದ ಪೂರ್ವಪಕ್ಷದವರ ಆಕ್ಷೇಪವನ್ನು ನಿರಾಕರಿಸುತ್ತ, ವಾಮಹಸ್ತದಲ್ಲಿ ಇಷ್ಟಲಿಂಗವನ್ನಿಟ್ಟು ಪೂಜಿಸುವ ಶಾಸ್ತ್ರೀಯ ವಿಧಾನವನ್ನು ಸಾಧಿಸಲಾಗಿದೆ. ಆದುದರಿಂದ ವಾಮಹಸ್ತಪೀಠಾರ್ಚನೆಯು ಎಂದಿಗೂ ದೋಷವಲ್ಲ.

ಪೂಜಾದೌ ತು ಶಿವಂ ಧ್ಯಾತ್ವಾ ಜಪ್ತ್ವಾ ಪಂಚಾಕ್ಷರಂ ಮನುಮ್।
ತತಃ ಸಂಪೂಜಯೇದ್ ದೇವಂ ವೀರಶೈವಕ್ರಮೋ ಭವೇತ್॥[೧೮೯]

"ಶಿವಪೂಜೆಯ ಆರಂಭದಲ್ಲಿ ಶಿವನನ್ನು ಧ್ಯಾನಿಸಿ, ಪಂಚಾಕ್ಷರ ಮಂತ್ರವನ್ನು ಜಪಿಸಿದ ನಂತರ ಶಿವನನ್ನು ಪೂಜಿಸುವುದು ವೀರಶೈವರ ಪೂಜಾಕ್ರಮ" ಎಂಬ ಸೂಕ್ಷ್ಮಾಗಮದ ಆದೇಶಾನುಸಾರ ಸಾಧಕನು ಸ್ನಾನಮಾಡಿ, ಶುಚಿಯಾದ ಆಸನದಲ್ಲಿ ಕುಳಿತು ನಿರ್ಮಲವಾದ ಮನಸ್ಸಿನಿಂದ ಶಿವನನ್ನು ಧ್ಯಾನಿಸಿ, ಶಿವವಾಚಕವಾದ ಪಂಚಾಕ್ಷರ ಮಂತ್ರವನ್ನು ತನ್ನ ಸಂಕಲ್ಪದಂತೆ ಜಪಿಸಿದ ನಂತರ ಇಷ್ಟಲಿಂಗವನ್ನು ವಾಮಹಸ್ತ ಪೀಠದಲ್ಲಿರಿಸಿ ಶ್ರೀ ರುದ್ರಾಧ್ಯಾಯ ಮುಂತಾದ ವೈದಿಕಮಂತ್ರಗಳಿಂದ ಅಭಿಷೇಕಮಾಡಿ ತಮಗೆ ಇಷ್ಟವಾದ (ಗಂಧ-ಪುಷ್ಪಾದಿ) ಉಪಚಾರಗಳಿಂದ ಪೂಜಿಸಬೇಕು.

ಸೂಕ್ಷ್ಮಾಗಮದಲ್ಲಿ ಷಟ್‌ಸ್ಥಲಾತ್ಮಕವಾದ ಲಿಂಗಪೂಜಾ ವಿಧಾನವು ವರ್ಣಿತವಾಗಿದೆ. ಅದು ಹೇಗೆಂದರೆ- ಸಾಧಕನು ಯಾವಾಗ ಭದ್ರಾಸನದಲ್ಲಿ ಕುಳಿತು ವಿಭೂತಿ-ರುದ್ರಾಕ್ಷ ಮೊದಲಾದವುಗಳಿಂದ ತನ್ನ ಶರೀರವನ್ನು ಅಲಂಕಾರ ಮಾಡಿಕೊಳ್ಳುತ್ತಾನೆಯೋ ಆಗ ಅವನು ಭಕ್ತ, ಪಂಚಾಕ್ಷರಮಂತ್ರ ಜಪಮಾಡುವಾಗ ಮಾಹೇಶ್ವರ, ಇಷ್ಟಲಿಂಗವನ್ನು ವಾಮಹಸ್ತಪೀಠದಲ್ಲಿ ಕಣ್ಣೆದುರಿಗೆ ಹನ್ನೆರಡು ಅಂಗುಲ ದೂರದಲ್ಲಿಟ್ಟು ಪ್ರೀತಿಯಿಂದ ನೋಡುವಾಗ ಪ್ರಸಾದಿ, (ಗಂಧ-ಪುಷ್ಪಾದಿ) ಉಪಚಾರಗಳಿಂದ ಆ ಇಷ್ಟಲಿಂಗವನ್ನು ಪೂಜಿಸುವಾಗ ಪ್ರಾಣಲಿಂಗಿ, ತಾನು ಮಾಡಿದ ಪೂಜೆಯನ್ನು ಶಿವಾರ್ಪಿತವನ್ನಾಗಿ ಮಾಡಿ ಆನಂದದಿಂದ ಯಾವಾಗ ಇರುತ್ತಾನೆಯೋ ಆಗ ಶರಣ ಮತ್ತು ಇಷ್ಟಲಿಂಗಕ್ಕೆ ನೈವೇದ್ಯ ಮಾಡಿದ ಪ್ರಸಾದವನ್ನು ಸ್ವೀಕರಿಸಿ ತೃಪ್ತನಾದಾಗ ಐಕ್ಯ ಎಂದು ಕರೆಯಲ್ಪಡುತ್ತಾನೆ.[೧೯೦]

---

[೧೮೮] ಲಿಂಗಧಾರಣಚಂದ್ರಿಕಾ, ಪು. ೬೦-೬೧

[೧೮೯] ಸೂ.ಆ, ಕ್ರಿ.ಪಾ, ೬.೩೬

[೧೯೦] ಇದಮತ್ರ ರಹಸ್ಯಂ ವೈ ಶ್ರೂಯತಾಂ ಷಟ್‌ಸ್ಥಲಾತ್ಮಕಮ್।
ಭಕ್ತಸ್ಥಲೇ ಸಮಾಸೀನೋ ಭೂತಿರುದ್ರಾಕ್ಷಸಂಯುತಃ॥
ಷಡಕ್ಷರಜಪಂ ಕೃತ್ವಾ ತತೋ ಮಾಹೇಶ್ವರಸ್ಥಲೇ।
ಹಸ್ತೇ ಕೃತ್ವಾ ಲಿಂಗಮೂರ್ತಿಂ ಪ್ರಸಾದಿಸ್ಥಲಮಾಶ್ರಿತಃ॥
ಲಿಂಗಂ ಚ ಭಕ್ತ್ಯಾ ಸಂಪೂಜ್ಯ ಪ್ರಾಣಲಿಂಗಿಸ್ಥಲೇ ತತಃ।
ಕೃತ್ವಾ ಶಿವಾರ್ಪಣಂ ದೇವಿ ಸಾನಂದಂ ಶರಣಸ್ಥಲೇ॥

ಈ ಬಗೆಯಲ್ಲಿ ಷಟ್‌ಸ್ಥಲಾತ್ಮಕವಾಗಿ ಇಷ್ಟಲಿಂಗ ಪೂಜೆಯನ್ನು ಯಥಾಶಕ್ತಿ ಪ್ರತಿದಿನ ಒಂದು ವೇಳೆ, ಎರಡು ವೇಳೆ ಅಥವಾ ಮೂರು ವೇಳೆ ಅವಶ್ಯವಾಗಿ ಮಾಡಬೇಕು. ಸಾಧಕನು ಸಮರ್ಥನಾದರೆ ಪ್ರತಿದಿನ ಬೆಳಿಗ್ಗೆ ಆರು ಘಂಟೆಗೆ, ಒಂಬತ್ತು ಘಂಟೆಗೆ, ಮಧ್ಯಾಹ್ನ ಹನ್ನೆರಡು ಘಂಟೆಗೆ, ಅಪರಾಹ್ನ ಮೂರು ಘಂಟೆಗೆ, ಸಾಯಂಕಾಲ ಆರು ಘಂಟೆಗೆ ಮತ್ತು ರಾತ್ರಿ ಹನ್ನೆರಡು ಘಂಟೆಗೆ ಇಷ್ಟಲಿಂಗಪೂಜೆಯನ್ನು ಮಾಡಬೇಕೆಂದು ಸಂತ ಶಿರೋಮಣಿ ಮನ್ಮಥಸ್ವಾಮಿಯು ಪ್ರತಿಪಾದಿಸಿದ್ದಾರೆ. ಆರು ಬಾರಿ ಪೂಜೆ ಮಾಡಲು ಸಾಧ್ಯವಾಗದಿದ್ದರೆ ಮೂರು ಬಾರಿ ಅವಶ್ಯವಾಗಿ ಮಾಡತಕ್ಕದ್ದು. ಹಾಗೆ ಮಾಡದಿದ್ದಲ್ಲಿ ಸಾಧಕನು ಪಶುವಿಗೆ ಸಮಾನವೆಂದು ಕೊನೆಯಲ್ಲಿ ಅವರೇ ಹೇಳುತ್ತಾರೆ.[೧೯೧]

ಪರಶಿವನ ಕೈಕಾಲು ಮೊದಲಾದ ಆಕಾರವುಳ್ಳ ಮೂರ್ತಿಪೂಜೆಗಿಂತಲೂ ನಿರಾಕಾರ ಪ್ರತೀಕ ರೂಪದ ಶಿವಲಿಂಗದ ಪೂಜೆಯು ಪ್ರಶಸ್ತವಾದುದು.[೧೯೨] ಅದರಲ್ಲಿಯೂ ಸಹ ಇಷ್ಟಲಿಂಗರೂಪದಿಂದ ಶಿವನನ್ನು ಪೂಜಿಸುವುದು ವಿಶೇಷಾನುಗ್ರಹಕಾರಕ ಮತ್ತು ಮಾನಸಿಕ ಸ್ವಾಸ್ಥ್ಯಪ್ರದಾಯಕವಾಗುತ್ತದೆ. ಆದುದರಿಂದ ಶಿವದೀಕ್ಷೆಯನ್ನು ಪಡೆದ ಸ್ತ್ರೀ- ಪುರುಷರೆಲ್ಲರೂ ಯಥಾಶಕ್ತಿ ಹೆಚ್ಚು ಹೊತ್ತು ಇಷ್ಟಲಿಂಗವನ್ನು ಪೂಜಿಸಬೇಕು.

ಇಷ್ಟಲಿಂಗಪೂಜೆಯಲ್ಲಿ ಸೂತಕನಿಷೇಧ

ವೀರಶೈವರ ದೀಕ್ಷೆ ಮತ್ತು ದೀಕ್ಷೆಯಲ್ಲಿ ವಿಹಿತವಾದ ಇಷ್ಟಲಿಂಗಪೂಜೆಗೆ ಹೆಂಗಸರೂ ಸಹ ಅಧಿಕಾರಿಗಳಾಗುತ್ತಾರೆಂದು ಹಿಂದೆ ಪ್ರತಿಪಾದಿಸಲ್ಪಟ್ಟಿತು. ಇಷ್ಟಲಿಂಗ ಪೂಜೆಯನ್ನು ನಿತ್ಯಕರ್ಮವನ್ನಾಗಿ ಆಕೆಯು ಆಜೀವ ಪರ್ಯಂತ ಆಚರಿಸಬೇಕು. ಧರ್ಮಶಾಸ್ತ್ರಗಳಲ್ಲಿ ಪ್ರಸೂತಿಯೇ ಮೊದಲಾದ ಸೂತಕಗಳುಂಟಾದಾಗ ಅಶೌಚವು ವಿಹಿತವಾಗಿದೆ. ಅಶೌಚವು ಮುಗಿಯುವವರೆಗೆ ಆ ಮನೆಯಲ್ಲಿ ವೈದಿಕ ಪೂಜಾದಿಗಳು ನಿಷೇಧಿಸಲ್ಪಟ್ಟಿವೆ. ಹಾಗಿರಲು ಸೂತಕದ ವೇಳೆಯಲ್ಲಿ ವೀರಶೈವ ಸ್ತ್ರೀಯರಿಂದ ಇಷ್ಟಲಿಂಗಪೂಜಾ ರೂಪ ನಿತ್ಯಕರ್ಮವು ಹೇಗೆ ಮಾಡಲ್ಪಡುತ್ತದೆ ಎಂದು ಜಿಜ್ಞಾಸುಗಳು ಆಕ್ಷೇಪಿಸಿದರೆ, ಈ ಆಕ್ಷೇಪ ಸಾಧುವಲ್ಲ. ಏಕೆಂದರೆ ಇಷ್ಟಲಿಂಗ ಪೂಜೆಗೆ ಸೂತಕಾದಿಗಳು

ಐಕ್ಯಸ್ಥಲೇ ಪ್ರಸಾದೋಪಭೋಗತೃಪ್ತಿಮವಾಪ್ನುಯಾತ್।
ಏವಂ ಸಮರಸಾದ್ ಭಾವಾದಂಗಷಟ್‌ಸ್ಥಲಯೋಗತಃ॥
ಯಃ ಪೂಜಯತಿ ಮಾಂ ದೇವಿ ವೀರಶೈವೈಃ ಸ ಉಚ್ಯತೇ।
-ಸೂ.ಆ, ಕ್ರಿ.ಪಾ, ೬.೫೪-೫೭

[೧೯೧] ಪರಮರಹಸ್ಯ, ೩.೩೪-೩೫

[೧೯೨] ಲಿಂಗೇ ಸಂಪೂಜನಾದ್ಧ್ಯಾನಾಚ್ಛಂಭುಃ ಸಮ್ಯಕ್ ಪ್ರಸೀದತಿ।
ಧ್ಯಾಯತೇ ಪೂಜ್ಯತೇ ಚೈವ ಲಿಂಗೇ ಸನ್ನಿಹಿತಃ ಶಿವಃ॥
ಇಷ್ಟಲಿಂಗೇ ತತೋ ನಿತ್ಯಂ ಪೂಜನೀಯಃ ಪರಃ ಶಿವಃ।
-ಚಂ.ಜ್ಞಾ, ಕ್ರಿ.ಪಾ, ೩.೩೧-೩೨

ಬಾಧೆಯನ್ನುಂಟು ಮಾಡುವುದಿಲ್ಲ. ಅದನ್ನು ಶ್ರೀಕರಭಾಷ್ಯದಲ್ಲಿ ಹೀಗೆ ಪ್ರತಿಪಾದಿಸಲಾಗಿದೆ:

> ಸ್ವೇಷ್ಟಲಿಂಗೈಕಪೂಜಾಯಾಂ ನೈವಾಶೌಚಂ ವಿಧೀಯತೇ।
> ಪೌಂಡರೀಕೇ ರಜಃ ಸ್ತ್ರೀಣಾಂ ಸ್ವಾಗ್ನಿಹೋತ್ರೇ ಯಥಾ ತಥಾ॥
> ಆಕರಸ್ಪರ್ಶಯೋಗ್ಯಾಽಪಿ ಯಥಾ ಜಿಹ್ವಾ ಮಹೇಶ್ವರಿ।
> ಮಂತ್ರೋಚ್ಚಾರಣಮಾತ್ರಸ್ಯ ಪೂತಾ ಭವತಿ ಭೂತಲೇ॥
> ತಥಾ ಸೂತಕಿನಃ ಶೈವಾಃ ಪೂಜಾಮಾತ್ರಸುನಿರ್ಮಲಾಃ।
> ನಾನ್ಯಸ್ಪರ್ಶಾನುಕೂಲಾಃ ಸ್ಯುರಿತಿ ವೇದಾನುಶಾಸನಮ್॥[೧೯೩]

"ಇಷ್ಟಲಿಂಗಪೂಜೆಗೆ ಸೂತಕವನ್ನು ಎಂದಿಗೂ ವಿಧಿಸಬಾರದು. ಪೌಂಡರೀಕಯಾಗ ಮಾಡುವಾಗ ಮತ್ತು ಅಗ್ನಿಹೋತ್ರಾದಿಗಳನ್ನು ಆಚರಿಸುವಾಗ ಸ್ತ್ರೀಯು ರಜಸ್ವಲೆಯಾದರೂ, (ಸ್ನಾನಾದಿಗಳ ನಂತರ) ಹೇಗೆ ಶುಚಿರ್ಭೂತಳಾಗುತ್ತಾಳೆಯೋ ಹಾಗೆಯೇ ಮತ್ತು ನಾಲಿಗೆಯನ್ನು ಕೈಯಿಂದ ಮುಟ್ಟಲು ಅಯೋಗ್ಯವಾದರೂ ಮಂತ್ರೋಚ್ಚಾರಣೆಗೆ ಪವಿತ್ರವಾಗುವಂತೆ ಸೂತಕಿಗಳಾದ ವೀರಶೈವರು ಇಷ್ಟಲಿಂಗಪೂಜೆಯೊಂದ ರಿಂದಲೇ ಶುದ್ಧರಾಗುತ್ತಾರೆ. ಆದರೆ ಅವರನ್ನು ಇತರರು ಸ್ಪರ್ಶಿಸಬಾರದು ಎಂದು ವೇದಶಾಸನವಿದೆ."

ಈ ಶ್ಲೋಕಗಳ ಭಾವವಿಷ್ಟು- ಪ್ರತಿದಿನವೂ ಆಚರಿಸುವ ಅಗ್ನಿಹೋತ್ರ ಕರ್ಮದಲ್ಲಿ ಮತ್ತು ದೀರ್ಘಕಾಲ ಆಚರಿಸುವ ಪೌಂಡರೀಕ ಮೊದಲಾದ ಯಾಗಗಳಲ್ಲಿ ನಿರತನಾಗಿರುವ ಯಜಮಾನನ ಪತ್ನಿಯು ಯಾಗ ಮಾಡುವಾಗಲೇ ರಜಸ್ವಲೆಯಾದರೂ ಸಹ ಸ್ನಾನಾದಿಗಳನ್ನು ಮಾಡಿ ಒದ್ದೆಯಾದ ವಸ್ತ್ರವನ್ನು ಧರಿಸಿ ಹೇಗೆ ಪುನಃ ಯಾಗದಲ್ಲಿ ಭಾಗಿಯಾಗುತ್ತಾಳೋ, ಹಾಗೆಯೇ ಪ್ರತಿನಿತ್ಯ ಯಾಗಾನುಷ್ಠಾನ ಮಾಡುವುದರಿಂದ ದೋಷವುಂಟಾಗುವುದಿಲ್ಲವೋ ಹಾಗೆಯೇ ಇಷ್ಟಲಿಂಗಪೂಜೆಯು ನಿತ್ಯಕರ್ಮವಾದುದರಿಂದ ಇಲ್ಲಿಯೂ ಸಹ ಸೂತಕವಾಗುವುದಿಲ್ಲವೆಂದು ತಿಳಿಯಬೇಕು.

ಲಿಂಗಧಾರಣೆಯಾಗದಿದ್ದಲ್ಲಿ ಪಾಪ ಬರದಿರುವುದರಿಂದ ಅದು ನಿತ್ಯಕರ್ಮವಲ್ಲ. ಆದುದರಿಂದ ಅಶೌಚ ಕಾಲದಲ್ಲಿ ಏಕೆ ಇಷ್ಟಲಿಂಗಪೂಜೆಯನ್ನು ಬಿಡಬಾರದು ? ಎಂದು ಆಕ್ಷೇಪಿಸಿದರೆ ಪಾಪಬೋಧಕ ಉಕ್ತಿಗಳು ಅನೇಕವಿರುವುದರಿಂದ ಆ ಆಕ್ಷೇಪ ಸಾಧುವಲ್ಲ. ಹೇಗೆಂದರೆ-

> ಭಕ್ತಸ್ಯಾಬಿಭ್ರತೋ ಲಿಂಗಂ ಯಾವತ್ಪ್ರಾಣವಿಧಾರಣಮ್।
> ಶ್ವಮಾಂಸಭಕ್ಷಣಂ ತಾವದನ್ನೇನ ರಚಿತಂ ಭವೇತ್॥
> ಲಿಂಗಸ್ಯ ಧಾರಣಂ ಯಸ್ಯ ಸ್ಥೂಲದೇಹೇ ನ ವಿದ್ಯತೇ।
> ತದ್ದೇಹಂ ನಿಷ್ಫಲಂ ಜ್ಞೇಯಂ ಜೀವತ್ಯಕ್ತಶರೀರವತ್॥
> ತಸ್ಮಾತ್ತದ್ಧಾರಣಂ ಪ್ರೋಕ್ತಂ ಯಾವಜ್ಜೀವಾಗ್ನಿಹೋತ್ರವತ್।
> ಯಥಾ ಶ್ಮಶಾನಗಂ ಕಾಷ್ಠಮನರ್ಹಂ ಸರ್ವಕರ್ಮಸು।
> ತಥಾ ಲಿಂಗವಿಹೀನಸ್ತು ಸರ್ವಕರ್ಮಬಹಿಷ್ಕೃತಃ॥[೧೯೪]

---

೧೯೩. ಬ್ರಹ್ಮಸೂತ್ರ ಶ್ರೀಕರಭಾಷ್ಯ, ೧-೧-೧, ಪು.೨೩

೧೯೪. ಸಿ.ಶಿಖೋ, ವೀ.ಭಾ, ಪು. ೨೯

“ಪ್ರಾಣವಿರುವವರೆಗೆ ಇಷ್ಟಲಿಂಗವನ್ನು ಧರಿಸದ ಭಕ್ತನು ಭುಂಜಿಸಿದ ಅನ್ನವು ನಾಯಿಯ ಮಾಂಸವಿದ್ದಂತೆ. ಸ್ಥೂಲಶರೀರದ ಮೇಲೆ ಇಷ್ಟಲಿಂಗವನ್ನು ಧರಿಸದ ಭಕ್ತನ ಶರೀರವು ಪ್ರಾಣವನ್ನು ಬಿಟ್ಟ ಶರೀರದಂತೆ ನಿಷ್ಫಲವೆಂದು ತಿಳಿಯಬೇಕು. ಆದುದರಿಂದ ಅಗ್ನಿಹೋತ್ರ ಕರ್ಮದಂತೆ ಆಜೀವಪರ್ಯಂತ ಇಷ್ಟಲಿಂಗವನ್ನು ದೇಹದ ಮೇಲೆ ಧರಿಸಬೇಕು. ಸ್ಮಶಾನದ ಕಟ್ಟಿಗೆಯು ಎಲ್ಲ ಶುಭಕರ್ಮಗಳಿಗೆ ಅನರ್ಹವಾಗಿರುವಂತೆ ಲಿಂಗ ಧರಿಸದ ವ್ಯಕ್ತಿಯು ಸರ್ವಕರ್ಮಗಳಿಂದಲೂ ಬಹಿಷ್ಕೃತನು” -ಎಂದು ವಾತುಲಾಗಮ, ಸ್ಕಂದಪುರಾಣ, ಲಿಂಗಪುರಾಣ ಮೊದಲಾದವುಗಳಲ್ಲಿ ಇಷ್ಟಲಿಂಗದ ಪೂಜೆಯನ್ನು ಪ್ರತಿನಿತ್ಯವೂ ಮಾಡದಿದ್ದರೆ ಪಾಪವುಂಟಾಗುತ್ತದೆ ಎಂದು ಪ್ರತಿಪಾದಿಸಿರುವುದರಿಂದ ಇಷ್ಟಲಿಂಗ ಪೂಜೆಯು ನಿತ್ಯಕರ್ಮವೆಂದು ನಿಶ್ಚಿತವಾಗಿದೆ. “ನಿತ್ಯಂ ಸ್ವವಾಮಹಸ್ತಾಗ್ರೇ ಸಾವಧಾನೇನ ಪೂಜಯೇತ್” (ಪ್ರತಿದಿನವೂ ತನ್ನ ವಾಮಹಸ್ತದ ಅಗ್ರಭಾಗದಲ್ಲಿ ಇಷ್ಟಲಿಂಗವನ್ನು ಸ್ಥಾಪಿಸಿ ಸಾವಧಾನದಿಂದ ಪೂಜಿಸತಕ್ಕದ್ದು) ಎಂಬ ಉಕ್ತಿಯಂತೆ ಲಿಂಗಪೂಜಾ-ಲಿಂಗಧಾರಣಾದಿಗಳಲ್ಲಿ ಸೂತಕದ ಪ್ರಸಕ್ತಿಯಿದ್ದರೂ ಸಹ ಯಾವಜ್ಜೀವಾನುಷ್ಠೇಯವಾದ ಶಿವಪೂಜೆಯನ್ನು ಮಾಡಲೇಬೇಕಾಗಿರುವುದರಿಂದ, ಆ ಸಂದರ್ಭದಲ್ಲಿ ಮಾತ್ರ ಸೂತಕವಿರುವುದಿಲ್ಲ. ಅದನ್ನು ಶ್ರೀ ರೇಣುಕಾಚಾರ್ಯರು ಹೀಗೆ ನಿರೂಪಿಸಿದ್ದಾರೆ-

> ಲಿಂಗಾರ್ಚನರತಾಯಾಶ್ಚ ಋತೌ ನಾರ್ಯಾ ನ ಸೂತಕಮ್।
> ತಥಾ ಪ್ರಸೂತಿಕಾಯಾಶ್ಚ ಸೂತಕಂ ನೈವ ವಿದ್ಯತೇ॥[೧೯೫]

“ಲಿಂಗಾರ್ಚನೆಯಲ್ಲಿ ನಿರತಳಾದ ಸ್ತ್ರೀಗೆ ಋತುಕಾಲದಲ್ಲಿ ಮತ್ತು ಪ್ರಸೂತಿ ಕಾಲದಲ್ಲಿ ಸೂತಕವಿರುವುದಿಲ್ಲ.”

ಈ ರೀತಿಯಾಗಿ ಸೂತಕಿಗಳಾದ ಸ್ತ್ರೀಯರು ಇಷ್ಟಲಿಂಗಪೂಜಾ ಸಮಯದಲ್ಲಿ ಸೂತಕವಿಲ್ಲದಿದ್ದರೂ ಸಹ (ಏಕೆಂದರೆ ಶಿವಪಾದೋದಕ ಸ್ಪರ್ಶದಿಂದ ಸರ್ವಪಾಪಗಳೂ ನಷ್ಟವಾಗುವವು) ಇತರರನ್ನು ಸ್ಪರ್ಶಿಸಿದಾಗ ಅಥವಾ ಪಾಕಾದಿ ಕ್ರಿಯೆಗಳ ಸಂದರ್ಭಗಳಲ್ಲಿ ಸೂತಕ ಇದ್ದೇ ಇರುತ್ತದೆ. ನಾಲಿಗೆಯು ಕೈಯಿಂದ ಮುಟ್ಟಲು ಅಯೋಗ್ಯವಾಗಿದ್ದರೂ, ಮಂತ್ರೋಚ್ಚಾರಣಕ್ಕೆ ಮಾತ್ರ ಹೇಗೆ ಪರಿಶುದ್ಧವಾಗಿರುವುದೋ, ಹಾಗೆಯೇ ಸೂತಕವುಳ್ಳ ವೀರಶೈವರು ಶಿವಪೂಜಾದಿಗಳಲ್ಲಿ ಮಾತ್ರ ಪರಿಶುದ್ಧರೆಂದು ತಿಳಿಯಬೇಕು. ಆದುದರಿಂದಲೇ “ಪೂಜಾಮಾತ್ರಸುನಿರ್ಮಲಾಃ” (ಕೇವಲ ಪೂಜೆ ಮಾಡುವುದರಿಂದ ಪರಿಶುದ್ಧರು) ಎಂದು ಆಗಮೋಕ್ತಿಯು ಸಾರುತ್ತದೆ. ಲಿಂಗಧಾರಣಚಂದ್ರಿಕೆಯ ಕರ್ತೃವಾದ ಶ್ರೀ ನಂದಿಕೇಶ್ವರ ಶಿವಾಚಾರ್ಯರು- “ಶಿವಪೂಜೆಯ ಕಾಲದಲ್ಲಿ ಸ್ತ್ರೀಯರು ರಜಸ್ವಲೆಯರಾದಾಗ ಸೂತಕವಿರುವುದಿಲ್ಲವೆಂದಾದರೆ, ಇತರ ಕೆಲಸಗಳಲ್ಲಿ ನಿರತರಾಗಿದ್ದರೂ ಸಹ ಅವರು ಪರಿಶುದ್ಧರೇ ಆಗಿರುತ್ತಾರೆ. ಕೆಲವರು ಹಲ್ಲುಜ್ಜುವಾಗ ಮತ್ತು ಬಾಯಿ ಮುಕ್ಕಳಿಸುವಾಗ ನೀರಿನಿಂದ ಶುದ್ಧಿಯಾದ ಬಾಯಿಯು ಮಂತ್ರೋಚ್ಚಾರಣೆ ಮೊದಲಾದ ಕರ್ಮಗಳ ಕಾಲದಲ್ಲಿ ಶುದ್ಧವಾಗಿದ್ದರೂ ಸಹ

---

[೧೯೫] ಸಿ.ಶಿ, ೯.೪೪

ಬೇರೆಯವರು ಉಗುಳುವಿಕೆ ಮೊದಲಾದ ಸಂದರ್ಭದಲ್ಲಿ ಅಪರಿಶುದ್ಧರಾಗಿರುವಂತೆ, ಲಿಂಗಪೂಜಾ - ಲಿಂಗಧಾರಣಾದಿಗಳಲ್ಲಿ ಸೂತಕ ದೋಷವಿಲ್ಲದೆ ಪರಿಶುದ್ಧರಾಗಿದ್ದರೂ ಸಹ ಇತರ ಕಾರ್ಯಗಳ ಅನುಷ್ಠಾನದ ಸಂದರ್ಭದಲ್ಲಿ ಸೂತಕದ ದೋಷವಿದ್ದು ಅಶುದ್ಧರಾಗಿರುತ್ತಾರೆಂದು ಹೇಳುತ್ತಾರೆ"[೧೯೬] ಮುಂತಾಗಿ ಕೇವಲ ಪೂಜಾಕಾಲದಲ್ಲಿ ಮಾತ್ರ ಪರಿಶುದ್ಧರೆಂದು ಹೇಳುವವರ ಪಕ್ಷವನ್ನು 'ಕೇಚಿತ್ತು' (ಕೆಲವರು) ಎಂದು ಉಲ್ಲೇಖಿಸುವುದರ ಮೂಲಕ ತಮ್ಮ ಅಸಮಾಧಾನವನ್ನು ಸೂಚಿಸಿ, ಶಿವದೀಕ್ಷಾ ಸಂಸ್ಕಾರ ಹೊಂದಿದ ಸ್ತ್ರೀಯರು ಯಾವಾಗಲೂ ಪರಿಶುದ್ಧರೆಂದು ತಿಳಿಯತಕ್ಕದ್ದೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅವರ ಅಭಿಪ್ರಾಯವಿದು:

ಪ್ರಾರಂಭೋ ವರಣಂ ಯಜ್ಞೇ ಸಂಕಲ್ಪೋ ವೃತಸತ್ರಯೋಃ।
ನಾಂದೀಮುಖಂ ವಿವಾಹಾದೌ ಶ್ರಾದ್ಧೇ ಪಾಕಪರಿಗ್ರಹಃ॥[೧೯೭]

"ಯಜ್ಞ ಕಾರ್ಯವನ್ನು ಪ್ರಾರ್ಥನೆಯಿಂದ ಆರಂಭಿಸುವುದು, ವ್ರತ-ಸತ್ರಗಳಲ್ಲಿ ಸಂಕಲ್ಪ ಮಾಡುವಿಕೆ, ವಿವಾಹಾದಿ ಕರ್ಮಗಳಲ್ಲಿ ನಾಂದೀಮುಖವೆಂಬ ಕ್ರಿಯೆ ಮತ್ತು ಶ್ರಾದ್ಧ ಕರ್ಮದಲ್ಲಿ ಭೋಜನ ಮಾಡುವುದು (ಶ್ರೇಷ್ಠ)" ಎಂಬ ಷಡಶೀತಿ (ಎಂಬತ್ತಾರು) ಸ್ಮೃತಿವಾಕ್ಯದಂತೆ ಗೃಹಯಜ್ಞಾದಿಗಳಲ್ಲಿ ಋತ್ವಿಜನು ಪ್ರಾರ್ಥನೆಮಾಡುವುದು, ಚಾಂದ್ರಾಯಣ-ತೀರ್ಥಯಾತ್ರೆ-ಲಿಂಗಧಾರಣೆ ಮೊದಲಾದ ಪೂಜೆ ಹಾಗೂ ವ್ರತಗಳಲ್ಲಿ ಮತ್ತು ಪೌಂಡರೀಕಾದಿ ದೀರ್ಘವಾದ ಯಾಗಗಳ ಕಾಲದಲ್ಲಿ ಸಂಕಲ್ಪ ಮಾಡುವುದು, ವಿವಾಹ ಕರ್ಮದಲ್ಲಿ ನಾಂದೀಮುಖ ಮೊದಲಾದ ಕ್ರಿಯೆಗಳನ್ನು ಮತ್ತು ಶ್ರಾದ್ಧಕರ್ಮದಲ್ಲಿ ಪಾಕಕ್ರಿಯೆಯಲ್ಲಿ ತೊಡಗಬೇಕೆಂದು ತಿಳಿದುಬರುತ್ತದೆ. ಹೀಗೆ ಆಯಾ ಕರ್ಮಗಳು ಆರಂಭವಾದ ನಂತರ ಮಧ್ಯದಲ್ಲಿ ರಜಸ್ವಲೆ ಮೊದಲಾದ ಸೂತಕಗಳು ಪ್ರಾಪ್ತವಾದರೂ ಸಹ ಧರ್ಮಶಾಸ್ತ್ರದಲ್ಲಿ ಹೇಳಲ್ಪಟ್ಟ ವಿಧಿಯಂತೆ ಸ್ನಾನಾದಿಗಳನ್ನು ಮಾಡಿ ಶುದ್ಧರಾಗಿ, ಹೊಸ ವಸ್ತ್ರವನ್ನು ಧರಿಸಿ ಪುನಃ ಆ ಕರ್ಮವನ್ನು ಮಾಡಬೇಕೇ ಹೊರತು, ಆ ಕರ್ಮವನ್ನು ಸೂತಕ ಪ್ರಾಪ್ತವಾದ ಕಾರಣದಿಂದ ತ್ಯಜಿಸಬಾರದು. ಇದೇ ರೀತಿಯಾಗಿ-

ಲಿಂಗಧಾರಣಕಂ ನಾಮ ವೃತಂ ಮಾಹೇಶ್ವರಾಭಿಧಮ್।
ಯಾಜ್ಜೀವಮಿದಂ ದತ್ತಮಿಷ್ಟಲಿಂಗಂ ಸಮರ್ಚಯೇತ್॥[೧೯೮]

"ಮಾಹೇಶ್ವರನೆಂಬ ಅಭಿಧಾನವುಳ್ಳ ಲಿಂಗಧಾರಿಯು ಗುರುವಿನಿಂದ ಪ್ರಾಪ್ತವಾಗಿರುವ ಇಷ್ಟಲಿಂಗವನ್ನು ಆಜೀವಪರ್ಯಂತ ವ್ರತದಂತೆ ಪೂಜಿಸತಕ್ಕದ್ದು" ಎಂಬ ಸ್ಕಂದಪುರಾಣೋಕ್ತಿಯಂತೆ ಲಿಂಗಧಾರಣೆ ಮತ್ತು ಅದರ ಪೂಜಾದಿಗಳ ಕಾಲದಲ್ಲಿ, ದೀಕ್ಷಾಕಾಲದಲ್ಲಿ ಸದ್ಗುರುವಿನ ಸಾನ್ನಿಧ್ಯದಲ್ಲಿ ಆಜೀವಪರ್ಯಂತ ಸಂಕಲ್ಪ ಮಾಡಿದ ನಂತರ ಮಧ್ಯದಲ್ಲಿ ಸೂತಕಗಳು ಪ್ರಾಪ್ತವಾದರೂ ಸಹ ಸ್ನಾನದಿಂದ ಶುದ್ಧರಾಗಿ ಶ್ರೀಗುರು- ಜಂಗಮರ ಪಾದೋದಕವನ್ನು ಪ್ರೋಕ್ಷಿಸಿಕೊಂಡು ಇಷ್ಟಲಿಂಗ ಪೂಜೆಯನ್ನು

---

೧೯೬. ಲಿ.ಚ, ಪು. ೧೯೮-೧೯೯

೧೯೭. ಲಿ.ಚ, ಪು. ೧೯೭

೧೯೮. ಲಿ.ಚ, ಪು. ೧೯೮

ಅವಶ್ಯವಾಗಿ ಮಾಡತಕ್ಕದ್ದು. ಆದುದರಿಂದಲೇ ಶ್ರೀ ರೇಣುಕಾಚಾರ್ಯರು ಹೀಗೆ ಅಪ್ಪಣೆ ಮಾಡಿರುತ್ತಾರೆ-

> ಗೃಹೇ ಯಸ್ಮಿನ್ ಪ್ರಸೂತಾ ಸ್ತ್ರೀ ಸೂತಕಂ ನಾತ್ರ ವಿದ್ಯತೇ।
> ಶಿವಪಾದಾಂಬುಸಂಸ್ಪರ್ಶಾತ್ ಸರ್ವಪಾಪಂ ಪ್ರಣಶ್ಯತಿ॥[೧೯೯]

"ಯಾವ ಮನೆಯಲ್ಲಿ ಹೆರಿಗೆಯಾದ ಸ್ತ್ರೀ ಇದ್ದರೆ ಅಲ್ಲಿ ಸೂತಕವಿರುವುದಿಲ್ಲ. ಶಿವಸ್ವರೂಪಿ ಗಳಾದ ಗುರು-ಜಂಗಮರ ಪಾದೋದಕ ಸ್ಪರ್ಶದಿಂದ ಎಲ್ಲ ಪಾಪಗಳು ನಾಶವಾಗುತ್ತವೆ."

ಇಷ್ಟಲ್ಲದೆ ಪೂಜಾದಿಗಳ ಕಾಲದಲ್ಲಿ ಶೌಚವೆಂತಲೂ (ಸೂತಕವಿಲ್ಲವೆಂತಲೂ), ಇತರ ಸಂದರ್ಭಗಳಲ್ಲಿ ಅಶೌಚ(ಸೂತಕ)ವೆಂತಲೂ ಹೇಳುವ ವಾದ-ಪ್ರತಿವಾದಕ್ಕೆ ಕೊನೆಯಿಲ್ಲದಿರುವುದರಿಂದ ಶಿವದೀಕ್ಷೆಯನ್ನು ಪಡೆದ ವೀರಶೈವ ಸ್ತ್ರೀಯರು ಎಲ್ಲ ಕಾಲದಲ್ಲಿಯೂ ಶುಚಿರ್ಭೂತರೆಂದು (ಸೂತಕಗಳಿಲ್ಲವೆಂದು) ತಿಳಿದುಬರುತ್ತದೆ. ಶಿವಪೂಜಾದಿಗಳ ಕಾಲದಲ್ಲಿ ಇತರರು ಸ್ಪರ್ಶಿಸಿದ ಅನ್ನಪಾನಾದಿಗಳು ಪ್ರತ್ಯಕ್ಷವಾಗಿ ಲೋಕದ ಆಚಾರಕ್ಕೆ ವಿರುದ್ಧವಾದವುಗಳು ಎನ್ನುವುದಾದರೆ ಶಿವಪೂಜಾದಿಗಳಲ್ಲಿಯೂ ಆ ವಿರೋಧವು ಸಂಭವಿಸುತ್ತದೆ. ಅದರಿಂದ ಲಿಂಗಧಾರಣೆ-ಲಿಂಗಪೂಜಾದಿಗಳನ್ನು ತ್ಯಜಿಸಬೇಕಾದ ಪ್ರಸಂಗ ಬರುತ್ತದೆ. ಆದುದರಿಂದ ಪೂಜಾದಿಗಳಲ್ಲಿ ಶೌಚ, ಬೇರೆ ಸಂದರ್ಭಗಳಲ್ಲಿ ಅಶೌಚ ಎಂಬುದು ಸರಿಯಲ್ಲ.

ಪ್ರಾಣಹಿಂಸೆ ಮಾಡಬಾರದು, ಮಾಂಸ ತಿನ್ನಬಾರದು, ಎಂಜಲನ್ನು ಯಾರಿಗೂ ಕೊಡಬಾರದು ಮುಂತಾದವುಗಳು ಶಾಸ್ತ್ರ ವಚನಾನುಸಾರವಾಗಿ ನಿಷಿದ್ಧವಾಗಿದ್ದರೂ ಸಹ, ಮತ್ತು ಪ್ರತ್ಯಕ್ಷವಾಗಿ ಜನರ ಆಚಾರಗಳಿಗೆ ವಿರುದ್ಧವಾಗಿದ್ದರೂ ಸಹ ಸೋಮಯಾಗದಲ್ಲಿ ಪಶುವನ್ನು ಕೊಲ್ಲಬೇಕು, ಸೋಮಯಾಗದಲ್ಲಿ ಮಾಂಸ ತಿನ್ನಬೇಕು, ಸೋಮಯಾಗ ದಲ್ಲಿ ಎಂಜಲನ್ನು ಇತರರಿಗೆ ಕೊಡಬೇಕು ಇತ್ಯಾದಿ ವಿಶೇಷ ಶಾಸ್ತ್ರ ವಾಕ್ಯಾನುಸಾರ ಪಶುಹಿಂಸೆ, ಮಾಂಸಭಕ್ಷಣ, ಸೋಮಪಾನಾದಿಗಳು ಪ್ರಾಕೃತ ಮನುಷ್ಯನ ಕರ್ತವ್ಯ ವಾಗಿರುವಂತೆ, ತತ್ರಾಜನ್ಮಾಂತದೀಕ್ಷಾ, (ಅವರಿಗೆ ಬದುಕಿರುವವರೆಗೆ ದೀಕ್ಷೆ), ಸರ್ವಲಿಂಗಂ ಸ್ಥಾಪಯತಿ[೨೦೦] (ಲಿಂಗವನ್ನು ತ್ರಿವಿಧ ಅಂಗಗಳಲ್ಲಿ ಸ್ಥಾಪಿಸಲಾಗಿದೆ), ನಿತ್ಯಂ ಸ್ವವಾಮಹಸ್ತಾಗ್ರೇ ಸಾವಧಾನೇನ ಪೂಜಯೇತ್[೨೦೧] (ನಿತ್ಯವೂ ತನ್ನ ವಾಮಹಸ್ತದ ತುದಿಯಲ್ಲಿ ಇಷ್ಟಲಿಂಗವನ್ನು ಸ್ಥಾಪಿಸಿ ಸಾವಧಾನದಿಂದ ಪೂಜಿಸಬೇಕು), ಇಷ್ಟಲಿಂಗವನ್ನು ತನ್ನ ಪ್ರಾಣದಂತೆ ದೇಹದ ಮೇಲೆ ಧರಿಸಿರುವವರಿಗೆ ಸೂತಕವಿಲ್ಲ[೨೦೨] ಇತ್ಯಾದಿ ವಿಶೇಷ ಶಾಸ್ತ್ರದ ಬಲದಿಂದ ರಜಸ್ವಲೆಯೇ ಮೊದಲಾದ ಅಶುಚಿಯ ಸಂದರ್ಭಗಳಲ್ಲಿ

---

[೧೯೯] ಸಿ.ಶಿ, ೯.೪೫

[೨೦೦] ತೈತ್ತಿರೀಯ ಆರಣ್ಯಕ, ೧೦-೧೬-೧

[೨೦೧] ಲಿ.ಚ, ಪು. ೧೫೭

[೨೦೨] ಸಿ.ಶಿ, ೯.೪೩

ಲಿಂಗಧಾರಣೆ-ಲಿಂಗಪೂಜಾದಿಗಳ ಕಾಲದಲ್ಲಿ ಸ್ತ್ರೀಯರು ಪರಿಶುದ್ಧರಾಗಿರುತ್ತಾರೆ ಎಂಬ ಜಿಜ್ಞಾಸುಗಳ ಆಕ್ಷೇಪಕ್ಕೆ ಹೀಗೆ ಉತ್ತರಿಸಲಾಗಿದೆ. ಹಾಗೆ ಹೇಳುವುದು ಸರಿಯಲ್ಲ. ಏಕೆಂದರೆ ಕ್ರಿಯಾದೀಕ್ಷಾಂತರ್ಗತ ಸ್ವಸ್ತಿಕಾರೋಹಣ ದೀಕ್ಷೆಯ ಕಾಲದಲ್ಲಿ ಶ್ರೀಗುರುವು ತಾಯಿಯ ಗರ್ಭದಲ್ಲಿನ ಮಾಂಸಪಿಂಡದ ನಿವೃತ್ತಿಗಾಗಿ ಆಪಾದಮಸ್ತಕ ಸಂಹಾರ ಕ್ರಮದಿಂದ ಆರು ಸ್ಥಾನಗಳಲ್ಲಿ ಷಡಧ್ವನ್ಯಾಸವನ್ನು, ಅನಂತರ ಸೃಷ್ಟಿಕ್ರಮದಿಂದ ಮಸ್ತಕದಿಂದ ಪಾದದವರೆಗೆ ಮಂತ್ರಪಿಂಡದ ಸೃಷ್ಟಿಗಾಗಿ ಷಡಧ್ವನ್ಯಾಸವನ್ನು ಮಾಡುತ್ತಾನೆ. ಈ ರೀತಿಯಾದ ವಿಶೇಷ ಸಂಸ್ಕಾರದಿಂದ ಮಾಂಸಪಿಂಡವು ನಷ್ಟವಾಗಿ ಮಂತ್ರಪಿಂಡವು ಉತ್ಪತ್ತಿಯಾಗಿ ಜೀವಭಾವದ ನಿವೃತ್ತಿಯುಳ್ಳ ವೀರಶೈವ ಸ್ತ್ರೀ-ಪುರುಷರೆಲ್ಲರೂ ಇಷ್ಟಲಿಂಗ ಪೂಜೆ ಮತ್ತು ಇತರ ವೇಳೆಯಲ್ಲಿ ಇತರರು ಸ್ಪರ್ಶಿಸಿದ್ದರೂ ಸಹ ಶುಚಿರ್ಭೂತರೆಂದು ತಿಳಿಯಬೇಕು. ಮತ್ತು ಇದಲ್ಲದೆ-

ಲಿಂಗಾರ್ಚನರತಾ ನಾರೀ ಸೂತಕೀ ತು ರಜಸ್ವಲಾ।
ರವಿರಗ್ನಿರ್ಯಥಾ ವಾಯುಃ ಕೋಟಿಕೋಟಿಗುಣಃ ಶುಚಿಃ॥
ಯಥಾ ಹ್ಯಗ್ನಿಸಮಾವೇಶಾನ್ನಾಯೋ ಭವತಿ ಕೇವಲಮ್।
ತಥೈವ ಮಮ ಸಾನ್ನಿಧ್ಯಾನ್ನ ತೇ ಪ್ರಕೃತಿಮಾನುಷಾಃ॥
ತೈಲಯುಕ್ತಂ ತು ಕಾರ್ಪಾಸಂ ಜ್ಯೋತಿಸ್ಪರ್ಶಾತ್ ತಥೈವ ತತ್।
ಸ್ನೇಹಯುಕ್ತಸ್ಯ ಸದ್ಭಕ್ತೇರ್ಲಿಂಗಸ್ಪರ್ಶೇನ ಲಿಂಗತಾ॥
ಶೈವಂ ಲಿಂಗಾರ್ಚನಂ ಯಸ್ಯ ಯಸ್ಯ ಚಾಗ್ನಿಪರಿಗ್ರಹಃ।
ವಾನಪ್ರಸ್ಥಯತೀನಾಂ ಚ ಶರೀರೇ ನಾಸ್ತಿ ಸೂತಕಮ್॥[೨೦೩]

“ಲಿಂಗಾರ್ಚನೆಯಲ್ಲಿ ನಿರತಳಾದ ಸ್ತ್ರೀಗೆ ಋತುಕಾಲದಲ್ಲಿ ಸೂತಕವಿರುವುದಿಲ್ಲ. ಸೂರ್ಯ, ಅಗ್ನಿ, ವಾಯು ಇವರಂತೆ ಕೋಟಿ ಕೋಟಿ ಗುಣಗಳಿಂದ ಶುಚಿಯಾಗಿರುತ್ತಾಳೆ. ಅಗ್ನಿಯುಕ್ತವಾದ ಪಿಂಡವು ಸಾಮಾನ್ಯವಾದ ಪಿಂಡವಾಗದಿರುವಂತೆ, ಶಿವನ ಸಾನ್ನಿಧ್ಯದಿಂದ ಅವರು ಸಾಮಾನ್ಯ ಮಾನವರಾಗಿರುವುದಿಲ್ಲ. ಎಣ್ಣೆಯಲ್ಲಿರುವ ಬತ್ತಿಯು ಅಗ್ನಿಯ ಸ್ಪರ್ಶದಿಂದ ಉರಿಯುವಂತೆ, ಪ್ರೀತಿಯಿಂದ ಕೂಡಿರುವ ಸದ್ಭಕ್ತಿಯಂತೆ ಇಷ್ಟಲಿಂಗಸ್ಪರ್ಶದಿಂದ ಲಿಂಗಸ್ವರೂಪಿಗಳೇ ಆಗಿರುತ್ತಾರೆ. ಶಿವಲಿಂಗ ಪೂಜಕರಿಗೂ, ಯಜ್ಞಯಾಗಾದಿಗಳಲ್ಲಿ ನಿರತರಾದ ವಾನಪ್ರಸ್ಥ ಯತಿಗಳಿಗೆ ಸೂತಕವಿರುವುದಿಲ್ಲ” ಇತ್ಯಾದಿ ವೀರಾಗಮ, ಪದ್ಮಪುರಾಣ, ಶಿವರಹಸ್ಯ, ಪರಾಶರಸ್ಮೃತಿ ವಚನಗಳಂತೆ ಲಿಂಗಧಾರಿಗಳು ಮತ್ತು ಇಷ್ಟಲಿಂಗಪೂಜೆಯಲ್ಲಿ ನಿರತರಾಗಿರುವ ಸ್ತ್ರೀಯರು ಸೂರ್ಯ, ಅಗ್ನಿ, ವಾಯು ಮೊದಲಾದವುಗಳಂತೆ ಯಾವಾಗಲೂ ಶುದ್ಧರು. ಅಗ್ನಿಯುಕ್ತವಾದ ಲೋಹಪಿಂಡವು ಹೇಗೆ ಸಾಮಾನ್ಯ ಲೋಹಪಿಂಡವಾಗುವುದಿಲ್ಲವೋ ಹಾಗೇಯೇ ಲಿಂಗಾಂಗಸಂಗಿಗಳಾದ ಸ್ತ್ರೀಯರು ಸಾಮಾನ್ಯರಾಗಿರದೆ ಲಿಂಗಸ್ವರೂಪಿಣಿಯರೇ ಆಗಿರುತ್ತಾರೆ ಎಂದು ಪ್ರತಿಪಾದಿಸಿರುವುದರಿಂದ ಲಿಂಗಧಾರಿಗಳಾದ ಸ್ತ್ರೀಯರಿಗೆ ಯಾವಾಗಲೂ ಸೂತಕವಿರುವುದಿಲ್ಲ.

---

೨೦೩. ಲಿ.ಚ, ಪು. ೧೯೩-೧೯೪

ಲಿಂಗಧಾರಣಚಂದ್ರಿಕೆಯ ಕರ್ತೃಗಳ ಈ ಅಭಿಪ್ರಾಯವು ಪೂರ್ವೋಕ್ತ ಸಿದ್ಧಾಂತಾಗಮದ ಅಭಿಪ್ರಾಯಕ್ಕೆ ವಿರೋಧವಾಗಿರುವುದರಿಂದ ಇದು ಸರಿಯಲ್ಲ ಎಂದು ಪ್ರತಿಪಾದಿಸುವವರಿಗೆ ಶಂಕರಶಾಸ್ತ್ರಿಗಳು ಎರಡೂ ಅಭಿಪ್ರಾಯಗಳನ್ನು ಸಮನ್ವಯಗೊಳಿಸುವ ದೃಷ್ಟಿಯಿಂದ ಸಿದ್ಧಾಂತಶಿಖೋಪನಿಷದ್ವೀರಶೈವಭಾಷ್ಯದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅದನ್ನು ಇಲ್ಲಿ ಸಂಗ್ರಹಿಸಲಾಗಿದೆ- "ಲಿಂಗಧಾರಿಗಳಿಗೆ ಯಾವಾಗಲೂ ಸೂತಕವಿಲ್ಲವೆಂಬ ವಾಕ್ಯಗಳು ಶರಣಸ್ಥಲದಲ್ಲಿ ಇರುವವರೆಗೆ ಅನ್ವಯವಾಗುತ್ತವೆ. ಇಲ್ಲದಿದ್ದರೆ, "ತಥಾ ಸೂತಕಿನಃ ಶೈವಾಃ ಪೂಜಾ ಮಾತ್ರ ಸುನಿರ್ಮಲಾಃ" (ಸೂತಕದ ಸಂದರ್ಭದಲ್ಲಿ ಶೈವರಿಗೆ ಪೂಜಾಕಾಲದಲ್ಲಿ ಮಾತ್ರ ಶುಚಿಯನ್ನು ಹೇಳಲಾಗಿದೆ.) ಎಂಬ ಆಗಮವಾಕ್ಯ ವಿರೋಧವು ಬರುತ್ತದೆ. ಆದುದರಿಂದ ಮೋಕ್ಷಕ್ಕೆ ಉಪಯುಕ್ತವಾದ ಶಿವಾರ್ಚನಾದಿ ನಿತ್ಯಕರ್ಮೇತರರಾದ ಇತರರು ಸ್ಪರ್ಶಿಸಿದ ಪಾಕಾದಿ ಕಾರ್ಯಗಳಲ್ಲಿ ಮತ್ತು ರಜಸ್ವಲೆ ಮೊದಲಾದವರ ಲಿಂಗಧಾರಣ ದೀಕ್ಷಾಸಂಪನ್ನರಾದ ಸ್ತ್ರೀಯರಿಗೆ ಪೂಜಾಕಾಲದ ಹೊರತು ಬೇರೆ ಸಂದರ್ಭಗಳಲ್ಲಿ ಸೂತಕವನ್ನು ಒಪ್ಪಿಕೊಳ್ಳಲೇಬೇಕು.

ಸೂತಕದ ಸಂದರ್ಭದಲ್ಲಿ ಅಶುಚಿಯಾದ ಶರೀರದ ಸಂಬಂಧದಿಂದ ಸ್ಥಾವರ ಲಿಂಗದಂತೆ ಇಷ್ಟಲಿಂಗಕ್ಕೆ ದೀಕ್ಷಾಕಾಲದಲ್ಲಿ ಶ್ರೀಗುರುವು ಮಾಡಿರುವ ಪೂಜೆಯ ಪ್ರಯೋಜನದ ಸಂಸ್ಕಾರವೂ ಸಹ ನಾಶವಾಗುತ್ತದೆ ಎಂದು ಹೇಳಬಾರದು. ಏಕೆಂದರೆ ಇಷ್ಟಲಿಂಗ-ಸ್ಥಾವರಲಿಂಗಗಳ ಭೇದವೇ ಇದಕ್ಕೆ ಕಾರಣ. ಸ್ಥಾವರಲಿಂಗದ ಪೂಜೆಯನ್ನು ಇಂತಹ ವ್ಯಕ್ತಿಯೇ ಮಾಡಬೇಕೆಂಬ ನಿಯಮವೇನೂ ಇರುವುದಿಲ್ಲ. ಒಬ್ಬ ವ್ಯಕ್ತಿಯು ಸೂತಕಿಯಾಗಿದ್ದರೆ ಮತ್ತೊಬ್ಬನು ಪೂಜೆಯನ್ನು ಮಾಡುತ್ತಾನೆ. ಆದರೆ ಇಷ್ಟಲಿಂಗ ಪೂಜೆಯನ್ನು ತಾನೇ ಸ್ವತಃ ಆಜೀವಪರ್ಯಂತ ನಿತ್ಯಕರ್ಮದಂತೆ ಆಚರಿಸಬೇಕು. ಇಷ್ಟಲಿಂಗದ ಪೂಜಾದಿಗಳನ್ನು ಆಜೀವಪರ್ಯಂತ ಮಾಡಬೇಕಾದ ಕರ್ತವ್ಯವೆಂದು ಬೋಧಿಸಿರುವ ಶಾಸ್ತ್ರಗಳ ಬಲದಿಂದ ದೀಕ್ಷಾಕಾಲದಲ್ಲಿ ಶ್ರೀಗುರುವು ಇಷ್ಟಲಿಂಗವನ್ನು ನೀಡಿ ಸಂಸ್ಕಾರವಂತನನ್ನಾಗಿ ಮಾಡಿರುವ ಭಕ್ತನೊಬ್ಬನು ಮಾಡುವ ಪೂಜೆಯ ಪ್ರಯೋಜನ ಸಂಸ್ಕಾರದ ಸ್ಥಾಯಿತ್ವವು ತಿಳಿದುಬರುತ್ತದೆ. "ಸರ್ವಲಿಂಗಂ ಸ್ಥಾಪಯತಿ ಪಾಣಿಮಂತ್ರಂ ಪವಿತ್ರಮ್"[೨೦೪] ಎಂಬಲ್ಲಿನ 'ಪವಿತ್ರ' ಶಬ್ದವು ಶುಚಿ-ಅಶುಚಿ ಎಂಬ ಎರಡು ಕಾಲಗಳಲ್ಲಿಯೂ ಸಹ ತನ್ನ ಇಷ್ಟಲಿಂಗವನ್ನು ಧರಿಸತಕ್ಕದ್ದೆಂದು ಸೂಚಿಸಿರುವುದೇ ಅದಕ್ಕೆ ಕಾರಣ.

> ಅಪಗಚ್ಛತು ಸರ್ವಸ್ವಂ ಶಿರಚ್ಛೇದನಮಸ್ತು ವಾ।
> ಮಾಹೇಶ್ವರೋ ನ ಮುಂಚೇತ ಲಿಂಗಪೂಜಾಮಹಾವ್ರತಮ್॥[೨೦೫]
>
> ಶುಚಿರ್ವಾಪ್ಯಶುಚಿರ್ವಾಪಿ ಲಿಂಗಂ ಸರ್ವತ್ರಧಾರಯೇತ್।
> ನಿತ್ಯಂ ಸ್ವವಾಮಹಸ್ತಾಗ್ರೇ ಸಾವಧಾನೇನ ಪೂಜಯೇತ್॥[೨೦೬]

---

೨೦೪. ತೈತ್ತಿರೀಯ ಆರಣ್ಯಕ, ೧೦.೧೬.೧

೨೦೫. ಸಿ.ಶಿ, ೧೦.೨೨

೨೦೬. ಸಿ.ಶಿಖೋ, ವೀ.ಭಾ, ಪು. ೩೩

“ಸರ್ವಸ್ವವೂ ತೊಲಗಲಿ ಅಥವಾ ಶಿರಚ್ಛೇದನವೇ ಆಗಲಿ. ಭಕ್ತನು ಇಷ್ಟಲಿಂಗಪೂಜಾ ಮಹಾವ್ರತವನ್ನು ಬಿಡಬಾರದು. ಆತನು ಶುಚಿವಂತನಾಗಿರಲಿ-ಅಶುಚಿವಂತನಾಗಿರಲಿ, ಲಿಂಗವನ್ನು ದೇಹದ ಮೇಲೆ ಯಾವಾಗಲೂ ಧರಿಸಿರಬೇಕು. ಇಷ್ಟಲಿಂಗವನ್ನು ತನ್ನ ವಾಮಹಸ್ತದಲ್ಲಿಟ್ಟುಕೊಂಡು ಪ್ರತಿನಿತ್ಯವೂ ಸಾವಧಾನದಿಂದ ಪೂಜಿಸಬೇಕು” ಎಂದು ನಿರೂಪಿಸಿರುವ ಕಾರಣ ಒಮ್ಮೆಯೂ ಕೂಡ ಇಷ್ಟಲಿಂಗಪೂಜೆಯನ್ನು ಬಿಡುವಂತಿಲ್ಲ. ಸ್ಥಾವರಲಿಂಗದ ವಿಷಯದಲ್ಲಿ ಶ್ರೀಗುರುವು ಮಾಡಿದ ಪೂಜಾ ಪ್ರಯೋಜನವು ಅಶುಚಿಯಾದ (ಸೂತಕವಿರುವ) ಶರೀರಸ್ಪರ್ಶದಿಂದ ನಾಶವಾಗುತ್ತದೆಂದು ಊಹಿಸಿದರೂ ಸಹ, ಇಷ್ಟಲಿಂಗದ ವಿಷಯದಲ್ಲಿ ಇಂತಹ ಊಹೆಯು ಸಾಧುವಲ್ಲ. ಇಲ್ಲದಿದ್ದರೆ ಯಾಗದಿಂದುಂಟಾದ ಅಪೂರ್ವ ರೂಪ ಸಂಸ್ಕಾರದಿಂದ ಯಜ್ಞದೀಕ್ಷಿತರಾದ ಯಜಮಾನ ದಂಪತಿಗಳಿಗೆ ಗಂಗಾಸ್ನಾನಾದಿಗಳಿಂದ ಉಂಟಾದ ಆಯಾ ಸಂಸ್ಕಾರಗಳು ಆಚರಣೆಯ ಮಧ್ಯದಲ್ಲಿ ಸೂತಕದಿಂದ ನಾಶವಾದಲ್ಲಿ ಎಲ್ಲ ಕರ್ಮಗಳು ನಿಷ್ಪ್ರಯೋಜನವಾಗುವುದರಿಂದ, ಆ ನಿಯಮವನ್ನು ಬೋಧಿಸುವ ವೇದ-ಶಾಸ್ತ್ರಾದಿಗಳು ಅಪ್ರಮಾಣವೆಂದು ಸಿದ್ಧವಾಗಿ ಬೌದ್ಧಮತವನ್ನು ಅಂಗೀಕರಿಸಿದಂತಾಗುತ್ತದೆ. ಆದುದರಿಂದ ಅಶೌಚದ ಕಾರಣದಿಂದ ಸಂಸ್ಕಾರಗಳು ನಾಶವಾಗುತ್ತವೆಂದು ಹೇಳಬಾರದು.

ಮಳೆಗಾಲದಲ್ಲಿ ನದಿಗಳು ರಜಸ್ವಲೆಯ ಸೂತಕದಿಂದ ಕೂಡಿರುವುದರಿಂದ ಆ ಸಂದರ್ಭದಲ್ಲಿ ನದಿಗಳಲ್ಲಿ ಸ್ನಾನಮಾಡಬಾರದೆಂದು ಧರ್ಮಶಾಸ್ತ್ರಗಳು ನಿಷೇಧವನ್ನು ಹೇರುತ್ತವೆ. ಆದರೆ “ಹೇಗೆ ಗಂಗೆಗೆ ಶಿವನ ಸಂಪರ್ಕದಿಂದ ಸೂತಕವಾಗಲಿ ಅಥವಾ ಅಶುಚಿತ್ವವಾಗಲಿ ಉಂಟಾಗುವುದಿಲ್ಲವೋ ಹಾಗೆಯೇ ಇವರಿಗೂ (ಭಕ್ತರಿಗೂ) ಕೂಡ ಅಶುಚಿತ್ವ ಉಂಟಾಗುವುದಿಲ್ಲ.”[೨೦೭]

ಯಥಾ ವಿಶ್ವೇಶನೈಕಟ್ಯಾದ್ ಗಂಗಾ ಸೂತಕವರ್ಜಿತಾ।
ತಥಾ ಲಿಂಗಾಂಕಿತಾ ಭಕ್ತಾ ಪಂಚಸೂತಕವರ್ಜಿತಾಃ॥[೨೦೮]

“ವಿಶ್ವೇಶ್ವರನ ಸಂಪರ್ಕದಿಂದ ಗಂಗೆಯು ಹೇಗೆ ಸೂತಕರಹಿತವಾಗಿದೆಯೋ ಹಾಗೆಯೇ ಇಷ್ಟಲಿಂಗ ಧರಿಸಿದ ಭಕ್ತರು ಪಂಚಸೂತಕಗಳಿಂದ ವಿಮುಕ್ತರಾಗುತ್ತಾರೆ.” ಇತ್ಯಾದಿ ಸಿದ್ಧಾಂತ ಶಿಖೋಪನಿಷತ್-ಲಿಂಗಸಾರಾದಿ ವಚನಗಳ ಪ್ರಾಮಾಣ್ಯದಂತೆ ಶಿವನೊಡನೆ ಸಂಪರ್ಕ ಪಡೆದಿರುವ ಗಂಗೆಗೆ ಒಮ್ಮೆಯೂ ಸಹ ಸೂತಕವು ಹೇಗೆ ಪ್ರಾಪ್ತವಾಗುವುದಿಲ್ಲವೋ ಹಾಗೆಯೇ ರಜಸ್ವಲೆ ಮೊದಲಾದವುಗಳಿಂದ ಶಿವಲಿಂಗಕ್ಕೆ ಹೇಗೆ ಸೂತಕ ಪ್ರಾಪ್ತವಾಗುತ್ತದೆ ಎಂದು ಜಿಜ್ಞಾಸುಗಳು ಆಕ್ಷೇಪವೆತ್ತಿದರೆ, ಈ ರೀತಿಯಾಗಿ ಉತ್ತರಿಸಲಾಗಿದೆ. ಅದು ಹಾಗಲ್ಲ. “ದುಷ್ಟಚಾಂಡಾಲಬಾಂಡೇಷು ಯಥಾ ಭಾಗೀರಥೀಜಲಮ್” ಎಂಬ ಗೌತಮೋಕ್ತಿಯ ಪ್ರಕಾರ ದುಷ್ಟ ಸ್ವಭಾವದ ಚಾಂಡಾಲನ ಪಾತ್ರೆಯಲ್ಲಿ ತೆಗೆದುಕೊಂಡು ಬಂದಂತಹ ನೀರೂ ಸಹ ಸಹಜವಾಗಿ ಅಶೌಚವೆಂಬ

---

[೨೦೭] ಸಿ.ಶಿಖೋ, ಶ್ಲೋಕ. ೧೨

[೨೦೮] ಸಿ.ಶಿಖೋ, ವೀ.ಭಾ, ಪು. ೨೮

ಕಲ್ಪನೆಯುಂಟಾಗುತ್ತದೆ. ಆ ಪಾತ್ರೆಯಲ್ಲಿ ತಂದಂತಹ ನೀರು ಆ ಸಂದರ್ಭದಲ್ಲಿ ಅಶುಚಿತ್ವದಿಂದ ಕೂಡಿರುವಂತೆ ರಜಸ್ವಲೆ ಮೊದಲಾದ ಸೂತಕಗಳು ನಿತ್ಯವೂ ಶಿವನ ಸಂಪರ್ಕದಿಂದ ಇದ್ದರೂ ಸಹ ಋತುಕಾಲದಲ್ಲಿ ಅಶೌಚವುಂಟೆಂದು ಹೇಳಲೇಬೇಕು.

ಷಡಧ್ವಶೋಧನ ಸಂಸ್ಕಾರಕ್ಕೆ ಅರ್ಹರಾದ ಸ್ತ್ರೀ-ಪುರುಷರೆಲ್ಲರಿಗೂ ದೀಕ್ಷಾ ಕಾಲದಲ್ಲಿಯೇ ಶ್ರೀಗುರುವಿನ ಅನುಗ್ರಹದಿಂದ ಅವರ ಮಾಂಸಪಿಂಡವು ಮಂತ್ರಪಿಂಡವಾಗಿ ಪರಿವರ್ತಿತವಾಗಿರುತ್ತದೆ. ಆ ಕಾರಣ ಲಿಂಗಾಂಗಸಾಮರಸ್ಯದಿಂದಲೇ ಜೀವಭಾವವು ನಿವೃತ್ತಿಯಾಗುವುದರಿಂದ ಶರಣನಿಗೆ ದೃಢತರವಾದ ಲಿಂಗಾಂಗ ಷಟ್‌ಸ್ಥಲ ಸಾಮರಸ್ಯದ ಸಾಕ್ಷಾತ್ಕಾರವಿಲ್ಲದಿದ್ದರೂ ಸಹ ಅಶೌಚವನ್ನು ಹೇಳುವುದಕ್ಕಾಗುವುದಿಲ್ಲ ಎಂಬ ಆಕ್ಷೇಪಕ್ಕೆ ಈ ರೀತಿ ಸಮಾಧಾನ ಹೇಳಲಾಗಿದೆ- ದೀಕ್ಷಾಕಾಲದಲ್ಲಿ ಸಾಧನಾವಸ್ಥೆಯಿಂದ ಕೂಡಿದ ಸಾಮರಸ್ಯವನ್ನು ಗುರುವು ಮಾಡಿರುತ್ತಾನೆ. ಈ ರೀತಿ ಸಾಧನಕಾಲದಲ್ಲಿ ಸಾಧ್ಯವಾದ ಮಂತ್ರಶರೀರ ಸ್ವರೂಪವಾದ ಶಿವತ್ವದ ಅಭಿವ್ಯಕ್ತಿ ರೂಪವಾದ ಮುಕ್ತಿಯು ಆಗುವುದಿಲ್ಲ. ಹೊಲದಲ್ಲಿ ಬೀಜಬಿತ್ತಿದ ಮಾತ್ರಕ್ಕೆ ತಕ್ಷಣ ಅದರ ಫಲ ಕಾಣುವುದಿಲ್ಲವಷ್ಟೆ.

ಮತ್ತು ದೀಕ್ಷಾಸಂಸ್ಕಾರದಿಂದ ಮಾಂಸಪಿಂಡದ ನಿವೃತ್ತಿಯಾಗಿ ಮಂತ್ರಪಿಂಡದ ಉತ್ಪತ್ತಿಯಾಗುತ್ತದೆ. ಅನಂತರ ಜೀವಭಾವವು ಶಾಶ್ವತವಾಗಿ ನಿವಾರಣೆಯಾಗುತ್ತದೆ. ಆಗ ದೀಕ್ಷಾನಂತರ ಪ್ರತಿದಿನವೂ ಸಾಧನೆಯ ಅಪೇಕ್ಷೆಯೇ ಇಲ್ಲದಂತಾಗುತ್ತದೆ. ಶಿವಪೂಜೆ, ಶಿವಧ್ಯಾನ, ಶಿವಮಂತ್ರಜಪ, ಶಿವಮಂತ್ರಾರ್ಥ ಜಿಜ್ಞಾಸೆ ಮೊದಲಾದ ಅನೇಕ ಸಾಧನಗಳನ್ನು ವ್ಯರ್ಥವಾಗಿ ಹೇಳಿದಂತಾಗುತ್ತದೆ. ಮಾಂಸಪಿಂಡ ನಿವೃತ್ತಿಪೂರ್ವಕ ಮಂತ್ರಪಿಂಡ ಉತ್ಪತ್ತಿಯಾಗುತ್ತದೆಂಬುದು ಭಾವನಾಜ್ಞಾನವಾಗಿರುವುದರಿಂದ ವಸ್ತುತಃ ಆಗ ಜೀವಭಾವವೂ ಕೂಡ ನಿವೃತ್ತಿಯಾಗಿರುವುದಿಲ್ಲ. ಲಿಂಗಧಾರಣಚಂದ್ರಿಕಾಕಾರರೂ ಸಹ "ಮಾಂಸಪಿಂಡನಿವೃತ್ತೇಃ ಮಂತ್ರಪಿಂಡೋತ್ಪತ್ತೇರಿವ ಭಾವನಾಮಾತ್ರ ಗಮ್ಯತ್ವಾತ್" ಎಂದು ಹೇಳಿದ್ದಾರೆ. ಆದುದರಿಂದ ಶಿವಪೂಜಾದಿ ಅಂಶಗಳಲ್ಲಿ ಪರಿಶುದ್ಧತ್ವವನ್ನೂ, ಅನ್ಯತ್ರ ಸೂತಕವನ್ನೂ ಹೇಳಿದಂತೆ ಸಿದ್ಧವಾಗುತ್ತದೆ.

ಈ ಅಶೌಚದ ವ್ಯಾಖ್ಯಾನವು ವ್ಯಾಪಕವಾದದ್ದಾಗಿಲ್ಲ ಮತ್ತು ಆಗಮ ವಿರುದ್ಧವೂ ಆಗಿದೆ ಎಂದು ಆಕ್ಷೇಪಿಸಿದರೆ ಅದಕ್ಕೆ ಸಮಾಧಾನವಾಗಿ "ನ ಸೂತಕಂ ನಾಪ್ಯಶುಚಿತ್ವಂ ಯೇಷಾಂ" ಎಂಬಲ್ಲಿರುವ 'ಇದಂ' ಪದದ ಸಿದ್ಧ-ಸಾಧಕರಿಬ್ಬರನ್ನೂ ಸಾಮಾನ್ಯವಾಗಿ ಗ್ರಹಿಸಿದೆ. ಆರು ಅಂಗಗಳಲ್ಲಿ ಆರು ಲಿಂಗಗಳ ಸಂಯೋಜನೆಯು ಷಟ್‌ಸ್ಥಲಜ್ಞಾನ ಸಿದ್ಧರಿಗೆ ಮಾತ್ರವಿರುವುದರಿಂದ ಅವರು "ನೀರಿನಲ್ಲಿರುವ ತಾವರೆಯ ಎಲೆಯ ಸಂಬಂಧದಂತೆ" ಜೀವನ್ಮುಕ್ತರು ದೇಹಧಾರಿಗಳಾಗಿದ್ದರೂ ದೇಹದೊಂದಿಗೆ ಸಂಬಂಧವಿಲ್ಲದಂತೆ ಇರುವುದರಿಂದ ಅವರಿಗೆ ಸೂತಕವಿಲ್ಲ, ಅಶುಚಿಯಿಲ್ಲ ಎಂದು ಹೇಳಿದ್ದು ಸಮಂಜಸವಾಗುತ್ತದೆ. ಸಾಧಕರಿಗಾದರೂ ಅಶೌಚಾದಿಗಳನ್ನು ಹೇಳಲೇಬೇಕು. ಹಾಗಿಲ್ಲದಿದ್ದರೆ ಸಿದ್ಧಾಂತಾಗಮದ ವಿರೋಧವು ಬರುತ್ತದೆ. ಇದರಿಂದ "ನ ತಸ್ಯ ಸೂತಕಂ

ಕಿಂಚಿತ್ ಪ್ರಾಣಲಿಂಗಾಂಗಸಂಗಿನಃ"[೨೦೯] (ಪ್ರಾಣಲಿಂಗಾಂಗಸಂಗಿಯಾದ ವೀರಶೈವನಿಗೆ ಪಾರಮಾರ್ಥಿಕ ದಶೆಯಲ್ಲಿ ಜನನ ಸೂತಕವಾಗಲಿ, ಮರಣ ಸೂತಕವಾಗಲಿ ಇರುವುದಿಲ್ಲ. ಅರ್ಥಾತ್ ಲೌಕಿಕಾಚಾರ ದಶೆಯಲ್ಲಿ ಇರುವುದೆಂದು ಭಾವವು) ಎಂಬ ಶ್ರೀ ರೇಣುಕ ಭಗವತ್ಪಾದರ ಉಕ್ತಿಗೆ ವಿರೋಧವೆಂಬ ಸಂದೇಹವು ನಿವಾರಣೆಯಾಯಿತೆಂದು ಮೇಲಿನ ವಿವರಣೆಯಿಂದ ತಿಳಿಯಬೇಕು. ಶರಣನೆಂಬ ಅಭಿಧಾನವುಳ್ಳ ಲಿಂಗಾಂಗಸಂಗಿಯಾದ ಜೀವನ್ಮುಕ್ತನ ವಿಷಯದಲ್ಲಿ ಸೂತಕ ಉಂಟಾಗುವುದಿಲ್ಲವೆಂಬ ಉಕ್ತಿ ಮತ್ತು ಲಿಂಗಧಾರಣ ದೀಕ್ಷಾಸಂಪನ್ನಳಾದ ಸ್ತ್ರೀಯರಿಗೆ ರಜಸ್ವಲೆ ಮೊದಲಾದವುಗಳಿಂದಲೂ ಸೂತಕವಿದೆಯೋ ಅಥವಾ ಇಲ್ಲವೋ ಎಂಬ ಸಂಶಯವನ್ನು ನಿವಾರಿಸಿ ಕೊಳ್ಳಲು ಶ್ರೀ ರೇಣುಕ ಭಗವತ್ಪಾದರು "ಲಿಂಗಾರ್ಚನರತಾಯಾಶ್ಚ ಋತೌ ನಾರ್ಯಾ ನ ಸೂತಕಮ್"[೨೧೦] (ಲಿಂಗಾರ್ಚನಾಸಕ್ತಳಾದ ವೀರಶೈವ ಸ್ತ್ರೀಗೆ ಋತುಕಾಲದಲ್ಲಿ ಸೂತಕ ವಿರುವುದಿಲ್ಲ) ಮುಂತಾಗಿ ಹೇಳಿದ್ದಾರೆ. ಇದರ ಭಾವವಿಷ್ಟು- ಲಿಂಗಾರ್ಚನನಿರತಳಾದ ಎಂಬ ವಿಶೇಷಣದಿಂದ ಲಿಂಗಾರ್ಚನೆಯೇ ಮೊದಲಾದ ನಿತ್ಯಕರ್ಮ ಕರ್ತವ್ಯಗಳ ಸಂದರ್ಭದಲ್ಲಿ ರಜಸ್ವಲೆ, ಪ್ರಸೂತಿಗಳು ಪ್ರಾಪ್ತವಾದರೆ ಸೂತಕವಿರುವುದಿಲ್ಲ. ಇತರ ಸಂದರ್ಭಗಳಲ್ಲಾದರೆ ಸೂತಕವುಂಟೆಂದು ಶ್ರೀ ರೇಣುಕಾಚಾರ್ಯರ ಉಕ್ತಿಯ ತಾತ್ಪರ್ಯ.

ಇದಲ್ಲದೆ "ಕರ್ಮಾಂತರೇಽಪಿ ಪರಿಶುದ್ಧಿಃ ಸ್ಯಾದಿತಿ ತುಲ್ಯಮ್"[೨೧೧] (ಲಿಂಗಾರ್ಚನೆಯಲ್ಲದೆ ಇತರ ಕರ್ಮಗಳಲ್ಲಿ ನಿರತರಾಗಿರುವಾಗ ರಜಸ್ವಲೆಯಾದರೂ ಸೂತಕವಿರುವುದಿಲ್ಲ) ಎಂಬ ನಂದಿಕೇಶ್ವರ ಶಿವಾಚಾರ್ಯರ ಉಕ್ತಿಯಲ್ಲಿ 'ಕರ್ಮಾಂತರ' ಎಂಬ ಪದವು ಏನನ್ನು ಬೋಧಿಸುತ್ತದೆ? ಅನ್ಯಸ್ಪರ್ಶಾದಿಗಳು ಎಂದು ಉತ್ತರಿಸಿದರೆ, ಅನ್ಯಸ್ಪರ್ಶರು ಯಾರು? ತನ್ನನ್ನು ಬಿಟ್ಟು ಎಲ್ಲ ಜನರ ಸ್ಪರ್ಶವೇ? ಅಥವಾ ತನಗಿಂತ ಭಿನ್ನರಾದ ಕೆಲವು ಜನರ ಸ್ಪರ್ಶವೇ? ಮೊದಲನೆಯದು ಲೋಕವಿರೋಧವಾದದ್ದು. ಎರಡನೆಯದು ಇಷ್ಟಾಪತ್ತಿ (ಆಪ್ತವಾಕ್ಯ), ತನ್ನ ಮಗುವಿಗೆ ಅನ್ನಪ್ರಾಶನ ಮಾಡುವುದಕ್ಕೆ ಮೊದಲು ಅದರ ಸ್ಪರ್ಶದ ಅವಶ್ಯಕತೆಯಿರುವುದೇ ಕಾರಣ. ಆದುದರಿಂದ 'ಕರ್ಮಾಂತರ' ಎಂಬ ಪದದಿಂದ ತನ್ನ ಮಗುವಿನ ಸ್ಪರ್ಶಮಾಡಿದರೆ ಪರಿಶುದ್ಧಿ, ಇತರರನ್ನು ಸ್ಪರ್ಶಿಸಿದಾಗ ಅಶುದ್ಧಿ ಎಂದು ಹೇಳುವುದರಿಂದ ಲಿಂಗಧಾರಣಚಂದ್ರಿಕೆಯ ಕರ್ತೃಗಳು ಸಹ ಅಶೌಚದ ವ್ಯಾಪ್ತಿಯನ್ನು ಕುಗ್ಗಿಸಿದ್ದಾರೆಂಬುದು ತಾತ್ಪರ್ಯವಾಗುತ್ತದೆ. ಆದುದರಿಂದ ಶರಣರನ್ನು ಹೊರತುಪಡಿಸಿ ಎಲ್ಲ ವೀರಶೈವ ಧರ್ಮೀಯರು ವಾಸ್ತವಿಕವಾಗಿ ಶಿವಮಯ ಶರೀರತ್ವವನ್ನು ಹೊಂದದಿರುವುದರಿಂದ ಅಶೌಚದ ಸಂಕೋಚವು ಉಂಟಾಗುತ್ತದೆ ಎಂಬುದು ಸಿದ್ಧಾಂತ.

---

[೨೦೯] ಸಿ.ಶಿ, ೯.೪೩

[೨೧೦] ಸಿ.ಶಿ, ೯.೪೪

[೨೧೧] ಲಿ.ಚ, ಪು. ೧೯೮

ಹೀಗೆ ನಂದಿಕೇಶ್ವರ ಶಿವಾಚಾರ್ಯರ ಮತ್ತು ಶಂಕರಶಾಸ್ತ್ರಿಗಳ ಅಭಿಪ್ರಾಯಗಳ ಪರ್ಯಾಲೋಚನೆಯಿಂದ ನಿಶ್ಚಯವಾಗುವುದೇನೆಂದರೆ ದೀರ್ಘಕಾಲ ಆಚರಿಸುವ ಪೌಂಡರೀಕಾದಿ ಯಾಗಗಳಲ್ಲಿ ರಜಸ್ವಲಾದಿಗಳಿಂದ ಸೂತಕವುಂಟಾದರೂ ಸಹ ಯಜಮಾನನ ಪತ್ನಿಯು ಸ್ನಾನಮಾಡಿ ಒದ್ದೆಯಾದ ವಸ್ತ್ರವನ್ನುಟ್ಟು ತಾತ್ಕಾಲಿಕವಾಗಿ ಪರಿಶುದ್ಧಳಾಗಿ ಯಜ್ಞದಲ್ಲಿ ಪತಿಯೊಡನೆ ಹೇಗೆ ಭಾಗಿಯಾಗುತ್ತಾಳೆಯೋ ಹಾಗೆಯೇ ವೀರಶೈವ ಸ್ತ್ರೀಯರೂ ಸಹ ಸೂತಕವುಂಟಾದಾಗ ಸ್ನಾನಮಾಡಿ, ಗುರು-ಜಂಗಮರ ಪಾದೋದಕವನ್ನು[೨೧೨] ತಮಗೆ ಮತ್ತು ಮನೆಗೆ ಪ್ರೋಕ್ಷಿಸಿಕೊಂಡು ಶುದ್ಧವಾಗಿ ಇಷ್ಟಲಿಂಗ ಪೂಜೆಗೆ ಅಧಿಕಾರಿಗಳಾಗುತ್ತಾರೆ.

ಇಷ್ಟಲಿಂಗವು ಪವಿತ್ರ ಮತ್ತು ಪವಿತ್ರ ಮಾಡುವಂತಹದ್ದೂ ಆಗುತ್ತದೆ. ಆದುದರಿಂದ ವೇದದಲ್ಲಿ ಇದು 'ಪವಿತ್ರಮ್' ಎಂದು ಪ್ರಸಿದ್ಧವಾಗಿದೆ. ಆ ಕಾರಣ ಸೂತಕದ ಸಂದರ್ಭದಲ್ಲಿ ಲಿಂಗಧಾರಣೆ ಮತ್ತು ಲಿಂಗಪೂಜೆ ಮಾಡುವುದು ಎಂದಿಗೂ ದೋಷವಲ್ಲ. ಅದನ್ನು ಭಗವಾನ್ ವ್ಯಾಸರು ಸಹ ಲಿಂಗಪುರಾಣದಲ್ಲಿ ಹೀಗೆ ಹೇಳಿದ್ದಾರೆ-

ಪವಿತ್ರಕರಣಾತ್ ಪುಂಸಾಂ ಪವಿತ್ರಮಿತಿ ಕಥ್ಯತೇ।
ಅತಃ ಸರ್ವೇಷು ಕಾಲೇಷು ಲಿಂಗಧಾರಣಮುತ್ತಮಮ್॥
ಗಚ್ಛನ್‌ಸ್ತಿಷ್ಠನ್‌ಸ್ವಪನ್‌ಜಾಗ್ರನ್ನಿಮಿಷನ್ನುನ್ಮಿಷನ್ನಪಿ।
ಶುಚಿರ್ವಾಪ್ಯಶುಚಿರ್ವಾಪಿ ಲಿಂಗಂ ಸರ್ವತ್ರ ಧಾರಯೇತ್॥
ಲಿಂಗಧಾರೀ ಸದಾ ಶುದ್ಧೋ ನಿಜಲಿಂಗಂ ಮನೋರಮಮ್।
ಅರ್ಚಯನ್ ಗಂಧಪುಷ್ಪಾದ್ಯೈಃ ಕರಪೀಠೇ ಸಮಾಹಿತಃ॥
ನಿತ್ಯಾನಿ ಕರ್ಮವೃಂದಾನಿ ತಥಾ ನೈಮಿತ್ತಿಕಾನಿ ಚ।
ಶಿವಾರ್ಪಣಧಿಯಾ ಕುರ್ಯಾತ್ ಸಮ್ಯಗ್‌ಜ್ಞಾನಾಭಿವೃದ್ಧಯೇ॥[೨೧೩]

"ಮನುಷ್ಯರ ಇಂದ್ರಿಯಗಳನ್ನು ಪಾವನಗೊಳಿಸುವುದರಿಂದ 'ಪವಿತ್ರ'ವೆಂದು ಕರೆಯಲಾಗಿದೆ. ಆದುದರಿಂದ ಯಾವಾಗಲೂ ಲಿಂಗಧಾರಣೆಯು ಶ್ರೇಷ್ಠವಾದುದು. ಹೋಗುವಾಗ, ನಿಂತಿರುವಾಗ, ನಿದ್ರಿಸುವಾಗ, ಎಚ್ಚರವಾಗಿರುವಾಗ, ಶುಚಿಯಾಗಿರಲಿ, ಅಶುಚಿಯಾಗಿರಲಿ -ಲಿಂಗವನ್ನು ಎಲ್ಲ ಸಂದರ್ಭದಲ್ಲಿಯೂ ಧರಿಸಿರಬೇಕು. ಲಿಂಗಧಾರಿಯು ಸದಾ ಶುದ್ಧನಾಗಿದ್ದು, ಮನೋಹರವಾದ ತನ್ನ ಇಷ್ಟಲಿಂಗವನ್ನು ಕರಪೀಠದಲ್ಲಿಟ್ಟುಕೊಂಡು ಗಂಧಪುಷ್ಪಾದಿಗಳಿಂದ ಪೂಜಿಸಬೇಕು. ಸಮ್ಯಕ್‌ಜ್ಞಾನದ ವೃದ್ಧಿಗೋಸ್ಕರ ನಿತ್ಯ ಮತ್ತು ನೈಮಿತ್ತಿಕ ಕರ್ಮಗಳೆಲ್ಲವನ್ನೂ ಶಿವಾರ್ಪಣ ಬುದ್ಧಿಯಿಂದ ಮಾಡಬೇಕು."

---

[೨೧೨] ಸ್ವಾಚಾರ್ಯಚರಣದ್ವಂದ್ವಪ್ರಕ್ಷಾಲಿತಜಲಂ ಸದಾ।
ಯಃ ಪಿಬೇದ್ಧಾರಯೇದ್ಭಕ್ತ್ಯಾ ಸರ್ವಪಾಪೈಃ ಪ್ರಮುಚ್ಯತೇ॥
-ಚ.ಜ್ಞಾ, ಕ್ರಿ.ಪಾ, ೨.೨೨

[೨೧೩] ಲಿ.ಪು, ೨.೨೧.೧೦೬-೧೦೯

ಆದುದರಿಂದ ವೀರಶೈವ ಸಿದ್ಧಾಂತದಲ್ಲಿ ಹುಟ್ಟು-ಸಾವು-ರಜಸ್ವಲೆ ಮುಂತಾದ ಸೂತಕಾದಿಗಳು ಪ್ರಾಪ್ತವಾದರೂ ಸಹ ಇಷ್ಟಲಿಂಗಧಾರಣೆ ಮತ್ತು ಇಷ್ಟಲಿಂಗಪೂಜೆಗಳ ವಿಷಯದಲ್ಲಿ ಅಶೌಚವನ್ನು ಅಂಗೀಕರಿಸುವುದಿಲ್ಲ. ಆದರೆ ಇತರರು ಸ್ಪರ್ಶಿಸಿದ ಪಾಕಾದಿ ಲೌಕಿಕ ವ್ಯವಹಾರಗಳಲ್ಲಿ ಲೋಕಮರ್ಯಾದೆಯಿಂದ ಅದು ಅಂಗೀಕರಿಸಲ್ಪಡುತ್ತದೆ ಎಂದು ವಾದವಿವಾದ. ವೀರಶೈವರ ಈ ಲಿಂಗಧಾರಣ ಸಿದ್ಧಾಂತವು ವೇದಾದಿ ಶಾಸ್ತ್ರಗಳಲ್ಲಿ ನಿರೂಪಣೆ ಮಾಡಿರುವುದರಿಂದ ಅವೈದಿಕವೆಂದು ಭ್ರಮಿಸಬಾರದು. ಪ್ರಾಸಂಗಿಕವಾಗಿ ಇಲ್ಲಿ ವೇದಾದಿ ಶಾಸ್ತ್ರಪ್ರಮಾಣಗಳನ್ನು ನಿರೂಪಿಸಲಾಗುತ್ತದೆ.

ಇಷ್ಟಲಿಂಗಧಾರಣೆಯ ವೇದಸಮ್ಮತತ್ವ

ವೇದೇಷು ಶಾಸ್ತ್ರಸಂಘೇಷು ಪುರಾಣೇಷ್ವಾಗಮೇಷು ಚ।
ಬ್ರಾಹ್ಮಣಸ್ಯ ಸಮಾಖ್ಯಾತಂ ಲಿಂಗಧಾರಣಮುತ್ತಮಮ್॥[೨೧೪]

ವೇದಶಾಸ್ತ್ರಪುರಾಣೇಷು ಕಾಮಿಕಾದ್ಯಾಗಮೇಷು ಚ।
ಲಿಂಗಧಾರಣಮಾಖ್ಯಾತಂ ವೀರಶೈವಸ್ಯ ನಿಶ್ಚಯಾತ್॥[೨೧೫]

"ವೀರಶೈವರು ಲಿಂಗಧಾರಣೆ ಮಾಡುವುದು ಶ್ರೇಷ್ಠವೆಂದು ವೇದಗಳಲ್ಲಿ, ಶಾಸ್ತ್ರಗಳಲ್ಲಿ, ಪುರಾಣಗಳಲ್ಲಿ ಮತ್ತು ಆಗಮಗಳಲ್ಲಿ ಹೇಳಲ್ಪಟ್ಟಿದೆ. ವೇದಗಳಲ್ಲಿ, ಶಾಸ್ತ್ರಗಳಲ್ಲಿ, ಪುರಾಣಗಳಲ್ಲಿ, ಕಾಮಿಕಾದಿ ವಾತಲಾಂತಗಳಾದ ಶಿವಾಗಮಗಳಲ್ಲಿ ವೀರಶೈವನಿಗೆ ಲಿಂಗಧಾರಣವು ಹೇಳಲ್ಪಟ್ಟಿರುವುದು" ಇತ್ಯಾದಿ ಲಿಂಗಪುರಾಣ-ಸಿದ್ಧಾಂತ ಶಿಖಾಮಣಿಯ ವಾಕ್ಯಗಳ ಪರ್ಯಾಲೋಚನೆಯಿಂದ ಲಿಂಗಧಾರಣ ಸಿದ್ಧಾಂತವು ಅತೀ ಪ್ರಾಚೀನವೆಂದು ತಿಳಿದುಬರುತ್ತದೆ. ಆಯಾ ಶಾಸ್ತ್ರಗಳ ಪ್ರಮಾಣಗಳನ್ನು ನಿರೂಪಣೆ ಮಾಡುವ ಮೂಲಕ ಈ ಲಿಂಗಧಾರಣ ಸಿದ್ಧಾಂತವನ್ನು ಇಲ್ಲಿ ಪ್ರಸ್ತಾಪಿಸಲಾಗುವುದು. ದೃಷ್ಟಾಂತವಾಗಿ ಶ್ರೀ ರೇಣುಕ ಭಗವತ್ಪಾದರು-

ಋಗಿತ್ಯಾಹ ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ।
ತಸ್ಮಾತ್ಪವಿತ್ರಂ ತಲ್ಲಿಂಗಂ ಧಾರ್ಯಂ ಶೈವಮನಾಮಯಮ್॥[೨೧೬]

"ಲಿಂಗಕ್ಕೆ ಬ್ರಹ್ಮವೆಂಬ ಹೆಸರುಂಟು. ಶಿವನು ಚತುರ್ಮುಖ ಬ್ರಹ್ಮನಿಗೆ ಅಧಿಪತಿಯಾಗಿರುವನು. ಆ ಶಿವಲಿಂಗವೇ 'ಪವಿತ್ರಮ್' ಎಂದು ಹೇಳಿಸಿಕೊಳ್ಳುವುದು. ಅಂಥ ಪವಿತ್ರ ಮೂರ್ತಿಯ ಸಂಪರ್ಕದಿಂದ ಶರೀರವು ಪವಿತ್ರವಾಗುವುದು. ಆದುದರಿಂದ ವೀರಶೈವನು ಪವಿತ್ರವೂ ದೋಷರಹಿತವೂ ಆದ ಶಿವಲಿಂಗವನ್ನು ಧರಿಸಬೇಕು" ಎಂಬಲ್ಲಿ-

ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ ಪ್ರಭುರ್ಗಾತ್ರಾಣಿ ಪರ್ಯೇಷಿ ವಿಶ್ವತಃ।
ಅತಪ್ತತನೂರ್ನ ತದಾಮೋ ಅಶ್ನುತೇ ಶ್ರುತಾಸ ಇದ್ವಹಂಸ್ತತ್ಸಮಾಶತ॥[೨೧೭]

---

೨೧೪. ಲಿ.ಪು, ೨.೨೧.೯೭
೨೧೫. ಸಿ.ಶಿ, ೬.೫೭
೨೧೬. ಸಿ.ಶಿ, ೬.೫೮
೨೧೭. ಋಗ್ವೇದ, ೯-೮೩.೧

ಎಂಬ ಋಗ್ವೇದದ ಮಂತ್ರವನ್ನು ಲಿಂಗಧಾರಣಪ್ರತಿಪಾದನಪರವೆಂದು ಉಪದೇಶಿಸಿದ್ದಾರೆ. ಇಲ್ಲಿ "ತಲ್ಲಿಂಗಂ ಬ್ರಹ್ಮ ಶಾಶ್ವತಮ್"[೨೧೮] (ಆ ನಿತ್ಯವಾದ ಪರಬ್ರಹ್ಮವೇ ಲಿಂಗವೆನಿಸಿಕೊಳ್ಳುವುದು), "ಲಿಂಗಂ ಬ್ರಹ್ಮ ಸನಾತನಮ್"[೨೧೯] (ಆ ನಿತ್ಯವಾದ ಪರಬ್ರಹ್ಮವೇ ಲಿಂಗವೆನಿಸಿಕೊಳ್ಳುವುದು) ಮುಂತಾದ ಪ್ರಯೋಗಗಳ ದರ್ಶನದಿಂದ 'ಬ್ರಹ್ಮ' ಶಬ್ದವು ಲಿಂಗವೆನಿಸಿಕೊಂಡಿದೆ. ಇಷ್ಟಲಿಂಗ ರೂಪವಾದ ಬ್ರಹ್ಮಕ್ಕೆ ಅಧಿಪತಿಯಾದದ್ದು ಪರಶಿವಬ್ರಹ್ಮವು. ಆದುದರಿಂದ 'ಬ್ರಹ್ಮಣಸ್ಪತೇ' ಎಂದರೆ ಲಿಂಗರೂಪ ಶರೀರದಿಂದ ಕೂಡಿರುವ ಪರಶಿವನ ಎಂದು ಅರ್ಥವಾಗುತ್ತದೆ. ಮೇಲಿನ ಮಂತ್ರದ ಪೂರ್ಣಾರ್ಥವನ್ನು ನಂದಿಕೇಶ್ವರ ಶಿವಾಚಾರ್ಯರು ಹೀಗೆ ವಿವರಿಸಿದ್ದಾರೆ- "ಹೇ ಬ್ರಹ್ಮಣಸ್ಪತೇ=ಲಿಂಗರೂಪ ಶರೀರದಿಂದ ಬೇರ್ಪಡಿಸುವ ಶರೀರಿಭಾವದಿಂದಿರುವ ಪರಮಶಿವ! ತೇ=ನಿನ್ನ, ತತ್=ಬ್ರಹ್ಮಪದವಾಚ್ಯಲಿಂಗರೂಪ ಶರೀರವನ್ನು, ಪವಿತ್ರಮ್ =ಪೂರ್ವೋಕ್ತ ರೀತಿಯಲ್ಲಿ ಶುಚಿ-ಅಶುಚಿ ಕಾಲಗಳಲ್ಲಿಯೂ ಸಹ ಧರಿಸಲು ಯೋಗ್ಯವಾದ, ವಿತತಮ್=ಇಷ್ಟಾದಿಭೇದದಿಂದ ಅಥವಾ ಭಕ್ತ ಶರೀರಾದಿ ಭೇದದಿಂದ ಬಹುವಿಧವಾದ, ಪ್ರಭು=ನಿಗ್ರಹಾನುಗ್ರಹ ಸಮರ್ಥನಾದ ನೀನು, ವಿಶ್ವತಃ=ಎಲ್ಲ ಬಗೆಯ, ಗಾತ್ರಾಣಿ=ಭಕ್ತರ ಶರೀರವನ್ನು, ಪರ್ಯೇಷಿ= ವ್ಯಾಪಿಸುವೆ, ಧರಿಸಿದವನಾಗಿ ಲಿಂಗರೂಪ ಶರೀರದ್ವಾರಾ ಭಕ್ತರ ಶರೀರವನ್ನು ಪ್ರವೇಶಿಸುವೆ ಎಂದರ್ಥ"[೨೨೦] ಎಂದು ಪ್ರತಿಪಾದಿಸಿದ್ದಾರೆ.

ಬ್ರಹ್ಮಪದದಿಂದ ಸ್ಥಾವರಲಿಂಗವೆಂದು ಅರ್ಥವಾಗಲಿ, ಈ ಇಷ್ಟಲಿಂಗಾದಿಗಳಿಂದೇನು? ಎಂಬ ಆಕ್ಷೇಪಕಾರರ ಪ್ರಶ್ನೆಗೆ ಹೀಗೆ ಉತ್ತರಿಸಲಾಗಿದೆ- ಅದು ಹಾಗಲ್ಲ, ಸ್ಥಾವರಲಿಂಗವು ಶರೀರದಲ್ಲಿ ಧರಿಸಲು ಅಸಂಭವವಾದುದರಿಂದ ಪೂರ್ವೋಕ್ತ ಅರ್ಥದ ಭಕ್ತರ ಶರೀರವನ್ನು ವ್ಯಾಪಿಸಿ ಎಲ್ಲ ಬಗೆಯ (ವಿಶ್ವತಃ) ಎಂಬ ಶಬ್ದದ ಅನ್ವಯಕ್ಕೆ ದಕ್ಕೆಯುಂಟಾಗುತ್ತದೆ. ಭಕ್ತರ ಶರೀರಗಳಲ್ಲಿ ಲಿಂಗಗಳ ವ್ಯಾಪ್ತತ್ವವನ್ನು ಅನುಭವಸೂತ್ರ[೨೨೧]ದಲ್ಲಿ ಮಾಯಿದೇವನು ವಿಸ್ತಾರವಾಗಿ ತೋರಿಸಿದ್ದಾನೆ. ಆದುದರಿಂದ ಈ ಸಂದರ್ಭದಲ್ಲಿ 'ಬ್ರಹ್ಮ' ಎಂದರೆ 'ಸ್ಥಾವರಲಿಂಗ' ಎಂದರ್ಥವಲ್ಲ. ಋಗ್ವೇದ ಮಂತ್ರದ ಪೂರ್ವೋಕ್ತ ಲಿಂಗಧಾರಣ ಪರವಾದ ಅರ್ಥ ಮಹರ್ಷಿ ವ್ಯಾಸರಿಗೂ ಸಹ ಇಷ್ಟವಾದದ್ದು. ಆದುದರಿಂದಲೇ-

---

[೨೧೮] ಸಿ.ಶಿ, ೬.೩೬

[೨೧೯] ಸಿ.ಶಿ, ೬.೩೫

[೨೨೦] ಲಿ.ಚ, ಪು. ೧೨೪-೧೨೫

[೨೨೧] ಇಷ್ಟಲಿಂಗಂ ತು ಬಾಹ್ಯಾಂಗೇ ಪ್ರಾಣಲಿಂಗಂ ತಥಾಂತರೇ।
ಭಾವಲಿಂಗಂ ತಥೈವಾಸ್ತಿ ಆತ್ಮಾಂಗೇ ಸುಪ್ರತಿಷ್ಠಿತಮ್॥
ಹೃದಯಾಂಗೇ ಮಹಾಲಿಂಗಂ ಶ್ರೋತ್ರಾಂಗೇ ತು ಪ್ರಸಾದಕಮ್।
ತ್ವಗಂಗೇ ಚರಲಿಂಗಂ ಚ ದೃಗಂಗೇ ಶಿವಲಿಂಗಕಮ್।

ಬ್ರಹ್ಮೇತಿ ಲಿಂಗಮಾಖ್ಯಾತಂ ಬ್ರಹ್ಮಣಃಪತಿರೀಶ್ವರಃ।
ಪವಿತ್ರಂ ತದ್ಧಿ ವಿಖ್ಯಾತಂ ತತ್ಸಂಪರ್ಕಾತ್ ತನುಃ ಶುಚಿಃ॥
ಋಗಿತ್ಯಾಹ ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ।
ತಸ್ಮಾತ್ ಪವಿತ್ರಂ ತಲ್ಲಿಂಗಂ ಧಾರ್ಯಂ ಶೈವಮನಾಮಯಮ್॥
ಅತಪ್ತತನುರಜ್ಞೋ ವೈ ಹ್ಯಘೀ ಸಂಸಾರಲಕ್ಷಣಃ।
ದೀಕ್ಷಯಾ ರಹಿತಃ ಸಾಕ್ಷಾನ್ನಾಪ್ನುಯಾಲ್ಲಿಂಗಮುತ್ತಮಮ್॥
ಯಃ ಕರೋತಿ ತಪಃ ಪೂರ್ವಂ ಸ ತಪ್ತತನುರುಚ್ಯತೇ।
ಪರಿಪಕ್ವೋ ವಿಮೋಕ್ಷಾಯ ಸೋಽಶ್ನುತೇ ಲಿಂಗಧಾರಣಮ್॥[೨೨೨]

"ಬ್ರಹ್ಮವೆಂದರೆ ಲಿಂಗವು, ಬ್ರಹ್ಮಣಃ ಪತಿಃ ಎಂದರೆ ಈಶ್ವರನು. ಆ ಲಿಂಗವು ಪವಿತ್ರವೆಂದು ಪ್ರಖ್ಯಾತವಾಗಿದೆ. ಆದರ ಸಂಪರ್ಕದಿಂದ ಧರಿಸಿರುವವನ ಶರೀರವು ಶುದ್ಧವಾಗುತ್ತದೆ. ಹೇ ಬ್ರಹ್ಮಣಸ್ಪತಿ, ನಿನ್ನ ಸ್ವರೂಪವು ಪವಿತ್ರವೂ, ವಿಸ್ತಾರವೂ ಆಗಿದೆಯೆಂದು ಋಗ್ವೇದವು ಹೇಳಿದೆ. ಆದುದರಿಂದ ನಿನ್ನ ರೂಪವೆನಿಸಿರುವ ಪರಿಶುದ್ಧವಾದ ಮತ್ತು ಶಿವಸಂಬಂಧವಾದ ಆ ಲಿಂಗವನ್ನು ಅವಶ್ಯವಾಗಿ ಧರಿಸಬೇಕು. ಅತಪ್ತತನುವೆಂದರೆ ಅಜ್ಞನು. ಅಘೀ ಎಂದರೆ ಸಂಸಾರಲಕ್ಷಣವುಳ್ಳವನು. ದೀಕ್ಷಾ ಸಂಸ್ಕಾರವಿಲ್ಲದವನು ಉತ್ತಮವಾದ ಶಿವಲಿಂಗವನ್ನು ಸಾಕ್ಷಾತ್ತಾಗಿ ಪಡೆಯಲಾರನು. ಈ ಹಿಂದೆ ಯಾವನು ತಪಸ್ಸನ್ನು ಮಾಡಿರುತ್ತಾನೋ ಅವನು ತಪ್ತತನು ಎಂದೆನಿಸುತ್ತಾನೆ. ತಪಸ್ಸಿನ ಪರಿಪಾಕವು ಮೋಕ್ಷಕ್ಕೆ ಕಾರಣವಾಗಿರುವುದರಿಂದ ತಪ್ತತನುವುಳ್ಳವನು ಮಾತ್ರ ಲಿಂಗಧಾರಣೆಯನ್ನು ಪಡೆಯುತ್ತಾನೆ" ಇತ್ಯಾದಿ ರೂಪದಿಂದ ಆ ಮಂತ್ರಾರ್ಥವನ್ನು ಲಿಂಗಧಾರಣಪರವಾಗಿ ವ್ಯಾಖ್ಯಾನಿಸಿ, ಆ ಲಿಂಗವು ದೀಕ್ಷಾಕಾಲದಲ್ಲಿ ಸದ್ಗುರುವಿನಿಂದ ಪ್ರಾಪ್ತವಾಗುತ್ತದೆಂದು ಸ್ಪಷ್ಟವಾಗಿ ಪ್ರತಿಪಾದಿಸಿದ್ದಾರೆ. ಇದೇ ರೀತಿಯಾಗಿ-

ಅಯಂ ಮೇ ಹಸ್ತೋ ಭಗವಾನಯಂ ಮೇ ಭಗವತ್ತರಃ।
ಅಯಂ ಮೇ ವಿಶ್ವಭೇಷಜೋಽಯಂ ವಿಶ್ವಾಭಿಮರ್ಶನಃ॥[೨೨೩]

"ಈ ನನ್ನ ಹಸ್ತವು ಪೂಜ್ಯವಾದುದು. ಈ ನನ್ನ ಶರೀರವು ಇನ್ನೂ ಪವಿತ್ರವಾದುದು. ಇದಕ್ಕೆ ಕಾರಣವೆಂದರೆ ಈ ಭವರೋಗ ವೈದ್ಯನು ನನ್ನ ಶರೀರದ ಸಂಪರ್ಕವನ್ನು ಹೊಂದಿರುವುದೇ ಆಗಿದೆ" ಎಂಬ ಋಗ್ವೇದದ ಮತ್ತೊಂದು ಮಂತ್ರದಿಂದಲೂ ಸಹ ಲಿಂಗಧಾರಣ ಸಿದ್ಧಾಂತವು ಸಿದ್ಧವಾಗಿದೆ. ಇಲ್ಲಿ "ಅಥೈನಂ ಭಗವಂತಂ ರುದ್ರಂ ಕುಮಾರಃ ಪಪ್ರಚ್ಛ", "ಅಥ ಕಾಲಾಗ್ನಿರುದ್ರಂ ಭಗವಂತಂ ಸನತ್ಕುಮಾರಃ ಪಪ್ರಚ್ಛ",[೨೨೪]

ಜಿಹ್ವಾಂಗೇ ಗುರುಲಿಂಗಂ ಸ್ಯಾನ್ನಾಸಿಕಾಂಗೇ ತಥೈವ ಚ।
ಆಚಾರಲಿಂಗಮಶ್ರಾಂತಂ ಸುಪ್ರತಿಷ್ಠಿತಮೇವ ಹಿ॥ -ಅನುಭವಸೂತ್ರ, ೬.೪-೬

[೨೨೨] ಲಿಂಗಪುರಾಣಮ್, ೨.೨೧.೯೮-೧೦೨

[೨೨೩] ಋಗ್ವೇದ, ೧೦-೬೦-೧೨

[೨೨೪] ಕಾಲಾಗ್ನಿರುದ್ರೋಪನಿಷತ್, ೨

"ಇತಿ ಸಂಸ್ತೂಯಮಾನಸ್ತು ಭಗವಾನ್ ವೃಷಭಧ್ವಜಃ" ಮುಂತಾದ ಕಾಲಾಗ್ನಿರುದ್ರೋಪನಿಷತ್, ಹರಿವಂಶ, ಪುರಾಣ ಮುಂತಾದವುಗಳಲ್ಲಿ 'ಭಗವಾನ್' ಎಂದರೆ 'ಪರಶಿವ' ಎಂದೇ ಹೇಳಲ್ಪಟ್ಟಿದೆ. ಆದುದರಿಂದ ಅಯಂ ಭಗವಾನ್=ಲಿಂಗರೂಪೀ ಶಿವನು, ಮೇ ಹಸ್ತಃ=ನನ್ನ ಹಸ್ತವನ್ನು ಹೊಂದಿರುವನು, ಮೇ=ನನಗೆ ಸಂಬಂಧಿಸಿದ, ಈ ಶಿವನು ಭಗವತ್ತರ ಎಂದರ್ಥ.

ಉದಾಹರಣೆಗೆ- "ಆದಿತ್ಯೋ ಭಗವಾನ್ ಸೂರ್ಯೋ ನೀಲಗ್ರೀವಸ್ತ್ರಿಲೋಚನಃ"[೨೨೫] ಎಂಬಲ್ಲಿ ಶಿವ-ಸೂರ್ಯರಿಗೆ ಅವಿಭಾಜ್ಯ ಸಂಬಂಧವನ್ನು ಸೂಚಿಸಲು ಸೂರ್ಯನಲ್ಲಿರುವ 'ಭಗವಾನ್' ಎಂದು ಹೇಳದೆ 'ಆದಿತ್ಯೋ ಭಗವಾನ್' ಎಂದು ಉಕ್ತಿ. ಅದರಂತೆ ಇಲ್ಲಿಯೂ ಸಹ ಹಸ್ತ-ಶಿವಲಿಂಗಗಳಿಗೆ ಅವಿಭಾಜ್ಯ ಸಂಬಂಧವನ್ನು ಸೂಚಿಸಲು 'ಹಸ್ತಗತ' ಎಂದು ಹೇಳದೆ 'ಹಸ್ತೋ ಭಗವಾನ್' ಎಂದು ಹೇಳಲ್ಪಟ್ಟಿದೆ.

ಗುರುಣಾ ದತ್ತಲಿಂಗಂ ತು ಶಿವಮಂತ್ರೇಣ ಧಾರಯೇತ್।
ಮೂರ್ಧ್ನಿ ಕಂಠೇ ಭುಜೇ ಹಸ್ತೇ ಹೃತ್ಸ್ಥಲೇ ನಾಭಿಮಂಡಲೇ।
ಏತೇಷಾಮೇಕದೇಶೇ ತು ಧಾರಯೇತ್ ಶಿವಲಿಂಗಕಮ್॥[೨೨೬]

"ಗುರುವಿನಿಂದ ನೀಡಲ್ಪಟ್ಟ ಇಷ್ಟಲಿಂಗವನ್ನು ಶಿವಪಂಚಾಕ್ಷರಿ ಮಂತ್ರವನ್ನು ಉಚ್ಚರಿಸುತ್ತಾ ತಲೆ, ಕುತ್ತಿಗೆ, ಭುಜ, ಹಸ್ತ, ಹೃದಯ ಭಾಗ, ನಾಭಿಮಂಡಲ -ಇವುಗಳಲ್ಲಿ ಯಾವುದಾದರೊಂದು ಸ್ಥಾನದಲ್ಲಿ ಧರಿಸಬೇಕು" -ಎಂದು ವಾತುಲಶುದ್ಧಾಗಮದಲ್ಲಿ ಇಷ್ಟಲಿಂಗವನ್ನು ಹಸ್ತಾದಿಗಳಲ್ಲಿ ಧರಿಸಬೇಕೆಂದು ಉಪದೇಶಿಸಲಾಗಿದೆ. ಹೀಗೆ ಹಸ್ತಾದಿಗಳಲ್ಲಿ ಧರಿಸಿರುವ ಇಷ್ಟಲಿಂಗವು ದೇಹದಿಂದ ಬೇರ್ಪಟ್ಟರೆ-

ಹಸ್ತಸಿಂಹಾಸನೇ ಲಿಂಗಮಪ್ರಮಾದೇನ ಧಾರಯೇತ್।
ಪ್ರಮಾದಾತ್ ಪತಿತೇ ಲಿಂಗೇ ಸಹ ಪ್ರಾಣಾನ್ ಪರಿತ್ಯಜೇತ್॥
ಭೂಮೌ ಪ್ರತಿಷ್ಠಿತಂ ಲಿಂಗಂ ಪುನರ್ನೋತ್ಪಾಟ್ಯತೇ ಯಥಾ।
ದೇಹೇ ಪ್ರತಿಷ್ಠಿತಂ ಲಿಂಗಮಂತೇಽಪಿ ನ ವಿಭಜ್ಯತೇ॥[೨೨೭]

"ಹಸ್ತಪೀಠದಲ್ಲಿ ಇಷ್ಟಲಿಂಗವನ್ನು ಬಹಳ ಎಚ್ಚರಿಕೆಯಿಂದ ಧರಿಸಬೇಕು. ಪ್ರಮಾದದಿಂದ ಲಿಂಗವು ನೆಲದ ಮೇಲೆ ಬಿದ್ದರೆ, ಲಿಂಗದೊಡನೆ ಪ್ರಾಣವನ್ನು ಬಿಡಬೇಕು. ಭೂಮಿಯ ಮೇಲೆ ಸ್ಥಾಪಿತವಾದ ಲಿಂಗವನ್ನು ಮತ್ತೊಮ್ಮೆ ಹೇಗೆ ಕೀಳುವುದಿಲ್ಲವೋ ಹಾಗೆಯೇ ದೇಹದಲ್ಲಿ ಸ್ಥಾಪಿತವಾದ ಲಿಂಗವನ್ನು (ನಮ್ಮ) ಅಂತ್ಯಕಾಲದವರೆಗೆ ಬೇರ್ಪಡಿಸಲಾಗುವುದಿಲ್ಲ" -ಇತ್ಯಾದಿ ದೋಷವನ್ನು ವಿಧಿಸುವ ಸ್ಕಂದಪುರಾಣ-ಶಂಕರಸಂಹಿತೆಗಳ ಉಕ್ತಿಗಳಿರುವುದರಿಂದ ಹಸ್ತ-ಶಿವಲಿಂಗ ಇವುಗಳ ಅವಿಭಾಜ್ಯತ್ವವು

---

೨೨೫. ಲಿ.ಚ, ಪು. ೧೪೭

೨೨೬. ವಾತುಲಶುದ್ಧತಂತ್ರ, ೧೦.೩೫-೩೬

೨೨೭. ಲಿ.ಚ, ಪು. ೧೫೦

ಸ್ಪಷ್ಟವಾಗಿಯೇ ಇದೆ. ಹೀಗೆ ಹಸ್ತಾದಿಗಳಲ್ಲಿ ಲಿಂಗಧಾರಣೆಯನ್ನು ಹೇಳಿ "ಅಯಂ ಮಾತಾ ಅಯಂ ಪಿತಾ"[೨೨೮] ಎಂಬ ಅರ್ಥವಾದದ ಮೂಲಕ ಇಷ್ಟಲಿಂಗಕ್ಕೇ ಸೃಷ್ಟಿಯೇ ಮೊದಲಾದ ಕರ್ತೃತ್ವವನ್ನು ಹೇಳಿ, "ಅಯಂ ವಿಶ್ವಭೇಷಜಃ" ಎಂಬ ವಾಕ್ಯದಿಂದ ವಿಶ್ವಸ್ಯ=ಭವಸ್ಯ (ಶಿವನ), ಭೇಷಜಃ=ಸಂಸಾರವೆಂಬ ರೋಗನಾಶಕ ಎಂದು ಸಂಹಾರಕರ್ತೃತ್ವವು ಪ್ರತಿಪಾದಿಸಲ್ಪಟ್ಟಿದೆ. ಈ ರೀತಿಯಾಗಿ ಸೃಷ್ಟಿಯೇ ಇತ್ಯಾದಿಗಳನ್ನು ಮಾಡುವ ಹಸ್ತದಲ್ಲಿರುವ ಆ ಭಗವಂತನು ಯಾರು? ಎಂಬ ಜಿಜ್ಞಾಸೆಗೆ "ಅಯಂ ಶಿವಾಭಿಮರ್ಶನಃ" (ಇದು ಶಿವನೊಂದಿಗೆ ಸಂಬಂಧ ಹೊಂದಿದೆ) ಎಂದು ಹೇಳಲ್ಪಟ್ಟಿದೆ. ಅರ್ಥಾತ್ ವಾಕ್ಯಶೇಷಾರ್ಥದಿಂದ ಯವವ್ರೀಹ್ಯಧಿಕರಣನ್ಯಾಯದಿಂದ[೨೨೯] ಹಸ್ತದಲ್ಲಿರುವ ಭಗವಂತನು ಶಿವ ಎಂದು ನಿರ್ಧಾರವಾಗುತ್ತದೆ. 'ಭಗವಾನ್' ಶಬ್ದವನ್ನು ನಾರಾಯಣ, ಬ್ರಹ್ಮ, ಸನತ್ಕುಮಾರ ಮೊದಲಾದ ಮಹರ್ಷಿಗಳಿಗೆ ಸಂಬಂಧಿಸಿದಂತೆ ಉಪಯೋಗಿಸುತ್ತಿದ್ದರೂ ಸಹ ನಾರಾಯಣಾದಿ ದೇವತೆಗಳ ವಿಗ್ರಹಗಳನ್ನು ಹಸ್ತಾದಿಗಳಲ್ಲಿ ಹಿಡಿದು ಕೊಂಡು ಪೂಜಿಸುವ ವಿಧಾನವಾಗಲಿ, ಪ್ರಮಾಣವಾಗಲಿ ಕಂಡುಬರುವುದಿಲ್ಲ. ಆದರೆ ಇಷ್ಟಲಿಂಗವನ್ನು ಹಸ್ತದಲ್ಲಿ ಇರಿಸಿ ಪೂಜಿಸುವ ರೂಢಿಯೂ, ಪ್ರಮಾಣವೂ ಇರುವುದರಿಂದ ಇಲ್ಲಿ ಹಸ್ತ ಶಬ್ದದ ಸಮೀಪದಲ್ಲಿ ಪ್ರಯುಕ್ತವಾದ 'ಭಗವಾನ್' ಶಬ್ದಕ್ಕೆ 'ಇಷ್ಟಲಿಂಗ'ವೆಂದೇ ಅರ್ಥವನ್ನು ನಿರ್ಧರಿಸಬೇಕು.

ಯಾವಜ್ಜೀವಮಿದಂ ದತ್ತಮಿಷ್ಟಲಿಂಗಂ ಸಮರ್ಚಯನ್।
ಕರಾಬ್ಜಪೀಠೇ ವಿನ್ಯಸ್ಯ ತದ್ಧ್ಯಾನಾಸಕ್ತಮಾನಸಃ॥
ಹಸ್ತಲಿಂಗಾಂಗಸಂಬಂಧೀ ಸದಾನಂದಾಹ್ವಯೋ ಮುನಿಃ।
ಸರ್ವೋಪನಿಷದರ್ಥಜ್ಞಃ ಶಿವಧ್ಯಾನಪರಾಯಣಃ॥
ಏವಂ ಷಟ್‌ಸ್ಥಲನಿರ್ಣಯಂ ಶಿವಪದಪ್ರಾಪ್ತ್ಯೇಕಹೇತುಂ ಸದಾ।
ಯಃ ಸೇವೇತ ಕರಾಬ್ಜಪೀಠನಿಹಿತಶ್ರೀಕಂಠಲಿಂಗಾರ್ಚಕಃ॥
ಸ ಜ್ಞಾನೀ ಸ ಪುರಾತನಃ ಸ ಚ ಮಹಾನ್ ಮಾಹೇಶ್ವರೇಷೂತ್ತಮೋ।
ಮರ್ತ್ಯಸ್ತೇನ ಜಗತ್ರಯೇಽಪಿ ಸದೃಶೋ ವಿದ್ಯೇತ ದೇವೋಽಪಿ ವಾ॥[೨೩೦]

---

[೨೨೮] ಋಗ್ವೇದ, ೧೦.೬೦.೭

[೨೨೯] "ವ್ರೀಹಿಭಿರ್ಯವೈರ್ವಾ ಯಜೇತ (ಆಪ.ಶ್ರೌ. ೬-೩೧-೧೩) ಎಂಬಲ್ಲಿ 'ಯವ' ಶಬ್ದಕ್ಕೆ ಮ್ಲೇಚ್ಛರು 'ಪ್ರಿಯಂಗು' ಎಂದೂ, ಆರ್ಯರು 'ಸಾಲವೃಕ್ಷ' ಎಂಬ ಅರ್ಥದಲ್ಲಿ ಪ್ರಯೋಗ ಮಾಡುವುದರಿಂದಲೂ, ಯಾವ ಅರ್ಥವನ್ನು ಈ ಸಂದರ್ಭದಲ್ಲಿ ಸ್ವೀಕರಿಸಬೇಕೆಂಬ ವಿಷಯದಲ್ಲಿ ಜಿಜ್ಞಾಸೆಯುಂಟಾದಲ್ಲಿ- "ಯತ್ರಾನ್ಯಾ ಓಷಧಯೋ ಮ್ಲಾಯಂತೇ, ಅಥೈತೇ ಮೋದಮಾನಾಸ್ತಿಷ್ಠಂತಿ" (ಶ.ಬ್ರಾ. ೩-೬-೧-೧೦) ಎಂಬ ವಾಕ್ಯದಿಂದ ದೀರ್ಘಶೂಕ (ಸಾಲವೃಕ್ಷ) ಎಂಬ ಅರ್ಥವನ್ನೇ ನಿರ್ಣಯಿಸಲಾಗಿದೆ. ಈ ರೀತಿಯಾಗಿ ಇಲ್ಲಿಯೂ ಕೂಡ 'ಅಯಂ ಮೇ ಶಿವಾಭಿಮರ್ಶನ' ಎಂದರೆ ವಾಕ್ಯಶೇಷಬಲದಿಂದ 'ಭಗವನ್' ಶಬ್ದಕ್ಕೆ 'ಶಿವ' ಎಂಬ ಅರ್ಥವನ್ನೇ ಸ್ವೀಕರಿಸಬೇಕೆಂದು ಭಾವಿಸಬೇಕಷ್ಟೆ. (ಲಿ.ಚ.ಶರತ್, ಪು. ೧೫೭-೫೩)

[೨೩೦] ಲಿ.ಚ, ಪು. ೧೬೧

"ಶ್ರೀಗುರುವಿನಿಂದ ಅನುಗ್ರಹಿಸಲ್ಪಟ್ಟ ಇಷ್ಟಲಿಂಗವನ್ನು ಕರಪೀಠದಲ್ಲಿರಿಸಿಕೊಂಡು ಧ್ಯಾನಿಸುತ್ತಾ ಆಜೀವಪರ್ಯಂತ ಪೂಜಿಸಬೇಕು" ಇತ್ಯಾದಿ ವ್ಯಾಸ ಮಹರ್ಷಿಗಳು ಶಂಕರಸಂಹಿತೆಯಲ್ಲಿ ಹೇಳಿರುವ ಮಾತುಗಳು ಮೇಲಿನ ಅಭಿಪ್ರಾಯವನ್ನು ಸಮರ್ಥಿಸುತ್ತವೆ.

ಶ್ರೀ ನಂದಿಕೇಶ್ವರ ಶಿವಾಚಾರ್ಯರು ಈ ಮಂತ್ರದ ಅರ್ಥನಿರ್ಣಯ ಮಾಡುವ ಸಂದರ್ಭದಲ್ಲಿ- "ಪೂರ್ವಾಚಾರ್ಯಾಸ್ತು - ಅಯಂ ಹಸ್ತಃ ಶಿವಮಭಿತಃ ಸರ್ವದಾ ಸ್ಪೃಶತೀತಿ ಶಿವಾಭಿಮರ್ಶನಃ" (ಪೂರ್ವಾಚಾರ್ಯರಾದರೋ ಈ ಹಸ್ತವು ಯಾವಾಗಲೂ ಶಿವನನ್ನು ಸ್ಪರ್ಶಿಸುತ್ತದೆ) ಎನ್ನುವ ವ್ಯುತ್ಪತ್ತಿಯಂತೆ ಈ ಹಸ್ತವು ಯಾವಾಗಲೂ ಇಷ್ಟಲಿಂಗವನ್ನು ಸ್ಪರ್ಶಿಸುತ್ತಿದೆ ಎಂಬ ಅರ್ಥವು ಸಿದ್ಧವಾಗುತ್ತದೆ. ಮತ್ತು ಈ ರೀತಿಯಾದ ಸಾರ್ವಕಾಲೀಕ ಸ್ಪರ್ಶವು ಶರೀರದ ಮೇಲೆ ಇಷ್ಟಲಿಂಗವನ್ನು ಧರಿಸದಿದ್ದರೆ ಸಿದ್ಧವಾಗುವುದಿಲ್ಲ. 'ಅಭಿತಃ' ಎಂಬ ಶಬ್ದವು ಸುತ್ತಲೂ ಎಂಬ ಅರ್ಥವನ್ನು ಹೊಂದಿರುವುದರಿಂದ ಆ ಬಗೆಯ ಸ್ಪರ್ಶದಿಂದ ಭೂಮಿಯೇ ಮೊದಲಾದ ಸ್ಥಳಗಳಲ್ಲಿ ಪ್ರತಿಷ್ಠಾಪನೆ ಮಾಡಿರುವ ಸ್ಥಾವರಲಿಂಗ ಎಂಬ ಅರ್ಥವೂ ಉಂಟಾಗುವುದರಿಂದ, ಲಿಂಗಧಾರಣ ಸಿದ್ಧಿ ಎಂದು ಹೇಳಬಾರದು. 'ಅಭಿತಃ' ಎಂಬಲ್ಲಿ ದೇಶ-ಕಾಲಗಳೆರಡರ್ಥಗಳಿಂದ ಹಸ್ತಾದಿಗಳಲ್ಲಿ ಹಿಡಿದಿರುವ ಲಿಂಗವೇ ಆ ಬಗೆಯ ಸ್ಪರ್ಶವುಂಟಾಗುವುದರಿಂದ ಲಿಂಗಧಾರಣೆಯು ಸಿದ್ಧಿಯಾಗುತ್ತದೆ. ಆ ಕಾರಣದಿಂದ ನನ್ನ ಜೀವನಕ್ಕೆ ಔಷಧಿಯಾಗಿರುವ ನೀನು ಹೇ ಪರಮಶಿವ! ನಿನ್ನನ್ನು ಧಾರಣೆ ಮಾಡಿದ್ದೇನೆ. ಆದುದರಿಂದ ನನ್ನ ಹಸ್ತದಲ್ಲಿ ಯಾವಾಗಲೂ ಇರು.

ಬಲಹಸ್ತದಿಂದ ಶಿವಪೂಜೆಯನ್ನು ಮಾಡದಿರುವುದರಿಂದ ವಾಮಹಸ್ತದಲ್ಲಿ ಇಷ್ಟಲಿಂಗವನ್ನು ಧರಿಸುವುದರಿಂದ ಸಾರ್ವಕಾಲಿಕವಾದ ಶಿವಸ್ಪರ್ಶವುಳ್ಳದ್ದು ಕರವು ಪೂಜ್ಯವಾದುದು ಎಂದು. ತಂದೆ-ತಾಯಿಗಳಲ್ಲಿ ದೈವತ್ವವನ್ನು ಸ್ತುತಿಸುವಂತೆ, ಯಾವಾಗಲೂ ಶರೀರಕ್ಕೆ ಶಿವಲಿಂಗದ ಸಂಬಂಧವುಳ್ಳದ್ದು ಶಿವಸ್ವರೂಪವೆಂದು[೨೩೧] ಕೈಮುತಿಕನ್ಯಾಯದಿಂದ ಸಿದ್ಧವಾಗುತ್ತದೆ. "ಪ್ರಾಣಲಿಂಗಾಂಗ ಸಂಬಂಧವುಳ್ಳವನು ರುದ್ರನು" ಎಂಬಲ್ಲಿ ಸಂಶಯವಿಲ್ಲ -ಎಂಬ ಉಕ್ತಿಗೆ ಅನುಸಾರವಾಗಿದೆ. "ಅಹೊ! ಲಿಂಗಧಾರಣ ಮಹಿಮೆಯು! ಎರಡೂ ಕೈಗಳಿಂದ ಪೂಜಿಸಿ ಧರಿಸುವುದರಿಂದ ಮತ್ತು ಸರ್ವಶರೀರವೂ ಕೂಡ ಆಚಾರಾದಿ ಷಡ್ಲಿಂಗಗಳ ಸ್ಥಾನವಾದ್ದರಿಂದ ಸಮಸ್ತ ಶರೀರವೂ

---

[೨೩೧] ದಂಡಪೂಪನ್ಯಾಯೇನೇತ್ಯರ್ಥಃ। ತತ್ ಸ್ವರೂಪಂ ತು
ಯೇನ ಹಸ್ತಿನಾ ದಂಡೋಭಕ್ಷಿತಃ ತೇನಾಪೂಪಂ
ಕಿಮುತ ಭಕ್ಷಯಿತುಂ ನ ಶಕ್ಯೇತ? ದಂಡಭಕ್ಷಕೇಣಾಽಪೂಪ-
ಮನಾಯಾಸೇನ ಭಕ್ಷ್ಯತ ಇತಿ ಭಾವಃ।
(ದಂಡ-ಅಪೂಪನ್ಯಾಯದಿಂದ ಎಂದರ್ಥ. ಇದರ ಸ್ವರೂಪವು ಇಂತಿದೆ- ದಂಡವನ್ನು ಭಕ್ಷಿಸಿದ ಆನೆಗೆ ಅಪೂಪವನ್ನು ಭಕ್ಷಿಸಲು ಸಮರ್ಥವಲ್ಲವೆ? ದಂಡವನ್ನು ಭಕ್ಷಿಸಿದ ಆನೆಯು ಅನಾಯಾಸವಾಗಿ ಅಪೂಪವನ್ನು ತಿನ್ನುತ್ತದೆ ಎಂದರ್ಥ.) -ಲಿ.ಚ. ಶರತ್, ಪೃ.೧೬೦

ಶಿವನಿಗೋಸ್ಕರ ಪ್ರಶಸ್ತವಾಗಿದೆ ಎಂದು ಹೇಳುವರು.” ಈ ರೀತಿಯಾಗಿ ಪೂರ್ವಾಚಾರ್ಯರು ಹೇಳಿದ ಮಂತ್ರಭಾಗವು ಲಿಂಗಧಾರಣಪರವಾಗಿದೆ ಎಂದು ದೃಢವಾದಂತಾಯಿತು.

‘ಪವಿತ್ರಂ ತೇ ವಿತತಮ್’[೨೩೨] ಎಂಬ ಮಂತ್ರದಿಂದ ಲಿಂಗಧಾರಣೆಯು ವಿಹಿತ ಆಗುವುದರಿಂದ ಮತ್ತೆ “ಅಯಂ ಮೇ ಹಸ್ತೋ ಭಗವಾನ್”[೨೩೩] ಎಂಬ ಮಂತ್ರದಿಂದ ಅದೇ ಅರ್ಥವು ಪ್ರತಿಪಾದಿತವಾಗುವುದರಿಂದ ಎರಡನೆಯ ಮಂತ್ರವು ಅನ್ಯಥಾ ಸಿದ್ಧಿಯಲ್ಲವೇ? ಎಂದು ಪೂರ್ವಪಕ್ಷಕಾರರು ಆಕ್ಷೇಪವೆತ್ತಿದರೆ ಹೀಗೆ ಉತ್ತರಿಸಲಾಗಿದೆ. ಮೊದಲನೆಯ ಮಂತ್ರದಿಂದ ಸಾಮಾನ್ಯವಾಗಿ ಲಿಂಗಧಾರಣೆಯನ್ನು ವಿಧಿಸಿ, ಎರಡನೆಯ ಮಂತ್ರದಿಂದ ಶರೀರದಲ್ಲಿ ಅದನ್ನು ಧರಿಸುವ ಸ್ಥಾನವನ್ನು ನಿರ್ದಿಷ್ಟಗೊಳಿಸಲಾಗಿದೆ. ಆದುದರಿಂದ ಎರಡನೆಯ ಮಂತ್ರವು ಅನ್ಯಥಾ ಸಿದ್ಧಿಯಾಗುವುದಿಲ್ಲ.

ಇದೇ ರೀತಿಯಾಗಿ ಎಲ್ಲ ವಿದ್ಯೆಗಳಿಗೂ ಶಿರಸ್ಸಿನಂತಿರುವ ರುದ್ರಾಧ್ಯಾಯದ (ಎಂಟನೇ ಅನುವಾಕದ) ಹನ್ನೊಂದು ಮಂತ್ರಗಳಲ್ಲಿ ಒಂದಾದ “ಯಾ ತೇ ರುದ್ರ” ಎಂಬ ಮಂತ್ರದಿಂದಲೂ ಸಹ ಬಾಹ್ಯಲಿಂಗಧಾರಣೆಯು ಸಿದ್ಧವಾಗುತ್ತದೆ. ಅದನ್ನು ಶ್ರೀನಂದಿಕೇಶ್ವರ ಶಿವಾಚಾರ್ಯರು ಹೀಗೆ ಪ್ರತಿಪಾದಿಸಿದ್ದಾರೆ-

ವಿದ್ಯಾಸು ಶ್ರುತಿರುತ್ಕೃಷ್ಟಾ ರುದ್ರೈಕಾದಶಿನೀ ಶ್ರುತೌ।
ತತ್ರ ಪಂಚಾಕ್ಷರೀ ತಸ್ಯಾಂ ಶಿವ ಇತ್ಯಕ್ಷರದ್ವಯಮ್॥

“ಎಲ್ಲ ವೇದಗಳಲ್ಲಿ ಶ್ರುತಿ (ಯಜುರ್ವೇದ); ಶ್ರುತಿಯಲ್ಲಿ (ಯಜುರ್ವೇದದಲ್ಲಿ) ಹನ್ನೊಂದು ರುದ್ರಮಂತ್ರಗಳು; ಅದರಲ್ಲಿ ಪಂಚಾಕ್ಷರೀ ಮಂತ್ರ (ಎಂಟನೇ ಅನುವಾಕ) ಮತ್ತು ಪಂಚಾಕ್ಷರೀ ಮಂತ್ರದಲ್ಲಿ ‘ಶಿವ’ ಎಂಬೆರಡಕ್ಷರಗಳು ಉತ್ತರೋತ್ತರವಾಗಿ ಶ್ರೇಷ್ಠವಾದವು” ಎಂದು ಎಲ್ಲ ವೇದಗಳಿಗೆ ಶಿರೋಮಣಿಯಂತಿರುವ ಹನ್ನೊಂದು ರುದ್ರಮಂತ್ರಗಳಲ್ಲಿ “ಯಾ ತೇ ರುದ್ರ ಶಿವಾ ತನೂರಘೋರಾಽಪಾಪಕಾಶಿನೀ”[೨೩೪] ಎಂಬ ಮಂತ್ರವೂ ಸಹ ಪರಮಶ್ರೇಷ್ಠವಾದುದು.” ‘ರುದ್ರ’ ಶಬ್ದದ ನಿಷ್ಪತ್ತಿಯನ್ನು ಲಿಂಗಧಾರಣ ಚಂದ್ರಿಕೆಯಲ್ಲಿ ಹೀಗೆ ನೀಡಲಾಗಿದೆ- “ರುದಂ ರೋದನಂ ಸಂಸಾರದುಃಖಜನಿತಂ ದ್ರಾವಯತೀತಿ ರುದ್ರಃ, ರುದಂ ಅಜ್ಞಾನಂ ದ್ರಾವಯತೀತಿ ವಾ ರುದ್ರಃ” ಎಂಬ ವ್ಯುತ್ಪತ್ತಿಯಂತೆ ಜೀವಿಗಳ ಜನನ-ಮರಣರೂಪ ಸಂಸಾರ ದುಃಖವನ್ನಾಗಲಿ ಅಥವಾ ಜೀವವನ್ನು ಆವರಿಸಿರುವ ಆಣವಾದಿ ಮಲತ್ರಯರೂಪ ಅಜ್ಞಾನವನ್ನಾಗಲಿ ನಾಶಮಾಡುವ ಕಾರಣದಿಂದ ಆ ಶಿವನಿಗೆ ‘ರುದ್ರ’ ಎಂದು ಹೆಸರು.

“ಹೇ ರುದ್ರ = ದುಃಖನಾಶಕನಾದ ಹೇ ಶಿವ! ಶಾಂತವೂ, ಮಂಗಳಸ್ವರೂಪವೂ ಆದ ನಿನ್ನ ಲಿಂಗರೂಪ ಶರೀರವು ಪಾಪರಹಿತರಾದ ಭಕ್ತರ ಶರೀರಗಳಲ್ಲಿ ಧರಿಸಲ್ಪಟ್ಟಿದೆ

---

[೨೩೨] ಋಗ್ವೇದ, ೯-೮೩-೧

[೨೩೩] ಋಗ್ವೇದ, ೧೦-೬೦-೧೨

[೨೩೪] ತೈತ್ತಿರೀಯ ಆರಣ್ಯಕ, ೪-೫-೧-೧

ಎಂದರ್ಥವಾಗುತ್ತದೆ.” ಈ ಶ್ರುತಿವಾಕ್ಯವನ್ನು ಶ್ರೀ ರೇಣುಕ ಭಗವತ್ಪಾದರೂ ಕೂಡ ಲಿಂಗಧಾರಣ ಪರವಾಗಿ ಸಿದ್ಧಾಂತ ಶಿಖಾಮಣಿಯಲ್ಲಿ ಸಮರ್ಥಿಸಿದ್ದಾರೆ-

ಅಘೋರಾಽಪಾಪಕಾಶೀತಿ ಯಾ ತೇ ರುದ್ರ ಶಿವಾ ತನೂಃ।
ಯಜುಷಾ ಗೀಯತೇ ಯಸ್ಮಾತ್ತಸ್ಮಾಚ್ಛೈವೋಽಘವರ್ಜಿತಃ॥[೨೩೫]

“ಯಾ ತೇ ರುದ್ರ ಶಿವಾ ತನೂಃ... ಎಂಬ ಯಜುರ್ವೇದ ಮಂತ್ರವು ಲಿಂಗಧಾರಣೆಯನ್ನು ಬೋಧಿಸುತ್ತದೆ. ಆದುದರಿಂದ ಲಿಂಗಧಾರಣ ಸಂಪನ್ನನಾದ ವೀರಶೈವನು ಪಾಪ ಸಮೂಹದಿಂದ ಬಿಡುಗಡೆ ಹೊಂದುವನು.”

ಇದೇ ರೀತಿಯಾಗಿ- “ನಿಧನಪತಯೇ ನಮಃ। ನಿಧನಪತಾಂತಿಕಾಯ ನಮಃ। ಊರ್ಧ್ವಾಯ ನಮಃ। ಊರ್ಧ್ವಲಿಂಗಾಯ ನಮಃ। ಏತತ್ ಸೋಮಸ್ಯ ಸೂರ್ಯಸ್ಯ ಸರ್ವಲಿಂಗಂ ಸ್ಥಾಪಯತಿ ಪಾಣಿಮಂತ್ರಂ ಪವಿತ್ರಮ್”[೨೩೬] ಮುಂತಾದ ಯಜುರ್ವೇದದ ಮಂತ್ರಗಳೂ ಸಹ ಲಿಂಗಧಾರಣವನ್ನು ಪ್ರತಿಪಾದಿಸಿವೆ. ಇಲ್ಲಿ “ಪಾಣಿಮಂತ್ರಮ್” ಎಂದರೆ “ಇಷ್ಟಲಿಂಗ” ಎಂದರ್ಥವಾಗುತ್ತದೆ. ಉದಾಹರಣೆಗೆ-

ಮನನಾತ್ ತ್ರಾಯತೇ ಯಸ್ಮಾತ್ ತಸ್ಮಾನ್ಮಂತ್ರೋಽಯಮೀರಿತಃ।
ವಾಚ್ಯವಾಚಕರೂಪೇಣ ದ್ವಿಧಾ ಮಂತ್ರಃ ಪ್ರಕೀರ್ತಿತಃ॥
ವಾಚಕೋ ವರ್ಣರೂಪಃ ಸ್ಯಾದ್ವಾಚ್ಯಶ್ಚ ಪರಮಃ ಶಿವಃ।
ಮನುದೈವತಯೋರೈಕ್ಯಂ ತಸ್ಮಾದಾಹುರ್ಮಹರ್ಷಯಃ॥[೨೩೭]

“ಮನನ ಮಾಡುವುದರಿಂದ ರಕ್ಷಿಸುತ್ತದೆಯಾದ್ದರಿಂದ ಇದನ್ನು ‘ಮಂತ್ರ’ವೆಂದು ಕರೆಯಲಾಗಿದೆ. ಮಂತ್ರವು ವಾಚಕ (ಶಬ್ದ) ಮತ್ತು ವಾಚ್ಯ(ಅರ್ಥ)ವೆಂದು ಎರಡು ವಿಧವಾಗಿದೆ. ವಾಚಕವು ವರ್ಣರೂಪದಲ್ಲಿದ್ದರೆ, ವಾಚ್ಯವು ಸಾಕ್ಷಾತ್ ಪರಮಶಿವನ ಸ್ವರೂಪದ್ದಾಗಿದೆ. ಮಂತ್ರ ಮತ್ತು ದೇವತೆಗಳ ಸಮಾಗಮದಿಂದ ಕೂಡಿರುವುದರಿಂದ ಋಷಿಗಳು ಅದನ್ನು ದ್ವಿವಿಧವೆಂದು ಹೇಳಿದ್ದಾರೆ.”

“ಮನನಾತ್ ತ್ರಾಯತೇ ಇತಿ ಮಂತ್ರಃ, ಪಾಣೌ ಮಂತ್ರಂ ಪಾಣಿಮಂತ್ರಂ” ಎಂಬ ವ್ಯುತ್ಪತ್ತಿಯಂತೆ ಹಸ್ತಪೀಠದಲ್ಲಿರಿಸಿ ಮನನ (ಯುಕ್ತಿಯಿಂದ ಧ್ಯಾನ ಮಾಡುವುದು) ಮಾಡುವುದರಿಂದ ರಕ್ಷಣೆಯನ್ನು ಮಾಡುವ ಯೋಗ್ಯತೆಯ ಕಾರಣದಿಂದ ಅದನ್ನು ‘ಮಂತ್ರ’ ಎಂದು ಕರೆಯಲಾಗಿದೆ. ಆ ರಕ್ಷಾರೂಪ ಮಂತ್ರವು ವಾಚಕ (ಶಬ್ದ) ಮತ್ತು ವಾಚ್ಯ(ಅರ್ಥ)ವೆಂದು ಎರಡು ವಿಧ. ಅವುಗಳಲ್ಲಿ ವಾಚಕ(ಮಂತ್ರ)ವು ‘ಓಂ ನಮಃ ಶಿವಾಯ’ ಎಂಬ ಅಕ್ಷರರೂಪದಲ್ಲಿದೆ ಮತ್ತು ವಾಚ್ಯ(ಲಿಂಗ)ವು ಪರಮಶಿವನ ರೂಪದಲ್ಲಿದೆ. ಹೀಗೆ ಅಕ್ಷರರೂಪೀ ಮಂತ್ರ (ನಮಃ ಶಿವಾಯ) ಮತ್ತು ಅರ್ಥರೂಪೀ

---

[೨೩೫] ಸಿ.ಶಿ, ೬.೬೧

[೨೩೬] ತೈತ್ತಿರೀಯ ಆರಣ್ಯಕ, ೧೦.೧೬

[೨೩೭] ಲಿ.ಚ, ಪು. ೪೬

ದೇವತೆ (ಪರಶಿವ) ಇವರ ಅಭೇದವನ್ನು ಮಹರ್ಷಿಗಳು ಹೇಳುತ್ತಾರೆ" ಎಂದು ವ್ಯಾಸರ ನಿರ್ವಚನದಿಂದಲೂ,

> ನಮಃ ಪೀಠಮಿತಿ ಪ್ರೋಕ್ತಂ ಶಿಕಾರಂ ಮಧ್ಯಮೀರಿತಮ್।
> ವಾಕಾರಂ ಗೋಮುಖಂ ವೃತ್ತಂ ಯಕಾರಂ ಗೋಲಕಂ ಸ್ಮೃತಮ್।
> ಓಂಕಾರಂ ಲಿಂಗಮಾಖ್ಯಾತಂ ಷಡ್ವರ್ಣಂ ಲಿಂಗಮುಚ್ಯತೇ॥[೨೩೮]

" 'ನಮಃ' ಎಂಬ ಎರಡು ಅಕ್ಷರಗಳು ಶಿವಲಿಂಗದ ಪೀಠ; 'ಶಿ' ಎಂಬ ಅಕ್ಷರವೇ ಲಿಂಗದ ಮಧ್ಯಭಾಗ; 'ವಾ' ಅಕ್ಷರವೇ ಗೋಮುಖ; 'ಯ' ಅಕ್ಷರವೇ ಗೋಲಕ ಮತ್ತು 'ಓಂ'ಕಾರವು ಲಿಂಗವೆಂದು ಪರಿಗಣಿಸಲ್ಪಟ್ಟಿದೆ. ಹೀಗೆ (ಓಂ ನಮಃ ಶಿವಾಯ) ಎಂಬ ಆರು ವರ್ಣಗಳು 'ಲಿಂಗ'ವೆಂದು ಕರೆಯಲ್ಪಟ್ಟಿವೆ" -ಎಂಬ ಸಿದ್ಧಾಂತ ಸಾರಾವಲಿಯ ಮಾತುಗಳಿಂದ ಪಂಚಾಕ್ಷರಮಂತ್ರ - ಶಿವಲಿಂಗಗಳ ಅಭೇದವು ಪ್ರತಿಪಾದಿತವಾಯಿತು. ಆದುದರಿಂದ ವಾಚಕ (ಶಬ್ದ=ಓಂ ನಮಃ ಶಿವಾಯ) ರೂಪದಿಂದ ಮುಖದಲ್ಲಿರುವ ಮಂತ್ರವೇ ವಾಚ್ಯ (ಅರ್ಥ=ಲಿಂಗ) ರೂಪದಿಂದ ಹಸ್ತಗಳಲ್ಲಿದೆ ಎಂಬ ಅರ್ಥ ಬರುವುದರಿಂದ 'ಪಾಣಿಮಂತ್ರ' ಎಂದರೆ 'ಇಷ್ಟಲಿಂಗ' ಎಂಬ ಅರ್ಥವು ಬರುತ್ತದೆ.[೨೩೯] ಮತ್ತು ಅದೇ ರೀತಿ ಮಹಾಮಹೋಪಾಧ್ಯಾಯ ಶಿವಕುಮಾರ ಶಾಸ್ತ್ರಿಗಳು ಹೀಗೆ ಹೇಳಿದ್ದಾರೆ- 'ಪಾಣಿಮಂತ್ರ' ಎಂಬಲ್ಲಿ 'ಮಂತ್ರ' ಎಂದರೆ 'ಲಿಂಗ' ಎಂದರ್ಥ. ಪಾಣೌ ಮಂತ್ರಮಿತಿ (ಕೈಗಳಲ್ಲಿ ಮಂತ್ರ) ಎಂಬ ವ್ಯುತ್ಪತ್ತಿಯಂತೆ ಹಸ್ತದಲ್ಲಿರುವ ಲಿಂಗವು ಪಾಣಿಮಂತ್ರ ಎಂಬ ಪದದಿಂದ ಹೇಳಲ್ಪಟ್ಟಿದೆ. ಮತ್ತು ಪಾಣಿಯಲ್ಲಿನ ಲಿಂಗವನ್ನು ಶರೀರದಲ್ಲಿ ಧರಿಸದಿದ್ದಲ್ಲಿ ಮೇಲಿನ ವ್ಯುತ್ಪತ್ತಿಯ ಅರ್ಥವು ದೊರೆಯುವುದಿಲ್ಲ ಎಂದು ಅರ್ಥಾಪತ್ತಿ ಪ್ರಮಾಣದಿಂದ ಲಿಂಗಧಾರಣವು ಕಲ್ಪಿಸಲ್ಪಟ್ಟಿದೆ.[೨೪೦]

ಮೇಲಿನ ಮಂತ್ರಕ್ಕೆ ಲಿಂಗಧಾರಣ ಪರವಾದ ಅರ್ಥವು ಮಹರ್ಷಿ ವ್ಯಾಸರಿಗೂ ಸಹ ಸಮ್ಮತವಾಗಿದೆ. ಆದುದರಿಂದಲೇ ಅವರೂ ಸಹ-

> ಯಜುರಪ್ಯಾಹ ಸರ್ವಂ ವೈ ಲಿಂಗಂ ಸ್ಥಾಪಯತೀತಿ ಚ।
> ತಸ್ಮಾದ್ಧಾರ್ಯಂ ಮಹಾಲಿಂಗಂ ಪಾಣಿಮಂತ್ರೇತಿ ಮಂತ್ರತಃ॥
> ಪಾಣೌ ಲಿಂಗಂ ವಿನಿಕ್ಷಿಪ್ಯ ದೀಕ್ಷಾಕಾಲೇ ಗುರುಃ ಶಿವಮ್।
> ಯೇನ ಸ್ತುವತಿ ತನ್ಮಂತ್ರಂ ಪಾಣಿಮಂತ್ರಂ ವದಂತಿ ಹಿ॥[೨೪೧]

---

[೨೩೮] ಲಿ.ಚ, ಪೃ. ೪೬

[೨೩೯] ಲಿಂಗಧಾರಣಚಂದ್ರಿಕಾ, ಶರತ್ ಟೀಕಾ, ಪೃ. ೬೨-೬೩

[೨೪೦] ಹೀಗೆ ವಾಚಕರೂಪದ " "ಓಂ ನಮಃ ಶಿವಾಯ" ಎಂಬ ಮಂತ್ರವನ್ನು ಬಾಯಿಯಲ್ಲಿ ಪಠಿಸುವಂತೆ ವಾಚ್ಯರೂಪವಾದ ಮಂತ್ರ(ಇಷ್ಟಲಿಂಗ)ವನ್ನು ಪಾಣಿ ಅಂದರೆ ಹಸ್ತಪೀಠದಲ್ಲಿಟ್ಟು ಮನನ ಮಾಡಿದರೆ, ಸಾಧಕನ ಮನೋಬುದ್ಧಿಗಳ ರಕ್ಷಣೆಯಾಗುವ ಕಾರಣ ಇಷ್ಟಲಿಂಗಕ್ಕೆ ವೇದವು 'ಪಾಣಿಮಂತ್ರಮ್' ಎಂಬ ಶಬ್ದಪ್ರಯೋಗ ಮಾಡಿದೆ." -ಸಿ.ಶಿ. ಪ್ರವಚನ ಪ್ರಭೆ, ಪೃ. ೧೬೩

[೨೪೧] ಲಿಂಗಪುರಾಣ, ೨.೨೧.೧೦೩-೧೦೫

"ಲಿಂಗಧಾರಣೆಯನ್ನು ಕುರಿತು ಯಜುರ್ವೇದವೂ ಸಹ ಹೇಳಿದೆ. ಆದುದರಿಂದ ಪಾಣಿಮಂತ್ರವೆಂಬ ಮಂತ್ರದಿಂದ ಮಹಾಲಿಂಗವನ್ನು ಧರಿಸತಕ್ಕದ್ದು. ದೀಕ್ಷಾ ಸಂದರ್ಭದಲ್ಲಿ ಶ್ರೀಗುರುವು ಮಂಗಳಕರವಾದ ಮಹಾಲಿಂಗವನ್ನು ಕರಪೀಠದಲ್ಲಿ ಸ್ಥಾಪಿಸಿ, ಆ ಮಂತ್ರವನ್ನು ಪಠಿಸುವುದರಿಂದ ಅದನ್ನು 'ಪಾಣಿಮಂತ್ರ'ವೆಂದು ಕರೆಯಲಾಗಿದೆ."

ಈ ರೀತಿಯಾಗಿ ಸ್ಪಷ್ಟವಾಗಿ "ಪಾಣಿಮಂತ್ರಮ್" ಎಂಬ ಪದಗಳಿಂದ ಲಿಂಗಧಾರಣೆಯ ಅರ್ಥವನ್ನು ಕ್ರಮಬದ್ಧಗೊಳಿಸಿದ್ದಾರೆ.

ಗ್ರಂಥಗೌರವಭಯದಿಂದ ಲಿಂಗಧಾರಣಸಿದ್ಧಾಂತವು ವೇದಸಂಮ್ಮತ ವಾದದ್ದೆಂದು ದಿಗ್ದರ್ಶನ ಮಾತ್ರವಾಗಿ ಮಾಡಲ್ಪಟ್ಟಿತು. ವಿಶೇಷಾವಧಾರಣೆಗೋಸ್ಕರ ಜಿಜ್ಞಾಸುಗಳು ನಂದಿಕೇಶ್ವರ ಶಿವಾಚಾರ್ಯರ ಲಿಂಗಧಾರಣಚಂದ್ರಿಕೆ, ಶಿವಪೂಜಾ ಶಿವಲಿಂಗಶಿವಯೋಗೀಂದ್ರರ ಶ್ರುತಿಸಾರಭಾಷ್ಯಂ, ಭವಾನೀಶಂಕರಾರಾಧ್ಯರ ಲಿಂಗಧಾರಣದೀಪಿಕೆ, ಆರಾಧ್ಯ ವೀರೇಶ್ವರಶಾಸ್ತ್ರಿಗಳ ವೀರಶೈವಾನ್ವಯಚಂದ್ರಿಕೆ, ಮರಿತೋಂಟದಾರ್ಯರ ವೀರಶೈವಾನಂದಚಂದ್ರಿಕೆ, ಶ್ರೀಪತಿಪಂಡಿತಾರಾಧ್ಯರ ಶ್ರೀಕರಭಾಷ್ಯ, ಇವಟೂರಿ ನಂದೀಕೇಶ್ವರ ಶಾಸ್ತ್ರಿಗಳ ವೀರಶೈವಾಷ್ಟವರಣ ಪ್ರಮಾಣಾಷ್ಟಕಾಭರಣ ಇತ್ಯಾದಿ ಗ್ರಂಥಗಳನ್ನು ಅವಲೋಕಿಸಬಹುದು. ಹೀಗೆ ಲಿಂಗಧಾರಣೆಯು ಪರಮಶಿವ ಪ್ರಣೀತ ವೇದವಿಹಿತವಾದ್ದರಿಂದ ವೈದಿಕಮತ ಸಮ್ಮತವೆಂದು ಎಲ್ಲ ವೈದಿಕರಿಂದಲೂ ಸಹ ಅಂಗೀಕರಿಸಬೇಕು.

ಲಿಂಗಧಾರಣೆಗೆ ಪಾಲಿಸಬೇಕಾದ ವಿಧಿವಿಚಾರಗಳು

ಲಿಂಗಧಾರಣೆಯು ವೈದಿಕವೆನ್ನುವುದಾರೆ ವೇದದಲ್ಲಿ ಅದರ ವಿಧಿಯೇನು? ಎಂದು ಆಕ್ಷೇಪಿಸಿದರೆ, ಹೀಗೆ ಉತ್ತರಿಸಲಾಗಿದೆ. ಅಪೂರ್ವವಿಧಿ, ನಿಯಮವಿಧಿ ಮತ್ತು ಪರಿಸಂಖ್ಯಾವಿಧಿ ಎಂದು ವಿಧಿಯು ಮೂರು ವಿಧ. ಅವುಗಳಲ್ಲಿ ತ್ರಿಕಾಲಗಳಲ್ಲಿಯೂ ಸಹ ಯಾವುದೇ ರೀತಿಯಲ್ಲಿಯೂ ಅಪ್ರಾಪ್ತವಾದ ಪ್ರಾಪ್ತಿಫಲ ಅಪೂರ್ವವಿಧಿ. ಉದಾಹರಣೆಗೆ 'ವ್ರೀಹೀನ್ ಪ್ರೋಕ್ಷತಿ' (ಭತ್ತವನ್ನು ಪ್ರೋಕ್ಷಿಸುತ್ತಾನೆ.) ಪ್ರತ್ಯಕ್ಷದಿಂದಾಗಲೀ ಅಥವಾ ಅಪ್ರತ್ಯಕ್ಷದ ಮೂಲಕವಾಗಲೀ ಅದು ಸಿದ್ಧಿಸುವುದಿಲ್ಲ.

ಪ್ರಸ್ತುತದಲ್ಲಿ ಪ್ರಾಪ್ತವಾದುದಕ್ಕೆ ದೊರೆಯದ ಅಂಶವನ್ನು ಪರಿಪೂರ್ಣ ಮಾಡುವ ಅಂಶವುಳ್ಳದ್ದು ನಿಯಮವಿಧಿ ಎನಿಸುತ್ತದೆ. ಅದು ಹೇಗೆಂದರೆ- 'ವ್ರೀಹೀನ್ ಅವಹಂತಿ' ಎಂಬಲ್ಲಿ ಭತ್ತದಿಂದ ಅಕ್ಕಿಯನ್ನು ಪಡೆಯಲು ಉಗುರಿನಿಂದಲೂ ಹೊಟ್ಟನ್ನು ತೆಗೆಯಬಹುದು ಎಂಬುದು ಪ್ರಾಪ್ತವಾದಾಗ, ಅದರಲ್ಲಿ ಅವಹನಕ್ರಿಯೆಯ ಅಂಶವನ್ನು ಪೂರ್ತಿಮಾಡುವ ಫಲವುಳ್ಳದ್ದು ನಿಯಮವಿಧಿ.

ಕುಟ್ಟುವ ಮೂಲಕವೇ ಅಕ್ಕಿಯನ್ನು ತೆಗೆಯಬೇಕೆಂಬುದು (ಅವಾಹನನ) ನಿಯಮವಿಧಿಯು. ಅಲ್ಲಿಯಾದರೂ ಅಥವಾ ಬೇರೆ ಕಡೆ ಆಗಬಹುದು ಎಂದು ಸಮುಚ್ಚಯ ಪ್ರಾಪ್ತವಾದಾಗ ಯಾವುದಾದರೂ ಒಂದನ್ನು ಎಲ್ಲಿ ವಿಧಿಸುತ್ತದೆಯೋ ಅದು ಪರಿಸಂಖ್ಯಾ ವಿಧಿಯು. ಅದು ಹೇಗೆಂದರೆ- "ಪಂಚಪಂಚನಖಾ ಭಕ್ಷ್ಯಾಃ"

ಎಂಬಲ್ಲಿ "ಶಶಕಃ ಶಲ್ಯಕೋ ಗೋಧಾ ಖಡ್ಗೀ ಕೂರ್ಮಸ್ತು ಪಂಚಮಃ" ಎಂಬ ವಚನದಿಂದ ಇವುಗಳಲ್ಲಿ ಯಾವುದಾದರೊಂದರ ಪಂಚನಖಗಳ ಭಕ್ಷಣ ಪ್ರಾಪ್ತಿಯಾದಾಗ ಈ ಐದೇ ಐದು ಉಗುರುಗಳುಳ್ಳ ಪ್ರಾಣಿಗಳನ್ನು ತಿನ್ನಬೇಕು ಬೇರೆಯದನ್ನಲ್ಲ ಎಂಬುದು ಪರಿಸಂಖ್ಯಾವಿಧಿಯು. ಪಕ್ಷಾಂತರ ಪ್ರಾಪ್ತವಾದಾಗ ಕುಟ್ಟುವುದು ಎಂಬ ವಿಧಿಯು ನಿಯಮವಾಗುವುದರಿಂದಲ್ಲ. ನಿತ್ಯವಾಗಿ ಪ್ರಾಪ್ತವಾದದ್ದನ್ನು ವಿಧಿಸುವುದರಿಂದ ನಿಯಮವಿಧಿಗೂ ಪರಿಸಂಖ್ಯಾ ವಿಧಿಗೂ ಸ್ವರೂಪದಿಂದ ಭೇದವಿದ್ದರೂ ಫಲವು ಒಂದೇ ಎಂದು ಹೇಳುವಂತಿಲ್ಲ. ನಿಯಮವಿಧಿಯಲ್ಲಿ ಇನ್ನೊಂದರ ನಿವೃತ್ತಿಯು ಅರ್ಥದಿಂದ ಸಿದ್ಧಿಯಾಗುತ್ತದೆ. ಕುಟ್ಟುವ ನಿಯಮವಿಲ್ಲದಿದ್ದರೂ ಉಗುರಿನಿಂದ ಬಿಡಿಸುವುದರಿಂದ ಕೆಲಸವು ಪೂರ್ತಿಯಾಗುವುದಿಲ್ಲ. ಆದುದರಿಂದ ಅಪ್ರಾಪ್ತಾಂಶ ಪರಿಪೂರ್ಣವೇ ನಿಯಮವಿಧಿಯಲ್ಲಿ ಮುಖ್ಯವಾಗಿದೆ. ಪರಿಸಂಖ್ಯಾ ವಿಧಿಯಲ್ಲಾದರೊ ಇನ್ನೊಂದರ ನಿವೃತ್ತಿಯು ಸಾಕ್ಷಾತ್ತಾಗಿ ಸಿದ್ಧವಾಗುತ್ತದೆ. ಏಕೆಂದರೆ ಅಲ್ಲಿ ಬೇರೆ ವಿಧಾನದ ಸಾಪೇಕ್ಷತ್ವ ಇಲ್ಲದಿರುವುದರಿಂದ ವಾರ್ತಿಕಕಾರರು ಹೀಗೆ ಹೇಳಿದ್ದಾರೆ:

ವಿಧಿರತ್ಯಂತಮಪ್ರಾಪ್ತೌ ನಿಯಮಃ ಪಾಕ್ಷಿಕೇ ಸತಿ।
ತತ್ರ ಚಾನ್ಯತ್ರ ಚ ಪ್ರಾಪ್ತೌ ಪರಿಸಂಖ್ಯೇತಿ ಗೀಯತೇ॥[೨೪೨]

"ಯಾವುದರ ಬಗ್ಗೆ ಏನೂ ಪ್ರಾಪ್ತವಾಗಿರುವುದಿಲ್ಲವೋ ಅದನ್ನು ಹೇಳುವುದು ವಿಧಿಯೆನಿಸುತ್ತದೆ. ಪಾಕ್ಷಿಕವಾಗಿ ಪ್ರಾಪ್ತವಾದಾಗ ನಿಯಮವಿಧಿ ಬರುತ್ತದೆ. ಅಲ್ಲೋ ಇಲ್ಲೋ ಎಂಬ ಉಭಯಪ್ರಾಪ್ತಿಯಾದಾಗ ಪರಿಸಂಖ್ಯಾವಿಧಿಯನ್ನೂ ಹೇಳುತ್ತಾರೆ."

ಹೀಗೆ ವಿಧಿಯ ವಿಧಾನಗಳು ಮೂರು ರೂಪದಲ್ಲಿ ವಿಭಕ್ತವಾದಾಗ ಲಿಂಗಧಾರಣೆಯ ವಿಷಯದಲ್ಲಿ ಅಪೂರ್ವವಿಧಿಯು ಬರುವುದಿಲ್ಲ. ಏಕೆಂದರೆ ಅದನ್ನು "ಪ್ರಾಣಿಮಂತ್ರಂ ಪವಿತ್ರಮ್",[೨೪೩] "ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ",[೨೪೪] "ಯಾತೇ ರುದ್ರಾ"[೨೪೫] ಇತ್ಯಾದಿ ಬಹಳ ಶ್ರುತಿಗಳು ವಿಧಿಸಲ್ಪಟ್ಟಿರುವುದರಿಂದ ಅದು ನಿಯಮ ವಿಧಿಯೂ ಅಲ್ಲ. ಏಕೆಂದರೆ ಶಿವಲಿಂಗವಲ್ಲದೆ ಭಸ್ಮ, ರುದ್ರಾಕ್ಷ ಮುಂತಾದವುಗಳ ಧಾರಣೆಯು ಇರುವುದರಿಂದ. ಅದು ಪರಿಸಂಖ್ಯಾವಿಧಿಯೂ ಕೂಡ ಅಲ್ಲ. ಲಿಂಗಧಾರಣಾದಿಗಳನ್ನು ಮಾಡಬೇಕೋ, ಮಾಡಬೇಡವೋ ಎಂಬ ರೀತಿಯ ಸಮುಚ್ಚಯದ ಪ್ರಸಂಗವು ಇಲ್ಲದಿರುವುದರಿಂದ. ಆದುದರಿಂದ ಲಿಂಗಧಾರಣೆಯು ವೈದಿಕವಲ್ಲ ಎಂದು ಹೇಳಿದ್ದಾದರೆ, ಅದು ಸರಿಯಲ್ಲ. ಏಕೆಂದರೆ ಮೂರೂ ವಿಧಿಗಳಿಂದ ಅದು ಸಿದ್ಧವಾಗುತ್ತದೆ.

---

[೨೪೨] ತಂತ್ರವಾರ್ತಿಕಮ್, ೧.೧.೪

[೨೪೩] ತೈ.ಆ, ೧೦.೧೬

[೨೪೪] ಋಗ್ವೇದ, ೯-೮೩-೧

[೨೪೫] ತೈ.ಬ್ರಾ, ೪-೫-೧-೧

ಶ್ರೀಪತಿ ಪಂಡಿತಾರಾಧ್ಯರು- "ಅಮೃತಸ್ಯ ದೇವಧಾರಣೋ ಭೂಯಾಸಮ್" ಎಂಬಲ್ಲಿ ಅಪೂರ್ವವಿಧಿಯನ್ನೂ, ಲಿಂಗಧಾರಣದ ವಿಷಯದಲ್ಲಿ "ಸರ್ವಲಿಂಗಂ ಸ್ಥಾಪಯಿತಿ" ಮುಂತಾದ ಬಹು ಶ್ರುತಿಗಳಿಂದ ವಿಧಾನ ಮಾಡಲ್ಪಟ್ಟಿರುವುದರಿಂದ ಅಪೂರ್ವವಿಧಿಯೂ ಅಲ್ಲವೆಂದು ಆಕ್ಷೇಪಿಸಿದರೆ, ಉಪಜೀವ್ಯ-ಉಪಜೀವಕ ಸಂಬಂಧ ರೂಪದ ನ್ಯಾಯದಿಂದ "ಸರ್ವಲಿಂಗಂ ಸ್ಥಾಪಯತಿ" ಮುಂತಾದ ವಾಕ್ಯಗಳಿಗೆ ಫಲವನ್ನು ಧರಿಸುವ ಶಬ್ದಪ್ರಯೋಗವಿಲ್ಲದಿರುವುದರಿಂದ ಉಪಜೀವಿತ್ವವಿದೆ. "ಅಮೃತಸ್ಯ ದೇವಧಾರಣೋ ಭೂಯಾಸಮ್" ಎಂಬಲ್ಲಿ ಮೋಕ್ಷವನ್ನೇ ಫಲವಾಗಿವುಳ್ಳ ಲಿಂಗಧಾರಣೆಯ ವಿಧಾನವನ್ನು ಹೇಳಿರುವುದರಿಂದ ಅದಕ್ಕೆ ಉಪಜೀವತ್ವವಿದೆ. ಆದುದರಿಂದ ದೋಷವಿಲ್ಲ.

ಇಲ್ಲಿ ನಿಯಮವಿಧಿಯೂ ಇದೆ. ತಂತ್ರಶಾಸ್ತ್ರದಲ್ಲಿ ಹೇಳಿರುವ ತಪ್ತಲಿಂಗ, ಶೂಲ, ಡಮರು, ಶಂಖ, ಚಕ್ರಗಳ ಮುದ್ರಣದ ನಿಷೇಧಪೂರ್ವಕವಾಗಿ ಶ್ರುತಿಸಂಬದ್ಧವಾದ ಶಿಖೆ, ಸೂತ್ರ, ಭಸ್ಮ, ರುದ್ರಾಕ್ಷ, ಲಿಂಗಧಾರಣೆಗಳನ್ನು ಹೇಳಿರುವುದರಿಂದ. ಹಾಗೆಯೇ ತಂತ್ರದಲ್ಲಿ ಹೇಳಿದ ತಪ್ತಲಿಂಗ, ಶೂಲ, ಡಮರು ಇತ್ಯಾದಿಗಳು ನಿಷೇಧಪೂರ್ವಕವಾಗಿ ಶ್ರುತಿಸಂಬದ್ಧವಾದ ಶ್ರೌತ ಶಿಖಾಸೂತ್ರ, ಭಸ್ಮ, ರುದ್ರಾಕ್ಷ, ಲಿಂಗಧಾರಣೆಯನ್ನು ಸ್ವೀಕರಿಸುವುದರಿಂದ ಪರಿಸಂಖ್ಯಾವಿಧಿಯೂ ಇದೆ. "ಹರಿಕೇಶಾಯೋಪವೀತಿನೇ", "ರುದ್ರಃ ಶಿಖಾ"[೨೪೬] ಇತ್ಯಾದಿ ಶ್ರುತಿವಾಕ್ಯಗಳಲ್ಲಿ ಭಸ್ಮ ರುದ್ರಾಕ್ಷಿಗಳನ್ನು ಧರಿಸಿರುವ ಶಿವನಂತೆಯೇ ಶಿಖಾಸೂತ್ರಧಾರಣವನ್ನೂ ಹೇಳಿರುವುದರಿಂದ ಅವುಗಳಿಗೆ (ಶಿವ ಲಾಂಛನತ್ವವು ಸಿದ್ಧವಾಗುತ್ತದೆ. "ಯಚ್ಛಂದಸಾಂ" ಇತ್ಯಾದಿ ಲಿಂಗಧಾರಣೆಯನ್ನು ವಿಧಿಸುವ ಶ್ರುತಿವಾಕ್ಯಗಳು ಪರಮೇಶ್ವರನ ಅನುಗ್ರಹದಿಂದ ದೊರೆತ ಎಲ್ಲಾ ವೇದಾರ್ಥವನ್ನು ತಿಳಿದವರಾದ, ಸರ್ವಜ್ಞರಾದ ವ್ಯಾಸ, ದುರ್ವಾಸ, ರೇಣುಕ, ಶ್ವೇತ, ಉಪಮನ್ಯು, ದಧೀಚಿ, ಅಗಸ್ತ್ಯ ಮುಂತಾದ ಪೂರ್ವಾಚಾರ್ಯರಿಂದ ಲಿಂಗಧಾರಣಪರವಾಗಿ ವ್ಯಾಖ್ಯಾನಿಸಲಾಗಿರುವುದರಿಂದ ನಿನಗೆ ಅವುಗಳು ಭಾರ. ನಾವಾದರೋ ಶ್ರುತಿ, ಯುಕ್ತಿ ಮತ್ತು ಅನುಭವಗಳನ್ನು ಹೇಳುವವರು, ಬೌದ್ಧಾದಿಗಳಂತೆ ಯುಕ್ತಿಮಾತ್ರವನ್ನು ಅವಲಂಬಿಸುವವರಲ್ಲ. ಈ ರೀತಿಯಾಗಿ ಲಿಂಗಧಾರಣೆಯು ಮೂರು ಬಗೆಯ ವಿಧಿಗಳಿಂದಲೂ ಸಾಧಿಸಲ್ಪಟ್ಟಿರುವುದರಿಂದ ಇಷ್ಟಲಿಂಗಧಾರಣೆಯು ವೈದಿಕವು ಎಂಬ ವಿಷಯದಲ್ಲಿ ಲೇಶಮಾತ್ರವೂ ಸಂದೇಹವಿಲ್ಲ.

ಆಗಮಗಳು ಮತ್ತು ಅವುಗಳಿಗೆ ಸಮ್ಮತವಾದ ಲಿಂಗಧಾರಣೆ

ತಾಂತ್ರಿಕ-ವೈದಿಕವೆಂಬ ವೀರಶೈವ ಸಿದ್ಧಾಂತದಲ್ಲಿ ಸಿದ್ಧಾಂತ ಶಬ್ದವಾಚ್ಯಗಳಾದ ಕಾಮಿಕಾದಿ ವಾತುಲಾಂತಗಳಾದ ಇಪ್ಪತ್ತೆಂಟು ಆಗಮಗಳ ಉತ್ತರ ಭಾಗದಲ್ಲಿ ವೀರಶೈವ

---

[೨೪೬] ೨೪೬. ಬ್ರ.ಸೂ.ಶ್ರೀ, ೧-೧-೧, ಪು. ೩೨-೩೩

ಸಿದ್ಧಾಂತವು ಪ್ರತಿಪಾದಿತವಾಗಿದೆ.[೨೪೭] ವಿಪುಲವಾದ ಈ ಆಗಮ ಸಾಹಿತ್ಯವು ಇಲ್ಲಿಯವರೆಗೆ ಸಂಪೂರ್ಣವಾಗಿ ದೊರೆಯದಿರುವುದು ನಮ್ಮ ದೌರ್ಭಾಗ್ಯವೇ ಸರಿ. ಅಲ್ಲಲ್ಲಿ ಖಂಡ ಖಂಡವಾಗಿ ದೊರೆತ ಭಾಗಗಳಲ್ಲಿ ವೀರಶೈವ ಲಿಂಗಧಾರಣ ಸಿದ್ಧಾಂತವು ಪ್ರತಿಪಾದಿತವಾಗಿರುವುದು ದೊರೆಯುತ್ತದೆ. ಅದನ್ನೇ ಇಲ್ಲಿ ಆಧಾರಸಹಿತವಾಗಿ ನಿರೂಪಿಸಲಾಗುವುದು. ಹೇಗೆಂದರೆ-

ನ ವೀರಶೈವಸದೃಶಂ ಮತಮಸ್ತಿ ಜಗತ್ತ್ರಯೇ।
ಸರ್ವಭೋಗಪ್ರದಂ ಪುಣ್ಯಂ ಶಿವಸಾಯುಜ್ಯದಾಯಕಮ್॥
ಯಸ್ಯ ಭಸ್ಮ ಲಲಾಟೇಽಸ್ತಿ ಕಂಠೇ ಲಿಂಗಂ ಮದಾತ್ಮಕಮ್।
ರುದ್ರಾಕ್ಷಧಾರಣಂ ದೇಹೇ ಸೋಽಹಂ ದೇವಿ ನ ಸಂಶಯಃ॥[೨೪೮]

ಗುರುಣಾ ದತ್ತಲಿಂಗಂ ತು ಶಿವಮಂತ್ರೇಣ ಧಾರಯೇತ್।
ಮೂರ್ಧ್ನಿ ಕಂಠೇ ಭುಜೇ ಹಸ್ತೇ ಹೃತ್ಸ್ಥಲೇ ನಾಭಿಮಂಡಲೇ।
ಏತೇಷಾಮೇಕದೇಶೇ ತು ಧಾರಯೇತ್ ಶಿವಲಿಂಗಕಮ್।[೨೪೯]

ತನುತ್ರಯಗತಾನಾದಿಮಲತ್ರಯಮಸೌ ಗುರುಃ।
ದೀಕ್ಷಾತ್ರಯೇಣ ಸಂದಹ್ಯ ಲಿಂಗತ್ರಯಮುಪಾದಿಶೇತ್॥
ಶಿಷ್ಯಪಾಣಿತಲೇ ದತ್ತಾ ಯಾ ದೀಕ್ಷಾ ಸಾ ಕ್ರಿಯಾ ಭವೇತ್॥[೨೫೦]

ಏಕಕಾಲಂ ದ್ವಿಕಾಲಂ ವಾ ತ್ರಿಕಾಲಂ ವಾಪಿ ಶಾಂಕರೀ।
ಪೂಜಯೇನ್ನಿಯತಂ ಲಿಂಗಂ ಪ್ರಾಣಲಿಂಗಪರಾಯಣಃ॥
ಏವಂ ಯಃ ಕುರುತೇ ಭಕ್ತ್ಯಾ ನಿತ್ಯಮಾಪ್ರಾಣಸಂಚರಾತ್।
ವೀರಶೈವಃ ಸ ವಿಜ್ಞೇಯಃ ಸರ್ವಶೈವೋತ್ತಮೋತ್ತಮಃ॥[೨೫೧]

"ಸರ್ವಭೋಗಪ್ರದವೂ ಪುಣ್ಯಕರವೂ ಆದ ಶಿವಸಾಯುಜ್ಯವನ್ನು ನೀಡುವ ವೀರಶೈವ ಮತಕ್ಕೆ ಸಮಾನವಾದ ಬೇರೊಂದು ಮತವು ಮೂರು ಲೋಕಗಳಲ್ಲಿಯೂ ಇಲ್ಲ. ಯಾರ ಹಣೆಯಲ್ಲಿ ಭಸ್ಮ, ಕಂಠದಲ್ಲಿ ಇಷ್ಟಲಿಂಗ ಮತ್ತು ದೇಹದಲ್ಲಿ ರುದ್ರಾಕ್ಷಗಳನ್ನು ಧರಿಸಿದವನು ಸಾಕ್ಷಾತ್ ನನ್ನ (ಶಿವನ) ಸ್ವರೂಪನು. ಗುರುವಿನಿಂದ ಪ್ರಾಪ್ತವಾದ ಇಷ್ಟಲಿಂಗವನ್ನು ಶಿವಪಂಚಾಕ್ಷರೀ ಮಂತ್ರವನ್ನು ಪಠಿಸುತ್ತ ಮಸ್ತಕ, ಕಂಠ, ಭುಜ, ಹಸ್ತ, ಹೃದಯ ಹಾಗೂ ನಾಭಿಮಂಡಲ ಇವುಗಳಲ್ಲಿ ಯಾವುದಾದರೊಂದು ಸ್ಥಾನದಲ್ಲಿ ಧರಿಸಬೇಕು. ಶ್ರೀಗುರುವು ಮೂರು ವಿಧವಾದ ದೀಕ್ಷಾಸಂಸ್ಕಾರದಿಂದ ಶಿಷ್ಯನ ಸ್ಥೂಲ, ಸೂಕ್ಷ್ಮ ಮತ್ತು ಕಾರಣಶರೀರದಲ್ಲಿರುವ ಅನಾದಿಯಾದ ಕಾರ್ಮಿಕ, ಮಾಯಾ ಮತ್ತು

---

[೨೪೭] ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ।
ನಿರ್ದಿಷ್ಟಮುತ್ತರೇ ಭಾಗೇ ವೀರಶೈವಮತಂ ಪರಮ್॥ -ಸಿ.ಶಿ, ೫.೧೪

[೨೪೮] ಪಾರಮೇಶ್ವರ ತಂತ್ರ, ಪಟಲ ೧, ಶ್ಲೋಕ. ೪೨,೪೮

[೨೪೯] ವಾ.ಶು.ಆ, ೧೦.೩೫-೩೬

[೨೫೦] ಕಾ.ಆ, ಕ್ರಿ.ಪಾ, ೧.೧೦,೧೪

[೨೫೧] ಸೂ.ಆ, ಕ್ರಿ.ಪಾ, ೬,೫೧-೫೨

ಆಣವ ಮಲಗಳನ್ನು ಸುಟ್ಟು ಭಸ್ಮ ಮಾಡಿ, ಇಷ್ಟಲಿಂಗ, ಪ್ರಾಣಲಿಂಗ ಮತ್ತು ಭಾವಲಿಂಗಗಳನ್ನು ಅನುಗ್ರಹಿಸುತ್ತಾನೆ. ಶಿಷ್ಯನ ಹಸ್ತತಲದಲ್ಲಿ ಪ್ರಾಪ್ತವಾದ ಲಿಂಗವೇ ಇಷ್ಟಲಿಂಗ, ಆ ದೀಕ್ಷೆಯೇ ಕ್ರಿಯಾದೀಕ್ಷೆ. ಸದ್ಗುರುವಿನಿಂದ ಪ್ರಾಪ್ತವಾದ ಇಷ್ಟಲಿಂಗವನ್ನು ತನ್ನ ದೇಹದಲ್ಲಿ ಪ್ರಾಣ ಇರುವವರೆಗೆ ಪ್ರತಿದಿನ ಒಂದು ವೇಳೆ, ಎರಡು ವೇಳೆ ಅಥವಾ ಮೂರು ವೇಳೆ ಹೀಗೆ ಭಕ್ತಿಯಿಂದ ನಿಯಮಿತವಾಗಿ ಪೂಜಿಸುವವನೇ ವೀರಶೈವನು. ಇವನು ಎಲ್ಲ ಶೈವರಲ್ಲಿ ಉತ್ತಮೋತ್ತಮನು.”

ಈ ರೀತಿಯಾಗಿ ಪಾರಮೇಶ್ವರತಂತ್ರ, ವಾತುಲಶುದ್ಧಾಗಮ, ಕಾರಣಾಗಮ, ಸೂಕ್ಷ್ಮಾಗಮಗಳಲ್ಲಿ ವೀರಶೈವರ ದೀಕ್ಷಾವಿಧಿ, ದೀಕ್ಷೆಯಿಂದ ಪ್ರಾಪ್ತವಾದ ಇಷ್ಟಲಿಂಗ ಧಾರಣೆ, ಇಷ್ಟಲಿಂಗ ಪೂಜಾವಿಧಿ ಇತ್ಯಾದಿ ವಿಷಯಗಳನ್ನು ವಿಸ್ತಾರವಾಗಿ ಪ್ರತಿಪಾದಿಸಲಾಗಿದೆ. ಜಿಜ್ಞಾಸುಗಳು ಉಪಲಬ್ಧವಿರುವ ಆಗಮಸಾಹಿತ್ಯವನ್ನು ಅವಲೋಕಿಸಬಹುದು.

ಪುರಾಣಗಳು ಮತ್ತು ಅವುಗಳು ಪ್ರತಿಪಾದಿಸಿರುವ ಲಿಂಗಧಾರಣೆ

ಮಹರ್ಷಿ ವ್ಯಾಸರಿಂದ ರಚಿತವಾದ ಹದಿನೆಂಟು ಪುರಾಣಗಳು ಪ್ರಸಿದ್ಧವಾಗಿವೆ. ಆ ಮಹರ್ಷಿಗಳು ವೀರಶೈವಾಚಾರ್ಯರಾದ ಘಂಟಾಕರ್ಣಶಿವಾಚಾರ್ಯರಿಂದ ಶಿವದೀಕ್ಷೆಯನ್ನು ಪಡೆದಿದ್ದರೆಂದು ಐತಿಹ್ಯವಿದೆ. ಆದುದರಿಂದ ಅವರು ಶಿವಪುರಾಣ, ಸ್ಕಂದಪುರಾಣ, ಲಿಂಗಪುರಾಣಾದಿಗಳಲ್ಲಿ ಸಂದರ್ಭಾನುಸಾರ ವೀರಶೈವ ಸಿದ್ಧಾಂತವನ್ನು ಮತ್ತು ವೀರಶೈವರ ಲಿಂಗಧಾರಣ ಪದ್ಧತಿಯನ್ನು ನಿರೂಪಿಸಿದ್ದಾರೆ. ಅದನ್ನು ಇಲ್ಲಿ ಸಂಕ್ಷಿಪ್ತವಾಗಿ ಪ್ರಸ್ತುತಪಡಿಸಲಾಗುವುದು. ಹೇಗೆಂದರೆ-

ವಿಭೂತ್ಯಭ್ಯರ್ಚನಂ ಕುರ್ಯಾದ್ವಿಭೂತ್ಯಾ ಚ ನಿವೇದಯೇತ್।
ಪೂಜಾಂ ಕೃತ್ವಾಽಥ ತಲ್ಲಿಂಗಂ ಶಿರಸಾ ಧಾರಯೇತ್ ಸದಾ।।[೨೫೨]

ಯಥೋಕ್ತಾಃ ಶಿವಧರ್ಮಾ ಹಿ ನಂದಿನಾ ಪರಿಕೀರ್ತಿತಾಃ।
ಶೈಲಾದೇನ ಮಹಾಭಾಗಾ ವಿಚಿತ್ರಾ ಲಿಂಗಧಾರಕಾಃ।।
ಶಿವಸ್ಯೋಪರಿ ಲಿಂಗಂ ತು ಧ್ರಿಯತೇ ಚ ಪುರಾತನೈಃ।
ಲಿಂಗೇನ ಸಹ ಪಂಚತ್ವಂ ಲಿಂಗೇನ ಸಹ ಜೀವಿತಮ್।।[೨೫೩]

ಧಾರಯೇದವಧಾನೇನ ಲಿಂಗಂ ಸದ್ಗುರುಣಾರ್ಪಿತಮ್।
ಪ್ರಮಾದಾತ್ ಪತಿತೇ ಲಿಂಗೇ ಪ್ರಾಣಾನಪಿ ಪರಿತ್ಯಜೇತ್।।
ಪತಿತೇ ಪ್ರಾಣಲಿಂಗೇ ಯೋ ಧತ್ತೇ ಪ್ರಾಣಾನ್ನರಾಧಮಃ।
ಸ ಚಾಂಡಾಲ ಇತಿ ಜ್ಞೇಯಃ ಶಿವದ್ರೋಹೀ ನ ತಂ ಸ್ಪೃಶೇತ್।।[೨೫೪]

ಆಚಾರಲಿಂಗಂ ಪ್ರಥಮಂ ಗುರುಲಿಂಗಂ ದ್ವಿತೀಯಕಮ್।
ಶಿವಲಿಂಗಂ ತೃತೀಯಂ ಸ್ಯಾಚ್ಚರಲಿಂಗಂ ಚತುರ್ಥಕಮ್।।

---

[೨೫೨] ಶಿವಪುರಾಣ, ವಿದ್ಯೇಶ್ವರಸಂಹಿತಾ, ೧೬.೫೬

[೨೫೩] ಸ್ಕಂದಪುರಾಣ, ಕೇದಾರಖಂಡ, ೭.೪೧-೪೨

[೨೫೪] ಸ್ಕಂದಪುರಾಣ, ಶಂಕರಸಂಹಿತಾ, ೮೩.೬೭-೬೮

ಪ್ರಸಾದಂ ಪಂಚಮಂ ಲಿಂಗಂ ಮಹಾಲಿಂಗಂ ತು ಷಷ್ಠಕಮ್।
ಭಕ್ತೋ ಮಾಹೇಶ್ವರಶ್ಚೈವ ಪ್ರಸಾದೀ ಪ್ರಾಣಲಿಂಗಕಃ॥
ಶರಣೈಕ್ಯಸ್ಥಲೈಃ ಷಡ್ಭಿಃ ಕ್ರಮಾಲ್ಲಿಂಗಮುದಾಹೃತಮ್।[೨೫೫]

“ಶಿವಪೂಜಾ ಕಾಲದಲ್ಲಿ ಶಿವಭಕ್ತನು ವಿಭೂತಿಯಿಂದ ತನ್ನ ಶರೀರವನ್ನು ಅಲಂಕರಿಸಿಕೊಂಡು ವಿಭೂತಿಯಿಂದಲೇ ಶಿವಲಿಂಗವನ್ನು ಪೂಜಿಸಬೇಕು. ಹೀಗೆ ಪೂಜೆಯಾದ ಬಳಿಕ ಆ ಶಿವಲಿಂಗವನ್ನು ಮಸ್ತಕದಲ್ಲಿ ಧರಿಸಬೇಕು. ಯಥೋಕ್ತವಾಗಿ ನಂದಿಯು ಶಿವಧರ್ಮವನ್ನು ಪ್ರಸಾರ ಮಾಡಿದನು. ಇಷ್ಟಲಿಂಗಧಾರಿಗಳು ಬಹಳ ವಿಚಿತ್ರ ರಾಗಿರುತ್ತಾರೆ. ಶಿಲೆಯಿಂದ ಮಾಡಲ್ಪಟ್ಟಿರುವ ಲಿಂಗವನ್ನು ನಮ್ಮ ಪೂರ್ವಜರು ತಮ್ಮ ಶರೀರದ ಮೇಲೆ ಧರಿಸಿದ್ದು, ಲಿಂಗದೊಂದಿಗೆ ಜೀವಿಸುತ್ತಾ ಇಷ್ಟಲಿಂಗದ ಜೊತೆಗೇ ಪ್ರಾಣವನ್ನು ತ್ಯಜಿಸುತ್ತಾರೆ. ಶ್ರೀಗುರುವಿನಿಂದ ಪ್ರಾಪ್ತವಾದ ಇಷ್ಟಲಿಂಗವನ್ನು ಅವಧಾನದಿಂದ ದೇಹದ ಮೇಲೆ ಧರಿಸಿಕೊಳ್ಳಬೇಕು. ಪ್ರಮಾದದಿಂದ ಲಿಂಗವು ದೇಹದಿಂದ ಬೇರ್ಪಟ್ಟರೆ ಪ್ರಾಣವನ್ನೇ ತ್ಯಜಿಸಬೇಕು. ಆ ರೀತಿಯಲ್ಲಿ ಪ್ರಾಣ ತ್ಯಜಿಸದವನು ಶಿವದ್ರೋಹಿಯೂ, ಚಾಂಡಾಲನೂ ಆಗಿರುತ್ತಾನೆ. ಅವನನ್ನು ಯಾರೂ ಮುಟ್ಟಬಾರದು. ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯಸ್ಥಲದ ಸಾಧಕರಿಗೆ ಕ್ರಮವಾಗಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗಗಳು ಉಪಾಸಿಸಲು ಯೋಗ್ಯವಾಗಿರುತ್ತವೆ.” ಈ ಮೇಲಿನ ವಚನಗಳ ಪರ್ಯಾಲೋಚನೆಯಿಂದ ವ್ಯಾಸ ಮಹರ್ಷಿಗಳು ಕೇವಲ ವೀರಶೈವ ಶಾಸ್ತ್ರಜ್ಞರಾಗಿರದೆ, ವೀರಶೈವಶಾಸ್ತ್ರದ ಮರ್ಮಜ್ಞರಾಗಿದ್ದರೆಂದು ತಿಳಿದುಬರುತ್ತದೆ.

ಮೇಲಿನ ಪುರಾಣಗಳ ವಿಶ್ಲೇಷಣೆಯನ್ನು ಗಮನಿಸಿದರೆ ವ್ಯಾಸ ಮಹರ್ಷಿಗಳ ಕಾಲದಲ್ಲಿಯೇ ವೀರಶೈವ ಧರ್ಮದ ಮುಖ್ಯ ಚಿಹ್ನೆಯಾದ ಇಷ್ಟಲಿಂಗಧಾರಣೆ ಹಾಗೂ ದೀಕ್ಷಾ, ಷಟ್‌ಸ್ಥಲದ ವಿಷಯಗಳು ಚೆನ್ನಾಗಿ ಪ್ರತಿಪಾದಿಸಲ್ಪಟ್ಟಿವೆ. ಲಿಂಗಪುರಾಣ, ಸ್ಕಂದಪುರಾಣ ಮತ್ತು ಶಿವಪುರಾಣಗಳಲ್ಲಿಯ ಅನೇಕ ಶ್ಲೋಕಗಳನ್ನು ಶಿವಯೋಗಿ ಶಿವಾಚಾರ್ಯರು ಯಥಾವತ್ತಾಗಿ ತಮ್ಮ ಸಿದ್ಧಾಂತ ಶಿಖಾಮಣಿ ಗ್ರಂಥದಲ್ಲಿ ಪ್ರಯೋಗಿಸಿದ್ದಾರೆ.

ಈ ಎಲ್ಲ ಸಮಾಲೋಚನೆಯಿಂದ ವೀರಶೈವರ ಇಷ್ಟಲಿಂಗಧಾರಣ ಸಿದ್ಧಾಂತವು ವೇದ - ಆಗಮ - ಉಪನಿಷತ್ - ಪುರಾಣ ಪ್ರಸಿದ್ಧವೆಂಬುದು ಸಾಮಾನ್ಯ ಜನರಿಗೂ ತಿಳಿಯುವಂತಾಗಿದೆ. ಪದವಾಕ್ಯಪ್ರಮಾಣಜ್ಞರಾದ ಶ್ರೀಮನ್ನಿರಂಜನ ಮರಿತೋಂಟದಾರ್ಯರು “ವೀರಶೈವಾನಂದಚಂದ್ರಿಕಾ” ಗ್ರಂಥದ ವಾದಕಾಂಡದ ತೃತೀಯ ಪ್ರಕರಣದಲ್ಲಿ ವೇದ - ಆಗಮ - ಪುರಾಣಾದಿ ಪ್ರಮಾಣಗಳಿಂದ ಇಷ್ಟಲಿಂಗಧಾರಣ ಸಿದ್ಧಾಂತವನ್ನು ಬಹು ಸ್ವಾರಸ್ಯವಾಗಿ ಪ್ರತಿಪಾದಿಸಿದ್ದಾರೆ. ಜಿಜ್ಞಾಸುಗಳು ಈ ಗ್ರಂಥವನ್ನು ಅವಲೋಕಿಸಬಹುದು.

---

[೨೫೫] ಲಿಂಗಪುರಾಣ, ಉತ್ತರಭಾಗ, ೨೧.೧೨೨-೧೨೪

ದೇವತೆಗಳು-ದಾನವರು-ಮಹರ್ಷಿಗಳು ಲಿಂಗಧಾರಿಗಳು

ವೇದ - ಆಗಮ - ಪುರಾಣಾದಿ ಶಾಸ್ತ್ರ ಪ್ರಸಿದ್ಧವಾದ ಈ ಇಷ್ಟಲಿಂಗಧಾರಣೆಯನ್ನು ಕೇವಲ ಮನುಷ್ಯರು ಮಾತ್ರವಲ್ಲ, ಬ್ರಹ್ಮಾದಿ ದೇವತೆಗಳೂ, ದಾನವರೂ ಮತ್ತು ಗೌತಮಾದಿ ಮಹರ್ಷಿಗಳೂ, ಲಕ್ಷ್ಮಿಯೇ ಮೊದಲಾದ ಶಕ್ತಿದೇವತೆಗಳೂ ತಮ್ಮ ಮಸ್ತಕದಲ್ಲಿ ಶಿವಲಿಂಗವನ್ನು ಧರಿಸಿದ್ದಾರೆ ಎಂಬ ವಿಷಯವು-

ಬ್ರಹ್ಮವಿಷ್ಣ್ವಾದಯೋ ದೇವಾ ಮುನಯೋ ಗೌತಮಾದಯಃ।
ಧಾರಯಂತಿ ಸದಾ ಲಿಂಗಮುತ್ತಮಾಂಗೇ ವಿಶೇಷತಃ॥
ಲಕ್ಷ್ಮ್ಯಾದಿಶಕ್ತಯಃ ಸರ್ವಾಃ ಶಿವಭಕ್ತಿವಿಭಾವಿತಾಃ।
ಧಾರಯಂತ್ಯಲಿಕಾಗ್ರೇಷು ಶಿವಲಿಂಗಮಹರ್ನಿಶಮ್॥[೨೫೬]

“ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳೂ, ಗೌತಮಾದಿ ಮಹರ್ಷಿಗಳೂ ಯಾವಾಗಲೂ ಮಸ್ತಕದಲ್ಲಿ ಲಿಂಗವನ್ನು ಧರಿಸುತ್ತಾರೆ. ಶಿವಭಕ್ತಿತತ್ಪರಳಾದ ಲಕ್ಷ್ಮೀ ಮೊದಲಾದ ಶಕ್ತಿದೇವತೆಗಳು ಯಾವಾಗಲೂ ಶಿವಲಿಂಗವನ್ನು ಹಣೆಯ ಮೇಲ್ಭಾಗದಲ್ಲಿ ಧರಿಸುತ್ತಾರೆ” ಎಂಬ ರೇಣುಕ ಭಗವತ್ಪಾದರ ಮಾತುಗಳಿಂದ ತಿಳಿದುಬರುತ್ತದೆ. ಮಹರ್ಷಿ ವ್ಯಾಸರು ಸ್ಕಂದಪುರಾಣದ ಕೇದಾರಖಂಡದ ಏಳನೇ ಅಧ್ಯಾಯದಲ್ಲಿ ವಿಷ್ಣುವು ಇಂದ್ರನೀಲಮಣಿಯ ಲಿಂಗವನ್ನೂ, ಬ್ರಹ್ಮನು ಮಣಿಯ ಲಿಂಗವನ್ನೂ, ಇಂದ್ರನು ರತ್ನದ ಲಿಂಗವನ್ನೂ, ಚಂದ್ರನು ಮುತ್ತಿನಲಿಂಗವನ್ನೂ, ಸೂರ್ಯನು ತಾಮ್ರದ ಲಿಂಗವನ್ನೂ, ಕುಬೇರನು ರೌಕ್ಮದ ಲಿಂಗವನ್ನೂ, ಯಮನು ನೀಲಿಯ ಲಿಂಗವನ್ನೂ, ನೈಋತನು ಬೆಳ್ಳಿಯ ಲಿಂಗವನ್ನೂ ಮತ್ತು ವಾಯುವು ಕೆಂಪು ಲಿಂಗವನ್ನು ಪೂಜಿಸುತ್ತಿದ್ದರೆಂದು ಪ್ರತಿಪಾದಿಸಿದ್ದಾರೆ. ಮತ್ತೆ ಕೊನೆಯಲ್ಲಿ-

ಏವಂ ತೇ ಲಿಂಗಿತಾಃ ಸರ್ವೇ ಲೋಕಪಾಲಾಃ ಸವಾಸವಾಃ।
ತಥಾ ಸರ್ವೇಽಪಿ ಗಂಧರ್ವಾಃ ಪಾತಾಲೇ ಕಿನ್ನರೈಃ ಸಹ॥[೨೫೭]

“ಈ ರೀತಿಯಾಗಿ ಇಂದ್ರನ ಸಹಿತ ಎಲ್ಲ ಲೋಕಪಾಲರೂ, ಹಾಗೆಯೇ ಎಲ್ಲ ಗಂಧರ್ವರೂ ಪಾತಾಲದಲ್ಲಿ ಕಿನ್ನರರೊಂದಿಗೆ ಲಿಂಗಧಾರಿಗಳಾಗಿದ್ದರು” ಎಂಬ ಶ್ಲೋಕದಲ್ಲಿ “ತೇ ಲಿಂಗಿತಾಃ ಸರ್ವೇ” ಎಂಬುದರಿಂದ ಅವರೆಲ್ಲರೂ ಲಿಂಗಧಾರಿಗಳಾಗಿದ್ದರೆಂದು ಸಮರ್ಥಿಸಲಾಗಿದೆ. ಪದ್ಮಪುರಾಣದಲ್ಲಿ-

ಧಾರಣಂ ಗಾತ್ರಸಂಸ್ಪರ್ಶಮಶೇಷದೇಹಗೋಪನಮ್।
ಮಸ್ತಕೇ ಧಾರಣಂ ಮುಖ್ಯಂ ಬ್ರಹ್ಮಣಾ ಚ ತಥಾ ಕೃತಮ್॥
ಲಲಾಟೇ ಧಾರಣಂ ಶಸ್ತಂ ಯಥಾ ಲಕ್ಷ್ಮ್ಯಾ ಧೃತಂ ಶುಭಮ್।
ಬಾಣೇನ ಚ ಧೃತಂ ಮೂರ್ಧ್ನಿ ದಕ್ಷಿಣೋರಸಿ ವಾ ಪುನಃ॥

---

[೨೫೬] ಸಿ.ಶಿ, ೬.೫೫-೫೬

[೨೫೭] ಸ್ಕಂದಪುರಾಣ, ಕೇದಾರಖಂಡ, ೭.೨೫

ಕರ್ಣೇ ಚ ಹರಕರ್ಣೇನ ಮುನಿನಾ ಪರಮರ್ಷಿಣಾ।
ಧಾರಯಂತಿ ತಥಾ ಲಿಂಗಂ ರಾಕ್ಷಸಾಃ ಕೇಚಿದುತ್ತಮಾಃ॥[೨೫೮]

"ಸಮಸ್ತ ದೇಹವನ್ನು ರಕ್ಷಿಸುವಂತಹ ಲಿಂಗವನ್ನು ಸದಾ ದೇಹದ ಮೇಲೆ ಧರಿಸಬೇಕು. ಮಸ್ತಕದಲ್ಲಿ ಇಷ್ಟಲಿಂಗಧಾರಣೆ ಮುಖ್ಯವಾದುದರಿಂದ ಬ್ರಹ್ಮನು ಹಾಗೆಯೇ ಮಾಡಿದ್ದಾನೆ. ಹಣೆಯಲ್ಲಿ ಧರಿಸುವುದು ಮಂಗಳಕರವಾದುದರಿಂದ ಲಕ್ಷ್ಮಿಯು ಧರಿಸಿ ಶುಭಪ್ರದಳಾಗಿದ್ದಾಳೆ. ಮಹಾಶಿಕ್ತ ಬಾಣಾಸುರನು ಶಿರಸ್ಸಿನಲ್ಲಿಯೂ ಹಾಗೂ ಬಲ ವಕ್ಷಸ್ಥಲದಲ್ಲಿಯೂ, ಹರಕರ್ಣ ಮಹರ್ಷಿಯು ಕಿವಿಯಲ್ಲಿಯೂ ಮತ್ತು ಕೆಲವು ಉತ್ತಮರಾದ ರಾಕ್ಷಸರು ಲಿಂಗಧಾರಿಗಳಾಗಿದ್ದರು." ಈ ರೀತಿಯಾಗಿ ಬ್ರಹ್ಮಾದಿ ದೇವತೆಗಳೂ, ಲಕ್ಷ್ಮಿಯೇ ಮೊದಲಾದ ಶಕ್ತಿದೇವತೆಗಳೂ ತಮ್ಮ ಮಸ್ತಕದಲ್ಲಿ ಲಿಂಗಧಾರಣೆ ಮಾಡಿದ್ದರೆಂದು ನಿರೂಪಿಸಿದ್ದಾರೆ. ಅದರ ಸಂಕೇತವಾಗಿ ಮಹಾರಾಷ್ಟ್ರ ಪ್ರಾಂತದ ಬಾರ್ಷೀ ಎಂಬ ಗ್ರಾಮದಲ್ಲಿರುವ ಭಗವಾನ್ ವಿಷ್ಣುವಿನ ಮಸ್ತಕದಲ್ಲಿ, ಪಂಢರಪುರದ ವಿಠ್ಠಲನ ಮಸ್ತಕದಲ್ಲಿ, ಕೊಲ್ಹಾಪುರದ ಮಹಾಲಕ್ಷ್ಮಿ, ಬಳ್ಳಾರಿ ನಗರದ ನರಸಿಂಹ, ಕಾಶ್ಮೀರದ ಶಾರದಾಮೂರ್ತಿ, ತುಲಜಾಪುರದ ಅಂಬಾಭವಾನಿ ಮೂರ್ತಿ, ಕಂಚಿಯ ಕಾಮಾಕ್ಷೀ ವಿಗ್ರಹದ ಮತ್ತು ಕಾಶೀಕ್ಷೇತ್ರದ ವಿಶಾಲಾಕ್ಷಿ ವಿಗ್ರಹಗಳ ಮಸ್ತಕದಲ್ಲಿ ಇಂದಿಗೂ ಸಹ ಶಿವಲಿಂಗಗಳು ವಿರಾಜಿಸುತ್ತಿವೆ. ಶಿವಭಕ್ತ ಬಾಣ ಮೊದಲಾದ ರಾಕ್ಷಸರೂ ಸಹ ಲಿಂಗಧಾರಿಗಳಾಗಿದ್ದರೆಂದು ವ್ಯಾಸರು ನಿರೂಪಿಸಿ, ಹರಕರ್ಣಾದಿ ಮಹರ್ಷಿಗಳೂ ಸಹ ಇಷ್ಟಲಿಂಗ ಧರಿಸಿದ್ದರೆಂದು ಪ್ರತಿಪಾದಿಸಿದ್ದಾರೆ. ಹೀಗೆ ಅಗಸ್ತ್ಯ, ಗೌತಮ, ದುರ್ವಾಸ, ದಧೀಚಿ, ಸನಂದ, ಕಶ್ಯಪ, ಉಪಮನ್ಯು, ವ್ಯಾಸ, ಹರಕರ್ಣಾದಿ ಮಹರ್ಷಿಗಳು ಶಿವಭಕ್ತರಾಗಿದ್ದು ಶಿವಲಿಂಗವನ್ನು ಧರಿಸಿದ್ದರೆಂದು ಹಲವಾರು ಗ್ರಂಥಗಳಲ್ಲಿ ನಿರೂಪಿತವಾಗಿದೆ.[೨೫೯] ಆದುದರಿಂದ ಈ ಬಾಹ್ಯಲಿಂಗಧಾರಣೆ ಸನಾತನವೂ ಮತ್ತು ಸರ್ವಮಾನ್ಯವೂ ಆಗಿತ್ತೆಂದು ತಿಳಿದುಬರುತ್ತದೆ."

ಹೀಗೆ ಬಾಹ್ಯಲಿಂಗಧಾರಣೆಯ ನಂತರ ಕ್ರಮಪ್ರಾಪ್ತವಾದ ಆಂತರಿಕ ಲಿಂಗಧಾರಣೆಯಾದ ಪ್ರಾಣಲಿಂಗ ಸ್ವರೂಪ ಮತ್ತು ಅದರ ಪೂಜಾ ವಿಧಿವಿಧಾನಗಳನ್ನು ಕುರಿತು ವಿಮರ್ಶಿಸಲಾಗುವುದು.

ಪ್ರಾಣಲಿಂಗಸ್ವರೂಪ

ಮಂತ್ರದೀಕ್ಷೆಯ ಕಾಲದಲ್ಲಿ ಸದ್ಗುರುವಿನಿಂದ ಉಪದೇಶಿಸಲ್ಪಟ್ಟ ನಮ್ಮದೇ ಆದ ನಿರುಪಾಧಿಕ ಪ್ರಕಾಶವೇ ಇಲ್ಲಿ 'ಪ್ರಾಣಲಿಂಗ'ವೆಂದು ಕರೆಯಲ್ಪಟ್ಟಿದೆ. ಸೂಕ್ಷ್ಮ ಸ್ವರೂಪದ್ದಾದ ಇದಿಲ್ಲದೆ ಯೋಗಾಭ್ಯಾಸ, ಪ್ರತ್ಯಕ್ಷ ಮುಂತಾದ ಪ್ರಮಾಣಗಳ ಅನುಭವವಾಗುವುದಿಲ್ಲ. ಪ್ರಾಮಾಯಾಮಪಟುಗಳೂ ಮತ್ತು ಶಿವಯೋಗಿಗಳೂ ಅದನ್ನು ಸಂಪಾದಿಸಲು ಸಾಧ್ಯವಿದೆ. ಆದುದರಿಂದಲೇ ಶ್ರೀ ರೇಣುಕಾಚಾರ್ಯರು-

---

[೨೫೮] ಪದ್ಮಪುರಾಣ, ಪಾತಾಳಕಾಂಡ, ೧೦.೧೩೦-೧೩೪

[೨೫೯] ವೀರಶೈವರತ್ನಮ್, ಪು. ೮

ಪ್ರಾಣಾಪಾನಸಮಾಘಾತಾತ್ ಕಂದಮಧ್ಯಾದ್ಯದುತ್ಥಿತಮ್।
ಪ್ರಾಣಲಿಂಗಂ ತದಾಖ್ಯಾತಂ ಪ್ರಾಣಾಪಾನನಿರೋಧಿಭಿಃ॥[೨೬೦]

"ಶ್ರೀ ಗುರುವಿನ ಉಪದೇಶಾನುಸಾರವಾಗಿ ಪ್ರಾಣವಾಯು ಮತ್ತು ಅಪಾನವಾಯುಗಳ ಸಂಘಟ್ಟನದಿಂದ ನಾಭಿಕಂದ ಮಧ್ಯದಿಂದ ಯಾವ ಜ್ಯೋತಿಯು ಉತ್ಪನ್ನವಾಗುವುದೋ, ಅದೇ ಪ್ರಾಣಲಿಂಗವೆಂದು ಪ್ರಾಣಾಪಾನವಾಯು ನಿರೋಧಿಗಳಾದ ಶಿವಯೋಗಿಗಳು ಹೇಳುವರು" -ಎಂದು ಪ್ರಾಣಲಿಂಗಿಯ ಸ್ವರೂಪವು ಯೋಗಾಭ್ಯಾಸಗಮ್ಯವೆಂದು ಪ್ರತಿಪಾದಿಸಿದ್ದಾರೆ. ಈ ಶ್ಲೋಕದ ಭಾವವಿಷ್ಟು- ಗುರೂಪದೇಶಾನುಸಾರವಾಗಿ ಸಾಧಕನು ಯಾವಾಗ ಪ್ರಾಣಾಯಾಮ ಪ್ರಕ್ರಿಯೆಯಿಂದ ಮೂಲಾಧಾರದಲ್ಲಿರುವ ಅಪಾನ ವಾಯುವನ್ನು ಪ್ರಾಣವಾಯುವಿನೊಂದಿಗೆ ಸಂಘಟ್ಟಿಸುತ್ತಾನೆಯೋ, ಆಗ ಅವೆರಡರ ಸಂಘರ್ಷದಿಂದ (ಕಂದಮಧ್ಯದಿಂದ) ಮೂಲಾಧಾರದಿಂದ ಜ್ಯೋತಿಯು ಪ್ರಾದುರ್ಭವಿಸಿ, ಸುಷುಮ್ನಾ ಮಾರ್ಗದಿಂದ ಊರ್ಧ್ವಮುಖವಾಗಿ ಪ್ರವಹಿಸುತ್ತದೆ. ಆ ಜ್ಯೋತಿಯು (ಹೃದಯ ಕಮಲದ) ಅನಾಹತ ಚಕ್ರದಲ್ಲಿ, ಅರ್ಥಾತ್ ದ್ವಾದಶದಲ, ಹೃದಯಕಮಲ, ಕರ್ಣಿಕೆಗಳ ಅಂಗುಷ್ಠ ಪರಿಮಾಣ ಹಾಗೂ ಹವಳದ ವರ್ಣದಲ್ಲಿ ಸ್ಫುರಿಸುತ್ತಾ ಸ್ಥಿರಗೊಳ್ಳುತ್ತದೆ. ಹೃದಯದಲ್ಲಿ ಹವಳದ ವರ್ಣದಿಂದ ಪ್ರಕಾಶಿಸುವ ಈ ಜ್ಯೋತಿಯನ್ನೇ ವೀರಶೈವಾಚಾರ್ಯರು "ಪ್ರಾಣಲಿಂಗ"ವೆಂದು ಕರೆದಿದ್ದಾರೆ. ಸೂರ್ಯೋದಯವಾಗಲು ಮಂಜಿನ ಕಣಗಳು ಆ ಪ್ರಕಾಶದಲ್ಲಿ ಲೀನವಾಗುವಂತೆ ಹೃದಯದ ಈ ಜ್ಯೋತಿಯಲ್ಲಿ ಪ್ರಾಣವಾಯುವೂ ಸಹ ಲಯವಾಗುವುದರಿಂದ ಈ ಜ್ಯೋತಿಗೆ "ಪ್ರಾಣಲಿಂಗ"ವೆಂಬ ಹೆಸರು. ಅದನ್ನು ಶ್ರೀ ರೇಣುಕ ಭಗವತ್ಪಾದರು ಹೀಗೆ ನಿರೂಪಿಸಿದ್ದಾರೆ-

ಪ್ರಾಣೋ ಯತ್ರ ಲಯಂ ಯಾತಿ ಭಾಸ್ಕರೇ ತುಹಿನಂ ಯಥಾ।
ತತ್ಪ್ರಾಣಲಿಂಗಮುದ್ದಿಷ್ಟಂ ತದ್ಧಾರೀ ಸ್ಯಾತ್ತದಾಕೃತಿಃ॥[೨೬೧]

"ಸೂರ್ಯನ ಕಿರಣದಲ್ಲಿ ಮಂಜಿನ ಕಣಗಳಂತೆ ಪ್ರಾಣವಾಯುವು ಪರಬ್ರಹ್ಮ ಸ್ವರೂಪವಾದ ಯಾವ ಶಿವಲಿಂಗದಲ್ಲಿ ಅಡಗುವುದೋ, ಅದೇ ಪ್ರಾಣಲಿಂಗವೆನಿಸುವುದು. ಆ ಪ್ರಕಾರದ ಪ್ರಾಣಲಿಂಗವನ್ನು ಧರಿಸುವವನು ಅದೇ ಆಕಾರವುಳ್ಳವನಾಗುವನು."

ಪದವಾಕ್ಯಪ್ರಮಾಣಜ್ಞರಾದ ಶ್ರೀ ಮರಿತೋಂಟದಾರ್ಯರೂ ಸಹ- "ಕುಂಭಕದಿಂದುಂಟಾದ ಪ್ರಾಣವಾಯುವಿನ ನಿರೋಧದಿಂದುಂಟಾದ ಕಶೇರುಕದಿಂದ ಅಂಡಾಂತರದವರೆಗಿನ ಇಪ್ಪತ್ತೊಂದು ಗ್ರಂಥಿ ಭೇದನ ಮೊದಲ್ಗೊಂಡು ಕುಂಡಲಿನಿಯನ್ನು ಊರ್ಧ್ವಮುಖ ಮಾಡುವ ಮೂಲಕ ಹೃದಯಕಮಲದ ಅನಾಹತ-ಪದ್ಮ-ಅಷ್ಟದಲಗಳನ್ನು ಹೊರತುಪಡಿಸಿ ಚತುರ್ದಲದ ಮಧ್ಯದಲ್ಲಿರುವ ಕರ್ಣಿಕಾಂತದಲ್ಲಿರುವ

---

[೨೬೦] ಸಿ.ಶಿ, ೧೨.೬

[೨೬೧] ಸಿ.ಶಿ, ೧೨.೭

ಅಂಗುಷ್ಠಗಾತ್ರ ಹಾಗೂ ಹವಳದ ವರ್ಣದಿಂದ ತೋರುವ ಪ್ರಾಣಶಕ್ತಿವಿಶಿಷ್ಟ ಚಿತ್‌ಸ್ವರೂಪವೇ (ಜ್ಯೋತಿಯೇ) ಪ್ರಾಣಲಿಂಗ”[೨೬೨]ವೆಂದು ಪ್ರಾಣಲಿಂಗದ ಸ್ವರೂಪವನ್ನು ವರ್ಣಿಸಿದ್ದಾರೆ.

ಮೇಲಿನ ವರ್ಣನೆಯನ್ನು ಗಮನಿಸಿದಾಗ ಹೃದಯಕಮಲದ ಅನಾಹತ ಚಕ್ರದಲ್ಲಿರುವ ಜ್ಯೋತಿರ್ಲಿಂಗವೇ ಪ್ರಾಣಲಿಂಗವೆಂದು ನಿಶ್ಚಯವಾಗುತ್ತದೆ. ಮನುಷ್ಯನ ಶರೀರದಲ್ಲಿ ಪ್ರತ್ಯೇಕವಾಗಿ ಆಧಾರ - ಹೃದಯ - ಭ್ರೂಮಧ್ಯಗಳೆಂಬ ತ್ರಿವಿಧ ಸ್ಥಾನಗಳಲ್ಲಿ ಜ್ಯೋತಿರ್ಲಿಂಗಗಳ ಅಸ್ತಿತ್ವವಿದೆಯೆಂದು ತಿಳಿಯುತ್ತದೆ.[೨೬೩] ಆ ಜ್ಯೋತಿಯು ಆಯಾ ಸ್ಥಾನಗಳಲ್ಲಿ ಸದಾ ಪ್ರಕಾಶಿಸುತ್ತಿದ್ದರೂ ಸಹ, ತಮೋಗುಣಾದಿಗಳಿಂದ ಆವೃತವಾಗಿರುವುದರಿಂದ ಎಲ್ಲವೂ ಸಹಜವಾಗಿ ಅಪರೋಕ್ಷವಾಗುವುದಿಲ್ಲ. ಆ ಕಾರಣ ಪ್ರಾಣಾಯಾಮದ ಅಭ್ಯಾಸವು ಆವಶ್ಯಕ. “ತತಃ ಕ್ಷೀಯತೇ ಪ್ರಕಾಶಾವರಣಮ್”[೨೬೪] ಎಂಬ ಪತಂಜಲಿ ಮಹರ್ಷಿಗಳ ಅಪ್ಪಣೆಯಂತೆ ಪ್ರಾಣಾಯಾಮದಿಂದ ತಮೋಗುಣಾದಿ ಆವರಣವು ನಾಶವಾಗಲು ಯೋಗಿಗಳು ಅದನ್ನು ಪ್ರತ್ಯಕ್ಷ ಮಾಡಿಕೊಳ್ಳುತ್ತಾರೆ. ಮನಸ್ಸಿನ ಅಂತಃಪ್ರವೃತ್ತಿ ರೂಪದ ಈ ಸಾಧನಮಾರ್ಗದಲ್ಲಿ ಎಲ್ಲರೂ ಮುಂದುವರಿಯಲು ಸಾಧ್ಯವಿಲ್ಲ. ಆದುದರಿಂದಲೇ “ಕಶ್ಚಿದ್ಧೀರಃ ಪ್ರತ್ಯಗಾತ್ಮಾನಮೈಕ್ಷದ್ವಾವೃತ್ತಚಕ್ಷುರಮೃತತ್ವ ಮಿಚ್ಛನ್”[೨೬೫] (ಯಾವನೋ ಒಬ್ಬ ಮುಮುಕ್ಷುವಾದ ಜ್ಞಾನಿಯು ಇಂದ್ರಿಯ ವಿಷಯಗಳಿಂದ ತನ್ನ ದೃಷ್ಟಿಯನ್ನು ಅಂತರ್ಮುಖಮಾಡಿಕೊಂಡು ಆತ್ಮವನ್ನು ತನ್ನಲ್ಲಿಯೇ ಕಾಣುತ್ತಾನೆ) ಎಂಬ ಉಪನಿಷದ್ವಾಕ್ಯದಂತೆ ಸ್ಥಿರಮನಸ್ಕರಾದ ಕೆಲವೇ ಧೀರರ ಪ್ರವೃತ್ತಿಯು ಅಲ್ಲಿ ನಿರೂಪಿತವಾಗಿದೆ.

ಇದಲ್ಲದೆ “ಅತ್ರಾಽಯಂ ಪುರುಷಃ ಸ್ವಯಂಜ್ಯೋತಿಃ”[೨೬೬] (ಇಲ್ಲಿ ಈ ಪುರುಷನು ಸ್ವಯಂ ಜ್ಯೋತಿಸ್ವರೂಪನು) ಎಂಬ ತನ್ನದೇ (ಆತ್ಮನ) ಸ್ವಪ್ರಕಾಶವನ್ನು ಪ್ರತಿಪಾದಿಸುವ ಉಪನಿಷದ್ವಾಕ್ಯದಿಂದ ಆ ಪ್ರಕಾಶವು ಎಲ್ಲರಿಂದಲೂ ಸಹ ಸ್ವಪ್ನಾವಸ್ಥೆಯಲ್ಲಿ ಅನುಭವಿಸಲ್ಪಡುತ್ತದೆ ಎಂದು ಆ ಸ್ಥಾನಕ್ಕೂ ಸಹ ಸಂಕೇತವನ್ನು ನೀಡಲಾಗಿದೆ. ಈ ವಾಕ್ಯದ ರಹಸ್ಯವಿದು- ಜಾಗ್ರದವಸ್ಥೆಯಲ್ಲಿ ಹಗಲಿನ ಸಮಯದಲ್ಲಿ ಸೂರ್ಯನ ಬೆಳಕಿನಲ್ಲಿ, ರಾತ್ರಿ ವೇಳೆಯಲ್ಲಿ ಬೆಳದಿಂಗಳಿನಲ್ಲಿ ಅಥವಾ ವಿದ್ಯುದ್ದೀಪದ ಬೆಳಕಿನಲ್ಲಿ ವ್ಯವಹರಿಸುತ್ತೇವೆ. ಜಾಗ್ರದವಸ್ಥೆಯಂತೆ ಸ್ವಪ್ನಾವಸ್ಥೆಯಲ್ಲಿಯೂ ಸಹ ಗಮನ-ಆಗಮನ, ಆದಾನ (ತೆಗೆದುಕೊಳ್ಳುವುದು) -ಪ್ರದಾನ (ಕೊಡುವುದು) ಮುಂತಾದ ವ್ಯವಹಾರಗಳು

---

೨೬೨. ವೀ.ಆ.ಚ, ಪು. ೪೫೬

೨೬೩. ಮೂಲಾಧಾರೇ ಚ ಹೃದಯೇ ಭ್ರೂಮಧ್ಯೇ ಸರ್ವಯೋಗಿನಾಮ್।
ಜ್ಯೋತಿರ್ಲಿಂಗಂ ಸದಾ ಭಾತಿ ಯದ್ ಬ್ರಹ್ಮೇತ್ಯಾಹುರಾಗಮಾಃ॥ -ಸಿ.ಶಿ, ೬.೩೪

೨೬೪. ಯೋಗಸೂತ್ರ, ೨.೫೨

೨೬೫. ಕ.ಉ, ೪.೧

೨೬೬. ಬೃ.ಉ, ೪-೩-೧

ನಡೆಯುತ್ತವೆ. ಈ ವ್ಯವಹಾರವು ಪ್ರಕಾಶವಿಲ್ಲದೆ ಸಂಭವಿಸುವುದಿಲ್ಲ. "ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಂ ನೇಮಾ ವಿದ್ಯುತೋ ಭಾಂತಿ ಕುತೋಽಯಮಗ್ನಿಃ"[೨೬೭] (ಅಲ್ಲಿ ಸೂರ್ಯ, ಚಂದ್ರ, ನಕ್ಷತ್ರ, ವಿದ್ಯುತ್ ಹಾಗೂ ಅಗ್ನಿಯು ಪ್ರಕಾಶಿಸುವುದಿಲ್ಲ) ಎಂಬ ಶ್ರುತಿವಾಕ್ಯದಂತೆ ಮತ್ತು ಆ ಸಮಯದಲ್ಲಿ ಸೂರ್ಯ-ಚಂದ್ರ-ನಕ್ಷತ್ರ-ವಿದ್ಯುತ್ ಇತ್ಯಾದಿಗಳ ಪ್ರಕಾಶಾಭಾವ ಬೋಧನೆಯಿಂದ ವ್ಯವಹಾರಗಳು ಕಷ್ಟ ಸಾಧ್ಯವಾದುದರಿಂದ ಆತ್ಮಪ್ರಕಾಶದ ಸಾಧ್ಯತೆಯಿದೆ. ಎಲ್ಲ ಅವಸ್ಥೆಗಳಲ್ಲಿ ಯಾವಾಗಲೂ ಇರುವ ಈ ಪ್ರಕಾಶ ಜಾಗ್ರದವಸ್ಥೆಯಲ್ಲಿ ಬೇರೆ ಪ್ರಕಾಶಗಳು ಇರುವುದರಿಂದ ಸ್ಪಷ್ಟವಾಗಿ ಅನುಭವಕ್ಕೆ ಬರುವುದಿಲ್ಲ ಮತ್ತು ಸ್ವಪ್ನಾವಸ್ಥೆಯಲ್ಲಿ ಬೇರೆ ಪ್ರಕಾಶಗಳು ಅಡಗಿ ಹೋಗುವುದರಿಂದ ಆತ್ಮಪ್ರಕಾಶವು ಎಲ್ಲರಿಂದಲೂ ಸಹ ಸ್ಪಷ್ಟವಾಗಿ ಅನುಭವಿಸಲ್ಪಡುತ್ತದೆ.

ಹೀಗೆ ಎಲ್ಲರಿಂದಲೂ ಸಮಾನವಾಗಿ ಸ್ವಪ್ನಾವಸ್ಥೆಯಲ್ಲಿ ಅನುಭವಿಸಲ್ಪಡುವ ಈ ಆತ್ಮಜ್ಯೋತಿಯು ಜಾಗ್ರದವಸ್ಥೆಯಲ್ಲಿ ಪ್ರಾಣಾಯಾಮ ವಿಧಾನದಿಂದ ಅಥವಾ ಧ್ಯಾನ ಸಾಧನೆಯ ಮೂಲಕ ಶಿವಯೋಗಿಗಳಿಂದ ಸಾಕ್ಷಾತ್ಕಾರಗೊಳಿಸುವುದನ್ನು "ಪ್ರಾಣಲಿಂಗ"ವೆಂದು ಕರೆಯಲಾಗಿದೆ. ಶ್ರೀ ರೇಣುಕ ಭಗವತ್ಪಾದರು-

ಚಿದ್ರೂಪಂ ಹಿ ಪರಂ ತತ್ತ್ವಂ ಶಿವಾಖ್ಯಂ ವಿಶ್ವಕಾರಣಮ್।
ನಿರಸ್ತವಿಶ್ವಕಾಲುಷ್ಯಂ ನಿಷ್ಕಲಂ ನಿರ್ವಿಕಲ್ಪಕಮ್॥
ಸತ್ತಾನಂದಪರಿಸ್ಫೂರ್ತಿಸಮುಲ್ಲಾಸಕಲಾಮಯಮ್।
ಅಪ್ರಮೇಯಮನಿರ್ದೇಶ್ಯಂ ಮುಮುಕ್ಷುಭಿರುಪಾಸಿತಮ್॥[೨೬೮]

"ಪರಬ್ರಹ್ಮ ನಾಮಕವಾದ ಮಹಾಲಿಂಗವು ಸಚ್ಚಿದಾನಂದ ಸ್ವರೂಪವಾಗಿಯೂ, ಪರತತ್ತ್ವ ಸ್ವರೂಪವಾಗಿಯೂ, "ಶಿವ" ಎಂಬ ಹೆಸರಿನಿಂದ ಕೂಡಿರುವುದಾಗಿಯೂ, ಸಮಸ್ತ ಪ್ರಪಂಚೋತ್ಪತ್ತಿಲಯಕಾರಣೀಭೂತವಾಗಿಯೂ, ಸಮಸ್ತದೋಷಗಳಿಂದ ದೂರೀಕೃತವಾಗಿಯೂ, ಹೇಯ ಕಲಾ ರಹಿತವಾಗಿಯೂ, ವಿಕಲ್ಪಶೂನ್ಯವಾಗಿಯೂ, ನಿತ್ಯಾನಂದ ಪರಿಸ್ಫುರಣ ಪ್ರಕಾಶಕ ಕಲಾಸ್ವರೂಪವಾಗಿಯೂ, ಪ್ರತ್ಯಕ್ಷಾದಿ ಪ್ರಮಾಣಗಳಿಗೆ ಅಗೋಚರವಾಗಿಯೂ, ಮುಮುಕ್ಷುಗಳಿಂದ ಪೂಜಿಸಲ್ಪಡುತ್ತಿರುವುದು" ಇತ್ಯಾದಿ ರೂಪದಿಂದ ಅದೇ ಪ್ರಾಣಲಿಂಗದ ಸ್ವರೂಪವನ್ನು ವರ್ಣಿಸಿ, ಯಾವಾಗಲೂ ಜ್ಯೋತಿರ್ಲಿಂಗಾನುಸಂಧಾನವನ್ನು ಮಾಡುವುದೇ ಅಂತರ್ಲಿಂಗಧಾರಣವೆಂದು ಉಪದೇಶಿಸಿದ್ದಾರೆ.[೨೬೯]

ಯ ಧಾರಯಂತಿ ಹೃದಯೇ ಲಿಂಗಂ ಚಿದ್ರೂಪಮೈಶ್ವರಮ್।
ನ ತೇಷಾಂ ಪುನರಾವೃತ್ತಿರ್ಘೋರಸಂಸಾರಮಂಡಲೇ॥[೨೭೦]

---

[೨೬೭] ಕ.ಉ, ೫.೧೫

[೨೬೮] ಸಿ.ಶಿ, ೬.೩೧-೩೨

[೨೬೯] ಆಧಾರೇ ಹೃದಯೇ ವಾಪಿ ಭ್ರೂಮಧ್ಯೇ ವಾ ನಿರಂತರಮ್।
ಜ್ಯೋತಿರ್ಲಿಂಗಾನುಸಂಧಾನಮಾಂತರಂ ಲಿಂಗಧಾರಣಮ್॥ -ಸಿ.ಶಿ, ೬.೩೮

[೨೭೦] ಸಿ.ಶಿ, ೬.೪೧

"ಯಾರು ಸಚ್ಚಿದಾನಂದರೂಪವಾದ ಶಿವಲಿಂಗವನ್ನು ತಮ್ಮ ಹೃದಯಕಮಲದಲ್ಲಿ ಧರಿಸುತ್ತಾರೆಯೋ, ಅವರಿಗೆ ಈ ಘೋರಸಂಸಾರಮಂಡಲದಲ್ಲಿ ಪುನರ್ಜನ್ಮ ಇರುವುದಿಲ್ಲ" -ಎಂಬ ಶ್ರೀ ರೇಣುಕಭಗವತ್ಪಾದರ ಉಪದೇಶಾನುಸಾರ ಅಂತರ್ಲಿಂಗಾನುಸಂಧಾನಿಗಳು ಘೋರವಾದ ಸಂಸಾರಸಾಗರದಿಂದ ಬಿಡುಗಡೆ ಹೊಂದುತ್ತಾರೆಂದು ತಿಳಿಯುತ್ತದೆ. ಆದುದರಿಂದಲೇ ವೀರಶೈವರು ತಮ್ಮ ಇಷ್ಟಲಿಂಗ ಪೂಜಾ ಕಾಲದಲ್ಲಿಯೇ ಪ್ರಾಣಲಿಂಗಾರ್ಚನೆ ಮತ್ತು ಅಂತರ್ಲಿಂಗಾನುಸಂಧಾನವನ್ನು ಪ್ರತಿದಿನವೂ ನೆರವೇರಿಸುತ್ತಾರೆ.

ಪ್ರಾಣಲಿಂಗಾರ್ಚನವಿಧಿ

ಆಂತರಿಕವಾದ ಈ ಪ್ರಾಣಲಿಂಗದ ಪೂಜಾದಿಗಳೂ ಸಹ ಆಂತರಿಕವಾದ ದ್ರವ್ಯಗಳಿಂದ ಭಾವಿಸಬೇಕೆಂದು ಶ್ರೀ ಜಗದ್ಗುರು ರೇಣುಕಾಚಾರ್ಯರು ಆ ಭಾವಸಾಮಗ್ರಿಗಳನ್ನೂ ಮತ್ತು ಪೂಜಾವಿಧಿಯನ್ನು ನಿರೂಪಿಸಿದ್ದಾರೆ.[೨೭೧] ಅದರಂತೆ ಇಲ್ಲಿ ಕ್ಷಮಾಗುಣ ಸಂಪಾದನೆಯೇ ಅಭಿಷೇಕಜಲ, ನಿತ್ಯಾನಿತ್ಯವಸ್ತುವಿವೇಕವೇ ಪ್ರಾಣಲಿಂಗಕ್ಕೆ ಧರಿಸುವ ವಸ್ತ್ರ, ಸದಾ ಸತ್ಯವನ್ನು ನುಡಿಯುವುದೇ ಅದರ ಆಭರಣ, ಇಹಲೋಕ- ಪರಲೋಕಗಳಲ್ಲಿ ಅರ್ಥಫಲಭೋಗದ ವಿಷಯದಲ್ಲಿನ ವೈರಾಗ್ಯವೇ ಹೂಮಾಲೆ, ಚಿತ್ತೈಕಾಗ್ರತೆಯೇ ಆ ಲಿಂಗಕ್ಕೆ ಲೇಪಿಸುವ ಗಂಧ, ನಿರಹಂಕಾರವೇ ಅಕ್ಷತೆ, ಶ್ರದ್ಧಾಭಕ್ತಿಯೇ ಧೂಪ, ಚಿದ್ರೂಪ (ವಿಶ್ವಪ್ರಕಾಶಕ) ಮಹಾಜ್ಞಾನವೇ ದೀಪ, ಪ್ರಾಪಂಚಿಕ ಭ್ರಾಂತಿಯ ತ್ಯಾಗವೇ ನೈವೇದ್ಯದ ಅರ್ಪಣೆ, ವಾಚಿಕ ಮತ್ತು ಮಾನಸಿಕ ಮೌನಾನುಷ್ಠಾನವೇ ಘಂಟಾನಾದ, ಶಬ್ದಸ್ಪರ್ಶಾದಿ ವಿಷಯಗಳನ್ನು ಶಿವಲಿಂಗಕ್ಕೆ ಅರ್ಪಿಸುವುದೇ ತಾಂಬೂಲ ಸಮರ್ಪಣೆ, ಕ್ಷಣಿಕವಾದ ಶಬ್ದಾದಿ ವಿಷಯಗಳಲ್ಲಿ

---

[೨೭೧] ಬದ್ಧೇಂದ್ರಿಯನವದ್ವಾರೇ ಬೋಧದೀಪೇ ಹೃದಾಲಯೇ।
ಪದ್ಮಪೀಠೇ ಸಮಾಸೀನಂ ಚಿಲ್ಲಿಂಗಂ ಶಿವವಿಗ್ರಹಮ್।
ಭಾವಯಿತ್ವಾ ಸದಾಕಾಲಂ ಪೂಜಯೇದ್ ಭಾವವಸ್ತುಭಿಃ॥
ಕ್ಷಮಾಭಿಷೇಕಸಲಿಲಂ ವಿವೇಕೋ ವಸ್ತ್ರಮುಚ್ಯತೇ।
ಸತ್ಯಮಾಭರಣಂ ಪ್ರೋಕ್ತಂ ವೈರಾಗ್ಯಂ ಪುಷ್ಪಮಾಲಿಕಾ॥
ಗಂಧಃ ಸಮಾಧಿಸಂಪತ್ತಿರಕ್ಷತಾ ನಿರಹಂಕೃತಿಃ।
ಶ್ರದ್ಧಾ ಧೂಪೋ ಮಹಾಜ್ಞಾನಂ ಜಗದ್ಭಾಸಿಪ್ರದೀಪಿಕಾ॥
ಭ್ರಾಂತಿಮೂಲಪ್ರಪಂಚಸ್ಯ ನೈವೇದ್ಯಂ ತನ್ನಿವೇದನಮ್।
ಮೌನಂ ಘಂಟಾಪರಿಸ್ಪಂದಸ್ತಾಂಬೂಲಂ ವಿಷಯಾರ್ಪಣಮ್॥
ವಿಷಯಭ್ರಾಂತಿರಾಹಿತ್ಯಂ ತತ್ ಪ್ರದಕ್ಷಿಣಕಲ್ಪನಾ।
ಬುದ್ಧಿಸ್ತದಾತ್ಮಿಕಾಸಕ್ತಿರ್ನಮಸ್ಕಾರಕ್ರಿಯಾ ಮತಾ॥
ಏವಂ ವಿಧೈರ್ಭಾವಶುದ್ಧೈರುಪಚಾರೈರದೂಷಿತೈಃ।
ಪ್ರತ್ಯಙ್ಮುಖಮನಾ ಭೂತ್ವಾ ಪೂಜಯೇಲ್ಲಿಂಗಮಾಂತರಮ್॥
-ಸಿ.ಶಿ, ೧೨.೧೫-೨೦

ಸುಖಭ್ರಾಂತಿರಾಹಿತ್ಯವೇ ಪ್ರದಕ್ಷಿಣೆ ಮತ್ತು ಶಿವಲಿಂಗರೂಪದಲ್ಲಿ ಆಸಕ್ತಿಯುಳ್ಳ ಬುದ್ಧಿಯೇ ದೀರ್ಘದಂಡ ನಮಸ್ಕಾರ. ಈ ಪ್ರಕಾರವಾಗಿ ಯಾವಾಗ ಸಾಧಕನ ಮನಸ್ಸಿನಲ್ಲಿ ಈ ಉತ್ಕೃಷ್ಟ ಗುಣಗಳು ಆವಿರ್ಭವಿಸುತ್ತವೆಯೋ ಅದೇ ಪ್ರಾಣಲಿಂಗಾರ್ಚನ ರೂಪವೆಂದು ತಿಳಿಯಬೇಕು.

ಈ ರೀತಿಯಾಗಿ ನಿರಂತರವಾಗಿ ಮಾಡಬೇಕಾಗಿರುವ ಈ ಪ್ರಾಣಲಿಂಗಾರ್ಚನೆಯಿಂದ ಸಾಧಕನ ಮನೋವೃತ್ತಿಯು ಅಂತರ್ಮುಖವಾಗಿ, ಇದಕ್ಕೂ ಹೆಚ್ಚಿನ ಸೂಕ್ಷ್ಮವಾದ ಭಾವಲಿಂಗಾರ್ಚನೆ ಮಾಡಲು ಅರ್ಹನಾಗುತ್ತಾನೆ. ಈಗ ಭಾವಲಿಂಗದ ಸ್ವರೂಪ ಮತ್ತು ಅದರ ಪೂಜಾಪದ್ಧತಿಯನ್ನು ಗಮನಿಸೋಣ.

ಭಾವಲಿಂಗದ ಸ್ವರೂಪ ಮತ್ತು ಪೂಜಾಪದ್ಧತಿ

ಕ್ರಿಯಾ ಯಥಾ ಲಯಂ ಪ್ರಾಪ್ತಾ ತಥಾ ಭಾವೋಽಪಿ ಲೀಯತೇ।
ಯತ್ರ ತದ್ದೇಶಿಕೈರುಕ್ತಂ ಭಾವಲಿಂಗಮಿತಿ ಸ್ಫುಟಮ್॥[೨೭೨]

"ಕ್ರಿಯೆಯಂತೆ ಭಾವವೂ ಕೂಡ ಯಾವ ಲಿಂಗದಲ್ಲಿ ಲಯಹೊಂದುತ್ತದೋ, ಆ ಲಿಂಗವು ಭಾವಲಿಂಗವೆನಿಸುವುದೆಂದು ಆಚಾರ್ಯರು ಸ್ಪಷ್ಟವಾಗಿ ಹೇಳುವರು" -ಎಂಬ ಸಿದ್ಧಾಂತ ಶಿಖಾಮಣಿಯ ಉಕ್ತಿಯಂತೆ ಎಲ್ಲ ಬಾಹ್ಯಕ್ರಿಯೆಗಳು ಲಯವನ್ನು ಹೊಂದಲು ತನ್ನದೇ ಆದ ಆತ್ಮನ ರೂಪದಿಂದ ಶಿವನನ್ನು ಧ್ಯಾನಿಸುವ ಸಾಧಕನ ಬುದ್ಧಿಯಲ್ಲಿ "ಶಿವೋಽಹಂ" ಎಂಬ ಭಾವನೆಯು ಉಂಟಾಗುತ್ತದೆ. ತೈಲಧಾರೆಯಂತೆ ನಿರಂತರವಾಗಿ ಉತ್ಪನ್ನವಾಗುವ ಈ ಭಾವನೆಯ ಬಲದಿಂದ ಸಾಧಕನ ಶಿರಸ್ಸಿನಲ್ಲಿರುವ ಸಹಸ್ರಾರ ಕಮಲದಲ್ಲಿ ದಿವ್ಯಜ್ಯೋತಿಯೊಂದು (ಅವನ) ಅನುಭವಕ್ಕೆ ಗೋಚರಿಸುತ್ತದೆ. ಅದು ತ್ರಿಕೋಣ-ಷಟ್ಕೋಣಾದಿ ಆಕಾರರಹಿತವಾಗಿದ್ದು, ಪೂರ್ಣರೂಪದಿಂದ ಪ್ರಕಾಶಿಸುತ್ತದೆ ಯಾದುದರಿಂದ ಅದನ್ನು "ನಿರಾಕಾರ"ವೆಂದು ಕರೆಯಲಾಗಿದೆ. ಇದೇ ಜ್ಯೋತಿಯಲ್ಲಿ ಶಿವನನ್ನು ಧ್ಯಾನಿಸುವ ಸಾಧಕನಿಗೆ "ಶಿವೋಽಹಂ" ಎಂಬ ಭಾವನೆಯು ಉಂಟಾಗುತ್ತದೆ[೨೭೩] ಎನ್ನುವುದರಿಂದ ಇದಕ್ಕೆ "ಭಾವಲಿಂಗ" ಎಂಬ ಹೆಸರು ಬಂದಿದೆ. ಈ ಭಾವಲಿಂಗದ ಪೂಜಾಪದ್ಧತಿಯಲ್ಲಿ ಪೂರ್ವೋಕ್ತ ಭಾವನೆಯನ್ನಲ್ಲದೆ ಮತ್ತೇನನ್ನೂ ಅಪೇಕ್ಷಿಸುವುದಿಲ್ಲ. ಆದುದರಿಂದಲೇ ಶ್ರೀ ರೇಣುಕ ಭಗವತ್ಪಾದರು ಹೀಗೆ ಹೇಳಿದ್ದಾರೆ-

ಭಾವೇನ ಗೃಹ್ಯತೇ ದೇವೋ ಭಗವಾನ್ ಪರಮಃ ಶಿವಃ।
ಕಿಂ ತೇನ ಕ್ರಿಯತೇ ಯಸ್ಯ ನಿತ್ಯಪೂರ್ಣೋ ಹಿ ಸ ಸ್ಮೃತಃ॥
ಅಖಂಡಪರಮಾನಂದಬೋಧರೂಪಃ ಪರಃ ಶಿವಃ।
ಭಕ್ತಾನಾಮುಪಚಾರೇಣ ಭಾವಯೋಗಾತ್ ಪ್ರಸೀದತಿ॥[೨೭೪]

---

೨೭೨. ಸಿ.ಶಿ, ೧೫.೩೭

೨೭೩. ತದ್ಧ್ಯಾನಂ ಮನಸಾ ಯತ್ರ ಪ್ರಾಣಲಿಂಗಾರ್ಚನಂ ಮತಮ್।
ಮನೋವೃತ್ತಿಲಯಸ್ತತ್ರ ಭಾವಲಿಂಗಸ್ಯ ಪೂಜನಮ್॥ -ಸೂ.ಆ, ಕ್ರಿ.ಪಾ, ೬.೪೭

೨೭೪. ಸಿ.ಶಿ, ೧೫.೩೮-೩೯

"ಭಗವಾನ್ ಪರಶಿವನು ಭಾವದಿಂದ ಗ್ರಹಿಸಲ್ಪಡುವನು. ಭಾವಗ್ರಾಹ್ಯವಾದ ಆ ಪರಮಾತ್ಮನಿಗೆ ಬಾಹ್ಯಪೂಜನದಿಂದ ಯಾವ ಪ್ರಯೋಜನವು ಸಾಧಿಸಲ್ಪಡುವುದು? (ಯಾವುದೂ ಇಲ್ಲವೆಂದು ಭಾವವು). ಏಕೆಂದರೆ ಅವನು ನಿತ್ಯತೃಪ್ತನು. ಅಖಂಡ ಪರಮಾನಂದ ಸ್ವರೂಪನೂ ಚಿತ್‌ಸ್ವರೂಪನೂ ಆದ ಪರಶಿವನು ಮಾನಸಿಕೋಪಚಾರ ದಿಂದಲೂ, ಮನಸ್ಸನ್ನಿವೇಶದಿಂದಲೂ ಭಕ್ತರಿಗೆ ಪ್ರಸನ್ನನಾಗುವನು."

ಹೀಗೆ (ಭಾವಲಿಂಗವು) ಭಾವನಾಮಯ ವ್ಯವಹಾರಕ್ಕೆ ವಿಷಯ ಆಗಿರುವುದರಿಂದಲೂ ಮತ್ತು ಮನಸ್ಸೇ ಲಯಸ್ಥಾನವಾಗಿರುವುದರಿಂದಲೂ ಸಹಸ್ರಾರಕಮಲದಲ್ಲಿ ಪ್ರಕಾಶಿಸುವ ಆ ಜ್ಯೋತಿಯೇ "ಭಾವಲಿಂಗ"ವೆನಿಸಿದೆ. ಇದಕ್ಕೆ "ತೃಪ್ತಿಲಿಂಗ"ವೆಂಬ ಮತ್ತೊಂದು ಹೆಸರೂ ಸಹ ಇದೆ. ಭಾವಲಿಂಗಪೂಜೆಯಿಂದ ಅಂತರ್ಮುಖಿಯಾದ ಸಾಧಕನಿಗೆ ಇಷ್ಟಲಿಂಗಪೂಜೆಯ ತರುವಾಯ ಪ್ರಾಣಲಿಂಗ - ಭಾವಲಿಂಗಗಳ ಅನುಸಂಧಾನದ ವಿಷಯದಲ್ಲಿ ಹೆಚ್ಚು ಪ್ರೀತಿಯುಂಟಾಗುತ್ತದೆ. ಭಾವಲಿಂಗಾನುಸಂಧಾನವೇ ವೀರಶೈವೋಪಾಸನೆಯ ಪರಮಗುರಿ. ವೇಧಾದೀಕ್ಷೆಯ ಕಾಲದಲ್ಲಿ ಸದ್ಗುರುವಿನಿಂದ ಉಪದೇಶಿಸಲ್ಪಟ್ಟ ಈ ಭಾವಲಿಂಗದ ನಿರಂತರ ಚಿಂತನೆಯಿಂದ ಸಾಧಕನ ಆಣವಮಲವು ನಾಶವಾಗುತ್ತದೆ ಮತ್ತು ಅವನು ಶಿವಸ್ವರೂಪಿಯಾಗುತ್ತಾನೆ.

ಅಂತರ್ಲಿಂಗಪೂಜಕರಿಗೂ ಬಾಹ್ಯಲಿಂಗಪೂಜೆಯು ಆವಶ್ಯಕ

ಹೃದಯಕಮಲದಲ್ಲಿರುವ ಜ್ಯೋತಿರ್ಲಿಂಗದ ಭಾವನಾರೂಪದಿಂದ ಧರಿಸಿರುವ ಮಾನಸಿಕ ಉಪಚಾರಗಳಿಂದ ಮುಮುಕ್ಷುಗಳಿಂದಲೂ ಮತ್ತು ಯೋಗಿಗಳಿಂದಲೂ ಪೂಜಿಸಲ್ಪಡುವುದರಿಂದ ಮೋಕ್ಷಪ್ರದವೆಂದು ಪ್ರತಿಯೊಬ್ಬರಿಗೂ ತಿಳಿದಿರುವುದರಿಂದ ಅದರ ಧಾರಣೆಯಿಂದಲೇ ಇಷ್ಟಸಿದ್ಧಿಯುಂಟಾಗುತ್ತದೆ. ಆದುದರಿಂದ ಬಾಹ್ಯಲಿಂಗಧಾರಣೆ ಮತ್ತು ಅದರ ಪೂಜೆಗಳು ನಿಷ್ಫಲವಲ್ಲವೇ? ಎಂಬ ಜಿಜ್ಞಾಸುಗಳ ಆಕ್ಷೇಪಕ್ಕೆ ಹೀಗೆ ಉತ್ತರಿಸಲಾಗಿದೆ- ಅದು ಹಾಗಲ್ಲ. ಅಂತರ್ಯಜನವು ಬಹಿರ್ಯಜನಪೂರ್ವಕ ವಾಗಿಯೇ ಸಿದ್ಧಿಸುವಂತೆ, ಅಂತರ್ಲಿಂಗಧಾರಣೆ ಮತ್ತು ಅದರ ಪೂಜಾದಿಗಳು ಬಾಹ್ಯಲಿಂಗಧಾರಣೆ ಮತ್ತು ಅದರ ಪೂಜಾದಿಗಳ ಮೂಲಕವೇ ಸಿದ್ಧಿಸುತ್ತದೆ.

ಇದರ ತಾತ್ಪರ್ಯವಿಷ್ಟು- "ಆದೌ ಸಗುಣಮಾಶ್ರಿತ್ಯ ಪಶ್ಚಾನ್ನಿರ್ಗುಣಮಾಶ್ರ ಯೇತ್" (ಮೊದಲು ಸಗುಣವನ್ನಾಶ್ರಯಿಸಿ ನಂತರದಲ್ಲಿ ನಿರ್ಗುಣವನ್ನಾಶ್ರಯಿಸಬೇಕು) ಎಂಬ ನ್ಯಾಯದಂತೆ ನಿಷ್ಕಲವಾದ ಅರ್ಥಾತ್ ಸಗುಣವಾದ ಇಷ್ಟಲಿಂಗದ ಪೂಜೆಯ ತರುವಾಯವೇ ಸಕಲನಿಷ್ಕಲ ಮತ್ತು ಕೇವಲನಿಷ್ಕಲಗಳಾದ ಪ್ರಾಣಲಿಂಗ- ಭಾವಲಿಂಗಗಳ ಅನುಸಂಧಾನದ ಅಧಿಕಾರಿಯಾಗುತ್ತಾನೆ. ಬಾಹ್ಯ ಜಾಗ್ರದವಸ್ಥೆಯಲ್ಲಿ ಅನುಭವಿಸಿದ ಅರ್ಥವೇ ಸ್ವಪ್ನಾವಸ್ಥೆಯಲ್ಲಿ ಅದರ ಸಂಸ್ಕಾರಬಲದಿಂದ ಹೇಗೆ ನೋಡಲ್ಪಡುತ್ತದೆಯೋ ಹಾಗೆಯೇ ಬಾಹ್ಯಲಿಂಗಪೂಜಾಸಂಸ್ಕಾರಬಲದಿಂದಲೇ ಅಂತರ್ಲಿಂಗಪೂಜಾದಿಗಳು ಸುಲಭವಾಗಿ ಲಭಿಸುತ್ತವೆ. ಇದಲ್ಲದೆ ಪರಮಾತ್ಮನ

ಅನುಗ್ರಹವಿಲ್ಲದೆ ಜೀವನಿಗೆ ಅಂತರ್ಲಿಂಗಾನುಸಂಧಾನ ಸಮರ್ಥವಾಗುವುದಿಲ್ಲ. ಮತ್ತು ಪರಮಾತ್ಮನ ಅನುಗ್ರಹವು, ಅವನ (ಪರಮಾತ್ಮನ) ಬಾಹ್ಯಪೂಜೆಯಿಲ್ಲದೆ ಲಭಿಸಲಾರದು. ಆದುದರಿಂದ ಬಾಹ್ಯಪೂಜೆಯನ್ನು ಅನಿವಾರ್ಯವೂ ಹಾಗೂ ಅವಶ್ಯವಾಗಿ ಆಚರಿಸಲೇಬೇಕು. ಆದುದರಿಂದಲೇ ಶ್ರೀ ಮರಿತೋಂಟದಾರ್ಯರು-

ಬಾಹ್ಯೋ ಜಾಗ್ರದವಸ್ಥಾಯಾಮನುಭೂತಾರ್ಥ ಏವ ಹಿ।
ಅಂತಃ ಸ್ವಪ್ನದಶಾಯಾಂ ತು ಯಥೈವ ಪರಿದೃಶ್ಯತೇ॥
ತಥಾಽಂತರ್ಯಜನಂ ನಿತ್ಯಂ ಬಹಿರ್ಯಜನಪೂರ್ವಕಮ್।
ಬಹಿರ್ಯಾಗವಿಹೀನಶ್ಚೇದಂತರ್ಯಾಗೋ ನ ಸಿಧ್ಯತಿ॥
ತದ್ಬಾಹ್ಯಾಂಗೇ ಚಾಂತರಂಗೇ ಪರಮಪ್ರೀತಿಪೂರ್ವಕಮ್।
ಕರ್ತವ್ಯಂ ಸ್ವೇಷ್ಟಲಿಂಗಸ್ಯ ಪೂಜನಂ ಚ ಮನೀಷಿಭಿಃ॥
ಗವಾಂ ಸರ್ಪಿಃ ಶರೀರಸ್ಥಂ ನ ಕರೋತ್ಯಾತ್ಮಪೋಷಣಮ್।
ನಿಸ್ಸೃತಂ ಕರ್ಮಣಾ ಬಾಹ್ಯೇ ಪುನಸ್ತಾಸಾಂ ತು ಭೇಷಜಮ್॥
ಏವಮಂತಃಶರೀರಸ್ಥಃ ಪರಾತ್ಮಾ ಪರಮೇಶ್ವರಃ।
ವಿನಾರ್ಚನಾಂ ಬಹಿರ್ದೇವೋ ಹಿತಂ ನ ಕುರುತೇ ನೃಣಾಮ್॥[೨೭೫]

"ಜಾಗ್ರದವಸ್ಥೆಯಲ್ಲಿ ಆದ ಬಾಹ್ಯ ಅನುಭವವೇ ಸ್ವಪ್ನದಶೆಯಲ್ಲಿ ಹೇಗೆ ಒಳಗೆ ಕಂಡುಬರುತ್ತದೆಯೋ ಹಾಗೆಯೇ ಅಂತರ್ಲಿಂಗಪೂಜೆಯು ಬಹಿರ್ಲಿಂಗಪೂಜಾ ಪೂರ್ವಕವಾಗಿದೆ. ಬಹಿರ್ಯಾಗವನ್ನು ಮಾಡದವನಿಗೆ ಅಂತರ್ಯಾಗವು ಸಿದ್ಧಿಸುವುದಿಲ್ಲ. ಆದುದರಿಂದ ಜ್ಞಾನಿಗಳು ಬಾಹ್ಯದಲ್ಲಿ ಮತ್ತು ಅಂತರಂಗದಲ್ಲಿ ಅತ್ಯಂತ ಪ್ರೀತಿಪೂರ್ವಕವಾಗಿ ತಮ್ಮ ಇಷ್ಟಲಿಂಗಪೂಜೆಯನ್ನು ಮಾಡಬೇಕು. ಶರೀರದಲ್ಲಿಯೇ ಇರುವ ಗೋವಿನ ತುಪ್ಪವು ಅದರ ಪೋಷಣೆಯನ್ನು ಮಾಡುವುದಿಲ್ಲ. ಅದು ಬಾಹ್ಯದಲ್ಲಿ ಬಂದು ಕರ್ಮದ ಮೂಲಕ ಗೋವುಗಳಿಗೆ ಔಷಧವಾಗುತ್ತದೆ. ಹಾಗೆಯೇ ಶರೀರದ ಒಳಗಿರುವ ಪರಮಾತ್ಮನಾದ ಪರಮೇಶ್ವರನು ಬಾಹ್ಯದಲ್ಲಿ ಪೂಜಿಸಲ್ಪಡದೆ ಜೀವಿಗಳಿಗೆ ಹಿತವನ್ನು ಮಾಡುವುದಿಲ್ಲ" ಎಂದು ಅನೇಕ ಉಪಾಯಗಳಿಂದ ಬಾಹ್ಯಲಿಂಗಾರ್ಚನೆಯು ಕರ್ತವ್ಯವೆಂದು ಸಮರ್ಥಿಸಲಾಯಿತು. ಶ್ರೀ ಜಗದ್ಗುರು ರೇಣುಕಾಚಾರ್ಯರೂ ಸಹ ಹೀಗೆಯೇ ಅಪ್ಪಣೆಮಾಡಿದ್ದಾರೆ.[೨೭೬]

ಇಷ್ಟ-ಪ್ರಾಣ-ಭಾವಲಿಂಗಗಳ ಆವರಣ ಶಬ್ದವಾಚ್ಯತ್ವ

ಈ ಪ್ರಕಾರ ವೀರಶೈವ ಸಿದ್ಧಾಂತದಲ್ಲಿ ಅಂತರ್ಲಿಂಗಾನುಸಂಧಾನಿಗಳಾದ ಶಿವಯೋಗಿಗಳಿಂದ ಮತ್ತು ಅಂತರ್ಲಿಂಗಾನುಸಂಧಾನಿಗಳಲ್ಲದ ಸಾಧಕರಿಂದ ಬಾಹ್ಯಲಿಂಗಧಾರಣೆ ಹಾಗೂ ಬಾಹ್ಯಲಿಂಗದ ಪೂಜಾದಿಗಳು ಅವಶ್ಯವಾಗಿ

---

[೨೭೫] ೨೭೫. ವೀ.ಆ.ಚ, ಪೃ. ೫೮

[೨೭೬] ೨೭೬. ಅಂತರ್ಧಾರಯಿತುಂ ಲಿಂಗಮಶಕ್ತಃ ಶಕ್ತ ಏವ ವಾ।
ಬಾಹ್ಯಂ ಚ ಧಾರಯೇಲ್ಲಿಂಗಂ ತದ್ರೂಪಮಿತಿ ನಿಶ್ಚಯಾತ್॥ -ಸಿ.ಶಿ, ೬.೪೭

ಮಾಡಲ್ಪಡುತ್ತವೆ. ಏಕೆಂದರೆ ಬಾಹ್ಯಲಿಂಗಪೂಜೆಯು ನಿತ್ಯಕರ್ಮಗಳಲ್ಲೊಂದಾಗಿದೆ, ನಿತ್ಯಕರ್ಮವಾದ ಬಾಹ್ಯಲಿಂಗಪೂಜೆಯನ್ನು ಮಾಡದಿದ್ದರೆ ಪಾಪವುಂಟಾಗುತ್ತದೆ.

ಹೀಗೆ ಮೇಲೆ ಹೇಳಲಾದ ಇಷ್ಟಲಿಂಗೋಪಾಸನೆಯಿಂದ ಕಣ್ಣುಗಳು, ಪ್ರಾಣಲಿಂಗೋಪಾಸನೆಯಿಂದ ಮನಸ್ಸು ಮತ್ತು ಭಾವಲಿಂಗೋಪಾಸನೆಯಿಂದ ಬುದ್ಧಿ -ಇವುಗಳ ಪಾವಿತ್ರ್ಯವನ್ನು ಸಂಪಾದಿಸಿದ ಸಾಧಕನು ತ್ರಿಕರಣಶುದ್ಧನಾಗುತ್ತಾನೆ. ಇಂದ್ರಿಯ, ಮನಸ್ಸು, ಬುದ್ಧಿಗಳ ನೈರ್ಮಲ್ಯಕ್ಕೆ ಕಾರಣವಾದ ಇಷ್ಟ-ಪ್ರಾಣ-ಭಾವ ಎಂಬ ಹೆಸರುಳ್ಳ ಲಿಂಗಗಳು ಸಾಂಸಾರಿಕ ವಿಷಯದಲ್ಲಿ ಸಾಧಕನನ್ನು ರಕ್ಷಿಸುತ್ತವೆ ಎನ್ನುವ ಕಾರಣ ಇವು ರಕ್ಷಾಕವಚರೂಪ ಆವರಣ ಶಬ್ದಗಳೆಂದು ತಿಳಿಯಬೇಕು. ಅವುಗಳಲ್ಲಿಯೂ ಕೂಡ ಇಷ್ಟಲಿಂಗವು ಸ್ಥೂಲಶರೀರದ, ಪ್ರಾಣಲಿಂಗವು ಸೂಕ್ಷ್ಮಶರೀರದ ಮತ್ತು ಭಾವಲಿಂಗವು ಕಾರಣಶರೀರದ ಆವರಣಗಳೆಂದು ಅರಿಯಬೇಕು.

೩. ಜಂಗಮ

ಈ ಜಗತ್ತು ಸ್ಥಾವರ ಮತ್ತು ಜಂಗಮವೆಂದು ಎರಡು ಬಗೆಯಾಗಿದೆ. ಯಾವುದು ಒಂದೇ ಸ್ಥಳದಲ್ಲಿ ಯಾವಾಗಲೂ ಇರುತ್ತದೆಯೋ ಅದು ಸ್ಥಾವರ, ಸಂಚಾರಶೀಲವಾದದ್ದು ಜಂಗಮ ಎಂದು ಸಾಮಾನ್ಯವಾದ ವಿವರಣೆ, ವೀರಶೈವ ಸಿದ್ಧಾಂತದ ಪ್ರಕಾರ ಸಮಸ್ತ ಪ್ರಪಂಚವನ್ನು ಶಿವಸ್ವರೂಪವೆಂದು ತಿಳಿದಿರುವುದರಿಂದ[೨೭೭] ಪೂರ್ವೋಕ್ತ ಸ್ಥಾವರ-ಜಂಗಮಗಳನ್ನು ಶಿವನ ಎರಡು ಸ್ವರೂಪಗಳೆಂದು ಅಂಗೀಕರಿಸಲಾಗಿದೆ. ಈ ಪ್ರಕಾರ ಸಾಮಾನ್ಯವಾಗಿ ಸ್ಥಾವರರೂಪಿ ಶಿವಲಿಂಗದಲ್ಲಿ ಮತ್ತು ಜಂಗಮರೂಪಿಯಾದ ಶಿವಜ್ಞಾನಿಯಲ್ಲಿ ಶಿವಸಾನ್ನಿಧ್ಯವು ಸಮಾನವಾದರೂ ಕೂಡ, ಶಿವನು ಶೀಘ್ರವಾಗಿ ಅನುಗ್ರಹಿಸಲಿ ಎನ್ನುವ ಕಾರಣದಿಂದ ಶಿವಲಿಂಗ ಮತ್ತು ಜಂಗಮರ ಪೂಜೆಯು ವಿಹಿತವಾಗಿದೆ. ಆದುದರಿಂದ ವೀರಶೈವಧರ್ಮದ ಅಷ್ಟಾವರಣಗಳಲ್ಲಿ ಮೂರನೆಯ ಆವರಣವಾಗಿ ಪರಿಗಣಿತವಾಗಿರುವ ಜಂಗಮವನ್ನು ಶಿವಜ್ಞಾನಿ ಎಂದು ತಿಳಿಯಬೇಕು. ಅವನಿಗೆ ಚರ-ಚರಲಿಂಗವೆಂಬ ನಾಮಾಂತರವೂ ಪ್ರಸಿದ್ಧವಾಗಿದೆ.

ಏಕ ಏವ ಶಿವಃ ಸಾಕ್ಷಾತ್ ಸರ್ವಾನುಗ್ರಹಕಾರಕಃ।
ಗುರುಜಂಗಮಲಿಂಗಾತ್ಮಾ ವರ್ತತೇ ಭುಕ್ತಿಮುಕ್ತಿದಃ॥[೨೭೮]

"ಎಲ್ಲರಿಗೂ ಅನುಗ್ರಹವನ್ನುಂಟುಮಾಡುವವನೂ, ಭೋಗಮೋಕ್ಷಗಳನ್ನು ಅನುಗ್ರಹಿಸುವವನೂ ಆದ ಶಿವನೊಬ್ಬನೇ ಪ್ರತ್ಯಕ್ಷವಾಗಿ ಗುರು-ಲಿಂಗ-ಜಂಗಮ ಸ್ವರೂಪನಾಗಿದ್ದಾನೆ" ಎಂಬ ರೇಣುಕ ಭಗವತ್ಪಾದರ ಉಕ್ತಿಯಂತೆ ಶಿವನೊಬ್ಬನೇ ಗುರು ರೂಪದಿಂದ, ಲಿಂಗರೂಪದಿಂದ ಮತ್ತು ಜಂಗಮರೂಪದಿಂದ

---

[೨೭೭] ಪತ್ರಶಾಖಾದಿರೂಪೇಣ ಯಥಾ ತಿಷ್ಠತಿ ಪಾದಪಃ।
ತಥಾ ಭೂಮ್ಯಾದಿರೂಪೇಣ ಶಿವ ಏಕೋ ವಿರಾಜತೇ॥ -ಸಿ.ಶಿ, ೧೦.೬೬

[೨೭೮] ಸಿ.ಶಿ, ೯.೫೯

ಅವತರಿಸಿ ತನ್ನ ಭಕ್ತರಿಗೆ ಭುಕ್ತಿ-ಮುಕ್ತಿಗಳನ್ನು ನೀಡುತ್ತಾನೆ. ಆದುದರಿಂದಲೇ- "ಏಕಮೂರ್ತೇಸ್ತ್ರಯೋ ಭಾಗಾ ಗುರುರ್ಲಿಂಗಂ ಚ ಜಂಗಮಃ"[೨೭೯] (ಒಂದೇ ಮೂರ್ತಿಯು ಗುರು-ಲಿಂಗ-ಜಂಗಮವೆಂದು ಮೂರು ಬಗೆಯಾಗಿದೆ) ಎಂಬ ನುಡಿಯು ಪ್ರಸಿದ್ಧವಾಗಿದೆ. ಆದುದರಿಂದ ವೀರಶೈವ ಸಿದ್ಧಾಂತದಲ್ಲಿ ಭಗವಂತನ ಈ ಮೂರು ಮೂರ್ತಿಗಳನ್ನು ಸಮಾನವಾಗಿ ಗೌರವಿಸಲಾಗುತ್ತದೆ. ಗುರು ಮತ್ತು ಲಿಂಗದ ಸ್ವರೂಪವನ್ನು ಈಗಾಗಲೇ ನಿರೂಪಿಸಲಾಗಿದೆ. ಈಗ ಕ್ರಮವಾಗಿ ಮೂರನೆಯ ಆವರಣವಾದ ಜಂಗಮದ ಸ್ವರೂಪ, ಜಂಗಮಶಬ್ದದ ವೀರಶೈವ ದರ್ಶನದ ಪರಿಭಾಷೆ, ಅವಸ್ಥಾತ್ರಯಗಳನ್ನು ಹಾಗೂ ಜಂಗಮ ಶಬ್ದದ ಸಂಪ್ರದಾಯ ಪರಿಭಾಷೆ ಇತ್ಯಾದಿಗಳನ್ನು ಶಾಸ್ತ್ರಗ್ರಂಥಗಳಲ್ಲಿ ನಿರೂಪಿತವಾಗಿರುವಂತೆ ವಿಮರ್ಶಿಸಲಾಗುವುದು.

ಜಂಗಮ ಶಬ್ದದ ತಾತ್ತ್ವಿಕವಾದ ಅರ್ಥ

ಜಾನಂತ್ಯತಿಶಯಾದ್ ಯೇ ತು ಶಿವಂ ವಿಶ್ವಪ್ರಕಾಶಕಮ್।
ಸ್ವಸ್ವರೂಪತಯಾ ತೇ ತು ಜಂಗಮಾ ಇತಿ ಕೀರ್ತಿತಾಃ॥[೨೮೦]

"ಇಡೀ ಜಗತ್ತನ್ನು ಬೆಳಗುತ್ತಿರುವ ಶಿವನನ್ನು ಅತಿಶಯವಾಗಿ ಸ್ವಸ್ವರೂಪತ್ವದಿಂದ ಯಾರು ತಿಳಿಯುತ್ತಾರೆಯೋ ಅವರು ಜಂಗಮರೆಂದು ಕರೆಯಲ್ಪಡುತ್ತಾರೆ" ಎಂದು ಶ್ರೀ ರೇಣುಕ ಭಗವತ್ಪಾದರು ದಾರ್ಶನಿಕ ಪರಿಭಾಷೆಯ ಮುಖೇನ ಜಂಗಮ ಶಬ್ದದ ತಾತ್ತ್ವಿಕವಾದ ಅರ್ಥವನ್ನು ವರ್ಣಿಸಿದ್ದಾರೆ. ಈ ಶ್ಲೋಕದ ಅರ್ಥವಿಷ್ಟು- "ತಸ್ಯ ಭಾಸಾ ಸರ್ವಮಿದಂ ವಿಭಾತಿ"[೨೮೧] (ಪರಮಾತ್ಮನ ಪ್ರಕಾಶದಿಂದ ಈ ಜಗತ್ತೆಲ್ಲವೂ ಬೆಳಗುತ್ತದೆ) ಎಂಬ ಶ್ರುತಿ ವಚನದಂತೆ ತನ್ನ ಚಿತ್ ಮತ್ತು ಕ್ರಿಯಾಶಕ್ತಿಗಳಿಂದ ಪ್ರಪಂಚದ ಪ್ರಕಾಶಕನಾದ ಶಿವನನ್ನು ಯಾರು ತಮ್ಮ ಸ್ವರೂಪದಿಂದಲೂ ಅರ್ಥಾತ್ ತನ್ನನ್ನು ಶಿವನ ಅತಿಶಯವಾದ ರೂಪವೆಂದು ನಿಶ್ಚಯವಾಗಿ ತಿಳಿಯುತ್ತಾರೆಯೋ ಅವರೇ ಜಂಗಮರೆಂದು ಕರೆಯಲ್ಪಡುತ್ತಾರೆ. ಈ ವಿವರಣೆಯಿಂದ ಜಂಗಮನೆಂದರೆ ಹುಟ್ಟು-ಸಾವುಗಳಿಲ್ಲದ ಜೀವನ್ಮುಕ್ತನಾದ ಮಹಾಪುರುಷ ಎಂದು ತಿಳಿಯಬೇಕು.

ವೀರಶೈವ ಸದಾಚಾರ ಸಂಗ್ರಹದಲ್ಲಿ[೨೮೨] ಜಂಗಮ ಶಬ್ದದ ನಿರ್ವಚನವನ್ನು ಈ ರೀತಿಯಾಗಿ ಮಾಡಲಾಗಿದೆ. 'ಜ' ಎಂದರೆ ಜನನರಹಿತನು, 'ಗ' ಎಂದರೆ ಗಮನ

---

[೨೭೯] ಚ.ಜ್ಞಾ, ಕ್ರಿ.ಪಾ, ೫.೧೫

[೨೮೦] ಸಿ.ಶಿ, ೧೧.೩೬

[೨೮೧] ಮುಂಡ.ಉ, ೨-೨-೧೦

[೨೮೨] ಜಕಾರಾಜ್ಜನನಂ ದೂರಂ ಗಕಾರಾದ್ ಗತಿನಾಶನಮ್।
ಮಕಾರಾನ್ಮರಣಂ ನಷ್ಟಂ ಜಂಗಮಸ್ತ್ರ್ಯಕ್ಷರಾತ್ಮಕಃ॥
ಯಸ್ಯ ನಾಸ್ತಿ ಪುನರ್ಜನ್ಮ ಗತಿರ್ನಾಸ್ತಿ ಕದಾಚನ।
ಬಾಧತೇ ಯಂ ನ ಮರಣಂ ಶೃಣು ನಾಥೇ ಸ ಜಂಗಮಃ॥
ಜರಾಮರಣಶೂನ್ಯತ್ವಾದ್ ಗಮಾಗಮವಿವರ್ಜನಾತ್।
ಮನುಷ್ಯಾಚಾರರಾಹಿತ್ಯಾಜ್ಜಂಗಮೋಽಯಮುದಾಹೃತಃ॥ -ವೀ.ಸ.ಸಂ, ೧೫.೬-೮

ರಹಿತನು ಮತ್ತು 'ಮ' ಎಂದರೆ ಮರಣರಹಿತನು ಎಂದು ಪ್ರತಿಯೊಂದು ಅಕ್ಷರದ ಅರ್ಥ ಪ್ರತಿಪಾದನೆಯ ಮೂಲಕ ಜಂಗಮನು ಮುಪ್ಪು-ಸಾವುಗಳಿಲ್ಲದವನು, ಆದುದರಿಂದ ಆತನು ಜೀವನ್ಮುಕ್ತನೆಂದು ಪ್ರತಿಪಾದಿಸಲಾಗಿದೆ. ನಿಸ್ಪೃಹನೂ, ನಿರಹಂಕಾರಿಯೂ ಆದ ಅವನು ಲೋಕಕಲ್ಯಾಣಕ್ಕಾಗಿ ತತ್ತ್ವೋಪದೇಶ ಮಾಡಲು ಸದಾ ಸಂಚಾರ ಮಾಡುತ್ತಿರುತ್ತಾನೆ.[೨೮೨(ಎ)] ಶಿವೇನ ಯೋಗಮ್ (ಶಿವನೊಡನೆ ಸೇರುತ್ತಾನೆ), ಅಂದರೆ ಶಿವನೊಂದಿಗೆ ಐಕ್ಯವನ್ನು ಹೊಂದುತ್ತಾನೆ ಎನ್ನುವ ಕಾರಣ ಜಂಗಮನನ್ನು ಶಿವಯೋಗಿ ಎಂಬ ನಾಮಾಂತರದಿಂದಲೂ ಕರೆಯುತ್ತಾರೆ.

"ಬ್ರಹ್ಮ ಜಾನಾತೀತಿ ಬ್ರಾಹ್ಮಣಃ" (ಬ್ರಹ್ಮನನ್ನು ತಿಳಿದಿರುವುದರಿಂದ ಬ್ರಾಹ್ಮಣ) ಎಂಬ ನಿರ್ವಚನದಂತೆ, ಉಪನಿಷತ್ತುಗಳಲ್ಲಿ ಪ್ರತಿಪಾದಿತವಾಗಿರುವ ಬ್ರಾಹ್ಮಣ ಶಬ್ದವು ಬ್ರಹ್ಮಜ್ಞಾನಿ ವಾಚಕವಾಗಿರುವಂತೆ ಆಗಮ ಗ್ರಂಥಗಳಲ್ಲಿ ನಿರೂಪಿತವಾಗಿರುವ ಜಂಗಮ ಶಬ್ದವೂ ಸಹ ಶಿವಜ್ಞಾನಿ ವಾಚಕವಾಗಿದೆ. ಆದುದರಿಂದ ಬ್ರಾಹ್ಮಣ-ಜಂಗಮ ಶಬ್ದಗಳು ತಾತ್ತ್ವಿಕ ದೃಷ್ಟಿಯಿಂದ ಪರ್ಯಾಯವಾಚಕಗಳೆಂದು ನಿರ್ಧಾರವಾಗುತ್ತದೆ.

ವಜ್ರಸೂಚಿಕೋಪನಿಷತ್ತಿನಲ್ಲಿ ಬ್ರಾಹ್ಮಣ ಶಬ್ದವು ಜೀವ-ದೇಹ-ಜಾತ್ಯಾದಿ ವಾಚಕಗಳೆಂದು ನಿರೂಪಿತವಾಗಿಲ್ಲವೆಂಬ ವಿತಂಡವಾದಿಗಳ ಯುಕ್ತಿಯಂತೆಯೂ ಬ್ರಾಹ್ಮಣ ಶಬ್ದವು ಬ್ರಹ್ಮಜ್ಞಾನಿ ವಾಚಕವೆಂದು ಸಮರ್ಥಿತವಾಗಿದೆ. ಅದನ್ನೇ ಇಲ್ಲಿ ಯಥಾವತ್ತಾಗಿ ಉಲ್ಲೇಖಿಸಲಾಗುವುದು- "ಅಲ್ಲಿ ಕುಹಕತನವಿದೆ, ಬ್ರಾಹ್ಮಣನೆಂದರೆ ಯಾರು? ಜೀವನೇ, ದೇಹವೇ, ಜಾತಿಯೇ, ಜ್ಞಾನವೇ, ಕರ್ಮವೇ, ಧಾರ್ಮಿಕವೇ? ಎಂದು. ಅವುಗಳಲ್ಲಿ ಮೊದಲನೆಯದಾದ ಜೀವವು ಬ್ರಾಹ್ಮಣ ಎಂದು ಹೇಳುವುದಾದರೆ, ಗತಿಸಿ ಹೋಗಿರುವ ಹಾಗೂ ಮುಂದೆ ಉಂಟಾಗಬಹುದಾದ ಅನೇಕ ಶರೀರಗಳಲ್ಲಿ ಜೀವಾತ್ಮನು ಒಂದೇ ವಿಧವಾಗಿರುವುದರಿಂದಲೂ, ಕರ್ಮವಶದಿಂದ ಅನೇಕ ದೇಹಗಳಲ್ಲಿ ಸಂಭವಿಸುವುದರಿಂದಲೂ, ಎಲ್ಲ ಶರೀರಧಾರಿಗಳಲ್ಲಿಯೂ ಜೀವಾತ್ಮನು ಒಂದೇ ವಿಧವಾಗಿರುವುದರಿಂದಲೂ ಜೀವ ಬ್ರಾಹ್ಮಣವಲ್ಲ. ಆದುದರಿಂದ ಬ್ರಾಹ್ಮಣ ಎಂದರೆ ಜೀವವಲ್ಲ. ಆದರೆ ದೇಹವು ಬ್ರಾಹ್ಮಣ ವಾಚಕ ಎಂದರೆ, ದೇಹವೂ ಬ್ರಾಹ್ಮಣ ವಾಚಕವಲ್ಲ. ಚಾಂಡಾಲನೇ ಮೊದಲ್ಗೊಂಡು ಸಮಸ್ತ ಮನುಷ್ಯರ ದೇಹಗಳು ಪಂಚಮಹಾಭೂತಗಳಿಂದಾಗಿದ್ದು ದೇಹವು ಎಲ್ಲರಲ್ಲಿಯೂ ಒಂದೇ ವಿಧವಾಗಿದ್ದು ಮುಪ್ಪು, ಸಾವು, ಧರ್ಮ, ಅಧರ್ಮ ಇತ್ಯಾದಿಗಳ ಹೋಲಿಕೆಯು ಕಂಡುಬರುವುದರಿಂದಲೂ ಬ್ರಾಹ್ಮಣನು ಬಿಳಿಯ ಬಣ್ಣ, ಕ್ಷತ್ರಿಯನು ಕೆಂಪು ಬಣ್ಣದವನು, ವೈಶ್ಯನು ಹಳದಿ ಬಣ್ಣದವನು ಮತ್ತು ಶೂದ್ರನು ಕಪ್ಪು ಬಣ್ಣದವನೆಂಬ ನಿಯಮಗಳಿಲ್ಲದಿರುವುದ ರಿಂದಲೂ, ತಂದೆಯೇ ಮೊದಲಾದವರ ದೇಹವನ್ನು

೨೮೨(ಎ). ಸರ್ವಲೋಕೋಪಕಾರಾಯ ಯೋ ದೇವಃ ಪರಮೇಶ್ವರಃ।
ಚರತ್ಯತಿಥಿರೂಪೇಣ ನಮಸ್ತೇ ಜಂಗಮಾತ್ಮನೇ॥ -(ವೀರಾಗಮ)

ಸುಡುವುದರಿಂದ ಪುತ್ರ-ಪೌತ್ರಾದಿಗಳಿಗೆ ಬ್ರಹ್ಮಹತ್ಯೆಯೇ ಮೊದಲಾದ ದೋಷಗಳು ಬರುವುದರಿಂದಲೂ ದೇಹವು ಬ್ರಾಹ್ಮಣ ವಾಚಕವಲ್ಲ. ಬ್ರಾಹ್ಮಣ ಶಬ್ದವು ಜಾತಿವಾಚಕವೇ ಎಂದು ಹೇಳಿದರೂ ಕೂಡ ಜಾತಿವಾಚಕವಲ್ಲ. ಜಾತ್ಯಂತರ ಪ್ರಾಣಿಗಳಲ್ಲಿ ಅನೇಕ ಜಾತಿಗಳಲ್ಲಿ ಹುಟ್ಟಿದ ಅನೇಕ ಮಹರ್ಷಿಗಳುಂಟು. ಋಷ್ಯಶೃಂಗನು ಬೇಡರಿಂದ ಹುಟ್ಟಿದನು, ಕೌಶಿಕನು ದರ್ಬೆಯಿಂದ, ಜಾಂಬೂಕನು ಜಂಬೂಕದಿಂದಲೂ, ವಾಲ್ಮೀಕಿಯು ಹುತ್ತದಿಂದಲೂ, ವ್ಯಾಸನು ಬೆಸ್ತ ಕನ್ಯೆಯಲ್ಲಿಯೂ, ಗೌತಮ ಮೊಲದ ಪೃಷ್ಠ ಭಾಗದಿಂದಲೂ, ವಸಿಷ್ಠನು ಊರ್ವಶಿಯಿಂದಲೂ, ಅಗಸ್ತ್ಯನು ಕಲಶದಿಂದ ಹುಟ್ಟಿದನೆಂದು ಕೇಳಿರುವ ಕಾರಣದಿಂದ ಬ್ರಾಹ್ಮಣ ಶಬ್ದವು ಜಾತಿವಾಚಕವಲ್ಲ. ಈ ಎಲ್ಲ ಋಷಿಗಳಿಗೆ ಜಾತಿಯಿಲ್ಲದಿದ್ದರೂ ಮುಂದೆ ಅವರೆಲ್ಲರೂ ಜ್ಞಾನಪ್ರತಿಪಾದಕರಾದರು. ಆದುದರಿಂದ ಬ್ರಾಹ್ಮಣ ಶಬ್ದವು ಜಾತಿವಾಚಕವಲ್ಲ. ಹಾಗಾದರೆ ಜ್ಞಾನವು ಬ್ರಾಹ್ಮಣ ಶಬ್ದವಾಚಕ ಎಂದು ಹೇಳೋಣವೆಂದರೆ, ಅದೂ ಅಲ್ಲ. ಪರಮಾರ್ಥವನ್ನು ತಿಳಿದ ಕ್ಷತ್ರಿಯರೇ ಮೊದಲಾದವರು ಅನೇಕ ಜನ ಇದ್ದಾರೆ. ಆದುದರಿಂದ ಬ್ರಾಹ್ಮಣ ಶಬ್ದವು ಜ್ಞಾನವಾಚಕವಲ್ಲ. ಬ್ರಾಹ್ಮಣ ಶಬ್ದವು ಕರ್ಮವಾಚಕವೇ ಎಂದರೆ, ಅದೂ ಅಲ್ಲ. ಎಲ್ಲ ಪ್ರಾಣಿಗಳ ಪ್ರಾರಬ್ಧ ಕರ್ಮದಿಂದ ಸಂಚಿತವಾಗಿ ಬಂದ ಕರ್ಮಸಾಧರ್ಮ್ಯವು ಕಂಡುಬರುವುದರಿಂದಲೂ ಕರ್ಮದಿಂದ ಪ್ರೇರಿತರಾದ ಸಜ್ಜನರು ಕ್ರಿಯೆಗಳನ್ನು ಮಾಡುತ್ತಾರೆ. ಆದುದರಿಂದ ಬ್ರಾಹ್ಮಣ ಶಬ್ದವು ಕರ್ಮವಾಚಕವಲ್ಲ. ಹಾಗಾದರೆ ಬ್ರಾಹ್ಮಣ ಶಬ್ದವು ಧಾರ್ಮಿಕ ವಾಚಕವೇ ಎಂದರೆ, ಅಲ್ಲ ಎಂದು ಉತ್ತರಿಸಲಾಗಿದೆ. ಸುವರ್ಣಾದಿಗಳನ್ನು ದಾನಮಾಡುವ ಕ್ಷತ್ರಿಯರಾದಿಯಾಗಿ ಅನೇಕ ಜನರಿದ್ದಾರೆ. ಆದುದರಿಂದ ಬ್ರಾಹ್ಮಣ ಶಬ್ದವು ಧಾರ್ಮಿಕ ವಾಚಕವಲ್ಲ. ಹಾಗಾದರೆ ಬ್ರಾಹ್ಮಣನೆಂದರೆ ಯಾರು? ಎಂಬ ಜಿಜ್ಞಾಸೆಯುಂಟಾಗುತ್ತದೆ. ಆ ಜಿಜ್ಞಾಸೆಯನ್ನು ಹೀಗೆ ಪರಿಹರಿಸಲಾಗಿದೆ- ಯಾವನಾದರೂ ಒಬ್ಬನು ತನ್ನನ್ನು ಜಾತಿ-ಗುಣ-ಕ್ರಿಯಾಹೀನನೆಂದೂ, ಷಡೂರ್ಮಿ-ಷಡ್‌ಭಾವ ಮೊದಲಾದ ಎಲ್ಲ ದೋಷವಿಲ್ಲದವನೆಂದೂ, ಸತ್ಯ-ಜ್ಞಾನ-ಆನಂದ ಅನಂತ ಸ್ವರೂಪವನ್ನು ಸ್ವಯಂ ನಿರ್ವಿಕಲ್ಪ-ಸಮಸ್ತ ಕಲ್ಪಗಳಿಗೂ ಆಧಾರನೆಂದು ಸಮಸ್ತ ಭೂತಾಂತರ್ಯಾಮಿಯಾಗಿರುವ, ಆಕಾಶದಂತೆ ಬಾಹ್ಯಾಂತರಗಳಲ್ಲಿ ವ್ಯಾಪಕವಾಗಿರುವ, ನಿರಂತರ ಆನಂದ ಸ್ವಭಾವವಾದ, ಅಪ್ರಮೇಯವಾದ, ಅನುಭವ ಮಾತ್ರದಿಂದ ತಿಳಿಯುವ, ಅಪರೋಕ್ಷದಿಂದ ತೋರುವವನನ್ನು ಕೈಯಲ್ಲಿರುವ ನೆಲ್ಲಿಕಾಯಿಯನ್ನು ಸಾಕ್ಷಾತ್ಕರಿಸಿಕೊಂಡು ಕೃತಾರ್ಥನಾಗಿರುವುದರಿಂದ ಕಾಮ-ರಾಗಾದಿ ದೋಷಗಳಿಂದ ವರ್ಜಿತನೂ, ಶಮ-ದಮಾದಿ ಸಂಪನ್ನನೂ, ಮಾನ- ಮಾತ್ಸರ್ಯ - ಆಸೆ - ಮೋಹಾದಿ ಗುಣರಹಿತನೂ, ದಂಬ - ಅಹಂಕಾರಾದಿಗಳಿಂದ ಮುಕ್ತನಾಗಿರುತ್ತಾನೆ. ಈ ರೀತಿಯಾದ ಲಕ್ಷಣವುಳ್ಳವನು ‘ಬ್ರಾಹ್ಮಣ’ ಎಂಬುದು ಶ್ರುತಿ-ಸ್ಮೃತಿ- ಪುರಾಣಗಳ ಅಭಿಪ್ರಾಯವಾಗಿದೆ. ಇಲ್ಲದಿದ್ದರೆ ಬ್ರಾಹ್ಮಣತ್ವ ಸಿದ್ಧಿಯಾಗುವುದಿಲ್ಲ.

ಉಪನಿಷತ್ತಿನಲ್ಲಿ ಪ್ರತಿಪಾದಿತವಾಗಿರುವ ಬ್ರಾಹ್ಮಣ ಶಬ್ದದ ಈ ನಿರ್ವಚನದಿಂದ ಬ್ರಾಹ್ಮಣನೆಂದರೆ ದೇಹ-ಜಾತ್ಯಾದಿಗಳಲ್ಲ, ಆದರೆ ಬ್ರಹ್ಮಜ್ಞಾನಿ ಎಂದು ನಿಶ್ಚಯ

ವಾಗುವಂತೆ ಜಂಗಮ ಶಬ್ದವೂ ಸಹ ಜೀವ - ದೇಹ - ಜಾತಿ - ಜ್ಞಾನ - ಕರ್ಮ - ಧರ್ಮಾದಿವಾಚಕವಾಗಿರದೆ 'ಶಿವಜ್ಞಾನಿ'ವಾಚಕವಾಗಿದೆ ಎಂದು ನಿರ್ಧಾರವಾಗುತ್ತದೆ.

ವ್ಯವಹಾರದಲ್ಲಿ ಜಂಗಮ ಶಬ್ದದ ಅರ್ಥ

ಬ್ರಹ್ಮಜ್ಞಾನಿವಾಚಕವಾದ ಬ್ರಾಹ್ಮಣ ಶಬ್ದದಿಂದ ಲೋಕದಲ್ಲಿ ಯಾವ ರೀತಿಯಾಗಿ ಬ್ರಾಹ್ಮಣ ಶಬ್ದವು ಜಾತಿಬೋಧವಾಗಿದೆಯೋ ಹಾಗೆಯೇ ಶಿವಜ್ಞಾನಿ ವಾಚಕವಾದ ಜಂಗಮ ಶಬ್ದದಿಂದ ಜಂಗಮವೂ ಸಹ ಜಾತಿಬೋಧಕವೇ ಆಗುತ್ತದೆ. ಆದುದರಿಂದ ವೀರಮಾಹೇಶ್ವರವಂಶದಲ್ಲಿ ಜನಿಸಿದವರೂ ಸಹ ಜಂಗಮ ಎಂದು ಕರೆಯಲ್ಪಡುತ್ತಾರೆ. ಆದುದರಿಂದಲೇ-

ಅತೋ ವಿಶಿಷ್ಟವೀರೇತಿ ವೀರಮಾಹೇಶ್ವರೇತಿ ಚ।
ಪರ್ಯಾಯೋ ವರ್ತತೇ ದೇವಿ ಜಂಗಮಸ್ಯ ಮಹಾತ್ಮನಃ॥[೨೮೩]

"ಹೇ ದೇವಿ, ಆದುದರಿಂದ ಜಂಗಮನಿಗೆ ವಿಶಿಷ್ಟವೀರ ಮತ್ತು ವೀರಮಾಹೇಶ್ವರ ಎಂಬ ಪರ್ಯಾಯ ಶಬ್ದಗಳೂ ಇವೆ."

ಆದುದರಿಂದ ವೀರಮಾಹೇಶ್ವರ-ಜಂಗಮ ಶಬ್ದಗಳು ಪರ್ಯಾಯಪದಗಳೇ ಆಗಿವೆ. ಚಂದ್ರಜ್ಞಾನಾಗಮದಲ್ಲಿಯೂ ಸಹ ಮಾಹೇಶ್ವರ - ಚರ - ಜಂಗಮ ಶಬ್ದಗಳು ಪರ್ಯಾಯಪದಗಳೆಂದು ಸಮರ್ಥಿಸಲಾಗಿದೆ.[೨೮೪] ಮಹಾಭಾರತದ ಅನುಶಾಸನ ಪರ್ವದಲ್ಲಿ ಜಂಗಮನಿಗೆ 'ಲಿಂಗಿಬ್ರಾಹ್ಮಣ' ಎಂಬ ಹೆಸರನ್ನು ಕೊಡಲಾಗಿದೆ.[೨೮೫] ಲಿಂಗಧಾರಣೆಯಿಲ್ಲದ ಬ್ರಾಹ್ಮಣರು ಇರುವುದರಿಂದಲೂ ಅವರನ್ನು ಇದರ ವ್ಯಾಪ್ತಿಯಿಂದ ಹೊರಗಿಡಲು ಇಲ್ಲಿ 'ಲಿಂಗಿ' ಎಂಬ ವಿಶೇಷಣವನ್ನು ಸೇರಿಸಲಾಗಿದೆ. ಬ್ರಹ್ಮನಿಂದ ಸೃಷ್ಟಿಸಲ್ಪಟ್ಟಿರುವ ಚತುರ್ವರ್ಣಗಳಲ್ಲಿ ಬ್ರಾಹ್ಮಣನಿಗೆ ಪ್ರಾಶಸ್ತ್ಯವಿರುವಂತೆ ಶಿವನಿಂದ ಸೃಷ್ಟಿಸಲ್ಪಟ್ಟಿರುವ ಅತಿವರ್ಣಾಶ್ರಮವೆಂಬ ವೀರಶೈವ ಪರಂಪರೆಯ ವೀರಮಾಹೇಶ್ವರವಂಶದಲ್ಲಿ ಹುಟ್ಟಿದ ಜಂಗಮನಿಗೂ ಸಹ ಹೆಚ್ಚು ಪ್ರಾಶಸ್ತ್ಯವಿದೆ. ಆದುದರಿಂದಲೇ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಹಾಗೂ ಹಬ್ಬಗಳಲ್ಲಿ ಎಲ್ಲ ವೀರಶೈವರೂ ಸಹ ಸದಾಚಾರಶೀಲನಾದ ಜಂಗಮನನ್ನು ಕರೆದು, ಅವನ

---

[೨೮೩] ವೀ.ಸ.ಸಂ, ೧೧.೪೫

[೨೮೪] ಮಾಹೇಶ್ವರಶ್ಚರೋ ಭಕ್ತಃ ಶೈವೋ ಜಂಗಮ ಇತ್ಯಪಿ।
ಸಹಜಸ್ಯಾಭಿಧಾನಾನಿ ಭವಂತೀಶ್ವರಶಾಸನಾತ್॥ -ಚ.ಜ್ಞಾ, ಕ್ರಿ.ಪಾ, ೪.೭

[೨೮೫] ಕಿಮಾಹುರ್ಭರತಶ್ರೇಷ್ಠ ವಿಪ್ರಾಃ ಪಾತ್ರಂ ಸನಾತನಮ್।
ಲಿಂಗಿನಂ ಬ್ರಾಹ್ಮಣಂ ಚೈವ ಬ್ರಾಹ್ಮಣಂ ಚಾಪ್ಯಲಿಂಗಿನಮ್॥
ಸದ್‌ವೃತ್ತಿಮಂತಂ ವಿಜ್ಞಾಯ ಲಿಂಗಿನೇ ಚೇತರಾಯ ಚ।
ದೇಯಮಾಹುರ್ಮಹಾರಾಜ ಉಭಾವೇತೌ ತಪಸ್ವಿನೌ॥
(ಮ.ಭಾ, ಅನುಶಾಸನಪರ್ವ, ೨೨.೧-೨)

ಪಾದಪೂಜಾದಿಗಳನ್ನು ಮಾಡಿ, ಭೋಜನ-ದಕ್ಷಿಣೆಗಳಿಂದ ಅವನನ್ನು ಸಂತೋಷಗೊಳಿಸಿ, ಅವನ ಚರಣಾಮೃತವನ್ನು ಭಕ್ತಿಯಿಂದ ಪ್ರಾಶನಮಾಡುತ್ತಾರೆ.

ಪ್ರಚಲಿತವಿರುವ ಈ ಪರಂಪರೆಯ ಅವಲೋಕನದಿಂದ ತಿಳಿಯುವುದೇನೆಂದರೆ ಈ ಜಂಗಮವಂಶದಲ್ಲಿ ಬಹುಪ್ರಾಚೀನ ಕಾಲದಿಂದಲೇ ಶಿವಜ್ಞಾನಿಗಳ ಪರಂಪರೆಯು ಬಂದಿದೆ. ಇಂದಿಗೂ ಕೂಡ ಆ ಬಗೆಯ ಶಿವಜ್ಞಾನಿಗಳಾದ ಜಂಗಮರು ಅಲ್ಲಲ್ಲಿ ಕಂಡುಬರುತ್ತಾರೆ. ಜಂಗಮವಂಶದಲ್ಲಿ ಹುಟ್ಟಿದ ಎಲ್ಲರಿಗೂ ಆ ಬಗೆಯ ಜ್ಞಾನದ ಅಭಾವವಿದ್ದರೂ ಸಹ ಶಿವಜ್ಞಾನಿಗಳ ಸಂತತಿ ಎನ್ನುವ ಕಾರಣ ಇಂದಿಗೂ ಅವರ ಮಹಿಮೆಯು ಲೋಕದಲ್ಲಿದೆ. ಈ ಅವಸ್ಥೆಯು ಬ್ರಾಹ್ಮಣ ಪರಂಪರೆಯಲ್ಲಿಯೂ ಸಮಾನವಾಗಿದೆ. ಎಲ್ಲ ಬ್ರಾಹ್ಮಣರೂ ಬ್ರಹ್ಮಜ್ಞಾನಿಗಳಾಗುವುದಿಲ್ಲ, ಆದರೂ ಸಹ ಬ್ರಹ್ಮಜ್ಞಾನಿಗಳ ಸಂತತಿ ಎನ್ನುವ ಕಾರಣದಿಂದ ಎಲ್ಲ ಬ್ರಾಹ್ಮಣರಿಗೂ ಗೌರವವಿದೆ. ಈ ಪ್ರಕಾರ ತಾತ್ತ್ವಿಕ ದೃಷ್ಟಿಯಿಂದ ಮತ್ತು ವ್ಯಾವಹಾರಿಕ ದೃಷ್ಟಿಯಿಂದ ಜಂಗಮ-ಬ್ರಾಹ್ಮಣ ಶಬ್ದಗಳು ಸಮಾನಾರ್ಥಕಗಳು. ಆದುದರಿಂದ ಜಂಗಮರಿಗೆ ಲಿಂಗಿಬ್ರಾಹ್ಮಣ ಎಂಬ ವ್ಯವಹಾರವು ಲೋಕದಲ್ಲಿ ಪ್ರಚಲಿತವಿದೆ.

ಜಂಗಮನ ಲಕ್ಷಣ

ಚಂದ್ರಜ್ಞಾನಾಗಮದಲ್ಲಿ ಜ್ಞಾನಿಜಂಗಮನ ಹತ್ತು ಬಗೆಯ ಬಾಹ್ಯಲಕ್ಷಣಗಳು ಮತ್ತು ಮೂರು ಅಂತರಂಗಲಕ್ಷಣಗಳು ಪ್ರತಿಪಾದಿತವಾಗಿವೆ. ಅದರಂತೆ ಲಿಂಗ, ಭಸ್ಮ, ರುದ್ರಾಕ್ಷಿಯೇ ಮುಂತಾದ ಶಿವಚಿಹ್ನೆಗಳನ್ನು ಆದರದಿಂದ ಧರಿಸಿಕೊಳ್ಳುವುದು, ಸದ್ಗುರುವಿನ ಸೇವೆ, ಸದಾ ಶಿವಸ್ತುತಿ ಮಾಡುವುದು, ಶಿವನಾಮೋಚ್ಚಾರಣೆ, ಶಿವಪೂಜೆ, ಶಿವಾಗಮಗಳ ಅರ್ಥಾನುಸಂಧಾನ, ಪ್ರತಿನಿತ್ಯ ಶಿವಪುರಾಣಾದಿಗಳ ಶ್ರವಣ, ಪೂಜ್ಯರಾದವರಿಗೆ ನಮಸ್ಕಾರ, ಶಿವಭಕ್ತರ ಮನೆಯಲ್ಲಿಯೇ ಭೋಜನ, ತನ್ನ ಶಕ್ತ್ಯಾನುಸಾರ ಸತ್ಪಾತ್ರರಿಗೆ ದಾನ -ಇವು ಹತ್ತು ಬಗೆಯ ಬಾಹ್ಯಲಕ್ಷಣಗಳು. ಹೀಗೆಯೇ ಮಾನಸೀಪೂಜೆ, ಮಾನಸಿಕ ಜಪ ಮತ್ತು ಸ್ವಾಂತ ಶಿವಸಾಕ್ಷಾತ್ಕಾರಗಳು ಜಂಗಮನ ಮೂರು ಅಂತರಂಗದ ಲಕ್ಷಣಗಳೆಂದು ತಿಳಿಯಬೇಕು.[೨೮೬]

ಈ ಬಗೆಯ ವಿಲಕ್ಷಣವಾದ ಲಕ್ಷಣಗಳುಳ್ಳ ಜಂಗಮರು ಸಾಮಾನ್ಯವಾಗಿ ಮನುಷ್ಯನ ರೂಪದಲ್ಲಿ ಕಂಡರೂ ಕೂಡ ಸಾಕ್ಷಾತ್ ಪರಶಿವನ ರೂಪವೇ ಆಗಿದ್ದಾರೆ.[೨೮೭] ಆದುದರಿಂದ ತನ್ನ ಹಿತವನ್ನು ಬಯಸುವ ಮನುಷ್ಯನು ತನ್ನ ಶಕ್ತಿಯ ಮತ್ತು ಭಕ್ತಿಯ ಅನುಸಾರವಾಗಿ ಜಂಗಮರನ್ನು ಗೌರವಿಸಬೇಕು. ಅವರನ್ನು ಗೌರವಿಸುವುದರಿಂದ ಎಲ್ಲ

---

[೨೮೬] ಚ.ಜ್ಞಾ, ಕ್ರಿ.ಪಾ, ೪.೧೨-೧೮

[೨೮೭] ತದ್ಯಥಾಶಕ್ತಿ ಸಂಪೂಜ್ಯಾ ಜಂಗಮಾ ಹಿ ಹಿತೇಪ್ಸುನಾ।
ಯದಮೀ ಮಾನುಷಾಕಾರಾಃ ಪ್ರತ್ಯಕ್ಷಪರಮೇಶ್ವರಾಃ।। -ಚ.ಜ್ಞಾ, ಕ್ರಿ.ಪಾ, ೪.೩೦

ಪವಿತ್ರ ತೀರ್ಥಗಳ ಸ್ನಾನದ ಫಲ ಮತ್ತು ಸಮಸ್ತ ದೇವತೆಗಳ ಪೂಜೆಯ ಫಲವು ದೊರೆಯುತ್ತದೆ.[೨೮೮]

ಜಂಗಮನ ಉತ್ಕೃಷ್ಟತ್ವ

ಸಂಸಾರಸಾಗರೇಽಗಾಧೇ ದುಃಖಾವರ್ತಶತಾಕುಲೇ।
ಮಜ್ಜತಾಂ ಮನುಜಾನಾಂ ವೈ ಪೂಜಾ ಮಾಹೇಶ್ವರಸ್ಯ ನೌಃ॥[೨೮೯]

"ದಾಟಲಾಗದ, ದುಃಖಗಳೆಂಬ ನೂರಾರು ಸುಳಿಗಳಿಂದ ಕೂಡಿರುವ ಸಂಸಾರ ಸಾಗರದಲ್ಲಿ ಮುಳುಗುತ್ತಿರುವ ಮನುಷ್ಯರಿಗೆ ಜಂಗಮನ ಪೂಜೆಯೇ ನೌಕೆಯಾಗಿದೆ" ಎಂಬ ಶಂಕರಸಂಹಿತೆಯಲ್ಲಿ ಮಾಹೇಶ್ವರನೆಂಬ ಮತ್ತೊಂದು ಪರ್ಯಾಯವುಳ್ಳ ಜಂಗಮನ ಪೂಜೆಯೇ ಸಂಸಾರವೆಂಬ ಸಾಗರವನ್ನು ದಾಟಲು ಸಾಧ್ಯವೆಂದು ನಿರೂಪಿಸಿ, ಮತ್ತೆ ಕ್ರಿಮಿ, ಕೀಟ, ಪತಂಗಗಳಿಗಿಂತಲೂ ಪ್ರಾಣಿಗಳು ಹೆಚ್ಚು ಬುದ್ಧಿಶಾಲಿಗಳು, ಪ್ರಾಣಿಗಳಿಗಿಂತಲೂ ಮನುಷ್ಯರು, ಅವರಲ್ಲಿಯೂ ದ್ವಿಜರು, ದ್ವಿಜರಲ್ಲಿ ಲಿಂಗಾಂಗ ಸಂಗಿಗಳು ಮತ್ತು ಲಿಂಗಾಂಗಸಂಗಿಗಳಲ್ಲಿಯೂ ಷಟ್‌ಸ್ಥಲಜ್ಞಾನಸಂಪನ್ನನಾದವನು ಎಂದು ಉತ್ತರೋತ್ತರದ ಶ್ರೇಷ್ಠತೆಯನ್ನು ಪ್ರತಿಪಾದಿಸಿ- "ತಸ್ಮಾದಪ್ಯಧಿಕೋ ನಾಸ್ತಿ ತ್ರಿಷು ಲೋಕೇಷು ಸರ್ವದಾ" (ಆದುದರಿಂದ ಯಾವಾಗಲೂ ಮೂರು ಲೋಕಗಳಲ್ಲಿಯೂ ಷಟ್‌ಸ್ಥಲಜ್ಞಾನಸಂಪನ್ನನಾದವನಿಗಿಂತ ಶ್ರೇಷ್ಠನಾದವನು ಇರುವುದಿಲ್ಲ) ಎಂದು ಷಟ್‌ಸ್ಥಲ ಜ್ಞಾನಿಯಾದ ಜಂಗಮನ ಸರ್ವೋತ್ಕೃಷ್ಟತ್ವವು ಘೋಷಿಸಲ್ಪಟ್ಟಿದೆ. ಸಿದ್ಧಾಂತ ಶಿಖಾಮಣಿಯಲ್ಲಿಯೂ ಸಹ-

ಅಜಂಗಮಂ ತು ಯಲ್ಲಿಂಗಂ ಮೃಚ್ಛಿಲಾದಿವಿನಿರ್ಮಿತಮ್।
ತದ್ವರಂ ಜಂಗಮಂ ಲಿಂಗಂ ಶಿವಯೋಗೀತಿ ವಿಶ್ರುತಮ್॥

---

[೨೮೮] ಸರ್ವತೀರ್ಥಾಭಿಷೇಕಾಚ್ಚ ಸರ್ವಯಜ್ಞವಿಧಾನತಃ।
ಸರ್ವದೇವಾರಾಧನಾಚ್ಚ ಚರಪೂಜಾ ಗರೀಯಸೀ॥ -ಚ.ಜ್ಞಾ, ಕ್ರಿ.ಪಾ, ೪.೩೩

[೨೮೯] ಕ್ರಿಮಿಕೀಟಪತಂಗೇಭ್ಯಃ ಪಶವಃ ಪ್ರಜ್ಞಯಾಧಿಕಾಃ।
ಪಶುಭ್ಯೋಽಪಿ ನರಾಃ ಶ್ರೇಷ್ಠಾಸ್ತೇಷು ಶ್ರೇಷ್ಠಾ ದ್ವಿಜಾತಯಃ॥
ದ್ವಿಜಾತಿಷ್ವಧಿಕಾ ವಿಪ್ರಾ ವಿಪ್ರೇಷು ಕೃತಬುದ್ಧಯಃ।
ಕೃತಬುದ್ಧಿಷು ಕರ್ತಾರಸ್ತೇಭ್ಯಃ ಸಂನ್ಯಾಸಿನೋಽಧಿಕಾಃ॥
ತೇಷು ವಿಜ್ಞಾನಿನಃ ಶ್ರೇಷ್ಠಾಸ್ತೇಷು ಶಂಕರಪೂಜಕಾಃ।
ತೇಷು ಶ್ರೇಷ್ಠಾ ಮಹಾಭಾಗಾ ಮಮ ಲಿಂಗಾಂಗಸಂಗಿನಃ॥
ಲಿಂಗಾಂಗಸಂಗಿಷ್ವಧಿಕಃ ಷಟ್‌ಸ್ಥಲಜ್ಞಾನವಾನ್ ಭವೇತ್।
ತಸ್ಮಾದಪ್ಯಧಿಕೋ ನಾಸ್ತಿ ತ್ರಿಷು ಲೋಕೇಷು ಸರ್ವದಾ॥
ಸ ವಂದ್ಯಃ ಸರ್ವದಾ ಪೂಜ್ಯಃ ಸಂಸಾರವಿಜಿಗೀಷುಭಿಃ।
ತಸ್ಮೈ ದೇಯಂ ತತೋ ಗ್ರಾಹ್ಯಂ ಸ ಚ ಪೂಜ್ಯೋ ಯಥಾ ಹ್ಯಹಮ್॥
-ವೀ.ಆ.ಚ, ಪು. ೪೪೫; ಸ್ಕಂದ.ಶ. ೮೪.೭೧-೭೫

ಅಚರೇ ಮಂತ್ರಸಂಸ್ಕಾರಾಲ್ಲಿಂಗೇ ವಸತಿ ಶಂಕರಃ।
ಸದಾಕಾಲಂ ವಸತ್ಯೇವ ಚರಲಿಂಗೇ ಮಹೇಶ್ವರಃ॥[೨೯೦]

“ಮಣ್ಣು, ಕಲ್ಲು ಮೊದಲಾದವುಗಳಿಂದ ನಿರ್ಮಿತವಾದ ಲಿಂಗವು ಅಜಂಗಮ (ಸ್ಥಿರ) ಲಿಂಗವೆನಿಸುತ್ತದೆ. ಆ ಸ್ಥಿರಲಿಂಗಕ್ಕಿಂತಲೂ ಶಿವಯೋಗಿಯೆಂದು ಸುಪ್ರಸಿದ್ಧವಾದ ಜಂಗಮ (ಚರ) ಲಿಂಗವು ಶ್ರೇಷ್ಠವಾದುದು. ಸ್ಥಿರಲಿಂಗದಲ್ಲಿ ಶಂಕರನು ಮಂತ್ರ ಸಂಸ್ಕಾರದಿಂದ ಮಾತ್ರ ವಾಸಿಸುತ್ತಾನೆ. ಚರಲಿಂಗದಲ್ಲಿ ಶಿವನು ಸದಾಕಾಲ ವಾಸಿಸುತ್ತಾನೆ” ಎಂದು ಚರಲಿಂಗ (ಜಂಗಮಲಿಂಗ) ಮತ್ತು ಅಚರಲಿಂಗ (ಸ್ಥಾವರಲಿಂಗ)ವೆಂದು ಲಿಂಗದ ಎರಡು ಪ್ರಕಾರಗಳನ್ನು ಪ್ರತಿಪಾದಿಸಿ, ಮಣ್ಣು-ಶಿಲೆ ಮೊದಲಾದವುಗಳಿಂದ ನಿರ್ಮಿತವಾದ ಸ್ಥಾವರಲಿಂಗಕ್ಕಿಂತಲೂ ಶಿವಯೋಗಿಯ ರೂಪದಲ್ಲಿರುವ ಜಂಗಮಲಿಂಗದ ಶ್ರೇಷ್ಠತೆಯನ್ನು ದೃಷ್ಟಾಂತ ಸಹಿತ ಪ್ರತಿಪಾದಿತವಾಗಿದೆ. ಆದುದರಿಂದ ವೀರಶೈವ ಸಿದ್ಧಾಂತದಲ್ಲಿ ಇಷ್ಟಲಿಂಗಾರ್ಚನೆಗಿಂತಲೂ ಜಂಗಮಾರ್ಚನೆಗೆ ಪ್ರಾಶಸ್ತ್ಯವನ್ನು ಕೊಡಲಾಗಿದೆ ಎಂದು ತಿಳಿಯುತ್ತದೆ. “ಲಿಂಗಮುಖಂ ವೈ ಜಂಗಮಃ” (ಲಿಂಗದ ಮುಖವೇ ಜಂಗಮ) ಎಂಬ ಉಕ್ತಿಯಂತೆ ಜಂಗಮನು ಲಿಂಗದ ಮುಖವೆಂಬ ಅಭಿಧಾನದಿಂದ ಜಂಗಮನಿಗೆ ಅರ್ಪಿತವಾದ ಎಲ್ಲವೂ ಲಿಂಗಾರ್ಪಿತವಾಗುತ್ತದೆ. ಆದುದರಿಂದಲೇ ಶ್ರೀ ಜಗದ್ಗುರು ರೇಣುಕಾಚಾರ್ಯರು-

ಶಿವಯೋಗಿನಿ ಸಂತೃಪ್ತೇ ತೃಪ್ತೋ ಭವತಿ ಶಂಕರಃ।
ತತ್‌ತೃಪ್ತ್ಯಾ ತನ್ಮಯಂ ವಿಶ್ವಂ ತೃಪ್ತಿಮೇತಿ ಚರಾಚರಮ್।[೨೯೧]

ಎಂದು ಜಂಗಮನ ತೃಪ್ತಿಯಿಂದ ಶಿವನ ಸಂತೃಪ್ತಿ ಮತ್ತು ಶಿವನ ಸಂತೃಪ್ತಿಯಿಂದ ಚರಾಚರ ಪ್ರಪಂಚದ ಸಂತೃಪ್ತಿ ಎಂದು ಸಮರ್ಥಿಸಿದ್ದಾರೆ. ಆ ಕಾರಣ ಜಂಗಮಾರ್ಚನೆ ಮತ್ತು ಜಂಗಮಾರ್ಪಣೆಗಳು ಇಲ್ಲಿ ವಿಶೇಷವಾಗಿ ಪರಿಗಣಿತವಾಗಿವೆ.

ಈ ರೀತಿಯಾಗಿ ಶಿವಜ್ಞಾನ ಪ್ರಾಪ್ತಿಯಿಂದ ಸರ್ವೋತ್ಕೃಷ್ಟನಾದ ಜೀವನ್ಮುಕ್ತನಾದ ಜಂಗಮನು ಸ್ವಯ, ಚರ ಮತ್ತು ಪರ ಎಂಬ ಮೂರು ಅವಸ್ಥೆಗಳನ್ನು ಹೊಂದುತ್ತಾನೆ. ಆದುದರಿಂದ ಅವನು ಸ್ವಯಜಂಗಮ, ಚರಜಂಗಮ ಮತ್ತು ಪರಜಂಗಮ ಎಂಬ ಅವಸ್ಥೆಗಳಿಂದ ವ್ಯವಹರಿಸಲ್ಪಡುತ್ತಾನೆ. ಇವುಗಳ ಸ್ವರೂಪವನ್ನು ಕ್ರಮವಾಗಿ ಪರಿಶೀಲಿಸೋಣ.

ಸ್ವಯಜಂಗಮ

ಯಸ್ತು ಸರ್ವಾಣಿ ಭೂತಾನ್ಯಾತ್ಮನ್ಯೇವಾನುಪಶ್ಯತಿ।
ಸರ್ವಭೂತೇಷು ಚಾತ್ಮಾನಂ ತತೋ ನ ವಿಜುಗುಪ್ಸತೇ॥[೨೯೨]

---

[೨೯೦] ಸಿ.ಶಿ, ೯.೬೧-೬೨

[೨೯೧] ಸಿ.ಶಿ, ೯.೯೧

[೨೯೨] ಈಶಾವಾಸ್ಯೋಪನಿಶಷತ್, ೬

"ಯಾರು ಎಲ್ಲ ಪ್ರಾಣಿಗಳನ್ನು ತನ್ನ ಆತ್ಮನಲ್ಲಿಯೇ ನೋಡುವನೋ ಮತ್ತು (ತನ್ನ) ಆತ್ಮನನ್ನು ಎಲ್ಲ ಪ್ರಾಣಿಗಳಲ್ಲಿ ನೋಡುವನೋ ಅವನು ನಂತರದಲ್ಲಿ ಜುಗುಪ್ಸೆಯನ್ನು ಹೊಂದುವುದಿಲ್ಲ" ಎಂಬ ಶ್ರುತಿವಾಕ್ಯದಂತೆ ಈ ಜಂಗಮನು ಎಲ್ಲೆಡೆಯೂ ತನ್ನಂತೆಯೇ ಕಾಣುತ್ತಾನೆಂದು ಸ್ವಯಜಂಗಮ ಎಂದು ಕರೆಯಲ್ಪಡುತ್ತಾನೆ. ಸ್ವಯಜಂಗಮನ ಲಕ್ಷಣವನ್ನು ಶ್ರೀ ರೇಣುಕ ಭಗವತ್ಪಾದರು ಹೀಗೆ ನಿರೂಪಿಸಿದ್ದಾರೆ-

ಸ್ವಚ್ಛಂದಾಚಾರಸಂತುಷ್ಟೋ ಜ್ಯೋತಿರ್ಲಿಂಗಪರಾಯಣಃ।
ಆತ್ಮಸ್ಥಸಕಲಾಕಾರಃ ಸ್ವಾಭಿಧೋ ಮುನಿಸತ್ತಮಃ॥[೨೯೩]

"(ಸ್ವಯ ಜಂಗಮನು) ಸ್ವೇಚ್ಛಾಚಾರ ಸಂತುಷ್ಟನೂ, ಜ್ಯೋತಿರ್ಲಿಂಗ ಪರಾಯಣನೂ, ಸಮಸ್ತ ಪ್ರಪಂಚದ ಸ್ವರೂಪವನ್ನು ತನ್ನಲ್ಲಿರಿಸಿಕೊಂಡವನೂ, ಮುನಿಶ್ರೇಷ್ಠನೂ ಆಗಿರುವನು."

ಮಮತ್ವ ಅಹಂಕಾರಗಳಿಲ್ಲದ ಇವನು ಯಾರ ಅಧೀನದಲ್ಲಿಯೂ ಇರದೆ, ಸ್ವೇಚ್ಛೆಯಾಗಿ ಎಲ್ಲಿಯಾದರೂ ವಾಸಮಾಡುತ್ತಾ, ತನ್ನ ಇಷ್ಟಲಿಂಗದ ಪೂಜೆಮಾಡುತ್ತಾ ಪ್ರಾಣಲಿಂಗ-ಭಾವಲಿಂಗಗಳೆಂಬ ಜ್ಯೋತಿರ್ಲಿಂಗಗಳ ಅನುಸಂಧಾನ ಪರಾಯಣನಾಗುತ್ತಾನೆ. ಶಿವಜ್ಞಾನ, ಶಿವಧ್ಯಾನ, ಭಿಕ್ಷಾಹಾರ, ಏಕಾಂತಶೀಲತ್ವಗಳು ಈ ಮಹಾತ್ಮನ ಪ್ರಧಾನವಾದ ಕರ್ಮಗಳು.[೨೯೪] ಅಂದರೆ ಈತನು ಯಾವುದಾದರೂ ಗ್ರಾಮದಲ್ಲಿನ ಅಥವಾ ನಗರದಲ್ಲಿರುವ ಮಠದಲ್ಲಿ ಅಥವಾ ದೇವಾಲಯದಲ್ಲಿ ವಾಸಮಾಡುತ್ತಾ ಶಿವಧ್ಯಾನ ತತ್ಪರನಾಗಿ ಭಕ್ತರಿಗೆ ಶಿವಜ್ಞಾನವನ್ನು ಉಪದೇಶಿಸುತ್ತಾನೆ. ಶಿವಭಕ್ತರ ಮನೆಗಳಲ್ಲಿಯೇ ಭಿಕ್ಷೆಯನ್ನು ಬೇಡುತ್ತಾ ಅತಿಥಿಸತ್ಕಾರವನ್ನು ಮಾಡುತ್ತಾ, ತಾನೂ ಸಹ ಊಟ ಮಾಡುತ್ತಾನೆ. "ಪಂಡಿತಾಃ ಸಮದರ್ಶಿನಃ"[೨೯೫] (ಜ್ಞಾನಿಗಳು ಎಲ್ಲರನ್ನೂ ಸಮಾನವಾಗಿ ಕಾಣುತ್ತಾರೆ) ಎಂಬ ಗೀತೆಯ ಮಾತಿನಂತೆ ಎಲ್ಲೆಡೆಯೂ ಎಲ್ಲವೂ ತನ್ನಂತೆಯೇ ಎಂಬ ಸಮದರ್ಶಿತ್ವವು ಈತನಿಗೆ ಪ್ರಾಪ್ತವಾಗಿರುವುದರಿಂದ ಈತನು ಯಾರನ್ನೂ ದ್ವೇಷಿಸುವುದೂ ಇಲ್ಲ ಅಥವಾ ಅಸೂಯೆಪಡುವುದೂ ಇಲ್ಲ.

ಚರಜಂಗಮ

ಸ್ವರೂಪಜ್ಞಾನಸಂಪನ್ನೋ ಧ್ವಸ್ತಾಹಮ್ಮಮತಾಕೃತಿಃ।
ಸ್ವಯಮೇವ ಸ್ವಯಂ ಭೂತ್ವಾ ಚರತೀತಿ ಚರಾಭಿಧಃ॥[೨೯೬]

"ಸ್ವಸ್ವರೂಪ ಜ್ಞಾನಸಂಪನ್ನನೂ, ಅಹಂಕಾರ-ಮಮಕಾರ ವರ್ಜಿತನೂ ಆದ ಸ್ವಯ ಜಂಗಮನು ತಾನೇ ತಾನಾಗಿ ಸಂಚರಿಸುವುದರಿಂದ ಚರಜಂಗಮನೆಂದು

---

[೨೯೩] ಸಿ.ಶಿ, ೧೫.೫೨

[೨೯೪] ಧ್ಯಾನಂ ಶೈವಂ ತಥಾ ಜ್ಞಾನಂ ಭಿಕ್ಷಾ ಚೈಕಾಂತಶೀಲತಾ।
ಯತೇಶ್ಚತ್ವಾರಿ ಕರ್ಮಾಣಿ ನ ಪಂಚಮಮಿಹೇಷ್ಯತೇ॥ -ಸಿ.ಶಿ, ೧೫.೫೬

[೨೯೫] ಭಗವದ್ಗೀತಾ, ೫.೧೮

[೨೯೬] ಸಿ.ಶಿ, ೧೫.೫೭

ಹೇಳಿಸಿಕೊಳ್ಳುವನು" ಎಂಬ ಶ್ರೀ ರೇಣುಕ ಭಗವತ್ಪಾದರ ಉಕ್ತಿಯಂತೆ ಸ್ವಸ್ವರೂಪಜ್ಞಾನ ಸಂಪನ್ನನಾದ ಕಾರಣದಿಂದಲೇ ಅಹಂಕಾರ-ಮಮಕಾರಗಳಿಲ್ಲದ ಜೀವನ್ಮುಕ್ತನು ಲೋಕಕಲ್ಯಾಣಕ್ಕಾಗಿ ಯಾವಾಗ ಎಲ್ಲೆಡೆಯೂ ಸಂಚರಿಸುತ್ತಾನೆಯೋ ಆಗ ಚರಜಂಗಮನೆಂದು ಕರೆಯಲ್ಪಡುತ್ತಾನೆ. ಸ್ಥಿರವಾಗಿ ಎಲ್ಲಿಯೂ ವಾಸಿಸದ ಇವನು ಜ್ಞಾನೋಪದೇಶಕ್ಕಾಗಿ ಒಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ ಅಲೆಯುತ್ತಾನೆ. ತನ್ನ ಸಂಚಾರದ ಕಾಲದಲ್ಲಿ ಕೆಲವರಿಗೆ ದರ್ಶನ ನೀಡುತ್ತಲೂ, ಮತ್ತೆ ಕೆಲವರನ್ನು ಸ್ಪರ್ಶಿಸುತ್ತಲೂ ಮತ್ತು ಕೆಲವರಿಗೆ ಉಪದೇಶ ಮಾಡುತ್ತಲೂ ಜನರನ್ನು ಉದ್ಧಾರ ಮಾಡುತ್ತಾನೆ. ಲೋಕೋದ್ಧಾರವೇ ಚರಜಂಗಮನ ದೇಶಸಂಚಾರದ ಮುಖ್ಯ ಪ್ರಯೋಜನ. ಅವನ ಉಪದೇಶ ಶ್ರವಣದಿಂದ ಭಕ್ತರ ಅಂತರಂಗದಲ್ಲಿರುವ ಮಲಗಳು ನಾಶವಾಗಿ, ಭಕ್ತರು ಪರಿಶುದ್ಧರಾಗುತ್ತಾರೆ. ಈ ರೀತಿಯಾಗಿ ಭಕ್ತರ ಉದ್ಧಾರಕ್ಕಾಗಿ ಸಂಚಾರ ಮಾಡುವ ಚರಜಂಗಮನು ಚರಪಟ್ಟಾಧಿಕಾರಿ ಎಂದೂ ಕರೆಯಲ್ಪಡುತ್ತಾನೆ.[೨೯೭]

ಇದರಿಂದ ತಿಳಿಯುವುದೇನೆಂದರೆ ಪ್ರಾಚೀನಕಾಲದಲ್ಲಿ ವೀರಶೈವರ ಗುರುವರ್ಗ ಮಠಗಳಲ್ಲಿ ಯೋಗ್ಯರಾದ ಇಬ್ಬರು ವ್ಯಕ್ತಿಗಳಿಗೆ ಪಟ್ಟಾಭಿಷೇಕ ಮಾಡುತ್ತಿದ್ದರು. ಅವರಲ್ಲಿ ಒಬ್ಬನು ಪಟ್ಟಾಧಿಕಾರಿ, ಮತ್ತೊಬ್ಬನು ಚರಪಟ್ಟಾಧಿಕಾರಿ. ಪಟ್ಟಾಧಿಕಾರಿಯು ಮಠದಲ್ಲಿಯೇ ಇದ್ದುಕೊಂಡು ಮಠಕ್ಕೆ ಆಗಮಿಸುವ ಭಕ್ತರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾ ಅವರಿಗೆ ಜ್ಞಾನೋಪದೇಶವನ್ನು ಮಾಡುತ್ತಿದ್ದನು. ಆದರೆ ಚರಪಟ್ಟಾಧಿಕಾರಿಯು ಭಕ್ತರ ಮನೆಗಳಿಗೆ ಹೋಗಿ ಧರ್ಮೋಪದೇಶ ಮಾಡುವುದರ ಮೂಲಕ ಅವರನ್ನು ಕೃತಾರ್ಥರನ್ನಾಗಿ ಮಾಡುತ್ತಿದ್ದನು. ಈ ಪರಂಪರೆಯು ಶಾಖಾಮಠಗಳಲ್ಲಿ ಮಾತ್ರವಲ್ಲದೆ ವೀರಶೈವರ ಪ್ರಧಾನವಾದ ಪಂಚಪೀಠಗಳಲ್ಲಿಯೂ ಇತ್ತು. ಕಾಲಾನಂತರ ಒಬ್ಬನಿಗೇ ಎರಡೂ ಅಧಿಕಾರಗಳನ್ನು ಕೊಡುವ ಪರಂಪರೆಯು ಆಚರಣೆಗೆ ಬಂದಿತು. ಆದುದರಿಂದ ಈಗಿನ ವೀರಶೈವ ಮಠಗಳ ಸ್ಥಿರ-ಚರಪಟ್ಟಾಧಿಕಾರಿಗಳು ಸಂದರ್ಭಾನುಸಾರ ಭಕ್ತರ ಉದ್ಧಾರಕ್ಕಾಗಿ ಸಂಚಾರ ಮಾಡುತ್ತಲೂ ಹಾಗೂ ಮಠಗಳಲ್ಲಿ ವಾಸಿಸುತ್ತಲೂ ಎರಡೂ ಕಾರ್ಯಗಳನ್ನು ಬಹು ಸೊಗಸಾಗಿ ನಿರ್ವಹಿಸುತ್ತಿದ್ದಾರೆ.

ಪರಜಂಗಮ

"ಪರಶ್ಚ ಅಸೌ ಜಂಗಮಶ್ಚ ಪರಜಂಗಮಃ" ಎಂಬ ನಿರ್ವಚನದಂತೆ ಜೀವನ್ಮುಕ್ತರಲ್ಲಿ ಶ್ರೇಷ್ಠನಾದವನೇ ಪರಜಂಗಮ ಎಂದು ಕರೆಯಲ್ಪಡುತ್ತಾನೆ. ಅಲ್ಲದೆ 'ಪರ' ಎಂದರೆ ವಿಶ್ವೋತ್ತೀರ್ಣನಾದ ಪರಶಿವ, ಅವನನ್ನು ತನ್ನ ರೂಪದಿಂದ ತೈಲಧಾರೆಯಂತೆ ನಿರಂತರವಾಗಿ ಧ್ಯಾನಿಸುವ ಅವನಿಗೆ ತನಗಿಂತಲೂ ಭಿನ್ನವಾದ

---

[೨೯೭] ಕಾಂಶ್ಚಿದ್ ದರ್ಶನಮಾತ್ರೇಣ ಕಾಂಶ್ಚಿದಂಘ್ರಿಸಮೀಲನಾತ್।
ಹಸ್ತಾವಸ್ಪರ್ಶತಃ ಕಾಂಶ್ಚಿತ್ ಪಾವಯನ್ ಪ್ರಣತಾನ್ ಜನಾನ್॥
ಏವಂ ರೀತ್ಯಾ ಭಕ್ತಿಭಿಕ್ಷಾಂ ಸ್ವೀಕುರ್ವನ್ ಸಂಚರನ್ ಸದಾ।
ಚರಪಟ್ಟಾಧಿಕಾರೀ ಯಃ ಸ ಏವ ಚರಜಂಗಮಃ॥ -ವೀ.ಸ.ಸಂ, ೧೫.೩೦-೩೧

ಯಾವುದೇ ವಸ್ತುವಿಲ್ಲವೆಂದು ತಿಳಿಯುವವನನ್ನೇ ಪರಜಂಗಮನೆಂದು ಕರೆಯಲಾಗುವುದು.

> ಸ್ವಯಮೇವ ಸ್ವಯಂ ಭೂತ್ವಾ ಚರತಃ ಸ್ವಸ್ವರೂಪತಃ।
> ಪರಂ ನಾಸ್ತೀತಿ ಬೋಧಸ್ಯ ಪರತ್ವಮಭಿಧೀಯತೇ॥[೨೯೮]

"ತಾನೇ ತಾನಾಗಿ ಸಂಚರಿಸುತ್ತಿರುವ ಶಿವಯೋಗಿಗೆ ಸ್ವಸ್ವರೂಪಕ್ಕಿಂತಲೂ ಶ್ರೇಷ್ಠವಾದುದು ಯಾವುದೂ ಇಲ್ಲವೆಂಬ ಜ್ಞಾನವು ಪರಲಿಂಗವೆಂದು ಕರೆಯಲ್ಪಟ್ಟಿದೆ. ಅರ್ಥಾತ್ ಸ್ವಸ್ವರೂಪಜ್ಞಾನಿಯೇ ಪರಜಂಗಮ ಎಂದು ಕರೆಯಲ್ಪಡುತ್ತಾನೆ."

ಇದರಿಂದ ಸ್ಪಷ್ಟವಾಗುವುದಿಷ್ಟು- ಸ್ವಯಜಂಗಮನು ಘಟಪಟಾದಿ ಎಲ್ಲ ಪದಾರ್ಥಗಳಲ್ಲಿಯೂ ತನ್ನನ್ನೇ ಕಾಣುತ್ತಾನೆ, ಆದರೆ ಪರಜಂಗಮನಿಗೆ ಘಟಪಟಾದಿಗಳ ಪ್ರತೀತಿಯೇ ಉಂಟಾಗುವುದಿಲ್ಲ. ಆದರೆ ಅವನು ಎಲ್ಲೆಡೆಯೂ ತನ್ನನ್ನೇ ಕಾಣುತ್ತಾನೆ. ಅರ್ಥಾತ್ ಅವನಿಗೆ ವ್ಯಾವಹಾರಿಕ ಭೇದದ ಪ್ರತೀತಿಯುಂಟಾಗುವುದಿಲ್ಲ. ಆದುದರಿಂದಲೇ ಅವನು ಶಿವಯೋಗಿ, ಪರಮಹಂಸ ಎಂದು ಹೇಳಲ್ಪಡುತ್ತಾನೆ. ಅವನಿಗೆ ವ್ಯಾವಹಾರಿಕ ಭೇದದ ಪ್ರತೀತಿಯಿಲ್ಲದಿರುವುದರಿಂದ ಅವನು ತತ್ತ್ವೋಪದೇಶ ಮಾಡಲು ಅಸಮರ್ಥನು. ಆದರೆ ಅವನ ದರ್ಶನ-ಸ್ಪರ್ಶನಗಳಿಂದ ಜನಗಳು ಕೃತಾರ್ಥರಾಗುತ್ತಾರೆ. ಲೋಕಸಂಗ್ರಹಾದಿ ಸಂಸ್ಕಾರಗಳಿಲ್ಲದ ಅವನು ಸದೇಹಿಯಾಗಿದ್ದರೂ ನಿರ್ದೇಹಿ ಎಂದು ಕರೆಯಲ್ಪಡುತ್ತಾನೆ. ಆದುದರಿಂದ ಅವನ ಭೋಜನಾದಿ ಐಹಿಕ ವ್ಯವಹಾರಗಳು ಇತರರಿಂದಲೇ ಸಂಪಾದಿಸಲ್ಪಡುತ್ತವೆ. ಪರಜಂಗಮನ ಪಾದಸ್ಪರ್ಶದಿಂದ ನದಿಗಳು, ಪವಿತ್ರ ತೀರ್ಥಗಳು ಹಾಗೂ ಆ ನದಿ-ತೀರ್ಥಗಳಿರುವ ಸ್ಥಳಗಳು ದಿವ್ಯಕ್ಷೇತ್ರಗಳಾಗುತ್ತವೆ.

ಜಂಗಮದ ಆವರಣ ಶಬ್ದವಾಚ್ಯತ್ವ

ಈ ರೀತಿಯಾಗಿ ಜಂಗಮ ಶಬ್ದದ ಪರ್ಯಾಲೋಚನೆಯಿಂದ ವೀರಮಾಹೇಶ್ವರ ವಂಶದಲ್ಲಿ ಜನಿಸಿದ, ಶಿವಜ್ಞಾನ ಸಂಪನ್ನನಾದ, ಸ್ವಯ-ಚರ-ಪರಗಳೆಂಬ ಮೂರು ಅವಸ್ಥೆಗಳಿಂದ ಕೂಡಿದ, ಯಾವುದಾದರೂ ಗುರುವರ್ಗ ಮಠದಲ್ಲಿ ಚರಪಟ್ಟಾಧಿಕಾರಿಯಾಗಿ ಅಭಿಷಿಕ್ತನಾದ ಜೀವನ್ಮುಕ್ತನಾದ ಮಹಾಪುರುಷನೇ ಇಲ್ಲಿ ಜಂಗಮ ಶಬ್ದದಿಂದ ಕರೆಯಲ್ಪಟ್ಟಿದ್ದಾನೆಂದು ತಿಳಿದುಬರುತ್ತದೆ. ಈತನು ಎಲ್ಲೆಡೆಯೂ ಸಂಚಾರ ಮಾಡುತ್ತಾ, ಭಕ್ತರಿಗೆ ಶಿವಜ್ಞಾನವನ್ನುಪದೇಶಿಸುತ್ತಾ ಕಾಮ-ಕ್ರೋಧಾದಿ ಅರಿಷಡ್ವರ್ಗಗಳಿಂದ ಅವರನ್ನು ರಕ್ಷಿಸುತ್ತಾನೆ ಎನ್ನುವ ಕಾರಣದಿಂದ ಜಂಗಮನನ್ನು ವೀರಶೈವ ಸಿದ್ಧಾಂತದಲ್ಲಿ ಅಷ್ಟಾವರಣಗಳಲ್ಲಿ ಮೂರನೆಯ ಆವರಣವನ್ನಾಗಿ ಪರಿಗಣಿಸಲಾಗಿದೆ. ಇನ್ನು ನಾಲ್ಕನೆಯ ಆವರಣವೆಂದು ಪ್ರತಿಪಾದಿತವಾಗಿರುವ ಪಾದೋದಕದ ಸ್ವರೂಪವನ್ನು ವಿವೇಚಿಸಲಾಗುವುದು.

---

[೨೯೮] ಸಿ.ಶಿ, ೧೫.೬೪

೪. ಪಾದೋದಕ

ಅಷ್ಟಾವರಣಗಳಲ್ಲಿ ನಾಲ್ಕನೆಯ ಆವರಣವೆಂದರೆ ಪಾದೋದಕ. ಪಾದೋದಕ ಎಂದರೇನು? ಅದನ್ನು ನಿರ್ಮಿಸುವ ವಿಧಿ-ವಿಧಾನಗಳು ಹೇಗಿವೆ? ಅದನ್ನು ಸೇವಿಸುವ ಬಗೆ ಹೇಗೆ? ಇತ್ಯಾದಿ ಎಲ್ಲವನ್ನೂ ಈಗ ಶಾಸ್ತ್ರಾನುಸಾರವಾಗಿ ವಿವೇಚಿಸಲಾಗುವುದು.

ಪಾದೋದಕ ಶಬ್ದದ ಅರ್ಥ

"ಪಾದಸ್ಯ ಉದಕಂ ಪಾದೋದಕಮ್" ಎಂಬ ವಿಗ್ರಹದಂತೆ ಪಾದ ತೊಳೆದ ನೀರು ಅಥವಾ ಚರಣಾಮೃತ ಎಂದು ಸಾಮಾನ್ಯವಾಗಿ ಅರ್ಥಗಳುಂಟಾಗುತ್ತವೆ. ಅದರ ತಾತ್ತ್ವಿಕವಾದ ಅರ್ಥವಾದರೋ-

ಪರಮಾನಂದ ಏವೋಕ್ತಃ ಪಾದಶಬ್ದೇನ ನಿರ್ಮಲಃ।
ಜ್ಞಾನಂ ಚೋದಕಶಬ್ದೇನ ಪಾದೋದಕಮಿತಿ ಸ್ಮೃತಮ್॥[೨೯೯]

"ಪಾದಶಬ್ದದಿಂದ ನಿರ್ಮಲವಾದ ಮಹಾನಂದವು ಹೇಳಲ್ಪಡುತ್ತದೆ; ಉದಕ ಶಬ್ದದಿಂದ ಜ್ಞಾನವು ಹೇಳಲ್ಪಡುತ್ತದೆ. ಇವರೆಡರ ಸಂಬಂಧವುಳ್ಳದ್ದೇ ಪಾದೋದಕ ಎನಿಸುತ್ತದೆ" ಎಂದು ಶ್ರೀ ಜಗದ್ಗುರು ರೇಣುಕಾಚಾರ್ಯರು ಉಪದೇಶಿಸಿದ್ದಾರೆ. ಆ ಉಪದೇಶಾನು ಸಾರವಾಗಿ ಆತ್ಮನ ಸ್ವರೂಪದ ಅಥವಾ ಪರಮಾತ್ಮನ ಯಾವ ನಿರ್ಮಲವಾದ ಆನಂದವಿದೆಯೋ ಅದು ಪಾದ, ಅದರ ಯಾವ ಜ್ಞಾನವಿದೆಯೋ ಅದು ಉದಕ (ನೀರು). ಈ ಪ್ರಕಾರ ತನ್ನ ಅಥವಾ ಪರಮಾತ್ಮನ ವಿಷಯಕವಾದ ಆನಂದ ಸ್ವರೂಪ ಜ್ಞಾನವೇ ಪಾದೋದಕ. ನಿರುಪಾಧಿಕವಾದ ಸುಖವೇ ಆನಂದ ಮತ್ತು ಅದು ಆತ್ಮನ ಸ್ವರೂಪವುಳ್ಳದ್ದು. ಅಂತಹ ಪಾದೋದಕ ಪ್ರಾಪ್ತಿಯು ಆತ್ಮಜ್ಞಾನವಿಲ್ಲದೆ ಸಂಭವಿಸುವುದಿಲ್ಲ. ಆದುದರಿಂದಲೇ- "ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ"[೩೦೦] (ಆತ್ಮನನ್ನು ನೋಡಬೇಕು, ಶ್ರವಣ ಮಾಡಬೇಕು, ಮನನ ಮಾಡಬೇಕು, ನಿದಿಧ್ಯಾಸನ ಮಾಡಬೇಕು) ಎಂದು ಉಪನಿಷತ್ತಿನ ಸಂದೇಶ.

ಈ ರೀತಿಯಲ್ಲಿ ಶ್ರುತಿಯ ಅಪ್ಪಣೆಯ ಮೇರೆಗೆ ಸದ್ಗುರುವಿನ ಮೂಲಕ ತನ್ನ ಸ್ವರೂಪದ ಅಥವಾ ಪರಮಾತ್ಮನ ಸ್ವರೂಪದ ಶ್ರವಣ-ಮನನ-ನಿದಿಧ್ಯಾಸನದಿಂದ ನಿರುಪಾಧಿಕ ಆನಂದದ ಜ್ಞಾನವುಂಟಾಗುತ್ತದೆ. ಈ ಬಗೆಯ ಆನಂದ ಜ್ಞಾನವೇ ಪಾದೋದಕ ಶಬ್ದದ ತಾತ್ತ್ವಿಕವಾದ ಅರ್ಥ. ಹೀಗೆ ಸದ್ಗುರುವಿನ ಅನುಗ್ರಹದಿಂದುಂಟಾದ ನಿರ್ಮಲವಾದ ಪರಶಿವಸ್ವರೂಪಾನಂದ ಜ್ಞಾನಾಮೃತದ ಆಸ್ವಾದನೆಯೇ ತಾತ್ತ್ವಿಕವಾಗಿ ಪಾದೋದಕ ಸೇವನೆ ಎಂದು ಅರಿಯತಕ್ಕದ್ದು.

---

[೨೯೯] ಸಿ.ಶಿ, ೧೯.೭

[೩೦೦] ಬೃ.ಉ, ೨.೪-೫

ಮೂರು ಬಗೆಯ ತಾತ್ತ್ವಿಕ ಪಾದೋದಕಗಳು

ಈ ಪಾದೋದಕವು "ದೀಕ್ಷಾ ಶಿಕ್ಷಾ ಜ್ಞಾನಮಿತಿ ತ್ರಿಸಂಜ್ಞಂ ತದ್ಭವತ್ಯಹೋ"[೩೦೧] ಎಂಬ ಆಗಮೋಕ್ತಿಯಾನುಸಾರವಾಗಿ ದೀಕ್ಷಾಪಾದೋದಕ, ಶಿಕ್ಷಾಪಾದೋದಕ ಮತ್ತು ಜ್ಞಾನಪಾದೋದಕವೆಂದು ಮೂರು ವಿಧವಾಗುತ್ತದೆ.

ಅಥವಾ ಪಾದಶಬ್ದೇನ ಗುರುರೇವ ನಿಗದ್ಯತೇ।
ಶಿಷ್ಯಶ್ಚೋದಕಶಬ್ದೇನ ತಯೋರೈಕ್ಯಂ ತು ದೀಕ್ಷಯಾ।[೩೦೨]

"ಅಥವಾ ಪಾದಶಬ್ದದಿಂದ ಗುರುವು, ಉದಕ ಶಬ್ದದಿಂದ ಶಿಷ್ಯನು ಹೇಳಲ್ಪಡುತ್ತಾನೆ. ಅವರಿಬ್ಬರ ಐಕ್ಯವು ದೀಕ್ಷೆಯಿಂದ ಹೇಳಲ್ಪಟ್ಟಿದೆ" ಎಂಬ ಆಚಾರ್ಯರ ಉಕ್ತಿಯಂತೆ ಪಾದೋದಕ ಶಬ್ದವಾಚ್ಯರಾದ ಗುರು-ಶಿಷ್ಯರ ದೀಕ್ಷಾವಿಶೇಷದಿಂದ ಪ್ರಾಪ್ತವಾಗುವ ಐಕ್ಯಜ್ಞಾನವೇ ದೀಕ್ಷಾಪಾದೋದಕವು. 'ಗುಣಾನ್ ರುಂಧೇ ಇತಿ ಗುರುಃ' ಎಂಬ ನಿರ್ವಚನದಂತೆ ಯಾರು ಶಿಷ್ಯನ ಪ್ರಾಕೃತವಾದ ರಾಜಸಾದಿ ಗುಣಗಳನ್ನು ನಿವಾರಿಸಿ ಶಿವತ್ವವನ್ನು ಬೋಧಿಸುತ್ತಾನೆಯೋ ಅವನು 'ಗುರು'ವೆಂದು ಗುರು ಶಬ್ದದ ಅರ್ಥವನ್ನು ಈಗಾಗಲೇ ವಿವರಿಸಿದ್ದೇವೆ. ಅದರಂತೆ ದೀಕ್ಷಾದಿ ಸಂಸ್ಕಾರದಿಂದಲೂ, ತತ್ತ್ವಜ್ಞಾನೋಪ ದೇಶದಿಂದಲೂ ಮತ್ತು ಅಜ್ಞಾನವೇ ಮುಂತಾದ ಮಲಗಳ ನಿವೃತ್ತಿಯಿಂದಲೂ ಶಿಷ್ಯನೂ ಸಹ ಗುರುವಿಗೆ ಸಮಾನನಾಗುತ್ತಾನೆ. ಅರ್ಥಾತ್ ಯಾವ ಪರಶಿವಸ್ವರೂಪಾನಂದವನ್ನು ಗುರುವು ಅನುಭವಿಸುತ್ತಾನೆಯೋ ಅಂತಹ ಆನಂದವನ್ನು ಈಗ ಶಿಷ್ಯನೂ ಸಹ ಅನುಭವಿಸುತ್ತಾನೆ. ಆದುದರಿಂದ ಶಿವದೀಕ್ಷೆಯಿಂದ ತೊಡೆದುಹಾಕಲ್ಪಟ್ಟ ದ್ವೈತಭಾವನೆ ಯುಳ್ಳ ಗುರು-ಶಿಷ್ಯರ ಆನಂದದ ಐಕ್ಯವೇ ದೀಕ್ಷಾಪಾದೋದಕವೆಂಬುದರ ಅರ್ಥವು. ಅದನ್ನು ಸಿದ್ಧಾಂತ ಶಿಖಾಮಣಿಯು ಹೀಗೆ ನಿರೂಪಿಸಿದೆ:

ದೀಕ್ಷಯೋಽಪಗತಾದ್ವೈತಂ ಯಜ್‍ಜ್ಞಾನಂ ಗುರುಶಿಷ್ಯಯೋಃ।
ಆನಂದಸ್ಯೈಕ್ಯಮೇತೇನ ದೀಕ್ಷಾಪಾದೋದಕಂ ಸ್ಮೃತಮ್॥[೩೦೩]

"ದೀಕ್ಷೆಯಿಂದ ಪ್ರಾಪ್ತವಾದ ಯಾವ ಅದ್ವೈತ ಜ್ಞಾನವುಂಟೋ, ಅಂತಹ ಜ್ಞಾನದೊಡನೆ ಗುರು-ಶಿಷ್ಯರ ಆನಂದದ ಐಕ್ಯವೇ ದೀಕ್ಷಾಪಾದೋದಕ ಎಂದು ತಿಳಿಯಬೇಕು."

ಈ ರೀತಿಯಾಗಿ ಗುರುವಿನ ಕರುಣಾಕಟಾಕ್ಷದಿಂದ ಮತ್ತು ಗುರುವಿನ ಜ್ಞಾನೋಪದೇಶದಿಂದ ದ್ವೈತ ಬುದ್ಧಿಯು ನಷ್ಟವಾಗಿ ಶಿಷ್ಯನು ಗುರುವಿಗೆ ಸಮಾನವಾಗಿ ಯಾವ ಪರಶಿವಬ್ರಹ್ಮಸ್ವರೂಪಾನಂದವನ್ನನುಭವಿಸುತ್ತಾನೆಯೋ, ಅದರ ಆಸ್ವಾದನೆಯೇ ದೀಕ್ಷಾಪಾದೋದಕಗ್ರಹಣವೆಂದು ತಿಳಿಯಬೇಕು.

---

[೩೦೧] ಚ.ಜ್ಞಾ, ಕ್ರಿ.ಪಾ, ೫.೫

[೩೦೨] ಸಿ.ಶಿ, ೧೯.೮

[೩೦೩] ಸಿ.ಶಿ, ೧೯.೬

ಈ ವಿಷಯದಲ್ಲಿ ನಿರ್ಣಯವಿಷ್ಟು- ಆಗಮಶಾಸ್ತ್ರಕ್ಕೆ ಸಂಮತವಾದ ಪರಿಭಾಷೆಯಲ್ಲಿ 'ಪಾದ' ಎಂದರೆ ಗುರು, 'ಉದಕ' ಎಂದರೆ ಶಿಷ್ಯ. ಗುರು-ಶಿಷ್ಯರ ಅಭೇದವೇ ಪಾದೋದಕ. ಗುರು-ಶಿಷ್ಯರ ಅಭೇದವು ಶಾರೀರಿಕವಾಗಿ ಅಲ್ಲ, ಮಾನಸಿಕವಾಗಿ ಅಲ್ಲ, ಬುದ್ಧಿಯೇ ಮೊದಲಾದ ಉಪಾಧಿಗಳಿಂದಲೂ ಅಲ್ಲ, ಆದರೆ ಅನುಭವಿಸಬೇಕಾಗಿರುವ ಪರಶಿವಾನಂದರೂಪದ್ದು. ಇಬ್ಬರಿಂದಲೂ ಅನುಭವಿಸಬೇಕಾಗಿರುವ ಆನಂದದ ಐಕ್ಯದಿಂದ ಅವರಿಬ್ಬರ ಐಕ್ಯವೆಂದು ಉಪಚಾರ, "ನಾದ್ವೈತಂ ಗುರುಣಾ ಸಹ" (ಶ್ರೀಗುರುವಿನೊಂದಿಗೆ ಅದ್ವೈತವನ್ನು ಮಾಡಬಾರದು) ಎಂಬ ವ್ಯಾವಹಾರಿಕ ಅಭೇದವು ಸಂಭವಿಸದಿರುವುದೇ ಇದಕ್ಕೆ ಕಾರಣವಾಗಿದೆ. ಇಂತಹ ಗುರು-ಶಿಷ್ಯರಿಬ್ಬರೂ ಅನುಭವಿಸಬೇಕಾಗಿರುವ ಆನಂದದ ಐಕ್ಯವು ಗುರುವಿನಿಂದ ಮಾಡಲ್ಪಟ್ಟ ವೇಧಾದೀಕ್ಷಾಸಂಸ್ಕಾರದಿಂದ ಪ್ರಾಪ್ತವಾಗುತ್ತದೆ ಎನ್ನುವ ಕಾರಣದಿಂದ ಇದು ದೀಕ್ಷಾಪಾದೋದಕ ಎಂದು ಕರೆಯಲ್ಪಟ್ಟಿದೆ.

ಅಸ್ಮಾತ್ ಪ್ರವಿತತಾದ್ ಬಂಧಾತ್ ಪರಸಂಸ್ಥಾನಿರೋಧಕಾತ್।
ದೀಕ್ಷೈನಂ ಮೋಚಯೇತ್ ಪೂರ್ವಂ ಶೈವಂ ಧಾಮ ನಯತ್ಯಪಿ॥

"ಆದುದರಿಂದ ಈ ವ್ಯಾಪಕವಾದ ಪರಮಾತ್ಮನ ಅರಿವನ್ನು ಮರೆಮಾಡುವಂತಹ ಬಂಧದಿಂದ ಇವನನ್ನು (ಶಿವಭಕ್ತನನ್ನು) ದೀಕ್ಷೆಯು ಮೊದಲು ಮುಕ್ತಗೊಳಿಸುತ್ತದೆ ಮತ್ತು ಶಿವನ ಸ್ಥಾನಕ್ಕೆ ಕೊಂಡೊಯ್ಯುತ್ತದೆ" ಎಂಬ ಸ್ವಾಯಂಭುವಾಗಮದ ವಚನದಿಂದಲೂ ಅನುಮೋದಿತವಾಗಿದೆ ಎಂದು ಸಿದ್ಧಾಂತ ಶಿಖಾಮಣಿಯ ತತ್ತ್ವಪ್ರದೀಪಿಕಾ ಎಂಬ ಟೀಕಾಕಾರನೂ, ಪದವಾಕ್ಯಪ್ರಮಾಣ ಶ್ರೇಷ್ಠನೂ ಆದ ಶ್ರೀ ಮರಿತೋಂಟದಾರ್ಯನಿಂದ ನಿರೂಪಿತವಾಗಿದೆ.[೩೦೪]

ಹೀಗೆ ಗುರುಕೃಪೆಯಿಂದುಂಟಾದ ದೇಶ-ಕಾಲಾದಿಗಳ ನಷ್ಟದ ಅರಿವಿಲ್ಲದ, ನಿತ್ಯನಿರ್ಮಲನೂ, ಪರಶಿವಬ್ರಹ್ಮಾನಂದಾಮೃತರೂಪದ ದೀಕ್ಷಾಪಾದೋದಕವನ್ನು ಆಸ್ವಾದಿಸುವ, ನಿರಾಕಾಂಕ್ಷಿಯೂ, ಭವರೋಗಮುಕ್ತನೂ ಆದ ಶಿವಯೋಗಿಯು ಸ್ವಸ್ವರೂಪದಲ್ಲಿ ಆನಂದದಿಂದಿರುತ್ತಾನೆ.

ಈ ಪ್ರಕಾರ ದೀಕ್ಷಾಸಂಸ್ಕಾರದ ಸಂದರ್ಭದಲ್ಲಿ ಗುರುವು ಮಾಡಿದ ಉಪದೇಶದ ಶ್ರವಣದಿಂದ ಆನಂದದ ಐಕ್ಯವನ್ನು ಅನುಭವಿಸುವ ಯೋಗಿಯು ಆ ಆನಂದದ ಅನುಭವದಿಂದ ಉಂಟಾದ ದೃಢತೆಯಿಂದ ಯಾವಾಗ ಗುರೂಪದೇಶಗಳನ್ನು ಯುಕ್ತಿ ಪ್ರಯುಕ್ತಿಗಳಿಂದ ನಿರಂತರವಾಗಿ ಅನುಚಿಂತನರೂಪದಿಂದ ಮನನಮಾಡಲು ಪ್ರಯತ್ನಿಸುತ್ತಾನೆಯೋ ಆಗ ಆ ಶಿಷ್ಯನು ಶಿಕ್ಷಾಪಾದೋದಕೀ ಎನಿಸುತ್ತಾನೆ. ಅದೇ ರೀತಿಯಾಗಿ ಶಿಷ್ಯನ ಆ ಬಗೆಯ ದೃಢವಾದ ಅನುಭವವೇ ಶಿಕ್ಷಾಪಾದೋದಕ ಎನಿಸುತ್ತದೆ. ಅದನ್ನು ಸಿದ್ಧಾಂತ ಶಿಖಾಮಣಿಯು ಹೀಗೆ ನಿರೂಪಿಸಿದೆ.

---

[೩೦೪] ಸಿ.ಶಿ, ೧೯.೬ ಅವತರಣಿಕಾ, ಪು. ೧೫೬, ಸೋಲಾಪುರ, ೧೯೦೫

ಗುರುಶಿಷ್ಯಮಯಂ ಜ್ಞಾನಂ ಶಿಕ್ಷಾಮನನಮೀರ್ಯತೇ।
ತಯೋಃ ಸಮರಸತ್ವಂ ಹಿ ಶಿಕ್ಷಾಪಾದೋದಕಂ ಸ್ಮೃತಮ್॥[೩೦೫]

"ಗುರು-ಶಿಷ್ಯ ಸ್ವರೂಪೈಕ್ಯಜ್ಞಾನವು ಶಿಕ್ಷಾಜ್ಞಾನವೆಂದು ಕರೆಯಲ್ಪಟ್ಟಿದೆ. ಆ ಗುರು-ಶಿಷ್ಯರ ಸಾಮರಸ್ಯರೇ ಶಿಕ್ಷಾಪಾದೋದಕವೆನಿಸುತ್ತದೆ."

ಇದರ ತಾತ್ಪರ್ಯವಿಷ್ಟು- ಗುರುಮುಖದಿಂದ ಕಲಿತಿರುವ ಶಾಸ್ತ್ರ ಅದರಲ್ಲಿ ಪ್ರತಿಪಾದಿತವಾಗಿರುವ ಉಕ್ತಿ-ಪ್ರಯುಕ್ತಿಗಳಿಂದ ಚಿಂತನೆಮಾಡುವ ಪೂರ್ವದಲ್ಲಿ (ಗುರುಮುಖವಾಣಿಯ) ಶ್ರವಣದಿಂದ ಪ್ರಾಪ್ತವಾದ ಆನಂದವು ದೃಢವಾಗುತ್ತದೆ ಎಂದು 'ಮನನ'ವನ್ನು ಉಪದೇಶಿಸಲಾಗಿದೆ. ಅಂತಹ ಗುರುವಿನ ಮನನೋಪದೇಶವೇ ಇಲ್ಲಿ 'ಶಿಕ್ಷಾ' ಎನಿಸಿದೆ. ಇಂದ್ರನ ಸಮುದ್ರ ಮಂಥನ ವಿಚಾರದಿಂದ ಅಮೃತವು ಪ್ರಾಪ್ತವಾದಂತೆ ಶಿಕ್ಷಾಗುರುವಿನ ಉಪದೇಶದ ಮೂಲಕ ಯುಕ್ತಿರೂಪ ಮಂಥನದಂಡಸಾಮರ್ಥ್ಯದಿಂದ ನಿಗಮಾಗಮ ರೂಪವಾದ ವೀರಶೈವಶಾಸ್ತ್ರವೆಂಬ ಸಮುದ್ರದ ಮಂಥನದಿಂದ ಶಿವಾದ್ವೈತ ಜ್ಞಾನಾಮೃತದ ಪೂರ್ವದಲ್ಲಿ ದಾರ್ಢ್ಯತೆಯುಂಟಾಗುತ್ತದೆ.

ಈ ಪ್ರಕಾರದ ಮನನದಿಂದ ದೃಢವಾದ ಜ್ಞಾನಾನಂದವನ್ನು ಹೊಂದಿರುವ ಶಿವಯೋಗಿಯು ಹೃದಯಾಕಾಶದಲ್ಲಿ ಜ್ಞಾನವೆಂಬ ಚಂದ್ರನಿಂದುಂಟಾದ ಪರಮಾನಂದ ರೂಪವಾದ ಬೆಳದಿಂಗಳನ್ನು ಸ್ವಸ್ವರೂಪದಿಂದ ಪರಾಮರ್ಶಿಸುತ್ತಾನೆ. ಈ ರೀತಿಯಾದ ಶ್ರೀಗುರುವಿನ ಉಪದೇಶದ ಸಾಮರ್ಥ್ಯದಿಂದ ಸ್ವಸ್ವರೂಪ ಆನಂದವನ್ನು ಅನುಭವಿಸುವ ಯೋಗಿಗಳು, ಬೇರೇನನ್ನೂ ನೋಡುವುದಾಗಲಿ, ಕೇಳುವುದಾಗಲಿ ಮಾಡುವುದಿಲ್ಲ. ಆದುದರಿಂದಲೇ ಅವರನ್ನು ಬಾಧಿಸುವುದಿಲ್ಲ. ಅದನ್ನು ಸಿದ್ಧಾಂತ ಶಿಖಾಮಣಿಯು ಹೀಗೆ ನಿರೂಪಿಸಿದೆ:

ದೃಷ್ಟೇ ತಸ್ಮಿನ್ ಪರಾನಂದೇ ದೇಶಕಾಲಾದಿವರ್ಜಿತೇ।
ದ್ರಷ್ಟವ್ಯಂ ವಿದ್ಯತೇ ನಾನ್ಯಚ್ಛ್ರೋತವ್ಯಂ ಜ್ಞೇಯಮೇವ ವಾ॥
ಆತ್ಮಾನಂದೇನ ತೃಪ್ತಸ್ಯ ಸ್ಪೃಹಾ ವಿಷಯೇ ಸುಖೇ।
ಗಂಗಾಜಲೇನ ತೃಪ್ತಸ್ಯ ಕೂಪತೋಯೇ ಕುತೋ ರತಿಃ॥[೩೦೬]

"ದೇಶ-ಕಾಲಾದಿಗಳನ್ನು ಅತಿಕ್ರಮಿಸಿದ ಆ ಪರಮಾನಂದವು ಕಾಣಲು, ಬೇರೊಂದನ್ನು ನೋಡುವುದಾಗಲಿ, ಕೇಳುವುದಾಗಲಿ ಅಥವಾ ತಿಳಿಯುವುದಾಗಲಿ ಇರುವುದಿಲ್ಲ. ಆತ್ಮಾನಂದವೆಂಬ ಗಂಗಾಜಲದಿಂದ ತೃಪ್ತನಾದವನಿಗೆ ಬಾವಿಯ ನೀರಿನಲ್ಲಿ ಪ್ರೀತಿಯೆಲ್ಲಿಯದು?"

ಇದರಿಂದ ಸಿದ್ಧವಾಗುವುದಿಷ್ಟು- ಪೂರ್ವೋಕ್ತ ಪ್ರಕಾರದಿಂದ ಪರಶಿವ ಬ್ರಹ್ಮಾನಂದವೇ ಪಾದೋದಕವೆನಿಸುತ್ತದೆ ಮತ್ತು ಆ ಪರಮಾನಂದವು ಗುರೂಪದೇಶದಲ್ಲಿರುತ್ತದೆ ಅರ್ಥಾತ್ ಗುರೂಪದೇಶದ ಮನನದಿಂದ ಸ್ವಾತ್ಮಸ್ವರೂಪದಲ್ಲಿ

---

[೩೦೫] ಸಿ.ಶಿ, ೧೯.೧೨

[೩೦೬] ಸಿ.ಶಿ, ೧೯.೧೫-೧೬

ದೃಢತೆಯುಂಟಾಗುತ್ತದೆ ಎಂಬ ಕಾರಣದಿಂದ ಶಿಕ್ಷಾಪಾದೋದಕವೆಂದು ಕರೆಯಲ್ಪಟ್ಟಿದೆ. ಆದುದರಿಂದ ಗುರೂಪದೇಶದಿಂದ ದೃಢವಾದ ಪರಶಿವಬ್ರಹ್ಮಾನಂದಜ್ಞಾನವೇ ಶಿಕ್ಷಾಪಾದೋದಕವೆಂದು ತಿಳಿಯಬೇಕು.

ಈ ರೀತಿಯಾಗಿ ಮನನದಿಂದ ದೃಢವಾದ ಜ್ಞಾನವು ಯಾವಾಗ “ವಿಜಾತೀಯ ದೇಹಾದಿಜ್ಞಾನರಹಿತವಾದ ಎರಡನೆಯ ವಸ್ತುವಿನ ಸಜಾತೀಯ ಜ್ಞಾನಪ್ರವಾಹವನ್ನು ನಿರಂತರವಾಗಿ ಅನುಸಂಧಾನ ಮಾಡಬೇಕು”[೩೦೭] ಎಂಬುದೇ ಜ್ಞಾನಪಾದೋದಕ. ಇದರ ತಾತ್ಪರ್ಯವಿಷ್ಟು- ಶಿಕ್ಷಾಪಾದೋದಕಸ್ಥಲದಲ್ಲಿ ಅನುಭವಿಸುವ ಪರಶಿವಾನಂದ ಮತ್ತು ಅದರ ಜ್ಞಾನಕ್ಕೆ ಭೇದವಿದೆ. ನಿದಿಧ್ಯಾಸನಬಲದಿಂದ ‘ವಿಜ್ಞಾನಮಾನಂದಂ ಬ್ರಹ್ಮ’[೩೦೮] (ವಿಜ್ಞಾನವೂ ಆನಂದವೂ ಆಗ ಬ್ರಹ್ಮವು) ಎಂಬ ಶ್ರುತಿಪ್ರಸಿದ್ಧವಾದ ಪಾದೋದಕ ಶಬ್ದವಾಚ್ಯಗಳಾದ ಪರಶಿವ-ಬ್ರಹ್ಮಾನಂದ ಜ್ಞಾನಗಳ ಸಾಮರಸ್ಯವು ಯಾವಾಗ ಉಂಟಾಗುತ್ತದೆಯೋ ಆಗ ಜ್ಞಾನಪಾದೋದಕವೆಂದು ಕರೆಯಲ್ಪಡುತ್ತದೆ. ಅದನ್ನು ಶಿವಯೋಗಿ ಶಿವಾಚಾರ್ಯರು ಹೀಗೆ ನಿರೂಪಿಸಿದ್ದಾರೆ-

ಸದ್ರೈಕ್ಯಸಂಪದಾನಂದೋ ಯೋಽಸೌ ಜ್ಞಾನಗುರುರ್ಮತಃ।
ತತ್ಸಾಮರಸ್ಯಂ ಶಿಷ್ಯಸ್ಯ ಜ್ಞಾನಪಾದೋದಕಂ ವಿದುಃ॥[೩೦೯]

“ಯಾರು ಸದ್ರೂಪಪರಬ್ರಹ್ಮ ಸಾಮರಸ್ಯ ಸಂಪತ್ತಿನಿಂದುತ್ಪನ್ನವಾದ ಆನಂದವುಳ್ಳವನೋ ಅವನು ಜ್ಞಾನಗುರು ಎನಿಸುತ್ತಾನೆ. ಅಂತಹ ಜ್ಞಾನಗುರುವಿನೊಡನೆ ಶಿಷ್ಯನ ಸಾಮರಸ್ಯವೇ ಜ್ಞಾನಪಾದೋದಕ ಎನಿಸುತ್ತದೆ.”

ಈ ಪ್ರಕಾರವಾಗಿ ಅಖಂಡಾನಂದ ಜ್ಞಾನೋದಯವಾಗಲು ಅಜ್ಞಾನವೆಂಬ ಅಂಧಕಾರವು ತೊಲಗಿದ ಶಿವಯೋಗಿಗಳು ಪರಮಾನಂದ ಸ್ವರೂಪವಾದ ಸ್ವಸ್ವರೂಪ ಸ್ಥಿತಿಯನ್ನು ಪಡೆಯುತ್ತಾರೆ. ಜಗತ್ತಿನಲ್ಲಿ ಕತ್ತಲೆಯ ನಂತರ ಸೂರ್ಯೋದಯವಾಗಲು ಸಮಸ್ತ ಜನಗಳೂ ಸಹ ಎಚ್ಚರವಾಗುತ್ತಾರೆ. ಆದರೆ ಮಾಯಾರೂಪದ ಕತ್ತಲೆಯು ಕರಗಿ ಚಿತ್ ಎಂಬ ಸೂರ್ಯನು ಬೆಳಗಲು ಯೋಗಿಗಳು ತಮ್ಮ ಎಲ್ಲ ಬಗೆಯ ಕ್ರಿಯೆಗಳನ್ನು ನಿಲ್ಲಿಸಿ, ಸುಖವಾಗಿ ನಿದ್ರಿಸುತ್ತಾರೆ, ಕೃತಕೃತ್ಯರಾಗಿ ಸಮಾಧಿಸ್ಥಿತಿಯಲ್ಲಿ ಮೌನವಾಗಿರುತ್ತಾರೆ ಎಂದರ್ಥ. ಆದುದರಿಂದ ಗೀತೆಯಲ್ಲಿಯೂ ಹೀಗೆ ಹೇಳಲಾಗಿದೆ-

ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ।
ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ॥[೩೧೦]

---

[೩೦೭] ವೇದಾಂತಸಾರಃ, ಪು. ೭೬

[೩೦೮] ಬೃ.ಉ, ೩-೯-೩೪

[೩೦೯] ಸಿ.ಶಿ, ೧೯.೧೯

[೩೧೦] ಭಗವದ್ಗೀತಾ, ೨.೬೯

"ಯಾವುದು ಎಲ್ಲ ಪ್ರಾಣಿಗಳಿಗೆ ರಾತ್ರಿಯಾಗಿರುತ್ತದೆಯೋ ಅದು ಆತ್ಮಸಂಯಮಿಗೆ (ಬೆಳಕಾಗಿದ್ದು) ಎಚ್ಚರವಾಗಿರುತ್ತಾನೆ. ಎಲ್ಲ ಪ್ರಾಣಿಗಳು ಎಚ್ಚರವಾಗಿದ್ದಾಗ ಯೋಗಿಗೆ ಅದು ಕತ್ತಲಾಗಿರುತ್ತದೆ."

ಆದುದರಿಂದ ಜ್ಞಾನಿಗಳ ಈ ಬಗೆಯ ಸ್ಥಿತಿಯೇ ಜ್ಞಾನಪಾದೋದಕ ಪ್ರಾಪ್ತಿಯು. ಇಂತಹ ಅವಸ್ಥೆಯಲ್ಲಿರುವ ಶಿವಯೋಗಿಗಳಿಗೆ ವಿಶ್ವದ ಕಲ್ಪನೆಯೇ ಗೋಚರಿಸುವುದಿಲ್ಲ. ಆ ಕಾರಣದಿಂದ ಈ ರೀತಿಯ ಪರಮಾನಂದಾನುಭವವನ್ನು ಯಾವುದರೊಂದಿಗೂ ಹೋಲಿಸಲು ಸಾಧ್ಯವಿಲ್ಲ. ಆದುದರಿಂದಲೇ ಶ್ರೀ ಶಿವಯೋಗಿ ಶಿವಾಚಾರ್ಯರು-

ಕುತೋ ಬ್ರಹ್ಮಾ ಕುತೋ ವಿಷ್ಣುಃ ಕುತೋ ರುದ್ರಃ ಕುತೋ ರವಿಃ।
ಸಾಕ್ಷಾತ್ಕೃತಪರಾನಂದಜ್ಯೋತಿಷಃ ಸಾಮ್ಯಕಲ್ಪನೇ॥
ಅಪರೋಕ್ಷಪರಾನಂದವಿಲಾಸಸ್ಯ ಮಹಾತ್ಮನಃ।
ಬ್ರಹ್ಮವಿಷ್ಣ್ವಾದಯೋ ದೇವಾ ವಿಶೇಷಾಃ ಸುಖಬಿಂದವಃ।
ಮನ್ಮಾತ್ರಾ ಸಹಿತಂ ಲೋಕೇ ವಾಂಛಂತಿ ವಿಷಯಂ ನರಾಃ।
ತಮಪ್ರಮೇಯಮಾನಂದಂ ಪರಮಂ ಕೋ ನ ವಾಂಛತಿ॥[೩೧೧]

"ಪರಮಾನಂದ ಜ್ಯೋತಿಯನ್ನು ಸಾಕ್ಷಾತ್ಕರಿಸಿಕೊಂಡ ಶಿವಯೋಗಿಗೆ ಸಾಮ್ಯಕಲ್ಪನೆಯಲ್ಲಿ ಚತುರ್ಮುಖ ಬ್ರಹ್ಮ ಎಲ್ಲಿಯವನು? ವಿಷ್ಣು ಎಲ್ಲಿಯವನು? ರುದ್ರ ಎಲ್ಲಿಯವನು? ಸೂರ್ಯನು ಎಲ್ಲಿಯವನು? ಪ್ರತ್ಯಕ್ಷವಾಗಿ ಪರಮಾನಂದದಲ್ಲಿ ವಿಹರಿಸುತ್ತಿರುವ ಶಿವಯೋಗಿಗೆ ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳು ಅತ್ಯಲ್ಪವಾದ ಸುಖವಿಶೇಷ ಳಾಗಿರುವುವು. ಲೋಕದಲ್ಲಿ ಮನುಷ್ಯರು ಅತ್ಯಲ್ಪ ಪರಿಮಾಣವುಳ್ಳ ವಿಷಯಸುಖವನ್ನು ಅಪೇಕ್ಷಿಸುತ್ತಾರೆ. ಆದರೆ ಪರಿಮಾಣಾತೀತವಾದ ಆ ಪರಮಾನಂದವನ್ನು ಯಾರು ತಾನೆ ಇಚ್ಛಿಸುವುದಿಲ್ಲ?" ಇತ್ಯಾದಿಯಾಗಿ ಶಿವಯೋಗಿಯ ಮಹತ್ತ್ವವನ್ನು ವರ್ಣಿಸಿದ್ದಾರೆ. ಅದು ಈ ರೀತಿಯಾಗಿ ಬಾಹ್ಯವ್ಯವಹಾರವಿಲ್ಲದ ಸ್ವಸ್ವರೂಪಾನಂದಜ್ಞಾನದಲ್ಲಿ ಲೀನವಾಗುವುದೇ ಜ್ಞಾನಪಾದೋದಕ. ಅದರ ಪ್ರಾಪ್ತಿಯೇ ಶಿವಯೋಗಿಗಳಿಗೆ ಅಂತಿಮ ಲಕ್ಷ್ಯವೆಂದು ನಿಶ್ಚಯವಾಗಿದೆ.

ಈ ರೀತಿಯಾಗಿ ಆತ್ಮಜ್ಞಾನಾನುಭವರೂಪ ದೀಕ್ಷಾ, ಶಿಕ್ಷಾ, ಜ್ಞಾನಪಾದೋದಕಗಳೆಂಬ ತಾತ್ತ್ವಿಕವಾದ ಮೂರು ಪಾದೋದಕಗಳ ಪ್ರಾಪ್ತಿಯು ಅಂತಃಕರಣಶುದ್ಧಿಯಿಲ್ಲದೆ ಪ್ರಾಪ್ತವಾಗಲಾರವು. ಅಂತಃಕರಣಶುದ್ಧಿಗೋಸ್ಕರ ವೀರಶೈವ ಸಿದ್ಧಾಂತದಲ್ಲಿ ಉಪಾಸ್ಯರೂಪ ಗುರು, ಲಿಂಗ, ಜಂಗಮಗಳ ಚರಣಾಮೃತ ಸೇವನೆಮಾಡುವ ವಿಧಿಯು ಉಪದಿಷ್ಟವಾಗಿದೆ.

ತ್ರಿವಿಧ ಕ್ರಿಯಾಪಾದೋದಕ : ವೀರಶೈವ ಸಿದ್ಧಾಂತದಲ್ಲಿ ಪೂಜಾರ್ಹವಾದ ಗುರು, ಲಿಂಗ, ಜಂಗಮಗಳ ಪಾದಪೂಜೆಯಿಂದ ದೊರೆಯುವ ಚರಣಾಮೃತವೇ

---

[೩೧೧] ಸಿ.ಶಿ, ೧೯.೨೬-೨೮

ಕ್ರಿಯಾಪಾದೋದಕವೆಂದು ಕರೆಯಲ್ಪಟ್ಟಿದೆ. ಗುರುವಿನ ಪಾದಪೂಜೆಯಿಂದ ಲಭ್ಯವಾಗುವುದು ಗುರುಪಾದೋದಕ, ಇಷ್ಟಲಿಂಗಪೂಜೆಯಿಂದ ಲಿಂಗಪಾದೋದಕ ಮತ್ತು ಜಂಗಮಪೂಜೆಯಿಂದ ಜಂಗಮಪಾದೋದಕಗಳು ಲಭ್ಯವಾಗುತ್ತವೆ. ಚಂದ್ರಜ್ಞಾನಾಗಮವು ಅದನ್ನು ಹೀಗೆ ನಿರೂಪಿಸಿದೆ:

> **ಪಾದತೀರ್ಥಂ ಸದಾ ಪೇಯಂ ಭವಬಂಧಮುಮುಕ್ಷುಭಿಃ।**
> **ಗುರೋರಪೀಷ್ಟಲಿಂಗಸ್ಯ ಚರಸ್ಯಾಪಿ ವಿಶೇಷತಃ॥**[೩೧೨]

"ಭವಬಂಧನದಿಂದ ಮುಕ್ತಿಯನ್ನು ಪಡೆಯಲು ಇಚ್ಛಿಸುವವರು ಗುರು, ಲಿಂಗ ಮತ್ತು ಜಂಗಮರ ಪಾದೋದಕವನ್ನು ಪ್ರತಿನಿತ್ಯವೂ ಸ್ವೀಕರಿಸಬೇಕು." ಈ ಆಗಮೋಕ್ತಿಯ ರೀತ್ಯಾ ವೀರಶೈವರು ಪ್ರತಿದಿನವೂ ತ್ರಿವಿಧ ಪಾದೋದಕವನ್ನು ಸ್ವೀಕರಿಸಬೇಕು.[೩೧೩] ಒಂದು ವೇಳೆ ಒಂದು ಅಥವಾ ಎರಡರ ಪಾದೋದಕವು ಲಭ್ಯವಿದ್ದು, ಯಾವುದರ ಪಾದತೀರ್ಥವು ದೊರೆತಿರುವುದಿಲ್ಲವೋ ಅದರ ಭಾವನೆಯಿಂದ ಸಂಬಂಧವನ್ನು ಆಚರಿಸಬೇಕೆಂದು ಆಗಮದ ಆದೇಶವಿದೆ. ಅದರಂತೆ ಗುರು ಮತ್ತು ಜಂಗಮರ ಪಾದೋದಕವು ದೊರೆಯದಿದ್ದಾಗ ಇಷ್ಟಲಿಂಗೋದಕದಲ್ಲಿಯೇ ಅವೆರಡರ ಸಂಬಂಧವನ್ನು ಮನಸ್ಸಿನಲ್ಲಿ ಭಾವಿಸಿಕೊಂಡು ಸೇವಿಸಬೇಕು. ಇದೇ ರೀತಿಯಾಗಿ ಉಳಿದೆರಡರ ವಿಷಯದಲ್ಲಿಯೂ ಸಂಬಂಧವನ್ನು ಭಾವಿಸಿಕೊಳ್ಳಬೇಕು.[೩೧೪]

ಕ್ರಿಯಾಪಾದೋದಕ ನಿರ್ಮಾಣವಿಧಿ: ವೀರಶೈವ ಪರಂಪರೆಯಲ್ಲಿ ಕೇವಲ ಗುರು, ಲಿಂಗ, ಜಂಗಮರ ಪಾದತೊಳೆದ ಜಲವನ್ನು ಪಾದೋದಕವೆಂದು ಕರೆಯುವುದಿಲ್ಲ. ಈ ಸಿದ್ಧಾಂತದಲ್ಲಿ ಪಾದೋದಕವನ್ನು ಸಿದ್ಧಪಡಿಸುವ ಒಂದು ವಿಶೇಷವಾದ ವಿಧಿಯೇ ಇದೆ. ಪಾರಮೇಶ್ವರ ತಂತ್ರದಲ್ಲುಕ್ತವಾದ ವಿಧಿಯಂತೆ ಗುರು ಅಥವಾ ಜಂಗಮರ ಪಾದಪೂಜೆಯ ಸಂದರ್ಭದಲ್ಲಿ ಮೊದಲಿಗೆ ಪಾದಗಳನ್ನು ತೊಳೆದು ಗಂಧ-ಪುಷ್ಪಾದಿಗಳಿಂದ ಪೂಜಿಸಿ ಅಂಗುಷ್ಠದಲ್ಲಿ ರುದ್ರನನ್ನು, ತರ್ಜನಿಯಲ್ಲಿ ಶಂಕರನನ್ನು, ಮಧ್ಯಮದಲ್ಲಿ ಮಹಾದೇವನನ್ನು, ಅನಾಮಿಕದಲ್ಲಿ ತ್ರಿಯಂಬಕನನ್ನು, ಕನಿಷ್ಠದ ಬೆರಳಿನಲ್ಲಿ

---

[೩೧೨] ಚ.ಜ್ಞಾ, ಕ್ರಿ.ಪಾ, ೫.೬

[೩೧೩] ಪಾದೋದಕಂ ಯಥಾ ಭಕ್ತ್ಯಾ ಸ್ವೀಕರೋತಿ ಮಹೇಶಿತುಃ।
ತಥಾ ಶಿವಾತ್ಮನೋರ್ನಿತ್ಯಂ ಗುರುಜಂಗಮಯೋರಪಿ॥ -ಸಿ.ಶಿ, ೯.೬೭

[೩೧೪] ಗುರೋಶ್ಚರಸ್ಯ ಚಾಲಾಭೇ ಇಷ್ಟಲಿಂಗಪದೋದಕಮ್।
ಲಬ್ಧ್ವಾ ಗುರ್ವಾದಿಪಾದೋದಂ ಭಾವಯೇನ್ಮನಸೈವ ತತ್॥
ಚರವರ್ಜಂ ಗುರೋರ್ಲಾಭೇ ಲಬ್ಧ್ವಾ ಗುರುಪದೋದಕಮ್।
ಗುರುಜಂಗಮಪಾದೋದಂ ಲಬ್ಧವಾನಿತಿ ಭಾವಯೇತ್॥
ಗುರುವರ್ಜಂ ಚರಪ್ರಾಪ್ತೌ ಲಬ್ಧ್ವಾ ಚರಪದೋದಕಮ್।
ತದೇವ ಗುರುಪಾದೋದಮಿತಿ ಮತ್ವಾ ಪಿಬೇತ್ ತದಾ॥
-ಚ.ಜ್ಞಾ, ಕ್ರಿ.ಪಾ, ೫.೭-೯

ಈಶಾನನನ್ನು, ಪಾದಗಳ ಮೇಲ್ಭಾಗದಲ್ಲಿ ಕಪರ್ದಿಯನ್ನು, ಪಾದಗಳ ಕೆಳಭಾಗದಲ್ಲಿ ಸದಾಶಿವನನ್ನು, ಗುಲ್ಫ(ಕಾಲಿನ ಗಂಟು)ಗಳಲ್ಲಿ ಉಗ್ರ ಮತ್ತು ಭರ್ಗ(ಪರಶಿವ)ರನ್ನು -ಈ ರೀತಿಯಾಗಿ ಪಾದಗಳು ಹಾಗೂ ಎಲ್ಲ ಅಂಗಾಂಗಗಳಲ್ಲಿ ಶಿವನ ಅನೇಕ ಮೂರ್ತಿಗಳನ್ನು ಭಾವಿಸಿಕೊಂಡು, ಮತ್ತೊಮ್ಮೆ ಆ ಪಾದಗಳ ಕನಿಷ್ಠದಿಂದ ಅಂಗುಷ್ಠದ ವರೆಗಿನ ಬೆರಳುಗಳಲ್ಲಿ ಕ್ರಮವಾಗಿ ನಕಾರದಿಂದ ಯಕಾರದವರೆಗಿನ ಪಂಚಾಕ್ಷರ ಮಹಾಮಂತ್ರವನ್ನು ಬರೆದು, ಪಾದಗಳನ್ನು ಸಾಕ್ಷಾತ್ ಶಿವಸ್ವರೂಪವೆಂದು ಧ್ಯಾನಿಸ ಬೇಕು. ಅನಂತರ ಪಾದಗಳ ಕೆಳಭಾಗದಲ್ಲಿ ವಿಶೇಷವಾದ ಪಾತ್ರೆಯೊಂದನ್ನಿಟ್ಟು ಅಂಗುಷ್ಠಗಳ ಮೇಲ್ಭಾಗದಲ್ಲಿ ನೀರನ್ನು ಸುರಿದು, ಆ ಪಾತ್ರೆಯಲ್ಲಿ ಸಂಗ್ರಹಿಸಬೇಕು. ಈ ವಿಧಿಯಿಂದ ಸಂಗ್ರಹಿಸಿದ ಚರಣಾಮೃತವೇ ಪಾದೋದಕವೆಂದು ಕರೆಯಲ್ಪಟ್ಟಿದೆ.[೩೧೫]

ಪಾದೋದಕಸೇವನವಿಧಿ: ಪೂರ್ವೋಕ್ತ ವಿಧಿಯಿಂದ ಪಾದೋದಕವನ್ನು ಸಿದ್ಧಪಡಿಸಿದ ನಂತರ ಗುರು-ಜಂಗಮರ ಪಾದಪೂಜೆಯಲ್ಲಿ ಸಮ್ಮಿಲಿತವಾಗಿರುವ ಎಲ್ಲ ವೀರಶೈವ ದೀಕ್ಷಿತರಾಗಿರುವ ಭಕ್ತರು ಹಾಗೂ ಮಾಹೇಶ್ವರರು ಕ್ರಮವಾಗಿ ಒಬ್ಬೊಬ್ಬರೇ ಬಂದು ಶ್ರೀಗುರು ಅಥವಾ ಜಂಗಮನಿಗೆ ಸಾಷ್ಟಾಂಗ ಪ್ರಣಾಮಗಳನ್ನು ಸಮರ್ಪಿಸಿ ತಮ್ಮ ಇಷ್ಟಲಿಂಗಕ್ಕೆ ಪಾದೋದಕವನ್ನು ಅರ್ಪಿಸಿ ತದನಂತರ ಸ್ವೀಕರಿಸುತ್ತಾರೆ.[೩೧೬] "ಚರಪಾದೋದಕೇನೈವ ಲಿಂಗಮಜ್ಜನಮುತ್ತಮಮ್" (ಜಂಗಮ ಪಾದೋದಕವನ್ನು ಲಿಂಗಕ್ಕೆ ಮಜ್ಜನಮಾಡುವುದು ಉತ್ತಮ), "ಪ್ರಾಣಲಿಂಗಾರ್ಪಿತಂ ಕೃತ್ವಾ ಪಿಬೇದ್ ಭಕ್ತ ಇತಿ ಸ್ಥಿತಿಃ"[೩೧೭] (ಪ್ರಾಣಲಿಂಗಕ್ಕೆ ಸಮರ್ಪಿಸಿದ ಪಾದೋದಕ ಸ್ವೀಕಾರವೇ ಭಕ್ತನ ಸ್ಥಿತಿಯು) ಇತ್ಯಾದಿ ಸರ್ವಾಗಮಸುಧಾರ್ಣವ, ಕ್ರಿಯಾಸಾರವೇ ಮೊದಲಾದ ಗ್ರಂಥಗಳಲ್ಲಿ ನಿರೂಪಿತವಾಗಿರುವಂತೆ, ಗುರು-ಜಂಗಮರ ಪಾದೋದಕ ದಿಂದ ಇಷ್ಟಲಿಂಗಕ್ಕೆ ಮೂರು ಸಲ ಮಜ್ಜನ ಮಾಡಿ, ಸಾವಧಾನದಿಂದ-

ಋತಂ ಸತ್ಯಂ ಪರಂ ಬ್ರಹ್ಮ ಪುರುಷಂ ಕೃಷ್ಣಪಿಂಗಲಮ್।
ಊರ್ಧ್ವರೇತಂ ವಿರೂಪಾಕ್ಷಂ ವಿಶ್ವರೂಪಾಯ ವೈ ನಮೋ ನಮಃ॥[೩೧೮]

ಎಂಬ ಮಂತ್ರವನ್ನುಚ್ಚರಿಸುತ್ತಾ ಲಿಂಗಕ್ಕೆ ಎರೆದ ಆ ಪಾದೋದಕವನ್ನು ಸ್ವೀಕರಿಸುತ್ತಾರೆ ಮತ್ತು ಸರ್ವಾಂಗಗಳಿಗೆ ಅದನ್ನು ಲೇಪನಮಾಡಿಕೊಳ್ಳುತ್ತಾರೆ.

ಭುಂಜೀತ ರುದ್ರಭುಕ್ತಾನ್ನಂ ರುದ್ರಪೀತಂ ಜಲಂ ಪಿಬೇತ್।
ರುದ್ರಾಘ್ರಾತಂ ಸದಾ ಜಿಘ್ರೇದಿತಿ ಜಾಬಾಲಿಕೀ ಶ್ರುತಿಃ॥[೩೧೯]

---

[೩೧೫] ಪಾ.ಆ, ೭.೪೭-೫೦

[೩೧೬] ವೀರಶೈವಾಷ್ಟಾವರಣ ಪ್ರಮಾಣಾಷ್ಟಕಾಭರಣಮ್, ಪು. ೯೦

[೩೧೭] ಕ್ರಿ.ಸಾ, ೨೮.೧೦೮

[೩೧೮] ವೀ.ಆ.ಚ, ಪು. ೧೧೯

[೩೧೯] ಸಿ.ಶಿ, ೯.೭೦

"ರುದ್ರನಿಗೆ ನೈವೇದ್ಯ ಮಾಡಿದ ಅನ್ನವನ್ನು ಭುಂಜಿಸಬೇಕು, ರುದ್ರನು ಕುಡಿದ ನೀರನ್ನು ಕುಡಿಯಬೇಕು. ರುದ್ರನು ಆಘ್ರಾಣಿಸಿದ್ದನ್ನು ಸದಾ ಆಘ್ರಾಣಿಸಬೇಕೆಂದು ಜಾಬಾಲಿಕೀ ಶ್ರುತಿಯು ಹೇಳಿದೆ" ಎಂದು ಶ್ರೀ ರೇಣುಕಾಚಾರ್ಯರು ಪಾದೋದಕ ಸೇವನೆಯು ಶ್ರುತಿಸಮ್ಮತವೆಂಬುದನ್ನು ಆಧಾರಸಹಿತ ಪ್ರದರ್ಶಿಸಿದ್ದಾರೆ.

ಪಾದೋದಕ ಸ್ವೀಕಾರಕ್ಕೆ ಉಚ್ಛಿಷ್ಟ (ಎಂಜಲು) ಸೂತಕವಿಲ್ಲ

ಒಂದು ಪಾತ್ರೆಯಲ್ಲಿ ಸಂಗೃಹೀತವಾದ ಪಾದೋದಕವನ್ನು ಪಾದಪೂಜೆಯಲ್ಲಿ ಭಾಗವಹಿಸಿರುವ ಎಲ್ಲರೂ ಸಹ ಅದನ್ನು ಸೇವಿಸಬೇಕೆಂದು ಹೇಳಲಾಯಿತು. ಮೊದಲು ವ್ಯಕ್ತಿಯು ಪಾದೋದಕವನ್ನು ಸ್ವೀಕರಿಸಿದ ನಂತರ ಪಾತ್ರೆಯಲ್ಲಿರುವ ಪಾದೋದಕವು ಉಚ್ಛಿಷ್ಟ(ಎಂಜಲು)ವಾಯಿತು. "ನ ಪರ್ಯುಷಿತಮಶ್ನೀಯಾನ್ನೋಚ್ಛಿಷ್ಟಂ ನ ಕದರ್ಥಿತಮ್"[೩೨೦] (ಹಳೆಯದಾದದ್ದನ್ನು, ಕೆಡಿಸಲ್ಪಟ್ಟಿದ್ದನ್ನು ಮತ್ತು ಎಂಜಲನ್ನು ತಿನ್ನಬಾರದು) ಇತ್ಯಾದಿ ಉಕ್ತಿಗಳಿಂದ ಎಂಜಲು ಸ್ವೀಕಾರವನ್ನು ನಿಷೇಧಿಸಿರುವುದರಿಂದ ಹೇಗೆ ಅದನ್ನು ಸೇವಿಸುವುದು? ಎಂದು ಪೂರ್ವಪಕ್ಷವನ್ನು ಊಹಿಸಿ ಹೀಗೆ ಉತ್ತರಿಸಲಾಗಿದೆ- "ಅದು ಹಾಗಲ್ಲ. "ತಥಾ ಲಿಂಗಾಂಕಿಂತಾ ಭಕ್ತಾಃ ಪಂಚಸೂತಕವರ್ಜಿತಾಃ"[೩೨೧] (ಲಿಂಗಧಾರಿಗಳಾದ ಶಿವಭಕ್ತರಿಗೆ ಪಂಚಸೂತಕಗಳಿರುವುದಿಲ್ಲ) ಎಂದು ಪಂಚಸೂತಕಗಳನ್ನು ವೀರಶೈವರಿಗೆ ನಿಷೇಧಿಸಿರುವುದರಿಂದ, ಪಂಚಸೂತಕಗಳಲ್ಲಿ ಉಚ್ಛಿಷ್ಟ (ಎಂಜಲು)ವೂ ಒಂದೆಂದು ಪರಿಗಣಿಸಿರುವುದರಿಂದ ಬೇರೆ ಸಂದರ್ಭಗಳಲ್ಲಿ ಉಚ್ಛಿಷ್ಟವನ್ನು ಸ್ವೀಕರಿಸದಿದ್ದರೂ ಸಹ ಪಾದೋದಕ ಸ್ವೀಕಾರಕ್ಕೆ ಅದು ಅನ್ವಯವಾಗುವುದಿಲ್ಲ. ಅಲ್ಲದೆ, ಯಾವ ರೀತಿಯಾಗಿ ಸೋಮಯಾಗದಲ್ಲಿ ಹವಿಸ್ಸಿನ ಭಾಗವಾಗಿ ಉಳಿದ ಸೋಮರಸವನ್ನು ಚಮಸವೆಂಬ ಪಾತ್ರೆಯಲ್ಲಿ ಸಂಗ್ರಹಿಸಿ ಆ ಯಾಗದಲ್ಲಿ ಪಾಲ್ಗೊಂಡಿರುವ ಎಲ್ಲ ಋತ್ವಿಜರೂ ಕ್ರಮವಾಗಿ ಚಮಸಪಾತ್ರೆಯಿಂದಲೇ ಸೋಮರಸವನ್ನು ಕುಡಿಯುತ್ತಾರೆ. ಈ ರೀತಿಯಾಗಿ ಮಾಡಿದರೂ ಸಹ ಅಲ್ಲಿ "ನ ಸೋಮೇನೋಚ್ಛಿಷ್ಟಮ್" ಎಂಬ ಪ್ರಮಾಣದಂತೆ ಉಚ್ಛಿಷ್ಟಸೂತಕ ದೋಷವನ್ನು ಎಣಿಸುವುದಿಲ್ಲ.

ಇದೇ ಪ್ರಕಾರವಾಗಿ "ನ ತತ್ರೋಚ್ಛಿಷ್ಟಂ ಭಜತೇ ಶುದ್ಧದೇಹೀ"[೩೨೨] (ಲಿಂಗಧಾರಣೆಯಿಂದ ಶುದ್ಧವಾದ ಶರೀರವುಳ್ಳವನು ಉಚ್ಛಿಷ್ಟ ದೋಷವನ್ನು ತಿಳಿಯಬಾರದು) ಎಂಬ ಶ್ರುತಿವಾಕ್ಯದಂತೆ ಪಾದೋದಕ ಸೇವನೆ ಮಾಡುವಲ್ಲಿಯೂ ಕೂಡ ಉಚ್ಛಿಷ್ಟ ದೋಷದ ನಿವಾರಣೆಯನ್ನು ಮಾಡುವ ಪ್ರಮಾಣಗಳಿಂದಲೂ ಮುಮುಕ್ಷುಗಳಾದ ಎಲ್ಲ

---

[೩೨೦] ವೀರಶೈವಾನಂದಚಂದ್ರಿಕಾ, ಪು. ೧೧೯

[೩೨೧] ಸಿದ್ಧಾಂತಶಿಖೋಪನಿತ್, ವೀರಶೈವಭಾಷ್ಯ, ಪು. ೨೮

[೩೨೨] ಸಿದ್ಧಾಂತಶಿಖೋಪನಿತ್, ವೀರಶೈವಭಾಷ್ಯ, ಶ್ಲೋಕ ೧೫

ವೀರಶೈವರು ಪಾದೋದಕವನ್ನು ಒಂದೇ ಪಾತ್ರೆಯಿಂದಲೇ ಸ್ವೀಕರಿಸಿದರೂ ಸಹ ದೋಷವಿರುವುದಿಲ್ಲ.[೩೨೩]

ಕ್ರಿಯಾಪಾದೋದಕದ ಮಹಿಮೆ

> ಅಕಾಲಮೃತ್ಯುಮಥನಂ ಸರ್ವವ್ಯಾಧಿವಿನಾಶನಮ್।
> ಸರ್ವಪಾಪೋಪಶಮನಂ ಶಂಭೋಃ ಪಾದೋದಕಂ ಶುಭಮ್॥
> ಶೋಷಣಂ ಪಾಪಪಂಕಸ್ಯ ದೀಪನಂ ಜ್ಞಾನತೇಜಸಃ।
> ಗುರೋಃ ಪಾದೋದಕಂ ಚಿತ್ರಂ ಸಂಸಾರದ್ರುಮನಾಶನಮ್॥
> ಚರಪಾದೋದಕಮಹಿಮಾ ವರ್ಣಿತುಂ ಕೇನ ಶಕ್ಯತೇ।
> ತದ್ಧಿ ಮೋಚಯಿತುಂ ಸದ್ಯಃ ಶಕ್ನುತೇ ಯಚ್ಚರಾಚರಮ್॥[೩೨೪]

"ಮಂಗಲಕರವಾದ ಶಂಭುವಿನ ಪಾದೋದಕವು ಅಕಾಲಮೃತ್ಯುವನ್ನು ನಾಶಮಾಡುತ್ತದೆ, ಎಲ್ಲ ರೋಗಗಳನ್ನು ತೊಡೆದುಹಾಕುತ್ತದೆ ಮತ್ತು ಎಲ್ಲ ಪಾಪಗಳನ್ನು ನಾಶಮಾಡುತ್ತದೆ. ಅದು ಪಾಪದ ಕೆಸರನ್ನು ಒಣಗಿಸುತ್ತದೆ, ಜ್ಞಾನವೆಂಬ ತೇಜಸ್ಸನ್ನು ಬೆಳಗಿಸುತ್ತದೆ ಮತ್ತು ಸಂಸಾರವೆಂಬ ವೃಕ್ಷವನ್ನು ನಾಶಪಡಿಸುತ್ತದೆ. ಆದುದರಿಂದ ಗುರುಪಾದೋದಕದ ಮಹಿಮೆ ಆಶ್ಚರ್ಯಕರವಾದುದು. ಜಂಗಮನ ಪಾದೋದಕದ ಮಹಿಮೆಯನ್ನು ವರ್ಣಿಸಲು ಯಾರು ಶಕ್ತರು? ಅದು ಕೂಡಲೇ ಚರಾಚರಗಳನ್ನು ಮುಕ್ತಗೊಳಿಸಲು ಶಕ್ತವಾಗಿದೆ" -ಎಂಬ ಆಗಮೋಕ್ತಿಗಳಿಂದಲೂ ಶಿವ, ಗುರು ಮತ್ತು ಜಂಗಮನ ಪಾದೋದಕದ ಮಹಿಮೆಯು ವರ್ಣಿತವಾಗಿದೆ. "ಯಥಾಭಾವಸ್ತಥಾ ಭವತಿ" (ಮನಸ್ಸಿನಂತೆ ಮಹಾದೇವ) ಎಂಬ ಅಭಿಯುಕ್ತೋಕ್ತಿಯಾನುಸಾರವಾಗಿ ಪಾದೋದಕ ಸೇವನೆಯಿಂದ ಯಾವ ಬಗೆಯ ಭಕ್ತಿಯುಂಟಾಗುತ್ತದೊ, ಅದೇ ಬಗೆಯ ಫಲವುಂಟಾಗುತ್ತದೆ. ಪ್ರತಿದಿನವೂ ನೀರನ್ನು ಹಾಕುವುದರಿಂದ ಹೇಗೆ ಮರವು ದಿನದಿಂದ ದಿನಕ್ಕೆ ದೊಡ್ಡದಾಗುತ್ತದೆಯೋ ಹಾಗೆಯೇ ಪ್ರತಿನಿತ್ಯವೂ ಗುರು, ಲಿಂಗ, ಜಂಗಮರ ಪಾದೋದಕ ಸೇವನೆಯಿಂದಲೂ ಭಕ್ತಿಯೆಂಬ ಮರವು ಬೆಳೆದು ದೊಡ್ಡದಾಗುತ್ತದೆ ಮತ್ತು ಅಲ್ಪಕಾಲದಲ್ಲಿಯೇ ಮುಕ್ತಿಯ ಫಲವುಂಟಾಗುತ್ತದೆ.[೩೨೫] ಪಾದೋದಕ ಸೇವನೆಯಿಂದ ಎಲ್ಲ ರೀತಿಯ ಅಮಂಗಲಗಳು ಮತ್ತು ಪಾಪಗಳು ದೂರವಾಗುತ್ತವೆ ಹಾಗೂ ಎಲ್ಲರಿಗೂ ಎಲ್ಲ ಬಗೆಯ ಮಂಗಲವು ದೊರೆಯುತ್ತದೆ. ಆದುದರಿಂದಲೇ ಶಿವಯೋಗಿ ಶಿವಾಚಾರ್ಯರು ಹೀಗೆ ಹೇಳಿದ್ದಾರೆ-

> ಸರ್ವಮಂಗಲಮಾಂಗಲ್ಯಂ ಸರ್ವಪಾವನಪಾವನಮ್।
> ಸರ್ವಸಿದ್ಧಿಕರಂ ಪುಂಸಾಂ ಶಂಭೋಃ ಪಾದಾಂಬುಧಾರಣಮ್॥[೩೨೬]

---

[೩೨೩] ವೀರಶೈವಾನಂದಚಂದ್ರಿಕಾ, ಪು. ೧೧೯

[೩೨೪] ಚಂದ್ರಜ್ಞಾನಾಗಮ, ಕ್ರಿ.ಪಾ, ೫.೧೨,೧೬,೧೯

[೩೨೫] ಪಾದತೀರ್ಥಂ ಸದಾ ಪೇಯಂ ಭವಬಂಧಮುಮುಕ್ಷುಭಿಃ।
ಗುರೋರಪೀಷ್ಟಲಿಂಗಸ್ಯ ಚರಸ್ಯಾಪಿ ವಿಶೇಷತಃ॥ -ಚ.ಜ್ಞಾ, ಕ್ರಿ.ಪಾ, ೫.೬

[೩೨೬] ಸಿ.ಶಿ, ೯.೬೮

"ಸರ್ವಮಂಗಲಗಳಿಗೆ ಮಂಗಲವೂ, ಸರ್ವಪಾವನಗಳಿಗೆ ಪಾವನವೂ ಆದ ಶಿವಪಾದೋದಕ ಸೇವನೆಯು ಮಾನವರಿಗೆ ಸಕಲಸಿದ್ಧಿಗಳನ್ನು ಅನುಗ್ರಹಿಸುತ್ತದೆ."

ಇದಲ್ಲದೆ ಬೋಧಾಯನಸೂತ್ರ, ಶಿವರಹಸ್ಯ, ಆದಿತ್ಯಪುರಾಣ, ನಂದಿಕೇಶ್ವರಸ್ತವ ಮೊದಲಾದ ಗ್ರಂಥಗಳಲ್ಲಿ ಪಾದೋದಕವನ್ನು ನಿಯತವಾಗಿ ಸೇವಿಸುವುದರಿಂದ ಭೂಮಂಡಲದಲ್ಲಿರುವ ಎಲ್ಲ ಪವಿತ್ರ ತೀರ್ಥಗಳ ಪ್ರಾಪ್ತಿಯೆಂತಲೂ, ಶಿವಸಾಯುಜ್ಯ ರೂಪ ಮೋಕ್ಷಪ್ರಾಪ್ತಿಯೆಂತಲೂ, ಸಕಲ ರೋಗಗಳನ್ನು ನಿವಾರಿಸುವ ಔಷಧ ರೂಪವೆಂತಲೂ, ಎಲ್ಲ ರೀತಿಯ ಮಹಾಪಾತಕ, ಉಪಪಾತಕಗಳನ್ನು ನಿವಾರಿಸುವಂತಹ ದ್ದೆಂತಲೂ ಪ್ರತಿಪಾದಿಸಿರುವುದರಿಂದ ಮುಮುಕ್ಷುಗಳೆಲ್ಲರೂ ಅದನ್ನು ಸೇವಿಸಿ ಶಿರಸ್ಸಿನ ಮೇಲೆ ಧರಿಸಬೇಕು.[೩೨೭]

ಶಿವರಹಸ್ಯದಲ್ಲಿ ಪಾದೋದಕ ಶಬ್ದದಲ್ಲಿರುವ ನಾಲ್ಕು ಅಕ್ಷರಗಳನ್ನು ಕ್ರಮವಾಗಿ ಪರಮಜ್ಞಾನವನ್ನು ನೀಡುವ, ದೋಷನಾಶಕವಾದ, ಜನ್ಮದಾಹಕತ್ವ ಮತ್ತು ಕರ್ಮನಾಶಕತ್ವವೆಂದು ಪ್ರತಿಪಾದಿಸಿ ಅದರ ಮಹಿಮೆಯನ್ನು ವಿಶೇಷವಾಗಿ ವರ್ಣಿಸಲಾಗಿದೆ. ಅದು ಇಂತಿದೆ-

> ಪಾಕಾರಃ ಪರಮಂ ಜ್ಞಾನಂ ದೋಕಾರೋ ದೋಷನಾಶನಃ।
> ದಕಾರೋ ಜನ್ಮದಹತಿ ಕಕಾರಃ ಕರ್ಮನಾಶನಃ॥[೩೨೮]

ಮಹಾರಾಷ್ಟ್ರದ ಸಂತ ಶಿರೋಮಣಿ ವೀರಶೈವಾಚಾರ್ಯರಾದ ಶ್ರೀಮನ್ಮಥ ಸ್ವಾಮಿಗಳು ತಮ್ಮ ಪರಮರಹಸ್ಯವೆಂಬ ಗ್ರಂಥದಲ್ಲಿ ಪಾದೋದಕದ ಮಹಿಮೆಯನ್ನು ಹೀಗೆ ವರ್ಣಿಸಿದ್ದಾರೆ-

> ಕಾಶೀ ಮೇಲಿಯಾ ಮುಕ್ತಿ ದೇತ। ಸದ್ಭಾವೇ ಸೇವಿತಾ ಶ್ರೀಗುರುತೀರ್ಥ।
> ತೋ ಸಹಜ ಹೋಯ ಜೀವನ್ಮುಕ್ತ। ತೀರ್ಥ ಮಾಹಾತ್ಮ್ಯ ಐಸೇ ಹೇ॥
> ಗಂಗಾತೀರ್ಥೀ ಏಕ ಅವಗುಣ। ಖೋಲೀ ಜಾತಾ ಜಾಯ ಬುಡೋನ।
> ಗುರುತೀರ್ಥ ನ ಬುಡವೀ ಹ್ಮಣೂನ। ತರುನೀ ಜಾತೀ ಕೈಲಾಸೀ॥

---

[೩೨೭] ಪೃಥಿವ್ಯಾಂ ಯಾನಿ ತೀರ್ಥಾನಿ ಯಾ ನದ್ಯಃ ಪುಣ್ಯದಾಃ ಶುಭಾಃ।
ಮತ್ಪಾದೇ ಸ್ಥಾಪಿತಾ ನಿತ್ಯಂ ತದ್ಧಾರ್ಯಂ ಚ ಪದೋದಕಮ್॥
ಮಮ ಪಾದೋದಕಂ ಪುಣ್ಯಂ ಸದಾ ಧಾರ್ಯಂ ಮದಾಶ್ರಿತೈಃ।
ತ್ರ್ಯಕ್ಷಾ ದಶಭುಜಾ ಜ್ಞೇಯಾ ಮಮ ತುಲ್ಯಪರಾಕ್ರಮಾಃ॥
ಅಭಿಷಿಕ್ತಜಲಂ ಪ್ರಾತಃ ಪಿಬೇನ್ನಿತ್ಯಂ ದಿನೇ ದಿನೇ।
ಶೂಲಕುಷ್ಠಾದ್ಯಪಸ್ಮಾರಜ್ವರಾಣಾಂ ಭೇಷಜಂ ಪ್ರಿಯೇ॥
ಪಾದೋದಕಪ್ರಸಾದಾನ್ನಂ ನಿತ್ಯಮಾಸೇವತಾಂ ನೃಣಾಮ್।
ದಶಪಾತಕನಾಶಸ್ತು ಕಥ್ಯತೇ ಗಣಪುಂಗವಾಃ॥
-ವೀರಶೈವಾನಂದಚಂದ್ರಿಕೆ, ಪು. ೧೧೦-೧೧೫

[೩೨೮] ವೀರಶೈವಾನಂದಚಂದ್ರಿಕೆ, ಪು. ೧೧೫

ದ್ವಾದಶಲಿಂಗಾ ಕರಿತಾ ಪರಿಕ್ರಮಾ। ಪರಿ ಗುರುತೀರ್ಥಾಚಾ ನಯೇ ಮಹಿಮಾ।
ಜೇಣೇ ಪಾವಿಜೇ ಸ್ವಯೇ ಪರಬ್ರಹ್ಮಾ। ತ್ಯಾಚೇ ಸರೀ ಕೋಣ ಕರೀ॥[೩೨೯]

ಈ ಉಕ್ತಿಗಳಲ್ಲಿ ಕಾಶಿಯೇ ಮೊದಲಾದ ಪುಣ್ಯಕ್ಷೇತ್ರಗಳಿಗಿಂತಲೂ, ಗಂಗಾ ಮೊದಲಾದ ಪವಿತ್ರ ನದಿಗಳ ತೀರ್ಥಕ್ಕಿಂತಲೂ ಗುರುಪಾದೋದಕದ ಮಹಿಮೆಯು ಅಧಿಕವೆಂದು ವರ್ಣಿತವಾಗಿದೆ. "ಕಾಶ್ಯಾಂ ಮರಣಾನ್ಮುಕ್ತಿಃ" (ಕಾಶಿಯಲ್ಲಿ ಮರಣಹೊಂದುವುದರಿಂದ ಮೋಕ್ಷವು) ಎಂಬ ಉಕ್ತಿಯ ಅನುಸಾರವಾಗಿ ಕಾಶಿಯಲ್ಲಿ ಮರಣಹೊಂದುವುದರಿಂದ ಮುಕ್ತಿಯು ಲಭಿಸುತ್ತದೆ. ಅದು ಕೇವಲ ವಿದೇಹಮುಕ್ತಿಯು. ಆದರೆ ಗುರುಪಾದೋದಕದ ಸೇವನೆಯಿಂದ ಯಾವ ಸ್ಥಳದಲ್ಲಿ ವಾಸಿಸುತ್ತಿದ್ದರೂ ಜೀವನ್ಮುಕ್ತಿಯು ಸಹಜವಾಗಿ ಉಂಟಾಗುತ್ತದೆ. ಗಂಗಾನದಿಗೆ ಸ್ನಾನಕ್ಕೆ ತೆರಳಿದ ಒಬ್ಬ ಭಕ್ತನು ಈಜಾಡುವುದನ್ನು ತಿಳಿಯದ ಕಾರಣ ದುರ್ಮರಣವನ್ನು ಹೊಂದಬಹುದು. ಆದರೆ ಗುರುಪಾದೋದಕದಿಂದ ಸ್ನಾನಮಾಡುವವನಿಗೆ ಎಂದಿಗೂ ಅಂತಹ ಸ್ಥಿತಿ ಬರುವುದಿಲ್ಲ. ಪಾದೋದಕ ಸೇವನೆಯಿಂದ ಲಭ್ಯವಾಗುವ ಪುಣ್ಯವು ದ್ವಾದಶಜ್ಯೋತಿರ್ಲಿಂಗಗಳನ್ನು ಪ್ರದಕ್ಷಿಣೆ ಮಾಡುವುದರಿಂದಲೂ ದೊರೆಯಲು ಸಾಧ್ಯವಿಲ್ಲ. ಎಲ್ಲ ತೀರ್ಥಕ್ಷೇತ್ರಗಳ ಯಾತ್ರೆಗಿಂತಲೂ ಗುರು, ಲಿಂಗ, ಜಂಗಮರ ಪಾದೋದಕ ಸೇವನೆಯೇ ಅತ್ಯಂತ ಶ್ರೇಷ್ಠವಾದದ್ದೆಂದು ಪೂರ್ವೋಕ್ತ ವಿವರಣೆಗಳಿಂದ ನಿಶ್ಚಯವಾಯಿತು. "ಯೇ ಪಿಬಂತಿ ಪುನಃ ಸ್ತನ್ಯಂ ನ ಪಿಬಂತಿ ಕದಾಚನ"[೩೩೦] ಎಂಬ ಬ್ರಹ್ಮಾಂಡಪುರಾಣ ವಾಕ್ಯದಲ್ಲಿ ಪಾದೋದಕ ಸೇವನೆಯಿಂದ ಪುನರ್ಜನ್ಮವಿಲ್ಲದಿರುವುದನ್ನು ಘೋಷಿಸಲಾಗಿದೆ.

ಗುರು, ಜಂಗಮರ ಪಾದತೀರ್ಥದಲ್ಲಿ ಇಂತಹ ಸಾಮರ್ಥ್ಯವಿರುವುದರಿಂದಲೇ ಅದನ್ನು ಯಾವಾಗಲೂ ಆಚರಿಸಬೇಕು. ಶಾಸ್ತ್ರೋಕ್ತ ಕ್ರಮದಿಂದ ಜೀವನವನ್ನು ನಡೆಸುವ ಮಹಾತ್ಮರುಗಳ ಪಾದ, ಹಸ್ತ, ಮಾತು, ನೋಟ ಹೀಗೆ ಎಲ್ಲ ಅಂಗಾಂಗಗಳಲ್ಲಿಯೂ ಸಹ ತಪಸ್ಸಿನ ಅಗ್ನಿಯು ಜ್ವಲಿಸುತ್ತಾ ಇರುತ್ತದೆ. ಆದುದರಿಂದ ಅವರ ಅಂಗಸ್ಪರ್ಶ ಹಾಗೂ ದೃಷ್ಟಿಪಾತವಾದ ಎಲ್ಲರೂ ಪವಿತ್ರರಾಗುತ್ತಾರೆ. ಆ ಕಾರಣ ಅವರ ಪಾದಸ್ಪರ್ಶದಿಂದ ಪವಿತ್ರವಾದ ಕಟ್ಟಿಗೆಯ ಪಾದುಕೆಗಳು ಪಾದದಂತೆ ಪೂಜ್ಯವೂ ಹಾಗೂ ಜಲವು ತೀರ್ಥದಂತೆ ಪಾವನವೂ ಆಗುತ್ತದೆಂಬುದರಲ್ಲಿ ಆಶ್ಚರ್ಯವೇನು ಬಂತು. ಈ ಪ್ರಕಾರವಾಗಿ ಸದಾಚಾರಶೀಲರೂ, ಮಹಾಮಹಿಮಾಶಾಲಿಗಳೂ ಆದ ಗುರು-ಜಂಗಮರ ಹಾಗೂ ಇಷ್ಟಲಿಂಗದ ತೀರ್ಥಸೇವನೆಯಿಂದ ತಾನು (ಪಾದೋದಕ ಸ್ವೀಕರಿಸಿದ ವ್ಯಕ್ತಿ) ಮಾತ್ರವಲ್ಲದೆ ತನ್ನ ಹಿಂದಿನ ಹತ್ತು ತಲೆಮಾರಿನ ಪೂರ್ವಜರನ್ನೂ, ಮುಂದಿನ ಹತ್ತು ಪೀಳಿಗೆಯ ತನ್ನ ಬಂಧುಗಳನ್ನೂ ಸಹ ಸಂಸಾರವೆಂಬ ಸಾಗರದಿಂದ ದಾಟಿಸುತ್ತಾನೆ. ಅದನ್ನು ಜಾಬಾಲಶಾಖೆಯು ಹೀಗೆ ನಿರೂಪಿಸಿದೆ- "ಪೂಜ್ಯರ

---

[೩೨೯] ಪರಮರಹಸ್ಯ, ೨.೪೮-೫೦, ಪು. ೧೮

[೩೩೦] ವೀರಶೈವಾನಂದಚಂದ್ರಿಕೆ, ಪು. ೧೧೫

ಪಾದಗಳನ್ನು ತೊಳೆದು, ಶಂಖನಾದವನ್ನು ಮಾಡಿ, ಗಂಧ-ಅಕ್ಷತೆ-ಪುಷ್ಪಾದಿಗಳಿಂದ ಪೂಜಿಸಿ, ಅನ್ನವನ್ನು ನೈವೇದ್ಯ ಮಾಡಿ "ಇಮಂ ಮೇ ಗಂಗೇ ಯಮುನೇ ಸರಸ್ವತೀ" ಎಂಬ ಮಂತ್ರದಿಂದ ಅಭಿಮಂತ್ರಿಸಿ, ಕದ್ರುದ್ರಾಯ ಎಂಬ ಮಂತ್ರದಿಂದ ನಮಸ್ಕರಿಸಿ, ಸಂಮಾರ್ಜನ ಮಾಡಿ, ಋತಂ ಸತ್ಯಂ ಪರಬ್ರಹ್ಮ ಎಂದು ಸ್ವೀಕರಿಸಬೇಕು. ಯಾವನು ಈ ರೀತಿಯಾಗಿ ಮಾಡುತ್ತಾನೆಯೋ ಅಂಥವನು ತನ್ನ ಕುಲದ ಹತ್ತು ತಲೆಮಾರಿನ ಪೂರ್ವಜರನ್ನು, ಮುಂದಿನ ಹತ್ತು ಪೀಳಿಗೆಯವರನ್ನು ಹಾಗೂ ತನ್ನನ್ನು ಸಂಸಾರವೆಂಬ ಸಮುದ್ರದಿಂದ ದಾಟಿಸುತ್ತಾನೆ."[೩೩೧] ಹೀಗೆ ಎಲ್ಲ ಶಾಸ್ತ್ರಗಳಲ್ಲಿ ಪ್ರತಿಪಾದಿಸಲ್ಪಟ್ಟ ಪಾವನವಾದ ಪಾದೋದಕವನ್ನು ಪ್ರತಿಯೊಬ್ಬರೂ ಶ್ರದ್ಧೆಯಿಂದ ಸೇವಿಸಬೇಕು.

ಪಾದೋದಕದ ಆವರಣ ಶಬ್ದವಾಚ್ಯತ್ವ

ಅಷ್ಟಾವರಣಗಳಲ್ಲಿ ನಾಲ್ಕನೆಯ ಆವರಣವೆಂದು ಅಂಗೀಕರಿಸಲಾಗಿರುವ ಪಾದೋದಕವು ಪೂರ್ವೋಕ್ತ ರೀತಿಯಿಂದ ಗುರುವಿನ ಪಾದಪೂಜೆಯಿಂದ ದೊರೆತದ್ದು ಗುರುಪಾದೋದಕವೆಂದೂ, ಜಂಗಮನ ಪಾದಪೂಜೆಯಿಂದ ಲಭ್ಯವಾದದ್ದು ಜಂಗಮ ಪಾದೋದಕವೆಂದೂ ಮತ್ತು ಇಷ್ಟಲಿಂಗದ ಪೂಜೆಯಿಂದ ಲಭ್ಯವಾದುದು ಲಿಂಗ ಪಾದೋದಕವೆಂದು ಮೂರುವಿಧವಾಗುತ್ತದೆ. ಪರಮಪಾವನಗಳಾದ ತ್ರಿವಿಧ ಪಾದೋದಕಗಳು ಸಾಕ್ಷಾತ್ ಆಚಾರದಿಂದಲೋ ಅಥವಾ ಸಂಬಂಧಾಚಾರದಿಂದಲೋ ಪ್ರತಿನಿತ್ಯ ಸೇವಿಸುವುದರಿಂದ ಸ್ಥೂಲ, ಸೂಕ್ಷ್ಮ ಮತ್ತು ಕಾರಣಶರೀರಗಳು ಪರಿಶುದ್ಧ ವಾಗುತ್ತವೆ. ಈ ರೀತಿಯಾಗಿ ಶರೀರ, ಇಂದ್ರಿಯ, ಮನಸ್ಸು, ಬುದ್ಧಿಗಳ ಶುದ್ಧಿಯಿಂದ ಅವುಗಳಲ್ಲಿ ನೆಲೆಸಿರುವ ಜೀವಾತ್ಮನು ಎಂದಿಗೂ ದುರ್ಮಾರ್ಗದಲ್ಲಿ ಪ್ರವೃತ್ತನಾಗುವುದಿಲ್ಲ. ಹೀಗೆ ಪಾದೋದಕವು ಮನಸ್ಸಿಗೆ ಸಂಬಂಧಿಸಿದ ಅನಿಷ್ಟ ಚಿಂತನರೂಪ ದೋಷಗಳನ್ನು ಹಾಗೂ ಹಿಂದಿನ ಜನ್ಮದಲ್ಲಿ ಮಾಡಿರುವ ದುಷ್ಕರ್ಮಗಳನ್ನು ನಾಶಗೊಳಿಸುವುದರಿಂದಲೂ, ಹುಟ್ಟು-ಸಾವುಗಳೆಂಬ ಸಂಸಾರವನ್ನು ದಹಿಸುವುದ ರಿಂದಲೂ ಮತ್ತು ಶ್ರೇಷ್ಠವಾದ ಜ್ಞಾನವನ್ನುಂಟುಮಾಡುವ ಕಾರಣದಿಂದಲೂ ಶಿವಭಕ್ತನನ್ನು ಯಾವಾಗಲೂ ರಕ್ಷಿಸುತ್ತದೆ ಎಂದು ಇದು ಆವರಣವೆನಿಸುತ್ತದೆ. ಆದುದರಿಂದ ಎಲ್ಲ ಶಿವಭಕ್ತರೂ ಸಹ ಈ ಆವರಣದಿಂದ ತಮ್ಮನ್ನು ಸರಿಯಾದ ರೀತಿಯಲ್ಲಿ ರಕ್ಷಿಸಿಕೊಳ್ಳಬೇಕು.

೫. ಪ್ರಸಾದ

ಅಷ್ಟಾವರಣಗಳಲ್ಲಿ ಪ್ರಸಾದವು ಐದನೆಯ ಆವರಣ. ಪ್ರಸಾದ ಎಂದರೇನು? ಅದು ಎಷ್ಟು ವಿಧ? ಅದು ಹೇಗೆ ಆವರಣವಾಗುತ್ತದೆ? ಇತ್ಯಾದಿ ವಿಷಯಗಳನ್ನು ಶಾಸ್ತ್ರೋಕ್ತ ಆಧಾರದಿಂದ ಪ್ರಸ್ತಾಪಿಸಲಾಗುವುದು.

---

೩೩೧. ವೀರಶೈವಚಿಂತಾಮಣಿ, ಪು. ೯೨; ವೀರಶೈವಾನಂದಚಂದ್ರಿಕೆ, ಪು. ೧೧೩

ಪ್ರಸಾದ ಶಬ್ದದ ಅರ್ಥ

"ನೈರ್ಮಲ್ಯಂ ಮನಸೋ ಲಿಂಗಂ ಪ್ರಸಾದ ಇತಿ ಕಥ್ಯತೇ"[೩೩೨] (ಮನಸ್ಸಿನ ನಿರ್ಮಲತ್ವವು ಪ್ರಸಾದವೆಂದು ಕರೆಯಲ್ಪಡುತ್ತದೆ) ಎಂಬ ಉಕ್ತಿಯಂತೆ ಮನಸ್ಸಿನ ನಿರ್ಮಲತ್ವ, ಆದುದರಿಂದಲೇ ಅದು ಪ್ರಸನ್ನರಾಗಿರುವುದರಿಂದ 'ಪ್ರಸಾದ' ಎಂದು ಕರೆಯಲ್ಪಟ್ಟಿದೆ. "ಅನ್ನಮಶಿತಂ ತ್ರೇಧಾ ವಿಧೀಯತೇ। ತಸ್ಯ ಯಃ ಸ್ಥವಿಷ್ಠೋ ಧಾತುಸ್ತತ್ಪುರೀಷಂ ಭವತಿ, ಯೋ ಮಧ್ಯಮಸ್ತನ್ಮಾಂಸಮ್, ಯೋಽಣಿಷ್ಠಸ್ತನ್ಮನಃ"[೩೩೩] (ಭುಕ್ತವಾದ ಅನ್ನವು (ಜಠರಾಗ್ನಿಯಿಂದ ಪಕ್ವವಾಗಿ) ಮೂರುವಿಧವಾಗುತ್ತದೆ. ಆ ಅನ್ನದಲ್ಲಿ ಯಾವುದು ಸ್ಥೂಲತಮವಾದ ಧಾತುವೊ ಅದು ಮಲವಾಗುತ್ತದೆ, ಯಾವುದು ಮಧ್ಯಮ ಧಾತುವೊ ಅದು ಮಾಂಸವಾಗುತ್ತದೆ, ಯಾವುದು ಸೂಕ್ಷ್ಮತಮ ಧಾತುವೊ ಅದು ಮನಸ್ಸಾಗುತ್ತದೆ) ಎಂಬ ಉಪನಿಷತ್ತಿನ ಪ್ರಮಾಣದಿಂದ ನಾವು ತಿಂದ ಅನ್ನದ ಯಾವ ಕೊನೆಯ ಸ್ಥಿತಿಯಿದೆಯೋ ಅದು ಮನಸ್ಸೆಂದು ತಿಳಿದುಬರುತ್ತದೆ. ಆದುದರಿಂದ ಅದೇ ಉಪನಿಷತ್ತು "ಅನ್ನಮಯಂ ಹಿ ಸೋಮ್ಯ ಮನಃ"[೩೩೪] (ಹೇ ಸೋಮ್ಯ ಮನಸ್ಸು ಅನ್ನಮಯವಾಗಿದೆ) ಎಂದು ಪ್ರತಿಪಾದಿಸಿದೆ. ಆ ಕಾರಣ ಮನಸ್ಸಿನ ನಿರ್ಮಲತ್ವಕ್ಕೆ ನಿರ್ಮಲವಾದ ಅನ್ನವು ಹೇತು ಮತ್ತು ಮನಸ್ಸಿನ ದೂಷಿತತ್ವಕ್ಕೆ ಅಶುದ್ಧವಾದ ಅನ್ನವೇ ಕಾರಣವಾಗಿದೆ. ಸದ್ಗುರುವಿಗೆ, ಜಂಗಮನಿಗೆ ಮತ್ತು ಇಷ್ಟಲಿಂಗಕ್ಕೆ ನೈವೇದ್ಯ ಮಾಡಿದ ಅನ್ನವು ನಿರ್ಮಲವಾಗುತ್ತದೆ.[೩೩೫] "ಆಯುರ್ವೈ ಘೃತಮ್" (ಆಯುಸ್ಸೇ ತುಪ್ಪ) ಎಂಬಲ್ಲಿ ಆಯುಸ್ಸಿಗೆ ಕಾರಣವಾದ ತುಪ್ಪವು ಯಾವ ರೀತಿಯಾಗಿ ಆಯುಸ್ಸು ಎಂಬ ಶಬ್ದದಿಂದ ಕರೆಯಲ್ಪಡುತ್ತದೆಯೋ ಹಾಗೆಯೇ ಪೂರ್ವೋಕ್ತವಾದ ನಿರ್ಮಲವಾದ ಅನ್ನವು ಮನಸ್ಸಿನ ಪ್ರಸನ್ನತೆಗೆ ಕಾರಣವೆಂದು ಪ್ರಸಾದ ಎಂದು ಕರೆಯಲ್ಪಟ್ಟಿದೆ. ಅಲ್ಲದೆ ಶಿವನ ಪ್ರಸನ್ನತೆ ಅರ್ಥಾತ್ ನಿಷ್ಠರಾದ ಭಕ್ತರ ಮೇಲೆ ಮಾಡಲ್ಪಡುವ ಶಿವಾನುಗ್ರಹವೂ ಕೂಡ ಪ್ರಸಾದ ಎಂದು ಹೇಳಲ್ಪಟ್ಟಿದೆ. ಈ ಶಿವಪ್ರಸಾದದಿಂದ ಸಮಸ್ತ ಪ್ರಪಂಚವು ಶಿವರೂಪಿಯಾಗಿ ಕಾಣಿಸುತ್ತದೆ.[೩೩೬]

> ಪ್ರಸಾದಾದೇವ ಸಾ ಭಕ್ತಿಃ ಪ್ರಸಾದೋ ಭಕ್ತಿಸಂಭವಃ।
> ಯಥೈವಾಂಕುರತೋ ಬೀಜಂ ಬೀಜತೋ ವಾ ಯಥಾಂಕುರಃ॥[೩೩೭]

---

[೩೩೨] ಸಿ.ಶಿ, ೧೧.೬

[೩೩೩] ಛಾಂದೋಗ್ಯೋಪನಿಷತ್, ೬-೫-೧

[೩೩೪] ಛಾಂದೋಗ್ಯೋಪನಿಷತ್, ೬-೫-೪

[೩೩೫] ಶಿವಪ್ರಸಾದೋ ಯದ್‌ದ್ರವ್ಯಂ ಶಿವಾಯ ವಿನಿವೇದಿತಮ್।
ನಿರ್ಮಾಲ್ಯಂ ತತ್ತು ಶೈವಾನಾಂ ಮನೋನೈರ್ಮಲ್ಯಕಾರಣಮ್॥ -ಸಿ.ಶಿ, ೧೧.೭

[೩೩೬] ಪ್ರಸಾದೇ ಶಾಂಭವೇ ಸಿದ್ಧೇ ಪರಮಾನಂದಕಾರಣೇ।
ಸರ್ವಂ ಶಿವಮಯಂ ವಿಶ್ವಂ ದೃಶ್ಯತೇ ನಾತ್ರ ಸಂಶಯಃ॥ -ಸಿ.ಶಿ, ೧೧.೭೨

[೩೩೭] ಸಿ.ಶಿ, ೯.೧೧

"ಮೊಳಕೆಯಿಂದ ಬೀಜವು ಹೇಗೆ ಉತ್ಪನ್ನವಾಗುವುದೋ, ಬೀಜದಿಂದ ಮೊಳಕೆಯು ಹೇಗೆ ಉತ್ಪನ್ನವಾಗುವುದೋ, ಹಾಗೆಯೇ ಭಕ್ತಿಯು ಶಿವಾನುಗ್ರಹದಿಂದ ಉತ್ಪನ್ನವಾಗುವುದು" ಎಂಬಲ್ಲಿ ಶ್ರೀ ರೇಣುಕ ಭಗವತ್ಪಾದರು ಭಕ್ತಿ-ಪ್ರಸಾದಗಳು, ಬೀಜ-ಅಂಕುರ(ಮೊಳಕೆ)ದಂತೆ ಪರಸ್ಪರ ಕಾರಣಗಳೆಂದು ಪ್ರತಿಪಾದಿಸಿದ್ದಾರೆ. ಇದರ ಭಾವವಿಷ್ಟು- ಯಾವಾಗ ಸಾಧಕನು ಭಕ್ತಿಯಿಂದ ತಾನು ಭುಂಜಿಸುವ ವಸ್ತುಗಳನ್ನು ಶಿವನಿಗರ್ಪಿಸಿ ತಿನ್ನುತ್ತಾನೆಯೋ ಆಗ ಆ ಪ್ರಸಾದದಿಂದ ಮನಸ್ಸಿನ ಶುದ್ಧಿಯಾಗುತ್ತದೆ ಮತ್ತು ಅದರಿಂದ ಶಿವಭಕ್ತಿಯು ಹೆಚ್ಚಾಗುತ್ತದೆಂದು ಉತ್ತರೋತ್ತರವಾಗಿ ಶಿವಭಕ್ತಿಯು ಹೆಚ್ಚಾಗಲು ಶಿವನ ಪ್ರಸಾದವೇ ಕಾರಣವಾಗಿ,[೩೩೮] ಅದರ ಮಹಿಮೆಯಿಂದ ಶಿವಭಕ್ತನು ಸಮಸ್ತ ಜಗತ್ತನ್ನು ಶಿವಮಯವನ್ನಾಗಿ ಕಾಣುತ್ತಾನೆ.

ಮೇಲಿನ ಚರ್ಚೆಯಿಂದ ಪ್ರಸಾದ ಎಂದರೆ ಶಿವನಿಗರ್ಪಿಸಿದ ವಸ್ತು, ಮನಸ್ಸಿನ ನೈರ್ಮಲ್ಯ ಮತ್ತು ಶಿವಾನುಗ್ರಹವೆಂದು ಸಿದ್ಧವಾಯಿತು. ಇಲ್ಲಿ ಶಿವನಿರ್ಮಾಲ್ಯದಿಂದ ಮನಸ್ಸಿನ ನೈರ್ಮಲ್ಯ ಮತ್ತು ಮನಸ್ಸಿನ ನೈರ್ಮಾಲ್ಯದಿಂದ ಶಿವಾನುಗ್ರಹವೆಂಬ ಪ್ರಸಾದ ಪ್ರಾಪ್ತಿ ಎಂದು ಉತ್ತರೋತ್ತರಕ್ಕೆ (ಮುಂದು ಮುಂದಿನದಕ್ಕೆ) ಹಿಂದು ಹಿಂದಿನದು ಕಾರಣವಾಗುತ್ತದೆ. ಆದುದರಿಂದ ಮನಸ್ಸಿನ ನಿರ್ಮಲತ್ವಕ್ಕೆ ಕಾರಣವಾದ ಶಿವನಿಗರ್ಪಿತವಾದ ಅನ್ನರೂಪದ ಪ್ರಸಾದದ ಸ್ವರೂಪವನ್ನು ವಿಚಾರಮಾಡಲಾಗುವುದು.

ಅನ್ನಶುದ್ಧಿಯಿಂದ ಮನಸ್ಸಿನ ಶುದ್ಧಿ

"ಆಹಾರಶುದ್ಧೌ ಸತ್ತ್ವಶುದ್ಧಿಃ। ಸತ್ತ್ವಶುದ್ಧೌ ಧ್ರುವಾ ಸ್ಮೃತಿಃ। ಸ್ಮೃತೇರ್ಲಂಭೇ ಸರ್ವಗ್ರಂಥೀನಾಂ ವಿಪ್ರಮೋಕ್ಷಃ"[೩೩೯] (ಆಹಾರವು ಶುದ್ಧವಾದಾಗ ಅಂತಃಕರಣವು ಶುದ್ಧವಾಗುತ್ತದೆ. ಅಂತಃಕರಣವು ಶುದ್ಧವಾದಾಗ ಸ್ಮೃತಿಯು ಅವಿಚ್ಛಿನ್ನವಾಗುತ್ತದೆ. ಸ್ಮೃತಿಯನ್ನು ಪಡೆದಾಗ ಎಲ್ಲ ಗ್ರಂಥಿಗಳ ವಿನಾಶವಾಗುತ್ತದೆ) ಎಂಬ ಉಪನಿಷದ್ವಾಕ್ಯಾನುಸಾರವಾಗಿ ಮನಸ್ಸಿನ ಶುದ್ಧಿಗೆ ಆಹಾರಶುದ್ಧಿಯೇ ಕಾರಣವೆಂದು ಹೇಳಿ, ಅಂತಹ ಮನಸ್ಸಿನ ಶುದ್ಧಿಯಿಂದಲೇ ಸ್ಮರಣೆಯ ಲಾಭ, ಅವಿದ್ಯೆಯ ಗ್ರಂಥಿಯ ಭೇದ ಮತ್ತು ಮೋಕ್ಷಪ್ರಾಪ್ತಿ ಎಂದು ಸೂಚಿತವಾಗಿದೆ. ಆದುದರಿಂದ ಅನ್ನಶುದ್ಧಿಯು ಹೇಗಾಗುತ್ತದೆ ಎಂಬುದು ಹೀಗೆ ನಿರೂಪಿತವಾಗಿದೆ-

ಧರ್ಮಮಾರ್ಗದಿಂದ ಹಣವನ್ನು ಸಂಪಾದಿಸಬೇಕೆಂದು ಶಾಸ್ತ್ರಗಳು ಉಪದೇಶಿಸುತ್ತವೆ. ಆದರೂ ಸಹ ಲೋಭ, ಮೋಹ ಮೊದಲಾದ ಅರಿಷಡ್ವರ್ಗಗಳಿಂದ ಆಕ್ರಮಿಸಲ್ಪಟ್ಟ ಮನಸ್ಸುಳ್ಳ ಜನಗಳು ನಿಷಿದ್ಧವಾದ ಮಾರ್ಗದಿಂದಲೇ ಹಣವನ್ನು ಸಂಪಾದಿಸುವುದನ್ನು ನೋಡುತ್ತಿದ್ದೇವೆ. ಅಂತಹ ಹಣದಿಂದ ಭೋಗ್ಯವಾದ ಅನ್ನ

---

[೩೩೮] ಪ್ರಸಾದಮೂಲಾ ಸರ್ವೇಷಾಂ ಭಕ್ತಿರವ್ಯಭಿಚಾರಿಣೀ।
ಶಿವಪ್ರಸಾದಹೀನಸ್ಯ ಭಕ್ತಿಶ್ಚಾಪಿ ನ ಸಿದ್ಧ್ಯತಿ॥ -ಸಿ.ಶಿ, ೧೧.೬೯

[೩೩೯] ಛಾಂದೋಗ್ಯೋಪನಿಷತ್, ೭-೨೬-೨

ಮುಂತಾದ ವಸ್ತುಗಳನ್ನು ಕೊಳ್ಳುತ್ತಾರೆ. ಈ ಪ್ರಕಾರ ನಿಷಿದ್ಧವಾದ ಮಾರ್ಗದಿಂದ ಸಂಪಾದಿಸಿದ ಹಣದಿಂದ ಪಡೆದ ಅನ್ನಾದಿಗಳ ಸ್ವೀಕಾರದಿಂದ ಮನಸ್ಸು ಅಶುದ್ಧವಾಗುತ್ತದೆ ಮತ್ತು ಅಶುದ್ಧವಾದ ಮನಸ್ಸಿನಿಂದ ಮತ್ತೆ ನಿಷಿದ್ಧವಾದ ಆಚರಣೆ ಎಂದು ಉತ್ತರೋತ್ತರದಿಂದ ಮನುಷ್ಯನಿಗೆ ದುರ್ಗತಿಯೇ ಬರುತ್ತದೆ. ಈ ದುರ್ಗತಿಯನ್ನು ದೂರಮಾಡುವುದಕ್ಕೋಸ್ಕರ ವೀರಶೈವಾಚಾರ್ಯರುಗಳು-

> ಭುಂಜೀತ ರುದ್ರಭುಕ್ತಾನ್ನಂ ರುದ್ರಪೀತಂ ಜಲಂ ಪಿಬೇತ್।
> ರುದ್ರಾಘ್ರಾತಂ ಸದಾ ಜಿಘ್ರೇದಿತಿ ಜಾಬಾಲಿಕೀ ಶ್ರುತಿಃ॥
> ಅರ್ಪಯಿತ್ವಾ ನಿಜೇ ಲಿಂಗೇ ಪತ್ರಂ ಪುಷ್ಪಂ ಫಲಂ ಜಲಮ್।
> ಅನ್ನಾದ್ಯಂ ಸರ್ವಭೋಜ್ಯಂ ಚ ಸ್ವೀಕುರ್ಯಾದ್ ಭಕ್ತಿಮಾನ್ನರ॥[೩೪೦]

"(ಶಿವಭಕ್ತನು) ಶಿವನು ಭುಂಜಿಸಿದ ಅನ್ನವನ್ನು ಸ್ವೀಕರಿಸಬೇಕು; ಶಿವನು ಕುಡಿದ ನೀರನ್ನು ಕುಡಿಯಬೇಕು; ಶಿವನು ಆಘ್ರಾಣಿಸಿದ ವಸ್ತುವನ್ನು ಆಘ್ರಾಣಿಸಬೇಕು ಎಂದು ಜಾಬಾಲಶ್ರುತಿಯು ಸಾರುತ್ತಿಹುದು. ಶಿವಭಕ್ತಿಯುಳ್ಳ ಮಾನವನು ತನ್ನ ಇಷ್ಟಲಿಂಗಕ್ಕೆ ಪತ್ರವನ್ನೂ, ಪುಷ್ಪವನ್ನೂ, ಫಲವನ್ನೂ, ಜಲವನ್ನೂ, ಅನ್ನಾದಿ ಎಲ್ಲ ಭೋಜ್ಯವಸ್ತುಗಳನ್ನೂ ಸಮರ್ಪಿಸಿ ಸ್ವೀಕರಿಸಬೇಕು" -ಎಂದು ತಾನು ಊಟ ಮಾಡುವ ಅನ್ನವೇ ಮೊದಲಾದ ವಸ್ತುಗಳನ್ನು ಇಷ್ಟಲಿಂಗಕ್ಕೆ ಅರ್ಪಿಸಬೇಕೆಂದು ಉಪದೇಶಿಸಿದ್ದಾರೆ. ಇಷ್ಟಲಿಂಗಕ್ಕೆ ಅರ್ಪಿಸಿದ ಅನ್ನವನ್ನು ಲಿಂಗರೂಪಿಯಾದ ಶಿವನು ನಿತ್ಯತೃಪ್ತನಾಗಿರುವುದರಿಂದ ತಿನ್ನುವುದಿಲ್ಲ. ಆದರೆ ಅವನ ದಿವ್ಯವಾದ ದೃಷ್ಟಿಪಾತದಿಂದ ಅದರಲ್ಲಿನ ದೋಷಗಳು ನಿವಾರಣೆಯಾಗುತ್ತವೆ. ಈ ರೀತಿಯಾಗಿ ಶಿವಾರ್ಪಿತವಾದ ಕಾರಣದಿಂದ ಪರಿಶುದ್ಧವಾದ ಪ್ರಸಾದವನ್ನು ಊಟಮಾಡುವ ಪರಿಣಾಮವಾಗಿ ಮನಸ್ಸು ಶುದ್ಧವಾಗುತ್ತದೆ. ಆದುದರಿಂದಲೇ ರೇಣುಕಭಗವತ್ಪಾದರು-

> ಅನ್ನಶುದ್ಧ್ಯಾ ಹಿ ಸರ್ವೇಷಾಂ ತತ್ತ್ವಶುದ್ಧಿರುದಾಹೃತಾ।
> ವಿಶುದ್ಧಮನ್ನಜಾತಂ ಹಿ ಯಚ್ಛಿವಾಯ ಸಮರ್ಪಿತಮ್॥[೩೪೧]

"ಅನ್ನಶುದ್ಧಿಯಿಂದಲೇ ಎಲ್ಲ ಜೀವಿಗಳ ತತ್ತ್ವಶುದ್ಧಿಯಾಗುವುದೆಂದು ಶಾಸ್ತ್ರಗಳು ಹೇಳಿವೆ. ಯಾವುದು ಶಿವನಿಗೆ ಸಮರ್ಪಿತವಾಗುವುದೋ ಅದು ಪರಿಶುದ್ಧವಾದ ಪ್ರಸಾದವೆನಿಸುವುದು" ಎಂದು ಹೇಳಿದ್ದಾರೆ. ಅನ್ನದಲ್ಲಿರುವ ದೋಷವು ಶಿವಾರ್ಪಣೆಯಿಂದ ಶುದ್ಧವಾಗುತ್ತದೆ. ಶಿವಾರ್ಪಿತವಾದ ಪರಿಶುದ್ಧವಾದ ಅನ್ನದಿಂದ ಮನಸ್ಸು ಶುದ್ಧಿಯಾಗುತ್ತದೆಂದು ಸಿದ್ಧವಾಯಿತು.

ಅಲ್ಲದೆ, ಮನುಷ್ಯನ ಆಹಾರವು ಕೇವಲ ಅನ್ನ ಮಾತ್ರವಾಗಿರದೆ "ಆಹ್ರಿಯತೇ ಯತ್ತದ್ ಆಹಾರಮ್" ಎಂಬ ವ್ಯುತ್ಪತ್ತಿಯಂತೆ ಶಬ್ದ, ಸ್ಪರ್ಶ ಮುಂತಾದ ವಿಷಯಗಳೂ

---

೩೪೦. ಸಿ.ಶಿ, ೯.೭೦-೭೧

೩೪೧. ಸಿ.ಶಿ, ೧೧.೯

ಸಹ ಶ್ರೋತ್ರವೇ ಮುಂತಾದ ಇಂದ್ರಿಯಗಳಿಂದ ಅಪಹರಿಸಲ್ಪಡುವುದರಿಂದ ಆಹಾರವೆಂದು ಕರೆಯಲ್ಪಡುತ್ತವೆ. ಯಾವ ರೀತಿಯಾಗಿ ದೂಷಿತವಾದ ಅನ್ನದಿಂದ ಮನಸ್ಸು ದೂಷಿತವಾಗುತ್ತದೆಯೋ ಹಾಗೆಯೇ ಭಗವಂತನಿಗರ್ಪಿಸದ ವಿಷರೂಪ ಶಬ್ದ, ಸ್ಪರ್ಶ ಮೊದಲಾದ ವಿಷಯಗಳ ಉಪಭೋಗದಿಂದ ಮನಸ್ಸು ವ್ಯಾಮೋಹಕ್ಕೊಳಗಾಗುತ್ತದೆ. ಹೀಗೆ ವ್ಯಾಮೋಹಕ್ಕೊಳಗಾದ ಜೀವನು ಮತ್ತೆ ಮತ್ತೆ ಆ ವಿಷಯ ಭೋಗಗಳನ್ನು ಅನುಭವಿಸಬೇಕೆಂಬ ಬಯಕೆಯಿಂದ ಸಂಸಾರಚಕ್ರದಲ್ಲಿ ಸುತ್ತುತ್ತಿರುತ್ತಾನೆ. ಕ್ಷಣಿಕವಾದ ಶಬ್ದ ಮೊದಲಾದ ವಿಷಯಗಳಲ್ಲಿ ಆತ್ಯಂತಿಕವಾದ ಸುಖವಿಲ್ಲದಿರುವುದರಿಂದ ಅವುಗಳ ಉಪಭೋಗದಿಂದ ಮನಸ್ಸು ತೃಪ್ತಿಯನ್ನು ಹೊಂದುವುದಿಲ್ಲ. ಆ ಉದ್ದೇಶದಿಂದಲೇ ಒಂದು ಸಾವಿರ ವರ್ಷಗಳ ಕಾಲ[೩೪೨] ಭೋಗನಿರತನಾದ ಮಹಾರಾಜ ಯಯಾತಿಯು-

ನ ಜಾತು ಕಾಮಃ ಕಾಮಾನಾಮುಪಭೋಗೇನ ಶಾಮ್ಯತಿ।
ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿವರ್ಧತೇ॥[೩೪೩]

"ಕಾಮವೆಂಬುದು ಕಾಮಗಳ ಉಪಭೋಗದಿಂದ ಎಂದೆಂದಿಗೂ ಶಮನಗೊಳ್ಳುವುದಿಲ್ಲ. ಹವಿಸ್ಸಿನಿಂದ ಅಗ್ನಿಯು ಮತ್ತಷ್ಟು ಹೆಚ್ಚುವಂತೆ ಅದು ಮತ್ತಷ್ಟು ಹೆಚ್ಚಾಗುತ್ತದೆ" ಎಂದು ತನ್ನ ಅನುಭವವನ್ನು ವ್ಯಕ್ತಪಡಿಸಿದ್ದಾನೆ. ಇದನ್ನು ಅನುಭವಿಸಿರುವ ಕೋಟಿ ಕೋಟಿ ಜನಗಳೂ ಸಹ ಮತ್ತೆ ಅಲ್ಲಿಯೇ ರಮಿಸುತ್ತಾರೆ ಎಂಬುದು ಮಹದಾಶ್ಚರ್ಯಕರವಾದುದು. "ಭೋಗಾ ನ ಭುಕ್ತಾ ವಯಮೇವ ಭುಕ್ತಾಃ"[೩೪೪] (ಭೋಗವನ್ನು ನಾವು ಅನುಭವಿಸಲಿಲ್ಲ, ಭೋಗಗಳೇ ನಮ್ಮನ್ನು ಭೋಗಿಸಿದವು) ಎಂಬ ಭರ್ತೃಹರಿಯ ಅನುಭವದ ಮಾತಿನಂತೆ ವಿಷಯಗಳೆಂಬ ವಿಷಪಾನದಿಂದ ಬಹಳ ಜನರು ಸಾವಿನ ದವಡೆಗೆ ಬಿದ್ದಿದ್ದಾರೆ. ಪ್ರಪಂಚವು ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೆ ಶಬ್ದ, ಸ್ಪರ್ಶ ಮೊದಲಾದ ವಿಷಯಗಳ ಉಪಭೋಗವು ಅನಿವಾರ್ಯವಾಗಿದೆ. ಆದರೆ ಶಬ್ದ-ಸ್ಪರ್ಶಾದಿ ವಿಷಯಗಳಲ್ಲಿನ ವಿಷನಿವೃತ್ತಿಯು ಹೇಗೆ? ಎಂಬ ಜಿಜ್ಞಾಸೆಗೆ ಭಗವಂತನಿಗರ್ಪಿಸುವುದು ಎಂದು ಉಪದೇಶಿಸಲಾಗಿದೆ. ಮೀರಾಭಾಯಿ, ಪ್ರಹ್ಲಾದ ಮೊದಲಾದ ಭಕ್ತರು ಸಾಕ್ಷಾತ್ ವಿಷವನ್ನು ಭಗವಂತನ ಪ್ರಸಾದವೆಂದು ತಿಳಿದು ಕುಡಿದರೂ ಸಹ ಅವರು ಸಾಯಲಿಲ್ಲವೆಂಬ ಐತಿಹ್ಯವು ಇದ್ದೇ

---

[೩೪೨] ಯತ್ ಪೃಥಿವ್ಯಾಂ ವ್ರೀಹಿಯವಂ ಹಿರಣ್ಯಂ ಪಶವಸ್ತ್ರಿಯಃ।
ಏಕಸ್ಯಾಪಿ ನ ಪರ್ಯಾಪ್ತಂ ತಸ್ಮಾತ್ ತೃಷ್ಣಾಂ ಪರಿತ್ಯಜೇತ್॥
ಪೂರ್ಣಂ ವರ್ಷಸಹಸ್ರಂ ಮೇ ವಿಷಯಾಸಕ್ತಚೇತಸಃ।
ತಥಾಪ್ಯನುದಿನಂ ತೃಷ್ಣಾ ಮಮೈತೇಷ್ವಭಿಜಾಯತೇ॥
-ಮಹಾಭಾರತ, ಆದಿಪರ್ವ, ೮೫.೧೩,೧೫

[೩೪೩] ಮ.ಭಾ, ಆದಿಪರ್ವ, ೮೫.೧೨; ಮನುಸ್ಮೃತಿ, ೨.೯೪

[೩೪೪] ವೈರಾಗ್ಯಶತಕ, ಶ್ಲೋಕ. ೭

ಇದೆಯಲ್ಲ. ಆದುದರಿಂದ ವೀರಶೈವ ದರ್ಶನದಲ್ಲಿ ಶಬ್ದ ಮೊದಲಾದ ವಿಷಯಗಳು ಪ್ರಸಾದರೂಪವಾಗುತ್ತವೆಂದು ಆಯಾ ವಿಷಯವನ್ನು ಗ್ರಹಿಸುವ ಇಂದ್ರಿಯಗಳಲ್ಲಿ ಲಿಂಗಸಾನ್ನಿಧ್ಯವು ಉಪದಿಷ್ಟವಾಗಿದೆ. ಅದರಂತೆ ಪಂಚ ಜ್ಞಾನೇಂದ್ರಿಯಗಳಲ್ಲಿ ಕ್ರಮವಾಗಿ ಕಿವಿಗಳಲ್ಲಿ ಪ್ರಸಾದಲಿಂಗ, ಚರ್ಮದಲ್ಲಿ ಚರಲಿಂಗ (ಜಂಗಮಲಿಂಗ), ಕಣ್ಣುಗಳಲ್ಲಿ ಶಿವಲಿಂಗ, ನಾಲಿಗೆಯಲ್ಲಿ ಗುರುಲಿಂಗ, ಮೂಗಿನಲ್ಲಿ ಆಚಾರಲಿಂಗವೆಂದು ಪಂಚಜ್ಞಾನೇಂದ್ರಿಯಗಳಲ್ಲಿ ಪಂಚಲಿಂಗಗಳನ್ನು ಭಾವಿಸಬೇಕು. ಇದೇ ಪ್ರಕಾರವಾಗಿ ಪಂಚಕರ್ಮೇಂದ್ರಿಯಗಳಲ್ಲಿಯೂ ಸಹ ಕ್ರಮವಾಗಿ ವಾಗಿಂದ್ರಿಯದಲ್ಲಿ ಪ್ರಸಾದಲಿಂಗ, ಪಾಣಿಯಲ್ಲಿ ಚರಲಿಂಗ, ಪಾದಗಳಲ್ಲಿ ಶಿವಲಿಂಗ, ಪಾಯುವಿನಲ್ಲಿ ಗುರುಲಿಂಗ ಮತ್ತು ಉಪಸ್ಥೇಂದ್ರಿಯದಲ್ಲಿ ಆಚಾರಲಿಂಗವೆಂದು ಪೂರ್ವೋಕ್ತ ಲಿಂಗಗಳನ್ನು ಭಾವಿಸಿಕೊಳ್ಳಬೇಕು. ಇಲ್ಲಿ ಶ್ರೋತ್ರೇಂದ್ರಿಯವು ಶಬ್ದಗ್ರಾಹಕ, ವಾಗಿಂದ್ರಿಯವು ಶಬ್ದೋತ್ಪಾದಕ ಮೊದಲಾದ ರೂಪದಿಂದ ಜ್ಞಾನೇಂದ್ರಿಯ-ಕರ್ಮೇಂದ್ರಿಯಗಳ ವಿಷಯದ ಐಕ್ಯತೆಯಿಂದ ಉಭಯ ಇಂದ್ರಿಯಗಳು ಒಂದೇ ಲಿಂಗದಲ್ಲಿರುವುದನ್ನು ಅಂಗೀಕರಿಸಲಾಗಿದೆ. ಆದುದರಿಂದ ಇಂದ್ರಿಯಗಳ ಅಧ್ಯಕ್ಷನಾದ ಮನಸ್ಸಿನಲ್ಲಿ ಮಹಾಲಿಂಗವನ್ನು ಭಾವಿಸಿಕೊಳ್ಳಬೇಕು. ಹೀಗೆ ಒಟ್ಟು ಹನ್ನೊಂದು ಇಂದ್ರಿಯಗಳಲ್ಲಿ ಆರು ಲಿಂಗಗಳು ಹಾಗೆಯೇ ಸ್ಥೂಲ, ಸೂಕ್ಷ್ಮ, ಕಾರಣಗಳೆಂಬ ಶರೀರಗಳಲ್ಲಿ ಪೂರ್ವೋಕ್ತವಾದ ಇಷ್ಟಲಿಂಗ - ಪ್ರಾಣಲಿಂಗ - ಭಾವಲಿಂಗಗಳು ಎನ್ನುವ ಕಾರಣದಿಂದ ಸಾಧಕನ ಎಲ್ಲ ಅಂಗಗಳೂ ಲಿಂಗಮಯವೆಂದು ಘೋಷಿಸಲಾಗಿದೆ.[೩೪೪(ಎ)]

ಸರ್ವಾಂಗಲಿಂಗಮಯನಾದ ಸಾಧಕನು ಗುರುವಿನ ಉಪದೇಶಾನುಸಾರವಾಗಿ ಶ್ರೋತ್ರೇಂದ್ರಿಯದ ವಿಷಯವಾದ ಶಬ್ದವನ್ನು ಆ ಇಂದ್ರಿಯಾದಿಷ್ಟಿತವಾದ ಪ್ರಸಾದಲಿಂಗಕ್ಕೆ ಸಮರ್ಪಿಸಿ ಶಬ್ದಪ್ರಸಾದವನ್ನು, ತ್ವಗಿಂದ್ರಿಯದ ವಿಷಯವಾದ ಸ್ಪರ್ಶವನ್ನು ಆ ಇಂದ್ರಿಯದ ವಾಸಸ್ಥಾನವಾದ ಚರಲಿಂಗಕ್ಕೆ ನಿವೇದಿಸಿ ಸ್ಪರ್ಶಪ್ರಸಾದವನ್ನು, ನೇತ್ರೇಂದ್ರಿಯದ ವಿಷಯವಾದ ರೂಪವನ್ನು ಆ ಇಂದ್ರಿಯದ ವಾಸಸ್ಥಾನವಾದ ಶಿವಲಿಂಗಕ್ಕೆ ಅರ್ಪಿಸಿ ರೂಪಪ್ರಸಾದವನ್ನು, ರಸನೇಂದ್ರಿಯದ ವಿಷಯವಾದ ರಸವನ್ನು ಆ ಇಂದ್ರಿಯದ

[೩೪೪(ಎ)]. ಸರ್ವೇಷ್ವಂಗೇಷು ಸರ್ವತ್ರ ಸರ್ವದಾ ಸರ್ವತೋಮುಖಮ್।
ಲಿಂಗರೂಪೋಪದೇಶೇನ ಸುಪ್ರತಿಷ್ಠಿತಮಾತ್ಮನಿ॥
ಇಷ್ಟಲಿಂಗಂ ತು ಬಾಹ್ಯಾಂಗೇ ಪ್ರಾಣಲಿಂಗಂ ತಥಾಂತರೇ।
ಭಾವಲಿಂಗಂ ತಥೈವಾಸ್ಮಿನ್ನಾತ್ಮಾಂಗೇ ಸುಪ್ರತಿಷ್ಠಿತಮ್॥
ಹೃದಯಾಂಗೇ ಮಹಾಲಿಂಗಂ ಶ್ರೋತ್ರಾಂಗೇ ತು ಪ್ರಸಾದಕಮ್।
ತ್ವಗಂಗೇ ಚರಲಿಂಗಂ ತು ದೃಗಂಗೇ ಶಿವಲಿಂಗಕಮ್॥
ಜಿಹ್ವಾಂಗೇ ಗುರುಲಿಂಗಂ ತು ನಾಸಿಕಾಂಗೇ ತಥೈವ ಚ।
ಆಚಾರಲಿಂಗಮಶ್ರಾಂತಂ ಸುಪ್ರತಿಷ್ಠಿತಮೇವ ಹಿ॥
ಯಥಾ ಜ್ಞಾನೇಂದ್ರಿಯಾಂಗೇಷು ಕ್ರಮಾಲ್ಲಿಂಗಂ ಪ್ರತಿಷ್ಠಿತಮ್।
ತಥಾ ಕರ್ಮೇಂದ್ರಿಯಾಂಗೇಷು ಕ್ರಮಾಲ್ಲಿಂಗಂ ಪ್ರತಿಷ್ಠಿತಮ್॥
-ಅನುಭವಸೂತ್ರ, ೬.೨,೫-೮

ವಾಸಸ್ಥಾನವಾದ ಗುರುಲಿಂಗಕ್ಕೆ ನಿವೇದಿಸಿ ರಸಪ್ರಸಾದವನ್ನು, ನಾಸಿಕೇಂದ್ರಿಯದ ವಿಷಯವಾದ ಗಂಧವನ್ನು ಆ ಇಂದ್ರಿಯವು ನೆಲೆಸಿರುವ ಆಚಾರ ಲಿಂಗಕ್ಕೆ ಸಮರ್ಪಿಸಿ ಗಂಧಪ್ರಸಾದವನ್ನು, ಅಂತೆಯೇ ಎಲ್ಲ ಇಂದ್ರಿಯಗಳ ಅಧ್ಯಕ್ಷನಾದ ಮನಸ್ಸಿನಲ್ಲಿ ನೆಲೆಸಿರುವ ಮಹಾಲಿಂಗಕ್ಕೆ ಎಲ್ಲ ಇಂದ್ರಿಯಗಳ ವಿಷಯ ಸುಖವನ್ನು ನಿವೇದಿಸಿ ತೃಪ್ತಿಪ್ರಸಾದವನ್ನು ಸ್ವೀಕರಿಸುತ್ತಾನೆ ಎನ್ನುವ ಕಾರಣದಿಂದ ಅವುಗಳು ಸಾಧಕನ ಮನೋವಿಕಾರಕ್ಕೆ ಕಾರಣವಾಗದೆ, ಮನಸ್ಸಿನ ಪ್ರಸನ್ನತೆಯ ಕಾರಣಗಳಾಗುತ್ತವೆ. ಅದೇ ರೀತಿಯಲ್ಲಿ-

ತಸ್ಮಾದರ್ಪಣಸದ್ಭಾವಜ್ಞಾನಮೇವ ಸಮಭ್ಯಸೇತ್।
ಅಥ ಗಂಧೋ ರಸೋ ರೂಪಂ ಸ್ಪರ್ಶಃ ಶಬ್ದಸ್ತತಃ ಪರಮ್॥
ಪರಿಣಾಮಾಃ ಪದಾರ್ಥಾ ಹಿ ಷಡೇತೇ ಸಾರ್ವಕಾಲಿಕಾಃ।
ಏಕೈಕಸ್ಯ ಪದಾರ್ಥಸ್ಯ ನಾನಾಭೇದಾಃ ಪೃಥಕ್ ಪೃಥಕ್॥
ಏವಂ ಭೂತೇಷು ಸರ್ವೇಷು ಪದಾರ್ಥೇಷು ನಿರಂತರಮ್।
ಲಿಂಗಾರ್ಪಣಧಿಯಾ ಆತ್ಮಾ ಪ್ರಸಾದಸುಖಮಶ್ನುತೇ॥[೩೪೫]

"ಆದುದರಿಂದ ಸಾಧಕನು ಜ್ಞಾನಾರ್ಪಣಸದ್ಭಾವವನ್ನೇ ಅಭ್ಯಾಸ ಮಾಡಬೇಕು. ಗಂಧ, ರಸ, ರೂಪ, ಸ್ಪರ್ಶ, ಶಬ್ದ ಮತ್ತು ಪರಿಣಾಮ -ಈ ಆರು ಸಾರ್ವಕಾಲಿಕ ಪದಾರ್ಥಗಳು. ಈ ಒಂದೊಂದು ಪದಾರ್ಥವೂ ಪ್ರತ್ಯೇಕವಾಗಿ ನಾನಾಭೇದದಿಂದ ವ್ಯವಹರಿಸಲ್ಪಡುತ್ತವೆ. ಈ ರೀತಿಯಾಗಿ ಪದಾರ್ಥಗಳ ನಾನಾಭೇದಗಳು ಹೇಳಲ್ಪಟ್ಟವು. ಎಲ್ಲ ಪದಾರ್ಥಗಳು ನಿರಂತರ."

ಇದಲ್ಲದೆ "ತೇನ ತ್ಯಕ್ತೇನ ಭುಂಜೀಥಾಃ"[೩೪೬] (ಭಗವಂತನು ಸ್ವೀಕರಿಸಿಬಿಟ್ಟಿದ್ದನ್ನು ತಿನ್ನಬೇಕು) ಎಂಬ ಉಪನಿಷತ್ತಿನ ವಾಕ್ಯವೂ ಸಹ ಭೋಗ್ಯಪದಾರ್ಥವನ್ನು ಲಿಂಗಕ್ಕರ್ಪಿಸಬೇಕೆಂದು ಉಪದೇಶಿಸುತ್ತದೆ. ಈ ಮಂತ್ರದ ಅರ್ಥವನ್ನು ಶ್ರೀ ಶಂಕರಶಾಸ್ತ್ರಿಗಳು- "ತತಃ ತಸ್ಮಾತ್, ತೇನ ಉಕ್ತ ಶಿವಲಿಂಗೇನ, ತ್ಯಕ್ತೇನ ಉಪಭುಜ್ಯ ವಿಸೃಷ್ಟೇನ, ಶುದ್ಧಸಿದ್ಧಪ್ರಸಿದ್ಧರೂಪಪ್ರಸಾದೇನ, ಭುಂಜೀಥಾಃ 'ಭುಜ ಪಾಲನಾಭ್ಯವಹಾರಯೋಃ' ಇತಿ ಧಾತೋರಭ್ಯವಹಾರಂ ಕುರು ಇತ್ಯರ್ಥಃ। ಅತ್ರ ಕೇಚನ ತೇನೇತಿ ತೃತೀಯಾಂತಸ್ಯ ತಚ್ಛಬ್ದಸ್ಯ ಪೂರ್ವಾನುಕ್ತತ್ಯಾಗಪರತ್ವೇನ ವ್ಯಾಖ್ಯಾನಂ ಕುರ್ವಂತಿ, ಅಭ್ಯವಹಾರಾರ್ಥಕ ಭುಜಧಾತೋಃ ಪಾಲನಾರ್ಥತ್ವಂ ಚ ಪ್ರತಿಪಾದಯಂತಿ। ತನ್ನ ಸಂಭವತಿ, ಈಶಿತ್ರೋಃ ಈಶಿತವ್ಯ ಸಾಪೇಕ್ಷತ್ವಾತ್, ತನ್ಮಿಥ್ಯಾತ್ವೇ ಈಶಿತೃತ್ವಸ್ಯೈವಾನುಪಪನ್ನತ್ವಾತ್, ತತ್ತ್ವೇ ಈಶಾವಾಸ್ಯಮಿತ್ಯಾದೇರಪ್ರಾಮಾಣಿಕತ್ವಾಪತ್ತೇಃ, ತಚ್ಛಬ್ದೇನ ಸನ್ನಿಹಿತಪೂರ್ವೋಕ್ತಸ್ಯ ಈಶಪದಾರ್ಥಸ್ಯ ಗ್ರಹೀತುಂ ಯುಕ್ತತ್ವಾತ್। ಭುಜಧಾತೋಃ ಪಾಲನಾರ್ಥೇ ಭುಂಜೀಥಾರಿತ್ಯೇತದ್ರೂಪಸ್ಯಾಽಸಂಗತತ್ವಾತ್। ಗತ್ಯಂತರಾಭಾವೇ ಚ ವ್ಯಾಕರಣವಿರುದ್ಧಪ್ರಯೋಗಸ್ಯ

---

[೩೪೫] ಆ.ಸೂ, ೭.೩೧,೩೨,೩೫

[೩೪೬] ಈಶಾವಾಸ್ಯೋಪನಿಷತ್, ೧

ಛಾಂದಸತ್ವಾದಿಕಲ್ಪನಂ ಯುಜ್ಯತೇ। ಪ್ರಕೃತೇ ಚ ಶಿವಲಿಂಗಭುಕ್ತಶೇಷ ಪ್ರಸಾದಾಭ್ಯವಹಾರಾರ್ಥಸ್ಯೌಚಿತ್ಯೇ ಪಾಲನಾರ್ಥಸ್ಯಾತ್ಯಂತಾಯುಕ್ತತ್ವಾಚ್ಚ"[೩೪೭] (ಆದುದರಿಂದ ಪೂರ್ವೋಕ್ತ ಗುರು-ಲಿಂಗ-ಜಂಗಮಗಳು ಸ್ವೀಕರಿಸಿ ಬಿಟ್ಟಂತಹ ಶುದ್ಧ, ಸಿದ್ಧ, ಪ್ರಸಿದ್ಧರೂಪದ ಪ್ರಸಾದವನ್ನು ಸ್ವೀಕರಿಸು ಎಂದರ್ಥ. ಈ ವಿಷಯದಲ್ಲಿ ಕೆಲವರು ತಚ್ಛಬ್ದದ ತೃತೀಯಾಂತವಾದ 'ತೇನ' (ಅವನಿಂದ) ಎಂಬ ಶಬ್ದಕ್ಕೆ ಪೂರ್ವೋಕ್ತಗಳಾದ ಗುರು-ಲಿಂಗ-ಜಂಗಮಗಳ ಭುಕ್ತಶೇಷಪ್ರಸಾದವೆಂದು ವ್ಯಾಖ್ಯಾನಿಸಿ, 'ಭುಜ್' ಧಾತುವಿಗೆ 'ಪಾಲನೆ' ಎಂಬ ಅರ್ಥವನ್ನೂ ಪ್ರತಿಪಾದಿಸಿದ್ದಾರೆ. ಆದರೆ ಈ ಅರ್ಥವು ಸರಿಹೊಂದುವುದಿಲ್ಲ. ಏಕೆಂದರೆ ಶಿವ-ಜಗತ್ತುಗಳಿಗೆ 'ಈಶಿತೃ-ಈಶಿತವ್ಯ' ಭಾವವಿದೆ. ಇವೆರಡಕ್ಕೂ ಪರಸ್ಪರ ಸಾಪೇಕ್ಷತ್ವವಿದ್ದು, ಅವಿನಾಭಾವಸಂಬಂಧವಿದೆ. ಜಗತ್ತನ್ನು ಮಿಥ್ಯೆ ಎಂದು ಹೇಳಿದರೆ, 'ಈಶ' (ಶಿವ)ನ ಈಶಿತೃತ್ವವು ಅಸಂಗತವಾಗುತ್ತದೆ. 'ತೇನ' ಎಂಬ ಸರ್ವನಾಮ ಪ್ರಯೋಗದಿಂದ ಪೂರ್ವೋಕ್ತವಾದ 'ಈಶ' (ಶಿವ ಅಥವಾ ಇಷ್ಟಲಿಂಗ) ಎಂದು ಅರ್ಥೈಸುವುದೇ ಯೋಗ್ಯವಾಗಿದೆ. ಈ ಸಂದರ್ಭದಲ್ಲಿ 'ಭುಜ್' ಧಾತುವಿಗೆ ಶಿವಲಿಂಗಕ್ಕೆ ನೈವೇದ್ಯ ಮಾಡಿದ ಪ್ರಸಾದ ಎಂಬ ವ್ಯವಹಾರವುಂಟಾಗುತ್ತದೆಯೇ ಹೊರತು 'ಪಾಲನೆ' ಎಂಬ ವ್ಯವಹಾರವಲ್ಲ. ಆದುದರಿಂದ 'ಭುಜ್' ಧಾತುವಿಗೆ 'ಭೋಜನ' ಎಂಬ ಅರ್ಥವು ಸರಿಯಾಗಿದೆ, 'ಪಾಲನೆ' ಎಂಬ ಅರ್ಥವಲ್ಲ.) ಈ ಮುಂತಾಗಿ ಲಿಂಗಾರ್ಪಿತವಾದ ಪ್ರಸಾದಸ್ವೀಕಾರವನ್ನು ಸ್ಥಾಪಿಸಿದ್ದಾರೆ. ಆದುದರಿಂದ ಯಾವುದೇ ವಸ್ತುವನ್ನೂ ಸಹ ಲಿಂಗಕ್ಕೆ ಅರ್ಪಿಸದೆ ಸ್ವೀಕರಿಸಬಾರದು.

ಆತ್ಮಭೋಗಾಯ ನಿಯತಂ ಯದ್ಯದ್ ದ್ರವ್ಯಂ ಸಮಾಹಿತಮ್।
ತತ್ತತ್ ಸಮರ್ಪ್ಯದೇವಾಯ ಭುಂಜೀತಾತ್ಮವಿಶುದ್ಧಯೇ॥[೩೪೮]
ಶಬ್ದಸ್ಪರ್ಶರೂಪರಸಗಂಧತನ್ಮಾತ್ರಪಂಚಕಮ್।
ಅಸಮರ್ಪ್ಯ ನ ಭುಂಜೀತ ಭಗವಂತಮುಮಾಪತಿಮ್॥[೩೪೯]

"ತನ್ನ ಭೋಗಕ್ಕೋಸ್ಕರ ಯಾವ ಯಾವ ವಸ್ತುವು ಸಂಪಾದಿಸಲ್ಪಟ್ಟಿರುವುದೋ, ಆಯಾ ವಸ್ತುವನ್ನು ಶಿವನಿಗರ್ಪಿಸಿ ಚಿತ್ತಶುದ್ಧಿಗಾಗಿ ಅದನ್ನೇ ಸ್ವೀಕರಿಸಬೇಕು. ಶಬ್ದ, ಸ್ಪರ್ಶ, ರೂಪ, ರಸ, ಗಂಧ -ಈ ಪಂಚತನ್ಮಾತ್ರಗಳನ್ನು ಭಗವಾನ್ ಶಿವನಿಗೆ ಸಮರ್ಪಿಸದೆ ಸ್ವೀಕರಿಸಬಾರದು."

ಈ ಜಗತ್ತಿನಲ್ಲಿ ಭೋಗ್ಯ (ಭೋಗಿಸಲ್ಪಡುವುದು) ಮತ್ತು ಧಾರ್ಯ (ಧರಿಸಲ್ಪಡುವುದು) ಎಂದು ವಸ್ತುವು ಎರಡು ವಿಧವಾಗಿದೆ. ಅವುಗಳಲ್ಲಿ ಅನ್ನ, ನೀರು, ಔಷಧಿ ಮೊದಲಾದವುಗಳು ಭೋಗ್ಯವೆನಿಸಿದರೆ, ಬಟ್ಟೆ, ಆಭರಣಾದಿಗಳು ಧಾರ್ಯವೆನಿಸುತ್ತವೆ. ಪೂರ್ವೋಕ್ತ ಪ್ರಕಾರದಿಂದ ಸಾಧಕನು ತನ್ನೆಲ್ಲ ಭೋಗ್ಯ ಮತ್ತು ಧಾರ್ಯವಾದ ವಸ್ತುಗಳೆಲ್ಲವನ್ನು ಆಯಾ ಇಂದ್ರಿಯಗಳಿಗೆ ಸಂಬಂಧಿಸಿದ

---

[೩೪೭] ಈಶಾವಾಸ್ಯೋಪನಿಷತ್, ೧, ಶಾಂಕರೀಭಾಷ್ಯ, ಪು. ೫,೯

[೩೪೮] ಸಿ.ಶಿ, ೧೧.೧೧

[೩೪೯] ಚ.ಜ್ಞಾ, ಕ್ರಿ.ಪಾ, ೫.೨೫

ಲಿಂಗಗಳಿಗರ್ಪಿಸಿದ ಪ್ರಸಾದವನ್ನಾಗಿ ಸ್ವೀಕರಿಸಿ ಪ್ರಸಾದಗುಣಯುಕ್ತನಾಗುತ್ತಾನೆ. ಈ ರೀತಿಯಾಗಿ ಲಿಂಗಕ್ಕರ್ಪಿಸಿದ ಪ್ರಸಾದವನ್ನು ಸ್ವೀಕರಿಸುವ ವೀರಶೈವ ಸಾಧಕರು ಸಹಜವಾಗಿಯೇ ಮಾನಸಿಕ ಶುದ್ಧಿಯನ್ನು ಸಂಪಾದಿಸಿ ಯಾವಾಗಲೂ ಪ್ರಸನ್ನಮನಸ್ಕರಾಗುತ್ತಾರೆ. ಆದುದರಿಂದ- "ನಿರ್ಮಾಲ್ಯಂ ತತ್ತು ಶೈವಾನಾಂ ಮನೋನೈರ್ಮಲ್ಯಕಾರಣಮ್"[೩೫೦] (ಶಿವಪ್ರಸಾದವು ವೀರಶೈವರ ಮನಸ್ಸಿನ ನಿರ್ಮಲತೆಗೆ ಕಾರಣವು) ಎಂದು ಶ್ರೀ ರೇಣುಕಾಚಾರ್ಯರ ಉಪದೇಶದಂತೆ ಎಲ್ಲ ಶಿವಭಕ್ತರೂ ಸಹ ಮನಸ್ಸಿನ ನೈರ್ಮಲ್ಯಕ್ಕೆ ಶಿವನೈರ್ಮಾಲ್ಯವನ್ನು ಸ್ವೀಕರಿಸಬೇಕು.

ಶಿವನಿರ್ಮಾಲ್ಯ ಸ್ವೀಕಾರವು ದೋಷವಲ್ಲ

ಶಿವನಿರ್ಮಾಲ್ಯವು ಮನಸ್ಸಿನ ನೈರ್ಮಲ್ಯಕ್ಕೆ ಕಾರಣವೆಂದು ಮೇಲೆ ಹೇಳಿದ್ದು ಸರಿಯಲ್ಲ

ಸ್ಪೃಷ್ಟ್ವಾ ರುದ್ರಸ್ಯ ನಿರ್ಮಾಲ್ಯಂ ಸವಾಸಾ ಆಪ್ಲುತಃ ಶುಚಿಃ[೩೫೧]
ಶಂಭೋರ್ನಿವೇದಿತಂ ಭಕ್ತಂ ತತ್ತೀರ್ಥಂ ಶಾಕಮೇವ ವಾ।
ವಿಪ್ರಃ ಕದಾ ನ ಭುಂಜೀಯಾದ್ ಭುಕ್ತ್ವಾ ಕೃಚ್ಛ್ರಂ ಸಮಾಚರೇತ್॥[೩೫೨]

"ರುದ್ರನ ನಿರ್ಮಾಲ್ಯದ ಸ್ಪರ್ಶದಿಂದ ವಸ್ತ್ರಸಹಿತ ಸ್ನಾನಮಾಡಿ ಶುಚಿಯಾಗುತ್ತಾನೆ. ಶಿವನಿಗೆ ನೈವೇದ್ಯ ಮಾಡಿದ ತೀರ್ಥವನ್ನಾಗಲಿ, ಪ್ರಸಾದವನ್ನಾಗಲಿ ಜ್ಞಾನಿಗಳು ಭುಂಜಿಸಬಾರದು. ಭುಂಜಿಸಿದರೆ ಕಠಿಣತರವಾದ ವ್ರತಗಳನ್ನು ಆಚರಿಸಬೇಕು" ಮುಂತಾದ ಕಾಲಿಕಾಪುರಾಣದ ಪ್ರಾಯಶ್ಚಿತ್ತಕಾಂಡಗಳಲ್ಲಿ ಶಿವನಿರ್ಮಾಲ್ಯವನ್ನು ಸ್ವೀಕರಿಸಬಾರದೆಂದು ಪ್ರತಿಪಾದಿಸಲಾಗಿದೆ ಎಂಬ ಪೂರ್ವಪಕ್ಷದವರ ಆಕ್ಷೇಪವು ವಿಕಲ್ಪದ ಸಾಹಸವೇ ಆಗಿದೆ. ಆದುದರಿಂದ ಈ ಪೂರ್ವಪಕ್ಷದವರ ಆಕ್ಷೇಪದಲ್ಲಿ ಹುರುಳಿಲ್ಲ. ಉದಾಹರಣೆಗೆ-

ಶಿವನಿರ್ಮಾಲ್ಯವು ಹೇಗೆ ಅಗ್ರಾಹ್ಯ? ಶ್ರುತಿಯಲ್ಲಿ ನಿಷೇಧಿಸಿರುವುದರಿಂದಲೇ, ಅಥವಾ ಸ್ಮೃತಿ-ಪುರಾಣ-ಆಗಮಗಳಲ್ಲಿ ನಿಷೇಧಿಸಿರುವುದರಿಂದಲೇ ಅಥವಾ ವಿಧಾಯಕ (ನಿರ್ಣಯಿಸುವಂತಹ) ವಚನಗಳ ಅಭಾವದಿಂದಲೇ? ಎಂಬ ಪೂರ್ವಪಕ್ಷಕ್ಕೆ ಹೀಗೆ ಉತ್ತರಿಸಲಾಗಿದೆ. ಮೊದಲನೆಯ ಕಾರಣವಲ್ಲ. ಹೇಗೆಂದರೆ ಶಿವನಿಗರ್ಪಿಸಿದ ಪ್ರಸಾದವನ್ನು ಸ್ವೀಕರಿಸಬಾರದೆಂದು ಶ್ರುತಿಯಲ್ಲಿ ನಿಷೇಧಿಸಿರುವುದು ಎಲ್ಲಿಯೂ ಕಂಡುಬರುವುದಿಲ್ಲ. ಅದಕ್ಕೆ ವಿರುದ್ಧವಾಗಿ- "ರುದ್ರೇಣಭುಕ್ತಮಶ್ನಂತಿ ರುದ್ರೇಣ ಪೀತಂ ಪಿಬಂತಿ ರುದ್ರೇಣಾಘ್ರಾತಂ ಜಿಘ್ರಂತಿ. ತಸ್ಮಾದ್ ಬ್ರಾಹ್ಮಣಾಃ ಪ್ರಶಾಂತಮನಸೋ ನಿರ್ಮಾಲ್ಯಮೇವ ಭಕ್ಷಯಂತಿ."[೩೫೩] (ರುದ್ರನಿಗರ್ಪಿಸಿದ್ದನ್ನು ತಿನ್ನುತ್ತಾರೆ, ರುದ್ರನು

---

[೩೫೦] ಸಿ.ಶಿ, ೧೧.೭

[೩೫೧] ವೀ.ಆ.ಚ, ಪು. ೧೨೪

[೩೫೨] ವೀ.ಆ.ಚ, ಪು. ೧೨೪

[೩೫೩] ವೀ.ಆ.ಚ, ಪು. ೧೨೧

ಕುಡಿದದ್ದನ್ನು ಕುಡಿಯುತ್ತಾರೆ, ರುದ್ರನು ಆಘ್ರಾಣಿಸಿದ್ದನ್ನು ಆಘ್ರಾಣಿಸುತ್ತಾರೆ. ಆದುದರಿಂದ ಪ್ರಶಾಂತಮನಸ್ಕರಾದ ಜ್ಞಾನಿಗಳು ನಿರ್ಮಾಲ್ಯವನ್ನೇ ತಿನ್ನುತ್ತಾರೆ). "ತ್ವಾ ದತ್ತೇಭೀ ರುದ್ರ ಶಾಂತಮೇಭಿಃ ಶತಂ ಹಿ ಮಾ ಅಶೀಯ ಭೇಷಜೇಭಿಃ" ಮುಂತಾದ ಶ್ರುತಿವಾಕ್ಯಗಳ ಪ್ರಾಶಸ್ತ್ಯದಿಂದ ಶಿವಪ್ರಸಾದಸ್ವೀಕಾರದ ಅವಶ್ಯಕತೆಯು ಪ್ರತಿಪಾದಿತವಾಗಿದೆ. ಎರಡನೆಯದಾಗಿ, "ಹೇ ರುದ್ರ, ತ್ವಯಾ ಅಶೀಯ ಭುಕ್ತ್ವಾ ದತ್ತೇಭಿಃ ದತ್ತೈಃ, ಶಂತಮೇಭಿಃ, ಸುಖತಮೈಃ, ಭೇಷಜೇಭಿಃ, ಸಂಸಾರಭಯಭೈಷಜ್ಯೈಃ, ತತ್ಪರಿಹಾರ ಹೇತುಭಿರಿತಿ ಯೋಜನಾ, ಯೋಽಹಂ ಪಿತರಂ ತ್ವಾಮುಪಾಸ್ಯ, ವ್ಯಸ್ಮದ್ವೇಷಃ ವಿಗತಾಹಂಕಾರಃ, ಅತ ಏವ ವ್ಯಂಹೋ ನಿಷ್ಪಾಪೀಽಭವಮ್। ತಂ ಮಾ ಮಾಮನುಗೃಹಾಣೇತ್ಯರ್ಥಃ"[೩೫೪]

ಸ್ಮೃತಿಗ್ರಂಥಗಳಲ್ಲಿ ನಿಷೇಧಿತವಾದ ನಿರ್ಮಾಲ್ಯಭೇದದಿಂದಲೂ ಮತ್ತು ಅನಧಿಕಾರಿತ್ವ ವಿಷಯತ್ವವನ್ನು ಪ್ರತಿಪಾದಿಸಿರುವುದರಿಂದಲೂ ಎರಡನೆಯ ಕಾರಣದಿಂದಲೂ ಅಲ್ಲ. ಉದಾಹರಣೆಗೆ-

ದೇವಸ್ವಂ ದೇವತಾದ್ರವ್ಯಂ ನೈವೇದ್ಯಂ ಚ ನಿವೇದಿತಮ್।
ಚಂಡದ್ರವ್ಯಂ ಬಹಿಃಕ್ಷಿಪ್ತಂ ನಿರ್ಮಾಲ್ಯಂ ಷಡ್ವಿಧಂ ಭವೇತ್॥[೩೫೫]

"ದೇವಸ್ವ, ದೇವತಾದ್ರವ್ಯ, ನೈವೇದ್ಯ, ನಿವೇದಿತ, ಚಂಡದ್ರವ್ಯ ಮತ್ತು ಬಹಿಃಕ್ಷಿಪ್ತ ಎಂದು ನಿರ್ಮಾಲ್ಯವು ಆರು ವಿಧವಾಗುತ್ತದೆ" ಎಂಬ ಉಕ್ತಿಗನುಸಾರವಾಗಿ ನಿರ್ಮಾಲ್ಯವು ಆರು ಬಗೆಯಾಗಿದೆ. ಅವುಗಳಲ್ಲಿ ದೇವತೆಗೆ ಅರ್ಪಿಸಿದ ಗ್ರಾಮ, ಭೂಮಿ, ದಾಸಿ, ದಾಸ -ಈ ನಾಲ್ಕು ದೇವಸ್ವ; ಚಿನ್ನ, ಹಣ, ರತ್ನಾದಿಗಳು ದೇವದ್ರವ್ಯಗಳು; ದೇವರಿಗೆ ಅರ್ಪಿಸಿದ ಎಲೆ, ಹೂ, ನೀರು, ಹಣ್ಣು, ಅನ್ನ ಮುಂತಾದವುಗಳು ನೈವೇದ್ಯ; ಶಿವನು ಅನುಭವಿಸಿದ ಹೂಮಾಲೆ, ಗಂಧ, ಅನ್ನ-ಪಾನಾದಿಗಳು ನಿವೇದಿತ; ಚಂಡೇಶ್ವರನಿಗೆ ಅರ್ಪಿಸಿದ ದ್ರವ್ಯವು ಚಂಡದ್ರವ್ಯ ಮತ್ತು ಪಿಶಾಚಿ ಮುಂತಾದವುಗಳಿಗೋಸ್ಕರ ಮಂಟಪ ಮೊದಲಾದವುಗಳ ಹೊರಗಡೆ ಕೊಡುವಂತಹದ್ದು ಬಹಿಃಕ್ಷಿಪ್ತವೆಂದು ತಿಳಿಯಬೇಕು.[೩೫೬]

---

[೩೫೪] ಈಶಾವಾಸ್ಯೋಪನಿಷತ್, ೧, ಶಾಂಕರೀವ್ಯಾಖ್ಯಾ, ಪು. ೧೧

[೩೫೫] ವೀ.ಚಿ, ಪು. ೧೧೨; ವೀ.ಆ.ಚ, ಪು. ೧೨೪

[೩೫೬] ದೇವಸ್ವಂ ಗ್ರಾಮಭೂಮ್ಯಾದಿದಾಸೀದಾಸಚತುಷ್ಟಯಮ್।
ಹೇಮರೂಪ್ಯಂ ಚ ರತ್ನಾದಿ ದೇವದ್ರವ್ಯಮಿತಿ ಸ್ಮೃತಮ್॥
ಯತ್ಸಂಕಲ್ಪ್ಯ ತು ದೇವಾಯ ಪತ್ರಂ ಪುಷ್ಪಂ ಫಲಂ ಜಲಮ್।
ಅನ್ನಪಾನಾದಿ ತತ್ಸರ್ವಂ ನೈವೇದ್ಯಮಿತಿ ಕೀರ್ತಿತಮ್।
ಶಿವೋಪಭುಕ್ತಸ್ರಗ್ಗಂಧಮನ್ನಪಾನಾದಿಕಂ ತಥಾ।
ನಿವೇದಿತಮಿತಿ ಪ್ರೋಕ್ತಂ ಸರ್ವಪಾಪಹರಂ ಪರಮ್॥
ಸ್ಥಾಪಿತೇ ವಿಧಿನಾ ಲಿಂಗೇ ಸರ್ವೈರ್ದೇವಾಸುರೈರ್ನರೈಃ।
ಏತತ್ ತ್ರಿವಿಧನಿರ್ಮಾಲ್ಯಂ ಚಂಡೇಶೇಽಧಿಕೃತಂ ಶಿವೇ॥
ಬಹಿಃಕ್ಷಿಪ್ತಮನರ್ಹಂ ಹಿ ಅನ್ಯದ್ರವ್ಯತ್ವಕಾರಣಾತ್।
ಪಿಶಾಚಾನಾಂ ಚ ಸರ್ವೇಷಾಮಧಿಕಾರೋ ಹಿ ಸರ್ವದಾ॥
-ವೀ.ಚಿ, ಪು.೧೧೨-೧೩

ಇಲ್ಲಿ ನಿರೂಪಿತವಾದ ಆರು ಬಗೆಯ ನಿರ್ಮಾಲ್ಯಗಳಲ್ಲಿ ದೇವಸ್ವ, ದೇವತಾದ್ರವ್ಯ ಮತ್ತು ನೈವೇದ್ಯಗಳೆಂಬ ಮೂರು ಬಗೆಯ ನಿರ್ಮಾಲ್ಯಗಳು ದೇವತೆಗಳನ್ನು ಕುರಿತು ಕೊಡುವಂತಹವುಗಳು ಎನ್ನುವ ಕಾರಣದಿಂದ ಈ ಮೂರರ ವಿಷಯದಲ್ಲಿ ಯಾರಿಗೂ ಅಧಿಕಾರವಿಲ್ಲ. ಹೇಗೆಂದರೆ "ಕಿಂಚಿದ್ ದ್ರವ್ಯಾಪಹಾರೇಣ ರೌರವಂ ನರಕಂ ವ್ರಜೇತ್"[೩೫೭] (ಸಲ್ಪ ಮಾತ್ರ ದ್ರವ್ಯಾಪಹಾರದಿಂದ ರೌರವನರಕವನ್ನು ಪಡೆಯುತ್ತಾರೆ) ಎಂಬ ಉಕ್ತಿಯಂತೆ ದೇವಸ್ವಾದಿಗಳನ್ನು ಅಪಹರಿಸುವುದರಿಂದ ದೋಷವುಂಟಾಗುತ್ತದೆ ಎಂಬುದನ್ನು ಹೇಳಿರುವುದೇ ಕಾರಣವಾಗಿದೆ.

ಅಲ್ಲದೆ ದೇವತೆಗಳಿಂದ, ರಾಕ್ಷಸರಿಂದ ಅಥವಾ ಮಾನವರಿಂದ ಭೂಮಿಯಲ್ಲಿ ಸ್ಥಾಪಿಸಿರುವ ಶಿವಲಿಂಗದ ಮಂದಿರಗಳಲ್ಲಿ ಚಂಡೇಶನ ಸ್ಥಾಪನೆಯನ್ನೂ ಸಹ ಮಾಡಲ್ಪಡುತ್ತದೆ. ಒಂದು ವೇಳೆ ದೇವಾಲಯದಲ್ಲಿ ಚಂಡೇಶನ ಮೂರ್ತಿಯು ಇದ್ದರೆ ಆ ದೇವಾಲಯದಲ್ಲಿರುವ ಶಿವಲಿಂಗಕ್ಕರ್ಪಿತವಾದ ನೈವೇದ್ಯಕ್ಕೆ ಚಂಡೇಶನು ಅಧಿಕಾರಿಯಾಗುತ್ತಾನೆ. ಆದುದರಿಂದ ಅಂತಹ ನೈವೇದ್ಯವು ಚಂಡದ್ರವ್ಯವೆಂದು ಕರೆಯಲ್ಪಡುತ್ತದೆ. ಹೊರಗಡೆ ಬಿಸಾಡಿದ ಎಲೆ, ಹೂ, ಹಣ್ಣು, ಅನ್ನ ಮೊದಲಾದವುಗಳಿಗೆ ಪಿಶಾಚಾದಿಗಳು ಅಧಿಕಾರಿಗಳು. ಈ ಪ್ರಕಾರ ಚಂಡದ್ರವ್ಯ ಮತ್ತು ಬಹಿಃಕ್ಷಿಪ್ತ ನಿರ್ಮಾಲ್ಯಗಳಿಗೂ ಸಹ ಬೇರೆ ಯಾರೂ ಅಧಿಕಾರಿಗಳಲ್ಲ.

ಪೂರ್ವೋಕ್ತಗಳಾದ ಆರು ಬಗೆಯ ನಿರ್ಮಾಲ್ಯಗಳ ಪೈಕಿ 'ನಿವೇದಿತ' ಎಂಬ ನಿರ್ಮಾಲ್ಯ ಪ್ರಕಾರದ ವಿವರಣೆಯು ಉಳಿದಿದೆ. ಎಲ್ಲ ದೋಷಗಳನ್ನು ನಿವಾರಿಸುವ ಅದನ್ನು ಭಕ್ತರು ಮತ್ತು ಮುಮುಕ್ಷುಗಳು ಸ್ವೀಕರಿಸುತ್ತಾರೆ. ಆದುದರಿಂದ ನಿರ್ಮಾಲ್ಯವನ್ನು ನಿಷೇಧಿಸುವ ವಾಕ್ಯಗಳು ನೈವೇದ್ಯಕ್ಕಿಂತ ಭಿನ್ನವಾದ ದೇವಸ್ವ ಮುಂತಾದವುಗಳಿಗೆ ಸಂಬಂಧಪಟ್ಟಿರುವುದರಿಂದ, ನಿವೇದಿತವೆಂದು ಕರೆಯಲಾಗುವ ನಿರ್ಮಾಲ್ಯದ ವಿಷಯದಲ್ಲಿ ನಿಷೇಧವಾಕ್ಯಗಳು ಶಿವಸಂಸ್ಕಾರವಿಲ್ಲದ ಭವಿಗಳಿಗೆ ಸಂಬಂಧಪಟ್ಟಿರುವಂತೆ ವ್ಯವಸ್ಥಾಪಿಸಲ್ಪಟ್ಟಿರುವುದರಿಂದ ನಿಷೇಧವಾಕ್ಯಗಳಿಗೆ ವಿರೋಧ ಬಂದೊದಗುತ್ತದೆ.[೩೫೮]

> ನಿರ್ಮಾಲ್ಯಂ ಧಾರಯೇನ್ಮೂರ್ಧ್ನಿ ನೈವೇದ್ಯಂ ಚಾಪಿ ಭಕ್ಷಯೇತ್।
> ತತ್‌ಪ್ರಸಾದೋದಕಂ ಪೀತ್ವಾ ಗಾಣಪತ್ಯಮವಾಪ್ನುಯಾತ್॥
> ಶಿರಸಾ ಧಾರಯೇದ್ ಭಕ್ತ್ಯಾ ಯೋ ನಿರ್ಮಾಲ್ಯಮಲೋಭತಃ।
> ಅಹಮೇವ ಧೃತಸ್ತೇನ ಸೋಮಃ ಸೋಮಕಲಾಧರಃ॥
> ನಿರ್ಮಾಲ್ಯಸಲಿಲಂ ಪ್ರಾಶ್ಯ ದೇವದೇವಸ್ಯ ಶೂಲಿನಃ।
> ಕ್ಷಯಕುಷ್ಠಜ್ವರಶ್ವಾಸೈರ್ಮುಚ್ಯತೇ ಕಿಲ್ಬಿಷೈರಪಿ॥[೩೫೯]

---

[೩೫೭] ವೀ.ಚಿ, ಪು. ೧೧೨

[೩೫೮] ಜಿಹ್ವಾಚಪಲಸಂಯುಕ್ತಃ ಶಿವಸಂಸ್ಕಾರವರ್ಜಿತಃ।
ಶಿವನಿರ್ಮಾಲ್ಯಭೋಗೀ ಚೇದ್ ರೌರವಂ ನರಕಂ ವ್ರಜೇತ್॥
-ಈಶಾವಾಸ್ಯೋಪನಿಷತ್ ೧, ಶಾಂಕರೀವ್ಯಾಖ್ಯೆ, ಪು.೬

[೩೫೯] ವೀರಶೈವಾನಂದಚಂದ್ರಿಕೆ, ಪು. ೧೩೧-೧೩೨

“ಶಿವನಿಗೆ ಅರ್ಪಿತವಾದ ನಿರ್ಮಾಲ್ಯವನ್ನು ಶಿರಸ್ಸಿನ ಮೇಲೆ ಧರಿಸಬೇಕು ಹಾಗೂ ನೈವೇದ್ಯವನ್ನೂ ಸಹ ಸ್ವೀಕರಿಸಬೇಕು. ಶಿರಸ್ಸಿನ ಮೇಲೆ ಭಕ್ತಿಯಿಂದಲೂ, ಲೋಭರಹಿತನಾಗಿಯೂ ನಿರ್ಮಾಲ್ಯವನ್ನು ಧರಿಸಿದ ಕಾರಣದಿಂದ ಉಮಾಸಹಿತನಾದ ಶಿವನು ಸೋಮಕಲಾಧರನಾದನು. ದೇವದೇವನಾದ ಶಿವನ ನಿರ್ಮಾಲ್ಯಜಲವನ್ನು ಕುಡಿದ ಕಾರಣದಿಂದ ಕ್ಷಯ, ಕುಷ್ಠ, ಜ್ವರ, ಕೆಮ್ಮು ಮೊದಲಾದ ಕಾಯಿಲೆಗಳಿಂದಲೂ ಮುಕ್ತರಾಗುತ್ತಾರೆ” ಇತ್ಯಾದಿ ಪ್ರಸಾದವನ್ನು ಅವಶ್ಯವಾಗಿ ಸ್ವೀಕರಿಸಲೇಬೇಕು ಎಂದು ಪ್ರತಿಪಾದಿಸಿರುವ ಅನೇಕ ವಚನಗಳ ಪ್ರಮಾಣವಿದೆ.

ನಿರ್ಮಾಲ್ಯ ಸ್ವೀಕಾರವನ್ನು ವಿಧಿಸುವ ಶ್ರುತಿ, ಸ್ಮೃತಿ, ಪುರಾಣಾದಿಗಳ ನೂರಾರು ವಾಕ್ಯಗಳನ್ನು ಕೇಳಿರುವ ಕಾರಣ ಮೂರನೆಯ ಆಕ್ಷೇಪವೂ ಸಾಧುವಲ್ಲ. ಆದುದರಿಂದ ನಿವೇದಿತವಾದ ಶಿವನಿರ್ಮಾಲ್ಯ ಯಾವುದು ಇದೆಯೋ ಅದಕ್ಕೆ ಶಿವಭಕ್ತರು ಅಧಿಕಾರಿಗಳೆಂದು ಹೇಳುವುದು ದೋಷವಾಗುವುದಿಲ್ಲ.

ನಿವೇದಿತವೆಂಬ ಹೆಸರುಳ್ಳ ನಿರ್ಮಾಲ್ಯವು ಸ್ವೀಕಾರಯೋಗ್ಯವೆಂದು ಹೇಳಲ್ಪಟ್ಟಿತಲ್ಲ. ಇಲ್ಲಿ ನಿವೇದಿತ ಶಬ್ದದ ಅರ್ಥವೇನು? ದೇವತೆಯ ಮುಂದೆ ಅನ್ನವನ್ನು ಇಡುವುದೆ ಅಥವಾ ಅದಕ್ಕೆ ಸಂಬಂಧಿಸಿದಂತಹ ಮಂತ್ರೋಚ್ಚಾರಣೆಯೆ? ಹಸ್ತಚೇಷ್ಟೆಯ ವಿಶೇಷವೆ? ಅಥವಾ ಘಂಟಾನಾದವೆ? ಅಥವಾ ಕಣ್ಣು ಮುಚ್ಚುವುದೋ? ಅಥವಾ ಯಾವುದಾದರೂ ಮನಸ್ಸಿನ ಸಂಧಿಯೆ? ಮೊದಲನೆಯ ಆಕ್ಷೇಪ ಸಾಧುವಲ್ಲ. ಏಕೆಂದರೆ ದೇವತೆಯ ಎದುರಿಗೆ ಅನ್ನಾದಿಗಳನ್ನು ಇಡುವುದರಿಂದಲೇ ನಿವೇದಿತವಾಗಿದೆ ಎಂದು ಹೇಳಲು ಆಗುವುದಿಲ್ಲ. ಅನ್ಯಥಾ ಹೆಂಗಸರು ಸಿದ್ಧಪಡಿಸಿದ ಅನ್ನಾದಿಗಳನ್ನು ದೇವರ ಎದುರಿನಲ್ಲಿ ಇಡುವುದರಿಂದಲೇ ನಿವೇದನೆಯು ಸಿದ್ಧವಾಗುವುದಾದರೆ ಇತರ ವ್ಯವಹಾರಾದಿಗಳು ನಿರರ್ಥಕವಾಗುತ್ತವೆ. ಎರಡನೆಯ ಆಕ್ಷೇಪವೂ ಸಾಧುವಲ್ಲ. ಆ ರೀತಿಯಾಗಿ ಆಗುವುದಾದರೆ ಕಾಯಿಲೆ ನರಳುತ್ತಿರುವವನು ಮಂತ್ರವನ್ನುಚ್ಚರಿಸಲು ಅಸಮರ್ಥನಾದ ನಿರಂತರ ಭಕ್ತಿಯಿಂದ ಕೂಡಿದವನ ನಿವೇದನ ಕರ್ತೃತ್ವವು ಇಲ್ಲವಾಗುತ್ತದೆ. ಮೂರನೆಯ ಆಕ್ಷೇಪವು ಸಾಧುವಲ್ಲ. ಹೇಗೆಂದರೆ, ವ್ಯಾಧಿಗ್ರಸ್ತವಾದ ಹಸ್ತದಿಂದ ಕೂಡಿರುವ ಪುರುಷನ ಹಸ್ತದ ಚಲನವಲನಗಳ ಅಭಾವದಿಂದ ನಿವೇದನೆಯು ಅಕರ್ತೃತ್ವವು ಉಂಟಾಗುತ್ತದೆ. ಅನಂತರದಲ್ಲಿ ತಾತ್ಕಾಲಿಕವಾಗಿ ಅನ್ನದ ಮೇಲೆ ಕುಳಿತಿರುವ ಸೊಳ್ಳೆ-ನೊಣಗಳನ್ನು ಓಡಿಸಲು ತೊಡಗಿದ ಹಸ್ತದ ಚಲನೆಯೂ ಸಹ ನಿವೇದನೆಯಾಗಬಹುದು. ನಾಲ್ಕನೆಯ ಆಕ್ಷೇಪವೂ ಸಾಧುವಲ್ಲ- ಬೇರೆಯವರು ಘಂಟೆಯನ್ನು ಅಪಹರಣ ಮಾಡಿರುವ ಕಾರಣದಿಂದಲೋ ಅಥವಾ ದಾರಿಯಲ್ಲಿ ಹೋಗುವಾಗ ಘಂಟಾನಾದವನ್ನು ಮಾಡದಿರುವ ಕಾರಣ ನಿವೇದನ ಕರ್ತೃತ್ವ ಉಂಟಾಗುವುದಿಲ್ಲ. ಐದನೆಯ ಆಕ್ಷೇಪವೂ ಸಾಧುವಲ್ಲ, ಕಾರಣವೇನೆಂದರೆ ಕಣ್ಣು ಬೇನೆಯಿಂದ ಕೂಡಿರುವವನು ಸೊಳ್ಳೆಯು ಕಣ್ಣಿಗೆ ಬೀಳಬಹುದೆಂಬ ಭಯದಿಂದ ಆ ಸಂದರ್ಭದಲ್ಲಿ ಕಣ್ಣು ಮುಚ್ಚಿರುವ ಭಕ್ತಿಯಿಂದ ಕೂಡಿರುವವನ ನಿವೇದನ ಕರ್ತೃತ್ವವು ಇರುವುದಿಲ್ಲ ಎಂಬ ಪೂರ್ವಪಕ್ಷದವರ ಆಕ್ಷೇಪವೂ ಸರಿಯಲ್ಲ. ಏಕೆಂದರೆ ಇದನ್ನು ನೋಡಿದವನು ಇದು ನನ್ನದಲ್ಲ ಇದು ನಿನ್ನದು ಇದನ್ನು ನೀನು ಸ್ವೀಕರಿಸು ಎಂದು ಮನಸ್ಸಿನಲ್ಲಿ ಹೇಳಿಕೊಳ್ಳುವುದೇ ನಿವೇದನ ಶಬ್ದದ ಅರ್ಥವಾಗಿದೆ. ಆದುದರಿಂದ

ನಿವೇದನೆ ಎಂದರೆ ದೇವತೆಯನ್ನು ಕುರಿತು ದ್ರವ್ಯತ್ಯಾಗದ ವಿಶಿಷ್ಟವಾದ ಕ್ರಿಯಾ ವಿಶೇಷದಿಂದ ಕೂಡಿದ, ದೇವತೆಯನ್ನೇ ಕರ್ತೃತ್ವವಾಗಿವುಳ್ಳ, ತೃಪ್ತಿಸಾಧಕವಾದ ಭುಕ್ತಿರೂಪ ಮಾನಸಿಕವಾದ ಅನುಸಂಧಾನ ವಿಶೇಷವಾಗಿದೆ.[೩೬೦] ಈ ರೀತಿಯಾಗಿ ಶ್ರೀಮರಿತೋಂಟದಾರ್ಯರು ನಿವೇದನ ಶಬ್ದದ ತತ್ತ್ವಾರ್ಥವನ್ನು ನಿರೂಪಿಸಿ ಶಿವನಿಗರ್ಪಿಸಿದುದನ್ನು ಸ್ವೀಕರಿಸಬೇಕೆಂದು ಉಪದೇಶಿಸಿದ್ದಾರೆ. ಮತ್ತು ಬಾಲಕೃಷ್ಣಭಟ್ಟರು ರಚಿಸಿದ ಶೈವೋತ್ಕರ್ಷಪ್ರಕಾಶವೆಂಬ ಗ್ರಂಥದಲ್ಲಿಯೂ ಸಹ-

ಮಲ್ಲಿಂಗಧಾರಿಣೋ ಲೋಕೇ ದೇಶಿಕಾ ಮತ್ಪರಾಯಣಾಃ।
ಮದೇಕಶರಣಸ್ತೇಷಾಂ ಯೋಗ್ಯಂ ನೈವಾನ್ಯಜಂತುಷು॥[೩೬೧]

"ಜಗತ್ತಿನಲ್ಲಿ ಶಿವಲಿಂಗಧಾರಿಗಳು, ಶಿವನಲ್ಲಿಯೇ ನಿಷ್ಠರಾದ ದೇಶಿಕರು ಇವರೆಲ್ಲರಿಗೂ ಶಿವನೊಬ್ಬನೇ ರಕ್ಷಕನಾಗಲು ಯೋಗ್ಯ, ಬೇರೆ ಪ್ರಾಣಿಗಳಿಗಲ್ಲ" ಎಂದು ಲಿಂಗಧಾರಿಗಳಾದ ವೀರಶೈವರು ತಮ್ಮ ಇಷ್ಟಲಿಂಗಕ್ಕೆ ನೈವೇದ್ಯ ಮಾಡಿದ ನಿರ್ಮಾಲ್ಯದ ಅಧಿಕಾರತ್ವವನ್ನು ಉಪದೇಶಿಸಿದ್ದಾರೆ. ಆದುದರಿಂದ ಶಿವಲಿಂಗಧಾರಿಗಳು ಅಥವಾ ಶಿವಭಕ್ತರು ಶಿವನಿರ್ಮಾಲ್ಯವೆಂಬ ಪ್ರಸಾದಕ್ಕೆ ಅಧಿಕಾರಿಗಳೇ[೩೬೨] ಹೊರತು ಬೇರೆಯವರಲ್ಲ ಎಂದು ಸಿದ್ಧವಾಯಿತು. ಇಷ್ಟಲಿಂಗದ ಪ್ರಸಾದದಂತೆ ವೀರಶೈವರು ಗುರು-ಜಂಗಮರ ಪ್ರಸಾದವನ್ನೂ ಸಹ ಸ್ವೀಕರಿಸಬೇಕು.

ಮೂರು ಬಗೆಯ ಪ್ರಸಾದ

ವೀರಶೈವ ಸಿದ್ಧಾಂತದಲ್ಲಿ ಗುರು, ಲಿಂಗ ಮತ್ತು ಜಂಗಮ ಎಂಬ ಮೂರನ್ನು ಪೂಜನೀಯವಾದವುಗಳೆಂದು ಅಂಗೀಕರಿಸಿರುವುದರಿಂದ ಇಷ್ಟಲಿಂಗದಂತೆಯೇ ಗುರು-ಜಂಗಮರಿಗೂ ಸಹ ತಾವು ಭೋಗಿಸುವ ಮತ್ತು ಧರಿಸುವ ಎಲ್ಲ ವಸ್ತುಗಳನ್ನು ನಿರ್ವಂಚನೆಯಿಂದ ಅರ್ಪಿಸಿ, ಅವರು ಸ್ವೀಕರಿಸಿ ಉಳಿದ ಪ್ರಸಾದವನ್ನು ಪ್ರತಿದಿನವೂ ಸ್ವೀಕರಿಸಲ್ಪಡುತ್ತದೆ. ಕಾರಣವೇನೆಂದರೆ ಶಿವಲಿಂಗಕ್ಕರ್ಪಿಸಿದ ಪ್ರಸಾದದಂತೆ ಗುರು-ಜಂಗಮರ ಪ್ರಸಾದವೂ ಸಹ ಮನಸ್ಸನ್ನು ಶುದ್ಧಿಗೊಳಿಸುವ ಸಾಧನವಾಗಿದೆ. ಅದನ್ನು ಶ್ರೀ ರೇಣುಕ ಭಗವತ್ಪಾದರು ಹೀಗೆ ಉಪದೇಶಿಸಿದ್ದಾರೆ-

ಶಿವಲಿಂಗಪ್ರಸಾದಸ್ಯ ಸ್ವೀಕಾರಾದ್ಯತ್ ಫಲಂ ಭವೇತ್।
ತಥಾ ಪ್ರಸಾದಸ್ವೀಕಾರಾದ್ ಗುರುಜಂಗಮಯೋರಪಿ॥
ತಸ್ಮಾದ್ ಗುರುಂ ಮಹಾದೇವಂ ಶಿವಯೋಗಿನಮೇವ ಚ।
ಪೂಜಯೇತ್ ತತ್ಪ್ರಸಾದಾನ್ನಂ ಭುಂಜೀತ ಪ್ರತಿವಾಸರಮ್॥[೩೬೩]

---

[೩೬೦] ವೀ.ಆ.ಚ, ಪು. ೧೩೦-೩೧

[೩೬೧] ಈಶಾವಾಸ್ಯೋಪನಿಷತ್, ೧ ಶಾಂಕರೀವ್ಯಾಖ್ಯಾ, ಪು. ೭

[೩೬೨] ನಿರ್ಮಾಲ್ಯಂ ನಿರ್ಮಲಂ ಶುದ್ಧಂ ಶಿವೇನ ಸ್ವೀಕೃತಂ ಯತಃ।
ನಿರ್ಮಲೈಸ್ತತ್ಪರೈರ್ಧಾರ್ಯಂ ನಾನ್ಯೈಃ ಪ್ರಾಕೃತಜಂತುಭಿಃ॥
ಶಿವಭಕ್ತಿವಿಹೀನಾನಾಂ ಜಂತೂನಾಂ ಪಾಪಕರ್ಮಣಾಮ್।
ವಿಶುದ್ಧೇ ಶಿವನಿರ್ಮಾಲ್ಯೇ ನಾಧಿಕಾರೋಽಸ್ತಿ ಕುತ್ರಚಿತ್॥ -ಸಿ.ಶಿ, ೯.೭೫-೭೬

[೩೬೩] ಸಿ.ಶಿ, ೯.೭೭-೭೮

"ಶಿವಲಿಂಗಪ್ರಸಾದ ಸ್ವೀಕಾರದಿಂದ ಯಾವ ಫಲವು ಪ್ರಾಪ್ತವಾಗುವುದೋ, ಆ ಫಲವು ಗುರು-ಜಂಗಮರ ಪ್ರಸಾದ ಸ್ವೀಕಾರದಿಂದ ಪ್ರಾಪ್ತವಾಗುತ್ತದೆ. ಆದುದರಿಂದ ಶಿವನನ್ನೂ, ಗುರುವನ್ನೂ, ಜಂಗಮನನ್ನೂ ಪೂಜಿಸಬೇಕು; ಮತ್ತು ಅವರ ಪ್ರಸಾದಾನ್ನವನ್ನು ಪ್ರತಿದಿನವೂ ಸೇವಿಸಬೇಕು."

ಹೀಗೆ ಪೂಜನೀಯವಾದ ಗುರು-ಲಿಂಗ-ಜಂಗಮರೆಂಬ ಮೂವರು ಸ್ವೀಕರಿಸಿ ಉಳಿಸಿದ ಪ್ರಸಾದವೂ ಸಹ ಗುರುಪ್ರಸಾದ, ಲಿಂಗಪ್ರಸಾದ ಮತ್ತು ಜಂಗಮಪ್ರಸಾದ ವೆಂದು ಮೂರು ವಿಧವಾಗುತ್ತದೆ.

ಗುರುಲಿಂಗಜಂಗಮಾನಾಂ ಭುಕ್ತಶೇಷಃ ಪ್ರಸಾದಕಃ।
ಶುದ್ಧ ಸಿದ್ಧ ಪ್ರಸಿದ್ಧಾಖ್ಯಃ ಸ ಹಿ ಮುಕ್ತ್ಯೇಕಸಾಧನಃ॥[೩೬೪]

ಎಂಬ ಆಗಮೋಕ್ತಿಯಂತೆ ಸದ್ಗುರುವು ಸೇವಿಸಿದ ನಂತರ ಉಳಿಯುವುದು ಶುದ್ಧ ಪ್ರಸಾದ, ಲಿಂಗಕ್ಕೆ ನೈವೇದ್ಯ ಮಾಡಿದ್ದು ಸಿದ್ಧಪ್ರಸಾದ ಮತ್ತು ಜಂಗಮನು ಸೇವಿಸಿ ಉಳಿದದ್ದು ಪ್ರಸಿದ್ಧ ಪ್ರಸಾದವೆಂದು ಕರೆಯಲ್ಪಟ್ಟಿವೆ.

ಮಾನಸಿಕ ಪ್ರಸನ್ನತೆಯನ್ನು ಬಯಸುವ ಪ್ರತಿಯೊಬ್ಬ ಸಾಧಕನೂ ಸಹ ಈ ಮೂರು ಬಗೆಯ ಪ್ರಸಾದವನ್ನು ಪ್ರತಿದಿನವೂ ತಪ್ಪದೆ ಸ್ವೀಕರಿಸಬೇಕು. ಯಾವಾಗಲಾದರೊಮ್ಮೆ ಗುರು-ಜಂಗಮರ ಪ್ರಸಾದವು ದೊರೆಯದಿದ್ದರೆ, ಲಿಂಗಪ್ರಸಾದವನ್ನೇ ಗುರು-ಜಂಗಮರ ಪ್ರಸಾದವೆಂಬ ಭಾವನೆಯಿಂದ ಸೇವಿಸಬೇಕು. ಹೀಗೆ ಲಿಂಗಪ್ರಸಾದ ಒಂದರಲ್ಲಿಯೇ ಮೂರು ಪ್ರಸಾದಗಳ ಸತ್ತ್ವವಿರುವುದರಿಂದ ಪ್ರಸಾದವು ಮೂರು ವಿಧವಾಗಿದೆ.

ಇದಲ್ಲದೆ ಮೊಗ್ಗೆಯ ಮಾಯಿದೇವರು- ಇಷ್ಟಲಿಂಗಕ್ಕೆ ನೈವೇದ್ಯಮಾಡಿದ್ದು ಶುದ್ಧಪ್ರಸಾದ, ಪ್ರಾಣಲಿಂಗಕ್ಕೆ ಸಮರ್ಪಣೆ ಮಾಡಿರುವುದು ಸಿದ್ಧಪ್ರಸಾದ ಮತ್ತು ಭಾವಲಿಂಗಕ್ಕೆ ಅರ್ಪಣೆ ಮಾಡಿರುವುದು ಪ್ರಸಿದ್ಧ ಪ್ರಸಾದವೆಂದೂ ಸಹ ನಿರೂಪಿಸಿದ್ದಾರೆ.[೩೬೫] ಇಲ್ಲಿ ಭೋಗ್ಯವಸ್ತುಗಳ ರೂಪವನ್ನು ಇಷ್ಟಲಿಂಗಕ್ಕೂ, ಆ ವಸ್ತುಗಳ ರಸಾಸ್ವಾದನೆಯನ್ನು ಪ್ರಾಣಲಿಂಗಕ್ಕೂ ಮತ್ತು ಆ ವಸ್ತುಗಳ ಆಸ್ವಾದನೆಯಿಂದುಂಟಾಗುವ ತೃಪ್ತಿಯನ್ನು ಭಾವಲಿಂಗಕ್ಕೆ ಸಮರ್ಪಿಸಬೇಕೆಂದು ತಿಳಿಯಬೇಕು.

ಪ್ರಸಾದಸ್ವೀಕಾರಕ್ಕೆ ಎಂಜಲಿನ ದೋಷವಿಲ್ಲ

ಗುರು - ಲಿಂಗ - ಜಂಗಮರು ಸೇವಿಸಿದ ನಂತರ ಉಳಿಯುವ ಪ್ರಸಾದವನ್ನು ಪ್ರತಿದಿನವೂ ಸ್ವೀಕರಿಸಬೇಕೆಂದು ಹಿಂದೆ ಹೇಳಲ್ಪಟ್ಟಿದ್ದು ಸರಿಯಲ್ಲ, ಏಕೆಂದರೆ ಭುಕ್ತಶೇಷವು ಎಂಜಲಿನಿಂದ ದೂಷಿತವಾಗಿರುತ್ತದೆ. "ನ ಪರ್ಯುಷಿತಮಶ್ನೀಯಾ ನ್ನೋಚ್ಛಿಷ್ಟಂ ನ ಕದರ್ಥಿತಮ್"[೩೬೬] (ಭುಕ್ತಶೇಷ, ಎಂಜಲು ಮತ್ತು ನಿಂದಿತವಾದದ್ದನ್ನು

---

[೩೬೪] ಚ.ಜ್ಞಾ, ಕ್ರಿ.ಪಾ, ೫.೨೦-೨೧

[೩೬೫] ಇಷ್ಟಲಿಂಗಾರ್ಪಿತಂ ಶುದ್ಧಂ ಪ್ರಾಣಲಿಂಗಮುಖಾರ್ಪಿತಮ್।
ಸಿದ್ಧಂ ತತಃ ಪ್ರಸಿದ್ಧಂ ಹಿ ಭಾವಲಿಂಗಾರ್ಪಿತಂ ವಿದುಃ॥ -ಅನುಭವಸೂತ್ರ, ೭-೨೨

[೩೬೬] ವೀ.ಆ.ಚ, ಪು. ೧೧೯

ತಿನ್ನಬಾರದು) ಎಂಬಲ್ಲಿ ಎಂಜಲಿನ ಸ್ವೀಕಾರವು ನಿಷೇಧವೆಂದು ಕೇಳಿರುವುದರಿಂದ ಎಂದು ಪೂರ್ವಪಕ್ಷದವರು ಆಕ್ಷೇಪಿಸಿದರೆ, ಅದು ಸರಿಯಲ್ಲ. ಏಕೆಂದರೆ ಮಾಯಿದೇವರು ಹೇಳಿರುವ ಎಂಜಲು ಮೊದಲಾದವುಗಳೆಂದರೆ ಸಾಮಾನ್ಯರಾದ ವ್ಯಕ್ತಿಗಳ ಭುಕ್ತಶೇಷ, ಎಂಜಲು ಎಂದರ್ಥ. ಸಾಮಾನ್ಯಜನರ ಎಂಜಲನ್ನು ತಿನ್ನುವುದರಿಂದ ದೋಷ ಬಂದರೂ ಸಹ ವಿಶಿಷ್ಟರೂ, ಪೂಜ್ಯರೂ ಆದ ಗುರು-ಜಂಗಮರ ಭುಕ್ತಶೇಷವಾದ ಪ್ರಸಾದಸೇವನೆಯಿಂದ ಯಾವುದೇ ಬಗೆಯ ದೋಷವೂ ಬರುವುದಿಲ್ಲ. ಆದುದರಿಂದಲೇ ಮನುಸ್ಮೃತಿಯ ವ್ಯಾಖ್ಯಾಕಾರನಾದ ಕುಲ್ಲೂಕಭಟ್ಟನು- "ಉಚ್ಛಿಷ್ಟಂ ಚ ಭುಕ್ತಾವಶಿಷ್ಟಾನ್ನಮವಿಶೇಷಾತ್ ಕಸ್ಯಾಪಿ ನ ಭುಂಜೀತ. ಗುರೂಚ್ಛಿಷ್ಟಂ ಚ ವಿಹಿತತ್ವಾದ್ ಭೋಜ್ಯಮ್"[೩೬೭] (ಎಂಜಲಾದ ಮತ್ತು ಸಾಮಾನ್ಯರ ಭುಕ್ತಶೇಷವನ್ನು ಎಂದಿಗೂ ತಿನ್ನಬಾರದು. ಆದರೆ ಗುರುವಿನ ಭುಕ್ತಶೇಷವು ವಿಹಿತವಾಗಿರುವುದರಿಂದ ತಿನ್ನಬೇಕು) ಎಂದು ಗುರುವಿನ ಭುಕ್ತಶೇಷಕ್ಕೆ ಉಚ್ಛಿಷ್ಟ (ಎಂಜಲಿನ) ದೋಷವಿಲ್ಲವೆಂದು ಸಾರಿದ್ದಾನೆ.

ಋತಂ ಸತ್ಯಂ ಪರಂ ಬ್ರಹ್ಮಾಮೃತಮಿತ್ಯಪಿ ಗೀಯತೇ।
ಪ್ರಸಾದಸ್ತಸ್ಯ ಮಹಿಮಾ ಕೇನ ವಾ ವರ್ಣ್ಯತೇ ಕಥಮ್॥
ಗುರೂಚ್ಛಿಷ್ಟಂ ಪುರೋಡಾಶಂ ಚರಸ್ಯಾಪಿ ವಿಶೇಷತಃ।
ಚರಗುರ್ವೋಃ ಪ್ರಸಾದಸ್ತು ಧ್ರುವಂ ಪಾವಿತ್ರ್ಯದಾಯಕಃ॥[೩೬೮]

"ಪರಬ್ರಹ್ಮನು ಋತ, ಸತ್ಯ, ಅಮೃತ ಇತ್ಯಾದಿ ಶಬ್ದಗಳಿಂದ ಸ್ತುತಿಸಲ್ಪಟ್ಟಿದೆ. ಅದರ ಮಹಿಮೆಯೇ ಪ್ರಸಾದ. ಅದನ್ನು ಯಾರು ಹೇಗೆ ತಾನೆ ವರ್ಣಿಸಬಲ್ಲರು? ಗುರುವು ಸೇವಿಸಿ ಉಳಿದದ್ದು ಪುರೋಡಾಶ (ಯಜ್ಞದಲ್ಲಿ ಅಕ್ಕಿ ಹಿಟ್ಟಿನಿಂದ ಮಾಡಿದ ರೊಟ್ಟಿಯಂತಹ ಹವಿಸ್ಸಿನ ದ್ರವ್ಯ) ಮತ್ತು ವಿಶೇಷರೂಪದಲ್ಲಿ ಜಂಗಮನ ಪುರೋಡಾಶ ಅಥವಾ ಜಂಗಮ ಮತ್ತು ಗುರು ಇಬ್ಬರ ಪ್ರಸಾದವು ನಿಶ್ಚಯವಾಗಿಯೂ ಪವಿತ್ರತೆಯನ್ನು ನೀಡುವಂತಹುದು" ಎಂದು ಆಗಮಶಾಸ್ತ್ರದಲ್ಲಿ ಪ್ರಸಾದದ ಮಾಹಾತ್ಮ್ಯೆಯನ್ನು ವರ್ಣಿಸಿ ಗುರು-ಜಂಗಮರ ಭುಕ್ತಶೇಷದಿಂದ ಪ್ರಸಾದವು ಪುರೋಡಾಶದಂತೆ (ಯಾಗದಲ್ಲಿ ಉಪಯೋಗಿಸುವ ರೊಟ್ಟಿ) ಪವಿತ್ರವೆಂದು ವಿಹಿತವಾಗಿರುವುದರಿಂದ ಪಾದೋದಕದಂತೆ ಪ್ರಸಾದಸೇವನೆಯಿಂದಲೂ ಸಹ ಉಚ್ಛಿಷ್ಟದೋಷವು ಉಂಟಾಗುವುದಿಲ್ಲವೆಂದು ನಿರ್ಧಾರವಾಗುತ್ತದೆ.

ಪ್ರಸಾದದ ಮಹಿಮೆ : ಮನಸ್ಸಿಗೆ ಪ್ರಸನ್ನತೆಯನ್ನುಂಟುಮಾಡುವ, ಶಿವನ ಅನುಗ್ರಹರೂಪವಾದ ಪ್ರಸಾದವನ್ನು ದೊರಕಿಸಿಕೊಡುವ ಮತ್ತು ಶಿವಸಾಯುಜ್ಯವನ್ನು ನೀಡುವ ಪ್ರಸಾದದ ಮಹಿಮೆಯು ಶಾಸ್ತ್ರಗಳಲ್ಲಿ ಚೆನ್ನಾಗಿ ವರ್ಣಿತವಾಗಿದೆ. ಹೇಗೆಂದರೆ-

---

೩೬೭. ಮನುಸ್ಮೃತಿ, ೪.೨೧೧

೩೬೮. ಚ.ಜ್ಞಾ, ಕ್ರಿ.ಪಾ, ೫.೩೪-೩೫

ಪ್ರಸಾದೋ ಜನಕೋ ಪ್ರೋಕ್ತೋ ಜನನೀ ಭಕ್ತಿರೀರಿತಾ।
ಅನಯೋರೈಕ್ಯಭಾವೇನ ಜನಿತಾ ಮುಕ್ತಿಕನ್ಯಕಾ॥
ಶಿವಪ್ರಸಾದೇನ ಶಿವಸ್ಯಸನ್ನಿಧಿಂ ಶಿವಪ್ರಸಾದೇನ ವಿಶುದ್ಧಿರಾತ್ಮನಃ।
ಶಿವಪ್ರಸಾದೇನ ಯುತಸ್ಯ ಸುವ್ರತಾ! ನ ಜನ್ಮನಾಶೌ ಭವತಃ ಸದೈವ ತು॥
ಆಧಿವ್ಯಾಧಿಹರಂ ನೃಣಾಂ ಮೃತ್ಯುದಾರಿದ್ರ್ಯನಾಶನಮ್।
ಶ್ರೀಪುಷ್ಟಿಕೀರ್ತಿದಂ ವಂದೇ ಜಂಗಮಸ್ಯ ಪ್ರಸಾದಕಮ್॥[೩೧೯]

"ಪ್ರಸಾದವನ್ನು ತಂದೆಯೆಂದೂ, ಭಕ್ತಿಯನ್ನು ತಾಯಿಯೆಂದು ಕರೆಯಲಾಗಿದೆ. ಇವರಿಬ್ಬರ ಐಕ್ಯಭಾವದಿಂದ ಮುಕ್ತಿ ಎಂಬ ಕನ್ಯೆಯು ಜನಿಸಿದಳು. ಶಿವನ ಪ್ರಸಾದದಿಂದ ಶಿವಸಾನ್ನಿಧ್ಯ, ಶಿವಪ್ರಸಾದದಿಂದ ಆತ್ಮದ ಶುದ್ಧಿ, ಶಿವಪ್ರಸಾದದಿಂದ ಕೂಡಿದ ವ್ರತಿಗೆ ಎಂದಿಗೂ ಜನ್ಮನಾಶವಾಗುವುದಿಲ್ಲ. ಜಂಗಮನ ಪ್ರಸಾದದಿಂದ ಮಾನವರಿಗೆ ಆಧಿ, ವ್ಯಾಧಿಗಳ ನಿವಾರಣೆಯಾಗುವುದಲ್ಲದೆ ಮೃತ್ಯು-ದಾರಿದ್ರ್ಯಗಳ ನಾಶವಾಗುತ್ತದೆ ಹಾಗೂ ಶ್ರೀಮಂತಿಕೆ, ಕೀರ್ತಿಗಳು ಲಭಿಸುತ್ತವೆ (ಅಂತಹ ಜಂಗಮನ ಪ್ರಸಾದಕ್ಕೆ ನಮಸ್ಕರಿಸುತ್ತೇನೆ)" ಎಂಬಲ್ಲಿ ಉಕ್ತವಾಗಿರುವ ಪ್ರಸಾದ ಮಾಹಾತ್ಮ್ಯದಿಂದ ಪ್ರಸಾದ ಸೇವನೆಯು ಪ್ರತಿಯೊಬ್ಬರ ಕರ್ತವ್ಯವೆಂದು ತಿಳಿದುಬರುತ್ತದೆ. ಆದುದರಿಂದಲೇ ಇಲ್ಲಿ ಪ್ರಸಾದವನ್ನು ತಂದೆ, ಭಕ್ತಿಯನ್ನು ತಾಯಿ ಎಂಬ ರೂಪಕದಿಂದ ಪ್ರತಿಪಾದಿಸಿ, ಅವೆರಡರ ಸಂಗಮದಿಂದಲೇ ಮೋಕ್ಷರೂಪ ಕನ್ಯೆಯ ಜನನವೆಂದು ತಿಳಿಸಲಾಗಿದೆ. ಪ್ರತಿದಿನವೂ ಗುರು-ಲಿಂಗ-ಜಂಗಮರ ಪ್ರಸಾದ ಸೇವನೆಯಿಂದ ಮಾನಸಿಕ ದುಃಖಗಳ, ದೈಹಿಕವಾದ ವ್ಯಾಧಿಗಳ ಮತ್ತು ದಾರಿದ್ರ್ಯಾದಿ ದೋಷಗಳ ನಾಶ ಮತ್ತು ಶಿವಸಾನ್ನಿಧ್ಯವು ದೊರಕುತ್ತದೆ. ಆದುದರಿಂದ ಸ್ವಚ್ಛಂದಲಲಿತಭೈರವಾಗಮದಲ್ಲಿ ಈ ರೀತಿಯಾಗಿ ನಿರೂಪಿತವಾಗಿದೆ-

ಪಾದೋದಕಸ್ಯ ಪಾನೇನ ಸಾಮೀಪ್ಯಂ ಭಜತೇ ಸದಾ।
ಮತ್ಪ್ರಸಾದೋಪಭೋಗೇನ ಸಾರೂಪ್ಯಂ ಪ್ರತಿಪದ್ಯತೇ॥[೩೨೦]

"ಪಾದೋದಕದ ಸ್ವೀಕಾರದಿಂದ ಸಾಮೀಪ್ಯ (ಎಂಬ ಮೋಕ್ಷವು) ಸದಾ ಲಭ್ಯವಾದರೆ, ಶಿವಪ್ರಸಾದ ಸ್ವೀಕಾರದಿಂದ ಸಾರೂಪ್ಯ (ಎಂಬ ಮೋಕ್ಷವು) ಲಭಿಸುತ್ತದೆ ಎಂದು ಪ್ರತಿಪಾದಿಸಲಾಗಿದೆ."

ಮಹಾಭಾರತದ ಅನುಶಾಸನಪರ್ವದಲ್ಲಿ ಭಗವಾನ್ ಕೃಷ್ಣನು ತನ್ನ ಮಗನಾದ ಪ್ರದ್ಯುಮ್ನನನ್ನು ಕುರಿತು-

ಅಥ ಮಾಮಬ್ರವೀದ್ ಭೂಯಃ ಸ ಮುನಿಃ ಸಂಶ್ರಿತವ್ರತಃ।
ಕೃಷ್ಣ ಪಾಯಸಮಿಚ್ಛಾಮಿ ಭೋಕ್ತುಮಿತ್ಯೇವ ಸತ್ವರಮ್॥
ತತೋಽಹಂ ಜ್ವಲಮಾನಂ ವೈ ಪಾಯಸಂ ಪ್ರತ್ಯವೇದಯಮ್॥
ತಂ ಭುಕ್ತ್ವೈವ ಸ ತು ಕ್ಷಿಪ್ರಂ ತತೋ ವಚನಮಬ್ರವೀತ್।

---

[೩೧೯] ವೀರಶೈವಚಿಂತಾಮಣಿ, ಪು. ೧೧೪

[೩೨೦] ಅಷ್ಟಾವರಣವಿವೇಕ, ಪು. ೭೭

ಕ್ಷಿಪ್ರಮಂಗಾನಿ ಲಿಂಪಸ್ವ ಪಾಯಸೇನೇತಿ ಸ ಸ್ಮ ಹ॥
ಅವಿಮೃಶ್ಯೈವ ಚ ತತಃ ಕೃತವಾನಸ್ಮಿ ತತ್ ತಥಾ।
ತೇನೋಚ್ಛಿಷ್ಟೇನ ಗಾತ್ರಾಣಿ ಶಿರಶ್ಚೈವಾಭ್ಯಮೃಕ್ಷಯಮ್॥
ಏವಂ ವೃಷ್ಟಮಹಂ ಪ್ರಾಪ್ತೋ ಬ್ರಾಹ್ಮಣಸ್ಯ ಪ್ರಸಾದಜಮ್।[೩೭೧]

"ಅನಂತರ ವ್ರತವನ್ನು ಕೈಗೊಂಡಿರುವ ಮುನಿಯು ಮತ್ತೆ ಕೇಳಿದನು- ಕೃಷ್ಣ, ನಾನು ಈ ಕೂಡಲೇ ಪಾಯಸವನ್ನು ಉಣ್ಣಲು ಬಯಸುತ್ತೇನೆ. ಆಗ ನಾನು ಸುಡುತ್ತಿರುವ ಪಾಯಸವನ್ನು ಅವನಿಗೆ ಕೊಟ್ಟೆನು. ಅದನ್ನು ಊಟ ಮಾಡಿದ ಅವನು ಮತ್ತೆ ಹೀಗೆ ಹೇಳಿದನು- ಈಗಲೇ ನಿನ್ನ ಅಂಗಗಳಿಗೆ ಪಾಯಸವನ್ನು ಲೇಪಿಸು. ಆಗ ನಾನು ಏನೊಂದೂ ವಿಚಾರಮಾಡದೆ ಹಾಗೆಯೇ ಮಾಡಿದೆನು. ಆ ಉಚ್ಛಿಷ್ಟದಿಂದ ಅಂಗಗಳನ್ನು ಮತ್ತು ಶಿರಸ್ಸನ್ನು ಲೇಪಿಸಿಕೊಂಡೆನು. ಹೀಗೆ ಬ್ರಾಹ್ಮಣನ ಪ್ರಸಾದದಿಂದ ನಾನು ಈ ಪ್ರಕಾಶಮಾನತ್ವವನ್ನು (ವಜ್ರಕಾಯವನ್ನು) ಪಡೆದೆನು."

ಈ ಪ್ರಕಾರ ಪರಶಿವನ ಭಕ್ತನಾದ ದುರ್ವಾಸ ಮಹರ್ಷಿಯ ಭುಕ್ತಶೇಷ ಪ್ರಸಾದದ ಲೇಪನದಿಂದ ನನ್ನ ಶರೀರವು ವಜ್ರದಂತೆ ಕಠಿಣವಾಯಿತೆಂದು ಪ್ರಸಾದ ಮಾಹಾತ್ಮ್ಯೆಯನ್ನು ವರ್ಣಿಸಿದನು. ತಲೆಯಿಂದ ಆರಂಭಿಸಿ ಎಲ್ಲ ಅಂಗಾಂಗಗಳಿಗೆ ಅವನ ಪ್ರಸಾದವನ್ನು ಲೇಪಿಸಿದರೂ ಸಹ ಪಾದತಲದಲ್ಲಿ (ಅಂಗಾಲಿನಲ್ಲಿ) ಅದನ್ನು ಲೇಪಿಸದ ಕಾರಣ ಆ ಭಾಗವು ಮೊದಲಿನಂತೆಯೇ ಇದೆ. ಆದುದರಿಂದ ಕೊನೆಯಲ್ಲಿ ಬೇಡನ ಬಾಣದಿಂದ ಪಾದದ ಮೇಲೆ ಹೊಡೆಯಲ್ಪಟ್ಟ ಕಾರಣ ಹರಿಯು ತನ್ನ ಅವತಾರವನ್ನು ಕೊನೆಗೊಳಿಸಿದನು. ಹೀಗೆ ಮಹಿಮೆಯಿಂದ ಕೂಡಿದ ಪ್ರಸಾದವನ್ನು ಭಕ್ತಿಯಿಂದಿರುವವರೆಲ್ಲರೂ ಸ್ವೀಕರಿಸಬೇಕು.

ಪ್ರಸಾದದ ಆವರಣಶಬ್ದವಾಚ್ಯತ್ವ

ಅಷ್ಟಾವರಣಗಳಲ್ಲಿ ಐದನೆಯ ಆವರಣವಾಗಿ ಪ್ರತಿಪಾದಿತವಾದ ಈ ಪ್ರಸಾದವು ಗುರುಪ್ರಸಾದ, ಲಿಂಗಪ್ರಸಾದ ಮತ್ತು ಜಂಗಮಪ್ರಸಾದವೆಂದು ಮೂರು ವಿಧವಾಗುತ್ತದೆ. ಪರಮ ಪಾವನವಾದ ಮೂರು ಬಗೆಯ ಪ್ರಸಾದಗಳನ್ನು ಭಕ್ತಿಯಿಂದ ಸೇವಿಸುವುದರಿಂದ ವ್ಯಾಧಿಗಳ ನಿವೃತ್ತಿ ಮತ್ತು ಮನಸ್ಸಿನ ಶುದ್ಧಿಯುಂಟಾಗುತ್ತದೆ. ಮನಸ್ಸು ನಿರ್ಮಲವಾಗಿದ್ದರೆ ಪರಮಾತ್ಮನೂ ಸಹ ಪ್ರಸನ್ನನಾಗುತ್ತಾನೆ. ಈ ರೀತಿಯಾಗಿ ಮಾನಸಿಕವಾದ ಕೆಟ್ಟ ವಿಚಾರಗಳನ್ನು ದೂರೀಕರಿಸುವುದರ ಮೂಲಕ ಅಲ್ಲಿ ಪ್ರಸಾದ ಗುಣವನ್ನು ಉಂಟುಮಾಡಿ ಸಾಧಕನನ್ನು ರಕ್ಷಿಸುವ ಈ ಪ್ರಸಾದವು ಕೊನೆಯಲ್ಲಿ ಶಿವಸಾಯುಜ್ಯವನ್ನು ಗಳಿಸಿಕೊಡುತ್ತದೆ ಎನ್ನುವ ಕಾರಣದಿಂದ ರಕ್ಷಾಕವಚರೂಪದ ಆವರಣಶಬ್ದವಾಚ್ಯವಾಗುತ್ತದೆ. ಆದುದರಿಂದ ಸಮಸ್ತ ಭಕ್ತರೂ ಸಹ ಗುರು-ಲಿಂಗ-ಜಂಗಮರ ಪ್ರಸಾದ ಸೇವನೆಯ ಮೂಲಕ ತಮ್ಮ ಶರೀರ, ಮನಸ್ಸು ಮತ್ತು ಬುದ್ಧಿ ಇವುಗಳನ್ನು ರಕ್ಷಿಸಿಕೊಳ್ಳಬೇಕು.

---

[೩೭೧] ೩೭೧. ಮಹಾಭಾರತ, ಅನುಶಾಸನಪರ್ವ, ೧೫೯.೨೨, ೨೪-೨೬,೫೩

೬. ಭಸ್ಮ

ಅಷ್ಟಾವರಣಗಳಲ್ಲಿ ಭಸ್ಮವು ಆರನೆಯ ಆವರಣ. ಈಗ ಭಸ್ಮ ಶಬ್ದದ ಅರ್ಥವೇನು? ಅದು ಎಷ್ಟು ವಿಧ? ಅದರ ನಿರ್ಮಾಣವಿಧಿಯು ಯಾವುದು? ಧರಿಸುವ ಪದ್ಧತಿ ಯಾವುದು? ಮತ್ತು ಹೇಗೆ ಇದು ಆವರಣವಾಗುತ್ತದೆ? ಮುಂತಾದವುಗಳೆಲ್ಲವನ್ನೂ ಶಾಸ್ತ್ರೋಕ್ತವಾಗಿ ವಿಮರ್ಶಿಸಲಾಗುವುದು.

ಭಸ್ಮ ಶಬ್ದದ ಅರ್ಥ

ಭಸ್ಮ ಶಬ್ದಕ್ಕೆ ಪರಶಿವನ ಪ್ರಕಾಶ ಮತ್ತು ಗೋಮಯದಿಂದ ತಯಾರಿಸಿದ ವಿಭೂತಿ ಎಂಬ ಎರಡು ಅರ್ಥಗಳಿವೆ. ಅವುಗಳಲ್ಲಿ- "ಸ ಏಷ ಭಸ್ಮಜ್ಯೋತಿಃ"[೩೭೨] (ಇದು ಆ ಭಸ್ಮಜ್ಯೋತಿ), "ಭಸ್ಮಜ್ಯೋತಿಃ ಸಮಾಮ್ನಾತಮ್"[೩೭೩] (ಭಸ್ಮಜ್ಯೋತಿಯು ಪರಂಪರೆಯಿಂದ ಬಂದದ್ದು), "ಭಸ್ಮೇದಂ ಶಾಂಭವಂ ಜ್ಯೋತಿಃ"[೩೭೪] (ಈ ಭಸ್ಮವು ಶಿವನ ಪ್ರಕಾಶ) ಇತ್ಯಾದಿ ವೇದಾಗಮ ವಾಕ್ಯಗಳ ಪ್ರಮಾಣದಿಂದ ಪರಶಿವನಪ್ರಕಾಶ ಎಂಬುದು ಭಸ್ಮ ಶಬ್ದದ ತಾತ್ತ್ವಿಕವಾದ ಅರ್ಥ. ಪರಶಿವನು ಸ್ವಯಂ ಜ್ಯೋತಿಸ್ವರೂಪನು. "ತಸ್ಯ ಭಾಸಾ ಸರ್ವಮಿದಂ ವಿಭಾತಿ"[೩೭೫] (ಅವನ (ಶಿವನ) ಪ್ರಕಾಶವು ಈ ಜಗತ್ತೆಲ್ಲವನ್ನೂ ಬೆಳಗುತ್ತದೆ), "ಯದ್ಭಾಸಾ ಭಾಸತೇ ವಿಶ್ವಂ"[೩೭೬] (ಯಾವ ಪರಶಿವಬ್ರಹ್ಮದ ಪ್ರಕಾಶದಿಂದ ಪ್ರಪಂಚವು ಬೆಳಗುತ್ತದೆಯೋ) ಇತ್ಯಾದಿ ಶ್ರುತಿ ಹಾಗೂ ಶಾಸ್ತ್ರಗಳ ಪ್ರಮಾಣಗಳಿಂದ ಶಿವನ ಪ್ರಕಾಶದಿಂದಲೇ ಈ ಜಗತ್ತೆಲ್ಲವೂ ಬೆಳಗುತ್ತಿದೆ. ಶಿವನು ವಿಶ್ವವ್ಯಾಪಕನಾದರೂ ಸಹ ಅವನು ಸುಲಭ ಪ್ರಕಟವಾಗುವ ಸ್ಥಾನವೆಂದರೆ ಮಾನವನ ಹೃದಯವೇ ಆಗಿದೆ. ಹೇಗೆಂದರೆ-

ಚಂದ್ರಕಾಂತೇ ಯತಾ ತೋಯಂ ಸೂರ್ಯಕಾಂತೇ ಯಥಾಽನಲಃ।
ಬೀಜೇ ಯಥಾಽಂಕುರಃ ಸಿದ್ಧಸ್ತಥಾತ್ಮನಿ ಶಿವಃ ಸ್ಥಿತಃ॥[೩೭೭]

ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ।
ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ॥[೩೭೮]

"ಚಂದ್ರಕಾಂತಶಿಲೆಯಲ್ಲಿ ನೀರು, ಸೂರ್ಯಕಾಂತಶಿಲೆಯಲ್ಲಿ ಅಗ್ನಿ, ಬೀಜದಲ್ಲಿ ಮೊಳಕೆ ಹೇಗೆ ಸ್ವಾಭಾವಿಕವಾಗಿರುವುದೋ ಹಾಗೆಯೇ ಜೀವಾತ್ಮನಲ್ಲಿ ಪರಮಾತ್ಮನು

---

[೩೭೨] ಬೃ.ಜಾ.ಉ, ೭.೨

[೩೭೩] ಚ.ಜ್ಞಾ, ಕ್ರಿ.ಪಾ, ೬.೬೪

[೩೭೪] ಚ.ಜ್ಞಾ, ಕ್ರಿ.ಪಾ, ೬.೬೬

[೩೭೫] ಮುಂಡ, ೨-೨-೧೦

[೩೭೬] ಸಿ.ಶಿ, ೧.೪

[೩೭೭] ಸಿ.ಶಿ, ೫.೩೬

[೩೭೮] ಭಗವದ್ಗೀತಾ, ೧೮.೬೧

ನೆಲೆಸಿರುವನು. ಹೇ ಅರ್ಜುನ, ಈಶ್ವರನು ಎಲ್ಲ ಪ್ರಾಣಿಗಳ ಹೃದಯದಲ್ಲಿದ್ದು, ಮಾಯೆಯಿಂದ ಮೋಹಿತರಾಗಿ ಯಂತ್ರಗಳ ಮೇಲೆ ಕುಳಿತಂತಿರುವ ಎಲ್ಲ ಜೀವಿಗಳನ್ನು ಅಲೆದಾಡುವಂತೆ ಮಾಡುತ್ತಾನೆ" ಮೊದಲಾದ ಸ್ಥಳಗಳಲ್ಲಿ ಶಿವನು ಎಲ್ಲರ ಹೃದಯದಲ್ಲಿರುತ್ತಾನೆಂಬುದನ್ನು ಉಪದೇಶಿಸಲಾಗಿದೆ.[೨೭೯]

ಶಿವನು ಹೃದಯದಲ್ಲಿದ್ದರೂ ಸಹ ಅದರ ಜ್ಞಾನವಿಲ್ಲದಿರುವುದರಿಂದ ಜೀವಾತ್ಮನು ಸಂಸಾರಚಕ್ರದಲ್ಲಿ ಸುತ್ತುತ್ತಿರುತ್ತಾನೆ. ಇಂತಹ ಅನರ್ಥದ ಪರಿಹಾರಕ್ಕಾಗಿ ಆ ಜ್ಯೋತಿಯ ಜ್ಞಾನವು ಅವಶ್ಯಕವಾಗಿದೆ. ಅದನ್ನು ತಿಳಿಯಲು ಸ್ವಯಂ ಜ್ಯೋತಿಸ್ವರೂಪನಾದ ಪರಶಿವನನ್ನು ತನ್ನ ಹೃದಯದಲ್ಲಿ ಯಾವಾಗ ನಿರಂತರವಾಗಿ ಚಿಂತಿಸುವನೋ ಅದೇ ನಿರುಪಾಧಿಕ ಭಸ್ಮಧಾರಣವೆಂದು ಕರೆಯಲ್ಪಟ್ಟಿದೆ.[೨೮೦] ಈ ಬಗೆಯ ಭಸ್ಮಧಾರಣೆಯಿಂದ ಯಾವ ರೀತಿಯ ಫಲವುಂಟಾಗುತ್ತದೆ ಎಂಬ ಜಿಜ್ಞಾಸೆಗೆ- "ಭಸ್ಮಧಾರಣೆಯಿಂದಲೇ ಮೋಕ್ಷಪ್ರಾಪ್ತವಾಗುತ್ತದೆ. ಆ ಭಸ್ಮಧಾರಣೆಯಿಂದಲೇ ಶಿವಸಾಯುಜ್ಯವನ್ನು ಪಡೆಯುತ್ತಾನೆ. ಅವನು(ಜೀವಾತ್ಮನು) ಮತ್ತೆ ಸಂಸಾರಚಕ್ರದಲ್ಲಿ ಸುತ್ತುವುದಿಲ್ಲ, ಅವನು ಮತ್ತೆ ಸಂಸಾರಚಕ್ರದಲ್ಲಿ ಸುತ್ತುವುದಿಲ್ಲ. ಅದೇ ಭಸ್ಮದ ಪ್ರಕಾಶ"[೨೮೧] ಎಂದು ಬೃಹಜ್ಜಾಬಾಲೋಪನಿಷತ್ತಿನಲ್ಲಿ ನಿರುಪಾಧಿಕಭಸ್ಮಧಾರಣೆಯು ಮೋಕ್ಷಕ್ಕೆ ಕಾರಣವೆಂದು ಉಪದೇಶಿಸಲಾಗಿದೆ. ಮತ್ತೆ ಅಲ್ಲಿಯೇ ಆರುಣಿ, ಶ್ವೇತಕೇತು, ದುರ್ವಾಸ, ಋಭು, ನಿದಾಘ, ಜಡಭರತ, ದತ್ತಾತ್ರೇಯ, ರೈವತಕ, ಭುಸುಂಡ ಮೊದಲಾದ ಋಷಿಗಳು ಪರಶಿವನ ಪ್ರಕಾಶದ ಚಿಂತನೆಯ ರೂಪದ ಭಸ್ಮಧಾರಣೆಯಿಂದಲೇ ಮೋಕ್ಷವನ್ನು ಪಡೆದರೆಂದೂ ಸಹ ನಿರೂಪಿತವಾಗಿದೆ.

ಶಿವಮಹಾಪುರಾಣದಲ್ಲಿ ಮಹರ್ಷಿ ವ್ಯಾಸರು- "ಏಕಂ ಜ್ಞೇಯಂ ಮಹಾಭಸ್ಮ ದ್ವಿತೀಯಂ ಸ್ವಲ್ಪಸಂಜ್ಞಕಮ್"[೨೮೨] ಎಂದು ಭಸ್ಮದ ಎರಡು ಬಗೆಯನ್ನು ಪ್ರತಿಪಾದಿಸಿ, ಪರಶಿವನ ಪ್ರಕಾಶವನ್ನು 'ಮಹಾಭಸ್ಮ' ಎಂದೂ, ಗೋಮಯದಿಂದ ನಿರ್ಮಿತವಾದ ವಿಭೂತಿಯನ್ನು 'ಸ್ವಲ್ಪಭಸ್ಮ' ಎಂಬ ಹೆಸರುಗಳಿಂದ ನಿರೂಪಿಸಿದ್ದಾರೆ.

ಆದುದರಿಂದ ಮಹಾಭಸ್ಮ, ನಿರುಪಾಧಿಕಭಸ್ಮ, ಚಿದ್ಭಸ್ಮ, ಭಸ್ಮಜ್ಯೋತಿ ಇತ್ಯಾದಿ ಪರ್ಯಾಯಪದಗಳು ಪರಶಿವನ ಪ್ರಕಾಶವಾದ ಭಸ್ಮ ಶಬ್ದದ ತಾತ್ತ್ವಿಕವಾದ ಅರ್ಥ.

---

[೨೭೯] ಸಮಸ್ತಜಗದಾತ್ಮಾಽಪಿ ಶಂಕರಃ ಪರಮೇಶ್ವರಃ।
ಭಕ್ತಾನಾಂ ಹೃದಯಾಂಭೋಜೇ ವಿಶೇಷೇಣ ವಿರಾಜತೇ॥ -ಸಿ.ಶಿ, ೧೦.೬೭

[೨೮೦] ಮಹಾಭಸ್ಮೇತಿ ಸಂಚಿಂತ್ಯ ಮಹಾದೇವಂ ಪ್ರಭಾಮಯಮ್।
ವರ್ತಂತೇ ಯೇ ಮಹಾಭಾಗಾ ಮುಖ್ಯಾಸ್ತೇ ಭಸ್ಮಧಾರಿಣಃ॥ -ಸಿ.ಶಿ, ೭.೨

[೨೮೧] ಭಸ್ಮಧಾರಣಾದೇವ ಮುಕ್ತಿರ್ಭವತಿ ತದ್ಭಸ್ಮಧಾರಣಾದೇವ ಶಿವಸಾಯುಜ್ಯ ಮಾಪ್ನೋತಿ।
ನ ಸ ಪುನರಾವರ್ತತೇ ನ ಸ ಪುನರಾವರ್ತತೇ। ಸ ಏಷ ಭಸ್ಮಜ್ಯೋತಿಃ"
-ಬೃಹಜ್ಜಾಬಾಲೋಪನಿಷತ್, ೭.೨

[೨೮೨] ಶಿವಮಹಾಪುರಾಣ, ವಿದ್ಯೇಶ್ವರಸಂಹಿತಾ, ೨೪.೨

ಗೋಮಯದಿಂದ ನಿರ್ಮಿತವಾದ ವಿಭೂತಿ ಭಸ್ಮಶಬ್ದದ ಲೌಕಿಕವಾದ ಅರ್ಥ. ಗೋಮಯ ಭಸ್ಮಧಾರಣೆಯಿಂದಲೂ ಸಹ ಶಾರೀರಿಕ-ಮಾನಸಿಕ ದೋಷಗಳ ನಿವೃತ್ತಿ ಮತ್ತು ಪರಶಿವಜ್ಞಾನದ ಯೋಗ್ಯತೆಯು ದೊರೆಯುತ್ತದೆ ಎನ್ನುವ ಕಾರಣ ಅದರ ಧಾರಣೆ ಮೊದಲಾದವುಗಳು ಶ್ರುತಿಗಳಲ್ಲಿ ಉಪದಿಷ್ಟವಾಗಿವೆ. ಇದೇ ಸೋಪಾಧಿಕ ಭಸ್ಮವೆಂದು ಕರೆಯಲ್ಪಟ್ಟಿದೆ. ಈ ರೀತಿಯಾಗಿ ಭಸ್ಮ ಶಬ್ದಕ್ಕೆ ಪರಶಿವನಪ್ರಕಾಶ ಮತ್ತು ಗೋಮಯ ವಿಭೂತಿ ಎಂಬ ಎರಡು ಅರ್ಥಗಳುಂಟಾದವು. ಅದನ್ನು ಈಗ ವೀರಶೈವರು ಪೂಜಾವಿಧಿಗಳ ಸಂದರ್ಭಗಳಲ್ಲಿ ಧರಿಸಬೇಕಾದ ಸೋಪಾಧಿಕಭಸ್ಮದ ಸ್ವರೂಪ ಮತ್ತು ಅದರ ಪ್ರಕಾರಗಳನ್ನು ನಿರೂಪಿಸಲಾಗುವುದು.

ಸೋಪಾಧಿಕಭಸ್ಮ ಮತ್ತು ಅದರ ಪ್ರಕಾರಗಳು

ಪಂಚಬ್ರಹ್ಮನ್ಯಾಸಾದಿಗಳ ಸಂಬಂಧದಿಂದ ಶಿವಪಂಚಾಕ್ಷರೀ ಮಂತ್ರದಿಂದ ಸಂಸ್ಕಾರಗೊಂಡ ಅಗ್ನಿಯಿಂದ ಉತ್ಪನ್ನವಾದ ಗೋಮಯವು ಸೋಪಾಧಿಕಭಸ್ಮವೆಂದು ಶಿವಾಗಮಪ್ರವೀಣರಿಂದ ಪ್ರತಿಪಾದಿತವಾಗಿದೆ.[೩೮೩] ಶಿವನಿಗೆ ಐದು ಮುಖಗಳೆಂದು ಉಪನಿಷತ್ತುಗಳು ನಿರೂಪಿಸುತ್ತವೆ. ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಮತ್ತು ಈಶಾನ -ಇವುಗಳು ಶಿವನ ಪಂಚಮುಖಗಳು. ಪಂಚಮುಖಗಳುಳ್ಳ ಶಿವನು ಸದಾಶಿವನೆಂದು ಕರೆಯಲ್ಪಟ್ಟಿದ್ದಾನೆ. ವೀರಶೈವ ಸಿದ್ಧಾಂತದಲ್ಲಿ ಪ್ರತಿಪಾದಿತವಾದ ಮೂವತ್ತಾರು ತತ್ತ್ವಗಳಲ್ಲಿ ಮೂರನೆಯ ತತ್ತ್ವವೇ ಸದಾಶಿವತತ್ತ್ವ. ಸದಾಶಿವನ ಪಂಚಮುಖಗಳಿಂದಲೇ ಚರಾಚರ ಜಗತ್ತೆಲ್ಲವೂ ಸೃಷ್ಟಿಯಾಗಿದೆ. ಈ ಪಂಚಮುಖಗಳು ಕ್ರಮವಾಗಿ ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ ಮತ್ತು ಊರ್ಧ್ವ (ಮೇಲ್ಭಾಗ) ದಿಕ್ಕುಗಳ ಅಧಿಷ್ಠಾತೃ(ನಾಯಕ)ನ ಶಕ್ತಿರೂಪಗಳು. ಇವುಗಳೇ ಭೂಮಿ, ನೀರು, ತೇಜಸ್ಸು, ವಾಯು ಮತ್ತು ಆಕಾಶಗಳೆಂಬ ಪಂಚಮಹಾಭೂತಗಳ ಉತ್ಪತ್ತಿಸ್ಥಾನಗಳು. ಇವುಗಳಿಂದಲೇ ನಿವೃತ್ತಿ, ಪ್ರತಿಷ್ಠಾ, ವಿದ್ಯಾ, ಶಾಂತಿ ಮತ್ತು ಶಾಂತ್ಯತೀತಗಳೆಂಬ ಐದು ಕಲೆಗಳು, ನಂದಾ, ಭದ್ರಾ, ಸುರಭಿ, ಸುಶೀಲಾ ಮತ್ತು ಸುಮನಗಳೆಂಬ ಐದು ದಿವ್ಯ ಹಸುಗಳು ಜನಿಸಿದವು. ಇಂದಿನ ಗೋವುಗಳು ಐದು ಬಗೆಯ ದಿವ್ಯಗೋವುಗಳ ಸಂತಾನವೇ ಆಗಿವೆ. ಈ ಗೋವುಗಳ ಗೋಮಯದಿಂದ ಕ್ರಮವಾಗಿ ವಿಭೂತಿ, ಭಸಿತ, ಭಸ್ಮ, ಕ್ಷಾರ ಮತ್ತು ರಕ್ಷಾ ಎಂಬ ಹೆಸರಿನ ಐದು ಸೋಪಾಧಿಕಭಸ್ಮಗಳನ್ನು ನಿರ್ಮಿಸಲಾಗಿದೆ. ಈ ಐದು ಬಗೆಯ ಸೋಪಾಧಿಕಭಸ್ಮಗಳ ಹೆಸರಿನ ಭೇದಗಳಿಗೆ ಅವುಗಳ ಉತ್ಪತ್ತಿ, ಫಲ ಮತ್ತು ಪ್ರಯೋಗ ಭೇದಗಳೇ ಕಾರಣವಾಗಿವೆ.[೩೮೪] ಈಗ ಕ್ರಮವಾಗಿ ಅವುಗಳ ಉತ್ಪತ್ತಿ, ಫಲ ಮತ್ತು ಪ್ರಯೋಗಾದಿಗಳನ್ನು ವಿಮರ್ಶಿಸಲಾಗುವುದು.

---

೩೮೩. ಶಿವಾಗ್ನ್ಯಾದಿಸಮುತ್ಪನ್ನಂ ಮಂತ್ರನ್ಯಾಸಾದಿಯೋಗತಃ।
ತದುಪಾಧಿಕಮಿತ್ಯಾಹುರ್ಭಸ್ಮತಂತ್ರವಿಶಾರದಾಃ॥ -ಸಿ.ಶಿ, ೭.೬

೩೮೪. ವಿಭೂತಿರ್ಭಸಿತಂ ಭಸ್ಮ ಕ್ಷಾರಂ ರಕ್ಷೇತಿ ಭಸ್ಮನಃ।
ಏತಾನಿ ಪಂಚ ನಾಮಾನಿ ಹೇತುಭಿಃ ಪಂಚಭಿಭೃಶಮ್॥ -ಸಿ.ಶಿ, ೭.೪

೧. ವಿಭೂತಿ

“ಸದ್ಯೋಜಾತಾದ್ವಿಭೂತಿಶ್ಚ”[೩೮೫] ಎಂಬ ರೇಣುಕ ಭಗವತ್ಪಾದರ ಉಕ್ತಿಯಂತೆ ಸದಾಶಿವನ ಸದ್ಯೋಜಾತ ಮುಖದಿಂದ ಜನಿಸಿದ ಕಪಿಲವರ್ಣದ ನಂದಾ ಎಂಬ ಹೆಸರಿನ ಗೋವಿನ ಗೋಮಯದಿಂದ ನಿರ್ಮಿತವಾದ ಭಸ್ಮವು ವಿಭೂತಿ ಎಂದು ಹೇಳಲ್ಪಟ್ಟಿದೆ. ಉಪನಿಷತ್ತಿನಲ್ಲಿ ಇದು ಹೀಗೆ ನಿರೂಪಿತವಾಗಿದೆ- “ಸದ್ಯೋಜಾತಾತ್ ಪೃಥಿವೀ ತಸ್ಯಾಃ ಸ್ಯಾನ್ನಿವೃತ್ತಿಃ ತಸ್ಯಾಃ ಕಪಿಲವರ್ಣಾ ನಂದಾ ತದ್‌ಗೋಮಯೇನ ವಿಭೂತಿರ್ಜಾತಾ.”[೩೮೬] (ಪರಶಿವನ ಸದ್ಯೋಜಾತಮುಖದಿಂದ ಭೂಮಿ, ಭೂಮಿಯಿಂದ ನಿವೃತ್ತಿ ಕಲೆ, ಆ ಕಲೆಯಿಂದ ಕಪಿಲವರ್ಣದ ನಂದಾ ಎಂಬ ಗೋವು, ಆ ಗೋವಿನ ಗೋಮಯದಿಂದ ವಿಭೂತಿಯು ಉತ್ಪನ್ನವಾಯಿತು). ಸದಾಶಿವನ ಪಶ್ಚಿಮ ದಿಕ್ಕಿನ ಮುಖವೇ ಸದ್ಯೋಜಾತ ಮುಖವು. ಕಷ್ಟದಲ್ಲಿರುವ ಭಕ್ತರ ರಕ್ಷಣೆಗೋಸ್ಕರ (ಸದ್ಯಃ ಅರ್ಥಾತ್) ಆ ಕ್ಷಣದಲ್ಲಿಯೇ ಜನಿಸಿದ ಕಾರಣದಿಂದ ಶಿವನು ಸದ್ಯೋಜಾತ ಎಂದು ಕರೆಯಲ್ಪಟ್ಟಿದ್ದಾನೆ. ಮಹಾನಾರಾಯಣೋಪನಿಷತ್ತಿನಲ್ಲಿ-

ಸದ್ಯೋಜಾತಂ ಪ್ರಪದ್ಯಾಮಿ ಸದ್ಯೋಜಾತಾಯ ವೈ ನಮೋ ನಮಃ।
ಭವೇ ಭವೇ ನಾತಿಭವೇ ಭವಸ್ವ ಮಾಂ ಭವೋದ್ಭವಾಯ ನಮಃ॥

“ಸದ್ಯೋಜಾತನಿಗೆ ಶರಣು ಹೋಗುತ್ತೇನೆ, ಸದ್ಯೋಜಾತನಿಗೆ ನಮಸ್ಕಾರ. ಪ್ರತಿಯೊಂದು ಜನ್ಮದಲ್ಲಿ ಭಗವಂತನ ಪೂಜಾದಿಗಳಿಲ್ಲದ ದುಷ್ಟ ಜನ್ಮದಲ್ಲಿ ಬೀಳುವಂತೆ ಮಾಡಬೇಡ. ಹುಟ್ಟಿಗೆ ಕಾರಣನಾದ ಪರಮಾತ್ಮನಿಗೆ ನಮಸ್ಕಾರ” ಎಂದು ಶಿವನ ಸದ್ಯೋಜಾತ ಸ್ವರೂಪವನ್ನು ವರ್ಣಿಸಿ ಸ್ತುತಿಸಲಾಗಿದೆ. ವೃಷಭೇಂದ್ರಪಂಡಿತ ಶಿವಾಚಾರ್ಯರು- “ಸದ್ಯೋಜಾತಂ ಕ್ಷಿತಿಃ ಪ್ರೋಕ್ತಾ ವಾಮದೇವಸ್ತಥಾ ಜಲಮ್” (ಸದ್ಯೋಜಾತಮುಖದಿಂದ ಭೂಮಿ, ವಾಮದೇವಮುಖದಿಂದ ಜಲವೆಂದು ಹೇಳಲಾಗಿದೆ) ಎಂಬ ಕಾಮಿಕಾಗಮದಲ್ಲಿ ನಿರೂಪಿಸಲ್ಪಟ್ಟಂತೆ ಪೃಥಿವಿಯ ರೂಪದಲ್ಲಿರುವ ಮಣ್ಣು, ಶಿಲೆ ಮೊದಲಾದವುಗಳಿಂದ ನಿರ್ಮಿತವಾದ ಶಿವಲಿಂಗವನ್ನು ಪೂಜಿಸುವುದರ ಮೂಲಕ, ಧರಿಸುವುದರ ಮೂಲಕ ಪಡೆಯುತ್ತೇನೆ ಎಂದರ್ಥ. ‘ಸದ್ಯೋಜಾತಾಯ’ ಎಂದರೆ ಯಾವುದೇ ಬೇರೊಂದು ಸಾಧನವಿಲ್ಲದೆ ಭಕ್ತನ ಪ್ರಾರ್ಥನೆಯ ಕಾಲದಲ್ಲಿ ಪ್ರತ್ಯಕ್ಷನಾದವನಿಗೆ ನಮಸ್ಕಾರ.

ಇಲ್ಲಿ ‘ವೈ’ ಶಬ್ದದಿಂದ ಇತರೆ ದೇವತೆಗಳಿಗೆ ಶರಣಾಗದಿರುವಿಕೆಯು ಸೂಚಿತವಾಗಿದೆ. ಅದೇ ರೀತಿಯಾಗಿ- “ಶಿವ ಏಕೋ ಧ್ಯೇಯಃ ಶಿವಂಕರಃ” (ಮಂಗಳಕರನಾದ ಶಿವನೊಬ್ಬನನ್ನೇ ಧ್ಯಾನಿಸಬೇಕು) ಎಂದು ಅಥರ್ವಶಿಖೋಪನಿಷತ್ತಿ (೩.೪)ನಲ್ಲಿ ನಿರೂಪಿತವಾಗಿರುವುದನ್ನು ಕೇಳಿದ್ದೇವೆ. ‘ನಮೋ ನಮಃ’ ಎಂಬಲ್ಲಿ ನಮಃ

---

[೩೮೫] ಸಿ.ಶಿ, ೭.೮

[೩೮೬] ಬೃಹಜ್ಜಾಬಾಲೋಪನಿಷತ್, ೧.೧

ಪದದ ಪುನರುಕ್ತಿಯು ಶಿವನು ಎಲ್ಲ ದೇವತೆಗಳಿಗಿಂತಲೂ ಶ್ರೇಷ್ಠನಾದವನು ಎಂಬುದನ್ನು ಸೂಚಿಸುತ್ತದೆ. ಇದೇ ರೀತಿಯಾಗಿ ಶಿವಮಂತ್ರಗಳು ಬರುವೆಡೆಗಳಲ್ಲೆಲ್ಲ ತಿಳಿಯಬೇಕು. ಭವೇ ಭವೇ=ಪ್ರತಿಯೊಂದು ಜನ್ಮದಲ್ಲಿ, ಅತಿಭವೇ=ಎಂದರೆ ಭಗವಂತನ ಧ್ಯಾನ, ಧಾರಣೆ, ಪೂಜಾದಿಗಳಿಲ್ಲದ ಪಾಂಚರಾತ್ರರೇ ಮೊದಲಾದ ದುಷ್ಟಜನ್ಮಗಳಲ್ಲಿ, ನ ಭವಸ್ವ=ನನ್ನನ್ನು ಹುಟ್ಟುವಂತೆ ಮಾಡಬೇಡ, ಮಹಾಪಾಶುಪತ ಮತದಲ್ಲಿ ನನ್ನನ್ನು ಜನಿಸುವಂತೆ ಮಾಡು ಎಂದು ಭಕ್ತನ ಪ್ರಾರ್ಥನೆಯ ಮಂತ್ರವಿದು. 'ಭವಸ್ಯ' ಎಂದರೆ ವಿಷ್ಣು ಮೊದಲಾದ ಸರ್ವಕಾರ್ಯ ಸಮೂಹದ ಉತ್ಪತ್ತಿಯು ಯಾವುದರಿಂದ ಆಗುತ್ತದೆಯೋ ಅಂತಹ ಜಗತ್ತಿನ ಸೃಷ್ಟಿ ಮೊದಲಾದ ಕಾರ್ಯಗಳ ಲಕ್ಷಣಗಳಿಂದ ಕೂಡಿದ 'ಶಿವಸ್ಯ' (ಶಿವನ) ಎಂದರ್ಥ -ಎಂದು ಭಾಷ್ಯವನ್ನು ರಚಿಸಿದ್ದಾರೆ. ಇದರಿಂದ ಶಿವನ ಸರ್ವೋತ್ಕೃಷ್ಟತ್ವವು ಮತ್ತು ಭಕ್ತಾನುಗ್ರಾಹಕತ್ವವು ಸಿದ್ಧಿಸುತ್ತದೆ.[೩೮೭]

ಇಂತಹ ಸದ್ಯೋಜಾತನಾದ ಶಿವನಿಂದ ಎಲ್ಲಕ್ಕೂ ಮೊದಲು ಹೇಗೆ ಪೃಥ್ವೀ, ನಿವೃತ್ತಿಯೇ ಮೊದಲಾದ ಕಲೆಗಳು ಪ್ರಾದುರ್ಭವಿಸಿದವೋ ಹಾಗೆಯೇ ಕಪಿಲವರ್ಣದ ನಂದಾ ಎಂಬ ಹೆಸರಿನ ಹಸು ಸಹ ಉದ್ಭವಿಸಿತು. "ನಂದಯತೀತಿ ನಂದಾ" (ಯಾವುದು ಆನಂದವನ್ನುಂಟು ಮಾಡುತ್ತದೆಯೋ ಅದು ನಂದಾ) ಎಂಬ ನಿರ್ವಚನದಂತೆ ನಾನಾ ಬಗೆಯಾಗಿ ಉಪಕಾರ ಮಾಡುವುದರಿಂದ ಮಾನವರನ್ನು ಸಂತೋಷಪಡಿಸುತ್ತದೆ ಎನ್ನುವ ಕಾರಣದಿಂದ ನಂದಾ ಎಂಬ ಹೆಸರು ಬಂದಿತು. ಇಂದು ಯಾವ ಕಪಿಲವರ್ಣದ ಗೋವುಗಳಿವೆಯೋ ಅವೆಲ್ಲವೂ ಅದರ ಸಂತಾನರೂಪದವುಗಳು. ಆದುದರಿಂದ ಅವುಗಳ ಹೆಸರೂ ಸಹ 'ನಂದಾ' ಎಂದೇ ಇದೆ. ಈ ಬಗೆಯ ನಂದಾ ಎಂಬ ಹೆಸರಿನ ಗೋವಿನ ಗೋಮಯದಿಂದ ಶಾಸ್ತ್ರೋಕ್ತ ವಿಧಿಯಂತೆ ತಯಾರಿಸಿದ ಭಸ್ಮವು ವಿಭೂತಿ ಎಂದು ಬಣ್ಣಿಸಲ್ಪಟ್ಟಿದೆ.

ವಿಭೂತಿಯು ಸಂಪತ್ತಿಗೆ ಕಾರಣ

"ವಿಭೂತಿರ್ಭೂತಿಹೇತುತ್ವಾತ್"[೩೮೮] ಎಂಬ ರೇಣುಕ ಭಗವತ್ಪಾದರ ಉಕ್ತಿಗನುಸಾರವಾಗಿ ಶ್ರದ್ಧೆಯಿಂದ ಅದನ್ನು ಧರಿಸುವುದರಿಂದ ಸಂಪತ್ತು ದೊರಕುತ್ತದೆ ಎನ್ನುವ ಕಾರಣ ವಿಭೂತಿ ಎಂದು ಹೆಸರಾಯಿತು. ಐಶ್ವರ್ಯವು ಲೌಕಿಕ-ಪಾರಲೌಕಿಕ ಎಂದು ಎರಡು ವಿಧ. ಅವುಗಳಲ್ಲಿ ಧನ-ಧಾನ್ಯಾದಿಗಳೂ ಹಾಗೂ ಅಣಿಮಾದಿ ಅಷ್ಟಸಿದ್ಧಿಗಳು ಲೌಕಕ ವೆನಿಸಿದರೆ, ಸ್ವಸ್ವರೂಪಜ್ಞಾನವು ಪಾರಮಾರ್ಥಿಕ ಸಂಪತ್ತೆನಿಸುತ್ತದೆ.

ಗೋವಿನ ಅವಯವಗಳಲ್ಲಿ ಬೇರೆ ಬೇರೆ ದೇವತೆಗಳು ವಾಸವಾಗಿರುವಂತೆ ಗೋಮಯದಲ್ಲಿ ಲಕ್ಷ್ಮಿಯು ವಾಸವಾಗಿದ್ದಾಳೆಂದು ಪ್ರತಿಪಾದಿಸಲ್ಪಟ್ಟಿದೆ.[೩೮೯] ಲಕ್ಷ್ಮಿಯ

---

[೩೮೭] ಮ.ನಾ.ಉ, ೧೫, ಶೈವಭಾಷ್ಯ, ೧೫

[೩೮೮] ಸಿ.ಶಿ, ೭.೫

[೩೮೯] "ಅಷ್ಟೈಶ್ವರ್ಯಮಯೋ ಲಕ್ಷ್ಮೀರ್ಗೋಮಯೇ ವಸತೇ ಸದಾ"
-(ಮ.ಭಾ. ಆಶ್ವಮೇಧಿಕಪರ್ವ, ಪು. ೬೩೪೮

ವಾಸಸ್ಥಾನವಾದ ಗೋಮಯದಿಂದ ವಿಭೂತಿಯನ್ನು ತಯಾರಿಸುತ್ತಿದ್ದು, ಅದನ್ನು ಧರಿಸುವ ಕಾರಣದಿಂದ ಲಕ್ಷ್ಮಿಯ ಅನುಗ್ರಹವುಂಟಾಗುತ್ತದೆ ಮತ್ತು ಬಡತನದ ನಿವಾರಣೆಯಾಗುತ್ತದೆ. ಆದುದರಿಂದಲೇ ಶ್ರೀ ನೀಲಕಂಠ ಶಿವಾಚಾರ್ಯರು-

ಏತಾನಿ ತಾನಿ ಶಿವಮಂತ್ರಪವಿತ್ರಿತಾನಿ
ಭಸ್ಮಾನಿ ಕಾಮದಹನಾಂಗವಿಭೂಷಿತಾನಿ।
ತ್ರೈಪುಂಡ್ರಕಾಣಿ ರಚಿತಾನಿ ಲಲಾಟಪಟ್ಟೇ
ಲುಂಪಂತಿ ದೈವಲಿಖಿತಾನಿ ದುರಕ್ಷರಾಣಿ॥[೩೯೦]

“ಶಿವಮಂತ್ರದಿಂದ ಪವಿತ್ರವಾದ, ಆಸೆ-ಆಕಾಂಕ್ಷೆಗನ್ನು ದಹಿಸುವ ಈ ಭಸ್ಮಗಳನ್ನು ತ್ರಿಪುಂಡ್ರದ ರೀತಿಯಲ್ಲಿ ಹಣೆಯಲ್ಲಿ ರಚಿಸುವುದರಿಂದ ವಿಧಿಯು ಬರೆದ ದುರಕ್ಷರಗಳೆಲ್ಲವೂ ಅಳಿಸಿಹೋಗುತ್ತವೆ” ಎಂದು ಶಿವನ ಅಂಗಕ್ಕೆ ಅಲಂಕಾರಪ್ರಾಯವಾಗಿರುವ ವಿಭೂತಿಯ ಧಾರಣೆಯಿಂದ ಹಣೆಯಲ್ಲಿ ದೇವರು ಬರೆದಿರುವ ಬಡತನವೇ ಮೊದಲಾದ ಕೆಟ್ಟ ಅಕ್ಷರಗಳು ನಾಶವಾಗುತ್ತವೆ ಎಂದು ನಿರೂಪಿಸಿದ್ದಾರೆ. ಆ ಕಾರಣ ವಿಭೂತಿಧಾರಣೆಯಿಂದ ಲೌಕಿಕವಾದ ಐಶ್ವರ್ಯಪ್ರಾಪ್ತಿಯು ಶಾಸ್ತ್ರಸಮ್ಮತವಾಗಿದೆ.

ಅನೇಕ ಪ್ರಾಚೀನ ಮಹರ್ಷಿಗಳ ಚರಿತ್ರೆಯ ಅವಲೋಕನದಿಂದ ವಿಭೂತಿಯು ಅಣಿಮಾದಿ ಅಷ್ಟೈಶ್ವರ್ಯಗಳ ಪ್ರಾಪ್ತಿಗೂ ಸಹ ಕಾರಣವೆಂದು ತಿಳಿದುಬರುತ್ತದೆ. ಶ್ರೀ ಜಗದ್ಗುರು ರೇಣುಕಾಚಾರ್ಯರ ಪರಮಶಿಷ್ಯರಾದ ಅಗಸ್ತ್ಯಮಹರ್ಷಿಗಳು ಋಷಿವರ್ಗದಲ್ಲಿ ಖ್ಯಾತರಾಗಿರುವುದು ಸರಿಯಷ್ಟೆ. ವಿಭೂತಿಧಾರಣೆಯಲ್ಲಿ ನಿಷ್ಠರಾದ ಅವರಿಗೆ ಅಣಿಮಾದಿ ಅಷ್ಟಸಿದ್ಧಿಗಳು ಕರತಲಾಮಲಕವಾಗಿದ್ದವು. ಒಮ್ಮೆ ಸಮುದ್ರದಲ್ಲಿ ರಹಸ್ಯವಾಗಿ ಅವಿತುಕೊಂಡಿದ್ದ ರಾಕ್ಷಸರು ವರುಣನನ್ನು ಪೀಡಿಸಲು, ಅವನು ತನ್ನ ರಕ್ಷಣೆಗಾಗಿ ಅಗಸ್ತ್ಯರ ಹತ್ತಿರಕ್ಕೆ ಬಂದನು. ರಾಕ್ಷಸರ ದುರ್ವ್ಯವಹಾರದಿಂದ ಕುಪಿತಗೊಂಡ ಅಗಸ್ತ್ಯನು ಸಮುದ್ರದ ದಡಕ್ಕೆ ಬಂದು, ಮಂತ್ರಿಸಿದ ಭಸ್ಮವನ್ನು ಹಣೆಗೆ ಧರಿಸಿ ಮತ್ತು ಕೈಗಳಿಗೆ ಲೇಪಿಸಿಕೊಂಡು ಕೈಯನ್ನು ಚಾಚಿ ಸಮುದ್ರವನ್ನು ಆಹ್ವಾನಿಸಿದರು. ಆಗ ನೀರಿನ ಕಣಗಳಂತೆ ಬಂದ ಸಮುದ್ರವನ್ನು ಅವರು ಕುಡಿದು ರಾಕ್ಷಸರನ್ನು ಸಂಹರಿಸಿದರು.[೩೯೧]

---

[೩೯೦] ಕ್ರಿ.ಸಾ, ಭಾಗ. ೨, ಪು. ೮೧

[೩೯೧] ಸಮುದ್ರತೀರಮಾಸಾದ್ಯ ಭಸ್ಮಾದಾಯಾಭಿಮಂತ್ರಿತಮ್।
ಧೃತ್ವಾ ಲಲಾಟೇ ಕರಯೋರಾಲೇಪ್ಯ ಸಹಸಾ ಋಷಿಃ॥
ಆಜುವಾಹಾಂಬುಧಿಂ ಪಾಣಿಂ ಪ್ರಸಾರ್ಯಂ ಸ ಮಹಾನೃಷಿಃ।
ತದಾನೀಮಾಗತೋಽಂಭೋಧಿಃ ಕರೇ ನೀಹಾರಬಿಂದುವತ್॥
ಪ್ರಾಶಯಾಮಾಸ ತಂ ಧ್ಯಾತ್ವಾ ಮಹಾದೇವಮೃಷೀಶ್ವರಃ।
ಸಂಹರೇಂದ್ರಾಸುರಾನ್ ಪಾಪಾನ್ ರಾಕ್ಷಸಾನಪಿ ದುರ್ಜನಾನ್॥
ಏವಮುಕ್ತ್ವಾ ದದೌ ಭಸ್ಮ ಸುರೇಶಾಯ ಘಟೋದ್ಭವಃ।
-ಕ್ರಿ.ಸಾ, ಭಾಗ-೨, ಪು.೧೩೦-೩೧

ಅಗಸ್ತ್ಯ ಮಹರ್ಷಿಗಳು ಸಮುದ್ರಪಾನ ಮಾಡಿದ ವಿಷಯವು ಜಗತ್ಪ್ರಸಿದ್ಧವಾಗಿದೆ. ಅವರಿಗೆ ಅಂತಹ ಸಾಮರ್ಥ್ಯವು ವಿಭೂತಿಧಾರಣೆಯಿಂದ ಪ್ರಾಪ್ತವಾಯಿತೆಂದು ಶ್ರೀ ನೀಲಕಂಠ ಶಿವಾಚಾರ್ಯರು ಕ್ರಿಯಾಸಾರದಲ್ಲಿ ವರ್ಣಿಸಿದ್ದಾರೆ. ಈ ರೀತಿಯಲ್ಲಿ ವಿಭೂತಿಧಾರಣೆಯ ವ್ರತನಿಷ್ಠರಾದ ಮಹರ್ಷಿಗಳೆಲ್ಲರೂ ಅಣಿಮಾದಿ ಅಷ್ಟೈಶ್ವರ್ಯ ಸಿದ್ಧಿಯನ್ನು ಪಡೆದರೆಂಬ ವಿಷಯವು ಪುರಾಣಗಳಲ್ಲಿ ಲಭ್ಯವಿದೆ.

ಅಡುಗೆಪಾತ್ರೆಯ ಹೊರಭಾಗಕ್ಕೆ ತಗುಲಿದ ಬೆಂಕಿಯು ಒಳಗಿರುವ ಅಕ್ಕಿಯನ್ನು ಬೇಯಿಸುವ ಹಾಗೆ, ಸ್ಥೂಲಶರೀರದ ಮೇಲೆ ವಿಭೂತಿಧಾರಣೆ ಮಾಡಿದ್ದರೂ ಸಹ ಅಂತಃಕರಣವನ್ನು ಪಕ್ವಗೊಳಿಸುತ್ತದೆ. ಅಂತಃಕರಣದ ಪರಿಪಕ್ವತೆಯಿಂದ ಸ್ವರೂಪಜ್ಞಾನ ವುಂಟಾಗುತ್ತದೆ. ಹೀಗೆ ಲೌಕಿಕ-ಪಾರಮಾರ್ಥಿಕವಾದ ಐಶ್ವರ್ಯಗಳ ಪ್ರಾಪ್ತಿಗೆ ಕಾರಣೀಭೂತವಾಗಿರುವುದರಿಂದ ಈ ಭಸ್ಮವನ್ನು 'ವಿಭೂತಿ' ಎಂಬ ಸಾರ್ಥಕ ಹೆಸರಿನಿಂದ ಕರೆಯಲಾಗಿದೆ.

ನಿತ್ಯಕರ್ಮಗಳಲ್ಲಿ ವಿಭೂತಿಯ ಪ್ರಯೋಗ

"ಧಾರಯೇನ್ನಿತ್ಯಕಾರ್ಯೇಷು ವಿಭೂತಿಂ ಚ ಪ್ರಯತ್ನತಃ"[೩೯೨] (ನಿತ್ಯಕರ್ಮಗಳಲ್ಲಿ ವಿಭೂತಿಯನ್ನು ಪ್ರಯತ್ನಪೂರ್ವಕವಾಗಿ ಧರಿಸಬೇಕು) ಎಂಬ ರೇಣುಕಾಚಾರ್ಯರ ಉಕ್ತಿಯಂತೆ ನಿತ್ಯಕರ್ಮಗಳ ಆಚರಣೆಯ ಸಂದರ್ಭದಲ್ಲಿ ವಿಭೂತಿಧಾರಣೆಯು ಆದ್ಯಕರ್ತವ್ಯವಾಗಿರುತ್ತದೆ. "ನಿಯಮೇನ ಭವಂ ನಿತ್ಯಮ್ ನಿತ್ಯಂ ಚ ತತ್ ಕರ್ಮ ನಿತ್ಯಕರ್ಮ" ಎಂಬ ನಿರ್ವಚನದಂತೆ ದೀಕ್ಷಾಸಂಸ್ಕಾರದ ನಂತರ ಆಜೀವಪರ್ಯಂತ ಅವಶ್ಯವಾಗಿ ಮಾಡಲೇಬೇಕಾಗಿರುವ ಕರ್ಮ ಯಾವುದಿದೆಯೋ ಅದು ನಿತ್ಯಕರ್ಮವೆಂದು ಕರೆಯಲ್ಪಟ್ಟಿದೆ. "ನಿತ್ಯಂ ಸದಾ ಯಾವದಾಯುರ್ನ ಕದಾಚಿದತಿಕ್ರಮೇತ್"[೩೯೩] (ಇದನ್ನು ಆಜೀವಪರ್ಯಂತ ನಿತ್ಯವೂ ಆಚರಿಸಬೇಕು, ಒಮ್ಮೆಯೂ ಅತಿಕ್ರಮಿಸಬಾರದು) ಎಂದು ಮೀಮಾಂಸಾಶಾಸ್ತ್ರದಲ್ಲಿ ನಿತ್ಯಕರ್ಮದ ಲಕ್ಷಣವನ್ನು ನಿರೂಪಿಸಿ, ಅದನ್ನು ಅತಿಕ್ರಮಿಸಿದರೆ ಪ್ರಾಯಶ್ಚಿತ್ತವನ್ನೂ ಬೋಧಿಸಲಾಗಿದೆ.

ವೀರಶೈವರಿಗೆ ಇಷ್ಟಲಿಂಗಧಾರಣೆ, ಇಷ್ಟಲಿಂಗಪೂಜೆ, ಪಂಚಾಕ್ಷರ ಮಹಾಮಂತ್ರದ ಜಪ, ಶ್ರೀರುದ್ರದ ಪಾರಾಯಣ, ಶಿವಧ್ಯಾನ, ಶಿವಾಗಮಗ್ರಂಥಗಳ ಅಧ್ಯಯನ, ಪ್ರಾಣಲಿಂಗ-ಭಾವಲಿಂಗಗಳ ಅನುಸಂಧಾನ ಮುಂತಾದವುಗಳು ನಿತ್ಯಕರ್ಮಗಳೆನಿಸಿವೆ. ಆದುದರಿಂದ ಇಂತಹ ಕರ್ಮಗಳ ಆಚರಣೆಯ ಕಾಲದಲ್ಲಿ ವಿಭೂತಿಯನ್ನು ಅವಶ್ಯವಾಗಿ ಧರಿಸಲೇಬೇಕು. ಅನ್ಯಥಾ ನಿತ್ಯಕರ್ಮವು ಅಪೂರ್ಣವೇ ಆಗುತ್ತದೆ.

ಈ ಪ್ರಕಾರವಾಗಿ ಸದಾಶಿವನ ಸದ್ಯೋಜಾತಮುಖದಿಂದ ಅವತರಿಸಿದ ಕಪಿಲವರ್ಣದ ನಂದಾ ಎಂಬ ಹೆಸರಿನ ಗೋವಿನ ಗೋಮಯದಿಂದ ತಯಾರಿಸಿದ,

---

[೩೯೨] ಸಿ.ಶಿ, ೭.೯

[೩೯೩] ನ್ಯಾಯಕೋಶ, ಪು. ೪೧೭-೪೧೮

ನಿತ್ಯಕರ್ಮಗಳಲ್ಲಿ ಧಾರಣೆಮಾಡಬೇಕಾಗಿರುವ, ಅಣಿಮಾದಿ ಅಷ್ಟೈಶ್ವರ್ಯಗಳಿಗೆ ಕಾರಣೀಭೂತವಾದ ಭಸ್ಮವು ವಿಭೂತಿ ಎಂದು ಕರೆಯಲ್ಪಟ್ಟಿದೆ.

೨. ಭಸಿತ

"ವಾಮಾದ್ಭಸಿತಮೇವ ಚ"[೩೯೪] ಎಂಬ ಉಕ್ತಿಯಂತೆ ಸದಾಶಿವನ ವಾಮದೇವ ಮುಖದಿಂದ ಹುಟ್ಟಿದ ಕೃಷ್ಣವರ್ಣದ ಭದ್ರಾ ಎಂಬ ಹೆಸರಿನ ಗೋವಿನ ಗೋಮಯ ದಿಂದ ತಯಾರಿಸಿದ ಭಸ್ಮವೇ 'ಭಸಿತ'ವೆಂದು ಕರೆಯಲ್ಪಟ್ಟಿದೆ. ಇದನ್ನು ಉಪನಿಷತ್ತುಗಳು ಹೀಗೆ ನಿರೂಪಿಸುತ್ತವೆ- "ವಾಮದೇವಾದುದಕಮ್, ತಸ್ಮಾತ್ ಪ್ರತಿಷ್ಠಾ ತಸ್ಯಾಃ ಕೃಷ್ಣವರ್ಣಾ ಭದ್ರಾ ತದ್‌ಗೋಮಯೇನ ಭಸಿತಂ ಜಾತಮ್"[೩೯೫] (ಶಿವನ ವಾಮದೇವ ಮುಖದಿಂದ ನೀರು, ನೀರಿನಿಂದ ಪ್ರತಿಷ್ಠಾ ಎಂಬ ಕಲೆ, ಆ ಕಲೆಯಿಂದ ಕಪ್ಪು ಬಣ್ಣದ ಭದ್ರಾ ಎಂಬ ಹೆಸರಿನ ಗೋವು, ಅದರ ಗೋಮಯದಿಂದ ಭಸಿತವೆಂಬ ಭಸ್ಮವು ಉಂಟಾಗುತ್ತದೆ). ಸದಾಶಿವನ ಉತ್ತರದಿಕ್ಕಿನ ಮುಖವೇ ವಾಮದೇವಮುಖ. "ವಾಮಶ್ಚ ಅಸೌ ದೇವಶ್ಚ ವಾಮದೇವಃ" ಎಂಬ ವಿಗ್ರಹದಂತೆ ಅತಿಶಯವಾದ ಸೌಂದರ್ಯದಿಂದ ಶಿವನು ವಾಮದೇವ ಎಂದು ಕರೆಯಲ್ಪಟ್ಟಿದ್ದಾನೆ. ಮಹಾನಾರಾಯಣೋಪನಿಷತ್ತಿನಲ್ಲಿ- "ವಾಮದೇವಾಯ ನಮೋ ಜ್ಯೇಷ್ಠಾಯ ನಮಃ ಶ್ರೇಷ್ಠಾಯ ನಮೋ ರುದ್ರಾಯ ನಮಃ ಕಾಲಾಯ ನಮಃ ಕಲವಿಕರಣಾಯ ನಮೋ ಬಲವಿಕರಣಾಯ ನಮೋ ಬಲಾಯ ನಮೋ ಬಲಪ್ರಮಥನಾಯ ನಮಃ ಸರ್ವಭೂತದಮನಾಯ ನಮೋ ಮನೋನ್ಮನಾಯ ನಮಃ" ಎಂದು ವಾಮದೇವನ ಸ್ವರೂಪವನ್ನು ವರ್ಣಿಸುವುದರ ಮೂಲಕ ಶಿವನ ಸ್ತುತಿಯನ್ನು ಮಾಡಲಾಗಿದೆ.

ಶ್ರೀ ವೃಷಭ ಪಂಡಿತ ಶಿವಾಚಾರ್ಯರು ಮೇಲಿನ ಉಪನಿಷನ್ಮಂತ್ರವನ್ನು ಈ ರೀತಿಯಾಗಿ ಅರ್ಥೈಸಿದ್ದಾರೆ- "ವಾಮದೇವಾಯ=ಲೀಲೆಯಿಂದ ಮಂಗಲ ಮೂರ್ತಿಯಾಗಿದ್ದಾನೆ. ಜ್ಯೇಷ್ಠಾಯ ನಮೋ=ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳ ಉತ್ಪತ್ತಿಗೆ ಕಾರಣನಾಗಿರುವುದರಿಂದ ಅಥವಾ ಮಹಾಪ್ರಳಯಕ್ಕೆ ಸಾಕ್ಷಿಯಾಗಿರು ವುದರಿಂದ ಶಿವನ ಜ್ಯೇಷ್ಠತ್ವವು ಉಕ್ತವಾಗಿದೆ. ಶ್ರೇಷ್ಠಾಯ ನಮಃ, ಶಿವನು ಮೃತ್ಯುಂಜಯ ನಾಗಿರುವುದರಿಂದ ಬ್ರಹ್ಮ-ವಿಷ್ಣು ಮೊದಲಾದವರಿಗಿಂತ ಶ್ರೇಷ್ಠನು. ರುದ್ರಾಯ ನಮಃ, ಮಹಾಪ್ರಳಯದ ಸಂದರ್ಭದಲ್ಲಿ ಬ್ರಹ್ಮ, ವಿಷ್ಣು ಮೊದಲಾದವರನ್ನು ರೋದಿಸುವಂತೆ ಮಾಡಿದ ಕಾರಣ ರುದ್ರನು. ಕಾಲಾಯ ನಮಃ, ಜೀವನ ಕರ್ಮಕ್ಕೆ ಅನುಗುಣವಾಗಿ ಆಯಾ ಕಾಲಗಳಲ್ಲಿ ಫಲಪ್ರದಾಯಕನಾದ್ದರಿಂದ ಶಿವನ ಕಾಲಾತ್ಮಕತ್ವವು. ಕಲೆ, ಕಾಷ್ಠಾದಿ ವಿಕರಣ ಕಾರಣದಿಂದ ಕಲವಿಕರಣತ್ವ, ಕಲವಿಕರಣ ಎಂಬ ಹ್ರಸ್ವವು ಛಂದಸ್ಸಿಗೆ ಸಂಬಂಧಿಸಿದೆ. "ಬಲವಿಕರಣಾಯ ನಮಃ, ವಿಗತಾನಿ ಕರಣಾನಿ ಯಸ್ಯಾಸೌ ವಿಕರಣಃ" (ನಷ್ಟವಾದ ಇಂದ್ರಿಯಗಳುಳ್ಳವನು ಯಾವನೋ ಅವನು ವಿಕರಣ) ಬಲಶ್ಚ ಅಸೌ

---

[೩೯೪] ಸಿ.ಶಿ, ೭.೮

[೩೯೫] ಬೃ.ಜಾ.ಉ, ೧.೧

ವಿಕರಣಶ್ಚ ಎಂದು ಹೇಳಲ್ಪಟ್ಟಿದೆ. ಶರೀರ, ಇಂದ್ರಿಯಗಳ ನಿರಪೇಕ್ಷತೆಯಿಂದ ಸರ್ವಕಾರಣ ಸಾಮರ್ಥ್ಯವುಳ್ಳವನು ಎಂದರ್ಥ. "ಅಪಾಣಿಪಾದೋಽಹಮಚಿಂತ್ಯಶಕ್ತಿಃ" ಎಂದು ಶ್ರುತಿಯು ಸಾರುತ್ತದೆ. ಬಲಾಯ ನಮಃ, ಬ್ರಹ್ಮ, ವಿಷ್ಣು ಮೊದಲಾದವರಿಂದ ಜಯಿಸಲು ಅಸಮರ್ಥನೆಂದರ್ಥ. ಬಲಪ್ರಮಥನಾಯ ನಮಃ=ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನಾವತಾರಗಳ ಸಂಹಾರಕರ್ತನೆಂದರ್ಥ. ಸರ್ವಭೂತ ದಮನಾಯ ನಮಃ=ಮಹಾಪ್ರಳಯಕರ್ತನೆಂದರ್ಥ. ಮನೋನ್ಮನಾಯ ನಮಃ =ಬುದ್ಧಿಯನ್ನು ಪ್ರೇರೇಪಿಸುವ ಶಿವನಿಗೆ ನಮಸ್ಕಾರ. "ಸ ನೋ ದೇವಃ ಶುಭಯಾ ಸ್ಮೃತ್ಯಾ ಸಂಯುನಕ್ತು" ಎಂಬ ಶ್ರುತಿವಾಕ್ಯವೂ ಇರುವುದರಿಂದ[೩೯೬] ಈ ಮಂತ್ರಕ್ಕೆ ಭಾಷ್ಯವನ್ನು ಮಾಡಿದ್ದಾರೆ. ಇದರಿಂದ ಶಿವನ ಜ್ಯೇಷ್ಠತ್ವ-ಶ್ರೇಷ್ಠತ್ವಗಳು ತಿಳಿದುಬರುತ್ತವೆ.

ಈ ರೀತಿಯಾಗಿ ಜ್ಯೇಷ್ಠನಾದ ವಾಮದೇವನಿಂದ ಸ್ವರ್ಗ ಮೊದಲಾದವುಗಳಿಂದ ಹೇಗೆ ಜಲ, ಪಂಚಮಹಾಭೂತಗಳು, ಪ್ರತಿಷ್ಠೆ, ಕಲೆ ಮೊದಲಾದವುಗಳು ಉದ್ಭವಿಸಿವೆಯೋ ಹಾಗೆಯೇ ಕೃಷ್ಣವರ್ಣದ ಭದ್ರಾ ಎಂಬ ಗೋವೂ ಸಹ ಉದ್ಭವಿಸಿತು. "ಶ್ವಃಶ್ರೇಯಸಂ ಶಿವಂ ಭದ್ರಂ ಕಲ್ಯಾಣಂ ಮಂಗಲಂ ಶುಭಮ್"[೩೯೭] ಎಂಬ ಅಮರಸಿಂಹನ ಮಾತಿನಂತೆ ನಾನಾ ಬಗೆಯ ಮಂಗಲಪರಂಪರೆಯ ಸಾಧನಭೂತವಾದ ಕಾರಣ ಅದಕ್ಕೆ 'ಭದ್ರಾ' ಎಂಬ ಹೆಸರು. ಇಂದಿನ ಕೃಷ್ಣವರ್ಣದ ಯಾವ ಗೋವುಗಳಿವೆಯೋ ಅವೆಲ್ಲವೂ ಅದರ ಸಂತಾನ ರೂಪದವುಗಳು. ಆದುದರಿಂದ ಅವುಗಳೆಲ್ಲವೂ 'ಭದ್ರಾ' ಎಂಬ ಹೆಸರಿನಿಂದಲೇ ವ್ಯವಹರಿಸಲ್ಪಡುತ್ತಿವೆ. ಇಂತಹ ಭದ್ರಾ ಎಂಬ ಹೆಸರಿನ ಗೋವಿನ ಗೋಮಯದಿಂದ ಶಾಸ್ತ್ರೋಕ್ತವಾಗಿ ತಯಾರಾದ ಭಸ್ಮವೇ 'ಭಸಿತ' ಎಂದು ಕರೆಯಲ್ಪಟ್ಟಿದೆ.

ಭಸಿತದ ತತ್ತ್ವಾವಭಾಸಕತ್ವ

"ಭಸಿತಂ ತತ್ತ್ವಭಾಸನಾತ್"[೩೯೮] ಎಂಬ ರೇಣುಕ ಭಗವತ್ಪಾದರ ವಾಕ್ಯದಂತೆ ಶಿವತತ್ತ್ವವನ್ನು ಪ್ರಕಾಶಗೊಳಿಸುವ ಕಾರಣ 'ಭಸಿತ'ವೆಂದು ಹೆಸರು. ಅನಾರೋಪಿತವಾದ (ಆರೋಪಿಸಲ್ಪಡದ) ರೂಪವೇ ತತ್ತ್ವ. ವೀರಶೈವ ಸಿದ್ಧಾಂತದಲ್ಲಿ ಚರಾಚರಾತ್ಮಕವಾದ ಈ ಜಗತ್ತನ್ನು ತತ್ತ್ವಾತ್ಮಕವೆಂದು ಅಂಗೀಕರಿಸಲಾಗಿದೆ. ಆದುದರಿಂದಲೇ ಈ ಸಿದ್ಧಾಂತದಲ್ಲಿ ಶಿವನೇ ಮೊದಲ್ಗೊಂಡು ಭೂಮಿಯಿಂದ ಅಂತ್ಯವಾಗುವ ಮೂವತ್ತಾರು ತತ್ತ್ವಗಳು.

> ಪತ್ರಶಾಖಾದಿರೂಪೇಣ ಯಥಾ ತಿಷ್ಠತಿ ಪಾದಪಃ।
> ತಥಾ ಭೂಮ್ಯಾದಿರೂಪೇಣ ಶಿವ ಏಕೋ ವಿರಾಜತೇ॥[೩೯೯]

---

[೩೯೬] ಮ.ನಾ.ಉ, ೧೬, ವೀರಶೈವಭಾಷ್ಯಮ್, ಪು. ೭೯-೮೦

[೩೯೭] ಅ.ಕೋ, ೧-೪-೨೫

[೩೯೮] ಸಿ.ಶಿ, ೭.೫

[೩೯೯] ಸಿ.ಶಿ, ೧೦.೬೬

"ಮರವು ಎಲೆ, ರೆಂಬೆ ಮೊದಲಾದ ರೂಪದಿಂದ ಹೇಗೆ ವಿರಾಜಿಸುತ್ತಿರುವುದೋ, ಹಾಗೆಯೇ ಶಿವನು ಭೂಮಿ ಮೊದಲಾದ ರೂಪದಿಂದ ವಿರಾಜಿಸುತ್ತಿದ್ದಾನೆ" ಎಂಬ ಶ್ರೀ ರೇಣುಕ ಭಗವತ್ಪಾದರ ಆದೇಶದಂತೆ ಆ ಎಲ್ಲ ತತ್ತ್ವಗಳೂ ಶಿವಸ್ವರೂಪದಿಂದ ತಿಳಿಯುವುದರಿಂದಲೇ ತತ್ತ್ವಜ್ಞಾನತ್ವವು.

ಇಂತಹ ತತ್ತ್ವಜ್ಞಾನಗಳ ಜ್ಞಾನಕ್ಕೆ ಶಾಸ್ತ್ರಶ್ರವಣವು ಕಾರಣವಾದರೂ ಸಹ ಆನಂತರದಲ್ಲಿ ಅಂತಃಕರಣಶುದ್ಧಿಯು ಅವಶ್ಯಕ. ಅಂತಹ ಅಂತಃಕರಣಶುದ್ಧಿಯು ಭಸ್ಮಧಾರಣೆಯಿಂದಲೇ ಸಿದ್ಧಿಸುತ್ತದೆ. ಆದುದರಿಂದಲೇ ಮರಿತೋಂಟದಾರ್ಯರು- "ನಿಃಶ್ರೇಯಸ್ಯೈಕಸಾಧನಬ್ರಹ್ಮವಿದ್ಯಾಂತರಂಗಚಿತ್ತಶುದ್ಧಿಸಂಪಾದಕತ್ವೇನ ವೈದಿಕಶಿವಪೂಜಾಂಗತ್ವೇನ ಚ ಭಸ್ಮಧಾರಣಂ ಕರ್ತವ್ಯಮ್"[೪೦೦] (ಮೋಕ್ಷೈಕ ಸಾಧನವಾದ ಬ್ರಹ್ಮವಿದ್ಯೆಯ ಅಂತರಂಗ ಚಿತ್ತಶುದ್ಧಿಯನ್ನು ಪಡೆಯಲು ವೈದಿಕಶಿವಪೂಜೆಯ ಅಂಗವಾಗಿ ಭಸ್ಮಧಾರಣೆಯನ್ನು ಮಾಡಬೇಕು) ಎಂದು ಪ್ರತಿಪಾದಿಸಿದ್ದಾರೆ.

ಅಂತಃಕರಣಶುದ್ಧಿಗಾಗಿ ಶಾಸ್ತ್ರಗಳಲ್ಲಿ ತೀರ್ಥಸ್ನಾನ, ಶಿವಮಂತ್ರಜಪ ಮತ್ತು ಯೋಗಾಭ್ಯಾಸಾದಿಗಳು ಉಪದಿಷ್ಟವಾಗಿವೆ. ಇವುಗಳಿಲ್ಲದೆ ಕೇವಲ ಶ್ರದ್ಧೆಯಿಂದ ಭಸ್ಮಧಾರಣೆ ಮಾಡುವುದರಿಂದಲೂ ಸಹ ಅಂತಃಕರಣಶುದ್ಧಿಯಾಗುತ್ತದೆ ಮತ್ತು ತತ್ತ್ವಜ್ಞಾನವು ಪ್ರಾಪ್ತವಾಗುತ್ತದೆ. ಅದನ್ನು ಪ್ರತಿಪಾದಿಸಲು ಶ್ರೀ ನೀಲಕಂಠ ಶಿವಾಚಾರ್ಯರು ಮತ್ಸ್ಯಪುರಾಣದ ವಾಕ್ಯಗಳನ್ನು ಉಲ್ಲೇಖಿಸುತ್ತಾರೆ-

ಕಿಂ ಯಜ್ಞೈಃ ಕಿಮನೇಕತೀರ್ಥಕಲಹೈಃ ಕಿಂ ವೇದಪಾಠಶ್ರಮೈಃ
ಕಿಂ ಘೋರೈರ್ವಿವಿಧೈಸ್ತಪೋಭಿರಮಲೈಃ ಕಿಂ ಮಂತ್ರತಂತ್ರೈರ್ಜಪೈಃ।
ಕಿಂ ಧ್ಯಾನೈಃ ಕಿಮನೇಕದಾನನಿಕರೈಃ ಕಿಂ ಸಾಂಖ್ಯಯೋಗಶ್ರಮೈ-
ರ್ಮೋಕ್ಷಾರ್ಥೀ ಸಿತಭಸ್ಮನಾ ಚ ನಿಪುಣಃ ಕುರ್ಯಾತ್ ತ್ರಿಪುಂಡ್ರಂ ಪುನಃ॥[೪೦೧]

"ಯಜ್ಞಗಳಿಂದಲೂ, ಅನೇಕ ತೀರ್ಥಸ್ನಾನಗಳಿಂದಲೂ, ವೇದಪಾಠದ ಅಧ್ಯಯನದಿಂದಲೂ, ನಾನಾ ಬಗೆಯ ಘೋರವಾದ ತಪಸ್ಸುಗಳಿಂದಲೂ, ಮಂತ್ರ ತಂತ್ರ ಜಪಗಳಿಂದಲೂ, ಧ್ಯಾನಗಳಿಂದಲೂ, ನಾನಾ ಬಗೆಯ ದಾನಗಳಿಂದಲೂ, ಸಾಂಖ್ಯ- ಯೋಗಶಾಸ್ತ್ರಗಳ ಅಧ್ಯಯನಶ್ರಮ -ಇವೆಲ್ಲವುಗಳಿಂದ ಏನು ಪ್ರಯೋಜನ? ಮೋಕ್ಷಾರ್ಥಿಯಾದವನು ಬಿಳಿಬಣ್ಣದ ಭಸ್ಮದಿಂದ ತ್ರಿಪುಂಡ್ರವನ್ನು ಧರಿಸಬೇಕು."

ಮತ್ಸ್ಯಪುರಾಣದ ಈ ವಾಕ್ಯದಲ್ಲಿ ಯಜ್ಞ, ತೀರ್ಥಸ್ನಾನ, ವೇದಾಧ್ಯಯನ, ಧ್ಯಾನ, ದಾನ, ಸಾಂಖ್ಯವೇ ಮೊದಲಾದ ಶಾಸ್ತ್ರಗಳ ಅಧ್ಯಯನವಿಲ್ಲದಿದ್ದರೂ ಸಹ ಭಸ್ಮತ್ರಿಪುಂಡ್ರ ಧಾರಣೆಯಿಂದಲೇ ಮೋಕ್ಷಪ್ರಾಪ್ತವಾಗುತ್ತದೆಂದು ಪ್ರತಿಪಾದಿಸಿದ್ದಾರೆ. ಅಲ್ಲದೆ-

---

[೪೦೦] ವೀ.ಆ.ಚ, ಪು. ೧೩.೩.

[೪೦೧] ಕ್ರಿ.ಸಾ, ಭಾಗ-೨, ಪು. ೮೭

ಮುಕ್ತ್ವಾ ತ್ರಿಪುಂಡ್ರಂ ಮೋಕ್ಷಸ್ಯ ಸಾಧನಂ ನಹಿ ವಿದ್ಯತೇ।
ಯಥಾ ಕೃಶಾನುರಹಿತಸ್ತ್ವಧ್ವರೋ ನ ವಿರಾಜತೇ॥[೪೦೨]

ಆಯುಷ್ಕಾಮೋ ಯಥಾ ರಾಜನ್ ಭೂತಿಕಾಮೋಽಥವಾ ನರಃ।
ನಿತ್ಯಂ ವೈ ಧಾರಯೇದ್ಭಸ್ಮ ಮೋಕ್ಷಕಾಮೀ ಚ ವೈ ದ್ವಿಜಃ॥[೪೦೩]

"ಅಗ್ನಿಯಿಲ್ಲದೆ ಯಜ್ಞವು ಕಂಗೊಳಿಸದಿರುವಂತೆ, ತ್ರಿಪುಂಡ್ರಧಾರಣೆಯನ್ನು ಬಿಟ್ಟು ಮೋಕ್ಷಕ್ಕೆ ಬೇರಾವುದೇ ಸಾಧನವೂ ಇರುವುದಿಲ್ಲ. ಹೇ ರಾಜನ್, ಹೆಚ್ಚು ದಿನ ಬದುಕಲು ಬಯಸುವವನು ಸಂಪತ್ತನ್ನು ಹೇಗೆ ಬಯಸುತ್ತಾನೆಯೋ ಹಾಗೆಯೇ ಮೋಕ್ಷಾಕಾಂಕ್ಷಿಯಾದ ದ್ವಿಜನು ನಿತ್ಯವೂ ಭಸ್ಮವನ್ನು ಧರಿಸಬೇಕು" ಇತ್ಯಾದಿ ವಾಯವೀಯಸಂಹಿತೆ, ಮಹಾಭಾರತದ ವಾಕ್ಯಗಳಲ್ಲಿ ಅಗ್ನಿಯಿಲ್ಲದೆ ಯಜ್ಞವು ಹೇಗೆ ಸಂಭವಿಸುವುದಿಲ್ಲವೋ ಹಾಗೆಯೇ ಭಸ್ಮಧಾರಣೆಯಿಲ್ಲದೆ ಮೋಕ್ಷವು ಅಸಂಭವವೆಂದು ನಿರೂಪಿಸಿ, ಆಯುಷ್ಕಾಮ ಮತ್ತು ಭೂತಿಕಾಮದಂತೆ ಮೋಕ್ಷಾಕಾಂಕ್ಷಿಯಾದ ಪುರುಷನೂ ಸಹ ಭಸ್ಮವನ್ನು ಧರಿಸಬೇಕೆಂದು ಸಿದ್ಧಾಂತ ಮಾಡಲಾಗಿದೆ. ಮತ್ತು-

ಸತ್ಯಂ ಶೌಚಂ ಜಪೋ ಹೋಮಸ್ತೀರ್ಥಂ ದೇವಾದಿಪೂಜನಮ್।
ತಸ್ಯ ವ್ಯರ್ಥಮಿದಂ ಸರ್ವಂ ಯಸ್ತ್ರಿಪುಂಡ್ರಂ ನ ಧಾರಯೇತ್॥[೪೦೪]

"ಸತ್ಯವನ್ನು ನುಡಿಯುವುದು, ಶೌಚ, ಜಪ, ಹೋಮ, ತೀರ್ಥಸ್ನಾನ, ದೇವಾದಿಗಳ ಪೂಜೆ ಮಾಡುವುದು -ಇವೆಲ್ಲವೂ ತ್ರಿಪುಂಡ್ರಧಾರಣೆಯಿಲ್ಲದಿದ್ದರೆ ವ್ಯರ್ಥವು" ಎಂಬ ನಾರದೀಯಸ್ಮೃತಿಯ ವಾಕ್ಯದಂತೆ ಭಸ್ಮತ್ರಿಪುಂಡ್ರಧಾರಣೆಯಿಲ್ಲದೆ ಮಾಡಲ್ಪಡುವ ಸತ್ಯಭಾಷಣ, ಶೌಚದ ಆಚರಣೆ, ಜಪ, ಹೋಮಾದಿಗಳು ವ್ಯರ್ಥವೆಂದು ಘೋಷಿಸಲಾಗಿದೆ.

ಪೂರ್ವೋಕ್ತ ಚರ್ಚೆಯಿಂದ ತಿಳಿದುಬರುವುದೇನೆಂದರೆ ಶರೀರದ ಮೇಲೆ ಧರಿಸಬೇಕಾದ ಈ ಭಸ್ಮವು ಸಾಧಕನ ಅಂತರಂಗವನ್ನು ಸಂಸ್ಕರಿಸಿ ತತ್ತ್ವಜ್ಞಾನವನ್ನುಂಟು ಮಾಡುತ್ತದೆ. ಆ ತತ್ತ್ವಜ್ಞಾನದ ಬಲದಿಂದಲೇ ಸಾಧಕನಿಗೆ ಶಿವನೇ ಮೊದಲ್ಗೊಂಡು ಭೂಮಿಯೇ ಕೊನೆಯಾಗುವ ಮೂವತ್ತಾರು ತತ್ತ್ವಗಳು ಶಿವಸ್ವರೂಪವಾಗಿ ಭಾಸವಾಗುತ್ತವೆ. ಈ ಪ್ರಕಾರ ಪರಂಪರೆಯಿಂದ ಅಥವಾ ಭಸ್ಮದ ತತ್ತ್ವಜ್ಞಾನಕ್ಕೆ ಕಾರಣೀಭೂತವಾಗುತ್ತದೆನ್ನುವ ಕಾರಣ ಇದಕ್ಕೆ 'ಭಸಿತ' ಎಂಬ ಹೆಸರು ಬಂದಿದೆ.

---

[೪೦೨] ಕ್ರಿ.ಸಾ, ಭಾಗ-೨, ಪು. ೮೪

[೪೦೩] ಕ್ರಿ.ಸಾ, ಭಾಗ-೨, ಪು. ೮೯

[೪೦೪] ಕ್ರಿ.ಸಾ, ಭಾಗ-೨, ಪು. ೯೦

ನೈಮಿತ್ತಿಕ ಕರ್ಮಗಳಲ್ಲಿ ಭಸಿತದ ಉಪಯೋಗ

"ನೈಮಿತ್ತಿಕೇಷು ಭಸಿತಮ್"[೪೦೫] (ನೈಮಿತ್ತಿಕ ಕರ್ಮಗಳಲ್ಲಿ ಭಸಿತವನ್ನು ಧರಿಸಬೇಕು) ಎಂಬ ಶ್ರೀ ರೇಣುಕ ಭಗವತ್ಪಾದರ ಉಕ್ತಿಗನುಸಾರವಾಗಿ ನೈಮಿತ್ತಿಕ ಕರ್ಮಗಳ ಆಚರಣೆಯ ಸಂದರ್ಭಗಳಲ್ಲಿ 'ಭಸಿತ'ವೆಂಬ ಹೆಸರಿನ ಭಸ್ಮವನ್ನು ಉಪಯೋಗಿಸಬೇಕು. "ನಿಮಿತ್ತಾದಾಗತಮ್, ನಿಮಿತ್ತೇ ಭವಂ ವಾ ನೈಮಿತ್ತಿಕಮ್" ಎಂಬ ನಿರ್ವಚನದಂತೆ ಗರ್ಭಾಧಾನ, ಪುಂಸವನ, ಸೀಮಂತೋನ್ನಯನ, ಜಾತಕರ್ಮ, ನಾಮಕರಣ, ಅನ್ನಪ್ರಾಶನ, ಚೌಲಕರ್ಮ, ಶಿವದೀಕ್ಷೆ, ವಿವಾಹ, ಅಂತ್ಯೇಷ್ಟಿಗಳೆಂಬ ದಶಕರ್ಮಗಳನ್ನು ಆಯಾಯ ನಿಮಿತ್ತಗಳ ಸಂದರ್ಭಗಳಲ್ಲಿ ಆಚರಣೆಮಾಡುವುದರಿಂದ ಅವುಗಳನ್ನು ನೈಮಿತ್ತಿಕ ಕರ್ಮಗಳೆಂದು ಕರೆಯಲಾಗಿದೆ. ಈ ನೈಮಿತ್ತಿಕ ಕರ್ಮಗಳ ಆಚರಣೆಯ ಸಂದರ್ಭಗಳಲ್ಲಿ 'ಭಸಿತ'ದ ಧಾರಣೆಯನ್ನು ಆಚಾರ್ಯರು ಉಪದೇಶಿಸಿದ್ದಾರೆ.

ಹೀಗೆ ಸದಾಶಿವನ ವಾಮದೇವಮುಖದಿಂದ ಜನಿಸಿದ ಕೃಷ್ಣವರ್ಣದ ಭದ್ರಾ ಎಂಬ ಹೆಸರಿನ ಗೋವಿನ ಗೋಮಯದಿಂದ ನಿರ್ಮಿಸಿದ, ನೈಮಿತ್ತಿಕ ಕರ್ಮಗಳ ಸಂದರ್ಭಗಳಲ್ಲಿ ಧರಿಸಬೇಕಾದ, ತತ್ತ್ವಜ್ಞಾನಕ್ಕೆ ಕಾರಣೀಭೂತವಾದ ಭಸ್ಮವು ಭಸಿತವೆಂದು ಕರೆಯಲ್ಪಟ್ಟಿದೆ.

೭. ಭಸ್ಮ

"ಅಘೋರಾದ್ಭಸ್ಮ ಸಂಜಾತಮ್"[೪೦೬] (ಶಿವನ ಅಘೋರಮುಖದಿಂದ ಭಸ್ಮವು ಹುಟ್ಟಿತು) ಎಂಬ ಮಾತಿನಂತೆ ಸದಾಶಿವನ ಅಘೋರಮುಖದಿಂದ ಜನಿಸಿದ ಕೆಂಪು ಬಣ್ಣದ ಸುರಭಿ ಎಂಬ ಹೆಸರಿನ ಗೋವಿನ ಗೋಮಯದಿಂದ ತಯಾರಿಸಿದ್ದು 'ಭಸ್ಮ'ವೆಂದು ಕರೆಯಲ್ಪಟ್ಟಿದೆ. ಉಪನಿಷತ್ತುಗಳಲ್ಲಿ ಇದು ಹೀಗೆ ನಿರೂಪಿತವಾಗಿದೆ- "ಅಘೋರಾದ್ವಹ್ನಿಃ ತಸ್ಮಾದ್ವಿದ್ಯಾ ತಸ್ಯಾಃ ರಕ್ತವರ್ಣಾ ಸುರಭಿಃ ತದ್‌ಗೋಮಯೇನ ಭಸ್ಮ ಜಾತಮ್"[೪೦೭] (ಅಘೋರಮುಖದಿಂದ ಅಗ್ನಿ, ಅಗ್ನಿಯಿಂದ ವಿದ್ಯೆ, ವಿದ್ಯೆಯಿಂದ ಕೆಂಪು ಬಣ್ಣದ ಸುರಭಿ, ಅದರ ಗೋಮಯದಿಂದ ನಿರ್ಮಾಣವಾದದ್ದು ಭಸ್ಮವಾಗುತ್ತದೆ). ಸದಾಶಿವನ ದಕ್ಷಿಣ ದಿಕ್ಕಿನ ಮುಖವೇ ಅಘೋರಮುಖ. "ನ ಘೋರಃ ಅಘೋರ" (ಭಯಂಕರವಲ್ಲದ್ದು ಅಘೋರ) ಎಂಬ ವಿಗ್ರಹದಂತೆ ಇದು ಶಿವನ ಶಾಂತಸ್ವರೂಪ. ಆದುದರಿಂದಲೇ ತೈತ್ತಿರೀಯಸಂಹಿತೆಯಲ್ಲಿ- "ಯಾ ತೇ ರುದ್ರ ಶಿವಾ ತನೂರಘೋರಾಽಪಾಪಕಾಶಿನೀ"[೪೦೮] ಎಂದು ಶಿವನ ಶಾಂತತೆಯು, ಪಾಪಿಗಳಲ್ಲದ ಭಕ್ತರಲ್ಲಿ ಪ್ರಕಾಶಿಸುತ್ತದೆ ಎಂದು ಉಪದೇಶಿಸಲ್ಪಟ್ಟಿದೆ. ಮಹಾನಾರಾಯಣೋಪನಿಷತ್ತಿನಲ್ಲಿ- "ಅಘೋರೇಭ್ಯೋಽಥ ಘೋರೇಭ್ಯೋ ಘೋರಘೋರತರೇಭ್ಯಃ ಸರ್ವೇಭ್ಯಃ ಸರ್ವಶರ್ವೇಭ್ಯೋ ನಮಸ್ತೇ ಅಸ್ತು

---

[೪೦೫] ಸಿ.ಶಿ, ೭.೯

[೪೦೬] ಸಿ.ಶಿ, ೭.೮

[೪೦೭] ಬೃಹಜ್ಜಾಬಾಲೋಪನಿಷತ್, ೧.೧

[೪೦೮] ತೈತ್ತಿರೀಯಸಂಹಿತಾ, ೪.೫.೧.೧

ರುದ್ರರೂಪೇಭ್ಯಃ”[೪೦೯] ಎಂದು ಶಿವನ ಅಘೋರತ್ವವು, ಪುನಃ ಅವನ ಘೋರತ್ವ-ಘೋರತರತ್ವವನ್ನು ಪ್ರತಿಪಾದಿಸಿ ಸ್ತುತಿಸಲಾಗಿದೆ.

ವೃಷಭಪಂಡಿತ ಶಿವಾಚಾರ್ಯರು- “ಭಕ್ತರ ಅಭೀಷ್ಟ ಫಲಪ್ರದಕ್ಕೆ ಅನುಕೂಲ ಮಾಡುವ ಕಾರಣ ಅಘೋರತ್ವ, ದುಷ್ಟನಿಗ್ರಹ ರೂಪದಿಂದ ಘೋರತ್ವ, ಮೃತ್ಯು-ಕಾಲಾದಿಗಳ ಸಂಹಾರಕನಾದುದರಿಂದ ಘೋರ-ಘೋರತ್ವ, ಸರ್ವೇಭ್ಯಃ ಚೇತನ-ಅಚೇತನಾತ್ಮಕ ಅಷ್ಟಮೂರ್ತಿಗಳಿಗೆ, ಸರ್ವಶರ್ವೇಭ್ಯಃ=ಪಶುಪತಿತ್ವ ಚಂದ್ರಶೇಖರತ್ವಾದಿ ಇಪ್ಪತ್ತೈದು ಲೀಲೆಗಳಿಂದ, ರುದ್ರೇಭ್ಯಃ=ಶಿವನಾದ ನಿನಗೆ ನಮಸ್ಕಾರ ಮಾಡುತ್ತೇನೆ”[೪೧೦] ಎಂದು ಮೇಲಿನ ಮಂತ್ರಕ್ಕೆ ವ್ಯಾಖ್ಯಾನ ಮಾಡಿದ್ದಾರೆ.

ನಿಗ್ರಹ-ಅನುಗ್ರಹ ಸಮರ್ಥನಾದ ಶಿವನು ಘೋರ-ಅಘೋರ ಎಂಬ ಎರಡು ರೂಪಗಳಿಂದ ಕೂಡಿದವನೆಂಬುದು ಮೇಲಿನ ಚರ್ಚೆಯಿಂದ ಸಿದ್ಧವಾಯಿತು. ಅಘೋರ ರೂಪಿಯಾದ ಶಿವನಿಂದ ಸ್ವರ್ಗ ಮೊದಲಾದವುಗಳಲ್ಲಿ ಹೇಗೆ ಅಗ್ನಿ, ವಿದ್ಯೆ, ಕಲಾದಿಗಳು ಉತ್ಪನ್ನವಾದವೋ ಹಾಗೆಯೇ ಕೆಂಪು ಬಣ್ಣದ ಸುರಭಿ ಎಂಬ ಗೋವೂ ಸಹ ಜನಿಸಿತು. ಆ ಗೋವು ಸ್ವಯಂ ಪರಿಮಳಯುಕ್ತವಾಗಿರುವುದರ ಜೊತೆಗೆ ಸುಗಂಧಭರಿತವಾದ ಹಾಲು, ಮೊಸರುಗಳನ್ನು ನೀಡುವುದರಿಂದ ಅದಕ್ಕೆ ಸುರಭಿ ಎಂದು ಹೆಸರು. ಇಂದಿನ ಯಾವ ಕೆಂಪು ಬಣ್ಣದ ಗೋವುಗಳಿವೆಯೋ ಅವೆಲ್ಲವೂ ಅದರ ಸಂತಾನರೂಪದವುಗಳು. ಆದುದರಿಂದ ಅವುಗಳೆಲ್ಲವನ್ನೂ ಸುರಭಿ ಎಂಬ ಹೆಸರಿನಿಂದಲೇ ತಿಳಿಯಬೇಕು. ಇದರ ಗೋಮಯದಿಂದ ಶಾಸ್ತ್ರೋಕ್ತ ರೀತಿಯಲ್ಲಿ ತಯಾರಿಸಿದ ವಿಭೂತಿಯೇ ಭಸ್ಮವೆಂದು ಕರೆಯಲ್ಪಟ್ಟಿದೆ.

ಭಸ್ಮವು ಪಾಪವನ್ನು ಹೋಗಲಾಡಿಸುತ್ತದೆ

“ಪಾಪಾನಾಂ ಭರ್ತ್ಸನಾದ್ ಭಸ್ಮ”[೪೧೧] (ಪಾಪಗಳನ್ನು ಹೋಗಲಾಡಿಸುವುದರಿಂದ ಭಸ್ಮ) ಎಂಬ ಆಚಾರ್ಯರ ಆದೇಶಾನುಸಾರವಾಗಿ ಮನಸ್ಸು, ವಾಕ್, ಕಾಯಗಳಿಂದುಂಟಾಗುವ ಪಾಪಗಳನ್ನು ಅಥವಾ ಭಯವನ್ನು ಹೆದರಿಸುವುದರಿಂದ ಭಸ್ಮ ಎಂದು ಹೆಸರು. ಆದುದರಿಂದ “ಭಸ್ಮ ಸರ್ವಾದ್ಯಭಕ್ಷಣಾತ್”[೪೧೨] (ಎಲ್ಲವನ್ನೂ ಭಕ್ಷಿಸುವುದರಿಂದ ಭಸ್ಮ) ಎಂಬ ಶ್ರುತಿವಾಕ್ಯವೂ ಇದೆ. ಅಮರಸಿಂಹನು-

> ಅಸ್ತ್ರೀ ಪಂಕಂ ಪುಮಾನ್ ಪಾಪ್ಮಾ ಪಾಪಂ ಕಿಲ್ಬಿಷಕಲ್ಮಷಮ್।
> ಕಲುಷಂ ವೃಜಿನೈನೋಽಘಮಂಹೋ ದುರಿತದುಷ್ಕೃತಮ್॥[೪೧೩]

ಪಚ್ಯತೆ=ವ್ಯಕ್ತೀಭವತಿ, ವಿಸ್ತೃತೋ ಭವತಿ ವಾ ದುಃಖವನೌನೌತಿ=ಪಂಕಂ; ಆಪ್ನೋತಿ= ವ್ಯಾಪ್ನೋತಿ ಲೋಕನೀತಿ ಪಾಪ್ಮಾ; ಪಿಬತಿ=ಭಕ್ಷಯತಿ ಕರ್ತಾರಮಿತಿ ಪಾಪಂ;

---

[೪೦೯] ಮಹಾನಾರಾಯಣೀಯೋಪನಿಷತ್, ೧೭

[೪೧೦] ಮಹಾನಾರಾಯಣೀಯೋಪನಿಷತ್, ೧೭ ಶೈವಭಾಷ್ಯ, ಪು. ೮೦

[೪೧೧] ಸಿ.ಶಿ, ೭.೫

[೪೧೨] ಬೃ.ಜಾ.ಉ, ೧.೧

[೪೧೩] ಅಮರಕೋಶ, ೧.೪.೨೩, ರಾಮಾಶ್ರಮೀ, ಪು. ೫೧-೫೨

ಕೇಲಯತಿ=ಕ್ರೀಡಯತಿ, ವಿಷಯೇಷ್ವಿತಿ=ಕಿಲ್ಬಿಷಂ; ಶುಭಂ ಕರ್ಮ ಸ್ಯಾತಿ ಸಮಾಪ್ತಂ ಕರೋತೀತಿ ಕಲ್ಮಷಂ; ಕಲಯತಿ=ವಶೀಕರೋತೀತಿ=ಕಲುಷಂ; ವೃಜತಇತಿ ವೃಜಿನಂ; ಯಂತಿ=ಗಚ್ಛಂತಿ ಅಧೋ ಅನೇನ ಇತಿ ಏನಃ, ಏತಿ=ಪ್ರಾಯಶ್ಚಿತ್ತೇನ ಗಚ್ಛತಿ-ಇತಿ ಏನಃ, ಅಂಘತೆ=ಗಚ್ಚತಿ ದಾನಾದಿನಾ ಇತಿ ಅಘಂ; ಅಂಹತಿ=ಗಚ್ಛತಿ ಶುಭಕರ್ಮಬಿರಿತಿ ಅಂಹಃ; ದುಷ್ಟಮಿತಂ=ಗಮನಮನೇನ ಇತಿ ದುರಿತಂ; ದುಷ್ಟೀಕೃತಂ ಕರಣಮನೇನ ಇತಿ ದುಷ್ಕೃತಂ ಎಂದು ಪಾಪದ ಹನ್ನೆರಡು ಪರ್ಯಾಯ ಪದಗಳನ್ನು ನಿರೂಪಿಸಿದ್ದಾನೆ. ಈ ಎಲ್ಲ ಹೆಸರುಗಳೂ ಸಹ ಅರ್ಥಗರ್ಭಿತವಾಗಿವೆ. ಅದು ಹೇಗೆಂದರೆ, 'ಪಂಕಂ' ಎಂದರೆ ದುಃಖವು ವ್ಯಕ್ತವಾಗುತ್ತದೆ, ವ್ಯಾಪಕವಾಗುತ್ತದೆ ಎಂದರ್ಥ. 'ಪಾಪ್ಮಾ' ಎಂದರೆ ಲೋಕವನ್ನು ವ್ಯಾಪಿಸುತ್ತದೆ; 'ಪಾಪಂ' ಎಂದರೆ ಕರ್ತೃವನ್ನು ತಿನ್ನುತ್ತದೆ; ಕಿಲ್ಬಿಷಮ್ ಎಂದರೆ ವಿಷಯಗಳಲ್ಲಿ ಕ್ರೀಡಿಸುತ್ತದೆ; 'ಕಲ್ಮಷಮ್' ಎಂದರೆ ಶುಭಕರ್ಮವನ್ನು ಸಮಾಪ್ತಿಗೊಳಿಸುತ್ತದೆ; 'ಕಲುಷಂ' ಎಂದರೆ ವಶಪಡಿಸಿಕೊಳ್ಳುತ್ತದೆ; 'ವೃಜಿನಂ' ಎಂದರೆ ಪಾಪವನ್ನು ದೂರಮಾಡುತ್ತದೆ; 'ಏನ' ಎಂದರೆ ಇದರಿಂದ ಕೆಳಗೆ (ಪಾತಾಳಕ್ಕೆ) ಹೋಗುತ್ತಾನೆ ಅಥವಾ ಪ್ರಾಯಶ್ಚಿತ್ತವನ್ನು ಹೊಂದುತ್ತಾನೆ; 'ಅಘಂ' ಎಂದರೆ ದಾನಾದಿಗಳಿಂದ ಹೋಗುತ್ತಾನೆ; 'ಅಂಹಃ' ಎಂದರೆ ಶುಭಕರ್ಮಗಳಿಂದ ದೂರ ಹೋಗುತ್ತಾನೆ; 'ದುರಿತಂ' ಎಂದರೆ ಕೆಟ್ಟದ್ದನ್ನು ಕುರಿತು ಹೋಗುತ್ತಾನೆ ಮತ್ತು 'ದುಷ್ಕೃತಂ' ಎಂದರೆ ಕೆಟ್ಟದ್ದನ್ನು ಮಾಡುವುದು ಎಂದರ್ಥ. ಈ ರೀತಿಯಾದ 'ಪಾಪ' ಶಬ್ದದ ಪರ್ಯಾಯ ಶಬ್ದಗಳ ವ್ಯುತ್ಪತ್ತಿಯನ್ನು ಅವಲೋಕಿಸುವುದ ರಿಂದ 'ಪಾಪ್ಮಾ' ದುಃಖಜನಕ, ವಿನಾಶಕ, ಶಬ್ದ ಸ್ಪರ್ಶಾದಿಗಳಿಗೆ ಹೋಗುವಂತೆ ಮಾಡುವುದು, ಮತ್ತು ದೋಷವನ್ನುಂಟುಮಾಡುವುದು, ಅದರ ನಾಶವು ಪ್ರಾಯಶ್ಚಿತ್ತ ದಿಂದಾಗುತ್ತದೆ ಅಥವಾ ನಿತ್ಯಮಾಡುವ ಶುಭಕರ್ಮಗಳಿಂದಲೂ ಆಗುತ್ತದೆಂದು ತಿಳಿಯುತ್ತದೆ.

ನಾನಾ ಬಗೆಯ ದುಷ್ಕರ್ಮಗಳನ್ನು ದೂರಮಾಡಲು ಸ್ಮೃತಿಗ್ರಂಥಗಳಲ್ಲಿ ಬಗೆ ಬಗೆಯ ಪ್ರಾಯಶ್ಚಿತ್ತಕರ್ಮಗಳನ್ನು ಪ್ರತಿಪಾದಿಸಲಾಗಿದೆ. ಅವೆಲ್ಲವುಗಳನ್ನು ಆಚರಿಸುವುದು ಸುಲಭವಲ್ಲ. ಆದುದರಿಂದ ಶ್ರುತಿ-ಸ್ಮೃತಿಗಳಲ್ಲಿ ಎಲ್ಲ ಬಗೆಯ ಪಾಪಗಳನ್ನು ಶಮನಮಾಡಲು ಭಸ್ಮಧಾರಣೆಯ ವ್ರತವು ಉಪದಿಷ್ಟವಾಗಿದೆ. ಆ ವ್ರತವು ಭಸ್ಮಸ್ನಾನ, ಭಸ್ಮೋದ್ಧೂಲನ ಮತ್ತು ತ್ರಿಪುಂಡ್ರಧಾರಣಾತ್ಮಕವಾಗಿದೆ. ಈ ವ್ರತವನ್ನು ಯಾರು ನಿಷ್ಠೆಯಿಂದ ಪಾಲಿಸುತ್ತಾರೆಯೋ ಅವರು 'ಭಸ್ಮನಿಷ್ಠ'ರೆನಿಸುತ್ತಾರೆ. ಭಸ್ಮನಿಷ್ಠನಾದವನ ಎಲ್ಲ ಪಾಪಗಳು ದಹಿಸುತ್ತವೆ. ಅದನ್ನು ಶ್ರುತಿಗಳು-

> ಭಸ್ಮನಿಷ್ಠಸ್ಯ ದಹ್ಯಂತೇ ದೋಷಾ ಭಸ್ಮಾಗ್ನಿಸಂಗಮಾತ್।
> ಭಸ್ಮಸ್ನಾನವಿಶುದ್ಧಾತ್ಮಾ ಭಸ್ಮನಿಷ್ಠ ಇತಿ ಸ್ಮೃತಃ॥
> ಭಸ್ಮಸಂದಿಗ್ಧಸರ್ವಾಂಗೋ ಭಸ್ಮದೀಪ್ತತ್ರಿಪುಂಡ್ರಕಃ।
> ಭಸ್ಮಶಾಯೀ ಚ ಪುರುಷೋ ಭಸ್ಮನಿಷ್ಠ ಇತಿ ಸ್ಮೃತಃ॥[೪೧೪]

"ಭಸ್ಮಾಗ್ನಿಯ ಸ್ಪರ್ಶದಿಂದ ಭಸ್ಮನಿಷ್ಠನ ಪಾಪಗಳು ದಹಿಸುತ್ತವೆ, ಭಸ್ಮಸ್ನಾನದಿಂದ ಪವಿತ್ರನಾದ ಜೀವಾತ್ಮನು ಭಸ್ಮನಿಷ್ಠ ಎನಿಸುತ್ತಾನೆ. ಸರ್ವಾಂಗಗಳಿಗೂ ಭಸ್ಮಧಾರಿಯೂ,

---

[೪೧೪] ಬೃ.ಜಾ.ಉ, ೫.೧೮-೧೯

ಭಸ್ಮತ್ರಿಪುಂಡ್ರಕದಿಂದ ದೀಪ್ತನಾಗಿರುವವನೂ, ಭಸ್ಮದ ಮೇಲೆ ಮಲಗುವ ಪುರುಷನು ಭಸ್ಮನಿಷ್ಠ ಎನಿಸುತ್ತಾನೆ" ಮತ್ತು "ಭಸ್ಮದ ಧ್ಯಾನದಿಂದಲೇ ಎಲ್ಲ ದೋಷಗಳು ನಾಶವಾಗುತ್ತವೆ. ಭಸ್ಮದ ಬಗ್ಗೆ ಮತ್ತೆ ಮತ್ತೆ ವಿಚಾರ ಮಾಡುವುದರಿಂದಲೇ ಪಾಪವು ಭಸ್ಮವಾಗುತ್ತದೆ. ಭಸ್ಮದ ಮನನದಿಂದಲೇ ಸಂಸಾರದ ಕಷ್ಟಗಳಿಂದ ಬಿಡುಗಡೆಯಾಗುತ್ತದೆ. ಅದೇ ಭಸ್ಮಜ್ಯೋತಿಯು"[೪೧೫] ಎಂದು ಪ್ರತಿಪಾದಿಸುತ್ತವೆ.

ಮದ್ಯಪಾನ, ಗುರುಪತ್ನೀಗಮನ, ಕಳ್ಳತನ, ಬ್ರಹ್ಮಹತ್ಯೆಯೇ ಮೊದಲಾದ ಪಾಪಗಳೂ ಸಹ ಭಸ್ಮದ ಧಾರಣೆಯಿಂದಲೇ ನಾಶವಾಗುತ್ತವೆಂಬುದನ್ನು ಜ್ಞಾಪಿಸಿಕೊಳ್ಳಬೇಕು.[೪೧೬] ಶರೀರದ ಕುತ್ತಿಗೆ, ತೋಳುಗಳು, ಎದೆ, ನಾಭಿ, ಪೃಷ್ಠ, ಎರಡೂ ಪಕ್ಕೆಗಳು ಮೊದಲಾದ ಅವಯವಗಳಿಗೆ ಭಸ್ಮಧಾರಣೆ ಮಾಡುವುದರಿಂದ ಆಯಾ ಅವಯವಗಳಿಂದುಂಟಾಗುವ ದೋಷಗಳು ದೂರವಾಗುತ್ತವೆ ಎಂಬುದು ಶಿವ-ರಾಘವರ ಸಂವಾದದಿಂದ[೪೧೭] ತಿಳಿದುಬರುತ್ತದೆ. ಮಹರ್ಷಿ ವ್ಯಾಸರು-

ತ್ರಿಪುಂಡ್ರಸಹಿತೋ ಜೀವಃ ಪೂಜ್ಯಃ ಸರ್ವೈಃ ಸುರಾಸುರೈಃ।
ಪಾಪಾನ್ವಿತೋಽಪಿ ಶುದ್ಧಾತ್ಮಾ ಕಿಂ ಪುನಃ ಶ್ರದ್ಧಯಾ ಯುತಃ॥[೪೧೮]

"ತ್ರಿಪುಂಡ್ರಧಾರಿಯಾದ ಜೀವನು ಎಲ್ಲ ದೇವ-ದಾನವರಿಂದಲೂ ಪೂಜ್ಯನು. ಅವನು ಪಾಪಿಯಾಗಿದ್ದರೂ ಕೂಡ ಶುದ್ಧಾತ್ಮನಾಗುತ್ತಾನೆಂದರೆ, ಇನ್ನು ಶ್ರದ್ಧೆಯಿಂದಿರುವವನ ವಿಷಯದಲ್ಲಿ ಹೇಳುವುದೇನಿದೆ?" ಎಂದು ತ್ರಿಪುಂಡ್ರಧಾರಣೆಯಿಂದ ಪಾಪಾತ್ಮನೂ ಸಹ ಪೂತಾತ್ಮನೂ ಹಾಗೂ ಪೂಜ್ಯನೂ ಆಗುತ್ತಾನೆಂದು ಭಸ್ಮಧಾರಿಗಳಾದ ಶುದ್ಧಾತ್ಮರ ಮೋಕ್ಷವನ್ನು ಕೈಮುತಿಕ ನ್ಯಾಯದಿಂದ ಸಿದ್ಧಿಸುತ್ತದೆ ಎಂದು ಪ್ರತಿಪಾದಿಸಿ, "ಧಿಗ್ಭಸ್ಮ ರಹಿತಂ ಭಾಲಮ್"[೪೧೯] ಭಸ್ಮಧಾರಿಗಳಲ್ಲದವರ ಜೀವಿತಕ್ಕೇ ಧಿಕ್ಕಾರವನ್ನು ಹೇಳಲಾಗಿದೆ. ಆದುದರಿಂದ ಭಸ್ಮವು ಪಾಪವನ್ನು ಹೋಗಲಾಡಿಸುತ್ತದೆ ಮತ್ತು ಪಾಪವನ್ನು ಭಕ್ಷಿಸುತ್ತದೆ ಎಂದು ಶಾಸ್ತ್ರದಿಂದ ಸಿದ್ಧವಾಯಿತು.

---

[೪೧೫] ಕ್ರಿ.ಸಾ, ಭಾಗ-೨, ಪು. ೪೪

[೪೧೬] ಮದ್ಯ ಪೀತ್ವಾ ಗುರುದಾರಾಂಶ್ಚ ಗತ್ವಾ ಸ್ತೇಯಂ ಕೃತ್ವಾ ಬ್ರಹ್ಮಹತ್ಯಾ ಚ ಕೃತ್ವಾ।
ಭಸ್ಮಚ್ಛನ್ನೋ ಭಸ್ಮಶಯ್ಯಾಂ ಶಯಾನೋ ರುದ್ರಾಧ್ಯಾಯೀ ಮುಚ್ಯತೇ ಸರ್ವಪಾಪೈಃ॥
-ವೀರಶೈವಾಷ್ಟಾವರಣಪ್ರಮಾಣಾಷ್ಟಕಾಭರಣಮ್, ಪು.೧೬

[೪೧೭] ಕಂಠೇ ಚ ಧಾರಣಾತ್ ಕಂಠಭಾಗಾದಿಕೃತಪಾತಕಮ್।
ಬಾಹ್ವೋರ್ಬಾಹುಕೃತಂ ಪಾಪಂ ವಕ್ಷಸೋ ಮನಸಾ ಕೃತಮ್।
ನಾಭ್ಯಾಂ ಪೃಷ್ಠಕೃತಂ ಪಾಪಂ ಪೃಷ್ಠೇ ಗುದಕೃತಂ ಹರೇತ್।
ಪಾರ್ಶ್ವಯೋರ್ಧಾರಣಾದ್ ರಾಮ ಪರಸ್ತ್ರ್ಯಾಲಿಂಗನಾದಿಜಮ್॥
ತದ್ಭಸ್ಮಧಾರಣಂ ಶಸ್ತಂ ಸರ್ವಂ ತದ್ವತ್ ತ್ರಿಲಿಂಗಕಮ್।
-ಕ್ರಿ.ಸಾ, ಭಾಗ-೨, ಪು.೮೫

[೪೧೮] ಶಿವಪುರಾಣ, ವಿದ್ಯೇಶ್ವರ ಸಂಹಿತಾ, ೨೪.೨೫

[೪೧೯] ಶಿವಪುರಾಣ, ೨೪.೪೫

ಪ್ರಾಯಶ್ಚಿತ್ತಕರ್ಮಗಳಲ್ಲಿ ಭಸ್ಮದ ಉಪಯೋಗ

"ಪ್ರಾಯಶ್ಚಿತ್ತೇಷು ಸರ್ವೇಷು ಭಸ್ಮ ನಾಮ ಯಥಾವಿಧಿ"[೪೨೦] (ಎಲ್ಲ ಬಗೆಯ ಪ್ರಾಯಶ್ಚಿತ್ತಕರ್ಮಗಳಲ್ಲಿ 'ಭಸ್ಮ'ವೆಂಬ ತ್ರಿಪುಂಡ್ರವನ್ನು ವಿಧಿವತ್ತಾಗಿ ಧರಿಸಬೇಕು) ಎಂಬ ಶ್ರೀ ರೇಣುಕ ಭಗವತ್ಪಾದರ ಆದೇಶದಂತೆ ಎಲ್ಲಾ ಬಗೆಯ ಪ್ರಾಯಶ್ಚಿತ್ತ ಕರ್ಮಗಳ ಆಚರಣೆಯ ಸಂದರ್ಭದಲ್ಲಿ ಭಸ್ಮದ ಉಪಯೋಗವು ಮಾಡಲ್ಪಡುತ್ತದೆ. "ಪ್ರಾಯಃ ಚಿತ್ತಮ್ ಪ್ರಾಯಶ್ಚಿತ್ತಮ್" ಎಂಬ ನಿರ್ವಚನದಂತೆ ಪ್ರಾಯಃ ಎಂದರೆ ತಪಸ್ಸು, ಚಿತ್ತಮ್ ಎಂದರೆ ನಿರ್ಧಾರ. ಈ ರೀತಿಯಾಗಿ ನಿರ್ಧರಿಸಿದ ತಪಸ್ಸೇ ಪ್ರಾಯಶ್ಚಿತ್ತ. ಅದನ್ನು ಅಂಗಿರಸ್ಮೃತಿಯಲ್ಲಿ-

> ಪ್ರಾಯೋ ನಾಮ ತಪಃ ಪ್ರೋಕ್ತಂ ಚಿತ್ತಂ ನಿಶ್ಚಯ ಉಚ್ಯತೇ।
> ತಪೋ ನಿಶ್ಚಯಸಂಯುಕ್ತಂ ಪ್ರಾಯಶ್ಚಿತ್ತಮಿತಿ ಸ್ಮೃತಮ್॥[೪೨೧]

"ಪ್ರಾಯಃ ಎಂದರೆ ತಪಸ್ಸು, ಚಿತ್ತಂ ಎಂದರೆ ನಿರ್ಧಾರವೆಂದು ಹೇಳಲಾಗಿದೆ. ತಪಸ್ಸು ಮತ್ತು ನಿರ್ಧಾರಗಳ ಸಮಾಯೋಗವು ಪ್ರಾಯಶ್ಚಿತ್ತವೆನಿಸುತ್ತದೆ." ಬೇರೆ ಬೇರೆ ಪಾಪಗಳ ಉಪಶಮನಕ್ಕೆ ಬೇರೆ ಬೇರೆಯಾದ ತಪಸ್ಸುಗಳು ಸ್ಮೃತಿಗ್ರಂಥಗಳಲ್ಲಿ ನಿರೂಪಿತವಾಗಿವೆ. ಅವುಗಳೆಲ್ಲವನ್ನೂ ಪ್ರಾಯಶ್ಚಿತ್ತ ಕರ್ಮಗಳೆಂದು ಕರೆಯಲಾಗುತ್ತದೆ.

ಶಾಸ್ತ್ರವಿಹಿತವಾದ ಕರ್ಮಗಳನ್ನು ಅನುಷ್ಠಾನ ಮಾಡದಿರುವುದು,[೪೨೨] ನಿಂದಾರ್ಹನಾದವನ ಸೇವೆಮಾಡುವುದು, ಇಂದ್ರಿಯಗಳನ್ನು ನಿಯಂತ್ರಣ ಮಾಡದಿರುವುದು -ಇವುಗಳಿಂದ ಮನುಷ್ಯನು ಪತಿತನಾಗಿ ಹೀನಜಂತುಗಳಲ್ಲಿ ಹುಟ್ಟುತ್ತಾನೆ. ಅದನ್ನು ಮನುಸ್ಮೃತಿಯು ಹೀಗೆ ನಿರೂಪಿಸುತ್ತದೆ-

> ಶರೀರಜೈಃ ಕರ್ಮದೋಷೈರ್ಯಾತಿ ಸ್ಥಾವರತಾಂ ನರಃ।
> ವಾಚಿಕೈಃ ಪಕ್ಷಿಮೃಗತಾಂ ಮಾನಸೈರಂತ್ಯಜಾತಿತಾಮ್॥[೪೨೩]

"ಶರೀರದಿಂದ ಉಂಟಾಗುವ ಕರ್ಮದೋಷಗಳಿಂದ ಮನುಷ್ಯನು ಅಚೇತನ ವಸ್ತುವಾಗುತ್ತಾನೆ. ವಾಚಿಕದೋಷಗಳಿಂದ ಅವನು ಪಕ್ಷಿಯೋ, ಮೃಗವೋ ಆಗುತ್ತಾನೆ. ಮಾನಸದೋಷಗಳಿಂದ ಅವನು ಕನಿಷ್ಠನಾಗಿ ಹುಟ್ಟುತ್ತಾನೆ."

ಈ ಪ್ರಕಾರ ಹೀನಜಂತುಗಳಲ್ಲಿ ಹುಟ್ಟುವಂತೆ ಮಾಡುವ ರಹಸ್ಯವಾಗಿರುವ ಮತ್ತು ಪ್ರಕಟವಾಗಿರುವ ಪಾಪಗಳನ್ನು ಶಮನಗೊಳಿಸಲು ತಪಸ್ಸು, ಸ್ವಾಧ್ಯಾಯಾದಿಗಳಿಂದ ಶರೀರವನ್ನು ದಂಡಿಸುವುದು, ಗಂಗಾಸ್ನಾನ ಮಾಡುವುದು, ಚಿನ್ನ-ಹಸು-ಭೂಮಿಯೇ

---

೪೨೦. ಸಿ.ಶಿ, ೭.೧೦

೪೨೧. ನ್ಯಾಯಕೋಶ, ಪೃ. ೫೯೨

೪೨೨. ವಿಹಿತಸ್ಯಾನನುಷ್ಠಾನಾನ್ನಿಂದ್ಯಸ್ಯ ಚ ನಿಷೇವಣಾತ್।
ಅನಿಗ್ರಹಾಚ್ಚೇಂದ್ರಿಯಾಣಾಂ ನರಃ ಪತನಮೃಚ್ಛತಿ॥ -ಶಬ್ದಕಲ್ಪದ್ರುಮಃ, ಪೃ.೩೧೯

೪೨೩. ಮನುಸ್ಮೃತಿ, ೧೨.೯

ಮೊದಲಾದವುಗಳ ದಾನಮಾಡುವುದರ ಮೂಲಕ ಪ್ರಾಯಶ್ಚಿತ್ತಕರ್ಮವನ್ನು ಬೋಧಿಸಲಾಗಿದೆ.[೪೨೪] ಒಮ್ಮೆ ಪ್ರಾಯಶ್ಚಿತ್ತ ಮಾಡಿಕೊಂಡ ವ್ಯಕ್ತಿಯು ಮತ್ತೆ ಆ ಪಾಪ ಕರ್ಮವನ್ನು ಮಾಡಬಾರದು. ಇನ್ನು ಮುಂದೆ ಒಮ್ಮೆಯೂ ಪಾಪಗಳನ್ನು ಮಾಡುವುದಿಲ್ಲವೆಂಬ ಪಶ್ಚಾತ್ತಾಪ ಬುದ್ಧಿಯಿಂದಲೇ ಪ್ರಾಯಶ್ಚಿತ್ತ ಕರ್ಮವನ್ನು ಆಚರಿಸಬೇಕು, ಇಲ್ಲವಾದರೆ ಅದು ನಿಷ್ಫಲವಾಗುತ್ತದೆ.[೪೨೫]

ಕಾರಣಾಗಮದ ಕ್ರಿಯಾಪಾದದಲ್ಲಿ- "ಪ್ರಾಯಶ್ಚಿತ್ತ ವಿಧಿಂ ವಕ್ಷ್ಯೇ ಸದಾ ಲಿಂಗಾಂಗ ಸಂಗಿನಾಮ್"[೪೨೬] (ಸದಾ ಇಷ್ಟಲಿಂಗವನ್ನು ಅಂಗದ ಮೇಲೆ ಧರಿಸಿರುವವರಿಗೆ ಪ್ರಾಯಶ್ಚಿತ್ತ ವಿಧಿಯನ್ನು ಹೇಳುತ್ತೇನೆ) ಎಂದು ಭಗವಾನ್ ಶಿವನು ವೀರಶೈವರ ಪ್ರಾಯಶ್ಚಿತ್ತ ವಿಧಿಯನ್ನು ವಿಶೇಷವಾಗಿ ನಿರೂಪಿಸಿದ್ದಾನೆ. ದೀಕ್ಷಾಸಂಪನ್ನರಾದ ವೀರಶೈವರು ತಮ್ಮ ಅಂಗದ ಮೇಲೆ ಇಷ್ಟಲಿಂಗವನ್ನು ಸದಾ ಧರಿಸಿ ಅದನ್ನು ಪೂಜಿಸಬೇಕೆಂಬುದು ನಿಯಮವಾಗಿರುತ್ತದೆ. ಈ ನಿಯಮಪಾಲನೆಯ ಸಂದರ್ಭದಲ್ಲಿ ಕೆಲವೊಮ್ಮೆ ಅನಿವಾರ್ಯದ ತಪ್ಪಿನಿಂದ ಕೆಲವು ದೋಷಗಳುಂಟಾಗುತ್ತವೆ. ವಿವಿಧ ಪ್ರಾಯಶ್ಚಿತ್ತಗಳಿಂದ ಆ ದೋಷಗಳು ನಿವಾರಣೆಯಾಗುತ್ತವೆ. ಅದರ ಸಾರವನ್ನು ಸಂಕ್ಷಿಪ್ತವಾಗಿ ಇಲ್ಲಿ ಪ್ರಸ್ತುತಪಡಿಸಲಾಗಿದೆ-

ಲಿಂಗಧಾರಿಗೆ ಕ್ಷೌರಿಕನ ಸ್ಪರ್ಶವಾದರೆ ಹಳೆಯ ಶಿವದಾರವನ್ನು ತೆಗೆದು ಹೊಸದನ್ನು ಧರಿಸಿ ಪಂಚಾಕ್ಷರೀ ಮಂತ್ರವನ್ನು ೧೦೮ ಬಾರಿ ಜಪಿಸಬೇಕು. ಇಷ್ಟಲಿಂಗಕ್ಕೆ ಕ್ಷೌರಿಕನ ಸ್ಪರ್ಶವಾದರೆ ಶ್ರೀರುದ್ರ ಮಂತ್ರಗಳನ್ನು ಜಪಿಸುತ್ತಾ ವಿಶೇಷವಾಗಿ ಪ್ರೋಕ್ಷಣೆಯನ್ನು ಮಾಡಬೇಕು. ಚಾಂಡಾಲ ಮೊದಲಾದ ಜನಗಳ ಸ್ಪರ್ಶವಾದರೆ ಶಿವದಾರವನ್ನು ತೆಗೆದು ಪವಮಾನ ಮೊದಲಾದ ಮಂತ್ರವನ್ನುಚ್ಚರಿಸುತ್ತಾ ಪ್ರೋಕ್ಷಣೆ ಮಾಡಿ, ಪಂಚಾಕ್ಷರೀ ಮಂತ್ರ ಮತ್ತು ಗಾಯತ್ರೀ ಮಂತ್ರಗಳನ್ನು ೧೦೦೮ ಸಲ ಜಪಿಸಿ ರಾತ್ರಿ ಮಾತ್ರ ಭೋಜನ ಮಾಡಬೇಕು. ದೀಕ್ಷಾ ಸಂಸ್ಕಾರವಾಗದವರು ಸವರ್ಣೀಯರೊಡನೆ ಇಲ್ಲವೆ ಅಸವರ್ಣೀಯರೊಡನೆ ಬೆರೆತರೆ ಮೂಲಮಂತ್ರವನ್ನು ೧೦೮ ಸಲ ಜಪಿಸಬೇಕು.

---

[೪೨೪] ಶೋಷಣೇನ ಶರೀರಸ್ಯ ತಪಸಾಽಧ್ಯಯನೇನ ಚ।
ಪಾಪಕೃನ್ಮುಚ್ಯತೇ ಪಾಪಾದ್ ದಾನೇನ ಚ ದಮೇನ ಚ॥
ಗಂಗಾಹ್ನಿಕಂ ದೇವಪೂಜಾ ವೇದಾಭ್ಯಾಸಃ ಸರಿತ್‌ಪ್ಲವಃ।
ನಾಶಯಂತ್ಯಾಶು ಪಾಪಾನಿ ಮಹಾಪಾತಕಜಾನ್ಯಪಿ॥
ಏತೈರ್ದ್ವಿಜಾತಯಃ ಶೋಧ್ಯಾ ವ್ರತೈರಾವಿಷ್ಕೃತೈನಸಃ।
ಅನಾವಿಷ್ಕೃತಪಾಪಾಂಸ್ತು ಮಂತ್ರೈರ್ಹೋಮೈಸ್ತು ಶೋಧಯೇತ್॥
-ವಾಚಸ್ಪತ್ಯಮ್, ಪು.೪೫೨೭

[೪೨೫] ಕೃತ್ವಾ ಪಾಪಂ ಹಿ ಸಂತಪ್ಯ ತಸ್ಮಾತ್ ಪಾಪಾತ್ ಪ್ರಮುಚ್ಯತೇ।
ನೈವಂ ಕುರ್ಯಾಂ ಪುನರಿತಿ ನಿವೃತ್ತ್ಯಾ ಪೂಯತೇ ನರಃ॥
-ಮನುಸ್ಮೃತಿ, ೧೧.೨೩೦

[೪೨೬] ಕಾ.ಆ, ಕ್ರಿ.ಪಾ, ೧೦.೨

ನಿತ್ಯಕರ್ಮ ಮಾಡುವವನ ಇಷ್ಟಲಿಂಗಪೂಜಾ ಸಮಯದಲ್ಲಿ ವ್ಯತ್ಯಾಸವುಂಟಾದರೆ, ನಿಶ್ಚಿತ ಸಂಖ್ಯೆಯಲ್ಲಿ ಎಲೆ, ಹೂಗಳು ದೊರೆಯದಿದ್ದರೆ ೧೦೮ ಸಲ ಪಂಚಾಕ್ಷರೀ ಮಂತ್ರವನ್ನು ಜಪಿಸಬೇಕು ಮತ್ತು ಪೂಜೆಮಾಡಲು ಸಾಧ್ಯವಾಗದಿದ್ದರೆ ೧೦೦೦ ಸಲ ಪಂಚಾಕ್ಷರೀ ಮಂತ್ರವನ್ನು ಜಪಿಸಬೇಕು.

ಪೂಜಾ ಕಾಲದಲ್ಲಿ ಇಷ್ಟಲಿಂಗವು ಅಕಸ್ಮಾತ್ ಕೆಳಗೆ ಬಿದ್ದರೆ ಮತ್ತೆ ಅದನ್ನು ತೆಗೆದುಕೊಂಡು ೧೦೮ ಸಲ ಪಂಚಾಕ್ಷರೀ ಮಂತ್ರವನ್ನು ಜಪಿಸಬೇಕು. ಇಷ್ಟಲಿಂಗವು ಕೆಳಗೆ ಬಿದ್ದಾಗ ಭಗ್ನವಾದರೆ ಸರ್ಜರಸದೊಂದಿಗೆ ಜೋಡಿಸಿ ತತ್ತ್ವಕಲಾನ್ಯಾಸವನ್ನು ಮಾಡಬೇಕು. ಇಷ್ಟಲಿಂಗವು ಪುಡಿಯಾಗಿದ್ದರೆ ಬೇರೊಂದು ಲಿಂಗಕ್ಕೆ ಅದರ ಕಲೆಗಳನ್ನು ಆರೋಪಿಸಿ ಗುರುವಿನ ಕೈಯಿಂದ ಅದನ್ನು ಸ್ವೀಕರಿಸಿ ಧರಿಸಬೇಕು. ಒಂದು ವೇಳೆ ಇಷ್ಟಲಿಂಗವು ಕಳೆದು ಹೋದರೆ ಪ್ರಾಣತ್ಯಾಗವನ್ನು ಮಾಡಬೇಕು. ಪ್ರಾಣ ತ್ಯಜಿಸಲು ಅಶಕ್ತನಾದರೆ ಇಪ್ಪತ್ತೊಂದು ದಿನಗಳ ಕಾಲ ನಿರಾಹಾರಿಯಾಗಿದ್ದು ಪಂಚಾಕ್ಷರೀ ಮಂತ್ರವನ್ನು ಜಪಿಸಬೇಕು ಮತ್ತು ಇಷ್ಟಲಿಂಗವನ್ನು ಹುಡುಕಬೇಕು. ಲಭ್ಯವಾದರೆ ಅದನ್ನು ಕೂಡಲೇ ಧರಿಸಿ ಗುರುಪೂಜೆಯನ್ನು ಮಾಡಬೇಕು. ಇಷ್ಟಲಿಂಗವು ದೊರೆಯದಿದ್ದಲ್ಲಿ ಭಕ್ತಿಯಿಂದ ಪ್ರಾಣತ್ಯಾಗ ಮಾಡಬೇಕು. ಪ್ರಾಣ ತ್ಯಜಿಸಲು ಅಶಕ್ತನಾದರೆ ಗುರುವಿನ ಹಸ್ತದಿಂದ ಮತ್ತೊಂದು ಲಿಂಗವನ್ನು ಪಡೆದು ಎಚ್ಚರಿಕೆಯಿಂದ ಧರಿಸಬೇಕು. ಬೇರೊಂದು ಲಿಂಗವನ್ನು ಧರಿಸಿದ ತರುವಾಯ ಅಕಸ್ಮಾತ್ತಾಗಿ ಮೊದಲಿನ ಲಿಂಗವು ದೊರೆತರೆ, ಅದನ್ನು ಗುರುವಿಗೆ ತೋರಿಸಿ ನೀರಿನಲ್ಲಿ ಹಾಕಬೇಕು.

ಇಷ್ಟಲಿಂಗವು ಕಳೆದು ಹೋದಾಗ ಭಕ್ತಿಯಿಂದ ಪ್ರಾಣವನ್ನು ತ್ಯಜಿಸಿದ್ದೇ ಆದರೆ, ಲಿಂಗವಿಲ್ಲದ ಅವನ ಅಂತ್ಯಸಂಸ್ಕಾರವನ್ನು ಹೇಗೆ ಮಾಡಬೇಕು? ಬೇರೊಂದು ಲಿಂಗವನ್ನು ಧರಿಸುವಂತಿದ್ದರೆ ಪ್ರಾಣತ್ಯಾಗ ನಿರರ್ಥಕವಾಗುತ್ತದೆ. ಹೀಗೆ ಲಿಂಗ ನಾಶವಾದ ವ್ಯಕ್ತಿಯ ವಿಷಯವಾಗಿ ಎರಡೂ ರೀತಿಯಲ್ಲಿ ದೋಷವು ಕಂಡುಬರುತ್ತದೆ ಎಂಬ ದೇವಿಯ ಜಿಜ್ಞಾಸೆಗೆ ಮಹಾದೇವನು ಹೀಗೆ ಹೇಳಿದನು- ಲಿಂಗ ನಾಶವಾದ ಕೂಡಲೇ ಪ್ರಾಣತ್ಯಾಗ ಮಾಡುವ ಭಕ್ತನಿಗೆ ತತ್‌ಕ್ಷಣವೇ ಮೋಕ್ಷಪ್ರಾಪ್ತಿಯಾಗುತ್ತದೆ. ಆದುದರಿಂದ ಅವನ ಪ್ರಾಣತ್ಯಾಗವು ನಿರರ್ಥಕವಾಗುವುದಿಲ್ಲ. ಅಂತ್ಯಸಂಸ್ಕಾರದ ವೇಳೆಯಲ್ಲಿ ಕಳೆದು ಹೋಗಿದ್ದ ಲಿಂಗದ ಕಲೆಗಳನ್ನು ಬೇರೊಂದು ಲಿಂಗದಲ್ಲಿ ಆವಾಹನೆ ಮಾಡಿ ಗುರುವಿಗೆ ಅದನ್ನು ಕೊಡಬೇಕು. ಈ ಪ್ರಕಾರದಲ್ಲಿ ಗುರುವು ನೀಡಿದ ಬೇರೊಂದು ಲಿಂಗವನ್ನು ಮೃತನ ಶರೀರಕ್ಕೆ ಕಟ್ಟಿ ಮೃತನ ಶರೀರದ ಸಂಸ್ಕಾರ ಮಾಡಬೇಕು. ಆದುದರಿಂದ ವೀರಶೈವರು ತಮ್ಮ ಇಷ್ಟಲಿಂಗವನ್ನು ಪ್ರಾಣದಂತೆ ಧರಿಸಿಕೊಳ್ಳಬೇಕು.[೪೨೭] ಇದು ವೀರಶೈವರ ಪ್ರಾಯಶ್ಚಿತ್ತವಿಧಿ. ಆದುದರಿಂದ ಈ ಎಲ್ಲ ಪ್ರಾಯಶ್ಚಿತ್ತ ಕರ್ಮಗಳ ಅನುಷ್ಠಾನದ ಕಾಲದಲ್ಲಿ- "ಪ್ರಾಯಶ್ಚಿತ್ತೇಷು ಸರ್ವೇಷಾಂ ಭಸ್ಮಧಾರ್ಯಂ ಯಥಾವಿಧಿ" ಎಂಬ ಪೂರ್ವೋಕ್ತವಾದ ಶ್ರೀ ರೇಣುಕ ಭಗವತ್ಪಾದರ ಅಪ್ಪಣೆಯ ಮೇರೆಗೆ ವಿಧಿವತ್ತಾಗಿ ಭಸ್ಮಧಾರಣೆ ಮಾಡಬೇಕು.

---

[೪೨೭] ಕಾ.ಆ, ೧೦.೧-೪೫

ಹೀಗೆ ಸದಾಶಿವನ ಅಘೋರಮುಖದಿಂದ ಉದ್ಭವಿಸಿದ ಕೆಂಪು ಬಣ್ಣದ ಸುರಭಿ ಎಂಬ ಹೆಸರಿನ ಗೋವಿನ ಗೋಮಯದಿಂದ ತಯಾರಿಸಿದ, ಪ್ರಾಯಶ್ಚಿತ್ತ ಕರ್ಮಗಳಲ್ಲಿ ಧರಿಸಬೇಕಾದ, ಪಾಪಗಳನ್ನು ಹೋಗಲಾಡಿಸುವ ಅಥವಾ ಭಕ್ಷಿಸುವುದನ್ನು ಭಸ್ಮ ಎಂದು ಕರೆಯಲಾಗಿದೆ.

೪. ಕ್ಷಾರ

“ಕ್ಷಾರಂ ತತ್ಪುರುಷಾತ್ತಥಾ”[೪೨೮] ಎಂಬ ಶ್ರೀ ರೇಣುಕ ಭಗವತ್ಪಾದರ ಉಕ್ತಿಯಂತೆ ಸದಾಶಿವನ ತತ್ಪುರುಷಮುಖದಿಂದ ಆವಿರ್ಭವಿಸಿದ ಬಿಳಿಯ ಬಣ್ಣದ ಸುಶೀಲ ಎಂಬ ಹೆಸರಿನ ಗೋವಿನ ಗೋಮಯದಿಂದ ನಿರ್ಮಾಣವಾದ ಭಸ್ಮವೇ ‘ಕ್ಷಾರ’ವೆಂದು ಕರೆಯಲ್ಪಟ್ಟಿದೆ. ಉಪನಿಷತ್ತುಗಳಲ್ಲಿ ಹೀಗೆ ನಿರೂಪಿತವಾಗಿದೆ- “ತತ್ಪುರುಷಾದ್ವಾಯುಃ ತಸ್ಮಾಚ್ಛಾಂತಿಃ ತಸ್ಯಾಃ ಶ್ವೇತವರ್ಣಾ ಸುಶೀಲಾ ತಸ್ಯಾಃ ಗೋಮಯೇನ ಕ್ಷಾರಂ ಜಾತಮ್”[೪೨೯] (ಶಿವನ ತತ್ಪುರುಷಮುಖದಿಂದ ವಾಯು, ಅದರಿಂದ ಶಾಂತಿ ಎಂಬ ಕಲೆ, ಆ ಕಲೆಯಿಂದ ಬಿಳಿ ಬಣ್ಣದ ಸುಶೀಲಾ ಎಂಬ ಗೋವು, ಅದರ ಗೋಮಯದಿಂದ ‘ಕ್ಷಾರ’ವೆಂಬ ಭಸ್ಮವು ಉಂಟಾಗುತ್ತದೆ). ಸದಾಶಿವನ ಪೂರ್ವದಿಕ್ಕಿನ ಮುಖವೇ ತತ್ಪುರುಷಮುಖ. “ಸ ಏವ ಪುರುಷಃ ತತ್ಪುರುಷಃ” ಎಂಬ ನಿರ್ವಚನದಂತೆ ಶಿವನೇ ಪುರುಷ ಶಬ್ದವಾಚ್ಯನಾಗಿದ್ದಾನೆ. ಆದುದರಿಂದ ಪತಂಜಲಿ ಮಹರ್ಷಿಯು- “ಕ್ಲೇಶಕರ್ಮವಿಪಾಕಾಶಯೈರಪರಾಮೃಷ್ಟಃ ಪುರುಷವಿಶೇಷ ಈಶ್ವರಃ”[೪೩೦] ಎಂದು ಶಿವನು ಕ್ಲೇಶರಹಿತನಾಗಿರುವುದರಿಂದ ಅವನು ವಿಶೇಷ ಪುರುಷನೆಂದು ಹೇಳಿದ್ದಾರೆ.

ಮಹಾನಾರಾಯಣೋಪನಿಷತ್ತಿನಲ್ಲಿ- “ತತ್ಪುರುಷಾಯ ವಿದ್ಮಹೇ ಮಹಾದೇವಾಯ ಧೀಮಹಿ. ತನ್ನೋ ರುದ್ರಃ ಪ್ರಚೋದಯಾತ್”[೪೩೧] ಎಂದು ತತ್ಪುರುಷ ಸ್ವರೂಪದ ವರ್ಣನೆಯ ಮೂಲಕ ಶಿವನಸ್ತುತಿಯನ್ನು ಮಾಡಲಾಗಿದೆ.

ಶ್ರೀ ವೃಷಭಪಂಡಿತ ಶಿವಾಚಾರ್ಯರು- “ತತ್ಪುರುಷಾಯ ವಿದ್ಮಹೇ -ತತ್ ಸಂಜ್ಞೆಯ ಮುಖವುಳ್ಳ ಶಿವನನ್ನು ಪೂಜಿಸುತ್ತೇನೆ. ಮಹಾದೇವಾಯ- ಸರ್ವದೇವತಾಧಿಕಾಯ ಧೀಮಹಿ ಧ್ಯಾಯೇಮ. ಎಲ್ಲ ದೇವತೆಗಳಿಗಿಂತಲೂ ಹೆಚ್ಚಿನವನಾದ ಶಿವನನ್ನು ಧ್ಯಾನಿಸುತ್ತೇನೆ ಎಂದು ಅಂತರಂಗ-ಬಹಿರಂಗ ಉಪಾಸನೆಗಳೆರಡೂ ಉಕ್ತವಾಗಿವೆ. “ತನ್ನೋ ತದ್ ಉಪಾಸನಮ್, ರುದ್ರಃ ಶಿವಃ ಪ್ರಚೋದಯಾದ್ ನಿರ್ವರ್ತಯತು”[೪೩೨]

---

[೪೨೮] ಸಿ.ಶಿ, ೭.೮

[೪೨೯] ಬೃ.ಜಾ.ಉ, ೧.೧

[೪೩೦] ಯೋಗಸೂತ್ರ, ೧.೨೪

[೪೩೧] ಮ.ನಾ.ಉ, ೧೮

[೪೩೨] ಮ.ನಾ.ಉ, ೧೮, ಶೈವಭಾಷ್ಯ, ಪು. ೮೦

(ಆ ಉಪಾಸನೆಯನ್ನು ಶಿವನು ನೆರವೇರಿಸಲಿ) -ಎಂದು ಮಂತ್ರಕ್ಕೆ ವ್ಯಾಖ್ಯೆ ಮಾಡಿದ್ದಾರೆ. ಇದರಿಂದ ಶಿವನ ಪುರುಷ ಶ್ರೇಷ್ಠತ್ವ, ದೇವದೇವತ್ವ ಮತ್ತು ಅಂತರಂಗ-ಬಹಿರಂಗ ಉಪಾಸ್ಯವು ಸಿದ್ಧವಾಗುತ್ತದೆ.

ಈ ತತ್ಪುರುಷ ಶಿವನ ಸೃಷ್ಟ್ಯಾದಿಗಳಿಂದ ಹೇಗೆ ವಾಯು, ಶಾಂತಿ, ಕಲಾದಿಗಳು ಉದ್ಭವಿಸಿದವೋ ಹಾಗೆಯೇ ಬಿಳಿಯ ಬಣ್ಣದ ಸುಶೀಲ ಎಂಬ ಗೋವೂ ಸಹ ಉತ್ಪನ್ನವಾಯಿತು. "ಶೋಭನಂ ಶೀಲಂ ಯಸ್ಯಾಃ ಸಾ ಸುಶೀಲಾ" ಎಂಬ ನಿರ್ವಚನದಂತೆ ಎಲ್ಲ ಪ್ರಾಣಿಗಳಲ್ಲಿಯೂ ಸಹ ಉತ್ಕೃಷ್ಟವಾದ ಚಾರಿತ್ರ್ಯದಿಂದ ಕೂಡಿರುವುದರಿಂದ ಅವಳ ಹೆಸರು ಸುಶೀಲಾ ಎಂದಾಯಿತು. ಇಂದಿನ ಶ್ವೇತವರ್ಣದ ಗೋವುಗಳೆಲ್ಲವೂ ಆ ಸುಶೀಲಾ ಎಂಬ ಗೋವಿನ ಸಂತಾನಗಳೆಂದು ತಿಳಿಯಬೇಕು. ಇಂತಹ ಸುಶೀಲಾ ಎಂಬ ಹೆಸರಿನ ಗೋವಿನ ಗೋಮಯದಿಂದ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದ ಭಸ್ಮವೇ 'ಕ್ಷಾರ'ವೆಂದು ಕರೆಯಲ್ಪಟ್ಟಿದೆ.

ಕ್ಷಾರದ ಆಪತ್‌ಕ್ಷಾರಣತ್ವ

"ಕ್ಷಾರಣಾತ್ ಕ್ಷಾರಮಾಪದಾಮ್"[೪೩೩] ಎಂಬ ರೇಣುಕ ಭಗವತ್ಪಾದರ ಉಕ್ತಿಯಂತೆ ಆಧಿಭೌತಿಕ, ಆಧ್ಯಾತ್ಮಿಕ ಮತ್ತು ಆಧಿದೈವಿಕವೆಂಬ ಮೂರು ಬಗೆಯ ಕಷ್ಟಗಳಿಂದ ಉಂಟಾಗುವ ತೊಂದರೆಗಳನ್ನು ನಾಶಗೊಳಿಸುವುದರಿಂದ ಇದಕ್ಕೆ 'ಕ್ಷಾರ'ವೆಂದು ಹೆಸರು. "ಆಪದರ್ಥಂ ಧನಂ ರಕ್ಷೇತ್" (ಆಪತ್ಕಾಲಕ್ಕಾಗಿ ಹಣವನ್ನು ರಕ್ಷಿಸಬೇಕು), "ಧನೈರಾಪದಂ ಮಾನವಾ ನಿಸ್ತರಂತಿ" (ಮಾನವರು ಧನದಿಂದ ಆಪತ್ತುಗಳನ್ನು ದಾಟುತ್ತಾರೆ) ಇತ್ಯಾದಿ ಸುಭಾಷಿತದಂತೆ ಆಪತ್ತುಗಳನ್ನು ಎದುರಿಸಲು ಹಣವೇ ಸಾಧನವೆಂದು ಹೆಚ್ಚು ಜನರು ಧನಾರ್ಜನೆಯಲ್ಲಿಯೇ ಆಸಕ್ತರಾಗಿದ್ದಾರೆ. ಆದರೆ ಮನುಷ್ಯನು ಜೀವಿಸಲು ಹಣದ ಅವಶ್ಯತೆಯಿದ್ದರೂ ಸಹ ಹಣದಿಂದಲೇ ಎಲ್ಲ ಆಪತ್ತುಗಳು ನಾಶವಾಗುವುದಿಲ್ಲವೆಂಬುದು ಧ್ಯೇಯ.

ಅಲ್ಲದೆ, ಲೌಕಿಕವಾದ ಆಪತ್ತುಗಳನ್ನು ಹಣದಿಂದ ನಿವಾರಿಸಲು ಸಾಧ್ಯವಾದರೂ ಸಹ ಪಾರಲೌಕಿಕವಾದ ವಿಪತ್ತುಗಳನ್ನು ಹಣದಿಂದ ನಿವಾರಿಸಲು ಎಂದಿಗೂ ಸಾಧ್ಯವಿಲ್ಲ. ಆದುದರಿಂದಲೇ- "ಪರಲೋಕೇ ಧನಂ ಧರ್ಮಃ" (ಪರಲೋಕದಲ್ಲಿ ಧರ್ಮವೇ ಧನ) ಎಂದು ಹೇಳಿರುವುದು. ತನ್ನ ಇಷ್ಟದೇವತೆಗೆ ಪ್ರಿಯವಾದ ವಸ್ತುಗಳನ್ನು ಶ್ರದ್ಧೆಯಿಂದ ಸಮರ್ಪಿಸುವುದೇ ಧಾರ್ಮಿಕನ ಲಕ್ಷಣ. ಶೈವ- ವೀರಶೈವರ ಇಷ್ಟದೇವತೆ ಶಿವ. ಶಿವನಿಗೆ ಅತ್ಯಂತ ಪ್ರಿಯವಾದ ವಸ್ತುವೆಂದರೆ ಭಸ್ಮವೇ ಆಗಿದೆ. "ಭಸ್ಮ ಯೇ ವಿನಿಂದಂತಿ ನಿಂದಂತಿ ಶಿವಮೇವ ತೇ" (ಯಾರು ಭಸ್ಮವನ್ನು ನಿಂದಿಸುವರೋ ಅವರು ಶಿವನನ್ನೇ ನಿಂದಿಸಿದಂತೆ) ಎಂಬ ಉಕ್ತಿಯಲ್ಲಿ ಭಸ್ಮ-ಶಿವ ಇವೆರಡರ ತಾದಾತ್ಮ್ಯವು

---

[೪೩೩] ಸಿ.ಶಿ, ೭.೫

ಪ್ರತಿಪಾದಿತವಾಗಿದೆ. ಆದುದರಿಂದ ಭಸ್ಮಧಾರಣೆಯಿಂದ ಶಿವಾನುಗ್ರಹ, ಆ ಶಿವಾನುಗ್ರಹದಿಂದ ವಿಪತ್ತುಗಳು ನಾಶವಾಗುತ್ತವೆ.

ಕಾಮ್ಯಕರ್ಮಗಳಲ್ಲಿ ಕ್ಷಾರದ ಉಪಯೋಗ

"ಕ್ಷಾರಂ ಕಾಮ್ಯೇಷು ಸರ್ವದಾ"[೪೩೪] ಎಂಬ ಶ್ರೀ ರೇಣುಕಾಚಾರ್ಯರ ಉಕ್ತಿಯಂತೆ ಎಲ್ಲ ಬಗೆಯ ಕಾಮ್ಯಕರ್ಮಗಳ ಅನುಷ್ಠಾನದ ಸಂದರ್ಭದಲ್ಲಿ 'ಕ್ಷಾರ'ವೆಂಬ ಹೆಸರಿನ ಭಸ್ಮವನ್ನು ಉಪಯೋಗ ಮಾಡಲಾಗುತ್ತದೆ.

> **ಯತ್ಕಿಂಚಿತ್ ಫಲಮುದ್ದಿಶ್ಯ ಯಜ್ಞದಾನಜಪಾದಿಕಮ್।**
> **ಕ್ರಿಯತೇ ಕಾಯಿಕಂ ಯಚ್ಚ ತತ್ಕಾಮ್ಯಂ ಪರಿಕೀರ್ತಿತಮ್॥**[೪೩೫]

ಎಂಬ ಪ್ರಮಾಣ ವಾಕ್ಯದಂತೆ ಫಲಾಪೇಕ್ಷೆಯಿಂದ ಆಚರಿಸುವ ಯಜ್ಞ, ದಾನ, ಜಪಾದಿ ಕರ್ಮಗಳು ಕಾಮ್ಯಕರ್ಮಗಳು. ಸಾಮಾನ್ಯವಾಗಿ ಎಲ್ಲರೂ ಪಶು, ಪುತ್ರ, ಧನಾದಿ ಐಹಿಕ ಫಲಗಳನ್ನು ಮತ್ತು ಸ್ವರ್ಗಾದಿ ಪಾರಲೌಕಿಕ ಫಲಗಳನ್ನು ಇಚ್ಛಿಸುತ್ತಾರೆ. "ಉದ್ಯಮೇನ ಹಿ ಸಿದ್ಧ್ಯಂತಿ ಕಾರ್ಯಾಣಿ ನ ಮನೋರಥೈಃ" ಎಂಬ ಸುಭಾಷಿತದಂತೆ ಅಪೇಕ್ಷಾ ಮಾತ್ರದಿಂದಲೇ ಯಾವುದೇ ಸಂಕಲ್ಪವು ಸಿದ್ಧಿಸುವುದಿಲ್ಲ. ಆದುದರಿಂದ ಕರ್ಮವನ್ನು ಅವಶ್ಯವಾಗಿ ಮಾಡಲೇಬೇಕು. ಆಯಾ ಫಲವನ್ನು ಪಡೆಯುವ ಕಾಮ್ಯಕರ್ಮಗಳನ್ನು ಆಚರಣೆ ಮಾಡುವ ಸಂದರ್ಭದಲ್ಲಿ, 'ಕ್ಷಾರ'ವೆಂಬ ಭಸ್ಮಧಾರಣೆಯಿಂದ ಶೀಘ್ರವಾಗಿ ಮನೋರಥದ ಸಿದ್ಧಿಯಾಗುತ್ತದೆ. ಆ ಕಾರಣ ಆಚಾರ್ಯರ ಅಪ್ಪಣೆಯ ಮೇರೆಗೆ ಕಾಮ್ಯಕರ್ಮಗಳ ಅನುಷ್ಠಾನದ ಸಂದರ್ಭಗಳಲ್ಲಿ ಶಾಸ್ತ್ರೋಕ್ತ ವಿಧಿಯಂತೆ 'ಕ್ಷಾರ' ಭಸ್ಮವನ್ನು ಧರಿಸಬೇಕು.

ಹೀಗೆ ಸದಾಶಿವನ ತತ್ಪುರುಷಮುಖದಿಂದ ಉದ್ಭವಿಸಿದ ಶ್ವೇತವರ್ಣದ ಸುಶೀಲಾ ಎಂಬ ಗೋವಿನ ಗೋಮಯದಿಂದ ತಯಾರಿಸಿದ, ಕಾಮ್ಯಕರ್ಮಗಳ ಅನುಷ್ಠಾನದ ಸಂದರ್ಭದಲ್ಲಿ ಧರಿಸುವ, ಎಲ್ಲ ಬಗೆಯ ವಿಪತ್ತುಗಳನ್ನು ನಾಶಗೊಳಿಸುವ ಭಸ್ಮವು 'ಕ್ಷಾರ'ವೆಂದು ಹೇಳಲ್ಪಟ್ಟಿದೆ.

೫. ರಕ್ಷಾ

"ರಕ್ಷಾ ಚೇಶಾನವಕ್ತ್ರಾಚ್ಚ"[೪೩೬] ಎಂಬ ಉಕ್ತಿಯಂತೆ ಸದಾಶಿವನ ಈಶಾನಮುಖದಿಂದ ಹೊರಹೊಮ್ಮಿದ ಚಿತ್ರವರ್ಣದ ಸುಮನ ಎಂಬ ಹೆಸರಿನ ಗೋವಿನ ಗೋಮಯದಿಂದ ತಯಾರಿಸಿದ ಭಸ್ಮವೇ 'ರಕ್ಷಾ' ಎಂದು ಹೇಳಲ್ಪಟ್ಟಿದೆ. ಅದನ್ನು ಉಪನಿಷತ್ತಿನಲ್ಲಿ- "ಈಶಾನಾದಾಕಾಶಮ್ ತಸ್ಮಾಚ್ಛಾಂತ್ಯತೀತಾ

---

[೪೩೪] ಸಿ.ಶಿ, ೭.೯

[೪೩೫] ಶಬ್ದಕಲ್ಪದ್ರುಮ, ಪು. ೯೨

[೪೩೬] ಸಿ.ಶಿ, ೭.೮

ತಸ್ಯಾಶ್ಚಿತ್ರವರ್ಣಾ ಸುಮನಾಃ ತದ್ ಗೋಮಯೇನ ರಕ್ಷಾ ಜಾತಾ"[೪೩೭] (ಪರಶಿವನ ಈಶಾನಮುಖದಿಂದ ಆಕಾಶ, ಆಕಾಶದಿಂದ ಶಾಂತ್ಯತೀತ ಕಲೆ, ಆ ಕಲೆಯಿಂದ ಚಿತ್ರವರ್ಣದ ಸುಮನಾ ಎಂಬ ಗೋವು, ಆ ಗೋವಿನ ಗೋಮಯದಿಂದ ರಕ್ಷಾ ಎಂಬ ಭಸ್ಮದ ಉತ್ಪತ್ತಿಯಾಯಿತು). ಸದಾಶಿವನ ಊರ್ಧ್ವಭಾಗದ ಹರಿದ್ವರ್ಣದ ಮುಖವೇ ಈಶಾನಮುಖ. ಶಿವನು ಎಲ್ಲ ಚರಾಚರವಸ್ತುಗಳ ನಿಯಾಮಕನಾಗಿರುವುದರಿಂದ ಈಶಾನ ಎಂದು ಹೆಸರು. ಅದರ ಸ್ವರೂಪವು- "ಈಶಾನಃ ಸರ್ವವಿದ್ಯಾನಾಮೀಶ್ವರಃ ಸರ್ವಭೂತಾನಾಂ ಬ್ರಹ್ಮಾಧಿಪತಿರ್ಬ್ರಹ್ಮಣೋಽಧಿಪತಿರ್ಬ್ರಹ್ಮಾ ಶಿವೋ ಮೇ ಅಸ್ತು ಸದಾಶಿವೋಽಮ್"[೪೩೮] ಎಂದು ಮಹಾನಾರಾಯಣೋಪನಿಷತ್ತಿನಲ್ಲಿ ನಿರೂಪಿತವಾಗಿದೆ.

ಶ್ರೀವೃಷಭಪಂಡಿತ ಶಿವಾಚಾರ್ಯರು ಈ ಉಪನಿಷತ್ತಿನ ಮಂತ್ರವನ್ನು ಹೀಗೆ ವ್ಯಾಖ್ಯಾನ ಮಾಡಿದ್ದಾರೆ- "ಈಶಾನಃ ಸರ್ವವಿದ್ಯಾನಾಮ್-ವೇದಾಗಮ, ಸ್ಮೃತಿ, ಪುರಾಣಾದಿಗಳ ನಿಯಾಮಕನು. ಇದರಿಂದ ಶಿವನು ಎಲ್ಲ ವಿದ್ಯೆಗಳ ಕರ್ತೃತ್ವವೆಂಬುದನ್ನು ಹೇಳಿದಂತಾಯಿತು. "ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ" ಎಂಬ ಶ್ರುತಿವಾಕ್ಯದಲ್ಲಿರುವ 'ಚ'ಕಾರಕ್ಕೆ ಸಮುಚ್ಚಯಾರ್ಥವನ್ನು ಹೇಳದಿರುವುದರಿಂದ ವೇದವನ್ನು ಹೊರತುಪಡಿಸಿ ಎಲ್ಲ ಶಾಸ್ತ್ರಗಳನ್ನು ಚತುರ್ಮುಖ ಬ್ರಹ್ಮನಿಗೆ ನೀಡಿದನೆಂದು ಸೂಚಿತವಾಗುತ್ತದೆ. "ಏಕೋ ವಿಷ್ಣುರ್ಮಹದ್ ಭೂತಂ ಪೃಥಗ್‌ಭೂತಾನ್ಯನೇಕಶಃ" ಎಂಬ ಮಹಾಭಾರತದ ವಾಕ್ಯದಂತೆ ವಿಷ್ಣುವೂ ಸಹ ಪಂಚಮಹಾಭೂತಾವಿಷ್ಟನೆಂದು ಹೇಳುವುದರಿಂದ ವಿಷ್ಣುವೇ ಮೊದಲಾದ ಎಲ್ಲ ಜೀವಿಗಳ ಪ್ರಭು ಶಿವನೆಂದರ್ಥ. ಬ್ರಹ್ಮಾಧಿಪತಿ ಎಂದರೆ ಬ್ರಾಹ್ಮಣರಿಗೆ ಅಧಿಪತಿ ಎಂದರ್ಥ. "ಬ್ರಹ್ಮಾ ವಿಪ್ರಃ ಪ್ರಜಾಪತಿಃ" ಎಂದು ನಾನಾರ್ಥರತ್ನಮಾಲೆಯಲ್ಲಿದೆ. "ತ್ವಂ ದೇವಾನಾಂ ಬ್ರಾಹ್ಮಣಾನಾಮಧಿಪತಿರ್ವಿಷ್ಣುಃ ಕ್ಷತ್ರಿಯಾಣಾಮಧಿಪತಿಃ" ಎಂದು ಸಾಮವೇದದಲ್ಲಿ ಉಕ್ತವಾಗಿದೆ. "ಬ್ರಾಹ್ಮಣಾನಾಂ ಶಿವೋ ದೇವಃ ಕ್ಷತ್ರಿಯಾಣಾಂ ತು ಮಾಧವಃ" (ಶಿವನು ಬ್ರಾಹ್ಮಣರ ದೇವತೆ, ವಿಷ್ಣುವು ಕ್ಷತ್ರಿಯರ ದೇವತೆ) ಎಂದು ಮನುಸ್ಮೃತಿಯಲ್ಲಿ ಕಂಡುಬರುತ್ತದೆ. ಬ್ರಹ್ಮಣಃ= ಚತುರ್ಮುಖ ಬ್ರಹ್ಮನ, ಅಧಿಪತಿಃ=ಪ್ರಭು. ಇದು ನವಬ್ರಹ್ಮರಿಗೂ ಅನ್ವಯವಾಗುತ್ತದೆ. ಬ್ರಹ್ಮ ಅಂದರೆ ಬ್ರಹ್ಮಪದದಿಂದ ಕರೆಯಲ್ಪಡುವ ಶಿವನು ನನಗೆ ಮಂಗಳವನ್ನುಂಟು ಮಾಡಲಿ. ಆ ಶಿವನು ಎಂಥವನು? ಎಂಬ ಪ್ರಶ್ನೆಗೆ ಓಂಕಾರ ವಾಚ್ಯವೆಂದು ಉತ್ತರಿಸ ಲಾಗಿದೆ. ಸದಾಶಿವನು ಮಹಾಕೈಲಾಸನಿವಾಸಲೀಲಾಮಂಗಲ ಶರೀರವುಳ್ಳವನು. ಇದರಿಂದ ಶಿವನ ಚಿತ್‌ಶಕ್ತಿಯ ಅವಿಚ್ಛಿನ್ನತ್ವ ಮತ್ತು ಸದಾಶಿವನಿಂದ ವಶೀಕೃತವಾಗಿರುವ ಮಾಯಾತ್ವವು ಬೋಧಿಸಲ್ಪಡುತ್ತವೆ. ಶಿವನು ಪರಮಾನಂದ ರೂಪದಿಂದ ನಿರ್ವಿಕಾರನಾಗುತ್ತಾನೆ.

---

[೪೩೭] ಬೃ.ಜಾ.ಉ, ೧.೧

[೪೩೮] ಮಹಾನಾರಾಯಣೋಪನಿಷತ್, ೧೯

"ನಿಸ್ತ್ರೈಗುಣ್ಯೇ ಶಿವಾಯ ನಮಃ" ಎಂದು ಶಿವಮಹಿಮ್ನಸ್ತೋತ್ರದಲ್ಲಿ ನಿರೂಪಿತವಾಗಿರುವುದನ್ನು ಕೇಳಿದ್ದೇವೆ. ಸಜ್ಜನರ ಮನಸ್ಸುಗಳನ್ನು ಪ್ರವೇಶಿಸುವುದರಿಂದಲೂ, ಸಜ್ಜನರ ಮನಸ್ಸಿನಲ್ಲಿ ವಾಸಿಸುವುದರಿಂದಲೂ 'ಶೇತೇ ಶಿವಃ' ಎಂದು ಕರೆಯಲ್ಪಡುತ್ತಾನೆ. ಈ ರೀತಿಯಾದ ಶಿವನು ನನ್ನ ಮನಸ್ಸಿನಲ್ಲಿ ಸದಾ ನೆಲೆಸಲಿ ಎಂಬ ಭಕ್ತನ ಪ್ರಾರ್ಥನಾ ಮಂತ್ರವಿದು. ಹೀಗೆ ಈ ಮಂತ್ರವನ್ನು ವ್ಯಾಖ್ಯಾನಿಸಿದ್ದಾರೆ.[೪೩೯] ಇದರಿಂದ ಶಿವನು ಸರ್ವಶಾಸ್ತ್ರಜನಕನೆಂದು, ಸರ್ವದೇವಾದಿಗಳನ್ನು ನಿಯಂತ್ರಣ ಮಾಡುವವನೆಂದೂ ಮತ್ತು ಓಂಕಾರರೂಪನೆಂದೂ ಸಿದ್ಧವಾಗುತ್ತದೆ.

ಇಂತಹ ಶಿವನ ಈಶಾನಮುಖದಿಂದ ಸೃಷ್ಟಿಯ ಆದಿಯಲ್ಲಿ ಹೇಗೆ ಆಕಾಶ, ಶಾಂತ್ಯತೀತ ಕಲಾದಿಗಳು ಉದ್ಭವಿಸಿದವೋ ಹಾಗೆಯೇ ಚಿತ್ರವರ್ಣದ ಸುಮನಾ ಎಂಬ ಹೆಸರಿನ ಗೋವೂ ಸಹ ಉತ್ಪನ್ನವಾಯಿತು. "ಶೋಭನಂ ಮನೋ ಯಸ್ಯಾಃ ಸಾ ಸುಮನಾಃ" (ಯಾರ ಮನಸ್ಸು ನಿರ್ಮಲವಾಗಿದೆಯೋ ಅವಳು ಸುಮನಾ) ಎಂಬ ನಿರ್ವಚನದಂತೆ ಎಲ್ಲ ಪ್ರಾಣಿಗಳಲ್ಲಿಯೂ ಇದರ ಅತಿಶಯವಾದ ಸತ್ತ್ವವು ಧ್ವನಿತವಾಗುತ್ತದೆ. ಇಂದಿನ ಚಿತ್ರವರ್ಣದ ಯಾವ ಗೋವುಗಳಿವೆಯೋ ಅವೆಲ್ಲವೂ ಅದರ ಸಂತಾನರೂಪವೇ ಆಗಿವೆ. ಆದುದರಿಂದಲೇ ಇವುಗಳೆಲ್ಲವೂ ಸುಮನಾ ಎಂಬ ಹೆಸರಿನಿಂದಲೇ ವ್ಯವಹರಿಸಲ್ಪಡುತ್ತಿವೆ. ಈ ಗೋವುಗಳ ಗೋಮಯದಿಂದ ತಯಾರಿಸಿದ ಭಸ್ಮವೇ 'ರಕ್ಷಾ' ಎಂದು ಕರೆಯಲ್ಪಟ್ಟಿದೆ.

'ರಕ್ಷಾ' ಭಸ್ಮದ ಪರಿರಕ್ಷಕತ್ವ

"ರಕ್ಷಣಾತ್ ಸರ್ವಭೂತೇಭ್ಯೋ ರಕ್ಷೇತಿ ಪರಿಗೀಯತೇ"[೪೪೦] ಎಂಬ ಶ್ರೀ ರೇಣುಕಾಚಾರ್ಯರ ಉಕ್ತಿಯಂತೆ ಎಲ್ಲ ಭೂತಗಳಿಂದ ಕಾಪಾಡುತ್ತದೆ ಎನ್ನುವ ಕಾರಣ ಇದಕ್ಕೆ 'ರಕ್ಷಾ' ಎಂದು ಹೆಸರು ಬಂದಿತು. ಬೃಹಜ್ಜಾಬಾಲೋಪನಿಷತ್ತಿನಲ್ಲಿ- "ಭೂತ, ಪ್ರೇತ, ಪಿಶಾಚಿ, ಬ್ರಹ್ಮರಾಕ್ಷಸ, ಅಪಸ್ಮಾರ ಮೊದಲಾದವುಗಳಿಂದ ಹೆದರಿದವರನ್ನು, ರಕ್ಷಿಸುವುದರಿಂದ ರಕ್ಷಾ ಎಂದು ಹೆಸರು"[೪೪೧] ಎಂದು ಅದರ ರಕ್ಷಣ ಪ್ರಕಾರವನ್ನು ವಿಸ್ತರಿಸಿ ನಿರೂಪಿಸಿದೆ. ರಕ್ಷಾ ಎಂಬ ಭಸ್ಮವು ತಮಗೆ ಬಂದೊದಗಿರುವ ಆಧ್ಯಾತ್ಮಿಕ, ಆಧಿಭೌತಿಕ ಮತ್ತು ಆಧಿದೈವಿಕಗಳೆಂಬ ತ್ರಿವಿಧ ದುಃಖಗಳಿಂದ ಕಾಪಾಡುತ್ತದೆ ಎಂದು ಮೇಲಿನ ವಿವರಣೆಯಿಂದ ತಿಳಿದುಬರುತ್ತದೆ. ಶ್ರೀ ನೀಲಕಂಠ ಶಿವಾಚಾರ್ಯರು-

ಜ್ವರರಕ್ಷಃ ಪಿಶಾಚಾಶ್ಚಾಪ್ಯಸುರಾ ಯಾತುಧಾನಕಾಃ।
ಕುಮಾರಗ್ರಹಭೂತಾಶ್ಚ ಕೂಷ್ಮಾಂಡಾ ಡಾಕಿನೀಗಣಾಃ॥

---

[೪೩೯] ಮ.ನಾ.ಉ, ೧೯, ಶೈ.ಭಾ, ಪು. ೮೧-೮೨

[೪೪೦] ಸಿ.ಶಿ, ೭.೫

[೪೪೧] ಬೃ.ಜಾ.ಉ, ೧.೧

ಬ್ರಹ್ಮರಾಕ್ಷಸಮುಖ್ಯಾಶ್ಚ ಪೂತನಾಕುಷ್ಠಗುಲ್ಮಕಾಃ।
ಭಗಂದರಾಣಿ ಸರ್ವಾಣಿ ಹ್ಯಶೀತಿರ್ವಾತರೋಗಕಾಃ॥
ಚತುಷಷ್ಟಿಃ ಪಿತ್ತರೋಗಾಃ ಶ್ಲೇಷ್ಮಸಪ್ತತಿಪಂಚಕಾಃ।
ವ್ಯಾಘ್ರಸರ್ಪಭಯಂ ಚೈವಾಪ್ಯನ್ಯೇ ದುಷ್ಟಮೃಗಾ ಅಪಿ॥
ಭಸ್ಮಸ್ನಾನೇನ ನಶ್ಯಂತಿ ಸಿಂಹೇನೇವ ಮೃಗಾದಯಃ॥"[೪೪೨]

"ಜ್ವರ, ರಕ್ಷ, ಪಿಶಾಚಿಗಳು, ರಾಕ್ಷಸರು, ಬಾಲಗ್ರಹಭೂತಗಳು, ಕೂಷ್ಮಾಂಡಾದಿ ಡಾಕಿಣೀಗಣಗಳು, ಬ್ರಹ್ಮರಾಕ್ಷಸ ಪ್ರಮುಖರು, ರಾಕ್ಷಸಿ, ಕುಷ್ಠ, ಗುಲ್ಮರೋಗ, ಭಗಂದರ ಮೊದಲಾದ ಎಲ್ಲ ೮೦ ವಾತರೋಗಗಳು, ೬೪ ಪಿತ್ತರೋಗಗಳು, ಶ್ಲೇಷ್ಮದಿಂದುಂಟಾಗುವ ೭೫ ರೋಗಗಳು, ಹುಲಿ, ಸಿಂಹ, ಸರ್ಪ ಹಾಗೂ ಇತರೆ ಕ್ರೂರಮೃಗಗಳ ಭಯವು ಭಸ್ಮಸ್ನಾನದಿಂದ ನಾಶವಾಗುತ್ತದೆ" ಎಂದು ದೇವೀಕಾಲೋತ್ತರ ವಚನವನ್ನು ಉದಾಹರಿಸಿ ಭಸ್ಮದ ತ್ರಿತಾಪ (ಆಧ್ಯಾತ್ಮಿಕ, ಆಧಿಭೌತಿಕ ಮತ್ತು ಆಧಿದೈವಿಕಗಳೆಂಬ ಮೂರು ದುಃಖಗಳನ್ನು) ನಾಶಕತ್ವ ಗುಣವನ್ನು ಉಪದೇಶಿಸಿದ್ದಾರೆ. ಈಗ ಕ್ರಮವಾಗಿ ಅವುಗಳ ನಾಶಕತ್ವವನ್ನು ವಿಮರ್ಶಿಸಲಾಗುವುದು.

ಬಾಹ್ಯ ಆಧ್ಯಾತ್ಮಿಕ ದುಃಖದ ನಿವಾರಣೆ

"ವಾತಪಿತ್ತಾದಿಜಂ ದುಃಖಂ ಬಾಹ್ಯಮಾಧ್ಯಾತ್ಮಿಕಂ ಮತಮ್"[೪೪೩] ಎಂಬ ಉಕ್ತಿಯಂತೆ ವಾತ, ಪಿತ್ತ ಮತ್ತು ಕಫಗಳೆಂಬ ಮೂರು ದೋಷಗಳಿಂದ ಉಂಟಾಗುವ ಶರೀರ ಸಂಬಂಧಿ ರೋಗಗಳಿಂದ ಉಂಟಾಗುವ ದುಃಖವೇ ಬಾಹ್ಯ ಆಧ್ಯಾತ್ಮಿಕ ದುಃಖ. ಅವುಗಳ ಪೈಕಿ ವಾತಪ್ರಕೋಪದಿಂದ ೮೧, ಪಿತ್ತ ಪ್ರಕೋಪದಿಂದ ೬೪ ಮತ್ತು ಕಫ ಪ್ರಕೋಪದಿಂದ ೨೧೫ ರೋಗಗಳು ಬರುತ್ತವೆ ಎಂಬುದು ಆಯುರ್ವೇದಾಚಾರ್ಯರ ಅಭಿಪ್ರಾಯ. ಇವುಗಳ ನಿವಾರಣೆಗೆ ಚರಕ, ಶುಶ್ರುತ ಮೊದಲಾದ ಋಷಿಗಳು ವನಸ್ಪತಿಯ ಔಷಧಗಳನ್ನು ಕಂಡುಹಿಡಿದಿದ್ದರು. ಭಸ್ಮತಂತ್ರ ನಿಪುಣರಾದ ಮಹರ್ಷಿಗಳು ಮಂತ್ರ ಸಂಸ್ಕಾರದಿಂದ ಶಾಸ್ತ್ರೋಕ್ತ ವಿಧಿಯಿಂದ ತಯಾರಿಸಿದ ಭಸ್ಮದ ಅನುಪಾನ ಭೇದಗಳಿಂದ ಎಲ್ಲ ಬಗೆಯ ರೋಗಗಳ ಉಪಶಮನವನ್ನು ಹೇಳುವರು. ಪಂಚಗವ್ಯಗಳಲ್ಲಿರುವ ಪೋಷಕತತ್ತ್ವಗಳು ಮತ್ತು ರೋಗನಿವಾರಕ ತತ್ತ್ವಗಳು ಸನ್ನಿಹಿತವಾಗಿವೆ. ಆದುದರಿಂದಲೇ ಧಾರ್ಮಿಕ ವಿಧಿಗಳಲ್ಲಿ ಶಾರೀರಿಕ ಮತ್ತು ಮಾನಸಿಕ ಶುದ್ಧಿಗಾಗಿ ಪಂಚಗವ್ಯದ ಪ್ರಾಶನವು ಉಪದಿಷ್ಟವಾಗಿದೆ.

ಪಂಚಗವ್ಯಗಳಲ್ಲಿ ಗೋಮಯವು ದುರ್ಗಂಧನಾಶಕ, ವೀರ್ಯವರ್ಧಕ, ಸಂರಕ್ಷಕ, ಕಾಂತಿಪ್ರದ ಮತ್ತು ಮಲನಿವಾರಕ ಗುಣವುಳ್ಳದ್ದು. ಆದುದರಿಂದ ಪ್ರಾಚೀನ ಕಾಲದಿಂದಲೇ ಮನೆಯನ್ನು ಸಾರಿಸುವ ಕೆಲಸಗಳಲ್ಲಿ ಮತ್ತು ರೋಗ ಚಿಕಿತ್ಸೆ ಮುಂತಾದವುಗಳಲ್ಲಿ

---

[೪೪೨] ೪೪೨. ಕ್ರಿ.ಸಾ, ಭಾಗ-೨, ಪು. ೮೪

[೪೪೩] ೪೪೩. ಸಿ.ಶಿ, ೫.೬೩

ಅದರ ಉಪಯೋಗವನ್ನು ಮಾಡಲಾಗುತ್ತಿದೆ. ಗೋಮಯದಲ್ಲಿ ಮೆಂಥಲ್, ಫೆನಾಲ್, ಇಂಡಾಲ್, ಫಾರ್ಮಾಲಿನ್ ಇತ್ಯಾದಿ ತತ್ತ್ವಗಳಿವೆಯೆಂದು ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ.[೪೪೪]

ಈ ಬಗೆಯ ಗೋಮಯದಿಂದ ಸಿದ್ಧವಾದ ಭಸ್ಮವು ಒಂದು ದಿವ್ಯೌಷಧವೇ ಸರಿ. ವಿಳ್ಯೇದೆಲೆಯ ರಸ ಮತ್ತು ಬೇವಿನ ಎಲೆಯ ರಸದಲ್ಲಿ ಭಸ್ಮದ ಕಾಡಿಗೆಯನ್ನು ತಯಾರಿಸಿ ಕಣ್ಣುಗಳಿಗೆ ಲೇಪಿಸಿದರೆ ಸರ್ಪದಂಶ ಜಾತಿಯ ಪ್ರಜ್ಞಾಹೀನತೆಯು ನಿವಾರಣೆಯಾಗುತ್ತದೆ. ಜೇನುತುಪ್ಪದೊಡನೆ ಮಿಶ್ರಣ ಮಾಡಿದ ಭಸ್ಮದ ಲೇಪನದಿಂದ ಗಾಯಗಳು ವಾಸಿಯಾಗುತ್ತವೆ. ಮುಪ್ಪಿನ ಕಾಲದಲ್ಲಿ ಉಷ್ಣದಿಂದುಂಟಾಗುವ ನಿರಂತರ ಬೆವರಿನ ನಿವಾರಣೆಯು ಎಲ್ಲ ಅಂಗಾಂಗಗಳಿಗೆ ಭಸ್ಮವನ್ನು ಲೇಪಿಸುವುದರಿಂದ ಉಪಶಮನವಾಗುತ್ತದೆ. ತಾಯಿಯ ಎದೆಹಾಲಿಗೆ ಗುಲಗಂಜಿ ಗಾತ್ರದಷ್ಟು ಭಸ್ಮವನ್ನು ಮಿಶ್ರಣಮಾಡಿ ಮೂರು ಅಥವಾ ಏಳು ದಿನಗಳ ಕಾಲ ಮಗುವಿಗೆ ತಿನ್ನಿಸಿದರೆ ಬಾಲಗ್ರಹದಿಂದುಂಟಾಗುವ ದುಷ್ಪರಿಣಾಮಗಳು ಮಾಯವಾಗುತ್ತವೆ. ಗುಲಗಂಜಿ ಗಾತ್ರದಷ್ಟು ಭಸ್ಮ ಮತ್ತು ತ್ರಿಕಟು (ಹಿಪ್ಪಲಿ, ಶುಂಠಿ ಮತ್ತು ಮೆಣಸು)ವನ್ನು ಜೇನಿನೊಡನೆ ಬೆರೆಸಿ ದಿನಕ್ಕೆ ಮೂರು ಸಲದಂತೆ ಏಳು, ಹದಿನಾಲ್ಕು, ಇಪ್ಪತ್ತೆಂಟು ಅಥವಾ ಎಂಬತ್ತನಾಲ್ಕು ದಿನಗಳ ಕಾಲ ಸೇವಿಸುವುದರಿಂದ ಶ್ವಾಸಕೋಶದ ರೋಗಗಳು ನಿವಾರಣೆಯಾಗುತ್ತವೆ. ಚಳಿಯ ಕಾರಣದಿಂದ ಶರೀರದಲ್ಲಿ ಉಂಟಾಗುವ ಗಾಯಗಳ ಉಪಶಮನಕ್ಕೆ ಗೋಮಯ-ಭಸ್ಮಾವಲೇಪನವೇ ದಿವ್ಯ ಔಷಧ. ಸುಟ್ಟ ಗೋಮಯದ ಬೆರಣಿಯಿಂದ ತಯಾರಿಸಿದ ಹಲ್ಲುಪುಡಿಯಿಂದ ಹಲ್ಲಿನಲ್ಲಿ ರಕ್ತ ಸೋರುವಿಕೆ, ಹಲ್ಲು ನೋವು, ಬಾಯಿಯ ದುರ್ಗಂಧಾದಿಗಳು ನಾಶವಾಗುತ್ತವೆ. ಈ ವಿಷಯವು ಕರ್ನಾಟಕ ರಾಜ್ಯದ ಬನ್ನಿಕೊಪ್ಪ ಗ್ರಾಮದ ನಿವಾಸಿ, ಆಯುರ್ವೇದ ವಿಶಾರದರಾದ ಡಾ. ಎಸ್.ಎಫ್. ಹಿರೇಮಠ ಎಂಬ ವೈದ್ಯರು ತೋರಿಸಿದರು. ಭಸ್ಮದ ಬಾಹ್ಯ ಆಧ್ಯಾತ್ಮಿಕ ದುಃಖ ನಿವಾರಣೆಯ ಪ್ರಕಾರವನ್ನು ಸಂಕ್ಷಿಪ್ತವಾಗಿ ಇಲ್ಲಿ ನಿರೂಪಿಸಲಾಯಿತು. ಇದಕ್ಕಿಂತ ಹೆಚ್ಚಿನ ಉಪಯೋಗವನ್ನು ವಿದ್ವಾಂಸರಿಂದ ತಿಳಿಯತಕ್ಕದ್ದು. ಈ ರೀತಿಯಾಗಿ ರೋಗವನ್ನು ವಾಸಿಮಾಡಿ ಆರೋಗ್ಯದ ರಕ್ಷಣೆ ಮಾಡುವುದರಿಂದ ಭಸ್ಮವು 'ರಕ್ಷಾ' ಎಂದು ಕರೆಯಲ್ಪಟ್ಟಿದೆ.

ಅಂತರಂಗ ಆಧ್ಯಾತ್ಮಿಕ ದುಃಖದ ನಿವಾರಣೆ

"ರಾಗದ್ವೇಷಾದಿಸಂಪನ್ನಮಾಂತರಂ ಪರಿಕೀರ್ತ್ಯತೇ"[೪೪೫] ಎಂಬ ಶ್ರೀ ರೇಣುಕ ಭಗವತ್ಪಾದರ ಉಕ್ತಿಯಂತೆ ಕಾಮ-ಕ್ರೋಧಾದಿ ಅರಿಷಡ್ವರ್ಗಗಳಿಂದುಂಟಾದ ದುಃಖವನ್ನು

---

[೪೪೪] ಕಲ್ಯಾಣ, ಗೋ ಅಂಕ, ಪು. ೩೩೦

[೪೪೫] ಸಿ.ಶಿ, ೫.೬೩

ಅಂತರಂಗ ಆಧ್ಯಾತ್ಮಿಕ ದುಃಖವೆಂದು ಹೇಳಲ್ಪಡುತ್ತದೆ. ಕಾಮ-ಕ್ರೋಧಾದಿಗಳು ಮಾನಸಿಕ ಜ್ವರದ ರೂಪದವುಗಳು. ಇವುಗಳಿಂದ ಮನಸ್ಸು-ಬುದ್ಧಿಗಳ ದೌರ್ಬಲ್ಯವು ಕ್ರಮವಾಗಿ ಉಂಟಾಗುತ್ತದೆ. ಬಾಹ್ಯ ಔಷಧಿಗಳಿಂದ ಇವುಗಳ ಉಪಶಮನವು ಸಾಧ್ಯವಿಲ್ಲ. ಆದುದರಿಂದ ನಿರ್ಮಲಜ್ಞಾನವೇ ಅದಕ್ಕೆ ದಿವ್ಯೌಷಧಿಯು. ಅಂತಹ ಜ್ಞಾನವುಂಟಾಗಲು ಕಾರಣೀಭೂತ ವಾದ ಅಂತಃಕರಣಶುದ್ಧಿಯು ಭಸ್ಮಧಾರಣೆಯಿಂದುಂಟಾಗುತ್ತದೆಂದು ಈ ಮೊದಲು ಹೇಳಿದೆ. ಹೀಗೆ ಅಂತಃಕರಣಶುದ್ಧಿಯ ಮೂಲಕ ಜ್ಞಾನೋದಯಕ್ಕೆ ಕಾರಣೀಭೂತವಾದ ಭಸ್ಮವು ಕಾಮಾದಿ ಅಂತರಂಗದ ತಾಪಗಳನ್ನು ನಾಶಪಡಿಸಿ ಸದ್ಭಕ್ತನನ್ನು ಕಾಪಾಡುತ್ತದೆ ಎನ್ನುವ ಕಾರಣದಿಂದ ಇದಕ್ಕೆ 'ರಕ್ಷಾ' ಎಂದು ಹೆಸರು.

ಆಧಿಭೌತಿಕ ದುಃಖದ ನಿವಾರಣೆ

"ಭೂತಾನ್ಯಧಿಕೃತ್ಯ ಜಾಯತ ಇತ್ಯಾಧಿಭೌತಿಕಮ್" ಎಂಬ ವ್ಯುತ್ಪತ್ತಿಯಂತೆ ರಾಜ, ಕಳ್ಳ, ಹುಲಿ ಮೊದಲಾದವುಗಳಿಂದ ಉತ್ಪನ್ನವಾಗುವ ದುಃಖವೇ ಆಧಿಭೌತಿಕ. "ಆಧಿಭೌತಿಕಮೇತದ್ಧಿ ದುಃಖಂ ರಾಜಾದಿಭೂತಜಮ್"[೪೪೬] (ರಾಜನೇ ಮೊದಲಾದವರಿಂದ ಉಂಟಾಗುವ ದುಃಖವು ಆಧಿಭೌತಿಕವೆನಿಸುತ್ತದೆ) ಎಂದು ಸಿದ್ಧಾಂತ ಶಿಖಾಮಣಿಯು ನಿರೂಪಿಸುತ್ತದೆ. ಪ್ರಾಣಿಗಳಲ್ಲಿ ಪರಸ್ಪರ ತೊಂದರೆಯನ್ನುಂಟುಮಾಡಲು ಲೋಭ, ದ್ವೇಷಾದಿಗಳೇ ಕಾರಣ. ಅನಾದಿಕಾಲದಿಂದಲೂ ಪ್ರಾಣಿಗಳಲ್ಲಿ ಲೋಭ, ದ್ವೇಷಾದಿಗಳು ಇರುವುದರಿಂದ ಪರಸ್ಪರ ಪೀಡಿಸುವುದು ಸ್ವಾಭಾವಿಕ.

ಭಸ್ಮಧಾರಣೆಯಿಂದ ಅಂತಃಕರಣಶುದ್ಧನಾದ ಸಾಧಕನಿಗೆ ಸಾತ್ತ್ವಿಕಭಾವವು ಉಂಟಾಗುತ್ತದೆ. ಅದರ ಮಹಿಮೆಯಿಂದ ಅವನು ಅಹಿಂಸಾ ಪ್ರವೃತ್ತಿಯವನಾಗುತ್ತಾನೆ ಮತ್ತು ಅವನಲ್ಲಿದ್ದ ಲೋಭ-ದ್ವೇಷಾದಿಗಳು ನಾಶವಾಗುತ್ತವೆ. "ಅಹಿಂಸಾ ಪ್ರತಿಷ್ಠಾಯಾಂ ತತ್ಸನ್ನಿಧೌ ವೈರತ್ಯಾಗಃ"[೪೪೭] ಎಂಬ ಪತಂಜಲಿ ಮಹರ್ಷಿಗಳ ಸೂತ್ರಾನುಸಾರವಾಗಿ ಸಾತ್ವಿಕ ವ್ಯಕ್ತಿಯ ಸಮೀಪದಲ್ಲಿರುವಾಗ ಕ್ರೂರ ಪ್ರಾಣಿಗಳೂ ಸಹ ಸ್ವಾಭಾವಿಕವಾದ ಕ್ರೌರ್ಯವನ್ನು ತ್ಯಜಿಸಿ ಸಾತ್ತ್ವಿಕವಾಗುತ್ತವೆ. ಆದುದರಿಂದ ತಪಸ್ವಿಗಳ ಆಶ್ರಮಗಳಲ್ಲಿ ಪರಸ್ಪರ ವಿರುದ್ಧ ಸ್ವಭಾವದ ಪ್ರಾಣಿಗಳು ಸ್ನೇಹದಿಂದಿರುತ್ತವೆ ಎಂಬುದು ಬಾಣನ ಕಾದಂಬರಿ ಮೊದಲಾದ ಗ್ರಂಥಗಳಿಂದ ತಿಳಿಯುತ್ತದೆ.

ಭಸ್ಮಧಾರಿಗಳಾದ ತಪಸ್ವಿಗಳ ಸಾತ್ತ್ವಿಕ ಸ್ವಭಾವದ ಪ್ರಭಾವದಿಂದ ಕ್ರೂರ ಪ್ರಾಣಿಗಳೂ ಸಹ ಸಾತ್ತ್ವಿಕವಾಗುತ್ತವೆ ಎಂದು ಅವರ ಆಧಿಭೌತಿಕ ದುಃಖವುಂಟಾಗುವುದಿಲ್ಲವೆಂದು ತಿಳಿಯುತ್ತದೆ. ಈ ರೀತಿಯಲ್ಲಿ ಆಧಿಭೌತಿಕ ದುಃಖದಿಂದ ಕೂಡಿರುವವರನ್ನು ಭಸ್ಮನಿಷ್ಠೆಯು ರಕ್ಷಿಸುತ್ತದೆ ಎನ್ನುವ ಕಾರಣ ಇದಕ್ಕೆ 'ರಕ್ಷಾ' ಎಂದು ಹೆಸರು.

---

೪೪೬. ಸಿ.ಶಿ, ೫.೬೪

೪೪೭. ಯೋ.ಸೂ, ೨.೩೫

ಆಧಿದೈವಿಕ ದುಃಖದ ನಿವಾರಣೆ

"ದೇವಾನಧಿಕೃತ್ಯ ಜಾಯತ ಇತ್ಯಾಧಿದೈವಿಕಮ್" ಎಂಬ ನಿರ್ವಚನದಂತೆ ಗ್ರಹ, ಯಕ್ಷ, ಭೂತ, ಪಿಶಾಚಾದಿಗಳಿಂದ ಉಂಟಾಗುವ ದುಃಖವೇ ಆಧಿದೈವಿಕ. ಅದನ್ನು ಶ್ರೀ ರೇಣುಕ ಭಗವತ್ಪಾದರು- "ಆಧಿದೈವಿಕಮಾಖ್ಯಾತಂ ಗ್ರಹಯಕ್ಷಾದಿ ಸಂಭವಮ್"[೪೪೮] ಎಂದು ವಿವರಿಸಿದ್ದಾರೆ. ಧರ್ಮಭ್ರಷ್ಟರು ಮತ್ತು ಆಚಾರಹೀನರಾದ ಜನಗಳು ನವಗ್ರಹಗಳಿಂದ, ಭೂತ-ಪಿಶಾಚಾದಿಗಳಿಂದ ಪೀಡಿಸಲ್ಪಡುತ್ತಾರೆ. ಸೂರ್ಯ, ಚಂದ್ರ, ಮಂಗಳ, ಬುಧ, ಗುರು, ಶುಕ್ರ, ಶನಿ, ರಾಹು, ಕೇತುಗಳೆಂಬ ನವಗ್ರಹಗಳು; ವಿದ್ಯಾಧರ, ಅಪ್ಸರೆ, ಯಕ್ಷ, ರಾಕ್ಷಸ, ಗಂಧರ್ವ, ಕಿನ್ನರ, ಪಿಶಾಚಿ, ಗುಹ್ಯಕ, ಸಿದ್ಧ, ಭೂತ, ಪ್ರೇತಾದಿ ದೇವಯೋನಿಜರು ಶಿವನ ಸೇವಕರು.[೪೪೯] ಆದುದರಿಂದ ಶಿವನ ವಿಷಯದಲ್ಲಿ ಹಾಗೂ ಶಿವನಿಗೆ ಪ್ರಿಯವಾದ ಭಸ್ಮದ ವಿಷಯದಲ್ಲಿ ಇವರಿಗೆ ಅತಿಯಾದ ಆದರ. ಶಿವನಿಗೆ ಪ್ರಿಯರಾದ ಭಸ್ಮಧಾರಿಗಳಾದ ಭಕ್ತರು[೪೫೦] ಇಂತಹ ಶಿವಸ್ವರೂಪದಿಂದ ಕಾಣಿಸುತ್ತಾರೆ ಎನ್ನುವ ಕಾರಣ ಗ್ರಹ, ಯಕ್ಷಾದಿಗಳಿಂದ ಶಿವಭಕ್ತರ ಪೀಡೆಗೆ ಅವಕಾಶವಿರುವುದಿಲ್ಲ. ಆ ಕಾರಣದಿಂದ ಭಸ್ಮಧಾರಿಗಳು ಆಧಿದೈವಿಕ ದುಃಖಗಳಿಂದಲೂ ಸಹ ರಕ್ಷಿಸಲ್ಪಡುತ್ತಾರೆ. ಹೀಗೆ ಭಸ್ಮನಿಷ್ಠನಾದ ಭಕ್ತನನ್ನು ಮೂರು ದುಃಖಗಳಿಂದ ರಕ್ಷಿಸುತ್ತದೆ ಎನ್ನುವ ಕಾರಣದಿಂದ ಭಸ್ಮವು ರಕ್ಷಾ ಎಂದು ವ್ಯವಹರಿಸಲ್ಪಡುತ್ತದೆ.

ಮೋಕ್ಷ ಕರ್ಮಗಳಲ್ಲಿ ರಕ್ಷಾ ಭಸ್ಮದ ಉಪಯೋಗ

"ರಕ್ಷಾ ಚ ಮೋಕ್ಷಕಾರ್ಯೇಷು ಪ್ರಯೋಕ್ತವ್ಯಾ ಸದಾ ಬುಧೈಃ"[೪೫೧] ಎಂಬ ಶ್ರೀ ರೇಣುಕಾಚಾರ್ಯರ ಉಕ್ತಿಯಂತೆ ಮೋಕ್ಷಕ್ಕೆ ಸಂಬಂಧಿಸಿದ ಕಾರ್ಯಗಳಲ್ಲಿ ಅರ್ಥಾತ್ ನಿಷ್ಕಾಮ ಕರ್ಮಗಳಲ್ಲಿ 'ರಕ್ಷಾ' ಎಂಬ ಭಸ್ಮವನ್ನು ಉಪಯೋಗಿಸಬೇಕು. ನಿಷ್ಕಾಮಕರ್ಮ ಅಂತಃಕರಣಶುದ್ಧಿಯ ಮೂಲಕ ಮೋಕ್ಷಕ್ಕೆ ಕಾರಣೀಭೂತವಾಗುತ್ತದೆ ಎನ್ನುವ ಕಾರಣದಿಂದ ಇದು ಮೋಕ್ಷಕರ್ಮವೆಂದು ಕರೆಯಲ್ಪಟ್ಟಿದೆ. "ಬಂಧಾಯ ವಿಷಯಾಸಕ್ತಂ ಮುಕ್ತ್ಯೈ ನಿರ್ವಿಷಯಂ ಮನಃ" (ವಿಷಯಾಸಕ್ತಿಯೇ ಬಂಧನವಾದರೆ, ಮುಕ್ತಿಗೆ ನಿರ್ವಿಷಯವೇ ಕಾರಣ) ಎಂಬ ಉಕ್ತಿಗನುಸಾರವಾಗಿ ಸಂಸಾರದ ವಿಷಯದಲ್ಲಿ ಅನಾಸಕ್ತಿಯೇ ಮೋಕ್ಷಕ್ಕೆ ಮೂಲ. ಅದು ನಿಷ್ಕಾಮಕರ್ಮಿಗಳಾದ ಯೋಗಿಗಳಿಗೆ ಮಾತ್ರ ದೊರೆಯುವಂತಹದ್ದು, ಇತರರಿಗಲ್ಲ. ಆದುದರಿಂದಲೇ ಭಗವಾನ್ ಕೃಷ್ಣನು-

> ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ।
> ಮಾ ಕರ್ಮಫಲಹೇತುರ್ಭೂರ್ಮಾ ತೇ ಸಂಗೋಽಸ್ತ್ವಕರ್ಮಣಿ॥[೪೫೨]

---

[೪೪೮] ಸಿ.ಶಿ, ೫-೬೪

[೪೪೯] ಶ್ಮಶಾನೇಷ್ವಾಕ್ರೀಡಾ ಸ್ಮರಹರ ಪಿಶಾಚಾಃ ಸಹಚರಾಃ॥ -ಮಹಿಮ್ನಸ್ತೋತ್ರ, ೨೪

[೪೫೦] ಭಸ್ಮಸಂದರ್ಶನಾದೇವ ಶಿವದರ್ಶನಮಶ್ನುತೇ॥ -ಚ.ಜ್ಞಾ, ಕ್ರಿ.ಪಾ, ೬.೬೬

[೪೫೧] ಸಿ.ಶಿ, ೭.೧೦

[೪೫೨] ಭಗವದ್ಗೀತಾ, ೨.೪೭

"ನಿಗದಿತ ಕರ್ಮವನ್ನು ಮಾಡುವುದಕ್ಕೆ ನೀನು ಅಧಿಕಾರಿಯೇ ಹೊರತು ಅದರ ಫಲಕ್ಕೆ ಎಂದಿಗೂ ಅಧಿಕಾರಿಯಲ್ಲ. ನಿನ್ನ ಕರ್ಮದ ಫಲಕ್ಕೆ ನೀನು ಹೇತುವೆಂದು ತಿಳಿಯಬೇಡ. ಆದುದರಿಂದ ನಿನ್ನ ಕರ್ತವ್ಯವನ್ನು ಮಾಡುವುದಿಲ್ಲವೆಂದು ಹೇಳಬೇಡ" ಎಂಬಲ್ಲಿ ನಿಷ್ಕಾಮ ಕರ್ಮಯೋಗದ ರಹಸ್ಯವನ್ನು ಉಪದೇಶಿಸಿದ್ದಾನೆ. ಸಂಸಾರದ ಫಲವನ್ನಪೇಕ್ಷಿಸದ ಭಕ್ತನು ಶಿವನೊಂದಿಗೆ ಐಕ್ಯವನ್ನು ಪಡೆಯುತ್ತಾನೆ. ಎಲ್ಲ ಕರ್ಮಗಳಲ್ಲಿ ನಿಷ್ಕಾಮಕರ್ಮವೇ ಶ್ರೇಷ್ಠವಾದುದು ಮತ್ತು ಅದೇ ಮೋಕ್ಷಕ್ಕೆ ಹೇತು. ಆದುದರಿಂದ ಪೂರ್ವೋಕ್ತ ಆಚಾರ್ಯರ ಉಕ್ತಿಯಂತೆ ನಿಷ್ಕಾಮಕರ್ಮವನ್ನಾಚರಿಸುವ ಸಂದರ್ಭದಲ್ಲಿ ಶಾಸ್ತ್ರೋಕ್ತ ರೀತಿಯಲ್ಲಿ 'ರಕ್ಷಾ' ಎಂಬ ಭಸ್ಮವನ್ನು ಧರಿಸಬೇಕು.

ಈ ಬಗೆಯಲ್ಲಿ ಅದು ಸದಾಶಿವನ ಈಶಾನಮುಖದಿಂದ ಜನಿಸಿದ ಚಿತ್ರವರ್ಣದ ಸುಮನಾ ಎಂಬ ಹೆಸರಿನ ಗೋವಿನ ಗೋಮಯದಿಂದ ನಿರ್ಮಿಸಿದ, ಮೋಕ್ಷಕರ್ಮಗಳಲ್ಲಿ ಧರಿಸುವ, ಮೂರು ಬಗೆಯ ದುಃಖಗಳಿಂದ ರಕ್ಷಿಸುವ ಭಸ್ಮವು ರಕ್ಷಾ ಎಂದು ಹೇಳಲ್ಪಟ್ಟಿದೆ. ಸಂಸಾರದಲ್ಲಿನ ಜೀವಿಗಳನ್ನು ರಕ್ಷಿಸುವುದಕ್ಕೋಸ್ಕರವಾಗಿ, ಮಂಗಳವನ್ನುಂಟುಮಾಡಲು ಮತ್ತು ಪಾವಿತ್ರ್ಯತೆಗಾಗಿ ಭಗವಾನ್ ಶಿವನಿಂದ ಸ್ವರ್ಗದಲ್ಲಿ ಮೊದಲು ಭಸ್ಮವು ಸೃಷ್ಟಿಯಾಯಿತು.[೪೫೩] ಆದುದರಿಂದ ಇದರ ಮಹಿಮೆಯನ್ನು[೪೫೪] ತಿಳಿದು ಶ್ರುತಿ, ಸ್ಮೃತಿ, ಶಾಸ್ತ್ರೋಕ್ತ ವಿಧಿಯಿಂದ ನಿತ್ಯ, ನೈಮಿತ್ತಿಕ, ಕಾಮ್ಯ, ಪ್ರಾಯಶ್ಚಿತ್ತ ಮತ್ತು ಮೋಕ್ಷಕ್ಕೆ ಸಂಬಂಧಿಸಿದ ಆಚರಣೆಗಳ ಸಂದರ್ಭಗಳಲ್ಲಿ ಕ್ರಮವಾಗಿ ವಿಭೂತಿ, ಭಸಿತ, ಕ್ಷಾರ, ಭಸ್ಮ ಮತ್ತು ರಕ್ಷಾ ಎಂಬ ಹೆಸರಿನ ಐದು ಬಗೆಯ ಭಸ್ಮಗಳನ್ನು ಗುರುವಿನ ಉಪದೇಶಾನುಸಾರವಾಗಿ ಉಪಯೋಗಿಸುವುದರ ಮೂಲಕ ಆಯಾ ಕರ್ಮಗಳ ಫಲವನ್ನು ಸಾಧಕನು ಪಡೆಯತಕ್ಕದ್ದು. ಈ ಐದು ವಿಧ ಭಸ್ಮಗಳ ನಿರ್ಮಾಣವನ್ನು ನಾಲ್ಕು ಬಗೆಯೆಂದು ಶಾಸ್ತ್ರಗಳು ಪ್ರತಿಪಾದಿಸುತ್ತವೆ. ಅವುಗಳ ನಿರ್ಮಾಣವಿಧಿಯನ್ನು ಈಗ ವಿಚಾರಮಾಡೋಣ.

ಭಸ್ಮನಿರ್ಮಾಣವಿಧಿ

ಭಸ್ಮತಂತ್ರವಿಶಾರದರು ಭಸ್ಮದ ನಿರ್ಮಾಣವಿಧಿಯನ್ನು ಕಲ್ಪ, ಅನುಕಲ್ಪ, ಉಪಕಲ್ಪ ಮತ್ತು ಅಕಲ್ಪ ಎಂದು ನಾಲ್ಕು ಬಗೆಯೆಂದು ವಿವರಿಸಿದ್ದಾರೆ.[೪೫೫] ಇವುಗಳಲ್ಲಿ

---

[೪೫೩] ರಕ್ಷಾರ್ಥಂ ಮಂಗಲಾರ್ಥಂ ಚ ಪವಿತ್ರಾರ್ಥಂ ಮಯಾ ಪುರಾ।
ಭಸ್ಮ ಸೃಷ್ಟಂ ಮುನೇ ಶ್ರೌತಂ ದತ್ತಂ ದೇವ್ಯಾಃ ಪ್ರಿಯೇಣ ತು॥
-ಕ್ರಿ.ಸಾ, ಭಾಗ-೨, ಪು.೮೩

[೪೫೪] ಭೂತಪ್ರೇತಪಿಶಾಚಾಶ್ಚ ಮಹಾರೋಗಾಶ್ಚ ದುಸ್ಸಹಾಃ।
ಭಸ್ಮದರ್ಶನಮಾತ್ರೇಣ ಪಲಾಯಂತೇ ನ ಸಂಶಯಃ॥
ಭೂತವಿದ್ರಾವಣೇ ಪಾಪಸಂಹೃತೌ ಮುಕ್ತಿಸಾಧನೇ।
ನ ಭಸ್ಮನೋಽನ್ಯತ್ ಸದೃಶಮಿತ್ಯೇತಚ್ಛಿವಶಾಸನಮ್॥
ಭಸ್ಮನೋ ಮಹಿಮಾಽಗಣ್ಯಸ್ತಂ ವಕ್ತುಂ ಕೇನ ಶಕ್ಯತೇ। -ಚಂ.ಜ್ಞಾ, ಕ್ರಿ. ೬.೬೭-೬೯

[೪೫೫] ಭಸ್ಮೋತ್ಪಾದನಮುದ್ದಿಷ್ಟಂ ಚತುರ್ಧಾ ತಂತ್ರವೇದಿಭಿಃ।
ಕಲ್ಪಂ ಚೈವಾನುಕಲ್ಪಂ ಚ ಉಪಕಲ್ಪಮಕಲ್ಪಕಮ್॥ -ಸಿ.ಶಿ, ೭.೧೨

ಮೊದಲನೆಯದಾದ ಕಲ್ಪವಿಧಿಯು ಉತ್ಕೃಷ್ಟವಾದದ್ದು. ಅದನ್ನು ಇತರ ವಿಧಿಗಳು ಆಶ್ರಯಿಸಿವೆ.

೧. ಕಲ್ಪವಿಧಿ

"ಕಲ್ಪಃ ಶಾಸ್ತ್ರೇ ವಿಧೌ ನ್ಯಾಯೇ" ಎಂಬ ಮೇದಿನೀಕೋಶದ ವಾಕ್ಯಾನುಸಾರವಾಗಿ ಕಲ್ಪ ಶಬ್ದಕ್ಕೆ ವೇದಾಂಗಭೂತವಾದ ಕಲ್ಪಶಾಸ್ತ್ರ, ನ್ಯಾಯ ಮತ್ತು ವಿಧಿ ಎಂಬ ಮೂರು ಅರ್ಥಗಳಿವೆ. ಪ್ರಕೃತ ಸಂದರ್ಭದಲ್ಲಿ ವಿಧಿ ಎಂಬ ಅರ್ಥವನ್ನು ಸ್ವೀಕರಿಸಬೇಕು. ಕಲ್ಪವಿಧಾನದಿಂದ ಭಸ್ಮವನ್ನು ನಿರ್ಮಾಣ ಮಾಡುವಾಗ ಗೋಮಯದ ಸ್ವೀಕಾರ, ಅದನ್ನು ಮುದ್ದೆಯಾಕಾರವಾಗಿ ಮಾಡುವುದು, ಒಣಗಿಸುವುದು, ಸುಡುವುದು, ಸಂಗ್ರಹಿಸುವುದು ಇತ್ಯಾದಿ ಕ್ರಿಯೆಗಳು ಮಂತ್ರಸಂಸ್ಕಾರಪೂರ್ವಕವಾಗಿ ಆಗುತ್ತವೆ.

ಶುಕ್ಲಪಕ್ಷ ಅಥವಾ ಕೃಷ್ಣಪಕ್ಷದ ಚತುರ್ದಶಿಯಂದು ಉಪವಾಸವಿದ್ದು ಗೋವುಗಳಿಗೆ ಸ್ನಾನ ಮಾಡಿಸಿ, ಮಂತ್ರದಿಂದ ಸಂಸ್ಕಾರಗೊಂಡ ಹುಲ್ಲು, ನೀರು ಮುಂತಾದುವನ್ನು ಅವುಗಳಿಗೆ ನೀಡಬೇಕು. ಪ್ರಾತಃಕಾಲದಲ್ಲಿ ಬೇಗನೆ ಎದ್ದು, ಮಂಗಳಸ್ನಾನಮಾಡಿ ಹಾಲು ಕರೆಯಲು ಹಸುವನ್ನು ಬಿಡಬೇಕು. ಈ ರೀತಿಯಾಗಿ ಕರು ಸ್ತನ್ಯಪಾನ ಮಾಡುತ್ತಿರುವ ಸಂದರ್ಭದಲ್ಲಿ ದೊರೆಯುವ ಗೋಮಯವನ್ನು ಸದ್ಯೋಜಾತ ಮಂತ್ರದ ಉಚ್ಚಾರಣೆಯೊಂದಿಗೆ ನೆಲಕ್ಕೆ ಬೀಳುವ ಮೊದಲೇ ಸಂಗ್ರಹಿಸಬೇಕು.

ಈ ಸಂದರ್ಭದಲ್ಲಿ ಇದನ್ನು ತಿಳಿಯುವುದು ಯೋಗ್ಯವಾಗಿದೆ- "ಕುರೂಪಿಯಾದ ಅಂಗವುಳ್ಳ, ಹುಚ್ಚು ಹಿಡಿದಿರುವ, ಅತಿದುಷ್ಟವಾದ, ಮಲಿನವಾಗಿರುವ, ಅಶುಭ ಚಿಹ್ನೆಗಳಿಂದ ಕೂಡಿರುವ ಹಸುವನ್ನಾಗಲಿ, ಕೃಶವಾದ ಅಂಗವುಳ್ಳ, ಕರುವಿಲ್ಲದ, ಅಶಾಂತಿ ಸ್ವಭಾವದ, ಹಾಲು ಕೊಡದಿರುವ, ಇಂದ್ರಿಯಗಳಿಲ್ಲದ, ಹುಲ್ಲು ಜಗಿಯುತ್ತಿರುವ, ಕೂದಲು - ಬಟ್ಟೆ - ಅಸ್ಥಿಯನ್ನು ತಿನ್ನುವ, ಸಂಧಿನೀ (ಗರ್ಭಧಾರಣೆಗಾಗಿ ಗೂಳಿ ಹಾರಿದ ಹಸು ಅಥವಾ ಅಕಾಲದಲ್ಲಿ ಹಾಲು ಕರೆಯುವ ಅಥವಾ ಬೇರೆ ಕರುವನ್ನು ಉಣ್ಣಿಸಿ ಹಾಲು ಕರೆದ ಹಸು), ಅದೇ ತಾನೆ ಕರು ಹಾಕಿರುವ, ರೋಗಪೀಡಿತವಾದ ಹಸುಗಳನ್ನು ಹೊರತುಪಡಿಸಿ ಪ್ರಶಸ್ತವಾದ ಗೋವುಗಳಿಂದ ಗೋಮಯವನ್ನು ಸಂಗ್ರಹಿಸಬೇಕು"[೪೫೬] ಎಂದು ಶ್ರುತಿಯಲ್ಲಿ ನಿಂದಿತವಾದ ಹಸುವನ್ನು ಬಿಟ್ಟು, ಶುಭಲಕ್ಷಣಗಳುಳ್ಳ ಹಸುವಿನ ಗೋಮಯವನ್ನೇ ಸಂಗ್ರಹಿಸಬೇಕು.

ಅನಂತರ ವಾಮದೇವಮಂತ್ರದ ಉಚ್ಚಾರಣೆಯೊಂದಿಗೆ ಗೋಮಯದ ಚಿಕ್ಕ ಗಾತ್ರದ ಉಂಡೆಗಳನ್ನು ಮಾಡಬೇಕು. ಮತ್ತೆ ಅವುಗಳನ್ನು ತತ್ಪುರುಷ ಮಂತ್ರೋಚ್ಚಾರಣೆ ಮಾಡುತ್ತಾ ಒಣಗಿಸಿ ಶಿವಮಂತ್ರದಿಂದ ಪವಿತ್ರವಾದ ಅಗ್ನಿಯಲ್ಲಿ ಅಘೋರ ಮಂತ್ರದ ಪಠನದೊಂದಿಗೆ ಸುಡಬೇಕು. ಕೊನೆಯಲ್ಲಿ ಈಶಾನಮಂತ್ರವನ್ನು ಪಠಿಸುತ್ತಾ ಆ ಭಸ್ಮವನ್ನು

---

[೪೫೬] ಬೃ.ಜಾ.ಉ, ೩.೧.

ಬಿಲ್ವ, ಬೆಳ್ಳಿ, ಚಿನ್ನ ಮುಂತಾದ ಪಾತ್ರೆಗಳಲ್ಲಿ ಸಂಗ್ರಹಿಸಿ ಇಡಬೇಕು. ಈ ವಿಧಿಯಿಂದ ನಿರ್ಮಾಣವಾದ ಭಸ್ಮವನ್ನು ಕಲ್ಪಭಸ್ಮ[೪೫೭] ಎಂದು ಕರೆಯಲಾಗಿದೆ. ಇದು ಇತರ ಭಸ್ಮಗಳಿಗಿಂತಲೂ ಅತೀ ಶ್ರೇಷ್ಠವಾದ ಕಾರಣ ಮೊದಲಿಗೆ ವರ್ಣಿಸಲಾಗಿದೆ.

ಅನುಕಲ್ಪವಿಧಿ

ಕಾಡಿನಲ್ಲಿ ದೊರೆಯುವ ಒಣಗಿದ ಗೋಮಯವನ್ನು ತಂದು ಪುಡಿಮಾಡಬೇಕು. ಆ ಚೂರ್ಣವನ್ನು ಪೂರ್ವೋಕ್ತ ವಿಧಿಯಂತೆ ಅಘೋರಮಂತ್ರವನ್ನು ಪಠಿಸುತ್ತಾ ಸುಡಬೇಕು. ಅನಂತರ ಈಶಾನಮಂತ್ರದಿಂದ ಪೂರ್ವೋಕ್ತವಾದ ಯಾವುದಾದರೂ ಒಂದು ಪಾತ್ರೆಯಲ್ಲಿ ಅದನ್ನು ಸಂಗ್ರಹಿಸಬೇಕು. ಇಲ್ಲಿ ಗೋಮಯದ ಸಂಗ್ರಹ, ಉಂಡೆ ಮಾಡುವ, ಒಣಗಿಸುವ ವಿಧಿಗಳಲ್ಲಿ ಉಪಯೋಗಿಸಬೇಕಾದ ಮೂರು ಮಂತ್ರಗಳ ಉಚ್ಚಾರಣೆಯಿಲ್ಲದೆ ಸಂಸ್ಕಾರ ಲೋಪವಾಯಿತೆನ್ನುವ ಕಾರಣದಿಂದ ಕಲ್ಪಭಸ್ಮಕ್ಕಿಂತ ಕಡಿಮೆ ಸಂಸ್ಕಾರವಾಗಿರುವುದರಿಂದ ಇದನ್ನು ಅನುಕಲ್ಪಭಸ್ಮ ಎಂದು ಕರೆಯಲಾಗಿದೆ.[೪೫೮] ಆದುದರಿಂದ ಇದು ಎರಡನೆಯ ಸ್ಥಾನದಲ್ಲಿದೆ.

ಉಪಕಲ್ಪವಿಧಿ

ಇದು ಭಸ್ಮನಿರ್ಮಾಣದ ಮೂರನೆಯ ವಿಧಿ. ಅಂಗಡಿಯಲ್ಲಿ ದೊರೆಯುವ ಭಸ್ಮವನ್ನು ತೆಗೆದುಕೊಂಡು ಬಂದು, ಅದನ್ನು ಪುಡಿಯನ್ನಾಗಿ ಮಾಡಿ, ಬಟ್ಟೆಯಿಂದ ಬಿಡಿದು, ಕರುವು ಸ್ತನ್ಯಪಾನ ಮಾಡುವ ಸಂದರ್ಭದಲ್ಲಿ ದೊರೆಯುವ ಗೋಮೂತ್ರದಿಂದ ಅದನ್ನು ಉಂಡೆಗಳನ್ನಾಗಿ ಮಾಡಿ ಒಣಗಿಸಬೇಕು. ಅನಂತರ ಪೂರ್ವೋಕ್ತ ವಿಧಿಯಂತೆ ಅಘೋರಮಂತ್ರವನ್ನು ಪಠಿಸುತ್ತಾ ಸುಟ್ಟು, ಈಶಾನಮಂತ್ರದಿಂದ ಸಂಗ್ರಹಿಸಿ ಪಾತ್ರೆಯಲ್ಲಿಡಬೇಕು. ಈ ರೀತಿಯಾಗಿ ನಿರ್ಮಾಣವಾದ ಭಸ್ಮವನ್ನು ಉಪಕಲ್ಪಭಸ್ಮ[೪೫೯] ಎಂದು ಹೇಳಲಾಗಿದೆ. ಸಾಕ್ಷಾತ್ತಾಗಿ ಗೋಮಯದ ಉಂಡೆಗಳಿಂದ ತಯಾರಾಗದ ಕಾರಣ ಇದು ಮೂರನೆಯ ಸ್ಥಾನದಲ್ಲಿದೆ. ಇಲ್ಲಿಯೂ ಸಹ ಮೂರು ಮಂತ್ರಗಳ ಸಂಸ್ಕಾರ ಲೋಪವು ಸಂಭವಿಸಿರುವುದನ್ನು ಗಮನದಲ್ಲಿಡಬೇಕು.

---

[೪೫೭] ಯಥಾ ಶಾಸ್ತ್ರೋಕ್ತವಿಧಿನಾ ಗೃಹೀತ್ವಾ ಗೋಮಯಂ ನವಮ್।
ಸದ್ಯೇನ ವಾಮದೇವೇನ ಕುರ್ಯಾತ್ ಪಿಂಡಮನುತ್ತಮಮ್॥
ಶೋಷಯೇತ್ ಪುರುಷೇಣೈವ ದಹೇದ್ ಘೋರಾಚ್ಚೈವಾಗ್ನಿನಾ।
ಕಲ್ಪಂ ತದ್ ಭಸ್ಮ ವಿಜ್ಞೇಯಮ್.........................॥ -ಸಿ.ಶಿ, ೭.೧೩-೧೪

[೪೫೮] ವನೇಷು ಗೋಮಯಂ ಯಚ್ಚ ಶುಷ್ಕಂ ಚೂರ್ಣೀಕೃತಂ ತಥಾ।
ದಗ್ಧಂ ಚೈವಾನುಕಲ್ಪಾಖ್ಯಮ್............................॥ -ಸಿ.ಶಿ, ೭.೧೫-೧೬

[೪೫೯] ....ಆಪಣಾದಿಗತಂ ತು ಯತ್।
ವಸ್ತ್ರೇಣೋತ್ತಾರಿತಂ ಭಸ್ಮ ಗೋಮೂತ್ರಾಬದ್ಧ ಪಿಂಡಕಮ್।
ದಗ್ಧಂ ಪ್ರಾಗುಕ್ತವಿಧಿನಾ ಭವೇದ್ ಭಸ್ಮೋಪಕಲ್ಪಕಮ್॥ -ಸಿ.ಶಿ, ೭.೧೬-೧೭

ಅಕಲ್ಪವಿಧಿ

ಇದು ಭಸ್ಮನಿರ್ಮಾಣದ ನಾಲ್ಕನೆಯ ವಿಧಿ. ಮಂತ್ರ ಸಂಸ್ಕಾರ ತಿಳಿಯದವರಿಂದ ಅವರ ಇಚ್ಛೆಯಂತೆ ಹೇಗೋ ನಿರ್ಮಾಣವಾದ ಭಸ್ಮವೇ ಅಕಲ್ಪಭಸ್ಮ[೪೬೦] ಎಂದು ಕರೆಯಲ್ಪಟ್ಟಿದೆ. ಮಂತ್ರಗಳಿಂದ ಶುದ್ಧವಾಗದಿರುವುದೇ ಇದರ ನಾಲ್ಕನೆಯ ಸ್ಥಾನಕ್ಕೆ ಕಾರಣವಾಗಿದೆ.

ಇಲ್ಲಿ ನಿರೂಪಿತವಾದ ನಾಲ್ಕು ಬಗೆಯ ಭಸ್ಮಗಳ ಪೈಕಿ ಮೊದಲನೆಯ ಕಲ್ಪಭಸ್ಮವೇ ಉತ್ಕೃಷ್ಟವಾದುದು. ಆದುದರಿಂದ ಎಲ್ಲರೂ ಅದನ್ನೇ ಉಪಯೋಗಿಸಬೇಕು. ಅದು ದೊರೆಯದಿದ್ದಾಗ ಬೇರೆ ಭಸ್ಮಗಳನ್ನು ಉಪಯೋಗಿಸಬಹುದು. ಈ ನಾಲ್ಕು ವಿಧದ ಭಸ್ಮಗಳನ್ನೂ ಸಹ ಗುರು ಅಥವಾ ಜಂಗಮನ ಪಾದೋದಕ ಪ್ರೋಕ್ಷಣೆಯಿಂದ ಶುದ್ಧಗೊಳಿಸಬೇಕೆಂಬುದನ್ನು ಪ್ರತಿಯೊಬ್ಬರೂ ತಿಳಿದಿರಬೇಕು. ಈ ರೀತಿಯಾಗಿ ಮಂತ್ರ ಸಂಸ್ಕಾರದಿಂದ ಅಥವಾ ಪಾದೋದಕದ ಪ್ರೋಕ್ಷಣೆಯಿಂದ ಭಸ್ಮವು ಹೆಚ್ಚು ಶಕ್ತಿಯುತವಾಗಿ, ಅದನ್ನು ಧರಿಸಿದವರ ಎಲ್ಲ ಬಗೆಯ ಮನೋರಥವನ್ನು ಪೂರೈಸುತ್ತದೆ. ಭಸ್ಮಧಾರಣೆಯಲ್ಲಿಯೂ ಸಹ ಭಸ್ಮಸ್ನಾನ, ಭಸ್ಮೋದ್ಧೂಲನ ಮತ್ತು ತ್ರಿಪುಂಡ್ರಧಾರಣೆ ಎಂದು ಶಾಸ್ತ್ರೀಯವಾಗಿ ಮೂರು ವಿಧಿಗಳಿವೆ. ಅವುಗಳನ್ನು ಈಗ ಕ್ರಮವಾಗಿ ವಿಚಾರ ಮಾಡಲಾಗುವುದು.

ಭಸ್ಮಸ್ನಾನ

> ಏಷ್ವೇಕತಮಮಾದಾಯ ಪಾತ್ರೇಷು ಕಲಶಾದಿಷು।
> ತ್ರಿಸಂಧ್ಯಮಾಚರೇತ್ ಸ್ನಾನಂ ಯಥಾಸಂಭವಮೇವ ವಾ॥[೪೬೧]

"ಕಳಸ ಮೊದಲಾದ ಭಸ್ಮಪಾತ್ರೆಗಳಲ್ಲಿ ಇರುವ ಈ ಕಲ್ಪ-ಅನುಕಲ್ಪ ಮೊದಲಾದ ಭಸ್ಮಗಳಲ್ಲಿ ಯಾವುದಾದರೂ ಒಂದು ಭಸ್ಮವನ್ನು ತೆಗೆದುಕೊಂಡು ಮೂರು ಕಾಲಗಳಲ್ಲಿ ಅಥವಾ ತನಗೆ ಅನುಕೂಲವಾದ ಒಂದು ಕಾಲದಲ್ಲಾಗಲೀ ಪ್ರತಿದಿನವೂ ಭಸ್ಮಸ್ನಾನವನ್ನು ಮಾಡಬೇಕು" ಎಂಬ ಆಚಾರ್ಯರ ಉಕ್ತಿಯಂತೆ ಪ್ರತಿದಿನವೂ ಮೂರು ಸಲ ಅಥವಾ ಒಂದು ಸಲ ಭಸ್ಮಸ್ನಾನವನ್ನು ಅವಶ್ಯವಾಗಿ ಮಾಡಲೇಬೇಕು. ಭಸ್ಮಧಾರಣವಿಧಿಗಳಲ್ಲಿ ಇದು ಮೊದಲನೆಯದು. ಭಸ್ಮಸ್ನಾನ ಮಾಡುವಾಗ ಶುದ್ಧವಾದ ನೀರಿನಿಂದ ಮೊದಲು ಸ್ನಾನಮಾಡಿ ಅಥವಾ ಕೈ-ಕಾಲುಗಳನ್ನು ತೊಳೆದುಕೊಂಡು, ಪವಿತ್ರವಾದ ಆಸನದಲ್ಲಿ ಕುಳಿತುಕೊಂಡು ಪೂರ್ವೋಕ್ತ ರೀತಿಯಲ್ಲಿ ಕಲಶ ಮುಂತಾದ ಪಾತ್ರೆಗಳಲ್ಲಿ ಬೇರೆ ಬೇರೆಯಾಗಿ ಇಟ್ಟಿರುವ ಕಲ್ಪವೇ ಮೊದಲಾದ ಭಸ್ಮಗಳಲ್ಲಿ ಒಂದನ್ನು ತೆಗೆದುಕೊಂಡು ಅದನ್ನು ಎಡಗೈಯಲ್ಲಿಟ್ಟುಕೊಂಡು ಬಲಗೈಯಿಂದ ತೆಗೆದುಕೊಂಡು ಅದನ್ನು

---

[೪೬೦] ಅನ್ಯೈರಾಪಾದಿತಂ ಭಸ್ಮಾಪ್ಯಕಲ್ಪಮಿತಿ ನಿಶ್ಚಿತಮ್। -ಸಿ.ಶಿ, ೭.೧೭

[೪೬೧] ಸಿ.ಶಿ, ೭.೧೮

ಎಡಗೈಯಲ್ಲಿಟ್ಟುಕೊಂಡು ಬಲಗೈಯಿಂದ ಮುಚ್ಚಿ ಬಲಭಾಗದ ತೊಡೆಯ ಮೇಲೆ ಇಟ್ಟು "ಮೌನೀ ಭಸ್ಮಾಭಿಮಂತ್ರಯೇತ್" ಎಂಬ ಶಿವಾಗಮದ ಉಕ್ತಿಯಂತೆ ಮೌನವಾಗಿ ಪಂಚಾಕ್ಷರೀ ಮಂತ್ರದಿಂದ ಎಂಟು ಸಲ ಮಂತ್ರಿಸಿ ಎಲ್ಲ ಅಂಗಗಳಿಗೆ ಭಸ್ಮಸ್ನಾನವನ್ನು ಮಾಡಿಕೊಳ್ಳಬೇಕು.

ಈ ಸ್ನಾನವು ತಲೆಯಿಂದ ಆರಂಭಿಸಿ ಪಾದಗಳವರೆಗೆ, ಪಾದದಿಂದ ಆರಂಭಿಸಿ ತಲೆಯವರೆಗೆ, ಹೃದಯದಿಂದ ಆರಂಭಿಸಿ ತಲೆ, ನಾಭಿ, ಪಾದಗಳವರೆಗೆ ಎಂದು ಮೂರು ಪ್ರಕಾರವಾಗಿದೆ. ಈ ಸ್ನಾನವನ್ನು ಮಾಡುವಾಗ ಈಶಾನಮಂತ್ರದಿಂದ ಶಿರಸ್ಸಿನಲ್ಲಿ, ತತ್ಪುರುಷ ಮಂತ್ರದಿಂದ ಮುಖದಲ್ಲಿ, ಅಘೋರ ಮಂತ್ರದಿಂದ ಹೃದಯ ಪ್ರದೇಶದಲ್ಲಿ, ವಾಮದೇವ ಮಂತ್ರದಿಂದ ನಾಭಿಯಲ್ಲಿ, ಸದ್ಯೋಜಾತ ಮಂತ್ರದಿಂದ ಪಾದಗಳಲ್ಲಿ ಮತ್ತು ಪ್ರಣವ (ಓಂ) ಮಂತ್ರದಿಂದ ಎಲ್ಲ ಅಂಗಾಂಗಗಳಲ್ಲಿ ಭಸ್ಮವನ್ನು ಪ್ರೋಕ್ಷಣೆ ಮಾಡಬೇಕು. ಇದೇ ಭಸ್ಮಸ್ನಾನ.

ಸಪ್ತಸ್ನಾನಗಳಲ್ಲಿ ಭಸ್ಮಸ್ನಾನದ ವೈಶಿಷ್ಟ್ಯ

ಧರ್ಮಶಾಸ್ತ್ರಗಳಲ್ಲಿ ಮಾಂತ್ರ (ಮಂತ್ರಕ್ಕೆ ಸಂಬಂಧಿಸಿದ), ಭೌಮ (ಭೂಮಿಗೆ ಸಂಬಂಧಿಸಿದ), ಆಗ್ನೇಯ, ವಾಯವ್ಯ, ದಿವ್ಯ, ವಾರುಣ, ಮಾನಸ ಭೇದದಿಂದ ಏಳು ವಿಧ ಸ್ನಾನಗಳು ನಿರೂಪಿತವಾಗಿವೆ.[೪೬೨] ಅವುಗಳಲ್ಲಿ "ಆಪೋ ಹಿ ಷ್ಠಾ" ಇತ್ಯಾದಿ ವೇದಮಂತ್ರದ ಪಠನದೊಂದಿಗೆ ತಲೆಯ ಮೇಲೆ ನೀರನ್ನು ಪ್ರೋಕ್ಷಿಸಿಕೊಳ್ಳುವುದು ಮಾಂತ್ರಸ್ನಾನ. ಗಂಗೆ ಮೊದಲಾದ ಪವಿತ್ರನದಿಗಳ ಮಣ್ಣಿನಿಂದ ಹಣೆಯಲ್ಲಿ ತಿಲಕವನ್ನು ಧರಿಸುವುದು ಭೌಮಸ್ನಾನ. ಭೂಮಿಗೆ ಸಂಬಂಧಿಸಿರುವುದರಿಂದ ಭೌಮಸ್ನಾನ ಅಥವಾ ಪಾರ್ಥಿವಸ್ನಾನವೆಂತಲೂ ಇದು ಹೇಳಲ್ಪಟ್ಟಿದೆ. ಭಸ್ಮಸ್ನಾನವೇ ಆಗ್ನೇಯಸ್ನಾನ. ಅಗ್ನಿಯಲ್ಲಿ ಎಲ್ಲ ಬಗೆಯ ವಸ್ತುಗಳು ಸುಡುವಂತೆ ಈ ಸ್ನಾನಕ್ಕೆ ಎಲ್ಲ ದೋಷಗಳನ್ನು ದಹಿಸುವ ಗುಣವಿರುವುದರಿಂದ ಇದು ಆಗ್ನೇಯಸ್ನಾನವೆಂದು ಕರೆಯಲ್ಪಟ್ಟಿದೆ. ಗೋವಿನ ಪಾದಧೂಳಿನಿಂದ ಮಿಶ್ರಿತವಾದ ವಾಯು ಶರೀರವನ್ನು ಸ್ಪರ್ಶಿಸುವುದೇ ವಾಯವ್ಯಸ್ನಾನ. 'ದಿವಿ ಭವಂ ದಿವ್ಯಮ್' (ಸ್ವರ್ಗದಲ್ಲಿ ಹುಟ್ಟಿದ್ದು ದಿವ್ಯ) ಎಂಬ ವ್ಯುತ್ಪತ್ತಿಯಂತೆ ಬೆಳಿಗ್ಗೆ ಅಥವಾ ಸಾಯಂಕಾಲದಲ್ಲಿ ಶ್ರದ್ಧೆಯಿಂದ ಬಿಸಿಲಿನಿಂದ ಕೂಡಿದ ಮಳೆಯಿಂದ ಮಾಡುವ ಸ್ನಾನವೇ ದಿವ್ಯಸ್ನಾನ. ನದಿ ಅಥವಾ ಸರೋವರದಲ್ಲಿ ಮುಳುಗಿ ಮಾಡುವ ಸ್ನಾನವೇ

---

[೪೬೨] ಮಾಂತ್ರಂ ಭೌಮಂ ತಥಾಗ್ನೇಯಂ ವಾಯವ್ಯಂ ದಿವ್ಯಮೇವ ಚ।
ವಾರುಣಂ ಮಾನಸಂ ಚೈವ ಸಪ್ತ ಸ್ನಾನಂ ಪ್ರಕೀರ್ತಿತಮ್॥
ಆಪೋ ಹಿ ಷ್ಠೇತಿ ವೈ ಮಾಂತ್ರಂ ಮೃದಾಲಂಭಸ್ತು ಪಾರ್ಥಿವಮ್।
ಆಗ್ನೇಯಂ ಭಸ್ಮನಾ ಸ್ನಾನಂ ವಾಯವ್ಯಂ ಗೋರಜಃ ಸ್ಮೃತಮ್॥
ಯತ್ತು ಸಾತಪವರ್ಷೇಣ ಸ್ನಾನಂ ತದ್ದಿವ್ಯಮುಚ್ಯತೇ।
ವಾರುಣಂ ಚಾವಗಾಹ್ಯಂ ಚ ಮಾನಸಂ ವಿಷ್ಣುಚಿಂತನಮ್॥
-ಯೋಗಿಯಾಜ್ಞವಲ್ಕ್ಯ ವಚನಮ್, ಶಬ್ದಕಲ್ಪದ್ರುಮ, ಪು. ೪೫೩

ವಾರುಣಸ್ನಾನ. ಮನಸ್ಸಿನಲ್ಲಿ ಭಗವಂತನ ಸ್ಮರಣೆಯನ್ನು ನಿರಂತರವಾಗಿ ಮಾಡುವುದೇ ಮಾನಸಸ್ನಾನ.

ಇಲ್ಲಿ ನಿರೂಪಿಸಲಾಗಿರುವ ಏಳು ಸ್ನಾನಗಳಲ್ಲಿ ಕೇವಲ ಬಾಹ್ಯಮಲಗಳನ್ನು ಮಾತ್ರ ನಿವಾರಿಸುವ ಮಾಂತ್ರ, ಭೌಮ, ವಾಯವ್ಯ, ದಿವ್ಯ, ವಾರುಣ ಸ್ನಾನಗಳಿಗಿಂತಲೂ ಮತ್ತು ಕೇವಲ ಅಂತರಂಗದ ದೋಷಗಳನ್ನು ನಿವಾರಿಸುವ ಮಾನಸಸ್ನಾನಕ್ಕಿಂತಲೂ ಅಂತರಂಗ ಮತ್ತು ಬಹಿರಂಗಗಳೆರಡರ ದೋಷಗಳನ್ನು ಉಪಶಮನಗೊಳಿಸುವ ಆಗ್ನೇಯವೆಂಬ ಭಸ್ಮಸ್ನಾನವೇ ಶ್ರೇಷ್ಠವಾದುದು.[೪೬೩] ಭಸ್ಮಸ್ನಾನದಿಂದಲೇ ಮಾನವನು ಪ್ರಕೃತಿಯ ಬಂಧನದಿಂದ ಬಿಡುಗಡೆ ಹೊಂದುತ್ತಾನೆ. ಅದನ್ನು ಸಿದ್ಧಾಂತ ಶಿಖಾಮಣಿಯು ಹೀಗೆ ನಿರೂಪಿಸುತ್ತದೆ-

> ಆರ್ದ್ರಂ ತು ಪ್ರಕೃತಿಂ ವಿಂದ್ಯಾತ್ ಪ್ರಕೃತಿಂ ಬಂಧನಂ ವಿದುಃ।
> ಪ್ರಕೃತೇಸ್ತು ಪ್ರಹಾಣಾರ್ಥಂ ಭಸ್ಮನಾ ಸ್ನಾನಮಿಷ್ಯತೇ॥[೪೬೪]

ಇದರ ಭಾವವಿಷ್ಟು- ರಕ್ತ-ಶುಕ್ಲಗಳು ಜಲಮಯವಾಗಿರುವುದರಿಂದ ಅವೆರಡರಿಂದಲೇ ಜನನವು ಸಂಭವಿಸುವುದರಿಂದಲೂ, ಜಲವು ಬಂಧನಕಾರಕವಾದ ಪ್ರಕೃತಿ ಎಂದು ಕರೆಯಲ್ಪಟ್ಟಿದೆ. "ಪುರುಷಃ ಪ್ರಕೃತಿಸ್ಥೋ ಹಿ ಭುಂಕ್ತೇ ಪ್ರಕೃತಿಜಾನ್ ಗುಣಾನ್"[೪೬೫] (ಪುರುಷನು ಪ್ರಕೃತಿಯಲ್ಲಿದ್ದು, ಪ್ರಕೃತಿಯಿಂದುಂಟಾದ ಗುಣಗಳನ್ನು ಭೋಗಿಸುತ್ತಾನೆ) ಎಂಬ ಭಗವಂತನ ವಾಕ್ಯದಲ್ಲಿ ಪುರುಷನ ಬಂಧಕಾರಕವೂ ಪ್ರಕೃತಿ ಎಂದು ಹೇಳಲ್ಪಟ್ಟಿದೆ. ಆ ಪ್ರಕೃತಿಯ ಮುಕ್ತಿಗೋಸ್ಕರ ಅದರ ನಾಶವು ಅವಶ್ಯಕವಾಗಿದೆ. ಪ್ರತಿನಿತ್ಯವೂ ಭಸ್ಮಸ್ನಾನ ಮಾಡುವುದರಿಂದ ಜಲಪಾನ ಮತ್ತು ಜಲಸ್ನಾನಗಳಿಂದುಂಟಾಗುವ ದೋಷಗಳ ನಿವೃತ್ತಿ ಮತ್ತು ಪ್ರಕೃತಿಯು ಶುದ್ಧಿಯಾಗುತ್ತದೆ ಎನ್ನುವ ಕಾರಣ ಎಲ್ಲರೂ ಅದನ್ನು ಅವಶ್ಯವಾಗಿ ಮಾಡಲೇಬೇಕು. ಈ ಭಸ್ಮಸ್ನಾನದಿಂದ ಬ್ರಹ್ಮಾದಿ ದೇವತೆಗಳು, ನಾರದಾದಿ ಮಹರ್ಷಿಗಳು, ಸನಕಾದಿ ಯೋಗಿಗಳು ಮತ್ತು ಬಾಣಾದಿ ರಾಕ್ಷಸರು ದೋಷದಿಂದ ನಿವೃತ್ತರಾದರು.[೪೬೬]

---

[೪೬೩] ಭಸ್ಮನಾ ವಿಹಿತಂ ಸ್ನಾನಮಿದಮಾಗ್ನೇಯಮುತ್ತಮಮ್।
ಸ್ನಾನೇಷು ವಾರುಣಾದ್ಯೇಷು ಮುಖ್ಯಮೇತನ್ಮಲಾಪಹಮ್॥
ಭಸ್ಮಸ್ನಾನವತಾಂ ಪುಂಸಾಂ ಯಥಾಯೋಗಂ ದಿನೇ ದಿನೇ।
ವಾರುಣಾದ್ಯೈರಲಂ ಸ್ನಾನೈರ್ಬಾಹ್ಯದೋಷಾಪಹಾರಿಭಿಃ॥ -ಸಿ.ಶಿ, ೭.೨೨-೨೩

[೪೬೪] ಸಿ.ಶಿ, ೭.೨೫

[೪೬೫] ಭಗವದ್ಗೀತಾ, ೧೩.೨೧

[೪೬೬] ಬ್ರಹ್ಮಾದ್ಯಾ ವಿಬುಧಾಃ ಸರ್ವೇ ಮುನಯೋ ನಾರದಾದಯಃ।
ಯೋಗಿನಃ ಸನಕಾದ್ಯಾಶ್ಚ ಬಾಣಾದ್ಯಾ ದಾನವಾ ಅಪಿ॥
ಭಸ್ಮಸ್ನಾನಯುತಾಃ ಸರ್ವೇ ಶಿವಭಕ್ತಿಪರಾಯಣಾಃ।
ನಿರ್ಮುಕ್ತಂ ದೋಷಕಲಿಲಾ ನಿತ್ಯಶುದ್ಧಾ ಭವಂತಿ ಹಿ॥ -ಸಿ.ಶಿ, ೭.೨೬-೨೭

ಪೂರ್ವೋಕ್ತ ವಿಧಾನದಿಂದ ಭಸ್ಮಸ್ನಾನ ಮಾಡುವ ಸಂದರ್ಭದಲ್ಲಿ ಭಸ್ಮದ ಕಣಗಳು ಭೂಮಿಯ ಮೇಲೆ ಬೀಳದಂತೆ ಜಾಗರೂಕರಾಗಿರಬೇಕೆಂಬುದನ್ನು ಅರಿಯ ಬೇಕು. ಒಂದು ವೇಳೆ ಬಿದ್ದರೆ ದೊಡ್ಡದಾದ ಅನರ್ಥವಾಗುತ್ತದೆಂದು ಶ್ರೀ ನೀಲಕಂಠ ಶಿವಾಚಾರ್ಯರು-

ಯಾವಂತಃ ಪತಿತಾ ಭೂಮೌ ಭಸ್ಮನಃ ಪರಮಾಣವಃ।
ತಾವದ್ವರ್ಷಸಹಸ್ರಾಣಿ ರೌರವಂ ನರಕಂ ವ್ರಜೇತ್॥[೪೬೭]

"ಭಸ್ಮದ ಎಷ್ಟು ಕಣಗಳು ಭೂಮಿಯ ಮೇಲೆ ಬೀಳುತ್ತವೆಯೋ ಅಷ್ಟು ಸಾವಿರ ವರ್ಷಗಳ ಕಾಲ ರೌರವನರಕಕ್ಕೆ ಹೋಗುತ್ತಾನೆ" ಎಂದು ಪುರುಷಾರ್ಥ ಪ್ರಬೋಧಕವಾದ ವಚನವನ್ನು ಉದಾಹರಿಸಿ ನಮ್ಮನ್ನು ಜಾಗೃತಗೊಳಿಸಿದ್ದಾರೆ. ಆದುದರಿಂದ ಅವಧಾನದಿಂದಲೇ ಭಸ್ಮಸ್ನಾನವನ್ನು ಮಾಡಬೇಕು. ಈ ಬಗೆಯ ಭಸ್ಮಸ್ನಾನದಿಂದ ಶರೀರದಲ್ಲಿರುವ ಎಲ್ಲ ರೋಮದ ರಂಧ್ರಗಳೂ ಸಹ ಭಸ್ಮದಿಂದ ತುಂಬುತ್ತವೆ ಮತ್ತು ಭಸ್ಮದಿಂದ ತುಂಬಿದ ಶರೀರವು ಶಿವಮಯವಾಗುತ್ತದೆ. ಅದನ್ನು ಉಪನಿಷತ್ತಿನಲ್ಲಿ- "ಜನಕೋ ಹ ವೈದೇಹಃ ಸ ಹೋವಾಚ ಯಾಜ್ಞವಲ್ಕ್ಯ! ಭಸ್ಮಸ್ನಾನೇನ ಕಿಂ ಜಾಯತ ಇತಿ ಯಸ್ಯ ಕಸ್ಯಚಿಚ್ಛರೀರೇ ಯಾವಂತೋ ರೋಮಕೂಪಾಸ್ತಾವಂತಿ ಲಿಂಗಾನಿ ಭೂತ್ವಾ ತಿಷ್ಠಂತಿ."

ಭಸ್ಮಸ್ನಾನದಿಂದಾಗುವ ವೈಜ್ಞಾನಿಕ ಲಾಭಗಳು

ಗೋಮಯದಿಂದ ತಯಾರಿಸಿದ ಭಸ್ಮದಲ್ಲಿ ರೋಗಾಣುನಾಶಕ ಸಾಮರ್ಥ್ಯವಿದೆ ಯೆಂದು ತಿಳಿದಿರುವುದರಿಂದ, ಶರೀರಕ್ಕೆ ಅದನ್ನು ಲೇಪಿಸಿಕೊಳ್ಳುವುದರಿಂದ ಇರುವ ಚರ್ಮರೋಗಗಳು ನಾಶವಾಗುತ್ತವೆ ಮತ್ತು ಇತರೆ ಹೊಸ ರೋಗಗಳು ಬರುವುದಿಲ್ಲ. ಆಧುನಿಕ ಸಮಾಜದಲ್ಲಿ ಸೌಂದರ್ಯವರ್ಧನೆಗೆ 'ಸ್ನೋ, ಪೌಡರ್' ಎಂಬ ಶುಭ್ರ ದ್ರವ್ಯವನ್ನು ಶರೀರಕ್ಕೆ ಲೇಪನ ಮಾಡಲು ಉಪಯೋಗಿಸಲ್ಪಡುತ್ತಿದೆ. ಆ ದ್ರವ್ಯದಲ್ಲಿ ಸುಗಂಧವನ್ನು ಬಿಟ್ಟು ಚರ್ಮವನ್ನು ಪೋಷಿಸುವ ಅಥವಾ ಸಂರಕ್ಷಿಸುವ ಯಾವುದೇ ಗುಣವೂ ಇರುವುದಕ್ಕೆ ಬದಲಾಗಿ, ಹೆಚ್ಚು ದಿನಗಳ ಕಾಲ ಅದನ್ನು ಉಪಯೋಗಿಸುವುದರಿಂದ 'ಚರ್ಮದ ಕ್ಯಾನ್ಸರ್' ಎಂಬ ಚರ್ಮರೋಗವು ಬರುತ್ತದೆಂದು ಪೌರ್ವಾತ್ಯ-ಪಾಶ್ಚಾತ್ತ್ಯ ದೇಶಗಳ ವೈದ್ಯ ವಿಜ್ಞಾನಿಗಳ ಅಭಿಪ್ರಾಯವು ಪತ್ರಿಕೆಗಳಲ್ಲಿ ಪ್ರಕಟವಾಗಿರುವುದನ್ನು ನೋಡಿದ್ದೇವೆ. ಆದುದರಿಂದ ಆರೋಗ್ಯಾಕಾಂಕ್ಷಿಗಳು ಸ್ನೋ-ಪೌಡರ್‌ಗಳನ್ನು ತ್ಯಜಿಸಿ, ಗೋಮಯದ ಭಸ್ಮವನ್ನೇ ಅಂಗಾಂಗಗಳಿಗೆ ಲೇಪಿಸಿಕೊಳ್ಳತಕ್ಕದ್ದು. ಒಂದು ವೇಳೆ ಸುಗಂಧವನ್ನು ಇಚ್ಛಿಸಿದರೆ, ಆ ಭಸ್ಮಕ್ಕೆ ಶ್ರೀಗಂಧ, ಕಾಶ್ಮೀರದಲ್ಲಿ ಬೆಳೆಯುವ ಲಾಮಂಚದ ಬೇರಿನ ಸುಗಂಧ ನೀರನ್ನು ಮಿಶ್ರಣ ಮಾಡತಕ್ಕದ್ದು.[೪೬೮] ಅಂತಹ

---

೪೬೭. ಕ್ರಿಯಾಸಾರ, ಭಾಗ-೨, ಪು. ೨೨

೪೬೮. ಸಂಯೋಜ್ಯ ಗಂಧಸಲಿಲೈಃ ಕಪಿಲಾಮೂತ್ರಕೇಣ ವಾ।
ಚಂದ್ರಕುಂಕುಮಕಾಶ್ಮೀರಮುಶೀರಂ ಚಂದನಂ ತಥಾ॥
ಅಗುರುತ್ರಿತಯಂ ಚೈವ ಚೂರ್ಣಯಿತ್ವಾ ತು ಸೂಕ್ಷ್ಮತಃ।
ಕ್ಷಿಪೇದ್ ಭಸ್ಮನಿ ತಚ್ಚೂರ್ಣಮೋಮಿತಿ ಬ್ರಹ್ಮಮಂತ್ರತಃ॥ -ಬೃ.ಜಾ.ಉ,೩.೨೭-೨೮

ಭಸ್ಮಸ್ನಾನದಿಂದ ಶರೀರದ ಆರೋಗ್ಯ, ಸುಗಂಧ ಹಾಗೂ ಮಾನಸಿಕ ಶಾಂತಿಯೂ ದೊರೆಯುತ್ತದೆ.

ಭಸ್ಮೋದ್ಧೂಲನ

ಭಸ್ಮೋದ್ಧೂಲನವು ಭಸ್ಮಧಾರಣೆಯ ವಿಧಿಯಲ್ಲಿ ಎರಡನೆಯದು. 'ಉತ್ಕೃಷ್ಟಂ ದೂಲನಮ್ ಉದ್ಧೂಲನಮ್' ಎಂಬ ನಿರ್ವಚನದಂತೆ ಭಸ್ಮಸ್ನಾನದ ಸಂದರ್ಭದಲ್ಲಿ ಎಲ್ಲ ಅಂಗಾಂಗಗಳ ಮೇಲೆ ಬಿದ್ದಂತಹ ಭಸ್ಮದ ಕಣಗಳನ್ನು ಸರಿಯಾಗಿ ಲೇಪಿಸಿ ಕೊಳ್ಳುವುದೇ ಭಸ್ಮೋದ್ಧೂಲನ. "ಉದ್ಧೂಲಯೇತ್ ತೇನ ದೇಹಂ ತ್ರಿಪುಂಡ್ರಂ ಚಾಪಿ ಧಾರಯೇತ್"[೪೧೯] ಎಂಬ ಶ್ರೀ ರೇಣುಕ ಭಗವತ್ಪಾದರ ಅಪ್ಪಣೆಯ ಮೇರೆಗೆ ತ್ರಿಪುಂಡ್ರಧಾರಣೆಗೆ ಮೊದಲೇ ಉದ್ಧೂಲನವನ್ನು ಮಾಡಿಕೊಳ್ಳಬೇಕು. ವಿಧಿವತ್ತಾಗಿ ಮಾಡುವ ಭಸ್ಮೋದ್ಧೂಲನದಿಂದ ಶರೀರದಲ್ಲಿರುವ ಪರಮಾಣುಗಳೂ ಸಹ ಬದಲಾಗುತ್ತವೆ. ಶ್ಯಾಮಲ ವರ್ಣದ ಶ್ರೀಹರಿಗೆ ಭಸ್ಮೋದ್ಧೂಲನದಿಂದ ಶುಭ್ರವರ್ಣವು ಪ್ರಾಪ್ತವಾಯಿತೆಂಬ ರೋಚಕವಾದ ಕಥೆಯು ಬೃಹಜ್ಜಾಬಾಲೋಪನಿಷತ್ತಿನಲ್ಲಿ ಪ್ರತಿಪಾದಿತವಾಗಿದೆ. ಆದುದರಿಂದ ಅಂತರಂಗ-ಬಹಿರಂಗಗಳ ಶುಭ್ರತ್ವವನ್ನು ಅಪೇಕ್ಷಿಸುವವರೆಲ್ಲರೂ ಸಹ ಭಸ್ಮೋದ್ಧೂಲನವನ್ನೇ ಮಾಡಿಕೊಳ್ಳತಕ್ಕದ್ದು.

ತ್ರಿಪುಂಡ್ರಧಾರಣೆ ಮತ್ತು ಅದನ್ನು ಧರಿಸುವ ಸ್ಥಾನಗಳು

ಭಸ್ಮಧಾರಣವಿಧಿಯಲ್ಲಿ ತ್ರಿಪುಂಡ್ರಧಾರಣವು ಅಂತಿಮ ಮತ್ತು ಮಹತ್ತ್ವಪೂರ್ಣವಾದ ವಿಧಿ. ಆದುದರಿಂದಲೇ- "ಸರ್ವಾಂಗೋದ್ಧೂಲನಂ ಚಾಪಿ ನ ಸಮಾನಂ ತ್ರಿಪುಂಡ್ರಕೈಃ"[೪೨೦] (ಎಲ್ಲ ಅಂಗಗಳಿಗೆ ಮಾಡಿಕೊಂಡ ಉದ್ಧೂಲನವು ತ್ರಿಪುಂಡ್ರಧಾರಣೆಗೆ ಸಮನಲ್ಲ) ಎಂದು ಶ್ರೀ ರೇಣುಕಾಚಾರ್ಯರು ಹೇಳಿದ್ದಾರೆ. "ತ್ರಿಪುಂಡ್ರಂ ಧಾರಯೇನ್ನಿತ್ಯಂ ಭಸ್ಮನಾ ಸಜಲೇನ ಹಿ"[೪೨೧] (ನೀರಿನೊಂದಿಗೆ ಭಸ್ಮವನ್ನು ಮಿಶ್ರಣಮಾಡಿಕೊಂಡು ನಿತ್ಯವೂ ತ್ರಿಪುಂಡ್ರವನ್ನು ಧರಿಸಿಕೊಳ್ಳಬೇಕು) ಎಂಬ ಆಚಾರ್ಯರ ಆದೇಶದಂತೆ ಎಡಗೈಯಲ್ಲಿ ಭಸ್ಮವನ್ನು ತೆಗೆದುಕೊಂಡು, "ಅಗ್ನಿರಿತಿ ಭಸ್ಮ ವಾಯುರಿತಿ ಭಸ್ಮ..."[೪೨೨] ಎಂಬ ಮಂತ್ರದಿಂದ ಶುದ್ಧಿಗೊಳಿಸಿ, "ಮಾ ನ ಸ್ತೋಕೇ ತನಯೇ ಮಾ ನ..."[೪೨೩] ಎಂಬ ಮಂತ್ರದಿಂದ ಅದಕ್ಕೆ ನೀರನ್ನು ಮಿಶ್ರಣಮಾಡಿ, ಪಂಚಾಕ್ಷರೀ ಮಂತ್ರದಿಂದ ಎಂಟು ಸಲ ಮಂತ್ರಿಸಿ, ಓಂ ಶಿವಾಯ ನಮಃ ಎಂದು ತಲೆಯಲ್ಲಿ, ಓಂ ಮಹೇಶ್ವರಾಯ ನಮಃ ಎಂದು ಹಣೆಯಲ್ಲಿ, ಓಂ ರುದ್ರಾಯ ನಮಃ ಎಂದು ಎರಡೂ ಕಿವಿಗಳಲ್ಲಿ

---

[೪೧೯] ಸಿ.ಶಿ, ೭.೨೮

[೪೨೦] ಸಿ.ಶಿ, ೭.೨೯

[೪೨೧] ಸಿ.ಶಿ, ೭.೩೦

[೪೨೨] ಅಥರ್ವಶಿರೋಪನಿಷತ್, ೫

[೪೨೩] ತೈತ್ತಿರೀಯಸಂಹಿತಾ, ೪-೫-೧೦

ಓಂ ಶ್ರೀಕಂಠಾಯ ನಮಃ ಎಂದು ಕಂಠದಲ್ಲಿ, ಓಂ ಶಂಭವೇ ನಮಃ ಎಂದು ಎರಡೂ ಭುಜಗಳಲ್ಲಿ, ಓಂ ಈಶ್ವರಾಯ ನಮಃ ಎಂದು ಹೃದಯದಲ್ಲಿ, ಓಂ ಮಹಾದೇವಾಯ ನಮಃ ಎಂದು ನಾಭಿಯಲ್ಲಿ, ಓಂ ಪಶುಪತಯೇ ನಮಃ ಎಂದು ಬೆನ್ನಿನಲ್ಲಿ, ಓಂ ಶಂಕರಾಯ ನಮಃ ಎಂದು ಎರಡೂ ತೋಳುಗಳಲ್ಲಿ, ಓಂ ವೃಷಭಾಯ ನಮಃ ಎಂದು ಜನನೇಂದ್ರಿಯದಲ್ಲಿ, ಓಂ ಪರಮಾತ್ಮನೇ ನಮಃ ಎಂದು ಎರಡೂ ಮಣಿಕಟ್ಟಿನಲ್ಲಿ -ಈ ರೀತಿಯಾಗಿ ಮಂತ್ರೋಚ್ಚಾರಣೆ ಮಾಡುತ್ತಾ ಮುಖ್ಯವಾದ ಹದಿನೈದು ಸ್ಥಾನಗಳಲ್ಲಿ ತ್ರಿಪುಂಡ್ರಧಾರಣೆಯನ್ನು ಮಾಡಬೇಕೆಂದು ಶ್ರೀ ರೇಣುಕ ಭಗವತ್ಪಾದರು ಅಪ್ಪಣೆಮಾಡಿದ್ದಾರೆ.[೪೭೪]

ಬೃಹಜ್ಜಾಬಾಲೋಪನಿಷತ್,[೪೭೫] ಚಂದ್ರಜ್ಞಾನಾಗಮ[೪೭೬] ಮತ್ತು ಶಿವಪುರಾಣ[೪೭೭]ಗಳಲ್ಲಿ ೩೨, ೧೬, ೮, ೫ ಸ್ಥಾನಗಳೆಂದು ತ್ರಿಪುಂಡ್ರಧಾರಣೆಯ ಸ್ಥಾನಭೇದಗಳು ನಿರೂಪಿತ ವಾಗಿವೆ. ಅದರಂತೆ ತಲೆ, ಹಣೆ, ಎರಡು ಕಿವಿಗಳು, ಎರಡು ಕಣ್ಣುಗಳು, ಎರಡು ಮೂಗಿನ ಹೊಳ್ಳೆಗಳು, ಮುಖ, ಕುತ್ತಿಗೆ, ಎರಡು ಹೆಗಲುಗಳು, ಎರಡು ಮೊಣಕೈಗಳು, ಎರಡು ಮಣಿಕಟ್ಟುಗಳು, ಹೃದಯ, ಎರಡು ಪಕ್ಕೆಗಳು, ನಾಭಿ, ಎರಡು ಗುಹ್ಯಗಳು, ಎರಡು ತೊಡೆಗಳು, ಎರಡು ನಿತಂಬಗಳು, ಎರಡು ಮಂಡಿಗಳು, ಎರಡು ಮೀನಗಂಡಗಳು ಮತ್ತು ಎರಡು ಪಾದಗಳು -ಇವೇ ಮೂವತ್ತೆರಡು ಸ್ಥಾನಗಳು. ತಲೆ, ಹಣೆ, ಕುತ್ತಿಗೆ, ಎರಡು ಹೆಗಲುಗಳು, ಎರಡು ಭುಜಗಳು, ಎರಡು ಮೊಣಕೈಗಳು, ಎರಡು ಮಣಿಕಟ್ಟುಗಳು, ಹೃದಯ, ಹೊಕ್ಕಳು, ಎರಡು ಪಕ್ಕೆಗಳು, ಬೆನ್ನು -ಇವುಗಳು ಹದಿನಾರು ಸ್ಥಾನಗಳು. ತಲೆ, ಹಣೆ, ಎರಡು ಕಿವಿಗಳು, ಎರಡು ಹೆಗಲುಗಳು, ಹೃದಯ ಮತ್ತು ಹೊಕ್ಕಳು -ಇವು ಎಂಟು ಸ್ಥಾನಗಳು. ಅಂತೆಯೇ ಹಣೆ, ಎರಡು ಭುಜಗಳು, ಹೃದಯ ಮತ್ತು ಹೊಕ್ಕಳು -ಇವು ಐದು ಸ್ಥಾನಗಳು.

ಪೂರ್ವೋಕ್ತಗಳಾದ ಆಯಾ ಅವಯವಗಳಿಗೆ ತ್ರಿಪುಂಡ್ರಧಾರಣೆ ಮಾಡುವುದರಿಂದ ಆಯಾ ಅಂಗಗಳಲ್ಲಿ ಉಂಟಾಗುವ ಪಾಪಗಳ ನಿವಾರಣೆಯಾಗುತ್ತದೆಂದು ಇಷ್ಟಬಂದಂತೆ

---

[೪೭೪] ತ್ರಿಪುಂಡ್ರಂ ಧಾರಯೇನ್ನಿತ್ಯಂ ಭಸ್ಮನಾ ಸಲಿಲೇನ ಚ।
ಸ್ಥಾನೇಷು ಪಂಚದಶಸು ಶರೀರೇ ಸಾಧಕೋತ್ತಮಃ॥
ಉತ್ತಮಾಂಗೇ ಲಲಾಟೇ ಚ ಶ್ರವಣದ್ವಿತಯೇ ತಥಾ।
ಗಲೇ ಭುಜದ್ವಯೇ ಚೈವ ಹೃದಿ ನಾಭೌ ಚ ಪೃಷ್ಠಕೇ॥
ಬಾಹುಯುಗ್ಮೇ ಕುದ್ದೇಶೇ ಮಣಿಬಂಧದ್ವಯೇ ತಥಾ।
ತ್ರಿಪುಂಡ್ರಂ ಭಸ್ಮನಾ ಧಾರ್ಯಂ ಮೂಲಮಂತ್ರೇಣ ಸಾಧಕೈಃ॥ -ಸಿ.ಶಿ, ೭.೩೦-೩೧

[೪೭೫] ಬೃ.ಜಾ.ಉ, ೪.೧೨-೩೬

[೪೭೬] ಚಂ.ಜ್ಞಾ, ಕ್ರಿ.ಪಾ, ೬.೪೪-೫೬

[೪೭೭] ಶಿವಪುರಾಣ, ವಿದ್ಯೇಶ್ವರ ಸಂಹಿತಾ, ೨೪.೯೮-೧೦೪

ಹೆಚ್ಚು ಹೆಚ್ಚು ಸ್ಥಾನಗಳಲ್ಲಿ ಭಸ್ಮದಿಂದ ತ್ರಿಪುಂಡ್ರಧಾರಣೆಯನ್ನು ಮಾಡುವುದು ಲಾಭವೇ ಆಗಿರುತ್ತದೆ. ಹೆಚ್ಚು ಸ್ಥಾನಗಳಲ್ಲಿ ತ್ರಿಪುಂಡ್ರಧಾರಣೆ ಮಾಡದಿದ್ದರೂ ಸಹ ಹಣೆಯಲ್ಲಿ ಅವಶ್ಯವಾಗಿ ಧರಿಸತಕ್ಕದ್ದು. ಅನ್ಯಥಾ ವಾಯವೀಯಸಂಹಿತೆಯು-

ಯೇಷಾಂ ವಪುರ್ಮನುಷ್ಯಾಣಾಂ ತ್ರಿಪುಂಡ್ರೇಣ ವಿನಾ ಸ್ಥಿತಮ್।
ಸ್ಮಶಾನಸದೃಶಂ ತಸ್ಮಾನ್ನ ಪ್ರೇಕ್ಷ್ಯಂ ಪುಣ್ಯಕೃಜ್ಜನೈಃ॥
ಧಿಗ್ ಭಸ್ಮರಹಿತಂ ಭಾಲಂ ಧಿಗ್ ಗ್ರಾಮಮಶಿವಾಲಯಮ್॥[೪೭೮]

"ಯಾವನ ಶರೀರವು ತ್ರಿಪುಂಡ್ರವಿಲ್ಲದೆ ಇರುತ್ತದೆಯೋ ಅವನ ಶರೀರವು ಸ್ಮಶಾನ ಸದೃಶವಾಗಿರುತ್ತದೆ. ಆದುದರಿಂದ ಪುಣ್ಯವಂತರು ಅದನ್ನು ನೋಡಬಾರದು. ಭಸ್ಮವಿಲ್ಲದ ಹಣೆ, ಶಿವನ ದೇವಾಲಯವಿಲ್ಲದ ಗ್ರಾಮಗಳಿಗೆ ಧಿಕ್ಕಾರ" ಎಂಬ ಮಾತಿನ ಮೇರೆಗೆ ಅಂತಹವನ ಜನ್ಮಕ್ಕೆ ಧಿಕ್ಕಾರ.

ಅಡ್ಡ ತ್ರಿಪುಂಡ್ರಧಾರಣೆಯ ಮಹಿಮೆ

"ಯಾವನ ಶರೀರದಲ್ಲಿನ ತ್ರಿಪುಂಡ್ರಧಾರಣೆಯ ಚಿಹ್ನೆಗಳಲ್ಲಿ ಮೊದಲನೆಯದು ಬ್ರಹ್ಮ, ಎರಡನೆಯದು ವಿಷ್ಣು ಮತ್ತು ಮೂರನೆಯದು ಶಿವ"[೪೭೯] "ತ್ರಿಪುಂಡ್ರಂ ಕಾರಯೇದ್ಧೀಮಾನ್ ಬ್ರಹ್ಮವಿಷ್ಣುಶಿವಾತ್ಮಕಮ್"[೪೮೦] (ಬ್ರಹ್ಮ, ವಿಷ್ಣು, ಶಿವ -ಇವರ ಸ್ವರೂಪವಾದ ತ್ರಿಪುಂಡ್ರವನ್ನು ಬುದ್ಧಿವಂತನು ಧರಿಸಬೇಕು) ಇತ್ಯಾದಿ ವೇದಾಗಮಗಳ ಉಕ್ತಿಯ ಮೇರೆಗೆ ಅಡ್ಡವಾಗಿ ಧರಿಸುವ ತ್ರಿಪುಂಡ್ರದಲ್ಲಿನ ಮೂರು ರೇಖೆಗಳು ಕ್ರಮವಾಗಿ ಬ್ರಹ್ಮ, ವಿಷ್ಣು ಮತ್ತು ಶಿವ ಇವರ ಸ್ವರೂಪವೆಂದು ಉಪದೇಶಿಸಲಾಗಿದೆ. ತ್ರಿಮೂರ್ತಿಗಳ ವಿಷಯದಲ್ಲಿ ಯಾರು ಬೇರೆ ಬೇರೆಯಾಗಿ ನಿಷ್ಠರಾಗಿರುವ ಯಾವ ಭಕ್ತರು ಇರುವರೋ ಅವರೆಲ್ಲರೂ ಸಹ ಎಲ್ಲ ದೇವತೆಗಳ ಸಮನ್ವಯಾತ್ಮಕವಾದ ಈ ತ್ರಿಪುಂಡ್ರವನ್ನು ಧರಿಸತಕ್ಕದ್ದು. ಆದುದರಿಂದಲೇ- "ಸಮಸ್ತತತ್ತ್ವೈಕರಸಾ ವಿಭೂತಿಸ್ತಥೈವ ಪುಂಡ್ರೋऽಯ ಮಯಂ ತ್ರಿಪುಂಡ್ರಃ"[೪೮೧] ಎಂಬ ಶಿವರಹಸ್ಯದ ಉಕ್ತಿಯನ್ನು ನೀಲಕಂಠ ಶಿವಾಚಾರ್ಯರು ಉದಾಹರಿಸಿದ್ದಾರೆ.

ಈ ಜಗತ್ತಿನಲ್ಲಿ ವೈಷ್ಣವರು ಊರ್ಧ್ವಪುಂಡ್ರವನ್ನು (ಉದ್ದವಾಗಿ) ಮತ್ತು ಶೈವರು ಅಡ್ಡವಾಗಿ ಪುಂಡ್ರವನ್ನು ಧರಿಸುವುದು ಕಂಡುಬರುತ್ತದೆ. ಇಬ್ಬರೂ ಸಹ ತಮ್ಮ ಸಂಪ್ರದಾಯಗಳ ಸಮರ್ಥನೆಯ ಪ್ರಮಾಣಗಳನ್ನು ಧರಿಸಿರುತ್ತಾರೆ. ಅಡ್ಡವಾಗಿ ತ್ರಿಪುಂಡ್ರ ಧಾರಣೆ ಮಾಡುವುದಕ್ಕೆ ಪ್ರಮಾಣವೇನು? ಎಂಬ ಜಿಜ್ಞಾಸೆಗೆ ಶ್ರೀ ನೀಲಕಂಠ ಶಿವಾಚಾರ್ಯರು-

---

[೪೭೮] ಕ್ರಿ.ಸಾ, ಭಾಗ-೨, ಪು. ೮೪

[೪೭೯] ಯಸ್ಯ ಕಸ್ಯಚಿಚ್ಛರೀರೇ ತ್ರಿಪುಂಡ್ರಸ್ಯ ಲಕ್ಷ್ಮ ವರ್ತತೇ। ಪ್ರಥಮಾ ಪ್ರಜಾಪತಿರ್ದ್ವಿತೀಯಾ ವಿಷ್ಣುಸ್ತೃತೀಯಾ ಸದಾಶಿವ ಇತಿ. -ಬೃ.ಜಾ.ಉ, ೭.೭

[೪೮೦] ಚ.ಜ್ಞಾ, ಕ್ರಿ.ಪಾ, ೬.೪೩

[೪೮೧] ಕ್ರಿ.ಸಾ, ಭಾಗ-೨, ಪು. ೮೭

ಸ್ರಷ್ಟಾ ಸೃಷ್ಟಿಚ್ಛಲೇನಾಹ ತ್ರಿಪುಂಡ್ರಸ್ಯ ಪ್ರಶಸ್ತತಾಮ್।
ಸಸರ್ಜ ಸ ಲಲಾಟಂ ಹಿ ತಿರ್ಯಗ್ ನೋರ್ಧ್ವಂ ನ ವರ್ತುಲಮ್॥
ತಿರ್ಯಗ್ರೇಖಾಃ ಪ್ರಕಾಶಂತೇ ಲಲಾಟೇ ಸರ್ವದೇಹಿನಾಮ್।
ತಥಾಪಿ ಮಾನವಾ ಮೂರ್ಖಾ ನ ಕುರ್ವಂತಿ ತ್ರಿಪುಂಡ್ರಕಮ್॥
ನ ತದ್ಧ್ಯಾನಂ ನ ತದ್ದಾನಂ ನ ತಜ್ಜ್ಞಾನಂ ನ ತತ್ತಪಃ।
ವಿನಾ ತಿರ್ಯಕ್ ತ್ರಿಪುಂಡ್ರಾಂಕಂ ವಿಪ್ರೇಣ ಯದನುಷ್ಠಿತಮ್॥[೪೮೨]

"ಸೃಷ್ಟಿಕರ್ತನು ಸೃಷ್ಟಿ ಮಾಡುವ ಮೂಲಕ ತ್ರಿಪುಂಡ್ರದ ಶ್ರೇಷ್ಠತ್ವವನ್ನು ಹೇಳಿದ್ದಾನೆ. ಹಣೆಯನ್ನು ಅವನು ಅಡ್ಡಡ್ಡವಾಗಿ ಸೃಷ್ಟಿಸಿದ್ದಾನೆ. ಉದ್ದುದ್ದವಾಗಿ ಅಥವಾ ದುಂಡಾಗಿ ಅಲ್ಲ. ಪ್ರತಿಯೊಬ್ಬ ಮನುಷ್ಯನ ಹಣೆಯ ಮೇಲೆ ಮೂರು ಅಡ್ಡಡ್ಡ ರೇಖೆಗಳು ಕಾಣಿಸುತ್ತವೆ. ಆದರೂ ಮೂರ್ಖ ಜನರು ತ್ರಿಪುಂಡ್ರವನ್ನು ಧರಿಸುವುದಿಲ್ಲ. ಅಡ್ಡವಾದ ತ್ರಿಪುಂಡ್ರದ ಗುರುತಿಲ್ಲದೆ ಬ್ರಾಹ್ಮಣನು ಯಾವುದನ್ನು ಮಾಡುತ್ತಾನೋ ಅದು ಧ್ಯಾನವೂ ಅಲ್ಲ, ದಾನವೂ ಅಲ್ಲ, ಜ್ಞಾನವೂ ಅಲ್ಲ, ಹಾಗೆಯೇ ತಪಸ್ಸೂ ಅಲ್ಲ" ಎಂಬ ಕೂರ್ಮಪುರಾಣದ ಉಕ್ತಿಯನ್ನು ಉದಾಹರಿಸಿ ಹಣೆಯು ಉದ್ದವಾಗಿ ಅಥವಾ ದುಂಡಾಕಾರವಾಗಿ ಇರದೆ, ಸ್ವಾಭಾವಿಕವಾಗಿ ಅದು ಅಡ್ಡವಾಗಿರುವುದರಿಂದ, ಅದರಲ್ಲಿರುವ ರೇಖೆಗಳೂ ಸಹ ಅಡ್ಡವಾಗಿ ಇರುವುದರಿಂದ ಭಸ್ಮವನ್ನು ಅಡ್ಡವಾಗಿ ತ್ರಿಪುಂಡ್ರಾಕಾರವಾಗಿಯೇ ಧಾರಣೆ ಮಾಡಬೇಕೆಂಬುದನ್ನು ಯುಕ್ತಿಯುಕ್ತವಾಗಿ ತೋರಿಸಿ, ತ್ರಿಪುಂಡ್ರಧಾರಣೆಯಿಲ್ಲದೆ ಮಾಡಿದ ಧ್ಯಾನ, ದಾನ, ಜ್ಞಾನ, ತಪಸ್ಸುಗಳು ನಿಷ್ಫಲವೆಂದು ಉಪದೇಶಿಸಿದ್ದಾರೆ. ಆದುದರಿಂದ ಶಾಸ್ತ್ರಗಳ ಬಲದಿಂದಲೂ ಮತ್ತು ಸ್ವಾಭಾವಿಕವಾದ ಪ್ರಕೃತಿಯ ನಿಯಮದಿಂದಲೂ ಅಡ್ಡವಾಗಿ ತ್ರಿಪುಂಡ್ರಧಾರಣೆಯನ್ನು ಮಾಡಬೇಕು. ತ್ರಿಪುಂಡ್ರಧಾರಣೆಯು ಎರಡು ವಿಧವಾಗಿದೆ. ಅದನ್ನು ಕುರಿತು ಈಗ ವಿಚಾರ ಮಾಡಲಾಗುವುದು.

ತ್ರಿಪುಂಡ್ರಧಾರಣೆಯ ಪ್ರಕಾರಗಳು ಮತ್ತು ಅದರ ಫಲ

ಬಲಗೈನ ಮಧ್ಯದ ಮೂರು ಬೆರಳುಗಳಿಂದ ಆರು ಅಂಗುಲ ಉದ್ದವಾದ, ಹಣೆಯ ಪ್ರಮಾಣಕ್ಕೆ, ಕಿವಿಗಳವರೆಗೆ, ಎರಡೂ ಕಣ್ಣುಗಳ ಮಧ್ಯದಲ್ಲಿರುವ ಹಣೆಯವರೆಗೆ ತ್ರಿಪುಂಡ್ರಧಾರಣೆ ಮಾಡುವುದು ಮೊದಲನೆಯ ಪ್ರಕಾರ. ಅನುಲೋಮ (ಕ್ರಮವಾಗಿ) -ವಿಲೋಮ (ವಿಪರೀತವಾದ) ಕ್ರಮದಲ್ಲಿ ಧಾರಣೆ ಮಾಡುವುದು ಎರಡನೆಯ ಪ್ರಕಾರ. ಅಲ್ಲಿ ಮಧ್ಯ ಮತ್ತು ಉಂಗುರದ ಬೆರಳುಗಳಿಂದ ತನ್ನ ಹಣೆಯ ಮೇಲೆ ಎಡದಿಂದ ಬಲಗಡೆಗೆ ಅನುಲೋಮ ಕ್ರಮದಿಂದ ಭಸ್ಮದ ಎರಡು ರೇಖೆಗಳನ್ನು ಧರಿಸಿ, ಅವುಗಳ ಮಧ್ಯದಲ್ಲಿ ಹೆಬ್ಬೆರಳಿನಿಂದ ಬಲಗಡೆಯಿಂದ ಎಡಗಡೆಗೆ ವಿಲೋಮ ಕ್ರಮದಲ್ಲಿ ಒಂದು ಭಸ್ಮರೇಖೆಯನ್ನು ಧರಿಸಬೇಕು ಎಂದು ಶಿವಪುರಾಣದಲ್ಲಿ ಈ ರೀತಿಯಾಗಿ ಹೇಳಲಾಗಿದೆ-

---

[೪೮೨] ಕ್ರಿ.ಸಾ, ಭಾಗ-೨, ಪು. ೮೦

ಮಧ್ಯಮಾನಾಮಿಕಾಂಗುಲ್ಯಾ ಮಧ್ಯೇ ತು ಪ್ರತಿಲೋಮತಃ।
ಅಂಗುಷ್ಠೇನ ಕೃತಾ ರೇಖಾ ತ್ರಿಪುಂಡ್ರಾಖ್ಯಾಽಭಿಧೀಯತೇ॥[೪೮೩]

"ಮಧ್ಯಮಾ, ಅನಾಮಿಕಾ ಬೆರಳುಗಳಿಂದ (ಅನುಲೋಮ ಕ್ರಮದಲ್ಲಿ) ಮೇಲಿನ ಮತ್ತು ಕೆಳಗಿನ ರೇಖೆಗಳನ್ನೂ ಹೆಬ್ಬೆರಳಿನಿಂಧ ಮಧ್ಯದ ರೇಖೆಯನ್ನು ಪ್ರತಿಲೋಮದ ಕ್ರಮದಲ್ಲಿ ಧರಿಸುವುದನ್ನು ತ್ರಿಪುಂಡ್ರ ಎಂದು ಕರೆಯಲಾಗಿದೆ."

ಯಾರು ಭಸ್ಮದಿಂದ ಹೀಗೆ ನೇರವಾಗಿ, ಬಿಳುಪಾಗಿ, ನಿರಂತರವಾಗಿ, ದಪ್ಪವಾಗಿ ಮತ್ತು ಕಿವಿಗಳವರೆಗೆ ತ್ರಿಪುಂಡ್ರವನ್ನು ಧರಿಸುತ್ತಾನೆಯೋ ಅವನು ರೌದ್ರಧರ್ಮದೊಂದಿಗೆ ಸೇರಿದವನು ಅರ್ಥಾತ್ ಶಿವಾಚಾರಸಂಪನ್ನನಾಗಿ "ಯ ಇದಂ ತ್ರಿಪುಂಡ್ರಂ ಧರತೇ ಸ ವೇದತ್ರಯಧಾರೀ ಭವತಿ" ಎಂಬ ಶ್ರುತಿವಾಕ್ಯಪ್ರಮಾಣದಂತೆ ಮೂರು ವೇದಾಧ್ಯಯನದ ಫಲವನ್ನು ಪಡೆಯುತ್ತಾನೆ. ಆದುದರಿಂದ- "ಪ್ರಾತಃಕಾಲೇ ಚ ಮಧ್ಯಾಹ್ನೇ ಸಾಯಾಹ್ನೇ ಚ ತ್ರಿಪುಂಡ್ರಕಮ್"[೪೮೪] ಎಂಬ ಶ್ರೀ ರೇಣುಕ ಭಗವತ್ಪಾದರ ಅಪ್ಪಣೆಯಂತೆ ಪ್ರಾತಃಕಾಲದಲ್ಲಿ ಒಮ್ಮೆ, ಮಧ್ಯಾಹ್ನದಲ್ಲಿ ಎರಡನೆಯ ಸಲ ಮತ್ತು ಸಾಯಂಕಾಲದಲ್ಲಿ ಮೂರನೆಯ ಸಲ ಭಸ್ಮತ್ರಿಪುಂಡ್ರಧಾರಣೆ ಮಾಡುವುದರಿಂದ ಎಲ್ಲ ಬಗೆಯ ದೋಷಗಳಿಂದ ಬಿಡುಗಡೆ ಹೊಂದಿ ಶಿವನೇ ಆಗುತ್ತಾನೆ.

ಹೀಗೆ ಶಿವಸಾಯುಜ್ಯದಾಯಕವಾದ ಈ ತ್ರಿಪುಂಡ್ರಧಾರಣೆಯು ವೇದಗಳೇ ಮೊದಲ್ಗೊಂಡು ಎಲ್ಲ ಶಾಸ್ತ್ರಗಳಲ್ಲಿಯೂ ಉಪದಿಷ್ಟವಾಗಿದೆ[೪೮೫] ಹಾಗೂ ಎಲ್ಲ ದೇವತೆಗಳು, ದಾನವರು ಮತ್ತು ಮಹರ್ಷಿಗಳು ಶ್ರದ್ಧೆಯಿಂದ ಧಾರಣೆಮಾಡುತ್ತಾರೆ.[೪೮೬]

ಭಸ್ಮಧಾರಣವ್ರತದ ಅವಧಿ

ವೇದ, ಆಗಮ, ಉಪನಿಷತ್, ಪುರಾಣ ಪ್ರಸಿದ್ಧವಾದ ಈ ಭಸ್ಮಧಾರಣೆಯು ವೀರಶೈವರ ಇಷ್ಟಲಿಂಗಪೂಜೆಯ ಒಂದು ಅಂಗವಾಗಿದೆ. ಬೇರೆ ಶೈವರು ಇದನ್ನು ಒಂದು ಸ್ವತಂತ್ರ ವ್ರತವನ್ನಾಗಿ ಪರಿಗಣಿಸಿದ್ದಾರೆ. ಅವರು ಇದನ್ನು ಪಾಶುಪತವ್ರತವೆಂಬ ಹೆಸರಿನಿಂದ ಕರೆಯುತ್ತಾರೆ.

---

[೪೮೩] ಶಿವಪುರಾಣ, ವಿದ್ಯೇಶ್ವರ ಸಂಹಿತಾ, ೨೪.೮೬-೮೭

[೪೮೪] ಸಿ.ಶಿ, ೭.೩೮

[೪೮೫] ಶೈವಾಗಮೇಷು ವೇದೇಷು ಪುರಾಣೇಷ್ವಖಿಲೇಷು ಚ।
ಸ್ಮೃತೀತಿಹಾಸಕಲ್ಪೇಷು ವಿಹಿತಂ ಭಸ್ಮಪುಂಡ್ರಕಮ್॥ -ಸಿ.ಶಿ, ೭.೪೨

[೪೮೬] ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ದೇವಾಃ ಶಕ್ರಪುರೋಗಮಾಃ।
ತ್ರಿಪುಂಡ್ರಂ ಧಾರಯಂತ್ಯೇವ ಭಸ್ಮನಾ ಪರಿಕಲ್ಪಿತಮ್॥
ವಸಿಷ್ಠಾದ್ಯಾ ಮಹಾಭಾಗಾ ಮುನಯಃ ಶ್ರುತಿಕೋವಿದಾಃ।
ಧಾರಯಂತಿ ಸದಾಕಾಲಂ ತ್ರಿಪುಂಡ್ರಂ ಭಸ್ಮನಾ ಕೃತಮ್॥ -ಸಿ.ಶಿ, ೭.೪೦-೪೧

ಯಾವಚ್ಛರೀರಪಾತಂ ವಾ ದ್ವಾದಶಾಬ್ದಮಥಾಪಿ ವಾ।
ತದರ್ಧಂ ವಾ ತದರ್ಧಂ ವಾ ಮಾಸಮೇಕಂ ತಥಾಪಿ ವಾ।
ದಿನದ್ವಾದಶಕಂ ವಾಥ ವ್ರತಸಂಕಲ್ಪನಾವಧಿ॥[೪೮೭]

"ಶರೀರಪಾತವಾಗುವವರೆಗೆ (ಬದುಕಿರುವವರೆಗೆ), ಅಥವಾ ೧೨ ವರ್ಷಗಳವರೆಗೆ ಅಥವಾ ಅದರ ಅರ್ಧದಷ್ಟು (ಆರು ವರ್ಷಗಳವರೆಗೆ), ಅದರಲ್ಲಿ ಅರ್ಧ (ಮೂರು ವರ್ಷಗಳವರೆಗೆ), ಅಥವಾ ಒಂದು ತಿಂಗಳವರೆಗೆ ಅಥವಾ ಹನ್ನೆರಡು ದಿನಗಳವರೆಗೆ ಅಥವಾ ವ್ರತದ ಸಂಕಲ್ಪದವರೆಗೆ ತ್ರಿಪುಂಡ್ರಧಾರಣೆ ಮಾಡಬೇಕು" ಎಂದು ವಾಯವೀಯ ಸಂಹಿತೆಯಲ್ಲಿ ಹನ್ನೆರಡು ದಿನದಿಂದ ಆರಂಭವಾಗಿ ಆಜೀವಪರ್ಯಂತವಾಗಿ ಈ ವ್ರತದ ಅವಧಿಯು ಪ್ರತಿಪಾದಿತವಾಗಿದೆ. ಆದುದರಿಂದ ತಮ್ಮ ತಮ್ಮ ಶಕ್ತ್ಯಾನುಸಾರವಾಗಿ ಸಂಕಲ್ಪ ಮಾಡಿ ಭಸ್ಮಧಾರಣ ವ್ರತವನ್ನು ಅನುಷ್ಠಾನ ಮಾಡಬೇಕು. ಭಸ್ಮಧಾರಣೆಯು ಇಷ್ಟಲಿಂಗಪೂಜೆಯ ಒಂದು ಅಂಗವೆಂದು ಹೇಳಿರುವುದರಿಂದ ವೀರಶೈವರು ಈ ವ್ರತವನ್ನು ಹುಟ್ಟಿದಂದಿನಿಂದಲೇ ಆಚರಿಸಬೇಕು.

ಭಸ್ಮದ ಆವರಣ ಶಬ್ದವಾಚ್ಯತ್ವ

ಅಷ್ಟಾವರಣಗಳ ಪೈಕಿ ಆರನೆಯ ಆವರಣವಾಗಿ ಪರಿಗಣಿತವಾಗಿರುವ ಈ ಭಸ್ಮವು ಅಣಿಮಾದಿ ಅಷ್ಟೈಶ್ವರ್ಯಗಳನ್ನು ಪ್ರದಾನ ಮಾಡುವುದರಿದ, ಶಿವತತ್ತ್ವ ಪ್ರಕಾಶದಿಂದ, ಮನಸ್ಸು, ಮಾತು ಮತ್ತು ಶರೀರಗಳಲ್ಲಿ ಉಂಟಾಗುವ ಪಾಪಗಳನ್ನು ಹೆದರಿಸುವುದರಿಂದ, ಆಧ್ಯಾತ್ಮಿಕ, ಆಧಿಭೌತಿಕ ಮತ್ತು ಆಧಿದೈವಿಕಗಳೆಂಬ ತಾಪತ್ರಯಗಳಿಂದುಂಟಾಗುವ ವಿಪತ್ತುಗಳನ್ನು ನಾಶಗೊಳಿಸುವುದರಿಂದ ಮತ್ತು ಗ್ರಹ, ಯಕ್ಷ ಮೊದಲಾದ ಎಲ್ಲ ಭೂತಗಳಿಂದ ರಕ್ಷಿಸುವ ಕಾರಣದಿಂದ, ಭಸ್ಮಧಾರಣೆ ಮಾಡಿರುವವರನ್ನು ಸುತ್ತಲೂ ಕಾಪಾಡುತ್ತಾ ಪರಶಿವನ ಪ್ರಕಾಶರೂಪದ ನಿರುಪಾಧಿಕ ಭಸ್ಮಧಾರಣೆಯ ಯೋಗ್ಯತೆಯನ್ನು ಉಂಟುಮಾಡುತ್ತದೆ ಎಂದು ಇದೂ ಸಹ ರಕ್ಷಾಕವಚರೂಪದ ಆವರಣ ಶಬ್ದವಾಚ್ಯವಾಗುತ್ತದೆ. ಆದುದರಿಂದ ಶ್ರದ್ಧಾವಂತರಾದ ಎಲ್ಲರೂ ಸಹ ತಾವಾಗಿಯೇ ಕಲ್ಪಾದಿ ವಿಧಿಯಿಂದ ಭಸ್ಮವನ್ನು ತಯಾರಿಸಿ, ಪೂರ್ವೋಕ್ತವಾದ ಶಾಸ್ತ್ರೀಯ ವಿಧಿಯಿಂದ ಭಸ್ಮಸ್ನಾನ, ಭಸ್ಮೋದ್ಧೂಲನ ಮತ್ತು ತ್ರಿಪುಂಡ್ರಧಾರಣಾದಿಗಳನ್ನು ಪ್ರತಿನಿತ್ಯವೂ ಆಜೀವಪರ್ಯಂತವಾಗಿ ಅನುಷ್ಠಾನ ಮಾಡಬೇಕು.

೭. ರುದ್ರಾಕ್ಷ

ರುದ್ರಾಕ್ಷ ಅಷ್ಟಾವರಣಗಳ ಪೈಕಿ ಕ್ರಮವಾಗಿ ಏಳನೆಯದು. ಇಲ್ಲಿ ರುದ್ರಾಕ್ಷ ಶಬ್ದದ ಅರ್ಥವೇನು? ಅದು ಎಷ್ಟು ಪ್ರಕಾರ? ಅದರ ಉತ್ಪತ್ತಿಯು ಹೇಗೆ? ಅದನ್ನು ಧರಿಸುವ ವಿಧಿ ಯಾವುದು? ಮತ್ತು ಅದು ಹೇಗೆ ಆವರಣವಾಗುತ್ತದೆ? ಇತ್ಯಾದಿಗಳನ್ನು ಶಾಸ್ತ್ರೋಕ್ತವಾಗಿ ಈಗ ಪ್ರಸ್ತಾಪಿಸಲಾಗುವುದು.

---

[೪೮೭] ಕ್ರಿಸಾ, ಭಾಗ-೨, ಪು. ೨೫

ರುದ್ರಾಕ್ಷ ಶಬ್ದದ ಅರ್ಥ

“ರುದ್ರಸ್ಯ ಅಕ್ಷಃ ರುದ್ರಾಕ್ಷಃ” ಎಂಬ ನಿರ್ವಚನದಂತೆ ರುದ್ರಾಕ್ಷ ಶಬ್ದಕ್ಕೆ “ರುದ್ರನ ದೃಷ್ಟಿ” ಎಂದು ಅರ್ಥವಾಗುತ್ತದೆ. “ಸರ್ವೋ ಹ್ಯೇಷ ರುದ್ರಃ”,[೪೮೮] “ಏಕೋ ಹಿ ರುದ್ರೋ ನ ದ್ವಿತೀಯಾಯ ತಸ್ಥುಃ”[೪೮೯] (ರುದ್ರನು ಒಬ್ಬನೇ ಆಗಿರುವುದರಿಂದ (ಬ್ರಹ್ಮವಿದರು) ಎರಡನೆಯವನನ್ನು ಅಪೇಕ್ಷಿಸಲಿಲ್ಲ) ಮುಂತಾದ ಶ್ರುತಿವಾಕ್ಯದಂತೆ ಚರಾಚರಾತ್ಮಕವಾದ ಪ್ರಪಂಚವನ್ನು ರುದ್ರನ ರೂಪದಿಂದ ನೋಡುವುದೇ ರುದ್ರದೃಷ್ಟಿ. ಭಗವಾನ್ ಕೃಷ್ಣನು-

ವಿದ್ಯಾವಿನಯ ಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ।
ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ॥[೪೯೦]

“ವಿದ್ಯೆ-ವಿನಯಗಳಿಂದ ಕೂಡಿದ ಬ್ರಾಹ್ಮಣ, ಹಸು, ಆನೆ, ನಾಯಿ, ಚಂಡಾಲ -ಎಲ್ಲರ ವಿಷಯದಲ್ಲಿಯೂ ಜ್ಞಾನಿಗಳು ಸಮಾನದೃಷ್ಟಿಯುಳ್ಳವರಾಗಿದ್ದಾರೆ” ಎಂಬ ಶ್ಲೋಕದಲ್ಲಿ ಅಂತಹ ರುದ್ರದೃಷ್ಟಿಯ ಸ್ವರೂಪವನ್ನು ವರ್ಣಿಸಿದ್ದಾನೆ. ಸಮತಾದೃಷ್ಟಿಯು ಸಮಾಜದಲ್ಲಿ ಶಾಂತಿಸ್ಥಾಪನೆಗೆ ಮೂಲ. ಈ ಉದ್ದೇಶ ಸಾಧನೆಗಾಗಿಯೇ ಅನಾದಿಕಾಲದಿಂದಲೂ ದಾರ್ಶನಿಕರ ಶ್ರಮವು ಕಂಡುಬರುತ್ತಿದೆ. ಎಲ್ಲೆಡೆಯೂ ಸಮಭಾವನೆಯೇ ಮಾನವ ಜೀವನದ ಅಂತಿಮ ಗುರಿ. ಗುರುವಿನ ಮೂಲಕ ಶಾಸ್ತ್ರಗಳ ಉಪದೇಶವನ್ನು ಶ್ರವಣ ಮಾಡುವುದರಿಂದ ಮತ್ತು ತನ್ನ ಶ್ರಮದಿಂದ ಅಂತಹ ಭಾವನೆಯ ಸಂಪಾದನೆಯು ಅಂತರಂಗ ರುದ್ರಾಕ್ಷಧಾರಣೆ ಎನಿಸುತ್ತದೆ. ಈ ಬಗೆಯ ಸಮತಾಭಾವನೆಯ ಅಭಾವದಿಂದಲೇ ಮನುಷ್ಯರು ಪ್ರಾಣಿಗಳಂತೆ ಪರಸ್ಪರ ಜಗಳವಾಡುತ್ತಾ ಮನುಕುಲವನ್ನು ನಾಶಪಡಿಸುವಲ್ಲಿ ಆಸಕ್ತರಾಗಿರುವುದನ್ನು ನೋಡುತ್ತಿದ್ದೇವೆ. ಆದುದರಿಂದಲೇ- “ಮನುಷ್ಯ ರೂಪೇಣ ಮೃಗಾಶ್ಚರಂತಿ”[೪೯೧] (ಮನುಷ್ಯ ರೂಪದಲ್ಲಿರುವ ಮೃಗಗಳು ಸಂಚರಿಸುತ್ತಿವೆ) ಎಂದು ಸುಭಾಷಿತಕಾರನೊಬ್ಬನು ಹೇಳಿದ್ದಾನೆ. ಕೇವಲ ಆಕೃತಿಯಲ್ಲಿ ಮನುಷ್ಯನು ಮನುಷ್ಯನಲ್ಲ, ಆದರೆ ಮನುಷ್ಯತ್ವದಿಂದ ಕೂಡಿರುವವನೇ ಮನುಷ್ಯ. ಮನುವಿನ ಎಲ್ಲ ಮಕ್ಕಳನ್ನು ಮೊದಲಿಗೆ ಮನುಷ್ಯರೆಂದು ಭಾವಿಸಬೇಕು. “ಮನಸಾ ಸೀವ್ಯತೀತಿ ಮನುಷ್ಯಃ” (ಮನಸ್ಸಿನಿಂದ ಜೋಡಿಸಿರುವುದು ಮನುಷ್ಯ) ಎಂಬ ನಿರುಕ್ತದ ವಾಕ್ಯದಂತೆ ಸಂಕುಚಿತವಾದ ಮಾನಸಿಕ ಸಂಬಂಧದಿಂದ ಕಟ್ಟಿಹಾಕಲ್ಪಟ್ಟ ಪಶು ಎಂದು ವ್ಯವಹರಿಸಲ್ಪಟ್ಟಿರುವ ಈ ಜೀವಿಯು ಅದರ ಸಂಬಂಧವನ್ನು ಕಳೆದುಕೊಂಡು ಮುಕ್ತನಾಗುತ್ತಾನೆ.[೪೯೨]

---

[೪೮೮] ಮ.ನಾ.ಉ, ೧೦.೧೧

[೪೮೯] ಶ್ವೇ.ಉ, ೩.೨

[೪೯೦] ಭಗವದ್ಗೀತಾ, ೫.೧೮

[೪೯೧] ನೀತಿಶತಕ, ೧೧

[೪೯೨] ಮಮೇತಿ ಬದ್ಧ್ಯತೇ ಜಂತುರ್ನ ಮಮೇತಿ ವಿಮುಚ್ಯತೇ।

ಶಿವಾತ್ಮಕಮಿದಂ ಸರ್ವಂ ಶಿವಾದನ್ಯನ್ನ ವಿದ್ಯತೇ।
ಶಿವೋಽಹಮಿತಿ ಯಾ ಬುದ್ಧಿಸ್ತದೇವ ಜ್ಞಾನಮುತ್ತಮಮ್॥[೪೯೩]

“ಸಮಸ್ತ ಪ್ರಪಂಚವೂ ಶಿವಸ್ವರೂಪವಾದುದು, ಶಿವನನ್ನು ಹೊರತುಪಡಿಸಿ ಯಾವುದೂ ಇರುವುದಿಲ್ಲ. ನಾನು ಶಿವನು ಎಂಬ ಯಾವ ಬುದ್ಧಿಯುಂಟೋ ಅದೇ ಉತ್ತಮವಾದ ಜ್ಞಾನವೆನಿಸುವುದು” ಎಂಬ ಶ್ರೀ ರೇಣುಕಾಚಾರ್ಯರ ಉಕ್ತಿಯ ಮೇರೆಗೆ ಶಿವಜ್ಞಾನ ಪ್ರಾಪ್ತಿಯೇ ಪೂರ್ವೋಕ್ತ ಸಂಕುಚಿತವಾದ ಮಾನಸಿಕ ಸಂಬಂಧದಿಂದ ಬಿಡುಗಡೆಯೆಂದು ತಿಳಿದುಬರುತ್ತದೆ. ಅಂತೆಯೇ ಬಂಧನಕ್ಕೆ ಕಾರಣೀಭೂತವಾದ ಸಂಕುಚಿತವಾದ ಸಂಬಂಧವನ್ನು ನಿವಾರಿಸುವ ಶಿವಜ್ಞಾನವೇ ರುದ್ರದೃಷ್ಟಿ. ಈ ರುದ್ರದೃಷ್ಟಿಯು, ಅರ್ಥಾತ್ ಎಲ್ಲವನ್ನೂ ರುದ್ರನ ಸ್ವರೂಪವೆಂದು ನೋಡುವುದೇ ರುದ್ರಾಕ್ಷಶಬ್ದದ ತಾತ್ತ್ವಿಕವಾದ ಅರ್ಥ. ಆದುದರಿಂದ- “ಯತ್ರ ಯತ್ರ ಮನೋ ಯಾತಿ ತತ್ರ ತತ್ರ ಬ್ರಹ್ಮದರ್ಶನಮ್” ಎಂಬ ಉಕ್ತಿಯಂತೆ ನಿರಂತರವಾಗಿ ಹರಿಯುವ ಮನೋವೃತ್ತಿಯಲ್ಲಿ ರುದ್ರನನ್ನು ಕುರಿತು ಸತತವಾಗಿ ವಿಚಾರ ಮಾಡುವುದು ಅಂತರಂಗ ಅಕ್ಷಮಾಲಾ ಎಂದು ಹೇಳಲ್ಪಟ್ಟಿದೆ.

ರುದ್ರನ ಕಣ್ಣುಗಳಿಂದ ಉದ್ಭವಿಸಿದ ಒಂದು ವಿಶೇಷ ಜಾತಿಯ ಮರದ ಬೀಜವನ್ನೂ ಸಹ ರುದ್ರಾಕ್ಷ ಶಬ್ದದಿಂದ ವ್ಯವಹರಿಸಲಾಗುತ್ತಿದೆ. ಇದು ರುದ್ರಾಕ್ಷ ಶಬ್ದದ ವ್ಯಾವಹಾರಿಕವಾದ ಅರ್ಥ. ಆಗಮೋಕ್ತ ವಿಧಿಯ ಪ್ರಕಾರ ಶ್ರದ್ಧೆಯಿಂದ ರುದ್ರಾಕ್ಷಧಾರಣೆ ಮಾಡಿಕೊಳ್ಳುವುದರಿಂದ ಉಂಟಾಗುವ ಅಂತರಂಗಶುದ್ಧಿಯಿಂದ ಪೂರ್ವೋಕ್ತವಾದ ರುದ್ರದೃಷ್ಟಿಯು ಪ್ರಾಪ್ತವಾಗುತ್ತದೆ. ಈ ಪ್ರಕಾರ ರುದ್ರದೃಷ್ಟಿಗೆ ಕಾರಣೀಭೂತವಾಗಿರುವುದರಿಂದ ಈ ವಿಶೇಷ ವೃಕ್ಷದ ಬೀಜವನ್ನು ರುದ್ರಾಕ್ಷ ಎಂದು ಕರೆಯಲಾಗಿದೆ. ವೇದಾಗಮಗಳಲ್ಲಿ ರುದ್ರಾಕ್ಷದ ಉತ್ಪತ್ತಿಯ ವಿಷಯವು ನಿರೂಪಿತವಾಗಿದೆ. ಅದನ್ನು ಕುರಿತು ಈಗ ಸ್ವಲ್ಪ ವಿಚಾರಮಾಡಲಾಗುವುದು.

ರುದ್ರಾಕ್ಷದ ಉತ್ಪತ್ತಿ

ಪ್ರಾಚೀನಕಾಲದಲ್ಲಿ ತಾರಕ ಎಂಬ ಹೆಸರಿನ ರಾಕ್ಷಸನಿದ್ದನು. ಅವನಿಗೆ ತಾರಕಾಕ್ಷ, ವಿದ್ಯುನ್ಮಾಲಿ ಮತ್ತು ಕಮಲಾಕ್ಷರೆಂಬ ಮೂವರು ಮಕ್ಕಳಿದ್ದರು. ಅತಿ ಕಠೋರವಾದ ತಪಸ್ಸಿನ ಬಲದಿಂದ ಬ್ರಹ್ಮನನ್ನು ಪ್ರಸನ್ನಗೊಳಿಸಿ ದುರ್ಭೇದ್ಯವಾದ ಮೂರು ಪಟ್ಟಣಗಳನ್ನು ಅವರು ಪಡೆದರು. ಅಂದಿನಿಂದ ಆರಂಭಿಸಿ ಅವರು ತ್ರಿಪುರಾಸುರ ಎಂಬ ಹೆಸರಿನಿಂದ ಪ್ರಸಿದ್ಧರಾದರು. ತಪಸ್ಸಿನ ಪ್ರಭಾವದಿಂದ ಬಲಿಷ್ಠರಾದ ಅವರು ಕಾಲಾನಂತರದಲ್ಲಿ ಅಹಂಕಾರಿಗಳಾಗಿ ಶಾಸ್ತ್ರವಿರೋಧಿ ಆಚರಣೆಗಳಲ್ಲಿ ತೊಡಗಿ ಲೋಕಕಂಟಕರಾದರು. ಆಗ ಎಲ್ಲ ದೇವತೆಗಳ ಪ್ರಾರ್ಥನೆಯ ಮೇರೆಗೆ ಮುಕ್ಕಣ್ಣನಾದ ಮಹಾದೇವನು ತ್ರಿಪುರಸಂಹಾರ ಮಾಡಲು ಬಯಸಿ ಮೂರನೆಯ ಕಣ್ಣನ್ನು ತೆರೆದು

---

[೪೯೩] ಸಿ.ಶಿ, ೧೬.೩೧

ತ್ರಿಪುರಗಳನ್ನು ದಹಿಸಿದನು. ಈ ಉದ್ದೇಶದಿಂದ ಒಂದು ಸಾವಿರ ವರ್ಷಗಳ ಕಾಲ ರುದ್ರನು ತನ್ನ ಕಣ್ಣುಗಳನ್ನು ತೆರೆದ ಕಾರಣ ಅವುಗಳಿಂದ ಅನೇಕ ಕಣ್ಣೀರಿನ ಹನಿಗಳು ಭೂಮಿಯ ಮೇಲೆ ಬಿದ್ದವು. ಆ ಕಣ್ಣೀರಿನ ಹನಿಗಳಿಂದಲೇ ರುದ್ರಾಕ್ಷಗಳು ಉತ್ಪತ್ತಿಯಾದವು. ರುದ್ರನ ನೇತ್ರಗಳಿಂದ ಉತ್ಪನ್ನವಾದ ಕಾರಣ ಇವುಗಳಿಗೆ ರುದ್ರಾಕ್ಷ ಎಂದು ಹೆಸರಾಯಿತು.[೪೯೪] ಅದು ಉಪನಿಷತ್ತಿನಲ್ಲಿ- "ತ್ರಿಪುರವಧಾರ್ಥಮಹಮನಿಮೀಲಿತಾಕ್ಷೋಽ ಭವಮ್, ತ್ಯೇಭ್ಯೋ ಜಲಬಿಂದವೋ ಭೂಮೌ ಪಾತಿತಾಸ್ತೇ ರುದ್ರಾಕ್ಷಾ ಜಾತಾಃ"[೪೯೫] (ತ್ರಿಪುರಸಂಹಾರಕ್ಕೋಸ್ಕರ ಶಿವನು ಕಣ್ಣುಗಳನ್ನು ತೆರೆದಾಗ, ಭೂಮಿಯ ಮೇಲೆ ಬಿದ್ದಂತಹ ಕಣ್ಣೀರಿನ ಹನಿಗಳೇ ರುದ್ರಾಕ್ಷಗಳಾದವು) ಎಂದು ನಿರೂಪಿತವಾಗಿದೆ. ರುದ್ರನ ನೇತ್ರಗಳಿಂದ ಉತ್ಪನ್ನವಾದ ಕಾರಣದಿಂದ ಇವುಗಳೂ ಸಹ ರುದ್ರನ ನೇತ್ರಗಳಂತೆ ಲೋಕದಲ್ಲಿ ಪಾವನವಾಗಿವೆ.[೪೯೬] ಆದುದರಿಂದ ರುದ್ರಾಕ್ಷಗಳನ್ನು ಧರಿಸುವುದರಿಂದ ಹೆಚ್ಚು ಹೆಚ್ಚು ಫಲದಾತೃತ್ವವು ಸಿದ್ಧಿಸುತ್ತದೆ. ಅದೇ ಉಪನಿಷತ್ತಿನಲ್ಲಿ- "ಅವುಗಳ ಹೆಸರನ್ನು ಉಚ್ಚಾರಣೆ ಮಾಡುವುದರಿಂದ ಹತ್ತು ಗೋದಾನದ ಫಲ ಮತ್ತು ನೋಡುವುದರಿಂದ ಮತ್ತು ಸ್ಪರ್ಶಿಸುವುದರಿಂದ ಅದರ ಫಲವು ಇಮ್ಮಡಿಯಾಗುತ್ತದೆ. ಆ ಕಾರಣ ಇದಕ್ಕಿಂತಲೂ ಹೆಚ್ಚಿನದನ್ನು ಹೇಳಲು ಸಮರ್ಥನಲ್ಲ"[೪೯೭] ಎಂದು ಪ್ರತಿಪಾದಿಸುತ್ತದೆ.

ಕಣ್ಣೀರಿನ ವೈಶಿಷ್ಟ್ಯ

ಜಗತ್ತಿನಲ್ಲಿ ದುಃಖಾಶ್ರು, ಆನಂದಾಶ್ರು ಮತ್ತು ಯೋಗಾಶ್ರು ಎಂದು ಕಣ್ಣೀರು ಮೂರು ವಿಧವಾಗಿದೆ. ಸಾಂಸಾರಿಕ ದುಃಖದಿಂದ ಯಾರಾದರೂ ಮಾಡಿದ

---

೪೯೪. (ಅ) ತ್ರಿಪುರಾಣಾಂ ವಧಾರ್ಥಾಯ ವಿಭುನಾ ಶಂಭುನಾ ಪುರಾ।
ಉನ್ಮೀಲಿತಾನಿ ಚಕ್ಷೂಂಷಿ ದಿವ್ಯಂ ವರ್ಷಸಹಸ್ರಕಮ್॥
ಉಭಾಭ್ಯಾಂ ಚಾರುಪಕ್ಷ್ಮಭ್ಯಾಂ ಪತಿತಾ ಜಲಬಿಂದವಃ।
ತ ಏವ ಬಿಂದವೋ ಜಾತಾ ಮಹಾರುದ್ರಾಕ್ಷವೃಕ್ಷಕಾಃ॥
ಸ್ಥಾವರತ್ವಮನುಪ್ರಾಪುರ್ಭಕ್ತಾನುಗ್ರಹಕಾರಣಾತ್।
-ಚಂ.ಜ್ಞಾ, ಕ್ರಿ.ಪಾ, ೭.೪-೫

(ಆ) ಪುರಾ ತ್ರಿಪುರಸಂಹಾರೇ ತ್ರಿಣೇತ್ರೋ ಜಗತಾಂ ಪತಿಃ।
ಉದಪಶ್ಯತ್ ಪುರಾಂ ಯೋಗಮುನ್ಮೀಲಿತವಿಲೋಚನಃ॥
ನಿಪೇತುಸ್ತಸ್ಯ ನೇತ್ರೇಭ್ಯೋ ಬಹವೋ ಜಲಬಿಂದವಃ।
ತೇಭ್ಯೋ ಜಾತಾ ಹಿ ರುದ್ರಾಕ್ಷಾ ರುದ್ರಾಕ್ಷಾ ಇತಿ ಕೀರ್ತಿತಾಃ॥
-ಸಿ.ಶಿ, ೭.೪೬-೪೭

೪೯೫. ರುದ್ರಾಕ್ಷಜಾಬಾಲೋಪನಿಷತ್, ೧

೪೯೬. "ರುದ್ರನೇತ್ರಸಮುತ್ಪನ್ನಾ ರುದ್ರಾಕ್ಷಾ ಲೋಕಪಾವನಾಃ" -ಸಿ.ಶಿ, ೭.೪೮

೪೯೭. "ತೇಷಾಂ ನಾಮೋಚ್ಚಾರಣಮಾತ್ರೇಣ ದಶಗೋಪ್ರದಾನಫಲಂ ದರ್ಶನಸ್ಪರ್ಶನಾಭ್ಯಾಂ ದ್ವಿಗುಣಂ ಫಲಮತ ಊರ್ಧ್ವಂ ವಕ್ತುಂ ನ ಶಕ್ನೋಮಿ" -ರುದ್ರಾಕ್ಷ ಜಾಬಾಲೋಪನಿಷತ್,೧

ತೊಂದರೆಯಿಂದ ಅಥವಾ ದುಃಖಿಗಳಾದ ಜೀವಿಗಳ ಕಣ್ಣುಗಳಿಂದ ಹೊರಹೊಮ್ಮಿದ ಕಣ್ಣೀರು ದುಃಖಾಶ್ರು ಎನಿಸುತ್ತದೆ. ತಮಗೆ ಇಷ್ಟವಾದ ಕಾರ್ಯದ ಸಿದ್ಧಿಯಾದಾಗ ಆನಂದಾತಿರೇಖದಿಂದ ಸುರಿಯುವ ಕಣ್ಣೀರು ಆನಂದಾಶ್ರು. ಬಹಳ ಪ್ರಯಾಸದಿಂದ ಯೋಗಮುದ್ರೆಯ ಅಭ್ಯಾಸದ ಸಂದರ್ಭದಲ್ಲಿ ಸುರಿಯುವ ಕಣ್ಣೀರು ಯೋಗಾಶ್ರು ಎನಿಸುತ್ತದೆ. ಆಯಾ ಕಣ್ಣೀರಿನ ಉತ್ಪತ್ತಿಗೆ ಕಾರಣೀಭೂತವಾದ ಎಲ್ಲರೂ ಸಹ ಆಯಾ ಶುಭಾಶುಭಫಲಗಳನ್ನು ಅವಶ್ಯವಾಗಿ ಅನುಭವಿಸಲೇಬೇಕು. ಅಧಿಕಾರ ಬಲದಿಂದ, ಶಕ್ತಿಯಿಂದ ಮತ್ತು ಹಣದಿಂದ ಬಲಿಷ್ಠನಾದವನು ಇವುಗಳಿಂದ ಕನಿಷ್ಠನಾದವನನ್ನು ಪೀಡಿಸಿದ್ದೇ ಆದರೆ, ಆಗ ದುಃಖಾಶ್ರುವಿನ ಪ್ರಭಾವದಿಂದ ಪೀಡಕನೂ ಸಹ ಅವಶ್ಯವಾಗಿ ದುಃಖಿಯಾಗುತ್ತಾನೆಂಬುದು ಲೋಕದ ಅನುಭವ. ಅಂತೆಯೇ, ಆನಂದಾಶ್ರುವಿಗೆ ಕಾರಣನಾದರೆ ಆನಂದತುಂದಿಲನೇ ಆಗುತ್ತಾನೆ.

ಈ ಪ್ರಕಾರ ಸಾಮಾನ್ಯ ಜನಗಳ ಕಣ್ಣೀರಿನಲ್ಲಿ ಇಂತಹ ಸಾಮರ್ಥ್ಯವಿರುವುದರಿಂದ ಜಗತ್ತಿನ ರಕ್ಷಕನಾದ ರುದ್ರನ ಯೋಗಾಶ್ರುವಿನ ವಿಷಯದಲ್ಲಿ ಹೆಚ್ಚು ಹೇಳುವುದೇನಿದೆ. ದುಷ್ಟರ ಸಂಹಾರ ಮತ್ತು ಶಿಷ್ಟರ ರಕ್ಷಣೆಯ ಸಂದರ್ಭದಲ್ಲಿ ಉತ್ಪನ್ನವಾಗುವ ರುದ್ರನ ಯೋಗಾಶ್ರುಗಳಿಂದ ರುದ್ರಾಕ್ಷಗಳ ಉತ್ಪತ್ತಿಯಾಯಿತು ಎಂಬ ಕಾರಣದಿಂದ, ರುದ್ರಾಕ್ಷಗಳೂ ಸಹ ದುರ್ಭಾವನೆಯ ಸಂಹಾರಕಗಳು ಮತ್ತು ಸದ್ಭಾವನೆಯ ಸಂರಕ್ಷಕಗಳಾಗಿವೆ ಎಂದು ವೀರಶೈವಾಚಾರ್ಯರು ರುದ್ರಾಕ್ಷಗಳನ್ನು ರಕ್ಷಾಕವಚರೂಪದ ಆವರಣವನ್ನಾಗಿ ಸ್ವೀಕರಿಸಿದ್ದಾರೆ.

ರುದ್ರಾಕ್ಷದ ಪ್ರಭೇದಗಳು

ರುದ್ರನೇತ್ರಸಮುತ್ಪನ್ನಾ ರುದ್ರಾಕ್ಷಾ ಲೋಕಪಾವನಾಃ।
ಅಷ್ಟತ್ರಿಂಶತ್‌ಪ್ರಭೇದೇನ ಭವಂತ್ಯುತ್ಪತ್ತಿಭೇದತಃ॥[೪೯೮]

"ರುದ್ರನ ನೇತ್ರಗಳಿಂದ ಉತ್ಪನ್ನವಾದ, ಲೋಕಪಾವನಗಳಾದ ರುದ್ರಾಕ್ಷಗಳು ಉತ್ಪತ್ತಿ ಭೇದದಿಂದ ಮೂವತ್ತೆಂಟು ವಿಧವಾಗಿವೆ" ಎಂಬ ಶ್ರೀ ಜಗದ್ಗುರು ರೇಣುಕಾಚಾರ್ಯರ ಅಪ್ಪಣೆಯ ಮೇರೆಗೆ ರುದ್ರಾಕ್ಷವು ೩೮ ಪ್ರಕಾರವಾಗಿವೆ. ಸೂರ್ಯ, ಚಂದ್ರ, ಅಗ್ನಿ -ಇವರು ಶಿವನ ಮೂರು ನೇತ್ರಗಳು. ಆದುದರಿಂದ ಶಿವನನ್ನು ತ್ರಿನೇತ್ರ ಎಂದು ಕರೆಯಲಾಗಿದೆ. ತ್ರಿಪುರಸಂಹಾರದ ಸಂದರ್ಭದಲ್ಲಿ ಶಿವನು ಮೂರೂ ಕಣ್ಣುಗಳನ್ನು ತೆರೆದಿದ್ದನು. ಆಗ ಸೂರ್ಯನೆಂಬ ಕಣ್ಣಿನಿಂದ ಉದುರಿದ ಕಣ್ಣೀರಿನ ಹನಿಗಳಿಂದ ಕಪಿಲವರ್ಣದ ೧೨ ರುದ್ರಾಕ್ಷಗಳು, ಚಂದ್ರನ ರೂಪದ ಎರಡನೆಯ ಕಣ್ಣಿನಿಂದ ಹೊರಹೊಮ್ಮಿದ ಕಣ್ಣೀರಿನಿಂದ ಬಿಳಿಯ ಬಣ್ಣದ ೧೬ ಪ್ರಕಾರದ ರುದ್ರಾಕ್ಷಗಳೂ ಮತ್ತು ಅಗ್ನಿರೂಪದ ಮೂರನೆಯ ಕಣ್ಣಿನಿಂದ ಸುರಿದ ಕಣ್ಣೀರಿನಿಂದ ಕಪ್ಪು ಬಣ್ಣದ

---

[೪೯೮] ಸಿ.ಶಿ, ೭.೪೮

೧೦ ವಿಧ ರುದ್ರಾಕ್ಷಗಳು ಉತ್ಪತ್ತಿಯಾದವು. ಈ ಎಲ್ಲವನ್ನೂ ಒಟ್ಟಿಗೆ ಸೇರಿಸಿದರೆ ರುದ್ರಾಕ್ಷಗಳು ೩೮ ಪ್ರಭೇದಗಳಾಗುತ್ತವೆ.[೪೯೯]

"ಸರತಿ ಆಕಾಶೇ, ಸುವತಿ ಕರ್ಮಣಿ ಲೋಕಂ ಪ್ರೇರಯತಿ ವೇತಿ ಸೂರ್ಯಃ" ಎಂಬ ವ್ಯುತ್ಪತ್ತಿಯಂತೆ ಸೂರ್ಯನು ಎಲ್ಲಾ ಪ್ರಾಣಿಗಳ ಪ್ರೇರಕ. ಅವನು ತಪಿನಿ[೫೦೦] ಮೊದಲಾದ ಹನ್ನೆರಡು ಕಲೆಗಳಿಂದ ಕೂಡಿರುವ ಕಾರಣ "ದ್ವಾದಶಾತ್ಮಾ" ಎಂದು ಹೇಳಲ್ಪಟ್ಟಿದ್ದಾನೆ. ಈ ರೀತಿಯಾಗಿ ರುದ್ರನ ನೇತ್ರರೂಪವಾದ ಸೂರ್ಯನು ಹನ್ನೆರಡು ಕಲೆಗಳಿಂದ ಕೂಡಿರುವುದರಿಂದ ಹನ್ನೆರಡು ಬಗೆಯ ಕಪಿಲವರ್ಣದ ರುದ್ರಾಕ್ಷಗಳು ಹುಟ್ಟಿದವು.

"ಸೂತೇಽಮೃತಮಿತಿ ಸೋಮಃ" ಎಂಬ ನಿರ್ವಚನದಂತೆ ತನ್ನ ಕಿರಣಗಳಿಂದ ಅಮೃತವನ್ನು ಸುರಿಸುವ ಕಾರಣ ಚಂದ್ರನಿಗೆ 'ಸೋಮ' ಎಂದು ಹೆಸರು. ಚಂದ್ರನು ಅಮೃತ[೫೦೧] ಮೊದಲಾದ ಹದಿನಾರು ಕಲೆಗಳಿಂದ ಯುಕ್ತನಾಗಿರುವುದರಿಂದ, ಅವನು 'ಕಲಾನಿಧಿ' ಎಂದೂ ಸಹ ಕರೆಯಲ್ಪಟ್ಟಿದ್ದಾನೆ. ಹೀಗೆ ರುದ್ರನ ನೇತ್ರರೂಪನಾದ ಚಂದ್ರನು ಹದಿನಾರು ಕಲೆಗಳಿಂದ ಕೂಡಿರುವುದರಿಂದಲೇ, ಅವನಿಂದ ಶ್ವೇತವರ್ಣದ ಹದಿನಾರು ಬಗೆಯ ರುದ್ರಾಕ್ಷಗಳು ಉತ್ಪತ್ತಿಯಾದವು.

"ವಹತಿ ಹವ್ಯಮಿತಿ ವಹ್ನಿಃ" ಎಂಬ ವ್ಯುತ್ಪತ್ತಿಯಂತೆ ಆಯಾ ದೇವತೆಗಳನ್ನು ಕುರಿತು ಅರ್ಪಿಸಿದ ಹವಿಸ್ಸಿನ ಭಾಗವನ್ನು ಆಯಾ ದೇವತೆಗಳಿಗೆ ತಲುಪಿಸುವುದರಿಂದ ಅಗ್ನಿಗೆ 'ವಹ್ನಿ' ಎಂದು ಹೆಸರು. ಅಗ್ನಿಯೂ ಸಹ ಧೂಮ್ರಾರ್ಚಿ[೫೦೨] ಮೊದಲಾದ ಹತ್ತು ಕಲೆಗಳಿಂದ ಕೂಡಿದೆ. ಆದುದರಿಂದ ರುದ್ರನ ಅಗ್ನಿರೂಪ ನೇತ್ರದಿಂದ ಕಪ್ಪು

---

[೪೯೯] ನೇತ್ರಾತ್ ಸೂರ್ಯಾತ್ಮನಃ ಶಂಭೋಃ ಕಪಿಲಾ ದ್ವಾದಶೋದಿತಾಃ।
ಶ್ವೇತಾಃ ಷೋಡಶ ಸಂಜಾತಾಃ ಸೋಮರೂಪಾದ್ ವಿಲೋಚನಾತ್॥
ಕೃಷ್ಣಾ ದಶವಿಧಾ ಜಾತಾ ವಹ್ನಿರೂಪಾದ್ ವಿಲೋಚನಾತ್।
-ಸಿ.ಶಿ, ೭.೪೯-೫೦

[೫೦೦] ತಪಿನೀ ತಾಪಿನೀ ಧೂಮ್ರಾ ಮರೀಚಿರ್ಜ್ವಲಿನೀ ರುಚಿಃ।
ಸುಷುಮ್ನಾ ಭೋಗದಾ ವಿಶ್ವಾ ಬೋಧಿನೀ ಧಾರಿಣೀ ಕ್ಷಮಾ।
ಕಭಾದ್ಯಾ ವಸುದಾಃ ಸೌರ್ಯಾಷ್ಠಡಾಂತಾ ದ್ವಾದಶೇರಿತಾಃ॥
-ಶಾರದಾತಿಲಕ, ೨.೧೪-೧೫

[೫೦೧] ಅಮೃತಾ ಮಾನದಾ ಪೂಷಾ ತುಷ್ಟಿಃ ಪುಷ್ಟೀ ರತಿರ್ಧೃತಿಃ।
ಶಶಿನೀ ಚಂದ್ರಿಕಾ ಕಾಂತಿರ್ಜ್ಯೋಸ್ನಾ ಶ್ರೀಃ ಪ್ರೀತಿರಂಗದಾ।
ಪೂರ್ಣಾ ಪೂರ್ಣಾಮೃತಾ ಕಾಮದಾಯಿನ್ಯಃ ಸ್ವರಜಾಃ ಕಲಾಃ॥
-ಶಾರದಾತಿಲಕ, ೨.೧೨-೧೩

[೫೦೨] ಧೂಮ್ರಾರ್ಚಿರೂಷ್ಮಾ ಜ್ವಲಿನೀ ಜ್ವಾಲಿನೀ ವಿಸ್ಫುಲಿಂಗಿನೀ।
ಸುಶ್ರೀಃ ಸುರೂಪಾ ಕಪಿಲಾ ಹವ್ಯಕವ್ಯವಹೇ ಅಪಿ।
ಯಾದೀನಾಂ ದಶವರ್ಣಾನಾಂ ಕಲಾ ಧರ್ಮಪ್ರದಾ ಇಮಾಃ॥
-ಶಾರದಾತಿಲಕ, ೨.೧೫-೧೬

ಬಣ್ಣದ ಹತ್ತು ವಿಧ ರುದ್ರಾಕ್ಷಗಳು ಉತ್ಪತ್ತಿಯಾದವು. ರುದ್ರಾಕ್ಷಗಳ ಪ್ರಭೇದಕ್ಕೆ ರುದ್ರನ ನೇತ್ರರೂಪವಾದ ಸೂರ್ಯ, ಚಂದ್ರ ಮತ್ತು ಅಗ್ನಿ -ಇವರ ಕಲಾಭೇದಗಳೇ ಕಾರಣವೆಂದು ತಿಳಿದುಬರುತ್ತದೆ.

ರುದ್ರಾಕ್ಷಗಳ ಪರೀಕ್ಷೆ

ಶರೀರದ ಮೇಲೆ ಧರಿಸುವ ರುದ್ರಾಕ್ಷಗಳನ್ನು ಪರೀಕ್ಷಿಸುವುದು ಆವಶ್ಯಕ. ಆದುದರಿಂದಲೇ ಶ್ರೀ ರೇಣುಕ ಭಗವತ್ಪಾದರು- "ಅಚ್ಛಿದ್ರಂ ಕನಕಪ್ರಖ್ಯಮನನ್ಯಧೃತ ಮುತ್ತಮಮ್"[೫೦೩] (ಸುವರ್ಣ ಕಾಂತಿಗೆ ಸಮಾನವಾದ ಕಾಂತಿಯುಳ್ಳ, ಛಿದ್ರವಿಲ್ಲದ, ಅನ್ಯರು ಧರಿಸದಿರುವ ರುದ್ರಾಕ್ಷಗಳು ಉತ್ತಮವಾದವುಗಳು) ಎಂದು ಯೋಗ್ಯವಾದ ರುದ್ರಾಕ್ಷಗಳ ಲಕ್ಷಣವನ್ನು ಹೇಳಿದ್ದಾರೆ. ಅದರಂತೆ ಕ್ರಿಮಿ-ಕೀಟಗಳು ಕಚ್ಚಿರದ, ಚಿನ್ನದಂತಹ ಪ್ರಭೆಯುಳ್ಳ,[೫೦೪] ಬೇರೆಯವರು ಧರಿಸದ, ಅರ್ಥಾತ್ ಹೊಸದಾದ ರುದ್ರಾಕ್ಷಗಳು ಧರಿಸಲು ಯೋಗ್ಯವಾದವುಗಳು. ಮನುಷ್ಯನ ಉತ್ಕೃಷ್ಟ ಮತ್ತು ಕನಿಷ್ಠವಾದ ಸಂಸ್ಕಾರಗಳ ಪ್ರಭಾವವು ಅವರು ಉಪಯೋಗಿಸುವ ವಸ್ತುಗಳಲ್ಲಿಯೂ ಇರುತ್ತದೆ ಎಂಬ ವಿಚಾರವು ವೈಜ್ಞಾನಿಕವಾದದ್ದು. ಆದುದರಿಂದ ಉನ್ನತ ಗುಣಗಳುಳ್ಳ ನಮ್ಮ ಗುರುಹಿರಿಯರು ಧರಿಸಿದ್ದ ರುದ್ರಾಕ್ಷಗಳ ಧಾರಣೆಯು ಅದೋಷವಾದರೂ, ಹೀನಸಂಸ್ಕಾರವುಳ್ಳ ವ್ಯಕ್ತಿಗಳು ಧರಿಸಿದ್ದ ರುದ್ರಾಕ್ಷಗಳ ಧಾರಣೆಯಿಂದ ಅವರ ಹೀನಸಂಸ್ಕಾರದ ಪ್ರಭಾವವು ನಮ್ಮ ಮೇಲೆ ಆಗಬಹುದೆಂಬ ಕಾರಣದಿಂದ ಬೇರೆಯವರು ಧರಿಸದ ಹೊಸ ರುದ್ರಾಕ್ಷಗಳು ಉತ್ತಮವಾದವುಗಳು. ಚಂದ್ರಜ್ಞಾನಾಗಮ ಮತ್ತು ಶಿವಮಹಾಪುರಾಣದಲ್ಲಿ-

"ತಾಮ್ರಾಃ ಸ್ನಿಗ್ಧಾ ದೃಢಾಃ ಸ್ಥೂಲಾಃ ಕಂಟಕೈಃ ಸಹಿತಾಃ ಶುಭಾಃ।
ಕ್ರಿಮಿದಷ್ಟಂ ಛಿನ್ನಭಿನ್ನಂ ಕಂಟಕೈರ್ಹೀನಮೇವ ಚ।
ವ್ರಣಯುಕ್ತಮಯುಕ್ತಂ ಚ ಷಡ್‌ರುದ್ರಾಕ್ಷಾನ್ ವಿವರ್ಜಯೇತ್॥"[೫೦೫]

"ತಾಮ್ರ ವರ್ಣದ, ನುಣುಪಾದ, ಗಟ್ಟಿಯಾಗಿರುವ, ದಪ್ಪಗಾತ್ರದ, ಏಣುಗಳಿಂದ ಕೂಡಿದ ರುದ್ರಾಕ್ಷಗಳು ಶುಭವಾದವುಗಳು ಅರ್ಥಾತ್ ಧರಿಸಲು ಯೋಗ್ಯವಾಗಿರುತ್ತವೆ. ಆದರೆ ಹುಳುಗಳು ಕಚ್ಚಿದ, ಒಡೆದು ಚೂರಾದ, ಏಣುಗಳಿಲ್ಲದ ಮತ್ತು ಅಂಕು ಡೊಂಕಾಗಿರುವ -ಈ ಆರು ಬಗೆಯ ರುದ್ರಾಕ್ಷಗಳನ್ನು ಧರಿಸಬಾರದು" ಎಂದು ಗ್ರಾಹ್ಯ ಮತ್ತು ತ್ಯಾಜ್ಯವಾದ ರುದ್ರಾಕ್ಷಗಳ ಲಕ್ಷಣವನ್ನು ವರ್ಣಿಸಲಾಗಿದೆ. ರುದ್ರಾಕ್ಷಧಾರಣೆಯ ಸಂದರ್ಭದಲ್ಲಿ ಈ ಅಂಶವನ್ನೂ ಗಮನಿಸಬೇಕು- ನೆಲ್ಲಿಕಾಯಿ ಗಾತ್ರದ ರುದ್ರಾಕ್ಷಗಳು ಉತ್ತಮವಾದವುಗಳು, ಬದರೀಫಲದ ಗಾತ್ರದವುಗಳು ಮಧ್ಯಮವಾದವುಗಳು ಮತ್ತು

---

[೫೦೩] ಸಿ.ಶಿ, ೭.೫೧

[೫೦೪] ನಿಕಷೇ ಹೇಮರೇಖೇವ ಯಸ್ಯ ರೇಖಾ ಪ್ರದೃಶ್ಯತೇ।
ತದಕ್ಷಮುತ್ತಮಂ ವಿದ್ಯಾತ್ ತದ್ಧಾರ್ಯಂ ಶಿವಪೂಜಕೈಃ॥ -ಚ.ಜ್ಞಾ, ಕ್ರಿ.ಪಾ, ೭.೧೭

[೫೦೫] ಚಂ.ಜ್ಞಾ, ಕ್ರಿ.ಪಾ, ೭.೧೪; ಶಿವಪುರಾಣ, ವಿದ್ಯೇಶ್ವರಸಂಹಿತಾ, ೨೩.೨೧-೨೨

ಕಡಲೆಕಾಳಿನ ಗಾತ್ರದವುಗಳು ಅಧಮವಾದವುಗಳು.[೫೦೬] ಆದುದರಿಂದ ರುದ್ರಾಕ್ಷಗಳನ್ನು ಧರಿಸುವವರು ಚೆನ್ನಾಗಿ ಪರೀಕ್ಷಿಸಿಯೇ ಅವುಗಳನ್ನು ಧರಿಸಬೇಕು.

ರುದ್ರಾಕ್ಷದ ಮುಖಗಳು ಮತ್ತು ಅವುಗಳ ಮಹಿಮೆ

ರುದ್ರಾಕ್ಷಗಳಿಗೆ ಒಂದರಿಂದ ಹದಿನಾಲ್ಕರವರೆಗೆ ಮುಖಗಳಿರುತ್ತವೆ. ರುದ್ರಾಕ್ಷ ಜಾಬಾಲೋಪನಿಷತ್,[೫೦೭] ಶಿವಮಹಾಪುರಾಣ,[೫೦೮] ಶಿವಾರ್ಚನಚಂದ್ರಿಕೆ[೫೦೯] ಮೊದಲಾದ ಗ್ರಂಥಗಳಲ್ಲಿ ಮುಖಭೇದದಿಂದ ರುದ್ರಾಕ್ಷ ಮಹಿಮೆಯ ಭೇದವು ವರ್ಣಿತವಾಗಿದೆ. ಶಾಸ್ತ್ರೋಕ್ತವಿಧಿಗನುಸಾರವಾಗಿ ಆಯಾ ಮುಖದ ರುದ್ರಾಕ್ಷಗಳ ಸ್ವರೂಪ ಹಾಗೂ ಅವುಗಳ ಮಹಿಮೆಯನ್ನು ಗಮನಿಸೋಣ:

ಒಂದು ಮುಖದ ರುದ್ರಾಕ್ಷವು ಸಾಕ್ಷಾತ್ತಾಗಿ ಪರಶಿವನ ಸ್ವರೂಪವಾದದ್ದು. ಅದರ ದರ್ಶನ ಮಾತ್ರದಿಂದ ಬ್ರಹ್ಮಹತ್ಯಾದಿ ಪಾತಕಗಳು ನಿವಾರಣೆಯಾಗುತ್ತವೆ. ಅದನ್ನು ಪೂಜೆ ಮಾಡುವುದರಿಂದ ಉಪದ್ರವಗಳೆಲ್ಲಾ ನಾಶವಾಗಿ, ಅಖಂಡ ಲಕ್ಷ್ಮಿಯ ಪ್ರಾಪ್ತಿಯಾಗಿ, ಕೊನೆಯದಾಗಿ ಶಿವಸಾಯುಜ್ಯವು ಪ್ರಾಪ್ತಿಯಾಗುತ್ತದೆ.[೫೧೦]

ಎರಡು ಮುಖದ ರುದ್ರಾಕ್ಷವು ಶಿವನ ಅರ್ಧನಾರೀಶ್ವರ ಸ್ವರೂಪವುಳ್ಳದ್ದು. ಅದರ ಧಾರಣೆಯಿಂದ ಅರ್ಧನಾರೀಶ್ವರನಾದ ಶಿವನ ಅನುಗ್ರಹ ಪ್ರಾಪ್ತವಾಗುವುದಲ್ಲದೆ ವಿಶೇಷವಾಗಿ ಗೋಹತ್ಯೆಯ ಪಾಪವು ನಿವಾರಣೆಯಾಗುತ್ತದೆ.[೫೧೧]

ಮೂರು ಮುಖದ ರುದ್ರಾಕ್ಷವು ಗಾರ್ಹಪತ್ಯ, ದಕ್ಷಿಣ ಮತ್ತು ಆಹವನೀಯ ಎಂಬ ಮೂರು ಅಗ್ನಿಗಳ ಸ್ವರೂಪವಾಗಿದೆ. ಅದನ್ನು ಧರಿಸುವುದರಿಂದ ಅಗ್ನಿದೇವನು ಸಂತೋಷಪಡುವುದರ ಜೊತೆಗೆ ಎಲ್ಲ ವಿದ್ಯೆಗಳೂ ಲಭಿಸುತ್ತವೆ.[೫೧೨]

ನಾಲ್ಕು ಮುಖದ ರುದ್ರಾಕ್ಷವು ಚತುರ್ಮುಖ ಬ್ರಹ್ಮನ ಸ್ವರೂಪವುಳ್ಳದ್ದಾಗಿದೆ. ಇದರ ದರ್ಶನ, ಸ್ಪರ್ಶನ ಮತ್ತು ಧಾರಣದಿಂದ ನರಹತ್ಯೆಯ ಪಾಪವು ನಾಶವಾಗುವುದರ

---

[೫೦೬] ಧಾತ್ರೀಫಲಪ್ರಮಾಣಂ ತು ಶ್ರೇಷ್ಠಮೇತದುದಾಹೃತಮ್।
ಬದರೀಫಲಮಾತ್ರಂ ತು ಮಧ್ಯಮಂ ಪ್ರೋಚ್ಯತೇ ಬುಧೈಃ।
ಅಧಮಂ ಚಣಮಾತ್ರಂ ಸ್ಯಾದಿತಿ ವಿದ್ಧಿ ಬೃಹಸ್ಪತೇ॥
-ಚಂ.ಜ್ಞಾ, ಕ್ರಿ.ಪಾ, ೭.೯-೧೦;
ಶಿವಪುರಾಣ, ವಿದ್ಯೇಶ್ವರ ಸಂಹಿತಾ, ೨೫.೧೪-೧೫

[೫೦೭] ರು.ಜಾ.ಉ, ೨.೧-೧೬

[೫೦೮] ಶಿ.ಪು, ವಿ.ಸಂ, ೨೫.೬೪-೮೦

[೫೦೯] ಶಿವಾರ್ಚನ ಚಂದ್ರಿಕಾ, ಪು. ೧೬

[೫೧೦] ರು.ಜಾ.ಉ, ೨.೧; ಶಿ.ಪು, ವಿ.ಸಂ, ೨೫.೬೪-೬೫

[೫೧೧] ರು.ಜಾ.ಉ, ೨.೨; ಶಿ.ಪು, ವಿ.ಸಂ. ೨೫.೬೬

[೫೧೨] ರು.ಜಾ.ಉ, ೨.೩; ಶಿ.ಪು, ವಿ.ಸಂ. ೨೫.೬೭

ಜೊತೆಗೆ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳು ಲಭಿಸುತ್ತವೆ.[೫೧೩]

ಐದು ಮುಖದ ರುದ್ರಾಕ್ಷವು ಪಂಚಮುಖ ಸದಾಶಿವನ ಸ್ವರೂಪದ್ದಾಗಿದೆ. ಅದನ್ನು ಧಾರಣೆ ಮಾಡುವುದರಿಂದ ಸೇರಬಾರದಂತಹ ಸ್ತ್ರೀಯನ್ನು ಭೋಗಿಸುವುದು, ತಿನ್ನಬಾರದ ಮಾಂಸ ಮುಂತಾದವುಗಳನ್ನು ತಿನ್ನುವುದರಿಂದ ಉಂಟಾದ ಪಾಪಗಳು ನಾಶವಾಗಿ, ಎಲ್ಲ ಮನೋರಥಗಳೂ ಪೂರ್ಣವಾಗಿ, ಕೊನೆಗೆ ಶಿವಸಾಯುಜ್ಯವು ಪ್ರಾಪ್ತವಾಗುವುದು (ಮೋಕ್ಷ ದೊರೆಯುವುದು).[೫೧೪]

ಆರು ಮುಖದ ರುದ್ರಾಕ್ಷವು ಷಣ್ಮುಖನ ಸ್ವರೂಪವುಳ್ಳದ್ದು. ಅದನ್ನು ಬಲಭುಜದಲ್ಲಿ ಧರಿಸುವುದರಿಂದ ಮಹದಾರೋಗ್ಯವು ಲಭಿಸುತ್ತದೆ, ಮನೋಬುದ್ಧಿಗಳು ಶುದ್ಧವಾಗುತ್ತವೆ ಹಾಗೂ ಬ್ರಹ್ಮಹತ್ಯಾದಿ ಪಾಪಗಳ ನಿವಾರಣೆಯಾಗುತ್ತದೆ.[೫೧೫]

ಏಳು ಮುಖದ ರುದ್ರಾಕ್ಷವು ಬ್ರಾಹ್ಮೀ, ಮಾಹೇಶ್ವರೀ, ಕೌಮಾರೀ, ವೈಷ್ಣವೀ, ವಾರಾಹೀ, ಇಂದ್ರಾಣೀ ಮತ್ತು ಚಾಮುಂಡಾ ಎಂಬ ಹೆಸರಿನ ಸಪ್ತಮಾತೃಕೆಯರ ಸ್ವರೂಪವಾದುದು. ಅದನ್ನು ಧರಿಸುವುದರಿಂದ ಮಹದಾರೋಗ್ಯದ ಪ್ರಾಪ್ತಿ, ಹೆಚ್ಚು ಸಂಪತ್ತು ಮತ್ತು ಮಹತ್ತಾದ ಜ್ಞಾನಸಂಪತ್ತಿಯು ಪ್ರಾಪ್ತವಾಗುತ್ತದೆ.[೫೧೬]

ಎಂಟು ಮುಖದ ರುದ್ರಾಕ್ಷವು ಅಷ್ಟವಸು ಹಾಗೂ ಭೈರವ ಸ್ವರೂಪವುಳ್ಳದ್ದಾಗಿದೆ. ಅದನ್ನು ಧಾರಣೆ ಮಾಡುವುದರಿಂದ ದೀರ್ಘವಾದ ಆಯುಸ್ಸು, ಶಿವಸಾಯುಜ್ಯ ಪ್ರಾಪ್ತಿ ಹಾಗೂ ಗಂಗಾದೇವಿಯ ಅನುಗ್ರಹವು ಲಭಿಸುತ್ತವೆ.[೫೧೭]

ಒಂಭತ್ತು ಮುಖದ ರುದ್ರಾಕ್ಷವು ದುರ್ಗಾದಿ ಒಂಭತ್ತು ಶಕ್ತಿಯರ ಸ್ವರೂಪದ್ದಾಗಿದೆ. ಆ ರುದ್ರಾಕ್ಷವನ್ನು ಎಡಗೈಯಲ್ಲಿ ಧರಿಸಿದ್ದಾದರೆ, ಕೋಟಿ ಕೋಟಿ ಮಹಾಪಾತಕಗಳು ನಿವಾರಣೆಯಾಗುತ್ತವೆ ಮತ್ತು ಧರಿಸಿದವನು ಸರ್ವೇಶ್ವರನಾಗುತ್ತಾನೆ.[೫೧೮]

ಹತ್ತು ಮುಖದ ರುದ್ರಾಕ್ಷವು ಯಮನ ಸ್ವರೂಪವುಳ್ಳದ್ದು. ಅದನ್ನು ಧರಿಸುವುದರಿಂದ ಗ್ರಹ, ಯಕ್ಷ, ಪಿಶಾಚ ಮುಂತಾದವುಗಳಿಂದ ಉಂಟಾಗುವ ಆಧಿಭೌತಿಕ ದುಃಖವು ನಿವಾರಣೆಯಾಗುವುದರ ಜೊತೆಗೆ ಎಲ್ಲ ಮನೋಭಿಲಾಷೆಗಳೂ ಈಡೇರುತ್ತವೆ.[೫೧೯]

---

[೫೧೩] ರು.ಜಾ.ಉ, ೨.೪; ಶಿ.ಪು, ವಿ.ಸಂ, ೨೫.೬೮

[೫೧೪] ರು.ಜಾ.ಉ, ೨.೫; ಶಿ.ಪು, ವಿ.ಸಂ, ೨೫.೬೯-೭೦

[೫೧೫] ರು.ಜಾ.ಉ, ೨.೬-೭; ಶಿ.ಪು, ವಿ.ಸಂ, ೨೫.೭೧

[೫೧೬] ರು.ಜಾ.ಉ, ೨.೮; ಶಿ.ಪು, ವಿ.ಸಂ, ೨೫.೭೨

[೫೧೭] ರು.ಜಾ.ಉ, ೨.೯-೧೦; ಶಿ.ಪು, ವಿ.ಸಂ, ೨೫.೭೩

[೫೧೮] ರು.ಜಾ.ಉ, ೨.೧೧; ಶಿ.ಪು, ವಿ.ಸಂ, ೨೫.೭೪-೭೫; ಶಿ.ಚ, ಪು. ೧೫

[೫೧೯] ರು.ಜಾ.ಉ, ೨.೧೨; ಶಿ.ಪು, ವಿ.ಸಂ, ೨೫.೭೬; ಶಿ.ಚ, ಪು. ೧೫

ಹನ್ನೊಂದು ಮುಖದ ರುದ್ರಾಕ್ಷವು ಏಕಾದಶರುದ್ರರ ಸ್ವರೂಪದ್ದಾಗಿದೆ. ಸೌಭಾಗ್ಯದಾಯಕವೂ, ವಿಜಯಪ್ರದವೂ ಆದ ಈ ರುದ್ರಾಕ್ಷವನ್ನು ಶಿಖೆಯಲ್ಲಿ ಧರಿಸುವುದರಿಂದ ನೂರು ವಾಜಪೇಯ ಯಾಗದ ಮತ್ತು ಸಹಸ್ರ ಗೋದಾನದ ಫಲವು ಲಭಿಸುತ್ತದೆ. ಕೊನೆಗೆ ರುದ್ರಸಾಯುಜ್ಯವು ದೊರೆಯುತ್ತದೆ.[೫೨೦]

ಹನ್ನೆರಡು ಮುಖದ ರುದ್ರಾಕ್ಷವು ದ್ವಾದಶ ಸೂರ್ಯ ಮತ್ತು ಮಹಾವಿಷ್ಣು ಸ್ವರೂಪವಾದದ್ದು. ಅದನ್ನು ಕಂಠದಲ್ಲಿ ಧರಿಸಿದರೆ ಗೋಮೇಧ ಹಾಗೂ ಅಶ್ವಮೇಧ ಯಾಗಗಳ ಫಲವು ದೊರೆಯುತ್ತದೆ. ಇದನ್ನು ಧರಿಸಿದವನಿಗೆ ಕೋರೆ ಹಾಗೂ ಕೊಂಬುಗಳುಳ್ಳ ಸಿಂಹ, ಹುಲಿ, ಆನೆ, ಕಾಡುಕೋಣ ಮೊದಲಾದ ಪ್ರಾಣಿಗಳ ಚೋರ, ಅಗ್ನಿಗಳ ಭಯವು ಉಂಟಾಗಲಾರದು ಮತ್ತು ಇದು ಎಲ್ಲ ಬಗೆಯ ಪಾಪಕ್ಷಯಕಾರಿಯೂ ಆಗಿದೆ.[೫೨೧]

ಹದಿಮೂರು ಮುಖದ ರುದ್ರಾಕ್ಷವು ಕಾಮದೇವ ಮತ್ತು ವಿಶ್ವೇದೇವ ಸ್ವರೂಪದ್ದಾಗಿದೆ. ಎಲ್ಲ ಭೋಗಪ್ರದವಾದ ಇದನ್ನು ಧರಿಸುವುದರಿಂದ ಎಲ್ಲ ಮಂಗಲ ಪರಂಪರೆಗಳು ದೊರೆಯುತ್ತವೆ. ಇದು ತಾಯಿ, ಸೋದರ ಮತ್ತು ಸ್ತ್ರೀವಧೆಯಿಂದ ಉಂಟಾಗುವ ದೋಷಗಳನ್ನು ನಿವಾರಣೆ ಮಾಡುತ್ತದೆ.[೫೨೨]

ಹದಿನಾಲ್ಕು ಮುಖದ ರುದ್ರಾಕ್ಷವು ಪರಶಿವನ ಸ್ವರೂಪದ್ದಾಗಿದೆ. ಸರ್ವರೋಗ ನಿವಾರಕವೂ, ಮಹದಾರೋಗ್ಯಪ್ರದವೂ ಆದ ಇದನ್ನು ಮಸ್ತಕದಲ್ಲಿ ಧಾರಣ ಮಾಡಿದರೆ ಎಲ್ಲ ಬಗೆಯ ಪಾಪಗಳೂ ನಾಶವಾಗುತ್ತವೆ ಮತ್ತು ಸಕಲ ಸಿದ್ಧಿಗಳೂ ಪ್ರಾಪ್ತವಾಗುತ್ತವೆ.[೫೨೩]

ಈ ಪ್ರಕಾರವಾಗಿ ಪ್ರಾಚೀನ ಸಂಸ್ಕೃತ ಗ್ರಂಥಗಳ ಪರಿಶೀಲನೆಯಿಂದ ವಿಭಿನ್ನ ಮುಖವುಳ್ಳ ರುದ್ರಾಕ್ಷಗಳ ವಿಭಿನ್ನ ಫಲಗಳು ತಿಳಿದುಬರುತ್ತವೆ. ಆದರೂ ಸಹ ಎಲ್ಲ ರುದ್ರಾಕ್ಷಗಳಲ್ಲಿ ಜೀವಿಗಳ ಪಾಪಗಳನ್ನು ನಿವಾರಿಸುವ ಮತ್ತು ಇಷ್ಟಾರ್ಥವನ್ನು ಕೊಡುವ ಸಾಮರ್ಥ್ಯವು ಇರುತ್ತದೆ. "ಯಾದೃಶೀ ಭಾವನಾ ಯಸ್ಯ ಫಲಂ ಭವತಿ ತಾದೃಶಮ್" (ಭಾವನೆಯು ಹೇಗಿರುತ್ತದೆಯೋ ಅದರ ಫಲವೂ ಹಾಗೆಯೇ ಇರುತ್ತದೆ) ಎಂಬ ಉಕ್ತಿಗನುಸಾರವಾಗಿ ರುದ್ರಾಕ್ಷಧಾರಣದಲ್ಲಿ ಯಾರು ಎಷ್ಟೆಷ್ಟು ಭಾವಜೀವಿಗಳಾಗುವರೋ ಅವರಿಗೆ ಅಷ್ಟಷ್ಟು ಹೆಚ್ಚಿನ ಫಲಗಳು ದೊರೆಯುತ್ತವೆ.

ರುದ್ರಾಕ್ಷಧಾರಿಗಳು ಪಾಲಿಸಬೇಕಾದ ಪಥ್ಯಗಳು

ಔಷಧವನ್ನು ಸೇವಿಸುವ ರೋಗಿಗಳು ಶೀಘ್ರವಾಗಿ ಗುಣಮುಖವಾಗಲು ಕೆಲವೊಂದು ಪಥ್ಯವನ್ನು ಪಾಲಿಸುವಂತೆ, ರುದ್ರಾಕ್ಷವನ್ನು ಧರಿಸುವವರೂ ಅದರ

---

[೫೨೦] ರು.ಜಾ.ಉ, ೨.೧೩; ಶಿ.ಪು, ವಿ.ಸಂ, ೨೫.೭೭; ಶಿ.ಚ, ಪು. ೧೫

[೫೨೧] ರು.ಜಾ.ಉ, ೨.೧೪; ಶಿ.ಪು, ವಿ.ಸಂ, ೨೫.೭೮; ಶಿ.ಚ, ಪು. ೧೫

[೫೨೨] ರು.ಜಾ.ಉ, ೨.೧೫; ಶಿ.ಪು, ವಿ.ಸಂ, ೨೫.೭೯; ಶಿ.ಚ, ಪು. ೧೫

[೫೨೩] ರು.ಜಾ.ಉ, ೨.೧೬; ಶಿ.ಪು, ವಿ.ಸಂ, ೨೫.೮೦; ಶಿ.ಚ, ಪು. ೧೫

ಫಲಪ್ರಾಪ್ತಿಗಾಗಿ ಪಥ್ಯವನ್ನು ಪಾಲಿಸಬೇಕಾಗುವುದು. ನಿಷಿದ್ಧವಾದ ಆಹಾರ-ಆಚಾರಗಳಿಂದ ರುದ್ರಾಕ್ಷಧಾರಣೆಯ ಫಲವು ಎಂದಿಗೂ ಲಭಿಸದು. ಅದನ್ನು ಉಪನಿಷತ್ತು ಹೀಗೆ ಹೇಳಿದೆ-

ಮದ್ಯಂ ಮಾಂಸಂ ಚ ಲಶುನಂ ಪಲಾಂಡುಂ ಶಿಗ್ರುಮೇವ ಚ।
ಶ್ಲೇಷ್ಮಾತಕಂ ವಿಡ್ವರಾಹಮಭಕ್ಷ್ಯಂ ವರ್ಜಯೇನ್ನರಃ॥[೫೨೪]

"ಅಪೇಯವಾದ ಮದ್ಯ ಮತ್ತು ಅಭಕ್ಷ್ಯವಾದ ಇಲಿ, ಹಂದಿ ಮೊದಲಾದ ಪ್ರಾಣಿಗಳ ಮಾಂಸ; ಬೆಳ್ಳುಳ್ಳಿ, ಈರುಳ್ಳಿ, ನುಗ್ಗೆಕಾಯಿ ಮೊದಲಾದ ತಾಮಸಗಳಾದ ಸಸ್ಯಾಹಾರವನ್ನು ವರ್ಜಿಸಬೇಕು." ಆದುದರಿಂದ ಎಲ್ಲ ರುದ್ರಾಕ್ಷಧಾರಿಗಳೂ ಸಹ ಸಾತ್ತ್ವಿಕಾಹಾರಿಗಳೂ ಮತ್ತು ಸದಾಚಾರಶೀಲರೂ ಆಗಿರಬೇಕು.

ವೀರಶೈವರ ರುದ್ರಾಕ್ಷಧಾರಣವಿಧಿ

ರುದ್ರಾಕ್ಷಜಾಬಾಲೋಪನಿಷತ್ತಿನಲ್ಲಿ ನಿದಾಘ, ಜಡಭರತ, ದತ್ತಾತ್ರೇಯ, ಕಾತ್ಯಾಯನ, ಭರದ್ವಾಜ, ಕಪಿಲ, ವಸಿಷ್ಠ, ಪಿಪ್ಪಲಾದ, ಸನತ್ಕುಮಾರ ಮುಂತಾದ ಮಹರ್ಷಿಗಳನ್ನು ಕುರಿತು ಕಾಲಾಗ್ನಿರುದ್ರನು ರುದ್ರಾಕ್ಷಧಾರಣ ವಿಧಿಯನ್ನು ವಿಸ್ತಾರವಾಗಿ ನಿರೂಪಿಸಿದ್ದಾನೆ. ಅಲ್ಲಿ ತಲೆ, ಕಂಠ, ವಕ್ಷಸ್ಥಲ, ತೋಳುಗಳು, ಮಣಿಕಟ್ಟು ಮುಂತಾದ ಅಂಗಗಳಲ್ಲಿ ವಿಭಿನ್ನ ಮುಖಗಳ, ವಿಭಿನ್ನ ಸಂಖ್ಯೆಯ ರುದ್ರಾಕ್ಷಧಾರಣವನ್ನು ಉಪದೇಶಿಸಿ,

ಸರಾಣಾಂ ಸಪ್ತಕಂ ವಾಪಿ ಬಿಭೃಯಾತ್ ಕಂಠದೇಶತಃ।
ಮುಕುಟೇ ಕುಂಡಲೇ ಚೈವ ಕರ್ಣಿಕಾಹಾರಕೇಽಪಿ ವಾ॥
ಕೇಯೂರಕಟಕೇ ಸೂತ್ರಂ ಕುಕ್ಷಿಬಂಧೇ ವಿಶೇಷತಃ।[೫೨೫]

"ಕಂಠದಲ್ಲಿ (ರುದ್ರಾಕ್ಷಿಯ) ಏಳು ಸರಗಳನ್ನಾಗಲೀ ಧರಿಸಬೇಕು. ಶಿರಸ್ಸು, ಕಿವಿಗಳಲ್ಲಿ ಆಭರಣದಂತೆ, ಮಣಿಕಟ್ಟಿನಲ್ಲಿ ಹಾಗೂ ಉದರದ ಮೇಲೆ ಸೂತ್ರದಂತೆಯೂ ಧರಿಸಬೇಕು" ಎಂದು ಪ್ರತಿಯೊಂದು ಅವಯವಗಳಲ್ಲಿಯೂ ರುದ್ರಾಕ್ಷದಿಂದ ನಿರ್ಮಿಸಿದ ಕಟಕ (ಕಡಗ), ಕೇಯೂರ (ತೋಳಿನ ಒಡವೆ) ಮುಂತಾದವುಗಳನ್ನು ಧರಿಸಬೇಕೆಂದು ಉಪದೇಶ ಮಾಡಿದ್ದಾನೆ.

ಪ್ರಕೃತದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಮಹಾಮಹಿಮಾಶಾಲಿಯಾದ ಅಗಸ್ತ್ಯ ಮಹರ್ಷಿಗಳನ್ನು ಕುರಿತು ಸಿದ್ಧಾಂತ ಶಿಖಾಮಣಿಯಲ್ಲಿ ಉಪದೇಶಿಸಿರುವ ವೀರಶೈವರ ರುದ್ರಾಕ್ಷಧಾರಣವಿಧಿಯನ್ನು ಪರಿಶೀಲಿಸೋಣ.

ಶಿವಪೂಜಾಪರಾಯಣನಾದ ವೀರಶೈವನು ತನ್ನ ಇಷ್ಟಲಿಂಗಪೂಜೆಯನ್ನು ಮಾಡುವ ಸಂದರ್ಭದಲ್ಲಿ ಶಿಖೆಯಲ್ಲಿ ಒಂದು ಮುಖದ ಒಂದು ರುದ್ರಾಕ್ಷವನ್ನು,

---

೫೨೪. ರು.ಜಾ.ಉ, ೨.೧೭

೫೨೫. ರು.ಜಾ.ಉ, ೧.೧೮-೨೦

ಎರಡು, ಮೂರು ಮತ್ತು ಹನ್ನೆರಡು ಮುಖಗಳುಳ್ಳ ತಲಾ ಒಂದೊಂದರಂತೆ ಮೂರು ರುದ್ರಾಕ್ಷಗಳನ್ನು ತಲೆಯ ಮೇಲೆ, ಹನ್ನೊಂದು ಮುಖದ ಮೂವತ್ತಾರು ರುದ್ರಾಕ್ಷಗಳನ್ನು ಮಸ್ತಕದ ಮೇಲೆ (ನೆತ್ತಿಯ ಸುತ್ತಲೂ), ಹತ್ತು ಮುಖದ ಎರಡು, ಐದು ಮುಖದ ಎರಡು ಮತ್ತು ಏಳು ಮುಖದ ಎರಡು ರುದ್ರಾಕ್ಷಗಳನ್ನು ಪ್ರತಿಯೊಂದು ಕಿವಿಯಲ್ಲಿ ಆರರಂತೆ, ಆರು ಮುಖದ ಹದಿನಾರು ಮತ್ತು ಎಂಟು ಮುಖದ ಹದಿನಾರು ಒಟ್ಟು ಮೂವತ್ತೆರಡು ರುದ್ರಾಕ್ಷಗಳ ಮಾಲೆಯನ್ನು ಕೊರಳಲ್ಲಿ, ನಾಲ್ಕು ಮುಖದ ಐವತ್ತು ರುದ್ರಾಕ್ಷಗಳನ್ನು ಎದೆಯ ಮೇಲೆ, ಹದಿಮೂರು ಮುಖದ ಹದಿನಾರು-ಹದಿನಾರು ರುದ್ರಾಕ್ಷಗಳನ್ನು ಎರಡೂ ತೋಳುಗಳಲ್ಲಿ, ಒಂಭತ್ತು ಮುಖದ ಹನ್ನೆರಡು-ಹನ್ನೆರಡು ರುದ್ರಾಕ್ಷಗಳನ್ನು ಎರಡೂ ಮಣಿಕಟ್ಟಿನಲ್ಲಿ (ಮುಂಗೈ), ಇದರಂತೆ ಹದಿನಾಲ್ಕು ಮುಖಗಳುಳ್ಳ ಒಂದು ನೂರಾ ಎಂಟು ರುದ್ರಾಕ್ಷಗಳ ಒಂದು ಸರವನ್ನು ಯಜ್ಞೋಪವೀತದಂತೆ ಧರಿಸಬೇಕು.[೫೨೬]

ಬೇರೆ ಬೇರೆ ಸ್ಥಾನಗಳಲ್ಲಿ ರುದ್ರಾಕ್ಷಧಾರಣೆ ಮಾಡುವಾಗ ಉಚ್ಚರಿಸಬೇಕಾದ ಬೇರೆ ಬೇರೆ ಮಂತ್ರಗಳೂ ಸಹ ನಿರೂಪಿತವಾಗಿವೆ.[೫೨೭] ಅವು ಈ ರೀತಿಯಾಗಿವೆ- ಓಂ ಸದಾಶಿವಾಯ ನಮಃ ಎಂದು ಶಿಖೆಯಲ್ಲಿ, ಓಂ ವಹ್ನಿಸೂರ್ಯಸೋಮಾಧಿಪಾಯ ನಮಃ ಎಂದು ತಲೆಯ ಮೇಲೆ, ಓಂ ಷಟ್‌ತ್ರಿಂಶತ್ತತ್ತ್ವಾತ್ಮನೇ ನಮಃ ಎಂದು ಮಸ್ತಕದಲ್ಲಿ, ಓಂ ಷಡ್‌ಬ್ರಹ್ಮಣೇ ನಮಃ ಎಂದು ಬಲಗಿವಿಯಲ್ಲಿ, ಓಂ ಅಷ್ಟಮೂರ್ತ್ಯಾತ್ಮನೇ ನಮಃ ಎನ್ನುತ್ತಾ ಎಡಗಿವಿಯಲ್ಲಿ, ಓಂ ತ್ರ್ಯಂಬಕಕಲಾತ್ಮನೇ ನಮಃ ಎಂದು ಕೊರಳಲ್ಲಿ, ಓಂ ಶ್ರೀಕಂಠಾದಿಮೂರ್ತ್ಯಾತ್ಮನೇ ನಮಃ ಎನ್ನುತ್ತಾ ಎದೆಯ ಮೇಲೆ, ಓಂ ಸುಖಾಸನಾದಿ ಷೋಡಶಮೂರ್ತ್ಯಾತ್ಮಕಾಯ ಶ್ರೀಕಂಠಾಯ ನಮಃ ಎನ್ನುತ್ತಾ ಬಲದೋಳಿನಲ್ಲಿ, ಓಂ ಸೋಮಕಲಾತ್ಮಕಾಯ ಶ್ರೀ ಸೋಮನಾಥಾಯ ನಮಃ ಎಂದು ಎಡತೋಳಿನಲ್ಲಿ, ಓಂ ದ್ವಾದಶಾದಿತ್ಯಾತ್ಮನೇ ಶ್ರೀ ಮಹಾದೇವಾಯ

---

[೫೨೬] ಶಿಖಾಯಾಮೇಕಮೇಕಾಸ್ಯಂ ರುದ್ರಾಕ್ಷಂ ಧಾರಯೇದ್ ಬುಧಃ।
ದ್ವಿತ್ರಿರ್ದ್ವಾದಶವಕ್ತ್ರಾಣಿ ಶಿರಸಿ ತ್ರೀಣಿ ಧಾರಯೇತ್॥
ಷಟ್‌ತ್ರಿಂಶದ್ ಧಾರಯೇನ್ಮೂರ್ಧ್ನಿ ನಿತ್ಯಮೇಕಾದಶಾನನಾನ್।
ದಶಸಪ್ತಪಂಚವಕ್ತ್ರಾನ್ ಷಟ್ ಷಟ್ ಕರ್ಣದ್ವಯೇ ವಹೇತ್॥
ಷಡಷ್ಟವದನಾನ್ ಕಂಠೇ ದ್ವಾತ್ರಿಂಶದ್ ಧಾರಯೇತ್ ಸದಾ।
ಪಂಚಾಶದ್ ಧಾರಯೇದ್ ವಿದ್ವಾನ್ ಚತುರ್ವಕ್ತ್ರಾಣಿ ವಕ್ಷಸಿ॥
ತ್ರಯೋದಶಮುಖಾನ್ ಕಂಠೇ ದ್ವಾತ್ರಿಂಶದ್ ಧಾರಯೇತ್ ಸದಾ।
ಪ್ರತ್ಯೇಕಂ ದ್ವಾದಶ ವಹೇನ್ನವಾಸ್ಯಾನ್ ಮಣಿಬಂಧಯೋಃ॥
ಚತುರ್ದಶಮುಖಂ ಯಜ್ಞಸೂತ್ರಮಷ್ಟೋತ್ತರಂ ಶತಮ್।
ಧಾರಯೇತ್ ಸರ್ವಕಾಲಂ ತು ರುದ್ರಾಕ್ಷಂ ಶಿವಪೂಜಕಃ॥ -ಸಿ.ಶಿ, ೭.೫೩-೫೭

[೫೨೭] ವೈದಿಕಶಿವಪೂಜಾವಿಧಿಃ, ಪು. ೧೪

ನಮಃ ಎನ್ನುತ್ತಾ ಬಲಮುಂಗೈಯಲ್ಲಿ, ಓಂ ಕೇಶವಾದಿಮೂರ್ತ್ಯಾಧಿಪಾಯ ಶ್ರೀಮದುಮಾಪತಯೇ ನಮಃ ಎನ್ನುತ್ತಾ ಎಡ ಮುಂಗೈಯಲ್ಲಿ, ಓಂ ಶತರುದ್ರವಿದ್ಯೇಶ್ವರಾತ್ಮನೇ ಶ್ರೀವಿಶ್ವೇಶ್ವರಾಯ ನಮಃ ಎನ್ನುತ್ತಾ ರುದ್ರಾಕ್ಷದ ಯಜ್ಞೋಪವೀತವನ್ನು ಧರಿಸಬೇಕು.

ಪೂರ್ವೋಕ್ತ ಪ್ರಕಾರವಾಗಿ ಆಯಾ ಅಂಗಗಳಲ್ಲಿ ರುದ್ರಾಕ್ಷಧಾರಣೆ ಮಾಡುವಾಗ ಆಯಾ ಅಂಗಗಳಿಗೆ ಹೇಳಿದ ಸಂಖ್ಯೆಯ ರುದ್ರಾಕ್ಷಗಳ ಮಾಲೆಯನ್ನು ನಿರ್ಮಿಸಿಕೊಳ್ಳಬೇಕು. ಆ ರುದ್ರಾಕ್ಷ ಮಾಲೆಗಳನ್ನು ಸಿದ್ಧಪಡಿಸುವಾಗ "ತನ್ಮುಖೇ ಮುಖಂ ತತ್ಪುಚ್ಛೇ ಪುಚ್ಛಮ್"[೫೨೮] ಎಂಬ ಅಕ್ಷಮಾಲೋಪನಿಷತ್ತಿನ ಉಕ್ತಿಯಂತೆ ಮುಖಕ್ಕೆ ಮುಖ ಮತ್ತು ಪುಚ್ಛಕ್ಕೆ ಪುಚ್ಛವನ್ನು ಕೂಡಿಸಿ ಹೆಣೆಯಬೇಕು. ಈ ರೀತಿಯಾದ ಶಾಸ್ತ್ರೋಕ್ತ ವಿಧಿಗನುಸಾರವಾಗಿ ಶ್ರದ್ಧೆಯಿಂದ ಆಯಾ ಅಂಗಗಳಲ್ಲಿ ರುದ್ರಾಕ್ಷ ಧಾರಣೆಯನ್ನು ಮಾಡಿಕೊಂಡು ಪೂರ್ವೋಕ್ತವಾದ ಪಥ್ಯದ ನಿಯಮಗಳನ್ನು ಪಾಲಿಸುವುದರಿಂದ ಅವುಗಳನ್ನು ಧರಿಸಿದ ಫಲವು ಅವಶ್ಯವಾಗಿ ಲಭಿಸುತ್ತದೆ.

ರುದ್ರಾಕ್ಷಧಾರಣದಿಂದ ಷಡಧ್ವಶುದ್ಧಿ

ಶೈವ-ವೀರಶೈವ ಪರಂಪರೆಗಳೆರಡರಲ್ಲೂ ದೀಕ್ಷಾಕಾಲದಲ್ಲಿ ಷಡಧ್ವಶುದ್ಧಿಯು ಪ್ರತಿಪಾದಿತವಾಗಿದೆ. ದೀಕ್ಷೆಯನ್ನು ಪಡೆಯುವ ಜೀವಾತ್ಮನ ಶರೀರದಲ್ಲಿ ಸಂಸ್ಕಾರ ವಿಶೇಷದಿಂದ ಷಡಧ್ವಗಳ ಸಂಬಂಧವನ್ನು ಸ್ಥಾಪಿಸುವುದೇ ಷಡಧ್ವನ್ಯಾಸ ಅಥವಾ ಷಡಧ್ವಶುದ್ಧಿ ಎಂದು ಹೇಳಲಾಗಿದೆ. ಆಗಮಗಳಲ್ಲಿ ವರ್ಣ, ಪದ, ಮಂತ್ರ, ಕಲೆ, ತತ್ತ್ವ ಮತ್ತು ಭುವನ -ಇವುಗಳು ಷಡಧ್ವಗಳೆಂದು ವ್ಯವಹರಿಸಲಾಗಿದೆ. ಇವುಗಳಲ್ಲಿ ಮೊದಲ ಮೂರು ಅಧ್ವಗಳು ಶಬ್ದಕ್ಕೆ ಸಂಬಂಧಿಸಿದ್ದರೆ ಕೊನೆಯ ಮೂರು ಅಧ್ವಗಳು ಅರ್ಥಕ್ಕೆ ಸಂಬಂಧಿಸಿದವುಗಳೆಂದು ವಿಭಾಗವು ಮಾಡಲ್ಪಟ್ಟಿದೆ.[೫೨೯]

ಸಮಗ್ರ ಪ್ರಪಂಚವು ಶಿವನ ಸ್ವರೂಪವಾಗಿರುವುದರಿಂದ, ಪ್ರಪಂಚವನ್ನು ಒಳಗೊಂಡಿರುವುದರಿಂದ ಈ ಷಡಧ್ವಗಳೂ ಸಹ ಶಿವಸ್ವರೂಪವುಳ್ಳವುಗಳೇ ಆಗಿವೆ. ಇವುಗಳಲ್ಲಿ ಶಿವಭಾವದ ಪ್ರಾಪ್ತಿಯೇ ಶಿವತ್ವವನ್ನು ಅಭಿವ್ಯಕ್ತಗೊಳಿಸುವ ಮಾರ್ಗವೆನ್ನುವ ಕಾರಣ, ಇವುಗಳು ಅಧ್ವ ಎಂಬ ಶಬ್ದದಿಂದ ಕರೆಯಲ್ಪಟ್ಟಿವೆ. ರುದ್ರನ ನೇತ್ರಗಳಿಂದ ಉತ್ಪನ್ನವಾಗಿರುವುದರಿಂದ ರುದ್ರಾಕ್ಷಗಳೂ ಸಹ ರುದ್ರನ ರೂಪವೇ ಆಗಿವೆ. ಆ ಕಾರಣ ಪೂರ್ವೋಕ್ತ ರೀತಿಯ ಪ್ರಕಾರ ಆಯಾ ಸ್ಥಾನದಲ್ಲಿ ರುದ್ರಾಕ್ಷಧಾರಣೆಯನ್ನು ಮಾಡಿಕೊಂಡಾಗ ಷಡಧ್ವಗಳ ಶುದ್ಧಿಯಾಗುವುದೆಂದು ಶ್ರೀ ಮರಿತೋಂಟದಾರ್ಯರು- "ಶುದ್ಧಮಿಶ್ರಸಂಕೀರ್ಣಭುವನಾಧೀಶಶಿವಾಷ್ಟವಿದ್ಯೇಶ್ವರಶತರುದ್ರಸಂಖ್ಯಾತ ಯಜ್ಞೋಪವೀತಧಾರಣೇನ ಭವನಾಧ್ವಶುದ್ಧಿಃ, ವರ್ಣಸಂಖ್ಯಾತವಕ್ಷೋಮಾಲಯಾ ವರ್ಣಾಧ್ವಶುದ್ಧಿಃ ಪದಸಂಖ್ಯಾತಮಣಿಬಂಧಬಾಹುಕಂಠಮಾಲಯಾ ಪದಾಧ್ವಶುದ್ಧಿಃ,

---

[೫೨೮] ಅಕ್ಷಮಾಲೋಪನಿಷತ್, ೧

[೫೨೯] ತಂತ್ರಯಾತ್ರಾ, ಪು. ೩೩

ಷಡಂಗಪಂಚಬ್ರಹ್ಮ ಪ್ರಣವಮಂತ್ರಸಂಖ್ಯಾತ ಕರ್ಣಾಭರಣೇನ ಮಂತ್ರಾಧ್ವಶುದ್ಧಿಃ, ಶಿವಶಕ್ತ್ಯಾತ್ಮಕ ಕರ್ಣಾಭರಣೇನ ತತ್ತ್ವಸಂಖ್ಯಾತಮಸ್ತಕಮಾಲಯಾ ವಾ ತತ್ತ್ವಾಧ್ವಶುದ್ಧಿಃ, ಅಷ್ಟತ್ರಿಂಶತ್ಕಲಾಪೂರ್ಣಸೋಮಸೂರ್ಯಾಗ್ನಿಲಕ್ಷಣಶಿರೋರಂಧ್ರಮಾಲಯಾ ಕಲಾಧ್ವಶುದ್ಧಿಃ, ಏವಂ ರೂಪಷಡಧ್ವಕಾರಣೀಭೂತ ಪರಶಿವಬ್ರಹ್ಮಮಯಶಿಖಾಗತ್ರೈಕ ರುದ್ರಾಕ್ಷಧಾರಣೇನ ಪರಶಿವಸ್ವರೂಪ ಏವ, "ಯೋ ರುದ್ರಾಕ್ಷಂ ಧತ್ತೇ ಸ ಸತ್ಯಂ ಪರಮಃ ಶಿವಃ ಸ ಸತ್ಯಂ ಪರಮಃ ಶಿವಃ ಇತಿ ಶ್ರುತೇಃ"[೫೩೦] ಎಂದು ಪ್ರತಿಪಾದಿಸಿದ್ದಾರೆ.

ಇದರ ತಾತ್ಪರ್ಯವೇನೆಂದರೆ- ಶುದ್ಧ, ಮಿಶ್ರ, ಸಂಕೀರ್ಣ ಭುವನಗಳಿಗೆ ಎಂಟು ಜನ ವಿದ್ಯೇಶ್ವರರು ಹಾಗೂ ನೂರು ಜನ ರುದ್ರರು -ಹೀಗೆ ಒಟ್ಟು ಒಂದು ನೂರ ಎಂಟು ಜನ ಅಧಿಪತಿಗಳಾಗಿರುತ್ತಾರೆ. ಒಂದು ನೂರಾ ಎಂಟು ರುದ್ರಾಕ್ಷಗಳ ಮಾಲೆಯನ್ನು ಯಜ್ಞೋಪವೀತದಂತೆ ದೇಹದಲ್ಲಿ ಧರಿಸಿದರೆ ಭುವನಾಧ್ವಶುದ್ಧಿ ಅಥವಾ ಭುವನಾಧ್ವನ್ಯಾಸ. 'ಅ'ಕಾರದಿಂದ 'ಕ್ಷ'ಕಾರದವರೆಗೆ ಐವತ್ತು ವರ್ಣಗಳಿವೆ. ಆದುದರಿಂದ ಐವತ್ತು ರುದ್ರಾಕ್ಷಗಳ ಮಾಲೆಯನ್ನು ಎದೆಯ ಮೇಲೆ ಧರಿಸುವುದರಿಂದ ವರ್ಣಾಧ್ವಶುದ್ಧಿ ಅಥವಾ ವರ್ಣಾಧ್ವನ್ಯಾಸ. ವ್ಯೋಮವ್ಯಾಪಿ ಮತ್ತು ವ್ಯೋಮರೂಪ[೫೩೧] ಮೊದಲಾದ ಎಂಭತ್ತೆಂಟು ಪದಗಳಿವೆ. ಅವುಗಳ ಪ್ರತೀಕವಾಗಿ ಎಂಭತ್ತೆಂಟು ರುದ್ರಾಕ್ಷಗಳ ಮಾಲೆಯನ್ನು ಕಂಠ, ತೋಳು ಮತ್ತು ಮಣಿಕಟ್ಟನಲ್ಲಿ ಧರಿಸುವುದರಿಂದ ಪದಾಧ್ವಶುದ್ಧಿ. ನ, ಮಃ, ಶಿ, ವಾ, ಯ ಎಂಬ ಪಂಚಾಕ್ಷರ ಮಂತ್ರ, ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಮತ್ತು ಈಶಾನಗಳೆಂಬ ಪಂಚಬ್ರಹ್ಮಮಂತ್ರ ಮತ್ತು ಪ್ರಣವ[೫೩೨] -ಹೀಗೆ ಒಟ್ಟು ಹನ್ನೆರಡು ಮಂತ್ರಗಳಿರುವುದರಿಂದ, ಅವುಗಳ ಪ್ರತೀಕವಾಗಿ ಹನ್ನೆರಡು ರುದ್ರಾಕ್ಷಗಳನ್ನು (ತಲಾ ಆರರಂತೆ) ಎರಡೂ ಕಿವಿಗಳಲ್ಲಿ ಧರಿಸುವುದರಿಂದ ಮಂತ್ರಾಧ್ವ ಶುದ್ಧಿಯು, ಶಿವತತ್ತ್ವಾದಿ ಪೃಥಿವೀ ತತ್ತ್ವಾಂತಗಳಾದ ಮೂವತ್ತಾರು ತತ್ತ್ವಗಳ ಪ್ರತೀಕವಾಗಿ ಅಷ್ಟು ರುದ್ರಾಕ್ಷಗಳನ್ನು ಶಿರಸ್ಸಿನಲ್ಲಿ ಧರಿಸುವುದರಿಂದ ತತ್ತ್ವಾಧ್ವಶುದ್ಧಿ. ಸೂರ್ಯನಲ್ಲಿರುವ ಹನ್ನೆಡು ಕಲೆ, ಚಂದ್ರನಲ್ಲಿರುವ ಹದಿನಾರು ಕಲೆ ಮತ್ತು ಅಗ್ನಿಯ ಹತ್ತು ಕಲೆ -ಹೀಗೆ ಒಟ್ಟು ಮೂವತ್ತೆಂಟು ಕಲೆಗಳಾಗುತ್ತವೆ. ಅವುಗಳ ತಾತ್ಪಯವಿಷ್ಟು-ಶಿರಸ್ಸಿನಲ್ಲಿ ಧರಿಸುವ ೨, ೩, ೧೨ ಮುಖಗಳುಳ್ಳ ಮೂರು ರುದ್ರಾಕ್ಷಿಗಳು ಸೂರ್ಯ-ಚಂದ್ರ-ಅಗ್ನಿ ಸ್ವರೂಪದವುಗಳಾಗಿವೆ ಎಂದು ಅವುಗಳ ಧಾರಣೆಯಿಂದ ಕಲಾಧ್ವಶುದ್ಧಿಯಾಗುತ್ತದೆ. ಎಲ್ಲ ಅಧ್ವಗಳಿಗೆ ಮೂಲಕಾರಣೀಭೂತವಾದ ಪರಶಿವನ

---

[೫೩೦] ಸಿ.ಶಿ, ೭.೧೦-೧೪, ತತ್ತ್ವಪ್ರದೀಪಿಕಾ ವ್ಯಾಖ್ಯೆ, ಪು. ೧೧೬

[೫೩೧] ಸಿದ್ಧಾಂತಶೈವದರ್ಶನೇ ಪದಾನಾಂ ಸಂಖ್ಯಾ ಏಕಾಶೀತಮಿತಾ ನಿರೂಪಿತಾ
(ರತ್ನತ್ರಯಪರೀಕ್ಷಾ, ೯೩)

[೫೩೨] ಸಿದ್ಧಾಂತಶೈವದರ್ಶನೇ ಮಂತ್ರಾಣಾಂ ಸಂಖ್ಯಾ ಏಕಾದಶ ಪ್ರತಿಪಾದಿತಾ।
-ತಂತ್ರಯಾತ್ರಾ, ಪು. ೨೫

ಸ್ವರೂಪವಾಗಿರುವ ಒಂದು ಮುಖದ ಒಂದು ರುದ್ರಾಕ್ಷವನ್ನು ಶಿಖೆಯಲ್ಲಿ ಧರಿಸುವುದರಿಂದ "ಯೋ ರುದ್ರಾಕ್ಷಂ ಧತ್ತೇ ಸ ಸತ್ಯಂ ಪರಮಃ ಶಿವಃ, ಸ ಸತ್ಯಂ ಪರಮಃ ಶಿವಃ" ಎಂಬ ಉಪನಿಷದ್ವಾಕ್ಯಾನುಸಾರವಾಗಿ ಅವನು ಸಾಕ್ಷಾತ್ ಶಿವಸ್ವರೂಪನೇ ಆಗುತ್ತಾನೆ. ಹೀಗೆ ಶಾಸ್ತ್ರೋಕ್ತ ರೀತಿಯಲ್ಲಿ ರುದ್ರಾಕ್ಷಧಾರಣೆ ಮಾಡಿಕೊಳ್ಳುವುದರಿಂದ ಶರೀರದಲ್ಲಿ ಷಡಧ್ವಶುದ್ಧಿಯಾಗಿ, ಧಾರಕನ ಶರೀರದ ಮಾಂಸಪಿಂಡಭಾವವು ತೊಲಗಿ, ಮಂತ್ರಪಿಂಡ ಭಾವವು ಆವರಿಸಿ, ಸಾಕ್ಷಾತ್ ಶಿವಸ್ವರೂಪನಾಗುವನು.

ರುದ್ರಾಕ್ಷಧಾರಣದಿಂದ ಪಾತಕಗಳ ಪರಿಹಾರ

ರುದ್ರನೇತ್ರಗಳಿಂದ ಉತ್ಪನ್ನಗಳಾದ ಕಾರಣ ಪಾವನಗಳಾದ ರುದ್ರಾಕ್ಷಗಳನ್ನು ಪೂರ್ವೋಕ್ತ ಶಾಸ್ತ್ರೀಯ ವಿಧಿಗನುಸಾರವಾಗಿ ಅತ್ಯಂತ ಶ್ರದ್ಧೆಯಿಂದ ಆಯಾ ಅಂಗಗಳಲ್ಲಿ ಯಾರು ಧರಿಸಿಕೊಳ್ಳುತ್ತಾರೆಯೋ ಅವರ ಎಲ್ಲ ಬಗೆಯ ಪಾಪಗಳು ಪರಿಹಾರ ವಾಗುತ್ತವೆ.[೫೩೩]

"ಪಾತಯತ್ಯಧೋ ಗಮಯತಿ ದುಷ್ಕ್ರಿಯಾಕಾರಿಣಮಿತಿ ಪಾತಕಮ್" ಎಂಬ ವ್ಯುತ್ಪತ್ತಿಯ ಮೇರೆಗೆ ನಾವು ಮಾಡಿದ ದುಷ್ಕರ್ಮಗಳು ನಮ್ಮ ಅಧೋಗತಿಗೆ ಕಾರಣಗಳಾಗಿವೆ. ಆ ಪಾತಕಗಳಾವುವೆಂದರೆ- ಅತಿಪಾತಕ, ಮಹಾಪಾತಕ, ಅನುಪಾತಕ, ಉಪಪಾತಕ, ಸಂಕರೀಕರಣ, ಅಪಾತ್ರೀಕರಣ, ಜಾತಿಭ್ರಂಶಕರಣ, ಮಲಾವಹ ಮತ್ತು ಪ್ರಕೀರ್ಣಕ ಎಂಬುದಾಗಿ ಒಂಭತ್ತು ಬಗೆಯಾಗಿವೆ.

ಅವುಗಳ ಪೈಕಿ ಅತಿಶಯವಾದ ಪಾತಕವೇ ಅತಿಪಾತಕ. ಪುರುಷರು ತನ್ನ ತಾಯಿ, ಮಗಳು ಅಥವಾ ಸೊಸೆಯರ ಜೊತೆಗೆ, ಸ್ತ್ರೀಯರು ತನ್ನ ಮಗ, ತಂದೆ ಅಥವಾ ಮಾವನ ಜೊತೆಗೆ ಭೋಗವನ್ನು ಮಾಡಿದರೆ[೫೩೪] ಅದರಿಂದ ಉಂಟಾಗುವ ಪಾಪಕ್ಕೆ ಅತಿಪಾತಕವೆನ್ನುವರು. "ಮಹಚ್ಚ ತತ್ ಪಾತಕಂ ಮಹಾಪಾತಕಮ್" ಎಂಬ ವ್ಯುತ್ಪತ್ತಿಯಂತೆ ದೊಡ್ಡದಾದ ಪಾಪವನ್ನು ಮಹಾಪಾತಕವೆನ್ನುತ್ತಾರೆ. ಬ್ರಹ್ಮಹತ್ಯೆ, ಮದ್ಯಪಾನ, ಕಳ್ಳತನ, ಗುರುಪತ್ನೀಗಮನ ಮತ್ತು ಈ ನಾಲ್ಕು ಬಗೆಯ ಪಾತಕಿಗಳ ಸಹವಾಸವನ್ನು ಮಾಡುವುದು -ಎಂದು ಐದು ವಿಧವಾಗಿದೆ.[೫೩೫]

ಮೇಲೆ ಹೇಳಿದ ಮಹಾಪಾತಕಗಳಿಗೆ ಸಮಾನವಾದ ಪಾತಕಗಳನ್ನೇ ಅನುಪಾತಕ ಗಳೆಂದು ಕರೆಯಲಾಗಿದೆ. ಸುಳ್ಳು ಹೇಳುವುದು, ತಾನು ಬ್ರಾಹ್ಮಣನಲ್ಲದಿದ್ದರೂ

---

[೫೩೩] "ರುದ್ರಾಕ್ಷಧಾರಣಾದೇವ ಮುಚ್ಯತೇ ಸರ್ವಪಾತಕೈಃ" -ಸಿ.ಶಿ, ೭.೫೯

[೫೩೪] ಮಾತೃದುಹಿತೃಸ್ನುಷಾಗಮನಂ ಪುಂಸಾಂ।
ಪುತ್ರಪಿತೃಶ್ವಶುರ ಗಮನಸ್ತ್ರೀಣಾಂ...॥

[೫೩೫] ಬ್ರಹ್ಮಹತ್ಯಾ ಸುರಾಪಾನಂ ಸ್ತೇಯಂ ಗುರ್ವಂಗನಾಗಮಃ।
ಮಹಾಂತಿ ಪಾತಕಾನ್ಯಾಹುಃ ಸಂಸರ್ಗಶ್ಚಾಪಿ ತೈಃ ಸಹ॥ -ಮನುಸ್ಮೃತಿ, ೧೧.೫೫

ಬ್ರಾಹ್ಮಣನೆಂದು ತನ್ನ ಜಾತಿಯ ಉತ್ಕೃಷ್ಟತೆಯನ್ನು ಹೇಳುವುದು, ರಾಜನಿಗೆ ಸುಳ್ಳು ಚಾಡಿಯನ್ನು ಹೇಳಿ ಯಾರನ್ನಾದರೂ ಕೊಲ್ಲಿಸುವುದು ಮತ್ತು ಗುರುವಿಗೆ ಸುಳ್ಳು ಹೇಳುವುದು -ಇಲ್ಲಿ ಇವುಗಳು ಬ್ರಹ್ಮಹತ್ಯಾ ಮಹಾಪಾತಕಕ್ಕೆ ಸಮಾನವಾದವುಗಳು.[೫೩೬] ಬ್ರಹ್ಮೋಜ್ಝತಾ ಅರ್ಥಾತ್ ಕಲಿತಿರುವ ವೇದಾಧ್ಯಯನವನ್ನು ಪುನಃ ಪುನಃ ಆವೃತ್ತಿಯನ್ನು ಮಾಡದೆ ಎಲ್ಲವನ್ನೂ ಮರೆಯುವುದು, ವೇದಗಳನ್ನು ನಿಂದಿಸುವುದು, ಸುಳ್ಳು ಸಾಕ್ಷಿಯನ್ನು ಹೇಳುವುದು, ಸ್ನೇಹಿತನನ್ನು ಕೊಲ್ಲುವುದು, ನಿಷಿದ್ಧಗಳೂ -ತಿನ್ನಲು ಅಯೋಗ್ಯವೂ ಆದ ಬೆಳ್ಳುಳ್ಳಿ ಮುಂತಾದವುಗಳ ಭಕ್ಷಣ -ಇವುಗಳು ಸುರಾಪಾನಕ್ಕೆ ಸಮಾನವಾದ ಪಾತಕಗಳು.[೫೩೭] ಭೂಮಿಯಲ್ಲಿರುವ ಸಂಪತ್ತನ್ನು ಅಪಹರಿಸುವುದು, ಮನುಷ್ಯ, ಕುದುರೆ, ಬೆಳ್ಳಿ (ಹಣ), ಭೂಮಿ ಮತ್ತು ವಜ್ರದ ಮಣಿಗಳನ್ನು ಅಪಹರಿಸುವುದು ಸ್ವರ್ಣ ಸ್ತೇಯಕ್ಕೇ (ಅನ್ಯರ ದ್ರವ್ಯಗಳನ್ನು ಅಪಹರಿಸುವುದು) ಸಮಾನವಾಗಿರುತ್ತವೆ.[೫೩೮] ಸೋದರಿಯರನ್ನೂ, ಅವಿವಾಹಿತ ಕನ್ಯೆಯರನ್ನೂ, ಚಾಂಡಾಲ ಸ್ತ್ರೀಯರನ್ನೂ, ಗೆಳತಿಯರನ್ನೂ ಮತ್ತು ಮಗನ ಹೆಂಡತಿ(ಸೊಸೆ)ಯನ್ನು ಭೋಗಿಸುವುದು ಗುರುಪತ್ನೀಗಮನಕ್ಕೆ ಸಮಾನವಾದವುಗಳು.[೫೩೯] ಆದುದರಿಂದ ಇವುಗಳು ಅನುಪಾತಕಗಳು.

ಗೋಹತ್ಯೆ, ಅಯೋಗ್ಯರನ್ನು ಪೂಜಿಸುವುದು, ಪರಸ್ತ್ರೀಯರನ್ನು ಭೋಗಿಸುವುದು, ತನ್ನನ್ನು ಮಾರಿಕೊಳ್ಳುವುದು, ತಂದೆ-ತಾಯಿ-ಗುರುಗಳ ಸೇವೆಯನ್ನು ಮಾಡದಿರುವುದು, ಸ್ವಾಧ್ಯಾಯ ಮತ್ತು ನಿತ್ಯಕರ್ಮಗಳನ್ನು ಬಿಡುವುದು, ಮಕ್ಕಳ ಪಾಲನೆ-ಪೋಷಣೆಗಳನ್ನು ಮಾಡದಿರುವುದು, ಕನ್ಯೆಯರನ್ನು ನಿಂದಿಸುವುದು, ಕೆರೆ-ಉದ್ಯಾನ-ಹೆಂಡತಿ-ಮಕ್ಕಳನ್ನು ಮಾರಾಟ ಮಾಡುವುದು, ಬಂಧುಗಳನ್ನು ತ್ಯಜಿಸುವುದು, ವೇತನ ತೆಗೆದುಕೊಂಡು ವಿದ್ಯಾದಾನ ಮಾಡುವುದು, ವೇತನವನ್ನು ಕೊಟ್ಟು ಅಧ್ಯಯನ ಮಾಡುವುದು, ಮಾರಾಟಕ್ಕೆ ನಿಷಿದ್ಧವಾದ ಎಳ್ಳು ಮುಂತಾದವುಗಳನ್ನು ಮಾರಾಟ ಮಾಡುವುದು, ಹೆಂಡತಿ ಮೊದಲಾದ ಸ್ತ್ರೀಯರನ್ನು ವೇಶ್ಯಾವೃತ್ತಿಯಲ್ಲಿ ತೊಡಗಿಸಿ ಉಪಜೀವನವನ್ನು ನಡೆಸುವುದು, ಮಾಟ ಮುಂತಾದ ಅಭಿಚಾರ ಕರ್ಮಗಳಿಂದ ಕೊಲ್ಲುವುದು, ಮಂತ್ರ ಮತ್ತು ವನೌಷಧಿಗಳ ಮೂಲಕ ವಶೀಕರಣಮಾಡಿಕೊಳ್ಳುವುದು, ಉರುವಲಿಗಾಗಿ

---

[೫೩೬] ಅನೃತಂ ಚ ಸಮುತ್ಕರ್ಷೇ ರಾಜಗಾಮಿ ಚ ಪೈಶುನಮ್।
ಗುರೋಶ್ಚಾಲೀಕನಿರ್ಬಂಧಃ ಸಮಾನಿ ಬ್ರಹ್ಮಹತ್ಯಯಾ॥ -ಮ.ಸ್ಮೃ, ೧೧.೫೬

[೫೩೭] ಬ್ರಹ್ಮೋಜ್ಝತಾ ವೇದನಿಂದಾ ಕೌಟಸಾಕ್ಷ್ಯಂ ಸುಹೃದ್ವಧಃ।
ಗರ್ಹಿತಾನಾದ್ಯಯೋರ್ಜಗ್ಧಿಃ ಸುರಾಪಾನಸಮಾನಿ ಷಟ್॥ -ಮ.ಸ್ಮೃ, ೧೧.೫೭

[೫೩೮] ನಿಕ್ಷೇಪಸ್ಯಾಪಹರಣಂ ನರಾಶ್ವರಜತಸ್ಯ ಚ।
ಭೂಮಿವಜ್ರಮಣೀನಾಂ ಚ ರುಕ್ಮಸ್ತೇಯಸಮಂ ಸ್ಮೃತಮ್॥ -ಮ.ಸ್ಮೃ, ೧೧.೫೮

[೫೩೯] ರೇತಃಸೇಕಃ ಸ್ವಯೋನಿಷು ಕುಮಾರೀಷ್ವಂತ್ಯಜಾಸು ಚ।
ಸಖ್ಯುಃ ಪುತ್ರಸ್ಯ ಚ ಸ್ತ್ರೀಷು ಗುರುತಲ್ಪಸಮಂ ವಿದುಃ॥ -ಮ.ಸ್ಮೃ, ೧೧.೫೯

ಗಿಡ-ಮರಗಳನ್ನು ಕತ್ತರಿಸುವುದು, ದೇವತೆ-ಪಿತೃದೇವತೆಗಳನ್ನು ಬಿಟ್ಟು ಕೇವಲ ತನಗೆ ಅಡುಗೆಯನ್ನು ಮಾಡಿಕೊಂಡು ಊಟಮಾಡುವುದು, ನಿಂದಿತವಾದ ಅನ್ನಾದಿಗಳನ್ನು ಒಮ್ಮೆಯಾದರೂ ಇಷ್ಟವಿಲ್ಲದಿದ್ದರೂ ತಿನ್ನುವುದು, ಅಧಿಕಾರವಿದ್ದಾಗ ಲಂಚವನ್ನು ತೆಗೆದುಕೊಳ್ಳುವುದು, ಧರ್ಮಶಾಸ್ತ್ರಗಳಿಗೆ ವಿರುದ್ಧವಾದ ಶಾಸ್ತ್ರಗಳ ಅಧ್ಯಯನ, ಧಾನ್ಯ-ತಾಮ್ರ ಮುಂತಾದ ಲೋಹ ಮತ್ತು ಪಶುಗಳ ಕಳ್ಳತನ ಮಾಡುವುದು, ಮದ್ಯಪಾನ ಮಾಡಿದ ಸ್ತ್ರೀಗಮನ -ಇವುಗಳೆಲ್ಲವೂ ಉಪಪಾತಕಗಳು.[೫೪೦]

ದಂಡಾದಿಗಳಿಂದ ಬ್ರಾಹ್ಮಣನನ್ನು ಪೀಡಿಸುವುದು, ದುರ್ಗಂಧ ವಸ್ತುಗಳಾದ ಬೆಳ್ಳುಳ್ಳಿ ಮೊದಲಾದವುಗಳನ್ನು ಮೂಸಿ ನೋಡುವುದು, ಕುಟಿಲವಾಗಿ ವರ್ತಿಸುವುದು ಮತ್ತು ಪುರುಷರ ಮುಖಾದಿಗಳಲ್ಲಿ ಮೈಥನ ಕ್ರಿಯೆಯನ್ನು ಮಾಡುವುದು, ಇವು ಒಂದೊಂದೂ ಜಾತಿಭ್ರಂಶಕರ ಪಾತಕವೆನ್ನುತ್ತಾರೆ.[೫೪೧]

ಕತ್ತೆ, ಕುದುರೆ, ಒಂಟೆ, ಜಿಂಕೆ, ಆನೆ, ಆಡು, ಹೋತ, ಮೀನು, ಸರ್ಪ, ಎಮ್ಮೆ ಮುಂತಾದವುಗಳನ್ನು ಕೊಲ್ಲುವುದು ಸಂಕರೀಕರಣ ಪಾತಕವೆಂದು ಅರಿಯಬೇಕು.[೫೪೨] "ಅಸಂಕರಃ ಸಂಕರಃ ಕ್ರಿಯತೇಽನೇನೇತಿ ಸಂಕರೀಕರಣಮ್" ಎಂಬ ಚ್ವಿಃ ಸಮಾಸಕ್ಕೆ ಅನುಸಾರವಾಗಿ ಜಾತಿಸಂಕರರಲ್ಲದವರನ್ನೂ ಸಹ ಈ ಪಾತಕವು ಜಾತಿಸಂಕರರನ್ನಾಗಿ ಮಾಡುವುದರಿಂದ ಇದನ್ನು ಸಂಕರೀಕರಣವೆಂದು ಕರೆದಿದ್ದಾರೆ.

ನಿಂದನೀಯರಾದವರಿಂದ ಧನವನ್ನು ಪಡೆಯುವುದು, ವ್ಯಾಪಾರ ಮಾಡುವುದು, ಹೀನ ವ್ಯಕ್ತಿಗಳ ಸೇವೆ ಮಾಡುವುದು, ಸುಳ್ಳು ಹೇಳುವುದು -ಇವುಗಳನ್ನು ಅಪಾತ್ರೀಕರಣವೆನ್ನುತ್ತಾರೆ.[೫೪೩]

ಕ್ರಿಮಿ-ಕೀಟ ಹಾಗೂ ಪಕ್ಷಿಗಳನ್ನು ಕೊಲ್ಲುವುದು, ಮದ್ಯದ ಸ್ಪರ್ಶವಾದ ತರಕಾರಿಗಳಿಂದ ಅಡುಗೆಮಾಡಿ ಊಟಮಾಡುವುದು, ಹಣ್ಣು, ಕಟ್ಟಿಗೆ, ಹೂವುಗಳನ್ನು ಕಳ್ಳತನ ಮಾಡುವುದು, ಅಲ್ಪಹಾನಿಯುಂಟಾದಾಗ ಅತ್ಯಂತ ಭಯಗೊಂಡು ಧೈರ್ಯವನ್ನು ಕಳೆದುಕೊಳ್ಳುವುದು -ಇವುಗಳನ್ನು ಮಲಿನೀಕರಣವೆನ್ನುತ್ತಾರೆ.[೫೪೪]

ಈ ಪ್ರಕಾರವಾಗಿ ಕೊನೆಯ ಪಾತಕವು ಪ್ರಕೀರ್ಣಕವೆನಿಸುತ್ತದೆ. ಶಾಸ್ತ್ರದ ಆಧಾರವಿಲ್ಲದೆ ನ್ಯಾಯಾಧೀಶ ಅಥವಾ ರಾಜನು ನೀಡುವ ನಿರ್ಣಯವು ಪ್ರಕೀರ್ಣಕವೆನಿಸುತ್ತದೆ.

---

[೫೪೦] ಮ.ಸ್ಮೃ, ೧೧.೬೦-೬೭ (ಕುಲ್ಲೂಕಭಟ್ಟನ ವ್ಯಾಖ್ಯೆ)

[೫೪೧] ಮ.ಸ್ಮೃ, ೧೧.೬೮ (ಕುಲ್ಲೂಕಭಟ್ಟನ ವ್ಯಾಖ್ಯೆ)

[೫೪೨] ಮ.ಸ್ಮೃ, ೧೧.೬೯ (ಕುಲ್ಲೂಕಭಟ್ಟನ ವ್ಯಾಖ್ಯೆ)

[೫೪೩] ಮ.ಸ್ಮೃ, ೧೧.೭೦ (ಕುಲ್ಲೂಕಭಟ್ಟನ ವ್ಯಾಖ್ಯೆ)

[೫೪೪] ಮ.ಸ್ಮೃ, ೧೧.೭೧ (ಕುಲ್ಲೂಕಭಟ್ಟನ ವ್ಯಾಖ್ಯೆ)

ಮೇಲೆ ಹೇಳಿದ ಪಾತಕಗಳ ಪರಿಣಾಮದಿಂದ ಮನುಷ್ಯನು ಹೀನಯೋನಿಗಳಲ್ಲಿ (ಕೀಳುಜಂತುಗಳಲ್ಲಿ) ಜನ್ಮತಾಳುತ್ತಾನೆ. ತಾನು ಮಾಡಿದ ಕರ್ಮದ ಫಲವನ್ನು ಅವಶ್ಯವಾಗಿ ಅನುಭವಿಸಬೇಕಾಗುತ್ತದೆ.[೫೪೫] ಆದುದರಿಂದಲೇ ಶಾತಾತಪೀಯ ಕರ್ಮವಿಪಾಕದಲ್ಲಿ-

ಮಹಾಪಾತಕಜಂ ಚಿಹ್ನಂ ಸಪ್ತಜನ್ಮಸು ಜಾಯತೇ।
ಬಾಧತೇ ವ್ಯಾಧಿರೂಪೇಣ ತಸ್ಯ ಕೃಚ್ಛ್ರಾದಿಭಿಃ ಸಮಃ॥

"ಮಹಾಪಾತಕಗಳಿಂದುಂಟಾದ ಪಾಪಗಳು ಏಳು ಜನ್ಮಗಳವರೆಗೆ ಹಿಂಬಾಲಿಸಿ, ಅನೇಕ ರೋಗಗಳ ರೂಪದಲ್ಲಿ ಪಾತಕಿಯನ್ನು (ಜೀವಿಯನ್ನು) ಪೀಡಿಸುತ್ತದೆ. ಅದರ ನಿವಾರಣೆಗಾಗಿ ಕೃಚ್ಛ್ರ ಮುಂತಾದ ಪ್ರಾಯಶ್ಚಿತ್ತವನ್ನು ಮಾಡಬೇಕಾಗುತ್ತದೆ." ಹೀಗೆ ಅನೇಕ ವಿಧ ಪಾತಕಗಳಿಗೆ ಅನೇಕ ವಿಧಗಳಾದ ಪ್ರಾಯಶ್ಚಿತ್ತ ಕರ್ಮಗಳು ಮನುಸ್ಮೃತಿಯ ಹನ್ನೊಂದನೇ ಅಧ್ಯಾಯದಲ್ಲಿ ಪ್ರತಿಪಾದಿಸಲ್ಪಟ್ಟಿವೆ. ಆದರೆ ವೀರಶೈವ ಸಿದ್ಧಾಂತದಲ್ಲಿ ಶ್ರೀ ರೇಣುಕ ಭಗವತ್ಪಾದರು-

ಬ್ರಹ್ಮಹಾ ಮದ್ಯಪಾಯೀ ಚ ಸ್ವರ್ಣಹೃದ್ ಗುರುತಲ್ಪಗಃ।
ಮಾತೃಹಾ ಪಿತೃಹಾ ಚೈವ ಭ್ರೂಣಹಾ ಕೃತಘಾತಕಃ॥
ರುದ್ರಾಕ್ಷಧಾರಣಾದೇವ ಮುಚ್ಯತೇ ಸರ್ವಪಾತಕೈಃ।[೫೪೬]

"ಬ್ರಾಹ್ಮಣಹತ್ಯೆ, ಮದ್ಯಪಾನ ಮಾಡಿದವನು, ಸ್ವರ್ಣದ ಕಳವು ಮಾಡಿದವನು, ಗುರುಪತ್ನೀಗಮನ ಮಾಡಿದವನು, ಮಾತೃ-ಪಿತೃ-ಭ್ರೂಣಹತ್ಯೆಗಳನ್ನು ಮಾಡಿದವನು -ಇವರೆಲ್ಲರೂ ರುದ್ರಾಕ್ಷಧಾರಣೆ ಮಾಡುವುದರಿಂದಲೇ ಅವರ ಪಾತಕಗಳು ನಿವಾರಣೆಯಾಗುತ್ತವೆ" ಎಂದು ನಿರೂಪಿಸಿರುತ್ತಾರೆ.

ರುದ್ರಾಕ್ಷಜಾಬಾಲೋಪನಿಷತ್ತಿನಲ್ಲಿ- "ತದ್ರುದ್ರಾಕ್ಷೇ ವಾಗ್ವಿಷಯೇ ಕೃತೇ ದಶಗೋಪ್ರದಾನೇನ ಯತ್ ಫಲಮವಾಪ್ನೋತಿ ತತ್ಫಲಮಶ್ನುತೇ" ಬಾಯಿಂದ 'ರುದ್ರಾಕ್ಷ' ಎಂಬ ಶಬ್ದವನ್ನುಚ್ಚರಿಸಿದ ಮಾತ್ರದಿಂದ ಹತ್ತು ಗೋದಾನದ ಫಲವು ಪ್ರಾಪ್ತವಾಗುವುದು. ರುದ್ರಾಕ್ಷದ ಸ್ಪರ್ಶದಿಂದ ಅಥವಾ ಧಾರಣೆಯಿಂದ ಹನ್ನೊಂದು ಸಾವಿರ ಗೋದಾನ ಫಲವು ಪ್ರಾಪ್ತವಾಗುತ್ತದೆ. ರುದ್ರಾಕ್ಷವನ್ನು ಶಿರಸ್ಸಿನಲ್ಲಿ ಧರಿಸುವುದರಿಂದ ಒಂದು ಕೋಟಿ ಗೋದಾನ ಫಲವು ಲಭಿಸುತ್ತದೆ. ಇವುಗಳನ್ನು ಪೂರ್ವೋಕ್ತಗಳಾದ ಸ್ಥಾನಗಳಲ್ಲಿ ಧರಿಸುವುದರಿಂದ ಉಂಟಾಗುವ ಮಹಿಮೆಯಿಂದ ಎರಡೂ ಕಿವಿಗಳಿಗೆ ಆಗುವ ಫಲವನ್ನು ವರ್ಣಿಸಲು ಸಾಧ್ಯವಿಲ್ಲ ಎಂದು ರುದ್ರಾಕ್ಷಧಾರಣಫಲವನ್ನು ಹೇಳಿ, ಕೊನೆಯಲ್ಲಿ- "ಈ ಉಪನಿಷತ್ತನ್ನು ಸಾಯಂಕಾಲದಲ್ಲಿ ಅಧ್ಯಯನ ಮಾಡುವ ಬ್ರಾಹ್ಮಣನು ಆ ದಿನ

---

[೫೪೫] "ನಾಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿಶತೈರಪಿ" ಇತಿ ಪೌಷ್ಕರಾಗಮೇ (ಲುಪ್ತಾಗಮ ಸಂಗ್ರಹ, ಭಾಗ-೨, ಉಪೋದ್ಘಾತ, ಪು. ೧೪೪)

[೫೪೬] ಸಿ.ಶಿ, ೭.೫೯

ಮಾಡಿದ ಪಾಪಗಳು ನಾಶವಾಗುತ್ತವೆ. ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಅಧ್ಯಯನ ಮಾಡಿದರೆ ಅನೇಕ ಜನ್ಮಗಳಲ್ಲಿ ಮಾಡಿದ ಪಾಪಗಳು ನಾಶವಾಗುತ್ತವೆ ಹಾಗೂ ಅರವತ್ತು ಸಾವಿರ ಲಕ್ಷ ಗಾಯತ್ರೀ ಜಪದ ಫಲವನ್ನು ಪಡೆಯುತ್ತಾನೆ. ಬ್ರಹ್ಮಹತ್ಯೆ, ಸುರಾಪಾನ, ಸ್ವರ್ಣದ ಕಳ್ಳತನ, ಗುರುಪತ್ನೀಗಮನ -ಮೊದಲಾದವುಗಳಿಂದ ಉಂಟಾದ ಪಾತಕಗಳಿಂದ ನಿವೃತ್ತನಾಗಿ ಪವಿತ್ರನಾಗುತ್ತಾನೆ’’[೫೪೭] ಎಂದು ಆ ಉಪನಿಷತ್ತಿನ ಅಧ್ಯಯನದಿಂದಲೂ ಸಹ ಪಾತಕಗಳ ಪರಿಹಾರವಾಗುತ್ತದೆಂದು ಉಪದೇಶಿಸಲಾಗಿದೆ. ಶಿವಮಹಾಪುರಾಣದಲ್ಲಿ ಭಗವಾನ್ ವ್ಯಾಸರೂ ಸಹ-

> ಯಸ್ಯಾಂಗೇ ನಾಸ್ತಿ ರುದ್ರಾಕ್ಷಸ್ತ್ರಿಪುಂಡ್ರಂ ಭಾಲಪಟ್ಟಕೇ।
> ಮುಖೇ ಪಂಚಾಕ್ಷರಂ ನಾಸ್ತಿ ತಮಾನಯ ಯಮಾಲಯಮ್।।[೫೪೮]

ಯಾರ ಶರೀರದ ಮೇಲೆ ಭಸ್ಮ-ರುದ್ರಾಕ್ಷಗಳಿಲ್ಲವೋ ಅವರನ್ನು ಮಾತ್ರ ಯಮಾಲಯಕ್ಕೆ ಒಯ್ಯಬೇಕೆಂಬ ವ್ಯತಿರೇಕದಿಂದ ರುದ್ರಾಕ್ಷದ ಮಹಿಮೆಯನ್ನು ವರ್ಣಿಸಿದ್ದಾರೆ.

ಈ ಬಗೆಯ ಎಲ್ಲ ಪ್ರಾಮಾಣಿಕ ವಚನಗಳನ್ನು ಅವಲೋಕಿಸಿದಾಗ ರುದ್ರಾಕ್ಷ ಧಾರಣದಿಂದ ಪಾತಕಗಳ ನಿವೃತ್ತಿ, ಪುಣ್ಯಪ್ರಾಪ್ತಿ ಮತ್ತು ಕೊನೆಯಲ್ಲಿ ರುದ್ರಲೋಕ ಪ್ರಾಪ್ತಿಯಾಗುತ್ತದೆಂದು ತಿಳಿದುಬರುತ್ತದೆ.[೫೪೯]

ಆದುದರಿಂದ ಶ್ರೀ ಮರಿತೋಂಟದಾರ್ಯರು - “ರುದ್ರಾಕ್ಷಧಾರಣೆಯಿಂದ ಸಾಕ್ಷಾತ್ ಪರಮೇಶ್ವರನ ಕಣ್ಣೀರ ಹನಿಗಳ ಸಮೂಹದ ಪ್ರಭಾವ, ಬ್ರಹ್ಮ, ವಿಷ್ಣು, ರುದ್ರಾದಿ ದೇವತೆಗಳು ನಾಯಕರಾಗಿರುವುದರಿಂದಲೂ, ಆಯಾ ಸಂಖ್ಯಾ ವಿಶಿಷ್ಟವಾದ ಆಯಾ ಸ್ಥಾನಗಳಲ್ಲಿ ಧರಿಸುವುದರಿಂದ ಶಿವನೊಂದಿಗೆ ಸಾಮರಸ್ಯವನ್ನು ಪಡೆಯುವುದರಿಂದ, ನಿತ್ಯ ನೈಮಿತ್ತಿಕಾದಿ ಧರ್ಮಕಾರ್ಯಗಳ ಅನುಷ್ಠಾನದ ಸಮಯದಲ್ಲಿ ಧರಿಸುವ ಕಾರಣದಿಂದ ಸಮಗ್ರ ಫಲವನ್ನು ಸಂಪಾದಿಸುವುದರಿಂದ, ಅದಕ್ಕೆ ವಿರೋಧವಾದ ಧರ್ಮಗಳ ಅನುಷ್ಠಾನ ಮಾಡುವುದರಿಂದ ನಿಷ್ಫಲವು ದೊರೆಯುವುದರಿಂದ ಎಲ್ಲ ಬಗೆಯ ಮಹಾಪಾತಕ, ಉಪಪಾತಕಗಳ ನಿವಾರಣೆಯ ಮೂಲಕ ಪರಿಶುದ್ಧರಾಗುವುದರಿಂದ, ಎಲ್ಲ ಬಗೆಯ ಕರ್ಮಗಳ ಸಮೃದ್ಧಿಯ ಸಂಪಾದನೆಯ ಮೂಲಕ ಬ್ರಹ್ಮವಿದ್ಯೆಯ ಅಂಗರೂಪವಾಗಿ, ಮತ್ತು ಜೀವಾತ್ಮನ ಎಲ್ಲ ವಿಧ ಪಾಶಗಳನ್ನು ಕತ್ತರಿಸಿಹಾಕುವುದರಿಂದ ಮೋಕ್ಷವು ದೊರೆಯುತ್ತದೆ ಎಂದು ಪ್ರತಿಪಾದಿಸಿರುವುದರಿಂದ ರುದ್ರನೇ ಮೊದಲ್ಗೊಂಡು ಎಲ್ಲ ದೇವತೆಗಳಿಂದ ಹಾಗೂ

---

[೫೪೭] ರು.ಜಾ.ಉ, ೨.೧೯, ಪು. ೪೯೫

[೫೪೮] ಶಿ.ಪು, ವಿದ್ಯೇ, ೨೫.೫೧

[೫೪೯] ಮೃತಿಕಾಲೇ ಚ ರುದ್ರಾಕ್ಷಂ ನಿಷ್ಪೀಡ್ಯ ಸಹ ವಾರಿಣಾ।
ಯಃ ಪಿಬೇಚ್ಚಿಂತಯನ್ ರುದ್ರಂ ರುದ್ರಲೋಕಂ ಸ ಗಚ್ಛತಿ।।
ಭಸ್ಮೋದ್ಧೂಲಿತಸರ್ವಾಂಗಾ ಧೃತರುದ್ರಾಕ್ಷಮಾಲಿಕಾಃ।
ಯೇ ಭವಂತಿ ಮಹಾತ್ಮಾನೋ ರುದ್ರಾಸ್ತೇ ನಾತ್ರ ಸಂಶಯಃ।। -ಸಿ.ಶಿ, ೭.೬೩-೬೪

ಋಷಿಗಳಿಂದಲೂ ಸೇವಿಸಲ್ಪಡುತ್ತಿರುವುದರಿಂದ ಅನಧಿಕಾರಿಗಳಾದ ತಾಂತ್ರಿಕ ಜನರ ಅವಿಶ್ವಾಸದ ಕಾರಣದಿಂದಲೂ ಮೋಕ್ಷಾಕಾಂಕ್ಷಿಗಳು ರುದ್ರಾಕ್ಷಧಾರಣೆಯನ್ನು ಅವಶ್ಯವಾಗಿ ಮಾಡಿಕೊಳ್ಳತಕ್ಕದ್ದು. ಏಕೆಂದರೆ ರುದ್ರಾಕ್ಷಗಳನ್ನು ಧಾರಣೆಮಾಡದಿದ್ದರೆ ಪಾಪ ಬರುತ್ತದೆಂದು ಕೇಳಿರುವುದರಿಂದಲೂ ಹಾಗೂ ಧಾರಣಮಾಡುವುದರಿಂದ ಶಾಶ್ವತವಾದ ಅಭ್ಯುದಯ ಉಂಟಾಗುತ್ತದೆಂದು ಕೇಳಿರುವುದರಿಂದಲೂ''[೫೫೦] ಎಂದು ರುದ್ರಾಕ್ಷಗಳ ಮಹಿಮೆಯನ್ನು ವರ್ಣಿಸಿ ಅವುಗಳನ್ನು ಧರಿಸುವುದು ನಿತ್ಯಕರ್ಮವೆಂದು ಪ್ರತಿಪಾದಿಸಿದ್ದಾರೆ. ಆದುದರಿಂದ ಪ್ರತಿಯೊಬ್ಬ ವೀರಶೈವನೂ ಹಾಗೂ ಬೇರೆ ಶಿವಭಕ್ತರೂ ಸಹ ತಮ್ಮ ನಿತ್ಯಕರ್ಮದ ಅನುಷ್ಠಾನದ ಸಂದರ್ಭದಲ್ಲಿ ಪೂರ್ವೋಕ್ತ ರೀತಿಯಲ್ಲಿ ಅವಶ್ಯವಾಗಿ ರುದ್ರಾಕ್ಷಧಾರಣೆಯನ್ನು ಮಾಡುವುದು ಆದ್ಯಕರ್ತವ್ಯ.

ರುದ್ರಾಕ್ಷಧಾರಣೆಯಿಂದಾಗುವ ವೈಜ್ಞಾನಿಕ ಲಾಭ

ಆಯುರ್ವೇದದಲ್ಲಿ ಅನೇಕ ರೋಗಗಳಿಗೆ ಸಂಬಂಧಿಸಿದಂತೆ ರುದ್ರಾಕ್ಷೋಪಚಾರವನ್ನು ಮಾಡುವ ಪದ್ಧತಿಯು ನಿರೂಪಿತವಾಗಿದೆ -ಎಂಬ ವಿಚಾರವನ್ನು ಆಯುರ್ವೇದ ವಿಶಾರದರೂ, ಆಯುರ್ವೇದಾಚಾರ್ಯರೂ ಆದ ಗುರುದೇವ ಶಿವಾಚಾರ್ಯರು ಪ್ರತಿಪಾದಿಸಿದ್ದಾರೆ. ಅದರಂತೆ- ರುದ್ರಾಕ್ಷಗಳನ್ನು ನೀರಿನಲ್ಲಿ ತೇದು ಸೈಂಧವ ಲವಣದ ಮಿಶ್ರಣವನ್ನು ಮಾಡಿ ರೋಗಿಗಳ ಬಾಯಿ ತೊಳೆಯುವುದರಿಂದ ಮುಖ ಶುದ್ಧಿಯಾಗುವುದು, ಕಫ-ಜ್ವರದಿಂದ ಬಳಲುವಾಗ ರುದ್ರಾಕ್ಷಗಳನ್ನು ನೀರಿನಲ್ಲಿ ತೇದು ಜೇನುತುಪ್ಪದೊಂದಿಗೆ ಸೇವಿಸಿದರೆ ಕಫ ಪ್ರಕೋಪ ಉಂಟಾಗುವುದಿಲ್ಲ. ರುದ್ರಾಕ್ಷ- ಹೇಮಗರ್ಭ ಮಾತ್ರೆ ಇವುಗಳನ್ನು ಅಲ್ಲದ ರಸದಲ್ಲಿ ತೇದು, ಜೇನುತುಪ್ಪ ಬೆರಸಿ ಮರಣೋನ್ಮುಖನಾದ ವ್ಯಕ್ತಿಗೆ ನೆಕ್ಕಿಸುವುದರಿಂದ ನಿಂತು ಹೋಗಿದ್ದ ಮಾತು ಮತ್ತೆ ಆರಂಭವಾಗುತ್ತದೆ.[೫೫೧]

ರುದ್ರಾಕ್ಷಧಾರಣದಿಂದ ರಕ್ತದ ಒತ್ತಡ, ಹೃದ್ರೋಗ ಮೊದಲಾದ ರೋಗಗಳು ಬೇಗನೆ ವಾಸಿಯಾಗುತ್ತವೆ ಎಂದು ಆಧುನಿಕ ವೈಜ್ಞಾನಿಕ ಪರೀಕ್ಷೆಗಳಿಂದ ತಿಳಿದುಬಂದಿದೆ.

ನಿಸರ್ಗದ ವನಸ್ಪತಿಗಳಲ್ಲಿ ಅಪಾರವಾದ ರೋಗನಿವಾರಕ ಶಕ್ತಿಯಡಗಿದೆ. ರುದ್ರಾಕ್ಷವು ಒಂದು ಶ್ರೇಷ್ಠ ವನಸ್ಪತಿಯಾಗಿರುವುದರಿಂದ ಅದರಲ್ಲಿ ಅಪಾರವಾದ ದಿವ್ಯಶಕ್ತಿಯಡಗಿದೆ. ಪ್ರಾಚೀನ ಆಯುರ್ವೇದ ಗ್ರಂಥಗಳ ಅಧ್ಯಯನದಿಂದ ಮತ್ತು ವೈಜ್ಞಾನಿಕ ಪರೀಕ್ಷೆಯಿಂದ ಅವುಗಳಲ್ಲಿರುವ ಇನ್ನೂ ಹೆಚ್ಚು ಸಾಮರ್ಥ್ಯವನ್ನು ಸಂಶೋಧನೆ ಮಾಡುವುದು ವೈದ್ಯರ, ವಿಜ್ಞಾನಿಗಳ ಹಾಗೂ ಸಸ್ಯಶಾಸ್ತ್ರಜ್ಞರ ಕರ್ತವ್ಯ. ಆದುದರಿಂದ ರುದ್ರಾಕ್ಷಗಳು ಕೇವಲ ಧಾರ್ಮಿಕ ಚಿಹ್ನೆಗಳಾಗಿರದೆ ಉತ್ಕೃಷ್ಟ ವನಸ್ಪತಿಗಳಾಗಿವೆ. ಆ ಕಾರಣ ಯಾವುದೇ ವರ್ಣಾಶ್ರಮ ಭೇದವಿಲ್ಲದೆ ಪ್ರತಿಯೊಬ್ಬರೂ ರುದ್ರಾಕ್ಷಗಳನ್ನು ಧರಿಸಬೇಕು.

---

[೫೫೦] ವೀ.ಆ.ಚ, ಪು. ೧೬೪

[೫೫೧] ಶಿವತತ್ತ್ವ ದರ್ಶನ, ಪು. ೮೫

ರುದ್ರಾಕ್ಷಧಾರಣೆಯಿಂದ ವರ್ಣಾಶ್ರಮಭೇದದ ತಿರಸ್ಕಾರ

ಬ್ರಾಹ್ಮಣೋ ವಾಂತ್ಯಜೋ ವಾಪಿ ಮೂರ್ಖೋ ವಾ ಪಂಡಿತೋಽಪಿ ವಾ।
ರುದ್ರಾಕ್ಷಧಾರಣಾದೇವ ಮುಚ್ಯತೇ ಸರ್ವಪಾತಕೈಃ॥[೫೫೨]

"ಬ್ರಾಹ್ಮಣನಾಗಿರಲಿ, ಅಂತ್ಯಜನಾಗಿರಲಿ, ಮೂರ್ಖನಾಗಿರಲಿ, ಪಂಡಿತನಾಗಿರಲಿ ರುದ್ರಾಕ್ಷಧಾರಣೆಯಿಂದ ಇವರೆಲ್ಲರೂ ಎಲ್ಲ ಪಾತಕಗಳಿಂದ ಮುಕ್ತರಾಗುತ್ತಾರೆ" ಎಂಬ ಶ್ರೀ ಜಗದ್ಗುರು ರೇಣುಕಾಚಾರ್ಯರ ಉಕ್ತಿಯಲ್ಲಿ ರುದ್ರಾಕ್ಷಧಾರಣಕ್ಕೆ ಪ್ರತಿಯೊಬ್ಬ ಮಾನವನಿಗೂ ಅಧಿಕಾರವೆಂದು ಸೂಚಿಸಿದ್ದಾರೆ. ಆದುದರಿಂದ ವರ್ಣಾಶ್ರಮಗಳ ಭೇದವಿಲ್ಲದೆ ಪ್ರತಿಯೊಬ್ಬ ಮನುಷ್ಯನೂ ಧರಿಸಬೇಕು. ಬ್ರಾಹ್ಮಣಾದಿ ಜಾತಿಗಳಲ್ಲಿ ಹುಟ್ಟುವ ಮಾತ್ರದಿಂದ ಯಾವುದೇ ಮನುಷ್ಯನು ಶ್ರೇಷ್ಠನಾಗದೆ, ಅವನ ಉತ್ಕೃಷ್ಟ ಕರ್ಮಗಳಿಂದ ಶ್ರೇಷ್ಠನಾಗುತ್ತಾನೆ. ಆ ಕಾರಣ ಶಿವಲಾಂಛನದಿಂದ ಕೂಡಿರುವ ಸದಾಚಾರಿಯಾದ ಪುರುಷನೊಬ್ಬನೇ ಶ್ರೇಷ್ಠನೆಂದು ತಿಳಿಯಬೇಕು.

ರುದ್ರಾಕ್ಷದ ಆವರಣ ಶಬ್ದವಾಚ್ಯತ್ವ

ಅಷ್ಟಾವರಣಗಳಲ್ಲಿ ಏಳನೆಯ ಆವರಣವಾಗಿ ಪ್ರತಿಪಾದಿಸಿರುವ ರುದ್ರಾಕ್ಷವು ರುದ್ರನ ನೇತ್ರಗಳಿಂದ ಉತ್ಪತ್ತಿಯಾದುದರಿಂದ ರುದ್ರನಂತೆ ಪಾವನವಾಗಿವೆ. ಇವುಗಳ ಧಾರಣೆಯಿಂದ ದೈಹಿಕ ಮತ್ತು ಮಾನಸಿಕ ದೋಷಗಳು ನಿವಾರಣೆಯಾಗಿ ಎರಡು ಬಗೆಯ (ದೈಹಿಕ ಮತ್ತು ಮಾನಸಿಕ) ಸ್ವಾಸ್ಥ್ಯವು ಲಭಿಸುತ್ತದೆ. ರುದ್ರಭಾವನೆಯಿಂದ ನಿರಂತರವಾಗಿ ಧರಿಸುವುದರಿಂದ ರುದ್ರದೃಷ್ಟಿಯು ಪ್ರಾಪ್ತವಾಗುತ್ತದೆ. ಇದೇ ಅಂತರಂಗ ರುದ್ರಾಕ್ಷ. ಈ ಅಂತರಂಗ ರುದ್ರಾಕ್ಷದಿಂದ ಮನುಷ್ಯನಲ್ಲಿ ಸಮತಾದೃಷ್ಟಿಯುಂಟಾಗುತ್ತದೆ ಮತ್ತು ಸಮತಾದೃಷ್ಟಿಯಿಂದ ಸಮಾಜದಲ್ಲಿ ಶಾಂತಿಯು ನೆಲೆಸುತ್ತದೆ. ಈ ಪ್ರಕಾರವಾಗಿ ಅಂತರಂಗ-ಬಹಿರಂಗಗಳೆಂಬ ಹೆಸರಿನ ರುದ್ರಾಕ್ಷವು ವ್ಯಕ್ತಿಯ ಮತ್ತು ಸಮಾಜದ ಉಭಯ ವಿಧ ಸ್ವಾಸ್ಥ್ಯವನ್ನು ಸಂರಕ್ಷಿಸುವುದರಿಂದ ಆವರಣ ಶಬ್ದವಾಚ್ಯವಾಗುತ್ತದೆಂದು ಸಿದ್ಧವಾಯಿತು.

೮. ಮಂತ್ರ

ಅಷ್ಟಾವರಣಗಳಲ್ಲಿ ಮಂತ್ರವು ಕೊನೆಯ ಆವರಣವಾಗಿದೆ. ಈಗ ಮಂತ್ರ ಶಬ್ದದ ಅರ್ಥವೇನು? ಅದು ಎಷ್ಟು ವಿಧ? ಪಂಚಾಕ್ಷರ ಮಂತ್ರದ ಸ್ವರೂಪವೇನು? ಪಂಚಾಕ್ಷರ ಮಂತ್ರ ಜಪದ ಪ್ರಕಾರವು ಹೇಗಿದೆ? ಅದು ಹೇಗೆ ಆವರಣವಾಗುತ್ತದೆ? ಮುಂತಾದವುಗಳನ್ನು ಶಾಸ್ತ್ರಾಧಾರದಿಂದ ವಿವೇಚಿಸಲಾಗುವುದು.

ಮಂತ್ರ ಶಬ್ದದ ಅರ್ಥ

"ಮಂತ್ರ್ಯತೇ ಗುಪ್ತಂ ಪರಿಭಾಷ್ಯತೇ" ಅಥವಾ "ಮಂತ್ರಯತೇ ಗುಪ್ತಂ ಭಾಷತ ಇತಿ ಮಂತ್ರಃ" (ರಹಸ್ಯವಾಗಿ ಮಾತನಾಡುವುದು) ಎಂಬ ವ್ಯುತ್ಪತ್ತಿಯ ಮೇರೆಗೆ

---

೫೫೨. ಸಿ.ಶಿ, ೭.೬೧

ದೀಕ್ಷಾಕಾಲದಲ್ಲಿ ಸದ್ಗುರುವಿನಿಂದ ರಹಸ್ಯವಾಗಿ ಉಪದೇಶಿಸಲ್ಪಟ್ಟ ತನ್ನ ಇಷ್ಟದೇವತೆಯ ನಾಮವೇ ಮಂತ್ರ ಶಬ್ದದ ಅರ್ಥ. ತನ್ನ ಇಷ್ಟದೇವತೆಯ ಹೆಸರನ್ನು ಮತ್ತೆ ಮತ್ತೆ ಮನನ ಮಾಡುವುದರಿಂದ ತನ್ನ ರಕ್ಷಣೆಯಾಗುತ್ತದೆ ಎನ್ನುವ ಕಾರಣ "ಮನನಾತ್ ತ್ರಾಯತೇ ಯಸ್ಮಾತ್ ತಸ್ಮಾನ್ಮಂತ್ರಃ ಪರಿಕೀರ್ತಿತಃ" ಎಂಬ ಉಕ್ತಿಗನುಸಾರವಾಗಿ ಭಗವಂತನ ಹೆಸರೇ ಮಂತ್ರವೆಂದು ಹೇಳಲ್ಪಟ್ಟಿದೆ. ಅದನ್ನು ಉಪನಿಷತ್ತಿನಲ್ಲಿ ಈ ರೀತಿಯಾಗಿ ನಿರೂಪಿಸಲಾಗಿದೆ-

ಮನನಾತ್ ತ್ರಾಣನಾಚ್ಚೈವ ಮದ್ರೂಪಸ್ಯಾವಬೋಧನಾತ್।
ಮಂತ್ರಮಿತ್ಯುಚ್ಯತೇ ಬ್ರಹ್ಮನ್ ಮದಧಿಷ್ಠಾನತೋಽಪಿ ವಾ॥[೫೫೩]

"ಹೇ ಬ್ರಹ್ಮನ್! ಮನನ ಮಾಡುವುದರಿಂದ ರಕ್ಷಣೆಯಾಗುತ್ತದೆ ಎಂಬ ಕಾರಣದಿಂದಲೂ, ಶಿವನ ಸ್ವರೂಪವನ್ನು ಬೋಧಿಸುವುದರಿಂದಲೂ, ಶಿವನು ಅದರಲ್ಲಿ ನೆಲೆಸಿರುವುದರಿಂದಲೂ ಮಂತ್ರವೆಂದು ಕರೆಯಲಾಗಿದೆ."

ಆದುದರಿಂದ ಮಂತ್ರಜಪದಿಂದ ತನ್ನ ರಕ್ಷಣೆ ಮತ್ತು ಮಂತ್ರದ ಅಧಿಕಾರಿಯಾದ ದೇವತೆಯ ಸಾಕ್ಷಾತ್ಕಾರವುಂಟಾಗುತ್ತದೆ. ಆ ಕಾರಣದಿಂದಲೇ ಮೇದಿನೀಕೋಶಕಾರನು- "ಮಂತ್ರೋ ದೇವಾದೀನಾಂ ಸಾಧನಮ್" (ಮಂತ್ರವು ದೇವಾದಿಗಳ ಸಾಧನ) ಎಂದು ಹೇಳಿರುತ್ತಾನೆ. ಹಿಂದೂ ಸಮಾಜದಲ್ಲಿ ದೇವತೆಗಳು ಅಧಿಕ ಸಂಖ್ಯೆಯಲ್ಲಿರುವುದರಿಂದ ಮಂತ್ರಗಳ ಸಂಖ್ಯೆಯೂ ಸಹ ಹೆಚ್ಚಾಗಿವೆ. ಆ ಕಾರಣ ಏಳು ಕೋಟಿ ಮಂತ್ರಗಳು ನಿರೂಪಿತವಾಗಿವೆ. ಪಂಚಾಕ್ಷರಮಂತ್ರವು ಅವುಗಳಲ್ಲಿ ಒಂದು. ಶೈವರು ಮತ್ತು ವೀರಶೈವರು ಇದೇ ಮಂತ್ರದ ಉಪದೇಶವನ್ನು ಸ್ವೀಕರಿಸಿದ್ದಾರೆ ಹಾಗೂ ಅದನ್ನೇ ಜಪಿಸುತ್ತಾರೆ. ಆದುದರಿಂದ ಮೊದಲು ಪಂಚಾಕ್ಷರ ಮಂತ್ರದ ಸ್ವರೂಪ ಹಾಗೂ ಅದರ ಉತ್ಕೃಷ್ಟತೆಯನ್ನು ಪ್ರಸ್ತುತಪಡಿಸಲಾಗುವುದು.

ಪಂಚಾಕ್ಷರಮಂತ್ರದ ಸ್ವರೂಪ

"ನಮಃ ಶಿವಾಯ" ಎಂಬ ಐದು ಅಕ್ಷರಗಳಿಂದ ಕೂಡಿರುವ ಈ ಮಂತ್ರವು ಪಂಚಾಕ್ಷರಮಂತ್ರವೆಂದು ಹೇಳಲ್ಪಟ್ಟಿದೆ. ಪರಮರಹಸ್ಯದಲ್ಲಿ-

ದಾಂತಂ ಬಾಂತಂ ಚ ಯಾಂತಂ ತು ತೃತೀಯಸ್ವರಭೂಷಿತಮ್।
ಲಾಂತಯಾಂತಸಮಾಯುಕ್ತೋ ಮಂತ್ರಃ ಪಂಚಾಕ್ಷರೋ ಭವೇತ್॥[೫೫೪]

ಎಂಬ ಸಂಕೇತದಿಂದ ಪಂಚಾಕ್ಷರ ಮಂತ್ರದ ಸ್ವರೂಪವನ್ನು ವರ್ಣಿಸಲಾಗಿದೆ. ಅದರಂತೆ 'ದಾಂತ' ಎಂದರೆ ತವರ್ಗದ ಕೊನೆಯ ವರ್ಣವಾದ 'ನ', 'ಬಾಂತ' ಎಂದರೆ ಪವರ್ಗದ ಕೊನೆಯ ವರ್ಣವಾದ 'ಮ', 'ಯಾಂತ' ಎಂದರೆ ಯಕಾರದ ಐದನೆಯ ವರ್ಣವಾದ 'ಶ' ಮತ್ತು ಅದು ಮೂರನೆಯ ಸ್ವರವಾದ ಇಕಾರದಿಂದ ಅಲಂಕೃತವಾಗಿದೆ ಅರ್ಥಾತ್

---

[೫೫೩] ಯೋಗಶಿಖೋಪನಿಷತ್, ೨.೭-೮

[೫೫೪] ಪರಮರಹಸ್ಯ, ೬.೧೫, ಪು. ೬೨

'ಶಿ'ಲಾಂತ ಎಂದರೆ ಪೂರ್ವೋಕ್ತ ಯಕಾರದಿಂದ ನಾಲ್ಕನೆಯ ವರ್ಣವಾದ 'ವ', ಅಂತೆಯೇ ಯಾಂತದಿಂದ ಕೂಡಿರುವ ಎಂದರೆ ಕೊನೆಯಲ್ಲಿ 'ಯ'ಕಾರದಿಂದೊಡಗೂಡಿದ ಹೀಗೆ ಪೂರ್ವೋಕ್ತ ಪಂಚಾಕ್ಷರಮಂತ್ರದ ವಿವರಣೆಯು ಸ್ಫುಟವಾಗುತ್ತದೆ.

ಈ ಮಂತ್ರದ ಸ್ವರೂಪವು- "ಆದೌ ನಮಃ ಪ್ರಯೋಕ್ತವ್ಯಂ ಶಿವಾಯೇತಿ ತತಃ ಪರಮ್"[೫೫೫] ಮತ್ತು "ನಮಃ ಶಬ್ದಂ ವದೇತ್ ಪೂರ್ವಂ ಶಿವಾಯೇತಿ ತತಃ ಪರಮ್"[೫೫೬] ಎಂಬ ಚಂದ್ರಜ್ಞಾನಾಗಮ ಮತ್ತು ಸಿದ್ಧಾಂತ ಶಿಖಾಮಣಿಗಳ ವಾಕ್ಯಾನುಸಾರವಾಗಿ 'ನಮಃ' ಎಂಬ ಶಬ್ದವನ್ನು ಮೊದಲು ನುಡಿದು ನಂತರ 'ಶಿವಾಯ' ಎಂಬ ಶಬ್ದವನ್ನು ನುಡಿಯಬೇಕೆಂದು ಸ್ಪಷ್ಟವಾಗಿ ಆದೇಶಮಾಡಲಾಗಿದೆ. ಆದುದರಿಂದ ಪೂರ್ವೋಕ್ತಗಳಾದ ಐದು ಅಕ್ಷರಗಳ ಸಂಯುಕ್ತರೂಪವಾದ ಮಂತ್ರವೇ ಪಂಚಾಕ್ಷರಮಂತ್ರ.

ಪಂಚಾಕ್ಷರಮಂತ್ರದ ಶ್ರೇಷ್ಠತೆ

> ಶಿವತತ್ತ್ವಾತ್ ಪರಂ ನಾಸ್ತಿ ಯಥಾ ತತ್ತ್ವಾಂತರಂ ಮಹತ್।
> ತಥಾ ಪಂಚಾಕ್ಷರೀ ಮಂತ್ರಾನ್ನಾಸ್ತಿ ಮಂತ್ರಾಂತರಂ ಮಹತ್॥
> ಸಪ್ತಕೋಟಿಷು ಮಂತ್ರೇಷು ಮಂತ್ರಃ ಪಂಚಾಕ್ಷರೋ ಮಹಾನ್।
> ಬ್ರಹ್ಮವಿಷ್ಣ್ವಾದಿದೇವೇಷು ಯಥಾ ಶಂಭುರ್ಮಹತ್ತರಃ॥[೫೫೭]

"ಶಿವತತ್ತ್ವಕ್ಕಿಂತ ಶ್ರೇಷ್ಠವೂ ಮಹಿಮಾನ್ವಿತವೂ ಆದ ಬೇರೊಂದು ತತ್ತ್ವವು ಹೇಗೆ ಇರುವುದಿಲ್ಲವೋ ಹಾಗೆಯೇ ಪಂಚಾಕ್ಷರಿಮಂತ್ರಕ್ಕಿಂತಲೂ ಮಹಿಮಾನ್ವಿತವಾದ ಮಂತ್ರವು ಬೇರೊಂದಿರುವುದಿಲ್ಲ. ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳಲ್ಲಿ ಶಿವನು ಸರ್ವೋತ್ತಮನಾಗಿರುವಂತೆ ಏಳು ಕೋಟಿ ಮಂತ್ರಗಳಲ್ಲಿ ಪಂಚಾಕ್ಷರ ಮಹಾಮಂತ್ರವು ಶ್ರೇಷ್ಠವಾಗುತ್ತದೆ" -ಎಂದು ಶ್ರೀ ರೇಣುಕಾಚಾರ್ಯರು ಶಿವನಂತೆ ಶಿವಮಂತ್ರದ ಶ್ರೇಷ್ಠತ್ವವನ್ನು ಪ್ರತಿಪಾದಿಸಿದ್ದಾರೆ. ಇದರ ಭಾವವಿಷ್ಟು- 'ಶಿವ' ಎಂಬ ಎರಡು ಅಕ್ಷರಗಳು ಎಲ್ಲ ಶ್ರುತಿಗಳ ಸಾರಸ್ವರೂಪವಾಗಿವೆ. ಅದು ಹೀಗೆ ವಿಶಿಷ್ಟವಾಗಿರುವುದರಿಂದ ಸರ್ವೋತ್ಕೃಷ್ಟವೆಂದು ತಿಳಿಸಲಾಗಿದೆ. ಅದನ್ನು ಪುರಾಣ ವಚನದಲ್ಲಿ ಹೀಗೆ ಸ್ಪಷ್ಟೀಕರಿಸಲಾಗಿದೆ-

> ವಿದ್ಯಾಸು ಶ್ರುತಿರುತ್ಕೃಷ್ಟಾ ರುದ್ರೈಕಾದಶಿನೀ ಶ್ರುತೌ।
> ತಸ್ಯ ಪಂಚಾಕ್ಷರೀ ತಸ್ಯಾಂ ಶಿವ ಇತ್ಯಕ್ಷರದ್ವಯಮ್॥[೫೫೮]

"ಎಲ್ಲ ವಿದ್ಯೆಗಳಲ್ಲಿ ಶ್ರುತಿಯು ಸರ್ವೋತ್ಕೃಷ್ಟವಾದುದು, ಶ್ರುತಿಯಲ್ಲಿ ರುದ್ರಾಧ್ಯಾಯದ ಹನ್ನೊಂದನೇ ಅಧ್ಯಾಯ, ಅದರಲ್ಲಿ ನಮಃ ಶಿವಾಯ ಎಂಬ

---

[೫೫೫] ಚ.ಜ್ಞಾ, ಕ್ರಿ.ಪಾ, ೮.೫

[೫೫೬] ಸಿ.ಶಿ, ೮.೭

[೫೫೭] ಸಿ.ಶಿ, ೮.೨,೪

[೫೫೮] ಬ್ರ.ಸೂ, ಶ್ರೀಕಂಠಭಾಷ್ಯ (ಶಿವಾರ್ಕಮಣಿದೀಪಿಕಾ), ಪು. ೪

ಪಂಚಾಕ್ಷರೀ ಮಹಾಮಂತ್ರ ಮತ್ತು ಪಂಚಾಕ್ಷರೀ ಮಂತ್ರದಲ್ಲಿ 'ಶಿವ' ಎಂಬ ಎರಡು ಅಕ್ಷರಗಳು ಸರ್ವೋತ್ಕೃಷ್ಟವಾಗಿವೆ."

ಹದಿನೆಂಟು ವಿದ್ಯೆಗಳಲ್ಲಿ ಶ್ರುತಿಯು ಸರ್ವೋತ್ಕೃಷ್ಟವಾದುದು. ಶ್ರುತಿಗಳಲ್ಲಿ "ರುದ್ರೈಕಾದಶಿನೀ ಜಪ್ತ್ವಾ ತತ್ಕ್ಷಣಾದೇವ ಶುದ್ಧ್ಯತಿ"[೫೫೯] (ರುದ್ರಾಧ್ಯಾಯದ ಹನ್ನೊಂದನೇ ಅಧ್ಯಾಯವನ್ನು ಜಪಿಸುತ್ತಿದ್ದಂತೆಯೇ ಶುದ್ಧನಾಗುತ್ತಾನೆ) ಎಂಬ ಧರ್ಮಶಾಸ್ತ್ರದ ಪ್ರಣೇತೃಗಳಾದ ಯಾಜ್ಞವಲ್ಕ್ಯನೇ ಮೊದಲಾದ ಋಷಿಗಳು ರುದ್ರಾಧ್ಯಾಯದ ಹನ್ನೊಂದನೇ ಅಧ್ಯಾಯವು ಮಹಾಪಾತಕಗಳ ನಿವಾರಕವಾದ ಪ್ರಾಯಶ್ಚಿತ್ತಗಳೆಂದು ಹೇಳಿರುವುದರಿಂದ, ಇವು ಶ್ರುತಿಗಳಲ್ಲಿ ಉತ್ಕೃಷ್ಟತರವಾದದ್ದು. ಶ್ರೀ ರುದ್ರದ ಹನ್ನೊಂದನೇ ಅಧ್ಯಾಯದ ಎಂಟನೇ ಅನುವಾಕದಲ್ಲಿನ "ನಮಃ ಶಿವಾಯ ಚ ಶಿವತರಾಯ ಚ" ಎಂಬ ಮಂತ್ರದಲ್ಲಿ ನಿರ್ದಿಷ್ಟವಾಗಿರುವ ಪಂಚಾಕ್ಷರಮಂತ್ರದಲ್ಲಿನ 'ಶಿವ' ಎಂಬ ಶಬ್ದವು ಉತ್ಕೃಷ್ಟತಮವೆಂದು ತಿಳಿಯಬೇಕು.

"ಶಿವಮಿಚ್ಛನ್ ಮನುಷ್ಯಾಣಾಂ ತಸ್ಮಾದ್ ದೇವಃ ಶಿವಃ ಸ್ಮೃತಃ"[೫೬೦] ಎಂಬ ಮಹಾಭಾರತದ ವಚನಾನುಸಾರವಾಗಿ ಎಲ್ಲ ಜೀವಿಗಳಿಗೆ ಮಂಗಳವನ್ನು ಬಯಸುವ ಮಹಾದೇವನಿಗೆ "ಶಿವ" ಎಂದು ಹೆಸರಾಯಿತು. ಮಹಾಭಾರತದಲ್ಲಿಯೇ ಭಗವಾನ್ ಶಿವನು-

ಸಮಾ ಭವಂತಿ ಮೇ ಸರ್ವೇ ದಾನವಾಶ್ಚಾಮರಾಶ್ಚ ಯೇ।
ಶಿವೋಽಸ್ಮಿ ಸರ್ವಭೂತಾನಾಂ ಶಿವತ್ವಂ ತೇನ ಮೇ ಸುರಾಃ॥[೫೬೧]

"ಎಲೈ ದೇವತೆಗಳೆ, ನನ್ನ ದೃಷ್ಟಿಯಲ್ಲಿ ದೇವ, ದಾನವ ಮತ್ತು ಮಾನವರೆಲ್ಲರೂ ಸಮಾನರು. ನಾನು ಎಲ್ಲರಿಗೂ ಮಂಗಲವನ್ನೇ ಬಯಸುತ್ತೇನೆ. ಆದುದರಿಂದ ನನ್ನ ಹೆಸರು "ಶಿವ" ಎಂದಾಗಿದೆ" ಎಂದು ಹೇಳುತ್ತಾನೆ. ಆದುದರಿಂದ "ಶ್ವಃಶ್ರೇಯಸಂ ಶಿವಂ ಭದ್ರಂ ಕಲ್ಯಾಣಂ ಮಂಗಲಂ ಶುಭಮ್"[೫೬೨] ಎಂಬ ಅಮರಕೋಶದ ವಾಕ್ಯಾನುಸಾರವಾಗಿ 'ಶಿವ' ಶಬ್ದಕ್ಕೆ ಕಲ್ಯಾಣಾದಿ ಅರ್ಥಗಳಿವೆ. ಆದುದರಿಂದ "ಶಿವಂ ಕಲ್ಯಾಣಂ ಅಸ್ಯ ಅಸ್ತೀತಿ ಕರೋತೀತಿ ವಾ ಶಿವಃ" (ಮಂಗಲಗುಣಗಳು ಯಾರಲ್ಲಿ ಇವೆಯೋ ಅಥವಾ ಮಂಗಲವನ್ನುಂಟು ಮಾಡುವ ಕಾರಣ ಶಿವನು) ಎಂಬ ವ್ಯುತ್ಪತ್ತಿಯ ಮೇರೆಗೆ ಶಿವನಿಗಿರುವ ಕಲ್ಯಾಣಗುಣಗಳು ಎಲ್ಲ ಜೀವಿಗಳ ವಿಷಯದಲ್ಲಿ ಕಲ್ಯಾಣಕಾರಕವಾಗಿವೆ ಎಂಬುದು ಸಿದ್ಧವಾಗುತ್ತದೆ. "ಶಿವ ಏಕೋ ಧ್ಯೇಯಃ ಶಿವಂಕರಃ"[೫೬೩] (ಮಂಗಲಕರನಾದ ಶಿವನೊಬ್ಬನನ್ನೇ ಧ್ಯಾನಿಸಬೇಕು) ಎಂಬ ಶ್ರುತಿವಾಕ್ಯವೂ ಪ್ರಮಾಣವಾಗಿದೆ.

---

[೫೫೯] ವೀ.ಆ.ಚ, ಪು. ೧೭೦
[೫೬೦] ಮಹಾಭಾರತ, ೭-೧೭೩-೯೦
[೫೬೧] ಮಹಾಭಾರತ, ೮.೨.೩-೪
[೫೬೨] ಅಮರಕೋಶ, ೧.೪.೪೫
[೫೬೩] ಅಥರ್ವಶಿಖೋಪನಿಷತ್, ೩.೪

ಇದೂ ಅಲ್ಲದೆ "ಶಿವಾಃ ಶೋಭನಾಃ ಸರ್ವಜ್ಞತ್ವಾದಯೋ ಗುಣಾ ಅಸ್ಯ ಸಂತೀತಿ ಶಿವಃ" ಎಂಬ ವ್ಯುತ್ಪತ್ತಿಗನುಗುಣವಾಗಿ ಸರ್ವಜ್ಞತ್ವ, ನಿತ್ಯತೃಪ್ತತ್ವ, ಅನಾದಿಬೋಧತ್ವ, ಸ್ವತಂತ್ರತ್ವ, ಅಲುಪ್ತಶಕ್ತಿಮತ್ವ ಮತ್ತು ಅನಂತಶಕ್ತಿತ್ವಗಳೆಂಬ ಉತ್ಕೃಷ್ಟಗುಣಗಳಿಂದ ಕೂಡಿರುವುದರಿಂದಲೂ ಅವನಿಗೆ 'ಶಿವ' ಎಂಬ ಹೆಸರು ಬಂದಿದೆ. ಶಿವನ ಅಂತಹ ಗುಣವತ್ತ್ವವು ಪುರಾಣ ಪ್ರಸಿದ್ಧವಾಗಿರುತ್ತದೆ. ಹೇಗೆಂದರೆ-

ಸರ್ವಜ್ಞತಾ ತೃಪ್ತಿರನಾದಿಬೋಧಃ ಸ್ವತಂತ್ರತಾ ನಿತ್ಯಮಲುಪ್ತಶಕ್ತಿಃ।
ಅನಂತಶಕ್ತಿಶ್ಚ ವಿಭೋರ್ವಿಧಿಜ್ಞಾಃ ಷಡಾಹುರಂಗಾನಿ ಮಹೇಶ್ವರಸ್ಯ॥[೫೬೪]

ಆದರೂ ಸಹ "ಶಿವತತ್ತ್ವಂ ಮಹಾಸೇನ ನಿಷ್ಕಲಂ ಚೇತಿ ಕೀರ್ತಿತಮ್"[೫೬೫] ಎಂಬ ವಾತುಲಶುದ್ಧಾಗಮದ ವಚನಾನುಸಾರವಾಗಿ ಶಿವನ ನಿಷ್ಕಲತ್ವ, ಅರ್ಥಾತ್ ನಿರ್ಗುಣತ್ವವು ಪ್ರತಿಪಾದಿತವಾಗಿದ್ದರೂ ಕೂಡ ಜಗತ್ತಿನ ಸೃಷ್ಟಿಕಾರ್ಯಕ್ಕಾಗಿ ಯೋಗಿಗಳು ಅವನನ್ನು ಪೂಜಿಸುವ ಕಾರಣದಿಂದ ಅವನನ್ನು ಆಶ್ರಯಿಸಿರುವ ಪರಾಶಕ್ತಿಯ ಕಲ್ಪಿತ ಗುಣಗಳನ್ನು ಸ್ವೀಕಾರ ಮಾಡಿರುವುದರಿಂದ 'ಶಿವ' ಎಂದು ಹೆಸರು.

ಅಥವಾ "ಶೋಭನತ್ವಾತ್ ಶಿವಃ" ಎಂಬ ವ್ಯುತ್ಪತ್ತಿಯಂತೆಯೂ "ಶಿವ" ಶಬ್ದವು ಸಿದ್ಧವಾಗುತ್ತದೆ. ಶೋಭನತ್ವವೆಂದರೆ ಶುದ್ಧವೆಂದರ್ಥ, ಅರ್ಥಾತ್ ಮಲತ್ರಯವಿಲ್ಲದಿರುವಿಕೆ. ಅದನ್ನು ವೀರಶೈವಾನಂದಚಂದ್ರಿಕೆಯು ಹೀಗೆ ನಿರೂಪಿಸುತ್ತದೆ- "ಶೋಭನತ್ವಂ ಚ ಸರ್ವಜೀವವರ್ತ್ಯಾಣವಕಾರ್ಮಮಾಯೀಯಾಖ್ಯಾದಿ ಮಲತ್ರಯಾಭಾವರೂಪ ನೈರ್ಮಲ್ಯಲಕ್ಷಣಂ ಶುದ್ಧತ್ವಮ್"[೫೬೬] (ಪರಮಾತ್ಮನಿಗೆ ಆಣವ, ಕಾರ್ಮಿಕ ಮತ್ತು ಮಾಯೀಯ ಎಂಬ ಮಲತ್ರಯಗಳ ಸಂಬಂಧವಿಲ್ಲದಿರುವ ಕಾರಣ ಶುದ್ಧನು). ವಾಯವೀಯಸಂಹಿತೆಯಲ್ಲಿ-

ಅಥವಾಽಶೇಷಕಲ್ಯಾಣಗುಣೈಕಘನ ಈಶ್ವರಃ।
ಶಿವ ಇತ್ಯುಚ್ಯತೇ ಸದ್ಭಿಃ ಶಿವತತ್ತ್ವಾರ್ಥವೇದಿಭಿಃ॥
ಅನಾದಿಮಲಸಂಶ್ಲೇಷಯೋಗಾಭಾವಾತ್ ಸ್ವಭಾವತಃ।
ಅತ್ಯಂತ ಪರಿಶುದ್ಧಾತ್ಮೇತ್ಯತೋಽಯಂ ಶಿವ ಉಚ್ಯತೇ॥[೫೬೭]

"ಅಥವಾ, ಸಮಗ್ರ ಕಲ್ಯಾಣಗುಣಗಳ ಏಕೈಕ ನಿಧಿಯಾದ ಈಶ್ವರನು ಶಿವತತ್ತ್ವಾರ್ಥವನ್ನು ತಿಳಿದ ಸತ್ಪುರುಷರಿಂದ ಶಿವನೆಂದು ಕರೆಯಲ್ಪಡುತ್ತಾನೆ. ಸ್ವಾಭಾವಿಕವಾಗಿಯೇ ಅನಾದಿಮಲ ಸಂಪರ್ಕವಿಲ್ಲದೇ ಇರುವುದರಿಂದ ಅತ್ಯಂತ ಪರಿಶುದ್ಧವಾದ ಸ್ವರೂಪ ಶುದ್ಧಾತ್ಮನೆಂಬ ಕಾರಣದಿಂದ ಅವನು ಶಿವನೆಂದು

---

[೫೬೪] ವಾ.ಪು, ೧೨.೩೧; ಅ.ಸೂ, ೪.೨೦

[೫೬೫] ವಾ.ಶು.ತ, ೧.೧೫

[೫೬೬] ವೀ.ಆ.ಚ, ಪು. ೧೭೩

[೫೬೭] ವೀ.ಆ.ಚ, ಪು. ೧೭೩

ಕರೆಯಲ್ಪಟ್ಟಿದ್ದಾನೆ" ಎಂದು ಶಿವನ ಕಲ್ಯಾಣಗುಣವತ್ತ್ವ ಮತ್ತು ಮಲತ್ರಯಗಳ ಸಂಬಂಧ ರಹಿತತ್ವಗಳನ್ನು ನಿರೂಪಿಸಿ, ಈ ಗುಣಗಳ ಕಾರಣ ಅವನನ್ನು 'ಶಿವ' ಎನ್ನಲಾಗಿದೆ.

ಅಲ್ಲದೆ "ವಷ್ಟೀತಿ ಶಿವಃ" ಎಂಬುದಾಗಿಯೂ ಶಿವ ಶಬ್ದದ ವ್ಯುತ್ಪತ್ತಿಯು ಇದೆ. ಇಚ್ಛೆಯುಳ್ಳವನು ಎಂದರ್ಥ. ಅಪ್ಪಯ್ಯದೀಕ್ಷಿತರು 'ವಶ ಕಾಂತೌ' (ಸ್ವಚ್ಛ ಪ್ರಕಾಶ ಅಥವಾ ಸ್ವಯಂ ಪ್ರಕಾಶ) ಎಂಬ ವ್ಯಾಕರಣಸೂತ್ರಕ್ಕನುಸಾರವಾಗಿ ಧಾತುವಿನ ವರ್ಣವ್ಯತ್ಯಾಸದಿಂದ 'ಶಿವ' ಶಬ್ದವು ಸಿದ್ಧವಾಗುತ್ತದೆ. ಉದಾಹರಣೆಗೆ-

ಹಿಂಸಿಧಾತೋಃ ಸಿಂಹಶಬ್ದೋ ವಶಕಾಂತೌ ಶಿವಃ ಸ್ಮೃತಃ।
ವರ್ಣವ್ಯತ್ಯಯತಃ ಸಿದ್ಧೌ ವಶ್ಯಕಃ ಕಶ್ಯಪೋ ಯಥಾ॥

ಎಂದು ನಿರೂಪಿಸಿದ್ದಾರೆ. ಈ ಪ್ರಕಾರವಾಗಿ ಶಿವ ಶಬ್ದದ ವ್ಯುತ್ಪತ್ತಿಗಳನ್ನು ಅವಲೋಕಿಸಿದಾಗ ಶಿವನು ದೇವ, ದಾನವ ಮತ್ತು ಮಾನವರ ವಿಷಯದಲ್ಲಿ ಮಂಗಲಮಯವಾದ ಇಚ್ಛೆಯುಳ್ಳವನು ಎಂದು ಅರ್ಥವಾಗುತ್ತದೆ ಮತ್ತು "ಶಿವಮಿಚ್ಛನ್ ಮನುಷ್ಯಾಣಾಂ" ಎಂಬ ಆರ್ಷವಚನ ಪ್ರಮಾಣವೂ ಸಹ ಲಭ್ಯವಿರುವ[೫೬೮] ಕಾರಣದಿಂದ ಶಿವನ ಲೋಕಕಲ್ಯಾಣ ಇಚ್ಛೆಯು ಸಮರ್ಥಿತವಾಗುತ್ತದೆ.

"ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ"[೫೬೯] (ಶಿವನ ಪರಾಶಕ್ತಿಯನ್ನು ವಿವಿಧ ಪ್ರಕಾರವಾಗಿ ಹೇಳಿದೆ. ಅದು ಸ್ವಾಭಾವಿಕವೂ ಜ್ಞಾನಕ್ರಿಯೆಯೂ, ಬಲಕ್ರಿಯೆಯೂ ಆಗಿದೆ) ಎಂಬ ಶ್ರುತಿವಾಕ್ಯದಂತೆ ಆ ಬಗೆಯ ಇಚ್ಛೆ ಹಾಗೂ ಶಿವನ ಚಿದ್ರೂಪದ ಪರಾಶಕ್ತಿಗಳೆರಡೂ ಪರಸ್ಪರ ಬೇರೆಯಲ್ಲ. ವಾತುಲಶುದ್ಧತಂತ್ರದಲ್ಲಿಯೂ ಸಹ ಶಿವನು ಶಕ್ತಿಗೆ ಆಶ್ರಯನೆಂದು ಹೇಳಿರುವ ಕಾರಣದಿಂದ ಅವರ ಉತ್ಪತ್ತಿಯು ಪ್ರತಿಪಾದಿತವಾಗಿದೆ. ಹೇಗೆಂದರೆ-

ಯೋಗಿನಾಮುಪಕಾರಾಯ ಸ್ವೇಚ್ಛಯಾ ಚಿಂತ್ಯತೇ ಶಿವಃ।
ತಚ್ಛಿವೇ ತು ಪರಾಶಕ್ತಿಃ ಸಹಸ್ರಾಂಶೇನ ಜಾಯತೇ॥
ತಚ್ಛಕ್ತೇಸ್ತು ಸಹಸ್ರಾಂಶಾದಾದಿಶಕ್ತಿಸಮುದ್ಭವಃ।
ಆದಿಶಕ್ತಿಸಹಸ್ರಾಂಶಾದ್ ಇಚ್ಛಾಶಕ್ತಿಸಮುದ್ಭವಃ॥
ಇಚ್ಛಾಶಕ್ತಿಸಹಸ್ರಾಂಶಾದ್ ಜ್ಞಾನಶಕ್ತಿಸಮುದ್ಭವಃ।
ಜ್ಞಾನಶಕ್ತಿಸಹಸ್ರಾಸಾಂತ್ ಕ್ರಿಯಾಶಕ್ತಿಸಮುದ್ಭವಃ॥[೫೭೦]

"ಯೋಗಿಗಳ ಉಪಕಾರಕ್ಕಾಗಿ ಶಿವನು ತನ್ನ ಇಚ್ಛೆಯಂತೆ ಚಿಂತಿಸಲ್ಪಡುತ್ತಾನೆ. ಆ ಶಿವನ ಸಹಸ್ರಾಂಶದಿಂದ ಪರಾಶಕ್ತಿಯು ಹುಟ್ಟುತ್ತದೆ. ಪರಾಶಕ್ತಿಯ ಸಹಸ್ರಾಂಶದಿಂದ ಆದಿಶಕ್ತಿ, ಆದಿಶಕ್ತಿಯ ಸಹಸ್ರಾಂಶದಿಂದ ಇಚ್ಛಾಶಕ್ತಿ, ಇಚ್ಛಾಶಕ್ತಿಯ ಸಹಸ್ರಾಂಶದಿಂದ ಜ್ಞಾನಶಕ್ತಿ ಮತ್ತು ಜ್ಞಾನಶಕ್ತಿಯ ಸಹಸ್ರಾಂಶದಿಂದ ಕ್ರಿಯಾಶಕ್ತಿಯು ಉತ್ಪನ್ನವಾಗುತ್ತದೆ."

---

[೫೬೮] ಬ್ರ.ಸೂ, ಶ್ರೀಕಂಠಭಾಷ್ಯ, ಶಿವಾರ್ಕಮಣಿದೀಪಿಕಾ, ಪು. ೩

[೫೬೯] ಶ್ವೇ.ಉ, ೬.೮

[೫೭೦] ವಾ.ಶು.ತ, ೧.೨೪-೨೬

ಈ ಪ್ರಕಾರವಾಗಿ ಅನಂತಶಕ್ತಿಗಳಿಗೆ ಆಶ್ರಯದಾತನಾದ ಶಿವನ ಲೋಕಕಲ್ಯಾಣಕ್ಕಾಗಿ ಇಚ್ಛಾಶಕ್ತಿಯ ಆಶ್ರಯತ್ವವು ಸುತರಾಂ ಸಿದ್ಧವಾಯಿತು. ಅದೂ ಅಲ್ಲದೆ, "ವಶ ಕಾಂತೌ" ಎಂಬ ಧಾತುವಿನಿಂದ ನಿಷ್ಪನ್ನವಾಗುವ ಹಾಗೂ "ವಷ್ಟೀತಿ ಶಿವಃ" ಎಂಬ ವ್ಯುತ್ಪತ್ತಿಯಿಂದ ನಿಷ್ಪನ್ನವಾಗುವ ಶಿವ ಶಬ್ದದಿಂದ ಅವನ ಶುದ್ಧಪ್ರಕಾಶ ರೂಪತ್ವ ಅರ್ಥಾತ್ ಸ್ವಯಂ ಪ್ರಕಾಶವೂ ಸಹ ಸಿದ್ಧವಾಗುತ್ತದೆ.

ಇದೇ ರೀತಿಯಾಗಿ "ಶೇತೇಽಸ್ಮಿನ್ ಸರ್ವಮಿತಿ ಶಿವಃ" ಎಂಬ ವ್ಯುತ್ಪತ್ತಿಯೂ ಸಹ ಸಮಸ್ತ ಪ್ರಪಂಚಕ್ಕೆ ಕಾರಣೀಭೂತನೂ, ಚಿಚ್ಛಕ್ತಿಗೆ ಆಧಾನನಾಗಿರುವುದರಿಂದ ಪರಶಿವನೇ ಜಗತ್ತಿಗೆ ಆಧಾರನೆಂದು 'ಶಿವ' ಶಬ್ದವು ಸಿದ್ಧವಾಗುತ್ತದೆ. ಅಂತೆಯೇ "ಶಾಮ್ಯತೀತಿ ಶಿವಃ" ಎಂದು ವ್ಯುತ್ಪತ್ತಿಯು ಸಂಭವಿಸುತ್ತದೆ. ಈ ವ್ಯುತ್ಪತ್ತಿಯಿಂದ ಶಿವನ ನಿರ್ವಿಕಾರತ್ವವು "ನಿಷ್ಕ್ರಿಯಂ ನಿಷ್ಕಲಂ ಶಾಂತಂ" ಎಂಬ ಶ್ರುತಿವಾಕ್ಯದಿಂದ ಪ್ರಮಾಣಪುರಃಸರವಾಗಿ ಪ್ರತಿಪಾದಿತವಾಗುತ್ತದೆ.

ಹೀಗೆ ಶಿವ ಶಬ್ದದ ವ್ಯುತ್ಪತ್ತಿಗಳನ್ನವಲೋಕಿಸಿದಾಗ ಪ್ರಾಣಿ ಮಾತ್ರಕ್ಕೆ ಕಲ್ಯಾಣ ಕಾರಿಯೂ, ಉತ್ಕೃಷ್ಟ ಗುಣವಿಶೇಷನೂ, ಅನಾದಿ ಮಲತ್ರಯರಹಿತನೂ, ಇಚ್ಛಾದಿ ಅನಂತಶಕ್ತಿಯುಳ್ಳವನೂ, ಸಮಸ್ತ ಜಗತ್ತಿಗೆ ಆಧಾರನೂ, ನಿರ್ವಿಕಾರನೂ ಹಾಗೂ ಸ್ವಯಂಪ್ರಕಾಶ ಸ್ವರೂಪನೂ ಆದ ಪರಬ್ರಹ್ಮ ಚೈತನ್ಯವನ್ನೇ ಇಲ್ಲಿ ಶಿವ ಶಬ್ದದ ಅರ್ಥವೆಂದು ಸಿದ್ಧವಾಗುತ್ತದೆ.[೫೭೧]

ಇಂತಹ ಮಹಿಮಾನ್ವಿತಗಳಾದ ಈ ಶಿವನಾಮವು ಮಹಾಪಾತಕ ಪರ್ವತದ ದಾವಾಗ್ನಿ, ಸಂಸಾರ ಸಾಗರವನ್ನು ದಾಟುವ ದೋಣಿ, ಸಂಸಾರ ವೃಕ್ಷಕ್ಕೆ ಕೊಡಲಿ, ಪಾಪವೆಂಬ ಕಾಳ್ಗಿಚ್ಚಿನಿಂದ ಪೀಡಿತರಾದವರ ಅಮೃತಧಾರೆ ಎಂದು ಮಹರ್ಷಿ ವ್ಯಾಸರು ಶಿವನಾಮದ ಮಹಿಮೆಯನ್ನು ವರ್ಣಿಸಿದ್ದಾರೆ.[೫೭೨] ಆದುದರಿಂದ ಇಂತಹ ಮಹಿಮೆಯುಳ್ಳ 'ಶಿವ' ಎಂಬೆರಡಕ್ಷರಗಳಿಂದ ಕೂಡಿರುವುದರಿಂದಲೇ ಈ ಪಂಚಾಕ್ಷರ ಮಂತ್ರವು ಇತರ ಮಂತ್ರಗಳಿಗಿಂತಲೂ ವಿಶೇಷವಾಗಿ ವಿರಾಜಿಸುತ್ತಿದೆ.

ಅಮರಕೋಶದಲ್ಲಿ ಶಂಭು, ಈಶ, ಪಶುಪತಿ, ಶಿವ, ಶೂಲಿ ಮತ್ತು ಮಹೇಶ್ವರ[೫೭೩] ಮುಂತಾದ ಪರ್ಯಾಯ ನಾಮಗಳು ಉಕ್ತವಾಗಿವೆ. ಹೀಗಿರುವಾಗ

---

೫೭೧. ಶೇತೇಽಸ್ಮಿನ್ ಜಗದೀಹತೇ ದಿಶತಿ ಚ ಶ್ರೇಯಃ ಪ್ರಜಾನಾಮಸೌ
ಶಾಂತಿಂ ಯಾತಿ ಸಮಸ್ತಮಂಗಲಗುಣಗ್ರಾಮಸ್ಯ ಸೀಮಾಯತೇ।
ಇಚ್ಛಾಶಕ್ತಿಮುಪೈತಿ ನಿರ್ಮಲತರಶ್ಚಾಸ್ತೇ ಪ್ರಕೃತ್ಯೇತಿ ಚ
ವ್ಯಾಚಷ್ಟೇ ಶಿವನಾಮ ಯಸ್ಯ ಚರಿತಂ ತಸ್ಮೈ ಪರಸ್ಮೈ ನಮಃ॥
-ವೀ.ಆ.ಚ, ಪು.೧೭೫

೫೭೨. ಶಿ.ಪು, ವಿದ್ಯೇ, ೨೩.೨೩-೪೫

೫೭೩. ಅಮರಕೋಶ, ೧-೧-೩೦

‘ಶಿವ’ ಶಬ್ದವು ಹೇಗೆ ಪರಬ್ರಹ್ಮ ವಾಚಕವಾಗುತ್ತದೆ? ಎಂಬ ಪ್ರಶ್ನೆ ಉದ್ಭವಿಸಿದರೆ ‘ಶಿವ’ ಎಂಬ ನಾಮವು ಪರಶಿವಬ್ರಹ್ಮದ ಸಾಕ್ಷಾತ್ ಸ್ವರೂಪವನ್ನು ತಿಳಿಸುವ ಕಾರಣ ಅದು ಮುಖ್ಯ ನಾಮವು. ಉಳಿದ ನಾಮಗಳು ಆತನ ಗುಣಗಳನ್ನು ವರ್ಣಿಸಿ ತನ್ಮೂಲಕ ಅವನ ಸ್ವರೂಪವನ್ನು ಬೋಧಿಸುವ ಕಾರಣ ಅವೆಲ್ಲವೂ ಗೌಣವಾದ ನಾಮಗಳೆಂದು ಸಿದ್ಧವಾಗಿದೆ. ಉದಾಹರಣೆಗೆ- “ಅಯಂ ಮೇ ವಿಶ್ವಭೇಷಜೋಽಯಂ ಮೇ ಶಿವಾಭಿಮರ್ಶನಃ”,[೫೭೪] “ನಮಃ ಶಿವಾಯ ಚ ಶಿವತರಾಯ ಚ”,[೫೭೫] “ಅಪಿ ವಾ ಯಶ್ಚಾಂಡಾಲಃ ಶಿವ ಇತಿ ವಾಚಂ ವದೇತ್ ತೇನ ಸಹ ಸಂವದೇತ್ ತೇನ ಸಹ ಸಂವಸೇತ್ ತೇನ ಸಹ ಭುಂಜೀತ”,[೫೭೬] “ಶಿವ ಏಕೋ ಧ್ಯೇಯಃ ಶಿವಂಕರಃ ಸರ್ವಮನ್ಯತ್ ಪರಿತ್ಯಜ್ಯ”,[೫೭೭] “ಶಿವಂ ಪ್ರಶಾಂತಮಮೃತಂ ಬ್ರಹ್ಮಯೋನಿಮ್”,[೫೭೮] “ಶಿವತತ್ತ್ವಂ ಮಹಾಸೇನ ನಿಷ್ಕಲಂ ಚೇತಿ ಕೀರ್ತಿತಮ್”,[೫೭೯] “ಮಹಾಪಾತಕವಿಚ್ಛಿತ್ತ್ಯೈ ಶಿವ ಇತ್ಯಕ್ಷರದ್ವಯಮ್। ಅಲಂ ನಮಸ್ಕ್ರಿಯಾಯುಕ್ತೋ ಮುಕ್ತಯೇ ಕಲ್ಪಿತೋ ಮನುಃ।।”,[೫೮೦] “ಸತ್ಯಜ್ಞಾನ ಪರಾನಂದಸ್ವರೂಪಸ್ಯ ಶಿವಸ್ಯ ತು। ಅಸಂಪೃಕ್ತ್ಯಾ ಶಿವಸ್ಯಾಯಂ ಶಿವಶಬ್ದಸ್ತು ವಾಚಕಃ।। ಸರ್ವಸಂಬಂಧವತ್ತ್ವೇನ ಸಂಪೂರ್ಣಃ ಶಿವಸಂಜ್ಞಿತಃ। ಜೀವೇಶತ್ವಾದಿ ರಹಿತಃ ಸ್ವಪ್ರಭಃ ಕೇವಲಃ ಶಿವಃ।।”,[೫೮೧] “ಶಿವನಾಮ ಮುಖೇ ಯಸ್ಯ ಸದಾಶಿವ ಶಿವೇತಿ ಚ। ಪಾಪಾನಿ ನ ಸ್ಪೃಶಂತ್ಯೇವ ಖದಿರಾಂಗಾರಕಂ ಯಥಾ।।” ಶ್ರೀಶಿವಾಯ ನಮಸ್ತುಭ್ಯಂ ಮುಖಂ ವ್ಯಾಹರತೇ ಯದಾ। ತನ್ಮುಖಂ ಪಾವನಂ ತೀರ್ಥಂ ಸರ್ವಪಾಪವಿನಾಶಕಮ್।।[೫೮೨] ಇತ್ಯಾದಿ ಶ್ರುತಿ, ಆಗಮ, ಸ್ಮೃತಿ, ಪುರಾಣ ವಚನಗಳ ಪ್ರಮಾಣವಿರುವುದರಿಂದ ‘ಶಿವ’ ಶಬ್ದವು ಮುಖ್ಯವಾಗಿ ಪರಬ್ರಹ್ಮ ವಾಚಕವು, ಉಳಿದ ಭವ, ಶೂಲಿ ಮುಂತಾದ ಪದಗಳು (ಮಾಣವಕನು ಸಿಂಹ) ಸಿಂಹ-ಮಾಣವಕ ಮೊದಲಾದವುಗಳಂತೆ ಗೌಣವೃತ್ತಿಯಿಂದ ಪರಬ್ರಹ್ಮ ಪ್ರಕಾಶಕತ್ವಗಳೆಂದು ತಿಳಿಯಬೇಕು. ಅದನ್ನು ಶ್ರೀ ರೇಣುಕ ಭಗವತ್ಪಾದರು ಹೀಗೆ ನಿರೂಪಿಸಿದ್ದಾರೆ-

ಶಿವ ಇತ್ಯಕ್ಷರದ್ವಂದ್ವಂ ಪರಬ್ರಹ್ಮಪ್ರಕಾಶಕಮ್।
ಮುಖ್ಯವೃತ್ತ್ಯಾ ತದನ್ಯೇಷಾಂ ಶಬ್ದಾನಾಂ ಗೌಣವೃತ್ತಯಃ।।

---

[೫೭೪] ಋಗ್ವೇದ, ೧೦-೬೦-೧೨

[೫೭೫] ಶ್ರೀರುದ್ರ, ಅನುವಾಕ ೮

[೫೭೬] ಬ್ರ.ಸೂ, ಶ್ರೀಕಂಠಭಾಷ್ಯ, ಶಿವಾರ್ಕಮಣಿದೀಪಿಕಾ, ಪು. ೩

[೫೭೭] ಅಥರ್ವಶಿಖೋಪನಿಷತ್, ೩

[೫೭೮] ಕೈವಲ್ಯೋಪನಿಷತ್, ೬

[೫೭೯] ವಾ.ಶು.ತ, ೧.೧೫

[೫೮೦] ಸಿ.ಶಿ, ೮.೧೦; ತಾತ್ಪರ್ಯದೀಪಿಕಾ, ಪು. ೮೬

[೫೮೧] ಸಿ.ಶಿ, ೮.೧೦; ತಾ.ದೀ, ಪು. ೮೬

[೫೮೨] ಶಿ.ಪು, ವಿದ್ಯೇ, ೨೩.೬-೭

ತಸ್ಮಾನ್ಮುಖ್ಯತರಂ ನಾಮ ಶಿವ ಇತ್ಯಕ್ಷರದ್ವಯಮ್।
ಸಚ್ಚಿದಾನಂದರೂಪಸ್ಯ ಶಂಭೋರಮಿತತೇಜಸಃ॥[೫೮೩]

"'ಶಿವ' ಎಂಬ ಎರಡು ಅಕ್ಷರಗಳು ಮುಖ್ಯವಾಗಿ ಪರಬ್ರಹ್ಮ ಪ್ರಕಾಶಕವಾಗಿವೆ. ಈ ಶಿವಶಬ್ದಕ್ಕೆ ಭಿನ್ನವಾದ ಬೇರೆ ಶಬ್ದಗಳು ಅವನ ಗುಣಗಳನ್ನು ಪ್ರಕಾಶಪಡಿಸುತ್ತವೆ. ಆದುದರಿಂದ 'ಶಿವ' ಎಂಬ ಶಬ್ದವು ಸಚ್ಚಿದಾನಂದ ಸ್ವರೂಪಿಯೂ, ಅಪರಿಮಿತ ತೇಜಃಶಾಲಿಯೂ ಆದ ಪರಮೇಶ್ವರನ ಮುಖ್ಯ ನಾಮವಾಗಿದೆ."

ಆದುದರಿಂದ 'ಶಿವ' ಎಂಬ ಎರಡಕ್ಷರಗಳು ಅಪರಿಮಿತ ಪ್ರಕಾಶರೂಪಿಯೂ, ಸಚ್ಚಿದಾನಂದ ಸ್ವರೂಪಿಯೂ ಆದ ಪರಬ್ರಹ್ಮನ (ಪರಮೇಶ್ವರನ) ಮುಖ್ಯವಾದ ನಾಮ. ಈ ಮುಖ್ಯ ನಾಮದಿಂದ ಯುಕ್ತವಾಗಿರುವುದರಿಂದಲೇ ಪಂಚಾಕ್ಷರ ಮಂತ್ರವು ಆ ಹೆಸರಿನಿಂದ (ಶಿವಪಂಚಾಕ್ಷರ) ಹೇಳಲ್ಪಟ್ಟಿದೆ.[೫೮೪]

ಪ್ರಪಂಚದಲ್ಲಿ ಒಬ್ಬ ವ್ಯಕ್ತಿಯ ಸಮ್ಮುಖೀಕರಣ ಮಾಡುವುದರಲ್ಲಿ ಅವನ ಹೆಸರು ಹೇಗೆ ಸಹಾಯಕವಾಗುತ್ತದೆಯೋ ಹಾಗೆಯೇ ಶಿವನ ಅಭಿದಾನ ರೂಪವಾದ ಈ ಪಂಚಾಕ್ಷರ ಮಂತ್ರವು ಶಿವನನ್ನು ಅಭಿಮುಖಿಗೊಳಿಸುವ ಸಾಧನವು. ಮಂತ್ರಗಳು ಪೂಜಾರ್ಹವಾದ ದೇವತೆಗಳನ್ನು ಒಲೈಸಿಕೊಳ್ಳುವ ಸಾಧನಗಳೆಂದು ಸಿದ್ಧವಾಗಿರುವುದೇ ಇದಕ್ಕೆ ಪ್ರಮಾಣ. ಈ ಪ್ರಕಾರ 'ಶಿವ' ನಾಮದಿಂದ ಯುಕ್ತವಾದ ಈ ಮಂತ್ರವು ಶಿವನಂತೆ ಸಂಸಾರಮೋಚಕವಾಗಿರುವುದರಿಂದ ಮೋಕ್ಷಾಕಾಂಕ್ಷಿಗಳಾದ ಸಾಧಕರೆಲ್ಲರೂ ಸಹ ಅವಶ್ಯವಾಗಿ ಪಂಚಾಕ್ಷರಮಂತ್ರವನ್ನು ಜಪಿಸಬೇಕು.[೫೮೫]

ಈ ಪ್ರಕಾರವಾಗಿ ಶಿವನ ಅಭಿಧಾನದಿಂದ ಈ ಮಂತ್ರವು "ತತ್ತ್ವಮಸಿ" ಮಹಾವಾಕ್ಯದಂತೆ ಶಿವ-ಜೀವರ ಐಕ್ಯಬೋಧಕವೂ ಸಹ ಆಗುತ್ತದೆ. ಅದನ್ನು ಶ್ರೀಮರಿತೋಂಟದಾರ್ಯರು- "ಶಿವಜೀವೈಕ್ಯಪ್ರಕಾಶನಾರ್ಥಂ ಅತ್ರ ನಮಸ್ಕಾರೇಣ ಜೀವತ್ವಂ ಶಿವಶಬ್ದೇನ ಪರಬ್ರಹ್ಮತ್ವಮ್, ಆಯೇತ್ಯೈಕ್ಯಮ್ 'ಅಯ ಗತೌ' ಇತಿ ಧಾತೋರಿತಿ ಭಾವಃ"[೫೮೬] ಎಂದು ನಿರೂಪಿಸಿದ್ದಾರೆ. ಇದರ ತಾತ್ಪರ್ಯವೇನೆಂದರೆ- "ನಮಃ ಶಿವಾಯ" ಎಂಬ ಮಂತ್ರದಲ್ಲಿರುವ 'ನಮಃ' ಶಬ್ದವು ಜೀವಾತ್ಮನ ವಾಚಕವು

---

[೫೮೩] ಸಿ.ಶಿ, ಅ.೧೦-೧೧

[೫೮೪] ತಸ್ಯಾಭಿಧಾನಮಂತ್ರೋಽಯಭಿಧೇಯಶ್ಚ ಸ ಸ್ಮೃತಃ।
ಅಭಿಧಾನಾಭಿಧೇಯತ್ವಾನ್ಮಂತ್ರಾತ್ ಸಿದ್ಧಃ ಪರಃ ಶಿವಃ॥ -ಸಿ.ಶಿ, ಅ.೬

[೫೮೫] ಏತನ್ನಾಮಾವಲಂಬೇನ ಮಂತ್ರಃ ಪಂಚಾಕ್ಷರಃ ಸ್ಮೃತಃ।
ಯಸ್ಮಾದತಃ ಸದಾ ಜಪ್ಯೋ ಮೋಕ್ಷಕಾಂಕ್ಷಿಭಿರಾದರಾತ್॥
ಯಥಾಽನಾದಿರ್ಮಹಾದೇವಃ ಸಿದ್ಧಃ ಸಂಸಾರಮೋಚಕಃ।
ತಥಾ ಪಂಚಾಕ್ಷರೋ ಮಂತ್ರಃ ಸಂಸಾರಕ್ಷಯಕಾರಕಃ॥ -ಸಿ.ಶಿ, ಅ.೧೨-೧೩

[೫೮೬] ಸಿ.ಶಿ, ಅ.೭, ತಾತ್ಪರ್ಯದೀಪಿಕೆ, ಪು. ೧೨೩

ಹಾಗೂ 'ಶಿವ' ಶಬ್ದವು ಪರಮಾತ್ಮನ ವಾಚಕವು, ಅದರಲ್ಲಿನ 'ಅಯ' ಶಬ್ದವು ಅವರಿಬ್ಬರ ಅಭೇದವನ್ನು ಬೋಧಿಸುವಂತಹದ್ದಾಗಿದೆ. ಹೀಗೆ ಪಂಚಾಕ್ಷರ ಮಂತ್ರವು "ತತ್ತ್ವಮಸಿ" ಎಂಬ ಮಹಾವಾಕ್ಯದಂತೆ ಶಿವ-ಜೀವರ ಐಕ್ಯಬೋಧಕವೆಂದು ಸಿದ್ಧವಾಗುತ್ತದೆ. ಇದೇ ಅರ್ಥವನ್ನು ಮಾಯಿದೇವನೂ ಸಹ ಈ ರೀತಿಯಾಗಿ ತಿಳಿಯಪಡಿಸಿದ್ದಾನೆ-

> ನಮಃ ಪದಂ ತತ್ಖಲು ಜೀವವಾಚಿ ಶಿವಃಪದಂ ತತ್ಪರಮಾತ್ಮವಾಚಿ।
> ಅಯೇತಿ ತಾದಾತ್ಮ್ಯಪದಂ ತದೇತದ್ ನಮಃ ಶಿವಾಯೇತಿ ಜಗಾದ ಮಂತ್ರಃ॥
> ಅಂಗಂ ನಮಃ ಪದಮಸೌ ಶಿವ ಏವ ಲಿಂಗಂ
> ಸಂಬಂಧ ಏಷ ಯದಯೇತಿ ಪದಂ ತದುಕ್ತಮ್।
> ಲಿಂಗಾಂಗಸಂಗಮ ಪದತ್ರಯಬೋಧನಾರ್ಥಂ
> ಮಂತ್ರೋಽಯಮೇವಮಭಿಧಾಸ್ಯತಿ ಮಂತ್ರರಾಜಃ॥[೫೮೭]

" 'ನಮಃ' ಎಂಬ ಪದವು 'ಜೀವ'ವಾಚಕ, 'ಶಿವ' ಎಂಬ ಪದವು 'ಪರಮಾತ್ಮ' ವಾಚಕವಾಗಿದೆ. 'ಅಯ' ಎಂಬ ಪದವು ಜೀವಾತ್ಮ-ಪರಮಾತ್ಮರ ತಾದಾತ್ಮ್ಯವನ್ನು ಬೋಧಿಸುವುದರಿಂದ ಈ ಮಂತ್ರವನ್ನು 'ನಮಃ ಶಿವಾಯ' ಎಂದು ಹೇಳಲಾಗಿದೆ.

(ನಮಃ ಶಿವಾಯ ಎಂಬ ಮಂತ್ರದಲ್ಲಿನ) 'ನಮಃ' ಎಂಬ ಪದವು ಅಂಗ (ಜೀವ)ನನ್ನು, 'ಶಿವ' ಎಂಬ ಪದವು ಲಿಂಗ(ಶಿವ)ವನ್ನು ಮತ್ತು 'ಅಯ' ಎಂಬ ಪದವು ಲಿಂಗಾಂಗ ಸಂಬಂಧವನ್ನು ಬೋಧಿಸುತ್ತವೆ. ಲಿಂಗ, ಅಂಗ, ಸಂಬಂಧ ಎಂಬ ಮೂರು ಪದಗಳನ್ನು ಬೋಧಿಸುವ ಕಾರಣದಿಂದ ಈ ಮಂತ್ರವು 'ಮಂತ್ರರಾಜ' ಎಂದು ಕರೆಯಲ್ಪಟ್ಟಿದೆ."

ಆದುದರಿಂದ ಈ ಮಂತ್ರದ ಜಪದಿಂದ ಸಂಸಾರ ಬಂಧನವು ಕಳಚಿ, ಲಿಂಗಾಂಗ ಸಾಮರಸ್ಯ ರೂಪವಾದ ಮೋಕ್ಷವು ಪ್ರಾಪ್ತವಾಗುತ್ತದೆ. ಇಂತಹ ಮಹಿಮೆಯ ಕಾರಣವೇ ಇತರ ಮಂತ್ರಗಳಿಗಿಂತಲೂ ಈ ಮಂತ್ರವು ಪ್ರಖ್ಯಾತಿಯನ್ನು ಪಡೆದಿದೆ.

ಪಂಚಾಕ್ಷರ ಮಂತ್ರದ ಐದು ಹೆಸರುಗಳು

ಮಹಿಮಾಶಾಲಿಯಾದ ಈ ಪಂಚಾಕ್ಷರಮಂತ್ರಕ್ಕೆ ಆಗಮಾದಿ ಶಾಸ್ತ್ರಗಳಲ್ಲಿ ಮೂಲ, ವಿದ್ಯೆ, ಶಿವ, ಶೈವಸೂತ್ರ ಮತ್ತು ಪಂಚಾಕ್ಷರವೆಂಬ ಐದು ಹೆಸರುಗಳು ಹೇಳಲ್ಪಟ್ಟಿವೆ.[೫೮೮] ತತ್ತ್ವಾತ್ಮಕವಾದ ಪ್ರಪಂಚಕ್ಕೆಲ್ಲ ಪರಶಿವನು ಮೂಲ ಕಾರಣನಾಗಿರುವಂತೆ ತದ್ವಾಚಕವಾದ ಪಂಚಾಕ್ಷರ ಮಹಾಮಂತ್ರವೂ ಸಹ ಸಮಸ್ತ ಪ್ರಪಂಚದ ಹಾಗೂ ಜಗತ್ತಿನಲ್ಲಿರುವ ಸಮಸ್ತ ವರ್ಣಸಮಾಮ್ನಾಯದ ಪ್ರಾದುರ್ಭಾವಕ್ಕೆ ಮೂಲಕಾರಣವಾಗಿರುತ್ತದೆ ಎನ್ನುವ ಕಾರಣದಿಂದ ಈ ಮಂತ್ರಕ್ಕೆ 'ಮೂಲಂ' ಎಂದು ಹೆಸರು. ಆದುದರಿಂದ

---

೫೮೭. ಅನುಭವಸೂತ್ರ, ೬.೪೫-೪೬

೫೮೮. ಮೂಲಂ ವಿದ್ಯಾ ಶಿವಃ ಶೈವಸೂತ್ರಂ ಪಂಚಾಕ್ಷರಸ್ತಥಾ।
ಏತಾನಿ ಪಂಚ ನಾಮಾನಿ ಪಂಚಾಕ್ಷರಮಹಾಮನೋಃ॥ -ಸಿ.ಶಿ, ೮.೨೩

'ನಮಃ ಶಿವಾಯ' ಎಂಬ ಈ ಪಂಚಾಕ್ಷರ ಮಂತ್ರದ ಪಂಚಾಕ್ಷರಗಳಿಂದ ಕ್ರಮವಾಗಿ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನರೆಂಬ ಪಂಚಬ್ರಹ್ಮರು; ಗಂಧ, ರಸ, ರೂಪ, ಸ್ಪರ್ಶ ಮತ್ತು ಶಬ್ದಗಳೆಂಬ ಪಂಚತನ್ಮಾತ್ರಗಳು, ಪೃಥಿವಿ (ಭೂಮಿ), ಅಪ್ (ನೀರು), ತೇಜಸ್, ವಾಯು ಮತ್ತು ಆಕಾಶಗಳೆಂಬ ಪಂಚಮಹಾಭೂತಗಳು, ಮೂಗು, ನಾಲಿಗೆ, ಕಣ್ಣು, ಚರ್ಮ ಮತ್ತು ಕಿವಿಗಳೆಂಬ ಜ್ಞಾನಶಕ್ತಿರೂಪಿಗಳಾದ ಪಂಚಜ್ಞಾನೇಂದ್ರಿಯಗಳು; ಉಪಸ್ಥ, ಪಾಯು, ಪಾಣಿ, ಪಾದ ಮತ್ತು ವಾಕ್ (ಮಾತು) ಎಂಬ ಕ್ರಿಯಾಶಕ್ತಿರೂಪಿಗಳಾದ ಪಂಚಕರ್ಮೇಂದ್ರಿಯಗಳು ಪ್ರಾದುರ್ಭವಿಸಿವೆ. ಅಂತೆಯೇ ಪ್ರಪಂಚದಲ್ಲಿ ಪ್ರಸಿದ್ಧವಾಗಿರುವ ಎಲ್ಲ ಪಂಚಕಗಳೂ ಸಹ ಸ್ವರ್ಣಕುಂಡಲ ನ್ಯಾಯದಂತೆ ಪಂಚಾಕ್ಷರಮಯವಾಗಿವೆ. ಅರ್ಥಾತ್ ಅದರಿಂದ ವ್ಯಕ್ತವಾಗಿವೆ ಎಂದು ತಿಳಿಯಬೇಕು.[೫೮೯] ಇದೇ ಪ್ರಕಾರವಾಗಿ ಸಪ್ತಕೋಟಿಮಂತ್ರಗಳ ಉಗಮ ಮತ್ತು ನಾಶಕ್ಕೆ ಈ ಮಂತ್ರವೇ ಆಧಾರಭೂತವಾದುದೆಂದು ಚಂದ್ರಜ್ಞಾನಾಗಮವು ನಿರೂಪಿಸುತ್ತದೆ-

ಸಪ್ತಕೋಟಿಮಹಾಮಂತ್ರಾ ರೂಪವಕ್ತ್ರೈರನೇಕಧಾ।
ಪಂಚಾಕ್ಷರೇ ಪ್ರಲೀಯಂತೇ ಪುನಸ್ತಸ್ಮಾದ್ವಿನಿರ್ಗತಾಃ॥[೫೯೦]

"ಏಳುಕೋಟಿ ಮಹಾಮಂತ್ರಗಳು ಸ್ವರೂಪ ಮತ್ತು ಆಕಾರಗಳಿಂದ ಅನೇಕವಾಗಿವೆ. ಅವುಗಳೆಲ್ಲವೂ ಪಂಚಾಕ್ಷರ ಮಂತ್ರದಲ್ಲಿಯೇ ಲಯವಾಗುತ್ತವೆ. ಅಲ್ಲಿಂದಲೇ ಉಗಮವನ್ನು ಹೊಂದುತ್ತವೆ."

ಈ ರೀತಿಯಾಗಿ ಜಗತ್ತು ಹಾಗೂ ವರ್ಣಸಮಾಮ್ನಾಯಗಳಿಗೆ ಕಾರಣೀಭೂತವಾಗಿರುವುದರಿಂದ ಈ ಮಂತ್ರವು 'ಮೂಲಂ' ಅಥವಾ ಮೂಲಮಂತ್ರ[೫೯೧]ವೆಂದು ಹೇಳಲ್ಪಟ್ಟಿದೆ. ಪಂಚಾಕ್ಷರ ಮಂತ್ರದ ಸರ್ವಕಾರಣತ್ವ ವಿಷಯವು ಚಂದ್ರಜ್ಞಾನಾಗಮದಲ್ಲಿ[೫೯೨] ವಿಸ್ತಾರವಾಗಿ ಪ್ರತಿಪಾದಿತವಾಗಿದೆ. ಜಿಜ್ಞಾಸುಗಳು ಅಲ್ಲಿ ಗಮನಿಸಬಹುದು.

ಪೂರ್ವೋಕ್ತ ಪ್ರಕಾರದಿಂದ ಈ ಮಂತ್ರದ ಮನನದಿಂದ ಶಿವ-ಜೀವರ ಐಕ್ಯ ಬೋಧಕವಾದ ಶುದ್ಧವಿದ್ಯೆಯ ಉದಯವಾಗುತ್ತದೆ. "ಆಯುರ್ವೈ ಘೃತಮ್" (ತುಪ್ಪವೇ ಆಯುಸ್ಸು) ಎಂಬ ಉಕ್ತಿಯಲ್ಲಿ ತುಪ್ಪವನ್ನೇ ಆಯುಷ್ಯವೆಂದು ಕರೆದಂತೆ ಇಂತಹ ವಿದ್ಯೆಯ ಉದಯಕ್ಕೆ ಕಾರಣವಾದ ಈ ಮಂತ್ರಕ್ಕೆ "ವಿದ್ಯಾ" ಎಂದು ಕರೆಯಲಾಗಿದೆ. ಇದೇ ಪ್ರಕಾರ ಈ ಮಂತ್ರದ ಮನನದಿಂದ ಅನೇಕ ಕಲ್ಯಾಣಗುಣಪರಂಪರೆಯು

---

[೫೮೯] ಸಿ.ಶಿ, ೮.೧೪-೧೬

[೫೯೦] ಚ.ಜ್ಞಾ, ಕ್ರಿ.ಪಾ, ೮.೪೫

[೫೯೧] ಮೂಲತ್ವಾತ್ ಸರ್ವಮಂತ್ರಾಣಾಂ ಮೂಲಾಧಾರಸಮುದ್ಭವಾತ್।
ಮೂಲಸ್ವರೂಪಲಿಂಗತ್ವಾನ್ಮೂಲಮಂತ್ರ ಇತಿ ಸ್ಮೃತಮ್॥ -ಯೋ.ಶಿ.ಉ, ೨.೮-೯

[೫೯೨] ಚ.ಜ್ಞಾ, ಕ್ರಿ.ಪಾ, ೮.೧೪-೪೧

ಪ್ರಾಪ್ತವಾಗುವುದರಿಂದ ಇದಕ್ಕೆ 'ಶಿವ' ಎಂಬ ಹೆಸರು ಬಂದಿದೆ. ಶಿವಸಂಬಂಧಿಯಾದ ಎಲ್ಲ ವಿಷಯವು ಈ ಮಂತ್ರದಲ್ಲಿ ಸೂಕ್ಷ್ಮವಾಗಿ ನಿರೂಪಿಸಿರುವ ಕಾರಣ ಹಾಗೂ ಶಿವಸೂಚಕವಾಗಿರುವ ಕಾರಣದಿಂದ ಇದು 'ಶೈವಸೂತ್ರ'[೫೯೩]ವೆಂದೂ, ಪೂರ್ವೋಕ್ತಗಳಾದ "ನಮಃ ಶಿವಾಯ" ಎಂಬ ಐದು ಅಕ್ಷರಗಳಿಂದ ಕೂಡಿರುವುದರಿಂದ ಇದನ್ನು 'ಪಂಚಾಕ್ಷರ' ಎಂದೂ ಕರೆಯಲಾಗಿದೆ. ಹೀಗೆ ಈ ಮಂತ್ರಕ್ಕೆ ಐದು ಕಾರಣಗಳಿಂದ ಐದು ಹೆಸರುಗಳು ಪ್ರಾಪ್ತವಾಗಿವೆ.

ಷಡಕ್ಷರಮಂತ್ರ

ಓಂಕಾರಪೂರ್ವೋ ಮಂತ್ರೋಽಯಂ ಪಂಚಾಕ್ಷರಮಯಃ ಪರಃ।
ಶೈವಾಗಮೇಷು ವೇದೇಷು ಷಡಕ್ಷರ ಇತಿ ಸ್ಮೃತಃ॥[೫೯೪]

"ಓಂಕಾರವು ಆರಂಭದಲ್ಲಿರುವ ಸರ್ವಶ್ರೇಷ್ಠವಾದ ಈ ಪಂಚಾಕ್ಷರಗಳಿಂದ ಕೂಡಿರುವ ಈ ಮಂತ್ರವು ವೇದಗಳಲ್ಲಿ ಹಾಗೂ ಶಿವಾಗಮಗಳಲ್ಲಿ "ಷಡಕ್ಷರಮಂತ್ರ"ವೆಂದು ಹೇಳಲ್ಪಟ್ಟಿದೆ" -ಎಂಬ ಶ್ರೀ ಜಗದ್ಗುರು ರೇಣುಕಾಚಾರ್ಯರ ಉಕ್ತಿಯಂತೆ ಪೂರ್ವೋಕ್ತ ಪಂಚಾಕ್ಷರಮಂತ್ರಕ್ಕೆ ಪ್ರಣವವನ್ನು ಸೇರಿಸಿದಾಗ ಅದೇ ಷಡಕ್ಷರಮಂತ್ರವೆಂದು ಹೇಳಲ್ಪಟ್ಟಿದೆ. ಪ್ರಣವವೂ ಸಹ ಶಿವನ ವಾಚಕವೇ ಆಗಿದೆ. ಆದುದರಿಂದ "ತಸ್ಯ ವಾಚಕಃ ಪ್ರಣವಃ"[೫೯೫] ಎಂದು ಪತಂಜಲಿ ಮಹರ್ಷಿಗಳು ಹೇಳಿದ್ದಾರೆ. 'ಪ್ರ' ಉಪಸರ್ಗ ಪೂರ್ವಕವಾದ 'ಣೂ ಸ್ತವನೇ' (ತುದಾ. ೧೪೮೯) ಎಂಬ ಧಾತುವಿನಿಂದ ನಿಷ್ಪನ್ನವಾದ ಈ ಪ್ರಣವವು ಶಿವನ ಸ್ತುತಿಪರವಾದ ಮೊದಲನೆಯ ವರ್ಣವು. ಆ ಕಾರಣದಿಂದ "ಪ್ರಕರ್ಷೇಣ ನೂಯತೇ ಸ್ತೂಯತೇಽನೇನೇತಿ, ನೌತಿ ಸ್ತೌತೀತಿ ವಾ ಪ್ರಣವ ಓಂಕಾರಃ"[೫೯೬] ಎಂಬ ಭೋಜರಾಜನು ಕೊಟ್ಟಿರುವ ವ್ಯುತ್ಪತ್ತಿಯಂತೆ ಓಂಕಾರದಿಂದ ಶಿವನ ವಿಶೇಷವಾದ ಸ್ತುತಿಯು ಉಂಟಾಗುತ್ತದೆ ಎಂದು ತಿಳಿದುಬರುತ್ತದೆ. ಮಹರ್ಷಿ ವ್ಯಾಸರು-

ಪ್ರೋಹಿ ಪ್ರಕೃತಿಜಾತಸ್ಯ ಸಂಸಾರಸ್ಯ ಮಹೋದಧೇಃ।
ನವಂ ನಾವಾಂತರಮಿತಿ ಪ್ರಣವಂ ವೈ ವಿದುರ್ಬುಧಾಃ॥
ಪ್ರಃ ಪ್ರಪಂಚೋ ನ ನಾಸ್ತಿ ವೋ ಯುಷ್ಮಾಕಂ ಪ್ರಣವಂ ವಿದುಃ।
ಪ್ರಕರ್ಷೇಣ ನಯೇದ್ ಯಸ್ಮಾನ್ಮೋಕ್ಷಂ ವಾ ಪ್ರಣವಂ ವಿದುಃ॥[೫೯೭]

---

[೫೯೩] ಸನ್ನಿಧಾನಾತ್ ಸಮಸ್ತೇಷು ಜಂತುಷ್ವಪಿ ಚ ಸಂತತಮ್।
ಸೂಚಕತ್ವಾಚ್ಚ ರೂಪಸ್ಯ ಸೂತ್ರಮಿತ್ಯಭಿಧೀಯತೇ॥ -ಯೋ.ಶಿ.ಉ, ೨.೧೦-೧೧

[೫೯೪] ಸಿ.ಶಿ, ೮.೧೭

[೫೯೫] ಯೋ.ಸೂ, ೧.೨೭

[೫೯೬] ಯೋ.ಸೂ, ಭೋಜವೃತ್ತಿ, ೧.೨೭

[೫೯೭] ಶಿ.ಪು, ವಿದ್ಯೇ, ೧೭.೪-೫

“ ‘ಪ್ರ’ ಎಂದರೆ ಪ್ರಾಕೃತಿಕ ಸಂಸಾರವೆಂಬ ಮಹಾಸಾಗರ, ‘ನವ’ ಎಂದರೆ ಅದನ್ನು ದಾಟಿಸುವ ಒಂದು ನೌಕೆ ಎಂದು ಪ್ರಣವವನ್ನು ಬುಧರು ತಿಳಿದಿದ್ದಾರೆ. ‘ಪ್ರ’ ಎಂದರೆ ಪ್ರಪಂಚ, ‘ನ’ ಎಂದರೆ ನಾಸ್ತಿ (=ಇರುವುದಿಲ್ಲ), ‘ವಃ’ ಎಂದರೆ ನಿಮಗೆ (ಅರ್ಥಾತ್ ಪ್ರಣವವನ್ನು ಜಪಿಸುವ ನಿಮಗೆ ಪ್ರಪಂಚವಿಲ್ಲವೆಂದರ್ಥ). “ಪ್ರಕರ್ಷೇಣ ನಯತೀತಿ ಪ್ರಣವಃ” ಅಂದರೆ ಬಲಾತ್ಕಾರವಾಗಿ ಮೋಕ್ಷದತ್ತ ಎಳೆದುಕೊಂಡು ಹೋಗುವುದು ಪ್ರಣವ ಎಂದು ತಿಳಿಯಬೇಕು” -ಎಂದು ಶಿವಪುರಾಣದಲ್ಲಿ ಪ್ರಣವವನ್ನು ಜಪಿಸುವವನಿಗೆ ಪ್ರಪಂಚವು ಇಲ್ಲವೆಂದು ‘ಪ್ರಣವ’ದಲ್ಲಿನ ಮೂರು ಅಕ್ಷರಗಳ ಅರ್ಥವನ್ನು ನಿರೂಪಿಸಿ, ಅದೇ ಸಂಸಾರ ಸಾಗರವನ್ನು ದಾಟಿಸುವ ನೌಕೆ ಎಂದೂ ಸಹ ಸಮರ್ಥಿಸಿದ್ದಾರೆ. ಈ ಓಂಕಾರದಿಂದಲೇ ಪಂಚಾಕ್ಷರಮಂತ್ರವೂ ಸಹ ಉತ್ಪತ್ತಿಯಾಗುತ್ತದೆ. ಆ ಕಾರಣ ಪ್ರಣವವು ಪಂಚಾಕ್ಷರವೆಂಬ ಕಲ್ಪವೃಕ್ಷದ ಬೀಜದಂತಿದೆ.[೫೯೮] ಪ್ರಣವದಲ್ಲಿ (ಓಂಕಾರದಲ್ಲಿ) ಬರುವ ‘ಅ’, ‘ಉ’ ಮತ್ತು ‘ಮ’ ಎಂಬ ವರ್ಣಗಳು ಕ್ರಮವಾಗಿ ಪರಮಾತ್ಮನ ಸತ್, ಚಿತ್ ಮತ್ತು ಆನಂದಗಳ ವಾಚಕಗಳಾಗಿರುವುದರಿಂದ ‘ಓಂ’ ಎಂಬ ಒಂದೇ ವರ್ಣದಿಂದ ಸಚ್ಚಿದಾನಂದ ಸ್ವರೂಪವೂ, ಅದ್ವಿತೀಯವೂ, ನಿಷ್ಕಲವೂ ಆದ ಪರಶಿವಬ್ರಹ್ಮವು ಪ್ರಕಾಶಿಸಲ್ಪಡುತ್ತದೆ.[೫೯೯]

ಸಹಜವಾಗಿ ‘ಹಂಸಃ’ ‘ಹಂಸಃ’ ಎಂದು ನಡೆಯುತ್ತಿರುವ ಶ್ವಾಸವು ಸದ್ಗುರುವಿನ ಉಪದೇಶದಿಂದ ಯಾವಾಗ ‘ಸೋಽಹಂ’ ರೂಪದಿಂದ ಪರಿವರ್ತಿತವಾದಾಗ ಅದು ಪರಮಾತ್ಮನ ಮಂತ್ರವಾಗುತ್ತದೆ. ಈ ಪರಮಾತ್ಮನ ಮಂತ್ರವನ್ನು ಪ್ರತಿಯೊಬ್ಬ ಮನುಷ್ಯನು ಪ್ರತಿದಿನ ೨೧,೬೦೦ ಸಾರಿ ಜಪಿಸುತ್ತಾನೆ. ಈ ‘ಸೋಽಹಂ’ ಎಂಬ ಪರಶಿವಮಂತ್ರದಲ್ಲಿನ ವೇದ್ಯರೂಪವಾದ ಚಂದ್ರಬೀಜವಾಗಿರುವ ‘ಸ’ಕಾರ ಮತ್ತು ವೇದನರೂಪವಾದ ಸೂರ್ಯಬೀಜವಾಗಿರುವ ‘ಹ’ಕಾರಗಳು ಲೋಪವಾಗಿರುವುದರಿಂದ ವೃತ್ತಿಶೂನ್ಯ ವೇದಕರೂಪವನ್ನು ಪ್ರಕಾಶಪಡಿಸುವ ‘ಓಂ’ಕಾರವು ಉಳಿಯುತ್ತದೆ. ಈ ಓಂಕಾರ ಮಂತ್ರವು ನಿಷ್ಕಲಬ್ರಹ್ಮ(ನಿಷ್ಕಲ ಶಿವನು)ದ ಪ್ರತಿಪಾದಕವೆಂದು ಸಿದ್ಧವಾಗುತ್ತದೆ.[೬೦೦]

---

[೫೯೮] ಪ್ರಥಮಂ ತಾರಕಾರೂಪಂ ದ್ವಿತೀಯಂ ದಂಡ ಉಚ್ಯತೇ।
ತೃತೀಯಂ ಕುಂಡಲಾಕಾರಂ ಚತುರ್ಥಂ ಚಾರ್ಧಚಂದ್ರಕಮ್॥
ಪಂಚಮಂ ದರ್ಪಣಾಕಾರಂ ಷಷ್ಠಂ ಜ್ಯೋತಿಃಸ್ವರೂಪಕಮ್।
ನಕಾರಸ್ತಾರಕಾರೂಪಂ ಮಕಾರೋ ದಂಡ ಉಚ್ಯತೇ॥
ಶಿಕಾರಃ ಕುಂಡಲಾಕಾರೋ ವಕಾರಶ್ಚಾರ್ಧಚಂದ್ರಕಃ।
ಯಕಾರೋ ದರ್ಪಣಾಕಾರ ಓಂಕಾರಃ ಪಂಚವರ್ಣರಾಟ್॥
-ಸಿ.ಶಿ, ೮.೧೮ ತತ್ತ್ವ, ಪು.೧೨೭

[೫೯೯] ಪ್ರಣವೇನೈಕವರ್ಣೇನ ಪರಬ್ರಹ್ಮ ಪ್ರಕಾಶ್ಯತೇ।
ಅದ್ವಿತೀಯಂ ಪರಾನಂದಂ ಶಿವಾಖ್ಯಂ ನಿಷ್ಪ್ರಪಂಚಕಮ್॥ -ಸಿ.ಶಿ, ೮.೧೯

[೬೦೦] ಪರಮಾತ್ಮಮನುರ್ಜ್ಞೇಯಃ ಸೋಽಹಂರೂಪಃ ಸನಾತನಃ।
ಜಾತೇ ಸಹಯೋರ್ಲೋಪಾದೋಮಿತ್ಯೇಕಾಕ್ಷರೋ ಮನುಃ॥ -ಸಿ.ಶಿ, ೮.೨೦

ಅಂತೆಯೇ ಅಥರ್ವಶಿರೋಪನಿಷತ್ತಿನಲ್ಲಿ- "ಯೋ ವೈ ರುದ್ರಃ ಸ ಭಗವಾನ್" ಎಂಬುದನ್ನು ಮುಂದುವರಿಸುತ್ತಾ "ಯ ಓಂಕಾರಃ ಸ ಪ್ರಣವಃ, ಯಃ ಪ್ರಣವಃ ಸ ಸರ್ವವ್ಯಾಪೀ, ಯಃ ಸರ್ವವ್ಯಾಪೀ ಸೋಽನಂತಃ, ಯೋಽನಂತಃ ತತ್ ತಾರಮ್, ಯತ್ ತಾರಂ ತತ್ ಸೂಕ್ಷ್ಮಮ್, ಯತ್ ಸೂಕ್ಷ್ಮಂ ತತ್ ಶುಕ್ಲಮ್, ಯತ್ ಶುಕ್ಲಂ ತದ್ ವೈದ್ಯುತಮ್, ಯದ್ ವೈದ್ಯುತಂ ತತ್ ಪರಂ ಬ್ರಹ್ಮ, ಯತ್ ಪರಂ ಬ್ರಹ್ಮ ಸ ಏಕಃ, ಯ ಏಕಃ ಸ ರುದ್ರಃ, ಯೋ ರುದ್ರಃ ಸ ಈಶಾನಃ, ಯಃ ಈಶಾನಃ ಸ ಭಗವಾನ್ ಮಹೇಶ್ವರಃ"[೬೦೧] ಎಂದು ಪ್ರಣವಮಂತ್ರವೇ ಸತ್-ಚಿತ್-ಆನಂದ ರೂಪವಾದ ಪರಬ್ರಹ್ಮವೆಂದು ಉಪದೇಶಿಸಲಾಗಿದೆ.

ಈ ಪ್ರಕಾರವಾಗಿ ಷಡ್ಷಕ್ಷರಮಂತ್ರದಲ್ಲಿರುವ ಓಂಕಾರದಿಂದ ಪರಶಿವನ ನಿಷ್ಕಲ ಸ್ವರೂಪವು ಮತ್ತು ಪಂಚಾಕ್ಷರದಿಂದ ಪರಶಿವನ ಸಕಲರೂಪವಾದ ಪಂಚಬ್ರಹ್ಮ ಸ್ವರೂಪವು ವ್ಯಕ್ತವಾಗುತ್ತದೆ. ಆ ಕಾರಣದಿಂದ ಷಡಕ್ಷರಮಂತ್ರದಿಂದ ಪರಶಿವನ ಸಕಲ-ನಿಷ್ಕಲಗಳೆಂಬ ಉಭಯರೂಪಗಳು ಪ್ರತಿಪಾದಿಸಲ್ಪಡುತ್ತವೆ ಎಂದು ತಿಳಿಯಬೇಕು. ಅದನ್ನು ಶ್ರೀ ರೇಣುಕ ಭಗವತ್ಪಾದರು ಈ ರೀತಿಯಾಗಿ ನಿರೂಪಿಸುತ್ತಾರೆ-

> ಪ್ರಣವೇನೈವ ಮಂತ್ರೇಣ ಬೋಧ್ಯತೇ ನಿಷ್ಕಲಃ ಶಿವಃ।
> ಪಂಚಾಕ್ಷರೇಣ ಮಂತ್ರೇಣ ಪಂಚಬ್ರಹ್ಮತನುಸ್ತಥಾ॥
> ನಿಷ್ಕಲಃ ಸಂವಿದಾಕಾರಃ ಸಕಲೋ ವಿಶ್ವಮೂರ್ತಿತಃ।
> ಉಭಯಾತ್ಮಾ ಶಿವೋ ಮಂತ್ರೇ ಷಡಕ್ಷರಮಯೇ ಸ್ಥಿತಃ॥[೬೦೨]

ಆದುದರಿಂದ ಈ ಮಂತ್ರವು ಶಿವನ ಅನುಗ್ರಹಕಾರಕವೂ ಹಾಗೂ ಶಿವತತ್ತ್ವ ರೂಪವಾದ ಕೈವಲ್ಯ ಪ್ರದಾಯಕವೂ ಆಗುತ್ತದೆ.[೬೦೩]

ಈ ಷಡ್‌ವರ್ಣಗಳು ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ ಮತ್ತು ಆಜ್ಞಾ -ಎಂಬ ಷಟ್‌ಚಕ್ರಗಳಲ್ಲಿರುವ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ ಮತ್ತು ಮಹಾಲಿಂಗ -ಎಂಬ ಷಡ್‌ಲಿಂಗಗಳ ಬೀಜಾಕ್ಷರಗಳೆಂದು ಶ್ರೀ ಮಾಯಿದೇವನು ತಿಳಿಸಿದ್ದಾನೆ.[೬೦೪]

ಈ ಪ್ರಣವ ಪಂಚಾಕ್ಷರಮಂತ್ರವು ವಿಭಿನ್ನ ಬೀಜಾಕ್ಷರಗಳಿಂದ ಕೂಡಿಕೊಂಡಾಗ ಪ್ರಸಾದಪಂಚಾಕ್ಷರ, ಮಾಯಾಪಂಚಾಕ್ಷರ, ಸೂಕ್ಷ್ಮಪಂಚಾಕ್ಷರ, ಸ್ಥೂಲಪಂಚಾಕ್ಷರ

---

೬೦೧. ಅ.ಶಿರ, ೪೪

೬೦೨. ಸಿ.ಶಿ, ೮.೨೧-೨೨

೬೦೩. ಓಂಕಾರಃ ಸರ್ವಮಂತ್ರಾಣಾಂ ಮಂತ್ರರಾಟ್ ಪರಿಕೀರ್ತಿತಃ।
ಪಂಚಾಕ್ಷರಯುತೋ ದೇವಿ ಸಾಕ್ಷಾತ್ ಸಾಯುಜ್ಯಕಾರಣಮ್॥
-ವೀ.ಆ.ಚ, ಪು.೧೬೭

೬೦೪. ಅ.ಸೂ, ೬.೪೭-೫೨

ಮತ್ತು ಮೂಲಪಂಚಾಕ್ಷರ ಎಂಬ ಹೆಸರುಗಳನ್ನು ಪಡೆಯುತ್ತದೆ ಮತ್ತು ಇವೇ ಕ್ರಮವಾಗಿ ಹತ್ತು, ಒಂಭತ್ತು, ಎಂಟು, ಏಳು ಮತ್ತು ಆರು ಅಕ್ಷರಗಳಿಂದ ಕೂಡಿರುತ್ತವೆ.[೬೦೫]

ಮಂತ್ರಜಪದ ಅಧಿಕಾರ

ದೀಕ್ಷಾಪೂರ್ವಂ ಗುರೋರ್ಲಬ್ಧ್ವಾ ಮಂತ್ರಮಾಜ್ಞಾಂ ಸಮಾಹಿತಃ।
ಸಂಕಲ್ಪ್ಯ ಚ ಜಪೇನ್ನಿತ್ಯಂ ಪುರಶ್ಚರಣಪೂರ್ವಕಮ್॥[೬೦೬]

"ಸಮಾಹಿತ ಮನಸ್ಸುಳ್ಳ ಸಾಧಕನು ದೀಕ್ಷೆಯ ನಂತರದಲ್ಲಿ ಗುರುವಿನ ಅಪ್ಪಣೆಯ ಮೇರೆಗೆ, ಪುರಶ್ಚರಣ ವಿಧಿಪೂರ್ವಕವಾಗಿ ಸಂಕಲ್ಪ ಮಾಡಿ ಪ್ರತಿನಿತ್ಯವೂ ಮಂತ್ರವನ್ನು ಜಪಿಸಬೇಕು" -ಎಂಬ ಚಂದ್ರಜ್ಞಾನಾಗಮದ ಉಕ್ತಿಯಂತೆ ಮಂತ್ರದೀಕ್ಷೆಯಾಗದ ಯಾರೂ ಸಹ ಮಂತ್ರವನ್ನು ಜಪಿಸಲು ಅರ್ಹರಲ್ಲ. ಆದುದರಿಂದ ವೀರಶೈವ ಸಿದ್ಧಾಂತದಲ್ಲಿ ಸದ್ಗುರುಗಳು ತಮ್ಮ ಗೋತ್ರದ ಸ್ತ್ರೀ-ಪುರುಷರಿಗೆ ಮಂತ್ರದೀಕ್ಷೆಯ ಸಂದರ್ಭದಲ್ಲಿ ಅವರವರ ಅಧಿಕಾರಕ್ಕೆ ಅನುಸಾರವಾಗಿ ಆಯಾ ಬೀಜಾಕ್ಷರಗಳಿಂದ ಕೂಡಿಕೊಂಡಿರುವ ಪಂಚಾಕ್ಷರ ಮಹಾಮಂತ್ರವನ್ನು ಅತ್ಯಂತ ಗೋಪ್ಯವಾಗಿ ಉಪದೇಶಿಸಿ ಆಯಾ ದೇವತೆ, ಛಂದಸ್ಸು ಮತ್ತು ನ್ಯಾಸಾದಿಗಳನ್ನು ತಿಳಿಯಪಡಿಸುತ್ತಾರೆ. ಈ ಪ್ರಕಾರವಾಗಿ ಗುರುಗಳಿಂದ ಮಂತ್ರದೀಕ್ಷೆಯನ್ನು ಪಡೆದವನೇ ಮಂತ್ರವನ್ನು ಜಪಿಸಲು ಅಧಿಕಾರವುಳ್ಳವನೆಂದು ತಿಳಿಯಬೇಕು. ಇಲ್ಲದಿದ್ದರೆ-

ಪುಸ್ತಕೇ ಲಿಖಿತಾನ್ ಮಂತ್ರಾನಾಲೋಕ್ಯ ಪ್ರಜಪಂತಿ ಯೇ।
ಬ್ರಹ್ಮಹತ್ಯಾಸಮಂ ತೇಷಾಂ ಪಾತಕಂ ಪರಿಕೀರ್ತಿತಮ್॥

"ಪುಸ್ತಕದಲ್ಲಿ ಬರೆಯಲಾಗಿರುವ ಮಂತ್ರಗಳನ್ನು ನೋಡಿ ಯಾರು ಜಪಿಸುತ್ತಾರೆಯೋ ಅವರಿಗೆ ಬ್ರಹ್ಮಹತ್ಯೆಗೆ ಸಮಾನವಾದ ಪಾತಕವು ಬರುವುದೆಂದು ಹೇಳಲಾಗಿದೆ" -ಎಂಬ ವಚನದಂತೆ ದೋಷವಾಗುತ್ತದೆ. ಆ ಕಾರಣದಿಂದ ಮಂತ್ರವನ್ನು ಜಪಿಸುವುದಕ್ಕೆ ಮೊದಲು ಪ್ರತಿಯೊಬ್ಬರೂ ಗುರುವಿನಿಂದ ಮಂತ್ರದೀಕ್ಷೆಯನ್ನು ಪಡೆದಿರಲೇಬೇಕು.

ಜಪ ಮತ್ತು ಅದರ ಪ್ರಕಾರಗಳು

"ತಜ್ಜಪಸ್ತದರ್ಥಭಾವನಮ್"[೬೦೭] (ಮಂತ್ರವನ್ನು ಜಪಿಸುತ್ತಾ, ಅದರ ಅರ್ಥವನ್ನು ಭಾವಿಸುವುದು) ಎಂಬ ಪತಂಜಲಿ ಮಹರ್ಷಿಗಳ ಉಕ್ತಿಯ ಮೇರೆಗೆ ಅರ್ಥಾನುಸಂಧಾನದ ಮೂಲಕ ಮತ್ತೆ ಮತ್ತೆ ಮಂತ್ರೋಚ್ಚಾರಣೆ ಮಾಡುವುದೇ ಜಪ.

---

[೬೦೫] ಓಂ ಹ್ರಾಂ ಹ್ರೀಂ ಹ್ರೂಂ ಹ್ರೈಂ ನಮಃ ಶಿವಾಯ। (ಪ್ರಸಾದ ಪಂಚಾಕ್ಷರಃ)
ಓಂ ಹ್ರಾಂ ಹ್ರೀಂ ಹ್ರೂಂ ನಮಃ ಶಿವಾಯ। (ಮಾಯಾ ಪಂಚಾಕ್ಷರಃ)
ಓಂ ಹ್ರಾಂ ಹ್ರೀಂ ನಮಃ ಶಿವಾಯ। (ಸೂಕ್ಷ್ಮ ಪಂಚಾಕ್ಷರ)
ಓಂ ಹ್ರಾಂ ಹ್ರೀಂ ನಮಃ ಶಿವಾಯ। (ಸ್ಥೂಲ ಪಂಚಾಕ್ಷರ)
ಓಂ ನಮಃ ಶಿವಾಯ। (ಮೂಲ ಪಂಚಾಕ್ಷರ)

[೬೦೬] ಚ.ಜ್ಞಾ, ಕ್ರಿ.ಪಾ, ೮.೪೮

[೬೦೭] ಯೋ.ಸೂ, ೧.೨೮

ಆದುದರಿಂದಲೇ ಶ್ರೀ ಜಗದ್ಗುರು ರೇಣುಕಾಚಾರ್ಯರು- "ಜಪಃ ಪಂಚಾಕ್ಷರಾಭ್ಯಾಸಃ ಪ್ರಣವಾಭ್ಯಾಸ ಏವ ವಾ"[೬೦೮] (ಪಂಚಾಕ್ಷರ ಮಂತ್ರಾಭ್ಯಾಸವಾಗಲಿ ಅಥವಾ ಓಂಕಾರಾಭ್ಯಾಸವಾಗಲಿ ಜಪವೆನಿಸುತ್ತದೆ) ಪುನಃ ಪುನಃ ಪಂಚಾಕ್ಷರ-ಷಡಕ್ಷರಮಂತ್ರಗಳ ಅಭ್ಯಾಸವೇ ಜಪವೆಂದು ಉಪದೇಶಿಸಿದ್ದಾರೆ. ನಿರಂತರವಾಗಿ ಮಾಡಲ್ಪಡುವ ಈ ಮಂತ್ರಜಪದ ಅಭ್ಯಾಸವೇ 'ಜಪಯಜ್ಞ' ಎಂದು ಹೇಳಲಾಗಿದೆ. ವೀರಶೈವರ ಪಂಚಯಜ್ಞಗಳ[೬೦೯] ಪೈಕಿ ಜಪಯಜ್ಞವೂ ಒಂದಾಗಿದೆ. ಪ್ರಾಣಹಿಂಸೆಯ ದೋಷದಿಂದ ದೂಷಿತವಾದ ಸೋಮಯಾಗಾದಿಗಳಿಗಿಂತಲೂ ಇದು ಶ್ರೇಷ್ಠವಾದುದು. ಆದುದರಿಂದಲೇ ಗೀತೆಯಲ್ಲಿ ಭಗವಾನ್ ಕೃಷ್ಣನು- "ಯಜ್ಞಾನಾಂ ಜಪಯಜ್ಞೋಽಸ್ಮಿ"[೬೧೦] ಎಂದು ಹೇಳಿರುತ್ತಾನೆ. ಜಪವು ವಾಚಿಕ, ಉಪಾಂಶು ಮತ್ತು ಮಾನಸಿಕ -ಎಂದು ಮೂರು ವಿಧವಾಗಿದೆ. ಇಲ್ಲಿ ಆ ವಿಧಿಗನುಸಾರವಾಗಿ ಜಪಕಾಲದಲ್ಲಿ ತಂತ್ರಶಾಸ್ತ್ರದಲ್ಲಿ ಹೇಳಿರುವ,

> ಅತಿಹ್ರಸ್ವೋ ವ್ಯಾಧಿಹೇತುರತಿದೀರ್ಘೋ ವಸುಕ್ಷಯಃ।
> ಅಕ್ಷರಾಕ್ಷರಸಂಯುಕ್ತಂ ಜಪೇನ್ಮೌಕ್ತಿಕಹಾರವತ್॥[೬೧೧]

"ಅತಿ ಹ್ರಸ್ವವಾಗಿ ಜಪಿಸಿದರೆ ಕಾಯಿಲೆ, ಅತಿ ದೀರ್ಘವಾಗಿದ್ದರೆ ಸಂಪತ್ತಿನ ನಾಶ. ಆದುದರಿಂದ ಜಪಮಾಡುವಾಗ ಮುತ್ತಿನಹಾರದಂತೆ ಅಕ್ಷರಗಳು ಒಂದಕ್ಕೊಂದು ಕೂಡಿಕೊಂಡಿರಬೇಕು" ಎಂಬ ಉಕ್ತಿಯ ಮೇರೆಗೆ ಅತೀಹ್ರಸ್ವವೂ, ದೀರ್ಘವೂ ಆಗಿರದ ರೀತಿಯಲ್ಲಿ ಮಂತ್ರವನ್ನುಚ್ಚರಿಸಬೇಕು.

ವಾಚಿಕಜಪ

ಉದಾತ್ತ, ಅನುದಾತ್ತ ಮತ್ತು ಸ್ವರಿತ ಸ್ವರಗಳಿಂದ ಸ್ಪಷ್ಟವಾಗಿ ವರ್ಣಗಳ ಉಚ್ಚಾರ ಮಾಡುವವನು ಪಕ್ಕದಲ್ಲಿರುವವರ ಕಿವಿಗೆ ಸ್ಪಷ್ಟವಾಗಿ ಕೇಳಿಸುವಂತೆ ಮಂತ್ರದ ಅಭ್ಯಾಸವನ್ನು ಮಾಡುವುದೇ ವಾಚಿಕ ಜಪವೆಂದು ಹೇಳಲ್ಪಟ್ಟಿದೆ. ಪೂರ್ವೋಕ್ತ ತ್ರಿವಿಧ ಜಪಗಳಲ್ಲಿ ಈ ಜಪವು ಕನಿಷ್ಠವಾದರೂ ಮಾನಸಿಕ ಹಾಗೂ ದೈಹಿಕ ಪಾಪಗಳ ನಾಶಕವಾಗಿರುವುದು.[೬೧೨] ಇದರ ನಿರಂತರ ಅಭ್ಯಾಸದಿಂದ ಅತಿ ಚಂಚಲಚಿತ್ತದ

---

[೬೦೮] ಸಿ.ಶಿ, ೯.೨೩

[೬೦೯] ಪಂಚಧಾ ಕಥ್ಯತೇ ಸದ್ಭಿಸ್ತದೇವ ಭಜನಂ ಪುನಃ।
ತಪಃ ಶರ್ಮ ಜಪೋ ಧ್ಯಾನಂ ಜ್ಞಾನಂ ಚೇತ್ಯನುಪೂರ್ವಕಮ್॥ -ಸಿ.ಶಿ, ೯-೨೧

[೬೧೦] ಭಗವದ್ಗೀತೆ, ೧೦.೨೫

[೬೧೧] ಹಿಂದೀ ವಿಶ್ವಕೋಶ, ಪು. ೧೭೫

[೬೧೨] ಯದುಚ್ಚನೀಚಸ್ವರಿತೈಃ ಶಬ್ದೈಃ ಸ್ಪಷ್ಟಪದಾಕ್ಷರೈಃ।
ಮಂತ್ರಮುಚ್ಚಾರಯೇದ್ ವಾಚಾ ವಾಚಿಕೋಽಯಃ ಜಪಃ ಸ್ಮೃತಃ॥
-ಚ.ಜ್ಞಾ, ಕ್ರಿ.ಪಾ, ೮.೫೭

ಶ್ರೂಯತೇ ಯಸ್ತು ಪಾರ್ಶ್ವಸ್ಥೈರ್ಯಥಾ ವರ್ಣಸಮನ್ವಯಃ।
ವಾಚಿಕಃ ಸ ತು ವಿಜ್ಞೇಯಃ ಸರ್ವಪಾಪಪ್ರಭಂಜನಃ॥ -ಸಿ.ಶಿ, ೮.೨೭

ನಿಯಂತ್ರಣವಾಗುತ್ತದೆ. ಆದುದರಿಂದ ಆರಂಭಾವಸ್ಥೆಯಲ್ಲಿ ಜಪದ ಅಭ್ಯಾಸದಲ್ಲಿ ತೊಡಗುವವರು ವಾಚಿಕಜಪವನ್ನು ಆಶ್ರಯಿಸತಕ್ಕದ್ದು.

ಉಪಾಂಶುಜಪ

ನಾಲಿಗೆ ಮತ್ತು ತುಟಿಗಳನ್ನು ಸ್ವಲ್ಪಮಟ್ಟಿಗೆ ಅಲುಗಾಡಿಸುತ್ತಾ ತನಗೆ ಮಾತ್ರ ಕೇಳಿಸುತ್ತಿದ್ದು, ಹತ್ತಿರದಲ್ಲಿರುವ ಜನರಿಗೆ ಕೇಳಿಸದಂತೆ ಮಾಡುವ ಮಂತ್ರಾಭ್ಯಾಸವು ಉಪಾಂಶುಜಪವೆನಿಸುವುದು.[೬೧೩] ವಾಚಿಕಜಪಕ್ಕಿಂತ ಉತ್ಕೃಷ್ಟವೂ, ಮಾನಸಿಕ ಜಪಕ್ಕಿಂತ ಕನಿಷ್ಠವಾದ ಈ ಜಪವು ಮಧ್ಯಮಜಪವೆನಿಸಿದೆ. ಈ ಜಪದಿಂದ ಮಾನಸಿಕ ಸ್ಥೈರ್ಯವು ನಿಧಾನವಾಗಿ ಉಂಟಾಗುತ್ತದೆ.

ಮಾನಸಿಕಜಪ : ನಾಲಿಗೆ ಮತ್ತು ತುಟಿಗಳ ಚಲನೆಯ ಮಧ್ಯದಲ್ಲಿ ಮೆಲ್ಲನೆ ಪ್ರತಿಯೊಂದು ವರ್ಣ ಹಾಗೂ ಪ್ರತಿಯೊಂದು ಪದದ ಅರ್ಥಾನುಚಿಂತನೆಯನ್ನು ಮನಸ್ಸಿನಲ್ಲಿ ಮಾಡುವ ಮಂತ್ರಾಭ್ಯಾಸವೇ ಮಾನಸಿಕಜಪ.[೬೧೪] ಇದು ಸರ್ವೋತ್ಕೃಷ್ಟವಾದ ಜಪ. ಚಂದ್ರಜ್ಞಾನಾಗಮದಲ್ಲಿ ಹೀಗೆ ನಿರೂಪಿಸಲಾಗಿದೆ-

ವಾಚಿಕಸ್ತ್ವೇಕ ಏವ ಸ್ಯಾದುಪಾಂಶುಃ ಶತಮುಚ್ಯತೇ।
ಸಹಸ್ರಂ ಮಾನಸಂ ಪ್ರೋಕ್ತಂ ಸಗರ್ಭಸ್ತುಚ್ಛತಾಧಿಕಃ॥[೬೧೫]

"ವಾಚಿಕ ಜಪದ ಫಲವು ಒಂದಾದರೆ, ಉಪಾಂಶುಜಪದ ಫಲವು ಅದಕ್ಕಿಂತಲೂ ನೂರು ಪಾಲು ಹೆಚ್ಚು, ಮಾನಸಜಪದ ಫಲವು ಉಪಾಂಶುಜಪಕ್ಕಿಂತಲೂ ಸಾವಿರ ಪಾಲು ಅಧಿಕ ಮತ್ತು ಸಗರ್ಭಜಪವು ನೂರು ಪಾಲು ಅಧಿಕವೆಂದು ಹೇಳಲ್ಪಟ್ಟಿದೆ."

ಮನುವೂ ಸಹ-

ವಿಧಿಯಜ್ಞಾಜ್ಜಪೋ ಯಜ್ಞೋ ವಿಶಿಷ್ಟೋ ದಶಭಿರ್ಗುಣೈಃ।
ಉಪಾಂಶುಃ ಸ್ಯಾಚ್ಛತಗುಣಃ ಸಾಹಸ್ರೋ ಮಾನಸಃ ಸ್ಮೃತಃ॥[೬೧೬]

---

[೬೧೩] ಜಿಹ್ವಾಮಾತ್ರಪರಿಸ್ಪಂದಾದೀಷದುಚ್ಚಾರಿತೋಽಪಿ ವಾ।
ಅಪರೈರಶ್ರುತಃ ಸ್ವೇನ ಶ್ರುತಶ್ಚೋಪಾಂಶುರುಚ್ಯತೇ॥ -ಚ.ಜ್ಞಾ, ಕ್ರಿ.ಪಾ, ಅ.೫೮
ಈಶತ್ ಸ್ಪೃಷ್ಟಾಽಧರಪುಟಂ ಯೋ ಮಂದಮಭಿಧೀಯತೇ।
ಪಾರ್ಶ್ವಸ್ಥೈರಶ್ರುತಃ ಸೋಽಯಮುಪಾಂಶುಃ ಪರಿಕೀರ್ತಿತಃ॥ -ಸಿ.ಶಿ, ಅ.೨೮

[೬೧೪] ಧಿಯಾ ಯದಕ್ಷರಶ್ರೇಣ್ಯಾ ವರ್ಣಾದ್ವರ್ಣಂ ಪದಾತ್ಪದಮ್।
ಶಬ್ದಾರ್ಥಚಿಂತನಂ ಭೂಯಃ ಕಥ್ಯತೇ ಮಾನಸೋ ಜಪಃ॥
-ಚ.ಜ್ಞಾ, ಕ್ರಿ.ಪಾ, ಅ.೫೯
ಅಸ್ಪೃಷ್ಟಾಽಧರಮಸ್ಪಂದಿ ಜಿಹ್ವಾಗ್ರಂ ಯೋಽಂತರಾತ್ಮನಾ।
ಭಾವ್ಯತೇ ವರ್ಣರೂಪೇಣ ಸ ಮಾನಸ ಇತಿ ಸ್ಮೃತಃ॥ -ಸಿ.ಶಿ, ಅ.೨೯

[೬೧೫] ಚ.ಜ್ಞಾ, ಕ್ರಿ.ಪಾ, ಅ.೬೦

[೬೧೬] ಮ.ಸ್ಮೃ, ೨.೮೫

"ವಿಧಿಯಜ್ಞಕ್ಕಿಂತಲೂ ಜಪಯಜ್ಞವು ಹತ್ತು ಪಾಲು, ಉಪಾಂಶು ನೂರು ಪಾಲು ಮತ್ತು ಮಾನಸವು ಸಾವಿರ ಪಾಲು ಶ್ರೇಷ್ಠವೆಂದು ಹೇಳಲಾಗಿದೆ."

ನಿರಂತರವಾಗಿ ಈ ಮಾನಸಿಕ ಜಪವನ್ನು ಅಭ್ಯಾಸ ಮಾಡುವುದರಿಂದ ಮನಸ್ಸಿನ ಶುದ್ಧಿಯಾಗುವುದಲ್ಲದೆ ಶಿವ-ಜೀವರ ಸಾಮರಸ್ಯದ ಜ್ಞಾನವೂ ಉಂಟಾಗುತ್ತದೆ ಮತ್ತು ಸಾಧಕನು ಸಂಸಾರಬಂಧದಿಂದ ಮುಕ್ತನಾಗುತ್ತಾನೆ.

ವಾಚಿಕ, ಉಪಾಂಶು ಮತ್ತು ಮಾನಸಿಕ ಎಂಬ ಮೂರು ಬಗೆಯ ಜಪಗಳು ಮತ್ತೆ ಅಗರ್ಭ, ಸಗರ್ಭ ಮತ್ತು ಸಧ್ಯಾನ ಎಂದು ಮೂರು ವಿಧವಾಗುತ್ತವೆ. ಅವುಗಳಲ್ಲಿ ಪ್ರಾಣಾಯಾಮರಹಿತವಾದದ್ದು ಅಗರ್ಭ,[೬೧೭] ಪ್ರಾಣಾಯಾಮಸಹಿತವಾದದ್ದು ಸಗರ್ಭ[೬೧೮] ಮತ್ತು ಶಿವಧ್ಯಾನ ಸಹಿತವಾದದ್ದು ಸಧ್ಯಾನ ಜಪವೆಂದು ತಿಳಿಯಬೇಕು. ಸಗರ್ಭ ಜಪಾಭ್ಯಾಸ ಮಾಡುವಾಗ ನಲವತ್ತು ಸಲ, ಐದು ಸಲ ಅಥವಾ ಮೂರು ಸಲ ಪ್ರಾಣಾಯಾಮವನ್ನು ಮಾಡಬೇಕು.[೬೧೯] ಇವುಗಳಲ್ಲಿ ಉತ್ತರೋತ್ತರವಾದದ್ದು ಶ್ರೇಷ್ಠ ವಾದದ್ದು. ಅದನ್ನು ಚಂದ್ರಜ್ಞಾನಾಗಮವು ಹೀಗೆ ನಿರೂಪಿಸುತ್ತದೆ-

ಅಗರ್ಭಂ ವಾ ಸಗರ್ಭಂ ವಾ ಸಗರ್ಭಸ್ತು ಪ್ರಶಸ್ಯತೇ।
ಸಗರ್ಭಾದಪಿ ಸಾಹಸ್ರಂ ಸಧ್ಯಾನೋ ಜಪ ಉಚ್ಯತೇ॥[೬೨೦]

"ಅಗರ್ಭಜಪಕ್ಕಿಂತಲೂ ಸಗರ್ಭವು ಶ್ರೇಷ್ಠವಾದದ್ದು. ಸಗರ್ಭಕ್ಕಿಂತಲೂ ಸಧ್ಯಾನ ಜಪವು ಸಾವಿರ ಪಾಲು ಶ್ರೇಷ್ಠವೆಂದು ಹೇಳಲ್ಪಟ್ಟಿದೆ." ಆದುದರಿಂದ ಸಗರ್ಭ ಮತ್ತು ಸಧ್ಯಾನ ಜಪವನ್ನು ಅಭ್ಯಾಸಮಾಡಬೇಕು.

ಜಪವಿಧಿ: ಜಪಾನುಷ್ಠಾನವನ್ನು ಮಾಡುವಾಗ ಶಾಸ್ತ್ರೋಕ್ತವಿಧಿಯನ್ನು ಬಿಟ್ಟು ಮನಸ್ಸಿಗೆ ತೋರಿದಂತೆ ಆಚರಿಸಿದರೆ ಸಮುಚಿತವಾದ ಪ್ರಯೋಜನವು ಸಿದ್ಧಿಸುವುದಿಲ್ಲ ಎನ್ನುವ ಕಾರಣದಿಂದ ಆಗಮಾದಿ ಶಾಸ್ತ್ರಗಳಲ್ಲಿ ಸ್ಥಾನ, ಆಸನ, ದಿಕ್ಕು, ಪ್ರಾಣಾಯಾಮ, ನ್ಯಾಸ ಮತ್ತು ದೇವತಾದಿಗಳ ವಿವರಣೆಯು ನಿರೂಪಿಸಲ್ಪಟ್ಟಿದೆ. ಅದನ್ನು ಸಂಕ್ಷಿಪ್ತವಾಗಿ ಇಲ್ಲಿ ವಿವರಿಸಲಾಗುವುದು.

ಸಂಸಾರ ಸಾಗರದ ಭಯವನ್ನು ನಿವಾರಿಸುವ ಈ ಪಂಚಾಕ್ಷರ ಮಹಾಮಂತ್ರಕ್ಕೆ ವಾಮದೇವನೇ ಋಷಿ, ಪಂಕ್ತಿಯೇ ಛಂದಸ್ಸು, ಶ್ರೀ ಸದಾಶಿವನೇ ದೇವತೆ, ಓಂಕಾರವೇ ಬೀಜ, ಉಮೆಯೇ ಶಕ್ತಿ ಮತ್ತು ಶಿವನೇ ಕೀಲಕ ಎಂದು ತಿಳಿಯತಕ್ಕದ್ದು. ಚಂದ್ರಜ್ಞಾನಾಗಮದಲ್ಲಿ-

---

[೬೧೭] ಪ್ರಾಣಾಯಾಮೇನ ರಹಿತೋ ಹ್ಯಗರ್ಭೋ ಜಪ ಉಚ್ಯತೇ। -ಚಂ.ಜ್ಞಾ, ಕ್ರಿ.ಪಾ, ೮.೬೦

[೬೧೮] ಪ್ರಾಣಾಯಾಮ ಸಮಾಯುಕ್ತಃ ಸಗರ್ಭೋ ಜಪ ಉಚ್ಯತೇ॥ -ಚಂ.ಜ್ಞಾ, ಕ್ರಿ.ಪಾ, ೮.೬೧

[೬೧೯] ಚತ್ವಾರಿಂಶತ್ಸಮಾವೃತ್ತಿಂ ಪ್ರಾಣಾಯಾಮಂ ತು ಸಂಸ್ಮರೇತ್।
ಮಂತ್ರಂ ಮಂತ್ರಾರ್ಥವಿಧಿಮಾನಶಕ್ತಃ ಶಕ್ತಿತೋ ಜಪೇತ್।
ಪಂಚಕಂ ತ್ರಿಕಮೇಕಂ ವಾ ಪ್ರಾಣಾಯಾಮಂ ಸಮಾಚರೇತ್॥ -ಚಂ.ಜ್ಞಾ, ೮.೬೨-೩

[೬೨೦] ಚಂ.ಜ್ಞಾ, ೮.೬೩-೬೪

ವಾಮದೇವ ಋಷಿಶ್ಚಾಸ್ಯ ಪಂಕ್ತಿಶ್ಛಂದ ಉದಾಹೃತಮ್।
ದೇವತಾ ಚ ಶಿವಃ ಸಾಕ್ಷಾತ್ ಪ್ರಣವೋ ಬೀಜ ಉಚ್ಯತೇ॥
ಉಮಾ ಶಕ್ತಿರಿತಿ ಪ್ರೋಕ್ತಾ ನ್ಯಾಸಶ್ಚೈವ ಷಡಕ್ಷರೈಃ॥[೬೨೧]

ಈ ಮಹಾಮಂತ್ರದ ಜಪವನ್ನು ಆರಂಭಿಸುವುದಕ್ಕೆ ಮೊದಲು ಮೇಲೆ ಹೇಳಿದ ಋಷ್ಯಾದಿಗಳನ್ನು ತನ್ನ ಶರೀರದ ಬೇರೆ ಬೇರೆ ಸ್ಥಾನಗಳಲ್ಲಿ ಭಾವಿಸಿಕೊಳ್ಳುವುದೇ ನ್ಯಾಸವೆಂದು ಹೇಳಲ್ಪಟ್ಟಿದೆ. ನ್ಯಾಸ ಪ್ರಕಾರವು ಈ ರೀತಿಯಾಗಿದೆ- ತನ್ನ ಬಲಗೈ ಮುಷ್ಟಿಯನ್ನು ಬಿಗಿದು ಅದರ ಹೆಬ್ಬೆರಳಿನ ತುದಿಯಿಂದ ಮಸ್ತಕವನ್ನು ಮುಟ್ಟಿ ಅಲ್ಲಿ ಮಂತ್ರದ್ರಷ್ಟಾರನಾದ ಋಷಿಯನ್ನು, ಮುಷ್ಟಿಯನ್ನು ಬಿಚ್ಚಿ ಹೆಬ್ಬೆರಳು ಹಾಗೂ ತೋರುಬೆರಳಿನಿಂದ ಮುಖ(ಬಾಯಿ)ವನ್ನು ಮುಟ್ಟಿ ಛಂದಸ್ಸನ್ನು, ಹೆಬ್ಬೆರಳು ಮತ್ತು ಮಧ್ಯದ ಬೆರಳಿನಿಂದ ಹೃದಯವನ್ನು ಮುಟ್ಟಿ ದೇವತೆಯನ್ನು, ಹೆಬ್ಬೆರಳು ಮತ್ತು ಅನಾಮಿಕೆಗಳಿಂದ ನಾಭಿಯನ್ನು ಮುಟ್ಟಿ ಬೀಜವನ್ನು, ಹೆಬ್ಬೆರಳು ಮತ್ತು ಕಿರುಬೆರಳಿನಿಂದ ಗುಹ್ಯವನ್ನು ಮುಟ್ಟಿ ಶಕ್ತಿಯನ್ನು ಮತ್ತು ಎರಡೂ ಕೈಗಳ ಕಿರುಬೆರಳುಗಳನ್ನು ಹೊರತು ಪಡಿಸಿ ಮುಷ್ಟಿಗಳನ್ನು ಬಿಗಿದು ಕ್ರಮವಾಗಿ ಬಲಮುಷ್ಟಿಯನ್ನು ಎಡದಿಂದ ಬಲಕ್ಕೆ, ಎಡಮುಷ್ಟಿಯನ್ನು ಬಲದಿಂದ ಎಡಕ್ಕೆ ಮಸ್ತಕದ ಪರಿಕ್ರಮವನ್ನು ಮಾಡಿ ಬಲ ತೋರುಬೆರಳಿನಿಂದ ಬಲಪಾದದ ಅಂಗುಷ್ಠವನ್ನು, ಎಡ ತೋರುಬೆರಳಿನಿಂದ ಎಡ ಪಾದದ ಅಂಗುಷ್ಠವನ್ನು ಸ್ಪರ್ಶಿಸುತ್ತಾ ಎರಡೂ ಪಾದಗಳಲ್ಲಿ ಕೀಲಕದ ಋಷ್ಯಾದಿ ನ್ಯಾಸವನ್ನು ತನ್ನ ಅಂಗಗಳಲ್ಲಿ ಭಾವಿಸಬೇಕು. ಲಿಂಗಧಾರಣಚಂದ್ರಿಕೆಯಲ್ಲಿ-

ಋಷಿಂ ಮೂರ್ಧ್ನಿ ಮುಖೇ ಛಂದಃ ದೇವತಾಂ ಹೃದಿ ವಿನ್ಯಸೇತ್।
ಆಧಾರೇ ಬೀಜಶಕ್ತಿಂ ಚ ಪಾದಯೋಃ ಕೀಲಕಂ ನ್ಯಸೇತ್॥[೬೨೨]

"ಮಸ್ತಕದಲ್ಲಿ ಋಷಿಯನ್ನು, ಮುಖದಲ್ಲಿ ಛಂದಸ್ಸು, ಹೃದಯದಲ್ಲಿ ದೇವತೆ, ನಾಭಿಯಲ್ಲಿ ಬೀಜ, ಗುಹ್ಯದಲ್ಲಿ ಶಕ್ತಿ ಮತ್ತು ಪಾದಗಳಲ್ಲಿ ಕೀಲಕವನ್ನು ನ್ಯಾಸಮಾಡಬೇಕು."

ಈ ನ್ಯಾಸ ಪ್ರಕ್ರಿಯೆಯು ಕರನ್ಯಾಸ, ದೇಹನ್ಯಾಸ ಮತ್ತು ಅಂಗನ್ಯಾಸವೆಂದು ಮೂರು ವಿಧವಾಗಿದೆ. ಇದು ಮತ್ತೆ ಆಶ್ರಮಭೇದದಿಂದ ಸೃಷ್ಟಿನ್ಯಾಸ, ಸ್ಥಿತಿನ್ಯಾಸ ಮತ್ತು ಸಂಹಾರನ್ಯಾಸವೆಂದು ಮೂರು ವಿಧವಾಗಿದೆ. ಶ್ರೀ ನೀಲಕಂಠ ಶಿವಾಚಾರ್ಯರು- ಸೃಷ್ಟಿನ್ಯಾಸವು ಗೃಹಸ್ಥರಿಗೆ, ಸ್ಥಿತಿನ್ಯಾಸವು ಬ್ರಹ್ಮಚಾರಿಗಳಿಗೆ ಮತ್ತು ಸಂಹಾರನ್ಯಾಸವು ಸನ್ಯಾಸಿಗಳಿಗೆ ಹಾಗೂ ವಾನಪ್ರಸ್ಥರಿಗೆ ನಿರೂಪಿತವಾಗಿವೆ. ಆದರೆ ವೀರಶೈವ ಸಿದ್ಧಾಂತದಲ್ಲಿ ಈ ರೀತಿಯಾಗಿ ಆಶ್ರಮಭೇದದಿಂದ ನ್ಯಾಸಭೇದವನ್ನು ಮಾಡಿರುವುದಿಲ್ಲ. ತಮ್ಮ ಇಚ್ಛಾನುಸಾರವಾಗಿ ಯಾವುದಾದರೊಂದು ನ್ಯಾಸವನ್ನು ವೀರಶೈವರು ಸ್ವೀಕರಿಸ ಬೇಕೆಂದು ಉಪದೇಶಿಸಿದ್ದಾರೆ.[೬೨೩] ಈ ನ್ಯಾಸದ ವಿಷಯದಲ್ಲಿ ಮಂತ್ರದೀಕ್ಷೆಯ ಸಂದರ್ಭದಲ್ಲಿ

---

೬೨೧. ಚಂ.ಜ್ಞಾ, ೮.೧೧

೬೨೨. ಲಿಂ.ಚ, ಪು. ೨೩೪

೬೨೩. ಆ.ವಿ, ಪು. ೯೫ (ಲಿಂ. ಶ್ರೀ ಶಂಭುಲಿಂಗ ಶಿವಾಚಾರ್ಯರು, ಬಿಜಾಪುರ)

ತಮ್ಮ ತಮ್ಮ ಗುರುಗಳು ಉಪದೇಶಿಸಿದ ಮಾರ್ಗವನ್ನೇ ಅನುಸರಿಸುವುದು ಒಳ್ಳೆಯದು. ಹೀಗೆ ನ್ಯಾಸಪದ್ಧತಿಯನ್ನು ಸರಿಯಾಗಿ ತಿಳಿದು ವಿಧಿವತ್ತಾಗಿ ಜಪಿಸಬೇಕು.

ಜಪಯೋಗ್ಯ ಸ್ಥಾನಗಳು: ಚಂದ್ರಜ್ಞಾನಾಗಮವು ಜಪ ಮಾಡಲು ಅನೇಕ ಸ್ಥಾನಗಳನ್ನು ಪ್ರತಿಪಾದಿಸಿದೆ. ಅವುಗಳೆಂದರೆ- ಮನೆ, ಕೊಟ್ಟಿಗೆ, ಪುಣ್ಯಾರಣ್ಯ, ಉದ್ಯಾನ, ಸುಂದರವಾದ ಪರ್ವತ, ನದೀತೀರ, ದೇವಾಲಯ, ಅವುಗಳಲ್ಲಿಯೂ ಸೂರ್ಯ, ಅಗ್ನಿ, ಗುರು, ಚಂದ್ರ, ದೀಪ, ನೀರು, ಬ್ರಾಹ್ಮಣ ಮತ್ತು ಗೋವುಗಳ ಸಾನ್ನಿಧ್ಯದಲ್ಲಿ ಮಾಡುವ ಜಪವು ಕ್ರಮವಾಗಿ (ಉತ್ತರೋತ್ತರವಾಗಿ) ನೂರು, ಸಾವಿರ, ಹತ್ತು ಸಾವಿರ, ಲಕ್ಷ, ದಶಲಕ್ಷ ಹಾಗೂ ಕೋಟಿ ಹೆಚ್ಚಿನ ಫಲದಾಯಕಗಳಾಗುತ್ತವೆ.[೬೨೪] ಪುನಃ ಅಲ್ಲಿಯೇ-

ಯದಿಷ್ಟಲಿಂಗಂ ಸಂಪಶ್ಯನ್ ವಾಮಹಸ್ತಸ್ಥಿತಂ ಪರಮ್।
ಜಪತೇ ತತ್ಫಲಂ ವಕ್ತುಂ ನ ಮಯಾ ಶಕ್ಯತೇ ಗುರೋ॥[೬೨೫]

ಎಂದು ನಿರೂಪಿಸಿರುವ ಕಾರಣ ಮೇಲೆ ಹೇಳಿದ ಯಾವುದೇ ಸ್ಥಾನದಲ್ಲಿ ಕುಳಿತು ತಮ್ಮ ವಾಮಹಸ್ತ ಪೀಠದಲ್ಲಿರುವ ಇಷ್ಟಲಿಂಗದ ಸಾಕ್ಷಿಯಲ್ಲಿ ಮಾಡಿದ ಜಪವು ಅನಂತ ಫಲದಾಯಕವೆಂದು ತಿಳಿಯಬೇಕು. ಆದುದರಿಂದ ವೀರಶೈವರು ಯಾವಾಗಲೂ ಇಷ್ಟಲಿಂಗದ ಸಾಕ್ಷಿಯಲ್ಲಿ ಜಪಮಾಡಬೇಕು.

ಜಪಕ್ಕೆ ಉಪಯುಕ್ತವಾದ ಆಸನ ಮತ್ತು ದಿಕ್ಕುಗಳು

ಮೇಲೆ ಹೇಳಿದ ಯಾವುದಾದರೊಂದು ಸ್ಥಾನದಲ್ಲಿ ಆಸನಕ್ಕಾಗಿ[೬೨೬] ಕೃಷ್ಣಾಜಿನ, ವ್ಯಾಘ್ರಚರ್ಮ, ಕುಶಾಸನ ಮತ್ತು ಕಂಬಲಾಸನ ಪೈಕಿ ಯಾವುದಾದರೊಂದು ಆಸನವನ್ನು ಹಾಸಿ, ಅದರ ಮೇಲೆ ಸುಖಾಸನ ಅಥವಾ ಸಿದ್ಧಾಸನದಲ್ಲಿ ಪೂರ್ವ ಅಥವಾ ಉತ್ತರ ದಿಕ್ಕಿಗೆ ಮುಖಮಾಡಿಕೊಂಡು[೬೨೭] ಕುಳಿತು ಜಪಾಭ್ಯಾಸವನ್ನು ಮಾಡಬೇಕು. ಇದೇ ಶಾಸ್ತ್ರೋಕ್ತ ವಿಧಾನವು.

ಜಪಕ್ಕೆ ಉಪಯೋಗಿಸುವ ಮಾಲೆಗಳು

ಪಂಚಾಕ್ಷರ ಮಹಾಮಂತ್ರದ ಜಪಾಭ್ಯಾಸಕ್ಕಾಗಿ ಅಂಗುಲಿರೇಖಾ (ಬೆರಳಿನ ರೇಖೆಗಳು), ಪುತ್ರಜೀವ, ಶಂಖಮಣಿ, ಹವಳ, ಸ್ಫಟಿಕ, ಮುತ್ತು, ಪದ್ಮಾಕ್ಷ (ತಾವರೆ ಬೀಜ), ಸುವರ್ಣಮಣಿ, ಕುಶಗ್ರಂಥಿ (ದರ್ಬೆಯ ಗಂಟು) ಮತ್ತು ರುದ್ರಾಕ್ಷಗಳ

---

[೬೨೪] ಚ.ಜ್ಞಾ, ಕ್ರಿ.ಪಾ, ಅ.೭೨, ೭೩,೭೫

[೬೨೫] ಚ.ಜ್ಞಾ, ಅ.೭೪

[೬೨೬] ಕೃಷ್ಣಾಜಿನೇ ಭವೇನ್ಮುಕ್ತಿರ್ಮೋಕ್ಷಶ್ರೀರ್ವ್ಯಾಘ್ರಚರ್ಮಣಿ।
ಕುಶಾಸನೇ ಜ್ಞಾನಸಿದ್ಧಿಃ ಸರ್ವಸಿದ್ಧಿಸ್ತು ಕಂಬಲೇ॥ -ಚ.ಜ್ಞಾ, ಅ.೫೩

[೬೨೭] ಪ್ರಾಙ್ಮುಖೋದಙ್ಮುಖೋ ವಾಪಿ ಮೌನೀ ಚೈಕಾಗ್ರಮಾನಸಃ।
ತತ್ಪೂರ್ವಾಭಿಮುಖಂ ವಶ್ಯಂ ದಕ್ಷಿಣಂ ಚಾಭಿಚಾರಕಮ್।
ಪಶ್ಚಿಮಂ ಧನದಂ ವಿದ್ಯಾದುತ್ತರಂ ಶಾಂತಿದಂ ಭವೇತ್॥ -ಚ.ಜ್ಞಾ, ಅ.೭೬

ಮಾಲೆಗಳು ಪ್ರಶಸ್ತವಾದವುಗಳು. ಇವುಗಳಲ್ಲಿಯೂ ಹಿಂದು ಹಿಂದಿನಕ್ಕಿಂತಲೂ ಮುಂದಿನ ಮಾಲೆಗಳು ಶ್ರೇಷ್ಠವಾದವುಗಳು. ಅನಂತಫಲದಾಯಕವಾದ ಕಾರಣ ರುದ್ರಾಕ್ಷ ಮಾಲೆಯು ಸರ್ವಶ್ರೇಷ್ಠವಾದುದು. ರುದ್ರಾಕ್ಷಮಾಲೆಗಳ ಪೈಕಿ ಮೂವತ್ತು ರುದ್ರಾಕ್ಷಗಳ ಮಾಲೆಯಿಂದ ಧನಪ್ರಾಪ್ತಿ, ಇಪ್ಪತ್ತೇಳು ರುದ್ರಾಕ್ಷಗಳ ಮಾಲೆಯಿಂದ ಪುಷ್ಟಿ ವೃದ್ಧಿ, ಇಪ್ಪತ್ತೈದು ಮಣಿಗಳ ಮಾಲೆಯಿಂದ ಮೋಕ್ಷಪ್ರಾಪ್ತಿ ಹಾಗೂ ಹದಿನೈದು ಮಣಿಗಳ ಮಾಲೆಯಿಂದ ಅಭಿಚಾರದ ಫಲಪ್ರಾಪ್ತಿಯಾಗುತ್ತದೆ.

ಈ ರೀತಿಯಾಗಿ ಮೇಲೆ ನಿರೂಪಿಸಿದ ಯಾವುದಾದರೂ ಒಂದು ಅಕ್ಷಮಾಲೆಯಿಂದ ಜಪವನ್ನು ಮಾಡುವಾಗ ಅಂಗುಷ್ಠದಿಂದ ಜಪ ಮಾಡಿದರೆ ಮೋಕ್ಷಪ್ರಾಪ್ತಿ, ತರ್ಜನಿಯಿಂದ ಶತ್ರುನಾಶ, ಮಧ್ಯಮಾದಿಂದ ಧನಪ್ರಾಪ್ತಿ, ಅನಾಮಿಕದಿಂದ ಶಾಂತಿಪ್ರಾಪ್ತಿ ಮತ್ತು ಕನಿಷ್ಠಿಕಾದಿಂದ ಆಕರ್ಷಣವು ಉಂಟಾಗುತ್ತದೆ.[೬೨೮] ಆ ಕಾರಣ ಆಯಾ ಫಲಗಳನ್ನು ಅರಿತು ಶ್ರೇಯೋಕಾಂಕ್ಷಿಗಳು ತಮಗೆ ಹೆಚ್ಚು ಪ್ರಯೋಜನವಾಗುವ ಮಾಲೆಯಿಂದ ಹಾಗೂ ಬೆರಳಿನಿಂದ ಜಪವನ್ನು ಮಾಡಬೇಕು.

ಜಪ ಮಾಡುವಾಗ ಪಾಲಿಸಬೇಕಾದ ನಿಯಮಗಳು

ಜಪಾಭ್ಯಾಸವನ್ನು ಮಾಡುವ ಸಾಧಕನು ಶರೀರದ ಮೇಲೆ ರುಮಾಲು-ಅಂಗಿಗಳನ್ನು ಧರಿಸಿಕೊಂಡು, ಬೆತ್ತಲೆಯಾಗಿ, ಕೂದಲನ್ನು ಇಳಿಬಿಟ್ಟುಕೊಂಡು, ಮುಖವನ್ನು ಮುಚ್ಚಿಕೊಂಡು, ಅಪವಿತ್ರನಾಗಿ, ಅಶುದ್ಧಿಯಿಂದ ಮತ್ತು ಮಾತನಾಡುತ್ತಾ ಎಂದೂ ಜಪವನ್ನು ಮಾಡಬಾರದು. ಇದೇ ರೀತಿಯಾಗಿ ಜಪಮಾಡುವಾಗ ಕಾಮ, ಕ್ರೋಧ, ಮದ, ಹಸಿವು, ಆಲಸ್ಯ, ಉಗುಳುವುದು, ಆಕಳಿಸುವುದು ಮತ್ತು ನಾಯಿ ಮೊದಲಾದ ಹೀನ ಪ್ರಾಣಿಗಳನ್ನು ನೋಡುವುದನ್ನು ವರ್ಜಿಸಬೇಕು. ಅಕಸ್ಮಾತ್ ಮೇಲೆ ಹೇಳಿದ ದೋಷಗಳು ಉಂಟಾದರೆ ಅದರ ಶಾಂತಿಗಾಗಿ ಆಚಮನ ಮಾಡಿ ಸಾಂಬನನ್ನು ಅಥವಾ ಶಿವನನ್ನು ಸ್ಮರಿಸಿ, ಸೂರ್ಯನ ದರ್ಶನ ಹಾಗೂ ಪ್ರಾಣಾಯಾಮವನ್ನು ಮಾಡಬೇಕು.

ಇದಲ್ಲದೆ ಊಟ ಮಾಡುತ್ತಾ, ಮಲಗಿ, ಹೋಗುತ್ತಾ, ಮೇಲೇಳುತ್ತಾ, ರತಿಕ್ರೀಡೆಯಲ್ಲಿ ನಿರತನಾಗಿದ್ದಾಗ ಮತ್ತು ಅಮಂಗಳಕರವಾದ ಸ್ಥಾನದಲ್ಲಿದ್ದಾಗ ಎಂದೂ ಜಪವನ್ನು ಮಾಡಬಾರದು. ಅಂತೆಯೇ ಕಾಲುಚಾಚಿದ್ದಾಗ, ರತಿಕ್ರೀಡೆಯಲ್ಲಿ ತೊಡಗಿದ್ದಾಗ ಹಾಗೂ ಚಿಂತಾಮಗ್ನನಾಗಿದ್ದಾಗ ಜಪವನ್ನು ಮಾಡಬಾರದು.[೬೨೯] ಮತ್ತು ಗುರುವು ಉಪದೇಶ ಮಾಡಿದ ಮಂತ್ರವು ಯಾವಾಗಲೂ ಗೋಪನೀಯವಾಗಿದ್ದು ಎಲ್ಲಿಯೂ ಯಾರಿಗೂ ಅದನ್ನು ಹೇಳಬಾರದು.[೬೩೦] ಜಪಮಾಡುವಾಗ ಅಕ್ಷರ

---

೬೨೮. ಚ.ಜ್ಞಾ, ಕ್ರಿ.ಪಾ, ೮.೬೫-೭೦

೬೨೯. ಚ.ಜ್ಞಾ, ಕ್ರಿ.ಪಾ, ೮.೭೭-೮೧

೬೩೦. ಚ.ಜ್ಞಾ, ಕ್ರಿ.ಪಾ, ೮.೮೨

ಲೋಪವುಂಟಾಗದಂತೆ ಎಚ್ಚರಿಕೆ ವಹಿಸಿ, ಶುದ್ಧವಾದ ಉಚ್ಚಾರಣೆಯಿಂದ ಪಂಚಾಕ್ಷರ ಮಂತ್ರವನ್ನು ಜಪಿಸಬೇಕು.

ಮಂತ್ರಕ್ಕೆ ಸಂಬಂಧಿಸಿದ ದೋಷಗಳು

ಮೇಲೆ ಹೇಳಿದ ಜಪಕಾಲದ ನಿಯಮಗಳೆಲ್ಲವನ್ನೂ ಸಾಧಕನು ಸರಿಯಾಗಿ ಪಾಲಿಸಬೇಕು. ಪಾಲಿಸದೆ ಇದ್ದಾಗ ಮೂಕ, ಸುಪ್ತ, ಮೃತ, ನಗ್ನ, ವೀರ್ಯಹೀನ, ವೃಥಾಫಲ, ಭುಜಂಗ, ಕೀಲಿತ ಮತ್ತು ಶೂನ್ಯ ಮೊದಲಾದ ದೋಷಗಳು ಸಂಭವಿಸುತ್ತವೆ. ಇವುಗಳಲ್ಲಿ ನ್ಯಾಸವಿಲ್ಲದೆ ಮಾಡಿದ ಜಪವು ಮೂಕ; ಆಸನವಿಲ್ಲದಿದ್ದರೆ ಸುಪ್ತ; ನಮಃ, ಸ್ವಾಹಾ, ವಷಟ್, ಪೌಷಟ್, ಹುಂ, ಫಟ್ ಮುಂತಾದ ಪಲ್ಲವ ರಹಿತವಾದ ಮಂತ್ರವು ನಗ್ನ; ಪ್ರಣವವು ಮಂತ್ರದ ಶಿರಸ್ಸು. ಆದುದರಿಂದ ಜಪಿಸುವ ಮಂತ್ರವು ಪ್ರಣವ ರಹಿತವಾಗಿದ್ದರೆ ಮೃತ; ಅಧಿಕ ವರ್ಣಗಳಾದರೆ ವೀರ್ಯಹೀನ; ಗುರೂಪದೇಶವಿಲ್ಲದೆ ಮಾಡಿದ ಮಂತ್ರಜಪವು ವೃಥಾಫಲ; ಋಷಿ, ದೇವತೆ ಹಾಗೂ ಛಂದೋಹೀನವಾಗಿದ್ದರೆ ಭುಜಂಗ; ಮಧ್ಯದಲ್ಲಿ ಬೀಜಾಕ್ಷರ ರಹಿತವಾಗಿದ್ದರೆ ಕೀಲಿತ, ಜಪಕಾಲದಲ್ಲಿ ಉಚ್ಚರಿಸುವ ಮಂತ್ರವು ಅನ್ಯರಿಗೆ ಕೇಳಿಸುತ್ತಿದ್ದರೆ ಶೂನ್ಯವೆಂಬ ದೋಷಗಳು ಸಂಭವಿಸುತ್ತವೆ.[೬೩೧] ಆದುದರಿಂದ ಸಾಧಕರು ಸಾವಧಾನದಿಂದ ವರ್ತಿಸಬೇಕು.

ಈ ದೋಷಗಳಲ್ಲದೆ ಅಭಕ್ತ, ಅಕ್ಷರಭ್ರಾಂತ, ಲುಪ್ತ, ಛಿನ್ನ, ಹ್ರಸ್ವ, ದೀರ್ಘ, ಕಥನ ಮತ್ತು ಸ್ವಪ್ನಕಥನಗಳೆಂಬ ದೋಷಗಳೂ ಸಂಭವಿಸುತ್ತವೆ. ಇವುಗಳಲ್ಲಿ ಮಂತ್ರದ ಬಗ್ಗೆ ಶ್ರದ್ಧೆಯಿರದಿದ್ದರೆ ಅಭಕ್ತ, ಶಿಷ್ಯನ ಪ್ರಮಾದದಿಂದ ಮಂತ್ರಾಕ್ಷರಗಳ ವೈಪರೀತ್ಯವಾದರೆ ಅಕ್ಷರಭ್ರಾಂತ, ಯಾವುದಾದರೊಂದು ಮಂತ್ರಾಕ್ಷರದ ಲೋಪವಾದರೆ ಲುಪ್ತ, ಸಂಯುಕ್ತಾಕ್ಷರದಿಂದ ಕೂಡಿರುವ ಮಂತ್ರದಲ್ಲಿ ಯಾವುದೇ ಅಕ್ಷರ ವಿಭಕ್ತವಾದರೆ ಛಿನ್ನ, ದೀರ್ಘವಾದ ಮಂತ್ರಾಕ್ಷರವನ್ನು ಹ್ರಸ್ವವಾಗಿ ಉಚ್ಚರಿಸಿದರೆ ಹ್ರಸ್ವ, ಹ್ರಸ್ವಾಕ್ಷರಗಳನ್ನು ದೀರ್ಘವಾಗಿ ಉಚ್ಚರಿಸಿದರೆ ದೀರ್ಘ, ಗೋಪನೀಯವಾದ ಗುರುಮಂತ್ರವನ್ನು ಅನ್ಯರಿಗೆ

---

[೬೩೧] ನ್ಯಾಸಂ ವಿನಾ ಭವೇನ್ಮೂಕಃ ಸುಪ್ತಃ ಸ್ಯಾದಾಸನಂ ವಿನಾ।
ಪಲ್ಲವೇನ ವಿನಾ ಮಂತ್ರೋ ನಗ್ನಸ್ತು ಪರಿಕೀರ್ತಿತಃ॥
ಶಿರೋಹೀನೋ ಮೃತಂ ಪ್ರೋಕ್ತೋ ವೃಥಾ ಮಂತ್ರೋ ಗುರುಂ ವಿನಾ।
ಋಷಿದೈವತಛಂದೋಭಿರ್ವರ್ಜಿತಸ್ತು ಭುಜಂಗಮಃ॥
ಮೃತೋ ದುಷ್ಟಾಯ ದತ್ತೋ ಯೋ ನಿರ್ವೀರ್ಯಶ್ಚಾಧಿಕಾಕ್ಷರಃ।
ಅಂತರಂ ನೈಕಬೀಜೇನ ವ್ಯಾಪ್ತಃ ಕೀಲಿತ ಉಚ್ಯತೇ॥
ಯಸ್ಯ ಜಪ್ಯಂ ಶೃಣೋತ್ಯನ್ಯಃ ಸ ಮಂತ್ರಃ ಶೂನ್ಯ ಉಚ್ಯತೇ।
(ಲಿಂ.ಧಾ.ಚ, ಪೃ.೨೩೪-೨೩೫)

ಹೇಳುವುದು ಕಥನ ಮತ್ತು ಸ್ವಪ್ನದಲ್ಲಿ ಹೇಳಿದರೆ ಸ್ವಪ್ನಕಥನ ಎಂಬ ದೋಷಗಳು ಸಂಭವಿಸುತ್ತವೆ.[೬೩೨]

ಮೇಲೆ ವರ್ಣಿಸಿದ ದೋಷಗಳಲ್ಲಿ ಅಕ್ಷರಭ್ರಾಂತದಿಂದ ಆರಂಭವಾಗಿ ಸ್ವಪ್ನಕಥನ ಪರ್ಯಂತವಾದ ದೋಷಗಳು ಸಂಭವಿಸಿದರೆ ಮತ್ತೆ ತಮ್ಮ ಗುರುಗಳಿಂದ ಮಂತ್ರೋಪದೇಶವನ್ನು ಪಡೆದು ದೋಷಗಳನ್ನು ನಿವಾರಿಸಿಕೊಳ್ಳಬೇಕು. ಮೊದಲನೆಯದಾದ ಅಭಕ್ತ ದೋಷವನ್ನು ತನ್ನಲ್ಲಿಯೇ ಮಂತ್ರದ ಬಗ್ಗೆ ಶ್ರದ್ಧೆಯನ್ನು ಹೆಚ್ಚಿಸಿಕೊಂಡು ನಿವಾರಿಸಿಕೊಳ್ಳಬೇಕು. ಪೂರ್ವೋಕ್ತ ದೋಷಯುಕ್ತವೂ ಹಾಗೂ ವಿಕಲಾಂಗವಾದ ಮಂತ್ರಗಳ ಜಪವು ಫಲಕಾರಿಯಾಗದ ಕಾರಣ ಸಾಧಕರೆಲ್ಲರೂ ದೋಷರಹಿತವಾದ ರೀತಿಯಲ್ಲಿ ಮಂತ್ರಗಳನ್ನು ಶ್ರದ್ಧೆಯಿಂದ ಜಪಿಸಬೇಕು.

ಪುರಶ್ಚರಣ ಮತ್ತು ನಿತ್ಯಜಪ

"ಪುರೋಽಗ್ರತಶ್ಚರಣಂ ಪುರಶ್ಚರಣಮ್" (ಎದುರಿನಲ್ಲಿ ಚಲಿಸುವಿಕೆ ಅರ್ಥಾತ್ ದೇವರ ನಾಮವನ್ನು ಮತ್ತೆ ಮತ್ತೆ ಹಾಡುವುದು) ಎಂಬ ವ್ಯುತ್ಪತ್ತಿಯ ಮೇರೆಗೆ ತನ್ನ ಇಷ್ಟದೇವತೆಯ ಮಂತ್ರದ ಫಲದ ಸಿದ್ಧಿಗಾಗಿ ಆ ದೇವತೆಯ ಪೂಜೆಯೇ ಮೊದಲ್ಗೊಂಡು ನಿಗದಿತವಾದ ಸಂಖ್ಯೆಯಲ್ಲಿ ಆ ಮಂತ್ರದ ಜಪ, ಹೋಮ, ತರ್ಪಣ, ಅಭಿಷೇಕ ಮತ್ತು ಬ್ರಾಹ್ಮಣಭೋಜನ ರೂಪದ ಪಂಚ ಅಂಗಕರ್ಮಗಳ ಆಚರಣೆಯೇ ಪುರಶ್ಚರಣ. ಪುರಶ್ಚರಣವಿಧಿಯ ವಿಧಾನವು ಮುಂಡಮಾಲೆಯಲ್ಲಿ ಹೀಗೆ ನಿರೂಪಿತ ವಾಗಿದೆ-

> ಯಸ್ಯ ಯಾವಾನ್ ಜಪಃ ಪ್ರೋಕ್ತಸ್ತದ್ದಶಾಂಶಮನುಕ್ರಮಾತ್।
> ತತ್ತದ್ವ್ಯೈರ್ಜಪಸ್ಯಾಂತೇ ಹೋಮಂ ಕುರ್ಯಾತ್ ದಿನೇದಿನೇ॥[೬೩೩]

ಇದರ ತಾತ್ಪರ್ಯವಿಷ್ಟು- ಆಯಾ ಮಂತ್ರಕ್ಕೆ ನಿರ್ದಿಷ್ಟವಾಗಿರುವ ಯಾವ ಜಪವಿದೆಯೋ ಆ ಜಪದ ನಂತರ ಅದರ ಹತ್ತನೆಯ ಒಂದು ಭಾಗದಿಂದ ಹೋಮವನ್ನು, ಹೋಮದ ಹತ್ತನೆಯ ಒಂದು ಭಾಗದಿಂದ ತರ್ಪಣವನ್ನು, ತರ್ಪಣದ ದಶಾಂಶದಿಂದ ಅಭಿಷೇಕವನ್ನು ಮತ್ತು ಅಭಿಷೇಕದ ದಶಾಂಶದಿಂದ ಬ್ರಾಹ್ಮಣಭೋಜನ -ಈ ಬಗೆಯಾಗಿ ಪುರಶ್ಚರಣವಿಧಿಯಾಗುತ್ತದೆ. ಚಂದ್ರಜ್ಞಾನಾಗಮದಲ್ಲಿ-

> ಜಪೇದಕ್ಷರಲಕ್ಷಂ ವೈ ಚತುರ್ಗುಣಿತಮಾದರಾತ್।
> ಯುಕ್ತಾಶೀ ಸಂಯಮೀ ಯಃ ಸ ಪೌರಶ್ಚರಣಿಕಃ ಸ್ಮೃತಃ॥[೬೩೪]

"ಯಾರು ಒಂದು ಅಕ್ಷರಕ್ಕೆ ಒಂದು ಲಕ್ಷದಂತೆ ನಾಲ್ಕರ ಗುಣನಕ್ರಮದಲ್ಲಿ ಆದರದಿಂದ ಜಪಿಸುತ್ತಾನೆಯೋ ಅಂತಹ ಸಂಯಮಿಯಾದ ಸಾಧಕನು ಪೌರಶ್ಚರಣಿಕನೆಂದು ಹೇಳಲ್ಪಡುತ್ತಾನೆ" -ಎಂದು ಪಂಚಾಕ್ಷರಮಂತ್ರದ ಪುರಶ್ಚರಣೆ

---

[೬೩೨] ವೀ.ಅ.ವಿ, ಪು. ೬೪

[೬೩೩] ಹಿಂದೀ ವಿಶ್ವಕೋಶ, ಪು. ೧೭೬

[೬೩೪] ಚ.ಜ್ಞಾ, ಕ್ರಿ.ಪಾ, ಅ.೫೦

ಮಾಡಬೇಕಾದ ಜಪಸಂಖ್ಯೆಯನ್ನು ನಿರೂಪಿಸಲಾಗಿದೆ. ಅದರಂತೆ ಪಂಚಾಕ್ಷರಮಂತ್ರದಲ್ಲಿ ಐದು ಅಕ್ಷರಗಳಿವೆ. ಆದ್ದರಿಂದ ಐದು ಲಕ್ಷ ಜಪವಾಗುತ್ತದೆ. ಮತ್ತೆ ಅದನ್ನು ನಾಲ್ಕರಿಂದ ಗುಣಿಸಿದಾಗ ಜಪವು ಇಪ್ಪತ್ತು ಲಕ್ಷವಾಗುತ್ತದೆ. ಈ ಪ್ರಕಾರವಾಗಿ ಗುರುವಿನಿಂದ ದೀಕ್ಷಿತನಾದ ತರುವಾಯ ಎಲ್ಲ ಧಾರ್ಮಿಕ ಆಚರಣೆಗಳನ್ನು ಮಾಡುವುದರಲ್ಲಿ ಮಗ್ನನೂ, ಸಂಯಮಿಯೂ ಆದ ಸಾಧಕನು ತನ್ನ ಮನೆಯ ಪೂಜಾಗೃಹದಲ್ಲಿ ಅಥವಾ ಯಾವುದಾದರೂ ಶಾಸ್ತ್ರೋಕ್ತವಾದ ಪವಿತ್ರಕ್ಷೇತ್ರದಲ್ಲಿ[೬೩೫] ಕುಳಿತು ತನ್ನ ಇಷ್ಟಲಿಂಗದ ಸಾನ್ನಿಧ್ಯದಲ್ಲಿ ಮೇಲೆ ಹೇಳಿದ ಪ್ರಕಾರ ದಿಂದಲೂ, ನಿಯಮದಿಂದಲೂ ಇಪ್ಪತ್ತು ಲಕ್ಷ ಸಲ ಜಪಾಭ್ಯಾಸವನ್ನು ಮಾಡಬೇಕು. ಜಪ ಮಗಿದ ನಂತರದಲ್ಲಿ ಆಯಾ ದಶಾಂಶದಲ್ಲಿ ಕ್ರಮವಾಗಿ ಹೋಮ, ತರ್ಪಣ, ಅಭಿಷೇಕ ಮತ್ತು ಭೋಜನಾದಿಗಳನ್ನು ಪೂರೈಸಬೇಕು.

ಪೂರ್ವೋಕ್ತ ರೀತಿಯಲ್ಲಿ ಜಪಾನುಷ್ಠಾನ ಮಾಡಿದ ತರುವಾಯ ಹೋಮ ಕಾರ್ಯವನ್ನು ನೆರವೇರಿಸಲು ಒಂದು ಪಕ್ಷ ಯಾರಾದರೂ ಅಸಮರ್ಥರಾದರೆ ಆಗ-

> ಯದ್ಯದಂಗಂ ವಿಹೀನಂ ಸ್ಯಾತ್ ತತ್ಸಂಖ್ಯಾದ್ವಿಗುಣೋ ಜಪಃ।
> ಕುರ್ವೀತ ತ್ರಿಚತುಃ ಪಂಚ ಯಥಾಸಂಖ್ಯಂ ದ್ವಿಜಾದಯಃ॥[೬೩೬]

"ಯಾವುದಾದರೊಂದು ಕರ್ಮಾಂಗವನ್ನು ಆಚರಿಸಲಾಗದಿದ್ದರೆ ಅದರ ಸಂಖ್ಯೆಯ ಎರಡರಷ್ಟು ಜಪವನ್ನು ಮಾಡಬೇಕು, ಬ್ರಾಹ್ಮಣಾದಿಗಳು ಕ್ರಮವಾಗಿ ಮೂರು, ನಾಲ್ಕು ಮತ್ತು ಐದು ಸಾರಿ ಜಪವನ್ನು ಮಾಡಬೇಕು" ಎಂಬ ಕುಲಾರ್ಣವತಂತ್ರೋಕ್ತಿಯ ರೀತಿಯಲ್ಲಿ ಜಪಾನುಷ್ಠಾನ ಮಾಡುವ ದ್ವಿಜನು ಹೋಮಾದಿಗಳನ್ನು ಮಾಡಲು ಅಸಮರ್ಥನಾಗಿದ್ದರೆ ಅವನು ಆ ಸಂಖ್ಯೆಯ (ಒಂದು ಲಕ್ಷ ಅಕ್ಷರಗಳನ್ನು) ಎರಡರ ಗುಣನ ಕ್ರಮದಲ್ಲಿ ಜಪಿಸಬೇಕು. ಕ್ಷತ್ರಿಯನು ತ್ರಿಗುಣ ಜಪವನ್ನು, ವೈಶ್ಯನು ಚತುರ್ಗುಣ ಜಪವನ್ನು ಮತ್ತು ಶೂದ್ರನು ಪಂಚಗುಣನ ಕ್ರಮದಲ್ಲಿ ಜಪಾನುಷ್ಠಾನ ಮಾಡುವುದರಿಂದ

---

[೬೩೫] ಪುಣ್ಯಕ್ಷೇತ್ರಂ ನದೀತೀರಂ ಗುಹಾಪರ್ವತಮಸ್ತಕಮ್।
ತೀರ್ಥಪ್ರದೇಶಾಃ ಸಿಂಧೂನಾಂ ಸಂಗಮಃ ಪಾವನಂ ವನಮ್॥
ಉದ್ಯಾನಾನಿ ವಿವಿಕ್ತಾನಿ ಬಿಲ್ವಮೂಲಂ ತಟಂ ಗಿರೇಃ।
ತುಲಸೀಕಾನನಂ ಗೋಷ್ಠಂ ವೃಷಶೂನ್ಯಂ ಶಿವಾಲಯಮ್॥
ಅಶ್ವತ್ಥಾಮಲಕೀಮೂಲಂ ಗೋಶಾಲಾ ಜಲಮಧ್ಯತಃ।
ದೇವತಾಯತನಂ ಕೂಲಂ ಸಮುದ್ರಸ್ಯ ನಿಜಂ ಗೃಹಮ್॥
ಸಾಧನೇಷು ಪ್ರಶಸ್ತಾನಿ ಸ್ಥಾನಾನ್ಯೇತಾನಿ ಮಂತ್ರಿಣಾಮ್।
ಅಥವಾ ನಿವಸೇತ್ ತತ್ರ ಯತ್ರ ಚಿತ್ತಂ ಪ್ರಸೀದತಿ॥
-ಹಿಂದೀ ವಿಶ್ವಕೋಶ, ಪು.೧೭೪

[೬೩೬] ಹಿಂದೀ ವಿಶ್ವಕೋಶ, ಪು. ೧೭೬

ಪುರಶ್ಚರಣವಿಧಿಯ ಫಲವನ್ನು ಪಡೆಯುತ್ತಾರೆ. ಆದುದರಿಂದ ದೀಕ್ಷಾಸಂಪನ್ನರಾಗಿರುವವರೆಲ್ಲರೂ ಒಂದು ಬಾರಿ ಪಂಚಾಕ್ಷರ ಮಹಾಮಂತ್ರದ ಪುರಶ್ಚರಣವನ್ನು ತಪ್ಪದೆ ಅನುಷ್ಠಾನ ಮಾಡಬೇಕು. ಹಾಗೆ ಮಾಡದಿದ್ದಲ್ಲಿ-

ಜೀವಹೀನೋ ಯಥಾ ದೇಹೀ ಸರ್ವಕರ್ಮಸು ನ ಕ್ಷಮಃ।
ಪುರಶ್ಚರಣ ಹೀನೋऽಪಿ ತಥಾ ಮಂತ್ರಃ ಪ್ರಕೀರ್ತಿತಃ॥[೬೩೭]

"ನಿರ್ಜೀವ ದೇಹವು ಎಲ್ಲ ಕರ್ಮಗಳನ್ನು ಮಾಡಲು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಪರಶ್ಚರಣವಿಲ್ಲದೆ ಮಂತ್ರಜಪವು ಅಸಾಧ್ಯವೆಂದು ಹೇಳಲ್ಪಟ್ಟಿದೆ" ಎಂಬ ಉಕ್ತಿಯಂತೆ ಪುರಶ್ಚರಣವಿಲ್ಲದೆ ಜಪಿಸಿದ ಮಂತ್ರವು ನಿರ್ಜೀವ ದೇಹದಂತೆ ನಿಷ್ಫಲವಾಗುತ್ತದೆ. ಆ ಕಾರಣ-

ಯಃ ಪುರಶ್ಚರಣಂ ಕೃತ್ವಾ ನಿತ್ಯಜಾಪೀ ಭವೇತ್ ಪುನಃ।
ತಸ್ಯ ನಾಸ್ತಿ ಸಮೋ ಲೋಕೇ ಸ ಸಿದ್ಧಃ ಸಿದ್ಧಿದೋ ಭವೇತ್॥[೬೩೮]

"ಯಾರು ಪುರಶ್ಚರಣ ಮಾಡಿ ನಿತ್ಯವೂ ಜಪಮಾಡುತ್ತಾನೋ ಅವರಿಗೆ ಲೋಕದಲ್ಲಿ ಸಮನಾದವನು ಯಾರೂ ಇಲ್ಲ. ಅವನು ಸಿದ್ಧನು ಮತ್ತು ಇತರರಿಗೆ ಸಿದ್ಧಿಯನ್ನು ಅನುಗ್ರಹಿಸುವನು" ಎಂಬ ಚಂದ್ರಜ್ಞಾನಾಗಮದ ಉಕ್ತಿಯ ಮೇರೆಗೆ ವಿಧ್ಯುಕ್ತವಾಗಿ ಪುರಶ್ಚರಣವನ್ನು ಅನುಷ್ಠಾನ ಮಾಡಿ ಮಂತ್ರವನ್ನು ಸಿದ್ಧಿ ಮಾಡಿಕೊಂಡು ಪ್ರತಿನಿತ್ಯವೂ ಜಪವನ್ನು ಮಾಡಬೇಕು. ಅಲ್ಲಿಯೇ-

ಧ್ಯಾತ್ವಾ ಸಂಪೂಜ್ಯ ಮನಸಿ ಬಾಹ್ಯೇ ವಾ ಪರಮೇಶ್ವರಮ್।
ಜಪಂ ಕುರ್ಯಾತ್ ಪ್ರಯತ್ನೇನ ಧ್ಯಾಯನ್ ಸಾಂಬಂ ತ್ರಿಯಂಬಕಮ್॥
ಸಹಸ್ರಂ ವಾ ತದರ್ಧಂ ವಾ ಶತಂ ವಾऽಥ ಜಪೇನ್ಮನುಮ್।
ಏವಂ ಯಃ ಕುರುತೇ ನಿತ್ಯಂ ಸ ಶಿವೋ ಹಿ ನ ಸಂಶಯಃ॥
ಯಾವಜ್ಜೀವಂ ಜಪೇನ್ನಿತ್ಯಮಷ್ಟೋತ್ತರಸಹಸ್ರಕಮ್।
ಅನಶ್ನಂಸ್ತತ್ಪರೋ ಭೂತ್ವಾ ಸ ಯಾತಿ ಪರಮಾಂ ಗತಿಮ್॥[೬೩೯]

"ಪರಮೇಶ್ವರನನ್ನು ಅಂತರಂಗದಲ್ಲಿ ಅಥವಾ ಬಹಿರಂಗದಲ್ಲಿ ಧ್ಯಾನಮಾಡಿ, ಪೂಜಿಸಿ, ಪ್ರಯತ್ನಪೂರ್ವಕವಾಗಿ ಜಪವನ್ನು ಮಾಡಬೇಕು. ಪಂಚಾಕ್ಷರಮಂತ್ರವನ್ನು ಒಂದು ಸಾವಿರ ಸಲ ಅಥವಾ ಐದು ನೂರು ಸಲ ಇಲ್ಲವೆ ಒಂದು ನೂರು ಸಲ ಪ್ರತಿದಿನವೂ ಜಪಿಸಿದವನು ನಿಸ್ಸಂಶಯವಾಗಿಯೂ ಅವನು ಸಾಕ್ಷಾತ್ ಶಿವನೇ ಆಗುವನು. ಆಜೀವ ಪರ್ಯಂತವಾಗಿ ಊಟಕ್ಕೆ ಮೊದಲು ಈ ಮಂತ್ರವನ್ನು ೧೦೦೮

---

೬೩೭. ಹಿಂದೀ ವಿಶ್ವಕೋಶ, ಪು. ೧೭೪

೬೩೮. ಚ.ಜ್ಞಾ, ಕ್ರಿ.ಪಾ, ೮.೫೧

೬೩೯. ಚ.ಜ್ಞಾ, ಕ್ರಿ.ಪಾ, ೮.೧೨, ೧೩, ೪೯

ಸಲ ಜಪಿಸುವವನು ಪರಮೋಚ್ಚ ಸ್ಥಾನವನ್ನು ಪಡೆಯುತ್ತಾನೆ" -ಇತ್ಯಾದಿ ಆಗಮೋಕ್ತಿಯಂತೆ ಪ್ರತಿದಿನವೂ ನೂರು ಸಲ, ಐನೂರು ಸಲ ಅಥವಾ ಒಂದು ಸಾವಿರ ಸಲ ಪಂಚಾಕ್ಷರಮಂತ್ರವನ್ನು ಜಪಿಸುವುದರಿಂದ ಮನಸ್ಸಿನ ಶುದ್ಧಿಯಾಗುವುದಲ್ಲದೆ ಶಿವಸಾಯುಜ್ಯವೂ ಪ್ರಾಪ್ತವಾಗುತ್ತದೆ.

ಪಂಚಾಕ್ಷರಮಂತ್ರವು ಯಾರಿಗೂ ಶತ್ರುವಲ್ಲ

ಪ್ರತಿಯೊಂದು ಮಂತ್ರವೂ ಸುಸಿದ್ಧ, ಸಿದ್ಧ, ಸಾಧ್ಯ ಮತ್ತು ರಿಪು (ಶತ್ರು) ಎಂದು ನಾಲ್ಕುವಿಧವೆಂದು ಆಗಮಗಳು ಪ್ರತಿಪಾದಿಸುತ್ತವೆ. ಆದರೆ ಪಂಚಾಕ್ಷರಮಂತ್ರವು ಯಾರಿಗೂ ಶತ್ರುವಲ್ಲ. ಆಗಮದಲ್ಲಿ-

ನ ಕದಾಚನ ಕಸ್ಯಾಪಿ ರಿಪುರೇಷ ಮಹಾಮನುಃ।
ಸಿದ್ಧೋ ವಾಽಥ ಸುಸಿದ್ಧೋ ವಾ ಸಾಧ್ಯೋ ವಾಽಥ ಭವಿಷ್ಯತಿ॥[೬೪೦]

"ಈ ಮಂತ್ರವು ಎಂದೂ ಯಾರಿಗೂ ಶತ್ರುವಲ್ಲ. ಇದು ಸಿದ್ಧ, ಸುಸಿದ್ಧ ಅಥವಾ ಸಾಧ್ಯವಾಗುತ್ತದೆ."

ಪುರಶ್ಚರಣದಿಂದ ಸಿದ್ಧವಾದ ಗುರುವಿನಿಂದ ಉಪದೇಶಿಸಲ್ಪಟ್ಟ ಮಂತ್ರವು ಸುಸಿದ್ಧ, ಪುರಶ್ಚರಣದ ಸಂದರ್ಭದಲ್ಲಿ ಆದರ ಸಿದ್ಧಿಯಾಗುವುದಕ್ಕೆ ಪೂರ್ವದಲ್ಲೇ ಗುರುವು ಉಪದೇಶಿಸುವ ಮಂತ್ರವೇ ಸಿದ್ಧ ಮತ್ತು ಪುರಶ್ಚರಣವಿಲ್ಲದೆ ಗುರುವಿನಿಂದ ಉಪದೇಶಿಸಲ್ಪಡುವ ಮಂತ್ರವು ಸಾಧ್ಯ ಎನಿಸುತ್ತದೆ.

ಸಿದ್ಧೇನ ಗುರುಣಾಽಽದಿಷ್ಟಃ ಸುಸಿದ್ಧ ಇತಿ ಕಥ್ಯತೇ।
ಅಸಿದ್ಧೇನಾಪಿ ವಾ ದತ್ತಃ ಸಿದ್ಧಃ ಸಾಧ್ಯಸ್ತು ಕೇವಲಃ॥[೬೪೧]

ಈ ಪ್ರಕಾರವಾಗಿ ಈ ಮಂತ್ರವು ಪ್ರತಿಯೊಬ್ಬರ ವಿಷಯದಲ್ಲಿ ಸುಸಿದ್ಧ, ಸಿದ್ಧ ಹಾಗೂ ಸಾಧ್ಯವೇ ಆಗುತ್ತದೆಯೇ ವಿನಾ ಯಾರ ರಿಪು(ಶತ್ರು)ವೂ ಆಗುವುದಿಲ್ಲ. ಆ ಕಾರಣ ಮಂತ್ರವನ್ನುಪದೇಶಿಸುವ ಗುರುವಿಗೆ ಈ ಮಂತ್ರವು ಸಾಧಿತವಾಗಿರಲಿ ಅಥವಾ ಅಸಾಧಿತವಾಗಿರಲಿ ಶ್ರದ್ಧೆಯಿಂದ ಕೂಡಿರುವ ಶಿಷ್ಯನು ಜಪಮಾಡಿದಾಗ ಅದು ಸಿದ್ಧವೇ ಆಗುತ್ತದೆ. ಆದುದರಿಂದ ಬೇರೆ ಮಂತ್ರಗಳ ಜಪಮಾಡುವುದನ್ನು ತ್ಯಜಿಸಿ, ಸುಂದರವಾದ ಪಂಚಾಕ್ಷರಮಂತ್ರವನ್ನೇ ಎಲ್ಲರೂ ಆಶ್ರಯಿಸಬೇಕು.[೬೪೨]

---

[೬೪೦] ಚ.ಜ್ಞಾ, ಕ್ರಿ.ಪಾ, ೮.೮೮

[೬೪೧] ಚ.ಜ್ಞಾ, ಕ್ರಿ.ಪಾ, ೮.೮೯

[೬೪೨] ಅಸಾಧಿತಃ ಸಾಧಿತೋ ವಾ ಸಿದ್ಧ್ಯತ್ಯೇಷ ನ ಸಂಶಯಃ।
ಶ್ರದ್ಧಾತಿಶಯಯುಕ್ತಸ್ಯ ಶಿವೇ ಮಂತ್ರೇ ತಥಾ ಗುರೌ॥
ತಸ್ಮಾನ್ಮಂತ್ರಾಂತರಾಂಸ್ತ್ಯಕ್ತ್ವಾ ಸಾಪಾಯಾನಧಿಕಾರತಃ।
ಆಶ್ರಯೇತ್ ಪರಮಾಂ ವಿದ್ಯಾಂ ಹೃದ್ಯಾಂ ಪಂಚಾಕ್ಷರೀಂ ಬುಧಃ॥
-ಚ.ಜ್ಞಾ, ಕ್ರಿ.ಪಾ, ೮.೯೦-೯೧

ವಿಧಿಲೋಪವಾದರೂ ನಿಷ್ಫಲವಲ್ಲ

ಇಲ್ಲಿಯವರೆಗೆ ಜಪಾಭ್ಯಾಸ ಮಾಡುವಾಗ ಸಾಧಕನು ಅನುಷ್ಠಾನ ಮಾಡಬೇಕಾದ ನಿಯಮಗಳ ವಿಶ್ಲೇಷಣೆಯನ್ನು ಮಾಡಲಾಯಿತು. ಯಾವುದೇ ನಿಯಮವೂ ಇಲ್ಲದೆ ಪಂಚಾಕ್ಷರ ಮಂತ್ರದ ಜಪಮಾಡಿದರೆ ಅದು ನಿಷ್ಫಲವಾಗುವುದಿಲ್ಲ. ಆದರೆ ಸಮುಚಿತವಾದ ಫಲವನ್ನು ನೀಡುತ್ತದೆ. ಚಂದ್ರಜ್ಞಾನಾಗಮದಲ್ಲಿ-

ಗಚ್ಛತಸ್ತಿಷ್ಠತೋ ವಾಪಿ ಸ್ವೇಚ್ಛಯಾ ಕರ್ಮ ಕುರ್ವತಃ।
ಅಶುಚೇರ್ವಾ ಶುಚೇರ್ವಾಪಿ ಮಂತ್ರೋಽಯಂ ನ ಚ ನಿಷ್ಫಲಃ॥[೬೪೩]

"ಪ್ರಯಾಣ ಮಾಡುವಾಗ, ನಿಂತಿರುವಾಗ, ಯಾವುದೇ ಕೆಲಸವನ್ನು ಮಾಡುತ್ತಿರುವಾಗ ಅಥವಾ ಶುಚಿಯಾಗಿರುವಾಗಲಿ ಮತ್ತು ಅಶುಚಿಯಾಗಿರಲಿ ಈ ಮಂತ್ರವು ನಿಷ್ಫಲ ವಾಗುವುದಿಲ್ಲ" -ಎಂದು ತಿಳಿಸಲಾಗಿದೆ. ಆದುದರಿಂದ ಸದಾಚಾರಿಯಲ್ಲದವನ, ಧರ್ಮಭ್ರಷ್ಟನಾದವನ ಅಥವಾ ಅಂತ್ಯಜನ ರಕ್ಷಣೆಗಾಗಿ ಪಂಚಾಕ್ಷರ ಮಂತ್ರವಲ್ಲದೆ ಬೇರಾವುದೇ ಮಂತ್ರವು ಕಲಿಯುಗದಲ್ಲಿ ಇರುವುದಿಲ್ಲ. ಆ ಕಾರಣದಿಂದ-

ಮಂತ್ರೇ ತೀರ್ಥೇ ದ್ವಿಜೇ ದೇವೇ ದೈವಜ್ಞೇ ಭೈಷಜೇ ಗುರೌ।
ಯಾದೃಶೀ ಭಾವನಾ ಯಸ್ಯ ಸಿದ್ಧಿರ್ಭವತಿ ತಾದೃಶೀ॥
ಗುರೌ ಲಿಂಗೇಽಕ್ಷಮಾಲಾಯಾಂ ಮಂತ್ರೇ ಭಸ್ಮನಿ ಪಂಚಸು।
ಏತಾಸು ಶಿವಮುದ್ರಾಸು ಶಿವವದ್ ಭಕ್ತಿಮಾಚರೇತ್॥[೬೪೪]

"ಮಂತ್ರ, ತೀರ್ಥ, ಬ್ರಾಹ್ಮಣ, ದೇವತೆ, ಜ್ಯೋತಿಷಿ, ವೈದ್ಯ ಮತ್ತು ಗುರು -ಇವುಗಳ ವಿಷಯದಲ್ಲಿ ಯಾವ ಭಾವನೆಯು ಇದೆಯೋ ಅದೇ ಬಗೆಯ ಸಿದ್ಧಿಯುಂಟಾಗುತ್ತದೆ. ಗುರು, ಲಿಂಗ, ರುದ್ರಾಕ್ಷಮಾಲಾ, ಮಂತ್ರ ಮತ್ತು ಭಸ್ಮ -ಈ ಐದು ಶಿವಮುದ್ರೆಗಳ ವಿಷಯದಲ್ಲಿ ಶಿವನಲ್ಲಿರುವಂತೆಯೇ ಭಕ್ತಿಯನ್ನಾಚರಿಸಬೇಕು" -ಮುಂತಾದ ಉಕ್ತಿಗಳಿಗನುಸಾರವಾಗಿ ಮಂತ್ರವೇ ಮೊದಲಾದವುಗಳಲ್ಲಿ ಶ್ರದ್ಧೆಯಿಂದ ಎಂತಹ ಭಾವನೆಯು ಇರುತ್ತದೆಯೋ ಅಂತಹುದೇ ಫಲವು ಸಿದ್ಧಿಸುತ್ತದೆ. ಆದುದರಿಂದ ವಿಧಿಗಿಂತಲೂ ಶ್ರದ್ಧೆಯೇ ಮುಖ್ಯವಾಗಿ ಪರಿಗಣಿಸಲ್ಪಡುವ ಕಾರಣದಿಂದ ಶ್ರದ್ಧಾವಂತರಿಗೆ ಜಪಾಭ್ಯಾಸದ ಸಂದರ್ಭದಲ್ಲಿ ವಿಧಿಲೋಪವಾದರೂ ನಿಷ್ಫಲವಾಗುವುದಿಲ್ಲ. ಶ್ರೀ ಜಗದ್ಗುರು ರೇಣುಕಾಚಾರ್ಯರೂ ಸಹ-

ಅನ್ಯೇಽಪಿ ಬಹವೋ ಮಂತ್ರಾ ವಿದ್ಯಂತೇ ಸಕಲಾಗಮೇ।
ಭೂಯೋ ಭೂಯಃ ಸಮಭ್ಯಾಸಾತ್ ಪುರುಷಾರ್ಥಪ್ರದಾಯಿನಃ॥
ಏಷ ಮಂತ್ರೋ ಮಹಾಶಕ್ತಿರೀಶ್ವರ ಪ್ರತಿಪಾದಕಃ।
ಸಕೃದುಚ್ಚಾರಣಾದೇವ ಸರ್ವಸಿದ್ಧಿಪ್ರದಾಯಕಃ॥[೬೪೫]

---

[೬೪೩] ಚ.ಜ್ಞಾ, ಕ್ರಿ.ಪಾ, ೮.೮೪

[೬೪೪] ವಾ.ಶು.ತ, ೧೦.೭-೮

[೬೪೫] ಸಿ.ಶಿ, ೮.೪೦-೪೧

"ಎಲ್ಲ ಆಗಮಗಳಲ್ಲಿ ಬೇರೆ ಅನೇಕ ಮಂತ್ರಗಳಿವೆ. ಆ ಮಂತ್ರಗಳನ್ನು ಮತ್ತೆ ಮತ್ತೆ ಅಭ್ಯಾಸ ಮಾಡುವುದರಿಂದ ಪುರುಷಾರ್ಥ ಫಲವನ್ನು ಕೊಡುತ್ತವೆ. ಈ ಮಹಾಮಂತ್ರವು ಮಹಾಶಕ್ತಿಯುಳ್ಳದ್ದಾಗಿರುವುದಲ್ಲದೆ ಈಶ್ವರ ಸ್ವರೂಪವನ್ನು ಪ್ರತಿಪಾದಿಸುವಂತಹದ್ದೂ ಆಗಿದೆ. ಇದನ್ನು ಒಂದು ಸಲ ಉಚ್ಚಾರಣೆ ಮಾಡಿದ ಕಾರಣದಿಂದಲೇ ಸರ್ವಸಿದ್ಧಿಗಳನ್ನು ಕೊಡುತ್ತದೆ" ಎಂದು ಪುರಶ್ಚರಣದ ಬಾಹುಲ್ಯದಿಂದ ಪುರುಷಾರ್ಥಗಳ ಫಲವನ್ನು ನೀಡುವ ಬೇರೆ ಬೇರೆ ಮಂತ್ರಗಳಿಗಿಂತ ಈ ಪಂಚಾಕ್ಷರ ಮಹಾಮಂತ್ರವನ್ನು ಒಮ್ಮೆ ಮಾತ್ರ ಉಚ್ಚಾರಣೆ ಮಾಡುವುದರಿಂದಲೇ ಇದಕ್ಕೆ ಎಲ್ಲ ಸಿದ್ಧಿಗಳನ್ನು ಕೊಡುವ ಸಾಮರ್ಥ್ಯ ವಿರುವುದಲ್ಲದೆ ಈಶ್ವರನ ವಿಶ್ವಮಯ ವಿಶ್ವೋತ್ತೀರ್ಣ ಸಾಮರಸ್ಯ ಲಕ್ಷಣದ ಮಹಾತ್ಮ್ಯೆಯನ್ನು ಪ್ರತಿಪಾದಿಸುವಂತಹದ್ದೂ ಆಗಿರುತ್ತದೆ. ಆದುದರಿಂದ ಪಂಚಾಕ್ಷರ ಮಹಾಮಂತ್ರದ ವೈಶಿಷ್ಟ್ಯವನ್ನು ನಿರೂಪಿಸಿ ಅದರ ಶ್ರೇಷ್ಠತೆಯನ್ನು ಪ್ರತಿಷ್ಠಾಪನೆ ಮಾಡಿದ್ದಾರೆ.

ಅನೇಕ ಸಲ ಜಪಮಾಡುವುದರಿಂದ ಮಂತ್ರಪಿಂಡಪ್ರಾಪ್ತಿ

ತಂದೆ-ತಾಯಿಯರ ರೇತಸ್ಸು-ರಕ್ತಗಳಿಂದ ಹುಟ್ಟಿದ ನಮ್ಮ ಸ್ಥೂಲಶರೀರವು ಮಾಂಸಪಿಂಡವೆಂದು ಕರೆಯಲ್ಪಟ್ಟಿದೆ. ಎಳ್ಳಿನಲ್ಲಿರುವ ಎಣ್ಣೆಯು ಮಲ್ಲಿಗೆಯೇ ಮೊದಲಾದ ಹೂಗಳಿಂದ ಸಂಸ್ಕರಿಸಿ ತೆಗೆದ ರಸವು ಹೇಗೆ ಆ ಹೂವಿನ ಪರಿಮಳದಿಂದ ಕೂಡಿರುತ್ತದೆಯೋ ಹಾಗೆಯೇ ಒಂದೇ ಸಮನೆ ಪಂಚಾಕ್ಷರ ಮಹಾಮಂತ್ರದ ಜಪ ಮಾಡುವುದರಿಂದ ನಮ್ಮ ಸ್ಥೂಲಶರೀರದಲ್ಲಿರುವ ರಕ್ತವೇ ಮುಂತಾದ ಧಾತುಗಳೂ ಸಹ ಮಂತ್ರಮಯವಾಗುತ್ತವೆ. ಆಗ ಅಂತಹ ಸಾಧಕನು ಮಂತ್ರಪಿಂಡನೆಂದು ಕರೆಯಲ್ಪಡುತ್ತಾನೆ. ಈ ಬಗೆಯಲ್ಲಿ ಮಂತ್ರಪಿಂಡನಾದ ಸಾಧಕನು ಸಾಕ್ಷಾತ್ ಶಿವಸ್ವರೂಪಿಯೇ ಆಗುತ್ತಾನೆ. ಅದನ್ನು ಮಾಯಿದೇವನು ಹೀಗೆ ನಿರೂಪಿಸುತ್ತಾನೆ-

> ನಕಾರೋ ರುಧಿರೇ ಸ್ಥಾತಿ ಮಕಾರೋ ಮಾಂಸಸಂಚಯೇ।
> ಶಿಕಾರೋ ಮೇಧಸಿ ಸ್ಥಾತಿ ವಕಾರೋಽಸ್ಥಿಷು ತಿಷ್ಠತಿ॥
> ಯಕಾರಃ ಸ್ಥಾತಿ ಮಜ್ಜಾಯಾಂ ಶುಕ್ಲೇ ಸ್ಥಾತಿ ಷಡಾತ್ಮಕಃ।
> ಏವಂ ಷಡಕ್ಷರಮಯಂ ಶಿವವನ್ಮೂರ್ತಿಸುಸ್ಥಿತಮ್।
> ದೇಹಂ ಮಮೇತಿ ಯೋ ಧ್ಯಾಯೇತ್ ಸೋಽಹಮೇವ ನ ಸಂಶಯಃ॥[೬೪೬]

"ನಕಾರವು ರಕ್ತದಲ್ಲಿ, ಮಕಾರವು ಮಾಂಸದಲ್ಲಿ, ಶಿಕಾರವು ಮೇದಸ್ಸಿನಲ್ಲಿ, ವಕಾರವು ಮೂಳೆಗಳಲ್ಲಿ, ಯಕಾರವು ಮಜ್ಜೆಯಲ್ಲಿ, ಪ್ರಣವವು ರೇತಸ್ಸಿನಲ್ಲಿದೆ. ಈ ರೀತಿಯಾಗಿ ಶಿವನು ಷಡಕ್ಷರಿಯಾಗಿರುವಂತೆ ನಮ್ಮ ಶರೀರವೂ ಷಡಕ್ಷರಮಯವಾಗಿದೆ. ಶರೀರವನ್ನು ನನ್ನದೆಂದು ಯಾರು ಧ್ಯಾನಿಸುತ್ತಾನೆಯೋ ಅವನು ನಾನೇ (ಶಿವನೇ) ಆಗಿದ್ದಾನೆ. ಇದರಲ್ಲಿ ಸಂಶಯವಿಲ್ಲ" -ಈ ಪ್ರಕಾರ ಈ ಮಂತ್ರವು ಸ್ಥೂಲ, ಸೂಕ್ಷ್ಮ,

---

೬೪೬. ಅ.ಸೂ, ೭.೫೩-೫೫

ಕಾರಣಗಳೆಂಬ ಮೂರು ಶರೀರಗಳಲ್ಲಿರುವ ಎಲ್ಲ ಬಗೆಯ ದೋಷಗಳನ್ನು ನಿವಾರಣೆ ಮಾಡಿ ಜಪ ಮಾಡುವವನನ್ನು ಶುದ್ಧಿಗೊಳಿಸುತ್ತದೆ.

ಪಂಚಾಕ್ಷರಮಂತ್ರದ ಮಾಹಾತ್ಮ್ಯ

"ಅಪಾರೋ ಮಹಿಮಾ ಶೈವಪಂಚಾಕ್ಷರ ಮಹಾಮನೋಃ"[೬೪೭] (ಶಿವ ಪಂಚಾಕ್ಷರ ಮಂತ್ರದ ಮಹಿಮೆಯು ಅಪಾರವಾದುದು) ಎಂದು ಚಂದ್ರಜ್ಞಾನಾಗಮದಲ್ಲಿ ಭಗವಾನ್ ರುದ್ರನಿಂದಲೇ ಹೀಗೆ ಪ್ರತಿಪಾದಿತವಾಗಿರುವುದರಿಂದ ಈ ಮಂತ್ರದ ಮಹಿಮೆಯನ್ನು ವರ್ಣಿಸಲು ಸಾಧ್ಯವಿಲ್ಲ. ಆದರೂ ಸಹ ಈ ಕುರಿತು ಸ್ವಲ್ಪ ವಿಚಾರ ಮಾಡಲಾಗುವುದು. ಹಿಂದೆ ಶಿವಯೋಗನಿಷ್ಠನಾದ ಸಾನಂದ ಗಣೇಶನು ಪಂಚಾಕ್ಷರಮಹಾಮಂತ್ರವನ್ನು ಒಮ್ಮೆ ಮಾತ್ರ ಜಪಿಸಿದ ಕಾರಣದಿಂದಲೇ ನರಕದಲ್ಲಿದ್ದ ಇಪ್ಪತ್ತೆಂಟು ಕೋಟಿ ಪಾಪಿಗಳನ್ನು ಉದ್ಧಾರ ಮಾಡಿದನು. ಶತಾನಂದ ಮಹರ್ಷಿಯು ಪಂಚಾಕ್ಷರಮಂತ್ರದ ಸಿದ್ಧಿಯಿಂದ ನರಕವನ್ನೂ ಸ್ವರ್ಗವನ್ನಾಗಿ ಮಾಡಿದನು. ಉಪಮನ್ಯು ಉದರದಲ್ಲಿಯೇ ಮಂತ್ರವನ್ನು ಜಪಿಸಿದ ಮಹಿಮೆಯಿಂದ ಶಿವಶಾಸ್ತ್ರಾಚಾರ್ಯತ್ವವನ್ನು ಪಡೆದನು. ವಸಿಷ್ಠ, ವಾಮದೇವಾದಿ ಮಹರ್ಷಿಗಳು ಈ ಮಂತ್ರಜಪದ ಮಹಿಮೆಯಿಂದ ಶಾಪಕೊಡಲು ಸಮರ್ಥರಾದರು. ಬ್ರಹ್ಮ, ವಿಷ್ಣು, ರುದ್ರಾದಿ ದೇವತೆಗಳಿಗೆ ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರಾದಿ ಕರ್ಮಗಳ ಯಾವ ಸಾಮರ್ಥ್ಯವಿದೆಯೋ ಅದು ಈ ಮಂತ್ರದ ಜಪಾನುಷ್ಠಾನದಿಂದಲೇ ಲಬ್ಧವೆಂದು ತಿಳಿಯಬೇಕು.[೬೪೮] ಇದನ್ನು ಹೆಚ್ಚು ಹೇಳಿ ಪ್ರಯೋಜನವೇನು? (ಅರ್ಥಾತ್ ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಪ್ರಣವದಿಂದ ಕೂಡಿರುವ ಈ ಪಂಚಾಕ್ಷರಮಂತ್ರದ ಜಪಾಭ್ಯಾಸದಿಂದ ಹಾಗೂ ಪಂಚಾಕ್ಷರ ಮಂತ್ರವನ್ನುಚ್ಚರಿಸುತ್ತಾ ತನ್ನ ಇಷ್ಟಲಿಂಗದ ಪೂಜೆಮಾಡುವುದರಿಂದ ಎಲ್ಲ ಬಗೆಯ ಬಂಧಗಳೂ ನಿವಾರಣೆಯಾಗಿ ಮೋಕ್ಷವನ್ನು ಪಡೆಯುತ್ತಾನೆ. ಅದನ್ನು ಶ್ರೀ ರೇಣುಕಾಚಾರ್ಯರು-

> ಕಿಮಿಹ ಬಹುಭಿರುಕ್ತೈರ್ಮಂತ್ರಮೇವಂ ಮಹಾತ್ಮಾ
> ಪ್ರಣವಸಹಿತಮಾದೌ ಯಸ್ತು ಪಂಚಾಕ್ಷರಾಖ್ಯಮ್।
> ಜಪತಿ ಪರಮಭಕ್ತ್ಯಾ ಪೂಜಯನ್ ದೇವದೇವಂ
> ಸ ಗತದುರಿತಬಂಧೋ ಮೋಕ್ಷಲಕ್ಷ್ಮೀಂ ಪ್ರಯಾತಿ॥[೬೪೯]

ಎಂದು ಹೇಳಿದ್ದಾರೆ.

ಮಂತ್ರದ ಆವರಣ ಶಬ್ದವಾಚ್ಯತ್ವ

ಈ ಪ್ರಕಾರ ವೀರಶೈವ ಸಿದ್ಧಾಂತದ ಅಷ್ಟಾವರಣಗಳಲ್ಲಿ ಎಂಟನೆಯ ಆವರಣವಾಗಿ ಪರಿಗಣಿಸಿರುವ ಪ್ರಣವದಿಂದ ಕೂಡಿರುವ ಪಂಚಾಕ್ಷರಮಂತ್ರವು

---

[೬೪೭] ಚಂ.ಜ್ಞಾ, ಕ್ರಿ.ಪಾ, ೪.೯೩

[೬೪೮] ಸಿ.ಶಿ, ೮.೪೪-೪೮

[೬೪೯] ಸಿ.ಶಿ, ೮.೪೯

'ಜಪತೋ ನಾಸ್ತಿ ಪಾತಕಮ್' ಎಂಬ ಉಕ್ತಿಯ ಮೇರೆಗೆ ಪಾಪಗಳನ್ನು ಪರಿಹಾರ ಮಾಡುವುದರಿಂದಲೂ ಹಾಗೂ ಮುಕ್ತಿಯನ್ನು ನೀಡುವ ಕಾರಣದಿಂದಲೂ ಸಾಧಕನನ್ನು ಸಂಸಾರದ ದುಃಖಗಳಿಂದ ಕಾಪಾಡುತ್ತದೆಯಾದ್ದರಿಂದಲೂ ಈ ಮಂತ್ರವೂ ಸಹ ರಕ್ಷಾಕವಚರೂಪ ಆವರಣ ಶಬ್ದವಾಚ್ಯವಾಗುತ್ತದೆಂದು ತಿಳಿಯಬೇಕು.

ಅಂತರಂಗದ ಅಷ್ಟಾವರಣಗಳು

ಇಲ್ಲಿಯವರೆಗೆ ಪ್ರತಿಪಾದಿತವಾದ ಅಷ್ಟಾವರಣಗಳನ್ನು ಸ್ಥೂಲ-ಸೂಕ್ಷ್ಮ, ಅಂತರಂಗ-ಬಹಿರಂಗ ಭೇದದಿಂದ ಮತ್ತೊಮ್ಮೆ ಎರಡು ವಿಭಾಗಮಾಡಲಾಗುತ್ತದೆ. ಇವುಗಳಲ್ಲಿ ದೀಕ್ಷೆಯ ಮೂಲಕ, ಶಿಕ್ಷೆಯ ಮೂಲಕ ಹಾಗೂ ಜ್ಞಾನೋಪದೇಶದ ಮೂಲಕ ನಮ್ಮನ್ನು ದುರ್ಮಾರ್ಗದಿಂದ ರಕ್ಷಿಸುವ ನಮ್ಮ ಕುಲಗುರುವು ಸ್ಥೂಲ ಅಷ್ಟಾವರಣದಲ್ಲಿ ಪರಿಗಣಿಸಲ್ಪಡುತ್ತಾನೆ. ಆ ಸದ್ಗುರುವು ಬೋಧಿಸಿದ ನೈತಿಕಜ್ಞಾನವು ನಮ್ಮ ಅಂತರಂಗದಲ್ಲಿನ ದುಷ್ಟ ಕ್ರಿಯೆಗಳಿಂದ ಸಂರಕ್ಷಿಸುತ್ತದೆ ಎನ್ನುವ ಕಾರಣ ನೈತಿಕ ಜ್ಞಾನವು ಅಂತರಂಗದ ಗುರು. ಆದುದರಿಂದ ಅಂತರಂಗದ ಅಷ್ಟಾವರಣಗಳ ಪೈಕಿ ನೈತಿಕ ಜ್ಞಾನವು ಮೊದಲನೆಯ ಆವರಣ, ಅದೇ ಗುರುವೆಂದು ತಿಳಿಯಬೇಕು.

ವೀರಶೈವರೆಲ್ಲರೂ ಪೂಜಿಸುವ ಇಷ್ಟಲಿಂಗ, ಪ್ರಾಣಲಿಂಗ ಮತ್ತು ಭಾವಲಿಂಗ ಗಳೆಂಬ ಮೂರು ಬಗೆಯ ಲಿಂಗಗಳಲ್ಲಿ ಇಷ್ಟಲಿಂಗವು ಸ್ಥೂಲಶರೀರದ ಮೇಲಿದ್ದು ಕೊಂಡು ಶರೀರವನ್ನು ರಕ್ಷಿಸುತ್ತದಾದ್ದರಿಂದ ಇಷ್ಟಲಿಂಗವು ಸ್ಥೂಲ ಆವರಣಾಂತರ್ಗತ ವಾದ ಎರಡನೆಯ ಆವರಣವು. ಉಳಿದಿರುವ ಪ್ರಾಣಲಿಂಗ-ಭಾವಲಿಂಗಗಳು ಕ್ರಮವಾಗಿ ಸಾಧಕನ ಮನಸ್ಸು ಮತ್ತು ಬುದ್ಧಿಗಳಲ್ಲಿ ಅಭಿವ್ಯಕ್ತವಾಗುವ ದುಷ್ಟಕ್ರಿಯೆಗಳಿಂದ ಮನಸ್ಸು-ಬುದ್ಧಿಗಳನ್ನು ರಕ್ಷಿಸುತ್ತದೆಯಾದ್ದರಿಂದ ಈ ಎರಡೂ ಅಂತರಂಗಾವರಣಾಂತರ್ಗತವಾದ ಎರಡನೆಯ ಆವರಣಗಳಾಗಿ ಪರಿಗಣಿತವಾಗಿವೆ.

ಶಿವಜ್ಞಾನ ಸಂಪನ್ನನಾದ ಜಂಗಮನೆಂದು ಕರೆಯಲ್ಪಡುವ ಮಹಾಪುರುಷನು ತತ್ತ್ವಜ್ಞಾನೋಪದೇಶದಿಂದಲೂ, ಸತ್ಸಂಗದ ಮೂಲಕ ಯಾವ ರೀತಿಯಾಗಿ ನಮ್ಮ ಸ್ಥೂಲಶರೀರವನ್ನು ಪ್ರಾಪಂಚಿಕ ಸುಖಗಳಿಂದ ಹಿಂದಿರುಗುವಂತೆ ಮಾಡಿ ರಕ್ಷಿಸುತ್ತಾನೆಯೋ ಹಾಗೆಯೇ ಅವನು ಉಪದೇಶಿಸಿದ ಜ್ಞಾನವೂ ಸಹ ನಮ್ಮ ಮನಸ್ಸು, ಬುದ್ಧಿಗಳನ್ನು ಶಬ್ದಾದಿ ಸಾಂಸಾರಿಕ ವಿಷಯಗಳಿಂದ ರಕ್ಷಿಸುತ್ತದೆ. ಆದುದರಿಂದ ಜಂಗಮನು ಉಪದೇಶಿಸಿದ ತತ್ತ್ವಜ್ಞಾನವು ಅಂತರಂಗಾವರಣಾಂತರ್ಗತವಾದ ಮೂರನೆಯ ಆವರಣವು ಅರ್ಥಾತ್ ತತ್ತ್ವಜ್ಞಾನವು ಅಂತರಂಗದ ಜಂಗಮವೆಂದು ತಿಳಿಯಬೇಕು.

ಗುರುವಿನ, ತನ್ನ ಇಷ್ಟಲಿಂಗದ ಮತ್ತು ಜಂಗಮನ ಚರಣಾಮೃತವನ್ನು ಪಾದೋದಕ ವೆಂದು ಕರೆಯಲಾಗುತ್ತದೆ. ಅದು ಸ್ಥೂಲರೂಪದ್ದಾಗಿರುವುದರಿಂದ ಅದು ನಾಲ್ಕನೆಯ ಬಹಿರಂಗ ಆವರಣವು. ಆ ಪಾದೋದಕದ ಪ್ರೋಕ್ಷಣೆಯಿಂದ ಸ್ಥೂಲಶರೀರದ ಶುದ್ಧಿಯಾಗುತ್ತದೆ ಎನ್ನುವ ಕಾರಣದಿಂದ ಅದು ಸ್ಥೂಲಆವರಣ. ಪರಮಾನಂದ ಜ್ಞಾನವೇ ಅಂತರಂಗದ ಪಾದೋದಕವು.

ಪರಮಾನಂದ ಏವೋಕ್ತಃ ಪಾದಶಬ್ದೇನ ನಿರ್ಮಲಃ।
ಜ್ಞಾನಂ ಚೋದಕಶಬ್ದೇನ ಪಾದೋದಕಮಿತಿ ಸ್ಮೃತಮ್॥[೬೫೦]

"ಪಾದಶಬ್ದದಿಂದ ನಿರ್ಮಲವಾದ ಮಹಾನಂದವು ಹೇಳಲ್ಪಡುತ್ತದೆ; ಉದಕ ಶಬ್ದದಿಂದ ಜ್ಞಾನವು ಹೇಳಲ್ಪಡುತ್ತದೆ; ಇವೆರಡರ ಸಂಬಂಧವುಳ್ಳುದೇ ಪಾದೋದಕ ಎನಿಸುತ್ತದೆ."

ತನ್ನ ಸ್ವರೂಪದ ಅಥವಾ ಪರಮಾತ್ಮನ ಯಾವ ನಿರ್ಮಲವಾದ ಆನಂದ ವಿದೆಯೋ ಅದು ಪಾದ ಎಂತಲೂ, ಪರಮಾತ್ಮನ ಯಾವ ಜ್ಞಾನವಿದೆಯೋ ಅದು ಉದಕವೆನಿಸುತ್ತದೆ. ತನ್ನ ಅಥವಾ ಪರಮಾತ್ಮನ ಆನಂದ ಸ್ವರೂಪದ ಜ್ಞಾನವೇ ಪಾದೋದಕ. ಈ ಬಗೆಯ ಪಾದೋದಕದ ಸ್ವೀಕಾರದಿಂದ ಅಂತರಂಗದ ತೃಪ್ತಿ ಹಾಗೂ ಪ್ರಾಪಂಚಿಕ ಸುಖಗಳ ರಕ್ಷಣೆಯಾಗುತ್ತದೆ ಎನ್ನುವ ಕಾರಣದಿಂದ ಪರಮಾನಂದಜ್ಞಾನವು ಅಂತರಂಗದ ನಾಲ್ಕನೆಯ ಆವರಣವೆಂದು ತಿಳಿಯಬೇಕು.

ತನ್ನ ಇಷ್ಟಲಿಂಗಕ್ಕೆ ನೈವೇದ್ಯ ಮಾಡಿದ ಅಥವಾ ಗುರು-ಜಂಗಮರು ಭುಂಜಿಸಿ ಉಳಿದ ಅನ್ನವು ಪ್ರಸಾದವೆನಿಸುತ್ತದೆ. ಇದೂ ಸ್ಥೂಲವಾಗಿರುವುದರಿಂದಲೂ ಹಾಗೂ ಸ್ಥೂಲ ಶರೀರವನ್ನು ಶುದ್ಧಿ ಮಾಡುವುದರಿಂದಲೂ ಇದು ಐದನೆಯ ಬಹಿರಂಗದ ಆವರಣವು. "ನೈರ್ಮಲ್ಯಂ ಮನಸೋ ಲಿಂಗಂ ಪ್ರಸಾದ ಇತಿ ಕಥ್ಯತೇ"[೬೫೧] (ಮನಸ್ಸಿನ ನಿರ್ಮಲತ್ವವು ಪ್ರಸಾದವೆನಿಸುತ್ತದೆ), "ಪ್ರಸಾದಸ್ತು ಪ್ರಸನ್ನತಾ"[೬೫೨] (ಪ್ರಸನ್ನವಾಗಿರುವುದರಿಂದ ಪ್ರಸಾದ) ಮುಂತಾದ ಉಕ್ತಿಯಂತೆ ಮನಸ್ಸಿನ ನಿರ್ಮಲತ್ವ ಹಾಗೂ ಪ್ರಸನ್ನತೆಯ ಕಾರಣದಿಂದ ಪ್ರಸಾದವೆನಿಸುತ್ತದೆ. ಇದು ಮನಸ್ಸಿನ ಪ್ರಸಾದವಾಗಿರುವುದರಿಂದ ಅಂತಃಕರಣಕೃಪೆ ಎಂದೂ ಹೇಳಲಾಗುತ್ತದೆ. ನಾಲ್ಕು ವಿಧವಾದ ಕೃಪೆಗಳಲ್ಲಿ ಇದು ಮುಖ್ಯವಾದುದರಿಂದ ಇದು ಅತಿಶಯವಾಗಿದೆ. ಈಶಕೃಪೆ, ವೇದಕೃಪೆ ಹಾಗೂ ಗುರುಕೃಪೆಯ ಸತ್ತ್ವವಿದ್ದರೂ ಅಂತಃಕರಣಕೃಪೆಯಿಲ್ಲದಿದ್ದರೆ ಯಾವುದೇ ಬಗೆಯ ಜ್ಞಾನವೂ ಉಂಟಾಗುವುದಿಲ್ಲ. ಆ ಕಾರಣ ಮನಸ್ಸಿನ ಪ್ರಸನ್ನತೆಯ ಅಂತರಂಗವು ಐದನೆಯ ಆವರಣವೆಂದು ತಿಳಿಯಬೇಕು. ಈ ಪ್ರಸಾದವು ಮನಸ್ಸಿನ ಚಂಚಲತೆಯನ್ನು ದೂರಮಾಡಿ, ಮನಸ್ಸನ್ನು ದೃಢವನ್ನಾಗಿ ಮಾಡಿ, ಮನಸ್ಸನ್ನು ರಕ್ಷಿಸುತ್ತದೆ. ಆದುದರಿಂದ ಪ್ರಸಾದವು ಆವರಣ ಶಬ್ದವೆನಿಸುತ್ತದೆ.

ಗೋಮಯದಿಂದ ನಿರ್ಮಿಸಿದ ವಿಭೂತಿಯು ಭಸ್ಮವೆನಿಸುತ್ತದೆ. ಇದು ಸ್ಥೂಲ ರೂಪದ್ದಾಗಿರುವ ಕಾರಣ ಇದನ್ನು ಸ್ಥೂಲಶರೀರದಲ್ಲಿ ಧರಿಸಲಾಗುತ್ತದೆ. ಭಸ್ಮಧಾರಣೆ ಮಾಡುವುದರಿಂದ ಶರೀರದಲ್ಲಿರುವ ನಾನಾ ಬಗೆಯ ವ್ಯಾಧಿಗಳು ಉಪಶಮನವಾಗುತ್ತವೆ. ಆದುದರಿಂದ ಗೋಮಯಭಸ್ಮವು ಬಹಿರಂಗದ ಆರನೆಯ ಆವರಣವೆನಿಸುತ್ತದೆ.

---

[೬೫೦] ಸಿ.ಶಿ, ೧೯.೭

[೬೫೧] ಸಿ.ಶಿ, ೧೧.೬

[೬೫೨] ಅಮರಕೋಶ, ೧.೩.೧೬

"ಸ ಏಷ ಭಸ್ಮ ಜ್ಯೋತಿಃ",[೬೫೩] "ಭಸ್ಮ ಜ್ಯೋತಿಃ ಸಮಾಮ್ನಾತಮ್",[೬೫೪] "ಭಸ್ಮೇದಂ ಶಾಂಭವಂ ಜ್ಯೋತಿಃ"[೬೫೫] ಇತ್ಯಾದಿ ನಿಗಮಾಗಮ ವಚನಗಳ ಪ್ರಮಾಣದಿಂದ ಪರಶಿವನ ಪ್ರಕಾಶವೇ ಭಸ್ಮ ಶಬ್ದದ ತಾತ್ತ್ವಿಕವಾದ ಅರ್ಥ. ಪರಶಿವನು ಸ್ವಯಂಜ್ಯೋತಿ ಸ್ವರೂಪಿಯು. ಪರಶಿವನು ತನ್ನ ಹೃದಯದಲ್ಲಿ ಯಾವುದನ್ನು ಪುನಃ ಪುನಃ ವಿಚಾರ ಮಾಡುವನೋ ಅದೇ ಅಂತರಂಗ ಭಸ್ಮಧಾರಣೆ ಅಥವಾ ನಿರುಪಾಧಿಕ ಭಸ್ಮಧಾರಣೆ ಯೆನಿಸುತ್ತದೆ. ಶಿವಪ್ರಕಾಶ ಚಿಂತನರೂಪವಾದ ಈ ಭಸ್ಮಧಾರಣೆಯು ಅಜ್ಞಾನವೆಂಬ ಅಂಧಕಾರವನ್ನು ನಿವಾರಣೆ ಮಾಡುವುದರ ಮೂಲಕ ಸಾಧಕನ ಅಂತರಂಗವನ್ನು ರಕ್ಷಿಸುತ್ತದೆ. ಆದುದರಿಂದ ಇದು ಆರನೆಯ ಅಂತರಂಗದ ಆವರಣವೆಂದು ನಿಶ್ಚಯವಾಗುತ್ತದೆ.

ರುದ್ರನ ನೇತ್ರದಿಂದ ಉತ್ಪನ್ನವಾದ ಬೀಜಗಳೇ ರುದ್ರಾಕ್ಷಗಳು. ಈ ವನಸ್ಪತಿಯು ಉತ್ಕೃಷ್ಟವಾದುದು. ಶರೀರದ ಮೇಲೆ ಇವುಗಳ ಧಾರಣೆಮಾಡುವುದರಿಂದ ಹಾಗೂ ಅವುಗಳನ್ನು ತೊಳೆದ ನೀರನ್ನು ಕುಡಿಯುವುದರಿಂದ ರಕ್ತದೊತ್ತಡ (ಹೆಚ್ಚು-ಕಡಿಮೆ), ಹೃದ್ರೋಗಾದಿ ಅನೇಕ ಕಾಯಿಲೆಗಳು ವಾಸಿಯಾಗುತ್ತವೆ. ಆದುದರಿಂದ ರುದ್ರಾಕ್ಷವು ಏಳನೆಯ ಬಹಿರಂಗ ಆವರಣವೆನಿಸುತ್ತದೆ. "ರುದ್ರಸ್ಯ ಅಕ್ಷೋ ರುದ್ರಾಕ್ಷಃ" ಎಂಬ ವ್ಯುತ್ಪತ್ತಿಯಂತೆ ರುದ್ರಾಕ್ಷ ಶಬ್ದಕ್ಕೆ ರುದ್ರದೃಷ್ಟಿ ಎಂಬ ಅರ್ಥವೂ ಆಗುತ್ತದೆ. "ಸರ್ವೋ ಹ್ಯೇಷ ರುದ್ರಃ",[೬೫೬] "ಏಕೋ ಹಿ ರುದ್ರೋ ನ ದ್ವಿತೀಯಾಯ ತಸ್ಥುಃ"[೬೫೭] ಇತ್ಯಾದಿ ಶ್ರುತಿ-ವಾಕ್ಯದ ಮೇರೆಗೆ ಚರಾಚರಾತ್ಮಕವಾದ ಜಗತ್ತನ್ನು ರುದ್ರನ ರೂಪವೆಂದು ನೋಡುವುದೇ ರುದ್ರದೃಷ್ಟಿಯೆನಿಸುತ್ತದೆ. ಭಗವಾನ್ ಕೃಷ್ಣನು-

> ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ।
> ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ॥[೬೫೮]

"ವಿದ್ಯಾವಿನಯಗಳಿಂದ ಕೂಡಿದ ಬ್ರಾಹ್ಮಣ, ಗೋವು, ಆನೆ, ನಾಯಿ ಮತ್ತು ನಾಯಿಯ ಮಾಂಸವನ್ನು ತಿನ್ನುವವನು -ಇವರೆಲ್ಲರಲ್ಲಿಯೂ ಜ್ಞಾನಿಗಳು ಸಮದರ್ಶಿಗಳಾಗಿರುವರು" -ಎಂಬಲ್ಲಿ ಅಂತಹ ರುದ್ರದೃಷ್ಟಿಯ ಸ್ವರೂಪವನ್ನು ವರ್ಣಿಸಿದ್ದಾನೆ. ಗುರೂಪದೇಶದ, ಶಾಸ್ತ್ರೋಪದೇಶದ ಶ್ರವಣದಿಂದ ಮತ್ತು ತನ್ನ ಸಾಧನೆಯ ಪರಿಶ್ರಮದಿಂದ ಅಂತಹ ಸಮತಾಭಾವನೆಯ ರೂಪದ ರುದ್ರದೃಷ್ಟಿಯ

---

[೬೫೩] ಬೃ.ಜಾ.ಉ, ೭.೨

[೬೫೪] ಚ.ಜ್ಞಾ, ಕ್ರಿ.ಪಾ, ೬.೬೪

[೬೫೫] ಚ.ಜ್ಞಾ, ಕ್ರಿ.ಪಾ, ೬.೬೬

[೬೫೬] ಮ.ನಾ.ಉ, ೧೦.೧೧

[೬೫೭] ಶ್ವೇ.ಉ, ೩.೨

[೬೫೮] ಭ.ಗೀ, ೫.೧೮

ಪ್ರಾಪ್ತಿಯೇ ಅಂತರಂಗ ರುದ್ರಾಕ್ಷ ಧಾರಣೆಯು. ಇದರಿಂದ ಸಾಧಕನ ಭೇದಬುದ್ಧಿಯು ನಾಶವಾಗಿ ಅದ್ವೈತ ಭಾವನೆಯು ರಕ್ಷಿತವಾಗುತ್ತದೆ. ಆದುದರಿಂದ ಇದು ಅಂತರಂಗದ ಏಳನೆಯ ಆವರಣವೆಂದು ಹೇಳಲಾಗಿದೆ.

“ಮಂತ್ರ್ಯತೇ ಗುಪ್ತಂ ಪರಿಭಾಷ್ಯತೇ” (ರಹಸ್ಯವಾಗಿ ಹೇಳಲ್ಪಡುವುದು) ಎಂಬ ವ್ಯುತ್ಪತ್ತಿಯಂತೆ ದೀಕ್ಷಾ ಸಂದರ್ಭದಲ್ಲಿ ಸದ್ಗುರುವಿನಿಂದ ರಹಸ್ಯವಾಗಿ ಉಪದೇಶಿಸಲ್ಪಡುವ ಶಿವನಾಮವೇ ಮಂತ್ರವೆನಿಸುತ್ತದೆ. ಸಪ್ತಕೋಟಿ ಮಂತ್ರಗಳಲ್ಲಿ ಶ್ರೇಷ್ಠವಾದ “ನಮಃ ಶಿವಾಯ” ಎಂಬ ಪಂಚಾಕ್ಷರ ರೂಪವಾದ ಈ ಮಂತ್ರವು ವೀರಶೈವರಿಗೆ ಇಷ್ಟಮಂತ್ರವು. ಈ ಮಂತ್ರವನ್ನು ಮತ್ತೆ ಮತ್ತೆ ಅಭ್ಯಾಸ ಮಾಡುವುದರಿಂದ ದುಷ್ಟಶಕ್ತಿಗಳಿಂದ ಸಾಧಕನ ರಕ್ಷಣೆಯಾಗುತ್ತದೆ. ಆದುದರಿಂದ ಇದು ಬಹಿರಂಗ ಆವರಣವೆನಿಸುತ್ತದೆ. ಈ ಮಂತ್ರದ ಸತತ ಅಭ್ಯಾಸದಿಂದ-

> ನಮಃ ಪದಂ ತತ್ವಲು ಜೀವವಾಚಿ ಶಿವಃಪದಂ ತತ್ಪರಮಾತ್ಮವಾಚಿ।
> ಅಯೇತಿ ತಾದಾತ್ಮ್ಯಪದಂ ತದೇತದ್ ನಮಃ ಶಿವಾಯೇತಿ ಜಗಾದ ಮಂತ್ರಃ॥[೬೫೯]

“ ‘ನಮಃ’ ಪದವು ಜೀವಾತ್ಮನ ವಾಚಿಯಾದರೆ, ‘ಶಿವ’ ಪದವು ಪರಮಾತ್ಮ ವಾಚಿಯಾಗಿದೆ. ‘ಅಯ’ ಶಬ್ದವು ಶಿವ-ಜೀವರ ಐಕ್ಯವಾಚಿಯು. ಆದುದರಿಂದ ‘ನಮಃ ಶಿವಾಯ’ ಎಂಬ ಮಂತ್ರವನ್ನು ಹೇಳು” ಎಂಬ ಮಾಯಿದೇವನ ಉಕ್ತಿಯಂತೆ ಸಾಧಕನ ಮನಸ್ಸಿನಲ್ಲಿ ಶಿವ-ಜೀವರ ಐಕ್ಯಭಾವನೆಯುಂಟಾಗುತ್ತದೆ. ಈ ಬಗೆಯ ಐಕ್ಯಭಾವನೆಯ ಜ್ಞಾನವೇ ಅಂತರಂಗ ಮಂತ್ರ. ಸತತವಾಗಿ ಈ ಮಂತ್ರದ ಮನನಮಾಡುವುದರಿಂದ ಶಿವ-ಜೀವರ ಭೇದಜ್ಞಾನವು ನಿವಾರಣೆಯಾಗಿ, ಶಿವ-ಜೀವರ ಅಭೇದಜ್ಞಾನದ ರಕ್ಷಣೆಯಾಗುತ್ತದೆ. ಆದುದರಿಂದ ಇದು ಎಂಟನೆಯ ಅಂತರಂಗದ ಆವರಣವೆಂದು ತಿಳಿಯಬೇಕು.

ಈ ಪ್ರಕಾರವಾಗಿ ಸ್ಥೂಲ ಅಷ್ಟಾವರಣಗಳು ಬಹಿರಂಗ ಮತ್ತು ಸೂಕ್ಷ್ಮ ಅಷ್ಟಾವರಣಗಳು ಅಂತರಂಗದ ರಕ್ಷಾಕವಚವಾಗಿದ್ದು ಸಾಧಕನ ಮುಕ್ತಿಮಾರ್ಗದಲ್ಲಿ ಸಹಾಯಕವಾಗಿವೆ. ಆದುದರಿಂದ ಈ ಅಷ್ಟಾವರಣಗಳು ತತ್ತ್ವಜ್ಞಾನೋದಯಕ್ಕೆ ಸಹಕಾರಿ ಸಾಧನಗಳಾಗಿ ಪರಿಗಣಿಸಲಾಗಿದೆ.

ಹೇಗೆ ಕೈ, ಕಾಲು ಮೊದಲಾದ ಅಂಗಗಳಿಲ್ಲದೆ ಲೌಕಿಕ ವ್ಯವಹಾರವು ಸುಗಮವಾಗಿ ನಡೆಯುವುದಿಲ್ಲವೋ ಹಾಗೆಯೇ ಅಷ್ಟಾವರಣಗಳಿಲ್ಲದೆ ಸಾಧಕನ ಆಧ್ಯಾತ್ಮಿಕ ವ್ಯವಹಾರವು ಸುಗಮವಾಗಿ ಸಂಪಾದಿಸಲು ಸಾಧ್ಯವಾಗುವುದಿಲ್ಲ. ಆದುದರಿಂದ ಈ ಆವರಣಗಳು ಸಾಧಕನ ಆಧ್ಯಾತ್ಮಿಕ ಅಂಗಗಳೆನಿಸುತ್ತವೆ.

■

---

[೬೫೯] ಅ.ಸೂ, ೬.೪೬

ನಾಲ್ಕನೆಯ ಪರಿಚ್ಛೇದ

ಪಂಚಾಚಾರಮೀಮಾಂಸೆ

ಶಕ್ತಿವಿಶಿಷ್ಟಾದ್ವೈತದ ಮತ್ತೊಂದು ಪರ್ಯಾಯವಾದ ವೀರಶೈವ ಮಾರ್ಗದಲ್ಲಿ ಮೋಕ್ಷವನ್ನು ಪಡೆಯಲು ಪ್ರವೃತ್ತನಾಗಿರುವ ಸಾಧಕನ ಪೂರ್ವೋಕ್ತಗಳಾದ ಅಷ್ಟಾವರಣಗಳು ಹೇಗೆ ಅವನಲ್ಲಿರುವ ದೋಷಗಳ ನಿವಾರಣೆಯ ಮೂಲಕ ಸಹಕಾರಿ ಸಾಧನಗಳಾಗಿರುವಂತೆ, ಈಗ ನಿರೂಪಿಸುವ ಐದು ಬಗೆಯ ಆಚಾರಗಳೂ ಸಹ ತ್ರಿಕರಣ ಶುದ್ಧಿಯ ಮೂಲಕ ಸಹಾಯಕವಾಗುತ್ತವೆ ಎನ್ನುವ ಕಾರಣದಿಂದ ಇವುಗಳೂ ಕೂಡ ಸಹಕಾರಿ ಸಾಧನಗಳಂತೆ ನಿರೂಪಿಸಲಾಗುವುದು. ಆದುದರಿಂದ ಮೊದಲಿಗೆ ಆಚಾರ ಸ್ವರೂಪವನ್ನು ಪ್ರತಿಪಾದಿಸಿ, ತರುವಾಯ ಕ್ರಮವಾಗಿ ಅವುಗಳ ಭೇದಗಳನ್ನು ಕುರಿತು ವಿಚಾರಮಾಡಲಾಗುವುದು.

ಆಚಾರ ಶಬ್ದದ ಅರ್ಥ

'ಆಚಾರ'ವೆಂದರೆ ಆಚರಣೆ ಅಥವಾ ಅನುಷ್ಠಾನ. ಅದು ವೇದ, ಸ್ಮೃತಿ ಮೊದಲಾದವುಗಳಲ್ಲಿ ವಿಹಿತವಾದ ಧರ್ಮ ವಿಶೇಷ. "ಸತಾಂ ಸಜ್ಜನಾನಾಂ ಆಚಾರಃ ಸದಾಚಾರಃ", "ಆಚರ್ಯತ ಇತ್ಯಾಚಾರಃ, ಸದ್ಭಿಃ ಕ್ರಿಯಮಾಣ ಆಚಾರಃ ಸದಾಚಾರಃ", "ಸತೇ ಸದ್ರೂಪಪರಮೇಶ್ವರಪ್ರಾಪ್ತಯೇ ಕ್ರಿಯಮಾಣ ಆಚಾರಃ ಸದಾಚಾರಃ" ಇತ್ಯಾದಿ ಸದಾಚಾರ ಶಬ್ದಯೋಗದ ಗೌರವದಿಂದ ಸಾತ್ತ್ವಿಕರು ಸದಾ ಅನುಷ್ಠಾನಮಾಡುವುದರಿಂದ ಇದು ಸದಾಚಾರ ಎಂದು ಕರೆಯಲ್ಪಡುತ್ತದೆ. ದೇಶಭೇದದಿಂದ, ಕುಲಭೇದದಿಂದ, ಪುರುಷಭೇದದಿಂದ ಸದಾಚಾರವು ಅನಂತವಾಗಿದ್ದರೂ ಸಹ ಶ್ರುತಿ-ಸ್ಮೃತಿಗಳಿಗೆ ವಿರುದ್ಧವಲ್ಲದ ಎಲ್ಲವೂ ಸಹ ಸದಾಚಾರವೇ ಆಗುತ್ತದೆ. ಅದೇ ಧರ್ಮಕ್ಕೆ ಮೂಲ. ಲೌಗಾಕ್ಷಿಭಾಸ್ಕರನು ತನ್ನ ನ್ಯಾಯಸಿದ್ಧಾಂತಮಂಜರೀಪ್ರಕಾಶ ಎಂಬ ಗ್ರಂಥದಲ್ಲಿ ಹೀಗೆ ನಿರೂಪಿಸಿದ್ದಾನೆ-

> ವಿದ್ವೇಷರಾಗರಹಿತಾ ಅನುತಿಷ್ಠಂತಿ ಯಂ ದ್ವಿಜಾಃ।
> ವಿದ್ವಾಂಸಸ್ತಂ ಸದಾಚಾರಂ ಧರ್ಮಮೂಲಂ ವಿದುರ್ಬುಧಾಃ॥[೧]

---

೧. ವಾಚಸ್ಪತ್ಯಮ್, ಪು. ೬೩೧

"ಯಾವುದನ್ನು ದ್ವಿಜರು ದ್ವೇಷ - ರಾಗರಹಿತಭಾವನೆಯಿಂದ ಅನುಷ್ಠಾನ ಮಾಡುತ್ತಾರೆಯೋ ಆ ಸದಾಚಾರವನ್ನು ಧರ್ಮಕ್ಕೆ ಮೂಲವೆಂದು ವಿದ್ವಾಂಸರು ಅರಿಯುತ್ತಾರೆ." ಇದಕ್ಕೆ ವಿರುದ್ಧವಾದ ಅನುಷ್ಠಾನವನ್ನು ಕದಾಚಾರ ಅಥವಾ ದುರಾಚಾರ ವೆಂದು ಕರೆಯಲಾಗಿದೆ.

ಆಚಾರದ ಮಹಿಮೆ

ಆಚಾರವು ಮಾನವನ ಉತ್ಕೃಷ್ಟವಾದ ಅಲೌಕಿಕ ಆಭರಣ. ವಸ್ತ್ರ-ಆಭರಣ ಗಳಿಗಿಂತಲೂ ಆಚಾರವಂತರಾಗಿರುವುದೇ ಉತ್ತಮವಾದುದು. ವಸ್ತ್ರಾದಿಗಳಿಂದ ಅಲಂಕೃತನಾಗಿದ್ದರೂ ಸಹ ಆಚಾರವಿಲ್ಲದ ಮನುಷ್ಯನು ಪ್ರಪಂಚದಲ್ಲಿ ನಿಂದಿತನಾಗುತ್ತಾನೆ. ವಸ್ತ್ರಾದಿಗಳಿಲ್ಲದಿದ್ದರೂ ಆಚಾರವಂತನಾಗಿದ್ದರೆ ಲೋಕದಲ್ಲಿ ಪೂಜಾರ್ಹನಾಗುತ್ತಾನೆ. ಅಂತೆಯೇ ಜ್ಞಾನ ಮತ್ತು ಆಚಾರಗಳನ್ನು ತುಲನೆ ಮಾಡಿದಾಗ ಜ್ಞಾನವೇ ಉತ್ಕೃಷ್ಟವೆಂದು ತೋರುತ್ತದೆ. ಆದರೂ ಸಹ ಮನುಷ್ಯನು ಒಂದು ವೇಳೆ ಆಚಾರವಿಹೀನನಾದರೆ ಶಿವಾನುಗ್ರಹವನ್ನು ಪಡೆಯಲಾರನು. ಆದುದರಿಂದ ಶಿವಾನುಗ್ರಹಾಕಾಂಕ್ಷಿಗಳಾದ ಜ್ಞಾನಿಗಳು ಪ್ರಾಣವಿರುವವರೆಗೂ ಆಚಾರವಂತ ರಾಗಿರಬೇಕು. ಅದನ್ನು ಚಂದ್ರಜ್ಞಾನಾಗಮವು ಹೀಗೆ ನಿರೂಪಿಸುತ್ತದೆ-

ಆಚಾರ ಏವ ಸರ್ವೇಷಾಮಲಂಕಾರಾಯ ಕಲ್ಪತೇ।
ಆಚಾರಹೀನಃ ಪುರುಷೋ ಲೋಕೇ ಭವತಿ ನಿಂದಿತಃ।।
ಜ್ಞಾನೇನಾಚಾರಯುಕ್ತೇನ ಪ್ರಸೀದತಿ ಮಹೇಶ್ವರಃ।
ತಸ್ಮಾದಾಚಾರವಾನ್ ಜ್ಞಾನೀ ಭವೇದಾದೇಹಪಾತನಮ್।।
ಆಚಾರಃ ಪರಮೋ ಧರ್ಮಃ ಆಚಾರಃ ಪರಮಂ ಧನಮ್।
ಜ್ಞಾನಮಾಚಾರಹೀನಂ ಚೇನ್ನ ತದ್ಭವತಿ ಸಿದ್ಧಯೇ।।[೨]

"ಆಚಾರವೇ ಎಲ್ಲರಿಗೂ ಭೂಷಣವೆಂದು ಹೇಳಲಾಗಿದೆ. ಆಚಾರಹೀನನಾದ ವ್ಯಕ್ತಿಯು ಲೋಕದಲ್ಲಿ ನಿಂದೆಗೆ ಒಳಗಾಗುತ್ತಾನೆ. ಆಚಾರಸಹಿತವಾದ ಜ್ಞಾನದಿಂದ ಮಹೇಶ್ವರನ ಅನುಗ್ರಹ ಪ್ರಾಪ್ತವಾಗುತ್ತದೆ. ಆದುದರಿಂದ ದೇಹ ಬಿದ್ದುಹೋಗುವವರೆಗೆ ಆಚಾರಯುಕ್ತ ನಾದ ಜ್ಞಾನಿಯಾಗಬೇಕು. ಆಚಾರವೇ ಶ್ರೇಷ್ಠವಾದ ಧರ್ಮ, ಆಚಾರವೇ ಶ್ರೇಷ್ಠ ಸಂಪತ್ತು. ಜ್ಞಾನವು ಆಚಾರರಹಿತವಾಗಿದ್ದರೆ ಅದು ಸಿದ್ಧಿಗೆ ಒದಗುವುದಿಲ್ಲ." ಆದುದರಿಂದ ಅಲೌಕಿಕ ಮತ್ತು ಪಾರಮಾರ್ಥಿಕ ಜೀವನದಲ್ಲಿ ಆಚಾರದ ಅವಶ್ಯಕತೆಯು ಬಹಳಷ್ಟಿದೆ.

ಆಚಾರವಂತರ ಅಂತರಾತ್ಮವು ಸದಾ ಪ್ರಸನ್ನವಾಗಿರುತ್ತದೆ, ದೇಹದ ಸ್ವಾಸ್ಥ್ಯವು ವೃದ್ಧಿಸುತ್ತದೆ ಹಾಗೂ ದೀರ್ಘಾಯುವಾಗುತ್ತಾರೆ. ದುರಾಚಾರಿಯು ಲೋಕದಲ್ಲಿ ನಿಂದಿತನಾಗುತ್ತಾನೆ, ಚಿಂತೆ-ರೋಗಾದಿಗಳಿಂದ ಪೀಡಿತನಾಗುತ್ತಾನಲ್ಲದೆ ಅಲ್ಪಾಯುವಾಗಿ ದುಃಖಿಯಾಗುತ್ತಾನೆ. ಒಂದು ವೇದಮಂತ್ರವಾಗಲೀ, ಶಾಸ್ತ್ರವಾಗಲೀ, ಶ್ರೌತ

---

[೨] ಚ.ಜ್ಞಾ, ಕ್ರಿ.ಪಾ, ೯.೧೬-೧೮

ಕರ್ಮವಾಗಲೀ, ಶ್ರೀಗುರುವಿನ ದರ್ಶನವೂ ಸಹ ದುರಾಚಾರಿಯನ್ನು ಪಾವನಗೊಳಿಸುವುದಿಲ್ಲ.[೩] ಆದುದರಿಂದ ಪ್ರತಿಯೊಬ್ಬರೂ ಕೂಡ ಯಾವಾಗಲೂ ಸದಾಚಾರ ಸಂಪನ್ನರೊಂದಿಗೆ ವ್ಯವಹರಿಸಬೇಕು. ಸದಾಚಾರವೇ ನಮ್ಮ ಕಲ್ಪವೃಕ್ಷ. ಅದರಿಂದಲೇ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಬಗೆಯ ಪುರುಷಾರ್ಥಗಳ ಸಿದ್ಧಿಯುಂಟಾಗುತ್ತದೆ.[೪] ಆ ಕಾರಣದಿಂದಲೇ ವೀರಶೈವ ಸಿದ್ಧಾಂತದಲ್ಲಿ ಜ್ಞಾನವು ಮಾತ್ರ ಮೋಕ್ಷಕ್ಕೆ ಹೇತುವಾಗಿರದೆ, ಜ್ಞಾನವು ಆಚಾರಸಹಿತವಾದಾಗ ಹೇತುವಾಗುತ್ತದೆಂದು ಅಂಗೀಕರಿಸಿ ಜ್ಞಾನ-ಕರ್ಮಗಳ ಸಮುಚ್ಚಯವಾದವನ್ನು ಒಪ್ಪಲಾಗಿದೆ. ಆದುದರಿಂದ ಈ ಸಿದ್ಧಾಂತದಲ್ಲಿ ಜ್ಞಾನೋತ್ಪತ್ತಿಗೆ ಮೊದಲು ಮತ್ತು ನಂತರದಲ್ಲಿ ಪ್ರತಿಯೊಬ್ಬರೂ ಆಚರಿಸ ಬೇಕಾಗಿರುವ ಐದು ಬಗೆಯ ಆಚಾರಗಳು ನಿರೂಪಿತವಾಗಿದೆ. ಅವುಗಳನ್ನು ಚಂದ್ರಜ್ಞಾನಾಗಮವು ಹೀಗೆ ತಿಳಿಸುತ್ತದೆ-

> ಲಿಂಗಾಚಾರಃ ಸದಾಚಾರಃ ಶಿವಾಚಾರಸ್ತಥೈವ ಚ।
> ಭೃತ್ಯಾಚಾರೋ ಗಣಾಚಾರಃ ಪಂಚಾಚಾರಾಃ ಪ್ರಕೀರ್ತಿತಾಃ॥[೫]

"ಲಿಂಗಾಚಾರ, ಸದಾಚಾರ, ಶಿವಾಚಾರ, ಭೃತ್ಯಾಚಾರ ಮತ್ತು ಗಣಾಚಾರ -ಈ ಐದು ಪಂಚಾಚಾರಗಳೆಂದು ಪ್ರಸಿದ್ಧವಾಗಿವೆ." ಈ ಪಂಚಾಚಾರಗಳನ್ನು ವೀರಶೈವರು ತಮ್ಮ ಪ್ರಾಣದಂತೆ ಅನುಸರಿಸಬೇಕು. ಈಗ ಕ್ರಮವಾಗಿ ಈ ಪಂಚಾಚಾರಗಳ ಸ್ವರೂಪ, ಅವುಗಳ ಅವಾಂತರ ಭೇದಗಳು ಹಾಗೂ ಆಚರಣೆಯ ಪದ್ಧತಿಗಳನ್ನು ಕುರಿತು ವಿಚಾರ ಮಾಡಲಾಗುವುದು.

೧. ಲಿಂಗಾಚಾರ

ಜೀವಾತ್ಮನು (ಅಂಗ) ಪರಮಾತ್ಮನ (ಲಿಂಗ) ಸ್ವರೂಪವನ್ನು ಪಡೆಯಲು ಉಪದಿಷ್ಟವಾದ ಆಚಾರವು ಲಿಂಗಾಚಾರವೆನಿಸಿದೆ. ದೈಹಿಕವಾಗಿ ಶಿವಲಿಂಗದ ಪೂಜೆ ಮಾಡುವುದು, ಮಾನಸಿಕವಾಗಿ ಶಿವನ ಧ್ಯಾನಮಾಡುವುದು ಹಾಗೂ ಶಿವನ ನಿದಿಧ್ಯಾಸನವೇ ಲಿಂಗಾಚಾರವೆನಿಸುತ್ತದೆ. ಇದನ್ನು ಚಂದ್ರಜ್ಞಾನಾಗಮವು ಹೀಗೆ ನಿರೂಪಿಸಿದೆ-

> ಗುರುಣಾ ದತ್ತಲಿಂಗಾದ್ ವೈ ನಾಸ್ತಿ ದೈವಂ ಮಹೀತಲೇ।
> ಇತಿ ಭಾವಾನುಸಂಧಾನಂ ಲಿಂಗಾಚಾರಃ ಸ ಉಚ್ಯತೇ॥[೬]

---

[೩] ಆಚಾರಹೀನಂ ನ ಪುನಂತಿ ವೇದಾ ಹ್ಯಾಚಾರಹೀನಂ ನ ಪುನಾತಿ ಶಾಸ್ತ್ರಮ್।
ಆಚಾರಹೀನಂ ನಹಿ ಶ್ರೌತಕರ್ಮ ಹ್ಯಾಚಾರಹೀನಂ ನ ಗುರುಃ ಪುನಾತಿ॥
-ಬ್ರಹ್ಮಸೂತ್ರ, ಶ್ರೀಕರಭಾಷ್ಯ, ೩.೧.೧೦, ಪು. ೧೮೧

[೪] ಧರ್ಮೋಽಸ್ಯ ಮೂಲಂ ಧನಮಸ್ಯಶಾಖಾ ಪುಷ್ಪಂ ಚ ಕಾಮಃ ಫಲಮಸ್ಯ ಮೋಕ್ಷಃ।
ಅಸೌ ಸದಾಚಾರತರುಃ ಸುಕೇಶಿನ್ ಸಂಸೇವಿತೋ ಯೇನ ಸ ಪುಣ್ಯಭೋಕ್ತಾ॥
-ವಾಚಸ್ಪತ್ಯಮ್, ಪು.೬೩೧

[೫] ಚ.ಜ್ಞಾ, ಕ್ರಿ.ಪಾ, ೯.೪

[೬] ಚ.ಜ್ಞಾ, ಕ್ರಿ.ಪಾ, ೯.೫

"ಗುರುವು ಕೊಟ್ಟ ಇಷ್ಟಲಿಂಗಕ್ಕಿಂತ ಮಿಗಿಲಾದ ದೈವವು ಭೂಮಿಯ ಮೇಲೆ ಇನ್ನೊಂದಿಲ್ಲ ಎಂಬ ಭಾವನಾತ್ಮಕ ಸಂಬಂಧವು ಲಿಂಗಾಚಾರ ಎನಿಸುತ್ತದೆ." ಇದರ ತಾತ್ಪರ್ಯವಿಷ್ಟು- ವೀರಶೈವ ಸಿದ್ಧಾಂತದಲ್ಲಿ ಶ್ರೀಗುರುವು ಶಿಷ್ಯನಿಗೆ ಕ್ರಿಯಾದೀಕ್ಷೆಯ ಸಂದರ್ಭದಲ್ಲಿ ಇಷ್ಟಲಿಂಗವನ್ನು ಅನುಗ್ರಹಿಸುತ್ತಾನೆ, ಮಂತ್ರದೀಕ್ಷೆಯಿಂದ ಪ್ರಾಣಲಿಂಗ ಸ್ವರೂಪವನ್ನು ಉಪದೇಶಿಸುತ್ತಾನೆ ಹಾಗೂ ವೇಧಾದೀಕ್ಷೆಯ ಮೂಲಕ ಭಾವಲಿಂಗದ ಅನುಸಂಧಾನ ಮಾಡುತ್ತಾನೆಂಬುದನ್ನು ಅಷ್ಟಾವರಣದ ನಿರೂಪಣೆಯ ಸಂದರ್ಭದಲ್ಲಿ ವಿಸ್ತಾರವಾಗಿ ಪ್ರತಿಪಾದಿಸಲಾಗಿದೆ. ಈ ರೀತಿಯಾಗಿ ತ್ರಿವಿಧ ದೀಕ್ಷೆಗಳಿಂದ ಪ್ರಾಪ್ತವಾದ ಇಷ್ಟ-ಪ್ರಾಣ- ಭಾವಗಳೆಂಬ ತ್ರಿವಿಧ ಲಿಂಗಗಳನ್ನು ಗುರುವಿನ ಉಪದೇಶದ ಮೇರೆಗೆ ಅರ್ಚನ- ಚಿಂತನ-ನಿದಿಧ್ಯಾಸನಾದಿಗಳಲ್ಲಿನ ಆಸಕ್ತಿಯೇ ಲಿಂಗಾಚಾರ.

ದೀಕ್ಷಾಸಂಪನ್ನರಾದ ವೀರಶೈವರಿಗೆ ತನ್ನ ಇಷ್ಟಲಿಂಗ, ಪ್ರಾಣಲಿಂಗ ಮತ್ತು ಭಾವಲಿಂಗಗಳನ್ನು ಹೊರತುಪಡಿಸಿ ಇತರ ದೇವತೆಗಳ ಪೂಜಾದಿಗಳು ನಿಷಿದ್ಧವಾಗಿವೆ. ಆದುದರಿಂದಲೇ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು-

ನಾರ್ಚಯೇದನ್ಯದೇವಾಂಸ್ತು ನ ಸ್ಮರೇನ್ನ ಚ ಕೀರ್ತಯೇತ್।
ನ ತನ್ನೈವೇದ್ಯಮನಶ್ನೀಯಾಚ್ಛಿವಭಕ್ತೋ ದೃಢವ್ರತಃ॥
ಯದ್ ಗೃಹೇಷ್ವನ್ಯದೇವೋಽಸ್ತಿ ತದ್‌ಗೃಹಾಣಿ ಪರಿತ್ಯಜೇತ್।
ನಾನ್ಯದೇವಾರ್ಚಕಾನ್ ಮರ್ತ್ಯಾನ್ ಪೂಜಾಕಾಲೇ ನಿರೀಕ್ಷಯೇತ್॥
ಸದಾ ಶಿವೈಕನಿಷ್ಠಾನಾಂ ವೀರಶೈವಾಧ್ವವರ್ತಿನಾಮ್।
ನಹಿ ಸ್ಥಾವರಲಿಂಗಾನಾಂ ನಿರ್ಮಾಲ್ಯಾದ್ಯುಪಯುಜ್ಯತೇ॥[೭]

"ದೃಢವ್ರತಿಯಾದ ಶಿವಭಕ್ತನು ಶಿವೇತರ ದೇವತೆಗಳನ್ನು ಪೂಜಿಸಬಾರದು; ಸ್ಮರಿಸಬಾರದು; ಸ್ತುತಿಸಬಾರದು; ನೈವೇದ್ಯವನ್ನು ಸ್ವೀಕರಿಸಬಾರದು. ಯಾರ ಮನೆಗಳಲ್ಲಿ ಶಿವೇತರ ದೇವತೆಯಿರುವುದೋ, ಆ ಮನೆಗಳನ್ನು ಬಿಡಬೇಕು; ಶಿವೇತರದೇವ ಪೂಜಕರನ್ನು ಶಿವಪೂಜಾಕಾಲದಲ್ಲಿ ನೋಡಬಾರದು. ಯಾವಾಗಲೂ ಶಿವಲಿಂಗ ನಿಷ್ಠರೂ, ವೀರಶೈವ ಮಾರ್ಗನಿರತರೂ ಆದ ಶಿವಭಕ್ತರು ಸ್ಥಾವರಲಿಂಗಗಳ ನೈವೇದ್ಯವನ್ನು ಸ್ವೀಕರಿಸಬಾರದು" ಎಂದು ತನ್ನ ಇಷ್ಟಲಿಂಗ-ಪ್ರಾಣಲಿಂಗ-ಭಾವಲಿಂಗಗಳನ್ನು ಬಿಟ್ಟು ಸ್ಥಾವರಲಿಂಗಗಳ ಅಥವಾ ಬೇರೆ ದೇವತೆಗಳ ಪೂಜಾದಿಗಳನ್ನು ನಿಷೇಧಿಸಿ ಲಿಂಗನಿಷ್ಠೆಯ ಪ್ರತಿಪಾದನೆಯ ಮೂಲಕ ಲಿಂಗಾಚಾರದ ಸ್ವರೂಪವನ್ನು ವರ್ಣಿಸಿದ್ದಾರೆ.

ಇಲ್ಲಿ ನಿರೂಪಿತವಾಗಿರುವ ಬೇರೆ ದೇವತೆಗಳ ಅರ್ಚನಾದಿಗಳ ನಿಷೇಧವೆಂದರೆ ಅವುಗಳನ್ನು ಕೀಳಾಗಿ ಪ್ರತಿಪಾದಿಸಲಾಗಿದೆ ಎಂದರ್ಥವಾಗಿರದೆ "ನಹಿ ನಿಂದಾ ನಿಂದಿತುಮೀಷ್ಟೆ, ಅಪಿ ತು ಸ್ತುತ್ಯಮೇವ ಸ್ತೌತಿ" (ನಿಂದಾರೂಪದಲ್ಲಿರುವುದು ನಿಂದೆಗೋಸ್ಕರ ಅಲ್ಲ. ಆದರೆ ಸ್ತುತ್ಯವಾದುದನ್ನೇ ಅದು ಹೇಳುತ್ತದೆ) ಎಂಬ ಮೀಮಾಂಸಾ

---

[೭] ಸಿ.ಶಿ, ೯.೩೧-೩೩

ಶಾಸ್ತ್ರದ ನ್ಯಾಯದಂತೆ ತನ್ನ ಸಿದ್ಧಾಂತ ಹಾಗೂ ಇಷ್ಟಲಿಂಗಾದಿಗಳಲ್ಲಿ ಹೆಚ್ಚು ಶ್ರದ್ಧೆಯಿಂದಿರಬೇಕೆಂದು ಅರ್ಥ.

ಅಲ್ಲದೆ ವೀರಶೈವರ ಈ ಇಷ್ಟಲಿಂಗೋಪಾಸನೆಯು ಸತಿ-ಪತಿಭಾವದಿಂದ ಕೂಡಿದೆ. ಸಾಧಕನು ತನ್ನ ಇಷ್ಟಲಿಂಗವನ್ನು ಪತಿ ಎಂತಲೂ ತನ್ನನ್ನು ಸತಿ ಎಂತಲೂ ಭಾವಿಸುತ್ತಾನೆ. ಲೋಕದಲ್ಲಿ ಪತಿವ್ರತೆಯಾದ ಸ್ತ್ರೀ ಹೇಗೆ ತನ್ನ ಪತಿಯನ್ನು ಹೊರತುಪಡಿಸಿ ಅನ್ಯಪುರುಷರೊಡನೆ ಪ್ರೀತಿಯಿಂದಿರುವುದರಿಂದ ದೂಷಿತಳಾಗುತ್ತಾಳೆಯೋ ಹಾಗೆಯೇ ಭಕ್ತನೂ ಸಹ ತನ್ನ ಇಷ್ಟಲಿಂಗವನ್ನು ಹೊರತುಪಡಿಸಿ ಅನ್ಯದೇವತೋಪಾಸನೆ ಮಾಡುವುದರಿಂದ ದೂಷಿತನಾಗುತ್ತಾನೆ ಎನ್ನುವ ಕಾರಣದಿಂದ ಅನ್ಯದೇವತೋಪಾಸನೆಯು ನಿಷಿದ್ಧವೆಂದು ತಿಳಿಯಬೇಕು.

ಈ ಲಿಂಗಾಚಾರದ ಅನುಷ್ಠಾನದಿಂದ ಸಾಧಕನಿಗೆ ಏಕದೇವೋಪಾಸನೆಯ ನಿಷ್ಠೆ ಹಾಗೂ ಮನೋದಾರ್ಢ್ಯತೆ ಉಂಟಾಗುತ್ತದೆ. ಈ ಮನೋದಾರ್ಢ್ಯತೆಯ ಕಾರಣದಿಂದಲೇ ಅಂತರ್ಮುಖಿಯಾದ ಸಾಧಕನು ಅಂತರ್ಲಿಂಗಾನುಸಂಧಾನದಲ್ಲಿ ಸಮರ್ಥನಾಗುತ್ತಾನೆ.

೨. ಸದಾಚಾರ

ವೀರಶೈವರ ಪಂಚಾಚಾರಗಳಲ್ಲಿ ಸದಾಚಾರವು ಎರಡನೆಯದು. ಶಿವನಿಗೆ ಮತ್ತು ಶಿವಭಕ್ತರಿಗೆ ಸಂತೋಷವನ್ನುಂಟುಮಾಡುವುದರಿಂದ ಇದನ್ನು ಸದಾಚಾರ[೮] ಎಂದು ಕರೆಯಲಾಗಿದೆ. ಸಜ್ಜನರಿಗೆ ಸಂತೋಷವನ್ನುಂಟುಮಾಡುವ ಇದರ ಸ್ವರೂಪವನ್ನು ಚಂದ್ರಜ್ಞಾನಾಗಮದಲ್ಲಿ ಈ ರೀತಿಯಾಗಿ ನಿರೂಪಿಸಲಾಗಿದೆ-

> ಧರ್ಮಾರ್ಜಿತೇನ ದ್ರವ್ಯೇಣ ಯತ್ ಸಂತರ್ಪಣಮನ್ವಹಮ್।
> ಗುರುಲಿಂಗಜಂಗಮಾನಾಂ ಸದಾಚಾರ ಇತಿ ಸ್ಮೃತಃ॥[೯]

ಇದರ ಭಾವವಿಷ್ಟು- ವೀರಶೈವಧರ್ಮ-ದರ್ಶನದಲ್ಲಿ ಗುರು, ಲಿಂಗ, ಜಂಗಮ -ಈ ಮೂರು ಪೂಜಾರ್ಹವಾದವುಗಳೆಂದು ಅಷ್ಟಾವರಣ ಪ್ರಕರಣದಲ್ಲಿ ನಿರೂಪಿಸಲಾಗಿದೆ. ಅವುಗಳ ಅನುಗ್ರಹವನ್ನು ಸಂಪಾದಿಸಲು ಧರ್ಮಮಾರ್ಗದಿಂದ ಹಣವನ್ನು ಸಂಪಾದಿಸಿ ತನ್ನ ಶಕ್ತ್ಯಾನುಸಾರ ಗುರು, ಲಿಂಗ, ಜಂಗಮರ ಸೇವೆಯನ್ನು ಪ್ರತಿಯೊಬ್ಬರೂ ಮಾಡಬೇಕೆಂಬ ನಿಯಮವು ವೀರಶೈವ ಸಿದ್ಧಾಂತದಲ್ಲಿದೆ. ಈ ಸೇವೆಯು ಅನ್ನ, ವಸ್ತ್ರ, ಧನಾದಿಗಳನ್ನು ದಾನಮಾಡುವ ರೂಪದಲ್ಲಿರುತ್ತದೆ.

---

[೮] ಸಜ್ಜನಃ ಶಿವಭಕ್ತಶ್ಚ ಯೇನ ಮಾರ್ಗೇಣ ಸರ್ವದಾ।
ತೋಷ್ಯತೇ ಚ ಮಹಾದೇವಿ ಸದಾಚಾರಃ ಸ ವೈ ಸ್ಮೃತಃ॥
-ಸೂಕ್ಷ್ಮಗಮ, ಕ್ರಿ.ಪಾ, ೮.೭

[೯] ಚ.ಜ್ಞಾ, ಕ್ರಿ.ಪಾ, ೯.೬

ತಾನು ಊಟಮಾಡುವ ಅನ್ನಾದಿಗಳನ್ನು ದಾನಮಾಡದೆ ಉಪಭೋಗ ಮಾಡಿದರೆ "ತೈರ್ದತ್ತಾನಪ್ರದಾಯೈಭ್ಯೋ ಯೋ ಭುಂಕ್ತೇ ಸ್ತೇನ ಏವ ಸಃ"[೧೦] (ದೇವತೆಗಳಿಂದ ಅನುಗ್ರಹಿಸಲ್ಪಟ್ಟ (ಭೋಗಗಳನ್ನು) ಅವರಿಗೆ ಕೊಡದೆ ಯಾವನು ಅನುಭವಿಸುತ್ತಾನೆಯೋ ಅವನು ಕಳ್ಳನೇ ಸರಿ) ಎಂಬ ಸ್ಮೃತಿಪ್ರಮಾಣದಂತೆ ಮನುಷ್ಯನು ಪಾಪಿಯಾಗುತ್ತಾನೆ. ಆದುದರಿಂದ ದಾರಿಹೋಕ, ಕ್ಷೀಣವೃತ್ತಿಯವ, ವಿದ್ಯಾರ್ಥಿ, ಗುರುಪೋಷಕ, ಯತಿ ಹಾಗೂ ಬ್ರಹ್ಮಚಾರಿಗಳೆಂಬ ಆರು ಬಗೆಯ ಧರ್ಮಭಿಕ್ಷುಕರಲ್ಲಿ ಯಾವನಾದರೂ ಒಬ್ಬನನ್ನು ಪ್ರತಿನಿತ್ಯವೂ ಅತಿಥಿಯಾಗಿ ಆಹ್ವಾನಿಸಿ ಅವನಿಗೆ ಉಣಬಡಿಸಬೇಕೆಂದು ಧರ್ಮಶಾಸ್ತ್ರದ ಅಪ್ಪಣೆಯಿರುತ್ತದೆ. ಆ ಕಾರಣ ಅಡುಗೆಯು ಸಿದ್ಧವಾದ ನಂತರ ನಾಯಿ, ಪತಿತ, ಚಂಡಾಲ, ಪಾಪಿ, ರೋಗಿ, ಕಾಗೆ ಮತ್ತು ಕ್ರಿಮಿ-ಕೀಟಗಳಿಗೋಸ್ಕರವಾಗಿ ಹೊರಗೆ ಸ್ವಲ್ಪ ಅನ್ನವನ್ನು ಚೆಲ್ಲಿ, ಹಸುವಿನಲ್ಲಿ ಹಾಲನ್ನು ಕರೆಯುವಷ್ಟು ಕಾಲ ಮಾತ್ರ ಅತಿಥಿಗಳನ್ನು ಕಾಯುತ್ತಾ ನಿಂತಿದ್ದು ನಂತರದಲ್ಲಿ ಗೃಹಸ್ಥನು ಭೋಜನ ಶಾಲೆಗೆ ಹೋಗಬೇಕು[೧೧] ಅನ್ಯಥಾ ಅವನು ದೋಷಯುಕ್ತನಾಗಬಹುದು.

ಈ ಅನ್ನಾದಿ ದಾನಗಳನ್ನು ಫಲಾಪೇಕ್ಷೆಯಿಲ್ಲದೆ ಕರ್ತವ್ಯ ಭಾವನೆಯಿಂದ ಮಾಡಬೇಕು. ವೀರಶೈವ ಸಿದ್ಧಾಂತದಲ್ಲಿ ಸೋಪಾಧಿ, ನಿರುಪಾಧಿ ಮತ್ತು ಸಹಜವೆಂದು ತ್ರಿವಿಧ ದಾನಗಳು ಪ್ರತಿಪಾದಿತವಾಗಿವೆ. ಪ್ರತಿಫಲದ ಅಪೇಕ್ಷೆಯಿಂದ ಮಾಡುವ ದಾನವು ಸೋಪಾಧಿಕದಾನವೆನಿಸುತ್ತದೆ. ಯಾವುದೇ ಫಲಾಪೇಕ್ಷೆಯಿಲ್ಲದೆ ಈಶ್ವರಾರ್ಪಿತ ಬುದ್ಧಿಯಿಂದ ಕೊಡಲ್ಪಡುವ ದಾನವು ನಿರುಪಾಧಿಕವೆನಿಸುತ್ತದೆ. ದಾನವನ್ನು ಸ್ವೀಕರಿಸುವವನು (ಆದಾತೃ), ದಾನ ಮಾಡುವವನು (ದಾತೃ) ಮತ್ತು ದಾನಮಾಡುವ ವಸ್ತು (ದೇಯ) ಇವುಗಳೆಲ್ಲ ಶಿವಸ್ವರೂಪಿಗಳೆಂದು ಭಾವಿಸಿ ತನ್ನಲ್ಲಿ ಅಕರ್ತೃತ್ವ ಭಾವನೆಯಿಂದ ಮಾಡುವ ದಾನವು ಸಹಜದಾನವೆಂದು ಕರೆಯಲ್ಪಟ್ಟಿದೆ.[೧೨]

---

[೧೦] ಭಗವದ್ಗೀತೆ, ೩.೧೨

[೧೧] ಇತ್ಥಂ ಭೂತಬಲಿಂ ದತ್ವಾ ಕಾಲಂ ಗೋದೋಹಮಾತ್ರಕಮ್।
ಪ್ರತೀಕ್ಷ್ಯಾತಿಥಿಮಾಯಾಂತಂ ವಿಶೇದ್ ಭೋಜ್ಯಗೃಹಂ ತತಃ॥
-ವಾಚಸ್ಪತ್ಯಮ್, ಪೃ.೬೩೪

[೧೨] ಫಲಾಭಿಸಂಧಿಸಂಯುಕ್ತಂ ದಾನಂ ಯದ್ವಿಹಿತಂ ಭವೇತ್।
ತತ್ಸೋಪಾಧಿಕಮಾಖ್ಯಾತಂ ಮುಮುಕ್ಷುಭಿರನಾದೃತಮ್॥
ಫಲಾಭಿಸಂಧಿನಿರ್ಮುಕ್ತರೀಶ್ವರಾರ್ಪಿತಕಾಂಕ್ಷಿತಮ್।
ನಿರುಪಾಧಿಕಮಾಖ್ಯಾತಂ ದಾನಂ ದಾನವಿಶಾರದೈಃ॥
ಆದಾತೃದಾತೃದೇಯಾನಾಂ ಶಿವಭಾವಂ ವಿಚಿಂತ್ಯ ಹಿ।
ಆತ್ಮನೋಽಕರ್ತೃಭಾವಂ ಚ ಯದ್ದತ್ತಂ ಸಹಜಂ ತು ತತ್॥
-ಸಿ.ಶಿ, ೯.೮೧-೮೩

"ಸಹಜಂ ದಾನಮುತ್ಕೃಷ್ಟಂ ಸರ್ವದಾನೋತ್ತಮೋತ್ತಮಮ್"[೧೩] (ಸಹಜದಾನವು ಶ್ರೇಷ್ಠವಾಗಿದ್ದು, ಎಲ್ಲ ದಾನಗಳಲ್ಲಿಯೂ ಉತ್ತಮೋತ್ತಮವಾದುದು) ಎಂಬ ಉಕ್ತಿಯ ಮೇರೆಗೆ ಈ ಹಿಂದೆ ಹೇಳಿದ ಸೋಪಾಧಿ-ನಿರುಪಾಧಿ ದಾನಗಳಿಗಿಂತಲೂ ಉತ್ಕೃಷ್ಟವಾದ ಈ ಸಹಜದಾನದಿಂದ ಪೂಜಾರ್ಹರಾದ ಗುರು, ಲಿಂಗ, ಜಂಗಮಾದಿಗಳನ್ನು ಪ್ರತಿನಿತ್ಯವೂ ಸಂತೃಪ್ತಿಗೊಳಿಸುವುದೇ ವೀರಶೈವರ ಸದಾಚಾರವೆನಿಸಿದೆ. ಈ ಸದಾಚಾರವು ಎಂಟು ಬಗೆಯ ಶೀಲಗಳಿಂದ ಕೂಡಿರುತ್ತದೆ. ಅದನ್ನು ಚಂದ್ರಜ್ಞಾನಾಗಮವು ಹೀಗೆ ನಿರೂಪಿಸಿದೆ-

ಸದಾಚಾರೋಽಷ್ಟಶೀಲಾಢ್ಯಃ ಸೇವಿತಃ ಕಲ್ಪಪಾದಪಃ।
ಸದ್ಭಕ್ತಾನಾಂ ಸುಮನಸಾಂ ದದಾತೀಷ್ಟಫಲಂ ಮಹತ್॥[೧೩(ಅ)]

"ಎಂಟು ಶೀಲಗಳಿಂದ ಸಂಪನ್ನವಾದ ಸದಾಚಾರವು ಅನುಸರಿಸಿದರೆ ಕಲ್ಪವೃಕ್ಷ; ಪ್ರಸನ್ನ ಮನಸ್ಸಿನ ಸದ್ಭಕ್ತರಿಗೆ ಇಷ್ಟವಾದ ಮಹತ್ಫಲವನ್ನು ಕೊಡುತ್ತದೆ."

(೧) ಅಂಕುರಶೀಲ, (೨) ಉತ್ಪನ್ನಶೀಲ, (೩) ದ್ವಿದಲಶೀಲ, (೪) ಪ್ರವೃದ್ಧಶೀಲ, (೫) ಸಪ್ರಕಾಂಡಶೀಲ, (೬) ಸಶಾಖಶೀಲ, (೭) ಸಪುಷ್ಪಶೀಲ, (೮) ಸಫಲಶೀಲ -ಇವು ಎಂಟು ಶೀಲಗಳು. ಶಿವತತ್ತ್ವದ ಜಿಜ್ಞಾಸೆ, ಶಿವಧ್ಯಾನವೊಂದರಲ್ಲಿಯೇ ನಿಷ್ಠೆ ಅಥವಾ ಶಿವಜ್ಞಾನವೊಂದರಲ್ಲಿಯೇ ನಿಷ್ಠೆ -ಇವುಗಳು 'ಶೀಲ'ವೆಂದು ಹೇಳಲ್ಪಟ್ಟಿವೆ.[೧೪]

ಶ್ರೀಗುರುವಿನ ಅನುಗ್ರಹದಿಂದ ಪ್ರಾಪ್ತವಾದ ವೇಧಾದೀಕ್ಷೆ, ಮಂತ್ರದೀಕ್ಷೆ ಮತ್ತು ಕ್ರಿಯಾದೀಕ್ಷೆಗಳೆಂಬ ಮೂರು ದೀಕ್ಷೆಗಳಿಂದ ಕ್ರಮವಾಗಿ ಯೋಗಾಂಗ-ಭೋಗಾಂಗ-ತ್ಯಾಗಾಂಗಳೆಂಬ ಪರ್ಯಾಯ ನಾಮಗಳುಳ್ಳ ಕಾರಣ- ಸೂಕ್ಷ್ಮ-ಸ್ಥೂಲಗಳೆಂಬ ಮೂರು ಶರೀರಗಳನ್ನು ಶುದ್ಧಿಗೊಳಿಸಿದ ಕಾರಣದಿಂದ ತನ್ನನ್ನು ಅಪ್ರಾಕೃತನೆಂದು ತಿಳಿದು, ಶ್ರೀಗುರುವಿನ ಉಪದೇಶದಂತೆ ಪ್ರತಿನಿತ್ಯವೂ ತನ್ನ ಇಷ್ಟಲಿಂಗದ ಪೂಜಾದಿಗಳನ್ನು ಮಾಡುವುದೇ 'ಅಂಕುರಶೀಲ'[೧೫]ವೆನಿಸಿದೆ. ಸದಾಚಾರದಲ್ಲಿ ನಿರತನಾದವನಿಗೆ ಈ ಸ್ಥಿತಿಯು ಮೊದಲನೆಯದಾದ ಕಾರಣ ಇದನ್ನು ಅಂಕುರಶೀಲವೆಂದು ಕರೆಯಲಾಗಿದೆ.

---

[೧೩] ಸಿ.ಶಿ, ೯.೮೩

[೧೩(ಅ)] ಚ.ಜ್ಞಾ, ಕ್ರಿ.ಪಾ, ೯.೨೨

[೧೪] ಜಿಜ್ಞಾಸಾ ಶಿವತತ್ತ್ವಸ್ಯ ಶೀಲಮಿತ್ಯುಚ್ಯತೇ ಬುಧೈಃ॥
ಭಾವಸ್ಯ ಸ್ಥಿರತಾಯೋಗಃ ಶೀಲಮಿತ್ಯುಚ್ಯತೇ ಬುಧೈಃ।
ಶೀಲಂ ಶಿವೈಕವಿಜ್ಞಾನಂ ಶಿವಧ್ಯಾನೈಕತಾನತಾ॥ -ಸಿ.ಶಿ, ೧೩.೩೦-೩೨

[೧೫] ಗುರುಕಾರುಣ್ಯಕಲಿತಷಡಧ್ವನ್ಯಾಸಶೋಧಿತಾ।
ತನುಃ ಸ್ವೀಯಾಽಪ್ರಾಕೃತೇತಿ ಭಾವೋಽಂಕುರ ಇತೀರ್ಯತೇ॥
-ಚಂ.ಜ್ಞಾ, ಕ್ರಿ.ಪಾ, ೯.೨೩

ತಾನು ದೀಕ್ಷೆಯಿಂದ ಪರಿಶುದ್ಧನಾದಂತೆ ಹೆಂಡತಿ, ಮಗ, ಮೊಮ್ಮಕ್ಕಳನ್ನು ಸಹ ತಮ್ಮ ಕುಲಗುರುವಿನ ಮೂಲಕ ದೀಕ್ಷಾಸಂಸ್ಕಾರದಿಂದ ಶುದ್ಧಿಗೊಳಿಸುವುದು, ದೀಕ್ಷಾಸಂಸ್ಕಾರದಿಂದ ಪಾವನರಾದ ಪತ್ನಿ-ಪುತ್ರ-ಪೌತ್ರಾದಿಗಳೊಂದಿಗೆ ವಾಸಿಸುವುದು 'ಉತ್ಪನ್ನಶೀಲ'ವೆನಿಸಿದೆ.[೧೬]

ಯಾವಾಗಲೂ ಶರೀರದ ಮೇಲೆ ಧರಿಸಲೇಬೇಕಾಗಿರುವ ಇಷ್ಟಲಿಂಗ, ಭಸ್ಮ, ರುದ್ರಾಕ್ಷಾದಿ ವೀರಶೈವರ ಲಾಂಛನಗಳನ್ನು ಎಚ್ಚರಿಕೆಯಿಂದ ಎಲ್ಲ ಸಂದರ್ಭದಲ್ಲಿಯೂ ಧಾರಣೆಮಾಡುವುದು 'ದ್ವಿದಲಶೀಲ.'[೧೭]

ಶಿವನ ಮಾಹಾತ್ಮ್ಯೆಯನ್ನು ಪ್ರತಿದಿನವೂ ಶ್ರವಣ ಮಾಡುವುದು, ಶ್ರವಣ ಮಾಡಿದ ಶಿವಮಾಹಾತ್ಮ್ಯೆಯನ್ನು ಸದಾ ಮನಸ್ಸಿನಲ್ಲಿ ಮನನ ಹಾಗೂ ನಿದಿಧ್ಯಾಸನದಿಂದ ಭಾವನೆ ಮಾಡುವುದೇ 'ಪ್ರವೃದ್ಧಶೀಲ'ವೆನಿಸಿದೆ. ಈ ಬಗೆಯ ಮನನಾದಿಗಳು ಶಿವನ ವಿಷಯದಲ್ಲಿನ ಭಕ್ತಿಯು ವೃದ್ಧಿಯಾಗಲು ಸಹಾಯಕವಾಗುತ್ತದೆ ಎನ್ನುವ ಕಾರಣದಿಂದ 'ಪ್ರವೃದ್ಧಶೀಲ'ವೆಂಬ ಹೆಸರು ಬಂದಿರುತ್ತದೆ.[೧೮]

ವೀರಶೈವರ ನಿತ್ಯಕರ್ಮವಾದ ಇಷ್ಟಲಿಂಗಪೂಜೆಗೆ ಯಾವಾಗಲಾದರೊಮ್ಮೆ ಲೋಪವುಂಟಾಗಲು ಮತ್ತು ಅನ್ನ-ಪಾನಾದಿಗಳನ್ನು ಸ್ವೀಕಾರಮಾಡದಿರುವುದು 'ಸಪ್ರಕಾಂಡಶೀಲ'ವೆನಿಸುತ್ತದೆ.[೧೯]

ಇಷ್ಟಲಿಂಗಕ್ಕೆ ನೈವೇದ್ಯ ಮಾಡದಿರುವ ಭಕ್ಷ್ಯ-ಭೋಜ್ಯಾದಿಗಳನ್ನು ಸ್ವೀಕಾರ ಮಾಡದಿರುವುದು 'ಸಶಾಖಶೀಲ'ವೆನಿಸಿದೆ. ಆದುದರಿಂದ ವೀರಶೈವರು ಯಾವಾಗಲೂ ಇಷ್ಟಲಿಂಗಕ್ಕೆ ನೈವೇದ್ಯ ಮಾಡಿದ ಪದಾರ್ಥಗಳನ್ನು ಮಾತ್ರ ಸ್ವೀಕರಿಸಬೇಕು.[೨೦]

ಇಷ್ಟಲಿಂಗಕ್ಕೆ ಅರ್ಪಿತವಾದ ಪ್ರಸಾದ ರೂಪವಾದ ಭಕ್ಷ್ಯಾದಿ ಪದಾರ್ಥಗಳನ್ನು ತ್ಯಾಗಮಾಡದಿರುವುದು 'ಸಪುಷ್ಪಶೀಲ'ವೆನಿಸುತ್ತದೆ. ಇಷ್ಟಲಿಂಗದ ವಿಷಯದಲ್ಲಿ ನಿಷ್ಠರಾದ

---

[೧೬] ದೀಕ್ಷಿತೈರೇವ ದಾರಾದ್ಯೈಃ ಸಹವಾಸೋ ಯ ಆತ್ಮನಃ।
ಶೀಲಮುತ್ಪನ್ನಮಿತ್ಯುಕ್ತಂ ಗ್ರಾಹ್ಯಮೇತದ್ ವಿಚಕ್ಷಣೈಃ॥ -ಚ.ಜ್ಞಾ, ಕ್ರಿ.ಪಾ, ೯.೨೪

[೧೭] ಲಾಂಛನಾನಾಂ ಹಿ ಶೈವಾನಾಂ ಭಸ್ಮಾದೀನಾಮನಾರತಮ್।
ಧಾರಣಂ ತ್ವಪ್ರಮಾದೇನ ದ್ವಿದಲಂ ಶೀಲಮುಚ್ಯತೇ॥ -ಚ.ಜ್ಞಾ, ಕ್ರಿ.ಪಾ, ೯.೨೫

[೧೮] ಯನ್ನಿತ್ಯಂ ಶಿವಧರ್ಮಾಣಾಂ ಮಾಹಾತ್ಮ್ಯಸ್ಯ ವಿಭಾವನಮ್।
ಪ್ರವೃದ್ಧಂ ಶೀಲಮಿತ್ಯುಕ್ತಂ ಭಕ್ತೇರ್ಬುದ್ಧಿಕರಂ ಶ್ರುತಮ್॥ -ಚ.ಜ್ಞಾ, ಕ್ರಿ.ಪಾ, ೯.೨೬

[೧೯] ಇಷ್ಟಲಿಂಗಮನಭ್ಯರ್ಚ್ಯ ಸ್ಥೀಯತೇ ಯದಭೋಜನಮ್।
ಸಪ್ರಕಾಂಡಮಿದಂ ಶೀಲಂ ವಿಜ್ಞೇಯಂ ಭಕ್ತಿಸಾಧನಮ್॥ -ಚ.ಜ್ಞಾ, ಕ್ರಿ.ಪಾ, ೯.೨೭

[೨೦] ಇಷ್ಟಲಿಂಗಾನರ್ಪಿತಸ್ಯ ದ್ರವ್ಯಸ್ಯಾಗ್ರಹಣಂ ಹಿ ಯತ್।
ಶೀಲಂ ಸಶಾಖಮಿತ್ಯುಕ್ತಮವರ್ಜ್ಯಂ ಭಕ್ತಿತತ್ಪರೈಃ॥ -ಚ.ಜ್ಞಾ, ಕ್ರಿ.ಪಾ, ೯.೨೮

ಭಕ್ತರು ಶಿವಪ್ರಸಾದವನ್ನು ಎಂದಿಗೂ ತಿರಸ್ಕಾರಮಾಡಬಾರದೆಂಬುದು ಇದರ ತಾತ್ಪರ್ಯ.[೨೧]

ವೀರಶೈವ ಸಿದ್ಧಾಂತದಲ್ಲಿ ಪೂಜಾರ್ಹವಾದವುಗಳೆಂದು ಅಂಗೀಕರಿಸಿರುವ ಗುರು-ಲಿಂಗ-ಜಂಗಮದ ವಿಷಯದಲ್ಲಿ ಭೇದವನ್ನು ಮಾಡದೆ "ಏಕಮೂರ್ತಿಸ್ತ್ರಯೋ ಭಾಗಾ ಗುರುರ್ಲಿಂಗಂ ತು ಜಂಗಮಃ" (ಗುರು-ಲಿಂಗ-ಜಂಗಮಗಳು ಒಂದೇ ಮೂರ್ತಿಯ ಮೂರು ಭಾಗಗಳು) ಎಂಬ ಪ್ರಮಾಣದಂತೆ ಮೂರನ್ನೂ ಸಹ ಶಿವನ ಸ್ವರೂಪವೆಂಬ ಭಾವನೆಯಿಂದ ಪೂಜಿಸುವುದೇ 'ಸಫಲಶೀಲ'ವು.[೨೨] ಈ ರೀತಿಯಾಗಿ ಸದಾಚಾರವು ಎಂಟು ಶೀಲಗಳಿಂದ ಕೂಡಿರುತ್ತದೆ.

ಈ ಬಗೆಯ ಎಂಟು ಶೀಲಗಳಿಂದ ಸಮೃದ್ಧವಾದ ಸದಾಚಾರದ ಆಚರಣೆಯಿಂದ ಶಿವಾನುಗ್ರಹ ಹಾಗೂ ಮನೋಭಿಲಾಷೆಗಳ ಸಿದ್ಧಿಯುಂಟಾಗುತ್ತದೆ ಎಂದು ಚಂದ್ರಜ್ಞಾನಾಗಮದಲ್ಲಿ ನಿರೂಪಿತವಾಗಿದೆ-

ಯಃ ಸದಾಚಾರಮಷ್ಟಾಂಗಂ ಭಕ್ತನಿಷ್ಠೋ ನಿಷೇವತೇ।
ಸ ಸದ್ಯಃ ಸಿದ್ಧಿಮಾಪ್ನೋತಿ ಪರಾಂ ಶಂಭೋರನುಗ್ರಹಾತ್॥[೨೩]

"ಭಸ್ಮನಿಷ್ಠನಾದ ಯಾರು (ಪೂರ್ವೋಕ್ತ) ಎಂಟು ಅಂಶಗಳ ಶೀಲವನ್ನು ಅನುಸರಿಸು ತ್ತಾನೆಯೋ ಅವನು ಶಂಭುವಿನ ಅನುಗ್ರಹದಿಂದ ಕೂಡಲೆ ಉನ್ನತವಾದ ಸಿದ್ಧಿಯನ್ನು ಪಡೆಯುತ್ತಾನೆ." ಮತ್ತು

ಸದಾಚಾರಃ ಪ್ರಿಯಃ ಶಂಭುಃ ಸದಾಚಾರೇಣ ಪೂಜ್ಯತೇ।
ಸದಾಚಾರಂ ವಿನಾ ತಸ್ಯ ಪ್ರಸಾದೋ ನೈವ ಜಾಯತೇ॥[೨೪]

"ಶಿವನು ಸದಾಚಾರ ಪ್ರಿಯನು, ಸದಾಚಾರದಿಂದಲೇ ಪೂಜಿಸಲ್ಪಡುವನು. ಸದಾಚಾರ ವಿಲ್ಲದೆ ಶಿವನ ಪ್ರಸಾದವೇ ಸಿದ್ಧಿಸುವುದಿಲ್ಲ" ಎಂಬ ಶ್ರೀ ರೇಣುಕ ಭಗವತ್ಪಾದರ ಉಕ್ತಿಯಂತೆ ಈ ಸದಾಚಾರವು ಶಿವಾನುಗ್ರಹವನ್ನುಂಟುಮಾಡುತ್ತದೆ. ಇದನ್ನು ನಿಷ್ಠೆಯಿಂದ ಪಾಲಿಸುವುದೇ ಶಿವನ ಆರಾಧನೆಯೆಂದು ತಿಳಿಯಬೇಕು. ಈ ಸದಾಚಾರದ ಪಾಲನೆಯಿಂದ ಸಾಧಕನು ಜನಗಳ ಪ್ರೀತಿ ಹಾಗೂ ಶಿವಾನುಗ್ರಹಗಳೆಂಬ ಲೌಕಿಕ ಮತ್ತು ಪಾರಲೌಕಿಕ ಫಲಗಳೆರಡನ್ನೂ ಪಡೆಯುತ್ತಾನೆ. ಆದುದರಿಂದ ಸದಾಚಾರವನ್ನು ಎಲ್ಲರೂ ಆದರದಿಂದ ಆಚರಿಸಬೇಕು.

---

[೨೧] ಶಿವಾರ್ಪಿತಪ್ರಸಾದಸ್ಯ ಯತ್ಪರಿತ್ಯಾಗವರ್ಜನಮ್।
ಸಪುಷ್ಪಂ ಶೀಲಮಿತ್ಯುಕ್ತಂ ವಿಜ್ಞೇಯಂ ಚೈತದುತ್ತಮಮ್॥ -ಚ.ಜ್ಞಾ, ಕ್ರಿ.ಪಾ, ೯.೨೯

[೨೨] ಗುರುಜಂಗಮಲಿಂಗಾನಾಂ ಯದೇಕತ್ವೇನ ಭಾವನಮ್।
ಸಫಲಂ ಶೀಲಮಿತ್ಯುಕ್ತಂ ಸದ್ಯಃ ಸಿದ್ಧಿಕರಂ ಪರಮ್॥ -ಚ.ಜ್ಞಾ, ಕ್ರಿ.ಪಾ, ೯.೩೦

[೨೩] ಚ.ಜ್ಞಾ, ಕ್ರಿ.ಪಾ, ೯.೩೧

[೨೪] ಸಿ.ಶಿ, ೧೬.೬೬

೩. ಶಿವಾಚಾರ

ಶಿವ ಏವ ಪರಂ ಬ್ರಹ್ಮ ಪಂಚಕೃತ್ಯಪರಾಯಣಃ।
ನ ತತೋಽನ್ಯಾ ಗತಿರಿತಿ ಶಿವಾಚಾರೋ ಹಿ ಕೀರ್ತಿತಃ॥[೨೫]

"ಶಿವನೇ ಪರಬ್ರಹ್ಮ, ಅವನೇ ಪಂಚಕೃತ್ಯಗಳಲ್ಲಿ ನಿರತನು, ಅವನನ್ನು ಬಿಟ್ಟರೆ ಬೇರೆ ಗತಿಯಿಲ್ಲ ಎಂಬುದೇ ಶಿವಾಚಾರವೆಂದು ಹೇಳಲ್ಪಡುತ್ತದೆ" ಎಂಬ ಆಗಮೋಕ್ತಿಯಂತೆ ಸೃಷ್ಟಿ, ಸ್ಥಿತಿ, ಸಂಹಾರ, ನಿಗ್ರಹ, ಅನುಗ್ರಹಗಳೆಂಬ ಪಂಚಕೃತ್ಯಗಳ ಕರ್ತೃವಾದ ಯಾವ ಶಿವನಿರುವನೋ ಅವನು ನನ್ನ ರಕ್ಷಕನೆಂಬ ಭಾವನೆಯೇ ಶಿವಾಚಾರ. ಆದುದರಿಂದ ಶ್ರೀ ಜಗದ್ಗುರು ರೇಣುಕಾಚಾರ್ಯರು-

ಶಿವಭಕ್ತೋ ಮಹಾತೇಜಾ ಶಿವಭಕ್ತಿಪರಾಙ್ಮುಖಾನ್।
ನ ಸ್ಪೃಶೇನ್ನೈವ ವೀಕ್ಷೇತ ನ ತೈಃ ಸಹ ವಸೇತ್ ಕ್ವಚಿತ್॥[೨೬]

"ಮಹಾತೇಜಸ್ವಿಯಾದ ಶಿವಭಕ್ತನು ಶಿವಭಕ್ತಿವಿಮುಖರಾದ ಜನರನ್ನು ಮುಟ್ಟಬಾರದು, ನೋಡಬಾರದು ಹಾಗೂ ಅವರೊಡನೆ ಸ್ವಲ್ಪ ಕಾಲವಾದರೂ ವಾಸ ಮಾಡಬಾರದು" -ಎಂದು ಶಿವಭಕ್ತನಿಗೆ ಶಿವನೊಬ್ಬನೇ ಶರಣಾಗತನು ಎಂದು ಪ್ರತಿಪಾದಿಸುವುದರ ಮೂಲಕ ಶಿವಾಚಾರವನ್ನು ಬೋಧಿಸಿದ್ದಾರೆ. ಈ ಅನನ್ಯ ಭಾವನೆಯಿಂದ ಮಾಡುವ ಶಿವನಿಗೆ ಶರಣಾಗತನಾಗುವಿಕೆಯು ನಿಧಾನವಾಗಿ ಸಾಧಕನಲ್ಲಿ ಶಿವಭಾವವು ದೃಢವಾಗುತ್ತದೆ ಮತ್ತು ಎಲ್ಲೆಡೆಯೂ ಶಿವದೃಷ್ಟಿಯುಂಟಾಗುತ್ತದೆ. ಇಂತಹ ಶಿವದೃಷ್ಟಿ ಯಿಂದ ಸಾಧಕನ ಸಂಕುಚಿತಬುದ್ಧಿಯು ನಾಶವಾಗಿ "ಸರ್ವಂ ಶಿವಮಯಂ ಜಗತ್" (ಈ ಜಗತ್ತೆಲ್ಲವೂ ಶಿವಮಯವಾಗಿದೆ) ಎಂಬ ವಿಶಾಲ ಭಾವನೆಯು ಉಂಟಾಗುತ್ತದೆ. ಆಗ ಸಾಧಕನು ಯಾರನ್ನೂ ದ್ವೇಷ ಮಾಡುವುದಿಲ್ಲ ಹಾಗೂ ಯಾರಿಂದಲೂ ಜುಗುಪ್ಸೆಗೆ ಒಳಗಾಗುವುದಿಲ್ಲ. ಈ ಬಗೆಯ ಶಿವಾಚಾರದಿಂದ ವ್ಯಕ್ತಿಯ ವಿಕಾಸ ಮತ್ತು ಸಮಾಜದ ಉನ್ನತಿಯು ಉಂಟಾಗುತ್ತದೆ.

ಭಾವಶುದ್ಧಿಯಾಗದೆ ಶಿವಾಚಾರವು ಸಂಭವಿಸುವುದಿಲ್ಲ ಎನ್ನುವ ಕಾರಣದಿಂದ ಭಾವಶುದ್ಧಿಗೋಸ್ಕರ ಭೋಗ್ಯವಸ್ತುಗಳ ಶುದ್ಧಿಯು ಆವಶ್ಯಕ. ಆದುದರಿಂದ ಶಿವಾಚಾರದಲ್ಲಿ ದ್ರವ್ಯ, ಕ್ಷೇತ್ರ, ಗೃಹ, ಭಾಂಡ, ತೃಣ, ಕಾಷ್ಠ, ವೀಟಿಕಾ, ಪಾಕ, ರಸ, ಭವ, ಭೂತ, ಭಾವ, ಮಾರ್ಗ, ಕಾಲ, ವಾಕ್ ಮತ್ತು ಜನ -ಎಂಬ ಹದಿನಾರು ಪದಾರ್ಥಗಳನ್ನು ಶಿವಶಾಸ್ತ್ರೋಕ್ತ ರೀತಿಯಲ್ಲಿ ಶುದ್ಧೀಕರಣ ಮಾಡುವ ಪ್ರಕ್ರಿಯೆಯು ಆಗಮ ಗ್ರಂಥಗಳಲ್ಲಿ ನಿರೂಪಿತವಾಗಿದೆ. ಉದಾಹರಣೆಗೆ-

ದ್ರವ್ಯಕ್ಷೇತ್ರಗೃಹಾದೀನಾಂ ಷೋಡಶಾನಾಂ ವಿಶೋಧನಮ್।
ಶಿವಶಾಸ್ತ್ರೋಕ್ತಮಾರ್ಗೇಣ ಶಿವಾಚಾರ ಇತಿ ಸ್ಮೃತಃ॥[೨೭]

---

[೨೫] ಚ.ಜ್ಞಾ, ಕ್ರಿ.ಪಾ, ೬.೭

[೨೬] ಸಿ.ಶಿ, ೬.೨೭

[೨೭] ಚ.ಜ್ಞಾ, ಕ್ರಿ.ಪಾ, ೬.೩೨

ಈಗ ಪೂರ್ವೋಕ್ತ ಹದಿನಾರು ಪದಾರ್ಥಗಳ ಶುದ್ಧಿ ಪ್ರಕ್ರಿಯೆಯನ್ನು ಆಗಮೋಕ್ತ ರೀತಿಯಲ್ಲಿ ಕ್ರಮವಾಗಿ ಪ್ರಸ್ತಾಪಿಸಲಾಗುವುದು. (೧) ಶಿವಭಕ್ತನಿಂದ ಪ್ರಾಪ್ತವಾಗುವ ಫಲ-ಮೂಲಾದಿಗಳ ಸ್ವೀಕಾರ ಅಥವಾ ಬೇರೆಯವರಿಂದ ಪ್ರಾಪ್ತವಾಗುವ ಫಲ-ಮೂಲಾದಿಗಳನ್ನು ಮಂತ್ರಸಹಿತವಾಗಿ ಭಸ್ಮವನ್ನು ಪ್ರೋಕ್ಷಣೆ ಮಾಡುತ್ತಾ ಶುದ್ಧಿಗೊಳಿಸುವುದು ದ್ರವ್ಯಶುದ್ಧಿ.[೨೮] (೨) ಭೂಮಿಯ ನಾಲ್ಕೂ ಮೂಲೆಗಳಲ್ಲಿ ನಂದಿಯ ಮುದ್ರೆಯುಳ್ಳ ಶಿಲಾನ್ಯಾಸ ಮಾಡುವುದು ಕ್ಷೇತ್ರಶುದ್ಧಿ.[೨೯] (೩) ಶಿವಭಕ್ತರಿಂದ ನಿರ್ಮಿತವಾದ ಅಥವಾ ಮಹಾದ್ವಾರದಲ್ಲಿ ಶಿವಲಿಂಗದ ಚಿಹ್ನೆಯುಳ್ಳ ಮನೆಯನ್ನು ಪಡೆಯುವುದು ಗೃಹಶುದ್ಧಿ.[೩೦] (೪) ಶಿವಭಕ್ತನಿಂದ ನಿರ್ಮಿತವಾದ ಶಿವಲಿಂಗದ ಚಿಹ್ನೆಯುಳ್ಳ ಪಾತ್ರೆಯ ಸ್ವೀಕಾರವು ಭಾಂಡಶುದ್ಧಿ.[೩೧] (೫) ಶಿವಭಕ್ತನು ತಂದಂತಹ ಹುಲ್ಲನ್ನು ಸ್ವೀಕರಿಸುವದು ಅಥವಾ ಬೇರೆಯವರು ತಂದ ಹುಲ್ಲನ್ನು ಭಸ್ಮ ಪ್ರೋಕ್ಷಣೆ ಯಿಂದ ಶುದ್ಧಿಗೊಳಿಸುವುದು ತೃಣಶುದ್ಧಿ.[೩೨] (೬) ಶಿವಭಕ್ತನಿಂದ ತರಲ್ಪಟ್ಟ ಕಟ್ಟಿಗೆಯನ್ನು ವಿಭೂತಿಯ ಪ್ರೋಕ್ಷಣೆಯಿಂದ ಶುದ್ಧಿಗೊಳಿಸುವುದು ಕಾಷ್ಠಶುದ್ಧಿ.[೩೩] (೭) ಶಿವಭಕ್ತರು ಸಿದ್ಧಗೊಳಿಸಿದ ತಾಂಬೂಲವನ್ನು ಭಸ್ಮದಿಂದ ಸಂಸ್ಕಾರ ಮಾಡಿದ ನಂತರ ಸ್ವೀಕರಿಸುವುದು ವೀಟಿಕಾಶುದ್ಧಿ.[೩೪] (೮) ಶಿವದೀಕ್ಷಾ ಸಂಪನ್ನರಿಂದ ಬೇಯಿಸಿದ, ಶಿವಭಕ್ತರಲ್ಲದವರು ನೋಡದಿರುವ ಭಕ್ಷ್ಯ-ಭೋಜ್ಯಗಳ ಸ್ವೀಕಾರವು ಪಾಕಶುದ್ಧಿ.[೩೫] (೯) ಎಮ್ಮೆ, ಆಡು ಮೊದಲಾದ

---

[೨೮] ಭಕ್ತಹಸ್ತಗತಂ ವಾಪಿ ಭಸ್ಮನಾ ವಾ ವಿಶೋಧಿತಮ್।
ಫಲಮೂಲಾದಿಕಂ ಗ್ರಾಹ್ಯಂ ದ್ರವ್ಯಶುದ್ಧಿರಿಯಂ ಮತಾ॥ -ಚ.ಜ್ಞಾ, ಕ್ರಿ.ಪಾ, ೯.೩೩

[೨೯] ನಂದಿಮುದ್ರಾಂಕಿತಶಿಲಾದಾರ್ವಾದಿಪರಿಶೋಧನಮ್।
ಕ್ಷೇತ್ರಂ ಭಕ್ತಿಪರ್ರೈಗ್ರಾಹ್ಯಂ ಕ್ಷೇತ್ರಶುದ್ಧಿಃ ಪ್ರಕೀರ್ತಿತಾ॥ -ಚ.ಜ್ಞಾ, ಕ್ರಿ.ಪಾ, ೯.೩೪

[೩೦] ಭಕ್ತೈಸ್ತು ನಿರ್ಮಿತಂ ವಾಪಿ ಶಿವಲಿಂಗಾಂಕಿತಂ ತು ವಾ।
ವೇಶ್ಮ ಭಕ್ತೈಃ ಪರಿಗ್ರಾಹ್ಯಂ ಗೃಹಶುದ್ಧಿಃ ಸಮೀರಿತಾ। -ಚ.ಜ್ಞಾ, ಕ್ರಿ.ಪಾ, ೯.೩೫

[೩೧] ಭಕ್ತೇನ ನಿರ್ಮಿತಂ ವಾಪಿ ಶಿವಲಿಂಗಾಂಕಿತಂ ತು ವಾ।
ಭಾಂಡಜಾತಂ ಪರಿಗ್ರಾಹ್ಯಂ ಭಾಂಡಶುದ್ಧಿಃ ಪ್ರಕೀರ್ತಿತಾ॥ -ಚ.ಜ್ಞಾ, ಕ್ರಿ.ಪಾ, ೯.೩೬

[೩೨] ಭಕ್ತಲೋಕಸಮಾನೀತಂ ಭಸ್ಮನಾ ಸಂಸ್ಕೃತಂ ತು ವಾ।
ತೃಣಾದಿಕಂ ಪರಿಗ್ರಾಹ್ಯಂ ತೃಣಶುದ್ಧಿರಿತೀರಿತಾ॥ -ಚ.ಜ್ಞಾ, ಕ್ರಿ.ಪಾ, ೯.೩೭

[೩೩] ಭಕ್ತಿಯುಕ್ತಸಮಾನೀತಂ ವಿಭೂತ್ಯಾ ಸಂಸ್ಕೃತಂ ತು ವಾ।
ಕಾಷ್ಠಂ ವ್ರತಸ್ಥೈಃ ಸಂಗ್ರಾಹ್ಯಂ ಕಾಷ್ಠಶುದ್ಧಿಃ ಸಮೀರಿತಾ॥ -ಚ.ಜ್ಞಾ, ಕ್ರಿ.ಪಾ, ೯.೩೮

[೩೪] ಭಕ್ತಾರಾಮೇ ಸಮುತ್ಪನ್ನೈರ್ಭಸ್ಮನಾ ಸಂಸ್ಕೃತೈಸ್ತು ವಾ।
ಭಕ್ತೈಸ್ತು ಸಾಧಿತೇನಾಽಪಿ ವಿಭೂತ್ಯಾ ಸಂಸ್ಕೃತೇನ ವಾ॥
ನಾಗವಲ್ಲೀದಲೈಃ ಪೂಗೈಶ್ಚೂರ್ಣೇನ ಚ ಸಮನ್ವಿತಮ್।
ಗ್ರಾಹ್ಯಂ ಭಕ್ತೈರ್ಹಿ ತಾಂಬೂಲಂ ವೀಟಿಕಾಶುದ್ಧಿರೀರಿತಾ॥ -ಚ.ಜ್ಞಾ, ಕ್ರಿ.ಪಾ, ೯.೩೯-೪೦

[೩೫] ಶಿವದೀಕ್ಷಾನ್ವಿತೈಃ ಪಕ್ವಮಭಕ್ತಾನವಲೋಕಿತಮ್।
ಭೋಜ್ಯಂ ಭಕ್ತೈಃ ಪರಿಗ್ರಾಹ್ಯಂ ಪಾಕಶುದ್ಧಿರಿಯಂ ಮತಾ॥ -ಚ.ಜ್ಞಾ, ಕ್ರಿ.ಪಾ, ೯.೪೧

ಪ್ರಾಣಿಗಳ ಹಾಲು, ಮೊಸರು, ಮಜ್ಜಿಗೆ, ತುಪ್ಪ ಮೊದಲಾದವುಗಳನ್ನು ತ್ಯಜಿಸಿ ಸದಾ ಹಸುವಿನ ಉತ್ಪನ್ನಗಳನ್ನು ಸ್ವೀಕಾರ ಮಾಡುವುದು ರಸಶುದ್ಧಿ.[೩೬] (೧೦) ಕಾಮ್ಯಕರ್ಮಗಳ ತ್ಯಾಗದಿಂದ ನಿಷ್ಕಾಮಕರ್ಮದ ಮೂಲಕ ಅಂತಃಕರಣದ ನಿರ್ಮಲತ್ವವನ್ನು ಪಡೆದು ತತ್ತ್ವಜ್ಞಾನದ ಪ್ರಾಪ್ತಿಯಿಂದ ಪುನರ್ಜನ್ಮವಿಲ್ಲದಿರುವಿಕೆಯ ಸ್ಥಿತಿಯ ಸಂಪಾದನೆಯು ಭವಶುದ್ಧಿ.[೩೭] (೧೧) ಪಂಚಮಹಾಭೂತಗಳಲ್ಲಿನ ದೋಷ ಗಳನ್ನು ನಿವಾರಿಸುವುದು ಮತ್ತು ಎಲ್ಲ ಪ್ರಾಣಿಗಳಲ್ಲಿಯೂ ದಯೆಯಿಂದಿರುವುದು ಭೂತಶುದ್ಧಿ.[೩೮] (೧೨) ಎಲ್ಲ ಬಗೆಯ ಆಸೆಗಳನ್ನು ಬಿಟ್ಟು ಸರ್ವದಾ ಶಿವಭಾವದ ಅನುಭಾವವೇ ಭಾವಶುದ್ಧಿ.[೩೯] (೧೩) ಇರುವೆಯೇ ಮೊದಲಾದ ಕ್ರಿಮಿಗಳಿಗೆ ಪಾದ ಗಳಿಂದ ಹಿಂಸೆಯಾಗದಂತೆ ಎಚ್ಚರಿಕೆಯಿಂದ ಸಂಚಾರಮಾಡುವುದು ಮಾರ್ಗಶುದ್ಧಿ.[೪೦] (೧೪) ಶಾಸ್ತ್ರಗಳಲ್ಲಿ ಪ್ರಶಂಸೆಮಾಡಿರುವ ಶಾಂತವೂ, ನಿರ್ಮಲವೂ ಆದ ಪ್ರಾತಃಕಾಲ ಹಾಗೂ ಸಾಯಂಕಾಲದ ಸಮಯದಲ್ಲಿ ಶಿವಲಿಂಗಪೂಜೆಯು ಕಾಲಶುದ್ಧಿ.[೪೧] (೧೫) ಸುಳ್ಳು, ಪರುಷ, ಬೀಭತ್ಸ ಹಾಗೂ ದಾಂಭಿಕ ಮಾತುಗಳನ್ನು ಆಡದಿರುವುದು ವಾಕ್‌ಶುದ್ಧಿ.[೪೨] (೧೬) ಕುಳಿತುಕೊಂಡಿರುವಾಗ, ಮಲಗಿರುವಾಗ, ಪ್ರಯಾಣದ ಕಾಲದಲ್ಲಿ, ವಿದ್ವದ್ಗೋಷ್ಠಿಗಳಲ್ಲಿ -ಹೀಗೆ ಸರ್ವತ್ರ ಸರ್ವದಾ ಸದ್ಭಕ್ತ ಜನರ ಸಹವಾಸವು ಜನಶುದ್ಧಿ.[೪೩] ಈ ರೀತಿಯಾಗಿ ತನ್ನ ವ್ಯವಹಾರದಲ್ಲಿ ಮೇಲೆ ಹೇಳಿದ ಎಲ್ಲ ಹದಿನಾರು ಪದಾರ್ಥಗಳ ಸಂಸ್ಕಾರರೂಪದ ಶಿವಾಚಾರದ ಪಾಲನೆಯಿಂದ ವ್ಯಕ್ತಿಯ ಮತ್ತು ಸಮಾಜದ ಸ್ವಾಸ್ಥ್ಯಸಿದ್ಧಿ

---

[೩೬] ಘೃತಂ ದಧಿ ಪಯಸ್ತಕ್ರಂ ಮಾಹಿಷಂ ಚಾವಿಕಂ ತ್ಯಜೇತ್।
ಗವ್ಯಂ ತು ಸರ್ವದಾ ಗ್ರಾಹ್ಯಂ ರಸಶುದ್ಧಿರಿಯಂ ಮತಾ॥ -ಚ.ಜ್ಞಾ, ಕ್ರಿ.ಪಾ, ೯.೪೨

[೩೭] ಪುನರ್ಭವನಿದಾನೋಕ್ತಕಾಮ್ಯಕರ್ಮವಿಸರ್ಜನಾತ್।
ಜನ್ಮರಾಹಿತ್ಯಸಂಪತ್ತಿರ್ಭವಶುದ್ಧಿರ್ನಿಗದ್ಯತೇ॥ -ಚ.ಜ್ಞಾ, ಕ್ರಿ.ಪಾ, ೯.೪೩

[೩೮] ಸರ್ವಭೂತದಯಾಲುತ್ವಂ ಪಾಂಚಭೌತಿಕ ಸಂಸ್ಕೃತಿಃ।
ಭೂತದೂಷಣರಾಹಿತ್ಯಂ ಭೂತಶುದ್ಧಿಃ ಸಮೀರಿತಾ॥ -ಚ.ಜ್ಞಾ, ಕ್ರಿ.ಪಾ, ೯.೪೪

[೩೯] ಸರ್ವಕಾಮಾನ್ ಸಮುಜ್ಝಿತ್ಯ ಶಿವಭಾವಾನುಭಾವನಮ್।
ಚೇತಸಾ ಯತ್ ಸರ್ವಕಾಲಂ ಭಾವಶುದ್ಧಿಃ ಸಮೀರಿತಾ॥ -ಚ.ಜ್ಞಾ, ಕ್ರಿ.ಪಾ, ೯.೪೫

[೪೦] ಪದ್ಭ್ಯಾಂ ಪಿಪೀಲಿಕಾದೀನಾಂ ನ ಯಥಾ ಹಿಂಸನಂ ಭವೇತ್।
ಗಮನಂ ಹಿ ಪರಿಗ್ರಾಹ್ಯಂ ಮಾರ್ಗಶುದ್ಧಿರಿಯಂ ಮತಾ॥ -ಚ.ಜ್ಞಾ, ಕ್ರಿ.ಪಾ, ೯.೪೬

[೪೧] ಶಾಸ್ತ್ರಸಂಚೋದಿತೇ ಕಾಲೇ ನಿಃಶಬ್ದೇ ಚ ಮನೋರಮೇ।
ಶಿವಲಿಂಗಾರಾಧನಂ ಯತ್ ಕಾಲಶುದ್ಧಿರಿಹೋದಿತಾ॥ -ಚ.ಜ್ಞಾ, ಕ್ರಿ.ಪಾ, ೯.೪೭

[೪೨] ಅನೃತಂ ಪರುಷಂ ಕುತ್ಸಂ ಬೀಭತ್ಸಂ ದಾಂಭಿಕಂ ಚ ಯತ್।
ವಿಸರ್ಜನಂ ತದ್ವಚಸೋ ವಾಕ್‌ಶುದ್ಧಿರಿತಿ ಕಥ್ಯತೇ॥ -ಚ.ಜ್ಞಾ, ಕ್ರಿ.ಪಾ, ೯.೪೮

[೪೩] ಆಸನೇ ಶಯನೇ ಯಾನೇ ಗೋಷ್ಠ್ಯಾಂ ಸರ್ವತ್ರ ಸರ್ವದಾ।
ಸದ್ಭಕ್ತಜನಸಾಂಗತ್ಯಂ ಜನಶುದ್ಧಿಃ ಸಮೀರಿತಾ॥ -ಚ.ಜ್ಞಾ, ಕ್ರಿ.ಪಾ, ೯.೪೯

ಮತ್ತು ಸಾಧಕರುಗಳಿಗೆ ಶಿವಸಾಯುಜ್ಯ ಪ್ರಾಪ್ತಿಯುಂಟಾಗುತ್ತದೆ. ಅದನ್ನು ಚಂದ್ರಜ್ಞಾನಾಗಮವು ಹೀಗೆ ನಿರೂಪಿಸಿದೆ-

ವಿದ್ವನ್ನಯಂ ಶಿವಾಚಾರಃ ಸರ್ವಶಾಸ್ತ್ರೇಷು ಗೋಪಿತಃ।
ಏತದಾಚರಣಾನ್‌ಮರ್ತ್ಯಃ ಶಿವಸಾಯುಜ್ಯಮಶ್ನುತೇ॥[೪೪]

"ಎಲೈ ವಿದ್ವಾಂಸನೆ, ಇದೆಲ್ಲ ಶಿವಾಚಾರ; ಎಲ್ಲಾ ಶಾಸ್ತ್ರಗಳಲ್ಲಿ ಇದು ಗೋಪಿತವಾಗಿದೆ. ಇವುಗಳನ್ನೆಲ್ಲ ಆಚರಿಸುವ ಮನುಷ್ಯನು ಶಿವಸಾಯುಜ್ಯವನ್ನು ಪಡೆಯುತ್ತಾನೆ."

೪. ಗಣಾಚಾರ

"ಅನುಷ್ಠಿತೋ ಭಕ್ತಗಣೈರ್ಗಣಾಚಾರ ಇತೀರಿತಃ"[೪೫] ಎಂಬ ಆಗಮೋಕ್ತಿಯಂತೆ ಶಿವಭಕ್ತರಿಂದ ಆಚರಿಸುವ ಆಚಾರವೇ ಗಣಾಚಾರ. ತನ್ನ ಇಷ್ಟದೇವತೆಯ ವಿಷಯದಲ್ಲಿ, ತನ್ನ ಗುರುವಿನಲ್ಲಿ, ತಮ್ಮ ಧರ್ಮಗ್ರಂಥಾದಿಗಳನ್ನು ಕುರಿತು ಅತಿಶಯವಾದ ಶ್ರದ್ಧೆಯಿಂದ ವ್ಯವಹರಿಸುವಾಗ ಯಾವನಾದರೊಬ್ಬ ಧಾರ್ಮಿಕನಲ್ಲದ ವ್ಯಕ್ತಿಯಿಂದ ನಿಂದನೆಯೇ ಮೊದಲಾದವುಗಳಿಂದ ಅವುಗಳ ಅವಹೇಳನವು ಸಂಭವಿಸಿದರೆ, ಸಾಮೋಪಾಯದಿಂದ ಅಥವಾ ದಂಡೋಪಾಯದಿಂದ ಅದಕ್ಕೆ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವುದರ ಮೂಲಕ ಆ ಅಧಾರ್ಮಿಕನನ್ನು ಧಾರ್ಮಿಕನನ್ನಾಗಿ ಮಾಡುವ ಆಚಾರವೇ ಗಣಾಚಾರ. ಶಿವಗಣಗಳಿಂದ ಅರ್ಥಾತ್ ಶಿವಭಕ್ತರಿಂದ ಇದು ಕಟ್ಟುನಿಟ್ಟಾಗಿ ಪಾಲಿಸಲ್ಪಡುತ್ತದೆ. ವ್ಯಕ್ತಿಯಲ್ಲಿರುವ ಮತ್ತು ಸಮಾಜದಲ್ಲಿರುವ ದುರ್ಗುಣಗಳನ್ನು ದೂರಮಾಡುವುದೇ ಇದರ ಮುಖ್ಯ ಪ್ರಯೋಜನ. ದುರ್ಗುಣಗಳಲ್ಲಿ ನಿಂದೆಯು ಅತ್ಯಂತ ಕೀಳುಮಟ್ಟದ್ದೆಂದು ಪರಿಗಣಿಸಲಾಗಿದೆ. ನಿಂದಿಸುವವನು ಹೇಗೆ ತನ್ನ ಕ್ರಿಯೆಯಿಂದ ದೋಷಯುಕ್ತನಾಗುವನೋ ಹಾಗೆಯೇ ಆ ನಿಂದನೆಯನ್ನು ಕೇಳುವವನೂ ಸಹ ದೋಷವಂತನಾಗುತ್ತಾನೆ. ಆ ಕಾರಣ ಶಿವಭಕ್ತನು ಒಮ್ಮೆಯೂ ಸಹ ಶಿವನಿಂದೆಯನ್ನು ಕೇಳಬಾರದು. ಆದುದರಿಂದ-

ಶಿವಸ್ಯ ಶಿವಭಕ್ತಸ್ಯ ಶಿವಧರ್ಮಾದಿಕಸ್ಯ ಚ।
ನ ಶೃಣೋತಿ ಚ ಯೋ ನಿಂದಾಂ ಸ ಗಣಾಚಾರ ಉಚ್ಯತೇ॥[೪೬]

ಎಂಬ ಆಗಮೋಕ್ತಿಯಂತೆ ಶಿವನ, ಶಿವಭಕ್ತರ ಅಥವಾ ಶಿವಧರ್ಮದ ನಿಂದನೆಯನ್ನು ಒಮ್ಮೆಯೂ ಕೇಳದಿರುವುದು ಗಣಾಚಾರವೆಂದು ಹೇಳಲ್ಪಟ್ಟಿದೆ. ಆದುದರಿಂದಲೇ ಶ್ರೀ ರೇಣುಕಾಚಾರ್ಯರೂ ಸಹ-

ಯತ್ರ ಚಾಚಾರನಿಂದಾಽಸ್ತಿ ಕದಾಚಿತ್ತತ್ರ ನ ವ್ರಜೇತ್।
ಯದ್‌ಗೃಹೇ ಶಿವನಿಂದಾಽಸ್ತಿ ತದ್‌ಗೃಹಂ ಸಂಪರಿತ್ಯಜೇತ್॥

---

[೪೪] ಚ.ಜ್ಞಾ, ಕ್ರಿ.ಪಾ, ೯.೫೦

[೪೫] ಚ.ಜ್ಞಾ, ಕ್ರಿ.ಪಾ, ೯.೫೧

[೪೬] ಚ.ಜ್ಞಾ, ಕ್ರಿ.ಪಾ, ೯.೮

ಶಿವನಿಂದಾಕರಂ ದೃಷ್ಟ್ವಾ ಘಾತಯೇದಥವಾ ಶಪೇತ್।
ಸ್ಥಾನಂ ವಾ ತತ್ಪರಿತ್ಯಜ್ಯ ಗಚ್ಛೇದ್ ಯದ್ಯಕ್ಷಮೋ ಭವೇತ್॥[೪೭]

ಎಂಬಲ್ಲಿ ಶಿವನಿಂದಕನನ್ನು ನೋಡಿದರೆ ಹೊಡೆಯಬೇಕು ಅಥವಾ ಶಪಿಸಬೇಕು, ಅಸಮರ್ಥನಾದರೆ ಆ ಸ್ಥಾನವನ್ನು ಬಿಟ್ಟು ಹೋಗಬೇಕು ಎಂದು ಶಿವನಿಂದನೆಯನ್ನು ಕೇಳದಿರುವುದನ್ನೇ ಈ ಆಚಾರದಲ್ಲಿ ಪ್ರಧಾನವಾಗಿ ಉಪದೇಶಿಸಿದ್ದಾರೆ. ಇಲ್ಲಿ ನಿರೂಪಿತವಾಗಿರುವ ಶಿವನಿಂದಕನನ್ನು ಹೊಡೆಯಬೇಕು ಎಂದರೆ ದೈಹಿಕವಾಗಿ ಹೊಡೆಯುವುದಾಗಿರದೆ ಅವನ ದುರ್ಬುದ್ಧಿಯ ಘಾತನವೆಂದು ಅರಿಯಬೇಕು. ಶರೀರಘಾತದಿಂದ ಮನುಷ್ಯನ ಬುದ್ಧಿಯು ಶುದ್ಧವಾಗುವುದಿಲ್ಲ. ಆದರೆ ಬುದ್ಧಿಯ ಶುದ್ಧಿಯಿಂದಲೇ ಮಾನವನು ಪರಿಶುದ್ಧನಾಗುತ್ತಾನೆ. ಆ ಕಾರಣದಿಂದ ಸದುಪದೇಶದ ಮೂಲಕ ಶಿವನಿಂದಕನ ದುರ್ಬುದ್ಧಿಯ ಘಾತನವೇ ಇಲ್ಲಿ ಘಾತನ ಶಬ್ದದ ಮುಖ್ಯಾರ್ಥ. ಈ ರೀತಿಯಾಗಿ ಗಣಾಚಾರದಲ್ಲಿ ನಿರತನಾದ ಸಾಧಕನು ತನ್ನ ದುರ್ಗುಣಗಳನ್ನು ತ್ಯಾಗ ಮಾಡುವುದಲ್ಲದೆ ತನ್ನ ನಿಕಟವರ್ತಿಗಳಾದ ಜನಗಳ ದುರ್ಗುಣಗಳನ್ನು ಉತ್ತಮವಾದ ಉಪದೇಶದಿಂದ ಹಾಗೂ ಒಮ್ಮೆ ದಂಡೋಪಾಯದಿಂದಲೂ ದೂರ ಮಾಡಲು ಪ್ರಯತ್ನಶೀಲನಾಗುತ್ತಾನೆ.

ಈ ಗಣಾಚಾರದಲ್ಲಿ ಕಾಯಿಕ-ವಾಚಿಕ-ಮಾನಸಿಕ ಭೇದದಿಂದ ಒಟ್ಟು ೬೪ ಶೀಲಗಳು ಪ್ರತಿಪಾದಿತವಾಗಿವೆ. ಅದನ್ನು ಚಂದ್ರಜ್ಞಾನಾಗಮವು ಹೀಗೆ ನಿರೂಪಿಸಿದೆ-

ಸರ್ವೋತ್ತಮೇ ಗಣಾಚಾರೇ ಸದ್ಯಃ ಸಿದ್ಧಿಕರೇ ಪರೇ।
ಶೀಲಾನಿ ತು ಚತುಃಷಷ್ಟಿರ್ವರ್ತಂತೇ ತಾನಿ ಸಂಶೃಣು॥[೪೮]

"ಸದ್ಯವೇ ಸಿದ್ಧಿಯನ್ನು ನೀಡುವ ಸರ್ವೋತ್ಕೃಷ್ಟವಾದ ಗಣಾಚಾರದಲ್ಲಿ ೬೪ ಶೀಲಗಳಿವೆ. ಅವುಗಳನ್ನು ಕೇಳು." ಈಗ ೬೪ ಶೀಲಗಳ ಸ್ವರೂಪವನ್ನು ಸಂಕ್ಷೇಪವಾಗಿ ನಿರೂಪಿಸ ಲಾಗುವುದು.

ವಾಚಿಕಶೀಲಗಳು ಏಳು ವಿಧ

(೧) ಯಥಾರ್ಥವಾಗಿ ಮಾತನಾಡುವುದು, (೨) ಸತ್ಯವಾಗಿ, ಪ್ರಿಯವಾಗಿ ಹಾಗೂ ಹಿತವಾಗಿ ಮಾತನಾಡುವುದು, (೩) ಪ್ರತಿದಿನವೂ ವೇದಾಗಮಾದಿ ಶಾಸ್ತ್ರಗಳನ್ನು ಪಠನ ಮಾಡುವುದು, (೪) ಶಿವನ, ಶಿವಭಕ್ತರ ಮತ್ತು ಗುರುವಿನ ಪ್ರಶಂಸೆ, (೫) ತನ್ನ ಇಷ್ಟದೇವತೆಯನ್ನು ಹೊರತುಪಡಿಸಿ ಬೇರೆ ದೇವತೆಗಳ ಅಥವಾ ಸಾಮಾನ್ಯ ಮನುಷ್ಯರ ಪ್ರಶಂಸೆ ಮಾಡದಿರುವುದು, (೬) ಒಮ್ಮೆಯೂ ಆತ್ಮಸ್ತುತಿ ಮಾಡಿಕೊಳ್ಳದಿರುವುದು, (೭) ಬೇರೆಯವರನ್ನು ನಿಂದಿಸದಿರುವುದು -ಈ ಏಳು ವಾಚಿಕಶೀಲವೆನಿಸಿವೆ.[೪೯]

---

[೪೭] ಸಿ.ಶಿ, ೯.೩೬,೩೮

[೪೮] ಚ.ಜ್ಞಾ, ಕ್ರಿ.ಪಾ, ೯.೫೨

[೪೯] ಭಕ್ತಿನಿಷ್ಠೇನ ಯದ್ವಾಚಾ ಯಥಾರ್ಥಸ್ಯೈವ ಭಾಷಣಮ್।
ತತ್ಸತ್ಯಂ ಸರ್ವಶಾಸ್ತ್ರೇಷು ಪ್ರಥಮಂ ಶೀಲಮುಚ್ಯತೇ॥

ಕೈಗಳಿಗೆ ಸಂಬಂಧಿಸಿದ ಐದು ಬಗೆಯ ಶೀಲಗಳು

(೮) ಗುರು-ಲಿಂಗ-ಜಂಗಮರಿಗೆ ನಮಸ್ಕಾರ, (೯) ಪೂಜಾಸಾಮಗ್ರಿಗಳ ಸಂಗ್ರಹ, (೧೦) ರುದ್ರಾಕ್ಷಮಾಲೆಯನ್ನು ಹಿಡಿದು ಪಂಚಾಕ್ಷರಮಂತ್ರವನ್ನು ಪ್ರತಿನಿತ್ಯವೂ ಜಪಿಸುವುದು, (೧೧) ಗುರು-ಲಿಂಗ-ಜಂಗಮರನ್ನು ಪ್ರತಿದಿನವೂ ಪೂಜಿಸುವುದು (೧೨) ಶ್ರೀಗುರುವಿಗೆ, ಜಂಗಮರಿಗೆ ಮತ್ತು ಶಿವಧರ್ಮಕ್ಕೆ ಯಥಾಶಕ್ತಿ ದಾನ ಮಾಡುವುದು -ಈ ಐದು ಕೈಗಳಿಗೆ ಸಂಬಂಧಿಸಿದ ಶೀಲಗಳೆನಿಸಿವೆ.[೫೦]

ಪಾದಗಳಿಗೆ ಸಂಬಂಧಿಸಿದ ನಾಲ್ಕು ವಿಧ ಶೀಲಗಳು

(೧೩) ಗುರು-ಜಂಗಮರನ್ನು ಎದುರುಗೊಳ್ಳುವುದು, (೧೪) ಗುರು-ಜಂಗಮರಿಗೆ ಪ್ರದಕ್ಷಿಣೆ ಹಾಕುವುದು, (೧೫) ಪೂಜಾಸಾಮಗ್ರಿಗಳ ಸಂಗ್ರಹಕ್ಕೆ ಹೋಗುವುದು, (೧೬) ಇಷ್ಟಲಿಂಗದ ಪೂಜೆಗಾಗಿ ಅಥವಾ ಶ್ರೀಗುರುವಿನ ಪಾದಪೂಜೆಗಾಗಿ ಸ್ಥಿರವಾದ ಮನಸ್ಸಿನಿಂದ ಕೂಡಿರುವುದು -ಈ ನಾಲ್ಕು ಪಾದಕ್ಕೆ ಸಂಬಂಧಿಸಿದ ಶೀಲಗಳು.[೫೧]

ಚರ್ಮಕ್ಕೆ ಸಂಬಂಧಿಸಿದ ಎರಡು ಬಗೆಯ ಶೀಲಗಳು

(೧೭) ಇಷ್ಟಲಿಂಗವು ದೇಹದಿಂದ ಬೇರ್ಪಡದಂತೆ ನಿತ್ಯವೂ ಸ್ಪರ್ಶವಾಗುತ್ತಿರುವುದು, (೧೮) ಇಷ್ಟಲಿಂಗದ ಸ್ಪರ್ಶದಿಂದುಂಟಾಗುವ ರೋಮಾಂಚದ ಅಲಂಕಾರ -ಈ ಎರಡನ್ನು ಚರ್ಮಕ್ಕೆ ಸಂಬಂಧಿಸಿದ ಶೀಲಗಳೆಂದು ಹೇಳಲಾಗಿದೆ.[೫೨]

ನ ವಾಚ್ಯಮಪ್ರಿಯಂ ಸತ್ಯಂ ನಾಸತ್ಯಂ ಚ ಪ್ರಿಯಂ ವದೇತ್।
ಬ್ರೂಯಾತ್ ಪ್ರಿಯಂ ಚ ಯತ್ಸತ್ಯಂ ದ್ವಿತೀಯಂ ಶೀಲಮುಚ್ಯತೇ॥
ವೇದಾಗಮಪುರಾಣಾನಾಂ ಧರ್ಮಜ್ಞಾನೈಕಬೋಧಿನಾಮ್।
ಪಠನಂ ಪ್ರತ್ಯಹಂ ಯತ್ತತ್ ತೃತೀಯಂ ಶೀಲಮೀರಿತಮ್॥
ಶಿವಸ್ಯ ಶಿವಭಕ್ತಾನಾಂ ಗುರೋರಪಿ ವಿಶೇಷತಃ।
ಪ್ರಶಂಸನಂ ಯದಶ್ರಾಂತಂ ಚತುರ್ಥಂ ಶೀಲಮುಚ್ಯತೇ॥
ಅನ್ಯೇಷಾಂ ಚೈವ ದೇವಾನಾಂ ಮಾನುಷಾಣಾಂ ಚ ಜಾತುಚಿತ್।
ಪ್ರಶಂಸಾವರ್ಜನಂ ಯತ್ತತ್ ಪಂಚಮಂ ಶೀಲಮುಚ್ಯತೇ॥
ಕದಾಚಿದ್ ಕುತ್ರಚಿದ್ ವಾ ಯದಾತ್ಮಸ್ತುತಿವಿಸರ್ಜನಮ್।
ತತ್ ಷಷ್ಠಂ ಶೀಲಮಿತ್ಯುಕ್ತಂ ಸರ್ವಶಾಸ್ತ್ರೈಕಸಮ್ಮತಮ್॥
ದೇವತಾನಾಂ ಮನುಷ್ಯಾಣಾಂ ನಿರ್ಗುಣಾನಾಂ ಚ ಜಾತುಚಿತ್।
ಗರ್ಹಾವಿಸರ್ಜನಂ ಯತ್ತತ್ ಸಪ್ತಮಂ ಶೀಲಮುಚ್ಯತೇ॥
-ಚ.ಜ್ಞಾ, ಕ್ರಿ.ಪಾ, ೯.೫೩-೫೯

[೫೦] ಚ.ಜ್ಞಾ, ಕ್ರಿ.ಪಾ, ೯.೬೧-೬೫

[೫೧] ಚ.ಜ್ಞಾ, ಕ್ರಿ.ಪಾ, ೯.೬೬-೭೦

[೫೨] ಚ.ಜ್ಞಾ, ಕ್ರಿ.ಪಾ, ೯.೭೨-೭೩

ಕಣ್ಣಿಗೆ ಸಂಬಂಧಿಸಿದ ಎರಡು ವಿಧ ಶೀಲಗಳು

(೧೯) ತದೇಕದೃಷ್ಟಿಯಿಂದ ಪ್ರೀತಿಪೂರ್ವಕವಾಗಿ ಇಷ್ಟಲಿಂಗದ ವೀಕ್ಷಣೆ, (೨೦) ಇಷ್ಟಲಿಂಗ ದರ್ಶನದಿಂದುಂಟಾದ ಆನಂದಭಾಷ್ಪದ ಹೊರಹೊಮ್ಮುವಿಕೆ -ಈ ಎರಡು ಕಣ್ಣುಗಳಿಗೆ ಸಂಬಂಧಿಸಿದ ಶೀಲಗಳು.[೫೩]

ನಾಲಿಗೆಗೆ ಸಂಬಂಧಿಸಿದ ಒಂದು ಶೀಲ

(೨೧) ಪ್ರತಿದಿನವೂ ಶಿವನಿಗರ್ಪಿಸಿದ ಪ್ರಸಾದದ ರಸಾಸ್ವಾದ -ಇದು ನಾಲಿಗೆಗೆ ಸಂಬಂಧಿಸಿದ ಶೀಲವೆಂದು ತಿಳಿಯಬೇಕು.[೫೪]

ನಾಸಿಕಕ್ಕೆ (ಮೂಗು) ಸಂಬಂಧಿಸಿದ ಒಂದು ಶೀಲ

(೨೨) ಶಿವನಿರ್ಮಾಲ್ಯಗಳಾದ ಗಂಧ-ಪುಷ್ಪಾದಿಗಳ ಪರಿಮಳವನ್ನು ಪ್ರತಿದಿನವೂ ಆಘ್ರಾಣಿಸುವುದು -ಇದು ನಾಸಿಕಕ್ಕೆ ಸಂಬಂಧಿಸಿದ ಶೀಲ.[೫೫]

ಕಿವಿಗಳಿಗೆ ಸಂಬಂಧಿಸಿದ ಎರಡು ಶೀಲಗಳು

(೨೩) ಗುರು, ಶಿವ ಹಾಗೂ ಶಿವಭಕ್ತರ ಸ್ತೋತ್ರವನ್ನು ಶ್ರವಣ ಮಾಡುವುದು, (೨೪) ಗುರು, ಶಿವ ಹಾಗೂ ಶಿವಭಕ್ತರ ನಿಂದನೆಯನ್ನು ಶ್ರವಣ ಮಾಡದಿರುವುದು -ಈ ಎರಡು ಕಿವಿಗೆ ಸಂಬಂಧಿಸಿದ ಶೀಲವೆನಿಸಿವೆ.[೫೬]

ಐದು ಬಗೆಯ ಕಾಯ (ಶರೀರ) ಶೋಧನ ಶೀಲಗಳು

(೨೫) ಗುರು-ಲಿಂಗ-ಜಂಗಮರ ಪ್ರಸಾದದಿಂದ ಶರೀರವನ್ನು ಶುದ್ಧಿಗೊಳಿಸುವುದು, (೨೬) ನಿಷಿದ್ಧವಾದ ವಿಷಯಗಳಲ್ಲಿ ಇಂದ್ರಿಯಗಳನ್ನು ನಿಗ್ರಹ ಮಾಡುವುದು, (೨೭) ಮುಟ್ಟಬಾರದ ವಸ್ತುಗಳನ್ನು ಮುಟ್ಟಿದಾಗ ನೀರಿನಿಂದ ಅಥವಾ ಭಸ್ಮದಿಂದ ಸ್ನಾನಮಾಡುವುದು, (೨೮) ಕುಳಿತುಕೊಳ್ಳುವಾಗ, ಮಲಗುವಾಗ, ಪ್ರಯಾಣದಲ್ಲಿ ಹಾಗೂ ವಿದ್ವದ್ಗೋಷ್ಠಿಗಳಲ್ಲಿ ಭವಿಗಳ ಸಂಬಂಧವನ್ನು ತ್ಯಜಿಸುವುದು, (ಇಲ್ಲಿ ಭವಿಯೆಂದರೆ ವೀರಶೈವ ಸಂಪ್ರದಾಯದಂತೆ ದೀಕ್ಷಾಸಂಸ್ಕಾರವಾಗದ ಪ್ರಾಕೃತ ಮನುಷ್ಯನೆಂದರ್ಥ), (೨೯) ವಿಭೂತಿ, ರುದ್ರಾಕ್ಷ, ಇಷ್ಟಲಿಂಗಗಳನ್ನು ಶರೀರದ ಮೇಲೆ ಸದಾ ಧರಿಸಿರುವುದು -ಈ ಐದು ಕಾಯಶೋಧನ (ಶರೀರವನ್ನು ಶುದ್ಧಿಗೊಳಿಸುವ) ಶೀಲಗಳೆಂದು ಕರೆಯಲ್ಪಟ್ಟಿವೆ.[೫೭]

---

[೫೩] ಚ.ಜ್ಞಾ, ಕ್ರಿ.ಪಾ, ೯.೭೫-೭೬

[೫೪] ಚ.ಜ್ಞಾ, ಕ್ರಿ.ಪಾ, ೯.೭೮

[೫೫] ಚ.ಜ್ಞಾ, ಕ್ರಿ.ಪಾ, ೯.೭೯

[೫೬] ಚ.ಜ್ಞಾ, ಕ್ರಿ.ಪಾ, ೯.೮೦-೮೧

[೫೭] ಚ.ಜ್ಞಾ, ಕ್ರಿ.ಪಾ, ೯.೮೨-೮೭

ಮಾನಸಿಕ ಶೀಲಗಳು ಮೂವತ್ತೈದು ವಿಧ

(೩೦) ನಿಷಿದ್ಧವಾದ ಭೋಗವಸ್ತುಗಳಲ್ಲಿ ಸಂಕಲ್ಪವಿಲ್ಲದ ಬ್ರಹ್ಮಚರ್ಯ, (೩೧) ಭಕ್ತರ ವಿಷಯದಲ್ಲಿ ಕಾಮಿಯಾಗಬೇಕು, ವಿಷಯಾಸಕ್ತನಾಗಬಾರದು, (೩೨) ಅಧರ್ಮದ ವಿಷಯದಲ್ಲಿ ಕೋಪವಿರಬೇಕು, ವೈರಿಗಳ ವಿಷಯದಲ್ಲಿಲ್ಲ, (೩೩) ಶಿವಪೂಜೆಯಲ್ಲಿ ಲೋಭವಿರಬೇಕು, ಧನ-ಕನಕಾದಿಗಳಲ್ಲಿ ಸಲ್ಲದು, (೩೪) ಭಕ್ತರ ವಿಷಯದಲ್ಲಿ ಮೋಹವಿರಬೇಕು, ಹೆಂಡತಿ-ಮಕ್ಕಳ ವಿಷಯದಲ್ಲಲ್ಲ, (೩೫) ಇಂದ್ರಿಯಗಳಲ್ಲಿ ಮಾತ್ಸರ್ಯವಿರಬೇಕು, ಜನಗಳ ವಿಷಯದಲ್ಲಿ ಮಾತ್ಸರ್ಯ ಕೂಡದು, (೩೬) ಮಾಯಾ ಜಯದ ವಿಷಯದಲ್ಲಿ ಮದ, ಧರ್ಮ ಹಾಗೂ ಸಂಪತ್ತಿನ ವಿಷಯದಲ್ಲಲ್ಲ, (೩೭) ಗುರು-ಜಂಗಮರ ಗುಣಾವಗುಣಗಳ ವಿಮರ್ಶೆಯನ್ನು ಬಿಡುವುದು, (೩೮) ಪ್ರಾಣಿಗಳನ್ನು ಹಿಂಸೆ ಮಾಡದಿರುವುದು, (೩೯) ಪ್ರಾಣಿಗಳ ದುಃಖವನ್ನು ನೋಡಿ ದಯೆ ತೋರುವುದು, (೪೦) ಮಾತು ಮತ್ತು ಕೃತಿಯಲ್ಲಿ (ನಡವಳಿಕೆಯಲ್ಲಿ) ನಾಚಿಕೆ, (೪೧) ಶತ್ರುವನ್ನೂ ಅಥವಾ ತನ್ನ ಮಗನನ್ನೂ ದ್ವೇಷಿಸದಿರುವುದು, (೪೨) ಗುರುವು ಉಪದೇಶ ಮಾಡಿದ ವೇದಾಗಮದ ವಾಕ್ಯಗಳಲ್ಲಿ ವಿಶ್ವಾಸ, (೪೩) ಮಹಾ ವಿಪತ್ತುಗಳು ಸಂಭವಿಸಿದರೂ ಸಹ ಧರ್ಮವನ್ನು ತ್ಯಜಿಸದಿರುವಂತಹ ಧೈರ್ಯ, (೪೪) ವೈರಿಜನರ ವಿಷಯದಲ್ಲಿಯಂತೆ ಅಪಕಾರ ಮಾಡಿದವರನ್ನು ನಿಂದಿಸದಂತಹ ಕ್ಷಮೆ, (೪೫) ಮನಸ್ಸಿನಲ್ಲಿ ಭೋಗಾಸಕ್ತಿಯಿಲ್ಲದಿರುವುದು, (೪೬) ನಡೆ-ನುಡಿಯಲ್ಲಿ ಪ್ರಮಾದಶೂನ್ಯ ವಾದ ಬುದ್ಧಿ, (೪೭) ಶಿವನನ್ನು ಹೊರತುಪಡಿಸಿ ಬೇರೆ ವಸ್ತುಗಳನ್ನು ಪಡೆಯುವು ದಿಲ್ಲವೆಂಬ ಸಂಕಲ್ಪರಹಿತವಾದ ದಮ, (೪೮) ಪರದ್ರವ್ಯವನ್ನು ಸ್ವೀಕಾರ ಮಾಡದಂತಹ ನಡವಳಿಕೆ (ಕಳ್ಳತನ ಮಾಡದಿರುವುದು), (೪೯) ದೊರಕದ ವಸ್ತುವಿನ ವಿಷಯದಲ್ಲಿ ದುಃಖರಹಿತ ರೂಪದ ಸಂತೋಷ, (೫೦) ಪ್ರತಿನಿತ್ಯವೂ ಪರಮೇಶ್ವರನ ರೂಪ-ನಾಮ ಗಳ ಸ್ಮರಣೆ, (೫೧) ಶಿವನಾಮಾವಳಿಗಳ ನಿರಂತರ ಚಿಂತನೆ, (೫೨) ಯಾವಾಗಲೂ ಶಿವನ ಪಾದಸೇವೆಯ ಭಾವನೆ, (೫೩) ಶಿವನನ್ನು ಆವಾಹನಾದಿಗಳ ಮೂಲಕ ಮಾನಸಿಕ ಪೂಜೆ, (೫೪) ಪ್ರತಿನಿತ್ಯವೂ ಶಿವನ ಪಾದಕಮಲಗಳಿಗೆ ಮಾನಸಿಕವಾಗಿ ಪ್ರಣಾಮ ಸಲ್ಲಿಸುವುದು, (೫೫) ಮನಸ್ಸಿನಲ್ಲಿ ಶಿವನ ಕೈಂಕರ್ಯರೂಪದ ದಾಸ್ಯ, (೫೬) ಮಂಗಲ ಸ್ವರೂಪಿಯಾದ ಶಿವನ ಸಖಿಭಾವ ರೂಪದ ಸಖ್ಯ, (೫೭) ತನ್ನ ಎಲ್ಲ ಬಂಧ-ವಿಮೋಚನೆಗಳ ಭಾರವನ್ನು ಶಿವನಿಗೆ ಸಮರ್ಪಣೆ ಮಾಡುವಂತಹ ಆತ್ಮಸಮರ್ಪಣೆ, (೫೮) ಪಂಚಾಕ್ಷರಮಂತ್ರವನ್ನು ಸದಾ ಮನಸ್ಸಿನಲ್ಲಿ ಜಪಿಸುವುದು, (೫೯) ಶಿವನ ದಿವ್ಯರೂಪದ ಅನುಸಂಧಾನರೂಪ ಧ್ಯಾನ, (೬೦) ತೈಲಧಾರೆಯಂತೆ ಒಂದೇ ಸಮನೆ ಶಿವನ ಮೂರ್ತಿಯನ್ನು ಮನಸ್ಸಿನಲ್ಲಿ ಧಾರಣೆ ಮಾಡುವುದು, (೬೧) ಗಾಳಿಯಿಲ್ಲದ ಸಂದರ್ಭದಲ್ಲಿನ ದೀಪದಂತೆ ಧ್ಯಾನದಲ್ಲಿ ಮನಸ್ಸಿನ ಸ್ಥಿತಿರೂಪ ಸಮಾಧಿ, (೬೨) ಶಿವೋಽಹಂ ಭಾವನೆಯಿಂದ ಧ್ಯಾನಪೂರ್ವಕ ಕಾರ್ಯಗಳ ನಿರ್ವಹಣೆ, (೬೩) ಶಿವನ

ಅಪರಿಚ್ಛಿನ್ನರೂಪದ ಅನುಸಂಧಾನ ಮತ್ತು (೬೪) ಅನಂತರೂಪಿಯಾದ ಶಿವನ ನಿಜರೂಪದ ಭಾವನೆ -ಈ ಮೂವತ್ತೈದು ಮನಸ್ಸಿಗೆ ಸಂಬಂಧಿಸಿದ ಶೀಲಗಳೆನಿಸಿವೆ.[೫೮]

ಹೀಗೆ ಕಾಯಾ-ವಾಚಾ-ಮನಸಾ ಎಂಬ ತ್ರಿಕರಣಗಳಿಗೆ ಸಂಬಂಧಿಸಿದ ಶೀಲಗಳು ಒಟ್ಟು ಅರವತ್ತನಾಲ್ಕು. ಅರವತ್ತನಾಲ್ಕು ಶೀಲಗಳಿಂದ ಕೂಡಿದ ಈ ಗಣಾಚಾರದಲ್ಲಿ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೆಂಬ ಅರಿಷಡ್ವರ್ಗಗಳ ನಿವೃತ್ತಿಯ ಪ್ರಕಾರಗಳ; ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ ಮತ್ತು ಆತ್ಮನಿವೇದನಗಳೆಂಬ ನವವಿಧ ಭಕ್ತಿಗಳ; ಶಮ, ದಮ, ಶ್ರದ್ಧಾ, ಸಮಾಧಾನ, ಉಪರತಿ, ತಿತಿಕ್ಷೆಗಳೆಂಬ ಆರು ಸಂಪತ್ತುಗಳ; ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿಗಳೆಂಬ ಅಷ್ಟಾಂಗ ಯೋಗಗಳ ಪ್ರಾಪ್ತಿಯ ಪ್ರಕಾರವು ಸೂಚಿತವಾಗಿದೆ. ಆ ಕಾರಣ ಈ ಆಚಾರವನ್ನು ನಿಷ್ಠೆಯಿಂದ ಪಾಲಿಸುವುದರಿಂದ ಶಿವಸಾಯುಜ್ಯವು ಪ್ರಾಪ್ತವಾಗುತ್ತದೆಂದು ಚಂದ್ರಜ್ಞಾನಾಗಮವು ಸ್ಪಷ್ಟಪಡಿಸಿದೆ-

> ಯಶ್ಚತುಃಷಷ್ಟಿಶೀಲಾಢ್ಯಃ ಶಿವ ಏವ ನ ಚಾಪರಃ।
> ಏತದಭ್ಯಾಸಯೋಗೇನ ಶಿವಸಾಯುಜ್ಯಮಶ್ನುತೇ॥[೫೯]

"೬೪ ಶೀಲಗಳಿಂದ ಸಂಪನ್ನನಾದವನು ಶಿವನಲ್ಲದೆ ಬೇರೆ ಯಾರೂ ಅಲ್ಲ. ಅವನು ಅವುಗಳ ಅಭ್ಯಾಸಯೋಗದ ಶಿವಸಾಯುಜ್ಯವನ್ನು ಹೊಂದುವನು."

೫. ಭೃತ್ಯಾಚಾರ

> ಶಿವಭಕ್ತಾಃ ಜನಾಃ ಸರ್ವೇ ವರಿಷ್ಠಾಃ ಪೃಥಿವೀತಲೇ।
> ತೇಷಾಂ ಭೃತ್ಯೋಽಹಮಿತಿ ಯದ್ ಭೃತ್ಯಾಚಾರ ಇತಿ ಸ್ಮೃತಃ॥[೬೦]

"ಈ ಭೂಮಿಯ ಮೇಲಿರುವ ಎಲ್ಲಾ ಶಿವಭಕ್ತರು ಶ್ರೇಷ್ಠರು. ನಾನು ಅವರ ಸೇವಕ ಎಂಬುದೇ ಭೃತ್ಯಾಚಾರ" ಎಂಬ ಆಗಮೋಕ್ತಿಯ ಮೇರೆಗೆ ತನ್ನನ್ನು ಶಿವನ ಹಾಗೂ ಶಿವಭಕ್ತರ ಸೇವಕನೆಂದು ಭಾವಿಸಿ, ನಿಷ್ಠೆಯಿಂದ ಅವರ ಸೇವೆಯನ್ನು ಮಾಡುವುದೇ ಭೃತ್ಯಾಚಾರ. ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಭೃತ್ಯಾಚಾರದ ಸ್ವರೂಪವನ್ನು ಹೀಗೆ ನಿರೂಪಿಸಿದ್ದಾರೆ-

> ಶಿವಯೋಗೀ ಶಿವಃ ಸಾಕ್ಷಾದಿತಿ ಕೈಂಕರ್ಯಭಕ್ತಿತಃ।
> ಪೂಜಯೇದಾದರೇಣೈವ ಯಥಾ ಲಿಂಗಂ ಯಥಾ ಗುರುಮ್॥[೬೧]

"ಲಿಂಗವನ್ನೂ ಗುರುವನ್ನೂ ಹೇಗೆ ಆದರಪೂರ್ವಕವಾಗಿ ಪೂಜಿಸಬೇಕೋ, ಹಾಗೆಯೋ ಶಿವಯೋಗಿಯನ್ನೂ ಸಾಕ್ಷಾತ್ ಶಿವನೆಂದು ತಿಳಿದು ಕಿಂಕರಭಾವದಿಂದ ಪೂಜಿಸಬೇಕು."

---

[೫೮] ಚ.ಜ್ಞಾ, ಕ್ರಿ.ಪಾ, ೯.೮೭-೧೨೨

[೫೯] ಚ.ಜ್ಞಾ, ಕ್ರಿ.ಪಾ, ೯.೧೨೩

[೬೦] ಚ.ಜ್ಞಾ, ಕ್ರಿ.ಪಾ, ೯.೯

[೬೧] ಸಿ.ಶಿ, ೯.೬೬

ಈ ಭೃತ್ಯಾಚಾರವು ಭೃತ್ಯಭಾವ ಮತ್ತು ವೀರಭೃತ್ಯಭಾವವೆಂದು ಎರಡು ವಿಧವಾಗಿದೆ. ಗುರು-ಲಿಂಗ-ಜಂಗಮರನ್ನು ಕಿಂಕರಭಕ್ತಿಯಿಂದ ಪೂಜಿಸುವುದು ಭೃತ್ಯಭಾವವೆನಿಸುತ್ತದೆ. ಸಾಧಕನು ಭಕ್ತಿಯ ಉತ್ಕರ್ಷದಿಂದ ಗುರುವಿಗೆ ತನುವನ್ನು, ಇಷ್ಟಲಿಂಗಕ್ಕೆ ಮನವನ್ನು ಮತ್ತು ಜಂಗಮನಿಗೆ ತನ್ನ ಸಮಸ್ತ ಧನವನ್ನು ಅರ್ಪಿಸಿ, ಪಾರಲೌಕಿಕಸುಖದ ವಿಷಯದಲ್ಲಿಯೂ ನಿಸ್ಪೃಹನಾಗಿ, ಕೇವಲ ಮೋಕ್ಷಾಕಾಂಕ್ಷಿಯಾಗುವುದು ವೀರಭೃತ್ಯವೆಂದು ಕರೆಯಲಾಗಿದೆ. ಈ ಬಗೆಯ ವೀರಭೃತ್ಯಭಾವನೆಯಿಂದಲೇ ಭಕ್ತನು ಶಿವಾನುಗ್ರಹವನ್ನು ಪಡೆಯುತ್ತಾನೆ.

> ದೇಶಿಕಾಯ ತನುಂ ಚಿತ್ತಂ ಶಂಭವೇ ಚ ಧನಂ ತಥಾ।
> ಜಂಗಮಾಯ ಸಮರ್ಪ್ಯೈವಂ ಮಹೋತ್ಸಾಹಸಮನ್ವಿತಃ॥
> ಮುಕ್ತಿಮೇವ ಪರಾಂ ಕಾಂಕ್ಷಮಾಣೋ ಯದವತಿಷ್ಠತೇ।
> ತನ್ಮತಂ ವೀರಭೃತ್ಯತ್ವಂ ಶಿವಾನುಗ್ರಹಸಾಧನಮ್॥[೬೨]

"ಗುರುವಿಗೆ ಶರೀರವನ್ನು, ಲಿಂಗಕ್ಕೆ ಚಿತ್ತವನ್ನು ಮತ್ತು ಜಂಗಮನಿಗೆ ಧನವನ್ನು ಸಮರ್ಪಿಸಿ ಅತ್ಯಂತ ಉತ್ಸಾಹಶಾಲಿಯಾಗಿರುವವನು ವೀರಭೃತ್ಯತ್ವವನ್ನು ಹೊಂದಿದವನು. ಇದು ಶಿವನ ಅನುಗ್ರಹಕ್ಕೆ ಸಾಧನವಾಗುತ್ತದೆ."

ವೀರಶೈವ ಧರ್ಮದ ಈ ಭೃತ್ಯಾಚಾರವು ವಿನಯಗುಣ ಪ್ರಧಾನವಾಗಿದೆ. ಅಹಂಕಾರದಿಂದ ಪತನ ಮತ್ತು ವಿನಯದಿಂದ ಔನ್ನತ್ಯದ ಪ್ರಾಪ್ತಿಯಾಗುತ್ತದೆಂಬುದು ಶಾಸ್ತ್ರಪ್ರಮಾಣದಿಂದಲೂ ಹಾಗೂ ಲೋಕಾನುಭವದಿಂದಲೂ ಪ್ರಸಿದ್ಧವಾಗಿದೆ. ಪೂರ್ವೋಕ್ತಗಳಾದ ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರಗಳನ್ನು ನಿಷ್ಠೆಯಿಂದ ಪಾಲಿಸುವುದರಿಂದ ಒಮ್ಮೆ ಸಾಧಕನಲ್ಲಿ ನನಗೆ ಸಮನಾದ ಆಚಾರವಂತನು ಬೇರೆ ಯಾರು ತಾನೆ ಇದ್ದಾನೆ? ಎಂಬ ಅಭಿಮಾನವು ಉಂಟಾಗುತ್ತದೆ. ಇಂತಹ ಅಭಿಮಾನವು ಪ್ರಾಪ್ತವಾದರೆ ನಿಶ್ಚಯವಾಗಿಯೂ ಭಕ್ತನ ಪತನವಾಗುತ್ತದೆ. ಆದುದರಿಂದ ಉತ್ಕೃಷ್ಟ ಸಾಧಕನ ಪತನವಾಗಬಾರದೆನ್ನುವ ಕಾರಣದಿಂದ ಶಿವಾಗಮಗಳಲ್ಲಿ ಭೃತ್ಯಾಚಾರವನ್ನು ಕೊನೆಯದಾಗಿ ಉಪದೇಶಿಸಲಾಗಿದೆ. ಭೃತ್ಯಭಾವಸತ್ವವೇ ಪೂರ್ವೋಕ್ತ ಆಚಾರಗಳ ಫಲಪ್ರಾಪ್ತಿಗೆ ಕಾರಣವಾಗುತ್ತದೆ. ಈ ಭೃತ್ಯಭಾವನೆಯಿಂದಲೇ ಸಮಾಜದಲ್ಲಿ ಸಮಾನತೆ ಮತ್ತು ಶಾಂತಿಯನ್ನು ಸ್ಥಾಪಿಸಲು ಸಾಧ್ಯ. ಅನ್ಯಥಾ ಅಹಂಕಾರದಿಂದ ತುಂಬಿರುವ ಎಲ್ಲರ ವಿನಾಶವು ಸುಂದೋಪಸುಂದರ ನ್ಯಾಯದಂತೆ ನಿಶ್ಚಿತವಾಗುತ್ತದೆ. ಆ ಕಾರಣ ಈ ಭೃತ್ಯಭಾವವು ಕೇವಲ ಕೆಳಸ್ತರದ ಸಾಧಕರಿಗೆ ಮಾತ್ರವಲ್ಲ ಉತ್ತಮ ಸಾಧಕರಿಗೂ ಸಹ ಆವಶ್ಯಕವೆಂದು ತಿಳಿಯಬೇಕು. ಆ ರೀತಿಯಾಗಿ ಆದಾಗ ಮಾತ್ರ ಸಮಾಜದಲ್ಲಿ ಎಲ್ಲೆಡೆ ಶಾಂತಿಯು ಹರಡೀತು.

---

೬೨. ಚ.ಜ್ಞಾ, ಕ್ರಿ.ಪಾ, ೯.೧೨೫-೧೨೬

ಪೂರ್ವೋಕ್ತಗಳಾದ ಐದು ಬಗೆಯ ಆಚಾರಗಳು ಪಂಚಾಚಾರಗಳೆಂದು ಹೇಳಲ್ಪಟ್ಟಿವೆ. ವೀರಶೈವ ಪರಂಪರೆಯಲ್ಲಿ ಸಾಮಾನ್ಯವಾಗಿ ಪ್ರತಿಯೊಬ್ಬರೂ ಸಹ ಇವುಗಳ ಆಚರಣೆಯಲ್ಲಿ ನಿರತರಾಗಿರುತ್ತಾರೆ. ಇಂತಹ ಆಚಾರಗಳ ಪಾಲನೆ ಮಾಡುವುದರಿಂದ ಎಲ್ಲರ ವ್ಯಾವಹಾರಿಕ ಜೀವನವು ಬಹಳ ಸೊಗಸಾಗಿ ನಡೆಯುತ್ತದೆ. ಆಚಾರಹೀನನಾದ ವ್ಯಕ್ತಿಯು ತತ್ತ್ವಜ್ಞಾನಸಂಪನ್ನನಾದರೂ ಲೋಕದಲ್ಲಿ ನಿಂದಿತನಾಗುತ್ತಾನೆ. ಆದುದರಿಂದ ಹೇಗೆ ಮೂರ್ಖರು ಈ ಆಚಾರಗಳನ್ನು ಪಾಲಿಸುವುದು ಆವಶ್ಯಕವೋ, ಹಾಗೆಯೇ ತತ್ತ್ವಜ್ಞಾನಿಗಳಿಗೂ ಸಹ ಆವಶ್ಯಕ. ಆ ಕಾರಣ ವೀರಶೈವರು ಪೂರ್ವೋಕ್ತ ಪಂಚಾಚಾರಗಳನ್ನು ತಮ್ಮ ಪಂಚಪ್ರಾಣಗಳಂತೆ ಕಾಪಾಡುತ್ತಾರೆ.

ಈ ರೀತಿಯಾಗಿ ಅಷ್ಟಾವರಣಗಳೇ ಅಂಗವಾಗಿ, ಪಂಚಾಚಾರಗಳೇ ಪ್ರಾಣವಾಗಿರುವ ವೀರಶೈವ ಸಾಧಕನು ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಎಂಬ ಷಟ್‌ಸ್ಥಲಮಾರ್ಗವನ್ನು ಆಶ್ರಯಿಸಿ ಶಿವಸಾಯುಜ್ಯವನ್ನು ಪಡೆಯುತ್ತಾನೆ ಎಂದು ವೀರಶೈವದ ಮತ್ತೊಂದು ಪರ್ಯಾಯವಾದ ಶಕ್ತಿವಿಶಿಷ್ಟಾದ್ವೈತ ವೇದಾಂತದಲ್ಲಿ ಮೋಕ್ಷಕ್ಕೆ ಸಹಕಾರಿ ಕಾರಣಗಳಾಗಿರುವ ಅಷ್ಟಾವರಣ, ಪಂಚಾಚಾರಗಳು ಹೆಚ್ಚು ಮಹಿಮೆಯಿಂದ ಕೂಡಿವೆ. ಆದುದರಿಂದಲೇ ಶ್ರೀ ನೀಲಕಂಠ ಶಿವಾಚಾರ್ಯರು ಕ್ರಿಯಾಸಾರದಲ್ಲಿ-

> **ಅಷ್ಟಾವರಣವಿಜ್ಞಾನೀ ಪಂಚಾಚಾರಪರಾಯಣಃ।**
> **ವೈದಿಕಂ ಕರ್ಮ ಕುರ್ವೀತ ಜ್ಞಾನೈಕಫಲಸಾಧನಮ್॥**
> **ನ ಕುರ್ಯಾತ್ ಪಾಶವಂ ಕರ್ಮ ವೀರಶೈವಃ ಕದಾಚನ।**

"ಅಷ್ಟಾವರಣ ಸಂಪನ್ನನೂ, ಪಂಚಾಚಾರ ಪರಾಯಣನೂ ಆದ ಸಾಧಕನು ಮೋಕ್ಷವೇ ಫಲಸಾಧನವಾದ ವೈದಿಕ ಧರ್ಮವನ್ನು ಮಾಡತಕ್ಕದ್ದು. ವೀರಶೈವನು ಎಂದಿಗೂ ಪಾಶವ ಕರ್ಮವನ್ನು ಮಾಡಬಾರದು" -ಎಂದು ವೀರಶೈವರಿಗೆ ಅಷ್ಟಾವರಣ-ಪಂಚಾಚಾರಗಳ ಆವಶ್ಯಕತೆಯನ್ನು ಪ್ರತಿಪಾದಿಸಿದ್ದಾರೆ. ಈ ಆಚಾರಗಳು ಕೇವಲ ವೀರಶೈವರಿಗೆ ಮಾತ್ರವಲ್ಲ ಸಮಸ್ತ ಮಾನವಸಮಾಜದ ಪರಿಷ್ಕಾರಕಗಳಾಗಿವೆ. ಆದುದರಿಂದ ಪ್ರತಿಯೊಬ್ಬರೂ ಸಹ ತಮ್ಮ ಶಕ್ತ್ಯಾನುಸಾರವಾಗಿ ಈ ಆಚಾರಗಳನ್ನು ಪಾಲಿಸಬೇಕು.

■

ಐದನೆಯ ಪರಿಚ್ಛೇದ

ಷಟ್‌ಸ್ಥಲಸೋಪಾನಕ್ರಮಃ

ವೀರಶೈವ ಸಿದ್ಧಾಂತದಲ್ಲಿ ಲಿಂಗಸ್ಥಲ ಶಬ್ದದಿಂದ ಕರೆಯಲ್ಪಡುವ ಶಿವನೊಡನೆ ಅಂಗಸ್ಥಲ ಶಬ್ದದಿಂದ ಕರೆಯಲ್ಪಡುವ ಜೀವಾತ್ಮನ ಸಮರಸಭಾವವು ಮುಕ್ತಿ ಎಂದು ಕರೆಯಲ್ಪಟ್ಟಿದೆ. ಈ ಸಮರಸಭಾವವು ಆರು ವಿಧ ಭಕ್ತಿಗಳ ವಿಕಾಸಕ್ರಮದಿಂದಾಗುತ್ತದೆ. ಆ ಕ್ರಮವೇ ಷಟ್‌ಸ್ಥಲಸೋಪಾನಕ್ರಮ. ಈ ಮಾರ್ಗಕ್ರಮದಲ್ಲಿ ಪೂರ್ವೋಕ್ತ ಅಷ್ಟಾವರಣಗಳು ಮತ್ತು ಪಂಚಾಚಾರಗಳು ಸಹಾಯಕವಾಗುತ್ತವೆ ಎಂಬ ಕಾರಣದಿಂದ ಅವುಗಳ ಸಹಕಾರಿ ಕಾರಣತ್ವವನ್ನು ಅಂಗೀಕರಿಸಲಾಗಿದೆ. ಆದುದರಿಂದ ಈ ಪ್ರಕಾರವಾಗಿ ಅಷ್ಟಾವರಣಗಳೆಂಬ ಅಂಗ ಮತ್ತು ಪಂಚಾಚಾರಗಳೆಂಬ ಪ್ರಾಣವುಳ್ಳ ಅಂಗಸ್ಥಲ ಶಬ್ದವಾಚ್ಯನಾದ ಸಾಧಕನು ಭಕ್ತ - ಮಾಹೇಶ್ವರ - ಪ್ರಸಾದಿ - ಪ್ರಾಣಲಿಂಗಿ - ಶರಣ - ಐಕ್ಯಗಳೆಂಬ ಷಟ್‌ಸ್ಥಲಗಳನ್ನು ಕ್ರಮವಾಗಿ ಆರೋಹಣಮಾಡಿ ಐಕ್ಯಸ್ಥಲದಲ್ಲಿ ಲಿಂಗಸ್ಥಲ ಶಬ್ದವಾಚ್ಯನಾದ ಪರಶಿವನೊಂದಿಗೆ ನೀರಿನಲ್ಲಿ ನೀರು ಬೆರೆತು ಹೋಗುವಂತೆ ಬೆರೆತು ಹೋಗುತ್ತಾನೆ. ಹೀಗೆ ಸಾಧಕನ ಆರು ಅವಸ್ಥೆಗಳನ್ನು ಇಲ್ಲಿ ನಿರೂಪಿಸಲಾಗಿದೆ. ಅದನ್ನು ಶ್ರೀ ರೇಣುಕ ಭಗವತ್ಪಾದರು ಹೀಗೆ ಪ್ರತಿಪಾದಿಸಿದ್ದಾರೆ-

> ಆದೌ ಭಕ್ತಸ್ಥಲಂ ಪ್ರೋಕ್ತಂ ತತೋ ಮಾಹೇಶ್ವರಸ್ಥಲಮ್।
> ಪ್ರಸಾದಿಸ್ಥಲಮನ್ಯತ್ತು ಪ್ರಾಣಲಿಂಗಿಸ್ಥಲಂ ತತಃ॥
> ಶರಣಸ್ಥಲಮಾಖ್ಯಾತಂ ಷಷ್ಠಮೈಕ್ಯಸ್ಥಲಂ ಮತಮ್॥[೧]

"(ಷಟ್‌ಸ್ಥಲಗಳಲ್ಲಿ) ಮೊದಲನೆಯದು ಭಕ್ತಸ್ಥಲ, ಎರಡನೆಯದು ಮಾಹೇಶ್ವರಸ್ಥಲ, ಮೂರನೆಯದು ಪ್ರಸಾದಿಸ್ಥಲ, ನಾಲ್ಕನೆಯದು ಪ್ರಾಣಲಿಂಗಿಸ್ಥಲ, ಐದನೆಯದು ಶರಣಸ್ಥಲ ಮತ್ತು ಆರನೆಯದು ಐಕ್ಯಸ್ಥಲ."

ಇಲ್ಲಿ ನಿರೂಪಿತವಾಗಿರುವ ಲಿಂಗಸ್ಥಲ-ಅಂಗಸ್ಥಲಗಳು ಸ್ಥಲರೂಪನಾದ ಪರಶಿವನ ಎರಡು ರೂಪಗಳು. ಸೃಷ್ಟಿಯ ಸಂದರ್ಭದಲ್ಲಿ ಉಪಾಸ್ಯ (ಪೂಜಿಸಲ್ಪಡುವ) -ಉಪಾಸಕ (ಪೂಜಿಸುವವನು) ಲೀಲೆಗಾಗಿ ಆ ಪರಶಿವನೆಂಬ ಸ್ಥಲವು ಕೇವಲ ಸ್ವಶಕ್ತಿಯಕ್ಷೋಭೆ ಯಿಂದ ಲಿಂಗಸ್ಥಲ ಮತ್ತು ಅಂಗಸ್ಥಲವೆಂದು ಎರಡಾಯಿತು. ಈಗ ಆ ಸ್ಥಲಸ್ವರೂಪ,

---

೧. ಸಿ.ಶಿ, ೫.೨೩

ಆ ಸ್ಥಲವನ್ನು ಬೋಧಿಸುವ ಶಕ್ತಿಯ ಸ್ವರೂಪ ಮತ್ತು ಅವೆರಡರ ಸಾಮರಸ್ಯವನ್ನು ತಲುಪುವ ಭಕ್ತಿಯ ಸ್ವರೂಪವನ್ನು ಮೊದಲಿಗೆ ಸಂಕ್ಷೇಪಿಸಿ ಅನಂತರ ಕ್ರಮವಾಗಿ ಅದರ ಉಪಾಸನೆಯ ಕ್ರಮವನ್ನು ಪ್ರಸ್ತಾಪಿಸಲಾಗುವುದು.

ಸ್ಥಲ

> ಏಕಮೇವ ಪರಂ ಬ್ರಹ್ಮ ಸಚ್ಚಿದಾನಂದಲಕ್ಷಣಮ್।
> ಶಿವತತ್ತ್ವಂ ಶಿವಾಚಾರ್ಯಾಃ ಸ್ಥಲಮಿತ್ಯಾಹುರಾದರಾತ್॥[2]

"ಸಚ್ಚಿದಾನಂದ ಸ್ವರೂಪಿಯಾದ ಒಬ್ಬನೇ ಪರಬ್ರಹ್ಮ ಶಿವತತ್ತ್ವವನ್ನು ಶಿವಾಚಾರ್ಯರು 'ಸ್ಥಲ' ಎಂದು ಪ್ರೀತಿಯಿಂದ ಕರೆದಿದ್ದಾರೆ" -ಎಂಬ ಮಾಯಿದೇವನ ಉಕ್ತಿಯಂತೆ ಸಚ್ಚಿದಾನಂದ ಸ್ವರೂಪಿಯಾದ ಪರಶಿವಬ್ರಹ್ಮವೇ ಇಲ್ಲಿ 'ಸ್ಥಲ' ಶಬ್ದದಿಂದ ವ್ಯವಹರಿಸ ಲಾಗಿದೆ. ಮಹತ್ ಮೊದಲ್ಗೊಂಡು ಎಲ್ಲ ತತ್ತ್ವಗಳ ಸೃಷ್ಟಿ ಮತ್ತು ಲಯಗಳಿಗೆ ಕಾರಣ ವಾಗಿರುವುದರಿಂದ ಪರಶಿವಬ್ರಹ್ಮಕ್ಕೆ 'ಸ್ಥಲ' ಎಂಬ ಸಂಜ್ಞೆಯು ಸಾರ್ಥಕವಾದಂತೆ ಕಂಡುಬರುತ್ತದೆ. ಸ್ಥಲ ಶಬ್ದದಲ್ಲಿನ 'ಸ್ಥ'ಕಾರವು ಸ್ಥಾನವಾಚಿ ಮತ್ತು 'ಲ'ಕಾರವು ಲಯವಾಚಕ -ಎಂದು ಅಕ್ಷರಾರ್ಥ ಪ್ರತಿಪಾದನಪುರಃಸರವಾಗಿ ಶ್ರೀಮಾಯಿದೇವನು ಸ್ಥಲತತ್ತ್ವವೇ ಸ್ಥಾವರ ಮತ್ತು ಜಂಗಮ ಜಗತ್ತಿಗೆ ಮೂಲವೆಂದು, ಎಲ್ಲ ಶಕ್ತಿಗಳ, ಎಲ್ಲ ಬಗೆಯ ಜ್ಯೋತಿಗಳ, ಸಮಸ್ತ ಆತ್ಮಗಳಿಗೆ ಆಧಾರವೆಂದು, ಪಂಚಮಹಾಭೂತಗಳಿಗೆ, ಎಲ್ಲ ಲೋಕಗಳಿಗೆ, ಎಲ್ಲ ಬಗೆಯ ಸಂಪತ್ತುಗಳಿಗೆ ಆಲಯ(ಸ್ಥಾನ)ವೆಂದು ಮತ್ತು ಪರನಿರ್ವಾಣನಿಷ್ಠರಾದವರಿಗೂ ಸಹ ಇದೇ ಶ್ರೇಷ್ಠವಾದ ಸ್ಥಾನವೆಂದು ಪ್ರತಿಪಾದಿಸಿ ಸ್ಥಲತತ್ತ್ವದ ಸ್ವರೂಪವನ್ನು ವಿಸ್ತಾರವಾಗಿ ವಿವೇಚಿಸಿದ್ದಾನೆ.[3]

ಈ ಸ್ಥಲ ಶಬ್ದವಾಚಿಯಾದ ಪರಶಿವನು ವಿಮರ್ಶಶಕ್ತಿವಿಶಿಷ್ಟನು. ಈ ವಿಮರ್ಶ ಶಕ್ತಿಯೂ ಸಹ ಪರಶಿವನಂತೆ ಸಚ್ಚಿದಾನಂದಸ್ವರೂಪದ್ದಾಗುತ್ತದೆ.[4]

---

೨. ಅನುಭವಸೂತ್ರ, ೨.೨

೩. ಸ್ಥಕಾರಃ ಸ್ಥಾನವಾಚೀ ಸ್ಯಾಲ್ಲಕಾರೋ ಲಯವಾಚಕಃ।
ತಯೋಃ ಕಾರಣಭೂತಂ ಯತ್ ತದೇವ ಸ್ಥಲಮುಚ್ಯತೇ॥
ಅಧಿಷ್ಠಾನಂ ಸಮಸ್ತಸ್ಯ ಸ್ಥಾವರಸ್ಯ ಚರಸ್ಯ ಚ।
ಜಗತೋ ಯದ್ಭವೇತ್ ತತ್ತ್ವಂ ತದ್ಧಿ ವೈ ಸ್ಥಲಮುಚ್ಯತೇ॥
ಆಧಾರಂ ಸರ್ವಶಕ್ತೀನಾಂ ಜ್ಯೋತಿಷಾಮಖಿಲಾತ್ಮನಾಮ್।
ಯತ್ ತತ್ತ್ವಂ ಭವತಿ ಪ್ರಾಜ್ಞೈಃ ಸ್ಥಲಂ ತತ್ಪರಿಗೀಯತೇ॥
ಆಲಯಃ ಸರ್ವಭೂತಾನಾಂ ಲೋಕಾನಾಂ ಸರ್ವಸಂಪದಾಮ್।
ಯದ್ಭವೇತ್ ಪರಮಂ ಬ್ರಹ್ಮ ಸ್ಥಲಂ ತತ್ಪ್ರಾಹುರಕ್ಷರಮ್॥
ಪರನಿರ್ವಾಣನಿಷ್ಠಾನಾಂ ಯದ್ಭವೇತ್ ಪರಮಂ ಪದಮ್।
ತದಾಹುಃ ಸ್ಥಲಮದ್ವೈತಂ ಶಿವಜ್ಞಾನೈಕತತ್ಪರಾಃ॥ -ಅ.ಸೂ, ೨.೫-೯

೪. ತದೀಯಾ ಪರಮಾ ಶಕ್ತಿಃ ಸಚ್ಚಿದಾನಂದಲಕ್ಷಣಾ। -ಸಿ.ಶಿ, ೨.೧೨

ಸ್ಥಲ-ಶಕ್ತಿಯರ ಲೀಲಾವಿಭಾಗ

ವಿಮರ್ಶಶಕ್ತಿವಿಶಿಷ್ಟವಾದ ಆ ಸ್ಥಲವು ಸ್ವ-ಇಚ್ಛೆಯಿಂದ ಉಪಾಸ್ಯ-ಉಪಾಸಕ ಲೀಲೆಗಾಗಿ ಲಿಂಗಸ್ಥಲ ಮತ್ತು ಅಂಗಸ್ಥಲವೆಂದು ಎರಡಾಗುತ್ತದೆ. ಶಿವನಲ್ಲದವನಿಗೆ ಶಿವೋಪಾಸನೆಯು ಎಂದಿಗೂ ಸಾಧ್ಯವಾಗುವುದಿಲ್ಲ. ಆದರೆ ಶಿವನಾದವನಿಗೆ ಶಿವೋಪಾಸನೆಯು ಎಂಬ ರಹಸ್ಯವನ್ನು ಬೋಧಿಸುವುದಕ್ಕಾಗಿ ಈ ಲೀಲೆಯೆಂದು ತಿಳಿದುಬರುತ್ತದೆ. ಇಲ್ಲಿ 'ಶಿವ'ನನ್ನು ಲಿಂಗವೆಂತಲೂ, 'ಜೀವ'ನನ್ನು ಅಂಗವೆಂತಲೂ ಕರೆಯಲಾಗಿದೆ. ಸ್ಥಲವು ಯಾವ ರೀತಿಯಾಗಿ ಎರಡಾಯಿತೋ ಹಾಗೆಯೇ ಶಕ್ತಿಯೂ ಎರಡಾಗುತ್ತದೆ (ಯಥಾ ಸ್ಥಲಂ ದ್ವಿಧಾಭೂತಂ ತಥಾ ಶಕ್ತಿರ್ದ್ವಿಧಾ ಭವೇತ್)[೫] ಎಂಬ ಮಾಯಿದೇವನ ಉಕ್ತಿಯಂತೆ ಸ್ಥಲನಿಷ್ಠವಾದ ಅದರ ಜೊತೆಯಲ್ಲಿರುವ ಉಪಮಾನ ರಹಿತವಾದ ಆ ಚಿತ್‌ಶಕ್ತಿಯೂ ಸಹ ತನ್ನ ಸ್ವತಂತ್ರಬಲದಿಂದ ಎರಡಾಗಿ ವಿಭಜಿಸಲ್ಪಟ್ಟಿದೆ. ಅವುಗಳಲ್ಲಿ ಒಂದು ಲಿಂಗಸ್ಥಲವನ್ನಾಶ್ರಯಿಸಿದರೆ ಮತ್ತೊಂದು ಅಂಗಸ್ಥಲವನ್ನಾಶ್ರಯಿಸಿದೆ. ಲಿಂಗಸ್ಥಲವನ್ನಾಶ್ರಯಿಸಿದ ಶಕ್ತಿಯು 'ಕಲಾ' ಎಂದು, ಅಂಗಸ್ಥಲವನ್ನಾಶ್ರಯಿಸಿದ ಶಕ್ತಿಯು 'ಭಕ್ತಿ' ಎಂದು ಕರೆಯಲ್ಪಟ್ಟಿದೆ.[೬]

ಕಲಾ-ಭಕ್ತಿಗಳ ಸ್ವರೂಪವಿಮರ್ಶೆ

ಲಿಂಗಸ್ಥಲವನ್ನಾಶ್ರಯಿಸಿರುವ ಕಲಾರೂಪದ ಶಕ್ತಿಯು ಪ್ರವೃತ್ತಿರೂಪದಲ್ಲಿದೆ. ಆದುದರಿಂದಲೇ ಅದರ ಸಹಾಯದಿಂದ ಪರಶಿವನು ಸೃಷ್ಟಿಕಾರ್ಯವನ್ನು ನೆರವೇರಿಸುತ್ತಾನೆ. ಶಕ್ತಿಯ ಮಹಿಮೆಯಿಂದ ಪರಶಿವನು ನಿರೂಪಿಯಾದರೂ ಕೂಡ ಸರೂಪಿಯಾಗುತ್ತಾನೆ. ಆ ಕಾರಣ ಪ್ರಪಂಚದ ವೃದ್ಧ್ಯಪೇಕ್ಷತ್ವ (ವೃದ್ಧಿಯ ಅಪೇಕ್ಷೆ), ಅಧೋಮುಖತ್ವ ಮತ್ತು ಉಪಾಸ್ಯತ್ವಗಳೆಂಬ ಇವುಗಳು ಲಿಂಗಸ್ಥಲವನ್ನಾಶ್ರಯಿಸಿರುವ ಕಲಾಶಕ್ತಿಯ ಸ್ವಾಭಾವಿಕ ಗುಣಗಳು.

ಅಂಗಸ್ಥಲವನ್ನಾಶ್ರಯಿಸಿದ ಭಕ್ತಿರೂಪದ ಯಾವ ಶಕ್ತಿಯು ಇದೆಯೋ ಅದು ಲಿಂಗಸ್ಥಲವನ್ನಾಶ್ರಯಿಸಿದ ಕಲಾಶಕ್ತಿಯ ಗುಣಗಳಿಗೆ ವಿರೋಧವಾದುದು. ಆದುದರಿಂದ ಇದು ನಿವೃತ್ತಿರೂಪದಲ್ಲಿದೆ. ಇದರ ಮಹಿಮೆಯಿಂದ (ನಿವೃತ್ತಿರೂಪ ಶಕ್ತಿಯ ಮಹಿಮೆಯಿಂದ) ಪರಶಿವನು ಸರೂಪಿಯಾದರೂ ಕೂಡ ನಿರೂಪತೆಯನ್ನು ಹೊಂದುತ್ತಾನೆ. ಆ ಕಾರಣ ಪ್ರಪಂಚಸಂಕ್ಷಯಾಪೇಕ್ಷತ್ವ (ಪ್ರಪಂಚವನ್ನು ಲಯಗೊಳಿಸಬೇಕೆಂಬ ಅಪೇಕ್ಷೆ), ಊರ್ಧ್ವಮುಖತ್ವ, ನಿರ್ಮಾಯತ್ವ ಮತ್ತು ಉಪಾಸಕತ್ವಗಳು ಅಂಗಸ್ಥಲವನ್ನಾಶ್ರಯಿಸಿರುವ

---

೫. ಅನುಭವಸೂತ್ರ, ೨.೧೯

೬. ಲಿಂಗಸ್ಥಲಾಶ್ರಯಾ ಕಾಚಿತ್ ಕಾಚಿದಂಗಸ್ಥಲಾಶ್ರಯಾ।
ಲಿಂಗಸ್ಥಲಾಶ್ರಯಾ ಶಕ್ತಿಃ ಕಲಾರೂಪಾ ಪ್ರಕೀರ್ತಿತಾ॥
ಅಂಗಸ್ಥಲಾಶ್ರಯಾ ಶಕ್ತಿರ್ಭಕ್ತಿರೂಪಾ ಭವಾಪಹಾ। -ಅ.ಸೂ, ೨.೨೨-೨೩

ಭಕ್ತಿರೂಪ ಶಕ್ತಿಯ ಸ್ವಾಭಾವಿಕ ಗುಣಗಳು.[೭] ಈ ರೀತಿಯಾಗಿ ವಿಚಾರ ಮಾಡಿದರೆ ಮುಮುಕ್ಷುಗಳಿಗೆ ಭಕ್ತಿಯೇ ಮಹತ್ತರ ವಾದುದೆಂದು ಕಂಡುಬರುತ್ತದೆ. ಮೂಲತಃ ಅದು (ಕಲೆ ಮತ್ತು ಭಕ್ತಿ) ಒಂದೇ ಆಗಿದೆ. ಪ್ರಪಂಚದಲ್ಲಿ ಹೇಗೆ ತಾಯಿಯು ತನ್ನ ಪತಿಯೊಡನೆ ಸಮಾಗಮ ಹೊಂದುವುದರಿಂದ ಪುತ್ರೋತ್ಪತ್ತಿಗೆ ಕಾರಣೀಭೂತಳಾಗುತ್ತಾಳೆ ಮತ್ತು ಹುಟ್ಟಿದ ಮಕ್ಕಳಿಗೆ ತಂದೆಯು ತಮ್ಮ ಹುಟ್ಟಿಗೆ ಕಾರಣವೆಂಬ ಜ್ಞಾನವುಂಟಾಗುತ್ತದೆಯೋ ಹಾಗೆಯೇ ಈ ಶಕ್ತಿಯು ಪರಶಿವನ ಸಂಬಂಧದಿಂದ ಪ್ರಪಂಚದ ಸೃಷ್ಟಿಗೆ ಕಾರಣೀಭೂತಳಾದರೂ ಸಹ ಮತ್ತೆ ಭಕ್ತಿಯ ರೂಪದಿಂದ ಜೀವಾತ್ಮನ ಮೋಕ್ಷಕ್ಕೆ ಸಹಾಯಕಳಾಗುತ್ತಾಳೆ. ಆದುದರಿಂದ ಷಟ್‌ಸ್ಥಲೋಪಾಸನೆಯಲ್ಲಿ ಷಡ್ವಿಧ ಭಕ್ತಿಗಳ ಸಹಾಯದಿಂದಲೇ ಅಂಗ(ಜೀವ)ನಿಗೆ ಲಿಂಗ (ಶಿವ) ರೂಪತ್ವದ ಪ್ರಾಪ್ತಿಯೆಂದು ತಿಳಿದುಬರುತ್ತದೆ. ಭಕ್ತಿ ತತ್ತ್ವವು ಬಹುವಿಶಾಲವಾದುದು. ಎಲ್ಲ ಸಂಪ್ರದಾಯಗಳಲ್ಲಿಯೂ ಸಹ ಭಕ್ತಿಯ ವಿಷಯದಲ್ಲಿ ಆದರವಿದೆ. ಅದನ್ನು ಇಲ್ಲಿ ಸಂಕ್ಷೇಪವಾಗಿ ನಿರೂಪಿಸಲಾಗುವುದು.

ಬೇರೆ ಸಂಪ್ರದಾಯಗಳಲ್ಲಿ ಭಕ್ತಿ

ಶಬ್ದಶಾಸ್ತ್ರದ ದೃಷ್ಟಿಯಿಂದ ಭಜನಂ ರಸನಂ ಭಕ್ತಿಃ, ಭಜ್ಯತೇ ಅನಯಾ ಭಕ್ತಿಃ, ಭಜಂತ್ಯನಯಾ ಇತಿ ಭಕ್ತಿಃ, ರೀತ್ಯಾ ಭಾವೇ ಕರಣೇವಾ, 'ಭಜ್ ಸೇವಾಯಾಮ್' ಎಂಬ ಧಾತುವಿಗೆ ಕ್ತಿನ್ ಪ್ರತ್ಯಯದ ಯೋಗವಾದಾಗ ಮುಂತಾಗಿ ಭಕ್ತಿ ಶಬ್ದದ ನಿರ್ವಚನ ಮಾಡಲಾಗಿದೆ.[೮] ಆದರೂ ಸಹ ಶಾಸ್ತ್ರಗಳಲ್ಲಿ ಭಕ್ತಿ ಶಬ್ದವು ಸೇವೆ, ಆರಾಧನೆ, ಉಪಾಸನೆ, ಏಕತಾನತೆ, ಚಿತ್ತವೃತ್ತಿಭೇದ, ವಿಭಾಗ, ಗೌಣೀವೃತ್ತಿ, ಉಪಚಾರ, ಅವಯವ, ಶ್ರದ್ಧೆ, ರಚನೆ ಮೊದಲಾದ ಅನೇಕಾರ್ಥಗಳಲ್ಲಿ ಉಪಯೋಗವಾಗಿದೆ. ಆದರೆ ಭಕ್ತಿಶಾಸ್ತ್ರದಲ್ಲಿ

---

[೭] ತಸ್ಮಾತ್ ಸವಾಸನಾ ಶಕ್ತಿರ್ಭಕ್ತಿರ್ನಿರ್ವಾಸನಾ ಮತಾ।
ಶಕ್ತಿಃ ಪ್ರವೃತ್ತಿರಾಖ್ಯಾತಾ ನಿವೃತ್ತಿರ್ಭಕ್ತಿರೀರಿತಾ॥
ಶಕ್ತ್ಯಾ ಪ್ರಪಂಚಸೃಷ್ಟಿಃ ಸ್ಯಾದ್ಭಕ್ತ್ಯಾ ತದ್ವಿಲಯೋ ಮತಃ।
ಶಕ್ತಿವೈಚಿತ್ರ್ಯತೋರೂಪಂ ನಿರೂಪಮಪಿ ಯಾತಿ ಹಿ॥
ಭಕ್ತಿವೈಚಿತ್ರ್ಯತೋ ರೂಪಮಪಿ ನಿರೂಪತಾಮಿಯಾತ್॥
ಪ್ರಪಂಚವೃದ್ಧ್ಯಪೇಕ್ಷಾ ಹಿ ಶಕ್ತೇಃ ಸ್ವಾಭಾವಿಕೋ ಗುಣಃ।
ಪ್ರಪಂಚಸಂಕ್ಷಯಾಪೇಕ್ಷಾ ಭಕ್ತೇಃ ಸ್ವಾಭಾವಿಕೋ ಗುಣಃ॥
ಅಧೋಮುಖೀ ಭವೇಚ್ಛಕ್ತಿರ್ಭಕ್ತಿರೂರ್ಧ್ವಮುಖೀ ಭವೇತ್।
ಸಮಾಯಾ ಶಕ್ತಿರಾಖ್ಯಾತಾ ನಿರ್ಮಾಯಾ ಭಕ್ತಿರೀರಿತಾ॥
ಉಪಾಸ್ಯತ್ವಂ ಭವೇಚ್ಛಕ್ತ್ಯಾ ಭಕ್ತ್ಯೋಪಾಸಕತಾ ಭವೇತ್।
-ಅ.ಸೂ, ೨.೨೫,೨೭-೩೨

[೮] ಭಜ್‌ಧಾತೋಸ್ತು ಸೇವಾರ್ಥಃ ಪ್ರೇಮ ಕ್ತಿನ್‌ಪ್ರತ್ಯಯಸ್ಯ ಚ।
ಸ್ನೇಹೇನ ಭಗವತ್ಸೇವಾ ಭಕ್ತಿರಿತ್ಯುಚ್ಯತೇ ಬುಧೈಃ॥ -ಭಕ್ತಿರಸವಿಮರ್ಶಃ, ಪು.೨೯

ಎಲ್ಲೆಡೆಯೂ ಸಾಮಾನ್ಯವಾಗಿ ಭಗವಂತನ ಪ್ರೀತಿಗೆ ಅನುಕೂಲವಾದ ವ್ಯಾಪಾರವೆಂಬ ಅರ್ಥದಲ್ಲಿ ಈ ಭಕ್ತಿ ಶಬ್ದವು ಪ್ರಯೋಗವಾಗಿದೆ.[೯]

ಶ್ರದ್ಧೆ - ವಿಶ್ವಾಸ - ಪ್ರೇಮಗಳಲ್ಲಿ ತೇಲುವ ಭಕ್ತನ ಹೃದಯದ ಮಧುರ ಮನಸ್ಸಿನ ಪ್ರೀತಿಯೇ ಭಕ್ತಿ. ಈ ಭಕ್ತಿಯಲ್ಲಿ ಉಪಾಸ್ಯ - ಉಪಾಸಕಗಳ ಭಾವಾತ್ಮಕವಾದ ವಿಶೇಷ ಸಂಬಂಧವಿದೆ. ಅದು ಉಪಾಸನೆ ಎಂದು ಕರೆಯಲ್ಪಡುತ್ತದೆ. ಆದುದರಿಂದಲೇ 'ಉಪ' ಉಪಸರ್ಗ ಪೂರ್ವಕವಾದ 'ಆಸ್ ಉಪವೇಶನೇ' ಎಂಬ ಧಾತುವಿನಿಂದ ನಿಷ್ಪನ್ನವಾದ 'ಉಪಾಸನ' ಶಬ್ದಕ್ಕೆ 'ಸಮೀಪದಲ್ಲಿ ಕುಳಿತುಕೊಳ್ಳುವುದು' ಎಂದು ಅರ್ಥವಾಗುತ್ತದೆ. ಭಗವಂತನ ಅತ್ಯಂತ ನಿಕಟವಾದ ಸಂಬಂಧ ಪ್ರಾಪ್ತಿಯೇ 'ಉಪಾಸನಾ' ಶಬ್ದದ ತಾತ್ಪರ್ಯವೆಂಬುದು ಮೇಲಿನ ಅರ್ಥದಿಂದ ತಿಳಿದುಬರುತ್ತದೆ. ಪ್ರತ್ಯುಪಾಸಕನ ಅನುರಾಗವಾದ ಈ ಉಪಾಸ್ಯವು ಲೌಕಿಕ ಅನುರಾಗದಂತೆ ಮಲಿನವಾಗಿರದೆ, ಪ್ರತಿಕ್ಷಣವು ವೃದ್ಧಿಯಾಗುವ ಪರಮ ನಿರ್ಮಲವಾಗಿರುತ್ತದೆ. ಆ ಬಗೆಯ ಪ್ರೇಮೋಪಾಸನೆಯಿಲ್ಲದೆ ಜಪ - ತಪ - ಜ್ಞಾನಾದಿಗಳು ವರನಿಲ್ಲದ ವಿವಾಹದಂತೆ ವ್ಯರ್ಥವಾಗುತ್ತವೆ. ವರಿವಸ್ಯಾ, ಶುಶ್ರೂಷೆ, ಪರಿಚರ್ಯೆ, ಆರಾಧನೆ, ಸೇವೆ ಮತ್ತು ಭಕ್ತಿ ಇತ್ಯಾದಿಗಳು ಉಪಾಸನಾ ಶಬ್ದದ ಇತರ ಪರ್ಯಾಯಪದಗಳಾಗಿವೆ.[೧೦] ಭಕ್ತಿಶಾಸ್ತ್ರಾನುಸಾರವಾಗಿ ಉಪಾಸನಾ ಶಬ್ದದ ಅರ್ಥವೇನೆಂದರೆ ವಿಧಿಪೂರ್ವಕವಾಗಿ ಪೂಜಿಸಲ್ಪಡುವ ವಸ್ತುವಿನ ವಿಷಯದ ಪ್ರೀತಿಯು ತೈಲಧಾರೆಯಂತೆ ನಿರಂತರವಾಗಿ ದೀರ್ಘಕಾಲಿಕಚಿತ್ತೈಕಾಗ್ರ್ಯಪೂರ್ವವಾದ ಅತಿಶಯವಾದ ಪ್ರೀತಿ. ಈ ರೀತಿಯಲ್ಲಿ ಭಕ್ತಿ-ಉಪಾಸನಾ ಶಬ್ದಗಳಿಗೆ ಸ್ವರೂಪದಲ್ಲಿ ಭೇದವಿದ್ದರೂ ಸಹ ಅವುಗಳಿಗೆ ಅರ್ಥಭೇದವಿಲ್ಲವೆಂದು ತಿಳಿಯಬೇಕು.

ಭಕ್ತಿರಸದ ಮೂಲ ಸ್ರೋತಾ ಭಕ್ತಿಶಾಸ್ತ್ರವೇ ಆಗಿದೆ. ಆದರೂ ಸಹ ಭಕ್ತಿರಸದ ಬೀಜವು ವೈದಿಕ ವಾಙ್ಮಯದಲ್ಲಿಯೂ ಸಹ ದೊರಕುತ್ತದೆ. ಆದರೆ ಅದರ ಸ್ಪಷ್ಟ ಸ್ವರೂಪವು ಭಕ್ತಿಶಾಸ್ತ್ರಗಳಲ್ಲಿಯೇ ಕಂಡುಬರುವುದು. ಆಚಾರ್ಯಭೇದದಿಂದ ಭಕ್ತಿಶಾಸ್ತ್ರವೂ ಕೂಡ ಬೇರೆ ಬೇರೆ ಸಂಪ್ರದಾಯಗಳಲ್ಲಿ ಬೇರೆ ಬೇರೆಯಾಗಿದೆ. ಎಲ್ಲ ಸಂಪ್ರದಾಯಗಳಲ್ಲಿಯೂ ಭಕ್ತಿಸ್ವರೂಪದ ವಿಷಯದಲ್ಲಿ ಕೆಲವು ಅಂಶಗಳಲ್ಲಿ ಸಾಮ್ಯವಿದ್ದರೂ ಕೂಡ ಆಂಶಿಕ ಭೇದವು ಇದ್ದೇ ಇದೆ.

ಭಕ್ತಿಯ ಶಾಸ್ತ್ರೀಯ ವಿವೇಚನೆಯು ಮೊದಲಿಗೆ ಶಾಂಡಿಲ್ಯಭಕ್ತಿಸೂತ್ರ ಮತ್ತು ನಾರದಭಕ್ತಿಸೂತ್ರಗಳಲ್ಲಿ ಕಂಡುಬರುತ್ತದೆ. ಶಾಂಡಿಲ್ಯನ ಮತದಲ್ಲಿ ಅಖಿಲ ಬ್ರಹ್ಮಾಂಡ ನಾಯಕನಾದ ಪರಮಾತ್ಮನ ವಿಷಯದಲ್ಲಿ ಸರ್ವೋತ್ಕೃಷ್ಟವಾದ ಪ್ರೀತಿಯೇ ಭಕ್ತಿ.[೧೧]

---

೯. ವಾಚಸ್ಪತ್ಯಮ್, ಪೃ. ೪೬೨೮; ಶಬ್ದಕಲ್ಪದ್ರುಮ, ಭಾಗ-೩, ಪೃ. ೪೬೩

೧೦. ಪೂಜಾ ನಮಸ್ಯಾಪಚಿತಿಃ ಸಪರ್ಯಾರ್ಚಾರ್ಹಣಾಃ ಸಮಾಃ।
ವರಿವಸ್ಯಾ ತು ಶುಶ್ರೂಷಾ ಪರಿಚರ್ಯಾಪ್ಯುಪಾಸನಾ॥
-ಅಮರಕೋಶ, ೨.೭.೩೪-೩೫

೧೧. "ಸಾ ಪರಾನುರಕ್ತಿರೀಶ್ವರೇ" -ಶಾಂಡಿಲ್ಯಭಕ್ತಿಸೂತ್ರ, ೨

ಅಂತಹ ಪ್ರೀತಿಯು ಭಗವಂತನ ಪ್ರಾಪ್ತಿಗಾಗಿ ಸರ್ವೋತ್ತಮವಾದ ಉಪಾಯ ಹಾಗೂ ಸರ್ವಜನರಿಗೆ ಸುಲಭವಾದುದು. ಆಬಾಲವೃದ್ಧರು ಮತ್ತು ಸ್ತ್ರೀ-ಶೂದ್ರಾದಿಗಳೆಲ್ಲರಿಗೂ ಸಮಾನವಾದ ಅಧಿಕಾರವಿದೆ.[೧೨] ಸ್ವಲ್ಪವೇ ಭಕ್ತಿಯಿಂದಿದ್ದರೂ ಕೂಡ ಜನ್ಮಜನ್ಮಾಂತರಗಳ ದುಷ್ಕೃತ್ಯಗಳು ಅನಾಯಾಸವಾಗಿ ನಾಶವಾಗುತ್ತವೆ.[೧೩] ನಾರದೀಯ ಸೂತ್ರಾನುಸಾರವಾಗಿ ಶಾಂಡಿಲ್ಯನ ಮತದಲ್ಲಿ ಸ್ವಾತ್ಮರತಿಯ ಅನುಕೂಲದ ವಿಷಯದಲ್ಲಿ ಅಧಿಕವಾದ ಪ್ರೀತಿಯೇ ಭಕ್ತಿಯೆಂದು ಕರೆಯಲ್ಪಟ್ಟಿದೆ.[೧೪] ಈ ಪ್ರಕಾರ ಶಾಂಡಿಲ್ಯನ ಮತದಲ್ಲಿ ಭಗವದ್ರತಿರೂಪವಾದ ಭಕ್ತಿ ರಸಸ್ವರೂಪದಲ್ಲಿರುತ್ತದೆ. ಹೀಗೆ ಆಚಾರ್ಯ ಶಾಂಡಿಲ್ಯನು ಹೇಳುವುದೇನೆಂದರೆ ತೈಲಧಾರೆಯಂತೆ ಅವಿಚ್ಛಿನ್ನವಾಗಿ ಪರಮೇಶ್ವರನಲ್ಲಿ ಉಂಟಾಗುವ ನಿಷ್ಕಾಮ ಚಿತ್ತವೃತ್ತಿಯ ಪ್ರೀತಿಯೇ ಭಕ್ತಿ.

ನಾರದನು ಪರಮೇಶ್ವರನ ವಿಷಯದಲ್ಲಿನ ಪರಮಾನುರಾಗವೇ ಭಕ್ತಿಯೆಂದು ಹೇಳುತ್ತಾನೆ.[೧೫] ಭಕ್ತಿಯು ಅಮೃತ ಸ್ವರೂಪದಲ್ಲಿದೆ. ಭಗವಂತನಲ್ಲಿ ಸರ್ವತೋಭಾವದಿಂದ ತನ್ನನ್ನು ತಾನು ಅರ್ಪಿಸಿಕೊಳ್ಳುವುದು, ಅದಿಲ್ಲದಿದ್ದರೆ ಪರಮವ್ಯಾಕುಲತ್ವವೇ ಭಕ್ತಿಯೆಂಬುದು ನಾರದನ ಅಭಿಪ್ರಾಯ.[೧೬] ಅವರ ಮತದಲ್ಲಿ ಲೌಕಿಕ ವಿಷಯಗಳ ತ್ಯಾಗ, ಅಖಂಡಭಜನೆ, ಭಗವಂತನ ಗುಣಶ್ರವಣ, ಕೀರ್ತನೆ, ಮುಖ್ಯವಾಗಿ ಭಕ್ತರ, ಮಹಾಪುರುಷರ ಹಾಗೂ ಭಗವಂತನ ಅನುಗ್ರಹ ಪ್ರಾಪ್ತಿ -ಇವೇ ಭಕ್ತಿಯ ಸಾಧನೆ.[೧೭] ಅಲ್ಲದೆ ಅವರ ಮತದಲ್ಲಿ ಗೌಣೀಭಕ್ತಿಯು ಸತ್ತ್ವ, ರಜಸ್ ಮತ್ತ ತಮಸ್ ಎಂಬ ಭೇದದಿಂದ ಭಕ್ತನ ಆರ್ತ, ಜಿಜ್ಞಾಸು, ಅರ್ಥಾರ್ಥಿ ಎಂಬ ಭೇದದಿಂದ ಮೂರು ವಿಧವಾಗಿದೆ. ಪ್ರೇಮಾಭಕ್ತಿಯು ಒಂದೇ ಆಗಿದ್ದರೂ ಕೂಡ ಹನ್ನೊಂದು ಬಗೆಯಾಗುತ್ತದೆ.[೧೮] ಅಂತಹ ಪರಮಪ್ರೇಮ ಸ್ವರೂಪವು ಅನಿರ್ವಚನೀಯವಾದುದು. ಅಲ್ಲದೆ, ಮೂಕನ ಆಸ್ವಾದನೆಯಂತೆ ವರ್ಣನಾತೀತವೇ ಆಗಿದೆ. ಹೀಗೆ ಆ ಪ್ರೇಮಾ ಭಕ್ತಿಯನ್ನು ಕೆಲವೇ ಜನ ಸಾಧಕರು ಪಡೆಯುತ್ತಾರೆ. ಅದು ಕರ್ಮ, ಜ್ಞಾನ, ಯೋಗಾದಿಗಳಿಂದ ಶ್ರೇಷ್ಠವಾದ ಹಾಗೂ ಸ್ವಯಂ ಫಲರೂಪದಲ್ಲಿರುತ್ತದೆ.[೧೯]

ನಾರದಭಕ್ತಿಸೂತ್ರಗಳ ಅಧ್ಯಯನದಿಂದ ವ್ಯಾಸ-ಗರ್ಗಾಚಾರ್ಯರುಗಳ ಭಕ್ತಿಗೆ ಸಂಬಂಧಿಸಿದ ಅಭಿಪ್ರಾಯಗಳು ದೊರೆಯುತ್ತವೆ. ನಾರದಭಕ್ತಿಸೂತ್ರಾನುಸಾರವಾಗಿ

---

೧೨. "ಆನಿಂದ್ಯಯೋನ್ಯಧಿಕ್ರಿಯತೇ ಪಾರಂಪರ್ಯಾತ್ ಸಾಮಾನ್ಯವತ್" -ಶಾ.ಭ.ಸೂ, ೨೨

೧೩. "ಲಘ್ವಪಿ ಭಕ್ತಾಧಿಕಾರೇ ಮಹತ್‌ಕ್ಷೇಮಕಮಪರಸರ್ವಹಾನಾತ್" -ಶಾ.ಭ.ಸೂ, ೨೮

೧೪. "ಆತ್ಮರತ್ಯವಿರೋಧೇನೇತಿ ಶಾಂಡಿಲ್ಯಃ" -ನಾರದಭಕ್ತಿಸೂತ್ರಮ್, ೧೮

೧೫. "ಸಾ ತ್ವಸ್ಮಿನ್ ಪರಮಪ್ರೇಮರೂಪಾ" -ನಾ.ಭ.ಸೂ, ೨

೧೬. "ತದರ್ಪಿತಾಖಿಲಾಚಾರತಾ ತದ್ವಿಸ್ಮರಣೇ ಪರಮವ್ಯಾಕುಲತಾ" -ನಾ.ಭ.ಸೂ, ೧೯

೧೭. ನಾರದೀಯ ಭಕ್ತಿಸೂತ್ರ, ೩೫-೩೮

೧೮. ನಾರದೀಯ ಭಕ್ತಿಸೂತ್ರ, ೫೩-೮೨

೧೯. ನಾರದೀಯ ಭಕ್ತಿಸೂತ್ರ, ೫೧-೫೫

ವ್ಯಾಸರ ಮತದಲ್ಲಿ ಆಚಾರ್ಯರುಗಳಲ್ಲಿ ಪ್ರೀತಿಯೇ ಭಕ್ತಿ, ಗಾರ್ಗ್ಯರ ಮತದಲ್ಲಿ ಭಗವಂತನ ಕಥೆಗಳಲ್ಲಿ ಅನನ್ಯಾನುರಾಗವೇ ಭಕ್ತಿ ಎಂದು ಹೇಳಲ್ಪಟ್ಟಿದೆ.[೨೦] ಈ ಪ್ರಕಾರವಾಗಿ ನಾರದ-ಶಾಂಡಿಲ್ಯರ ಮತದಲ್ಲಿ ಭಕ್ತಿಯ ಸ್ವರೂಪದ ವಿಷಯದಲ್ಲಿ ವಿಷಯ ಭೇದವಿಲ್ಲ, ಏಕೆಂದರೆ ಇಬ್ಬರ ಮತದಲ್ಲಿ ಭಗವಂತನಲ್ಲಿ ಪರಮಾನುರಾಗವೇ ಭಕ್ತಿ ಎಂಬುದು ಸಾರಾಂಶ. ಅಲ್ಲದೆ ಆತ್ಮರತಿಯ ವಿಷಯವು ಪರಮೇಶ್ವರನೇ, ಆತನೇ ಎಲ್ಲರಿಂದಲೂ ಸೇವಿಸಲ್ಪಡುತ್ತಾನೆ.

ನಾರದಪಾಂಚರಾತ್ರದಲ್ಲಿ ಭೀಷ್ಮ-ಪ್ರಹ್ಲಾದ ಮೊದಲಾದವರ ಮತದಂತೆ ಲೌಕಿಕ ವಿಷಯಗಳಿಂದ ಪರಾಙ್ಮುಖನಾಗಿ ಭಗವಂತನಲ್ಲಿ ಅನನ್ಯಭಾವದಿಂದ ಪ್ರೀತಿಪೂರ್ವಕವಾದ ಮಮತೆಯಿಂದಿರುವುದೇ ಭಕ್ತಿಯೆಂದು ಪ್ರತಿಪಾದಿತವಾಗಿದೆ.[೨೧]

ಭಗವಂತನಲ್ಲಿ ಭಕ್ತಿಯಿಂದಿರುವ ಚಾಂಡಾಲನೂ ಸಹ ಬ್ರಾಹ್ಮಣರಿಗಿಂತಲೂ ಶ್ರೇಷ್ಠ. ಆದರೆ ಭಕ್ತಿಯಿಲ್ಲದವನು ಬ್ರಾಹ್ಮಣನಾದರೂ ಸಹ ಚಾಂಡಾಲನಿಗೂ ಸಮಾನನಾಗುತ್ತಾನೆಂದು ಬೃಹತ್‌ನಾರದೀಯಸೂತ್ರದಲ್ಲಿ ಪ್ರತಿಪಾದಿತವಾಗಿದೆ.[೨೨] ಬೃಹನ್ನಾರದೀಯಸೂತ್ರಾನುಸಾರ ಆ ಭಕ್ತಿಯು ಜ್ಞಾನಕ್ಕಿಂತಲೂ ಶ್ರೇಷ್ಠ, ಏಕೆಂದರೆ ಜ್ಞಾನದಿಂದಲೇ ಮೋಕ್ಷ ಮತ್ತು ಯಜ್ಞಾದಿಗಳಿಂದ ಸ್ವರ್ಗಸುಖಗಳು ಸುಲಭವಾಗಿ ದೊರೆಯುತ್ತವೆ. ಆದರೆ ಭಕ್ತಿಯಾದರೊ ಸಾವಿರಕ್ಕಿಂತಲೂ ಹೆಚ್ಚು ಸಾಧನೆಗಳಿಂದಲೂ ಕೂಡ ಭಗವಂತನ ಅನುಗ್ರಹವಿಲ್ಲದೆ ದೊರೆಯುವುದು ಕಷ್ಟಕರ.[೨೩]

ಭಕ್ತಿಶಾಸ್ತ್ರವಲ್ಲದೆ ವಾಲ್ಮೀಕಿರಾಮಾಯಣ, ಅಧ್ಯಾತ್ಮರಾಮಾಯಣ, ಮಹಾಭಾರತ, ಭಗವದ್ಗೀತೆ, ಪುರಾಣ ಮತ್ತು ಭಾಗವತಗಳಲ್ಲಿ ಪ್ರಸಂಗಾನುಸಾರವಾಗಿ ಭಕ್ತಿಯ ಸ್ವರೂಪ ಹಾಗೂ ಪ್ರಭೇದಗಳು ನಿರೂಪಿತವಾಗಿವೆ.

ಸಾಮಾನ್ಯವಾಗಿ ಎಲ್ಲ ಭಾರತೀಯ ದರ್ಶನಗಳಲ್ಲಿ ಭಕ್ತಿಯು ಮುಕ್ತಿಯ ಪರಂಪರೆಯಿಂದ ಸಾಕ್ಷಾತ್ತಾಗಿ ಇಲ್ಲವೇ ಸಾಧನೆಯ ಮೂಲಕ ಸ್ವೀಕೃತವಾಗಿದೆ. ನ್ಯಾಯದರ್ಶನದಲ್ಲಿ ಮಹರ್ಷಿ ಗೌತಮರು ಮೋಕ್ಷಪ್ರಾಪ್ತಿಗಾಗಿ ಶ್ರವಣಾದಿಗಳೊಡನೆ ಯಮ, ನಿಯಮಾದಿ ಅಷ್ಟಾಂಗ ಯೋಗಗಳು ಅವಶ್ಯಕವೆಂದು ಪ್ರತಿಪಾದಿಸಿದ್ದಾರೆ.[೨೪] ನೈಯಾಯಿಕ ಮಹರ್ಷಿ ಭಾಸರ್ವಜ್ಞನು ಅಷ್ಟಾಂಗಯೋಗದಿಂದ ಅನಭಿರತಿ ಎಂಬ

---

[೨೦] ನಾರದೀಯ ಭಕ್ತಿಸೂತ್ರ, ೧೬-೧೭

[೨೧] ಅನನ್ಯಮಮತಾ ವಿಷ್ಣೌ ಮಮತಾ ಪ್ರೇಮಸಂಜ್ಞಿತಾ।
ಭಕ್ತಿರಿತ್ಯುಚ್ಯತೇ ಭೀಷ್ಮಪ್ರಹ್ಲಾದೋದ್ಧವನಾರದೈಃ॥ -ಭಕ್ತಿರಸವಿಮರ್ಶಃ, ಪು.೩೦

[೨೨] ಚಾಂಡಾಲೋಽಪಿ ಮುನಿಶ್ರೇಷ್ಠಾ ವಿಷ್ಣುಭಕ್ತೋ ದ್ವಿಜಾಧಿಕಃ।
ವಿಷ್ಣುಭಕ್ತಿವಿಹೀನಶ್ಚ ದ್ವಿಜೋಽಪಿ ಶ್ವಪಚಾಧಿಕಃ॥ -ಬೃಹನ್ನಾರದೀಯ, ಪು. ೩೨-೩೯

[೨೩] ಜ್ಞಾನತಃ ಸುಲಭಾ ಮುಕ್ತಿಃ ಸ್ವರ್ಗೋ ಯಜ್ಞಾದಿಪುಣ್ಯತಃ।
ಸೇಯಂ ಸಾಧನಸಾಹಸ್ರೈರ್ಹರಿಭಕ್ತಿಃ ಸುದುರ್ಲಭಾ॥ -ಭಕ್ತಿರಸವಿಮರ್ಶಃ, ಪು.೩೧

[೨೪] ನ್ಯಾಯಸೂತ್ರ, ೪.೨.೩೮, ೪೨, ೪೬

ಶ್ರೇಷ್ಠ ವೈರಾಗ್ಯದ ಉದಯವಾಗುತ್ತದೆ, ಅನಂತರ ಮಹೇಶ್ವರನಲ್ಲಿ ಪರಾಭಕ್ತಿ ಮತ್ತು ಆ ಭಕ್ತಿಯಿಂದ ಶಿವಸಾಕ್ಷಾತ್ಕಾರ, ತರುವಾಯ ಶಿವಾನುಗ್ರಹದಿಂದ ಮೋಕ್ಷಪ್ರಾಪ್ತಿ ಎಂದು ಪ್ರತಿಪಾದಿಸುವ ಉದ್ದೇಶದಿಂದ-

ಯದಾ ಚರ್ಮವದಾಕಾಶಂ ವೇಷ್ಟಯಿಷ್ಯಂತಿ ಮಾನವಾಃ।
ತದಾ ಶಿವಮವಿಜ್ಞಾಯ ದುಃಖಸ್ಯಾಂತೋ ಭವಿಷ್ಯತಿ॥[೨೫]

"ಯಾವಾಗ ಮನುಷ್ಯರು ಚರ್ಮವನ್ನು ಸುತ್ತಿಡುವಂತೆ ಆಕಾಶವನ್ನು ಸುತ್ತಿಡಬಲ್ಲರೋ ಆಗ ಜ್ಯೋತಿರ್ಮಯನಾದ ಪರಮೇಶ್ವರನನ್ನು ಅರಿತುಕೊಳ್ಳದೆಯೇ ದುಃಖನಿವೃತ್ತಿಯನ್ನು ಮಾಡಿಕೊಳ್ಳಬಲ್ಲರು" -ಎಂಬ ಶ್ರುತಿ ಪ್ರಮಾಣವನ್ನು ಉಲ್ಲೇಖಿಸಿದ್ದಾನೆ. ವೈಶೇಷಿಕದರ್ಶನದಲ್ಲಿ ಮಹರ್ಷಿ ಕಣಾದರು- "ಯತೋಽಭ್ಯುದಯನಿಃಶ್ರೇಯಸಸಿದ್ಧಿಃ ಧರ್ಮಃ",[೨೬] (ಯಾವುದರಿಂದ ಅಭ್ಯುದಯ ಮಾತ್ರ ನಿಃಶ್ರೇಯಸಗಳು ದೊರೆಯುತ್ತವೆಯೋ ಅದುವೇ ಧರ್ಮ) "ಧರ್ಮವಿಶೇಷಪ್ರಸೂತಾದ್ ತತ್ತ್ವಜ್ಞಾನಾನ್ನಿಃ ಶ್ರೇಯಸಮ್"[೨೭] (ವಿಶೇಷ ಧರ್ಮದಿಂದುತ್ಪನ್ನವಾದ ತತ್ತ್ವಜ್ಞಾನವೇ ಮೋಕ್ಷ) ಇತ್ಯಾದಿ ಸೂತ್ರದಿಂದ ನಿವೃತ್ತಿ ಲಕ್ಷಣ ಧರ್ಮದಿಂದ ಪದಾರ್ಥಗಳ ಸಾಧರ್ಮ್ಯ-ವೈಧರ್ಮ್ಯ-ತತ್ತ್ವಜ್ಞಾನೋದಯ, ತರುವಾಯ ಮೋಕ್ಷವೆಂದು ಅಪ್ಪಣೆಮಾಡಿದ್ದಾರೆ. ಆದರೆ ಭಾಷ್ಯಕಾರರಾದ ಪ್ರಶಸ್ತ ಪಾದಾಚಾರ್ಯರು- "ತಚ್ಚೇಶ್ವರಚೋದನಾಭಿವ್ಯಕ್ತಾದ್ಧರ್ಮಾ ದೇವ"[೨೮] ಎಂದು ಮತ್ತು ಶ್ರೀಧರಭಟ್ಟರು- "ಧರ್ಮೋಽಪಿ ತಾವನ್ನ ನಿಃಶ್ರೇಯಸಂ ಕರೋತಿ ಯಾವದೀಶ್ವರೇಚ್ಛಯಾ ನಾಽನುಗೃಹ್ಯತೇ"[೨೯] ಎಂಬ ಈಶ್ವರೇಚ್ಛಾ ವಿಶೇಷ ದಿಂದ ಕಾರ್ಯಾರಂಭಾಭಿಮುಖಿಯಾದ ಧರ್ಮದಿಂದ ತತ್ತ್ವಜ್ಞಾನ, ತರುವಾಯ ಮೋಕ್ಷವೆಂದು ಪ್ರತಿಪಾದಿಸಿದ್ದಾರೆ. ಆದುದರಿಂದ ವೈಶೇಷಿಕದರ್ಶನದಲ್ಲಿಯೂ ಸಹ ಮೋಕ್ಷಪ್ರಾಪ್ತಿಗೆ ಈಶ್ವರಾನುಗ್ರಹವು ಅಪೇಕ್ಷಿತವಾಗಿದೆ. ಆ ಅನುಗ್ರಹವು ಭಕ್ತಿಯಿಂದುಂಟಾಗುತ್ತದೆ ಎನ್ನುವ ಕಾರಣ ಇಲ್ಲಿಯೂ ಭಕ್ತಿಯು ಅಪೇಕ್ಷಿತವೇ ಆಗಿದೆ.

ಯೋಗದರ್ಶನದಲ್ಲಿ ಪತಂಜಲಿ ಮಹರ್ಷಿಗಳು- "ಸಮಾಧಿಸಿದ್ಧಿರೀಶ್ವರ ಪ್ರಣಿಧಾನಾತ್"[೩೦] (ಶಿವನ ಪ್ರಾರ್ಥನೆಯಿಂದ ಸಮಾಧಿ ಸಿದ್ಧಿಸುತ್ತದೆ) ಎಂಬ ಸೂತ್ರದಲ್ಲಿ ಸಮಾಧಿ ಫಲವಾದ ಮೋಕ್ಷಪ್ರಾಪ್ತಿಯು ಈಶ್ವರಾನುಗ್ರಹದಿಂದುಂಟಾಗುತ್ತದೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಇಲ್ಲಿ 'ಪ್ರಣಿಧಾನ' ಎಂಬ ಶಬ್ದದ ಅರ್ಥ ಭಕ್ತಿವಿಶೇಷವೆಂದು ಹೇಳಲಾಗಿದೆ.

---

೨೫. ಶ್ವೇತಾಶ್ವತರೋಪನಿಷತ್, ೬.೨೦
೨೬. ವೈಶೇಷಿಕಸೂತ್ರ, ೧.೧.೨
೨೭. ವೈಶೇಷಿಕಸೂತ್ರ, ೧.೧.೪
೨೮. ಪ್ರಶಸ್ತಪಾದಭಾಷ್ಯಮ್, ಪು. ೧೮
೨೯. ನ್ಯಾಯಕಂದಲೀ, ಪು. ೧೯
೩೦. ಯೋಗಸೂತ್ರ, ೨.೪೫

ಮೀಮಾಂಸಾದರ್ಶನದಲ್ಲಿ ಪ್ರಾಚೀನಾಚಾರ್ಯರು ಈಶ್ವರನ ಅಸ್ತಿತ್ವವನ್ನು ನಿರಾಕರಿಸಿದರೂ ಕೂಡ ಅರ್ವಾಚೀನಾಚಾರ್ಯರಾದ ಆಪದೇವ, ಲೌಗಾಕ್ಷಿಭಾಸ್ಕರ ಇವರುಗಳು ಈಶ್ವರನನ್ನು ಯಜ್ಞಪತಿಯೆಂದು ಅಂಗೀಕರಿಸಿದ್ದಾರೆ. ಸ್ವರ್ಗಸುಖವನ್ನು ಸಾಧಿಸಲು ದರ್ಶಪೂರ್ಣಮಾಸಾದಿ ಯಾಗಗಳನ್ನು ಈಶ್ವರಾರ್ಪಣಬುದ್ಧಿಯಿಂದ ನೆರವೇರಿಸುವುದರಿಂದಲೂ ಮತ್ತು ಈಶ್ವರಾನುಗ್ರಹಬಲದಿಂದ ಮೋಕ್ಷಪ್ರಾಪ್ತಿಯೆಂದು ಹೇಳಿದ್ದಾರೆ.[೩೧] ಆದುದರಿಂದ ಈ ದರ್ಶನದಲ್ಲಿಯೂ ಸಹ ಈಶ್ವರಾರ್ಪಣಬುದ್ಧಿಯಿಂದ ಕರ್ಮ-ಕರ್ತೃತ್ವ ರೂಪವಾದ ಭಕ್ತಿಯು ಮೋಕ್ಷಕ್ಕೆ ಕಾರಣವೆಂದು ಅಂಗೀಕರಿಸಲಾಗಿದೆ.

ಇದೇ ರೀತಿಯಾಗಿ ಎಲ್ಲ ವೇದಾಂತ ಸಂಪ್ರದಾಯಗಳಲ್ಲಿಯೂ ಸಹ ಭಕ್ತಿಯ ವಿಷಯದಲ್ಲಿ ವಿಶೇಷ ಪ್ರೀತಿಯು ಕಂಡುಬರುತ್ತದೆ. ಅದ್ವೈತ ಮತಸ್ಥಾಪಕರಾದ ಶ್ರೀ ಶಂಕರಾಚಾರ್ಯರು ವಿಶುದ್ಧಜ್ಞಾನಮಾರ್ಗಿಗಳಾಗಿದ್ದರೂ. ಅವರೂ ಸಹ ಭಕ್ತಿಯನ್ನು ಆದರದಿಂದ ಸ್ವೀಕರಿಸಿದ್ದಾರೆ. ಅವರ ಮತದಲ್ಲಿಯೂ ಕೂಡ ಮೋಕ್ಷಪ್ರಾಪ್ತಿಯ ಸಾಧನಗಳಲ್ಲಿ ಭಕ್ತಿಯೇ ಸರ್ವೋತ್ತಮವಾದುದೆಂದು ಪ್ರತಿಪಾದಿಸಿದ್ದಾರೆ.[೩೨] ಮಲಿನವಾದ ವಸ್ತ್ರವು ಹೇಗೆ ಸಾಬೂನಿನ ಸಂಪರ್ಕವಿಲ್ಲದೆ ಶುಭ್ರವಾಗುವುದಿಲ್ಲವೋ, ಹಾಗೆಯೇ ಮಲಿನವಾದ ಅಂತಃಕರಣವುಳ್ಳವನು ಭಕ್ತಿಯಿಲ್ಲದೆ ಶುದ್ಧನಾಗುವುದಿಲ್ಲವೆಂಬುದು ಆಚಾರ್ಯರ ಆಶಯವಾಗಿದೆ.[೩೩] ಅವರ ಮತದಂತೆ ಭಕ್ತಿ ಎಂದರೆ ಭಗವಂತನ ಪಾದಾರವಿಂದಗಳ ಚಿಂತನೆ,[೩೪] ಮತ್ತು ಸ್ವಸ್ವರೂಪಸಂಧಾನ.[೩೫] ಈ ಪ್ರಕಾರವಾಗಿ ಕೇವಲ ಅದ್ವೈತ ಮತದ ಪ್ರತಿಪಾದಕರಾದ ಶಂಕರಭಗವತ್ಪಾದರ ಮತದಲ್ಲಿಯೂ ಸಹ ಭಕ್ತಿಗೆ ಮಹತ್ತ್ವವು ಇದ್ದೇ ಇದೆ.

ವೈಷ್ಣವ ವೇದಾಂತದಲ್ಲಿ ಶ್ರೀರಾಮಾನುಜಾಚಾರ್ಯರು- "ಸ್ನೇಹಪೂರ್ವಮನುಧ್ಯಾನಂ ಭಕ್ತಿರಿತ್ಯುಚ್ಯತೇ ಬುಧೈಃ"[೩೬] (ಸ್ನೇಹಪೂರ್ವಕ ಅನುಧ್ಯಾನವೇ ಭಕ್ತಿ ಎಂದು

---

೩೧. ಮೀಮಾಂಸಾನ್ಯಾಯಪ್ರಕಾಶಃ, ಪು. ೨೭೭-೮೭; ಅರ್ಥಸಂಗ್ರಹ, ಪು. ೧೬೨

೩೨. "ಮೋಕ್ಷಕಾರಣಸಾಮಗ್ರ್ಯಾಂ ಭಕ್ತಿರೇವ ಗರೀಯಸೀ" -ವಿವೇಕ ಚೂಡಾಮಣಿ, ೩೨

೩೩. ಶುದ್ಧ್ಯತಿ ಹಿ ನಾಂತರಾತ್ಮಾ ಕೃಷ್ಣಪದಾಂಭೋಜಭಕ್ತಿಮೃತೇ।
ವಸನಮಿವ ಕ್ಷಾರೋದ್ಯೈರ್ಭಕ್ತ್ಯಾ ಪ್ರಕ್ಷಾಲ್ಯತೇ ಚೇತಃ॥
-ಪ್ರಬೋಧಸುಧಾಕರ, ಶ್ಲೋ.೧೬೭

೩೪. ಅಂಕೋಲಂ ನಿಜಬೀಜಸಂತತಿರಯಸ್ಕಾಂತೋಪಲಂ ಸೂಚಿಕಾ
ಸಾಧ್ವೀ ನೈಜವಿಭುಂ ಲತಾ ಕ್ಷಿತಿರುಹಂ ಸಿಂಧುಃ ಸರಿದ್ವಲ್ಲಭಮ್।
ಪ್ರಾಪ್ನೋತೀಹ ಯಥಾ ತಥಾ ಪಶುಪತೇಃ ಪಾದಾರವಿಂದದ್ವಯಮ್
ಚೇತೋವೃತ್ತಿರುಪೇತ್ಯ ತಿಷ್ಠತಿ ಸದಾ ಸಾ ಭಕ್ತಿರಿತ್ಯುಚ್ಯತೇ॥ -ಶಿವಾನಂದಲಹರೀ

೩೫. "ಸ್ವಸ್ವರೂಪಾನುಸಂಧಾನಂ ಭಕ್ತಿರಿತ್ಯಭಿಧೀಯತೇ" -ವಿವೇಕ ಚೂಡಾಮಣಿ, ೩೨

೩೬. ಭಗವದ್ಗೀತಾ, ಅಧ್ಯಾಯ-೭, ಅವತರಣಿಕಾಭಾಷ್ಯ

ಬುಧರಿಂದ ಕರೆಯಲ್ಪಟ್ಟಿದೆ) ಎಂದು ಹೆಚ್ಚು ಪ್ರೀತಿಯಿಂದ, ತೈಲಧಾರೆಯಂತೆ ಅವಿಚ್ಛಿನ್ನವಾದ ಇಂದ್ರಿಯವೃತ್ತಿಯಿಂದ, ತನ್ನ ಇಷ್ಟದೇವತೆಯನ್ನು ಕುರಿತಾದ ಚಿಂತನೆಯೇ ಭಕ್ತಿ ಎಂದು ಪ್ರತಿಪಾದಿಸಿದ್ದಾರೆ. ಈ ಸಂಪ್ರದಾಯದಲ್ಲಿ ಪರಮಾನುರಾಗಾತ್ಮಕವಾದ ಜ್ಞಾನವೇ (ಪ್ರಾರ್ಥನೆಯೇ) ಭಕ್ತಿ, ಅದೇ ಮೋಕ್ಷಕ್ಕೆ ಸಾಧನ. ಮೋಕ್ಷ ಪ್ರಾಪ್ತಿಗಾಗಿ ಸಾಧಕನು ವರ್ಣ-ಕರ್ಮಾದಿಗಳಲ್ಲಿ ಅಭಿಮಾನರಹಿತನಾಗಿದ್ದು ಭಗವಂತ ನಲ್ಲದೆ ಇತರ ವಿಷಯಗಳಲ್ಲಿ ಆಸೆಯನ್ನು ಬಿಡುತ್ತಾನೆ. ಅಂತಹ ಸಾಧಕನೇ ಶಾಸ್ತ್ರಗಳಲ್ಲಿ ಜ್ಞಾನ-ಧ್ಯಾನಾದಿ ಶಬ್ದಗಳಿಂದ ಪ್ರತಿಪಾದಿತನಾಗಿದ್ದಾನೆ.

ಶ್ರೀ ರಾಮಾನಂದಾಚಾರ್ಯರು- ಅನನ್ಯಭಾವದಿಂದ ಪರಮಾತ್ಮನಲ್ಲಿ ತೈಲಧಾರೆ ಯಂತೆ ಅವಿಚ್ಛಿನ್ನವಾದ ಪ್ರೀತಿಯೇ ಭಕ್ತಿ ಎಂದು ಹೇಳಿದ್ದಾರೆ. ಆ ಭಕ್ತಿಯು ವಿವೇಕಾದಿ ಸಪ್ತಭೂಮಿಕೆ ಹಾಗೂ ಯಮ-ನಿಯಮಾದಿ ಎಂಟು ಅವಯವಗಳಾಗುತ್ತವೆ. ಅದೇ ಮೋಕ್ಷವನ್ನು ನೀಡುತ್ತದೆಂದು ಅಂಗೀಕರಿಸಿದ್ದಾರೆ.[೩೭]

ಶ್ರೀ ವಲ್ಲಭಾಚಾರ್ಯರು- ಹೆಂಡತಿ-ಮಕ್ಕಳಿಗಿಂತಲೂ ಹೆಚ್ಚಾಗಿ ಭಗವಂತನಲ್ಲಿ ಮಾಹಾತ್ಮ್ಯಜ್ಞಾನಪೂರ್ವಕವಾದ ಗಾಢವಾದ ಪ್ರೀತಿಯೇ ಭಕ್ತಿ ಎಂದು ನಿರೂಪಿಸಿದ್ದಾರೆ. ಅವರ ಮತದಲ್ಲಿ ಅದರಿಂದಲೇ ಮೋಕ್ಷಪ್ರಾಪ್ತವಾಗುತ್ತದೆಯೇ ವಿನಃ ಬೇರೆ ಯಾವುದರಿಂದಲೂ ಸಾಧ್ಯವಿಲ್ಲ. "ವಿನಾ ಜ್ಞಾನಂ ಕುತೋ ಭಕ್ತಿಃ ಕುತೋ ಭಕ್ತಿಂ ವಿನಾ ಚ ತತ್"[೩೮] (ಜ್ಞಾನವಿಲ್ಲದೆ ಭಕ್ತಿಯೆಲ್ಲಿಯದು ಮತ್ತು ಭಕ್ತಿಯಿಲ್ಲದೆ ಮೋಕ್ಷವು ಎಲ್ಲಿಯದು?) ಎಂಬ ಶ್ರೀ ವಲ್ಲಭಾಚಾರ್ಯರ ಉಕ್ತಿಯಂತೆ, ಅವರ ಮತದಲ್ಲಿ ಮಾಹಾತ್ಮ್ಯಜ್ಞಾನ ಪೂರ್ವಕವಾದ ಭಕ್ತಿಯೇ ಭಗವಂತನನ್ನು ತಲುಪುವ ಸಾಧನವೆಂದು ನಿಶ್ಚಯವಾಗುತ್ತದೆ. ಈ ಭಕ್ತಿಮಾರ್ಗವನ್ನು ಪುಷ್ಟಿಮಾರ್ಗ ಎಂದು ಕರೆಯಲಾಗಿದೆ.

ಪರಮದ್ವೈತವಾದಿಯಾದ ಮಧ್ವಾಚಾರ್ಯರು- "ಮುಕ್ತಿರ್ನೈಜಸುಖಾನುಭೂತಿಃ" (ನಿಜವಾದ ಸುಖಾನುಭವವೇ ಮುಕ್ತಿ) ಎಂದು ಅಂಗೀಕರಿಸಿದ್ದಾರೆ. ಅದರಲ್ಲಿಯೂ ಸಹ ವಿಷ್ಣುವಿನಲ್ಲಿ ಅನನ್ಯಭಕ್ತಿಯೇ ಅಂತಹ ಮೋಕ್ಷಪ್ರಾಪ್ತಿಯೆಂದು ವಿಹಿತವಾಗಿದೆ. ಶ್ರೀ ನಿಂಬಾರ್ಕಾಚಾರ್ಯರು ದೈನ್ಯಾದಿಗುಣಗಣಸಮನ್ವಿತವಾದ ಪ್ರೇಮರೂಪವಾದ ಭಕ್ತಿಯನ್ನು ಮೋಕ್ಷಕ್ಕೆ ಸಾಧನವೆಂದು ಅಂಗೀಕರಿಸಿದ್ದಾರೆ. ಅವರ ಮತದಲ್ಲಿ ಸಾಧನಭಕ್ತಿ ಮತ್ತು ಸಾಧ್ಯಭಕ್ತಿ ಎಂದು ಭಕ್ತಿಯು ಎರಡು ವಿಧವಾಗುತ್ತದೆ.[೩೯]

ಈ ಪ್ರಕಾರವಾಗಿ ಆಗಮ ಸಂಪ್ರದಾಯಗಳಲ್ಲಿ ಪ್ರಸಿದ್ಧವಾದ ದ್ವೈತ-ದ್ವೈತಾದ್ವೈತ-ಅದ್ವೈತ ಪ್ರತಿಪಾದಕವಾದ ಶೈವದರ್ಶನಗಳಲ್ಲಿಯೂ ಸಹ ಯೋಗ-ಜ್ಞಾನ-ಭಕ್ತಿ ಇವುಗಳ ಸುಂದರವಾದ ಸಮನ್ವಯವಿದೆ. ಆದುದರಿಂದ ವೇದಾಗಮ ಸಮ್ಮತವಾದ ಎಲ್ಲ ಸಂಪ್ರದಾಯಗಳಲ್ಲಿಯೂ ಕೂಡ ಭಕ್ತಿಯು ಅಂಗೀಕಾರವಾಗಿದೆ.

---

[೩೭] ವೈಷ್ಣವಮತಾಬ್ಜಭಾಸ್ಕರಃ, ಪು. ೬೫

[೩೮] ಭಕ್ತಿರಸವಿಮರ್ಶಃ, ಪು. ೩೪

[೩೯] ಭಕ್ತಿರಸವಿಮರ್ಶಃ, ಪು. ೩೩

ಭಕ್ತಿಯ ಪ್ರಭೇದಗಳು

ಮಹರ್ಷಿ ಶಾಂಡಿಲ್ಯ[೪೦] ಮತ್ತು ಮಹರ್ಷಿ ನಾರದರ[೪೧] ಮತದಲ್ಲಿ ಸಾಮಾನ್ಯವಾಗಿ ಭಕ್ತಿಯು ಮುಖ್ಯ ಮತ್ತು ಗೌಣೀ (ಅಮುಖ್ಯ) ಎಂದು ಎರಡು ವಿಧವಾಗಿದೆ. ನಾರದರು ಮತ್ತೆ (೧) ಗುಣಮಾಹಾತ್ಮ್ಯಾಸಕ್ತಿಃ, (೨) ರೂಪಾಸಕ್ತಿಃ, (೩) ಪೂಜಾಸಕ್ತಿಃ, (೪) ಸ್ಮರಣಾಸಕ್ತಿಃ, (೫) ದಾಸ್ಯಾಸಕ್ತಿಃ, (೬) ಸಖ್ಯಾಸಕ್ತಿಃ, (೭) ಕಾಂತಾಸಕ್ತಿಃ, (೮) ವಾತ್ಸಲ್ಯಾಸಕ್ತಿಃ, (೯) ಆತ್ಮನಿವೇದನಾಸಕ್ತಿಃ, (೧೦) ತನ್ಮಯತಾಸಕ್ತಿಃ ಮತ್ತು (೧೧) ಪರಮವಿರಹಾಸಕ್ತಿ ಎಂದು ಭಕ್ತಿಯ ಹನ್ನೊಂದು ಪ್ರಕಾರಗಳನ್ನು ಪ್ರತಿಪಾದಿಸಿದ್ದಾರೆ.[೪೨]

ಶ್ರೀಮದ್ಭಾಗವತ ಮಹಾಪುರಾಣದಲ್ಲಿ[೪೩] ಶ್ರವಣಾದಿ ಆತ್ಮನಿವೇದನಾಂತವಾದ ಭಕ್ತಿಯ ಒಂಭತ್ತು ಭೇದಗಳು ನಿರೂಪಿತವಾಗಿವೆ. ಅಲ್ಲಿ ಪರಮಾತ್ಮನ ಚರಿತ ಶ್ರವಣಕ್ಕೆ ಪರೀಕ್ಷಿತ, ಪರಮಾತ್ಮನ ಗುಣಕೀರ್ತನೆಗೆ ಶುಕದೇವ, ಸ್ಮರಣೆಗೆ ಪ್ರಹ್ಲಾದ, ಪಾದಸೇವೆಗೆ ಲಕ್ಷ್ಮೀ, ಅರ್ಚನೆಗೆ ಪೃಥು, ವಂದನೆಗೆ ಅಕ್ರೂರ, ಸೇವೆಗೆ ಹನುಮಂತ, ಸಖ್ಯಕ್ಕೆ ಅರ್ಜುನ ಮತ್ತು ಆತ್ಮನಿವೇದನೆಗೆ ಬಲಿಚಕ್ರವರ್ತಿ -ಎಂದು ನವವಿಧ ಭಕ್ತಿ ಹಾಗೂ ಪರಮಾತ್ಮನ ನವಭಕ್ತರು ವರ್ಣಿತರಾಗಿದ್ದಾರೆ. ಈ ಎಲ್ಲ ಭಕ್ತರು ಭಗವಂತನಿಗೆ ಸಮಾನವಾಗಿ ಪ್ರಿಯರಾಗಿದ್ದಾರೆ. ಭಕ್ತಿಯ ಈ ನವಭೇದಗಳು ಅಧ್ಯಾತ್ಮರಾಮಾಯಣ ಹಾಗೂ ರಾಮಚರಿತಮಾನಸಗಳಲ್ಲಿ ವರ್ಣಿತವಾಗಿವೆ.

ಪೂರ್ವೋಕ್ತ ವಿವೇಚನೆಯಂತೆ ನಾರದಭಕ್ತಿಸೂತ್ರದಲ್ಲಿ ಮತ್ತು ಶ್ರೀಮದ್ಭಾಗವತದಲ್ಲಿ ಉಕ್ತವಾಗಿರುವ ಭಕ್ತಿಯಲ್ಲಿ ತತ್ತ್ವತಃ ಯಾವುದೇ ವಿರೋಧವೂ ಇರುವುದಿಲ್ಲ. ಹೇಗೆಂದರೆ ಒಂದೇ ತತ್ತ್ವವು ಎರಡರಲ್ಲಿಯೂ ನಾಮಾಂತರಗಳಿಂದ ಪ್ರತಿಪಾದಿತವಾಗಿದೆ. ಉದಾಹರಣೆಗೆ- ನಾರದಭಕ್ತಿಸೂತ್ರದ ಸ್ಮರಣಾಸಕ್ತಿ, ದಾಸ್ಯಾಸಕ್ತಿ ಮತ್ತು ಸಖ್ಯಾಸಕ್ತಿಗಳು ಭಾಗವತದ ಸ್ಮರಣ-ದಾಸ್ಯ-ಸಖ್ಯಭಕ್ತಿಗಳಲ್ಲಿ, ಪೂಜಾಸಕ್ತಿಯು ಪಾದಸೇವನ, ಅರ್ಚನ, ವಂದನರೂಪ ಭಕ್ತಿಗಳಲ್ಲಿ, ಆತ್ಮನಿವೇದನಾಸಕ್ತಿ, ತನ್ಮಯತಾಸಕ್ತಿ, ಕಾಂತಾಸಕ್ತಿ, ವಾತ್ಸಲ್ಯಾಸಕ್ತಿ ಮತ್ತು ಪರಮವಿರಹಾಸಕ್ತಿಗಳು ಭಾಗವತದಲ್ಲಿ ಪ್ರತಿಪಾದಿತವಾದ ಆತ್ಮನಿವೇದನರೂಪ ಭಕ್ತಿಯಲ್ಲಿ ಲೀನವಾಗುತ್ತವೆ. ಇದೇ ರೀತಿಯಾಗಿ ಭಾಗವತ-ನಾರದಭಕ್ತಿಸೂತ್ರಗಳಲ್ಲಿ ನಿರೂಪಿತವಾಗಿರುವ ಆತ್ಮನಿವೇದನರೂಪ ಭಕ್ತಿಯೇ ಸರ್ವಶ್ರೇಷ್ಠ ಭಕ್ತಿಯೆಂದು ತಿಳಿದುಬರುತ್ತದೆ.

---

[೪೦] ಶಾಂಡಿಲ್ಯ ಭಕ್ತಿಸೂತ್ರ, ೭೨

[೪೧] ನಾರದಭಕ್ತಿಸೂತ್ರ, ೫೪-೬೯

[೪೨] ನಾರದಭಕ್ತಿಸೂತ್ರ, ೮೨-೮೩

[೪೩] ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಮ್ ಪಾದಸೇವನಮ್।
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಮ್॥
-ಶ್ರೀಮದ್ಭಾಗವತ, ೧-೫-೨೩

ಭಾಗವತದ ಆಧಾರದ ಮೇಲೆ ಬೋಪದೇವನು ತನ್ನ ಮುಕ್ತಾಫಲವೆಂಬ ಗ್ರಂಥದಲ್ಲಿ ಕಾಮಜಾ, ದ್ವೇಷಜಾ, ಭಯಜಾ ಮತ್ತು ಸ್ನೇಹಜಾ ಎಂದು ನಾಲ್ಕು ವಿಧದ ಭಕ್ತಿಯ ಭೇದಗಳನ್ನು ಮತ್ತು ಆ ಭಕ್ತಿಗಳಿಗೆ ಗೋಪಿಕಾಸ್ತ್ರೀಯರು, ಕಂಸ ಮುಂತಾದವರು, ಚೇದಿ ಮುಂತಾದ ದೇಶಗಳ ದೊರೆಗಳು ಮತ್ತು ಶ್ರೀಕೃಷ್ಣನ ಸಂಬಂಧಿಕರು ಈ ನಾಲ್ವರು ಅಧಿಕಾರಿಗಳೆಂದು ನಿರೂಪಿಸಿದ್ದಾನೆ.[೪೪]

ಭಗವದ್ಗೀತೆಯಲ್ಲಿ ಆರ್ತ - ಜಿಜ್ಞಾಸು - ಅರ್ಥಾರ್ಥಿ - ಜ್ಞಾನಿ ಎಂದು ಭಕ್ತರು ನಾಲ್ಕು ವಿಧವೆಂದು ಪ್ರತಿಪಾದಿಸಿ, ಭಕ್ತಿಯ ಚತುರ್ವಿಧತ್ವವನ್ನು ನಿರೂಪಿಸಲಾಗಿದೆ. ಇಲ್ಲಿ ಜ್ಞಾನಿಭಕ್ತನ ಮಾಹಾತ್ಮ್ಯವು ಉಳಿದವರಿಗಿಂತ ಹೆಚ್ಚಿನದ್ದಾಗಿದೆ. ಈ ಪ್ರಕಾರ ಭಗವದ್ಭಕ್ತರು ಭಗವದ್ಭಕ್ತಿಯೋಗದಿಂದಲೇ ಎಲ್ಲವನ್ನೂ ಪಡೆಯುತ್ತಾರೆ. ಹೀಗೆ ಕರ್ಮ-ಜ್ಞಾನೋಪಾಸನೆಯಿಂದ ಲಭ್ಯವಾಗುವ ಮುಕ್ತಿಸಾಧನೆಯಲ್ಲಿ ಭಕ್ತಿಯೋಗವೇ ಪರಮೋತ್ಕೃಷ್ಟತಮ ಮುಕ್ತಿಯ ಉಪಾಯವೆಂಬುದು ಭಕ್ತಿಶಾಸ್ತ್ರದ ತಾತ್ಪರ್ಯ.

ವೀರಶೈವಸಿದ್ಧಾಂತದಲ್ಲಿ ಭಕ್ತಿ ಮತ್ತು ಅದರ ಪ್ರಭೇದಗಳು

ವೀರಶೈವ ಸಿದ್ಧಾಂತದಲ್ಲಿ "ಸಾಂಗಾನ್ಯೂನಾ ಚ ಯಾ ಸೇವಾ ಸಾ ಭಕ್ತಿರಿತಿ ಕಥ್ಯತೇ"[೪೫] (ಯಾವ ಸೇವೆಯು ನವವಿಧ ಭಕ್ತಿಗಳಿಂದ ಕೂಡಿರುವುದೋ ಅದು ಪೂರ್ಣಭಕ್ತಿ ಎನಿಸುವುದು. ಕಡಿಮೆಯಾದುದು ಅಲ್ಪಭಕ್ತಿಯೆನಿಸುವುದು) ಎಂಬ ಆಚಾರ್ಯೋಕ್ತಿಯಂತೆ ಪರಶಿವನ ಪ್ರೀತಿಪೂರ್ವಕವಾದ ಸೇವೆಯೇ ಭಕ್ತಿ ಎಂದು ತಿಳಿದುಬರುತ್ತದೆ. ಇದು ಕಾಯಾ, ವಾಚಾ ಮತ್ತು ಮನಸ್ಸೆಂಬ ತ್ರಿಕರಣಗಳಿಂದ ಕೂಡಿದೆ. ಪ್ರತಿದಿನವೂ ಇಷ್ಟಲಿಂಗದ ಪೂಜೆಯನ್ನು ನೆರವೇರಿಸುವುದು ಕಾಯದಿಂದ, ಪಂಚಾಕ್ಷರಮಂತ್ರಜಪವು ವಚಸ್ಸಿನಿಂದ ಮತ್ತು ಪ್ರಾಣಲಿಂಗ- ಭಾವಲಿಂಗಗಳ ಅನುಸಂಧಾನವು ಮನಸ್ಸಿನಲ್ಲಿ ಹೀಗೆ ಭಕ್ತಿಯು ತ್ರಿಕರಣಾತ್ಮಕವಾಗಿದೆ.[೪೬] ಇಲ್ಲಿಯೂ ಸಹ (ಈ ಸಿದ್ಧಾಂತದಲ್ಲಿಯೂ ಸಹ) ಪೂರ್ವೋಕ್ತ ಶ್ರವಣಾದಿ ಆತ್ಮನಿವೇದನಾಂತಗಳಾದ ನವವಿಧ ಭಕ್ತಿಗಳು ಅಂಗೀಕೃತವಾಗಿವೆ.[೪೭] ಈ ಬಗೆಯ ಭಕ್ತಿಯಿಂದ ಕೂಡಿದವನು ಮ್ಲೇಚ್ಛನಾದರೂ ಸಹ ಶಿವಾನುಗ್ರಹಕ್ಕೆ ಅರ್ಹನಾಗುತ್ತಾನೆಯೇ ಹೊರತು ಭಕ್ತಿಯಿಲ್ಲದ ವಿಪ್ರನಲ್ಲವೆಂದು ವೀರಶೈವರು ರಾದ್ಧಾಂತ ಮಾಡುತ್ತಾರೆ.[೪೮]

ಈ ಭಕ್ತಿಯು ಬಾಹ್ಯ, ಆಭ್ಯಂತರ ಮತ್ತು ಬಾಹ್ಯಾಭ್ಯಂತರ ಎಂದು ಮತ್ತೆ ಮೂರು ವಿಧವಾಗಿದೆ. ಬೇರೆಯವರ ದೃಷ್ಟಿಗೆ ಗೋಚರವಾಗುವ ಶಿವಪೂಜಾದಿ

---

೪೪. ಭಕ್ತಿರಸವಿಮರ್ಶಃ, ಪು. ೪೬

೪೫. ಸಿ.ಶಿ, ೯.೧೫

೪೬. ಸಿ.ಶಿ, ೯.೧೫-೧೬

೪೭. ಸಿ.ಶಿ, ೯.೨-೩

೪೮. ಭಕ್ತಿಃ ಸ್ಥಿರೀಕೃತಾ ಯಸ್ಮಿನ್ ಮ್ಲೇಚ್ಛೇ ವಾ ದ್ವಿಜಸತ್ತಮೇ।
ಶಂಭೋಃ ಪ್ರಿಯಃ ಸ ವಿಪ್ರಶ್ಚ ನ ಪ್ರಿಯೋ ಭಕ್ತಿವರ್ಜಿತಃ॥ -ಅದೇ, ೯.೫

ಕರ್ಮಗಳು ಬಾಹ್ಯವೆಂತಲೂ, ಬೇರೆಯವರ ದೃಷ್ಟಿಗಾಗಲೀ ಶ್ರವಣಕ್ಕಾಗಲೀ ಗೋಚರವಾಗದೆ ತನಗೆ ಮಾತ್ರ ಗೋಚರವಾಗುವಂತಹ ಕರ್ಮಗಳು ಆಭ್ಯಂತರವೆಂತಲೂ ಮತ್ತು ಕಾಕಾಕ್ಷಿಗೋಲಕನ್ಯಾಯದಂತೆ ಮನಸ್ಸಿನಲ್ಲಿ, ಬಾಹ್ಯದಲ್ಲಿ ಮತ್ತು ಆಭ್ಯಂತರದಲ್ಲಿ ಸಂಚಾರಶೀಲವಾದ ಕರ್ಮವು ಬಾಹ್ಯಾಭ್ಯಂತರವೆಂದು ತಿಳಿಯಬೇಕು."[೪೯]

ಇಲ್ಲಿ ನಿರೂಪಿತವಾದ ತ್ರಿವಿಧ ಭಕ್ತಿಗಳಲ್ಲಿ ಪ್ರಾಣಲಿಂಗ-ಭಾವಲಿಂಗಾನುಸಂಧಾನ ಪರವಾದ ಆಭ್ಯಂತರ ಭಕ್ತಿಯೇ ಶ್ರೇಷ್ಠವಾದುದು. "ಸಾ ಯಸ್ಮಿನ್ ವರ್ತತೇ ತಸ್ಯ ಜೀವನಂ ಭೃಷ್ಟಬೀಜವತ್"[೫೦] (ಆಭ್ಯಂತರ ಭಕ್ತಿಯು ಯಾವನಲ್ಲಿರುವುದೋ ಅವನ ಜನ್ಮವು ಸೀಳಿದ ಬೀಜದಂತೆ ಪುನರ್ಜನ್ಮರಹಿತವಾಗುವುದು) ಎಂಬ ರೇಣುಕ ಭಗವತ್ಪಾದರ ಅಪ್ಪಣೆಯಂತೆ ಅಂತಹ ಭಕ್ತಿಯಿಂದ ಕೂಡಿದವನ ಜನ್ಮವು ಸೀಳಿದ ಬೀಜದಂತೆ ಪುನರ್ಜನ್ಮರಹಿತವಾಗುವುದು.

ಮೋಕ್ಷದಾಯಿನಿಯಾದ ಈ ಆಭ್ಯಂತರ ಭಕ್ತಿಯು ಎಲ್ಲರಿಗೂ ಸುಲಭವಾದುದಲ್ಲ. ಆದರೆ ಅನೇಕ ಜನ್ಮಗಳಲ್ಲಿ ಮಾಡಿದ ಶಿವಧ್ಯಾನ-ಶಿವಪೂಜಾದಿಗಳಿಂದ ಪರಿಶುದ್ಧರಾದ, ಶ್ರುತಿ-ಸ್ಮೃತಿಗಳಲ್ಲಿ ನಿರೂಪಿತವಾಗಿರುವ ನಿತ್ಯ-ನೈಮಿತ್ತಿಕ ಕರ್ಮನುಷ್ಠಾನ ಮಾಡುವ, ಕಾಮ್ಯಕರ್ಮಗಳಲ್ಲಿ ನಿಸ್ಪೃಹನಾದ, ಶಿವಾನುಗ್ರಹಿಗಳಾದ ಸುಜ್ಞಾನಿಗಳಿಗೆ ಮಾತ್ರ ಸುಲಭವಾದುದು. ಅದನ್ನು ಶ್ರೀ ರೇಣುಕ ಭಗವತ್ಪಾದರು ಹೀಗೆ ನಿರೂಪಿಸಿದ್ದಾರೆ-

> ಪ್ರಸಾದಾದೇವ ಸಾ ಭಕ್ತಿಃ ಪ್ರಸಾದೋ ಭಕ್ತಿಸಂಭವಃ।
> ಯಥೈವಾಂಕುರತೋ ಬೀಜಂ ಬೀಜತೋ ವಾ ಯಥಾಂಕುರಃ॥
> ಪ್ರಸಾದಪೂರ್ವಿಕಾ ಯೇಯಂ ಭಕ್ತಿರ್ಮುಕ್ತಿವಿಧಾಯಿನೀ।
> ನೈವ ಸಾ ಶಕ್ಯತೇ ಪ್ರಾಪ್ತುಂ ನರೈರೇಕೇನ ಜನ್ಮನಾ॥
> ಅನೇಕಜನ್ಮಶುದ್ಧಾನಾಂ ಶ್ರೌತಸ್ಮಾರ್ತಾನುವರ್ತಿನಾಮ್।
> ವಿರಕ್ತಾನಾಂ ಪ್ರಬುದ್ಧಾನಾಂ ಪ್ರಸೀದತಿ ಮಹೇಶ್ವರಃ॥
> ಪ್ರಸನ್ನೇ ಸತಿ ಮುಕ್ತೋಽಭೂನ್ಮುಕ್ತಃ ಶಿವಸಮೋ ಭವೇತ್॥[೫೧]

"ಅಂಕುರದಿಂದ ಬೀಜವು ಹೇಗೆ ಉತ್ಪನ್ನವಾಗುವುದೋ; ಬೀಜದಿಂದ ಅಂಕುರವು ಹೇಗೆ ಉತ್ಪನ್ನವಾಗುವುದೋ, ಹಾಗೆಯೇ ಭಕ್ತಿಯು ಶಿವಾನುಗ್ರಹದಿಂದ ಉತ್ಪನ್ನವಾಗುವುದು; ಶಿವಾನುಗ್ರಹವು ಭಕ್ತಿಯಿಂದ ಉತ್ಪನ್ನವಾಗುವುದು. ಶಿವಾನುಗ್ರಹದಿಂದುತ್ಪನ್ನವಾದ ಭಕ್ತಿಯು ಮುಕ್ತಿಯನ್ನುಂಟುಮಾಡುವುದು. ಆ ಭಕ್ತಿಯು ಮಾನವರಿಂದ ಒಂದೇ ಜನ್ಮದಲ್ಲಿ ಹೊಂದಲು ಸಾಧ್ಯವಿಲ್ಲ. ಅನೇಕ ಜನ್ಮಗಳಲ್ಲಿ

---

[೪೯] ಸಿ.ಶಿ, ೯.೧೭

[೫೦] ಸಿ.ಶಿ, ೯.೯

[೫೧] ಸಿ.ಶಿ, ೯.೧೧-೧೪

ಮಾಡಲ್ಪಟ್ಟ ಶ್ರುತಿ-ಸ್ಮೃತಿಗಳಲ್ಲಿ ಉಕ್ತವಾದ ಕರ್ಮಾನುಷ್ಠಾನ ಮಾಡುವ, ಕಾಮ್ಯಕರ್ಮಗಳಲ್ಲಿ ನಿಸ್ಪೃಹರಾದ ಜ್ಞಾನಿಗಳಿಗೆ ಮಹೇಶ್ವರನು ಪ್ರಸನ್ನನಾಗುತ್ತಾನೆ. ಮಹೇಶ್ವರನು ಪ್ರಸನ್ನನಾಗಲು ಭಕ್ತನು ಮುಕ್ತನಾಗುವನು, ಮುಕ್ತನು ಶಿವರೂಪಿಯಾಗುವನು."

ಈ ಸಿದ್ಧಾಂತದಲ್ಲಿ ಶಿವಸಾಯುಜ್ಯವನ್ನು ಪಡೆಯಲು ಭಕ್ತಾದಿ ಐಕ್ಯಾಂತವಾದ ಷಟ್‌ಸ್ಥಲಗಳನ್ನು ಒಪ್ಪಿರುವುದರಿಂದ, ಭಕ್ತಿಯಿಂದಲೇ ಆ ಸ್ಥಲಗಳನ್ನು ಕ್ರಮವಾಗಿ ಗಳಿಸಬೇಕಾಗಿರುವುದರಿಂದ ಪ್ರತಿಯೊಂದು ಸ್ಥಲವು ಒಂದೊಂದು ಭಕ್ತಿಯ ಭೇದದಿಂದ ಶ್ರದ್ಧಾ - ನಿಷ್ಠಾ - ಅವಧಾನ - ಅನುಭವ - ಆನಂದ - ಸಮರಸಗಳೆಂಬ ಆರು ಬಗೆಯ ಭಕ್ತಿಗಳನ್ನು ಶ್ರೀಮಾಯಿದೇವನು ನಿರೂಪಿಸಿದ್ದಾನೆ.[೫೨] ಆದುದರಿಂದ ಈಗ ಆಯಾ ಭಕ್ತಿಯ ಸ್ವರೂಪ ನಿರೂಪಣಪುರಃಸರವಾಗಿ ಷಟ್‌ಸ್ಥಲಸೋಪಾನಕ್ರಮವನ್ನು ವಿಮರ್ಶಿಸಲಾಗುವುದು.

೧. ಭಕ್ತಸ್ಥಲ ಮತ್ತು ಭಕ್ತ

> ಶಿವೇ ಭಕ್ತಿಃ ಸಮುತ್ಪನ್ನಾ ಯಸ್ಯಾಸೌ ಭಕ್ತ ಉಚ್ಯತೇ।
> ತಸ್ಯಾನುಷ್ಠೇಯಧರ್ಮಾಣಾಮುಕ್ತಿರ್ಭಕ್ತಸ್ಥಲಂ ಮತಮ್॥[೫೩]

"ಯಾವನಲ್ಲಿ ನಿಜವಾದ ಶಿವಭಕ್ತಿಯು ಉತ್ಪನ್ನವಾಗುತ್ತದೆಯೋ ಅವನು ಭಕ್ತನೆಂದು ಹೇಳಿಸಿಕೊಳ್ಳುವನು. ಆ ಭಕ್ತನು ಅನುಷ್ಠಾನ ಮಾಡತಕ್ಕ ಧರ್ಮಗಳ ಉಪದೇಶವನ್ನು ಮಾಡುವ ಸ್ಥಲವೆ ಭಕ್ತಸ್ಥಲವೆನಿಸಿಕೊಳ್ಳುವುದು" -ಎಂಬ ಆಚಾರ್ಯೋಕ್ತಿಯಂತೆ ಭಕ್ತಸ್ಥಲದಲ್ಲಿ ಪ್ರತಿಪಾದಿತವಾದ ಆಚಾರಗಳನ್ನು ಆಚರಿಸುವ ಮತ್ತು ಶಿವನಲ್ಲಿ ಶ್ರದ್ಧೆಯಿಂದಿರುವ ಸಾಧಕನು ಭಕ್ತನೆನಿಸಿಕೊಳ್ಳುತ್ತಾನೆ. "ಶ್ರದ್ಧಾದರೇ ಚ ಕಾಂಕ್ಷಾಯಾಮ್" (ಶ್ರದ್ಧಾ=ಆದರ, ಇಚ್ಛಿಸುವಿಕೆ), "ಶ್ರದ್ಧಾ ಸಂಪ್ರತ್ಯಯಃ ಸ್ಪೃಹಾ"[೫೪] (ಶ್ರದ್ಧಾ = ಆದರ, ಆಸೆ) ಎಂದು ಮೇದಿನೀ ಮತ್ತು ಅಮರಕೋಶಗಳ ಪ್ರಾಮಾಣ್ಯದಿಂದ 'ಶ್ರದ್ಧಾ' ಎಂದರೆ ಆದರ, ಇಚ್ಛಿಸುವಿಕೆ ಎಂದು ಅರ್ಥವಾಗುತ್ತದೆ. ಆದುದರಿಂದ

---

[೫೨] ಷಡ್ವಿಧಾಕಾರತೋ ಭಿನ್ನಾ ಭಕ್ತಿಃ ಸಾಕ್ಷಾಚ್ಛಿವಾತ್ಮಿಕಾ।
ಷಣ್ಣಾಮೈಕ್ಯಾದಿಭಕ್ತಾಂತಸ್ಥಲಾನಾಂ ವರ್ತತೇ ಪದೇ॥
ಭಕ್ತಿಃ ಸಮರಸಾಕಾರಾ ಪ್ರಥಮಾ ಪರಿಗೀಯತೇ।
ಆನಂದಾಕಾರತೋ ಭಾತಿ ದ್ವಿತೀಯಾ ಭಕ್ತಿರುತ್ತಮಾ॥
ತೃತೀಯಾಽನುಭವಾಕಾರಾ ಭಕ್ತಿರ್ಭವವಿನಾಶಿನೀ।
ಚತುರ್ಥೀ ಪರಮಾ ಭಕ್ತಿರವಧಾನಾತ್ಮಿಕಾ ಮತಾ॥
ಪಂಚಮೀ ನೈಷ್ಠಿಕೀ ಭಕ್ತಿಃ ಷಷ್ಠೀ ಸದ್ಭಕ್ತಿರೀರಿತಾ।
-ಅನುಭವಸೂತ್ರ, ೪.೨೩,೨೫-೨೮

[೫೩] ಸಿ.ಶಿ, ೫.೨೬

[೫೪] ಅಮರಕೋಶ, ೩.೩.೧೦೨

ವೀರಶೈವಧರ್ಮದಲ್ಲಿ ಉಕ್ತವಾಗಿರುವ ಅಷ್ಟಾವರಣ ಮತ್ತು ಪಂಚಾಚಾರಗಳಲ್ಲಿ ಆದರ ಮತ್ತು ನಿರತಿಶಯ ಪ್ರೀತಿಯಿಂದ ಇರುವುದೇ ಶ್ರದ್ಧಾಭಕ್ತಿಯೆಂದು ತಿಳಿಯಬೇಕು. ಇಂತಹ ಭಕ್ತಿವಿಶಿಷ್ಟವಾದ ಸಾಧಕನೇ ಭಕ್ತಸ್ಥಲದ ಭಕ್ತ.

ಷಟ್‌ಸ್ಥಲಗಳಲ್ಲಿ ಮೊದಲನೆಯ ಸೋಪಾನಭೂತವಾದ ಈ ಭಕ್ತಸ್ಥಲದಲ್ಲಿ ಹದಿನೈದು ಅವಾಂತರ ಸ್ಥಲಗಳಿವೆ.[೫೫] ಅವುಗಳಲ್ಲಿ ಭಕ್ತನು ಆಚರಿಸಬೇಕಾದ ಧರ್ಮಗಳು ಪ್ರತಿಪಾದಿತವಾಗಿವೆ. ಅದರಂತೆ ಅನೇಕ ಜನ್ಮಗಳಲ್ಲಿ ಸಂಪಾದಿಸಿದ ನಿಷ್ಕಾಮಕರ್ಮದ ಪ್ರಭಾವದಿಂದ ಶುದ್ಧಾಂತಃಕರಣನಾದ ಸಂಸಾರವನ್ನು ನಿಃಸಾರವೆಂದು ತಿಳಿದಿರುವ ಯಾವ ಭಕ್ತನು ಗುರುವಿನಲ್ಲಿ ಶರಣಾಗಿ ತ್ರಿವಿಧ ದೀಕ್ಷೆಗಳಿಂದ ಇಷ್ಟಲಿಂಗ - ಪ್ರಾಣಲಿಂಗ - ಭಾವಲಿಂಗಳೆಂಬ ಲಿಂಗತ್ರಯಗಳನ್ನು ಪಡೆದವನಾಗಿ, ವಿಧಿವತ್ತಾಗಿ ಭಸ್ಮ-ರುದ್ರಾಕ್ಷಾದಿಗಳನ್ನು ಧರಿಸಿ, ಶಿವಪಂಚಾಕ್ಷರೀ ಮಂತ್ರವನ್ನು ಜಪಿಸುತ್ತಾ, ಸೋಪಾಧಿ-ನಿರುಪಾಧಿ-ಸಹಜ ಗಳೆಂಬ ದಾನತ್ರಯಗಳನ್ನು ಮಾಡುತ್ತಾ, ಗುರು-ಲಿಂಗ-ಜಂಗಮರ ವಿಷಯದಲ್ಲಿ ಶ್ರದ್ಧೆಯುಳ್ಳವನಾಗಿ ಶಿವಪಂಚಯಜ್ಞರತನಾಗುವವನೇ ಭಕ್ತನೆನಿಸುತ್ತಾನೆ.

ತಪಸ್ಸು, ಕರ್ಮ, ಜಪ, ಧ್ಯಾನ ಮತ್ತು ಜ್ಞಾನ ಎಂದು ಶಿವಯಜ್ಞಗಳು ಐದು ವಿಧವಾಗಿವೆಯೆಂದು ಹೇಳಲಾಗಿದೆ.[೫೬] ಶಿವಪೂಜೆಗಾಗಿ ಉಪಕರಣಗಳನ್ನು ಸಿದ್ಧಪಡಿಸುವುದಕ್ಕಾಗಿ ದೇಹವನ್ನು ದಂಡಿಸುವುದೇ ತಪಸ್ಸು, ಚಾಂದ್ರಾಯಣಾದಿ ವ್ರತಾಚರಣೆಗಳಿಂದ ದೇಹವನ್ನು ದಂಡಿಸುವುದಲ್ಲ. ಶಾಶ್ವತವಾದ ಫಲವುಳ್ಳ ಇಷ್ಟಲಿಂಗಪೂಜೆಯೇ ಕರ್ಮ, ಬಹುಧನವ್ಯಯದಿಂದ ಮಾಡಬೇಕಾದ ಜ್ಯೋತಿಷ್ಟೋಮಾದಿ ಯಾಗಗಳು ನಶ್ವರಫಲದಾಯಕವಾದುದರಿಂದ ವೀರಶೈವಾಚಾರ್ಯರು ಅವುಗಳನ್ನು ನಿಷೇಧಿಸಿದ್ದಾರೆ. ಪಂಚಾಕ್ಷರಮಂತ್ರದ ಅಭ್ಯಾಸ, ಓಂಕಾರದ ಅಭ್ಯಾಸ ಅಥವಾ ಶ್ರೀರುದ್ರಾಧ್ಯಾಯದ ಪಂಚಬ್ರಹ್ಮ ಮಂತ್ರಗಳ ಪುನಃ ಪುನಃ ಮನನವೇ ಜಪ. ಇವುಗಳನ್ನು ಹೊರತುಪಡಿಸಿದ ವೇದಭಾಗಗಳ ಅಧ್ಯಯನವು ಈ ಸಿದ್ಧಾಂತಕ್ಕೆ ಅನಪೇಕ್ಷಿತವಾಗಿದೆ. ಶಿವನ ಸಗುಣ-ನಿರ್ಗುಣ ರೂಪಗಳ ಚಿಂತನವೇ

---

[೫೫] ಅವಾಂತರಸ್ಥಲಾನ್ಯತ್ರ ಪ್ರಾಹುಃ ಪಂಚದಶೋತ್ತಮಾಃ।
ಪಿಂಡತಾ ಪಿಂಡವಿಜ್ಞಾನಂ ಸಂಸಾರಗುಣಹೇಯತಾ॥
ದೀಕ್ಷಾ ಲಿಂಗಧೃತಿಶ್ಚೈವ ವಿಭೂತೇರಪಿ ಧಾರಣಮ್।
ರುದ್ರಾಕ್ಷಧಾರಣಂ ಪಶ್ಚಾತ್ ಪಂಚಾಕ್ಷರಜಪಸ್ತಥಾ॥
ಭಕ್ತಿಮಾರ್ಗಕ್ರಿಯಾ ಚೈವ ಗುರೋರ್ಲಿಂಗಸ್ಯ ಚಾರ್ಚನಮ್।
ಜಂಗಮಸ್ಯ ತಥಾಹ್ಯೇಷಾಂ ಪ್ರಸಾದಸ್ವೀಕೃತಿಸ್ತಥಾ॥
ಅತ್ರ ದಾನತ್ರಯಂ ಪ್ರೋಕ್ತಮುಪಾಧಿನಿರುಪಾಧಿನೀ।
ಸಹಜಂ ಚೇತಿ ನಿರ್ದಿಷ್ಟಂ ಸಮಸ್ತಾಗಮಪಾರಗೈಃ॥ -ಸಿ.ಶಿ, ೫.೨೭-೩೦
ಏತಾನಿ ಶಿವಭಕ್ತಸ್ಯ ಕರ್ತವ್ಯಾನಿ ಪ್ರಯತ್ನತಃ।

[೫೬] ಪಂಚಧಾ ಕಥ್ಯತೇ ಸದ್ಭಿಸ್ತದೇವ ಭಜನಂ ಪುನಃ।
ತಪಃ ಕರ್ಮ ಜಪೋ ಧ್ಯಾನಂ ಜ್ಞಾನಂ ಚೇತ್ಯನುಪೂರ್ವಕಮ್॥ -ಸಿ.ಶಿ, ೯.೨೧

ಧ್ಯಾನ, ಪರಿಚ್ಛಿನ್ನ ದೇಹೇಂದ್ರಿಯಾಧ್ಯುಪಾಧಿಗಳಿಂದ ಆವೃತನಾಗಿರುವ ತಾನೇ ಆತ್ಮನಾಗಿರುವನೆಂದು ಧ್ಯಾನಿಸುವುದಲ್ಲ. ಕಾಮಿಕಾದಿ ವಾತುಲಾಂತಗಳಾದ ಶೈವಾಗಮಗಳ ಅರ್ಥವನ್ನು ವಿಚಾರಮಾಡಿ ತಿಳಿಯುವುದೇ ಜ್ಞಾನ, ಸಾಂಖ್ಯಾದಿ ಇತರ ಶಾಸ್ತ್ರಾರ್ಥವನ್ನು ವಿಚಾರಮಾಡಿ ತಿಳಿಯುವುದಲ್ಲ. ಈ ಪ್ರಕಾರ ಭಕ್ತಸ್ಥಲದಲ್ಲಿ ಪ್ರತಿಪಾದಿತವಾಗಿರುವ ಶಿವಪಂಚಯಜ್ಞಗಳಿಂದ ಪರಶಿವನನ್ನು ಪರಾಭಕ್ತಿಯಿಂದ ಪೂಜಿಸುವ ಸಾಧಕನೇ ಭಕ್ತ.[೫೭] ಹೀಗೆ ಪಂಚಯಜ್ಞರತನಾದ ಸಾಧಕನು ಭಕ್ತಸ್ಥಲದಲ್ಲಿ ನಿರೂಪಿತವಾಗಿರುವ ವಿಧೇಯ (ಮಾಡಲೇಬೇಕಾಗಿರುವ) -ಅವಿಧೇಯ (ಮಾಡದೇ ಇರುವ) ಕರ್ಮಗಳ ನಿಯಮಗಳನ್ನು ಶ್ರದ್ಧೆಯಿಂದ ಪಾಲಿಸುತ್ತಾನೆ.

ಭಕ್ತನ ವಿಧೇಯ-ಅವಿಧೇಯ ನಿಯಮಗಳು

ಮಹಾತೇಜಸ್ವಿಯಾದ ಶಿವಭಕ್ತನು ಶಿವಭಕ್ತಿಪರಾಙ್ಮುಖರಾದವರ ದರ್ಶನ-ಸ್ಪರ್ಶನ ಸಹವಾಸಾದಿಗಳನ್ನು ಒಮ್ಮೆಯೂ ಮಾಡಬಾರದು. ಅನ್ಯಥಾ ಅವನ ತೇಜಸ್ಸು ಕ್ಷೀಣವಾಗುತ್ತದೆ. "ಶಿವೋಕ್ತಾಂ ಜಾತಿಮರ್ಯಾದಾಂ ಯೋಽತೀತ್ಯ ಭುವಿ ವರ್ತತೇ। ಸ ಚಾಂಡಾಲ ಇತಿ ಜ್ಞೇಯಃ" (ಶಿವೋಕ್ತವಾದ ಜಾತಿ ಮರ್ಯಾದೆಯನ್ನು ಯಾವನು ಅತಿಕ್ರಮಿಸಿ ಭೂಮಿಯಲ್ಲಿ ಜೀವಿಸಿರುವನೋ ಅವನು ಚಾಂಡಾಲನೆಂದು ತಿಳಿಯಬೇಕು) ಇತ್ಯಾದಿ ವಚನ ಪ್ರಾಮಾಣ್ಯದಿಂದ ವೀರಶೈವಮತೋಚಿತವಾದ ಆಚಾರನಿಷ್ಠರಾದ ಸ್ವಜಾತೀಯರಾದ ಭಕ್ತ-ಮಾಹೇಶ್ವರರ ಮನೆಗಳಲ್ಲಿ ಮತ್ತು ಅವರ ಪಂಕ್ತಿಯಲ್ಲಿ ಕುಳಿತು ಭೋಜನ ಮಾಡಬೇಕು, ಬೇರೆಲ್ಲಿಯೂ ಅಲ್ಲ. ದೃಢತರ ಶಿವವ್ರತಿಯಾದ ಶಿವಭಕ್ತನು ತನ್ನ ಇಷ್ಟಲಿಂಗವಲ್ಲದೆ ಬೇರಾವ ದೇವತೆಗಳನ್ನು ಕೈಗಳಿಂದ ಪೂಜಿಸಬಾರದು, ಕೀರ್ತನೆ ಮಾಡಬಾರದು, ಮನಸ್ಸಿನಲ್ಲಿಯೂ ಧ್ಯಾನಿಸಬಾರದು ಮತ್ತು ಆ ದೇವತೆಗಳಿಗೆ ನೈವೇದ್ಯ ಮಾಡಿದ ಅನ್ನಾದಿಗಳನ್ನು ತಿನ್ನಬಾರದು, ಅನ್ಯಥಾ ವ್ಯಭಿಚಾರ ದೋಷವುಂಟಾಗುತ್ತದೆ. ಶಿವದೇವಾಲಯಗಳಿಗೆ ಮತ್ತು ಶಿವಭಕ್ತರಿಗೆ ಅಪಾಯವುಂಟಾದರೆ, ತನ್ನ ಪ್ರಾಣವನ್ನು ತ್ಯಜಿಸಿಯಾದರೂ ಸಹ ಅದನ್ನು ತಡೆಯಬೇಕು. ಹೀಗೆ ಪ್ರಾಣತ್ಯಾಗ ಮಾಡುವುದರಿಂದ ದುರ್ಮರಣದಿಂದುಂಟಾಗುವ ದುರ್ಗತಿಯು ಬಾರದೆ ಶಿವನಿಗೋಸ್ಕರ ಪ್ರಾಣತ್ಯಾಗ ಮಾಡಿದುದರಿಂದ ಶಿವಸಾಯುಜ್ಯವೇ ಪ್ರಾಪ್ತವಾಗುತ್ತದೆ. ಶಿವನಿಂದೆ ಮತ್ತು ಶಿವಾಚಾರದ

---

[೫೭] ಶಿವಾರ್ಥೇ ದೇಹಸಂಶೋಷಸ್ತಪಃ ಕೃಚ್ಛ್ರಾದಿ ನೋ ಮತಮ್।
ಶಿವಾರ್ಚಾ ಕರ್ಮ ವಿಜ್ಞೇಯಂ ಬಾಹ್ಯಂ ಯಾಗಾದಿ ನೋಚ್ಯತೇ॥
ಜಪಃ ಪಂಚಾಕ್ಷರಾಭ್ಯಾಸಃ ಪ್ರಣವಾಭ್ಯಾಸ ಏವ ವಾ।
ರುದ್ರಾಧ್ಯಾಯಾದಿಕಾಭ್ಯಾಸೋ ನ ವೇದಾಧ್ಯಯನಾದಿಕಮ್॥
ಧ್ಯಾನಂ ಶಿವಸ್ಯ ರೂಪಾದಿಚಿಂತಾ ನಾತ್ಮಾದಿಚಿಂತನಮ್।
ಶಿವಾಗಮಾರ್ಥ ವಿಜ್ಞಾನಂ ಜ್ಞಾನಂ ನಾನ್ಯಾರ್ಥವೇದನಮ್॥
ಇತಿ ಪಂಚಪ್ರಕಾರೋಽಯಂ ಶಿವಯಜ್ಞಃ ಪ್ರಕೀರ್ತಿತಃ।
ಅನೇನ ಪಂಚಯಜ್ಞೇನ ಯಃ ಪೂಜಯತಿ ಶಂಕರಮ್॥ -ಸಿ.ಶಿ, ೬.೨೨-೨೫

ನಿಂದೆಯು ಎಲ್ಲಿಯಾದರೂ ಆದರೆ ವೀರಭದ್ರನಂತೆ ವೀರಾವೇಶದಿಂದ ಅದನ್ನು ತಡೆಯಬೇಕು, ಅಥವಾ ಆ ಜಾಗವನ್ನು ಬಿಟ್ಟು ಹೊರಟುಹೋಗಬೇಕು. ಪಂಚಾಕ್ಷರ ಮಹಾಮಂತ್ರಜಪಶೀಲನಾದ ಈ ಸಾಧಕನು ತನ್ನ ನಾಲಿಗೆಯಿಂದ ಒಮ್ಮೆಯೂ ಸಹ ನರಸ್ತುತಿಯನ್ನು ಮಾಡಬಾರದು. ಈ ಪ್ರಕಾರವಾಗಿಯೇ ಚರ್ಮದ ಪಾತ್ರೆಯಲ್ಲಿ ನೀರನ್ನಾಗಲೀ ಅಥವಾ ಎಣ್ಣೆಯನ್ನಾಗಲೀ ಹಿಡಿಯಬಾರದು, ಅನ್ಯಥಾ ನರಕಪ್ರಾಪ್ತವಾಗುತ್ತದೆ.

ಷಡಧ್ವಶುದ್ಧಿಪೂರ್ವಕವಾಗಿ ಶಿವದೀಕ್ಷಾಸಂಪನ್ನರಾದ ವೀರಶೈವ ಸ್ತ್ರೀ-ಪುರುಷ ಭಕ್ತರ ಇಷ್ಟಲಿಂಗಪೂಜೆಗೆ ಜನನ-ಮರಣ-ರಜಸ್ವಲೆ ಇತ್ಯಾದಿ ಸೂತಕಗಳು ಪ್ರತಿಬಂಧಕಗಳಾಗುವುದಿಲ್ಲ. ಆದುದರಿಂದ ಸೂತಕವಿದ್ದರೂ ಸಹ ನಿತ್ಯಕರ್ಮಗಳಿಗೆ ಲೋಪ ಮಾಡಬಾರದು. ಶಿವೋಪಾಸಕನಾದ ಆತನು ನೈಮಿತ್ತಿಕ ಪ್ರಸಂಗಗಳಲ್ಲಿ ಶಿವಕ್ಷೇತ್ರಗಳಿಗೆ ಯಾತ್ರೆಯನ್ನು ಮಾಡಬೇಕು. ಹಾಗೆಯೇ ಯಾತ್ರೆಯ ಸಂದರ್ಭಗಳಲ್ಲಿ ಯಾತ್ರಾರ್ಥಿಗಳಿಗೆ ಸ್ವಶಕ್ತ್ಯಾನುಸಾರ ಮಾರ್ಗದಲ್ಲಿ ಅನ್ನ-ನೀರು ಮೊದಲಾದವುಗಳನ್ನು ದಾನಮಾಡಬೇಕು. ಏಕೆಂದರೆ ಎಲ್ಲ ಬಗೆಯ ದಾನಗಳಲ್ಲಿ ಅನ್ನ-ನೀರಿನ ದಾನವು ಸರ್ವೋತ್ಕೃಷ್ಟವಾದುದೆಂದು ಹೇಳಲಾಗಿದೆ. ಅದನ್ನು ಸಿದ್ಧಾಂತ ಶಿಖಾಮಣಿಯು ಹೀಗೆ ನಿರೂಪಿಸಿದೆ-

> ನಾನ್ನತೋಯಸಮಂ ದಾನಂ ನ ಚಾಹಿಂಸಾಪರಂ ತಪಃ।
> ತಸ್ಮಾನ್ಮಾಹೇಶ್ವರೋ ನಿತ್ಯಮನ್ನತೋಯಪ್ರದೋ ಭವೇತ್॥[೫೮]

"ಅನ್ನದಾನ-ಜಲದಾನಗಳಿಗೆ ಸಮಾನವಾದ ದಾನವಾವುದೂ ಇಲ್ಲ; ಅಹಿಂಸೆಗಿಂತಲೂ ಶ್ರೇಷ್ಠವಾದ ತಪಸ್ಸು ಇಲ್ಲ. ಆದುದರಿಂದ ಶಿವಭಕ್ತರು ಪ್ರತಿದಿನವೂ ಅನ್ನೋದಕಗಳನ್ನು ದಾನಮಾಡಬೇಕು."

ಇದೇ ಪ್ರಕಾರವಾಗಿ ಕನ್ಯೆಯನ್ನು ಕೊಡುವ ಮತ್ತು ತರುವ ಸಂದರ್ಭದಲ್ಲಿಯೂ ಕೂಡ ಶಿವಭಕ್ತರು ಸ್ವಧರ್ಮಾಚಾರಶೀಲರಾದ ಸ್ವಜಾತಿಯ ಶಿವಭಕ್ತರಿಗೇ ಕೊಡಬೇಕು ಮತ್ತು ತರಬೇಕು.[೫೯] ಈ ಎಲ್ಲವೂ ಭಕ್ತಮಾರ್ಗಕ್ರಿಯಾಸ್ಥಲವೆಂದು ಕರೆಯಲಾಗಿದೆ.[೬೦]

ಹೀಗೆ ಲೋಕಮರ್ಯಾದೆಯಿಂದ ವ್ಯವಹರಿಸುತ್ತಾ, ಪೂಜನೀಯರಾದ ಗುರು-ಲಿಂಗ-ಜಂಗಮರ ವಿಷಯದಲ್ಲಿ ಅತಿಶಯವಾದ ಶ್ರದ್ಧೆಯಿಂದ ನಡೆದುಕೊಳ್ಳುತ್ತಾ, ಅವರ ಪೂಜಾಫಲರೂಪವಾದ ಪಾದೋದಕ-ಪ್ರಸಾದಗಳನ್ನು ಪ್ರತಿನಿತ್ಯವೂ ಸ್ವೀಕರಿಸಬೇಕು.[೬೧] ಈ ರೀತಿಯಾಗಿ ವರ್ತಿಸುವುದರಿಂದ ಶಿವಭಕ್ತನು ತನ್ನ ಮಾನಸಿಕ

---

[೫೮] ಸಿ.ಶಿ, ೯.೪೮

[೫೯] ಸಿ.ಶಿ, ೯.೪೯

[೬೦] ಸಿ.ಶಿ, ೯, ೧-೪೯

[೬೧] ತಸ್ಮಾದ್ಗುರುಂ ಮಹಾದೇವಂ ಶಿವಯೋಗಿನಮೇವ ಚ।
ಪೂಜಯೇತ್ತತ್ಪ್ರಸಾದಾನ್ನಂ ಭುಂಜೀತ ಪ್ರತಿವಾಸರಮ್॥ -ಸಿ.ಶಿ, ೯.೭೮

ನೈರ್ಮಲ್ಯ ವನ್ನು ಪಡೆಯುತ್ತಾನೆ. ಈ ಬಗೆಯ ವಿಶುದ್ಧ ಆಚರಣೆಯಿಂದ ಆಂತರಿಕ ನೈರ್ಮಲ್ಯವನ್ನು ಪಡೆದ ಶಿವಭಕ್ತನು ಫಲಾಪೇಕ್ಷಿತವಾದ ಸೋಪಾಧಿಕ ದಾನದಿಂದ, ಫಲಾಪೇಕ್ಷೆಯಿಲ್ಲದ ನಿರುಪಾಧಿಕ ದಾನದಿಂದ ಮತ್ತು ಆದಾತೃ-ದಾತೃ-ದೇಯಗಳೆಂಬ ತ್ರಿಪುಟೀ ಭೇದವಿಲ್ಲದೆ ಸಂಪಾದಿಸುವ ಸಹಜದಾನದಿಂದ ಶಿವಯೋಗಿಗಳನ್ನು ಯಾವಾಗಲೂ ಸಂತೋಷಪಡಿಸಬೇಕು. ಶಿವಯೋಗಿಗಳು ಶಿವಸ್ವರೂಪಿಗಳಾದ್ದರಿಂದ ಅವರನ್ನು ಸಂತೋಷಪಡಿಸುವುದರಿಂದ ಶಿವನ ಸಂತೃಪ್ತಿ ಮತ್ತು ಶಿವನು ತೃಪ್ತನಾಗುವುದರಿಂದ ಸಮಸ್ತ ಚರಾಚರಗಳೂ ಸಹ ತೃಪ್ತವಾಗುತ್ತವೆ.[೬೨]

ಹೀಗೆ ಇಲ್ಲಿಯವರೆಗೆ ಪ್ರತಿಪಾದಿಸಿದ ಎಲ್ಲ ನಿಯಮಗಳನ್ನೂ ಸಹ ಶ್ರದ್ಧೆಯಿಂದ ಪಾಲಿಸುವ ಸಾಧಕನೇ ವೀರಶೈವ ಷಟ್‌ಸ್ಥಲಸಿದ್ಧಾಂತದಲ್ಲಿ 'ಭಕ್ತ' ಎಂದು ಕರೆಸಿಕೊಂಡಿದ್ದಾನೆ. ಲಿಂಗಾಂಗಸಾಮರಸ್ಯವೆಂಬ ಮುಕ್ತಿಮಾರ್ಗದಲ್ಲಿ ಪ್ರವೃತ್ತನಾದ ಭಕ್ತನಿಗೆ ಇದು ಪ್ರಥಮ ಸೋಪಾನ. ಈ ಸಾಧಕನ ಪ್ರಥಮ ಸೋಪಾನಾರೋಹಣದಲ್ಲಿ ಶ್ರದ್ಧಾಭಕ್ತಿಯೇ ಸಹಾಯಕವೆಂದು ತಿಳಿಯಬೇಕು. ಆದುದರಿಂದ ಶ್ರದ್ಧಾಭಕ್ತಿಯುಕ್ತನಾದ ಸಾಧಕನೇ 'ಭಕ್ತ' ಎಂದು ಸಂಕ್ಷಿಪ್ತವಾಗಿ ಹೇಳಲು ಸಾಧ್ಯ. ಅದನ್ನು ಮಾಯಿದೇವನು ಹೀಗೆ ನಿರೂಪಿಸಿದ್ದಾನೆ-

> ಅಸ್ಯಾಃ ಸ್ವರೂಪಸದ್ಭಾವಾತ್ ಸದ್ಭಕ್ತಿರಿತಿ ಕೀರ್ತಿತಾ।
> ತದ್ಭಕ್ತ್ಯೈವ ತಥಾ ಚಾಸ್ಯ ಭಕ್ತಸ್ಥಲಮುಪಾಗತಮ್॥[೬೩]

"ಇಂತಹ ಭಕ್ತಿಯ ಸ್ವರೂಪವು ಸತ್ಯವಾದ್ದರಿಂದ (ಭಕ್ತಿಯು) ಸದ್ಭಕ್ತಿ ಎನಿಸಿದೆ. ಆ ಸದ್ಭಕ್ತಿಯ ಸಂಬಂಧದಿಂದ ಜೀವಾತ್ಮನಿಗೆ ಭಕ್ತಸ್ಥಲವು ಪ್ರಾಪ್ತವಾಗುತ್ತದೆ."

೨. ಮಾಹೇಶ್ವರಸ್ಥಲ ಮತ್ತು ಮಾಹೇಶ್ವರ

ಮಾಹೇಶ್ವರಸ್ಥಲವು ಷಟ್‌ಸ್ಥಲಸೋಪಾನದ ಎರಡನೆಯ ಸೋಪಾನ. ಭಕ್ತಸ್ಥಲದಲ್ಲಿ ಭಕ್ತ ಎಂದು ಕರೆಯಲ್ಪಡುವ ಸಾಧಕನಿಗೆ ತನ್ನ ಇಷ್ಟಲಿಂಗಾದಿಗಳಲ್ಲಿರುವ ಶ್ರದ್ಧೆಯು ಸಲಿಲಮುಕ್ತಾ (ನೀರು ಮತ್ತು ಮುತ್ತಿನ) ನ್ಯಾಯದಂತೆ ಅರ್ಥಾತ್ ಸ್ವಾತಿಮಳೆಯ ನೀರು ಸಾಗರದಲ್ಲಿರುವ ಚಿಪ್ಪಿನಲ್ಲಿ ಬಿದ್ದಾಗ ಅದು ಘನೀಭೂತವಾಗಿ ಹೇಗೆ ಮುತ್ತಾಗುತ್ತದೆಯೋ ಹಾಗೆಯೇ ಶ್ರದ್ಧಾಭಕ್ತಿಯು ದೃಢೀಭೂತವಾಗಿ ಯಾವಾಗ ನಿಷ್ಠಾರೂಪವನ್ನು ಪಡೆಯುತ್ತದೆಯೋ ಆಗ ಆ ಭಕ್ತನೇ 'ಮಾಹೇಶ್ವರ' ಎಂದು ಕರೆಯಲ್ಪಡುತ್ತಾನೆ. ಈ ಸಾಧಕನು ಭಕ್ತಿಯ ಸಮುತ್ಕರ್ಷ ಮತ್ತು ದೃಢವೈರಾಗ್ಯದಿಂದ ಮಹೇಶ್ವರ(ಶಿವ)ನಲ್ಲಿ ಹೆಚ್ಚು ನಿಷ್ಠಾಸಂಪನ್ನನಾಗುತ್ತಾನಾದ್ದರಿಂದ ಮಾಹೇಶ್ವರ ಎಂದು

---

೬೨. ಶಿವಯೋಗಿನಿ ಸಂತೃಪ್ತೇ ತೃಪ್ತೋ ಭವತಿ ಶಂಕರಃ।
ತತ್ತೃಪ್ತ್ಯಾ ತನ್ಮಯಂ ವಿಶ್ವಂ ತೃಪ್ತಿಮೇತಿ ಚರಾಚರಮ್॥ -ಸಿ.ಶಿ, ೯.೯೧

೬೩. ಅನುಭವಸೂತ್ರ, ೫.೭೧

೬೪. ಭಕ್ತೇರ್ಯದಾ ಸಮುತ್ಕರ್ಷೋ ಭವೇದ್ ವೈರಾಗ್ಯಗೌರವಾತ್।
ತದಾ ಮಾಹೇಶ್ವರಃ ಪ್ರೋಕ್ತೋ ಭಕ್ತಃ ಸ್ಥಿರವಿವೇಕವಾನ್॥ -ಸಿ.ಶಿ, ೧೦.೩

ಕರೆಯಲ್ಪಡುತ್ತಾನೆ.[೬೪] ಬ್ರಹ್ಮಾದಿ ಇತರ ದೇವತೆಗಳಿಗಿಂತಲೂ ಮಹೇಶ್ವರನೇ ಹೆಚ್ಚು ಶ್ರೇಷ್ಠ ಹಾಗೂ ಅವನೇ ಮೋಕ್ಷದಾಯಕ ಎಂದು ಮಾಹೇಶ್ವರನು ನಿಷ್ಠಾವಂತನಾಗುತ್ತಾನೆ. ಅದನ್ನು ಸಿದ್ಧಾಂತ ಶಿಖಾಮಣಿಯು ಹೀಗೆ ನಿರೂಪಿಸುತ್ತದೆ-

ವಿಶ್ವಸ್ಮಾದಧಿಕೋ ರುದ್ರೋ ವಿಶ್ವಾನುಗ್ರಹಕಾರಕಃ।
ಇತಿ ಯಸ್ಯ ಸ್ಥಿರಾ ಬುದ್ಧಿಃ ಸ ವೈ ಮಾಹೇಶ್ವರಃ ಸ್ಮೃತಃ॥
ಈಶ್ವರಃ ಸರ್ವಭೂತಾನಾಂ ಬ್ರಹ್ಮಾದೀನಾಂ ಮಹಾನಿತಿ।
ಬುದ್ಧಿಯೋಗಾತ್ ತದಾಸಕ್ತೋ ಭಕ್ತೋ ಮಾಹೇಶ್ವರಃ ಸ್ಮೃತಃ॥
ಅನಾದಿಮುಕ್ತೋ ಭಗವಾನೇಕ ಏವ ಮಹೇಶ್ವರಃ।
ಮುಕ್ತಿದಶ್ಚೇತಿ ಯೋ ವೇದ ಸ ವೈ ಮಾಹೇಶ್ವರಃ ಸ್ಮೃತಃ॥[೬೫]

"ಶಿವನು ಸಮಸ್ತ ಪ್ರಪಂಚಕ್ಕಿಂತಲೂ ಅಧಿಕನೂ, ಸಮಸ್ತ ಪ್ರಪಂಚಕ್ಕೆ ಅನುಗ್ರಹವನ್ನುಂಟು ಮಾಡುವವನೂ ಆಗಿದ್ದಾನೆಂಬ ಸ್ಥಿರಬುದ್ಧಿಯು ಯಾವನಲ್ಲಿರುವುದೋ, ಅವನು ಮಾಹೇಶ್ವರನೆನಿಸುವನು. ಸಮಸ್ತ ಪ್ರಾಣಿಗಳಿಗೂ ಬ್ರಹ್ಮಾದಿದೇವತೆಗಳಿಗೂ ಶಿವನು ಸ್ವಾಮಿಯಾಗಿದ್ದಾನೆಂಬ ಬುದ್ಧಿಯೋಗದಿಂದ ಆ ಶಿವನಲ್ಲಿ ಆಸಕ್ತನಾದವನು ಮಾಹೇಶ್ವರ ನೆನಿಸುವನು. ಅನಾದಿ ಮುಕ್ತನಾದ ಭಗವಾನ್ ಮಹೇಶ್ವರನೊಬ್ಬನೇ ಮುಕ್ತಿಯನ್ನು ಅನುಗ್ರಹಿಸುವುದರಲ್ಲಿ ಸಮರ್ಥನೆಂದು ಯಾವನು ತಿಳಿಯುತ್ತಾನೆಯೋ, ಅವನೇ ಮಾಹೇಶ್ವರನೆನಿಸುವನು."

ಷಟ್‌ಸ್ಥಲದ ಎರಡನೆಯ ಸೋಪಾನಭೂತವಾದ ಈ ಮಾಹೇಶ್ವರಸ್ಥಲದಲ್ಲಿ ಮಾಹೇಶ್ವರಪ್ರಶಂಸಾಸ್ಥಲ, ಲಿಂಗನಿಷ್ಠಾಸ್ಥಲ, ಪೂರ್ವಾಶ್ರಯನಿರಸನಸ್ಥಲ, ಅದ್ವೈತ ನಿರಸನಸ್ಥಲ, ಆಹ್ವಾನನಿರಸನಸ್ಥಲ, ಅಷ್ಟಮೂರ್ತಿನಿರಸನಸ್ಥಲ, ಸರ್ವಗತ್ವನಿರಸನಸ್ಥಲ, ಶಿವಜಗನ್ಮಯಸ್ಥಲ ಮತ್ತು ಭಕ್ತದೇಹಿಕಲಿಂಗಸ್ಥಲಗಳೆಂಬ ಒಂಬತ್ತು ಅವಾಂತರ ಸ್ಥಲಗಳಿವೆ.[೬೬] ಈ ಒಂಬತ್ತು ಸ್ಥಲಗಳಲ್ಲಿ ಮಾಹೇಶ್ವರನ ಅನುಷ್ಠೇಯ ಧರ್ಮಗಳು ನಿರೂಪಿತವಾಗಿವೆ. ಅವುಗಳನ್ನು ನಿಷ್ಠೆಯಿಂದ ಆಚರಿಸುವುದರಿಂದಲೇ ಭಕ್ತನು ಮಾಹೇಶ್ವರನ ಸ್ಥಿತಿಯನ್ನು ಪಡೆಯುತ್ತಾನೆ.

ಭಕ್ತಸ್ಥಲದಲ್ಲಿನ ತ್ರಿವಿಧ ದಾನಗಳಲ್ಲಿ ಒಂದಾದ ಸಹಜದಾನದಲ್ಲಿ ಮಾತ್ರ ನಿಷ್ಣಾತನಾದ ಭಕ್ತನೇ ಮಾಹೇಶ್ವರನಾಗುತ್ತಾನೆ.[೬೭] ನಿರ್ಮಲಾಂತಃಕರಣನಾದುದರಿಂದ ನಿತ್ಯಾನಿತ್ಯ ವಸ್ತುವಿವೇಕಿಯಾದ ಸಾಧಕನು ಇಲ್ಲಿ ಅರ್ಥಫಲಭೋಗಗಳ ವಿಷಯದಲ್ಲಿ

---

[೬೫] ಸಿ.ಶಿ, ೧೦.೮, ೧೦, ೧೨

[೬೬] ಸಿ.ಶಿ, ೧೦.೪-೬

[೬೭] ಕೇವಲೇ ಸಹಜೇ ದಾನೇ ನಿಷ್ಣಾತಃ ಶಿವತತ್ಪರಃ।
ಬ್ರಹ್ಮಾದಿಸ್ಥಾನವಿಮುಖೋ ಭಕ್ತೋ ಮಾಹೇಶ್ವರಃ ಸ್ಮೃತಃ॥ -ಸಿ.ಶಿ, ೧೦.೨

ವಿರಕ್ತನಾಗುತ್ತಾನೆ. ಇಂತಹ ದೃಢವಾದ ವೈರಾಗ್ಯಯುಕ್ತನಾಗಿರುವುದರಿಂದ ವೀರಮಾಹೇಶ್ವರನೆನಿಸುತ್ತಾನೆ.[೧೮]

ಈ ವೀರಮಾಹೇಶ್ವರನು ಪರಸ್ತ್ರೀ ಸಂಗ ಬಿಟ್ಟವನೂ, ಪರದ್ರವ್ಯ ಪರಾಙ್ಮುಖನೂ, ಶಿವಾಗಮ ಪರಾಯಣನೂ, ಶಿವಸ್ತೋತ್ರಗಳಿಂದುಂಟಾದ ಆನಂದರಸ ಸ್ವೀಕಾರದಿಂದ ಸಂತುಷ್ಟವಾದ ಮನಸ್ಸುಳ್ಳವನೂ, ನಿರ್ಮಲನೂ, ಅಹಂಕಾರ-ಮಮಕಾರಗಳಿಂದ ದೂರನಾದವನೂ, ಪಂಚಕ್ಲೇಶರೂಪ ಪಂಜರವನ್ನು ಮುರಿದವನೂ, ಮದದಿಂದ ಅಸ್ಪೃಷ್ಟನಾದವನೂ, ಮಾತ್ಸರ್ಯವನ್ನು ಬಿಟ್ಟವನೂ, ಕಾಮೋದ್ರೇಕವನ್ನು ನಿರಸನಗೊಳಿಸಿದವನೂ, ಕ್ರೋಧಬಾಧೆಯನ್ನು ನಿವಾರಿಸಿದವನೂ, ಯಾವಾಗಲೂ ಸಂತೋಷದಿಂದ ಕೂಡಿದ ಮನಸ್ಸುಳ್ಳವನೂ, ಸಮಸ್ತ ಪ್ರಾಣಿಗಳಿಗೆ ಹಿತವನ್ನುಂಟುಮಾಡುವುದರಲ್ಲಿ ಆಸಕ್ತನಾದವನೂ, ಶಿವೈಕನಿಷ್ಠನೂ ಆಗಿರುತ್ತಾನೆಂದು ವೀರಮಾಹೇಶ್ವರನ ಗುಣಗಳನ್ನು ತೋರಿಸಲಾಗಿದೆ.[೧೯] ಇದೇ ಮಾಹೇಶ್ವರಪ್ರಶಂಸಾಸ್ಥಲ.

ಭವೇತ್ ಪ್ರಾಣಪರಿತ್ಯಾಗಶ್ಛೇದನಂ ಶಿರಸೋಽಪಿ ವಾ।
ನ ತ್ವನಭ್ಯರ್ಚ್ಯ ಭುಂಜೀಯಾದ್ ಭಗವಂತಂ ತ್ರಿಯಂಬಕಮ್॥
ಅಪಗಚ್ಛತು ಸರ್ವಸ್ವಂ ಶಿರಚ್ಛೇದನಮಸ್ತು ವಾ।
ಮಾಹೇಶ್ವರೋ ನ ಮುಂಚೇತ ಲಿಂಗಪೂಜಾಮಹಾವ್ರತಮ್॥[೨೦]

“ಪ್ರಾಣವೇ ಹೋಗಲಿ ಅಥವಾ ಶಿರಚ್ಛೇದನವೇ ಆಗಲಿ ಮಾಹೇಶ್ವರನು ಭಗವಾನ್ ತ್ರ್ಯಂಬಕನನ್ನು ಪೂಜಿಸದೆ ಊಟ ಮಾಡಬಾರದು. ತನ್ನ ಸಂಪತ್ತೆಲ್ಲಾ ಹೋಗಲಿ ಅಥವಾ ಶಿರಶ್ಛೇದನವೇ ಆಗಲಿ, ಮಾಹೇಶ್ವರನು ಲಿಂಗಪೂಜಾ ಮಹಾವ್ರತವನ್ನು ಬಿಡಬಾರದು” -ಎಂಬ ಶಿವಧರ್ಮ ಮತ್ತು ಸಿದ್ಧಾಂತ ಶಿಖಾಮಣಿಗಳ ಉಕ್ತಿಯಂತೆ ಮಾಹೇಶ್ವರನು ತನ್ನ ಇಷ್ಟಲಿಂಗದಲ್ಲಿ ಅತ್ಯಂತ ನಿಷ್ಠೆಯಿಂದಿರುತ್ತಾನೆ. ಪ್ರಾಣಾಪಾಯವು ಒದಗಿಬಂದರೂ ಸಹ ಇಷ್ಟಲಿಂಗಪೂಜಾರೂಪವಾದ ನಿತ್ಯಕರ್ಮವನ್ನು ಒಮ್ಮೆಯೂ ಅವನು ಬಿಡುವುದಿಲ್ಲ. ಶಿವಲಿಂಗಾರ್ಚನಾತ್ಮಕವಾದ ಈ ಧರ್ಮವು ಸಾಕ್ಷಾತ್ ಮೋಕ್ಷವನ್ನು ನೀಡುವಂತಹದ್ದೆಂದು ದೃಢಭಾವನೆಯುಳ್ಳವನಾದ ಅವನು ಕೆಟ್ಟ ಫಲಗಳನ್ನು ನೀಡುವಂತಹ ಧರ್ಮವಿರೋಧಿಯಾದ ಕರ್ಮಗಳಿಂದ ವಿಮುಖನಾಗುತ್ತಾನೆ. ಆದುದರಿಂದ ಅವನು ಹಸ್ತದಲ್ಲಿ ಇಷ್ಟಲಿಂಗವನ್ನಿಟ್ಟು

---

[೧೮] ಕ್ಷಯಾತಿಶಯಸಂಯುಕ್ತಾ ಬ್ರಹ್ಮವಿಷ್ಣ್ವಾದಿಸಂಪದಃ।
ತೃಣವನ್ಮನ್ಯತೇ ಯುಕ್ತ್ಯಾ ವೀರಮಾಹೇಶ್ವರಃ ಸದಾ॥
ಶಬ್ದಸ್ಪರ್ಶಾದಿಸಂಪನ್ನೇ ಸುಖಲೇಶೇ ತು ನಿಸ್ಪೃಹಃ।
ಶಿವಾನಂದೇ ಸಮುತ್ಕಂಠೋ ವೀರಮಾಹೇಶ್ವರೋ ಭವೇತ್॥
-ಸಿ.ಶಿ, ೧೦.೧೩-೧೪

[೧೯] ಸಿ.ಶಿ, ೧೦.೧೫-೨೦

[೨೦] ಸಿ.ಶಿ, ೧೦.೨

ಪೂಜಿಸುವುದರಲ್ಲಿ ಆಸಕ್ತನೂ, ವಾಕ್‌ನಲ್ಲಿ ಲಿಂಗಸ್ತುತಿಪರನೂ ಮತ್ತು ಮನಸ್ಸಿನಲ್ಲಿ ಯಾವಾಗಲೂ ಲಿಂಗಾನುಸಂಧಾನಪರನಾಗಿರುತ್ತಾನೆ. ಈ ಮಾಹೇಶ್ವರನು ಸದಾ ಇಷ್ಟಲಿಂಗಕ್ಕೆ ನೈವೇದ್ಯ ಮಾಡಿದ ಪ್ರಸಾದವನ್ನು ಸ್ವೀಕರಿಸುತ್ತಾನೆಯೋ ಹೊರತು ಇತರ ದೇವತೆಗಳಿಗೆ ನೈವೇದ್ಯ ಮಾಡಿದ ಪ್ರಸಾದವನ್ನು ಮುಟ್ಟದೆ, ತನ್ನ ದೇಹವೃತ್ತಿಯನ್ನು ನಡೆಸುತ್ತಾನೆ. ಆಗ ಅವನು “ಮಹಾಮಾಹೇಶ್ವರ”[೭೧] ಎನಿಸುವನು. ಆದುದರಿಂದ ಇಂತಹ ಆಚರಣೆಯನ್ನು ಪ್ರತಿಪಾದಿಸುವ ಇದನ್ನು ಮಾಹೇಶ್ವರನ ಲಿಂಗನಿಷ್ಠಾಸ್ಥಲವೆಂದು ಕರೆಯಲಾಗಿದೆ.[೭೨]

ಈ ಪ್ರಕಾರ ಶಿವಲಿಂಗನಿಷ್ಠೈಕಚಿತ್ತನಾದ ಮಾಹೇಶ್ವರನು-

ಗುರುಸಂಸ್ಕೃತಭಾವಃ ಸನ್ ಗುರುನಿರ್ಮಿತ ದೇಹವಾನ್।
ವಿಸ್ಮೃತ್ಯಪೂರ್ವದುರ್ಭಾವಂ ತದಧೀನಃ ಸಮಾಚರೇತ್॥[೭೩]

ಎಂಬ ಯೋಗಜಾಗಮದ ಉಕ್ತಿಯಂತೆ ತನ್ನ ಆಚಾರಗಳಿಗೆ ಅಡ್ಡಿಯಾಗಿರುವ ಪೂರ್ವಾಶ್ರಮನಿಷ್ಠವಾದ ಪ್ರಾಕೃತ ಆಚಾರಗಳನ್ನು ಅರ್ಥಾತ್ ಲಿಂಗನಿಷ್ಠೆಗೆ ಪ್ರತಿಕೂಲವಾದ ಜನನ-ಮರಣಗಳ ಅಶೌಚವನ್ನು (ಸೂತಕವನ್ನು) ಬಿಡಬೇಕು. ಇದರಿಂದ ತಿಳಿಯುವುದೇನೆಂದರೆ- ವರ್ಣಾಶ್ರಮಾದಿ ಧರ್ಮಗಳ ವ್ಯವಸ್ಥೆಯು ಎರಡು ವಿಧವೆಂದು ಇಲ್ಲಿ ಹೇಳಲಾಗಿದೆ. ಅವುಗಳಲ್ಲಿ ಒಂದು ಶಿವನಿಂದ ನಿರ್ದಿಷ್ಟವಾದುದು, ಮತ್ತೊಂದು ಬ್ರಹ್ಮನಿಂದ ಪ್ರತಿಪಾದಿತವಾದದ್ದು. ಶಿವದೀಕ್ಷಾದಿ ಸಂಸ್ಕಾರಗಳಿಂದ ಯಾರು ಶುದ್ಧರಾಗುತ್ತಾರೆಯೋ ಅವರಿಗೆ ಶಿವನಿಂದ ಉಕ್ತವಾದ ವರ್ಣಾಶ್ರಮದ ಪರಿಪಾಲನೆ, ಅವರಿಗೆ ವಿರುದ್ಧವಾದ ಪ್ರಾಕೃತ ಜನರಿಗೆ (ದೀಕ್ಷಾಸಂಸ್ಕಾರಗಳಿಂದ ಶುದ್ಧರಾಗದವರಿಗೆ) ಬ್ರಹ್ಮನಿಂದ ಉಕ್ತವಾದ ವರ್ಣಾಶ್ರಮದ ಪರಿಪಾಲನೆಯೆಂದು ನಿಯಮವಿದೆ. ವೀರಶೈವ ಸಿದ್ಧಾಂತದಲ್ಲಿ ಶಿವೋಕ್ತಧರ್ಮಗಳ ಪರಿಪಾಲನೆ ಮಾಡುವುದರಿಂದ ಇಷ್ಟಲಿಂಗದ ಪೂಜೆಗೆ ಜನನ-ಮರಣಜನ್ಯವಾದ ಸೂತಕಗಳು ಬಾಧೆಯನ್ನುಂಟುಮಾಡುವುದಿಲ್ಲ. ಆದುದರಿಂದ ಶಿವದೀಕ್ಷೆಗೆ ಮೊದಲು ಪಾಲಿಸಬೇಕಾದ ಬ್ರಹ್ಮನಿಂದ ಉಕ್ತವಾದ ಆಚರಣೆಗಳನ್ನು ಶಿವದೀಕ್ಷೆಯ ನಂತರ ಬಿಡುವುದರಿಂದ ದೋಷವೇನೂ ಬರುವುದಿಲ್ಲ; ಏಕೆಂದರೆ ಇದು ಶಿವನ ಶಾಸನ. ಅದನ್ನು ರೇಣುಕಾಚಾರ್ಯರು ಹೀಗೆ ನಿರೂಪಿಸಿದ್ದಾರೆ-

ಶಿವಸಂಸ್ಕಾರಯೋಗೇನ ವಿಶುದ್ಧಾನಾಂ ಮಹಾತ್ಮನಾಮ್।
ಕಿಂ ಪೂರ್ವಕಾಲಿಕೈರ್ಧರ್ಮೈಃ ಪ್ರಾಕೃತಾನಾಂ ಹಿ ತೇ ಮತಾಃ॥[೭೪]

---

೭೧. ಅರ್ಪಿತೇನಾನ್ನಪಾನೇನ ಲಿಂಗೇ ನಿಯಮಪೂಜಿತೇ।
ಯೇ ದೇಹವೃತ್ತಿಂ ಕುರ್ವಂತಿ ಮಹಾಮಾಹೇಶ್ವರಾ ಹಿ ತೇ॥ -ಸಿ.ಶಿ, ೧೦.೨೫

೭೨. ಸಿ.ಶಿ, ೧೦.೨೧-೨೯

೭೩. ಸಿ.ಶಿ, ೧೦.೧ ಅವತರಣಿಕಾ, ಪು. ೧೭೫, ಸೋಲಾಪುರ ಪ್ರಕಾಶನಮ್, ೧೯೦೫

೭೪. ಸಿ.ಶಿ, ೧೦.೩೨

"ಶಿವಸಂಸ್ಕಾರದಿಂದ ಪರಿಶುದ್ಧರಾದ ಮಹಾತ್ಮರಿಗೆ ಪೂರ್ವಜಾತಿ ಸಂಬಂಧಿಗಳಾದ ಧರ್ಮಗಳಿಂದ ಏನು ಪ್ರಯೋಜನ? ಆ ಧರ್ಮಗಳು ಅಲಿಂಗಿಗಳಾದ ಪ್ರಾಕೃತರಿಗೆ ಹೇಳಲ್ಪಟ್ಟಿವೆ."

ಈ ರೀತಿಯಾದ ಶಿವಶಾಸನ ಮತ್ತು ಗುರುವಿನ ಆಜ್ಞೆಯಿಂದ ಮಾಹೇಶ್ವರನು ಪೂರ್ವಜಾತಿಸಂಬಂಧಿಗಳಾದ ಧರ್ಮಗಳನ್ನು ತ್ಯಜಿಸುತ್ತಾನೆಂದು ನಿರೂಪಿಸುವುದರಿಂದ ಅವನು ಪೂರ್ವಾಶ್ರಮನಿರಾಸಕನೆಂದು ಕರೆಯಲ್ಪಡುತ್ತಾನೆ. ಇದೇ ಅವನ ಪೂರ್ವಾಶ್ರಯನಿರಸನಸ್ಥಲ.[೭೫]

ಲಿಂಗನಿಷ್ಠೆಗೆ ವಿರೋಧವು ಬರುವುದರಿಂದ ಮಾಹೇಶ್ವರನು ಹೇಗೆ ಪೂರ್ವಾಶ್ರಯ ನಿರಾಸಕನಾಗುತ್ತಾನೆಯೋ ಹಾಗೆಯೇ ಸರ್ವಾದ್ವೈತನಿರಾಸಕನೂ ಸಹ ಆಗುತ್ತಾನೆ. ಮಾಹೇಶ್ವರನ ಸ್ಥಿತಿಯು ಕ್ರಿಯಾಪ್ರಧಾನವಾದುದು. ಪೂಜ್ಯವಾದ ಶಿವಲಿಂಗಕ್ಕೂ ಪೂಜಕನಾದ ಭಕ್ತನಿಗೂ ಭೇದವಿಲ್ಲದಿದ್ದರೆ ಪೂಜಾಕರ್ಮಾದಿಗಳಿಗೆ ಸ್ವರೂಪ ನಿಷ್ಪತ್ತಿಯೇ ಇರುವುದಿಲ್ಲ. ಆದುದರಿಂದ ಶಿವಲಿಂಗಪೂಜಾದಿಕರ್ಮನಿಷ್ಠನಾದ ಮಾಹೇಶ್ವರನು- "ಯಾವದಾಯುಸ್ತ್ರಯೋ ವಂದ್ಯಾ ವೇದಾಂತೋ ಗುರುರೀಶ್ವರಃ" (ಆಜೀವಪರ್ಯಂತ ವೇದಾಂತ, ಗುರು ಮತ್ತು ಈಶ್ವರ ಈ ಮೂವರನ್ನು ವಂದಿಸಬೇಕು) ಎಂಬ ವೇದಾಂತೋಕ್ತಿಯಂತೆ "ಕ್ರಿಯಾದ್ವೈತಂ ನ ಕರ್ತವ್ಯಮ್" (ಕ್ರಿಯೆಯಲ್ಲಿ ಅದ್ವೈತವನ್ನು ಮಾಡಬಾರದು) ಎಂಬ ಪ್ರಮಾಣದಂತೆ ಸರ್ವಾದ್ವೈತನಿರಾಸಕನಾಗುತ್ತಾನೆ. ಅದನ್ನು ಶ್ರೀ ರೇಣುಕ ಭಗವತ್ಪಾದರು ಹೀಗೆ ನಿರೂಪಿಸಿದ್ದಾರೆ-

> ಪೂಜ್ಯಪೂಜಕಯೋರ್ಲಿಂಗಜೀವಯೋರ್ಭೇದವರ್ಜನೇ।
> ಪೂಜಾಕರ್ಮಾದ್ಯಸಂಪತ್ತೇರ್ಲಿಂಗನಿಷ್ಠಾ ವಿರೋಧತಃ॥
> ಸರ್ವಾದ್ವೈತವಿಚಾರಸ್ಯ ಜ್ಞಾನಾಭಾವೇ ವ್ಯವಸ್ಥಿತೇಃ।
> ಭವೇನ್ಮಾಹೇಶ್ವರಃ ಕರ್ಮೀ ಸರ್ವಾದ್ವೈತನಿರಾಸಕಃ॥[೭೬]

"ಪೂಜ್ಯವಾದ ಶಿವಲಿಂಗಕ್ಕೂ, ಪೂಜಕನಾದ ಭಕ್ತನಿಗೂ ಭೇದವಿಲ್ಲವೆಂದು ಹೇಳಿದರೆ, ಲಿಂಗನಿಷ್ಠೆಗೆ ವಿರೋಧವು ಬರುವುದರಿಂದಲೂ, ಪೂಜಾಕರ್ಮಾದಿಗಳಿಗೆ ಸ್ವರೂಪ ನಿಷ್ಪತ್ತಿಯೇ ಇಲ್ಲವಾಗುವುದರಿಂದಲೂ, ಸರ್ವಾದ್ವೈತವಿಚಾರಜ್ಞಾನದ ಅಭಾವವೇ ವ್ಯವಸ್ಥಿತವಾಗುವುದು. ಆದುದರಿಂದ ಶಿವಲಿಂಗಪೂಜಾದಿಕರ್ಮಗಳನ್ನು ಆಚರಿಸುವ ಮಾಹೇಶ್ವರನು ಸರ್ವಾದ್ವೈತನಿರಾಸಕನೇ ಆಗಬೇಕು."

ಈ ಮಾಹೇಶ್ವರನು ಪರಮಾತ್ಮನನ್ನು ಪತಿ ಎಂದೂ ಮತ್ತು ತನ್ನನ್ನು ಪರಮಾತ್ಮನ ಪಶುವೆಂದೂ ಅರ್ಥಾತ್ ಸೇವಕನೆಂದು ತಿಳಿದು ಸ್ವಾಮಿ-ಭೃತ್ಯಭಾವದಿಂದಲೂ ಮತ್ತು

---

[೭೫] ಸಿ.ಶಿ, ೧೦.೩೦-೩೬

[೭೬] ಸಿ.ಶಿ, ೧೦.೩೭-೩೮

ಪ್ರೇರ್ಯ-ಪ್ರೇರಕಭಾವದಿಂದ ತನ್ನ ಇಷ್ಟಲಿಂಗವನ್ನು ಪೂಜಿಸುತ್ತಾನೆ.[೭೭] ಈ ಭಾವವು ಭೇದವಿಲ್ಲದೆ ಸಂಭವಿಸುವುದಿಲ್ಲ. ಆದುದರಿಂದ ಮಾಹೇಶ್ವರಾವಸ್ಥೆಯು ಭೇದಬುದ್ಧಿ ಪ್ರಧಾನವಾಗಿದೆ. ಇದೇ ಅವನ ಸರ್ವಾದ್ವೈತನಿರಸನಸ್ಥಲವೆನಿಸುತ್ತದೆ.[೭೮]

ಲಿಂಗನಿಷ್ಠೆಗೆ ವಿರುದ್ಧವಾಗಿರುವುದರಿಂದಲೇ ಮಾಹೇಶ್ವರನು ಆಹ್ವಾನನಿರಾಸಕನೂ ಆಗುತ್ತಾನೆ. ಇದು ಅದರ ರಹಸ್ಯವು- ಮಣ್ಣು, ಕಲ್ಲು ಮೊದಲಾದವುಗಳಿಂದ ನಿರ್ಮಿತವಾದ ದೇವತಾವಿಗ್ರಹಗಳಲ್ಲಿ ಮಂತ್ರಾದಿಗಳಿಂದ ಆಯಾ ವಿಗ್ರಹಗಳಲ್ಲಿ ಆಯಾ ದೇವತೆಗಳನ್ನು ಪೂಜಾರ್ಥವಾಗಿ ಆವಾಹಿಸುತ್ತಾರೆ ಮತ್ತು ಪೂಜಾನಂತರ ವಿಸರ್ಜಿಸುತ್ತಾರೆ. ವೀರಶೈವ ಸಿದ್ಧಾಂತದಲ್ಲಿ ದೀಕ್ಷಾಕಾಲದಲ್ಲಿ ಸದ್ಗುರುವಿನಿಂದ ಸಂಸ್ಕರಿಸಿ ನೀಡಿದ ಶಿವಲಿಂಗದಲ್ಲಿ ಶಿವಸಾನ್ನಿಧ್ಯವು ಸಾರ್ವಕಾಲೀಕವಾಗಿರುತ್ತದೆ. ಆದುದರಿಂದ ಇಲ್ಲಿ ಪ್ರತಿದಿನವೂ ಶಿವನ ಆವಾಹನೆಯನ್ನಾಗಲೀ ಅಥವಾ ವಿಸರ್ಜನೆಯನ್ನಾಗಲೀ ಮಾಡುವುದಿಲ್ಲ. ಅದನ್ನು ಶ್ರೀ ರೇಣುಕ ಭಗವತ್ಪಾದರು ಹೀಗೆ ನಿರೂಪಿಸಿದ್ದಾರೆ-

ಯದಾ ಶಿವಕಲಾಯುಕ್ತಂ ಲಿಂಗಂ ದದ್ಯಾನ್ಮಹಾಗುರುಃ।
ತದಾರಭ್ಯ ಶಿವಸ್ತತ್ರ ತಿಷ್ಠತ್ಯಾಹ್ವಾನಮತ್ರ ಕಿಮ್॥
ನಾಹ್ವಾನಂ ನ ವಿಸರ್ಗಂ ಚ ಸ್ವೇಷ್ಟಲಿಂಗೇ ತು ಕಾರಯೇತ್।
ಲಿಂಗನಿಷ್ಠಾಪರೋ ನಿತ್ಯಮಿತಿ ಶಾಸ್ತ್ರಸ್ಯ ನಿಶ್ಚಯಃ॥[೭೯]

"ಮಹಾಗುರುವು ಶಿವಕಲಾಯುಕ್ತವಾದ ಲಿಂಗವನ್ನು ಎಂದು ಅನುಗ್ರಹಿಸುವನೋ, ಅಂದಿನಿಂದಲೂ ಶಿವನು ಆ ಲಿಂಗದಲ್ಲಿ ವಾಸಿಸುತ್ತಾನೆ. ಪುನಃ ಆ ಲಿಂಗದಲ್ಲಿ ಆಹ್ವಾನವೇಕೆ? ಲಿಂಗಪೂಜಾಸಕ್ತನು ತನ್ನ ಇಷ್ಟಲಿಂಗದಲ್ಲಿ ನಿತ್ಯವೂ ಆಹ್ವಾನವನ್ನಾಗಲೀ, ವಿಸರ್ಜನವನ್ನಾಗಲೀ ಮಾಡಬಾರದು. ಇದೇ ಶಿವಶಾಸ್ತ್ರದ ಸಿದ್ಧಾಂತವು."

ಪೂಜಾರ್ಹವಾದ ಇಷ್ಟಲಿಂಗದಲ್ಲಿ ಶಿವನು ಸದಾ ಸನ್ನಿಹಿತನಾಗಿರುತ್ತಾನೆಂಬ ಭಾವನೆಯ ಕಾರಣ ಉಪಾಸಕನ ನಿಷ್ಠೆಯು ಅದರಲ್ಲಿ ವರ್ಧಿಸುತ್ತದೆಯಾದ್ದರಿಂದ ಇಲ್ಲಿ ಆಹ್ವಾನ-ವಿಸರ್ಜನೆಗಳ ನಿರಾಸವು ಉಪದಿಷ್ಟವಾಗಿದೆ. ಆ ಉಪದೇಶಾನುಸಾರವಾಗಿ ಮಾಹೇಶ್ವರನು ಆಹ್ವಾನನಿರಾಸಕನಾಗುತ್ತಾನೆ ಅರ್ಥಾತ್ ಇಷ್ಟಲಿಂಗದಲ್ಲಿ ಸದಾ ಶಿವಸಾನ್ನಿಧ್ಯವನ್ನನುಭವಿಸುತ್ತಾನೆ. ಇದೇ ಮಾಹೇಶ್ವರನ ಆಹ್ವಾನನಿರಸನಸ್ಥಲ.

ಆಹ್ವಾನನಿರಾಸನೆಯ ನಂತರ ಮಾಹೇಶ್ವರನಿಗೆ ಅಷ್ಟಮೂರ್ತಿನಿರಸನಸ್ಥಿತಿಯುಂಟಾಗುತ್ತದೆ. ಪೃಥ್ವೀ ಮೊದಲಾದ ಪಂಚಮಹಾಭೂತಗಳು, ಸೂರ್ಯ-

---

೭೭. ಪ್ರೇರಕಂ ಶಂಕರಂ ಬುದ್ಧ್ವಾ ಪ್ರೇರ್ಯಮಾತ್ಮಾನಮೇವ ಚ।
ಭೇದಾತ್ತಂ ಪೂಜಯೇನ್ನಿತ್ಯಂ ನ ಚಾದ್ವೈತಪರೋ ಭವೇತ್॥
ಪತಿಃ ಸಾಕ್ಷಾನ್ಮಹಾದೇವಃ ಪಶುರೇವ ತದಾಶ್ರಯಃ।
ಅನಯೋಃ ಸ್ವಾಮಿಭೃತ್ಯತ್ವಮಭೇದೇ ಕಥಮಿಷ್ಯತೇ॥ -ಸಿ.ಶಿ, ೧೦.೩೯-೪೦

೭೮. ಸಿ.ಶಿ, ೧೦.೩೭-೪೩

೭೯. ಸಿ.ಶಿ, ೧೦-೪೫, ೪೭

ಚಂದ್ರರು ಮತ್ತು ಆತ್ಮಾ ಈ ಎಂಟು ಶಿವನ ಅಷ್ಟಮೂರ್ತಿಗಳೆಂದು ಶಾಸ್ತ್ರಗಳಲ್ಲಿ ವ್ಯವಹರಿಸಲಾಗಿದೆ. ಸಿದ್ಧಾಂತ ಶಿಖಾಮಣಿಯ ತತ್ತ್ವಪ್ರದೀಪಿಕಾ ಎಂಬ ವ್ಯಾಖ್ಯಾನವು ಶಿವನ ಅಷ್ಟಮೂರ್ತಿಗಳನ್ನು ಹೀಗೆ ನಿರೂಪಿಸುತ್ತದೆ-

ದ್ವಯಮುಷ್ಣಂ ದ್ವಯಂ ಶೀತಮನುಷ್ಣಾಶೀತಲಂ ದ್ವಯಮ್।
ದ್ವಯಮಸ್ಪರ್ಶಮಿತ್ಯಷ್ಟೌ ಪಾಂತು ವೋ ಹರಮೂರ್ತಯಃ॥[೮೦]

"ಎರಡು ಉಷ್ಣವಾದವು (ಅಗ್ನಿ ಮತ್ತು ಸೂರ್ಯ); ಎರಡು ಶೀತ (ಜಲ ಮತ್ತು ಚಂದ್ರ); ಉಷ್ಣವೂ ಅಲ್ಲದ ಶೀತವೂ ಅಲ್ಲದವು ಎರಡು (ಪೃಥ್ವೀ ಮತ್ತು ವಾಯು) ಮತ್ತು ಎರಡು ಸ್ಪರ್ಶವಿಲ್ಲದವು (ಆಕಾಶ ಮತ್ತು ಆತ್ಮ) ಈ ಎಂಟು ಶಿವನ ಮೂರ್ತಿಗಳು."

ಇದೇ ರೀತಿಯಾಗಿ ಶಿವನ ಅಷ್ಟಮೂರ್ತಿಗಳ ಪ್ರಸ್ತಾಪವು ಬೇರೆಡೆಗಳಲ್ಲಿಯೂ ಕಂಡುಬರುತ್ತದೆ.[೮೧] ಆದುದರಿಂದ ಲೋಕದಲ್ಲಿ ಪಂಚಮಹಾಭೂತಗಳನ್ನು ಹಾಗೂ ಸೂರ್ಯ-ಚಂದ್ರರನ್ನು ಭಗವಂತನಂತೆ ಪೂಜಿಸುತ್ತಾರೆ. ಮಾಹೇಶ್ವರಸ್ಥಲದಲ್ಲಿನ ಸಾಧಕನು ಇಷ್ಟಲಿಂಗದಲ್ಲಿನ ನಿಷ್ಠೆಯನ್ನು ದೃಢಪಡಿಸಿಕೊಳ್ಳುವ ಸಲುವಾಗಿ ಬೇರೆಲ್ಲಿಯೂ ಪೂಜೆ ಮಾಡುವುದನ್ನು (ಇಷ್ಟಲಿಂಗದ ಪೂಜೆಯ ಹೊರತಾಗಿ) ನಿಷೇಧಿಸಲಾಗಿದೆ. ಈ ನಿಯಮವನ್ನು ಪಾಲಿಸುವ ಮಾಹೇಶ್ವರನು ಪೃಥಿವ್ಯಾದಿ ಆತ್ಮಪರ್ಯಂತಗಳಾದ ಎಂಟು ಸಾಕ್ಷಾತ್ ಶಿವನ ಮೂರ್ತಿಗಳಿಲ್ಲವೆಂದು ನಿರಾಕರಿಸುತ್ತಾನೆ. "ಯಸ್ಯ ಪೃಥ್ವೀ ಶರೀರಮ್"[೮೨] (ಯಾರ ಶರೀರವು ಪೃಥ್ವಿಯೋ) ಎಂದು ಆರಂಭವಾಗಿ "ಯಸ್ಯಾತ್ಮಾ ಶರೀರಮ್" (ಯಾರ ಶರೀರವು ಆತ್ಮವೋ) ಎಂದು ಅಂತ್ಯವಾಗುವ ಬೃಹದಾರಣ್ಯಕೋಪನಿಷತ್ತಿನಲ್ಲಿ ನಿರೂಪಿತವಾಗಿರುವ ಅಷ್ಟಮೂರ್ತಿತ್ವವು ಅಧಿಷ್ಠಾತೃಭಾವದಿಂದ ಹೇಳಲ್ಪಟ್ಟಿವೆ, "ವಿಶ್ವಂ ಮಹೇಶ್ವರ ಭವಾನಧಿತಿಷ್ಠತೀತಿ ವಿಶ್ವಾತ್ಮಕಾಮುಪಚರಂತಿ ಯದಾಗಮಾಸ್ತೇ" (ಮಹೇಶ್ವರನೆ, ನೀನು ವಿಶ್ವದಲ್ಲಿ ಅಧಿಷ್ಠಿತನಾಗಿರುವುದರಿಂದಲೇ ನಿನ್ನನ್ನು ಆಗಮಗಳು ವಿಶ್ವಾತ್ಮನೆಂದು ಹೊಗಳುತ್ತಿವೆ). ಸ್ತನ-ಸ್ತನ್ಯ (ಮೊಲೆಹಾಲು) ಗಳಿಗೆ ಭೇದವಿದ್ದರೂ ಸಹ ಸ್ತನವನ್ನು ಕುಡಿಯುತ್ತಾನೆ ಎಂಬ ವ್ಯವಹಾರವು ಯಾವ ರೀತಿಯಾಗಿದೆಯೋ, ಹಾಗೆಯೇ ಪೃಥಿವ್ಯಾದಿಗಳ ಭೇದ ವ್ಯವಹಾರವು ಕೇವಲ ಔಪಚಾರಿಕವಾಗಿದೆ.

---

[೮೦] ಸಿ.ಶಿ, ೧೦.೨, ತತ್ತ್ವಪ್ರದೀಪಿಕಾ ವ್ಯಾಖ್ಯೆ, ಪು. ೧೮೨

[೮೧] ಯಾ ಸೃಷ್ಟಿಃ ಸ್ರಷ್ಟುರಾದ್ಯಾ ವಹತಿ ವಿಧಿಹುತಂ ಯಾ ಹವಿರ್ಯಾ ಚ ಹೋತ್ರೀ
ಯೇ ದ್ವೇ ಕಾಲಂ ವಿಧತ್ತಃ ಶ್ರುತಿವಿಷಯಗುಣಾ ಯಾ ಸ್ಥಿತಾ ವ್ಯಾಪ್ಯ ವಿಶ್ವಮ್।
ಯಾಮಾಹುಃ ಸರ್ವಬೀಜಪ್ರಕೃತಿರಿತಿ ಯಯಾ ಪ್ರಾಣಿನಃ ಪ್ರಾಣವಂತಃ
ಪ್ರತ್ಯಕ್ಷಾಭಿಃ ಪ್ರಪನ್ನಸ್ತನುಭಿರವತು ವಸ್ತಾಭಿರಷ್ಟಾಭಿರೀಶಃ॥
-ಅಭಿಜ್ಞಾನ ಶಾಕುಂತಲ, ೧.೧

[೮೨] ಸುಬಾಲೋಪನಿಷತ್, ೭.೧

ಅಲ್ಲದೆ, ಪೃಥಿವ್ಯಾದಿಗಳು ಕಾರ್ಯರೂಪವಾಗಿದ್ದು, ಶಿವನು ಕಾರಣರೂಪನಾಗಿರುವನು. ಕರ್ತೃವಾದ ಕುಂಬಾರನಿಗೂ ಕಾರ್ಯವಾದ ಘಟಕ್ಕೂ ಹೇಗೆ ಅಭೇದವು ಸಂಭವಿಸುವುದಿಲ್ಲವೋ, ಹಾಗೆಯೇ ಶಿವನಿಗೂ ಪೃಥಿವ್ಯಾದಿಗಳಿಗೂ ಅಭೇದವು ಸಂಭವಿಸುವುದಿಲ್ಲ. ಪೃಥಿವ್ಯಾದಿಗಳು ಜಡವಾಗಿರುವುದರಿಂದಲೂ, ಆತ್ಮನು ಅಗ್ನಿಹೋತ್ರವೆಂಬ ಹೋಮ ಮಾಡುವ ಯಜಮಾನನು ಅಜ್ಞನಾಗಿರುವುದರಿಂದಲೂ ಇದಕ್ಕೆ ವಿರುದ್ಧವಾಗಿ ಶಿವನು ಚೇತನನೂ ಮತ್ತು ಸರ್ವಜ್ಞನೂ ಆಗಿರುವುದರಿಂದ ಅವುಗಳೊಡನೆ (ಶಿವನಿಗೆ) ಸ್ವರೂಪೈಕ್ಯವು ಸಂಭವಿಸುವುದಿಲ್ಲ. ಅದನ್ನು ರೇಣುಕ ಭಗವತ್ಪಾದರು ಹೀಗೆ ಪ್ರತಿಪಾದಿಸಿದ್ದಾರೆ-

ಪೃಥಿವ್ಯಾದ್ಯಷ್ಟಮೂರ್ತಿತ್ವಮೀಶ್ವರಸ್ಯ ಪ್ರಕೀರ್ತಿತಮ್।
ತದಧಿಷ್ಠಾತೃಭಾವೇನ ನ ಸಾಕ್ಷಾದೇಕಭಾವತಃ॥
ಪೃಥ್ವ್ಯಾದಿಕಮಿದಂ ಸರ್ವಂ ಕಾರ್ಯಂ ಕರ್ತಾ ಮಹೇಶ್ವರಃ।
ನೈತತ್ಸಾಕ್ಷಾನ್ಮಹೇಶೋಽಯಂ ಕುಲಾಲೋ ಕಲಶೋ ಯಥಾ॥
ಅಚೇತನತ್ವಾತ್ ಪೃಥ್ವ್ಯಾದೇರಜ್ಞತ್ವಾದಾತ್ಮನಸ್ತಥಾ।
ಸರ್ವಜ್ಞಸ್ಯ ಮಹೇಶಸ್ಯ ನೈಕರೂಪತ್ವಮಿಷ್ಯತೇ॥[೮೩]

"ಶಿವನಿಗೆ ಭೂಮಿಯೇ ಮೊದಲಾದ ಎಂಟು ಶರೀರಗಳು (ಭೂಮಿ, ನೀರು, ಅಗ್ನಿ, ವಾಯು, ಆಕಾಶ, ಸೂರ್ಯ, ಚಂದ್ರ ಮತ್ತು ಆತ್ಮ) ಹೇಳಲ್ಪಟ್ಟಿವೆ. ಈ ಶರೀರಿ- ಶರೀರಭಾವವು ಅಧಿಷ್ಠಾತೃ-ಅಧಿಷ್ಠೇಯಭಾವದಿಂದಲೇ ಉಪಪನ್ನವಾಗುವುದೇ ಹೊರತು, ಸ್ವರೂಪೈಕ್ಯದಿಂದ ಉಪಪನ್ನವಾಗಲಾರದು. ಭೂಮಿಯೇ ಮೊದಲಾದವುಗಳು ಕಾರ್ಯರೂಪವಾಗಿದ್ದರೆ, ಶಿವನು ಕಾರಣನಾಗಿರುವನು. ಆದುದರಿಂದ ಭೂಮಿಯೇ ಮೊದಲಾದವುಗಳು ಸಾಕ್ಷಾತ್ ಶಿವನಾಗಲಾರವು. ಕರ್ತೃವಾದ ಕುಂಬಾರನಿಗೂ ಕಾರ್ಯವಾದ ಘಟಕ್ಕೂ ಹೇಗೆ ಅಭೇದವು ಸಂಭವಿಸುವುದಿಲ್ಲವೋ ಹಾಗೆಯೇ (ಶಿವನಿಗೂ ಭೂಮಿಯೇ ಮೊದಲಾದವುಗಳಿಗೂ ಅಭೇದವು ಸಂಭವಿಸುವುದಿಲ್ಲ). ಭೂಮಿಯೇ ಮೊದಲಾದವುಗಳು ಜಡವಾಗಿರುವುದರಿಂದಲೂ, ಆತ್ಮನು ಕಿಂಚಿಜ್‌ಜ್ಞ ನಾಗಿರುವುದರಿಂದಲೂ, ಸರ್ವಜ್ಞನಾದ ಶಿವನಿಗೆ ಇವುಗಳೊಡನೆ ಸ್ವರೂಪೈಕ್ಯವು ಸಂಭವಿಸುವುದಿಲ್ಲ."

ಈ ರೀತಿಯಾದ ಆಚಾರ್ಯೋಕ್ತಿಯಂತೆ ವ್ಯವಹರಿಸುವ ಮಾಹೇಶ್ವರನು ಅಷ್ಟಮೂರ್ತಿನಿರಾಸಕನೆನಿಸುತ್ತಾನೆ. ಇದೇ ಮಾಹೇಶ್ವರನ ಅಷ್ಟಮೂರ್ತಿನಿರಸನಸ್ಥಲ.

ಮಾಹೇಶ್ವರನು ಅಷ್ಟಮೂರ್ತಿನಿರಾಸಕನಾದಂತೆಯೇ ಸರ್ವಗತ್ವನಿರಾಸಕನೂ ಆಗುತ್ತಾನೆ. ಅರ್ಥಾತ್ ಶಿವನು ಎಲ್ಲೆಡೆಯೂ ಇದ್ದಾನೆಂಬುದನ್ನು ಒಪ್ಪುವುದಿಲ್ಲ. ಶಿವನ ಸರ್ವಗತ್ವವನ್ನಂಗೀಕರಿಸಿದರೆ, ಸರ್ವತ್ರ ಶಿವನ ಪೂಜೆಯನ್ನು ಮಾಡಬೇಕಾಗುತ್ತದೆ.

---

೮೩. ಸಿ.ಶಿ, ೧೦.೪೯-೫೦, ೫೩

ಹಾಗೆ ಮಾಡಿದರೆ ತನ್ನ ಇಷ್ಟಲಿಂಗದ ವಿಷಯದಲ್ಲಿನ ನಿಷ್ಠೆಯು ಸಂಭವಿಸುವುದಿಲ್ಲವೆಂದು ಮಾಹೇಶ್ವರನು ಶಿವನ ಸರ್ವತ್ರಸ್ಥಿತಿಯನ್ನು ನಿರಾಕರಿಸುತ್ತಾನೆ. ಸಿದ್ಧಾಂತ ಶಿಖಾಮಣಿಯು ಅದನ್ನು ಹೀಗೆ ನಿರೂಪಿಸುತ್ತದೆ-

ಸರ್ವಗತ್ವೇ ಮಹೇಶಸ್ಯ ಸರ್ವತ್ರಾರಾಧನಂ ಭವೇತ್।
ನ ಲಿಂಗಮಾತ್ರೇ ತನ್ನಿಷ್ಠೋ ನ ಶಿವಂ ಸರ್ವಗಂ ಸ್ಮರೇತ್॥[೮೪]

"ಶಿವನು ಸರ್ವತ್ರ ವ್ಯಾಪಿಸಿರುವುದರಿಂದ ಅವನ ಪೂಜೆಯು ಎಲ್ಲಾ ಕಡೆಗೂ ಆಗಬೇಕಾದೀತು? ಲಿಂಗಕ್ಕೆ ಮಾತ್ರವೇ ಆಗಬಾರದಾದೀತು? ಆದುದರಿಂದ ಇಷ್ಟಲಿಂಗದಲ್ಲಿ ನಿಷ್ಠೆಯುಳ್ಳ ಮಾಹೇಶ್ವರನು ಶಿವನು ಸರ್ವತ್ರ ವ್ಯಾಪಿಸಿದ್ದಾನೆಂದು ತಿಳಿಯಬಾರದು."

"ಸರ್ವಂ ಖಲ್ವಿದಂ ಬ್ರಹ್ಮ"[೮೫] (ಈ ಜಗತ್ತೆಲ್ಲವೂ ಬ್ರಹ್ಮಮಯವಾಗಿದೆ), "ಸರ್ವೋ ಹ್ಯೇಷ ರುದ್ರಃ"[೮೬] (ರುದ್ರನು ಸರ್ವತ್ರ ವ್ಯಾಪಕನಾಗಿದ್ದಾನೆ) ಮುಂತಾದ ಶ್ರುತಿವಾಕ್ಯಗಳಲ್ಲಿ ಶಿವನು ಸರ್ವತ್ರ ವ್ಯಾಪಿಸಿದ್ದಾನೆಂದು ಪ್ರತಿಪಾದಿಸಿರುವ ಕಾರಣ, ಇಷ್ಟಲಿಂಗದಲ್ಲಿ ಮಾತ್ರ ಶಿವನಿದ್ದಾನೆಂದು ಭಾವಿಸುವುದು ಸರಿಯೇ? ಎಂಬ ಜಿಜ್ಞಾಸೆಯನ್ನು ಹೀಗೆ ನಿರಾಕರಿಸಲಾಗಿದೆ- ಬೆಂಕಿಯು ಎಲ್ಲಾ ಕಟ್ಟಿಗೆಗಳಲ್ಲಿದ್ದರೂ ಬನ್ನಿಕಟ್ಟಿಗೆಯ ಗರ್ಭದಲ್ಲಿಯೇ ಹೇಗೆ ವಿಶೇಷವಾಗಿರುವುದೋ, ಹಾಗೆಯೇ ಶಿವನು ಸರ್ವತ್ರ ವ್ಯಾಪಕನಾಗಿದ್ದರೂ ತನಗೆ ಆಧಾರಭೂತವಾದ ಇಷ್ಟಲಿಂಗದಲ್ಲಿಯೇ ವಿಶೇಷವಾಗಿ ವಾಸವಾಗಿದ್ದಾನೆ ಎಂದು ಮಾಹೇಶ್ವರನಿಗೆ ಇಷ್ಟಲಿಂಗದಲ್ಲಿ ಮಾತ್ರ ಶಿವಭಾವನೆಯು ವಿಹಿತವಾಗಿದೆ.[೮೭] ಅದನ್ನು ಶ್ರೀ ರೇಣುಕಾಚಾರ್ಯರೂ ಹೀಗೆ ನಿರೂಪಿಸಿದ್ದಾರೆ-

ತಸ್ಮಾತ್ ಸರ್ವಪ್ರಯತ್ನೇನ ಸರ್ವಸ್ಥಾನಪರಾಙ್ಮುಖಃ।
ಸ್ವೇಷ್ಟಲಿಂಗೇ ಮಹಾದೇವಂ ಪೂಜಯೇತ್ ಪೂಜಕೋತ್ತಮಃ॥[೮೮]

"ಆದುದರಿಂದ ಮಾಹೇಶ್ವರನು ಶಿವನು ಸರ್ವಸ್ಥಾನಗಳಲ್ಲಿಯೂ ಇದ್ದಾನೆಂಬ ಭಾವನೆಯಿಂದ ದೂರನಾಗಿ, ಸರ್ವಪ್ರಯತ್ನದಿಂದಲೂ ತನ್ನ ಇಷ್ಟಲಿಂಗದಲ್ಲಿಯೇ ಶಿವನನ್ನು ಪೂಜಿಸಬೇಕು" -ಎಂಬ ರೇಣುಕ ಭಗವತ್ಪಾದರ ಅಪ್ಪಣೆಯಂತೆ ಆಚರಣಶೀಲನಾದ ಮಾಹೇಶ್ವರನು ಸರ್ವಗತ್ವನಿರಾಸಕನೆನ್ನುವ ಕಾರಣ ಆತನ ಆಚಾರ ಪ್ರತಿಪಾದಕವಾದ ಈ ಸ್ಥಲವನ್ನು ಸರ್ವಗತ್ವನಿರಾಸನಸ್ಥಲ ಎಂದು ಕರೆಯಲಾಗಿದೆ.

---

[೮೪] ಸಿ.ಶಿ, ೧೦.೫೫

[೮೫] ಛಾಂದೋಗ್ಯೋಪನಿಷತ್, ೩-೧೪-೧

[೮೬] ಮಹಾನಾರಾಯಣೋಪನಿಷತ್, ೧೦.೧೧

[೮೭] ಶಿವಃ ಸರ್ವಗತಶ್ಚಾಪಿ ಸ್ವಾಧಾರೇ ವ್ಯಜ್ಯತೇ ಭೃಶಮ್।
ಶಮೀ ಗರ್ಭೇ ಯಥಾ ವಹ್ನಿರ್ವಿಶೇಷೇಣ ವಿಭಾವ್ಯತೇ॥ -ಸಿ.ಶಿ, ೧೦.೫೭

[೮೮] ಸಿ.ಶಿ, ೧೦.೫೯

ವಸ್ತುತಃ "ಆಕಾಶವತ್ ಸರ್ವಗತಂ ಸುಸೂಕ್ಷ್ಮಮ್"[೮೯] ಎಂಬ ಶ್ರುತಿವಾಕ್ಯದಂತೆ ಪರಶಿವನು ಸರ್ವಗತನೇ ಆದರೂ ಸಹ ಮಾಹೇಶ್ವರನ ಬಾಹ್ಯಪ್ರವೃತ್ತಿಯನ್ನು ನಿಯಂತ್ರಿಸುವುದಕ್ಕಾಗಿ ತನ್ನ ಇಷ್ಟಲಿಂಗದಲ್ಲಿ ಮಾತ್ರ ಶಿವನನ್ನು ಪೂಜಿಸಬೇಕು. ನಿಷ್ಠೆಯು ಒಂದೇ ಕಡೆ ಇದ್ದಾಗ ಫಲವು ಶೀಘ್ರವಾಗಿ ದೊರೆಯುತ್ತದೆ. ನಿಷ್ಠೆಯು ಅನೇಕ ವಿಷಯಗಳಲ್ಲಿದ್ದಾಗ ನಾಲ್ಕು ದಿಕ್ಕುಗಳ ಕಡೆಗೆ ಸಮಾನವಾದ ಶಕ್ತಿಯಿಂದ ಕೂಡಿರುವ ಕುದುರೆಗಳಿಂದ ಎಳೆಯಲ್ಪಡುವ ರಥದಂತೆ ಎಲ್ಲಿಯೂ ಪ್ರಗತಿಯು ಆಗುವುದಿಲ್ಲ.

ಈ ರೀತಿಯಾಗಿ ಮಾಹೇಶ್ವರನು ತನ್ನ ಇಷ್ಟಲಿಂಗದಲ್ಲಿ ಶಿವನನ್ನು ಪೂಜಿಸಿದರೂ ಸಹ ಪರಶಿವನು ಸರ್ವವ್ಯಾಪಕನೆಂದು ಸಹ ತಿಳಿಯಬೇಕೆಂದು ಶ್ರೀ ರೇಣುಕ ಭಗವತ್ಪಾದರ ಅಪ್ಪಣೆಯಿದೆ. ಹೇಗೆಂದರೆ-

ಪೂಜಾವಿಧೌ ನಿಯಮ್ಯತ್ವಾಲ್ಲಿಂಗಮಾತ್ರೇ ಸ್ಥಿತಮ್ ಶಿವಮ್।
ಪೂಜಯನ್ನಪಿ ದೇವಸ್ಯ ಸರ್ವಗತ್ವಂ ವಿಭಾವಯೇತ್॥[೯೦]

"ಪೂಜಕನು ಪೂಜಾಕಾಲದಲ್ಲಿ ತನ್ನ ಇಷ್ಟಲಿಂಗದಲ್ಲಿ ಮಾತ್ರ ಶಿವನು ವಾಸಿಸಿದ್ದಾನೆಂದು ಭಾವಿಸಿ ಪೂಜಿಸಿದರೂ, ಆಮೇಲೆ ಶಿವನು ಸರ್ವವ್ಯಾಪಕನೆಂದು ತಿಳಿಯಬೇಕು."

ಈ ಜಗತ್ತು ಶಿವನಿಂದುತ್ಪನ್ನವಾಗಿದೆ ಮತ್ತು ಅದನ್ನು ಅಭಿನ್ನನಿಮಿತ್ತೋಪಾದಾನವೆಂದು ಸ್ವೀಕರಿಸಲಾಗಿದೆ. (ಅಂದರೆ ಶಿವನಿಂದುತ್ಪನ್ನವಾದ ಈ ಜಗತ್ತು ಶಿವನಿಂದಭಿನ್ನವಾಗಿರುವುದಿಲ್ಲ). ಆದುದರಿಂದ ಕುಂಭಾದಿಗಳು ಮಣ್ಣಿನಿಂದ ಹೇಗೆ ಭಿನ್ನವಾದವು ಗಳಲ್ಲವೋ, ನೊರೆ-ತೊರೆ-ಬುದ್ಬುದಾದಿಗಳು ಸಮುದ್ರದಿಂದ ಭಿನ್ನವಾದವುಗಳಲ್ಲವೋ ಮತ್ತು ಪಟವು ತಂತುಗಳಿಂದ ಹೇಗೆ ಭಿನ್ನವಾಗಿರುವುದಿಲ್ಲವೋ ಹಾಗೆಯೇ ಈ ಜಗತ್ತೂ ಸಹ ಗೋಧಿ ಬಣ್ಣದ ಶಕ್ತಿಯಿಂದ ಸರ್ಪವೆಂತಲೂ, ಚಿಪ್ಪು ಬಿಳುಪಾಗಿರುವ ಕಾರಣ ಬೆಳ್ಳಿಯೆಂದು, ಸ್ಥಾಣುವಿನಲ್ಲಿ (ಮೋಲುಮರ) ಅದರ ಎತ್ತರದ ಕಾರಣದಿಂದ ಪುರುಷನಂತೆ ತೋರುವಂತೆ ಮೇರು ಮರೀಚಿಕೆಯಲ್ಲಿ ಸ್ವಚ್ಛತೆ ಮತ್ತು ಉದ್ರೇಕಶಕ್ತಿಯ ಕಾರಣದಿಂದ ನೀರಾಗಿ ಕಾಣುವಂತೆ, ಕಾಲಶಕ್ತಿಯಿಂದ ಆಕಾಶದಲ್ಲಿಯ ಮೋಡಗಳು ಗಂಧರ್ವ ನಗರವಾಗಿ ತೋರುವಂತೆ ಎಲ್ಲ ಪ್ರಾಪಂಚಿಕ ಭೇದಗಳೂ ಇಲ್ಲದಿರುವ ನಿರ್ವಿಕಾರ ಸಚ್ಚಿದಾನಂದ ಸ್ವರೂಪವಾದ ಪರಶಿವಬ್ರಹ್ಮನಲ್ಲಿ ಅದರ ಜೊತೆಗೆ ಕೂಡಿಕೊಂಡಿರುವ ವಿಮರ್ಶಾಶಕ್ತಿಯ ಸ್ಫುರಣೆಯಿಂದ ತೋರುವ ಮಾಯಾಶಕ್ತಿಯಿಂದ ವಿಶ್ವವು ಅದಕ್ಕೆ ಅಭಿನ್ನವಾಗಿ ತೋರುತ್ತದೆ"[೯೧] ಎಂದರ್ಥ. ನಾನಾದೃಷ್ಟಾಂತಗಳಿಂದ ಶ್ರೀ ಮರಿತೋಂಟದಾರ್ಯರು ಪ್ರಪಂಚವು ಪರಶಿವನಿಗಿಂತ ಅಭಿನ್ನವಾದದ್ದೆಂದು ಸಮರ್ಥಿಸಿದ್ದಾರೆ. ಶ್ರೀ ರೇಣುಕ ಭಗವತ್ಪಾದರೂ ಸಹ-

---

[೮೯] ಶಾಂಡಿಲ್ಯೋಪನಿಷತ್, ೨.೧.೩

[೯೦] ಸಿ.ಶಿ, ೧೦.೬೧

[೯೧] ಸಿ.ಶಿ, ೧೦.೮, ತತ್ತ್ವಪ್ರದೀಪಿಕಾ ವ್ಯಾಖ್ಯಾ, ಪು. ೧೮೯

ಪತ್ರಶಾಖಾದಿರೂಪೇಣ ಯಥಾ ತಿಷ್ಠತಿ ಪಾದಪಃ।
ತಥಾ ಭೂಮ್ಯಾದಿರೂಪೇಣ ಶಿವ ಏಕೋ ವಿರಾಜತೇ॥[೯೨]

"ವೃಕ್ಷವು ಎಲೆ-ರೆಂಬೆ ಮೊದಲಾದ ರೂಪದಿಂದ ಹೇಗೆ ವಿರಾಜಿಸುತ್ತಿರುವುದೋ, ಹಾಗೆಯೇ ಶಿವನು ಭೂಮಿ-ಜಲಾದಿರೂಪದಿಂದ ವಿರಾಜಿಸುತ್ತಿರುವನು" ಎಂದು ಶಿವನ ಜಗನ್ಮಯತ್ವವನ್ನು ಉಪದೇಶಿಸಿದ್ದಾರೆ. ಇದೇ ಮಾಹೇಶ್ವರನ ಶಿವಜಗನ್ಮಯಸ್ಥಲ. ಇದರಿಂದ ಚರಾಚರಾತ್ಮಕವಾದ ಈ ಪ್ರಪಂಚವು ಸಾಕ್ಷಾತ್ ಶಿವಸ್ವರೂಪವೆಂದು ಮಾಹೇಶ್ವರನು ಭಾವಿಸಿದರೂ ಸಹ ಅದರ ಬಾಹ್ಯಪೂಜೆಯನ್ನು ಇಷ್ಟಲಿಂಗದಲ್ಲಿಯೇ ನೆರವೇರಿಸುತ್ತಾನೆ ಎಂದು ಸಿದ್ಧಾಂತವಾಗುತ್ತದೆ.

ಮಾಹೇಶ್ವರಸ್ಥಲದ ಕೊನೆಯ ಸ್ಥಲವೇ ಭಕ್ತದೇಹಿಕಲಿಂಗಸ್ಥಲ. ಈ ಸ್ಥಲದಲ್ಲಿ ಶಿವನು ಸಕಲ ಚರಾಚರಾತ್ಮಕ ಜಗತ್ಸ್ವರೂಪನಾಗಿದ್ದರೂ, ಭಕ್ತರ ಹೃದಯದಲ್ಲಿ ವಿರಾಜಿಸುತ್ತಿರುವನು ಎಂದು ಪ್ರತಿಪಾದಿಸಲಾಗಿದೆ.[೯೩] "ಭಕ್ತಭಾವಪರಾನಂದೋ ಭಕ್ತಭಾವೈಕಗೋಚರಃ"[೯೪] ಎಂಬ ಯೋಗಜಾಗಮದ ವಾಕ್ಯಾನುಸಾರವಾಗಿ, ಮತ್ತು-

ನಿತ್ಯಂ ಭಾತಿ ತ್ವದೀಯೇಷು ಯಾ ತೇ ರುದ್ರ ಶಿವಾ ತನೂಃ।
ಅಘೋರಾಽಪಾಪಕಾಶೀತಿ ಶ್ರುತಿರಾಹ ಸನಾತನೀ॥[೯೫]

"ಎಲೈ ರುದ್ರನೇ! ಯಾವ ನಿನ್ನ ಶಾಂತವೂ ದೋಷರಹಿತವೂ ಆದ ಮಂಗಲ ಶರೀರವು (ಶಿವಲಿಂಗಮೂರ್ತಿಯು) ನಿನ್ನ ಸಂಬಂಧಿಕರಾದ ಭಕ್ತರಲ್ಲಿ ಪ್ರಕಾಶಿಸುತ್ತಿರುವುದೆಂದು ಯಜುರ್ವೇದವು "ಯಾ ತೇ ರುದ್ರ ಶಿವಾತನೂರಘೋರಾಽಪಾಪಕಾಶಿನೀ" ಎಂಬ ಮಂತ್ರದಿಂದ ಬೋಧಿಸುತ್ತಿರುವುದು" -ಎಂಬ ಶ್ರೀ ರೇಣುಕಾಚಾರ್ಯರ ಉಪದೇಶ ದಂತೆ ಪರಿಶುದ್ಧರಾದ ಭಕ್ತರ ಹೃದಯದಲ್ಲಿ ಶಿವನ ವಿಶೇಷವಾದ ಅಭಿವ್ಯಕ್ತಿಯು ತಿಳಿದುಬರುತ್ತದೆ. ಮಾಹೇಶ್ವರಸ್ಥಲದಲ್ಲಿನ ಸಾಧಕನ ಕಲ್ಮಷಗಳು ನಾಶವಾಗಿರುವುದರಿಂದ, ಲೌಕಿಕ ವಿಷಯಗಳಲ್ಲಿ ವೈರಾಗ್ಯಶಾಲಿ ಆಗಿರುವುದರಿಂದ, ಸಂತುಷ್ಟವಾದ ಮನಸ್ಸಿನಿಂದ ಕೂಡಿರುವುದರಿಂದ ಮತ್ತು ಶಿವನಲ್ಲಿ ನಿಷ್ಠನಾಗಿರುವುದರಿಂದ ನಿರ್ಮಲವಾದ ಕನ್ನಡಿಯಲ್ಲಿ ಮುಖಾದಿಗಳು ಸ್ಫುಟವಾಗಿ ಪ್ರತಿಬಿಂಬಿತವಾಗುವಂತೆ ಅವನ ಹೃದಯದಲ್ಲಿ ಶಿವನು ಸ್ಫುಟವಾಗಿ ಕಂಗೊಳಿಸುತ್ತಾನೆ.

---

[೯೨] ಸಿ.ಶಿ, ೧೦.೬೬

[೯೩] ಸಮಸ್ತಜಗದಾತ್ಮಾಪಿ ಶಂಕರಃ ಪರಮೇಶ್ವರಃ।
ಭಕ್ತಾನಾಂ ಹೃದಯಾಂಭೋಜೇ ವಿಶೇಷೇಣ ವಿರಾಜತೇ॥
ಕೈಲಾಸೇ ಮಂದರೇ ಚೈವ ಹಿಮಾದ್ರೌ ಕನಕಾಚಲೇ।
ಹೃದಯೇಷು ಚ ಭಕ್ತಾನಾಂ ವಿಶೇಷೇಣ ಶಿವಃ ಸ್ಥಿತಃ॥ -ಸಿ.ಶಿ, ೧೦.೬೭-೬೮

[೯೪] ಸಿ.ಶಿ, ೧೦.೧, ಅವತರಣಿಕಾ, ಪು. ೧೯೦

[೯೫] ಸಿ.ಶಿ, ೧೦.೨೦

ಈ ಪ್ರಕಾರವಾಗಿಯೇ ಸದಾ ಸಹಜದಾನದಲ್ಲಿ ನಿಷ್ಣಾತನೂ, ಪ್ರಾಕೃತ ಆಚಾರ ರಹಿತನೂ, ಶಿವ-ಜೀವರ ವಿಷಯದಲ್ಲಿ ಪತಿ - ಪಶುಭಾವಯುಕ್ತನೂ, ತನ್ನ ಇಷ್ಟಲಿಂಗದಲ್ಲಿ ಯಾವಾಗಲೂ ಶಿವಸಾನ್ನಿಧ್ಯಭಾವನೆಯುಳ್ಳವನೂ, ಭೂಮಿಯಿಂದ ಆತ್ಮದವರೆಗಿನ ಎಂಟು ತನುಗಳಲ್ಲಿ ಶಿವನಿರುವನೆಂದು ಭಾವಿಸುತ್ತಾ, ಶಿವನು ಸಕಲ ಚರಾಚರಾತ್ಮಕವಾದ ವಸ್ತುಗಳಲ್ಲಿರುವನೆಂದು ಭಾವಿಸಿದರೂ ಕೂಡ ತನ್ನ ಇಷ್ಟಲಿಂಗವನ್ನು ನಿಷ್ಠೆಯಿಂದ ಪೂಜಿಸುತ್ತಾ ತನ್ನ ಹೃದಯದಲ್ಲಿ ಶಿವನನ್ನು ಧ್ಯಾನಿಸುವ ಸಾಧಕನು ಮಾಹೇಶ್ವರ ಎಂದು ಕರೆಯಲ್ಪಡುತ್ತಾನೆ. ಮಾಹೇಶ್ವರನ ಇಂತಹ ಯೋಗ್ಯತೆಯ ಮೂಲ ಅವನ ನಿಷ್ಠಾಭಕ್ತಿಯೇ ಆಗಿದೆ. ಆದುದರಿಂದ ನಿಷ್ಠಾಭಕ್ತಿಯುಕ್ತನಾದ ಸಾಧಕನೇ ಮಾಹೇಶ್ವರ ಎಂದು ಸಂಕ್ಷೇಪವಾಗಿ ಹೇಳಬಹುದು. ಅದನ್ನು ಮೊಗ್ಗೆಯ ಮಾಯಿದೇವನು ಹೀಗೆ ನಿರೂಪಿಸಿದ್ದಾನೆ-

ನೈಷ್ಠಿಕೀ ಭಕ್ತಿರಿತ್ಯೇವ ಕೀರ್ತಿತಾ ಭಕ್ತತತ್ಪರೈಃ।
ತಯಾ ಮಾಹೇಶ್ವರಂ ನಾಮ ಸ್ಥಲಮಸ್ಯ ಸ್ವರೂಪತಃ॥[೯೬]

"ಭಕ್ತಿಪರಾಯಣರು ಇದನ್ನು ನೈಷ್ಠಿಕೀ ಭಕ್ತಿ ಎಂದು ಕರೆಯುತ್ತಾರೆ. ಮತ್ತು ಈ ನೈಷ್ಠಿಕೀ ಭಕ್ತಿಯಿಂದ ಜೀವಾತ್ಮನ ಸ್ವರೂಪವನ್ನು ಅರಿಯುವುದರಿಂದ ಮಾಹೇಶ್ವರಸ್ಥಲದ ಪ್ರಾಪ್ತಿಯಾಗುತ್ತದೆ."

೩. ಪ್ರಸಾದಿಸ್ಥಲ ಮತ್ತು ಪ್ರಸಾದೀ

ಪ್ರಸಾದಿಸ್ಥಲವು ಷಟ್‌ಸ್ಥಲೋಪಾಸನೆಯ ಮೂರನೆಯ ಸೋಪಾನ. ಇಲ್ಲಿ ನಿರೂಪಿಸಲಾಗುವ ಆಚಾರಶೀಲನಾದ ಸಾಧಕನೇ 'ಪ್ರಸಾದೀ' ಎಂದು ಕರೆಯಲ್ಪಡುತ್ತಾನೆ. ಹಿಂದಿನ ಸ್ಥಲದಲ್ಲಿ ಪ್ರತಿಪಾದಿತನಾದ 'ಮಾಹೇಶ್ವರ'ನೆಂಬ ಸಾಧಕನೇ "ಶಿವಾತ್ಮಕಂ ವಿಶ್ವಮಿದಂ ವಿಬುಧ್ಯನ್ ಮಾಹೇಶ್ವರೋಽಸೌ ಭವತಿ ಪ್ರಸಾದೀ"[೯೭] (ಈ ಜಗತ್ತೆಲ್ಲವೂ ಶಿವಮಯವಾಗಿದೆ ಎಂದು ತಿಳಿಯುವ ಮಾಹೇಶ್ವರನೇ ಪ್ರಸಾದಿ ಯಾಗುತ್ತಾನೆ) ಎಂಬ ರೇಣುಕ ಭಗವತ್ಪಾದರ ಅಪ್ಪಣೆಯಂತೆ ಪ್ರಕಾಶಿಸುತ್ತಿರುವ ಪ್ರಪಂಚವನ್ನು ಯಾವಾಗ ಶಿವಮಯವಾಗಿದೆಯೆಂದು ತಿಳಿಯುತ್ತಾನೆಯೋ ಆಗ ಆ ಮಾಹೇಶ್ವರನೇ 'ಪ್ರಸಾದೀ' ಎಂದು ಕರೆಯಿಸಿಕೊಳ್ಳುತ್ತಾನೆ. ಸಾಧಕನಿಗೆ ಈ ಸ್ಥಲದಲ್ಲಿರುವ ಭಕ್ತಿಯನ್ನು 'ಅವಧಾನಭಕ್ತಿ' ಎಂದು ಕರೆಯಲಾಗಿದೆ. 'ಅನಲಕಾಷ್ಠನ್ಯಾಯ'ದಂತೆ ಈ ಅವಧಾನಭಕ್ತಿಯು ಮನಸ್ಸಿನಲ್ಲಿ ಪ್ರಸಾದಗುಣನ್ನುಂಟುಮಾಡುತ್ತದೆ. ಕಟ್ಟಿಗೆಗೆ ತಗುಲಿದ ಬೆಂಕಿಯು ಎಲ್ಲ ಕಡೆಗಳಿಂದಲೂ ಕಟ್ಟಿಗೆಯನ್ನು ಆವರಿಸಿ ಹೇಗೆ ಸುಡುತ್ತದೆಯೋ, ಹಾಗೆಯೇ ಈಶ್ವರನ ಪ್ರೇಮವು ಅವಧಾನ ರೂಪದಿಂದ ಒಟ್ಟಿಗೆ ಸಾಧಕನ ಅಂತಃಕರಣವನ್ನು ಎಲ್ಲ ಕಡೆಗಳಿಂದಲೂ ವ್ಯಾಪಿಸಿ, ಅಲ್ಲಿರುವ ಎಲ್ಲ ಶಬ್ದ-ಸ್ಪರ್ಶಾದಿ ವಿಷಯಗಳನ್ನು ಸುಟ್ಟು

---

[೯೬] ಅನುಭವಸೂತ್ರ, ೫.೭೩

[೯೭] ಸಿ.ಶಿ, ೧೦.೭೩

ಪ್ರಸಾದರೂಪಿಯನ್ನಾಗಿ ಮಾಡುತ್ತದೆ. ಅಂತಹ ಪ್ರಸಾದ ಸೇವನೆಯಿಂದಲೇ ಅವನ ಮನಸ್ಸಿನಲ್ಲಿ ಪ್ರಸಾದಗುಣವು ಉಂಟಾಗುತ್ತದೆ. "ಪ್ರಸಾದೋಽಸ್ಯಾಸ್ತೀತಿ ಪ್ರಸಾದೀ" ಎಂಬ ನಿರ್ವಚನದಂತೆ ಪ್ರಸಾದಗುಣಯುಕ್ತ ಮನಸ್ಸುಳ್ಳವನೇ ಪ್ರಸಾದೀ. ಅದನ್ನು ಸಿದ್ಧಾಂತ ಶಿಖಾಮಣಿಯು- "ಮನಃ ಪ್ರಸಾದಯೋಗೇನ ಪ್ರಸಾದೀತ್ಯೇಷ ಕಥ್ಯತೇ"[೯೮] (ಮನಃ ಪ್ರಸಾದಯೋಗದಿಂದ ಪ್ರಸಾದಿಯೆಂದು ಇವನು ಕರೆಯಲ್ಪಡುತ್ತಾನೆ) ಎಂದು ನಿರೂಪಿಸುತ್ತದೆ.

ಷಟ್‌ಸ್ಥಲಗಳಲ್ಲಿ ತೃತೀಯ ಸೋಪಾನಭೂತವಾದ ಈ ಸ್ಥಲದಲ್ಲಿ- ಪ್ರಸಾದಿಸ್ಥಲ, ಗುರುಮಾಹಾತ್ಮ್ಯಸ್ಥಲ, ಲಿಂಗಮಾಹಾತ್ಮ್ಯಸ್ಥಲ, ಜಂಗಮಮಾಹಾತ್ಮ್ಯಸ್ಥಲ, ಭಕ್ತ ಮಾಹಾತ್ಮ್ಯಸ್ಥಲ, ಶರಣಮಾಹಾತ್ಮ್ಯಸ್ಥಲ ಮತ್ತು ಶಿವಪ್ರಸಾದ ಮಾಹಾತ್ಮ್ಯಸ್ಥಲಗಳೆಂಬ ಏಳು ಅವಾಂತರ ಸ್ಥಲಗಳಿವೆ.[೯೯] ಈ ಸ್ಥಲಗಳಲ್ಲಿ ಪ್ರಸಾದಿಯು ನಿರ್ವಹಿಸಬೇಕಾದ ಆಚಾರಗಳು ನಿರೂಪಿತವಾಗಿವೆ. ಈ ಆಚಾರಗಳನ್ನು ಅವಧಾನದಿಂದ ಪಾಲಿಸುವ ಕಾರಣ ಸಾಧಕನು ಪ್ರಸಾದಿಯ ಸ್ಥಿತಿಯನ್ನು ತಲುಪುತ್ತಾನೆ.

"ಅನ್ನಮಯಂ ಹಿ ಸೋಮ್ಯ ಮನಃ"[೧೦೦] (ಹೇ ಸೋಮ್ಯ! ಮನಸ್ಸು ಅನ್ನಮಯ ವಾಗಿದೆ) ಎಂದು ಶ್ರುತಿಯು ಅನ್ನದ ಅಣುಭಾಗವನ್ನು ಮನಸ್ಸೆಂದು ಪ್ರತಿಪಾದಿಸಿದೆ. ಆದುದರಿಂದ ಯಾವ ರೀತಿಯ ಅನ್ನವನ್ನು ಸೇವಿಸುತ್ತೇವೆಯೋ ಅವನ ಮನಸ್ಸು ಸಹ ಅದರಂತೆಯೇ ಆಗುತ್ತದೆ. ಆ ಕಾರಣ ಮನಸ್ಸಿನ ಶುದ್ಧಿಯು ಆವಶ್ಯಕ. ಶಿವನಿಗೆ ನೈವೇದ್ಯ ಮಾಡಿದ ಅನ್ನವು ಪರಿಶುದ್ಧವಾದುದೆಂದು ಹೇಳಲ್ಪಟ್ಟಿದೆ. ಆದುದರಿಂದ ಶಿವನಿಗರ್ಪಿತವಾದ ಅನ್ನದ ಸೇವನೆಯಿಂದಲೇ ಮನಸ್ಸು ಶುದ್ಧವಾಗುತ್ತದೆಂದು ಹೇಳಿದಂತಾಗುತ್ತದೆ. ಅದನ್ನು ಶ್ರೀ ರೇಣುಕ ಭಗವತ್ಪಾದರು ಹೀಗೆ ಪ್ರತಿಪಾದಿಸಿದ್ದಾರೆ-

ಅನ್ನಶುದ್ಧ್ಯಾ ಹಿ ಸರ್ವೇಷಾಂ ತತ್ತ್ವಶುದ್ಧಿರುದಾಹೃತಾ।
ವಿಶುದ್ಧಮನ್ನಜಾತಂ ಹಿ ಯಚ್ಛಿವಾಯ ಸಮರ್ಪಿತಮ್॥[೧೦೧]

"ಅನ್ನಶುದ್ಧಿಯಿಂದಲೇ ಸರ್ವಪ್ರಾಣಿಗಳ ತತ್ತ್ವಶುದ್ಧಿಯಾಗುವುದೆಂದು ಶಾಸ್ತ್ರಗಳಲ್ಲಿ ನಿರೂಪಿತವಾಗಿದೆ. ಯಾವುದು ಶಿವನಿಗೆ ಸಮರ್ಪಿತವಾಗುವುದೋ ಅದು ಪರಿಶುದ್ಧವಾದ ಅನ್ನ(ಪ್ರಸಾದ)ವೆನಿಸುವುದು."

ಈ ಪ್ರಸಾದ ವಿಷಯದ ವಿಸ್ತಾರವಾದ ವಿವೇಚನೆಯನ್ನು ಮೂರನೆಯ ಪರಿಚ್ಛೇದದಲ್ಲಿ ಅವಲೋಕಿಸಬಹುದು. ಈ ಸಾಧಕನು ತನ್ನ ಇಷ್ಟಲಿಂಗಕ್ಕರ್ಪಿಸಿದ

---

[೯೮] ಸಿ.ಶಿ, ೧೧.೨

[೯೯] ಸಿ.ಶಿ, ೧೧.೩-೫

[೧೦೦] ಛಾಂದೋಗ್ಯೋಪನಿಷತ್, ೬-೫-೪

[೧೦೧] ಸಿ.ಶಿ, ೧೧.೯

ಪ್ರಸಾದದಂತೆ ಗುರು-ಜಂಗಮರಿಗೆ ಅರ್ಪಿಸಿದ ಪ್ರಸಾದವನ್ನೂ ಸಹ ಅವಧಾನಭಕ್ತಿಯಿಂದ ಸ್ವೀಕರಿಸುತ್ತಾನೆ. ಈ ರೀತಿಯಾಗಿ ಗುರು-ಲಿಂಗ-ಜಂಗಮರ ಪ್ರಸಾದವನ್ನು ಪ್ರತಿದಿನವೂ ಸ್ವೀಕರಿಸುತ್ತಾ, ಆ ಪ್ರಸಾದದ ಮಹಿಮೆಯಿಂದ ಮನಃಪ್ರಸಾದವನ್ನು ಪಡೆದು ಸಮಸ್ತ ಪ್ರಪಂಚವನ್ನು ಶಿವಸ್ವರೂಪವೆಂದು ನೋಡುತ್ತಾನೆ.[೧೦೨] ಇಂತಹ ಶಿವಮಯ ಪ್ರಸನ್ನ ಮನಸ್ಕನಾದ ಸಾಧಕನೇ ಪ್ರಸಾದೀ. ಪ್ರಸಾದಿಯು ತನ್ನ ಆಹಾರಾದಿಗಳನ್ನು ಗುರು-ಲಿಂಗ-ಜಂಗಮರಿಗೆ ಅರ್ಪಿಸಿ, ಪ್ರತಿದಿನವೂ ಅವರ ಪ್ರಸಾದವನ್ನು ಸೇವಿಸುವುದೇ ಅವನ ಮೊದಲನೆಯ ನಿಯಮ. ಇದೇ ಪ್ರಸಾದಿಸ್ಥಲಾಂತರ್ಗತ ಪ್ರಸಾದಿಸ್ಥಲ.[೧೦೩]

ಗುರುಮಾಹಾತ್ಮ್ಯಸ್ಥಲ ಈ ಸ್ಥಲದ ಎರಡನೆಯ ಅವಾಂತರಸ್ಥಲ. ಈ ಲೋಕದಲ್ಲಿ ಭೋಗ-ಮೋಕ್ಷರೂಪ ಸಕಲಸಿದ್ಧಿಪ್ರದ ಕ್ರಿಯೆಗಳಿಗೆ ಗುರುವೇ ಮೂಲಕಾರಣನಾಗಿರುವನು. ಇದಕ್ಕೆ "ನ ಗುರೋರಧಿಕಂ ನ ಗುರೋರಧಿಕಮ್" (ಗುರುವಿಗಿಂತ ದೊಡ್ಡವನಿಲ್ಲ, ಗುರುವಿಗಿಂತ ದೊಡ್ಡವನಿಲ್ಲ) ಎಂಬ ಶಿವರಹಸ್ಯ ವಾಕ್ಯವೇ ಪ್ರಮಾಣ. ಏಕೆಂದರೆ ಗುರುವು ಮಾನವದೇಹಧಾರಿಯಾದ ಸಾಕ್ಷಾತ್ ಪರಮೇಶ್ವರನೇ ಆಗಿದ್ದಾನೆ. ಹಸ್ತಪಾದಾದಿಗಳ ಸಾಮ್ಯದಿಂದ ಅವನನ್ನು ಸಾಮಾನ್ಯ ಮನುಷ್ಯನೆಂದು ತಿಳಿಯಬಾರದು. ಗುರುವನ್ನು ಇತರರೊಡನೆ ಹೋಲಿಸಿ ಮಾತನಾಡಿದರೆ ಸಾಧಕನ ಶ್ರೇಯಸ್ಸು ನಷ್ಟವಾಗುವುದು. ಆದುದರಿಂದ-

ಗುರುಭಕ್ತಿವಿಹೀನಸ್ಯ ಶಿವಭಕ್ತಿರ್ನ ಜಾಯತೇ।
ತತಃ ಶಿವೇ ಯಥಾ ಭಕ್ತಿಸ್ತಥಾ ಭಕ್ತಿರ್ಗುರಾವಪಿ॥[೧೦೪]

"ಗುರು ಭಕ್ತಿಯಿಲ್ಲದವನಿಗೆ ಶಿವಭಕ್ತಿಯು ಹುಟ್ಟುವುದಿಲ್ಲ, ಆದುದರಿಂದ ಶಿವನಂತೆ ಗುರುವಿನಲ್ಲಿಯೂ ಭಕ್ತಿಯನ್ನಿಡಬೇಕು" -ಎಂದು ಶ್ರೀ ರೇಣುಕಾಚಾರ್ಯರು ಅಪ್ಪಣೆ ಮಾಡಿದ್ದಾರೆ. (ಗುರುತತ್ತ್ವದ ವಿಸ್ತಾರವಾದ ವಿವೇಚನೆಗೆ ಮೂರನೇ ಪರಿಚ್ಛೇದವನ್ನು ಅವಲೋಕಿಸಬಹುದು).

ಪ್ರಸಾದಿಸ್ಥಲದ ಮೂರನೆಯ ಅವಾಂತರಸ್ಥಲ ಲಿಂಗಮಾಹಾತ್ಮ್ಯಸ್ಥಲ. ವೀರಶೈವರಿಂದ ಪೂಜಿಸಲ್ಪಡುವ ಈ ಇಷ್ಟಲಿಂಗವು ಸರ್ವಕ್ಕೂ ಕಾರಣನಾದ ಶಿವನ ಪ್ರತಿರೂಪವಾಗಿದೆ. ಇದೇ ಎಲ್ಲ ಲೋಕಗಳಿಗೂ, ಎಲ್ಲ ವೇದಗಳಿಗೂ ಸಹ ಕಾರಣವಾಗಿದೆ. ಜನ್ಮವೆಂಬ ಸಮುದ್ರದಲ್ಲಿ ದಾಟಿಸುವದು ಸಹ ಇದೇ ಆಗಿದೆ. ಇದೇ ಲಿಂಗತತ್ತ್ವವು ಯೋಗಿಗಳ ಹೃದಯದಲ್ಲಿ ಜ್ಯೋತಿರ್ಲಿಂಗರೂಪದಿಂದ ಬೆಳಗುತ್ತಿದೆ. ಚರಾಚರಾತ್ಮಕವಾದ ಪ್ರಪಂಚದ ಅಧಿಪತ್ಯವು ಇದರಿಂದ ಸ್ವತಃ ಸಿದ್ಧವಾಗಿದೆ.

---

[೧೦೨] ಪ್ರಸಾದೇ ಶಾಂಭವೇ ಸಿದ್ಧೇ ಪರಮಾನಂದಕಾರಣೇ।
ಸರ್ವಂ ಶಿವಮಯಂ ವಿಶ್ವಂ ದೃಶ್ಯತೇ ನಾತ್ರ ಸಂಶಯಃ॥ -ಸಿ.ಶಿ, ೧೧.೭೨

[೧೦೩] ಸಿ.ಶಿ, ೧೧.೬-೧೭

[೧೦೪] ಸಿ.ಶಿ, ೧೧.೨೪

ಪ್ರಸಾದಿಸ್ಥಲದಲ್ಲಿನ ಸಾಧಕನು ತಾನು ಪೂಜಿಸುವ ಇಷ್ಟಲಿಂಗದ ಮಹಿಮೆಯನ್ನು ತಿಳಿದು- "ಶಿವಶಕ್ತಿಸಮಾಯೋಗಂ ವಿಶ್ವಂ ಲಿಂಗಂ ತದುಚ್ಯತೇ"[೧೦೫] (ಶಿವಶಕ್ತಿಯರ ಸಂಬಂಧವುಳ್ಳ ಈ ಲಿಂಗವು ವಿಶ್ವವೆನಿಸುವುದು) ಎಂಬ ಶ್ರೀ ರೇಣುಕಾಚಾರ್ಯರ ಉಕ್ತಿಯಂತೆ ಸಮಸ್ತ ಪ್ರಪಂಚವೇ ಲಿಂಗರೂಪವಾಗಿರುವುದು ಎಂದು ಭಾವಿಸುತ್ತಾನೆ. (ಲಿಂಗತತ್ತ್ವದ ವಿಸ್ತಾರವಾದ ವಿವೇಚನೆಗೆ ಮೂರನೆಯ ಪರಿಚ್ಛೇದವನ್ನು ನೋಡಬಹುದು).

ಜಂಗಮಮಾಹಾತ್ಮ್ಯಸ್ಥಲವು ಈ ಸ್ಥಲದ ನಾಲ್ಕನೆಯ ಅವಾಂತರಸ್ಥಲ. ಶಿವಜ್ಞಾನ ಸಂಪನ್ನರಾದ ಶಿವಯೋಗಿಗಳೇ ಜಂಗಮರೆಂದು ಕರೆಯಲ್ಪಡುತ್ತಾರೆ. (ಜಂಗಮತತ್ತ್ವದ ವಿವೇಚನೆಗೆ ಮೂರನೆಯ ಪರಿಚ್ಛೇದವನ್ನು ನೋಡಬಹುದು.) ಪ್ರಸಾದಿಸ್ಥಲದ ಸಾಧಕನು ಹೇಗೆ ಗುರು ಮತ್ತು ತನ್ನ ಇಷ್ಟಲಿಂಗದ ಮಹಿಮೆಯನ್ನು ತಿಳಿದು ಅವೆರಡನ್ನೂ ಅವಧಾನ ಭಕ್ತಿಯಿಂದ ಪೂಜಿಸುತ್ತಾನೆಯೋ ಹಾಗೆಯೇ ಜಂಗಮನ ವಿಷಯದಲ್ಲಿ ಸಹ ವ್ಯವಹರಿಸಬೇಕು. ಏಕೆಂದರೆ ಅಂತಹ ಶಿವಯೋಗಿಗಳು ದುರ್ಲಭವೇ ಸರಿ. ಅದನ್ನು ಸಿದ್ಧಾಂತ ಶಿಖಾಮಣಿಯು ಹೀಗೆ ನಿರೂಪಿಸುತ್ತದೆ-

> ದುರ್ಲಭಂ ಹಿ ಶಿವಜ್ಞಾನಂ ದುರ್ಲಭಂ ಶಿವಚಿಂತನಮ್।
> ಯೇಷಾಮೇತದ್‌ದ್ವಯಂ ಚಾಸ್ತಿ ತೇ ಹಿ ಸಾಕ್ಷಾಚ್ಛಿವಾತ್ಮಕಾಃ॥[೧೦೬]

"ಶಿವಜ್ಞಾನವು ದುರ್ಲಭವಾದುದು; ಶಿವನೇ ನಾನೆಂಬ ಚಿಂತನವೂ ದುರ್ಲಭವಾದುದು; ಇವೆರಡೂ ಯಾರಲ್ಲಿರುವುವೋ ಅವರೇ ಪ್ರತ್ಯಕ್ಷವಾಗಿ ಶಿವಸ್ವರೂಪಿಗಳು."

ಈ ರೀತಿಯಾಗಿ ದುರ್ಲಭರಾದ ಶಿವಜ್ಞಾನಸಂಪನ್ನರಾದ ಶಿವಯೋಗಿಗಳ ಸಹವಾಸದಿಂದ, ಅವರ ಸೇವೆಯಿಂದ ಮತ್ತು ಅವರ ಜ್ಞಾನೋಪದೇಶದ ಶ್ರವಣದಿಂದ ಎಲ್ಲ ಪಾಪಗಳ ನಿವಾರಣೆ, ಮೋಕ್ಷಸಾಧನವಾದ ಶಿವಜ್ಞಾನ, ಎಲ್ಲ ಸಿದ್ಧಿಗಳೂ ಲಭಿಸುತ್ತವೆ.[೧೦೭] ಆದುದರಿಂದ ಪ್ರಸಾದಿಸ್ಥಲದಲ್ಲಿನ ಸಾಧಕನು ಜಂಗಮರ ಸೇವೆಯನ್ನೂ ಸಹ ಮಾಡತಕ್ಕದ್ದೆಂದು ಬೋಧಿಸಲು ಜಂಗಮಮಾಹಾತ್ಮ್ಯಸ್ಥಲವು ಉಪದಿಷ್ಟವಾಗಿದೆ.

ಭಕ್ತಮಾಹಾತ್ಮ್ಯಸ್ಥಲವು ಈ ಸ್ಥಲದ ಐದನೆಯ ಅವಾಂತರ ಸ್ಥಲವಾಗಿದೆ. ಯಾರು ಮನೋವಾಕ್ಕರ್ಮಗಳಿಂದ ಅವ್ಯಯನಾದ ಪರಮಾತ್ಮನನ್ನು ಭಜಿಸುತ್ತಾರೆಯೋ, ಅವರೇ ಭಕ್ತರು. ಶಿವಭಕ್ತಿಯು ಸಂಸಾರಭಯನಾಶಕವಾದುದು. ಶಿವಭಕ್ತಿಹೀನರ ವೇದಾಧ್ಯಯನ, ಶಾಸ್ತ್ರಾಧ್ಯಯನ, ಯಜ್ಞಗಳು ಮತ್ತು ತಪಸ್ಸುಗಳು ನಿಷ್ಫಲವಾಗುತ್ತವೆ. ಸೂರ್ಯನ

---

[೧೦೫] ಸಿ.ಶಿ, ೧೧.೩೨

[೧೦೬] ಸಿ.ಶಿ, ೧೧.೪೧

[೧೦೭] ಸರ್ವಸಿದ್ಧಿಕರಂ ಪುಂಸಾಂ ದರ್ಶನಂ ಶಿವಯೋಗಿನಾಮ್।
ಸ್ಪರ್ಶನಂ ಪಾಪಶಮನಂ ಪೂಜನಂ ಮುಕ್ತಿಸಾಧನಮ್॥
ಕಿಂ ವಾ ಫಲಂ ಹಿ ನೋ ಸಿದ್ಧ್ಯೇತ್ ಸಂಪರ್ಕಾಚ್ಛಿವಯೋಗಿನಾಮ್॥
-ಸಿ.ಶಿ, ೧೧.೪೩-೪

ಕುದುರೆಗಳು ಕತ್ತಲೆಯಲ್ಲಿದ್ದರೂ ಹೇಗೆ ಹೆದರುವುದಿಲ್ಲವೋ, ಹಾಗೆಯೇ ಶಿವಭಕ್ತರಿಗೆ ಕರ್ಮಬಂಧನದ ಹೆದರಿಕೆಯುಂಟಾಗುವುದಿಲ್ಲ. ಶಿವಭಕ್ತಿಸಂಪನ್ನನಾದವನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಅಥವಾ ಅಂತ್ಯಜನೇ ಆಗಿರಲಿ ಅವನು ಶಿವನಂತೆ ಮಾನ್ಯನು. ಬೆಂಕಿಯಿಂದ ಸುಟ್ಟುಹೋದ ಕಟ್ಟಿಗೆಯಲ್ಲಿ ಹೇಗೆ ಜಾತಿಭೇದವಿಲ್ಲವೋ ಹಾಗೆಯೇ ಶಿವಭಕ್ತಿಯು ಸಮಾವೇಶವಾದಾಗ ಜಾತಿಕಲ್ಪನೆಯು ಇರುವುದಿಲ್ಲ.[೧೦೮] ಈ ಪ್ರಕಾರವಾಗಿ ಶಿವಭಕ್ತರಲ್ಲಿ ಜಾತಿಭೇದವನ್ನು ಬಿಟ್ಟು ಎಲ್ಲರೂ ಸಮಭಾವದಿಂದ ವರ್ತಿಸತಕ್ಕದ್ದು ಎಂದು ಬೋಧಿಸುವುದೇ ಭಕ್ತಮಾಹಾತ್ಮ್ಯಸ್ಥಲದ ಉದ್ದೇಶವಾಗಿದೆ. ಆದುದರಿಂದ ಪ್ರಸಾದಿಸ್ಥಲದ ಸಾಧಕನು-

> ಬ್ರಾಹ್ಮಣಃ ಕ್ಷತ್ರಿಯೋ ವಾಽಪಿ ವೈಶ್ಯೋ ವಾ ಶೂದ್ರ ಏವ ವಾ।
> ಅಂತ್ಯಜೋ ವಾ ಶಿವೇ ಭಕ್ತಃ ಶಿವವನ್ಮಾನ್ಯ ಏವ ವಾ॥[೧೦೯]

ಎಂಬ ರೇಣುಕ ಭಗವತ್ಪಾದರ ಅಪ್ಪಣೆಯಂತೆ ಎಲ್ಲ ಜಾತಿಯ ಶಿವಭಕ್ತರಲ್ಲಿ ಸಮಾನವಾದ ಪ್ರೀತಿಯಿಂದ ವ್ಯವಹರಿಸುತ್ತಾನೆ. ಇದೇ ಪ್ರಸಾದಿಯ ಭಕ್ತಮಾಹಾತ್ಮ್ಯಸ್ಥಲ.

ಶರಣಮಾಹಾತ್ಮ್ಯಸ್ಥಲ ಪ್ರಸಾದಿಸ್ಥಲದ ಆರನೆಯ ಅವಾಂತರಸ್ಥಲ. "ಶಿವ ಏಕೋ ಧ್ಯೇಯಃ ಶಿವಂಕರಃ ಸರ್ವಮನ್ಯತ್ ಪರಿತ್ಯಜ್ಯ" ಎಂಬ ಶ್ರುತಿವಾಕ್ಯಾನುಸಾರವಾಗಿ ಯಾವಾತನು ಕೇವಲ ಶಿವನನ್ನೇ ಆಶ್ರಯಿಸಿರುತ್ತಾನೆಯೋ ಅವನೇ ಶರಣ. ಶರಣಾಗತ ರಕ್ಷಕನಾದ ಪರಮಾತ್ಮನ ಅನುಗ್ರಹದಿಂದ ಎಲ್ಲ ಇಷ್ಟಾರ್ಥಗಳು ಸಿದ್ಧಿಸುತ್ತವೆ. ಆದುದರಿಂದ ಶಿವನಲ್ಲಿ ಮೊರೆಹೊಕ್ಕವನ ಜನ್ಮವೇ ಸಫಲವಾದ ಜನ್ಮ, ಇತರರ ಜನ್ಮವು ವ್ಯರ್ಥವೆಂದು ತಿಳಿಯಬೇಕು. ಶಿವನಲ್ಲಿ ಲೀನಚಿತ್ತರಾದವರ ಕುಲವೇ ಪವಿತ್ರವಾದುದು.[೧೧೦] ಅದೇ ಶಿವನ ಅನುಗ್ರಹದ ಫಲವೆಂದು ತಿಳಿದು ಅನನ್ಯಭಾವದಿಂದ ಶಿವಶರಣಾಗತಿಯ ಪ್ರಾಪ್ತಿಯೇ ಪ್ರಸಾದಿಯ ಶರಣಮಾಹಾತ್ಮ್ಯಸ್ಥಲ.

---

[೧೦೮] ಯೇ ಭಜಂತಿ ಮಹಾದೇವಂ ಪರಮಾತ್ಮನಮವ್ಯಯಮ್।
ಕರ್ಮಣಾ ಮನಸಾ ವಾಚಾ ತೇ ಭಕ್ತಾ ಇತಿ ಕೀರ್ತಿತಾಃ॥
ಕಿಂ ವೇದೈಃ ಕಿಂ ತತಃ ಶಾಸ್ತ್ರೈಃ ಕಿಂ ಯಜ್ಞೈಃ ಕಿಂ ತಪೋವ್ರತೈಃ।
ನಾಸ್ತಿ ಚೇಚ್ಛಾಂಕರೀ ಭಕ್ತಿರ್ದೇಹಿನಾಂ ಜನ್ಮರೋಗಿಣಾಮ್॥
ಶಿವಾಶ್ರಿತಾನಾಂ ಜಂತೂನಾಂ ಕರ್ಮಣಾ ನಾಸ್ತಿ ಸಂಗಮಃ।
ವಾಜಿನಾಂ ದಿನನಾಥಸ್ಯ ಕಥಂ ತಿಮಿರಜಂ ಭಯಮ್॥
ಶಿವಭಕ್ತಿಸಮಾವೇಶೇ ಕ್ವ ಜಾತಿಪರಿಕಲ್ಪನಾ।
ಇಂಧನೇಷ್ವಗ್ನಿದಗ್ಧೇಷು ಕೋ ವಾ ಭೇದಃ ಪ್ರಕೀರ್ತ್ಯತೇ॥
-ಸಿ.ಶಿ, ೧೧.೪೬,೪೮,೫೨,೫೫

[೧೦೯] ಸಿ.ಶಿ, ೧೧.೧೦

[೧೧೦] ಸರ್ವಾತ್ಮನಾ ಶಿವಾಪತ್ತಿಃ ಶರಣಸ್ಥಲಮುಚ್ಯತೇ।
ಪ್ರಪದ್ಯತೇ ಶಿವಂ ಯತ್ತು ಶರಣಂ ತದುದಾಹೃತಮ್॥

ಪ್ರಸಾದಿಸ್ಥಲದ ಏಳನೆಯ ಹಾಗೂ ಕೊನೆಯ ಅವಾಂತರಸ್ಥಲವೇ ಪ್ರಸಾದ ಮಾಹಾತ್ಮ್ಯಸ್ಥಲ. ಇಲ್ಲಿ ಪ್ರಸಾದ ಎಂದರೆ ಶಿವಾನುಗ್ರಹ ಎಂದರ್ಥ. ಶಿವನಲ್ಲಿ ಭಕ್ತಿಯು ಹೆಚ್ಚಾಗಲು ಶಿವಪ್ರಸಾದವೇ ಕಾರಣ. ಬ್ರಹ್ಮಾದಿದೇವತೆಗಳೆಲ್ಲರೂ ಶಿವಪ್ರಸಾದದಿಂದಲೇ ತಮ್ಮ ತಮ್ಮ ಸ್ಥಾನವನ್ನು ಪಡೆದಿರುತ್ತಾರೆ. ಶಿವಪ್ರಸಾದದಿಂದಲೇ ಸಮಸ್ತ ಪ್ರಪಂಚವು ಶಿವನ ಸ್ವರೂಪವೆಂಬಂತೆ ಕಂಡುಬರುತ್ತದೆ. ಗರ್ಭದಲ್ಲಿದ್ದವನೇ ಆಗಲಿ, ಹುಟ್ಟುವವನೇ ಆಗಲಿ, ಬ್ರಾಹ್ಮಣನೇ ಆಗಲಿ ಅಥವಾ ಅಂತ್ಯಜನೇ ಆಗಲಿ ಶಿವಪ್ರಸಾದದಿಂದಲೇ ಮುಕ್ತಿಯನ್ನು ಪಡೆಯುವರು. ಆದುದರಿಂದ ಈ ಪ್ರಪಂಚದಲ್ಲಿ ಶಿವಪ್ರಸಾದಕ್ಕಿಂತಲೂ ಅಧಿಕವಾದ ಅಥವಾ ಅದಕ್ಕೆ ಸಮನಾದದ್ದು ಯಾವುದೂ ಕೂಡ ಇರುವುದಿಲ್ಲ.[೧೧೧] ಈ ಬಗೆಯ ಶಿವಪ್ರಸಾದದ ಪ್ರಾಪ್ತಿಯೇ ಪ್ರಸಾದಿಸ್ಥಲದ ಸಾಧಕನ ಕೊನೆಯ ಉದ್ದೇಶವಾಗಿರುತ್ತದೆ. ಅಂತಹ ಪ್ರಸಾದವನ್ನು ಪಡೆಯುವುದರಿಂದಲೇ ಅವನನ್ನು 'ಪ್ರಸಾದೀ' ಎಂದು ಕರೆಯಲಾಗಿದೆ.

ಈ ರೀತಿಯಾಗಿ ಗುರು-ಲಿಂಗ-ಜಂಗಮರ ಮಹಿಮೆಯನ್ನು ತಿಳಿದು, ಅವರನ್ನು ಪೂಜಿಸಿ ಮತ್ತು ಅನ್ನ-ಪಾನಾದಿಗಳಿಂದ ತೃಪ್ತಿಪಡಿಸಿ, ಅವರು ಭುಂಜಿಸಿ ಉಳಿದ ಪ್ರಸಾದ ರೂಪ ಅನ್ನವನ್ನು ಊಟಮಾಡುವ, ಶಿವಭಕ್ತರಲ್ಲಿ ಜಾತಿಭೇದವನ್ನು ತ್ಯಜಿಸಿ ಸಮಾನವಾಗಿ ಪ್ರೀತಿಯಿಂದ ಕಾಣುವ, ಶಿವಶರಣರ ಮತ್ತು ಶಿವಪ್ರಸಾದದ ಮಹಿಮೆಯನ್ನು ತಿಳಿದು ಅನನ್ಯಭಾವದಿಂದ ಶಿವನಿಗೇ ಶರಣುಹೋಗುವ ಮತ್ತು ಶಿವಾನುಗ್ರಹ ರೂಪ ಪ್ರಸಾದವನ್ನು ಪಡೆಯುವ ಸಾಧಕನೇ ಪ್ರಸಾದೀ. ಅವನ ಅವಧಾನಭಕ್ತಿಯೇ ಇಂತಹ ಶಿವಪ್ರಸಾದಪ್ರಾಪ್ತಿಗೆ ಮೂಲವಾಗಿದೆ. ಅದನ್ನು ಮಾಯಿದೇವನು ಹೀಗೆ ನಿರೂಪಿಸಿದ್ದಾನೆ-

ಅವಧಾನಾತ್ಮಿಕಾ ಭಕ್ತಿರಿತಿ ಪ್ರೋಕ್ತಾ ಮಹಾತ್ಮಭಿಃ।
ಭಕ್ತ್ಯಾ ತಯಾಸ್ಯ ಜೀವಸ್ಯ ಪ್ರಸಾದಿಸ್ಥಲಮಾಗತಮ್॥[೧೧೨]

ಪ್ರಪನ್ನಪಾರಿಜಾತಸ್ಯ ಶಿವಸ್ಯ ಪರಮಾತ್ಮನಃ।
ಪ್ರಪನ್ನಾನಾಂ ಮಹಾದೇವಂ ಪರಿಪಕ್ವಾಂತರಾತ್ಮನಾಮ್।
ಜನ್ಮೈವ ಜನ್ಮ ನಾನ್ಯೇಷಾಂ ವೃಥಾ ಜನನಸಂಗಿನಾಮ್॥
ತತ್ಕುಲಂ ಹಿ ಸದಾ ಶುದ್ಧಂ ಸಫಲಂ ತಸ್ಯ ಜೀವಿತಮ್।
ಯಸ್ಯ ಚಿತ್ತಂ ಶಿವೇ ಸಾಕ್ಷಾದ್ವಿಲೀನಮಬಹಿರ್ಮುಖಮ್॥
-ಸಿ.ಶಿ, ೧೧.೫೫,೫೬,೬೧,೬೨-೬೪

[೧೧೧] ಪ್ರಸಾದಮೂಲಾ ಸರ್ವೇಷಾಂ ಭಕ್ತಿರವ್ಯಭಿಚಾರಿಣೀ।
ಶಿವಪ್ರಸಾದಹೀನಸ್ಯ ಭಕ್ತಿಶ್ಚಾಪಿ ನ ಸಿದ್ಧ್ಯತಿ॥
ಗರ್ಭಸ್ಥೋ ಜಾಯಮಾನೋ ವಾ ಜಾತೋ ವಾ ಬ್ರಾಹ್ಮಣೋಽಥವಾ।
ಅಂತ್ಯಜೋ ವಾಪಿ ಮುಚ್ಯೇತ ಪ್ರಸಾದೇ ಸತಿ ಶಾಂಕರೇ॥ -ಸಿ.ಶಿ, ೧೧.೬೯-೭೦

[೧೧೨] ಅನುಭವಸೂತ್ರ, ೫.೭೫

"ಮಹಾತ್ಮರು ಇದನ್ನು ಅವಧಾನಭಕ್ತಿಯೆಂದು ಕರೆದಿದ್ದಾರೆ. ಈ ಅವಧಾನಭಕ್ತಿಯಿಂದ ಜೀವಾತ್ಮನಿಗೆ ಪ್ರಸಾದಿಸ್ಥಲ ಪ್ರಾಪ್ತವಾಗುತ್ತದೆ."

ಅವಧಾನಭಕ್ತಿಯಿಂದ ಶಿವಪ್ರಸಾದವನ್ನು ಪಡೆದು, ಸಮಸ್ತ ಜಗತ್ತನ್ನು ಶಿವರೂಪವೆಂದು ನೋಡುತ್ತಾ ಸದಾ ಪ್ರಸನ್ನಮನಸ್ಕನಾದ ಸಾಧಕನು ಸರೋವರದಲ್ಲಿನ ಕಮಲದ ಎಲೆಯಂತೆ ಸಂಸಾರದಲ್ಲಿದ್ದರೂ ಸಹ ನಿರ್ಲಿಪ್ತನಾಗಿರುತ್ತಾನೆ.

೪. ಪ್ರಾಣಲಿಂಗಿಸ್ಥಲ ಮತ್ತು ಪ್ರಾಣಲಿಂಗೀ

ಪ್ರಾಣಲಿಂಗಿಸ್ಥಲವು ಷಟ್‌ಸ್ಥಲಸೋಪಾನದ ನಾಲ್ಕನೆಯ ಸೋಪಾನ. ಹಿಂದಿನ ಸ್ಥಲದಲ್ಲಿ ನಿರೂಪಿತನಾದ ಶಿವಾನುಗ್ರಹ ಸಂಪನ್ನನಾದ ಪ್ರಸಾದಿಯು ಯಾವಾಗ ತನ್ನ ಹೃದಯದಲ್ಲಿ ನೆಲೆಸಿರುವ ಜ್ಯೋತಿರೂಪದಲ್ಲಿರುವ ಪ್ರಾಣಲಿಂಗದ ಉಪಾಸಕನಾಗುತ್ತಾನೆಯೋ, ಆಗ 'ಪ್ರಾಣಲಿಂಗೀ' ಎನಿಸಿಕೊಳ್ಳುತ್ತಾನೆ. ಈ ಸ್ಥಲದಲ್ಲಿನ ಸಾಧಕನ ಭಕ್ತಿಯನ್ನು 'ಅನುಭವಭಕ್ತಿ' ಎಂದು ಕರೆಯಲಾಗುತ್ತದೆ. ಈ ಭಕ್ತಿಯಿಂದ ಸಾಧಕನು ಭ್ರಮರಕೀಟನ್ಯಾಯದಂತೆ ಜೀವದ ಭ್ರಮೆಯನ್ನು ತೊರೆದು ಶಿವಾನುಭವಿಯಾಗುತ್ತಾನೆ.[೧೧೩]

ಷಟ್‌ಸ್ಥಲದ ನಾಲ್ಕನೆಯ ಸೋಪಾನವಾದ ಈ ಸ್ಥಲದಲ್ಲಿ ಪ್ರಾಣಲಿಂಗಿಸ್ಥಲ, ಪ್ರಾಣಲಿಂಗಾರ್ಚನಸ್ಥಲ, ಶಿವಯೋಗಸಮಾಧಿಸ್ಥಲ, ಲಿಂಗನಿಜಸ್ಥಲ ಮತ್ತು ಅಂಗಲಿಂಗ ಸ್ಥಲಗಳೆಂಬ ಐದು ಅವಾಂತರಸ್ಥಲಗಳಿವೆ.[೧೧೪] ಇವುಗಳಲ್ಲಿ ಪ್ರಾಣಲಿಂಗಿಯು ಪಾಲಿಸಬೇಕಾದ ಆಚಾರಗಳು ಪ್ರತಿಪಾದಿತವಾಗಿವೆ.

ತನ್ನ ಮೂಲಾಧಾರಚಕ್ರದಲ್ಲಿರುವ ಅಪಾನವಾಯುವಿನೊಡನೆ ಗುರುವಿನ ಉಪದೇಶಾನುಸಾರವಾಗಿ ಪ್ರಾಣವಾಯುವಿನ ಸಂಘಟ್ಟನವಾಗುವುದೋ, ಆಗ ದಿವ್ಯ ಜ್ಯೋತಿಯೊಂದು ಉತ್ಪನ್ನವಾಗುತ್ತದೆ. ಮೂಲಾಧಾರದಿಂದ ಉತ್ಪನ್ನವಾದ ಈ ಜ್ಯೋತಿಯು ಸುಷುಮ್ನಾನಾಡಿಯ ಮೂಲಕ ಹೊರಟು ಕುಂಡಲಿನಿಯನ್ನು ಮೇಲ್ಮುಖವನ್ನಾಗಿ ಮಾಡಿ ಹೃದಯದಲ್ಲಿನ ಅನಾಹತಚಕ್ರದಲ್ಲಿ ಅರ್ಥಾತ್ ದ್ವಾದಶದಲಕಮಲ ಕರ್ಣಿಕೆಯಲ್ಲಿ ಸ್ಥಿರವಾಗಿ ನಿಲ್ಲುತ್ತದೆ. ಈ ಜ್ಯೋತಿಯು ಅಂಗುಷ್ಠ ಗಾತ್ರದಷ್ಟಿದ್ದು ಹವಳದ ಬಣ್ಣದಿಂದಿರುತ್ತದೆಯೆಂದು ಶಿವಯೋಗಿಗಳು ವರ್ಣಿಸುತ್ತಾರೆ. ಸೂರ್ಯನು ಉದಯಿಸಲು ಹೇಗೆ ಮಂಜಿನ ಕಣಗಳು ಸೂರ್ಯನ ಪ್ರಕಾಶದಲ್ಲಿ ಲಯವಾಗುತ್ತವೆಯೋ, ಹಾಗೆಯೇ ಈ ಜ್ಯೋತಿಯಲ್ಲಿ ಪ್ರಾಣವಾಯು ಲಯವಾಗುತ್ತದೆ

---

[೧೧೩] ಕೀಟೋ ಭ್ರಮರಯೋಗೇನ ಭ್ರಮರೋ ಭವತಿ ಧ್ರುವಮ್।
ಮಾನವಃ ಶಿವಯೋಗೇನ ಶಿವೋ ಭವತಿ ನಿಶ್ಚಯಮ್॥
-ಲಿಂಗಪುರಾಣ. ಉ, ೨೧.೯೫

[೧೧೪] ಸಿ.ಶಿ, ೧೨.೪-೫

ಎನ್ನುವ ಕಾರಣ ಪ್ರಾಣಶಕ್ತಿವಿಶಿಷ್ಟವಾದ ಈ ಜ್ಯೋತಿಯನ್ನು ಪ್ರಾಣಲಿಂಗವೆಂದು ವೀರಶೈವಾಚಾರ್ಯರು ಪ್ರತಿಪಾದಿಸಿದ್ದಾರೆ.[೧೧೫]

ಶಿವಯೋಗದಿಂದ ಕೂಡಿದ ಜ್ಞಾನಿಗಳ ಹೃದಯದಲ್ಲಿ ಈ ಪ್ರಾಣಲಿಂಗವು ದೀಪದಂತೆ ಪ್ರಕಾಶಿಸುತ್ತಿರುವುದು. ಗುರೂಪದೇಶವಿಲ್ಲದ ಪ್ರಾಕೃತರಿಂದ ಈ ಲಿಂಗವು ತಿಳಿಯಲ್ಪಡುವುದಿಲ್ಲ.[೧೧೬] ಚರಾಚರಾತ್ಮಕವಾದ ಈ ಜಗತ್ತು ಮಾಯಿಕಗುಣಭೇದದಿಂದ ಉತ್ಪನ್ನವಾದುದೆಂದೂ, ಆದುದರಿಂದ ಹೇಯವೆಂದು ತಿಳಿದು, ಸಚ್ಚಿದಾನಂದ ರೂಪವಾದ ಪ್ರಾಣಲಿಂಗದಲ್ಲಿ ಸದಾ ಮನಸ್ಸನ್ನು ಲಯಗೊಳಿಸುವ ಸಾಧಕನೇ ಪ್ರಾಣಲಿಂಗೀ. ಅದನ್ನು ಸಿದ್ಧಾಂತ ಶಿಖಾಮಣಿಯು ಹೀಗೆ ನಿರೂಪಿಸಿದೆ-

ಸಂವಿಲ್ಲಿಂಗಪರಾಮರ್ಶೀ ಬಾಹ್ಯವಸ್ತುಪರಾಙ್ಮುಖಃ।
ಯಃ ಸದಾ ವರ್ತತೇ ಯೋಗೀ ಪ್ರಾಣಲಿಂಗೀ ಸ ಉಚ್ಯತೇ॥
ಮಾಯಾವಿಕಲ್ಪಜಂ ವಿಶ್ವಂ ಹೇಯಂ ಸಂಚಿಂತ್ಯ ನಿತ್ಯಶಃ।
ಚಿದಾನಂದಮಯೇ ಲಿಂಗೇ ವಿಲೀನಃ ಪ್ರಾಣಲಿಂಗವಾನ್॥[೧೧೭]

"ಯಾವನು ಸ್ಥಾವರಲಿಂಗಾದಿಗಳಲ್ಲಿಯೂ, ತತ್ಪೂಜಾಸಾಮಗ್ರಿಗಳಲ್ಲಿಯೂ ಪರಾಙ್ಮುಖನಾಗಿ, ಯಾವಾಗಲೂ ಚಿದ್ರೂಪವಾದ ಪ್ರಾಣಲಿಂಗದ ವಿಚಾರವನ್ನೇ ಮಾಡುತ್ತಿರುವನೋ ಆ ಶಿವಯೋಗಿಯು ಪ್ರಾಣಲಿಂಗಿಯೆನಿಸುವನು. ಈ ಜಗತ್ತು ಮಾಯಿಕ ಗುಣಭೇದದಿಂದ ಉತ್ಪನ್ನವಾದುದೆಂದೂ, ಹೇಯವೆಂದೂ ಯಾವಾಗಲೂ ತಿಳಿದು, ಸಚ್ಚಿದಾನಂದಸ್ವರೂಪವಾದ ಪ್ರಾಣಲಿಂಗದಲ್ಲಿ ಮನಸ್ಸನ್ನು ಲಯಗೊಳಿಸುವವನು ಪ್ರಾಣಲಿಂಗಿಯೆನಿಸುತ್ತಾನೆ."

ಪೂರ್ವೋಕ್ತ ಭಕ್ತ - ಮಾಹೇಶ್ವರ - ಪ್ರಸಾದಿಸ್ಥಲಗಳು ಕರ್ಮಪ್ರಧಾನವಾದವುಗಳು. ನಾಲ್ಕನೆಯ ಸ್ಥಲವಾದ ಪ್ರಾಣಲಿಂಗಿಯು ಯೋಗ ಮತ್ತು ಜ್ಞಾನಪ್ರಧಾನವಾಗಿದೆ. ಈ ಸ್ಥಲದಲ್ಲಿಯೇ ಸಾಧಕನಿಗೆ ತನ್ನ ಚಿತ್‌ಸ್ವರೂಪದ ಅರ್ಥಾತ್ ಪ್ರಾಣಲಿಂಗದ ಜ್ಞಾನವುಂಟಾಗುತ್ತದೆ. ಇಂತಹ ಜ್ಞಾನಯೋಗಿಯೇ ಪ್ರಾಣಲಿಂಗಿ ಎಂದು ಕರೆಯಲ್ಪಡುತ್ತಾನೆ.[೧೧೮]

ಈ ಪ್ರಾಣಲಿಂಗಿಯು ಭ್ರಮರಕೀಟನ್ಯಾಯದಂತೆ ತನ್ನ ಹೃದಯಕಮಲದಲ್ಲಿರುವ ಪ್ರಾಣಲಿಂಗವನ್ನು ಮಾನಸಿಕ ವಸ್ತುಗಳಿಂದ ಯಾವಾಗಲೂ ಪೂಜಿಸುತ್ತಾನೆ. ಆ

---

[೧೧೫] ಸಿ.ಶಿ, ೧೨.೬-೭; ವೀರಶೈವಾನಂದಚಂದ್ರಿಕೆ, ಪು. ೪೫೬

[೧೧೬] ಸಿ.ಶಿ, ೧೨.೮

[೧೧೭] ಸಿ.ಶಿ, ೧೨.೧೦-೧೧

[೧೧೮] ಭಕ್ತೋ ಮಾಹೇಶ್ವರಶ್ಚೇತಿ ಪ್ರಸಾದೀತಿ ಚ ಕೀರ್ತಿತಃ।
ಕರ್ಮಪ್ರಾಧಾನ್ಯಯೋಗೇನ ಜ್ಞಾನಯೋಗೋಽಸ್ಯ ಕಥ್ಯತೇ॥
ಲಿಂಗಂ ಚಿದಾತ್ಮಕಂ ಬ್ರಹ್ಮ ತಚ್ಛಕ್ತಿಃ ಪ್ರಾಣರೂಪಿಣೀ।
ತದ್ರೂಪಲಿಂಗವಿಜ್ಞಾನೀ ಪ್ರಾಣಲಿಂಗೀತಿ ಕಥ್ಯತೇ॥ -ಸಿ.ಶಿ, ೧೨.೨-೩

ವಸ್ತುಗಳಾವುವೆಂದರೆ- ಕ್ಷಮೆಯೇ ಅಭಿಷೇಕ ಜಲ, ನಿತ್ಯಾನಿತ್ಯವಸ್ತುವಿವೇಕವೇ ವಸ್ತ್ರ, ಸತ್ಯವನ್ನು ನುಡಿಯುವುದೇ ಆಭರಣ, ವೈರಾಗ್ಯವೇ ಪುಷ್ಪಮಾಲಿಕೆ, ಶ್ರದ್ಧೆಯೇ ಧೂಪ, ಮೌನವೇ ಘಂಟಾನಾದ, ಲಿಂಗರೂಪದಲ್ಲಿ ಆಸಕ್ತಿಯುಳ್ಳ ಬುದ್ಧಿಯೇ ನಮಸ್ಕಾರ ಎಂದು ಪ್ರಾಣಲಿಂಗಾರ್ಚನೆಯ ಪದಾರ್ಥಗಳು ಪ್ರತಿಪಾದಿತವಾಗಿವೆ.[೧೧೯] ಪ್ರಾಣಲಿಂಗದ ಈ ಬಗೆಯ ಪೂಜಾಪದ್ಧತಿಯ ವಿಶೇಷ ವಿವರಣೆಗೆ ಮೂರನೆಯ ಪರಿಚ್ಛೇದವನ್ನು ಅವಲೋಕಿಸಬಹುದು.

ಈ ರೀತಿಯಾಗಿ ಮಾನಸಿಕ ವಸ್ತುಗಳಿಂದ ಪ್ರಾಣಲಿಂಗಾರ್ಚನಾಸಕ್ತನಾದ ಪ್ರಾಣಲಿಂಗಿಯು ಸಮಾಧಿಸ್ಥಿತಿಯನ್ನು ತಲುಪುತ್ತಾನೆ. ಅದೇ ಶಿವಯೋಗ ಸಮಾಧಿಸ್ಥಲ.

ಅಂತಃಕ್ರಿಯಾರತಸ್ಯಾಸ್ಯ ಪ್ರಾಣಲಿಂಗಾರ್ಚನಕ್ರಮೈಃ।
ಶಿವಾತ್ಮಧ್ಯಾನಸಂಪತ್ತಿಃ ಸಮಾಧಿರಿತಿ ಕಥ್ಯತೇ॥[೧೨೦]

"ಈ ಮೊದಲು ಹೇಳಿದ ಪ್ರಾಣಲಿಂಗಪೂಜಾಕ್ರಮಗಳಿಂದ ಅಂತರಂಗ ಪೂಜಾನಿರತನಾದ ಈ ಪ್ರಾಣಲಿಂಗಿಯ ಶಿವಜೀವೈಕ್ಯಾನುಸಂಧಾನರೂಪವಾದ ಸಂಪತ್ತೇ ಶಿವಯೋಗ ಸಮಾಧಿ ಎಂದು ಕರೆಯಲ್ಪಟ್ಟಿದೆ."

ಇಲ್ಲಿ ಪ್ರಾಣವೆಂದರೆ ಜೀವ, ಲಿಂಗವೆಂದರೆ ಶಿವ. ಶಿವ-ಜೀವರ ಐಕ್ಯಾನುಸಂಧಾನವೇ ಸಮಾಧಿ. ಶಿವ-ಜೀವರ ಐಕ್ಯಾನುಸಂಧಾನವಾಗಲು ಶಿವಯೋಗಸಿದ್ಧನಾದ ಸದ್ಗುರುವಿನ ಉಪದೇಶಾನುಸಾರವಾಗಿ ತನ್ನ ಸೂಕ್ಷ್ಮಶರೀರದಲ್ಲಿ ಮೂಲಾಧಾರದಿಂದ ಭ್ರೂಮಧ್ಯದವರೆಗಿನ ಆಧಾರ - ಸ್ವಾಧಿಷ್ಠಾನ - ಮಣಿಪೂರಕ - ಅನಾಹತ - ವಿಶುದ್ಧಿ - ಆಜ್ಞಾ ಎಂಬ ಹೆಸರಿನ ಷಟ್‌ಚಕ್ರ ಕಮಲಗಳನ್ನು ಭಾವಿಸಬೇಕು. ಇದೇ ರೀತಿಯಾಗಿ ಭ್ರೂಮಧ್ಯದ ಮೇಲ್ಭಾಗದಲ್ಲಿರುವ ಬ್ರಹ್ಮರಂಧ್ರದಲ್ಲಿ ಸಾವಿರದಲಗಳುಳ್ಳ ಕಮಲವನ್ನು ಭಾವಿಸಬೇಕು. ಆ ಕಮಲದ ಮಧ್ಯದಲ್ಲಿ ಸ್ವಚ್ಛವಾದ ಚಂದ್ರಮಂಡಲವನ್ನು, ಅದರ ಮಧ್ಯದಲ್ಲಿ ಅತ್ಯಂತ ಸೂಕ್ಷ್ಮರಂಧ್ರವನ್ನು ಕೈಲಾಸ ಸ್ಥಾನವೆಂದು ಭಾವಿಸಬೇಕು. ಅಲ್ಲಿರುವ ಬ್ರಹ್ಮಾದಿಸಕಲಕಾರಣಪುರುಷರಿಗೆ ಕಾರಣನಾದ ಶಿವನನ್ನು ತನಗಿಂತ ಬೇರೆಯಲ್ಲವೆಂದು (ನಾನೇ ಶಿವನೆಂದು) ತಿಳಿಯಬೇಕು. ಇಂತಹ ಧ್ಯಾನದ ಪೂರ್ಣಸ್ಥಿತಿಯೇ ಶಿವಯೋಗ ಸಮಾಧಿ.[೧೨೧]

---

೧೧೯. ಸಿ.ಶಿ, ೧೨.೧೩-೨೦

೧೨೦. ಸಿ.ಶಿ, ೧೨.೨೧

೧೨೧. ಅಂತಃ ಷಟ್‌ಚಕ್ರರೂಪಾಣಿ ಪಂಕಜಾನಿ ವಿಭಾವಯೇತ್।
ಬ್ರಹ್ಮಾದಿಸ್ಥಾನಭೂತಾನಿ ಭ್ರೂಮಧ್ಯಾಂತಾನಿ ಮೂಲತಃ॥
ಭ್ರೂಮಧ್ಯಾದೂರ್ಧ್ವಭಾಗೇ ತು ಸಹಸ್ರದಲಮಂಬುಜಮ್।
ಭಾವಯೇತ್ ತತ್ರ ವಿಮಲಂ ಚಂದ್ರಬಿಂಬಂ ತದಂತರೇ॥
ಸೂಕ್ಷ್ಮರಂಧ್ರಂ ವಿಜಾನೀಯಾತ್ ತತ್ಕೈಲಾಸಪದಂ ವಿದುಃ।
ತತ್ರಸ್ಥಂ ಭಾವಯೇಚ್ಛಂಭುಂ ಸರ್ವಕಾರಣಕಾರಣಮ್॥ -ಸಿ.ಶಿ, ೧೨.೨೨-೨೯

ಈ ಬಗೆಯ ಸಮಾಧಿಸಿದ್ಧನಾದ ಸಾಧಕನಿಗೆ ಯಾವಾಗಲೂ ಶಿವಾನಂದಾನುಭೂತಿಯುಂಟಾಗುತ್ತದೆ. ಪ್ರಾಣಲಿಂಗಿಯು ಆತ್ಮವೆಂಬ ಅರಣಿಯಿಂದ (ಯಜ್ಞದಲ್ಲಿ ಅಗ್ನಿಮಥನಕ್ಕೆ ಉಪಯೋಗಿಸುವ ಬನ್ನಿಮರದ ಕಟ್ಟಿಗೆ) ಉತ್ಪನ್ನವಾದ ಶಿವನೂ ತಾನೂ ಬೇರೆಯಲ್ಲವೆಂಬ ಜ್ಞಾನಾಗ್ನಿಯಿಂದ ಮಲಮಾಯಾದಿಪಾಶಸಮೂಹವನ್ನು ಭಸ್ಮ ಮಾಡುತ್ತಾನೆ. ಧರ್ಮಾಧರ್ಮರೂಪ ಕರ್ಮಗಳೆಂಬ ಮೂಲಗಳುಳ್ಳ, ಅವಿದ್ಯಾದಿ ಪಂಚಕ್ಲೇಶಗಳೆಂಬ ಪರ್ಣಗಳುಳ್ಳ, ಜನನ-ಮರಣರೂಪ ಸಂಸಾರವೆಂಬ ವಿಷವೃಕ್ಷವನ್ನು ಕತ್ತರಿಸುವುದರಲ್ಲಿ ಇಂತಹ ಶಿವಧ್ಯಾನವೇ ಕೊಡಲಿಯಂತಿರುವುದು. ಸಂಸಾರವೆಂಬ ಗಾಡಾಂಧಕಾರಕ್ಕೆ ಶಿವಧ್ಯಾನವು ಪ್ರಚಂಡ ಸೂರ್ಯನ ಸ್ವರೂಪವಾಗಿದೆ.[೧೨೨] ಪ್ರಾಣಲಿಂಗಿಸ್ಥಲದ ಸಾಧಕನು ಇಂತಹ ಅಂತರ್ಲಿಂಗಾನುಸಂಧಾನದಲ್ಲಿ ಯಾವಾಗಲೂ ಮಗ್ನನಾಗಿದ್ದು ಶಿವಾನಂದದಲ್ಲಿ ತೃಪ್ತಿಯಿಂದಿರುತ್ತಾನೆ.

ಶಿವಯೋಗಸಮಾಧಿನಿಷ್ಠನಾದ ಪ್ರಾಣಲಿಂಗಿಯ ಅವಸ್ಥಾಂತರವೇ ಲಿಂಗನಿಜಸ್ಥಲ. ಪರಾತ್ಪರವಾದ ಶಿವಲಿಂಗದ ಸ್ವರೂಪದಿಂದ, ಅರ್ಥಾತ್ ಶಿವಲಿಂಗದ ಪ್ರತ್ಯಕ್ಷಾನುಭವಸ್ಥಿತಿಯು ಯಾವುದುಂಟೋ, ಅದೇ ಲಿಂಗನಿಜಸ್ಥಲವೆಂದು ಹೇಳಲ್ಪಟ್ಟಿದೆ.

> ಸ್ವಾಂತಃಸ್ಥಶಿವಲಿಂಗಸ್ಯ ಪ್ರತ್ಯಕ್ಷಾನುಭವಸ್ಥಿತಿಃ।
> ಯಸ್ಯೈವ ಪರಲಿಂಗಸ್ಯ ನಿಜಮಿತ್ಯುಚ್ಯತೇ ಬುಧೈಃ॥
> ತಸ್ಮಾಲ್ಲಿಂಗಂ ಪರಂ ಬ್ರಹ್ಮ ಸಚ್ಚಿದಾನಂದಲಕ್ಷಣಮ್।
> ನಿಜರೂಪಮಿತಿ ಧ್ಯಾನಾತ್ತದವಸ್ಥಾ ಪ್ರಜಾಯತೇ॥[೧೨೩]

"ತನ್ನ ಅಂತರಂಗದಲ್ಲಿರುವ ಶಿವಲಿಂಗದ ಪ್ರತ್ಯಕ್ಷಾನುಭವಸ್ಥಿತಿಯು ಯಾವುದು ಇದೆಯೋ, ಅದೇ ಮಹಾಲಿಂಗದ ನಿಜಸ್ವರೂಪವೆಂದು ಜ್ಞಾನಿಗಳು ಹೇಳುವರು. ಆದುದರಿಂದ ಸಚ್ಚಿದಾನಂದಸ್ವರೂಪವಾದ ಪರಬ್ರಹ್ಮವೇ ನಿಜರೂಪವಾದ (ಸ್ವಸ್ವರೂಪವಾದ) ಲಿಂಗವೆಂದು ತಿಳಿದು ಧ್ಯಾನಮಾಡುವುದರಿಂದ ಅದೇ ಅವಸ್ಥೆಯು (ಲಿಂಗವೇ ನಿಜ) ಪ್ರಾಪ್ತವಾಗುತ್ತದೆ."

ಇಲ್ಲಿ ಉಕ್ತವಾಗಿರುವ 'ಲಿಂಗ' ಎಂಬ ಪದದಿಂದ ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ಲಯಗಳಿಗೆ ಕಾರಣೀಭೂತವಾದ ಸಚ್ಚಿದಾನಂದಸ್ವರೂಪವೂ, ಸ್ವಯಂಪ್ರಕಾಶವೂ,

---

[೧೨೨] ಬಹಿರ್ವಾಸನಯಾ ವಿಶ್ವಂ ವಿಕಲ್ಪಾರ್ಥಂ ಪ್ರಕಾಶತೇ।
ಅಂತರ್ವಾಸಿತಚಿತ್ತಾನಾಮಾತ್ಮಾನಂದಃ ಪ್ರಕಾಶತೇ॥
ಆತ್ಮಾರಣಿಸಮುತ್ಥೇನ ಪ್ರಮೋದಮಥನಾತ್ ಸುಧೀಃ।
ಜ್ಞಾನಾಗ್ನಿನಾ ದಹೇತ್ ಸರ್ವಂ ಪಾಶಜಾಲಂ ಜಗನ್ಮಯಮ್॥
ಸಂಸಾರವಿಷವೃಕ್ಷಸ್ಯ ಪಂಚಕ್ಲೇಶಪಲಾಶಿನಃ।
ಛೇದನೇ ಕರ್ಮಮೂಲಸ್ಯ ಪರಶುಃ ಶಿವಭಾವನಾ॥
ಅಜ್ಞಾನರಾಕ್ಷಸೋನ್ಮೇಷಕಾರಿಣಃ ಸಂಹೃತಾತ್ಮನಃ।
ಶಿವಧ್ಯಾನಂ ತು ಸಂಸಾರತಮಸಶ್ಚಂಡಭಾಸ್ಕರಃ॥ -ಸಿ.ಶಿ, ೧೨.೨೩-೨೬

[೧೨೩] ಸಿ.ಶಿ, ೧೨.೩೨,೪೦

ಶಿವನೆಂಬ ಹೆಸರುಳ್ಳ ಪರಬ್ರಹ್ಮವೇ ನಿರೂಪಿತವಾಗಿದೆ.[೧೨೪] ಈ ಅವಾಂತರಸ್ಥಲದಲ್ಲಿನ ಸಾಧಕನು ಅಂತಹ ಪರಮತತ್ತ್ವವನ್ನು ಶಿವಯೋಗಸಮಾಧಿಯ ಮೂಲಕ ತನ್ನಲ್ಲಿ ಸಾಕ್ಷಾತ್ಕಾರಮಾಡಿಕೊಳ್ಳುತ್ತಾನೆ.

ಪ್ರಾಣಲಿಂಗಿಯ ಅಂತಿಮ ಸ್ಥಿತಿ ಅಂಗಲಿಂಗಸ್ಥಲವಾಗಿದೆ. ಅಂಗದಲ್ಲಿ ಅರ್ಥಾತ್ ಜೀವಾತ್ಮನಲ್ಲಿ ಶಿವಲಿಂಗವು, ಶಿವಲಿಂಗದಲ್ಲಿ ಜೀವಾತ್ಮನು ಹೀಗೆ ಪರಸ್ಪರ ಸಾಮರಸ್ಯಾನುಸಂಧಾನವೇ ಅಂಗಲಿಂಗಸ್ಥಲ.[೧೨೫] ಈ ಸ್ಥಲದಲ್ಲಿ ಪ್ರಾಣಲಿಂಗಿಯ ಹೃದಯದಲ್ಲಿ ಶಿವ-ಜೀವರ ಐಕ್ಯದ ಅನುಭವವು ಉಂಟಾಗುತ್ತದೆ.

ಹೀಗೆ ಶಿವಯೋಗದ ಮಹಿಮೆಯಿಂದ ತನ್ನ ಹೃದಯಕಮಲದಲ್ಲಿ ಪ್ರಾಣಲಿಂಗದ ಸಾಕ್ಷಾತ್ಕಾರಮಾಡಿಕೊಂಡು, ಕ್ಷಮಾ-ವಿವೇಕಾದಿ ಸದ್ಗುಣ ಸ್ವರೂಪದ ವಸ್ತುಗಳಿಂದ ಪ್ರಾಣಲಿಂಗಾರ್ಚನತತ್ಪರನಾದ, ಶಿವಯೋಗಸಮಾಧಿಯಿಂದ ಮಸ್ತಕದಲ್ಲಿರುವ ಸಹಸ್ರದಲಕಮಲದಲ್ಲಿ ಪರಶಿವತತ್ತ್ವವನ್ನು ಸಾಕ್ಷಾತ್ಕರಿಸಿಕೊಂಡ, ಜಗತ್ತಿಗೆ ಆಧಾರ ಭೂತವಾದ ಲಿಂಗತತ್ತ್ವವನ್ನು ತನ್ನ ಸ್ವರೂಪದಲ್ಲಿ ಅನುಭವಿಸುವ ಮತ್ತು ಲಿಂಗ-ಅಂಗರ ಸಾಮರಸ್ಯಸಂಪನ್ನನಾದ ಸಾಧಕನು ಪ್ರಾಣಲಿಂಗಿಯೆಂದು ಕರೆಯಲ್ಪಡುತ್ತಾನೆ. ಅವನ ಇಂತಹ ಯೋಗ್ಯತೆಗೆ ಮೂಲ ಅವನಲ್ಲಿರುವ ಅನುಭವಭಕ್ತಿಯೇ ಆಗಿದೆ. ಆದುದರಿಂದ ಅನುಭವಭಕ್ತಿಯುಕ್ತನಾದ ಸಾಧಕನೇ ಪ್ರಾಣಲಿಂಗಿಯೆಂದು ಸಂಕ್ಷಿಪ್ತವಾಗಿ ಹೇಳಬಹುದು. ಅದನ್ನು ಮಾಯಿದೇವನು ಹೀಗೆ ನಿರೂಪಿಸಿದ್ದಾನೆ-

ಸ್ವಾನುಭೂತಿನಿಬಂಧೇನ ಕೀರ್ತಿತಾಽನುಭವಾತ್ಮಿಕಾ।।
ಪ್ರಾಣಲಿಂಗಿಸ್ಥಲಂ ಚಾಸ್ಯ ತಯಾ ಭಕ್ತ್ಯಾ ಸಮಾಗತಮ್।।[೧೨೬]

"ಪ್ರಸಾದಿಸ್ಥಲದಲ್ಲಿ ಸುಸ್ಥಿರವಾದ ಅವಧಾನಭಕ್ತಿಯು ಸ್ವಾನುಭವ ಸಂಬಂಧದಿಂದ ಅನುಭವಭಕ್ತಿಯೆಂದು ಕರೆಯಲ್ಪಟ್ಟಿದೆ. ಅನುಭವಭಕ್ತಿಯಿಂದ ಜೀವಾತ್ಮನಿಗೆ (ಸಾಧಕನಿಗೆ) ಪ್ರಾಣಲಿಂಗಿಸ್ಥಲದ ಪ್ರಾಪ್ತಿಯಾಗುತ್ತದೆ."

---

[೧೨೪] ಚಿದಾನಂದಮಯಃ ಸಾಕ್ಷಾಚ್ಛಿವ ಏವ ನಿರಂಜನಃ।
ಲಿಂಗಮಿತ್ಯುಚ್ಯತೇ ನಾನ್ಯದ್ಯತಃ ಸ್ಯಾದ್ವಿಶ್ವಸಂಭವಃ।।
ಬಹುನಾತ್ರ ಕಿಮುಕ್ತೇನ ಲಿಂಗಮಿತ್ಯುಚ್ಯತೇ ಬುಧೈಃ।
ಶಿವಾಭಿಧಂ ಪರಂಬ್ರಹ್ಮ ಚಿದ್ರೂಪಂ ಜಗದಾಸ್ಪದಮ್।। -ಸಿ.ಶಿ, ೧೨.೩೪,೩೬

[೧೨೫] ಅಂಗೇ ಲಿಂಗಂ ಸಮಾರೂಢಂ ಲಿಂಗೇಚಾಂಗಮುಪಸ್ಥಿತಮ್।
ಏತದಸ್ತಿ ದ್ವಯಂ ಯಸ್ಯ ಸ ಭವೇದಂಗಲಿಂಗವಾನ್।।
ಜ್ಞಾತ್ವಾ ಯಃ ಸತತಂ ಲಿಂಗಂ ಸ್ವಾಂತಃಸ್ಥಂ ಜ್ಯೋತಿರಾತ್ಮಕಮ್।
ಪೂಜಯನ್ ಭಾವಯೇನ್ನಿತ್ಯಂ ತಂ ವಿದ್ಯಾದಂಗಲಿಂಗಿನಮ್।।
-ಸಿ.ಶಿ, ೧೨.೪೨-೪೩

[೧೨೬] ಅನುಭವಸೂತ್ರ, ೫.೭೬-೭೭

ಷಟ್‌ಸ್ಥಲಸೋಪಾನದ ಉಪಾಸನಾಭೂತವಾದ ಈ ನಾಲ್ಕನೆಯ ಸ್ಥಲದಲ್ಲಿ ಶಿವಯೋಗಸಮಾಧಿಯ ಮಹಿಮೆಯಿಂದ ಸಾಧಕನಿಗೆ ಶಿವತತ್ತ್ವದ ಸಾಕ್ಷಾತ್ಕಾರ ಮತ್ತು ಶಿವಾನುಭವವು ಉಂಟಾಗುತ್ತದೆ.

೫. ಶರಣಸ್ಥಲ ಮತ್ತು ಶರಣ

ಶರಣಸ್ಥಲವು ಷಟ್‌ಸ್ಥಲಸೋಪಾನದ ಐದನೆಯ ಹಂತ. ಪೂರ್ವೋಕ್ತ ಶಿವನ ಚಿದ್ರೂಪಾನುಭವಿಯಾದ ಪ್ರಾಣಲಿಂಗಿಯು ಯಾವಾಗ ಶಿವಾನಂದವನ್ನು ಅನುಭವಿಸುತ್ತಾನೆಯೋ ಆಗ ಅವನೇ 'ಶರಣ'ನೆನಿಸುತ್ತಾನೆ. ಶರಣನಾಮಕನಾದ ಈ ಸ್ಥಲದ ಸಾಧಕನಲ್ಲಿರುವ ಭಕ್ತಿಯನ್ನು 'ಆನಂದಭಕ್ತಿ' ಎಂದು ಕರೆಯಲಾಗಿದೆ. ಈ ಭಕ್ತಿಯಿಂದ ಕೂಡಿದ ಶರಣನು ಸತೀಪತಿನ್ಯಾಯದಂತೆ ಅಲೌಕಿಕವಾದ ಆನಂದವನ್ನು ಅನುಭವಿಸುತ್ತಾನೆ. ದಾಂಪತ್ಯ ಸ್ನೇಹವು ಏಕನಿಷ್ಠೆಯನ್ನು ಸ್ಥಾಪನೆಮಾಡಲು ಪೂರ್ಣತ್ವ ಪ್ರಾಪ್ತಿಯ ವಾಂಛನೆಗೆ ಆಶ್ರಯವಾಗಿದೆ. ದಾಂಪತ್ಯದಲ್ಲಿ ದ್ವೈತವು ಅದ್ವೈತದಲ್ಲಿ ಪರ್ಯವಸಾನವಾಗುತ್ತದೆ. ಮಾನವಜೀವನದಲ್ಲಿರುವ ಸಂಬಂಧಗಳಲ್ಲಿ ದಾಂಪತ್ಯ ಸಂಬಂಧವು ಉತ್ಕೃಷ್ಟವಾದುದು. ದಾಂಪತ್ಯದ ಸಾತ್ತ್ವಿಕವಿಕಾಸದ ಚರಮಾವಸ್ಥೆಯನ್ನು ಭಕ್ತಿಯೆಂದು ಅಂಗೀಕರಿಸಲಾಗಿದೆ. ಜೀವಾತ್ಮ-ಪರಮಾತ್ಮನ ತಾದಾತ್ಮ್ಯಭಾವದ ಲೌಕಿಕರೂಪವೇ ದಾಂಪತ್ಯಭಾವವು. ಆದುದರಿಂದಲೇ ಭಾರತೀಯ ದರ್ಶನದ ಭಕ್ತಿಸಂಪ್ರದಾಯದಲ್ಲಿ ಸರ್ವತ್ರ ಪರಮಾತ್ಮನನ್ನು ಪತಿರೂಪದಿಂದಲೂ ಮತ್ತು ಜೀವಾತ್ಮನನ್ನು ಸತೀರೂಪ ದಿಂದಲೂ ಪರಿಕಲ್ಪಿಸಲಾಗಿದೆ. ಮನೋವಿಜ್ಞಾನದ ದೃಷ್ಟಿಯಿಂದ ದಾಂಪತ್ಯಭಾವದ ಆಧ್ಯಾತ್ಮಿಕರೂಪವೇ ಭಕ್ತಿರಸದ ಉಗಮ ಸ್ಥಳವಾಗಿದೆ.[೧೨೭] ಆದುದರಿಂದ ಬೃಹದಾರಣ್ಯಕೋಪನಿಷತ್ತಿನಲ್ಲಿ- "ತದ್ಯಥಾ ಪ್ರಿಯಯಾ ಸ್ತ್ರಿಯಾ ಸಂಪರಿಷ್ವಕ್ತೋ ನ ಬಾಹ್ಯಂ ಕಿಂಚನ ವೇದನಾಂತರಮೇವಾಯಂ ಪುರುಷಃ ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತೋ ನ ಬಾಹ್ಯಂ ಕಿಂಚನ ವೇದನಾಂತರಮ್"[೧೨೮] (ಪ್ರಿಯತಮೆಯನ್ನು ಆಲಂಗಿಸಿಕೊಂಡಿರುವ ಪುರುಷನಿಗೆ ಹೇಗೆ ಬಾಹ್ಯಜಗತ್ತಿನ ಅರಿವು ಇರುವುದಿಲ್ಲವೋ ಹಾಗೆಯೇ ಪರಮಾತ್ಮನನ್ನು ಅಪ್ಪಿಕೊಂಡಿರುವ ಜೀವಾತ್ಮನಿಗೆ ಬಾಹ್ಯಜಗತ್ತಿನ ಅರಿವು ಇರುವುದಿಲ್ಲ) ಎಂಬ ಲೌಕಿಕ ಸತಿ-ಪತಿ ದೃಷ್ಟಾಂತದ ಮೂಲಕ ಭಕ್ತನ ಆನಂದಾನುಭೂತಿಯು ವರ್ಣಿತವಾಗಿದೆ. ತನ್ನ ಪ್ರಿಯತಮೆಯ ಗಾಢಾಲಿಂಗನದಲ್ಲಿ ಮುಳುಗಿದ ಪುರುಷನು ಹೇಗೆ ಬಾಹ್ಯ ಹಾಗೂ ಆಂತರಿಕವಾದದ್ದೆಲ್ಲವನ್ನೂ ಮರೆತು, ಮಧುರವಾದ ಆನಂದಸಾಗರದಲ್ಲಿ ವಿಹರಿಸುತ್ತಾನೆಯೋ, ಹಾಗೆಯೇ ಪರಮಾತ್ಮನಲ್ಲಿ ಆಸಕ್ತವಾದ ಮನಸ್ಸುಳ್ಳ ಜೀವನು, ಪರಮಾತ್ಮನ ಹೊರತಾಗಿ ಬೇರೇನನ್ನೂ ನೋಡದೆ ತನ್ನನ್ನೂ ಮರೆಯುತ್ತಾನೆ. ಆ ಸಂದರ್ಭದಲ್ಲಿ ಜೀವಾತ್ಮನ ಎಲ್ಲ ಕಾಮನೆಗಳೂ ಮುಗಿಯುತ್ತವೆ.

---

[೧೨೭] ಭಕ್ತಿರಸವಿಮರ್ಶಃ, ಪು. ೬೨,೬೭-೬೮

[೧೨೮] ಬೃಹದಾರಣ್ಯಕೋಪನಿಷತ್, ೪-೩-೨೧

ಹೀಗೆ ಶಿವನನ್ನು ಪತಿಯೆಂದು ತಿಳಿದು, ಶಿವನಿಗೇ ಅನನ್ಯಭಾವದಿಂದ ಮೊರೆ ಹೋಗುವ ಸಾಧಕನು ವೀರಶೈವ ಸಿದ್ಧಾಂತದಲ್ಲಿ 'ಶರಣ' ಎಂದು ಕರೆಯಲ್ಪಟ್ಟಿದ್ದಾನೆ. ಅದನ್ನು ಶ್ರೀ ರೇಣುಕ ಭಗವತ್ಪಾದರು ಹೀಗೆ ನಿರೂಪಿಸಿದ್ದಾರೆ-

> ಅಂಗಲಿಂಗೀ ಜ್ಞಾನರೂಪಃ ಸತೀ ಜ್ಞೇಯಃ ಶಿವಃ ಪತಿಃ।
> ಯತ್ಸೌಖ್ಯಂ ತತ್ಸಮಾವೇಶೇ ತದ್ವಾನ್ ಶರಣನಾಮವಾನ್॥
> ಸತೀವ ರಮಣೇ ಯಸ್ತು ಶಿವೇ ಶಕ್ತಿಂ ವಿಭಾವಯನ್।
> ತದನ್ಯವಿಮುಖಃ ಸೋಽಯಂ ಜ್ಞಾತಃ ಶರಣನಾಮವಾನ್॥[೧೨೯]

"ಶಿವಜ್ಞಾನಸ್ವರೂಪನೂ, ಲಿಂಗಾಂಗಸಾಮರಸ್ಯವುಳ್ಳವನೂ ಆದ ಪ್ರಾಣಲಿಂಗಿಯು ತಾನು ಸತಿಯೆಂದೂ, ಶಿವನು ಪತಿಯೆಂದೂ ತಿಳಿಯಬೇಕು. ಸ್ತ್ರೀ-ಪುರುಷರ ಸಂಬಂಧದಲ್ಲಿ ಯಾವ ಸೌಖ್ಯವು ಉತ್ಪನ್ನವಾಗುವುದೋ, ಅಂಗಲಿಂಗರೂಪ ಸತೀಪತಿ ಭಾವದಿಂದುತ್ಪನ್ನವಾದ ಅಂತಹ ಸೌಖ್ಯವುಳ್ಳವನೇ ಶರಣನೆನಿಸುವನು. ಪತಿವ್ರತಾಸ್ತ್ರೀ ತನ್ನ ಪತಿಯ ಹೊರತು ಪರಪುರುಷರ ವಿಷಯದಲ್ಲಿ ಹೇಗೆ ವಿಮುಖಳಾಗಿರುವಳೋ, ಹಾಗೆಯೇ ಯಾವನು ತನ್ನನ್ನು ಶಿವನ ವಿಷಯದಲ್ಲಿ ಸತಿಯನ್ನಾಗಿ ಭಾವಿಸಿ ಅನ್ಯದೇವತೆಗಳ ವಿಷಯದಲ್ಲಿ ವಿಮುಖನಾಗುವನೋ ಅವನೇ ಶರಣನೆನಿಸುವನು."

ಅಂಗಲಿಂಗಗಳ ಸಾಮರಸ್ಯಜ್ಞಾನವುಳ್ಳ ಪೂರ್ವೋಕ್ತ ಪ್ರಾಣಲಿಂಗಿಯು ಇಲ್ಲಿ ಅಂಗಲಿಂಗಿಯೆನಿಸುತ್ತಾನೆ. ಅವನು ತನ್ನ ಹೃದಯಕಮಲದಲ್ಲಿರುವ ಚಿದಾನಂದಮಯ ನಾದ ಜ್ಯೋತಿರ್ಲಿಂಗಸ್ವರೂಪನಾದ ಪರಶಿವನನ್ನು ತನ್ನ ಪತಿಯೆಂದು ಭಾವಿಸಿ ಅನಂತಸುಖವನ್ನನುಭವಿಸುತ್ತಾ ಅನ್ಯದೇವತೆಗಳ ವಿಷಯದಲ್ಲಿ ಯೋಚಿಸದೆ ಆನಂದಿಸುತ್ತಾನೆ.

ಷಟ್‌ಸ್ಥಲಸೋಪಾನದ ಐದನೆಯ ಸೋಪಾನವಾದ ಈ ಸ್ಥಲದಲ್ಲಿ ಶರಣಸ್ಥಲ, ತಾಮಸನಿರಸನಸ್ಥಲ, ನಿರ್ದೇಶಸ್ಥಲ ಮತ್ತು ಶೀಲಸಂಪಾದನಸ್ಥಲಗಳೆಂಬ ನಾಲ್ಕು ಅವಾಂತರಸ್ಥಲಗಳಿವೆ.[೧೩೦] ಈ ಸ್ಥಲಗಳಲ್ಲಿ ಸಾಧಕನು ಕ್ರಮಿಸಬೇಕಾಗಿರುವ ಆಧ್ಯಾತ್ಮಿಕ ಪ್ರಗತಿಯು ನಿರೂಪಿತವಾಗಿದೆ. ಅದರಂತೆ, ವಿಶೇಷವಾದ ದ್ರವ್ಯ ನಿಧಿಯು ಪ್ರಾಪ್ತವಾಗಲು, ಬೇರೆಯವರಿಂದ ಗಾಜನ್ನು ಯಾರು ತಾನೆ ಬೇಡುವರು?, ಗಂಗಾನದಿಯ ನೀರೇ ಪ್ರಾಪ್ತವಾಗಲು ಅದನ್ನು ಬಿಟ್ಟು ಮರೀಚಿಕಾಜಲವನ್ನು ಯಾರು ತಾನೇ ಅಪೇಕ್ಷಿಸುವರು?, ಬಾಯಾರಿದ ಚಕೋರಪಕ್ಷಿಯು ಚಂದ್ರನನ್ನಲ್ಲದೆ ನಕ್ಷತ್ರಗಳ ಕಡೆ ನೋಡುವುದೇ? ಅಂತೆಯೇ ಸಂಸಾರವೆಂಬ ಗಾಢಾಂಧಕಾರವನ್ನು ನಾಶಮಾಡುವುದರಲ್ಲಿ ಶಿವನೆಂಬ ಸೂರ್ಯನನ್ನು ಬಿಟ್ಟು ಇತರ ದೇವತೆಗಳ ವಿಷಯದಲ್ಲಿ ವಿಮುಖನಾದ ಸಾಧಕನೇ ಶರಣ, ಅವನ ಆ ಬಗೆಯ ಸ್ಥಿತಿಯೇ ಶರಣಸ್ಥಲವೆನಿಸಿದೆ.[೧೩೧]

---

೧೨೯. ಸಿ.ಶಿ, ೧೩.೨,೫

೧೩೦. ಸಿ.ಶಿ, ೧೩.೩-೪

೧೩೧. ಸಿ.ಶಿ, ೧೩.೫-೧೨

ಹೀಗೆ ಅನನ್ಯಭಾವದಿಂದ ಶಿವನಲ್ಲಿ ಶರಣಾಗತನಾದ 'ಶರಣ'ನೆಂಬ ಸಾಧಕನಿಗೆ ಒಮ್ಮೆಯೂ ತಮೋವಿಕಾರಭೂತವಾದ ಅಹಂಕಾರಾದಿಗಳು ಹುಟ್ಟಬಾರದೆಂದು ತಾಮಸನಿರಸನಸ್ಥಲವು ಪ್ರತಿಪಾದಿಸುತ್ತದೆ. ತಮೋಗುಣದಿಂದ ಜ್ಞಾನದ ಶಕ್ತಿಯು ಕುಂಠಿತವಾಗುತ್ತದೆ.

> ಯಸ್ಯ ಜ್ಞಾನಂ ತಮೋಮಿಶ್ರಂ ನ ತಸ್ಯ ಗತಿರಿಷ್ಯತೇ।
> ಸತ್ತ್ವಂ ಹಿ ಜ್ಞಾನಯೋಗಸ್ಯ ನೈರ್ಮಲ್ಯಂ ವಿದುರುತ್ತಮಾಃ॥[೧೩೨]

"ಯಾರ ಜ್ಞಾನವು ತಮೋಗುಣದಿಂದ ಮಿಶ್ರಿತವಾಗಿರುವುದೋ, ಅವನಿಗೆ ಸದ್ಗತಿಯು ಪ್ರಾಪ್ತವಾಗುವುದಿಲ್ಲ. ಜ್ಞಾನಯೋಗಕ್ಕೆ ನಿರ್ಮಲವಾದ ಸತ್ತ್ವಗುಣವೇ ಸಾಧನವೆಂದು ಜ್ಞಾನಿಗಳು ತಿಳಿಯುತ್ತಾರೆ."

ಈ ಸ್ಥಲದ ಸಾಧಕನಾದ ಶರಣನು ತನ್ನಲ್ಲಿಯ ಸತ್ತ್ವಗುಣದ ವೃದ್ಧಿಗೋಸ್ಕರ ರಾಜಸ ಮತ್ತು ತಮೋಗುಣಗಳೆರಡನ್ನೂ ನಿರಾಕರಿಸಬೇಕು. ರಾಗದ್ವೇಷಾದಿ ಅರಿಷಡ್ವೈರಿಗಳು ಮತ್ತು ಮೋಹಭ್ರಾಂತಿಯೇ ಮೊದಲಾದವುಗಳು ರಜೋತಮೋ ಗುಣಗಳ ಕಾರ್ಯಗಳು. ಆದುದರಿಂದ ಯಾವನಾದರೊಬ್ಬನು ಶಿವಸ್ವರೂಪವಾದ ಜಗತ್ತಿನಲ್ಲಿ ಎಲ್ಲಿಯಾದರೂ ದ್ವೇಷಿಸಿದನಾದರೆ ಅವನು ಶಿವದ್ವೇಷಿಯು. ಆ ಕಾರಣ ಸಾಧಕನು ಸ್ವಲ್ಪವೂ ದ್ವೇಷಾದಿಭಾವನೆಗಳುಂಟಾಗದಂತೆ ಎಚ್ಚರವಹಿಸಬೇಕು. ಆ ಉದ್ದೇಶಕ್ಕೋಸ್ಕರ ಶಮ, ದಮ, ವಿವೇಕ, ವಿಷಯ ವಿರಕ್ತಿ, ಅಖಂಡಧ್ಯಾನ, ಕ್ಷಮೆ, ಭೂತದಯೆ, ವಿಶ್ವಾಸ, ಶಿವಭಕ್ತಿ, ಶ್ರೇಷ್ಠವಾದ ಶಿವಾಚಾರ ಮೊದಲಾದ ಸಾತ್ತ್ವಿಕ ಗುಣಗಳನ್ನು ಸಾಧಕನು ರೂಢಿಸಿಕೊಳ್ಳಬೇಕು. ಈ ಹತ್ತು ಸಾತ್ತ್ವಿಕಗುಣಗಳು ಶಿವಜ್ಞಾನಕ್ಕೆ ಬಂಧುಗಳಂತಿವೆ. ಅದನ್ನು ರೇಣುಕಾಚಾರ್ಯರು ಹೀಗೆ ನಿರೂಪಿಸಿದ್ದಾರೆ-

> ಶಮೋ ದಮೋ ವಿವೇಕಶ್ಚ ವೈರಾಗ್ಯಂ ಪೂರ್ಣಭಾವನಾ।
> ಕ್ಷಾಂತಿಃ ಕಾರುಣ್ಯಸಂಪತ್ತಿಃ ಶ್ರದ್ಧಾ ಸತ್ಯಸಮುದ್ಭವಾ॥
> ಶಿವಭಕ್ತಿಃ ಪರೋ ಧರ್ಮಃ ಶಿವಜ್ಞಾನಸ್ಯ ಬಾಂಧವಾಃ।
> ಏತೈರ್ಯುಕ್ತೋ ಮಹಾಯೋಗೀ ಸಾತ್ತ್ವಿಕಃ ಪರಿಕೀರ್ತಿತಃ॥[೧೩೩]

ಇಂತಹ ಸಾತ್ತ್ವಿಕಗುಣ ಸಮನ್ವಿತನೂ, ಶಿವಜ್ಞಾನಸಂಪನ್ನನೂ ಆದ ಸಾಧಕನ ರಾಜಸ-ತಾಮಸ ವಿಕಾರಗಳು ನಾಶವಾಗುತ್ತವೆ.[೧೩೪] ಆದುದರಿಂದ 'ಶರಣ' ನಾಮಕನಾದ ಸಾಧಕನು ಸಾತ್ತ್ವಿಕನಾಗಿರಬೇಕು. ಇದೇ ತಾಮಸನಿರಸನಸ್ಥಲದ ತಾತ್ಪರ್ಯ.

---

[೧೩೨] ಸಿ.ಶಿ, ೧೩.೧೪

[೧೩೩] ಸಿ.ಶಿ, ೧೩.೧೫-೧೬

[೧೩೪] ಕಾಮಕ್ರೋಧಮಹಾಮೋಹಮದಮಾತ್ಸರ್ಯವಾರಣಾಃ।
ಶಿವಜ್ಞಾನಮೃಗೇಂದ್ರಸ್ಯ ಕಥಂ ತಿಷ್ಠಂತಿ ಸನ್ನಿಧೌ॥
ಶಿವಜ್ಞಾನೇ ಸಮುತ್ಪನ್ನೇ ಸಹಸ್ರಾದಿತ್ಯಸನ್ನಿಭೇ।
ಕುತಸ್ತಮೋವಿಕಾರಾಃ ಸ್ಯುರ್ಮಹತಾಂ ಶಿವಯೋಗಿನಾಮ್॥
-ಸಿ.ಶಿ, ೧೩.೧೭,೨೧

ನಿರ್ದೇಶಸ್ಥಲವು ಶರಣಸ್ಥಲದ ಮೂರನೆಯ ಅವಾಂತರಸ್ಥಲವಾಗಿದೆ. ರಾಜಸ-ತಾಮಸ ಗುಣಗಳ ವಿಕಾರವಿಲ್ಲದ ಸಾತ್ತ್ವಿಕಗುಣದಿಂದ ಕೂಡಿದ ಯಾವ ಜ್ಞಾನವು ಉಪದೇಶಿಸಲ್ಪಡುವುದೋ, ಆ ಜ್ಞಾನವು ನಿರ್ದೇಶಸ್ಥಲ ಎನಿಸುತ್ತದೆ.

ನಿರಾಕೃತ್ಯ ತಮೋಭಾಗಂ ಸಂಸಾರಸ್ಯ ಪ್ರವರ್ತಕಮ್।
ನಿರ್ದಿಶ್ಯತೇ ತು ಯಜ್ಜ್ಞಾನಂ ಸ ನಿರ್ದೇಶ ಇತಿ ಸ್ಮೃತಃ॥[೧೩೫]

ಸಂಸಾರಪ್ರವೃತ್ತಿಗೆ ಮೂಲಕಾರಣವಾದ ಮತ್ತು ಆತ್ಮಸ್ವರೂಪ ನಿದರ್ಶಕವಾದ ಯಾವ ಜ್ಞಾನವು ಸದ್ಗುರುವಿನಿಂದ ಉಪದೇಶಿಸಲ್ಪಡುವುದೋ, ಅಂತಹ ಉಪದೇಶವೇ ನಿರ್ದೇಶ ಎಂದರ್ಥ. ಇಂತಹ ನಿರ್ದೇಶವು ಶಿವಾದ್ವೈತ ಜ್ಞಾನಸಂಪನ್ನನಾದ ಸದ್ಗುರುವಿಲ್ಲದೆ ಉಂಟಾಗುವುದಿಲ್ಲವೆಂದು ಅಂತಹ ಗುರುವಿನ ಮಹಿಮೆ ಮತ್ತು ವೈಶಿಷ್ಟ್ಯವನ್ನು ಇಲ್ಲಿ ವರ್ಣಿಸಲಾಗಿದೆ. ಶಿವಜ್ಞಾನೋಪದೇಶಕನಾದ ಈ ಗುರುವು ಸಮುದ್ರಗಳಲ್ಲಿ ಕ್ಷೀರಸಾಗರವೂ, ಪರ್ವತಗಳಲ್ಲಿ ಮೇರುಪರ್ವತವೂ, ಗ್ರಹಗಳಲ್ಲಿ ಸೂರ್ಯನೂ, ಮಣಿಗಳಲ್ಲಿ ಕೌಸ್ತುಭವೂ, ವೃಕ್ಷಗಳಲ್ಲಿ ಶ್ರೀಗಂಧವೂ ಮತ್ತು ದೇವತೆಗಳಲ್ಲಿ ಶಿವನೂ ಶ್ರೇಷ್ಠವಾಗಿರುವಂತೆ ಪ್ರಾಕೃತಾತ್ಮರಾದ ಗುರುಗಳಲ್ಲಿ ಸಾಕ್ಷಾತ್ ಶಿವಸ್ವರೂಪನಾದ ಗುರುವು ಶ್ರೇಷ್ಠನಾಗಿದ್ದಾನೆ.[೧೩೬] ಆದುದರಿಂದ ತಮೋಗುಣವನ್ನು ಕಳೆದುಕೊಳ್ಳಲು ಅಪೇಕ್ಷಿಸುವ 'ಶರಣ'ನೆಂಬ ಸಾಧಕನಿಗೆ ಇಂತಹ ಸದ್ಗುರುವಿನ ಸಹವಾಸ ಅವಶ್ಯವೆಂಬುದೇ ನಿರ್ದೇಶಸ್ಥಲದ ತಾತ್ಪರ್ಯ.

ಶರಣಸ್ಥಲದ ನಾಲ್ಕನೆಯ ಹಾಗೂ ಅಂತಿಮ ಅವಾಂತರಸ್ಥಲವೇ ಶೀಲಸಂಪಾನದ ಸ್ಥಲ. ಶಿವನೊಬ್ಬನಲ್ಲಿಯೇ ವಿಶೇಷಜ್ಞಾನವು, ಶಿವಧ್ಯಾನವೊಂದರಲ್ಲಿಯೇ ನಿಷ್ಠನಾಗಿರುವಿಕೆ ಮತ್ತು ಶಿವಪ್ರಾಪ್ತಿಯಲ್ಲಿ ಅಪರಿಮಿತವಾದ ಉತ್ಕಂಠೆಯು ಶೀಲವೆನಿಸಿದೆ.[೧೩೭] ಅವುಗಳ ಪ್ರಾಪ್ತಿಯೇ ಶೀಲಸಂಪಾದನೆ. ಪತಿಪರಾಯಣಳಾದ

---

[೧೩೫] ಸಿ.ಶಿ, ೧೩.೨೨

[೧೩೬] ಗುರುರೇವ ಪರಂ ತತ್ತ್ವಂ ಪ್ರಕಾಶಯತಿ ದೇಹಿನಾಮ್।
ಕೋ ವಾ ಸೂರ್ಯಂ ವಿನಾ ಲೋಕೇ ತಮಸೋ ವಿನಿವರ್ತಕಃ॥
ಅಂತರೇಣ ಗುರುಂ ಸಿದ್ಧಂ ಕಥಂ ಸಂಸಾರನಿಷ್ಕೃತಿಃ।
ನಿದಾನಜ್ಞಂ ವಿನಾ ವೈದ್ಯಂ ಕಿಂ ವಾ ರೋಗೋ ನಿವರ್ತತೇ॥
ಅಜ್ಞಾನಮಲಿನಂ ಚಿತ್ತದರ್ಪಣಂ ಯೋ ವಿಶೋಧಯೇತ್।
ಪ್ರಜ್ಞಾವಿಭೂತಿಯೋಗೇನ ತಮಾಹುರ್ಗುರುಸತ್ತಮಮ್॥
ಕೈವಲ್ಯಕಲ್ಪತರವೋ ಗುರವಃ ಕರುಣಾಲಯಾಃ।
ದುರ್ಲಭಾ ಹಿ ಜಗತ್ಯಸ್ಮಿನ್ ಶಿವಾದ್ವೈತಪರಾಯಣಾಃ॥
-ಸಿ.ಶಿ, ೧೩.೨೩-೨೫,೨೭

[೧೩೭] ಶೀಲಂ ಶಿವೈಕವಿಜ್ಞಾನಂ ಶಿವಧ್ಯಾನೈಕತಾನತಾ।
ಶಿವಪ್ರಾಪ್ತಿಸಮುತ್ಕಂಠಾ ತದ್ಯೋಗೀ ಶೀಲವಾನ್ ಸ್ಮೃತಃ॥ -ಸಿ.ಶಿ, ೧೩.೩೨

ಪತಿವ್ರತಾ ಸ್ತ್ರೀ ಲೋಕದಲ್ಲಿ ಹೇಗೆ ಶೀಲವತಿ ಎಂದು ಕರೆಯಲ್ಪಟ್ಟಿರುವಳೋ, ಅಂತೆಯೇ ಅನ್ಯದೇವತಾ ವಿಮುಖನಾಗಿ ಶಿವನಲ್ಲಿ ಮಾತ್ರ ನಿಷ್ಠನಾದ ಸಾಧಕನು "ಸುಶೀಲ" ಅಥವಾ "ಶೀಲವಾನ್" ಎಂದು ಕರೆಯಲ್ಪಟ್ಟಿದ್ದಾನೆ. ಅದನ್ನು ಶ್ರೀ ರೇಣುಕ ಭಗವತ್ಪಾದರು ಹೀಗೆ ನಿರೂಪಿಸಿದ್ದಾರೆ-

ಪತಿವ್ರತಾಯಾ ಯಚ್ಛೀಲಂ ಪತಿರಾಗಾತ್ ಪ್ರಶಸ್ಯತೇ।
ತಥಾ ಶಿವಾನುರಾಗೇಣ ಸುಶೀಲೋ ಭಕ್ತ ಉಚ್ಯತೇ॥
ಪತಿಂ ವಿನಾ ಯಥಾ ಸ್ತ್ರೀಣಾಂ ಸೇವಾನ್ಯಸ್ಯ ತು ಗರ್ಹಣಾ।
ಶಿವಂ ವಿನಾ ತಥಾನ್ಯೇಷಾಂ ಸೇವಾ ನಿಂದಾ ಕೃತಾತ್ಮನಾಮ್॥
ಬಹುನಾತ್ರ ಕಿಮುಕ್ತೇನ ಶಿವಜ್ಞಾನೈಕನಿಷ್ಠತಾ।
ಶೀಲಮಿತ್ಯುಚ್ಯತೇ ಸದ್ಭಿಃ ಶೀಲವಾಂಸ್ತತ್ಪರೋ ಮತಃ॥[೧೩೮]

"ಪತಿವ್ರತೆಯ ಪಾತಿವ್ರತ್ಯವು ಪತಿಯ ಪ್ರೇಮದಿಂದ ಹೇಗೆ ಪ್ರಶಸ್ತವಾಗುವುದೋ, ಹಾಗೆಯೇ ಶಿವನ ಪ್ರೇಮದಿಂದ ಶರಣನು ಸುಶೀಲ ಎನಿಸುತ್ತಾನೆ. ಸ್ತ್ರೀಯರಿಗೆ ಪತಿಯನ್ನು ಬಿಟ್ಟು ಪರಪುರುಷನ ಸೇವೆಯು ಹೇಗೆ ನಿಂದ್ಯವಾಗಿರುವುದೋ, ಹಾಗೆಯೇ ಧನ್ಯಾತ್ಮರಾದ ಶರಣರಿಗೆ ಶಿವನನ್ನು ಬಿಟ್ಟು ಅನ್ಯದೇವತೆಗಳ ಸೇವೆಯು ನಿಂದ್ಯವಾಗಿದೆ. ಹೆಚ್ಚು ಹೇಳುವುದರಿಂದೇನು ಪ್ರಯೋಜನ? ಶಿವಜ್ಞಾನವೊಂದರಲ್ಲಿಯೇ ನಿಷ್ಠೆಯನ್ನಿಡುವುದು ಶೀಲವೆನಿಸುತ್ತದೆ. ಇಂತಹ ಶೀಲದಲ್ಲಿ ನಿರತನಾದವನು ಶೀಲವಂತನೆನಿಸುತ್ತಾನೆ."

ಶರಣಸ್ಥಲದಲ್ಲಿ ಯಾವ ಸತೀ-ಪತಿ ನ್ಯಾಯವು ಉಕ್ತವಾಗಿದೆಯೋ, ಅದು ಇಲ್ಲಿ ಪರಾಕಾಷ್ಠೆಯನ್ನು ಮುಟ್ಟಿದೆಯೆಂದು ತಿಳಿಯಬೇಕು.

ಹೀಗೆ ಸತೀ-ಪತಿ ನ್ಯಾಯದಿಂದ ಮತ್ತು ಅನನ್ಯಭಾವದಿಂದ ಶಿವನಲ್ಲಿ ಶರಣಾಗತನಾದ, ಸತ್ತ್ವಗುಣದಿಂದ ಸಂಪುಟಿತವಾದ ಶಿವಜ್ಞಾನಸಂಪನ್ನನಾದ, ಶಿವೈಕ್ಯಜ್ಞಾನಸಂಪನ್ನನಾದ ಸದ್ಗುರುವಿನ ಉಪದೇಶವನ್ನು ಪಾಲಿಸುವ, ಸುಶೀಲನಾದ ಸಾಧಕನೇ 'ಶರಣ'ನೆಂದು ತಿಳಿಯಬೇಕು. ಈ ಎಲ್ಲಕ್ಕೂ ಮೂಲ ಆತನ ಆನಂದಭಕ್ತಿಯೇ ಆಗಿದೆ. ಆದುದರಿಂದ ಆನಂದಭಕ್ತಿಯುಕ್ತನಾದ ಸಾಧಕನು ಶರಣನೆಂದು ಕರೆಯಲ್ಪಟ್ಟಿದ್ದಾನೆ. ಅದನ್ನು ಮಾಯಿದೇವನು ಹೀಗೆ ನಿರೂಪಿಸಿದ್ದಾನೆ-

ಪ್ರೋಕ್ತಾಽಽನಂದಾತ್ಮಿಕಾ ಭಕ್ತಿರಿತಿ ವೇದಾಂತವೇದಿಭಿಃ।
ಅಸ್ಯಾತ್ಮನಸ್ತಯಾ ಭಕ್ತ್ಯಾ ಶರಣಸ್ಥಲಮಾಗತಮ್॥[೧೩೯]

"ವೇದಾಂತವನ್ನು ಬಲ್ಲವರು ಆನಂದಾತ್ಮಿಕಾ ಭಕ್ತಿಯೆಂದು ಅದನ್ನು ಕರೆದಿದ್ದಾರೆ. ಆ ಭಕ್ತಿಯ ದ್ವಾರಾ ಜೀವನಿಗೆ ಶರಣಸ್ಥಲ ಪ್ರಾಪ್ತವಾಗುತ್ತದೆ."

---

[೧೩೮] ಸಿ.ಶಿ, ೧೩.೩೪-೩೬

[೧೩೯] ಅನುಭವಸೂತ್ರ, ೫.೭೯

೬. ಐಕ್ಯಸ್ಥಲ ಮತ್ತು ಐಕ್ಯ

ಐಕ್ಯಸ್ಥಲವು ಷಟ್‌ಸ್ಥಲಸೋಪಾನದ ಆರನೆಯ ಮತ್ತು ಕೊನೆಯ ಸೋಪಾನವಾಗಿದೆ. "ಏಕಸ್ಯ ಭಾವಃ ಐಕ್ಯಮ್" ಎಂಬ ನಿರ್ವಚನದಂತೆ ಹಿಂದಿನ ಸ್ಥಲದಲ್ಲಿ ನಿರೂಪಿತನಾದ ಶರಣನೆಂಬ ಸಾಧಕನು ಪರಶಿವನೊಂದಿಗೆ ಸಮರಸವನ್ನು ಹೊಂದುತ್ತಾನೆಯೋ ಆಗ ಅವನೇ 'ಐಕ್ಯ' ಎಂದು ಕರೆಯಲ್ಪಡುತ್ತಾನೆ. ಸಾಧಕನ ಈ ಸ್ಥಲದ ಭಕ್ತಿಯನ್ನು 'ಸಮರಸಭಕ್ತಿ' ಎಂದು ಕರೆಯಲಾಗಿದೆ. ಈ ಭಕ್ತಿಯ ಕಾರಣ ಶಿಖಿಕರ್ಪೂರನ್ಯಾಯದಂತೆ ಸಾಧಕನು ಪರಶಿವನೊಂದಿಗೆ ಸಮರಸಭಾವವನ್ನು ಹೊಂದುತ್ತಾನೆ. ದೀಪಶಿಖೆಯೊಡನೆ ಬೆರೆತುಹೋದ ಕರ್ಪೂರವು ದೀಪಶಿಖೆಯ ಸ್ವರೂಪವನ್ನು ಪಡೆಯುವಂತೆಯೇ ಶರಣ ನಾಮಕನಾದ ಜೀವನು ಸಮರಸಭಕ್ತಿಯಿಂದ ಕೂಡಿ ಕಿಂಚಿಜ್ಞತ್ವ-ಕಿಂಚಿಕರ್ತೃತ್ವಭಾವವನ್ನು ತ್ಯಜಿಸಿ, ಸರ್ವಜ್ಞತ್ವ-ಸರ್ವಕರ್ತೃತ್ವಭಾವವನ್ನು ಅಭಿವ್ಯಕ್ತಪಡಿಸುತ್ತಾ ನದೀಸಮುದ್ರ ನ್ಯಾಯಾನುಗುಣವಾಗಿ ಪರಶಿವನೊಡನೆ ಬೆರೆತು ಹೋಗುತ್ತಾನೆ.

ಆರನೆಯ ಸೋಪಾನಭೂತವಾದ ಈ ಸ್ಥಲದಲ್ಲಿ ಐಕ್ಯ, ಆಚಾರಸಂಪತ್ತಿ, ಏಕಭಾಜನ ಮತ್ತು ಸಹಭೋಜನಗಳೆಂಬ ನಾಲ್ಕು ಅವಾಂತರಸ್ಥಲಗಳಿವೆ. ವಿಷಯಾನಂದವೆಂಬ ಶೀಕರದಲ್ಲಿ ನಿಸ್ಪೃಹನಾದ, ಶುದ್ಧಾಂತಃಕರಣನಾದ, ಆಣವಾದಿ ಮಲಸಂಬಂಧವನ್ನು ದೂರೀಕರಿಸಿದ, "ಶಿವೋಽಹಮ್" (ನಾನೇ ಶಿವನೆಂಬ) ಭಾವನೆಯಿಂದ ಕೂಡಿದ ಸಾಧಕನು 'ಐಕ್ಯ'ನೆನಿಸುತ್ತಾನೆ. ಈ ಐಕ್ಯಸ್ಥಿತಿಯನ್ನು ಪಡೆದ ಅವನ ಹಿಂದಿನ ಪಶು-ಪತಿಭಾವ ಮತ್ತು ಸತೀ-ಪತಿಭಾವಗಳು ಪೂರ್ಣವಾಗಿ ನಾಶವಾಗುತ್ತವೆ. ಅದ್ವೈತಭಾವನೆಯಲ್ಲಿ (ಶಿವೋಽಹಂ ಎಂಬ ಭಾವನೆಯಲ್ಲಿ) ಯಾವ ಸುಖವುಂಟೋ ಅಂತಹ ಸುಖವು ದ್ವೈತಭಾವನೆಯಲ್ಲಿ (ನಾನೇ ಬೇರೆ, ಶಿವನೇ ಬೇರೆ) ಎಂದಿಗೂ ಬರಲು ಸಾಧ್ಯವಿಲ್ಲ.[೧೪೦] ಆದುದರಿಂದ ಈ ಸಾಧಕನು ಎಲ್ಲ ಬಗೆಯ ಭೇದವನ್ನು ತ್ಯಜಿಸಿ-

> ಜಲೇ ಜಲಮಿವ ನ್ಯಸ್ತಂ ವಹ್ನೌ ವಹ್ನಿರಿವಾರ್ಪಿತಮ್।
> ಪರೇ ಬ್ರಹ್ಮಣಿ ಲೀನಾತ್ಮಾ ವಿಭಾಗೇನ ನ ದೃಶ್ಯತೇ||[೧೪೧]

---

[೧೪೦] ವಿಷಯಾನಂದಕಣಿಕಾನಿಸ್ಪೃಹೋ ನಿರ್ಮಲಾಶಯಃ।
ಶಿವಾನಂದಮಹಾಸಿಂಧುಮಜ್ಜನಾದ್ಯೈಕ್ಯಮುಚ್ಯತೇ||
ನಿರ್ಧೂತಮಲಸಂಬಂಧೋ ನಿಷ್ಕಲಂಕಮನೋಗತಃ।
ಶಿವೋಽಹಮಿತಿಭಾವೇನ ನಿರೂಢೋ ಹಿ ಶಿವೈಕತಾಮ್||
ಪಶುತ್ವಂ ಚ ಪತಿತ್ವಂ ಚ ಮಾಯಾಮೋಹವಿಕಲ್ಪಿತಮ್।
ತಸ್ಮಿನ್ ಪ್ರಲಯಮಾಪನ್ನೇ ಕಃ ಪಶುಃ ಕೋ ನು ವಾ ಪತಿಃ||
-ಸಿ.ಶಿ, ೧೪.೪,೫,೬

[೧೪೧] ಸಿ.ಶಿ, ೨೦.೬೧

"ನೀರಿನಲ್ಲಿ ನೀರನ್ನು ಬೆರೆಸಿದಂತೆಯೂ, ಬೆಂಕಿಯಲ್ಲಿ ಬೆಂಕಿಯನ್ನು ಬೆರೆಸಿದಂತೆಯೂ ಪರಬ್ರಹ್ಮಸ್ವರೂಪ ಮಹಾಲಿಂಗದಲ್ಲಿ ಆತ್ಮನನ್ನು ಲೀನಗೊಳಿಸಿದ ಶಿವಯೋಗಿಯು, ಜೀವಭಾವದಿಂದ ದೂರನಾಗಿ ಪರಬ್ರಹ್ಮನಲ್ಲಿ ಸಮರಸವನ್ನು ಹೊಂದಿದ ಮೇಲೆ, ಪರಬ್ರಹ್ಮಸ್ವರೂಪಕ್ಕಿಂತ ಭಿನ್ನವಾಗಿ ತೋರುವುದಿಲ್ಲ" -ಎಂಬ ಶ್ರೀ ರೇಣುಕ ಭಗವತ್ಪಾದರ ಉಕ್ತಿಯಂತೆ ಶರಣನು ಪರಶಿವನಲ್ಲಿ ಐಕ್ಯನಾಗುತ್ತಾನೆ.

ಈ ಪ್ರಕಾರ ಐಕ್ಯಭಾವವನ್ನು ಹೊಂದುವ ಆಚಾರಪ್ರತಿಪಾದಕಸ್ಥಲವೇ ಆಚಾರಸಂಪತ್ತಿಸ್ಥಲ. ಇದು ಐಕ್ಯಸ್ಥಲದ ಎರಡನೆಯ ಅವಾಂತರಸ್ಥಲ.

ಯಥಾ ರವಿಃ ಸರ್ವರಸಾನ್ ಪ್ರಭುಂಕ್ತೇ
ಹುತಾಶನಶ್ಚಾಪಿ ಹಿ ಸರ್ವಭಕ್ಷಕಃ।
ತಥೈವ ಯೋಗೀ ವಿಷಯಾನ್ ಪ್ರಭುಂಕ್ತೇ
ನ ಲಿಪ್ಯತೇ ಕರ್ಮಶುಭಾಶುಭೈಶ್ಚ॥[೧೪೨]

"ಸೂರ್ಯನು ಎಲ್ಲ ಬಗೆಯ ಗಿಡಮೂಲಿಕೆಗಳನ್ನು ಒಣಗಿಸುವಂತೆ ಮತ್ತು ಅಗ್ನಿಯು ಎಲ್ಲವನ್ನೂ ದಹಿಸುವಂತೆ ಯೋಗಿಯು ಎಲ್ಲ ಬಗೆಯ ವಿಷಯಗಳನ್ನು ಆಸ್ವಾದಿಸಿದರೂ ಶುಭಾಶುಭ ಕರ್ಮಗಳೊಡನೆ ಲೀನನಾಗುವುದಿಲ್ಲ" -ಎಂಬ ಶಿವರಹಸ್ಯದ ವಚನದಂತೆ ಸಾಧಕನ ಆಚಾರದ ವಿಷಯದಲ್ಲಿ ವಿಧಿಯಾಗಲಿ ಅಥವಾ ನಿಷೇಧವಾಗಲಿ ಸಂಭವಿಸುವುದಿಲ್ಲ. ಮಣ್ಣಿನಲ್ಲಿ ಬಿದ್ದ ನೀಲಿರತ್ನ ಮತ್ತು ಚಿನ್ನ ಮಣ್ಣಿನೊಂದಿಗೆ ಬೆರೆಯದೆ ತಮ್ಮ ಕಾಂತಿಯನ್ನು ಹೇಗೆ ಉಳಿಸಿಕೊಳ್ಳುವುವೋ ಹಾಗೆಯೇ ಸರ್ವವನ್ನೂ ಶಿವಮಯವನ್ನಾಗಿ ಕಾಣುವ ಶಿವಲಿಂಗೈಕ್ಯನು ಪುಣ್ಯ-ಪಾಪರೂಪದ ಕರ್ಮಗಳನ್ನಾಚರಿಸಿದರೂ ಸಹ ಅವುಗಳಿಂದುಂಟಾಗುವ ಫಲವನ್ನು ಪಡೆಯುವುದಿಲ್ಲ. ನಿರ್ಮಲವಾದ ಶಿವಜ್ಞಾನವೆಂಬ ಅಗ್ನಿಯಿಂದ ಪುಣ್ಯ-ಪಾಪರೂಪದ ಕರ್ಮಬೀಜವನ್ನು ಸುಟ್ಟಂಥ, ದಗ್ಧಪಟನ್ಯಾಯಾನುಗುಣವಾಗಿ ಶಿವಜ್ಞಾನಿಯ ಶರೀರವ್ಯಾಪಾರವು ಭೌತಿಕಶರೀರವನ್ನು ತ್ಯಜಿಸುವವರೆಗೆ ಮುಂದುವರೆಯುತ್ತದೆ. ಆದುದರಿಂದ ಕಮಲದ ಎಲೆಯು ನೀರಿನಲ್ಲಿ ಲಿಪ್ತವಾಗದಿರುವಂತೆ ತನ್ನ ಕರ್ಮಗಳಿಂದ ಲಿಪ್ತನಾಗುವುದಿಲ್ಲ. "ಯಥಾ ವಾಯುಃ ಸುಶೀಘ್ರೋಽಪಿ ಮುಕ್ತ್ವಾಕಾಶಂ ನ ಗಚ್ಛತಿ"[೧೪೩] (ಗಾಳಿಯು ಎಷ್ಟೇ ವೇಗವಾಗಿ ಬೀಸುತ್ತಿದ್ದರೂ ಆಕಾಶವನ್ನು ತ್ಯಜಿಸದಿರುವಂತೆ) ಎಂಬ ಕಾರಿಕೆಯಂತೆ ಶಿವೈಕ್ಯವನ್ನು ಹೊಂದಿದ ಅವನ ಎಲ್ಲ ಕ್ರಿಯೆಗಳೂ ಸಹ ಶಿವಲಿಂಗಪೂಜಾರೂಪವಾಗಿರುತ್ತವೆ.[೧೪೪] ಅದನ್ನು ಜ್ಞಾನಿಗಳು ಹೀಗೆ ನಿರೂಪಿಸಿದ್ದಾರೆ-

---

[೧೪೨] ಸಿ.ಶಿ, ೧೪.೧, ಅವತರಣಿಕೆ, ಪು. ೩೬

[೧೪೩] ಸಿ.ಶಿ, ೧೪.೮, ಅವತರಣಿಕೆ, ಪು. ೩೮

[೧೪೪] ಶಿವಾದ್ವೈತಪರಿಜ್ಞಾನೇ ಸ್ಥಿತೇ ಸತಿ ಮನಸ್ವಿನಾಮ್।
ಕರ್ಮಣಾ ಕಿಂ ನು ಭಾವ್ಯಂ ಸ್ಯಾದಕೃತೇನ ಕೃತೇನ ವಾ॥

ಆತ್ಮಾ ತ್ವಂ ಗಿರಿಜಾ ಮತಿಃ ಪರಿಚರಾಃ ಪ್ರಾಣಾಃ ಶರೀರಂ ಗೃಹಂ
ಪೂಜಾ ತೇ ವಿಷಯೋಪಭೋಗರಚನಾ ನಿದ್ರಾ ಸಮಾಧಿಸ್ಥಿತಿಃ।
ಸಂಚಾರಃ ಪದಯೋಃ ಪ್ರದಕ್ಷಿಣವಿಧಿಃ ಸ್ತೋತ್ರಾಣಿ ಸರ್ವಾ ಗಿರೋ
ಯದ್ಯತ್ಕರ್ಮ ಕರೋಮಿ ತತ್ತದಖಿಲಂ ಶಂಭೋ ತವಾರಾಧನಮ್॥[೧೪೫]

"ನೀನು ನನ್ನ ಆತ್ಮನು, ಗಿರಿಜೆಯ ಬುದ್ಧಿ, ಪ್ರಾಣಗಳು ಸೇವಕರು, ಶರೀರವು ಮನೆ. ವಿಷಯೋಪಭೋಗಗಳ ಆಚರಣೆಯೂ ನಿನ್ನ ಪೂಜೆ, ನಿದ್ರೆಯು ಸಮಾಧಿಯ ಸ್ಥಿತಿ. ಪಾದಗಳಿಂದ ಸಂಚಾರವು ನಿನ್ನ ಪ್ರದಕ್ಷಿಣೆ. ಎಲ್ಲ ಮಾತುಗಳೂ ನಿನ್ನ ಸ್ತೋತ್ರಗಳು. ನಾನು ಯಾವ ಯಾವ ಕರ್ಮವನ್ನು ಮಾಡುತ್ತೇನೋ, ಶಂಭುವೇ, ಅದೆಲ್ಲವೂ ನಿನ್ನ ಪೂಜೆ."

ಈ ರೀತಿಯಾಗಿ ಐಕ್ಯಸ್ಥಲದ ಸಾಧಕನಿಗೆ ವಿಹಿತಕರ್ಮಗಳನ್ನು ಮಾಡುವುದರಿಂದ ಪುಣ್ಯವಾಗಲಿ, ಆ ಕರ್ಮಗಳನ್ನು ಆಚರಿಸದಿರುವುದರಿಂದ ಪಾಪವಾಗಲಿ ಬರುವುದಿಲ್ಲ. ಇದೇ ಶಿವೈಕ್ಯನ ಆಚಾರಸಂಪತ್ತಿಸ್ಥಲ.

ಏಕಭಾಜನಸ್ಥಲವು ಐಕ್ಯಸ್ಥಲದ ಮೂರನೆಯ ಅವಾಂತರಸ್ಥಲ. ಚರಾಚರಾತ್ಮಕವಾದ ಈ ಜಗತ್ತನ್ನು ಒಂದೇ ದೃಷ್ಟಿಯಿಂದ (ಶಿವಮಯವನ್ನಾಗಿ) ನೋಡುವ ಭಾವನೆಯೇ ಏಕಭಾಜನವೆನಿಸಿದೆ. ಈ ಅವಸ್ಥೆಯಲ್ಲಿ ಸಾಧಕನು ತನ್ನಲ್ಲಿ ಮತ್ತು ಸಮಸ್ತ ಪ್ರಪಂಚದಲ್ಲಿ ಶಿವನನ್ನೇ ಕಾಣುತ್ತಾನೆ. ಶಿವನಲ್ಲಿ ಸಮಸ್ತ ಪ್ರಪಂಚವನ್ನೂ, ಸಮಸ್ತ ಪ್ರಪಂಚದಲ್ಲಿ ಶಿವನನ್ನೂ ಆಧಾರಾಧೇಯ ಭಾವನೆಯಿಂದ (ಶಿವನು ಆಧಾರ, ಪ್ರಪಂಚವು ಆಧೇಯ) ಶಿವನ ಮತ್ತು ಪ್ರಪಂಚದ ಸಾಮರಸ್ಯವನ್ನು ಅನುಭವಿಸುತ್ತಾನೆ. ಹೀಗೆ

ಶಂಭೋರೇಕತ್ರ ಭಾವೇನ ಸರ್ವತ್ರ ಸಮದರ್ಶನಃ।
ಕುರ್ವನ್ನಪಿ ಮಹಾಕರ್ಮ ನ ತತ್ಫಲಮವಾಪ್ನುಯಾತ್॥
ನಿರ್ದಗ್ಧಕರ್ಮಬೀಜಸ್ಯ ನಿರ್ಮಲಜ್ಞಾನವಹ್ನಿನಾ।
ದೇಹವದ್ಭಾಸಮಾನಸ್ಯ ದೇಹಯಾತ್ರಾ ತು ಲೌಕಿಕೀ॥
ಶಿವಜ್ಞಾನಸಮಾಪನ್ನಸ್ಥಿರವೈರಾಗ್ಯಲಕ್ಷಣಃ।
ಸ್ವಕರ್ಮಣಾ ನ ಲಿಪ್ಯತೇ ಪದ್ಮಪತ್ರಮಿವಾಂಭಸಾ॥
ಯದ್ಯಚ್ಚಿಂತಯತೇ ಯೋಗೀ ಮನಸಾ ಶುದ್ಧಭಾವನಃ।
ತತ್ತಚ್ಛಿವಮಯತ್ವೇನ ಶಿವಧ್ಯಾನಮುದಾಹೃತಮ್॥
ಯತ್ಕಿಂಚಿದ್ಭಾಷಿತಂ ಲೋಕೇ ಸ್ವೇಚ್ಛಯಾ ಶಿವಯೋಗಿನಾ।
ಶಿವಸ್ತೋತ್ರಮಿದಂ ಸರ್ವಂ ಯಸ್ಮಾತ್ ಸರ್ವಾತ್ಮಕಃ ಶಿವಃ॥
ಯಾ ಯಾ ಚೇಷ್ಟಾ ಸಮುತ್ಪನ್ನಾ ಜಾಯತೇ ಶಿವಯೋಗಿನಾಮ್।
ಸಾ ಸಾ ಪೂಜಾ ಮಹೇಶಸ್ಯ ಸರ್ವದಾ ತದ್ಗತಾತ್ಮನಾಮ್॥
-ಸಿ.ಶಿ, ೧೪-೧೭,೧೮,೨೧,೨೨,೨೫-೨೭

[೧೪೫] ಶಂಕರಚಾರ್ಯರ ಶಿವಮಾನಸಪೂಜಾಸ್ತೋತ್ರಮ್.

ಅಂತರಂಗ ಮತ್ತು ಬಹಿರಂಗಗಳಲ್ಲಿ ಶಿವಸ್ವರೂಪವನ್ನನುಭವಿಸುವ ಶಿವಯೋಗಿಯು ಜೀವನ್ಮುಕ್ತನೆನಿಸುತ್ತಾನೆ.[೧೪೬]

ಐಕ್ಯಸ್ಥಲದ ಅಂತಿಮ ಸ್ಥಲವೇ ಸಹಭಾಜನಸ್ಥಲ. ಈ ಸ್ಥಲದಲ್ಲಿ ಸಾಧಕನು ಗುರುವನ್ನೂ, ಶಿಷ್ಯನನ್ನೂ, ಶಿವನನ್ನೂ ಹಾಗೂ ಜಗತ್ತನ್ನೂ ಸ್ವಸ್ವರೂಪತ್ವದಿಂದ ಭಾವಿಸುತ್ತಾನೆ. ಅರ್ಥಾತ್ ಗುರು, ಶಿಷ್ಯ, ಶಿವ ಮತ್ತು ಜಗತ್ತು, ಈ ಎಲ್ಲವೂ ಪರಸ್ಪರ ಬೇರೆಯಲ್ಲ ಎಂಬ ಭೇದಭಾವವು ತೊಲಗುತ್ತದೆ (ಅಂದರೆ ಇವೆಲ್ಲವೂ ಒಂದೇ ಎಂಬ ಅಭೇದಬುದ್ಧಿಯುಂಟಾಗುತ್ತದೆ).[೧೪೭] ಅದನ್ನು ಸಿದ್ಧಾಂತ ಶಿಖಾಮಣಿಯು ಹೀಗೆ ನಿರೂಪಿಸಿದೆ-

> ಗುರೋಃ ಶಿವಸ್ಯ ಶಿಷ್ಯಸ್ಯ ಸ್ವಸ್ವರೂಪತಯಾ ಸ್ಮೃತಿಃ।
> ಸಹಭಾಜನಮಾಖ್ಯಾತಂ ಸರ್ವಗ್ರಾಸಾತ್ಮಭಾವತಃ॥
> ಶಿವಂ ವಿಶ್ವಂ ಗುರುಂ ಸಾಕ್ಷಾದ್ಯೋಜಯೇನ್ನಿತ್ಯಮಾತ್ಮನಿ।
> ಏಕತ್ವೇನ ಚಿದಾಕಾರೇ ತದಿದಂ ಸಹಭಾಜನಮ್॥
> ಅಹಂ ಭೃತ್ಯಃ ಶಿವಃ ಸ್ವಾಮೀ ಶಿಷ್ಯೋಽಹಂ ಗುರುರೇಷ ವೈ।
> ಇತಿ ಯಸ್ಯ ಮತಿರ್ನಾಸ್ತಿ ಸ ಚಾದ್ವೈತಪದೇ ಸ್ಥಿತಃ॥[೧೪೮]

"ಶಿವಯೋಗಿಗೆ ಸರ್ವಭೇದಗ್ರಸನವೇ ಸ್ವಸ್ವರೂಪವಾಗಿರುವುದರಿಂದ ಅರ್ಥಾತ್ ಶಿವಯೋಗಿಯು ಸರ್ವವನ್ನೂ ಅಭಿನ್ನವಾಗಿ ತಿಳಿಯುವುದರಿಂದ, ಗುರು, ಶಿವ, ಶಿಷ್ಯ -ಇವರಲ್ಲಿ ಭೇದ ಮಾಡದೆ, ಈ ಮೂವರನ್ನೂ ಸ್ವಸ್ವರೂಪತ್ವದಿಂದ ಭಾವಿಸುವುದೇ ಸಹಭಾಜನಸ್ಥಲವೆನಿಸುತ್ತದೆ. ಸಾಕ್ಷಾತ್ ಚಿತ್‌ಸ್ವರೂಪನಾದ ಆತ್ಮನಲ್ಲಿ ಶಿವನನ್ನು, ಗುರುವನ್ನು, ಪ್ರಪಂಚವನ್ನೂ ಏಕರೂಪತ್ವದಿಂದ (ಇವೆಲ್ಲವೂ ಒಂದೇ ಎಂಬ ಅಭೇದ ಬುದ್ಧಿಯಿಂದ) ಯಾವಾಗಲೂ ಸಂಯೋಜಿಸುವುದೇ ಸಹಭಾಜನಸ್ಥಲವೆನಿಸುತ್ತದೆ. ಶಿವನು ಸ್ವಾಮಿಯು, ನಾನು ಸೇವಕನು; ಇವನು ಗುರುವು, ನಾನು ಶಿಷ್ಯನು ಎಂಬ

---

[೧೪೬] ವಿಶ್ವಂ ಶಿವಮಯಂ ಚೇತಿ ಸದಾ ಭಾವಯತೋ ಧಿಯಾ।
ಶಿವೈಕಭಾಜನಾತ್ಮತ್ವಾದೇಕಭಾಜನಮುಚ್ಯತೇ॥
ಶಿವೇ ವಿಶ್ವಮಿದಂ ಸರ್ವಂ ಶಿವಃ ಸರ್ವತ್ರ ಭಾಸತೇ।
ಆಧಾರಾಧೇಯಭಾವೇನ ಶಿವಸ್ಯ ಜಗತಃ ಸ್ಥಿತಿಃ॥
ವೃತ್ತಿಶೂನ್ಯೇ ಸ್ವಹೃದಯೇ ಶಿವಲೀನೇ ನಿರಾಕುಲೇ।
ಯಃ ಸದಾ ವರ್ತತೇ ಯೋಗೀ ಸ ಮುಕ್ತೋ ನಾತ್ರ ಸಂಶಯಃ॥
-ಸಿ.ಶಿ, ೧೪.೨೮,೩೦,೩೧

[೧೪೭] "ಶಿವಗುರ್ವಾತ್ಮನಾಮೈಕ್ಯಾನುಸಂಧಾನಾತ್" (೨.೪೯) "...ಚಕ್ರದೇವತಯೋರಪಿ॥ ವಿದ್ಯಾಗುರ್ವಾತ್ಮನಾಮೈಕ್ಯಮ್" (೨.೫೧-೫೨) ಇತಿ ಚ ಯೋಗಿನೀಹೃದಯೇಽಪಿ ಶಿವಗುರ್ವಾತ್ಮನಾಮ್, ಚಕ್ರದೇವತವಿದ್ಯಾಗುರ್ವಾತ್ಮನಾಂ ಚೈಕ್ಯಂ ಪ್ರತಿಪಾದ್ಯತೇ।

[೧೪೮] ಸಿ.ಶಿ, ೧೪.೩೪-೩೫, ೩೭

ಭೇದಬುದ್ಧಿ ಯಾವನಿಗೆ ಇರುವುದಿಲ್ಲವೋ ಅವನೇ ಶಿವಾದ್ವೈತ ಪದಾಧಿಕಾರಿಯಾಗುವನು."

ಪರಾಹಂತಾಮಯವಾದ ತನ್ನ ಆತ್ಮವೆಂಬ ಅಗ್ನಿಯಲ್ಲಿ ಇದಂತಾರೂಪವಾದ ಹವನದ್ರವ್ಯದಿಂದ ಹೋಮಮಾಡುವುದರಿಂದ "ಶಿವೋಽಹಂ" (ನಾನೇ ಶಿವನು), "ಗುರುರಹಮ್" (ನಾನೇ ಗುರುವು), ನಾನೇ ಚರಾಚರಾತ್ಮಕವಾದ ಈ ಪ್ರಪಂಚ ಎಂದು ಪೂರ್ಣಾಹಂತಾಭಾವನೆಯಿಂದ ತಿಳಿಯಲ್ಪಡುತ್ತದೆ. ಆದುದರಿಂದ ಸಾಧಕನಿಗೆ ಎಲ್ಲಿಯೂ ಇದು ಎಂಬ ಭಾವನೆಯುಂಟಾಗದೆ, ಸರ್ವತ್ರ ಅಹಂಬೋಧಭಾವನೆಯುಂಟಾಗುತ್ತದೆ.

ಈ ರೀತಿಯಾಗಿ ಐಕ್ಯವೆಂಬ ಅಂಗನಾದ(ಜೀವಾತ್ಮನು) ಇವನು ಸಮರಸಭಕ್ತಿಯ ಮಹಿಮೆಯಿಂದ ಜನನ ಮರಣಾದಿ ಸಮಸ್ತ ಕ್ಲೇಶಗಳನ್ನು ನಿವಾರಿಸಿಕೊಂಡು, ಚಿದಾಕಾಶ ರೂಪದ ಮಹಾಲಿಂಗದಲ್ಲಿ ನೀರಿನಲ್ಲಿ ನೀರು ಬೆರೆತು ಹೋಗುವಂತೆ ತನ್ನನ್ನು ಸ್ವರೂಪಹಾನಿ ವೃದ್ಧಿಗಳಿಲ್ಲದ ಸಜಾತೀಯ ಸಮಾನ ಸಮರಸಭಾವನೆಯಿಂದ ಸ್ಥಿರವಾಗಿ ಅಡಗಿ ಬೆರೆತುಹೋಗುತ್ತಾನೆ.[೧೪೯] ಇದೇ ಲಿಂಗಾಂಗಸಾಮರಸ್ಯವೆಂಬ ಶ್ರೇಷ್ಠವಾದ ಮುಕ್ತಿಯು.

ಈ ರೀತಿಯಾಗಿ ಶಿಖಿಕರ್ಪೂರನ್ಯಾಯದಂತೆ ಅಥವಾ ನದೀಸಮುದ್ರ ನ್ಯಾಯದಂತೆ ಶಿವನೊಂದಿಗೆ ಸಮರಸಭಾವವನ್ನು ಹೊಂದಿದ, ವಿಧಿ-ನಿಷೇಧಗಳ ಅಡ್ಡಿಗಳಿಲ್ಲದ, ಎಲ್ಲ ಬಗೆಯ ಭೇದಗಳಿಲ್ಲದ ಪೂರ್ಣಾಹಂತಾಭಾವದಿಂದ ಕೂಡಿದ ಮುಕ್ತನಾದ ಮಹಾಪುರುಷನೇ 'ಐಕ್ಯ'ನೆಂದು ಕರೆಯಲ್ಪಟ್ಟಿದ್ದಾನೆ. ಈ ಬಗೆಯ ಐಕ್ಯ ಸ್ಥಿತಿಯನ್ನು ಪಡೆಯಲು ಸಾಧಕನ ಸಮರಸಭಕ್ತಿಯೇ ಮೂಲ. ಆದುದರಿಂದ ಸಮರಸ ಭಕ್ತಿಯುಕ್ತನಾದ ಸಾಧಕನೇ ಐಕ್ಯನೆಂದು ಸಂಕ್ಷಿಪ್ತವಾಗಿ ಹೇಳಲಾಗಿದೆ. ಅದನ್ನು ಮಾಯಿದೇವನು ಹೀಗೆ ಹೇಳಿದ್ದಾನೆ-

ಸಾಮರಸ್ಯಪ್ರಭಾವೇಣ ಪ್ರೋಕ್ತಾ ಸಮರಸಾತ್ಮಿಕಾ।
ಐಕ್ಯಸ್ಥಲಂ ತಯಾ ಚಾಸ್ಯ ಚೇತನಸ್ಯ ಸಮಾಗತಮ್॥[೧೫೦]

"ಸಾಮರಸ್ಯದ ಪ್ರಭಾವದಿಂದ ಆನಂದರೂಪ ಭಕ್ತಿಯನ್ನು ಸಮರಸಭಕ್ತಿ ಎಂದು ಕರೆಯಲಾಗಿದೆ. ಈ ಭಕ್ತಿಯಿಂದ ಜೀವಾತ್ಮನಿಗೆ ಐಕ್ಯಸ್ಥಲವು ಪ್ರಾಪ್ತವಾಗುತ್ತದೆ."

ಈ ಪ್ರಕಾರವಾಗಿ ಶ್ರದ್ಧಾಭಕ್ತಿಯಿಂದ ಭಕ್ತನೆಂದೂ, ನಿಷ್ಠಾಭಕ್ತಿಯಿಂದ ಮಾಹೇಶ್ವರನೆಂದೂ, ಅವಧಾನಭಕ್ತಿಯಿಂದ ಪ್ರಸಾದಿ ಎಂದೂ, ಅನುಭವ ಭಕ್ತಿಯಿಂದ ಪ್ರಾಣಲಿಂಗಿ ಎಂತಲೂ, ಆನಂದಭಕ್ತಿಯಿಂದ ಶರಣನೆಂದೂ ಮತ್ತು ಸಮರಸಭಕ್ತಿಯಿಂದ ಐಕ್ಯನೆಂಬ ಹೆಸರಿನಿಂದ ಜೀವಾತ್ಮನು (ಅಂಗನು) ಈ ಆರು ಬಗೆಯ ಭಕ್ತಿಗಳ

---

[೧೪೯] ಸಿ.ಶಿ, ೧೪.೩೮-೩೯,೪೨

[೧೫೦] ಅನುಭವಸೂತ್ರ, ೫.೮೧

ಸಹಾಯದಿಂದಲೇ ಷಟ್‌ಸ್ಥಲಸೋಪಾನವನ್ನು ಆರೋಹಣ ಮಾಡಿ ತನ್ನ ಮೂಲ ರೂಪನಾದ ಪರಮಾತ್ಮನಲ್ಲಿ (ಲಿಂಗದಲ್ಲಿ) ಒಂದಾಗುತ್ತಾನೆ. ಇದೇ ಲಿಂಗಾಂಗ ಸಂಯೋಗ ಅಥವಾ ಲಿಂಗಾಂಗಸಾಮರಸ್ಯವೆಂಬ ವೀರಶೈವರ ಷಟ್‌ಸ್ಥಲಸೋಪಾನ ಕ್ರಮವು.

ಲಿಂಗಾಂಗಸಂಯೋಗವಿಧಿ

ಬೇರೆ ದರ್ಶನಗಳಲ್ಲಿ ಯಾವುದು ಶಿವ-ಜೀವರ ಐಕ್ಯವೆಂದು ಕರೆಯಲ್ಪಟ್ಟಿದೆಯೋ ಅದು ವೀರಶೈವ ದರ್ಶನದಲ್ಲಿ ಲಿಂಗಾಂಗಸಂಯೋಗ ಅಥವಾ ಲಿಂಗಾಂಗ ಸಾಮರಸ್ಯ ವೆಂದು ಹೇಳಲ್ಪಟ್ಟಿದೆ. ಜೀವಾತ್ಮ-ಪರಮಾತ್ಮರ ಈ ಸಂಯೋಗವು ಸಾಯುಜ್ಯರೂಪ ಮುಕ್ತಿಯು. ಅದನ್ನು ಮಾಯಿದೇವನು ಹೀಗೆ ನಿರೂಪಿಸಿದ್ದಾನೆ-

> ಸಮ್ಯಗ್ ಯೋಗೋ ಹಿ ಸಂಯೋಗೋ ಭವೇಲ್ಲಿಂಗಾಂಗಯೋಃ ಸದಾ।
> ಸಂಯೋಗ ಏವ ಸಾಯುಜ್ಯರೂಪಾ ಮುಕ್ತಿರ್ನ ಚಾಪರಾ॥[೧೫೧]

"ಶಿವ-ಜೀವರ ಸಂಯೋಗವೇ 'ಸಾಯುಜ್ಯಮುಕ್ತಿ' ಅದಕ್ಕಿಂತ ಬೇರೆಯಾದುದು ಇಲ್ಲ. ಆದುದರಿಂದ ಲಿಂಗಾಂಗಸಂಯೋಗಕ್ಕಿಂತಲೂ ಶ್ರೇಷ್ಠವಾದ ಮುಕ್ತಿಯು ಇರುವುದಿಲ್ಲ."

ಉಪಾಸಕ (ಪೂಜಿಸುವವ) ಎಂಬ ಅಂಗಸ್ಥಲವು ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯವೆಂದು ಆರು ವಿಧವಾಗಿರುವಂತೆ, ಉಪಾಸ್ಯ (ಪೂಜಿಸಲ್ಪಡುವ)ವೆಂಬ ಲಿಂಗಸ್ಥಲವೂ ಸಹ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ ಮತ್ತು ಮಹಾಲಿಂಗವೆಂದು ಆರು ವಿಧವಾಗಿದೆ.[೧೫೨] ಅಂಗಸ್ಥಲವು ಹೇಗೆ ಶ್ರದ್ಧಾದಿ ಸಮರಸಾಂತವಾದ ಆರು ಬಗೆಯ ಭಕ್ತಿಗಳಿಂದ ಕೂಡಿರುವಂತೆ, ಲಿಂಗಸ್ಥಲವೂ ಸಹ ಕ್ರಮವಾಗಿ ನಿವೃತ್ತಿ, ಪ್ರತಿಷ್ಠಾ, ವಿದ್ಯಾ, ಶಾಂತಿ, ಶಾಂತ್ಯತೀತ ಮತ್ತು ಶಾಂತ್ಯತೀತೋತ್ತರಗಳೆಂಬ ಆರು ಕಲೆಗಳಿಂದ ಕೂಡಿದೆ. ಈ ಕಲೆಗಳು ಕ್ರಮವಾಗಿ ಕ್ರಿಯಾಶಕ್ತಿ, ಜ್ಞಾನಶಕ್ತಿ, ಇಚ್ಛಾಶಕ್ತಿ, ಆದಿಶಕ್ತಿ, ಪರಾಶಕ್ತಿ ಮತ್ತು ಚಿಚ್ಛಕ್ತಿಗಳೆಂಬ ಆರು ಶಕ್ತಿಗಳ ಪರ್ಯಾಯ ಹೆಸರುಗಳಾಗಿವೆ.[೧೫೩]

---

[೧೫೧] ಅ.ಸೂ, ೫.೧೫

[೧೫೨] ಮಹಾಲಿಂಗಂ ಪ್ರಸಾದಾಖ್ಯಲಿಂಗಂ ಚ ಚರಲಿಂಗಕಮ್।
ಶಿವಲಿಂಗಂ ತಥಾ ಚೈವ ಗುರುಲಿಂಗಂ ತತಃ ಪರಮ್॥
ಆಚಾರಲಿಂಗಮಿತ್ಯೇವ ಲಿಂಗಂ ಷಡ್ವಿಧಮುಚ್ಯತೇ॥ -ಅ.ಸೂ, ೩.೨೧-೨೨

[೧೫೩] ಶಕ್ತಯಃ ಷಡ್ವಿಧಾ ಜ್ಞೇಯಾಃ ಷಟ್‌ಸ್ಥಲೇಷು ಸಮಾಹಿತಾಃ।
ಶಾಂತ್ಯತೀತೋತ್ತರಾ ನಾಮ ಚಿಚ್ಛಕ್ತಿರಿತಿ ಕೀರ್ತಿತಾ।
ಶಾಂತ್ಯತೀತಾ ಪರಾಶಕ್ತಿಃ ಶಾಂತಿರೇವಾದಿಸಂಜ್ಞಿತಾ।
ಇಚ್ಛಾಶಕ್ತಿಶ್ಚ ವಿದ್ಯಾ ಸ್ಯಾತ್ ಪ್ರತಿಷ್ಠಾ ಜ್ಞಾನರೂಪಿಣೀ।
ನಿವೃತ್ತಿಃ ಸ್ಯಾತ್ ಕ್ರಿಯಾಶಕ್ತಿರಿತಿ ಪರ್ಯಾಯಸಂಗತಿಃ॥ -ಅ.ಸೂ, ೩.೨೩-೨೬

ಶ್ರೀ ಮಾಯಿದೇವನು ಈ ಆರು ಶಕ್ತಿಗಳಿಂದ ಯುಕ್ತವಾದ ಆರು ಲಿಂಗಗಳನ್ನು ಅಂತರಂಗದಲ್ಲಿ ಅಭಿವ್ಯಕ್ತಿಗೊಳಿಸುವ ಸ್ಥಾನಗಳನ್ನು 'ಆಧಾರ'ದಿಂದ ಮೊದಲ್ಗೊಂಡು 'ಆಜ್ಞಾ'ದಿಂದ ಕೊನೆಯಾಗುವ ಷಟ್‌ಚಕ್ರಗಳೆಂದು ವರ್ಣಿಸುತ್ತಾನೆ. ಅದರಂತೆ ಮೂಲಾಧಾರವು ಆಚಾರಲಿಂಗದ ಅಭಿವ್ಯಕ್ತಿಯ ಸ್ಥಾನ ಮತ್ತು ಆ ಲಿಂಗವು ಕ್ರಿಯಾಶಕ್ತಿಯೆಂಬ ಪರ್ಯಾಯ ನಾಮದಿಂದ ಕರೆಯಲಾಗುವ ನಿವೃತ್ತಿಕಲೆಯೊಂದಿಗೆ ಸೇರಿ 'ನ'ಕಾರ ಮಂತ್ರದ ವಾಸಸ್ಥಳವು. ಸ್ವಾಧಿಷ್ಠಾನವು ಗುರುಲಿಂಗದ ಅಭಿವ್ಯಕ್ತಿಯ ಸ್ಥಾನ. ಈ ಗುರುಲಿಂಗವು ಜ್ಞಾನಶಕ್ತಿಯೆಂಬ ಮತ್ತೊಂದು ಹೆಸರುಳ್ಳ ಪ್ರತಿಷ್ಠಾಕಲೆಗೆ ಸಂಬಂಧಿಸಿದ 'ಮ'ಕಾರ ಮಂತ್ರದ ನಿವಾಸ. ಮಣಿಪೂರಕವು ಶಿವಲಿಂಗಾಭಿವ್ಯಕ್ತಿಯ ಸ್ಥಾನ ಮತ್ತು ಈ ಲಿಂಗವು ಇಚ್ಛಾಶಕ್ತಿಯೆಂಬ ಅಪರ ನಾಮಾಂಕಿತವುಳ್ಳ ವಿದ್ಯಾಕಲೆಗೆ ಸಂಬಂಧಿಸಿದ 'ಶಿ'ಕಾರ ಮಂತ್ರದ ಅಧಿಷ್ಠಾನ. ಅನಾಹತಚಕ್ರವು ಜಂಗಮಲಿಂಗವು ಅಭಿವ್ಯಕ್ತಿಗೊಳ್ಳುವ ಸ್ಥಾನ. ಈ ಲಿಂಗವು ಆದಿಶಕ್ತಿಯೆಂಬ ಪರ್ಯಾಯ ನಾಮವುಳ್ಳ ಶಾಂತಿಕಲೆಗೆ ಸಂಬಂಧಿಸಿದ 'ವಾ'ಕಾರ ಮಂತ್ರದ ವಾಸಸ್ಥಾನ. ವಿಶುದ್ಧಿಯು ಪ್ರಸಾದ ಲಿಂಗವು ಅಭಿವ್ಯಕ್ತವಾಗುವ ಸ್ಥಾನ. ಈ ಲಿಂಗವು ಪರಾಶಕ್ತಿಯೆಂದು ಕರೆಯಲ್ಪಡುವ ಶಾಂತ್ಯತೀತಕಲೆಗೆ ಸಂಬಂಧಿಸಿದ 'ಯ'ಕಾರ ಮಂತ್ರದ ನಿವಾಸ. ಆಜ್ಞಾಚಕ್ರವು ಮಹಾಲಿಂಗವು ಅಭಿವ್ಯಕ್ತವಾಗುವ ಸ್ಥಾನ. ಈ ಲಿಂಗವು ಚಿಚ್ಛಕ್ತಿಯೆಂದು ಕರೆಯಲಾಗುವ ಶಾಂತ್ಯತೀತೋತ್ತರ ಕಲೆಗೆ ಸಂಬಂಧಿಸಿದ 'ಓಂ'ಕಾರ ಮಂತ್ರದ ಅಧಿಷ್ಠಾನವಾಗುತ್ತದೆ.[೧೫೪]

ಮೇಲೆ ನಿರೂಪಿಸಲಾದ ಷಡ್ಲಿಂಗಗಳ ಸ್ಥಾನಗಳು ಷಟ್‌ಚಕ್ರಗಳೇ ಆಗಿವೆ ಎಂದು ಶ್ರೀ ನೀಲಕಂಠಶಿವಾಚಾರ್ಯರೂ ಸಹ ಹೇಳಿದ್ದಾರೆ. ಹೇಗೆಂದರೆ- "ಮಾನವನ ಶರೀರದಲ್ಲಿರುವ ಮಹಾಲಿಂಗವೇ ಮೊದಲಾದ ಆರು ಬಗೆಯ ಲಿಂಗಗಳ ಸ್ಥಾನಗಳು ಆಜ್ಞಾದಿ ಆರು ಬಗೆಯ ಚಕ್ರಗಳೇ ಆಗಿವೆ. ಕಾರಣವೇನೆಂದರೆ ಆಯಾ ಚಕ್ರಗಳಲ್ಲಿಯೇ ಅವುಗಳು ಪ್ರತ್ಯಕ್ಷ ಯೋಗ್ಯಗಳಾಗಿರುವುದರಿಂದ"[೧೫೫] ಎಂದು.

---

[೧೫೪] ಮೂಲಾಧಾರೇ ನಕಾರಾಖ್ಯಾ ಸಂಸ್ಥಿತಾ ಪರಮೇಶ್ವರೀ।
ಸ್ವಾಧಿಷ್ಠಾನೇ ಮಕಾರಃ ಸ್ಯಾಚ್ಛಿಕಾರೋ ಮಣಿಪೂರಕೇ॥
ಅನಾಹತೇ ವಕಾರಾಖ್ಯಾ ಸದಾ ಶೈವೀ ವ್ಯವಸ್ಥಿತಾ॥
ವಿಶುದ್ಧೌ ತು ಯಕಾರಾಖ್ಯಾ ಸಾಕ್ಷಾದ್ ವಿಶ್ವೇಶ್ವರೀ ಸ್ಥಿತಾ।
ಆಜ್ಞಾಚಕ್ರೇ ಮಹಾದೇವೀ ತಾರಾಖ್ಯಾ ಸಮುಪಸ್ಥಿತಾ॥
ಆಚಾರಾಖ್ಯಂ ನಕಾರಃ ಸ್ಯಾನ್ಮಕಾರೋ ಗುರುಲಿಂಗಕಮ್।
ಶಿಕಾರಃ ಶಿವಲಿಂಗಂ ಸ್ಯಾದ್ ವಾಕಾರಶ್ಚರಲಿಂಗಕಮ್॥
ಯಕಾರಃ ಸ್ಯಾತ್ ಪ್ರಸಾದಾಖ್ಯಮೋಂಕಾರೋ ಮಹದುತ್ಯತೇ॥
-ಅ.ಸೂ, ೬.೪೭-೫೦

[೧೫೫] ಶಿ.ಪ, ಪು. ೪೮

ಆದರೂ ಸಹ ಪರಶಿವಬ್ರಹ್ಮನ ಸ್ವರೂಪವಾದ ಲಿಂಗವು ಸರ್ವವ್ಯಾಪಕವಾದರೂ ಉಪಾಸನೆಯ ಉದ್ದೇಶದಿಂದ ಆಂತರಿಕವಾಗಿದ್ದು ಇದು ಇಷ್ಟೇ ಎಂದು ತಿಳಿಯಬೇಕು. ಅದನ್ನು ಶ್ರೀ ರೇಣುಕಾಚಾರ್ಯರು ಹೀಗೆ ಉಪದೇಶಿಸಿದ್ದಾರೆ-

ಅಪರಿಚ್ಛಿನ್ನಮವ್ಯಕ್ತಂ ಲಿಂಗಂ ಬ್ರಹ್ಮ ಸನಾತನಮ್।
ಉಪಾಸನಾರ್ಥಮಂತಸ್ಥಂ ಪರಿಚ್ಛಿನ್ನಂ ಸ್ವಮಾಯಯಾ॥[೧೫೬]

"ಅಪರಿಚ್ಛಿನ್ನವೂ, ಅವ್ಯಕ್ತವೂ, ಸನಾತನವೂ, ಬ್ರಹ್ಮಪದವಾಚ್ಯವೂ, ಅಂತಃಸ್ಥಿತವೂ ಆದ ಲಿಂಗವು ಭಕ್ತರ ಉಪಾಸನೆಗಾಗಿ ತನ್ನಲ್ಲಿರುವ ಮಾಯಾಶಕ್ತಿಯಿಂದ ವಿಭಾಗವನ್ನು ಹೊಂದಿತು."

ಆಧಾರವೇ ಮೊದಲಾದ ಚಕ್ರಗಳಲ್ಲಿ ಜ್ಯೋತಿರ್ಲಿಂಗದ ಅನುಸಂಧಾನವು ಸಾಮಾನ್ಯ ಜನರಿಗೆ ಸುಲಭವಾಗಿ ಲಭಿಸುವುದಿಲ್ಲ. ಆ ಕಾರಣದಿಂದ ಯೋಗಶಾಸ್ತ್ರದಲ್ಲಿ ಅಷ್ಟಾಂಗಯೋಗವು ನಿರೂಪಿತವಾಗಿದೆ. ಅವುಗಳಲ್ಲಿಯೂ ಸಹ ಪ್ರಾಣಾಯಾಮ ಹಾಗೂ ಮುದ್ರಾಸಾಧನೆಗಳು ಪ್ರಮುಖವಾದವುಗಳು. ಪ್ರಾಣಾಯಾಮದಿಂದ ಆಯಾ ಚಕ್ರದಲ್ಲಿರುವ ಆವರಣರೂಪದ ಮಾಲಿನ್ಯವು ನಿವಾರಣೆಯಾಗುತ್ತದೆ[೧೫೭] ಮತ್ತು ಶಾಂಭವೀ, ಉನ್ಮನೀ, ಶಕ್ತಿ, ಚಾಲಿನಿ ಮೊದಲಾದ ಮುದ್ರೆಗಳಲ್ಲಿ ಮನಸ್ಸು ಸ್ಥಿರವಾಗುತ್ತದೆ. ಈ ರೀತಿಯಾಗಿ ಸ್ಥಿರಚಿತ್ತರಾದ ಯೋಗಿಗಳಿಗೆ ಆ ಜ್ಯೋತಿಯ ಸಾಕ್ಷಾತ್ಕಾರವಾಗುತ್ತದೆ. ಇದನ್ನೇ ವೀರಶೈವ ಶಿವಯೋಗಿಗಳು ಅಂತರ್ಲಿಂಗಧಾರಣವೆಂದು ಕರೆದಿದ್ದಾರೆ.[೧೫೮] ಅಂತರ್ಲಿಂಗಾನುಸಂಧಾನವು ಮೋಕ್ಷಸಾಮಗ್ರಿಗಳಲ್ಲಿ ಪ್ರಮುಖವಾದುದು.[೧೫೯] ಆದುದರಿಂದಲೇ ಶ್ರೀ ರೇಣುಕ ಭಗವತ್ಪಾದರು-

ಆಧಾರೇ ಕನಕಪ್ರಖ್ಯಂ ಹೃದಯೇ ವಿದ್ರುಮಪ್ರಭಮ್।
ಭ್ರೂಮಧ್ಯೇ ಸ್ಫಟಿಕಚ್ಛಾಯಂ ಲಿಂಗಂ ಯೋಗೀ ವಿಭಾವಯೇತ್॥[೧೬೦]

"ಯೋಗಿಯು ಲಿಂಗವನ್ನು ಆಧಾರಚಕ್ರದಲ್ಲಿ ಸುವರ್ಣಕಾಂತಿಯುಳ್ಳದನ್ನಾಗಿಯೂ, ಹೃದಯಕಮಲದಲ್ಲಿ ಹವಳದ ಕಾಂತಿಯುಳ್ಳದನ್ನಾಗಿಯೂ, ಭ್ರೂಮಧ್ಯದಲ್ಲಿ ಸ್ಫಟಿಕದ ಕಾಂತಿಯುಳ್ಳದನ್ನಾಗಿಯೂ ಭಾವಿಸಬೇಕು" -ಎಂದು ಅಂತರ್ಲಿಂಗಾನುಸಂಧಾನವನ್ನು ಉಪದೇಶಿಸಿದ್ದಾರೆ.

---

೧೫೬. ಸಿ.ಶಿ, ೬.೩೬

೧೫೭. "ತತಃ ಕ್ಷೀಯತೇ ಪ್ರಕಾಶಾವರಣಮ್" -ಯೋಗಸೂತ್ರ, ೨.೫೨

೧೫೮. ಆಧಾರೇ ಹೃದಯೇ ವಾಪಿ ಭ್ರೂಮಧ್ಯೇ ವಾ ನಿರಂತರಮ್।
ಜ್ಯೋತಿರ್ಲಿಂಗಾನುಸಂಧಾನಮಾಂತರಂ ಲಿಂಗಧಾರಣಮ್॥ -ಸಿ.ಶಿ, ೬.೩೮

೧೫೯. ಅಂತರ್ಲಿಂಗಾನುಸಂಧಾನಮಾತ್ಮವಿದ್ಯಾಪರಿಶ್ರಮಃ।
ಗುರೂಪಾಸನಶಕ್ತಿಶ್ಚ ಕಾರಣಂ ಮೋಕ್ಷಸಂಪದಾಮ್॥ -ಸಿ.ಶಿ, ೬.೪೨

೧೬೦. ಸಿ.ಶಿ, ೬.೩೯

ಆಚಾರ್ಯರ ಈ ಉಪದೇಶದ ಮೇರೆಗೆ ಭಕ್ತಸ್ಥಲದಲ್ಲಿ ಭಕ್ತನೆಂದು ಕರೆಯಿಸಿಕೊಳ್ಳುವ ಸಾಧಕನು ಗುರುವು ಉಪದೇಶ ಮಾಡಿರುವಂತೆ ಸುಖಾಸನದಲ್ಲಿ ಕುಳಿತು, ತನ್ನ ವಾಮಹಸ್ತಪೀಠವನ್ನು ಕಣ್ಣಿನ ಎದುರಿಗೆ ಹನ್ನೆರಡು ಅಂಗುಲದಷ್ಟು ದೂರದಲ್ಲಿ ಹಿಡಿದು, ಆ ವಾಮಪೀಠದಲ್ಲಿ ಇಷ್ಟಲಿಂಗವನ್ನು ಸ್ಥಾಪಿಸಿ ಅರ್ಧನಿಮೀಲಿತವಾದ ನಿರ್ನಿಮೇಷ ಕಣ್ಣುಗಳಿಂದ ಆ ಇಷ್ಟಲಿಂಗವನ್ನು ನೋಡುತ್ತಾ, ದೃಢಸಂಕಲ್ಪದಿಂದ ತನ್ನ ಚಿತ್ತವೃತ್ತಿಯನ್ನು ಮೂಲಾಧಾರಚಕ್ರದಲ್ಲಿ ಕೇಂದ್ರೀಕರಿಸಿ, 'ನ'ಕಾರ ಮಂತ್ರವನ್ನು ಸ್ಮರಿಸುತ್ತಾ ಪ್ರಾಣಾಯಾಮ ಪ್ರಕ್ರಿಯೆಯಿಂದ ಯಾವಾಗ ಪುನಃ ಪುನಃ ಪ್ರಾಣಾಪಾನಗಳ ಘರ್ಷಣೆಯಾಗುತ್ತದೆಯೋ ಆಗ ಮೂಲಾಧಾರಚಕ್ರದಲ್ಲಿ ದಿವ್ಯಜ್ಯೋತಿಯು ಉತ್ಪನ್ನವಾಗುತ್ತದೆ. ಈ ಉದ್ದೇಶಕ್ಕಾಗಿ ಶಕ್ತಿ, ಚಾಲಿನೀ ಮತ್ತು ಅಶ್ವಿನಿ ಮುದ್ರೆಗಳ ಉಪಯೋಗವು ಮಾಡಲ್ಪಡುತ್ತದೆ. ಪ್ರಾಣಾಯಾಮ ಹಾಗೂ ಮುದ್ರೆಗಳ ವಿಷಯಗಳಿಗೆ ಸಂಬಂಧಿಸಿದ ಜ್ಞಾನವು ಶ್ರೀಗುರುವಿನ ಮುಖಾರವಿಂದದಿಂದಲೇ ತಿಳಿಯಬೇಕು.

ಈ ಪ್ರಕಾರ ಮೂಲಾಧಾರಚಕ್ರದಲ್ಲಿ ಉತ್ಪನ್ನವಾದ ಈ ಜ್ಯೋತಿಯನ್ನು ವೀರಶೈವ ಶಿವಯೋಗಿಗಳು ಆಚಾರಲಿಂಗವೆಂದು ಕರೆಯುತ್ತಾರೆ. ಈ ಆಚಾರಲಿಂಗದ ನಿರಂತರ ಅನುಸಂಧಾನದಿಂದ ಭಕ್ತನೆಂಬ ಅಂಗಸ್ಥಲವು ಆಚಾರವೆಂಬ ಲಿಂಗದ ಸ್ವರೂಪವಾಗುತ್ತದೆ. ಆಚಾರಲಿಂಗವು ಕ್ರಿಯಾಶಕ್ತಿಯಿಂದೊಡಗೂಡಿರುವುದರಿಂದ ಅದರ ಉಪಾಸಕನಲ್ಲಿರುವ ಶ್ರದ್ಧಾಭಕ್ತಿಯೂ ಸಹ ಕ್ರಿಯಾಶಕ್ತಿರೂಪವಾಗಿ ಪರಿಣಮಿಸುತ್ತದೆ. ಇದೇ ಭಕ್ತನೆಂಬ ಜೀವಾತ್ಮ-ಆಚಾರಲಿಂಗಗಳ ಸಾಮರಸ್ಯ.

ಭಕ್ತ ಎಂಬ ಅಂಗನಿಗೆ ಆಚಾರಲಿಂಗೋಪಾಸನೆಯನ್ನು ಹೇಳಿರುವ ಉದ್ದೇಶವೇನೆಂದರೆ- ಸಾಧಕನು ನಾಲ್ಕನೆಯ ಪರಿಚ್ಛೇದದಲ್ಲಿ ನಿರೂಪಿಸಲಾದ ಪಂಚಾಚಾರಗಳನ್ನು ಶ್ರದ್ಧೆಯಿಂದ ಪಾಲಿಸುತ್ತಾನೆ. ಕಾಲಕ್ರಮೇಣ ಅತಿಶಯವಾದ ಶ್ರದ್ಧೆಯಿಂದ ತಾನು ಆಚರಿಸಬೇಕಾಗಿರುವ ಆಚಾರಗಳ ವಿಷಯದಲ್ಲಿ ಭಗವಂತನ ಸ್ವರೂಪವನ್ನು ಕಾಣುತ್ತಾನೆ. ಈ ಪ್ರಕಾರ "ಆಚಾರ ಏವ ಲಿಂಗಮ್ ಆಚಾರಲಿಂಗಮ್, ಆಚಾರಲಿಂಗಸ್ಯ ಉಪಾಸಕಃ ಆಚಾರಲಿಂಗೋಪಾಸಕಃ" ಎಂಬ ವ್ಯುತ್ಪತ್ತಿಯಂತೆ ಪೂರ್ವೋಕ್ತ ಆಚಾರಗಳನ್ನು ಅತಿಶ್ರದ್ಧೆಯಿಂದ ಶಿವಲಿಂಗದ ಪೂಜೆಯಂತೆ ಪಾಲಿಸುತ್ತಾನೆ ಎನ್ನುವ ಕಾರಣದಿಂದ ಭಕ್ತಸ್ಥಲದ ಸಾಧಕನು ಆಚಾರಲಿಂಗದ ಉಪಾಸಕನೆಂದು ಕರೆಯಲ್ಪಡುತ್ತಾನೆ. ಹೀಗೆ ಅನುಷ್ಠಾನಶೀಲನಾದ ಅವನು ನಾನು ಅನುಷ್ಠಾನ ಮಾಡುತ್ತಿದ್ದೇನೆ ಎಂಬ ಅಭಿಮಾನವನ್ನು ತ್ಯಜಿಸಿ, ಯಾವಾಗ ಅನುಷ್ಠಾನದಲ್ಲಿ ತನ್ಮಯನಾಗುತ್ತಾನೆಯೋ ಆಗ ಅವನು ಆಚಾರಲಿಂಗಸ್ವರೂಪಿಯಾಗುತ್ತಾನೆ. ಈ ರೀತಿಯಾಗಿ ಭಕ್ತಸ್ಥಲದ ಸಾಧಕನು ಶ್ರೇಷ್ಠ ಕ್ರಿಯಾಶೀಲನಾಗಿರುವುದರಿಂದ ಕ್ರಿಯಾಶಕ್ತಿಯುಕ್ತನೆಂತಲೂ ಕರೆಯಲ್ಪಡುತ್ತಾನೆ. ಆದುದರಿಂದಲೇ ಅವನು ಕರ್ಮಯೋಗಿಯಾಗುತ್ತಾನೆ. ಆ ಕಾರಣದಿಂದ ಉತ್ತಮವಾದ ಆಚಾರಶೀಲತ್ವ ಅಥವಾ ಲೋಕಕ್ಕೆ ಹಿತವಾದ ಕರ್ಮಗಳನ್ನು ಮಾಡುವುದು ಆಚಾರಲಿಂಗೋಪಾಸಕನ

ಅರ್ಥಾತ್ ಆಚಾರಲಿಂಗಸ್ವರೂಪಿಯಾದ ಸಾಧಕನ ಲಕ್ಷಣವೆಂದು ಹೇಳಬಹುದು. ಇದೇ ಭಕ್ತ-ಆಚಾರಲಿಂಗದ ಸಾಮರಸ್ಯವು.

ಮಾಹೇಶ್ವರಸ್ಥಲದ ಮಾಹೇಶ್ವರನೆಂಬ ಹೆಸರುಳ್ಳ ಸಾಧಕನೂ ಸಹ ಪೂರ್ವೋಕ್ತಗಳಾದ ಶಿವಯೋಗ ಪ್ರಕ್ರಿಯೆಯಿಂದ ಸುಖಾಸನದಲ್ಲಿ ಕುಳಿತು, ಪೂರ್ವೋಕ್ತ ರೀತಿಯಲ್ಲಿ ತನ್ನ ಇಷ್ಟಲಿಂಗವನ್ನು ನೋಡುತ್ತಾ ದೃಢಸಂಕಲ್ಪದಿಂದ ತನ್ನ ಮನೋವೃತ್ತಿಯನ್ನು ಸ್ವಾಧಿಷ್ಠಾನಚಕ್ರದಲ್ಲಿ ಕೇಂದ್ರೀಕರಿಸಿ 'ಮ'ಕಾರ ಮಂತ್ರವನ್ನು ಸ್ಮರಿಸುತ್ತಾ ಇರುತ್ತಾನೆ. ಪೂರ್ವೋಕ್ತ ಪ್ರಾಣಾಯಾಮದಿಂದ ಹಾಗೂ ಚಿತ್ತಸ್ಥೈರ್ಯದಿಂದ ಸ್ವಾಧಿಷ್ಠಾನಚಕ್ರದಲ್ಲಿ ಜ್ಯೋತಿಯ ಸಾಕ್ಷಾತ್ಕಾರವಾಗುತ್ತದೆ. ಆ ಜ್ಯೋತಿಯನ್ನು ವೀರಶೈವಾಚಾರ್ಯರು ಗುರುಲಿಂಗವೆಂದು ಕರೆಯುತ್ತಾರೆ. ಈ ಜ್ಯೋತಿರ್ಲಿಂಗದ ವಿಷಯದಲ್ಲಿ ನಿಷ್ಠೆಯಿಂದ ನಿರಂತರವಾಗಿ ಅನುಸಂಧಾನ ಮಾಡುವುದರಿಂದ ಮಾಹೇಶ್ವರನು ಗುರುಲಿಂಗಸ್ವರೂಪಿಯಾಗುತ್ತಾನೆ. ಗುರುಲಿಂಗವು ಜ್ಞಾನಶಕ್ತಿಯುಕ್ತವಾಗಿರುವುದರಿಂದ, ಗುರುಲಿಂಗದ ಉಪಾಸಕನ ನಿಷ್ಠಾಭಕ್ತಿಯೂ ಸಹ ಜ್ಞಾನಶಕ್ತಿಯಾಗಿ ಮಾರ್ಪಾಡಾಗುತ್ತದೆ. ಈ ರೀತಿಯಾಗಿ ಉಪಾಸನೆಯ ಬಲದಿಂದ ನಿಷ್ಠಾಭಕ್ತಿಯುಕ್ತನಾದ ಮಾಹೇಶ್ವರನು ಈಗ ಜ್ಞಾನಶಕ್ತಿಯುಕ್ತ ಗುರುಲಿಂಗಸ್ವರೂಪಿಯಾಗುತ್ತಾನೆ. ಇದೇ ಮಾಹೇಶ್ವರನೆಂಬ ಅಂಗ (ಜೀವಾತ್ಮ) ಮತ್ತು -ಗುರುಲಿಂಗದ ಸಾಮರಸ್ಯವು.

ಇಲ್ಲಿ ಇದರ ತಾತ್ಪರ್ಯವಿಷ್ಟು- ತಾತ್ತ್ವಿಕ ದೃಷ್ಟಿಯಿಂದ 'ಗುರು' ಶಬ್ದಕ್ಕೆ ಜ್ಞಾನ ಎಂಬ ಅರ್ಥವಿದೆ.[೧೬೧] ಆದುದರಿಂದ "ಗುರುರೇವ ಲಿಂಗಂ ಗುರುಲಿಂಗಮ್" ಎಂಬ ವ್ಯುತ್ಪತ್ತಿಯಂತೆ ಸದ್ಗುರುವಿನಿಂದ ಉಪದೇಶಿಸಲ್ಪಟ್ಟ ಯಾವ ನೈತಿಕಜ್ಞಾನವಿದೆಯೋ ಅದನ್ನೇ ಲಿಂಗವೆಂದು ನಿಷ್ಠೆಯಿಂದ ಉಪಾಸನೆ ಮಾಡುವ ಸಾಧಕನೇ ಗುರುಲಿಂಗದ ಉಪಾಸಕನು. ಈ ಪ್ರಕಾರ ಜ್ಞಾನನಿಷ್ಠನಾದ ಅವನು ಜ್ಞಾನಶಕ್ತಿಯುಕ್ತನೂ ಸಹ ಆಗುತ್ತಾನೆ. ಜ್ಞಾನವಿಲ್ಲದ ಆಚಾರವು ಅಂಧಾಚಾರವಾಗುತ್ತದೆ. ಆ ಕಾರಣ ಸಾಧಕನು ಜ್ಞಾನಶಕ್ತಿಯುಕ್ತನೆಂದು ಕರೆಯಲ್ಪಡುತ್ತಾನೆ. ಈ ರೀತಿಯಾಗಿ ಅವನು ಯಾವ ಯಾವ ಕ್ರಿಯೆಗಳನ್ನು ಆಚರಿಸುತ್ತಾನೆಯೋ ಅವೆಲ್ಲವುಗಳ ವಾಸ್ತವಿಕವಾದ ತಿಳುವಳಿಕೆಯುಳ್ಳವನಾಗುತ್ತಾನೆ. ಆ ಕಾರಣದಿಂದ ಆಚಾರಕ್ಕೆ ಸಂಬಂಧಿಸಿದ ಜ್ಞಾನಸಂಪನ್ನತ್ವವೇ ಗುರುಲಿಂಗೋಪಾಸಕನ ಅರ್ಥಾತ್ ಗುರುಲಿಂಗಸ್ವರೂಪಿಯಾದ ಸಾಧಕನ ಲಕ್ಷಣವೆಂದು ಹೇಳಬಹುದು.

ಪ್ರಸಾದಿಸ್ಥಲದ ಪ್ರಸಾದಿ ಎಂಬ ಅಭಿಧಾನವುಳ್ಳ ಸಾಧಕನೂ ಸಹ ಪೂರ್ವೋಕ್ತ ಶಿವಯೋಗ ಪ್ರಕ್ರಿಯೆಯಿಂದ ಹಾಗೂ ದೃಢಸಂಕಲ್ಪದಿಂದ ತನ್ನ ಮನೋವೃತ್ತಿಯನ್ನು ಮಣಿಪೂರಕಚಕ್ರದಲ್ಲಿ ನೆಲೆಗೊಳಿಸಿ, 'ಶಿ'ಕಾರ ಮಂತ್ರವನ್ನು ಸ್ಮರಿಸುತ್ತಾ ಇರುವಾಗ ಆ

---

[೧೬೧] ಗುಕಾರಸ್ತ್ವಂಧಕಾರಃ ಸ್ಯಾತ್ ರುಕಾರಸ್ತನ್ನಿರೋಧಕಃ।

ದ್ವಯೋರ್ಯೋಗ ಪ್ರಭಾವೇಣ ಸ್ವಯಂಜ್ಯೋತಿರ್ಗುರುಃ ಸ್ಮೃತಃ॥

-ವೀರಶೈವ ಚಿಂತಾಮಣಿ, ಪು.೧೨

ಚಕ್ರದಲ್ಲಿ ಜ್ಯೋತಿಯ ಸಾಕ್ಷಾತ್ಕಾರವಾಗುತ್ತದೆ. ಆ ಜ್ಯೋತಿಯನ್ನು ವೀರಶೈವಾಚಾರ್ಯರು 'ಶಿವಲಿಂಗ'ವೆಂದು ಕರೆಯುತ್ತಾರೆ. ಈ ಶಿವಲಿಂಗವನ್ನು ಅವಧಾನದಿಂದ ನಿರಂತರವಾಗಿ ಅನುಸಂಧಾನ ಮಾಡುವುದರಿಂದ ಪ್ರಸಾದಿಯು ಶಿವಲಿಂಗಸ್ವರೂಪಿಯಾಗುತ್ತಾನೆ. ಶಿವಲಿಂಗವು ಇಚ್ಛಾಶಕ್ತಿಯುಕ್ತವಾಗಿರುವುದರಿಂದ ಆ ಲಿಂಗದ ಉಪಾಸಕನ ಅವಧಾನಭಕ್ತಿಯು ಇಚ್ಛಾಶಕ್ತಿಯಾಗಿ ಮಾರ್ಪಾಡಾಗುತ್ತದೆ. ಈ ರೀತಿಯಾಗಿ ಉಪಾಸನಾ ಸಾಮರ್ಥ್ಯದಿಂದ ಅವಧಾನಭಕ್ತಿಯಿಂದ ಕೂಡಿರುವ ಪ್ರಸಾದಿ ಎಂಬ ಹೆಸರುಳ್ಳ ಸಾಧಕನು ಇಚ್ಛಾಶಕ್ತಿಯುಕ್ತವಾದ ಶಿವಲಿಂಗಸ್ವರೂಪಿಯಾಗುತ್ತಾನೆ. ಇದೇ ಪ್ರಸಾದಿ-ಶಿವಲಿಂಗಗಳ ಸಾಮರಸ್ಯವು.

ಇದರ ತಾತ್ಪರ್ಯವಿಷ್ಟು- 'ಶಿವ' ಶಬ್ದಕ್ಕೆ ಭದ್ರಂ, ಮಂಗಲಂ, ಕಲ್ಯಾಣಂ ಮುಂತಾದ ಅರ್ಥಗಳಿವೆ.[೧೬೨] ಆದುದರಿಂದ "ಶಿವಮೇವ ಲಿಂಗಂ ಶಿವಲಿಂಗಮ್" ಎಂಬ ವ್ಯುತ್ಪತ್ತಿಯ ಮೇರೆಗೆ ಶಿವಭಾವನೆಯೇ ಶಿವಲಿಂಗವು. ಆ ಕಾರಣ-

ಸರ್ವೇ ಭವಂತು ಸುಖಿನಃ ಸರ್ವೇ ಸಂತು ನಿರಾಮಯಾಃ।
ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿದ್‌ದುಃಖಮಾಪ್ನುಯಾತ್॥

"ಎಲ್ಲರೂ ಸುಖಿಗಳಾಗಲಿ, ಎಲ್ಲರೂ ಆರೋಗ್ಯವಂತರಾಗಲಿ, ಎಲ್ಲರಿಗೂ ಮಂಗಳ ವುಂಟಾಗಲಿ, ಯಾವೊಬ್ಬನೂ ದುಃಖಿಸಬಾರದು" ಎಂಬ ಉಕ್ತಿಯಂತೆ ಎಲ್ಲ ಪ್ರಾಣಿಗಳ ವಿಷಯದಲ್ಲಿ ಶುಭವನ್ನು ಚಿಂತನೆ ಮಾಡುವುದೇ ಶಿವಲಿಂಗಾನುಸಂಧಾನವು. ಶಿವಲಿಂಗವು ಇಚ್ಛಾಶಕ್ತಿಯಿಂದ ಕೂಡಿರುವುದರಿಂದ ಈ ಸಾಧಕನು ಲೋಕಕಲ್ಯಾಣ ಇಚ್ಛಾಶಕ್ತಿಯುತನಾಗುತ್ತಾನೆ. ಶಿವಾಚಾರ-ಶಿವಜ್ಞಾನ-ಗಳೊಂದಿಗೆ ಶಿವೇಚ್ಛೆಯೂ ಸಹ ಅವಶ್ಯಕವೆಂದು ತಿಳಿಯಬೇಕು. ಈ ರೀತಿಯಾಗಿ ಲೋಕಕಲ್ಯಾಣ ಇಚ್ಛಾಶಕ್ತಿಯುಕ್ತತ್ವವೇ ಶಿವಲಿಂಗೋಪಾಸಕನ ಅರ್ಥಾತ್ ಶಿವಲಿಂಗಸ್ವರೂಪಿಯಾದ ಸಾಧಕನ ಲಕ್ಷಣವು.

ಪ್ರಾಣಲಿಂಗಿಸ್ಥಲದ ಪ್ರಾಣಲಿಂಗಿ ಎಂಬ ಸಾಧಕನೂ ಸಹ ಪೂರ್ವೋಕ್ತ ಶಿವಯೋಗ ಪ್ರಕ್ರಿಯೆಯಿಂದ ಹಾಗೂ ದೃಢಸಂಕಲ್ಪದಿಂದ ತನ್ನ ಮನೋವೃತ್ತಿಯನ್ನು ಅನಾಹತಚಕ್ರದಲ್ಲಿ ಶಾಂಭವೀ ಮುದ್ರೆಯಲ್ಲಿ ಕೇಂದ್ರೀಕರಿಸಿ, 'ವಾ'ಕಾರ ಮಂತ್ರವನ್ನು ಸ್ಮರಣೆಮಾಡಿದಾಗ ಹೃದಯದಲ್ಲಿರುವ ಅನಾಹತಚಕ್ರದಲ್ಲಿ ದಿವ್ಯಜ್ಯೋತಿಯ ಸಾಕ್ಷಾತ್ಕಾರವಾಗುತ್ತದೆ. ಆ ಜ್ಯೋತಿಯನ್ನು ವೀರಶೈವ ಸಿದ್ಧಾಂತದಲ್ಲಿ 'ಜಂಗಮಲಿಂಗ'ವೆಂದು ಕರೆಯಲಾಗಿದೆ. ಈ ಜಂಗಮಲಿಂಗವನ್ನು ಅನುಭವಭಕ್ತಿಯಿಂದ ನಿರಂತರವಾಗಿ ಅನುಸಂಧಾನ ಮಾಡುವುದರಿಂದ ಪ್ರಾಣಲಿಂಗಿಯು ಜಂಗಮಲಿಂಗಸ್ವರೂಪಿಯಾಗುತ್ತಾನೆ. ಜಂಗಮಲಿಂಗವು ಆದಿಶಕ್ತಿಯಿಂದ ಕೂಡಿರುವುದರಿಂದ ಈ ಲಿಂಗದ

---

[೧೬೨] ಶ್ವಃಶ್ರೇಯಸಂ ಶಿವಂ ಭದ್ರಂ ಕಲ್ಯಾಣಂ ಮಂಗಲಂ ಶುಭಮ್।
-ಅಮರಕೋಶ, ೧.೪.೨೫

ಉಪಾಸಕನ ಅನುಭವಭಕ್ತಿಯೂ ಸಹ ಆದಿಶಕ್ತಿರೂಪವಾಗಿ ಮಾರ್ಪಾಡಾಗುತ್ತದೆ. ಹೀಗೆ ಉಪಾಸನಾ ಬಲದಿಂದ ಅನುಭವಭಕ್ತಿಯಿಂದ ಕೂಡಿರುವ ಪ್ರಾಣಲಿಂಗಿಯೆಂಬ ಹೆಸರುಳ್ಳ ಸಾಧಕನು ಆದಿಶಕ್ತಿಯುಕ್ತ ಜಂಗಮಲಿಂಗಸ್ವರೂಪಿಯಾಗುತ್ತಾನೆ. ಇದೇ ಪ್ರಾಣಲಿಂಗಿ-ಜಂಗಮ ಲಿಂಗದ ಸಾಮರಸ್ಯ.

ಇದರ ಭಾವವಿಷ್ಟು- ಶಿವಜ್ಞಾನಸಂಪನ್ನನಾದ ಮಹಾಪುರುಷನು ಜಂಗಮನೆಂದು[೧೬೩] ಕರೆಯಲ್ಪಡುತ್ತಾನೆ. ಆ ಕಾರಣದಿಂದ "ಜಂಗಮ ಏವ ಲಿಂಗಂ ಜಂಗಮಲಿಂಗಮ್" ಎಂಬ ವ್ಯುತ್ಪತ್ತಿಯಂತೆ ಶಿವಜ್ಞಾನಿಗಳೆಲ್ಲರೂ ಶಿವಸ್ವರೂಪಿಗಳೆಂದು ಚಿಂತನೆ ಮಾಡುವುದೇ ಜಂಗಮಲಿಂಗದ ಅನುಸಂಧಾನ. ಜಂಗಮಲಿಂಗವು ಆದಿಶಕ್ತಿಯಿಂದ ಕೂಡಿರುವುದರಿಂದ ಈ ಸ್ಥಲದಲ್ಲಿನ ಸಾಧಕನು ಆದಿಶಕ್ತಿ ಸಂಪನ್ನನಾಗುತ್ತಾನೆ. ಪೂರ್ವೋಕ್ತಗಳಾದ ಶಿವಾಚಾರ, ಶಿವಜ್ಞಾನ, ಶಿವೇಚ್ಛೆ -ಇವುಗಳು ಸೃಷ್ಟಿಯ ಸ್ಥಾನದವುಗಳಾದ್ದರಿಂದ ಜಂಗಮಲಿಂಗದ ಶಕ್ತಿಯು ಆದಿಶಕ್ತಿಯೆನಿಸಿದೆ. ಈ ರೀತಿಯಾಗಿ ಶಿವಜ್ಞಾನಸಂಪನ್ನರಾದ ಜಂಗಮರು ಲಿಂಗಭಾವಯುಕ್ತರಾಗಿರುವುದೇ ಜಂಗಮಲಿಂಗೋಪಾಸಕನಾದ ಅರ್ಥಾತ್ ಜಂಗಮಲಿಂಗಸ್ವರೂಪಿಯಾದ ಸಾಧಕನ ಲಕ್ಷಣವೆಂದು ತಿಳಿಯಬೇಕು.

ಶರಣಸ್ಥಲದ ಶರಣನೆಂಬ ನಾಮಾಂಕಿತವುಳ್ಳ ಸಾಧಕನೂ ಸಹ ಪೂರ್ವೋಕ್ತ ಶಿವಯೋಗ ಪ್ರಕ್ರಿಯೆಯಿಂದ ಮತ್ತು ದೃಢಸಂಕಲ್ಪದಿಂದ ತನ್ನ ಮನೋವೃತ್ತಿಯನ್ನು ವಿಶುದ್ಧಿಚಕ್ರದಲ್ಲಿ ನೆಲೆಗೊಳಿಸಿ 'ಯ'ಕಾರ ಮಂತ್ರವನ್ನು ಸ್ಮರಣೆಮಾಡಿದಾಗ, ಕಂಠದಲ್ಲಿರುವ ವಿಶುದ್ಧಿಚಕ್ರದಲ್ಲಿ ಜ್ಯೋತಿಯ ಸಾಕ್ಷಾತ್ಕಾರವಾಗುತ್ತದೆ. ಆ ಜ್ಯೋತಿಯು ಪ್ರಸಾದಲಿಂಗವೆಂದು ಕರೆಯಲ್ಪಟ್ಟಿದೆ. ಈ ಪ್ರಸಾದಲಿಂಗವನ್ನು ಆನಂದಭಕ್ತಿಯಿಂದ ನಿರಂತರವಾಗಿ ಅನುಸಂಧಾನ ಮಾಡುವುದರಿಂದ ಶರಣನು ಪ್ರಸಾದಲಿಂಗಸ್ವರೂಪಿಯಾಗುತ್ತಾನೆ. ಪ್ರಸಾದಲಿಂಗವು ಪರಾಶಕ್ತಿಯುಕ್ತವಾಗಿರುವುದರಿಂದ ಇದರ ಉಪಾಸಕನ ಆನಂದಭಕ್ತಿಯೂ ಸಹ ಪರಾಶಕ್ತಿರೂಪವಾಗಿ ಪರಿಣಾಮಹೊಂದುತ್ತದೆ. ಈ ಪ್ರಕಾರವಾಗಿ ಉಪಾಸನಾ ಸಾಮರ್ಥ್ಯದಿಂದ ಆನಂದಭಕ್ತಿಯುಕ್ತನಾದ ಶರಣನೆಂಬ ಸಾಧಕನು ಪರಾಶಕ್ತಿಯುಕ್ತ ಪ್ರಸಾದಲಿಂಗಸ್ವರೂಪಿಯಾಗುತ್ತಾನೆ. ಇದೇ ಶರಣ-ಪ್ರಸಾದ ಲಿಂಗಗಳ ಸಾಮರಸ್ಯ.

ಇದರ ರಹಸ್ಯವಿದು- 'ಪ್ರಸಾದ' ಎಂದರೆ ಮನಸ್ಸಿನ ಶುದ್ಧಿ ಅಥವಾ ಪ್ರಸನ್ನತೆ.[೧೬೪] ಆದುದರಿಂದ "ಪ್ರಸಾದ ಏವ ಲಿಂಗಂ ಪ್ರಸಾದಲಿಂಗಮ್" ಎಂಬ ವ್ಯುತ್ಪತ್ತಿಯ ಮೇರೆಗೆ ಸದಾ ಪ್ರಸನ್ನ ಮನಸ್ಸಿನಿಂದ ಕೂಡಿರುವುದೇ ಪ್ರಸಾದಲಿಂಗದ ಅನುಸಂಧಾನ. ಪ್ರಸಾದ ಲಿಂಗವು ಪರಾಶಕ್ತಿಯುಕ್ತವಾಗಿರುವುದರಿಂದ ಸಾಧಕನೂ ಸಹ ಪರಾಶಕ್ತಿಸಂಪನ್ನನಾಗುತ್ತಾನೆ. ಈ ರೀತಿಯಾಗಿ ಸುಖ-ದುಃಖಾದಿ ದ್ವಂದ್ವಗಳಲ್ಲಿ ಸದಾ ಸಂತುಷ್ಟಚಿತ್ತದಿಂದ

---

[೧೬೩] ಜ್ಞಾನಂತ್ಯತಿಶಯಾದ್ಯೇ ತು ಶಿವಂ ವಿಶ್ವಪ್ರಕಾಶಕಮ್।
ಸ್ವಸ್ವರೂಪತಯಾ ತೇ ತು ಜಂಗಮಾ ಇತಿ ಕೀರ್ತಿತಾಃ॥ -ಸಿ.ಶಿ, ೧೧.೩೬

[೧೬೪] ನೈರ್ಮಲ್ಯಂ ಮನಸೋ ಲಿಂಗಂ ಪ್ರಸಾದ ಇತಿ ಕಥ್ಯತೇ॥ -ಸಿ.ಶಿ, ೧೧.೬

ಕೂಡಿರುವುದೇ ಪ್ರಸಾದಲಿಂಗೋಪಾಸಕನ ಅರ್ಥಾತ್ ಪ್ರಸಾದಲಿಂಗಸ್ವರೂಪಿಯಾದ ಸಾಧಕನ ಲಕ್ಷಣವು.

ಐಕ್ಯಸ್ಥಲದ 'ಐಕ್ಯ'ನೆಂಬ ಸಾಧಕನೂ ಸಹ ಪೂರ್ವೋಕ್ತ ಶಿವಯೋಗ ಪ್ರಕ್ರಿಯೆಯಿಂದ ಮತ್ತು ದೃಢಸಂಕಲ್ಪದಿಂದ ತನ್ನ ಮನೋವೃತ್ತಿಯನ್ನು ಆಜ್ಞಾಚಕ್ರದಲ್ಲಿ ಉನ್ಮನೀ ಮುದ್ರೆಯಿಂದ ಸ್ಥಿರೀಕರಿಸಿ 'ಓಂ'ಕಾರ ಮಂತ್ರಸ್ಮರಣೆಯನ್ನು ಮಾಡುತ್ತಿರುವಾಗ, ಭ್ರೂಮಧ್ಯದಲ್ಲಿರುವ ಆಜ್ಞಾಚಕ್ರದಲ್ಲಿ ಸ್ಫಟಿಕದಂತಹ ಶುಭ್ರಜ್ಯೋತಿಯ ಸಾಕ್ಷಾತ್ಕಾರವಾಗುತ್ತದೆ. ಆ ಜ್ಯೋತಿಯನ್ನು ವೀರಶೈವ ಸಿದ್ಧಾಂತದಲ್ಲಿ ಮಹಾಲಿಂಗವೆಂದು ಕರೆಯಲಾಗಿದೆ. ಈ ಲಿಂಗವನ್ನು ಸಮರಸಭಕ್ತಿಯಿಂದ ನಿರಂತರವಾಗಿ ಅನುಸಂಧಾನ ಮಾಡುವುದರಿಂದ ಐಕ್ಯನು ಮಹಾಲಿಂಗಸ್ವರೂಪಿಯಾಗುತ್ತಾನೆ. ಮಹಾಲಿಂಗವು ಚಿಚ್ಛಕ್ತಿಯಿಂದ ಕೂಡಿರುವುದರಿಂದ ಉಪಾಸಕನ ಸಮರಸಭಕ್ತಿಯೂ ಸಹ ಚಿಚ್ಛಕ್ತಿರೂಪವಾಗಿ ಪರಿಣಮಿಸುತ್ತದೆ. ಹೀಗೆ ಉಪಾಸನಾ ಸಾಮರ್ಥ್ಯದಿಂದ ಸಮರಸಭಕ್ತಿಯುಕ್ತನಾದ ಐಕ್ಯನೆಂಬ ಸಾಧಕನು ಚಿಚ್ಛಕ್ತಿಯುಕ್ತಮಹಾಲಿಂಗಸ್ವರೂಪಿಯಾಗುತ್ತಾನೆ. ಇದೇ ಐಕ್ಯ-ಮಹಾಲಿಂಗಗಳ ಸಾಮರಸ್ಯ.

ಇದರ ತಾತ್ಪರ್ಯವಿಷ್ಟು- "ಮಹಚ್ಚ ತಲ್ಲಿಂಗಮ್ ಮಹಾಲಿಂಗಮ್" ಎಂಬ ನಿರ್ವಚನದಂತೆ ಚರಾಚರದ ಅಧಿಷ್ಠಾನಭೂತ ಪರಮತತ್ತ್ವವೇ ಮಹಾಲಿಂಗವೆಂದು ಹೇಳಲಾಗಿದೆ. ಆದುದರಿಂದ "ಸರ್ವಂ ಲಿಂಗಮಯಂ ಜಗತ್" ಎಂಬ ಭಾವನೆಯಿಂದ ಎಲ್ಲವನ್ನೂ ಲಿಂಗವೆಂದು ಕಾಣುವುದೇ ಮಹಾಲಿಂಗಾನುಸಂಧಾನ. ಮಹಾಲಿಂಗವು ಚಿಚ್ಛಕ್ತಿಯಿಂದ ಕೂಡಿರುವುದರಿಂದ ಸಾಧಕನೂ ಸಹ ಚಿಚ್ಛಕ್ತಿಸಂಪನ್ನನಾಗುತ್ತಾನೆ. ಈ ರೀತಿಯಾಗಿ ಎಲ್ಲೆಡೆಯೂ ಶಿವಲಿಂಗದ ದೃಷ್ಟಿಯ ಪ್ರಾಪ್ತಿಯೇ ಮಹಾಲಿಂಗೋಪಾಸಕನ ಹಾಗೂ ಮಹಾಲಿಂಗದಲ್ಲಿ ಸಾಮರಸ್ಯದಿಂದ ಕೂಡಿರುವ ಸಾಧಕನ ಲಕ್ಷಣವೆಂದು ತಿಳಿಯಬೇಕು.

ಈ ಸ್ಥಲದಲ್ಲಿ ಅನುಗ್ರಾಹಕದ ಕಾರಣ ಲಿಂಗಸ್ಥಲವು ಉಪಾಸ್ಯ (ಪೂಜಿಸಲ್ಪಡುವಂತಹದ್ದು), ಅನುಗ್ರಾಹ್ಯದ ಕಾರಣ ಅಂಗಸ್ಥಲವು ಉಪಾಸಕ (ಪೂಜಿಸುವಂತಹದ್ದು) ವಾಗುತ್ತದೆ. ಉಪಾಸನೆಯಿಂದ ದ್ವೈತಭಾವದ ನಿವೃತ್ತಿಯಾಗುವ ಕಾರಣ ಉಪಾಸ್ಯ-ಉಪಾಸಕಭಾವನೆ ಹೊಂದಿರುವ ಲಿಂಗ-ಅಂಗಗಳಿಗೆ ಭ್ರಮರಕೀಟನ್ಯಾಯದಂತೆ ಅಭೇದ ಉಂಟಾಗುತ್ತದೆ. ಲಿಂಗಮಹಾಪುರಾಣದಲ್ಲಿ-

ಕೀಟೋ ಭ್ರಮರಯೋಗೇನ ಭ್ರಮರೋ ಭವತಿ ಧ್ರುವಮ್।
ಮಾನವಃ ಶಿವಯೋಗೇನ ಶಿವೋ ಭವತಿ ನಿಶ್ಚಯಮ್॥[೧೬೫]

"ಕೀಟವು ಭ್ರಮರದ ಸಹವಾಸದಿಂದ ಭ್ರಮರವೇ ಆಗುತ್ತದೆ. ಹಾಗೆಯೇ ಶಿವಯೋಗದಿಂದಲೇ ಮಾನವನು ಶಿವನಾಗುತ್ತಾನೆ" ಎಂದು ಶಿವಯೋಗದಿಂದಲೇ

---

[೧೬೫] ಲಿಂಗಪುರಾಣ, ಉತ್ತರಭಾಗ, ೨೧.೯೫

ಮಾನವನು ಶಿವನಾಗುತ್ತಾನೆ ಎಂದು ಭ್ರಮರ-ಕೀಟ ದೃಷ್ಟಾಂತದಿಂದ ಉದಾಹರಿಸಿದ ಮಹರ್ಷಿ ವ್ಯಾಸರು ಆಚಾರಾದಿ ಲಿಂಗಗಳ ಭಕ್ತನೇ ಮೊದಲಾದ ಅಂಗಗಳಿಂದ (ಜೀವರಿಂದ) ಉಪಾಸಿಸಲ್ಪಡುತ್ತವೆಂದೂ ಕೂಡ ನಿರೂಪಿಸಿದ್ದಾರೆ. ಉದಾಹರಣೆಗೆ-

ಆಚಾರಲಿಂಗಂ ಪ್ರಥಮಂ ಗುರುಲಿಂಗಂ ದ್ವಿತೀಯಕಮ್।
ಶಿವಲಿಂಗಂ ತೃತೀಯಂ ಸ್ಯಾಚ್ಚರಲಿಂಗಂ ಚತುರ್ಥಕಮ್॥
ಪ್ರಸಾದಂ ಪಂಚಮಂ ಲಿಂಗಂ ಮಹಾಲಿಂಗಂ ತು ಷಷ್ಠಕಮ್।
ಭಕ್ತೋ ಮಾಹೇಶ್ವರಶ್ಚೈವ ಪ್ರಸಾದಿಪ್ರಾಣಲಿಂಗಕಃ॥
ಶರಣೈಕ್ಯಸ್ಥಲೈಃ ಷಡ್ಭಿಃ ಕ್ರಮಾಲಿಂಗಮುದಾಹೃತಮ್॥[೧೬೬]

"ಮೊದಲನೆಯದು ಆಚಾರಲಿಂಗ, ಎರಡನೆಯದು ಗುರುಲಿಂಗ, ಶಿವಲಿಂಗ ಮೂರನೆಯದು, ಜಂಗಮಲಿಂಗ ನಾಲ್ಕನೆಯದು, ಪ್ರಸಾದಲಿಂಗ ಐದನೆಯದು ಮತ್ತು ಮಹಾಲಿಂಗ ಆರನೆಯದು. ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಎಂಬ ಕ್ರಿಯಾಲಿಂಗದ ಆರು ಸ್ಥಲಗಳನ್ನು ಹೇಳಲಾಗಿದೆ."

ಈ ಪ್ರಕಾರ ಶಿವಯೋಗ ಮಹಿಮೆಯಿಂದ ಭಕ್ತನು ಆಚಾರಲಿಂಗದಲ್ಲಿ, ಮಾಹೇಶ್ವರನು ಗುರುಲಿಂಗದಲ್ಲಿ, ಪ್ರಸಾದಿಯು ಶಿವಲಿಂಗದಲ್ಲಿ, ಪ್ರಾಣಲಿಂಗಿಯು ಜಂಗಮಲಿಂಗದಲ್ಲಿ, ಶರಣನು ಪ್ರಸಾದಲಿಂಗದಲ್ಲಿ ಮತ್ತು ಐಕ್ಯಸ್ಥಲದ ಸಾಧಕನು ಮಹಾಲಿಂಗದಲ್ಲಿ ಸಮರಸಹೊಂದುತ್ತಾರೆ. ಹೇಗೆ ಅಂಗಸ್ಥಲಗಳು ಲಿಂಗಸ್ಥಲಗಳಲ್ಲಿ ಸಮರಸಹೊಂದುತ್ತವೆಯೋ ಹಾಗೆಯೇ ಅಂಗಸ್ಥಲಾಶ್ರಿತವಾದ ಭಕ್ತಿಯು ಲಿಂಗಸ್ಥಲಾಶ್ರಿತಗಳಾದ ಶಕ್ತಿಗಳೊಂದಿಗೆ ಸಾಮರಸ್ಯಹೊಂದುತ್ತವೆ. ಹೇಗೆಂದರೆ- ಶ್ರದ್ಧಾಭಕ್ತಿಯು ಕ್ರಿಯಾಶಕ್ತಿಯಲ್ಲಿ, ನಿಷ್ಠಾಭಕ್ತಿಯು ಜ್ಞಾನಶಕ್ತಿಯಲ್ಲಿ, ಅವಧಾನಭಕ್ತಿಯು ಇಚ್ಛಾಶಕ್ತಿಯಲ್ಲಿ, ಅನುಭವಭಕ್ತಿಯು ಆದಿಶಕ್ತಿಯಲ್ಲಿ, ಆನಂದಭಕ್ತಿಯು ಪರಾಶಕ್ತಿಯಲ್ಲಿ ಮತ್ತು ಸಮರಸಭಕ್ತಿಯು ಚಿಚ್ಛಕ್ತಿಯಲ್ಲಿ ಸಮರಸಹೊಂದುತ್ತವೆ. ಇದೇ ಲಿಂಗಾಂಗಸಂಯೋಗವಿಧಿ.

ಈ ರೀತಿಯಾಗಿ ಅಂಗನು ಲಿಂಗಸ್ವರೂಪವನ್ನು ಪಡೆಯುವುದೇ ವೀರಶೈವರ ಜೀವನ್ಮುಕ್ತಿ. ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಜೀವನ್ಮುಕ್ತಿ ಪರವಾದ ಆಚಾರಾದಿ ಷಡ್‌ಲಿಂಗಸ್ಥಲಗಳ ಹಾಗೂ ಗುರುಸ್ಥಲವೇ ಮೊದಲ್ಗೊಂಡು ಜ್ಞಾನಶೂನ್ಯಸ್ಥಲಾಂತಗಳಾದ ಐವತ್ತೇಳು ಅವಾಂತರಸ್ಥಲಗಳ ವಿಸ್ತೃತವಾದ ವಿವೇಚನೆಯು ಬಂದಿದೆ. ಜಿಜ್ಞಾಸುಗಳು ಶ್ರೀ ಸಿದ್ಧಾಂತ ಶಿಖಾಮಣಿಯ ೧೫ನೆಯ ಪರಿಚ್ಛೇದದಿಂದ ೨೦ನೇ ಪರಿಚ್ಛೇದದ ಭಾಗಗಳನ್ನು ಅವಲೋಕಿಸಬಹುದು. ಗ್ರಂಥಗೌರವಭಯದಿಂದ ಅದನ್ನು ಇಲ್ಲಿ ವಿಸ್ತರಿಸಲಾಗಿಲ್ಲ.

ಹೀಗೆ ಅಂಗಸ್ಥಲದೊಡನೆ ಸಮರಸಭಾವವನ್ನು ಹೊಂದುವ ಆಚಾರಾದಿ ಷಡ್‌ಲಿಂಗಸ್ಥಲಗಳೂ ಸಹ ಮತ್ತೊಮ್ಮೆ ಹಿಂದು ಹಿಂದಿನ ಸ್ಥಲಗಳು ಉತ್ತರೋತ್ತರ

---

[೧೬೬] ಲಿಂ.ಪು.ಉ.ಭಾ, ೨೧.೧೨೨-೧೨೪

(ಮುಂದು ಮುಂದಿನ) ಸ್ಥಲಗಳೊಂದಿಗೆ ಸಾಮರಸ್ಯವನ್ನು ಪಡೆಯುತ್ತವೆ. ಅದು ಹೇಗೆಂದರೆ- ಆಚಾರಲಿಂಗವು ಗುರುಲಿಂಗದಲ್ಲಿ, ಗುರುಲಿಂಗವು ಶಿವಲಿಂಗದಲ್ಲಿ, ಶಿವಲಿಂಗವು ಜಂಗಮಲಿಂಗದಲ್ಲಿ, ಜಂಗಮಲಿಂಗವು ಪ್ರಸಾದಲಿಂಗದಲ್ಲಿ, ಪ್ರಸಾದ ಲಿಂಗವು ಮಹಾಲಿಂಗದಲ್ಲಿ ಮತ್ತು ಮಹಾಲಿಂಗವು ಎಲ್ಲಕ್ಕೂ ಆಧಾರಭೂತವಾದ ಸ್ಥಲವೆಂಬ ಹೆಸರುಳ್ಳ ಘನಲಿಂಗದಲ್ಲಿ ಸಾಮರಸ್ಯ ಹೊಂದುತ್ತವೆ.[೧೬೭]

ಈ ಪ್ರಕಾರವಾಗಿ ಅಂಗನೆಂದು ಕರೆಯಲ್ಪಡುವ ಜೀವನು ಲಿಂಗವೆಂದು ಕರೆಯಲ್ಪಡುವ ಶಿವನೊಂದಿಗೆ ಷಟ್‌ಸ್ಥಲೋಪಾಸನೆಯ ಮಾರ್ಗದಿಂದ ಅಭೇದವನ್ನು ಕಲ್ಪಿಸಿ ಐಕ್ಯಸ್ಥಲದಲ್ಲಿ ಮಹಾಲಿಂಗದೊಂದಿಗೆ-

ಜಲೇ ಜಲಮಿವ ನ್ಯಸ್ತಂ ವಹ್ನೌ ವಹ್ನಿರಿವಾರ್ಪಿತಮ್।
ಪರೇ ಬ್ರಹ್ಮಣಿ ಲೀನಾತ್ಮಾ ವಿಭಾಗೇನ ನ ದೃಶ್ಯತೇ॥[೧೬೮]

"ನೀರಿನಲ್ಲಿ ನೀರನ್ನು ಬೆರೆಸಿದಂತೆಯೂ, ಬೆಂಕಿಯಲ್ಲಿ ಬೆಂಕಿಯನ್ನು ಬೆರಿಸಿದಂತೆಯೂ ಪರಬ್ರಹ್ಮಸ್ವರೂಪ ಮಹಾಲಿಂಗದಲ್ಲಿ ಆತ್ಮನನ್ನು ಲಯಗೊಳಿಸಿದ ಜೀವಾತ್ಮನು (ಜೀವಭಾವದಿಂದ ದೂರನಾಗಿ ಪರಬ್ರಹ್ಮದಲ್ಲಿ ಸಮರಸಭಾವವನ್ನು ಹೊಂದಿದ ಮೇಲೆ), ಪರಬ್ರಹ್ಮಸ್ವರೂಪಕ್ಕಿಂತ ಭಿನ್ನವಾಗಿ ತೋರುವುದಿಲ್ಲ" ಎಂಬ ಶ್ರೀ ರೇಣುಕಾಚಾರ್ಯರ ಉಕ್ತಿಯಂತೆ ಅದ್ವೈತರೂಪದಿಂದ ಸಮರಸಹೊಂದುತ್ತಾನೆ. ಇದೇ ವೀರಶೈವರ ಲಿಂಗಾಂಗಸಾಮರಸ್ಯವೆಂಬ ಶಿವ-ಜೀವರ ಐಕ್ಯವೆಂದು ತಿಳಿಯಬೇಕು. ಈ ರೀತಿಯಾಗಿ ವೀರಶೈವದರ್ಶನದಲ್ಲಿ ಕ್ರಿಯಾದಿ ಶಕ್ತಿಗಳ ಸಂಕೋಚದಿಂದ ಜೀವತ್ವ ಪ್ರಾಪ್ತಿ, ಮತ್ತೆ ಉಪಾಸನಾಬಲದಿಂದ ಅದೇ ಶಕ್ತಿಗಳ ವಿಕಾಸವಾದರೆ ಶಿವತ್ವಪ್ರಾಪ್ತವಾಗುತ್ತದೆಂದು ಶಕ್ತಿಗಳ ಸಂಕೋಚ - ವಿಕಾಸಭಾವದಿಂದ ಬಂಧ - ಮೋಕ್ಷಗಳು ಸಿದ್ಧವಾಗುತ್ತವೆ.[೧೬೮(ಎ)]

ಹೀಗೆ ಲಿಂಗಾಂಗಸಾಮರಸ್ಯವೆಂಬ ಜೀವನ್ಮುಕ್ತಿಯನ್ನು ಪಡೆದ ಮಹಾಪುರುಷನು ತನ್ನ ಅಂತರಂಗದಲ್ಲಿರುವ ಆರು ಬಗೆಯ ಚಕ್ರಗಳಲ್ಲಿ ಸಾಕ್ಷಾತ್ಕರಿಸಿಕೊಂಡಿರುವ ಆಚಾರಾದಿ ಷಡ್‌ಲಿಂಗಗಳನ್ನು ಆರು ಇಂದ್ರಿಯಗಳಲ್ಲಿ ಸ್ಥಾಪನೆಯಾಗಿವೆಯೆಂದು ಭಾವಿಸಿಕೊಂಡು ಆಯಾ ಇಂದ್ರಿಯಗೋಚರ ವಿಷಯಗಳನ್ನು ಆಯಾ ಲಿಂಗಗಳಿಗೆ ಅರ್ಪಿಸಿ, ಅವುಗಳ ಪ್ರಸಾದವನ್ನು ಸ್ವೀಕರಿಸುತ್ತಾ ಸಂಸಾರಿಯಾಗಿದ್ದರೂ ಕಮಲದ ಎಲೆಯಂತೆ ನಿರ್ಲಿಪ್ತನಾಗಿದ್ದುಕೊಂಡು ಸದಾ ಸುಖಿಯಾಗಿರುತ್ತಾನೆ.

ಇದರ ಭಾವವಿಷ್ಟು- ಭಕ್ತನು ತಾನು ಪೂಜಿಸುವ ಆಚಾರಲಿಂಗವನ್ನು ಘ್ರಾಣೇಂದ್ರಿಯದಲ್ಲಿದೆಯೆಂದು ಭಾವಿಸಿಕೊಂಡು, ಗಂಧ ವಿಷಯವನ್ನು ಆ ಲಿಂಗಕ್ಕೆ

---

[೧೬೭] ಶಿ.ಪ, ಪು. ೫೧-೫೨

[೧೬೮] ಸಿ.ಶಿ, ೨೦.೬೧

[೧೬೮(ಎ)] ಶಕ್ತಿವಿಕಾಸರೂಪಶಿವತ್ವಪ್ರಾಪ್ತಿರ್ಮೋಕ್ಷಃ। -ಈ.ಉ, ಶಾಂಕರೀವ್ಯಾಖ್ಯಾ, ಪು.೨೪

ಅರ್ಪಣೆಮಾಡಿಕೊಂಡು ಅದರ ಪ್ರಸಾದಸ್ವೀಕಾರದಿಂದ ಸಂತೋಷಪಡುತ್ತಾನೆ. ಮಾಹೇಶ್ವರನು ತಾನು ಪೂಜಿಸುವ ಗುರುಲಿಂಗವನ್ನು ಜಿಹ್ವೇಂದ್ರಿಯದಲ್ಲಿದೆಯೆಂದು ಭಾವನೆ ಮಾಡಿಕೊಂಡು, ರಸ ವಿಷಯವನ್ನು ಆ ಲಿಂಗಕ್ಕರ್ಪಿಸಿ, ಅದರ ಪ್ರಸಾದೋಪ ಭೋಗದಿಂದ ಸಂತೋಷಿಸುತ್ತಾನೆ. ಪ್ರಸಾದಿಯು ತನ್ನ ಉಪಾಸ್ಯವಾದ ಶಿವಲಿಂಗವನ್ನು ಕಣ್ಣುಗಳಲ್ಲಿದೆಯೆಂದು ಭಾವಿಸಿ, ರೂಪ ವಿಷಯವನ್ನು ಆ ಲಿಂಗಕ್ಕೆ ಅರ್ಪಣೆಮಾಡಿ, ಅದರ ಪ್ರಸಾದಸ್ವೀಕಾರದಿಂದ ಸಂತೋಷಪಡುತ್ತಾನೆ. ಪ್ರಾಣಲಿಂಗಿಯು ತಾನು ಪೂಜಿಸುವ ಜಂಗಮಲಿಂಗವನ್ನು ತ್ವಗಿಂದ್ರಿಯ(ಚರ್ಮ)ದಲ್ಲಿದೆಯೆಂದು ಭಾವಿಸಿ, ಸ್ಪರ್ಶ ವಿಷಯವನ್ನು ಆ ಲಿಂಗಕ್ಕರ್ಪಿಸಿ ಅದರ ಪ್ರಸಾದಸ್ವೀಕಾರದಿಂದ ಸಂತೋಷಪಡುತ್ತಾನೆ. ಶರಣನು ತಾನು ಪೂಜಿಸುವ ಪ್ರಸಾದಲಿಂಗವನ್ನು ಕಿವಿಗಳಲ್ಲಿದೆಯೆಂದು ಭಾವಿಸಿ, ಶಬ್ದ ವಿಷಯವನ್ನು ಆ ಲಿಂಗಕ್ಕೆ ಅರ್ಪಿಸಿ, ಆ ಪ್ರಸಾದದ ಸೇವನೆಯಿಂದ ಸಂತೋಷಿಸುತ್ತಾನೆ. ಐಕ್ಯನು ತಾನು ಪೂಜಿಸುವ ಮಹಾಲಿಂಗವನ್ನು ಮನಸ್ಸಿನಲ್ಲಿದೆಯೆಂದು ಭಾವಿಸಿಕೊಂಡು, ಎಲ್ಲ ಇಂದ್ರಿಯಗಳ ವಿಷಯಗಳನ್ನು ಆ ಲಿಂಗಕ್ಕೆ ನೈವೇದ್ಯ ಮಾಡಿ, ಆ ಪ್ರಸಾದಸ್ವೀಕಾರದಿಂದ ಸಂತೋಷಿಸುತ್ತಾನೆ. ಈ ಪ್ರಕಾರವಾಗಿಯೇ ಆಚಾರಲಿಂಗದಿಂದ ಮೊದಲ್ಗೊಂಡು ಪ್ರಸಾದಲಿಂಗದವರೆಗಿನ ಐದು ಲಿಂಗಗಳನ್ನು ಕ್ರಮವಾಗಿ ಪಾಯು, ಉಪಸ್ಥ, ಪಾದ, ಪಾಣಿ, ವಾಕ್ ಎಂಬ ಪಂಚಕರ್ಮೇಂದ್ರಿಯಗಳಲ್ಲಿಯೂ ಇವೆಯೆಂದು ತಿಳಿಯಬೇಕು.[೧೬೯] ಈ ರೀತಿಯಾಗಿ ವೀರಶೈವ ಜೀವನ್ಮುಕ್ತನು ಸರ್ವಾಂಗಲಿಂಗೀ ಹಾಗೂ ಲಿಂಗೋಪಭೋಗಿಯಾಗಿರುವುದರಿಂದ ಅವನ ನಿರ್ಲಿಪ್ತತೆಯು ತಿಳಿಯುತ್ತದೆ.

---

[೧೬೯] ಆಚಾರಲಿಂಗಂ ಘ್ರಾಣಾಖ್ಯಂ ಭಕ್ತಸ್ಥಲಸಮಾಶ್ರಯಮ್।
ನಿವೃತ್ತಿಕಲಯೋಪೇತಂ ಗಂಧಗ್ರಹಣಸಾಧನಮ್॥
ಗುರುಲಿಂಗಂ ತು ಜಿಹ್ವಾಖ್ಯಂ ಮಾಹೇಶಸ್ಥಲಸಂಶ್ರಯಮ್।
ಪ್ರತಿಷ್ಠಾಕಲಯೋಪೇತಂ ರಸಗ್ರಹಣಸಾಧನಮ್॥
ಶಿವಲಿಂಗಂ ತು ನೇತ್ರಾಖ್ಯಂ ಪ್ರಸಾದಿಸ್ಥಲಸಂಶ್ರಿತಮ್।
ವಿದ್ಯಯಾ ಕಲಯೋಪೇತಂ ರೂಪಗ್ರಹಣಸಾಧನಮ್॥
ತ್ವಗಾಖ್ಯಂ ಚರಲಿಂಗಂ ತು ಪ್ರಾಣಲಿಂಗಿಸ್ಥಲಾಶ್ರಯಮ್।
ಶಾಂತ್ಯಾಖ್ಯಕಲಯೋಪೇತಂ ಸ್ಪರ್ಶಗ್ರಹಣಸಾಧನಮ್॥
ಪ್ರಸಾದಲಿಂಗಂ ಶ್ರೋತ್ರಾಖ್ಯಂ ಶರಣಸ್ಥಲಸಂಶ್ರಯಮ್।
ಶಾಂತ್ಯತೀತಕಲೋಪೇತಂ ಶಬ್ದಗ್ರಹಣಸಾಧನಮ್॥
ಮಾನಸಂ ತು ಮಹಾಲಿಂಗಮೈಕ್ಯಸ್ಥಲಸಮಾಶ್ರಯಮ್।
ಶಾಂತ್ಯತೀತೋತ್ತರೋಪೇತಂ ಸರ್ವಗ್ರಹಣಸಾಧನಮ್॥
ಏವಂ ಕರ್ಮೇಂದ್ರಿಯಾಂಗೇಷು ಕ್ರಮಾಲ್ಲಿಂಗಸ್ಯ ಯೋಜನಮ್॥
-ಶಿವಾದ್ವೈತದರ್ಪಣ, ಪು. ೪೬;
ಕ್ರಿಯಾಸಾರ, ಭಾಗ-೩, ಪು. ೧೧೩

ಜೀವನ್ಮುಕ್ತನಾದ ಈತನಲ್ಲಿ ಲೌಕಿಕ ನಡತೆಯು ಕಂಡುಬರುವುದರಿಂದ ಅವನಿಗೂ ಲೌಕಿಕ ವ್ಯವಹಾರದಿಂದುಂಟಾಗುವ ದೋಷಿಯಾಗುತ್ತಾನಲ್ಲವೇ? ಎಂಬ ಆಕ್ಷೇಪಕ್ಕೆ ಹೀಗೆ ಉತ್ತರಿಸಲಾಗಿದೆ- ಇಲ್ಲ, ಹೇಗೆಂದರೆ ಪೂರ್ವೋಕ್ತ ಪ್ರಕಾರದಂತೆ ಶಿವಾರ್ಪಿತವಾದ ಕಾಯ-ಕರಣ-ಭಾವಗಳಿಂದ ವ್ಯವಹಾರ ಮಾಡುವುದರಿಂದ[೧೭೦] ಜೀವನ್ಮುಕ್ತನು ತ್ರಿಕರಣಗಳಿಂದುಂಟಾಗುವ ದೋಷಗಳಿಂದ ಮುಕ್ತನಾಗಿರುತ್ತಾನೆ. ಅದನ್ನೇ ಶ್ರೀ ರೇಣುಕಾಚಾರ್ಯರು-

ದರ್ಶನಾತ್ ಸ್ಪರ್ಶನಾದ್ ಭುಕ್ತೇಃ ಶ್ರವಣಾದ್ ಘ್ರಾಣನಾದಪಿ।
ವಿಷಯೇಭ್ಯೋ ಯದುತ್ಪನ್ನಂ ಶಿವೇ ತತ್ಸುಖಮರ್ಪಯೇತ್॥
ಇಂದ್ರಿಯೈರೇವ ಜಾಯಂತೇ ಪಾಪಾನಿ ಸುಕೃತಾನಿ ಚ।
ತೇಷಾಂ ಸಮರ್ಪಣಾದೀಶೇ ಕುತಃ ಕರ್ಮನಿಬಂಧನಮ್॥
ಇಂದ್ರಿಯಾಣಿ ಸಮಸ್ತಾನಿ ಶರೀರಂ ಭೋಗಸಾಧನಮ್।
ಶಿವಪೂಜಾಂಗಭಾವೇನ ಭಾವಯನ್ ಮುಕ್ತಿಮಾಪ್ನುಯಾತ್॥[೧೭೧]

"ವಿಷಯಗಳ ದೆಶೆಯಿಂದ ಅವುಗಳ ದರ್ಶನದಿಂದಲೂ, ಸ್ಪರ್ಶನದಿಂದಲೂ, ಚರ್ವಣ ದಿಂದಲೂ, ಶ್ರವಣದಿಂದಲೂ, ಆಘ್ರಾಣದಿಂದಲೂ ಯಾವ ಸುಖವು ಉತ್ಪನ್ನವಾಗುವುದೋ ಆ ಸುಖವನ್ನು ಶಿವನಲ್ಲಿ ಸಮರ್ಪಿಸಬೇಕು. ಪಾಪ-ಪುಣ್ಯಗಳು ಇಂದ್ರಿಯಗಳಿಂದಲೇ ಉತ್ಪನ್ನವಾಗುತ್ತವೆ. ಅವುಗಳನ್ನು ಶಿವನಿಗೆ ಅರ್ಪಿಸುವುದರಿಂದ ಕರ್ಮಬಂಧನವೆಲ್ಲಿಯದು? (ಶಿವಯೋಗಿಯು) ಸಮಸ್ತ ಇಂದ್ರಿಯಗಳನ್ನೂ, ಭೋಗ ಸಾಧನವಾದ ಶರೀರವನ್ನೂ ಶಿವಪೂಜಾಂಗಭಾವದಿಂದ ತಿಳಿಯುವುದರಿಂದ ಮೋಕ್ಷವನ್ನು ಪಡೆಯುತ್ತಾನೆ."

ಹೀಗೆ ಸರ್ವೇಂದ್ರಿಯಗಳಿಂದ ಶಿವಪ್ರಸಾದದ ಉಪಭೋಗಿಯಾದವನಿಗೆ ಸಾಂಸಾರಿಕ ದೋಷವುಂಟಾಗುವುದಿಲ್ಲ. ಆದುದರಿಂದ ಜೀವನ್ಮುಕ್ತನು ಎಲ್ಲ ವ್ಯವಹಾರಗಳನ್ನು ನಿರ್ವಹಿಸುತ್ತಿದ್ದರೂ ಸಹ ಅವನಿಗೆ ಯಾವುದೇ ಬಗೆಯ ಸಾಂಸಾರಿಕ ದೊಷವುಂಟಾಗುವುದಿಲ್ಲ.

---

[೧೭೦] ಶಿವಸ್ಯ ಪರರೂಪಸ್ಯ ಸರ್ವಾಽಗ್ರಾಹಿಣೋರ್ಚನೇ।
ತ್ಯಾಗೋ ದೇಹಾಭಿಮಾನಸ್ಯ ಕಾಯಾರ್ಪಿತಮುದಾಹೃತಮ್॥
ಯದ್ಯತ್‌ಕಾರಣಮಾಲಂಬ್ಯ ಭುಂಕ್ತೇ ವಿಷಯಜಂ ಸುಖಮ್।
ತತ್ತಚ್ಛಿವೇ ಸಮರ್ಪ್ಯೈಷ ಕರಣಾರ್ಪಕ ಉಚ್ಯತೇ॥
ಶಿವೇ ನಿಶ್ಚಲಭಾವೇನ ಭಾವಾನಾಂ ಯತ್ಸಮರ್ಪಣಮ್।
ಭಾವಾರ್ಪಿತಮಿದಂ ಪ್ರೋಕ್ತಂ ಶಿವಸದ್ಭಾವವೇದಿಭಿಃ॥
ಭಾವ ಏವ ಹಿ ಜಂತೂನಾಂ ಕಾರಣಂ ಬಂಧಮೋಕ್ಷಯೋಃ।
ಭಾವಶುದ್ಧೌ ಭವೇನ್ಮುಕ್ತಿರ್ವಿಪರೀತೇ ತು ಸಂಸೃತಿಃ॥
-ಸಿ.ಶಿ, ೧೭.೩೦,೩೬,೪೬,೪೮

[೧೭೧] ಸಿ.ಶಿ, ೧೭.೩೩,೪೧,೪೫

ಈ ಪ್ರಕಾರವಾಗಿ ಶಿವಭಾವಸಂಪನ್ನನಾದ ಜ್ಞಾನಿಗೆ ಆಗಾಮಿಕರ್ಮಗಳು ಸಂಭವಿಸದಿದ್ದರೂ ಸಂಚಿತವಾದ ಕರ್ಮಗಳ ಅವಸ್ಥೆ ಏನು? ಎಂಬ ಜಿಜ್ಞಾಸೆಗೆ ಹೀಗೆ ಉತ್ತರಿಸಲಾಗಿದೆ.

ಜ್ಞಾನಿನೋ ಯಾನಿ ಕರ್ಮಾಣಿ ತಾನಿ ನೋ ಜನ್ಮಹೇತವಃ।
ಅಗ್ನಿದಗ್ಧಾನಿ ಬೀಜಾನಿ ಯಥಾ ನಾಂಕುರಕಾರಣಮ್॥[೧೭೨]

"ಬೆಂಕಿಯಿಂದ ಸುಡಲ್ಪಟ್ಟ ಬೀಜಗಳು ಅಂಕುರಕ್ಕೆ ಹೇಗೆ ಕಾರಣವಾಗಿರುವುದಿಲ್ಲವೋ ಹಾಗೆಯೇ ಶಿವಜ್ಞಾನಿಯ ಯಾವ ಕರ್ಮಗಳಿವೆಯೋ ಅವು ಅವನ ಪುನರ್ಜನ್ಮಕ್ಕೆ ಕಾರಣವಾಗುವುದಿಲ್ಲ"- ಹುರಿದ ಬೀಜದಂತೆ 'ಶಿವೋಽಹಂ' ಭಾವನೆಯಿಂದಿರುವ ಶಿವಯೋಗಿಯ ಸಂಚಿತಕರ್ಮಗಳು ನಾಶವಾಗಿ ಪುನರ್ಜನ್ಮವಿಲ್ಲವೆಂದು ಶ್ರೀ ರೇಣುಕಾಚಾರ್ಯರು ಬೋಧಿಸಿದ್ದಾರೆ.

ಈ ರೀತಿಯಾಗಿ ಶಿವನೇ ನಾನು ಎಂದು ಶಿವನೊಂದಿಗೆ ತನ್ನ ಐಕ್ಯವನ್ನು ಭಾವಿಸುವ ಶಿವಯೋಗಿಯಲ್ಲಿ 'ಶಿವೋಽಹಂ' ಎಂಬ ಭಾವನೆಯು ದೃಢವಾದಾಗ ಆ ಬಗೆಯ ಮನೋವೃತ್ತಿಯ ಜ್ಞಾನವೂ ಸಹ ನಷ್ಟವಾಗಲು, ಶಿವಯೋಗಿಯು ಶಿವನೇ ಆಗುತ್ತಾನೆ ಎನ್ನುವ ಕಾರಣದಿಂದ ಶಿವಯೋಗಿಯ ಇಂತಹ ಅವಸ್ಥೆಯನ್ನು ಜ್ಞಾನಶೂನ್ಯಾವಸ್ಥೆ ಎಂದು ಹೇಳಲಾಗಿದೆ. ಆ ಸಂದರ್ಭದಲ್ಲಿ ಜ್ಞಾತೃ, ಜ್ಞಾನ ಮತ್ತು ಜ್ಞೇಯಗಳೆಂಬ ತ್ರಿಪುಟಿ ವ್ಯವಹಾರದ ಜ್ಞಾನಕ್ಕೆ ಅವಕಾಶವಿರುವುದಿಲ್ಲ. ಜೀವನ್ಮುಕ್ತನ (ಶಿವಯೋಗಿಯ) ಈ ಬಗೆಯ ಜ್ಞಾನಶೂನ್ಯಾವಸ್ಥೆಯು ಜೀವನ್ಮುಕ್ತಿಯ ಪರಾಕಾಷ್ಠವು. ಆದುದರಿಂದಲೇ ಶ್ರೀ ರೇಣುಕ ಭಗವತ್ಪಾದರು-

ಸರ್ವಾತ್ಮನಿ ಪರೇ ತತ್ತ್ವೇ ಭೇದಶಂಕಾವಿವರ್ಜಿತೇ।
ಜ್ಞಾತ್ರಾದಿವ್ಯವಹಾರೋತ್ಥಂ ಕುತೋ ಜ್ಞಾನಂ ವಿಭಾವ್ಯತೇ॥
ಜ್ಯೋತಿರ್ಲಿಂಗೇ ಚಿದಾಕಾರೇ ಸ್ವಪ್ರಕಾಶೇ ನಿರುತ್ತರೇ।
ಏಕೀಭಾವಮುಪೇತಸ್ಯ ಕಥಂ ಜ್ಞಾನಸ್ಯ ಸಂಭವಃ॥[೧೭೩]

ಯಸ್ಯ ಕಾರ್ಯದಶಾ ನಾಸ್ತಿ ಕಾರಣತ್ವಮಥಾಪಿ ವಾ।
ಶೇಷತ್ವಂ ನೈವ ಶೇಷಿತ್ವಂ ಸ ಮುಕ್ತಃ ಪರ ಉಚ್ಯತೇ॥[೧೭೪]

"ಭೇದಶಂಕಾವರ್ಜಿತವೂ, ಸಮಸ್ತ ಚರಾಚರಪ್ರಪಂಚ ಸ್ವರೂಪವೂ ಆದ ಪರತತ್ತ್ವದಲ್ಲಿ ಜ್ಞಾತೃ, ಜ್ಞೇಯಾದಿ ವ್ಯವಹಾರದಿಂದುಂಟಾಗುವ ಭೇದಜ್ಞಾನವು ಎಲ್ಲಿಂದ ಭಾವಿಸಲ್ಪಡುವುದು? ಜ್ಯೋತಿರ್ಲಿಂಗಸ್ವರೂಪವೂ, ಚಿತ್‌ಸ್ವರೂಪವೂ ಆದ ಸ್ವಪ್ರಕಾಶದಲ್ಲಿ ಸಮರಸಭಾವವನ್ನು ಹೊಂದಿದ ಶಿವಯೋಗಿಗೆ ಭೇದಜ್ಞಾನವು ಹೇಗೆ

---

೧೭೨. ಸಿ.ಶಿ, ೧೯.೨೯

೧೭೩. ಸಿ.ಶಿ, ೨೦.೫೫,೬೦

೧೭೪. ಸಿ.ಶಿ, ೨೦.೭೦

ಉಂಟಾಗುವುದು? ಸರ್ವಶೂನ್ಯ ನಿರಾಲಂಬ ಶಿವನಲ್ಲಿ ಕಾರ್ಯಕಾರಣಭಾವ, ಶೇಷ-ಶೇಷಿಭಾವಗಳಿಲ್ಲ. ಆ ದೇವನಲ್ಲಿ ಲೀನನಾದ ಶಿವಯೋಗಿಯು ಪರಮಮುಕ್ತನು ಎಂದು ಹೇಳಲಾಗಿದೆ."

ಈ ಪ್ರಕಾರ ವೀರಶೈವದರ್ಶನದಲ್ಲಿ ಸ್ಥಲವೆಂದು ಕರೆಯಲ್ಪಡುವ ಪರಶಿವಬ್ರಹ್ಮನ ಅಂಶನಾದ ಅಂಗಸ್ಥಲವೆಂದು ಕರೆಯಲ್ಪಡುವ ಜೀವನು ತನ್ನ ಉಪಾಸ್ಯವಾದ ಲಿಂಗಸ್ಥಲವನ್ನು ಶ್ರದ್ಧಾ, ನಿಷ್ಠಾ, ಅವಧಾನ, ಅನುಭವ, ಆನಂದ ಮತ್ತು ಸಮರಸಗಳೆಂಬ ಆರು ಬಗೆಯ ಭಕ್ತಿಗಳಿಂದ ಪೂಜಿಸುವುದರಿಂದ ಕ್ರಮವಾಗಿ ಕ್ರಿಯಾಶಕ್ತಿ, ಜ್ಞಾನಶಕ್ತಿ, ಇಚ್ಛಾಶಕ್ತಿ, ಆದಿಶಕ್ತಿ, ಪರಾಶಕ್ತಿ ಮತ್ತು ಚಿಚ್ಛಕ್ತಿ ಪ್ರಾಪ್ತಿಯ ಮುಖೇನ ಕ್ರಮವಾಗಿ ಆಚಾರಾದಿ ಲಿಂಗಗಳ ಕೊನೆಯಲ್ಲಿ ಮಹಾಲಿಂಗ ಸ್ವರೂಪಿಯೇ ಆಗುತ್ತಾನೆ. ಮತ್ತು ಮಹಾಲಿಂಗಸ್ಥಲವೆಂಬ ಘನಲಿಂಗದೊಡನೆ ಒಂದಾಗುತ್ತಾನೆ. ಆ ಕಾರಣದಿಂದ ಪಿಂಡಸ್ಥಲದಿಂದ ಮೊದಲ್ಗೊಂಡು ಜ್ಞಾನಶೂನ್ಯಾಂತಗಳಾದ ನೂರೊಂದು ಸ್ಥಲಾಂತರ್ಗತ ಷಟ್‌ಸ್ಥಲಗಳನ್ನು ಶ್ರೀ ಜಗದ್ಗುರು ರೇಣುಕಾಚಾರ್ಯರು ಶ್ರೀ ಸಿದ್ಧಾಂತ ಶಿಖಾಮಣಿಯೆಂಬ ಗ್ರಂಥದಲ್ಲಿ ಉಪದೇಶಿಸಿದ್ದಾರೆ. ಇದೇ ಲಿಂಗಾಂಗಸಾಮರಸ್ಯವೆಂಬ ಶಿವ-ಜೀವರ ಐಕ್ಯರೂಪ ವೀರಶೈವರ ಷಟ್‌ಸ್ಥಲಸೋಪಾನಕ್ರಮ.

ಇಲ್ಲಿ ನಿರೂಪಿಸಲಾದ ಷಟ್‌ಸ್ಥಲಗಳಲ್ಲಿ ಭಕ್ತ-ಮಾಹೇಶ್ವರ ಸ್ಥಲಗಳು ಕ್ರಿಯಾಪ್ರಧಾನವೂ ಭೇದಸ್ವರೂಪವೂ, ಪ್ರಸಾದಿ-ಪ್ರಾಣಲಿಂಗಿ ಸ್ಥಲಗಳು ಕ್ರಿಯಾಸಹಿತ ಜ್ಞಾನಯೋಗ ಪ್ರಧಾನವೂ ಭೇದಾಭೇದ ಸ್ವರೂಪವೂ, ಮತ್ತು ಶರಣ-ಐಕ್ಯಸ್ಥಲಗಳು ಜ್ಞಾನಪ್ರಧಾನವೂ ಅಭೇದ ಸ್ವರೂಪದವುಗಳೂ ಆಗಿವೆಯೆಂದು ತಿಳಿಯಬೇಕು. ಆದುದರಿಂದಲೇ ಈ ಸಿದ್ಧಾಂತದಲ್ಲಿ ಕರ್ಮ, ಉಪಾಸನೆ ಮತ್ತು ಜ್ಞಾನಗಳೆಂಬ ತ್ರಿವಿಧ ಸಾಧನಗಳ, ದ್ವೈತ-ದ್ವೈತಾದ್ವೈತ ಮತ್ತು ಅದ್ವೈತ ಶ್ರುತಿಗಳ ಸುಂದರವಾದ ಸಮನ್ವಯವು ಮೇಲೆ ನಿರೂಪಿಸಿದ ಸಾಧಕನ ಅವಸ್ಥಾಭೇದದಿಂದ ಸಿದ್ಧವಾಗುವುದರಿಂದ ವೀರಶೈವ ಸಿದ್ಧಾಂತವು ಎಲ್ಲ ಸಿದ್ಧಾಂತಗಳ ಸಮನ್ವಯಾತ್ಮಕವಾದುದೆಂದು ಸ್ಪಷ್ಟವಾಗುತ್ತದೆ.

■

ಉಪಸಂಹಾರ

ಶಾಸ್ತ್ರಕಾರರು ಉಪಕ್ರಮ-ಉಪಸಂಹಾರಗಳಿಂದ ಶಾಸ್ತ್ರದ ತಾತ್ಪರ್ಯವನ್ನು ನಿರ್ಣಯಿಸುತ್ತಾರೆ. ಆದುದರಿಂದಲೇ ತಾತ್ಪರ್ಯನಿರ್ಣಯ ಮಾಡುವಾಗ ಷಡ್ಲಿಂಗಗಳಿವೆ ಎಂದು ಮೀಮಾಂಸಕರು ತಿಳಿಸಿದ್ದಾರೆ. ಅದು ಈ ರೀತಿಯಾಗಿದೆ-

ಉಪಕ್ರಮೋಪಸಂಹಾರಾವಭ್ಯಾಸೋಽಪೂರ್ವತಾ ಫಲಮ್।
ಅರ್ಥವಾದೋಪಪತ್ತೀ ಚ ಲಿಂಗಂ ತಾತ್ಪರ್ಯನಿರ್ಣಯೇ।।

“ಉಪಕ್ರಮ, ಉಪಸಂಹಾರ, ಅಭ್ಯಾಸ, ಅಪೂರ್ವತಾ, ಫಲ, ಅರ್ಥವಾದ, ಉಪಪತ್ತಿಗಳೆಂದು ತಾತ್ಪರ್ಯನಿರ್ಣಯಮಾಡುವಾಗ ಇರುವ ಆರು ಲಿಂಗಗಳು.”

ಈ ಕಾರಿಕೆಯಲ್ಲಿ ಹೇಳಿರುವ ಉಪಕ್ರಮ ಮತ್ತು ಉಪಸಂಹಾರಗಳು ಒಗ್ಗೂಡಿ ಒಂದೇ ಎಂದು ಪರಿಗಣಿಸಿದೆ. ಪೂಜ್ಯರಾದ ಗೌಡಬ್ರಹ್ಮಾನಂದಸ್ವಾಮಿಗಳೂ ಕೂಡ- “ಉಪಕ್ರಮ-ಉಪಸಂಹಾರಗಳೆರಡನ್ನು ವಿಚಾರಮಾಡುವಾಗ ವಾಕ್ಯದ ಆದ್ಯಂತ ಭಾಗದಲ್ಲಿ ಏಕಾರ್ಥವೇ ಕೊನೆಗೊಳ್ಳುವುದು ಕಂಡುಬರುತ್ತದೆ. ಅಲ್ಲಿ ಮೊದಲನೆಯದು (ಉಪಕ್ರಮ) ಏಕಾರ್ಥ ತಾತ್ಪರ್ಯನಿರ್ಣಯಮಾಡಲು ಕಾರಣವಾಗಿದೆ. ತಾತ್ಪರ್ಯ ವಿಷಯದಲ್ಲಿ ಸಂದಿಗ್ಧವಾದ ಬಹಳ ವಿಷಯಗಳಲ್ಲಿ ಯಾವ ಅರ್ಥದಲ್ಲಿ ಆದ್ಯಂತ ಭಾಗಗಳು ಕೊನೆಗೊಂಡಿವೆಯೋ ಅದೇ ವಿಷಯದಲ್ಲಿ ತಾತ್ಪರ್ಯನಿರ್ಣಯವಿರುವುದು. ಆ ರೀತಿಯಾಗಿ ಹೇಳದಿದ್ದರೆ (ಉಪಸಂಹಾರಕ್ಕೆ) ವೈಯರ್ಥಾಪತ್ತಿ (ವಿರೋಧ) ಬರುತ್ತದೆ.”[೧] ಇತ್ಯಾದಿ ಗ್ರಂಥವಾಕ್ಯಗಳಿಂದ ಉಪಕ್ರಮ-ಉಪಸಂಹಾರಗಳೆರಡಕ್ಕೂ ಏಕಲಿಂಗತ್ವ(ಒಂದೇ ಕಾರಣ)ವನ್ನು ನಿರೂಪಿಸಿದ್ದಾರೆ.

ಪ್ರಕೃತದಲ್ಲಿ ಇದನ್ನು ಹೇಳಬೇಕಾಗಿದೆ. ಪ್ರಮಾಣವಾಕ್ಯವನ್ನು ತೋರಿಸುವುದರಿಂದ ಉಪಕ್ರಮ-ಉಪಸಂಹಾರಗಳೆರಡರಲ್ಲಿ ಏಕಾರ್ಥವು ಐಕ್ಯವಾಗುವುದರಿಂದ ಏಕಾರ್ಥವೇ ನಿಶ್ಚಯವಾಗುವುದು. ಹೇಗೆಂದರೆ- “ಶಕ್ತಿವಿಶಿಷ್ಟಾದ್ವೈತ (ವೀರಶೈವ) ಸಮ್ಮತತತ್ತ್ವತ್ರಯ ವಿಮರ್ಶ” ಎಂಬ ಹೆಸರಿನ ಈ ಪ್ರಬಂಧದಲ್ಲಿ ಉಪಕ್ರಮ (ಆರಂಭ)ದಲ್ಲಿ ಯಾವುದನ್ನು ನಾವು ನಿರೂಪಿಸಿದೆವೋ ಅದನ್ನೇ ಉಪಸಂಹಾರದಲ್ಲಿಯೂ ಹೇಳಬೇಕು. ಅದು ಸರಿಯಾದದ್ದಷ್ಟೆ. ಏಕೆಂದರೆ ಅವೆರಡರಲ್ಲಿಯೂ ತಾತ್ಪರ್ಯಗ್ರಹಣೋಪಾಯಗಳಲ್ಲಿ

---

[೧] ಅ.ಲ, ಪು. ೪೨೫

ಏಕಾರ್ಥತ್ವವಿದೆ. ಆದರೆ ಉಪಕ್ರಮದಲ್ಲಿ ಹೇಳಿದ್ದನ್ನು ಉಪಸಂಹಾರದಲ್ಲಿಯೂ ಹೇಳಿದರೆ ಪುನರುಕ್ತಿದೋಷವು ಬರುತ್ತದೆ ಮತ್ತು ಏಕಾರ್ಥವನ್ನು ಹೇಳದಿದ್ದರೆ ಭಿನ್ನಾರ್ಥ ನಿರೂಪಣೆ ಮಾಡುವುದರಿಂದ ಉಭಯತಃ ಪಾಶರಜ್ಜು ನ್ಯಾಯದಂತೆ ವಿರುದ್ಧಾರ್ಥವು ಬರುತ್ತದೆ. ಆದುದರಿಂದ ಯಾವ ಮಾರ್ಗವನ್ನನುಸರಿಸಿ ಉಪಸಂಹಾರ ಮಾಡಬೇಕು? ಆ ಎರಡು ದೋಷಗಳು ಬಾರದ ರೀತಿಯಲ್ಲಿ ವಿಚಾರಮಾಡಲು ಸಮಾಧಾನವಾಗಿ ಇದು ಸ್ಫುರಿಸುತ್ತದೆ. ಅದು ಈ ರೀತಿಯಾಗಿದೆ- ನ್ಯಾಯಶಾಸ್ತ್ರದಲ್ಲಿ ಇದು ಪಂಚಾವಯವಾತ್ಮಕ ವಾಕ್ಯವು (ಪರ್ವತೋ ವಹ್ನಿಮಾನ್ ಧೂಮಾತ್ ಯಥಾ ಮಹಾನಸಮ್). ಇಲ್ಲಿ ಪ್ರತಿಜ್ಞಾ ವಾಕ್ಯಾರ್ಥ ಮಾತ್ರ ತಿಳಿದರೂ ಸಹ ಕೊನೆಯ ವಾಕ್ಯವು ವಿರುದ್ಧಾರ್ಥವಾಗುವುದಿಲ್ಲ. ಆದರೆ ಬೇರೆ ಸಂದೇಹಗಳನ್ನು ನಿರಾಕರಿಸುವ ಮೂಲಕವಾಗಿ ಪೋಷಕ ವಾಗಿದೆ. ಹಾಗೆಯೇ ಪ್ರಕೃತದಲ್ಲಿಯೂ ಕೂಡ ಉಪಕ್ರಮ(ಆರಂಭ)ದಲ್ಲಿ ತಿಳಿದ ಅರ್ಥವೇ ಉಪಸಂಹಾರದಲ್ಲಿಯೂ (ಕೊನೆಯಲ್ಲಿಯೂ) ಹೇಳುವುದರಿಂದ ದೋಷವುಂಟಾಗುವುದಿಲ್ಲ.

ಮತ್ತು ಪರಮಾತ್ಮನ ಸ್ವರೂಪವನ್ನು ಹೊಂದಲು ಶ್ರುತಿಯು ಒಂಬತ್ತು ಸಾರಿ "ತತ್ತ್ವಮಸಿ ಶ್ವೇತಕೇತೋ"[೨] (ಎಲೈ ಶ್ವೇತಕೇತು, ಅದು ನೀನಾಗಿರುವೆ) ಇತ್ಯಾದಿ ವಾಕ್ಯಗಳಿಂದ ಉಪದೇಶಿಸಿದೆ. ಆಗ ಆರಂಭ ಮತ್ತು ಅಂತ್ಯದಲ್ಲಿ ಏಕಾರ್ಥವನ್ನು ಹೇಳಿದರೆ ಪುನರುಕ್ತಿ ಹೇಗಾಗುತ್ತದೆ? (ಪುನರುಕ್ತಿಯಾಗುವುದಿಲ್ಲ) ಅಥವಾ ಹೇಗೆ ಸಿದ್ಧಸಾಧನ ವಾಗುತ್ತದೆ? (ಸಿದ್ಧಸಾಧನವಾಗುವುದಿಲ್ಲ). ಹಾಗೆಯೇ ಆರಂಭದಲ್ಲಿ ಹೇಳಿದ್ದನ್ನು ಅಂತ್ಯದಲ್ಲಿ ಸಂಕ್ಷಿಪ್ತವಾಗಿ ನಿರೂಪಿಸಿದಂತಾಗುತ್ತದೆಯೆಂದು ಇಲ್ಲಿ ಉಪಸಂಹಾರವನ್ನು ಪ್ರಸ್ತಾಪಿಸಲಾಗಿದೆ.

ಭಾರತದೇಶದಲ್ಲಿ ಬಹಳ ದರ್ಶನಗಳಿವೆ. ಆ ದರ್ಶನಗಳು ವೈದಿಕ, ತಾಂತ್ರಿಕ, ವೈದಿಕತಾಂತ್ರಿಕ, ತಾಂತ್ರಿಕವೈದಿಕಗಳೆಂದು ನಾಲ್ಕು ವಿಧವಾಗಿವೆ. ಅವುಗಳಲ್ಲಿ ವೇದೋಕ್ತ ಕರ್ಮವನ್ನು ಮಾತ್ರ ಆಚರಿಸುವುದು ವೈದಿಕವೆಂದೂ, ಕೇವಲ ಆಗಮದಲ್ಲಿ ಹೇಳಿದ ಕರ್ಮಗಳನ್ನು ಅನುಷ್ಠಾನಮಾಡುವುದು ತಾಂತ್ರಿಕವೆಂದೂ, ವೇದೋಕ್ತ ಕರ್ಮಗಳನ್ನು ಪ್ರಧಾನವಾಗಿಯೂ ಆಗಮೋಕ್ತ ಕರ್ಮಗಳನ್ನು ಅಪ್ರಧಾನವಾಗಿಯೂ ಆಚರಿಸುವುದು ವೈದಿಕ ತಾಂತ್ರಿಕವು. ಮತ್ತು ಆಗಮೋಕ್ತ ಕರ್ಮಗಳನ್ನು ಆಚರಿಸುತ್ತಾ ಅದಕ್ಕೆ ವಿರುದ್ಧವಲ್ಲದ ವೈದಿಕ ಕರ್ಮಗಳನ್ನು ಆಚರಿಸುವುದು ತಾಂತ್ರಿಕವೈದಿಕವೆಂದು ತಿಳಿಯಬೇಕು.

ಪೂರ್ವೋಕ್ತಗಳಾದವುಗಳಲ್ಲಿ ಕೊನೆಯದಾದ ತಾಂತ್ರಿಕವೈದಿಕವೇ ಶಕ್ತಿವಿಶಿಷ್ಟಾದ್ವೈತ ಎಂಬ ಪರ್ಯಾಯ ಹೆಸರಿನಿಂದ ಕರೆಯಲ್ಪಡುವ ವೀರಶೈವ ದರ್ಶನವು. ವೀರಶೈವ ದರ್ಶನದ ಮೂಲನದಿಯಾದರೂ[೩] ಸಿದ್ಧಾಂತವೆಂಬ ಹೆಸರುಳ್ಳ ಶೈವಾಗಮೋತ್ತರ

---

[೨] ಛಾ.ಉ, ೬.೮.೭

[೩] ಸಿದ್ಧಾಂತಶಬ್ದಃ ಪಂಕಜಾದಿಶಬ್ದವದ್ಯೋಗರೂಢ್ಯಾ ಶಿವಪ್ರಣೀತೇಷು ಕಾಮಿಕಾದಿಷು ದಶಾಷ್ಟದಶತಂತ್ರೇಷು ಪ್ರಸಿದ್ಧಃ। -ರ.ತ್ರ, ಶ್ಲೋ.೧೦ (ಟೀಕಾ)

ಭಾಗವೇ ಆಗಿದೆ.[೪] ಈ ಸಿದ್ಧಾಂತಾಗಮಗಳು ವೇದಬಾಹ್ಯ ಅವಿರೋಧಿಗಳಾಗಿವೆಯೇ ಹೊರತು ವೇದಧರ್ಮವಿರೋಧಿಗಳಾಗಿರುವುದಿಲ್ಲ. ಆದುದರಿಂದ ವೇದಗಳು ಹಾಗೂ ಸಿದ್ಧಾಂತಾಗಮಗಳು ಏಕಾರ್ಥಪ್ರತಿಪಾದನಪರವಾಗಿರುವುದರಿಂದ ಅವೆರಡರಲ್ಲಿಯೂ ಐಕಮತ್ಯವಿದೆಯೆಂದು ವೀರಶೈವಾಚಾರ್ಯರ ಅಭಿಪ್ರಾಯವಾಗಿದೆ. ಅದನ್ನು ಈ ರೀತಿಯಾಗಿ ವಿವರಿಸಲಾಗಿದೆ-

> ವೇದಧರ್ಮಾಭಿಧಾಯಿತ್ವಾತ್ ಸಿದ್ಧಾಂತಾಖ್ಯಃ ಶಿವಾಗಮಃ।
> ವೇದಬಾಹ್ಯವಿರೋಧಿತ್ವಾದ್ ವೇದಸಮ್ಮತ ಉಚ್ಯತೇ॥
> ವೇದಸಿದ್ಧಾಂತಯೋರೈಕ್ಯಮ್ ಏಕಾರ್ಥಪ್ರತಿಪಾದನಾತ್।
> ಪ್ರಾಮಾಣ್ಯಂ ಸದೃಶಂ ಜ್ಞೇಯಂ ಪಂಡಿತೈರೇತಯೋಃ ಸದಾ॥[೫]

"ಸಿದ್ಧಾಂತವೆಂದು ಕರೆಯಲ್ಪಡುವ ಶಿವಾಗಮಗಳು ವೇದೋಕ್ತಧರ್ಮಗಳನ್ನು ಪ್ರತಿಪಾದಿಸುತ್ತಿರುವುದರಿಂದ ವೇದಸಮ್ಮತವೆಂದು ಹೇಳಲಾಗಿದೆ. ವೇದ ಮತ್ತು ಸಿದ್ಧಾಂತಗಳು ಒಂದೇ ಅರ್ಥವನ್ನು ಪ್ರತಿಪಾದನೆಮಾಡುತ್ತಿರುವುದರಿಂದ ಪಂಡಿತರಾದವರು ಇವೆರಡಕ್ಕೂ ಒಂದೇ ವಿಧವಾದ ಪ್ರಾಮಾಣ್ಯವನ್ನು ತಿಳಿಯಬೇಕು."

ಆದುದರಿಂದ ವೀರಶೈವದರ್ಶನವು ವೇದ ಮತ್ತು ಆಗಮ ಉಭಯ ಸಮ್ಮತವೆಂದು ಪ್ರಸಿದ್ಧವಾಗಿದೆ. ಆದುದರಿಂದಲೇ ಇದನ್ನು ವೇದಾಂತಶಾಖೆಗಳಲ್ಲಿ ಶಕ್ತಿವಿಶಿಷ್ಟಾದ್ವೈತವೆಂತಲೂ, ಶೈವಾಗಮಶಾಖೆಗಳಲ್ಲಿ ವೀರಶೈವವೆಂದೂ ಪರಿಗಣಿಸಿದ್ದಾರೆ.

ಶೈವಮತವು ಐತಿಹಾಸಿಕ ದೃಷ್ಟಿಯಿಂದಲೂ, ದಾರ್ಶನಿಕ ದೃಷ್ಟಿಯಿಂದಲೂ ಅತ್ಯಂತ ಮಹತ್ತ್ವಪೂರ್ಣವಾಗಿದೆ. ಎಂಟು ಸಾವಿರ ವರ್ಷಗಳಿಗಿಂತಲೂ ಪೂರ್ವದಲ್ಲಿ ಪ್ರಚಲಿತವಿದ್ದ ಜರಥುಷ್ಟ್ರಮತಕ್ಕಿಂತಲೂ ಇದು ಪ್ರಾಚೀನವಾದದ್ದು[೬] ಎಂದು ಡಾ. ಕಾಂತಿಚಂದ್ರಪಾಂಡೇಯ ಅವರು ನಿರೂಪಿಸಿದ್ದಾರೆ. ವೇದಾನುಯಾಯಿಗಳು ವೇದಗಳ ಪ್ರಾಮಾಣ್ಯವನ್ನು, ಅನಾದಿತ್ವವನ್ನು ಒಪ್ಪುವಂತೆ ಶೈವರು ಶೈವಾಗಮಗಳ ಪ್ರಾಮಾಣ್ಯ ಹಾಗೂ ಅನಾದಿತ್ವವನ್ನು ಅಂಗೀಕರಿಸಿದ್ದಾರೆ. ಈಗಿನ ಸಂದರ್ಭದಲ್ಲಿ ಬಹಳಷ್ಟು ಸಾಹಿತ್ಯವು ಲುಪ್ತವಾಗಿರುವುದರಿಂದ ಬಹಳಷ್ಟು ಶೈವಮತಗಳು ಹೆಸರಿನಿಂದ ಮಾತ್ರ ಉಳಿದುಕೊಂಡಿವೆ. ಶೈವಮತದಲ್ಲಿ ದ್ವೈತ, ದ್ವೈತಾದ್ವೈತ ಮತ್ತು ಅದ್ವೈತ ಎಂದು ಮೂರು ವಿಭಾಗವನ್ನು ಮಾಡಲಾಗಿದೆ. ಅವುಗಳಲ್ಲಿ ಪಾಶುಪತ, ಸಿದ್ಧಾಂತ ಶೈವಗಳು ದ್ವೈತವಾದರೆ; ಲಕುಲೀಶಪಾಶುಪತ, ಶ್ರೀಕಂಠವಿಶಿಷ್ಟಾದ್ವೈತ, ವೀರಶೈವ, ರಸೇಶ್ವರ ದರ್ಶನಗಳು ದ್ವೈತಾದ್ವೈತಪರವಾಗಿವೆ. ನಂದಿಕೇಶ್ವರದರ್ಶನ, ಪ್ರತ್ಯಭಿಜ್ಞಾ, ಕ್ರಮ, ಕುಲದರ್ಶನಗಳು ಅದ್ವೈತಪರವಾಗಿವೆ.[೭]

---

[೪] ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ।
ನಿರ್ದಿಷ್ಟಮುತ್ತರೇ ಭಾಗೇ ವೀರಶೈವಮತಂ ಪರಮ್॥ -ಸಿ.ಶಿ, ೫.೧೪

[೫] ಸಿ.ಶಿ, ೫.೧೨-೧೩

[೬] ಶೈವದರ್ಶನಬಿಂದುಃ, ಪ್ರಾಸ್ತಾವಿಕ, ಪು.ಕ

[೭] ಸಿ.ಶಿ, ಪ್ರಾಸ್ತಾವಿಕ, ಪು. ಖ

ಇದು (ವೀರಶೈವ ದರ್ಶನವು) ದ್ವೈತ-ಅದ್ವೈತದರ್ಶನಗಳ ಸಮನ್ವಯಾತ್ಮಕ ದರ್ಶನವಾಗಿದೆ. "ವಿರೋಧರಹಿತಂ ಶೈವಂ ವೀರಶೈವಂ ವಿದುರ್ಬುಧಾಃ"[೮] (ವಿರೋಧವಿಲ್ಲದ ಶೈವವು ವೀರಶೈವ ಎಂದು ಪಂಡಿತರು ತಿಳಿಯುತ್ತಾರೆ) ಎಂಬ ವಾಕ್ಯದಂತೆ ವಿರೋಧರಹಿತರಾದ ವೀರಶೈವರು ಸರ್ವರನ್ನೂ ಪ್ರೀತಿಸುವರೆಂದು ತಿಳಿದುಬರುತ್ತದೆ. ಈ ದರ್ಶನಗ್ರಂಥಗಳಲ್ಲಿ ಉಕ್ತವಾಗಿರುವ 'ವೀರಶೈವ' ಶಬ್ದದ ವ್ಯುತ್ಪತ್ತಿಯನ್ನು ಪರ್ಯಾಲೋಚಿಸುವುದರಿಂದ ದೀಕ್ಷಾಕಾಲದಲ್ಲಿ ಶ್ರೀ ಗುರುವಿನಿಂದ ಅನುಗೃಹೀತವಾದ ಇಷ್ಟಲಿಂಗವನ್ನು ಯಾವಾಗಲೂ ತನ್ನ ವಕ್ಷಸ್ಥಳದಲ್ಲಿ ಸಾವಧಾನದಿಂದ ಧರಿಸುತ್ತಾ, ಪ್ರಸಂಗ ಬಂದರೆ ಪರಶಿವನಿಗೋಸ್ಕರ ತನ್ನ ಪ್ರಾಣತ್ಯಾಗರೂಪವಾದ ವೀರವ್ರತವನ್ನು ಆಚರಿಸುತ್ತ, ಶಿವ-ಜೀವರ ಐಕ್ಯಬೋಧಕವಾದ ವಿದ್ಯೆಯಲ್ಲಿ ಯಾರು ಆನಂದ ಪಡುತ್ತಾನೆಯೋ ಅವನು ವೀರ ಎಂದೂ, ಆ ರೀತಿಯ 'ವೀರ' ಎಂಬ ವಿಶೇಷಣದಿಂದ ಕೂಡಿದ 'ಶೈವ'ನೇ 'ವೀರಶೈವ'ನೆಂದು ತಿಳಿಯುತ್ತದೆ.[೯]

ವೀರಶೈವದರ್ಶನಕ್ಕೆ ವಿಶೇಷಾದ್ವೈತ, ಶಿವಾದ್ವೈತ, ಶಕ್ತಿವಿಶಿಷ್ಟಾದ್ವೈತ ಮುಂತಾದ ಪರ್ಯಾಯ ಹೆಸರುಗಳಿವೆ.[೧೦] ಈ ಹೆಸರುಗಳನ್ನು ಕುರಿತು ವೀರಶೈವಾಚಾರ್ಯರು ತಿಳಿಸಿರುವ ವ್ಯುತ್ಪತ್ತಿಗಳ ಅವಲೋಕನಮಾಡುವುದರಿಂದ ಸಂಸಾರಾವಸ್ಥೆಯಲ್ಲಿ ವಾಸ್ತವವಾಗಿ ಭಿನ್ನವಾಗಿರುವ ಶಿವ-ಜೀವರು ಮುಕ್ತಾವಸ್ಥೆಯಲ್ಲಿ ವಾಸ್ತವಿಕವಾಗಿ ಅಭೇದ ಪ್ರತಿಪಾದನಪರವಾದದ್ದು ಈ ದರ್ಶನವೆಂದು ತಿಳಿಯುತ್ತದೆ. ಈ ಪರ್ಯಾಯ ಹೆಸರುಗಳಲ್ಲಿ 'ಶಕ್ತಿವಿಶಿಷ್ಟಾದ್ವೈತಮ್' ಎಂಬ ಹೆಸರೇ ವ್ಯವಹಾರದಲ್ಲಿ ಹೆಚ್ಚಾಗಿ ಪ್ರಚಲಿತವಾಗಿದೆ.

ದಾರ್ಶನಿಕತತ್ತ್ವವಿಮರ್ಶೆ

ವೀರಶೈವ ದರ್ಶನದಲ್ಲಿ 'ಸ್ಥಲ', 'ಲಿಂಗ' ಮುಂತಾದ ಶಬ್ದಗಳಿಂದ ಕರೆಯಲಾಗುವ ಪರಶಿವಬ್ರಹ್ಮ ಎಂಬುದೊಂದೇ ಮುಖ್ಯವಾದ ತತ್ತ್ವವು. ಅದು ಸಚ್ಚಿದಾನಂದ ವಿಮರ್ಶ ಶಕ್ತಿವಿಶಿಷ್ಟವಾಗಿದೆ. ಸೃಷ್ಟಿಲೀಲೆಯ ವ್ಯವಹಾರ ಸಂದರ್ಭದಲ್ಲಿ ಪರಶಿವಬ್ರಹ್ಮನಲ್ಲಿ ನಿಷ್ಕಳಾದ ವಿಮರ್ಶಶಕ್ತಿಯು ವಿಭಾಗಪರಾಮರ್ಶ ಅವಸ್ಥೆಯನ್ನು ಪಡೆದರೂ ಕೂಡ ಮೂರು ಗುಣಗಳಿಂದ ಕೂಡಿದ 'ಮಾಯೆ' ಎಂದು ಕರೆಯಲ್ಪಟ್ಟಿದೆ. ಆಗ ಶುದ್ಧಸತ್ತ್ವ ಗುಣೋಪಾಧಿಯಿಂದ ಈಶ್ವರ ಎಂದೂ, ಮಿಶ್ರೋಪಾಧಿಯಿಂದ ಜೀವ(ಪಶು) ಎಂದೂ ಮತ್ತು ತಾಮಸೋಪಾಧಿಯಿಂದ ಜಗತ್ತೆಂದು ಪರಮತತ್ತ್ವವು ಪರಿಣಾಮವನ್ನು ಹೊಂದುತ್ತದೆ. ಇಲ್ಲಿ ಈಶ್ವರನು ಪ್ರೇರಕ, ಜೀವ ಭೋಕ್ತೃ ಮತ್ತು ಜಗತ್ತು ಭೋಜ್ಯ[೧೧]ವೆಂದು ಹೇಳಲ್ಪಟ್ಟಿವೆ. ಈ ತತ್ತ್ವತ್ರಯ(ಶಿವ, ಜೀವ, ಜಗತ್ತು)ಗಳೇ

---

೮. ಕ್ರಿ.ಸಾ, ಭಾಗ-೧, ಪು. ೧೧

೯. ಸಿ.ಶಿ, ೫.೨೫-೨೭; ಚ.ಜ್ಞಾ, ಕ್ರಿ.ಪಾ, ೧೦.೩೩-೩೪; ವಾತುಲಶುದ್ಧತಂತ್ರ, ೧೦.೨೭-೨೯

೧೦. ಸಿ.ಶಿ,ಸ, ಪು. ೧೬-೧೭

೧೧. ಸಿ.ಶಿ, ೫.೩೭-೩೮

ಪದಾರ್ಥಶಬ್ದವಾಚಿಯಾಗಿವೆ. ಇಲ್ಲಿ ನಿರೂಪಿತವಾದ ಪರಿಣಾಮವು ಅವಿಕೃತಪರಿಣಾಮವಾದ ವೆನಿಸಿವೆ. ಇದರ ಅರ್ಥವು ಬಟ್ಟೆಯಿಂದ ನಿರ್ಮಿಸಿದ ಡೇರೆಯ ದೃಷ್ಟಾಂತದಿಂದ[12] ಸ್ಪಷ್ಟವಾಗುತ್ತದೆ. ಹೇಗೆ ಬಟ್ಟೆಯನ್ನು ವಿಚಿತ್ರವಾಗಿ ಹರಡಿದಾಗ ಡೇರೆಯ ರೂಪವನ್ನು ಪಡೆಯುತ್ತದೆಯೋ ಹಾಗೆಯೇ ಅದನ್ನು ಮಡಚಿದಾಗ ಬಟ್ಟೆಯ ರೂಪದಲ್ಲಿಯೇ ಇರುತ್ತದೆ. ಈ ಸಂಕೋಚ (ಮಡಚುವಿಕೆ) ಮತ್ತು ವಿಕಾಸ (ಹರಡುವಿಕೆ) ರೂಪವಾದ ಬಟ್ಟೆಯ ಸ್ವರೂಪದಲ್ಲಿ ವಿಕಾರವುಂಟಾಗುವುದಿಲ್ಲ. ಅದೇ ರೀತಿಯಾಗಿ ಶಿವನೂ ಸಹ ತನ್ನ ಶಕ್ತಿಯ ವಿಕಾಸದಿಂದ ವಿಶ್ವರೂಪಿಯಾದರೂ ವಿಕಾರವನ್ನು ಹೊಂದುವುದಿಲ್ಲ. ಈ ಪ್ರಕಾರವಾಗಿ ಪರಶಿವತತ್ತ್ವವು ಈಶ್ವರ, ಜೀವ, ಜಗತ್ತಿನ ರೂಪದಲ್ಲಿ ಬದಲಾವಣೆ ಹೊಂದಿದರೂ ಕೂಡ ಈ ಮೂರೂ ಸತ್ಯವೆಂದು[13] ಅರಿವಾಗುತ್ತದೆ. ಈ ಸೃಷ್ಟಿಲೀಲೆ ಯಲ್ಲಿ ಶಕ್ತಿವಿಶಿಷ್ಟನಾದ ಶಿವನ ಅಭಿನ್ನನಿಮಿತ್ತೋಪಾದಾನಕರಣತ್ವವು ಅಂಗೀಕೃತ ವಾಯಿತು. ಈ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣವಾದುದು ಶಿವನ ತಟಸ್ಥ ಲಕ್ಷಣವು. ಶಿವನ ಸ್ವರೂಪಲಕ್ಷಣವಾದರೂ ಸಚ್ಚಿದಾನಂದರೂಪವೆಂದು ಬೋಧಿತವಾಗಿದೆ. ವಿಮರ್ಶಶಕ್ತಿವಿಶಿಷ್ಟನೂ, ಸಚ್ಚಿದಾನಂದರೂಪಿಯೂ ಆದ ಪರಶಿವನು ವಿಶ್ವೋತ್ತೀರ್ಣ, ಮಾಯಾಶಕ್ತಿವಿಶಿಷ್ಟನಾದ ಮಹೇಶ್ವರನು ವಿಶ್ವಮಯ ಎಂದು ವೀರಶೈವರು ತಿಳಿದಿದ್ದಾರೆ.

ಅದ್ವೈತವಾದಿಗಳು ಮತ್ತು ಕಾಶ್ಮೀರಶೈವರು ಪರಶಿವನೊಬ್ಬನೇ ಶ್ರೇಷ್ಠ ತತ್ತ್ವವೆಂದು ಪ್ರತಿಪಾದಿಸಿದ್ದಾರೆ. ಶಿವನೂ ಸಹ ವಿಮರ್ಶಶಕ್ತಿವಿಶಿಷ್ಟನು. ಶಿವನು ಪ್ರಕಾಶ ಸ್ವರೂಪಿಯು, ಶಕ್ತಿಯು ಶಿವನ ವಿಮರ್ಶರೂಪಿಣಿ ಎಂದು ಅವರಿಬ್ಬರಿಗೆ ಅದ್ವೈತವನ್ನೇ ಹೇಳಿದ್ದಾರೆ. "ಶಿವಃ ಪರಮಕಾರಣಮ್"[14] (ಶಿವನೇ ಪರಮಕಾರಣನು) ಎಂಬ ಅಭಿನವಗುಪ್ತರ ಉಕ್ತಿಯಂತೆ ಈ ಸಿದ್ಧಾಂತದಲ್ಲಿ ಪ್ರಪಂಚದ ಸೃಷ್ಟಿಯಲ್ಲಿ ಶಿವನು ಯೋಗಿಗಳಂತೆ ತನ್ನ ಇಚ್ಛೆಯನ್ನು ಹೊರತುಪಡಿಸಿ ಬೇರೇನನ್ನೂ ಅಪೇಕ್ಷಿಸುವುದಿಲ್ಲ. ಸಾಗರತರಂಗ ನ್ಯಾಯದಂತೆ ವಿಶ್ವೋತ್ತೀರ್ಣ ಪರಶಿವನೇ ತನ್ನ ಸ್ವಾತಂತ್ರ್ಯಬಲದಿಂದ ವಿಶ್ವರೂಪಿಯಾಗಿ ಬೆಳಗುತ್ತಾನೆ[15] ಎಂದು ಅಭಾಸವಾದದಿಂದ ಸೃಷ್ಟಿಯು ಸ್ಥಾಪನೆಯಾಗಿದೆ. "ಶಕ್ತಯೋಽಸ್ಯ ಜಗತ್‌ಕೃತ್ಸ್ನಂ ಶಕ್ತಿಮಾಂಸ್ತು ಮಹೇಶ್ವರಃ" (ಸಮಸ್ತ ಪ್ರಪಂಚವು ಶಿವನ ಶಕ್ತಿಯಾಗಿದ್ದು, ಮಹೇಶ್ವರನು ಶಕ್ತಿಯುತನಾದವನು) ಎಂಬ ಉಕ್ತಿಗನುಸಾರವಾಗಿ ಇಲ್ಲಿಯೂ ಸಹ ವೀರಶೈವದರ್ಶನದಂತೆ ಶಕ್ತಿಯ ವಿಕಾಸದಿಂದಲೇ ಜಗತ್ತಿನ ಸೃಷ್ಟಿಯಾಗುತ್ತದೆಂದು ಪ್ರತಿಪಾದಿಸಲಾಗಿದೆ. ಆದರೆ ಇಲ್ಲಿನ ವಿಶೇಷವೇನೆಂದರೆ ಕ್ರೀಡಾ ವಿಷಯದಲ್ಲಿ ಬಾಲಕರ

---

[12] ಸಿ.ಶಿ, ೧೦.೬೫

[13] ಬ್ರಸೂ, ೨-೩-೪೦

[14] ತಂತ್ರಾಲೋಕಃ, ೧.೮೮

ಸ್ವಭಾವವು ಹೇಗಿರುತ್ತದೆಯೋ ಹಾಗೆಯೇ ಪಂಚಕೃತ್ಯಗಳೂ ಸಹ ಶಿವನ ಸ್ವಭಾವವು. ಅವನು ಯಾವಾಗಲೂ ಪಂಚಕೃತ್ಯಗಳಿಂದ ಕ್ರೀಡಿಸುತ್ತಲೇ ಇರುತ್ತಾನೆ. ಆದುದರಿಂದ ಕಾಶ್ಮೀರಶೈವ ಸಿದ್ಧಾಂತಾನುಸಾರವಾಗಿ ಪ್ರಪಂಚದ ಸೃಷ್ಟಿಯೇ ಮೊದಲಾದ ಕಾರಣವು ಶಿವನ ಸ್ವರೂಪವೆಂದು ಹೇಳಲು ಸಾಧ್ಯವಾಗುತ್ತದೆ. ವೀರಶೈವರು ಇದನ್ನು ತಟಸ್ಥ ಲಕ್ಷಣವೆಂದು ಕರೆದಿದ್ದಾರೆ. ಸೃಷ್ಟಿಯು ಶಕ್ತಿಯ ವಿಲಾಸವು. ಶಿವ-ಶಕ್ತಿಯರ ಅಭೇದದಿಂದ ಶಕ್ತಿವಿಶಿಷ್ಟನಾದ ಶಿವನು ಈ ಸಿದ್ಧಾಂತದಲ್ಲಿ ಅಭಿನ್ನನಿಮಿತ್ತೋಪಾದನಕಾರಣನು. ಪ್ರಪಂಚವೆಂಬ ಚಿತ್ರಕ್ಕೆ ಶಿವನೇ ಆಧಾರವಾದ ಗೋಡೆಯ ರೂಪಧಾರಿಯು[೧೬] ಎಂಬ ಈ ವಿಷಯದಲ್ಲಿ ವೀರಶೈವ-ಕಾಶ್ಮೀರಶೈವರಲ್ಲಿ ಮತೈಕ್ಯವು ತಿಳಿದುಬರುತ್ತದೆ.

ಶಿವ-ಶಕ್ತಿಯರ ಭೇದವನ್ನು ಹೇಳುವ ಸಿದ್ಧಾಂತ ಶೈವದರ್ಶನದಲ್ಲಿ ಪತಿ, ಪಶು, ಪಾಶಗಳೆಂಬ ತತ್ತ್ವತ್ರಯಗಳು ಅಂಗೀಕೃತವಾಗಿವೆ. ಅಲ್ಲಿಯೂ ಸಹ ಶಿವನು ಚಿಚ್ಛಕ್ತಿವಿಶಿಷ್ಟನು. ಅವರಿಬ್ಬರ ಸಂಬಂಧವು ಭೇದಾಭೇದರೂಪವಾದದ್ದು. ಸತ್ಕಾರ್ಯವಾದಿಗಳಿಂದ ಜಗತ್‌ಸೃಷ್ಟಿಗೆ ಶಿವನ ಅಭಿನ್ನನಿಮಿತ್ತೋಪಾದಾನಕಾರಣವನ್ನು ಅಂಗೀಕರಿಸಿರುವುದಿಲ್ಲ. ಈ ಸಿದ್ಧಾಂತಾನುಸಾರವಾಗಿ ಸೃಷ್ಟಿಯು ಶುದ್ಧ, ಅಶುದ್ಧ ಎರಡು ವಿಧವಾಗಿದೆ. ಶುದ್ಧ ಸೃಷ್ಟಿಯಲ್ಲಿ ಶಿವನು ನಿಮಿತ್ತಕಾರಣನು, ಬಿಂದು ಉಪಾದಾನ ಕಾರಣ. ಇಲ್ಲಿ ಬಿಂದುವಿಗೆ ಮಹಾಮಾಯೆ ಎಂಬ ಮತ್ತೊಂದು ಹೆಸರು ಇದೆ. ಅಶುದ್ಧ ಸೃಷ್ಟಿಯಲ್ಲಿ ಬಿಂದು ಶರೀರಿಗಳಾದ ವಿದ್ಯಾ, ಈಶಾನ, ಅನಂತ ಮೊದಲಾದವರು ನಿಮಿತ್ತ ಕಾರಣರು, ಮಾಯೆಯು ಉಪಾದಾನಕಾರಣ, ಸೃಷ್ಟಿಯಾಗಲಿರುವ ಪ್ರಾಣಿಗಳ

---

೧೫. ಪ್ರತ್ಯಭಿಜ್ಞಾಹೃದಯಾಷ್ಟಮಸೂತ್ರವ್ಯಾಖ್ಯಾಯಾಂ ಕ್ಷೇಮರಾಜೋ ವಕ್ತಿ- "ವಿಶ್ವೋತ್ತೀರ್ಣ ಮಾತ್ಮತತ್ತ್ವಮಿತಿ ತಾಂತ್ರಿಕಾಃ, ವಿಶ್ವಮಯಮಿತಿ ಕುಲಾದ್ಯಾಮ್ನಾಯನಿವಿಷ್ಟಾಃ, ವಿಶ್ವೋತ್ತೀರ್ಣಂ ವಿಶ್ವಮಯಂ ಚೇತಿ ತ್ರಿಕಾದಿದರ್ಶನವಿದಃ" ಇತಿ। ಅತ್ರ ತ್ರಿಕಾದೀತ್ಯಾದಿ ಪದೇನ ತ್ರೈಪುರ ವೀರಶೈವದರ್ಶನಯೋರಪಿ ಗ್ರಹಣಂ ಕರ್ತವ್ಯಮ್। ಯೋಗಿನೀ ಹೃದಯೇ ಚ-

ಅತೀತಂ ತು ಪರಂ ತೇಜಃ ಸ್ವಸಂವಿದು ಭಯಾತ್ಮಕಮ್।
ಸ್ವೇಚ್ಛಾ ವಿಶ್ವಮಯೋಲ್ಲೇಖಖಚಿತಂ ವಿಶ್ವರೂಪಕಮ್॥ -೧.೪೯-೫೦
ನಿಷ್ಕಲೇ ಪರಮೇ ಸೂಕ್ಷ್ಮೇ ನಿರ್ಲಕ್ಷ್ಯೇ ಭಾವವರ್ಜಿತೇ।
ವ್ಯೋಮಾತೀತೇ ಪರೇ ತತ್ತ್ವೇ ಪ್ರಕಾಶಾನಂದವಿಗ್ರಹೇ।
ವಿಶ್ವೋತ್ತೀರ್ಣೇ ವಿಶ್ವಮಯೇ ತತ್ತ್ವೇ ಸ್ವಾತ್ಮನಿ ಯೋಜನಮ್॥
ಇತ್ಯೇವಂ ವಿಶ್ವೋತ್ತೀರ್ಣಂ ವಿಶ್ವಮಯಂ ಚ ತತ್ತ್ವಂ ಪ್ರತಿಪಾದ್ಯತೇ।
-೨.೭೩-೭೪

೧೬. ತ್ರೈಲೋಕ್ಯಸಂಪದಾಲೇಖ್ಯ ಸಮುಲ್ಲೇಖನಭಿತ್ತಯೇ।
ಸಚ್ಚಿದಾನಂದರೂಪಾಯ ಶಿವಾಯ ಬ್ರಹ್ಮಣೇ ನಮಃ॥ -ಸಿ.ಶಿ, ೧.೧
ನಿರೂಪಾದಾನ ಸಂಭಾರಮಭಿತ್ತಾವೇವ ತನ್ವತೇ।
ಜಗಚ್ಚಿತ್ರಂ ನಮಸ್ತಸ್ಮೈ ಕಲಾನಾಥಾಯ ಶೂಲಿನೇ॥
-ಸರ್ವದರ್ಶನ ಸಂಗ್ರಹಃ, ಪು. ೧೯೬-೧೯೭

ಕರ್ಮವು ಸಹಕಾರಿಕಾರಣ. ಅಯಸ್ಕಾಂತ ಶಕ್ತಿಯಿಂದ ಕಬ್ಬಿಣದಲ್ಲಿ ಕ್ರಿಯೆಯು ಉತ್ಪತ್ತಿಯಾಗುವಂತೆ ಚಿಚ್ಛಕ್ತಿ ವಿಶಿಷ್ಟನಾದ ಶಿವನ ಸಾನ್ನಿಧ್ಯದಿಂದ ಬಿಂದುವಿನಲ್ಲಿ ಕ್ರಿಯಾವೇಶವಾಗುತ್ತದೆ ಎಂದು ಅಘೋರ ಶಿವಾಚಾರ್ಯರು ನಿರೂಪಿಸಿದ್ದಾರೆ.[೧೭] ಚಿಚ್ಛಕ್ತಿವಿಶಿಷ್ಟನಾದ ಶಿವನು ಇಲ್ಲಿ ನಿರ್ಗುಣನು ಮತ್ತು ಮಾಯಾಶಕ್ತಿವಿಶಿಷ್ಟ ಸಗುಣನು. ಸದ್ಯೋಜಾತವೇ ಮೊದಲಾದ ಪಂಚಶಕ್ತಿವಿಶಿಷ್ಟನಾದ ಪಂಚಮಂತ್ರ ಶರೀರಿಯಾದ ಶಿವನು ಈ ಸಿದ್ಧಾಂತದಲ್ಲಿ ಉಪಾಸ್ಯ (ಪೂಜಿಸಲ್ಪಡುವ) ಎಂದು ಅಂಗೀಕರಿಸಲಾಗಿದೆ. ಇಲ್ಲಿಯೂ ಕೂಡ ಚಿಚ್ಛಕ್ತಿವಿಶಿಷ್ಟನಾದ ಶಿವನು ವಿಶ್ವೋತ್ತೀರ್ಣ ಮತ್ತು ಅನಾದಿಮುಕ್ತನು, ಮಹಾಮಾಯಾವಿಶಿಷ್ಟನೂ ಮತ್ತು ಮಾಯಾವಿಶಿಷ್ಟನಾದವನು ವಿಶ್ವಮಯನು.

ವೀರಶೈವರು ಜಗತ್ತಿನ ಸೃಷ್ಟಿಯ ವಿಷಯದಲ್ಲಿ ಘೃತಕಾಠಿಣ್ಯನ್ಯಾಯವನ್ನೂ, ಸಿದ್ಧಾಂತಶೈವರು ಘೃತಕೀಟನ್ಯಾಯವನ್ನು ಅಂಗೀಕರಿಸಿದ್ದಾರೆ. ಘೃತಕಾಠಿಣ್ಯ ಎಂದರೆ ಅಲ್ಪಪ್ರಮಾಣದ ದ್ರವರೂಪದಲ್ಲಿರುವ ತುಪ್ಪವು ಒಟ್ಟಿಗೆ ಘನಭಾವರೂಪದ (ಗಟ್ಟಿಯಾಗಿ) ಬೇರೊಂದು ಅವಸ್ಥೆಯನ್ನು ಪಡೆಯುವುದು. ಘೃತಕೀಟನ್ಯಾಯವೆಂದರೆ ಹೆಚ್ಚು ಪ್ರಮಾಣದಲ್ಲಿರುವ ತುಪ್ಪಕ್ಕೆ ಒಂದೆಡೆ ಕೀಟವು ಹೊಕ್ಕು ಸುತ್ತಲೂ ವಿಜಾತೀಯ ಪರಿಣಾಮವು ಉಂಟಾಗುವುದು. ಇವುಗಳಿಂದ ವೀರಶೈವ ಸಿದ್ಧಾಂತದ ರೀತ್ಯಾ ಸೃಷ್ಟಿ ಎಂದರೆ ಶಕ್ತಿವಿಶಿಷ್ಟನಾದ ಶಿವನ ವಿಕಾರವು ಒಳಭಾಗದಲ್ಲಿಯೇ ಒಟ್ಟಿಗೆ ಬೇರೊಂದು ಅವಸ್ಥೆಯನ್ನು ಪಡೆಯುವುದು ಎಂದೂ, ಸಿದ್ಧಾಂತಶೈವದರ್ಶನದಲ್ಲಿ ಮಹಾಮಾಯೆಯ ಅಥವಾ ಮಾಯೆಯಿಂದ ಒಂದೆಡೆ ವಿಜಾತೀಯ ಪರಿಣಾಮವುಂಟಾಗುವುದೆಂದು ಅರಿಯಬೇಕು. ಇದರಿಂದ ಸೃಷ್ಟಿ ಪ್ರಕ್ರಿಯೆಯ ವಿಷಯದಲ್ಲಿ ಎರಡೂ ಸಿದ್ಧಾಂತಗಳ ವಿಲಕ್ಷಣವು ಸ್ಪಷ್ಟವಾಯಿತು.

ವೀರಶೈವದರ್ಶನ ಹಾಗೂ ಸಿದ್ಧಾಂತಶೈವದರ್ಶನದಲ್ಲಿ ಸೃಷ್ಟಿಯು ಶಿವನ ಲೀಲಾರೂಪವಾದದ್ದು. ಹಾಗಾಗದಿದ್ದಲ್ಲಿ ಸೃಷ್ಟಿಯಾಗಲಿರುವ ಪ್ರಾಣಿಗಳ ಕರ್ಮಗಳು ಸಹಕಾರಿಕಾರಣಗಳೆಂಬ ಕಾರಣದಿಂದ ಶಿವನು ವೈಷಮ್ಯ-ನೈರ್ಘೃಣ್ಯ ದೋಷವುಳ್ಳವನಾಗುವುದಿಲ್ಲ. ಸೃಷ್ಟಿ ರಚನೆಯ ಪ್ರಕ್ರಿಯೆಯಲ್ಲಿ ಶಿವನಿಗೆ ಸ್ವಪ್ರಯೋಜನದ ಭಾವನೆ ಇರದಿದ್ದರೂ ಸಹ ಭೂತಾನುಗ್ರಹವೇ (ಸರ್ವ ಪ್ರಾಣಿಗಳನ್ನು ಅನುಗ್ರಹಿಸುವುದೇ) ಪ್ರಯೋಜನವಾಗಿರುತ್ತದೆ. ಈ ಸಂದರ್ಭದಲ್ಲಿ ಅನುಗ್ರಹ ಶಬ್ದವು ಭೋಗ-ಮೋಕ್ಷಗಳೆಂಬ ಅರ್ಥವುಳ್ಳದ್ದಾಗಿದೆ. ಸಂಸಾರಬಂಧನದಿಂದ ಮುಕ್ತಗೊಳಿಸುವ ಮೋಕ್ಷವನ್ನು ನೀಡುವುದೇ ಮುಖ್ಯವಾದ ಅನುಗ್ರಹವೇ ಹೊರತು ಭೋಗಪ್ರಧಾನವಲ್ಲ. ಆದರೂ ಕೂಡ ಹುಟ್ಟು, ಆಯುಷ್ಯ ಮತ್ತು ಸುಖ-ದುಃಖಗಳ ಅನುಭವಗಳಿಗೆ ಕಾರಣೀಭೂತವಾದ ಅನಾದಿ ಕರ್ಮಗಳ ನಾಶವು ಫಲಭೋಗವಿಲ್ಲದೆ ಅಸಂಭವವಾದ್ದರಿಂದ ಶಿವನು

---

[೧೭] ತತಶ್ಚಾಯಸ್ಕಾಂತಶಕ್ತೇರಿವಾಯಸಿ ಶಿವಶಕ್ತೇಃ ಸನ್ನಿಧಿಮಾತ್ರೇಣ ಬಿಂದಾವೇವ ಕ್ರಿಯಾವಿಶೇಷಃ।
-ರತ್ನತ್ರಯಟೀಕಾ, ಶ್ಲೋ. ೨೨

ರಾಗದ್ವೇಷಗಳನ್ನು ತ್ಯಜಿಸಿ ತನ್ನ ಯೋಗ್ಯತಾನುಸಾರವಾಗಿ ಪಕ್ವಮಲರಾದವರಿಗೆ (ತ್ರಿವಿಧ ಮಲಗಳು ನಾಶಹೊಂದಿ ಮೋಕ್ಷಕ್ಕೆ ಅರ್ಹರಾದವರಿಗೆ) ಮೋಕ್ಷವನ್ನು ನೀಡುತ್ತಾನೆ ಮತ್ತು ಸಂಸಾರಬಂಧನಕ್ಕೆ ಅರ್ಹರಾದ ಅಪಕ್ವಮಲರ ಮಲವನ್ನು ದಹಿಸಲು ಬಂಧನವನ್ನು ಮಾಡುತ್ತಾನೆಂಬುದರಲ್ಲಿ ವಿರೋಧವೇನೂ ಇರುವುದಿಲ್ಲ. ಈ ರೀತಿ ಭೋಗ-ಮೋಕ್ಷಗಳೆರಡೂ ಸಹ ಶಿವನ ಅನುಗ್ರಹಗಳೇ ಆಗಿವೆ. ಈ ವಿಷಯದಲ್ಲಿ ವೀರಶೈವ-ಸಿದ್ಧಾಂತಶೈವರಲ್ಲಿ ಒಮ್ಮತವಿದೆಯೆಂದು ತಿಳಿದುಬರುತ್ತದೆ. ಬಂಧ-ಮೋಕ್ಷಾದಿಗಳೆಂಬ ವೈಪರೀತ್ಯದ (ಪಕ್ಷಪಾತದ) ವ್ಯವಹಾರದಲ್ಲಿ ಪ್ರಾಣಿಗಳ ಕರ್ಮಸಾಪೇಕ್ಷತ್ವವಿದ್ದಲ್ಲಿ ಶಿವನ ಸ್ವಾತಂತ್ರ್ಯಕ್ಕೆ ಹಾನಿಯೆಂದು ಕಾಶ್ಮೀರಶೈವಸಿದ್ಧಾಂತದಲ್ಲಿ ಅದರ ಸ್ವಾತಂತ್ರ್ಯವಾದದಿಂದಲೇ ಎಲ್ಲವೂ ಸಮಂಜಸವೆನಿಸುತ್ತದೆ. ಇಲ್ಲಿ ಕರ್ಮವನ್ನು ಅವಲಂಬಿಸುವುದರಿಂದ ಈಶ್ವರನ ಸ್ವಾತಂತ್ರ್ಯಕ್ಕೆ ಭಂಗಬರುವುದಿಲ್ಲ. ಸೇವಾದಿ ಕರ್ಮಭೇದಗಳನ್ನು ಅವಲಂಬಿಸಿ ಫಲವನ್ನು ಕೊಡುವ ಪ್ರಭುವು, ಅಪ್ರಭು (ಅಸ್ವತಂತ್ರ) ಆಗುವುದಿಲ್ಲ ಎಂಬುದು ವೀರಶೈವರ, ಸಿದ್ಧಾಂತಶೈವರ ಅಭಿಪ್ರಾಯವಾಗಿದೆ.

ಶಿವ-ಶಕ್ತಿಯರ ಲೀಲಾರೂಪವಾದ ಈ ಜಗತ್ತು ಶಿವನಿಂದ ಭೂಮಿಯವರೆಗಿನ ಮೂವತ್ತಾರು ತತ್ತ್ವಗಳಿಂದ ಕೂಡಿದೆ ಎಂದು ಪೂರ್ವೋಕ್ತ ಮೂರು ದರ್ಶನಗಳಿಂದಲೂ ಸಹ ತಿಳಿದುಬರುತ್ತದೆ. ತತ್ತ್ವಗಳ ಸಂಖ್ಯೆಯ ವಿಷಯದಲ್ಲಿ ಅವರ ಶುದ್ಧ, ಶುದ್ಧಾಶುದ್ಧ ಮತ್ತು ಅಶುದ್ಧ ಭೇದದಿಂದ ಉಂಟಾಗಿರುವ ಮೂರು ಭಾಗಗಳ ವಿಷಯದಲ್ಲಿ ಶಿವತತ್ತ್ವದಿಂದ ಶುದ್ಧವಿದ್ಯಾತತ್ತ್ವದವರೆಗಿನ ಐದು ಶುದ್ಧತತ್ತ್ವಗಳು, ಮಾಯಾತತ್ತ್ವಾದಿ ಪುರುಷತತ್ತ್ವಾಂತಗಳಾದ ಏಳು ಶುದ್ಧಾಶುದ್ಧತತ್ತ್ವಗಳು ಮತ್ತು ಪ್ರಕೃತಿಯಿಂದ ಪೃಥ್ವೀತತ್ತ್ವದವರೆಗಿನ ತತ್ತ್ವಗಳು ಅಶುದ್ಧ ಇತ್ಯಾದಿ ಎಂಬ ವಿಷಯದಲ್ಲಿ ಕಾಶ್ಮೀರಶೈವ-ವೀರಶೈವರಲ್ಲಿ ಒಮ್ಮತವಿದ್ದರೂ ಕೂಡ ಸಿದ್ಧಾಂತಶೈವದರ್ಶನದ ಕ್ರಮವು ಬೇರೆಯಾಗಿದೆ. ಮಾಯಾ, ಕಾಲ, ಕಲಾ, ವಿದ್ಯಾ, ನಿಯತಿ ಮತ್ತು ರಾಗ ಎಂಬ ಕ್ರಮವೆಂದು ಸಿದ್ಧಾಂತಶೈವರ ಅಭಿಪ್ರಾಯವಾಗಿದೆ. ಮಾಯಾ, ಕಲಾ, ವಿದ್ಯಾ, ರಾಗ, ಕಾಲ ಮತ್ತು ನಿಯತಿ -ಈ ಕ್ರಮವನ್ನು ವೀರಶೈವರು ಅಂಗೀಕರಿಸಿದ್ದಾರೆ. ಈ ಕ್ರಮವೇ ತ್ರಿಕ-ಕರ್ಮ ದರ್ಶನಗಳಿಗೂ ಕೂಡ ಸಮ್ಮತವಾಗಿದೆ.[೧೮] ಶುದ್ಧಾಶುದ್ಧತತ್ತ್ವ ಕ್ರಮದಲ್ಲಿ ಅನೇಕ ಮತ-ಮತಾಂತರಗಳಿವೆ. ಅವುಗಳನ್ನು ತಂತ್ರಾಲೋಕದ ಒಂಭತ್ತನೆಯ ಆಹ್ನಿಕದಲ್ಲಿ ನೋಡಬಹುದು.

ಆಗಮಾನುಯಾಯಿಗಳಾದ ಮೂರೂ ದರ್ಶನಗಳಲ್ಲಿಯೂ ಸಹ ಪಾಶಬದ್ಧನಾದ ಕಾರಣದಿಂದ ಜೀವಾತ್ಮನನ್ನು 'ಪಶು'[೧೯] ಎಂದು ಕರೆಯಲಾಗಿದೆ. ವೀರಶೈವದರ್ಶನ

---

[೧೮] ಮಹಾರ್ಥಮಂಜರೀ, ಪರಿಮಲಃ, ಪು. ೪೮

[೧೯] ಸಮಿಶ್ರೋಪಾಧಯಃ ಸರ್ವೇ ಭೋಕ್ತಾರಃ ಪಶವಃ ಸ್ಮೃತಾಃ। -ಸಿ.ಶಿ, ೫.೩೯
ಚಿದಚಿದ್ರೂಪತಾಭಾಸೀ ಪುದ್ಗಲಃ ಕ್ಷೇತ್ರವಿತ್ ಪಶುಃ। -ತಂತ್ರಾಲೋಕಃ, ೯.೧೪೪
ತೇ ಪಾಶಬದ್ಧಾಃ ಪಶವಃ। -ತತ್ತ್ವಪ್ರಕಾಶ, ತಾತ್ಪರ್ಯದೀಪಿಕಾ, ಶ್ಲೋ.೫, ಪು.೨೭

ಮತ್ತು ಕಾಶ್ಮೀರಶೈವದರ್ಶನದಲ್ಲಿ ಆಣವ, ಮಾಯೀಯ ಮತ್ತು ಕಾರ್ಮಿಕ ಎಂದು ಪಾಶಗಳು ಮೂರು ವಿಧವಾಗಿವೆ. ಸಿದ್ಧಾಂತಶೈವದರ್ಶನದಲ್ಲಿ ಮಲ, ತಿರೋಧಾನಶಕ್ತಿ, ಮಹಾಮಾಯೆ, ಮಾಯೆ ಮತ್ತು ಕರ್ಮ ಎಂದು ಐದು ಬಗೆಯ ಪಾಶಗಳನ್ನು ಪ್ರತಿಪಾದಿಸಲಾಗಿದೆ. ಈ ಸಿದ್ಧಾಂತದಲ್ಲಿ ತಿರೋಧಾನಶಕ್ತಿಯು ಪರಮೇಶ್ವರನ ಶಕ್ತಿಗಳಲ್ಲಿ ಒಂದಾಗಿರುವ ಕಾರಣ ಗೌಣೀವೃತ್ತಿಯ ಮೂಲಕ ಪಾಶಗಳಲ್ಲಿ ಒಂದೆಂದು ಅದನ್ನು ಪರಿಗಣಿಸಲಾಗಿದೆ. ಪರಮೇಶ್ವರನು ತನ್ನಲ್ಲಿರುವ ತಿರೋಧಾನಶಕ್ತಿಯಿಂದ ಪ್ರಾಣಿಗಳನ್ನು ನಿಯಂತ್ರಿಸಿ ಅವು ಅನುಭವಿಸಬೇಕಾಗಿರುವ ಭೋಗಗಳೆಡೆಗೆ ಒಯ್ಯುತ್ತಾನೆ. ಆದುದರಿಂದ ನಿರೋಧಶಕ್ತಿಯು ಮುಖ್ಯವಾದ ಪಾಶವಾಗಿರದೆ ಕೇವಲ ಔಪಚಾರಿಕವಾದುದಾಗಿದೆ. ಇದೇ ರೀತಿಯಾಗಿ "ಮಹಾಮಾಯೆಯು ಶುದ್ಧಸೃಷ್ಟಿಗೆ ಉಪಾದಾನ (ಮೂಲ ಕಾರಣ)ವಾಗಿದೆ. ಅದಕ್ಕೆ 'ಬಿಂದು' ಎಂದು ಮತ್ತೊಂದು ಹೆಸರು. ಮಾಯೆ ಮತ್ತು ಕರ್ಮ ಎಂಬ ಎರಡು ಪಾಶಗಳಿಂದ ವಿಮುಕ್ತರಾದ, ಮೊದಲನೆಯದಾದ ಅಳಿಸಿ ಹೋಗುತ್ತಿರುವ ಆಣವಮಲ ಮಾತ್ರ ಉಳಿದವರಾದ ಕ್ರಮವಾಗಿ ಅನುಭೋಗಿಸಿರುವ ವಿದ್ಯಾ, ಈಶ್ವರ ಮತ್ತು ಸದಾಶಿವತತ್ತ್ವಗಳ ಪಶುಗಳು ಮಾಯಾಲೋಕದ ಮೇಲು ಮೇಲಿನ ಮೂರು ಲೋಕಗಳಲ್ಲಿ ಕ್ರಮವಾಗಿ ನೆಲೆಸಿವೆ. ಅವರುಗಳೇ ಕ್ರಮವಾಗಿ ಮಂತ್ರ, ಮಂತ್ರೇಶ, ಮಂತ್ರಮಹೇಶ ಎಂಬ ಶಬ್ದಗಳಿಂದ ಕರೆಯಲ್ಪಟ್ಟಿದ್ದಾರೆ. ಇವರೆಲ್ಲರ ಶರೀರ ಮುಂತಾದವುಗಳಿಗೆ 'ಬಿಂದು' ಉಪಾದಾನಕಾರಣವಾಗಿದೆ. ಈ ರೀತಿಯಾಗಿ ಇಂತಹ ಪ್ರಕರಣಗಳಲ್ಲಿ ಬಿಂದುವು ಉಪಾದಾನ ಸ್ವರೂಪವುಳ್ಳದ್ದೆಂದು ವ್ಯಾಖ್ಯಾನಿಸಲಾಗಿದೆ. ಆದರೆ, ಎಲ್ಲಿಯವರೆಗೆ ಬಿಂದುವಿನಿಂದ ಉಂಟಾದ ಶರೀರದಿಂದ ಮುಕ್ತಿಯು ದೊರೆಯುವುದಿಲ್ಲವೋ ಅಲ್ಲಿಯವರೆಗೂ ಅಂತಿಮ ಮೋಕ್ಷ ಉಂಟಾಗುವುದಿಲ್ಲ. ಆದುದರಿಂದ ಬಿಂದುವು ಮಲವೆಂದು ಕರೆಯಲ್ಪಟ್ಟಿದೆ" ಎಂದು ಶ್ರೀಕಾಂತಿ ಚಂದ್ರಪಾಂಡೇಯ ಮಹೋದಯರು ಅಭಿಪ್ರಾಯಪಟ್ಟಿದ್ದಾರೆ. ಆದುದರಿಂದ ಸಿದ್ಧಾಂತ ಶೈವದರ್ಶನದಲ್ಲಿಯೂ ಕೂಡ ಆಣವ, ಮಾಯೀಯ ಮತ್ತು ಕಾರ್ಮಿಕ ಎಂದು ಪಾಶಗಳು ಮುಖ್ಯವಾಗಿ ಮೂರು ವಿಧವೆಂದು ತಿಳಿಯಬೇಕು.

ಅಣುತ್ವಗುಣವುಳ್ಳದ್ದು ಆಣವಮಲ. ನಾನು-ನನ್ನದು ಮೊದಲಾದ ಮೋಹಗುಣಗಳನ್ನುಂಟುಮಾಡುವುದು ಮಾಯೀಯಮಲ ಮತ್ತು ಶುಭಾಶುಭಕರ್ಮಗಳ ಜ್ಞಾನಗಳನ್ನುಂಟುಮಾಡುವುದು ಕಾರ್ಮಿಕಮಲ ಎನಿಸಿವೆ. ಆಣವಮಲದಿಂದ ಆವೃತನಾದ ಜೀವನು ತನ್ನ ಸ್ವರೂಪವನ್ನು ಮರೆಯುತ್ತಾನೆ. ಆದುದರಿಂದಲೇ ವೀರಶೈವ ಸಿದ್ಧಾಂತದಲ್ಲಿ ಇದಕ್ಕೆ ಅವಿದ್ಯೆ ಎಂದು ಹೆಸರು. ಇದು ಅನಾದಿರೂಪವುಳ್ಳದ್ದು. ಇದರ (ಅವಿದ್ಯೆಯ) ಆವರಣದಿಂದ ಜೀವಾತ್ಮನು ಪರಶಿವನ ಅಂಶವೆಂದು ಕರೆಯಲ್ಪಟ್ಟಿದ್ದಾನೆ.[೨೧] ಆಣವಮಲದಿಂದ ಪ್ರಾಪ್ತವಾದ ಅಣುತ್ವವು ವಾಸ್ತವವೆಂದು ತಿಳಿದು ವೀರಶೈವಾಚಾರ್ಯರು ಜೀವಾತ್ಮನು ಅಣುವಿನಷ್ಟು ಗಾತ್ರವುಳ್ಳವನೆಂದು ನಿರೂಪಿಸಿದ್ದಾರೆ.

---

೨೦. ಶೈವದರ್ಶನಬಿಂದುಃ, ಪು.೨೧

೨೧. ಅನಾದ್ಯವಿದ್ಯಾಸಂಬಂಧಾತ್ತದಂಶೋ ಜೀವನಾಯಕಃ। -ಸಿ.ಶಿ, ೫.೩೩

ಕಾಶ್ಮೀರಶೈವ ಸಿದ್ಧಾಂತದಲ್ಲಿ "ಅಖ್ಯಾತಿರೂಪಮಾಣವಂ ಮಲಮ್"[೨೨] (ಅಜ್ಞಾನ ರೂಪವಾದುದೇ ಆಣವಮಲ) ಎಂದು ಆಣವಮಲದ ಲಕ್ಷಣವನ್ನು ಹೇಳಿದ್ದಾರೆ. ಅಂದರೆ, ಆತ್ಮ ಮತ್ತು ಅನಾತ್ಮಗಳ ವಿಪರೀತಾರ್ಥವೇ ಸ್ವಭಾವವಾಗಿವುಳ್ಳ ಅಪೂರ್ಣಜ್ಞಾನವು ಆಣವಮಲವೆಂದು ತಿಳಿಯಬೇಕು. ಈ ಆವರಣದಿಂದ ಜೀವಾತ್ಮನ ಜ್ಞಾನಶಕ್ತಿಯು ಸಂಕುಚಿತವಾಗುತ್ತದೆ ಮತ್ತು ಜೀವಾತ್ಮನು ತನ್ನನ್ನು ಅಪೂರ್ಣವೆಂದು ತಿಳಿಯುತ್ತಾನೆ. ಸಿದ್ಧಾಂತಶೈವದ ದಾರ್ಶನಿಕರು "ಮಲಮಜ್ಞಾನಮಿಚ್ಛಂತಿ ಸಂಸಾರಾಂಕುರ ಕಾರಣಮ್"[೨೩] (ಮಲವು ಸಂಸಾರವೆಂಬ ಅಂಕುರಕ್ಕೆ ಕಾರಣವೆಂದು ತಿಳಿಯುತ್ತಾರೆ.) ಎಂದು ಸ್ವಸ್ವರೂಪದ ಅಜ್ಞಾನವೇ ಆಣವಮಲವೆಂದು ಕರೆದಿದ್ದಾರೆ. ಜೀವಾತ್ಮನು ಆಣವಮಲದಿಂದ ಆವೃತನಾಗಿದ್ದಾನೆ (ಮುಚ್ಚಲ್ಪಟ್ಟಿದ್ದಾನೆ) ಎಂದು ಕಾಶ್ಮೀರಶೈವರು ಮತ್ತು ಸಿದ್ಧಾಂತಶೈವರು ಒಪ್ಪಿದರೂ ಸಹ ಜೀವಾತ್ಮನ ಅಣುಭಾವವನ್ನು ಅಂಗೀಕರಿಸುತ್ತಾರೆಯೇ ಹೊರತು ಅಣುತ್ವ ರೂಪವುಳ್ಳವನು ಎಂಬುವುದನ್ನು ಒಪ್ಪುವುದಿಲ್ಲ. ಅವರ ಸಿದ್ಧಾಂತದಲ್ಲಾದರೋ ಆತ್ಮವು (ಜೀವಾತ್ಮನು) ವಿಭು ಪರಿಮಾಣವುಳ್ಳದ್ದು ಎಂಬುದೇ ಸರಿ. ಹುಟ್ಟು-ಸಾವು, ಹೋಗುವುದು, ಬರುವುದು, ಬಂಧನ, ಮೋಕ್ಷಾದಿಗಳ ವ್ಯವಸ್ಥೆಗೋಸ್ಕರ ವಿಭುಪರಿಮಾಣವುಳ್ಳ ಅನೇಕ ಆತ್ಮರುಗಳನ್ನು ಸ್ವೀಕರಿಸುವುದಕ್ಕಿಂತ ಅಣುರೂಪವಾದ ಅನೇಕಾತ್ಮರನ್ನು ಹೇಳುವ ವಾದವೇ ಉತ್ತಮವೆಂದು ಕಂಡುಬರುತ್ತದೆ.

ಈ ಪ್ರಕಾರವಾಗಿ ಆಣವಮಲದ ಆವರಣದಿಂದ (ಮುಚ್ಚುವಿಕೆಯಿಂದ) ಜೀವಾತ್ಮನು ಅಣುತ್ವವನ್ನು ಹೊಂದಿದನೋ ಅಥವಾ ಅಣುಭಾವವನ್ನು ಪಡೆದ ಜೀವಾತ್ಮನು ಮಾಯೀಯಮಲಾವರಣದಿಂದ ದೇಹವೇ ಮೊದಲಾದ ಆತ್ಮವಲ್ಲದ ಪದಾರ್ಥಗಳಲ್ಲಿ ನಾನು ಎಂತಲೂ; ಹೆಂಡತಿ, ಮಕ್ಕಳು, ಮನೆ ಮೊದಲಾದವುಗಳ ವಿಷಯದಲ್ಲಿ ನನ್ನದೆಂದು ತಿಳಿದು ಶುಭಾಶುಭಜ್ಞಾನವೆಂಬ ಕಾರ್ಮಿಕಮಲದಿಂದ ಪ್ರೇರಿತನಾಗಿ ಧರ್ಮಾಧರ್ಮಗಳ ಅನುಷ್ಠಾನ ಮಾಡುತ್ತಾ ಸಂಸಾರಚಕ್ರದಲ್ಲಿ ಸಿಕ್ಕಿ ನಾನಾಯೋನಿಗಳಲ್ಲಿ ಸುತ್ತುತ್ತಿರುತ್ತಾನೆ.

ಮಲಗಳ ದ್ರವ್ಯರೂಪದ ಕಾರಣದಿಂದ ಅವುಗಳ ನಿವೃತ್ತಿಯು ಕೇವಲ ಜ್ಞಾನೋಪದೇಶದಿಂದಾಗುವುದಿಲ್ಲ ಎಂದು ಆಗಮಿಕ ದಾರ್ಶನಿಕರೆಲ್ಲರಿಂದಲೂ ಸಹ ಆ ಉದ್ದೇಶಕ್ಕಾಗಿ (ಮಲಗಳ ಹೋಗಲಾಡಿಸುವಿಕೆಗೆ) ದೀಕ್ಷಾವಿಧಿಯು ಅಂಗೀಕಾರವಾಗಿದೆ. ಆಣವಾದಿ ಮಲಗಳನ್ನು ನಾಶಪಡಿಸಿ ಶಿವಜ್ಞಾನವನ್ನು ನೀಡುವ ವಿಶೇಷ ಸಂಸ್ಕಾರವೇ ದೀಕ್ಷೆ ಎನಿಸಿದೆ.[೨೪] ಶಿವಾನುಗ್ರಹರೂಪದ ಶಕ್ತಿಪಾತಚಿಹ್ನೆಗಳನ್ನು ಪರೀಕ್ಷಿಸಿದ ಸದ್ಗುರುವು ಈ ಸಂಸ್ಕಾರವನ್ನು ನೀಡುತ್ತಾನೆ.[೨೫] ಯಾವ ರೀತಿಯಾಗಿ

---

[೨೨] ಪರಮಾರ್ಥಸಾರ ವಿವೃತಿಃ, ಪು. ೨೧

[೨೩] ಮಾಲಿನೀವಿಜಯೋತ್ತರಮ್, ೧.೨೩

[೨೪] ಸಿ.ಶಿ, ೫.೧೧

[೨೫] (ಅ) ಪರಿಪಕ್ವಮಾಲಾ ಯೇ ತಾನುತ್ಸಾದನಹೇತುಶಕ್ತಿಪಾತೇನ।
ಯೋಜಯತಿ ಪರೇ ತತ್ತ್ವೇ ಸ ದೀಕ್ಷಯಾऽऽಚಾರ್ಯಮೂರ್ತಿಸ್ಥಃ॥
-ತತ್ತ್ವಪ್ರಕಾಶ, ಶ್ಲೋ.೧೫

(ಆ) ಶಕ್ತಿಪಾತಂ ಸಮಾಲೋಕ್ಯ ದೀಕ್ಷಯಾ ಯೋಜಯೇದಮುಮ್॥
-ಸಿ.ಶಿ, ೬.೧೦

ಕಣ್ಣಿನ ಪೊರೆಯ ದೋಷನಿವಾರಣೆಯು ವೈದ್ಯರ ಚಿಕಿತ್ಸೆಯನ್ನು ಬಯಸುತ್ತದೆ ಮತ್ತು ವೈದ್ಯರ ಚಿಕಿತ್ಸೆಯು ಕಣ್ಣಿನ ಪೊರೆಯು ಚೆನ್ನಾಗಿ ಪಕ್ವವಾಗಲು ಬಯಸುತ್ತದೆಯೋ ಹಾಗೆಯೇ ವೈದ್ಯರೂಪಿಯಾದ ಸದ್ಗುರುವು ಶಿಷ್ಯನಿಗೆ ದೀಕ್ಷೆಯನ್ನು ಮಾಡಲು ಶಿವಾನುಗ್ರಹರೂಪವಾದ ಶಕ್ತಿಪಾತವನ್ನು ಬಯಸುತ್ತಾನೆ ಮತ್ತು ಶಕ್ತಿಪಾತವು ತ್ರಿವಿಧಮಲಗಳ ಪಕ್ವತೆಯನ್ನು (ದಹಿಸುವುದನ್ನು) ಅಪೇಕ್ಷಿಸುತ್ತದೆ. ಅದನ್ನು ಶ್ರೀ ಸಿದ್ಧಾಂತ ಶಿಖಾಮಣಿಯು ಹೀಗೆ ನಿರೂಪಿಸಿದೆ-

> ಸ್ವಕರ್ಮಪರಿಪಾಕೇನ ಪ್ರಕ್ಷೀಣಮಲವಾಸನಃ।
> ಶಿವಪ್ರಸಾದಾಜ್ಜೀವೋಽಯಂ ಜಾಯತೇ ಶುದ್ಧಮಾನಸಃ।।
> ಶುದ್ಧಾಂತಃಕರಣೇ ಜೀವೇ ಶುದ್ಧಕರ್ಮವಿಪಾಕತಃ।
> ಜಾಯತೇ ಶಿವಕಾರುಣ್ಯಾತ್ ಪ್ರಸ್ಫುಟಾ ಭಕ್ತಿರೈಶ್ವರೀ।।[೨೬]

"ಜೀವನು ತನ್ನ ಕರ್ಮಪರಿಪಾಕದಿಂದ ಅನಾದಿಮಲವಾಸನೆಯನ್ನು ಕಳೆದುಕೊಂಡು, ಶಿವಾನುಗ್ರಹದಿಂದ ಶುದ್ಧಾಂತಃಕರಣವುಳ್ಳವನಾಗುತ್ತಾನೆ. ಶುದ್ಧಾಂತಃಕರಣವುಳ್ಳ ಜೀವನಲ್ಲಿ, ಶಿವಕಾರುಣ್ಯದಿಂದ ಶಿವಸಂಬಂಧವಾದ ಶುದ್ಧವಾದ ಭಕ್ತಿಯು ಉಂಟಾಗುವುದು."

ಈ ರೀತಿಯಾಗಿ ಅನೇಕ ಜನ್ಮಗಳಲ್ಲಿ ಸಂಪಾದಿಸಿದ ಸುಕೃತಗಳಿಂದುಂಟಾದ ಸ್ವಕರ್ಮದ ಪರಿಪಾಕದಿಂದ ನಷ್ಟವಾದ ಮಲದ ಜ್ಞಾನವುಳ್ಳ ಪ್ರತಿನಿತ್ಯವೂ ಅನುಷ್ಠಾನ ಮಾಡುವ ಶಿವಪೂಜೆ, ಶಿವಾಚಾರ ಮೊದಲಾದವುಗಳಿಂದುಂಟಾದ ಶಿವಪ್ರಸಾದದ ಪ್ರಭಾವದಿಂದ ಶುದ್ಧವಾದ ಅಂತಃಕರಣವುಳ್ಳವನಾದಾಗ ಜೀವಾತ್ಮನು ಪಿಂಡ ಎಂದು ಕರೆಯಲ್ಪಡುತ್ತಾನೆ.[೨೭] ಇಂತಹ ಶುದ್ಧಾಂತಃಕರಣನಾದ ಸಾಧಕನಿಗೆ ಆತ್ಮ-ಅನಾತ್ಮ ವಿವೇಕವು ಉಂಟಾಗುತ್ತದೆ. ಆ ವಿವೇಕದ ಬಲದಿಂದಲೇ ಸಂಸಾರದಲ್ಲಿ ಹೇಯಬುದ್ಧಿಯುಂಟಾಗುತ್ತದೆ. ಈ ರೀತಿಯಾಗಿ ಸಂಸಾರದ ವಿಷಯದಲ್ಲಿನ ಹೇಯಬುದ್ಧಿಯಿಂದ, ಶಿವನಲ್ಲಿ ಸಾಧಕನಿಗೆ ಭಕ್ತಿಯುಂಟಾಗುತ್ತದೆ. ಆಗ ಸಾಧಕನ-

> ಆನಂದಬೋಧಯೋರ್ಲಿಂಗಮಾಂತಃಕರಣವಿಕ್ರಿಯಾ।
> ಯಥಾ ಸ್ಯಾತ್ ಕಂಪರೋಮಾಂಚಸ್ವರನೇತ್ರಾಂಗವಿಕ್ರಿಯಾ।।[೨೮]

"ಅಂತಃಕರಣದ ವಿಕಾರಗಳು ಹೇಗೋ ಹಾಗೆಯೇ ಕಂಪ, ರೋಮಾಂಚ, ಸ್ವರ, ನೇತ್ರದಲ್ಲಿ ಕಾಣುವ ದೈಹಿಕ ವಿಕಾರಗಳೂ ಕೂಡ ಆನಂದ ಮತ್ತು ಜ್ಞಾನಾಧಿಕ್ಯದ ಚಿಹ್ನೆಗಳು" ಎಂದು ಹೇಳಿದ ಶಕ್ತಿಪಾತದ ಚಿಹ್ನೆಗಳನ್ನು ಪರೀಕ್ಷಿಸಿ ಅದರಂತೆ ಗುರುವು

---

[೨೬] ಸಿ.ಶಿ, ೫.೪೯-೫೦

[೨೭] ಬಹುಜನ್ಮಕೃತೈಃ ಪುಣ್ಯೈಃ ಪ್ರಕ್ಷೀಣೇ ಪಾಪಪಂಜರೇ।
ಶುದ್ಧಾಂತಃಕರಣೋ ದೇಹೀ ಪಿಂಡಶಬ್ದೇನ ಗೀಯತೇ।। -ಸಿ.ಶಿ, ೫.೩೦

[೨೮] ಕ್ರಿಯಾಸಾರ, ಭಾಗ-೨, ಪು. ೧೯೫

ದೀಕ್ಷೆಯನ್ನು ನೀಡುತ್ತಾನೆ. ಕಾಶ್ಮೀರಶೈವಸಿದ್ಧಾಂತ ಮತ್ತು ಸಿದ್ಧಾಂತಶೈವದರ್ಶನಗಳಲ್ಲಿ ಪಾಶನಿವೃತ್ತಿಗೋಸ್ಕರ ದೀಕ್ಷಾಸಂಸ್ಕಾರವು ಅಂಗೀಕಾರವಾಗಿದೆ. ಅವರಲ್ಲಿ ಕಾಶ್ಮೀರಶೈವರು ಶಿವಸ್ವಾತಂತ್ರ್ಯವಾದವನ್ನು ಅನುಲಕ್ಷಿಸಿ ಜೀವಾತ್ಮನ ಮಲಪರಿಪಾಕವನ್ನು ಅಪೇಕ್ಷಿಸದಯೇ ಶಿವನು ಅನುಗ್ರಹಿಸುತ್ತಾನೆ ಎಂದು ನಿರೂಪಿಸುತ್ತಾರೆ. ಸಿದ್ಧಾಂತಶೈವರು ಶಿವಾಗಮಗಳಲ್ಲಿ ಉಪದೇಶಿಸಿರುವ ಕ್ರಿಯಾ, ಚರ್ಯಾ ಮತ್ತು ಯೋಗಾನುಷ್ಠಾನಗಳಿಂದ ಮಲಪರಿಪಾಕದ ಸಾಪೇಕ್ಷವು ಶಿವಾನುಗ್ರಹರೂಪದ ಶಕ್ತಿಪಾತವೆಂದು ಪ್ರತಿಪಾದಿಸಿದ್ದಾರೆ. ಈ ವಿಷಯದಲ್ಲಿ ವೀರಶೈವ-ಸಿದ್ಧಾಂತಶೈವರಲ್ಲಿ ಐಕಮತ್ಯವಿದೆ ಎಂದು ತಿಳಿಯಬೇಕು.

ವೀರಶೈವಾಚಾರ್ಯರು ಜೀವಾತ್ಮನ ಕಾರಣಶರೀರದಲ್ಲಿ ಆಣವಮಲವು, ಸೂಕ್ಷ್ಮಶರೀರದಲ್ಲಿ ಮಾಯೀಯಮಲ ಮತ್ತು ಸ್ಥೂಲಶರೀರದಲ್ಲಿ ಕಾರ್ಮಿಕಮಲವು ನೆಲೆಸಿವೆ ಎಂದು ಒಪ್ಪಿ ಅವುಗಳನ್ನು ನಿವಾರಿಸಲು ಮೂರು ಬಗೆಯ ದೀಕ್ಷೆಗಳನ್ನು ವಿಧಿಸಿದ್ದಾರೆ. ಅದನ್ನು ಮಾಯಿದೇವನು-

> ತನುತ್ರಯಗತಾನಾದಿಮಲತ್ರಯಮಸೌ ಗುರುಃ||
> ದೀಕ್ಷಾತ್ರಯೇಣ ನಿರ್ದಗ್ಧ್ವಾ ಲಿಂಗತ್ರಯಮುಪಾದಿಶತ್|
> ಯಥಾ ಪುರತ್ರಯಂ ದಗ್ಧಂ ಯುಗಪತ್ ಪುರವೈರಿಣಾ||
> ತಥಾ ಮಲತ್ರಯಂ ದಗ್ಧಂ ಯುಗಪದ್ ದೇಶಿಕಾತ್ಮನಾ|
> ವೇಧಮನುಕ್ರಿಯಾಕಾರಾ ದೀಕ್ಷಾ ಶೈವೀ ಶಿಖಾ ಮತಾ||[೨೯]

"ಶ್ರೀಗುರುವು ಶಿಷ್ಯನ ಸ್ಥೂಲ, ಸೂಕ್ಷ್ಮ ಮತ್ತು ಕಾರಣಗಳೆಂಬ ಮೂರು ಶರೀರಗಳಲ್ಲಿರುವ ಕಾರ್ಮಿಕ, ಮಾಯೀಯ ಮತ್ತು ಆಣವಗಳೆಂಬ ಮೂರು ಮಲಗಳನ್ನು ಕ್ರಿಯಾ, ಮಾಂತ್ರೀ ಮತ್ತು ವೇಧಾ ಎಂಬ ಮೂರು ದೀಕ್ಷೆಯ ಮೂಲಕ ದಹಿಸಿ ಅವುಗಳಲ್ಲಿ ಕ್ರಮವಾಗಿ ಇಷ್ಟಲಿಂಗ, ಪ್ರಾಣಲಿಂಗ ಮತ್ತು ಭಾವಲಿಂಗಗಳನ್ನು ಅನುಗ್ರಹಿಸುತ್ತಾನೆ. ಹೇಗೆ ಪರಮೇಶ್ವರನು ತ್ರಿಪುರಗಳನ್ನು ಏಕಕಾಲದಲ್ಲಿ ದಹಿಸಿದನೋ ಹಾಗೆಯೇ ಶ್ರೀಗುರುವು ಶಿಷ್ಯನಲ್ಲಿರುವ ಮೂರು ವಿಧ ಮಲಗಳನ್ನು ಏಕಕಾಲದಲ್ಲಿ ದಹಿಸುತ್ತಾನೆ. ವೇಧಾ, ಮನು (ಮಂತ್ರ) ಮತ್ತು ಕ್ರಿಯಾತ್ಮಕವಾದ ಶಿವದೀಕ್ಷೆಯು 'ಶಿಖಾ' ಎಂದು ಕರೆಯಲ್ಪಟ್ಟಿದೆ."

ವೀರಶೈವ ದರ್ಶನದಲ್ಲಿ ಶ್ರೀಗುರುವು ವೇಧಾದೀಕ್ಷೆಯ ವಿಧಾನದಿಂದ ಶಿಷ್ಯನ ಕಾರಣಶರೀರದಲ್ಲಿ ಭಾವಲಿಂಗವನ್ನು, ಮಂತ್ರದೀಕ್ಷೆಯ ಬಲದಿಂದ ಸೂಕ್ಷ್ಮಶರೀರದಲ್ಲಿ ಪ್ರಾಣಲಿಂಗದ ಸ್ವರೂಪವನ್ನು ಉಪದೇಶಿಸಿ, ಕ್ರಿಯಾದೀಕ್ಷಾ ವಿಧಾನದಿಂದ ಸ್ಥೂಲಶರೀರದಲ್ಲಿ ಸಂಸ್ಕಾರಗೊಂಡ ಇಷ್ಟಲಿಂಗವನ್ನು ಅನುಗ್ರಹಿಸುತ್ತಾನೆ. ಈ ಕಾರಣದಿಂದ ವೀರಶೈವರ ದೀಕ್ಷಾಪದ್ಧತಿಯು ಇತರ ಶೈವಮತಗಳು ನಿರೂಪಿಸುವ ದೀಕ್ಷಾವಿಧಾನ ಕ್ಕಿಂತಲೂ ಸಂಪೂರ್ಣವಾಗಿ ಬೇರೆಯಾಗಿದೆಯೆಂದು ತಿಳಿಯಬೇಕು.

---

[೨೯] ಅನುಭವಸೂತ್ರ, ೫.೫೨-೫೪

ಮತ್ತು ಇಂತಹ ದೀಕ್ಷೆಗೆ ಪುರುಷರಂತೆ ಸ್ತ್ರೀಯರೂ ಅಧಿಕಾರಿಗಳೆಂಬುದು ಇಲ್ಲಿಯ ವಿಶೇಷ. ಇಷ್ಟಲಿಂಗಪೂಜೆಯು ಆಜೀವಪರ್ಯಂತ ಮಾಡಲೇಬೇಕೆಂಬ ನಿಯಮ ವಿರುವುದರಿಂದ ಮಾಸಿಕ ರಜೋದರ್ಶನದ ಸಂದರ್ಭದಲ್ಲಿ ಸೂತಕವುಂಟಾಗುವುದರಿಂದ ಸ್ತ್ರೀಯರಿಗೆ ಇಷ್ಟಲಿಂಗಪೂಜೆಯ ಲೋಪವಾಗಬಾರದು ಎಂಬುದನ್ನು ಈ ದೃಷ್ಟಾಂತದಿಂದ ನಿರೂಪಿಸಲಾಗಿದೆ. ಯಾವ ರೀತಿಯಾಗಿ ನಾಲಿಗೆಯು ಕೈಯಿಂದ ಸ್ಪರ್ಶಿಸಲು ಅಯೋಗ್ಯವಾದರೂ ಮಂತ್ರೋಚ್ಚಾರಣೆ ಮಾಡಲು ಯಾವಾಗಲೂ ನಿರ್ಮಲವಾಗಿರುತ್ತದೆಯೋ ಅದೇ ರೀತಿಯಾಗಿ ರಜಸ್ವಲೆಯರಾದ ಸ್ತ್ರೀಯರು ಸ್ಪರ್ಶಕ್ಕೆ ಯೋಗ್ಯವಲ್ಲವಾದರೂ ಸಹ ತಮ್ಮ ಇಷ್ಟಲಿಂಗಪೂಜೆಗೆ ಮಾತ್ರ ಶುದ್ಧರಾಗಿರುತ್ತಾರೆ. ಈ ಕಾರಣದಿಂದ ಇಷ್ಟಲಿಂಗಪೂಜಾ ವಿಷಯದಲ್ಲಿ ಸೂತಕವನ್ನು ನಿಷೇಧಿಸಿ ರಜಸ್ವಲೆಯರಾದ ಸ್ತ್ರೀಯರಿಗೂ ಲಿಂಗಪೂಜೆಯ ಅಧಿಕಾರವನ್ನು ಕೊಟ್ಟ ವೀರಶೈವಾಚಾರ್ಯರು ಧಾರ್ಮಿಕ ಜೀವನದಲ್ಲಿ ಸ್ತ್ರೀ-ಪುರುಷರ ಭೇದವನ್ನು ನಿರಾಕರಿಸಿ ಸಾಮ್ಯವಾದವನ್ನು ಪ್ರತಿಷ್ಠಾಪನೆ ಮಾಡಿದ್ದಾರೆ. ಇದೇ ಪ್ರಕಾರವಾಗಿ-

ಬ್ರಾಹ್ಮಣಃ ಕ್ಷತ್ರಿಯೋ ವಾಪಿ ವೈಶ್ಯೋ ವಾ ಶೂದ್ರ ಏವ ವಾ।
ಅಂತ್ಯಜೋ ವಾ ಶಿವೇ ಭಕ್ತಃ ಶಿವವನ್ಮಾನ್ಯ ಏವ ಸಃ॥
ಶಿವಭಕ್ತಿಸಮಾವೇಶೇ ಕ್ವ ಜಾತಿಪರಿಕಲ್ಪನಾ।
ಇಂಧನೇಷ್ವಗ್ನಿದಗ್ಧೇಷು ಕೋ ವಾ ಭೇದಃ ಪ್ರಕೀರ್ತ್ಯತೇ॥[೩೦]

"ಶಿವಭಕ್ತರಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಅಥವಾ ಅಂತ್ಯಜ -ಇವರೆಲ್ಲರನ್ನೂ ಶಿವನಂತೆಯೇ ಪರಿಗಣಿಸಬೇಕು. ಬೆಂಕಿಯಲ್ಲಿ ಸುಟ್ಟು ಭಸ್ಮವಾದ ಕಟ್ಟಿಗೆಗಳಲ್ಲಿ ಭೇದವನ್ನು ಹೇಳಲಾಗದಿರುವಂತೆ ಶಿವಭಕ್ತಿಸಮಾವೇಶವಾಗಲು ಜಾತಿಭೇದವೆಲ್ಲಿಯದು?" ಎಂಬ ಆಚಾರ್ಯೋಕ್ತಿಗನುಸಾರವಾಗಿ ಈ ಸಿದ್ಧಾಂತದಲ್ಲಿ ದೀಕ್ಷಾಸಂಪನ್ನರಾದ ಶಿವಭಕ್ತರಲ್ಲಿ ವರ್ಣಾಶ್ರಮದ ವಿರೋಧವನ್ನು ಪರಿತ್ಯಜಿಸಿ ಲಿಂಗಧಾರಿಗಳಾದ ಎಲ್ಲ ವೀರಶೈವರ ವಿಷಯದಲ್ಲಿ ಸಮಾನತೆಯನ್ನು ಸಾರಲಾಗಿದೆ.

ಇತ್ತೀಚಿನ ದಿನಗಳಲ್ಲಿ ಸರ್ಕಾರವು ಸ್ತ್ರೀ-ಪುರುಷ ಭೇದವನ್ನು ಮತ್ತು ಜಾತಿಭೇದವನ್ನು ನಿರ್ಮೂಲನೆ ಮಾಡಲು ಪ್ರಯತ್ನ ಮಾಡುತ್ತಿವೆ. ಇಂತಹ ಪ್ರಯತ್ನ ಬಹಳಷ್ಟು ವರ್ಷಗಳ ಹಿಂದೆಯೇ ವೀರಶೈವಾಚಾರ್ಯರು ದೀಕ್ಷಾಸಂಸ್ಕಾರದ ಮೂಲಕ ಅದನ್ನು ಸಾಧಿಸಿ ಸಫಲರಾಗಿದ್ದಾರೆಂಬುದು ಸಂತೋಷದ ವಿಷಯವಾಗಿದೆ. ಆದುದರಿಂದ ವರ್ಣಾಶ್ರಮಭೇದವಿಲ್ಲದೆ ಉತ್ತಮ ಚಾರಿತ್ರ್ಯ ಮತ್ತು ನಿರ್ಮಲವಾದ ಮನಸ್ಸಿನಿಂದ ಕೂಡಿರುವ ಎಲ್ಲ ಮಾನವರು ಇಷ್ಟಲಿಂಗಪೂಜೆಗೆ ಅರ್ಹರಾಗಿದ್ದು ಈ ಜನ್ಮದಲ್ಲಿಯೇ ಶಿವಸಾಯುಜ್ಯವನ್ನು ಸಾಧಿಸಲು ಸಮರ್ಥರಾಗಿದ್ದಾರೆ.

ಈ ಸಿದ್ಧಾಂತದಲ್ಲಿ ದೀಕ್ಷಾಸಂಸ್ಕಾರವಿಲ್ಲದ ಜೀವಾತ್ಮನನ್ನು ಬದ್ಧ ಎಂದೂ, ದೀಕ್ಷಾಸಂಸ್ಕಾರವಿರುವವನನ್ನು ಶುದ್ಧ ಎಂತಲೂ ಮತ್ತು ಭ್ರಮರಕೀಟನ್ಯಾಯದಿಂದ

---

[೩೦] ಸಿ.ಶಿ, ೧೦.೧೦-೧೧

ಯಾವಾಗಲೂ ಅನುಷ್ಠಾನ ಮಾಡುವ ಶಿವಯೋಗದ ಮಹಿಮೆಯಿಂದ ಪರಶಿವನಲ್ಲಿ ಐಕ್ಯವಾಗುವುದರಿಂದ ಮುಕ್ತನೆಂದೂ ಜೀವಾತ್ಮನ ಈ ಮೂರು ಅವಸ್ಥೆಗಳನ್ನು ವೀರಶೈವಾಚಾರ್ಯರು ಹೇಳಿದ್ದಾರೆ.[೩೧] ಸಿದ್ಧಾಂತಶೈವದರ್ಶನದಲ್ಲಿಯೂ ಸಹ ಕೇವಲ, ಸಕಲ ಮತ್ತು ಅಮಲ ಎಂಬ ಭೇದದಿಂದ ಪಶುವಿನ ಮೂರು ಅವಸ್ಥೆಗಳನ್ನು ಅಂಗೀಕರಿಸಲಾಗಿದೆ. ವೀರಶೈವರು ಹೇಳಿರುವ ಮುಕ್ತಜೀವ ಮತ್ತು ಸಿದ್ಧಾಂತಶೈವರು, ನಿರೂಪಿಸಿರುವ ಅಮಲಪಶು ಈ ಇಬ್ಬರೂ ಸಹ ಮುಕ್ತರೇ ಆಗಿದ್ದಾರೆ. ಆದುದರಿಂದಲೇ ಮುಕ್ತಿಸ್ವರೂಪದ ವಿಷಯದಲ್ಲಿ ವೈಲಕ್ಷಣ್ಯವು ಕಂಡುಬರುತ್ತದೆ. ಶಿವನೊಂದಿಗೆ ಸಾಮರಸ್ಯವನ್ನು ಹೊಂದುವ ಮುಕ್ತಿಯನ್ನು ವೀರಶೈವರು ಪ್ರತಿಪಾದಿಸಿದರೆ, ಸಿದ್ಧಾಂತ ಶೈವರು ಅದ್ವೈತದರ್ಶನವನ್ನು ಅನುಸರಿಸುತ್ತಾ ಶಿವಸಾಮ್ಯರೂಪವಾದ ಮುಕ್ತಿಯನ್ನು ಹೇಳಿದ್ದಾರೆಯೇ ಹೊರತು ಸಾಮರಸ್ಯಾತ್ಮಕವಾದದ್ದನ್ನಲ್ಲ.

ಅಂಧಪಂಗುವದನ್ಯೋನ್ಯಸಾಪೇಕ್ಷೇ ಜ್ಞಾನಕರ್ಮಣೀ।
ಫಲೋತ್ಪತ್ತೌ ವಿರಕ್ತಸ್ತು ತಸ್ಮಾತ್ತದ್‌ದ್ವಯಮಾಚರೇತ್॥
ಜ್ಞಾನೇ ಸಿದ್ಧೇಽಪಿ ವಿದುಷಾಂ ಕರ್ಮಾಪಿ ವಿನಿಯುಜ್ಯತೇ।
ಫಲಾಭಿಸಂಧಿರಹಿತಂ ತಸ್ಮಾತ್ಕರ್ಮ ನ ಸಂತ್ಯಜೇತ್॥[೩೨]

“ಕರ್ಮ ಮತ್ತು ಜ್ಞಾನಗಳೆರಡೂ ಕುರುಡ ಮತ್ತು ಕುಂಟರಂತೆ ಪರಸ್ಪರ ಅಪೇಕ್ಷೆಯುಳ್ಳವರಾಗಿರುತ್ತಾರೆ. ಆದುದರಿಂದ ಪರಾಪರಮುಕ್ತಿರೂಪ ಫಲೋತ್ಪತ್ತಿಯಲ್ಲಿ ಶಿವಯೋಗಿಯು ಎರಡನ್ನೂ ಆಚರಿಸಬೇಕು. ವಿದ್ವಾಂಸರಿಗೆ ಜ್ಞಾನವು ಸಿದ್ಧವಾಗಿದ್ದರೂ ನಿಷ್ಕಾಮಕರ್ಮವು ಹೇಳಲ್ಪಟ್ಟಿದೆ. ಆದುದರಿಂದ ಫಲಾಪೇಕ್ಷೆಯಿಲ್ಲದ ಕರ್ಮವನ್ನು ಬಿಡಬಾರದು” ಎಂಬ ಆಚಾರ್ಯೋಕ್ತಿಯಂತೆ ಈ ಸಿದ್ಧಾಂತದಲ್ಲಿ ಮೋಕ್ಷಸಾಧನೆಗೆ ಜ್ಞಾನ-ಕರ್ಮಗಳ ಸಮಸಮುಚ್ಚಯವಾದವು ಅಂಗೀಕೃತವಾಗಿದೆ. ಇಲ್ಲಿ ನಿರೂಪಿತವಾಗಿರುವ ಕರ್ಮವು ಇಷ್ಟಲಿಂಗಪೂಜೆಯೆಂಬ ನಿತ್ಯಕರ್ಮದ ಅಪೇಕ್ಷೆಯುಳ್ಳದ್ದಾಗಿದೆ. ಅದನ್ನು ಇಲ್ಲಿ ಪತಿಕರ್ಮವೆಂದು ಕರೆಯಲಾಗಿದೆ. ಫಲಾಪೇಕ್ಷೆಯಿಂದ ಮಾಡುವ ಯಜ್ಞಯಾಗಾದಿಗಳು ಜೀವಾತ್ಮನು ಮುಕ್ತನಾಗಲು ಸಹಾಯಕಗಳಾಗಿಲ್ಲವೆಂಬ ಕಾರಣದಿಂದ ವೀರಶೈವಾಚಾರ್ಯರು ಅವುಗಳನ್ನು ಪಶುಕರ್ಮಗಳೆಂದು ಕರೆದು ಅವುಗಳೊಂದಿಗೆ (ಯಜ್ಞಯಾಗಾದಿ ಕರ್ಮಗಳೊಂದಿಗೆ) ಜ್ಞಾನಸಮುಚ್ಚಯದ ವಿಷಯದಲ್ಲಿ ವಿರೋಧವಿದ್ದರೂ ಕೂಡ ಮೋಕ್ಷಕ್ಕೆ ಸಹಾಯಕಗಳಾದ ಇಷ್ಟಲಿಂಗಪೂಜೆಯೇ ಮೊದಲಾದ ವೀರಶೈವರ ನಿತ್ಯಕರ್ಮಗಳನ್ನು ಪತಿಕರ್ಮಗಳೆಂದು ಹೇಳಿ, ಅವುಗಳ (ಜ್ಞಾನಕರ್ಮಗಳ) ಸಮುಚ್ಚಯವನ್ನು ಪ್ರತಿಪಾದಿಸುವ ವೀರಶೈವಾಚಾರ್ಯರ ಇಂತಹ ಆಶಯವನ್ನು ಸ್ವೇಚ್ಛಾಚಾರವೆಂದು ಜ್ಞಾನಿಗಳು ಭಾವಿಸದೆ ಲೋಕಸಂಗ್ರಹಕ್ಕಾಗಿ ಸರಿಯಾದ ರೀತಿಯಲ್ಲಿ ನಡೆದುಕೊಳ್ಳಬೇಕೆಂದು ತಿಳಿಯಬೇಕು.

---

[೩೧] ಬ್ರಹ್ಮಸೂತ್ರ ಶ್ರೀಕರಭಾಷ್ಯ, ೨-೩-೪೬

[೩೨] ಸಿ.ಶಿ, ೧೬.೧೧-೧೨

ಜ್ಞಾನಕರ್ಮಗಳ ಸಮುಚ್ಚಯವಾದವನ್ನು ಪ್ರತಿಪಾದಿಸುವ ವೀರಶೈವಾಚಾರ್ಯರು ಮೋಕ್ಷ ಪಡೆಯಲು ಪ್ರವೃತ್ತನಾದ ಸಾಧಕನ ಸಾಂಸಾರಿಕ ವಿಘ್ನಗಳ ಬಾಧೆಯನ್ನು ನಿವಾರಿಸಲು ಎಂಟು ಬಗೆಯ ಆವರಣ(ಅಷ್ಟಾವರಣ)ಗಳನ್ನು ಮತ್ತು ಐದು ವಿಧದ ಆಚಾರ(ಪಂಚಾಚಾರ)ಗಳನ್ನು ನಿರೂಪಿಸಿದ್ದಾರೆ. ಈ ಅಷ್ಟಾವರಣ-ಪಂಚಾಚಾರಗಳಿಂದ ಕೂಡಿದ ಸಾಧಕನು ಷಟ್‌ಸ್ಥಲಮಾರ್ಗದ ಮೂಲಕ ಶಿವಸಾಯುಜ್ಯವನ್ನು ಪಡೆಯುತ್ತಾನೆ. ಅಷ್ಟಾವರಣ, ಪಂಚಾಚಾರ, ಷಟಸ್ಥಲಗಳೆಂಬ ತತ್ತ್ವತ್ರಯಗಳನ್ನು ಬೇರೆ ದರ್ಶನಗಳು ಅಂಗೀಕರಿಸಿರುವುದಿಲ್ಲ. ವೀರಶೈವರ ಈ ತತ್ತ್ವಗಳು ಬೇರೆ ದರ್ಶನದವರಿಗೆ ಸಾಮಾನ್ಯ ವಲ್ಲದ ಕಾರಣದಿಂದ ಇವುಗಳ (ಈ ತತ್ತ್ವತ್ರಯಗಳ) ಸ್ವರೂಪವನ್ನು ಈ ಪ್ರಬಂಧದಲ್ಲಿ ವಿಸ್ತೃತವಾಗಿ ವಿಮರ್ಶಿಸಲಾಗಿದೆ.

ಎಲ್ಲ ಪ್ರಾಣಿಗಳ ಪೂರ್ಣತೆಯ ಅಂಗ, ಪ್ರಾಣ ಮತ್ತು ಆತ್ಮಗಳನ್ನು ಆಶ್ರಯಿಸಿರುತ್ತದೆ. ವೀರಶೈವಾಚಾರ್ಯರು ಅಷ್ಟಾವರಣಗಳನ್ನು ಅಂಗಗಳೆಂದೂ, ಪಂಚಾಚಾರ ಗಳನ್ನು ಪ್ರಾಣಗಳೆಂಬುದಾಗಿಯೂ ಮತ್ತು ಷಟಸ್ಥಲಗಳನ್ನು ಆತ್ಮವೆಂದು ಕಲ್ಪಿಸಿಕೊಂಡು ಸಾಧಕನ ಆಧ್ಯಾತ್ಮಿಕದ ಉನ್ನತಿಯನ್ನು ಹಾಗೂ ಅವುಗಳ ಆಧಾರಗಳನ್ನು ಕಲ್ಪಿಸಿದ್ದಾರೆ. ಪ್ರತಿಯೊಂದು ಪ್ರಾಣಿಗೂ ತನ್ನ ಅಂಗ, ಪ್ರಾಣ ಮತ್ತು ಆತ್ಮಗಳ ಬಗ್ಗೆ ಅತಿಶಯವಾದ ಪ್ರೀತಿಯಿರುತ್ತದೆ. “ನ ವಾ ಅರೇ ಸರ್ವಸ್ಯ ಕಾಮಾಯ ಸರ್ವಂ ಪ್ರಿಯಂ ಭವತಿ, ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ”[೩೩] (ಎಲ್ಲರ ಪ್ರಯೋಜನಕ್ಕಾಗಿ ಎಲ್ಲವೂ ಪ್ರಿಯವಾಗಿ ಕಾಣುವುದಿಲ್ಲ. ಆತ್ಮನ ಪ್ರಯೋಜನಕ್ಕಾಗಿ ಎಲ್ಲವೂ ಪ್ರಿಯವೆನಿಸುತ್ತದೆ) ಎಂದು ಯಾಜ್ಞವಲ್ಕ್ಯರು ಮೈತ್ರೇಯಿಗೆ ಉಪದೇಶಿಸಿದ್ದಾರೆ. ಇದೇ ರೀತಿಯಾಗಿ ಒಂದು ವೇಳೆ ಯಾವನೋ ಒಬ್ಬ ಸಾಧಕನು ತನ್ನ ಅಂಗ, ಪ್ರಾಣ, ಆತ್ಮಸ್ವರೂಪವೆಂದು ಅಷ್ಟಾವರಣ, ಪಂಚಾಚಾರ ಮತ್ತು ಷಟ್‌ಸ್ಥಲಗಳನ್ನು ಶಾಸ್ತ್ರೋಕ್ತಪದ್ಧತಿಯಿಂದ ಪ್ರತಿನಿತ್ಯವೂ ಅನುಸರಿಸುತ್ತಾನೆ. ಅದರಿಂದ ಅವನ ಆಧ್ಯಾತ್ಮಿಕ ಸಾಧನೆಯು ನಿರ್ಬಾಧಿತವಾಗುತ್ತದೆ. ಯಾರು ತಾನೇ ತನ್ನ ಅಂಗ, ಪ್ರಾಣ ಮತ್ತು ಆತ್ಮಸ್ವರೂಪಿಗಳಾದ ಅವುಗಳಲ್ಲಿ ಸುದೃಢವಾದ ಪ್ರೀತಿಯನ್ನು ಇಟ್ಟುಕೊಳ್ಳಲಾರ? ಎಂಬ ಕಾರಣದಿಂದ ಅತ್ಯಂತ ಸರಳವಾದ ಈ ಸಾಧನಮಾರ್ಗವು ಆಧ್ಯಾತ್ಮಿಕ ಪಥದಲ್ಲಿ ಸಾಗುತ್ತಿರುವ ಮುಮುಕ್ಷುಗಳಿಗೋಸ್ಕರ ಉಪದೇಶಿಸಲ್ಪಟ್ಟಿದೆ ಎಂದು ಆ ಪ್ರಕರಣಕ್ಕೆ ಅಷ್ಟಾವರಣ, ಪಂಚಾಚಾರ, ಷಟಸ್ಥಲಗಳ ಪ್ರತಿಪಾದನೆಯಲ್ಲಿ ಸ್ಪಷ್ಟವಾದ ಅರ್ಥವನ್ನು ಇಲ್ಲಿ ಸಂಕ್ಷಿಪ್ತವಾಗಿ ಕ್ರಮವಾಗಿ ನಿರೂಪಿಸಲಾಗುವುದು.

ಈ ಸಿದ್ಧಾಂತದ ಪ್ರಕಾರ ಆವರಣ ಎಂಬ ಶಬ್ದವು ರಕ್ಷಾಕವಚ ಎಂಬ ಅರ್ಥವುಳ್ಳದ್ದಾಗಿದೆ. ಸಾಧಕನು ತನ್ನ ಇಷ್ಟದೇವತೆಯನ್ನು ಪೂಜಿಸುವುದಕ್ಕೆ ಮೊದಲು ಹೇಗೆ ಶಿವಕವಚಪಾಠದಿಂದ ತನ್ನನ್ನು ಸುತ್ತಲೂ ರಕ್ಷಿಸಿಕೊಳ್ಳುತ್ತಾನೆಯೋ ಹಾಗೆಯೇ ವೀರಶೈವ ಸಾಧಕನು ಕೇವಲ ಪಾಠದಿಂದ ಮಾತ್ರವಲ್ಲ, ಬಾಹ್ಯವಾದ ಹಾಗೂ

---

[೩೩] ಬೃ.ಉ, ೨-೪-೫

ಆಂತರಿಕವಾದ ಆವರಣಗಳೆಂಬ ಬೇಲಿಯನ್ನು ಹಾಕಿ ತನ್ನ ಸ್ಥೂಲ ಮತ್ತು ಸೂಕ್ಷ್ಮ ಶರೀರಗಳನ್ನು ರಕ್ಷಿಸಿಕೊಳ್ಳುತ್ತಾನೆ. ರಣರಂಗದಲ್ಲಿ ಯೋಧನು ಶತ್ರುಗಳ ಶಸ್ತ್ರಾಸ್ತ್ರ ಪ್ರಹಾರಗಳಿಂದ ತನ್ನನ್ನು ರಕ್ಷಿಸಿಕೊಳ್ಳಲು ಕವಚದಿಂದ ಹೇಗೆ ತನ್ನ ಶರೀರವನ್ನು ಮುಚ್ಚಿರುತ್ತಾನೆಯೋ ಹಾಗೆಯೇ ಈ ಎಂಟು ಆವರಣಗಳಿಂದ ಶಿವಭಕ್ತನು ಕಾಮಕ್ರೋಧಾದಿ ಅರಿಷಡ್ವೈರಿಗಳಿಂದುಂಟಾಗುವ ವ್ಯಾಧಿಗಳಿಂದ ತನ್ನನ್ನು ರಕ್ಷಿಸಿಕೊಳ್ಳುತ್ತಾನೆ ಎನ್ನುವ ಕಾರಣದಿಂದ ಇವುಗಳು ಅಷ್ಟಾವರಣಗಳೆಂದು ಹೇಳಲ್ಪಟ್ಟಿವೆ. ಅಷ್ಟಾವರಣಗಳಲ್ಲಿ ಮೊದಲಿನ ಮೂರು ಆವರಣಗಳಾದ ಗುರು, ಲಿಂಗ, ಜಂಗಮಗಳು ಪೂಜಾರ್ಹವಾದವುಗಳು; ವಿಭೂತಿ, ರುದ್ರಾಕ್ಷ ಮಂತ್ರಗಳು ಪೂಜಾಸಾಮಗ್ರಿರೂಪವಾದ ಆವರಣಗಳು ಮತ್ತು ಪಾದೋದಕ, ಪ್ರಸಾದಗಳು ಪೂಜಾಫಲರೂಪವಾದ ಆವರಣಗಳೆಂದು ತಿಳಿಯಬೇಕು.

ಈ ಆವರಣಗಳು ಸಾಧಕನ ಆಧ್ಯಾತ್ಮಿಕ ಅಂಗಗಳೆಂದು ಕರೆಯಲಾಗಿದೆ. ಪ್ರಪಂಚದಲ್ಲಿ ಕೈ-ಕಾಲು ಮೊದಲಾದ ಎಲ್ಲ ಅಂಗಾಂಗಗಳಿರುವುದರಿಂದ ಶರೀರವು ಎಲ್ಲ ಲೌಕಿಕವ್ಯವಹಾರಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸುತ್ತದೆ. ಅದೇ ಪ್ರಕಾರವಾಗಿ ಪೂರ್ವೋಕ್ತ ಅಷ್ಟಾವರಣಗಳಿರುವುದರಿಂದಲೇ ಸಾಧಕನ ಆಧ್ಯಾತ್ಮಿಕ ವ್ಯವಹಾರವು ಸರಿಯಾಗಿ ನಿರ್ವಹಿಸಲ್ಪಡುತ್ತದೆ ಎಂಬ ಕಾರಣಗಳಿಂದ ಅವುಗಳು ಸಾಧಕನ ಅಂಗಗಳೆಂದು ಪ್ರತಿಪಾದಿಸಲಾಗಿದೆ. ಇವುಗಳಲ್ಲಿ ಒಂದು ಆವರಣದ ಆಭಾವವಾದರೂ ಸಾಧಕನು ಗುರಿಯನ್ನು ಮುಟ್ಟಲಾರನು.

ಪೂರ್ವೋಕ್ತಗಳಾದ ಅಷ್ಟಾವರಣಗಳನ್ನು ಬಹಿರಂಗ ಮತ್ತು ಅಂತರಂಗ ಅಥವಾ ಸ್ಥೂಲ-ಸೂಕ್ಷ್ಮಭೇದದಿಂದ ಮತ್ತೊಮ್ಮೆ ಎರಡು ವಿಭಾಗ ಮಾಡಲಾಗಿದೆ. ಅವುಗಳಲ್ಲಿ ಬಹಿರಂಗ ಅಷ್ಟಾವರಣಗಳಿಂದ ಸಾಧಕನ ಸ್ಥೂಲಶರೀರ ಮತ್ತು ಅಂತರಂಗ ಅಷ್ಟಾವರಣಗಳಿಂದ ಸೂಕ್ಷ್ಮಶರೀರವು ರಕ್ಷಿಸಲ್ಪಡುತ್ತದೆ. ಆದುದರಿಂದ ವೀರಶೈವರು ಮಾತ್ರವಲ್ಲ ಇತರರೆಲ್ಲರೂ ಸಹ ಎರಡು ಬಗೆಯ ಆವರಣಗಳಿಂದ ತಮ್ಮ ಸ್ಥೂಲ-ಸೂಕ್ಷ್ಮ ಶರೀರಗಳನ್ನು ರಕ್ಷಿಸಿಕೊಳ್ಳುವುದು ಆದ್ಯಕರ್ತವ್ಯ. ಸಾಧಕನು ಸ್ಥೂಲ-ಸೂಕ್ಷ್ಮಶರೀರಗಳನ್ನು ಶಬ್ದಾದಿ ವಿಷಯಗಳಿಂದ ರಕ್ಷಿಸಿಕೊಳ್ಳದಿದ್ದರೆ ಅವನು ತನ್ನ ಗುರಿಯಾದ ಪರಮತತ್ತ್ವ (ಮೋಕ್ಷ)ವನ್ನು ತಲುಪಲು ಯಾವ ರೀತಿಯಲ್ಲಿಯೂ ಸಮರ್ಥನಾಗುವುದಿಲ್ಲ. ಆದುದರಿಂದ ಬೇರೆ ದರ್ಶನಗಳಲ್ಲಿ ದಮದಿಂದ ಬಹಿರಿಂದ್ರಿಯಗಳನ್ನು ಅರ್ಥಾತ್ ಸ್ಥೂಲಶರೀರವನ್ನು ಮತ್ತು ಶಮದಿಂದ ಅಂತರಿಂದ್ರಿಯವನ್ನು ಅರ್ಥಾತ್ ಸೂಕ್ಷ್ಮಶರೀರವನ್ನು ವಿಷಯಗಳಿಂದ ರಕ್ಷಿಸಬೇಕೆಂದು ಉಪದೇಶಿಸಲಾಗಿದೆ. ಸಾಧಿಸಲು ಕಷ್ಟವಾದ ಶಮ-ದಮಗಳಿಂದ ಸಾಧಕನು ಯಾವ ಪ್ರಯೋಜನವನ್ನು ಪಡೆಯುತ್ತಾನೆಯೋ ಅವುಗಳನ್ನು ವೀರಶೈವ ಸಿದ್ಧಾಂತದಲ್ಲಿ ಅಂತರಂಗ-ಬಹಿರಂಗ ಅಷ್ಟಾವರಣಗಳಿಂದ ಸಹಜವಾಗಿ ಪಡೆಯುತ್ತಾನೆ. ಮತ್ತು, ಯೋಗಶಾಸ್ತ್ರದಲ್ಲಿ ಪತಂಜಲಿ ಮಹರ್ಷಿಗಳು ಚಿತ್ತಶುದ್ಧಿಯ ಮೂಲಕ ನಿರ್ಬೀಜವೆಂಬ ಹೆಸರಿನ ಸಂಪ್ರಜ್ಞಾತಸಮಾಧಿಯ ಲಾಭಕ್ಕಾಗಿ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿ ಎಂಬ ಎಂಟು ಯೋಗಾಂಗಗಳನ್ನು

ಪ್ರತಿಪಾದಿಸಿದ್ದಾರೆ. ಇವುಗಳೂ ಕೂಡ ಸಾಧಕನ ಶರೀರ, ಮನಸ್ಸು, ಬುದ್ಧಿ ಮೊದಲಾದವುಗಳನ್ನು ದುಷ್ಟ ಕ್ರಿಯೆಗಳಿಂದ ರಕ್ಷಿಸುವ ಸಾಧನಗಳಾಗಿವೆ. ಆದರೂ ಸಹ ಕಷ್ಟಸಾಧ್ಯಗಳಾದ ಇವುಗಳನ್ನು ಎಲ್ಲ ಜನರು ಸಾಧಿಸಲು ಸುಲಭವಾಗಿರುವುದಿಲ್ಲ. ಆದುದರಿಂದಲೇ ವೀರಶೈವಾಚಾರ್ಯರು ಎಲ್ಲ ಜನಗಳಿಗೆ ಸುಲಭವಾದ ಅಷ್ಟಾವರಣರೂಪದ ಅಷ್ಟಾಂಗಯೋಗಯುಕ್ತವಾದ ಶಿವಯೋಗದ ಮಾರ್ಗವನ್ನು ಉಪದೇಶಿಸಿದ್ದಾರೆ. ಆದುದರಿಂದ ಈ ಅಷ್ಟಾವರಣಗಳು ಶಿವಯೋಗದ ಅಷ್ಟಾಂಗಗಳೆಂದು ಕರೆಯಲ್ಪಟ್ಟಿವೆ. ಮತ್ತು ಶಿವಯೋಗದ ಅಂಗಗಳಾದ ಅಷ್ಟಾವರಣಗಳನ್ನು ಶಿವಯೋಗ ಸಾಧನೆಯಲ್ಲಿ ತೊಡಗಿರುವ ಸಾಧಕನ ಆಧ್ಯಾತ್ಮಿಕ ಅಂಗಗಳೆಂದೂ ಕರೆಯಲಾಗಿದೆ.

ಇಲ್ಲಿ ಪ್ರತಿಪಾದಿಸಲಾಗಿರುವ ಆವರಣಗಳಲ್ಲಿ ಶ್ರೀಗುರು ಮೊದಲನೆಯ ಆವರಣ. ಶಿಷ್ಯನ ಯೋಗಕ್ಷೇಮವನ್ನು ನಿರ್ವಹಿಸುವವನು ಶ್ರೀಗುರುವೇ ಆಗಿದ್ದಾನೆ. ಆದುದರಿಂದ ಗುರುವು ಮೂರು ಬಗೆಯ ದೀಕ್ಷಾಸಂಸ್ಕಾರದಿಂದ ಶಿಷ್ಯನಲ್ಲಿರುವ ಮಲತ್ರಯಗಳನ್ನು ದೂರಮಾಡಿ, ತ್ರಿಕರಣಗಳನ್ನು ಪರಿಶೋಧಿಸಿ, ಉಪಾಸನೆ ಮಾಡಲು ಇಷ್ಟಲಿಂಗವನ್ನು ಅನುಗ್ರಹಿಸುತ್ತಾನೆ. ಅದೇ ರೀತಿಯಲ್ಲಿ ಸೂಕ್ಷ್ಮವೂ, ಅತಿಸೂಕ್ಷ್ಮವೂ ಆದ ಪ್ರಾಣಲಿಂಗ-ಭಾವಲಿಂಗಗಳ ಸ್ವರೂಪವನ್ನು ಉಪದೇಶಿಸಿ, ಅವುಗಳ ಪೂಜಾಪದ್ಧತಿಯನ್ನು ಬೋಧಿಸುತ್ತಾನೆ. ಸದ್ಗುರುವಿನಿಂದ ಸಂಸ್ಕಾರವಂತನಾದ ಶಿಷ್ಯನು ಅವನ ಉಪದೇಶದಂತೆ ಶರೀರದಲ್ಲಿ ಇಷ್ಟಲಿಂಗಪೂಜೆಯನ್ನೂ, ಮನಸ್ಸಿನಿಂದ ಪ್ರಾಣಲಿಂಗಾರ್ಚನೆಯನ್ನು ಮತ್ತು ಬುದ್ಧಿಯಲ್ಲಿ (ಭಾವನೆಯಿಂದ) ಭಾವಲಿಂಗಗಳ ಅನುಸಂಧಾನವನ್ನು ಮಾಡುತ್ತಾ ಸಂಸಾರವೆಂಬ ಕಾಡಿನಲ್ಲಿ ಅಲೆದಾಡುತ್ತಿದ್ದರೂ ಸಹ ಕಾಮಕ್ರೋಧಾದಿ ಕ್ರೂರ ಪ್ರಾಣಿಗಳಿಂದ ಕೊಲ್ಲಲ್ಪಡುವುದಿಲ್ಲ. ದುಷ್ಟಸಂಸ್ಕಾರ ಮತ್ತು ದುರ್ಜನರ ಸಹವಾಸದಿಂದ ಮಾನವನು ದುರಾಚಾರಿಯಾಗಿ ಕಾಮಕ್ರೋಧಾದಿಗಳಿಂದ ಕೂಡಿದವನಾಗಿ ಜನ್ಮ ಜನ್ಮಾಂತರಗಳಲ್ಲಿ ದುಃಖವನ್ನು ಅನುಭವಿಸುತ್ತಲೇ ಇರುತ್ತಾನೆ. ಯಾವಾತನು ಹಿಂದಿನ ಜನ್ಮಗಳಲ್ಲಿ ಮಾಡಿದ ಪುಣ್ಯದ ಫಲದಿಂದ ಸದ್ಗುರುವಿನಲ್ಲಿ ಶರಣಾಗತನಾಗುತ್ತಾನೆಯೋ ಅವನು ಗುರುವಿನಿಂದ ಮಾಡಲ್ಪಡುವ ಸಂಸ್ಕಾರ ಹಾಗೂ ಉಪದೇಶದಿಂದ ದೃಢಮನಸ್ಕನಾಗಿ ಕಾಮಕ್ರೋಧಾದಿಗಳ ವಶನಾಗುವುದಿಲ್ಲ. ಈ ರೀತಿಯಾಗಿ ಸಂಸ್ಕಾರದಿಂದ ಶಿಷ್ಯನನ್ನು ದುರಾಚಾರಗಳಿಂದ ರಕ್ಷಿಸುವ ಕಾರಣದಿಂದ ಗುರುವನ್ನು ಮೊದಲನೆಯ ಆವರಣವೆಂದು ಪರಿಗಣಿಸಲಾಗಿದೆ. ಶ್ರೀಗುರುವು ಉಪದೇಶಿಸಿದ ನೈತಿಕಜ್ಞಾನವು ಅಂತರಂಗದ ಗುರುವಾಗಿ ಅಂತರಂಗದ ಆವರಣವೆನಿಸುತ್ತದೆ. ಅಂತರಂಗದ ಇಂದ್ರಿಯನಿಗ್ರಹವಿಲ್ಲದೆ ಮಾಡುವ ಬಹಿರಿಂದ್ರಿಯನಿಗ್ರಹವು ಮಿಥ್ಯಾಚಾರ ವಾಗುತ್ತದೆ. ಅದನ್ನು ಭಗವದ್ಗೀತೆಯು-

> ಕರ್ಮೇಂದ್ರಿಯಾಣಿ ಸಂಯಮ್ಯ ಯ ಆಸ್ತೇ ಮನಸಾ ಸ್ಮರನ್।
> ಇಂದ್ರಿಯಾರ್ಥಾನ್ ವಿಮೂಢಾತ್ಮಾ ಮಿಥ್ಯಾಚಾರಃ ಸ ಉಚ್ಯತೇ॥[೩೩(ಎ)]

೩೩(ಎ). ಭಗವದ್ಗೀತಾ, ೩.೬

"ಕರ್ಮೇಂದ್ರಿಯಗಳನ್ನು ನಿಯಂತ್ರಿಸಿಕೊಂಡು, ಇಂದ್ರಿಯೋಪಭೋಗ ವಿಷಯಗಳನ್ನು ಮನಸ್ಸಿನಲ್ಲಿ ಸ್ಮರಿಸುತ್ತಿರುವ ಮೂರ್ಖನ ನಡತೆಯನ್ನು ಮಿಥ್ಯಾಚಾರ ಎಂದು ಕರೆಯಲಾಗುತ್ತದೆ." ಆದುದರಿಂದ ಆತ್ಮಸಂಸ್ಕಾರವನ್ನು ಮಾಡಿಕೊಳ್ಳುವ ಮಾನವನು ಎರಡೂ ರೀತಿಯ ಇಂದ್ರಿಯನಿಗ್ರಹಿಯಾಗಿರಬೇಕೆಂದು ಭಾವಿಸಬೇಕು. ಗುರುಸಾನ್ನಿಧ್ಯವು ಪ್ರಾಪ್ತವಾದರೂ ಕೂಡ ಇಂದ್ರಿಯನಿಗ್ರಹದಿಂದುಂಟಾಗುವ ದೃಢವಾದ ಜ್ಞಾನವಿಲ್ಲದಿದ್ದರೆ ಮನಸ್ಸಿನ ಏಕಾಗ್ರತೆಯು ಸಂಭವಿಸುವುದಿಲ್ಲ. ಆದುದರಿಂದ ತನ್ನ ಸಮೀಪವಿರುವ ಶಿಷ್ಯನ ಸ್ಥೂಲಶರೀರವನ್ನು ರಕ್ಷಿಸುವವನು ಗುರು ಮತ್ತು ಗುರುವಿನ ಉಪದೇಶದಿಂದ ಪ್ರಾಪ್ತವಾಗುವ ದೃಢವಾದ ನೈತಿಕಜ್ಞಾನವು ಮನಸ್ಸು, ಬುದ್ಧಿಗಳನ್ನು ರಕ್ಷಿಸುತ್ತದೆ ಎಂದು ನಿರ್ಧಾರವಾಗುತ್ತದೆ.

ಸದ್ಗುರುವಿನಿಂದ ಸಂಸ್ಕಾರಗೊಂಡು ಪ್ರಾಣಪ್ರತಿಷ್ಠಾಪನೆಯ ಮೂಲಕ ಕೊಡಲ್ಪಡುವ ಇಷ್ಟಲಿಂಗವನ್ನು ದೀಕ್ಷಾಸಂಪನ್ನರಾದ ವೀರಶೈವರೆಲ್ಲರೂ ಯಾವಾಗಲೂ ತಮ್ಮ ವಕ್ಷಃಸ್ಥಲದಲ್ಲಿ ಧರಿಸಬೇಕು. ಆ ಕಾರಣದಿಂದಲೂ ಸಹ ಸಾಧಕನು ದುರಾಚಾರಗಳಿಂದ ರಕ್ಷಿಸಲ್ಪಡುತ್ತಾನೆ. ಆದುದರಿಂದ ಲಿಂಗವನ್ನು ಎರಡನೆಯ ಆವರಣವೆಂದು ಪರಿಗಣಿಸಲಾಗಿದೆ. ಈ ವಿಷಯದಲ್ಲಿ ಹೀಗೆ ಅಭಿಪ್ರಾಯಪಡಬಹುದು- ನಿಷಿದ್ಧ ವಿಷಯಗಳನ್ನು ಬಯಸುವುದು ಮನುಷ್ಯನ ಸಾಮಾನ್ಯವಾದ ಸ್ವಭಾವ. ದುರ್ನಡತೆಯಿಂದ ಕೂಡಿರುವ ಮನುಷ್ಯನು ತನ್ನ ದುರಾಚಾರಗಳನ್ನು ಮುಚ್ಚಿಡಲು ಬಯಸುತ್ತಾನಷ್ಟೆ. ಈ ಕಾರಣದಿಂದಲೇ ತನ್ನ ದುರಾಚಾರಗಳ ಪ್ರಕಟಣೆಯಿಂದ ಸಾಮಾಜಿಕ ಜೀವನದಲ್ಲಿ ಕಳಂಕಬರುತ್ತದೆಯೆಂಬುದೇ ಕಾರಣವಾಗಿದೆ. ಆದುದರಿಂದ ಲೌಕಿಕ ಪ್ರತಿಷ್ಠೆಗಳನ್ನು ರಕ್ಷಿಸಿಕೊಳ್ಳುವ ಸಲುವಾಗಿ ಕಪಟತನವನ್ನು ಆಶ್ರಯಿಸಲಾಗುತ್ತದೆ. ತನ್ನ ದುರಾಚಾರಗಳು ಬೇರೆಯವರಿಗೆ ಗೊತ್ತಿಲ್ಲದಿದ್ದರೂ ಸಹ ತನಗೆ ತಿಳಿದಿರಲೇಬೇಕಷ್ಟೆ. ಯಾವ ಒಬ್ಬ ವ್ಯಕ್ತಿಯು ಮಾಡುವ ದುರಾಚಾರಗಳು ತನಗೇ ತಿಳಿದಿರುವುದಿಲ್ಲ ಎಂದು ಹೇಳುವ ವ್ಯಕ್ತಿಯು ಇಲ್ಲಿಯವರೆಗೂ ಹುಟ್ಟಿರುವುದಿಲ್ಲ. ಯಾವ ಸಂದರ್ಭದಲ್ಲಿ ಮನಸ್ಸಿನೊಂದಿಗೆ ಕಪಟ ವ್ಯವಹಾರವು ನಡೆಯುವುದಿಲ್ಲವೋ ವಿಶ್ವವ್ಯಾಪಕನಾದ ಭಗವಂತನು ಹೇಗೆ ತಾನೆ ಅದನ್ನು ರಹಸ್ಯವಾಗಿಡಲು ಸಮರ್ಥನಾಗುತ್ತಾನೆ? ವೀರಶೈವರು ಶರೀರದ ಮೇಲೆ ಧರಿಸುವ ಇಷ್ಟಲಿಂಗವು ತಮ್ಮ ಅಂತರಂಗದಲ್ಲಿರುವ ಆತ್ಮರೂಪಿ ಭಗವಂತನ ರೂಪವುಳ್ಳದ್ದಾಗಿದೆ. ಪ್ರಪಂಚದಲ್ಲಿ ಮನುಷ್ಯನು ಬೇರೊಬ್ಬ ಮನುಷ್ಯನ ಎದುರಿನಲ್ಲಿ ದುರಾಚಾರವನ್ನು ಮಾಡಲು ಬಯಸುವುದಿಲ್ಲವಾದರೂ ಕೂಡ ಭಗವಂತನ ಸಾನ್ನಿಧ್ಯದಲ್ಲಿ ಸಾಧಕನು ಶಾಸ್ತ್ರಗಳು ನಿಷೇಧಿಸಿರುವ ವಿಷಯಗಳನ್ನು ಅನುಭವಿಸಲು ಹೇಗೆ ತಾನೆ ಮುಂದಾಗುತ್ತಾನೆ?

ಮತ್ತು ನಮ್ಮ ಪ್ರಕಟರೂಪದ ಸದಾಚಾರ ಮತ್ತು ಗುಪ್ತರೂಪದ ದುರಾಚಾರಗಳಿಗೆ ಪಂಚಮಹಾಭೂತಗಳು, ಸೂರ್ಯ-ಚಂದ್ರರು, ದಿಕ್ಪಾಲಕರು, ಎಲ್ಲೆಡೆ ವ್ಯಾಪಿಸಿರುವ ಭಗವಂತ -ಮೊದಲಾದವರೆಲ್ಲರೂ ಸಾಕ್ಷಿಗಳಾಗಿದ್ದಾರೆ. ಈ ಪರಿಜ್ಞಾನವಿಲ್ಲದೆ ನಮ್ಮ

ದುರಾಚಾರಗಳು ಯಾರಿಗೂ ಸಹ ತಿಳಿಯುವುದಿಲ್ಲವೆಂದು ಭಾವಿಸಿ ಮತ್ತೆ ಮತ್ತೆ ದುರಾಚಾರಗಳನ್ನು ಮಾಡುವ ಮನುಷ್ಯನು ಪತಿತನಾಗುತ್ತಾನಷ್ಟೆ.

ಸನ್ನಿಧಾನಕರ್ತೃತ್ವ ಮತ್ತು ಸಂಕಲ್ಪಕರ್ತೃತ್ವವೆಂದು ಭಗವಂತನ ಎರಡು ಬಗೆಯ ಸಾಮರ್ಥ್ಯಗಳನ್ನು ಶಾಸ್ತ್ರಗಳಲ್ಲಿ ವರ್ಣಿಸಲಾಗಿದೆ. ಕೇವಲ ಸನ್ನಿಧಾನದಿಂದ (ಹತ್ತಿರದಲ್ಲಿದ್ದು ಕೊಂಡು) ಕಾರ್ಯವನ್ನು ಸಾಧಿಸುವುದು ಸನ್ನಿಧಾನಕರ್ತೃತ್ವ[೩೪] ಮತ್ತು ಸಂಕಲ್ಪದಿಂದ ಕಾರ್ಯವನ್ನು ಸಾಧಿಸುವುದು ಸಂಕಲ್ಪಕರ್ತೃತ್ವ ಎನಿಸುತ್ತದೆ.[೩೫] ಸೂರ್ಯನ ಸಾನ್ನಿಧ್ಯದಿಂದ ಕಮಲವು ಅರಳುತ್ತದೆ ಕೆಸರು ಒಣಗಿಹೋಗುತ್ತದೆ. ಇಲ್ಲಿ ಕಮಲದ ಅರಳುವಿಕೆಯಲ್ಲಿ ಮತ್ತು ಕೆಸರಿನ ಒಣಗುವಿಕೆಯಲ್ಲಿ ಸೂರ್ಯನ ಸಂಕಲ್ಪವು ಕಾರಣವಾಗಿರುವುದಿಲ್ಲ. ಆದರೆ ಅವನ ಸಾನ್ನಿಧ್ಯ ಮಾತ್ರದಿಂದಲೇ ಎಲ್ಲವೂ ಸಂಭವಿಸಿವೆ.

ಚಂದ್ರಕಾಂತೇ ಯಥಾ ತೋಯಂ ಸೂರ್ಯಕಾಂತೇ ಯಥಾಽನಲಃ।
ಬೀಜೇ ಯಥಾಂಕುರಃ ಸಿದ್ಧಃ ತಥಾಽಽತ್ಮನಿ ಶಿವಃ ಸ್ಥಿತಃ॥[೩೬]

"ಚಂದ್ರಕಾಂತಶಿಲೆಯಲ್ಲಿ ನೀರು, ಸೂರ್ಯಕಾಂತಶಿಲೆಯಲ್ಲಿ ಅಗ್ನಿ ಮತ್ತು ಬೀಜದಲ್ಲಿ ಮೊಳಕೆಯು ಹೇಗೆ ಸ್ವಾಭಾವಿಕವಾಗಿವೆಯೋ ಹಾಗೆಯೇ ಜೀವನಲ್ಲಿ ಪರಶಿವನು ಸಹಜ ವಾಗಿರುವರು."

ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ।
ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ॥[೩೭]

"ಎಲೈ ಅರ್ಜುನ, ಭಗವಂತನು ಎಲ್ಲ ಜೀವಿಗಳ ಹೃದಯದಲ್ಲಿ ನೆಲೆಸಿದ್ದಾನೆ ಮತ್ತು ತನ್ನ ಮಾಯೆಯಿಂದ ಯಂತ್ರದ ಮೇಲೆ ಕುಳಿತವರಂತೆ ಇರುವ ಎಲ್ಲ ಪ್ರಾಣಿಗಳನ್ನು ಸುತ್ತುವಂತೆ ಮಾಡುತ್ತಾನೆ." ಮೊದಲಾದ ಪ್ರಮಾಣವಾಕ್ಯಗಳಿಂದ ಮಾನವನ ಹೃದಯದಲ್ಲಿ ಭಗವಂತನು ಸಾನ್ನಿಧ್ಯವನ್ನು (ನೆಲೆಸಿರುವುದನ್ನು) ಪ್ರತಿಪಾದಿಸಲಾಗಿದೆ. ಈ ವಿಷಯದಲ್ಲಿ ಈ ಜಿಜ್ಞಾಸೆಯು ಉಂಟಾಗಬಹುದು- ಅದು ಏನೆಂದರೆ ಭಗವಂತನ ಸಾನ್ನಿಧ್ಯವು ಹೃದಯದಲ್ಲಿದ್ದರೂ ಸಹ ಮಾನವನ ದುರಾಚಾರಗಳು ಹೇಗೆ ತಾನೆ ನಿವಾರಣೆಯಾಗುವುದಿಲ್ಲ? ಎಂದು. ಆ ಜಿಜ್ಞಾಸೆಗೆ ಹೀಗೆ ಸಮಾಧಾನ ಹೇಳಬಹುದು- ಈ ಜಗತ್ತಿನಲ್ಲಿ ಜಡ ಮತ್ತು ಚೇತನ ಎಂಬ ಭೇದದಿಂದ ಎರಡು ಪದಾರ್ಥಗಳಿವೆ. ಇಲ್ಲಿ ತಾನು ಮತ್ತು ಇನ್ನೊಬ್ಬ ಎಂಬ ಜ್ಞಾನವಿಲ್ಲವಾದುದು ಜಡ. ಅದಕ್ಕೆ

---

[೩೪] ಸಾಂಖ್ಯಸಿದ್ಧಾಂತದಲ್ಲಿ ಸ್ನನಿಧಾನಕರ್ತೃತ್ವವನ್ನು ಅಂಗೀಕರಿಸಲಾಗಿದೆ. ಅಲ್ಲಿ ಪುರುಷನು ಹತ್ತಿರದಲ್ಲಿರುವುದರಿಂದ ಪ್ರಕೃತಿಯೇ ಸೃಷ್ಟಿಯೇ ಮೊದಲಾದ ಕಾರ್ಯಗಳನ್ನು ನೆರವೇರಿಸುತ್ತದೆ.

[೩೫] "ತದೈಕ್ಷತ ಬಹು ಸ್ಯಾಂ ಪ್ರಜಾಯೇಯ" -ಛಾ.ಉ, ೬-೨-೩

[೩೬] ಸಿ.ಶಿ, ೫.೩೪

[೩೭] ಭಗವದ್ಗೀತಾ, ೧೮.೬೧

ವಿಪರೀತವಾದುದು ಚೇತನ. ಜಡಪದಾರ್ಥಗಳಿಗೆ ಪುರುಷಾರ್ಥಗಳಿಲ್ಲದಿರುವುದರಿಂದ ಅವುಗಳಲ್ಲಿ ಬದಲಾವಣೆಯು ಸಹಜವಾಗಿಯೇ ಆಗುತ್ತದೆ. ಮನುಷ್ಯನು ಚೇತನವುಳ್ಳವನು ಮತ್ತು ಪುರುಷಾರ್ಥಗಳನ್ನು ಅಪೇಕ್ಷಿಸುತ್ತಾನೆ. ಆದುದರಿಂದ ಮನುಷ್ಯನ ಬದಲಾವಣೆಯು ಅವನ ಪ್ರಯತ್ನವನ್ನು ಬಯಸುತ್ತದೆ.

ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರು ತರಗತಿಗಳಲ್ಲಿ ಇಲ್ಲದಿರುವಾಗ ಮಕ್ಕಳು ಪರಸ್ಪರ ಜಗಳವಾಡುವುದು ಕಂಡುಬರುತ್ತದೆ. ಆ ಸಂದರ್ಭದಲ್ಲಿ ಶಿಕ್ಷಕನು ಆಗಮಿಸಿದರೂ ಕೂಡ ಒಂದು ವೇಳೆ ಮರೆಯಲ್ಲಿ ನಿಂತರೆ, ಅಲ್ಲಿ ಶಿಕ್ಷಕನು ಇರುವುದನ್ನು ತಿಳಿಯದ ಮಕ್ಕಳು ಜಗಳವಾಡುವುದನ್ನು ನಿಲ್ಲಿಸುವುದಿಲ್ಲ. ಆದರೆ ಶಿಕ್ಷಕನು ಅವರ ದೃಷ್ಟಿಗೆ ಬೀಳುತ್ತಿದ್ದಂತೆಯೇ, ಶಿಕ್ಷಕನ ಸಾನ್ನಿಧ್ಯವನ್ನು ಅರಿತ ಮಕ್ಕಳು ಕೂಡಲೇ ಜಗಳವನ್ನು ನಿಲ್ಲಿಸಿ ಮೌನವಾಗುತ್ತಾರೆ. ಇದರಿಂದ ಸ್ಪಷ್ಟವಾಗುವುದೇನೆಂದರೆ ಚೈತನ್ಯವುಳ್ಳ ಪದಾರ್ಥಗಳಿಗೆ ಬದಲಾವಣೆಯನ್ನು ಹೊಂದಲು ಭಗವಂತನ ಸಾನ್ನಿಧ್ಯವು ಮಾತ್ರ ಸಾಲದು. ಆದರೆ ಭಗವಂತನ ಸಾನ್ನಿಧ್ಯದ ಜ್ಞಾನವೂ ಸಹ ಆವಶ್ಯಕ. ಆದುದರಿಂದ ಎಲ್ಲ ಮಾನವರ ಹೃದಯದಲ್ಲಿ ಭಗವಂತನ ಸಾನ್ನಿಧ್ಯವು ಒಂದೇ ರೀತಿಯಾಗಿದ್ದರೂ ಸಹ ಯಾರು ಅದರ ಅಸ್ತಿತ್ವವನ್ನು ತಿಳಿದಿರುತ್ತಾರೆಯೋ, ಅಂತಹವರು (ಭಗವಂತನ ಸಾನ್ನಿಧ್ಯದ) ಹೆದರಿಕೆಯಿಂದ ದುರಾಚಾರಗಳಿಂದ ದೂರವಿರುತ್ತಾರೆ. ಯಾರು ಅದನ್ನು ತಿಳಿದಿರುವುದಿಲ್ಲವೋ, ಅಂತಹವರು ಹೆದರಿಕೆಯಿಲ್ಲದೆ ಮತ್ತೆ ಮತ್ತೆ ದುರಾಚಾರಗಳನ್ನು ಎಸಗುತ್ತಾರೆ.

ಆದುದರಿಂದಲೇ ವೀರಶೈವಾಚಾರ್ಯರು ಸಾಧಕರಿಗೆ ಇಷ್ಟಲಿಂಗವನ್ನು ಪ್ರದಾನ ಮಾಡಿ, ಹೃದಯದ ಮೇಲ್ಭಾಗದಲ್ಲಿ ಅದನ್ನು ಧರಿಸಬೇಕೆಂದು ಆದೇಶಿಸಿ ಹೃದಯದಲ್ಲಿರುವ ಭಗವಂತನ ತಿಳುವಳಿಕೆಯನ್ನು ಮಾಡಿದ್ದಾರೆ. ಈ ರೀತಿಯಾಗಿ ಬಹಿರಂಗದಲ್ಲಿ ಧರಿಸುವ ಈ ಇಷ್ಟಲಿಂಗವು ಪ್ರತಿಯೊಂದು ಕ್ಷಣವೂ ಹೃದಯದಲ್ಲಿ ನೆಲೆಸಿರುವ ಭಗವಂತನ ಸಾನ್ನಿಧ್ಯವನ್ನು ಜ್ಞಾಪಿಸುತ್ತಾ, ಉತ್ತಮ ನಡತೆಯುಳ್ಳ ತನ್ನಲ್ಲಿಯೇ ಭಗವಂತನಿದ್ದಾನೆಂಬ ಭೀತಿಯ ಮೂಲಕ ಯಾವಾಗಲೂ ಸಾಧಕನನ್ನು ರಕ್ಷಿಸುತ್ತದೆ ಎಂಬ ಕಾರಣದಿಂದ ಲಿಂಗವು ಬಹಿರಂಗದ ಎರಡನೆಯ ಆವರಣವಾಗುತ್ತದೆ. ಈ ಪ್ರಕಾರವಾಗಿ ಇಲ್ಲಿ ನಿರೂಪಿತವಾದ ಇಷ್ಟಲಿಂಗೋಪಾಸನೆಯಿಂದ ಕಣ್ಣುಗಳು, ಪ್ರಾಣಲಿಂಗೋಪಾಸನೆಯಿಂದ ಮನಸ್ಸು ಮತ್ತು ಭಾವಲಿಂಗೋಪಾಸನೆಯಿಂದ ಬುದ್ಧಿಯು ಪವಿತ್ರವಾಗಲು, ಸಾಧಕನು ತ್ರಿಕರಣ ಶುದ್ಧನಾಗುತ್ತಾನೆ. ಇಂದ್ರಿಯ, ಮನಸ್ಸು, ಬುದ್ಧಿಗಳ ನೈರ್ಮಲ್ಯಕ್ಕೆ ಕಾರಣಗಳಾದ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳು ಸಂಸಾರದ ವಿಷಯಗಳಿಂದ ಸಾಧಕನ ರಕ್ಷಕವಾಗಿವೆ ಎಂಬ ಕಾರಣದಿಂದ ಇವುಗಳು ರಕ್ಷಾಕವಚರೂಪದ ಆವರಣ ಶಬ್ದದಿಂದ ಕರೆಯಲ್ಪಟ್ಟಿವೆ ಎಂದು ತಿಳಿಯಬೇಕು. ಅವುಗಳಲ್ಲಿಯೂ ಇಷ್ಟಲಿಂಗವು ಸ್ಥೂಲಶರೀರದ, ಪ್ರಾಣಲಿಂಗವು ಸೂಕ್ಷ್ಮಶರೀರದ ಮತ್ತು ಭಾವಲಿಂಗವು ಕಾರಣಶರೀರದ ಆವರಣವೆಂದು ಅರಿಯಬೇಕು.

ಜಂಗಮವು ಸಾಧಕನ ಮೂರನೆಯ ಆವರಣವಾಗಿದೆ. ಜಂಗಮ[೩೮] ಎಂದರೆ ವೀರಮಾಹೇಶ್ವರ ವಂಶದಲ್ಲಿ ಜನಿಸಿದ, ಶಿವಜ್ಞಾನಸಂಪನ್ನನಾದ ಸ್ವಯ, ಚರ ಮತ್ತು ಪರ ಎಂಬ ಮೂರು ಅವಸ್ಥೆಯುಳ್ಳವನೂ, ಯಾವುದಾದರೂ ಒಂದು ವೀರಶೈವ ಗುರುವರ್ಗಮಠದಲ್ಲಿ ಚರಪಟ್ಟಾಧಿಕಾರಿಯಾಗಿ ಅಭಿಷಿಕ್ತನಾಗಿರುವ ಜೀವನ್ಮುಕ್ತನಾದ ಮಹಾಪುರುಷನು. ಈತನು ಎಲ್ಲೆಡೆಯೂ ಸಂಚಾರ ಮಾಡುತ್ತಾ ಭಕ್ತರಿಗೆ ಮತ್ತು ಮುಮುಕ್ಷುಗಳಿಗೆ ವೀರಶೈವಾಚಾರ ಹಾಗೂ ಶಿವಜ್ಞಾನವನ್ನು ಬೋಧಿಸುತ್ತಾ ಕಾಮಕ್ರೋಧಾದಿ ಅರಿಷಡ್ವರ್ಗಗಳಿಂದ ಅವರನ್ನು ರಕ್ಷಿಸುತ್ತಾನೆ ಎಂಬ ಕಾರಣದಿಂದ ಜಂಗಮನೂ ಸಹ ಆವರಣವೆಂದು ಪರಿಗಣಿಸಲಾಗಿದೆ. ಲೋಕಕಲ್ಯಾಣಾರ್ಥವಾಗಿ ಸಂಚಾರ ಮಾಡುವ ಈತನು ಸಾಕ್ಷಾತ್ ಶಿವಸ್ವರೂಪಿ[೩೯] ಎಂದು ವೀರಶೈವರ ಭಾವನೆಯಾಗಿದೆ. ಜ್ಞಾನಗಳಲ್ಲಿ ತತ್ತ್ವಜ್ಞಾನವೇ ಶ್ರೇಷ್ಠವಾದುದು. ಆದುದರಿಂದಲೇ "ಅಧ್ಯಾತ್ಮವಿದ್ಯಾ ವಿದ್ಯಾನಾಮ್"[೪೦] (ವಿದ್ಯೆಗಳಲ್ಲಿ ಅಧ್ಯಾತ್ಮವಿದ್ಯೆಯು ಶ್ರೇಷ್ಠವಾದುದು) ಎಂದು ಹೇಳಲಾಗಿದೆ. ತತ್ತ್ವಜ್ಞಾನದಿಂದಲೇ ಮಾನವನು ಸಂಪೂರ್ಣನಾಗುತ್ತಾನೆ ಮತ್ತು ಶೋಕಸಾಗರವನ್ನು ದಾಟುತ್ತಾನೆ.[೪೧] ಹೀಗೆ ಜ್ಞಾನಾಮೃತದಿಂದ ತೃಪ್ತನಾದ ತತ್ತ್ವಜ್ಞನನ್ನು ವಿಷಯಗಳೆಂಬ ಮರೀಚಿಕೆಯು ಹೆದರಿಸುವುದಿಲ್ಲ. ಈ ಬಗೆಯ ತತ್ತ್ವನಿಷ್ಠನಾದ ಜಂಗಮನು ಮುಮುಕ್ಷುಗಳಾದ ಸಾಧಕರಿಗೆ ತತ್ತ್ವಜ್ಞಾನವನ್ನೂ ಮತ್ತು ಭಕ್ತರಾದ ಸಾಧಕರಿಗೆ ಆಚಾರಜ್ಞಾನವನ್ನು ಉಪದೇಶಿಸುತ್ತಾನೆ. ಅಧ್ಯಾತ್ಮಜ್ಞಾನವಿಲ್ಲದೆ ಮಾಡುವ ಆಚಾರವು ಯಾವಾಗಲಾದರೂ ನಿಷ್ಫಲವಾಗುತ್ತದೆ. ಅದು ಹೇಗೆಂದರೆ ಶುದ್ಧವಾದ ನೀರಿನಿಂದ ಸ್ನಾನಮಾಡಿದ ಎಮ್ಮೆ ಮೊದಲಾದ ಪ್ರಾಣಿಗಳು, ಅದರ ಜ್ಞಾನವಿಲ್ಲದ ಕಾರಣದಿಂದ ಮತ್ತೊಮ್ಮೆ ಹೇಗೆ ಕೆಸರಿನಲ್ಲಿ ಮುಳುಗುತ್ತವೆಯೋ ಹಾಗೆಯೇ ಆಚಾರದ ರಹಸ್ಯವನ್ನು ತಿಳಿಯದ ಭಕ್ತನು ಯಾವಾಗಲಾದರೊಮ್ಮೆ ದುಷ್ಟನಡತೆಯಿಂದ ಪಾಪವೆಂಬ ಕೆಸರಿನಲ್ಲಿ ಮುಳುಗುತ್ತಾನಲ್ಲವೇ? ಆದುದರಿಂದ ಸಮಾಜದಲ್ಲಿ ಭಕ್ತರಿಗೆ ಆಚಾರದ ಜ್ಞಾನೋಪದೇಶಮಾಡಲು ಮತ್ತು ಮುಮುಕ್ಷುಗಳಿಗೆ ತತ್ತ್ವಜ್ಞಾನವನ್ನು ಬೋಧಿಸಲು ಆಚಾರವಂತರ ತತ್ತ್ವಜ್ಞಾನದ ಅವಶ್ಯಕತೆಯಿದೆ. ವೀರಶೈವಸಮಾಜದಲ್ಲಿ ಆ ಕಾರ್ಯವನ್ನು ಜಂಗಮನು ನೆರವೇರಿಸುತ್ತಾನೆ. ಸಾಧನಮಾರ್ಗದಲ್ಲಿ ಪ್ರವೃತ್ತನಾದ ಸಾಧಕನು ಎಡವಬಾರದೆಂದು ಕರುಣೆಯಿಂದ ಈ ಜಂಗಮನು-

---

[೩೮] ಜಾನಂತ್ಯತಿಶಯಾದ್ ಯೇ ತು ಶಿವಂ ವಿಶ್ವಪ್ರಕಾಶಕಮ್।
ಸ್ವಸ್ವರೂಪತಯಾ ತೇ ತು ಜಂಗಮಾ ಇತಿ ಕೀರ್ತಿತಾಃ॥ -ಸಿ.ಶಿ, ೧೧.೩೬

[೩೯] ಸರ್ವಲೋಕೋಪಕಾರಾಯ ಯೋ ದೇವಃ ಪರಮೇಶ್ವರಃ।
ಚರತ್ಯತಿಥಿರೂಪೇಣ ನಮಸ್ತೇ ಜಂಗಮಾತ್ಮನೇ॥ -ವೀ.ಚಿ, ೩.೩

[೪೦] ಭಗವದ್ಗೀತಾ, ೧೦.೩೨

[೪೧] "ತರತಿ ಶೋಕಮಾತ್ಮವಿತ್" -ಛಾಂದೋಗ್ಯೋಪನಿಷತ್, ೭-೧-೩

ಕಾಮಃ ಕ್ರೋಧಶ್ಚ ಲೋಭಶ್ಚ ದೇಹೇ ತಿಷ್ಠಂತಿ ತಸ್ಕರಾಃ।
ಜ್ಞಾನರತ್ನಾಪಹಾರಾಯ ತಸ್ಮಾಜ್ಜಾಗ್ರತ ಜಾಗ್ರತ॥

"ಜ್ಞಾನವೆಂಬ ರತ್ನವನ್ನು ಅಪಹರಿಸಲು ಕಾಮ, ಕ್ರೋಧ, ಲೋಭವೆಂಬ ಕಳ್ಳರು ದೇಹದಲ್ಲಿದ್ದಾರೆ. ಆದುದರಿಂದ ಎಚ್ಚರ, ಎಚ್ಚರ" ಇತ್ಯಾದಿಯಾಗಿ ಭಕ್ತರಿಗೆ, 'ತತ್ತ್ವಮಸಿ'[೪೨] ಮುಂತಾದ ಮಹಾವಾಕ್ಯಗಳಿಂದ ಮುಮುಕ್ಷುಗಳಿಗೆ ಬೋಧಿಸುತ್ತಾ ಅರಿಷಡ್ವರ್ಗ ಮತ್ತು ಅಜ್ಞಾನದಿಂದ ಅವರನ್ನು ಜಂಗಮನು ಸಂರಕ್ಷಿಸುತ್ತಾನೆ ಎಂದು ನಿರೂಪಿಸಲಾಗಿದೆ.

ಅಷ್ಟಾವರಣಗಳಲ್ಲಿ ಪಾದೋದಕವು[೪೨(ಎ)] ನಾಲ್ಕನೆಯ ಆವರಣ. ಇದು ಗುರು ಪಾದೋದಕ, ಲಿಂಗಪಾದೋದಕ ಮತ್ತು ಜಂಗಮಪಾದೋದಕವೆಂದು ಮೂರು ವಿಧವಾಗಿದೆ. ಗುರುವಿನ ಪಾದಪೂಜೆಯಿಂದ ಪ್ರಾಪ್ತವಾದುದು ಗುರುಪಾದೋದಕ, ಜಂಗಮನ ಪಾದಪೂಜೆಯಿಂದ ಲಬ್ಧವಾದುದು ಜಂಗಮಪಾದೋದಕ ಮತ್ತು ಇಷ್ಟಲಿಂಗಪೂಜೆಯಿಂದ ಪ್ರಾಪ್ತವಾದುದು ಲಿಂಗಪಾದೋದಕ ಎನಿಸಿವೆ. ಪರಮಪಾವನಗಳಾದ ಮೂರು ಬಗೆಯ ಪಾದೋದಕಗಳನ್ನು ಸಾಕ್ಷಾತ್ ಆಚಾರದಿಂದಲೋ ಅಥವಾ ಸಂಬಂಧಾಚಾರದಿಂದಲೋ ಪ್ರತಿನಿತ್ಯವೂ ಸೇವಿಸುವುದರಿಂದ ಸ್ಥೂಲ, ಸೂಕ್ಷ್ಮ, ಕಾರಣಗಳೆಂಬ ಮೂರು ಶರೀರಗಳು ಶುದ್ಧವಾಗುತ್ತವೆ. ಇದೇ ರೀತಿಯಾಗಿ ಶರೀರ, ಇಂದ್ರಿಯ, ಮನಸ್ಸು ಮತ್ತು ಬುದ್ಧಿಗಳು ಪರಿಶುದ್ಧವಾಗಿ ಅವುಗಳಲ್ಲಿ ನೆಲೆಸಿರುವ ಜೀವಾತ್ಮನು ಎಂದಿಗೂ ಕೆಟ್ಟ ಮಾರ್ಗದಲ್ಲಿ ಪ್ರವೃತ್ತನಾಗಲಾರನು. ಹೀಗೆ ಪಾದೋದಕವು ಮನಸ್ಸಿನ ಅನಿಷ್ಟಗಳ ಚಿಂತನೆಯ ರೂಪದ ದೋಷಗಳನ್ನು ಮತ್ತು ಈ ಹಿಂದೆ ಮಾಡಿರುವ ದುಷ್ಕರ್ಮಗಳನ್ನು ನಾಶಗೊಳಿಸುವುದರಿಂದ ಹುಟ್ಟು-ಸಾವುಗಳೆಂಬ ಸಂಸಾರ ಬಂಧನವನ್ನು ದಹಿಸಿ, ಪರಮಜ್ಞಾನವನ್ನು ನೀಡುವುದರಿಂದ ಶಿವಭಕ್ತನನ್ನು ಸದಾ ರಕ್ಷಿಸುತ್ತದೆ. ಮಾನವರಿಂದ ದುರ್ಭೇದ್ಯವಾದ ಅಹಂಕಾರವೂ ಕೂಡ ಪಾದೋದಕ ಸೇವನೆಯಿಂದ ಸಹಜವಾಗಿ ನಿವಾರಣೆಯಾಗುತ್ತದೆ.

ಇದರ ರಹಸ್ಯವಿಷ್ಟು- ಅಭಿಮಾನವು ಮನುಷ್ಯನ ಅಧಃಪತನಕ್ಕೆ ಕಾರಣವು. ಆದುದರಿಂದಲೇ ಅಭಿಮಾನವನ್ನು ಮದ್ಯಪಾನವೆಂದು ಕರೆಯಲಾಗಿದೆ. ಮದ್ಯಪಾನ ಮಾಡಿರುವ ಮನುಷ್ಯನು ರಸ್ತೆಯಲ್ಲಿ ಸಂಚರಿಸುವಾಗ ಕ್ಷಣಕ್ಷಣವೂ ಹೇಗೆ ಬೀಳುವಂತೆ ಕಾಣಿಸುತ್ತಾನೆಯೋ ಹಾಗೆಯೇ ಅಭಿಮಾನವುಳ್ಳ ಸಾಧಕನು ಸಾಧನಮಾರ್ಗದಿಂದ ಬೀಳುವುದು ನಿಶ್ಚಯವೇ ಸರಿ. ಇಂತಹ ಪತನದಿಂದ ಸಾಧಕನನ್ನು ರಕ್ಷಿಸುತ್ತದೆ ಎಂಬ ಕಾರಣದಿಂದ ಪಾದೋದಕಸೇವನೆಯನ್ನು ವೀರಶೈವಸಿದ್ಧಾಂತದಲ್ಲಿ ಉಪದೇಶಿಸಲಾಗಿದೆ. ಅಭಿಮಾನವಶವರ್ತಿಯಾದ ಮನುಷ್ಯನು ಯಾರಿಗೂ ನಮಸ್ಕರಿಸುವುದಿಲ್ಲ.

---

೪೨. ಛಾ.ಉ, ೬-೮-೭

೪೨(ಎ). ಪಾಕಾರಃ ಪರಮಂ ಜ್ಞಾನಂ ದೋಕಾರೋ ದೋಷನಾಶನಃ।
ದಕಾರೋ ಜನ್ಮ ದಹತಿ ಕಕಾರಃ ಕರ್ಮನಾಶನಃ॥ -ವೀ.ಚ, ಪೃ. ೧೧೫

ಪ್ರಣಾಮವನ್ನು ಮಾಡುವುದೇ ಅಭಿಮಾನವನ್ನು ನಿವಾರಣೆಮಾಡುವ ಅಮೋಘ ಅಸ್ತ್ರವು. ಅದು ಅಷ್ಟಾಂಗ, ಪಂಚಾಂಗ, ತ್ರ್ಯಂಗ ಮತ್ತು ಏಕಾಂಗ ಪ್ರಣಾಮವೆಂದು ನಾಲ್ಕು ವಿಧವಾಗಿದೆ.[೪೩] ಕೇವಲ ಶಿರಸ್ಸಿನಿಂದ ಮಾಡುವ ಪ್ರಣಾಮವು ಏಕಾಂಗ ವೆನಿಸುತ್ತದೆ, ತಲೆಬಾಗಿಸಿ, ಎರಡೂ ಕೈಗಳನ್ನು ಜೋಡಿಸಿ ಮಾಡುವ ಪ್ರಣಾಮವು ತ್ರ್ಯಂಗ ಪ್ರಣಾಮವು. ಶಿರಸ್ಸು, ಎರಡೂ ಕೈಗಳು ಮತ್ತು ಎರಡೂ ಮಂಡಿಗಳಿಂದ ಭೂಮಿಯನ್ನು ಸ್ಪರ್ಶಿಸುತ್ತಾ ಮಾಡುವ ಪ್ರಣಾಮವು ಪಂಚಾಂಗಪ್ರಣಾಮ ಎನಿಸುತ್ತದೆ. ಅಷ್ಟಾಂಗಪ್ರಣಾಮವು ದಂಡಪ್ರಣಾಮ ಮತ್ತು ಕೇವಲಪ್ರಣಾಮವೆಂದು ಎರಡು ವಿಧವಾಗಿದೆ.[೪೪] ಎರಡು ಕಾಲುಗಳು, ಎರಡು ತೋಳುಗಳು, ಎದೆ, ಶಿರಸ್ಸು, ಮಾತು ಮತ್ತು ನೋಟದಿಂದ ನಮಸ್ಕರಿಸುವುದು ದಂಡಪ್ರಣಾಮ; ಮತ್ತು ಶಿರಸ್ಸು, ಎರಡು ಕೈಗಳು, ಎರಡು ಕಿವಿಗಳು, ಗಲ್ಲ ಮತ್ತು ಎರಡು ಪಾದಗಳಿಂದ ಭೂಮಿಯನ್ನು ಸ್ಪರ್ಶಿಸುತ್ತಾ ಮಾಡುವ ಪ್ರಣಾಮವು ಕೇವಲಪ್ರಣಾಮವೆನಿಸುತ್ತವೆ.[೪೫] ಇಲ್ಲಿ ನಿರೂಪಿತ ವಾಗಿರುವ ನಾಲ್ಕು ಪ್ರಣಾಮಗಳಲ್ಲಿ ಉತ್ತರೋತ್ತರ ಪ್ರಣಾಮಗಳನ್ನು ಮಾಡುವುದರಿಂದ ಅಧಿಕವಾದ ಅಹಂಕಾರದ ನಿವಾರಣೆಯಾಗುತ್ತದೆ. ಹೀಗೆ ಪ್ರಣಾಮಮಾಡಿದ ನಂತರವೂ ಅಲ್ಪಸ್ವಲ್ಪ ಉಳಿದಿರುವ ಅಹಂಕಾರವೂ ಸಹ ಪಾದೋದಕ ಸೇವನೆಯಿಂದ ಸಂಪೂರ್ಣ ನಾಶವಾಗುತ್ತದೆ. ಈ ರೀತಿಯಾಗಿ ಅಹಂಕಾರದ ನಿವಾರಣೆ ಮಾಡುವುದರಿಂದಲೂ ಮತ್ತು ಕಿಂಕರಭಾವನೆಯ ಅನುಗ್ರಹದಿಂದಲೂ ಪಾದೋದಕವು ಸಾಧಕನನ್ನು ರಕ್ಷಿಸುತ್ತದೆ ಎಂಬ ಕಾರಣದಿಂದ ಅದನ್ನು ಆವರಣವೆಂದು ಕರೆಯಲಾಗಿದೆ.

ಇದು ಬಹಿರಂಗ ಫಾದೋದಕ. ಆತ್ಮ ಅಥವಾ ಪರಮಾತ್ಮನ ಆನಂದಸ್ವರೂಪ ಜ್ಞಾನವೇ ಅಂತರಂಗ ಪಾದೋದಕ.[೪೬] ಈ ಬಗೆಯ ಪಾದೋದಕದ ಸ್ವೀಕಾರದಿಂದ ಅರ್ಥಾತ್ ಆತ್ಮ-ಪರಮಾತ್ಮರ ಬಗ್ಗೆ ಚಿಂತನೆ ಮಾಡುವುದರಿಂದ ಮನಸ್ಸಿನಲ್ಲಿ ಸದಾ ಸಂತೃಪ್ತಿಯುಂಟಾಗುತ್ತದೆ. ಈ ರೀತಿಯಾಗಿ ಆತ್ಮಾನಂದರೂಪ ಅಂತರಂಗ ಪಾದೋದಕ ಸೇವನೆಯಿಂದ ಸಂತೃಪ್ತನಾದ ಸಾಧಕನು ಕ್ಷಣಿಕವಾದ ವಿಷಯಸುಖಗಳಿಂದ ಭ್ರಾಂತ ನಾಗುವುದಿಲ್ಲ. ಹೀಗೆ ಬಹಿರಂಗಪಾದೋದಕವು ಅಹಂಕಾರವನ್ನು ನಿವಾರಣೆ ಮಾಡುವ ಮೂಲಕ ಹಾಗೂ ಅಂತರಂಗ ಪಾದೋದಕವು ಆತ್ಮಾನಂದವನ್ನುಂಟುಮಾಡುವುದರಿಂದ ಸಾಧಕನನ್ನು ರಕ್ಷಿಸುತ್ತವೆ ಎಂಬ ಕಾರಣದಿಂದ ಈ ಎರಡು ಬಗೆಯ ಪಾದೋದಕಗಳೂ ಆವರಣಗಳೆಂದು ಕರೆಯಲ್ಪಡುತ್ತವೆ.

---

[೪೩] ಕ್ರಿಯಾಸಾರ, ಭಾಗ-೨, ಪು. ೩೦೧; ಶಿವಾರ್ಚನ ಚಂದ್ರಿಕಾ, ಪು. ೧೦೦

[೪೪] ಕ್ರಿಯಾಸಾರ, ಭಾಗ-೨, ಪು. ೩೦೧-೩೦೨

[೪೫] ಕ್ರಿಯಾಸಾರ, ಭಾಗ-೨, ಪು. ೩೦೨

[೪೬] ಪರಮಾನಂದ ಏವೋಕ್ತಃ ಪಾದಶಬ್ದೇನ ನಿರ್ಮಲಃ।
ಜ್ಞಾನಂ ಚೋದಕಶಬ್ದೇನ ಪಾದೋದಕಮಿತಿ ಸ್ಮೃತಮ್॥ -ಸಿ.ಶಿ, ೧೯.೭

ಪ್ರಸಾದವು ಐದನೆಯ ಆವರಣ. ತನ್ನ ಇಷ್ಟದೇವತೆಗೆ, ಅತಿಥಿಗೆ ಮತ್ತು ಶ್ರೀಗುರುವಿಗೆ ಅರ್ಪಿತವಾದ ಭೋಗ್ಯ ಮತ್ತು ಧರಿಸುವ ಎಲ್ಲ ವಸ್ತುಗಳು ಪ್ರಸಾದವಾಗುತ್ತವೆ. ಈ ಪ್ರಸಾದವು ಗುರುಪ್ರಸಾದ, ಲಿಂಗಪ್ರಸಾದ ಮತ್ತು ಜಂಗಮಪ್ರಸಾದ ಎಂದು ಮೂರು ವಿಧವಾಗಿದೆ. ಗುರುಭುಕ್ತಶೇಷವು ಗುರುಪ್ರಸಾದ, ಇಷ್ಟಲಿಂಗಕ್ಕೆ ನೈವೇದ್ಯ ಮಾಡಿದ್ದು ಲಿಂಗಪ್ರಸಾದ ಮತ್ತು ಜಂಗಮಭುಕ್ತಶೇಷವು ಜಂಗಮಪ್ರಸಾದ ಎನಿಸಿವೆ. ಈ ಮೂರು ಬಗೆಯ ಪ್ರಸಾದಗಳನ್ನು ಭಕ್ತಿಯಿಂದ ಸೇವಿಸುವುದರಿಂದ ದೈಹಿಕ ಮತ್ತು ಮಾನಸಿಕ ರೋಗಗಳು ನಿವಾರಣೆಯಾಗಿ ಮನಸ್ಸು ಶುದ್ಧವಾಗುತ್ತದೆ. ಮನಸ್ಸು ಶುದ್ಧವಾಗಲು ಪರಮಾತ್ಮನೂ ಸಹ ಪ್ರಸನ್ನನಾಗುತ್ತಾನೆ. ಹೀಗೆ ಮನಸ್ಸಿನಲ್ಲಿರುವ ದುಷ್ಟ ವಿಚಾರಗಳನ್ನು ದೂರಮಾಡುವ ಮೂಲಕ ಪ್ರಸಾದಗುಣವನ್ನುಂಟುಮಾಡಿ ಸಾಧಕನನ್ನು ರಕ್ಷಿಸುವ ಈ ಪ್ರಸಾದವು, ಸಾಧಕನ ಸ್ವಾರ್ಥಬುದ್ಧಿಯನ್ನು ನಾಶಗೊಳಿಸಿ, ಕೊನೆಯಲ್ಲಿ ಶಿವಸಾಯುಜ್ಯವನ್ನು ಅನುಗ್ರಹಿಸುತ್ತದೆ.

ಸಮಸ್ತ ಪ್ರಾಣಿಗಳಲ್ಲಿ ಮನುಷ್ಯನು ಎಲ್ಲಕ್ಕಿಂತ ಹೆಚ್ಚಿನ ಸ್ವಾರ್ಥಿಯು. ಸ್ವಾರ್ಥದಿಂದ ಮನುಷ್ಯನ ಮನಸ್ಸು ಸಂಕುಚಿತವಾಗುತ್ತದೆ. ಮನಸ್ಸು ಸಂಕುಚಿತವಾಗಲು ಪರಮಾತ್ಮನ ಸಂಪೂರ್ಣಜ್ಞಾನವನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಸಂಕುಚಿತಮನಸ್ಸುಳ್ಳ ಮಾನವನು ತನ್ನ ಹಾಗೂ ಇತರರಿಗೆ ಸಂಬಂಧಿಸಿದ ಭೋಗಗಳನ್ನು ತಾನೇ ಅನುಭವಿಸಲು ಬಯಸುತ್ತಾನೆ. ಆ ಕಾರಣದಿಂದ ಸಮಾಜದಲ್ಲಿ ಪರಸ್ಪರ ಜಗಳ ಉಂಟಾಗುತ್ತದೆ. ಸ್ವಾರ್ಥಿಗಳಾದ ಜನರು ಪರಸ್ಪರ ಜುಗುಪ್ಸೆಪಡುತ್ತಾರೆ ಮತ್ತು ದ್ವೇಷಿಸುತ್ತಾರೆ. ಈ ರೀತಿಯಾಗಿ ಜುಗುಪ್ಸೆಯೇ ಮೊದಲಾದ ದುರ್ಗುಣಗಳಿಂದ ಕೂಡಿರುವವರಿಗೆ ಮಾಡುವ ತತ್ತ್ವಜ್ಞಾನೋಪದೇಶವು ಚೌಳುಮಣ್ಣಿನಲ್ಲಿ ಬಿತ್ತನೆ ಮಾಡಿದ ಬೀಜದಂತೆ ನಿಷ್ಫಲವಾಗುತ್ತದೆ. ಆದುದರಿಂದ ತತ್ತ್ವಜ್ಞಾನವನ್ನು ತಿಳಿಯಬೇಕೆಂದು ಬಯಸುವವರು ಔದಾರ್ಯಾದಿ ಗುಣಗಳಿಂದ ಕೂಡಿರಬೇಕು. ತತ್ತ್ವಜಿಜ್ಞಾಸೆಯ ಕಾರಣ ತನ್ನಲ್ಲಿಗೆ ಆಗಮಿಸಿದ ದೇವತೆಗಳು, ಮನುಷ್ಯರು ಮತ್ತು ರಾಕ್ಷಸರಿಗೆ ಪ್ರಜಾಪತಿಯು 'ದ' ಎಂಬ ವರ್ಣವನ್ನು ಮೂರು ಬಾರಿ ಉಪದೇಶಿಸಿದನು. ಅವುಗಳಿಗೆ ಮೂರು ಅರ್ಥಗಳುಂಟು- "ದಾಮ್ಯತ ದತ್ತ ದಯಧ್ವಂ ಇತಿ ತದೇತದ್ ತ್ರಯಂ ಶಿಕ್ಷೇದ್ ದಮಂ ದಾನಂ ದಯಾಮಿತಿ."[೪೭] ದೇವತೆಗಳು ಭೋಗಾಸಕ್ತರೆಂಬ ಕಾರಣದಿಂದ ಅವರಿಗೆ 'ದ' ಎಂದರೆ ದಮ (ಬಹಿರಿಂದ್ರಿಯಗಳನ್ನು ನಿಗ್ರಹಿಸಿಕೊಳ್ಳಿ), ಮನುಷ್ಯರು ಸ್ವಾರ್ಥಿಗಳೆಂಬ ಕಾರಣದಿಂದ ಅವರಿಗೆ 'ದಾನ ಮಾಡಿರಿ' ಎಂದೂ, ಮತ್ತು ರಾಕ್ಷಸರು ಸ್ವಭಾವತಃ ಕ್ರೂರಿಗಳಾದ ಕಾರಣದಿಂದ ಅವರಿಗೆ 'ದಯಾವಂತರಾಗಿ' ಎಂದು ಪ್ರಜಾಪತಿಯು ಉಪದೇಶಿಸಿದನು.

ಮಾನವರಿಗೆ ಉಪದೇಶಿಸಿರುವ ಈ ಉಪನಿಷತ್ತಿನ ಜ್ಞಾನವನ್ನು ವೀರಶೈವಾಚಾರ್ಯರು ದೈನಂದಿನ ಆಚಾರಗಳಲ್ಲಿ ಪ್ರತಿಷ್ಠಾಪನೆಮಾಡಿದ್ದಾರೆ.

---

[೪೭] ಬೃಹದಾರಣ್ಯಕೋಪನಿಷತ್, ೫-೨-೩

ಆಚಾರ್ಯರ ಉಪದೇಶಾನುಸಾರವಾಗಿ[೪೮] ನಾವು ಭೋಗಿಸುವ ಮತ್ತು ಧರಿಸುವಂತಹ ಎಲ್ಲ ಪದಾರ್ಥಗಳನ್ನು ಇಷ್ಟಲಿಂಗಕ್ಕೆ, ಜಂಗಮನಿಗೆ, ಶ್ರೀಗುರುವಿಗೆ ಅರ್ಪಣೆ ಮಾಡುವುದರಿಂದ ದಾನಮಾಡುವ ಅಭ್ಯಾಸವಾಗುತ್ತದೆ, ನಿಧಾನವಾಗಿ ಸ್ವಾರ್ಥಭಾವನೆಯು ತೊಲಗುತ್ತದೆ ಮತ್ತು ಗುರು-ಲಿಂಗ-ಜಂಗಮರಿಗೆ ಅರ್ಪಿತವಾದ ಪ್ರಸಾದವನ್ನು ಸೇವಿಸುವುದರಿಂದ ಮನಸ್ಸು ನಿರ್ಮಲವಾಗಿ ಪ್ರಸಾದಗುಣಯುಕ್ತ ಆಗುತ್ತದೆ. ಆದುದರಿಂದಲೇ ಭಗವಾನ್ ಶ್ರೀಕೃಷ್ಣನು ಕೇವಲ ಆತ್ಮಭೋಗಕ್ಕೋಸ್ಕರ ಮಾಡಿದ ಅಡುಗೆಯು ಪಾಪರೂಪದ್ದೆಂದು ಉಪದೇಶಿಸಿದ್ದಾನೆ.[೪೯] ಸ್ವಾರ್ಥದಿಂದ ವ್ಯಕ್ತಿಯ ಅಥವಾ ಸಮಾಜದ ವಿಕಾಸವಾಗಲಿ ಆಗುವುದಿಲ್ಲ. ಈ ಎರಡು ಬಗೆಯ ವಿಕಾಸಕ್ಕೆ ದಾನರೂಪದ ಔದಾರ್ಯದ ಆವಶ್ಯಕತೆ ಇದೆ. ದಾನಮಾಡುವುದರಿಂದ ವಿಶ್ವಕುಟುಂಬದ ಭಾವನೆಯು ಜಾಗ್ರತವಾಗುತ್ತದೆ. ಅಂತಹ ಭಾವನೆಯಿಂದ ಸ್ವಾರ್ಥವು ಸಂಪೂರ್ಣವಾಗಿ ನಾಶವಾಗಿ ಸಾಧಕನು ಆತ್ಮಜ್ಞಾನದ ಅಧಿಕಾರಿಯಾಗುತ್ತಾನೆ.

ಈ ರೀತಿಯಾಗಿ ವೀರಶೈವರು ಪ್ರತಿನಿತ್ಯವೂ ಸೇವಿಸುವ ಪ್ರಸಾದವು ದಾನಗುಣವನ್ನು ಹೆಚ್ಚಿಸಿ, ಸ್ವಾರ್ಥವನ್ನು ತೊಲಗಿಸಿ, ಮನಸ್ಸು ಶುದ್ಧವಾಗುವುದರಿಂದ ಸಾಧಕನನ್ನು ದುರ್ಮಾರ್ಗಗಳಿಂದ ರಕ್ಷಿಸುತ್ತದೆಯಾದ್ದರಿಂದ ಆವರಣವೆಂದು ಕರೆಯಲಾಗಿದೆ. ಇದು ಬಹಿರಂಗದ ಆವರಣ. ಪ್ರಸಾದಸೇವನೆಯಿಂದಾಗುವ ಮನೋನಿರ್ಮಲತೆಯೇ ಅಂತರಂಗಪ್ರಸಾದ. ಅಂತರಂಗಪ್ರಸಾದವು ಮನಸ್ಸನ್ನು ದುಷ್ಟವಿಚಾರಗಳಿಂದ ರಕ್ಷಿಸುತ್ತದೆ. ಕೋಪತಾಪಾದಿಗಳಿಂದ ಕೂಡಿ ಪ್ರಸನ್ನವಲ್ಲದ ಅತೃಪ್ತವಾದ ಮನಸ್ಸಿನಲ್ಲಿ ಕೆಟ್ಟವಿಚಾರಗಳುಂಟಾಗುತ್ತವೆಯೇ ಹೊರತು ಪ್ರಸನ್ನವಾದ ಮನಸ್ಸಿನಲ್ಲಲ್ಲ. ಹೀಗೆ ಎರಡೂ ಬಗೆಯ ಪ್ರಸಾದರೂಪ ಆವರಣದಿಂದ ಸಾಧಕನ ಅಂತರಂಗ-ಬಹಿರಂಗಗಳು ರಕ್ಷಿಸಲ್ಪಡುತ್ತವೆ.

ಆಗಮಶಾಸ್ತ್ರೋಕ್ತವಿಧಿಯಂತೆ ಗೋಮಯದಿಂದ ನಿರ್ಮಿತವಾದ ಭಸ್ಮವನ್ನು ವೀರಶೈವಾಚಾರ್ಯರು ಸಾಧಕನ ಆರನೆಯ ಆವರಣವೆಂದು ಅಂಗೀಕರಿಸಿದ್ದಾರೆ. ಈ ಭಸ್ಮವು ಅಣಿಮಾದಿ ಅಷ್ಟೈಶ್ವರ್ಯಗಳನ್ನು ಕೊಡುವಂತಹದ್ದು, ಶಿವತತ್ತ್ವವನ್ನು ಪ್ರಕಾಶಿಸುವುದರಿಂದಲೂ, ಮನಸ್ಸು, ವಾಕ್, ಕಾಯಗಳಲ್ಲಿ ಉಂಟಾಗುವ ಪಾಪಗಳನ್ನು

---

[೪೮] ಅನ್ನಶುದ್ಧ್ಯಾ ಹಿ ಸರ್ವೇಷಾಂ ಸತ್ತ್ವಶುದ್ಧಿರುದಾಹೃತಾ।
ವಿಶುದ್ಧಮನ್ನಜಾತಂ ಹಿ ಯಚ್ಛಿವಾಯ ಸಮರ್ಪಿತಮ್॥
ಆತ್ಮಭೋಗಾಯ ನಿಯತಂ ಯದ್ಯದ್ ದ್ರವ್ಯಂ ಸಮೀಹಿತಮ್।
ತತ್ತತ್ಸಮರ್ಪ್ಯ ದೇವಾಯ ಭುಂಜೀತಾತ್ಮವಿಶುದ್ಧಯೇ॥ -ಸಿ.ಶಿ, ೧೧.೯,೧೧

[೪೯] ಯಜ್ಞಶಿಷ್ಟಾಶಿನಃ ಸಂತೋ ಮುಚ್ಯಂತೇ ಸರ್ವಕಿಲ್ಬಿಷೈಃ।
ಭುಂಜತೇ ತೇ ತ್ವಘಂ ಪಾಪಾ ಯೇ ಪಚಂತ್ಯಾತ್ಮಕಾರಣಾತ್॥
-ಭಗವದ್ಗೀತಾ, ೩.೧೩

ಹೆದರಿಸುವುದರಿಂದ, ದುಃಖತ್ರಯಗಳಿಂದುತ್ಪನ್ನವಾಗುವ ವಿಪತ್ತುಗಳನ್ನು ನಾಶಪಡಿಸುವುದರಿಂದ ಮತ್ತು ಗ್ರಹ-ಯಕ್ಷ ಮೊದಲಾದ ಭೂತಗಳಿಂದ ರಕ್ಷಿಸುವುದರಿಂದ, ಸಾಧಕನನ್ನು ಎಲ್ಲ ರೀತಿಯಲ್ಲಿಯೂ ರಕ್ಷಿಸಿ, ಪರಶಿವಪ್ರಕಾಶರೂಪ ನಿರುಪಾಧಿಕಭಸ್ಮಧಾರಣ ಯೋಗ್ಯತೆಯನ್ನು ಉಂಟುಮಾಡುತ್ತದೆ ಎಂಬ ಕಾರಣದಿಂದ ಭಸ್ಮವೂ ಸಹ ರಕ್ಷಾಕವಚರೂಪ ಆವರಣವೆಂದು ಕರೆಯಲ್ಪಟ್ಟಿದೆ.

ಗೋಮಯದಿಂದ ನಿರ್ಮಿತವಾದ ಭಸ್ಮದಲ್ಲಿ ರೋಗಾಣುಗಳನ್ನು ನಾಶಪಡಿಸುವ ಸಾಮರ್ಥ್ಯವಿರುವುದರಿಂದ ಶರೀರದ ಮೇಲೆ ಅದನ್ನು ಲೇಪನಮಾಡುವುದರಿಂದ ಶರೀರದಲ್ಲಿರುವ ಚರ್ಮರೋಗಗಳು ನಾಶವಾಗುವುದಲ್ಲದೆ ಬೇರೆ ಚರ್ಮರೋಗಗಳುಂಟಾಗುವುದಿಲ್ಲ. ಆಧುನಿಕ ಸಮಾಜದಲ್ಲಿ ಸೌಂದರ್ಯವರ್ಧನೆಗಾಗಿ ಸ್ನೋ, ಪೌಡರ್ ಇತ್ಯಾದಿ ಶುಭ್ರ ಪದಾರ್ಥಗಳನ್ನು ಶರೀರಕ್ಕೆ ಲೇಪಿಸಿಕೊಳ್ಳುತ್ತಾರೆ. ಅವುಗಳಲ್ಲಿ ಸುಗಂಧವನ್ನು ಹೊರತುಪಡಿಸಿ ಚರ್ಮವನ್ನು ಪೋಷಿಸುವ ಅಥವಾ ರಕ್ಷಿಸುವ ಯಾವುದೇ ಅಂಶವೂ ಇರುವುದಿಲ್ಲ. ಅಲ್ಲದೆ ಹೆಚ್ಚು ಕಾಲ ಅವುಗಳನ್ನು ಉಪಯೋಗಿಸುವುದರಿಂದ 'ಚರ್ಮದ ಕ್ಯಾನ್ಸರ್' ರೋಗವು ಬರುತ್ತದೆ ಎಂದು ಸ್ವದೇಶದ ಹಾಗೂ ವಿದೇಶದ ಎಲ್ಲ ವೈದ್ಯರುಗಳ ಅಭಿಪ್ರಾಯವು ಪತ್ರಿಕೆಗಳಲ್ಲಿ ಪ್ರಕಟವಾಗಿರುವುದನ್ನು ನೋಡಿದ್ದೇವೆ. ಆದುದರಿಂದ ಆರೋಗ್ಯವನ್ನು ಬಯಸುವವರೆಲ್ಲರೂ ಸ್ನೋ, ಪೌಡರ್ ಇತ್ಯಾದಿ ಪದಾರ್ಥಗಳನ್ನು ತ್ಯಜಿಸಿ, ಗೋಮಯಭಸ್ಮವನ್ನು ಶರೀರಕ್ಕೆ ಲೇಪಿಸಿಕೊಳ್ಳುವುದು ಒಳಿತು. ಒಂದುವೇಳೆ ಸುಗಂಧವನ್ನು ಬಯಸುವುದಾದರೆ ಭಸ್ಮಕ್ಕೆ ಶ್ರೀಗಂಧ, ಕಾಶ್ಮೀರದ ಲಾವಂಚದ ಬೇರಿನ ಸುಗಂಧದ ನೀರನ್ನು ಮಿಶ್ರಣಮಾಡಿಕೊಳ್ಳಬೇಕು.[೫೦] ಈ ಬಗೆಯ ಭಸ್ಮಸ್ನಾನದಿಂದ ಶರೀರದ ಆರೋಗ್ಯವೂ, ಸುಗಂಧದಿಂದ ಮನಸ್ಸಿಗೆ ಶಾಂತಿಯೂ ಉಂಟಾಗುತ್ತದೆ. ಒಲೆಯಲ್ಲಿ ಪ್ರಜ್ವಲಿಸುತ್ತಿರುವ ಬೆಂಕಿಯು ಒಲೆಯ ಮೇಲೆ ಇಟ್ಟಿರುವ ಅಡುಗೆಪಾತ್ರೆಯ ಹೊರಮೈಯನ್ನು ಸ್ಪರ್ಶಿಸುತ್ತಿದ್ದರೂ ಸಹ ಪಾತ್ರೆಯಲ್ಲಿರುವ ಅನ್ನವನ್ನು ಬೇಯಿಸಲು ಹೇಗೆ ಸಮರ್ಥವಾಗುತ್ತದೆಯೋ ಹಾಗೆಯೇ ಭಸ್ಮವನ್ನು ಬಾಹ್ಯಾಂಗದಲ್ಲಿ ಧರಿಸಿದರೂ ಸಹ ಬಾಹ್ಯದೋಷಗಳ ನಿವಾರಣೆ ಮೊದಲ್ಗೊಂಡು ಮನಸ್ಸನ್ನೂ ಪರಿಶುದ್ಧಗೊಳಿಸುತ್ತದೆ. ನಿರ್ಮಲವಾದ ಮನಸ್ಸಿನಲ್ಲಿ ಶಿವಭಾವವು ತುಂಬುತ್ತದೆ.

ಕಂಠದವರೆಗೆ ನೀರಿನಿಂದ ತುಂಬಿರುವ ಘಟಕ್ಕೆ ನೀರನ್ನು ಹಾಕಿದರೆ ಅದು ಹೊರಬರುತ್ತದೆಯೇ ಹೊರತು ಘಟದೊಳಗೆ ಹೇಗೆ ಹೋಗುವುದಿಲ್ಲವೋ ಹಾಗೆಯೇ

---

[೫೦] ಸಂಯೋಜ್ಯ ಗಂಧಸಲಿಲೈಃ ಕಪಿಲಾಮೂತ್ರಕೇಣ ವಾ।
ಚಂದ್ರಕುಂಕುಮಕಾಶ್ಮೀರಮುಶೀರಂ ಚಂದನಂ ತಥಾ॥
ಅಗುರುತ್ರಿತಯಂ ಚೈವ ಚೂರ್ಣಯಿತ್ವಾ ತು ಸೂಕ್ಷ್ಮತಃ।
ಕ್ಷಿಪೇದ್ಭಸ್ಮನಿ ತಚ್ಚೂರ್ಣಮೋಮಿತಿ ಬ್ರಹ್ಮಮಂತ್ರತಃ॥
-ಬೃಹಜ್ಜಾಬಾಲೋಪನಿಷತ್, ೩.೨೭-೨೮

ಪ್ರತಿದಿನವೂ ಭಸ್ಮಧಾರಣೆಮಾಡುವುದರಿಂದ ಶಿವಭಾವನೆಯಿಂದ ಸಂಪೂರ್ಣವಾಗಿ ತುಂಬಿರುವ ಮನಸ್ಸಿನೊಳಗೆ ಸಾಂಸಾರಿಕ ವಿಷಯಗಳ ಪ್ರವೇಶವು ಎಂದಿಗೂ ಸಂಭವಿಸುವುದಿಲ್ಲ. "ಸ ಏಷ ಭಸ್ಮಜ್ಯೋತಿಃ"[೫೧] (ಅದು ಭಸ್ಮಜ್ಯೋತಿಯು), "ಭಸ್ಮಜ್ಯೋತಿಃ ಸಮಾಮ್ನಾತಮ್"[೫೨] (ಶಾಸ್ತ್ರಗಳಲ್ಲಿ ಭಸ್ಮವನ್ನು ಜ್ಯೋತಿರೂಪದಲ್ಲಿ ವರ್ಣಿಸಲಾಗಿದೆ), "ಭಸ್ಮೇದಂ ಶಾಂಭವಂ ಜ್ಯೋತಿಃ"[೫೩] (ಭಸ್ಮವೆಂಬುದು ಶಂಭುವಿನ ಜ್ಯೋತಿಯು) ಇತ್ಯಾದಿ ವೇದಾಗಮವಚನಗಳಲ್ಲಿ ಪರಶಿವನ ಪ್ರಕಾಶವನ್ನು ಭಸ್ಮವೆಂದು ಕರೆಯಲಾಗಿದೆ. ಮನಸ್ಸಿನಲ್ಲಿ ಪರಶಿವಪ್ರಕಾಶದ ಚಿಂತನೆಯೇ ಅಂತರಂಗ ಭಸ್ಮಧಾರಣೆಯು. ಈ ಪ್ರಕಾರವಾಗಿ ಗೋಮಯದಿಂದ ತಯಾರಿಸಿದ ಭಸ್ಮವು ರೋಗಾಣುಗಳಿಂದ ಸ್ಥೂಲಶರೀರವನ್ನು, ಪರಶಿವಪ್ರಕಾಶದ ಚಿಂತನೆಯ ರೂಪದ ನಿರುಪಾಧಿಕಭಸ್ಮವು ಸಂಸಾರದ ಬಂಧನಗಳಿಂದ ಸಾಧಕನ ಸೂಕ್ಷ್ಮಶರೀರವನ್ನು ರಕ್ಷಿಸುತ್ತದೆ ಎಂದು ಎರಡೂ ಪ್ರಕಾರದ ಭಸ್ಮವನ್ನು ವೀರಶೈವ ಸಿದ್ಧಾಂತದಲ್ಲಿ ಆವರಣವೆಂದು ಕರೆಯಲಾಗಿದೆ.

ರುದ್ರಾಕ್ಷವು ಏಳನೆಯ ಆವರಣ. ರುದ್ರನ ಕಣ್ಣೀರಿನ ಹನಿಗಳಿಂದ ಉತ್ಪನ್ನವಾದ ಒಂದು ವಿಶೇಷ ಜಾತಿಯ ಬೀಜವಿದು. ರುದ್ರನೇತ್ರದಿಂದ ಉತ್ಪನ್ನವಾದ ಕಾರಣದಿಂದ ರುದ್ರನಂತೆ ರುದ್ರಾಕ್ಷವೂ ಸಹ ಪಾವನವಾದದ್ದು. ರುದ್ರಾಕ್ಷಧಾರಣೆಯಿಂದ ದೈಹಿಕ ಹಾಗೂ ಮಾನಸಿಕ ದೋಷಗಳು ದೂರವಾಗಿ ಉಭಯರೀತಿಯ ಸ್ವಾಸ್ಥ್ಯವು ದೊರೆಯುತ್ತದೆ. ರುದ್ರಭಾವನೆಯಿಂದ ನಿರಂತರವಾಗಿ ಅವುಗಳನ್ನು ಶರೀರದ ಮೇಲೆ ಧರಿಸುವುದರಿಂದ ರುದ್ರದೃಷ್ಟಿಯು ಪ್ರಾಪ್ತವಾಗುತ್ತದೆ. ಇದೇ ಅಂತರಂಗರುದ್ರಾಕ್ಷವು. ರುದ್ರದೃಷ್ಟಿಯ ಪ್ರಾಪ್ತಿಯಿಂದ ಮನುಷ್ಯರಲ್ಲಿ ಸಮಾನತೆಯ ದೃಷ್ಟಿಯುಂಟಾಗಿ, ಸಮಾಜದಲ್ಲಿ ಶಾಂತಿನೆಲೆಸುತ್ತದೆ. ಈ ರೀತಿಯಾಗಿ ಅಂತರಂಗ-ಬಹಿರಂಗ ಎಂಬ ರುದ್ರಾಕ್ಷವು ವ್ಯಕ್ತಿ ಮತ್ತು ಸಮಾಜದ ಸ್ವಾಸ್ಥ್ಯವನ್ನು ಸಂರಕ್ಷಿಸುವುದರಿಂದ ಆವರಣವೆಂದು ಕರೆಯಲಾಗಿದೆ.

ಇದರ ತಾತ್ಪರ್ಯವಿಷ್ಟು- ರುದ್ರಾಕ್ಷವು ಉತ್ಕೃಷ್ಟವಾದ ವನಸ್ಪತಿ. ಶರೀರದಲ್ಲಿ ಅದನ್ನು ಧರಿಸುವುದರಿಂದ ಹಾಗೂ ಅದನ್ನು ತೊಳೆದ ನೀರನ್ನು ಕುಡಿಯುವುದರಿಂದ ರಕ್ತದೊತ್ತಡ, ಹೃದಯ ದೌರ್ಬಲ್ಯ ಮೊದಲಾದ ರೋಗಗಳು ಶಮನವಾಗುತ್ತವೆ ಎಂಬುದು ಆಧುನಿಕ ವಿಜ್ಞಾನದ ಸಂಶೋಧನೆಯಿಂದ ದೃಢಪಟ್ಟಿದೆ. ಆಯುರ್ವೇದ ಶಾಸ್ತ್ರದಲ್ಲಿ ರುದ್ರಾಕ್ಷದ ಉಪಚಾರದಿಂದ ನಾನಾ ಬಗೆಯ ರೋಗಗಳ ಉಪಶಮನವು

---

೫೧. ಬೃ.ಜಾ.ಉ, ೭.೨

೫೨. ಚ.ಜ್ಞಾ, ಕ್ರಿ.ಪಾ, ೬.೬೪

೫೩. ಚ.ಜ್ಞಾ, ಕ್ರಿ.ಪಾ, ೬.೬೬

ಪ್ರತಿಪಾದಿತವಾಗಿದೆ.[೫೪] ಆದುದರಿಂದ ರುದ್ರಾಕ್ಷವು ಕೇವಲ ಧಾರ್ಮಿಕ ಚಿಹ್ನೆಯಾಗಿರದೆ ಉತ್ಕೃಷ್ಟವಾದ ವನಸ್ಪತಿಯೂ ಆಗಿದೆ. ಆ ಕಾರಣದಿಂದ ವರ್ಣಾಶ್ರಮದ ಭೇದವಿಲ್ಲದೆ ಎಲ್ಲರೂ ಧರಿಸಲು ಯೋಗ್ಯವಾಗಿದೆ.[೫೫]

ದುಷ್ಟತನದ ನಿವಾರಣೆಯ ಸಂಕಲ್ಪದಿಂದ ಕೂಡಿರುವ ರುದ್ರಾಕ್ಷವು ರುದ್ರನೇತ್ರಗಳ ಕಣ್ಣೀರಿನಿಂದ ಉತ್ಪತ್ತಿಯಾಯಿತು ಎಂಬ ಕಾರಣದಿಂದ ಅವುಗಳನ್ನು ಧರಿಸುವ ಸಾಧಕನ ಕೆಟ್ಟಭಾವನೆಗಳು ದೂರವಾಗುತ್ತವೆ. ಜಗತ್ತಿನಲ್ಲಿ ದುಃಖಾಶ್ರು, ಆನಂದಾಶ್ರು ಮತ್ತು ಯೋಗಾಶ್ರು ಎಂದು ಅಶ್ರು ಮೂರು ವಿಧವಾಗಿದೆ. ಸಾಂಸಾರಿಕ ದುಃಖದಿಂದ ಅಥವಾ ಯಾರಿಂದಲಾದರೂ ಮಾಡಲ್ಪಡುವ ಹಿಂಸೆಯಿಂದ ದುಃಖಿತವಾದ ಜೀವಿಗಳ ಕಣ್ಣುಗಳಿಂದ ಹೊರಬರುವ ಕಣ್ಣೀರು ದುಃಖಾಶ್ರು ಎನಿಸುತ್ತದೆ. ಅಪೇಕ್ಷಿತವಾದ ಧನಪ್ರಾಪ್ತಿಯಾದಾಗ ಆನಂದಾತಿರೇಕದಿಂದ ಹೊರಹೊಮ್ಮುವ ಕಣ್ಣೀರು ಆನಂದಾಶ್ರು ಎನಿಸುತ್ತದೆ. ತ್ರಾಟಕಾದಿ ಮುದ್ರೆಗಳ ಅಭ್ಯಾಸಕಾಲದಲ್ಲಿ ಉದುರುವ ಕಣ್ಣೀರಹನಿಗಳು ಯೋಗಾಶ್ರು ಎನಿಸುತ್ತವೆ. ಆಯಾ ಅಶ್ರುಪಾತಗಳಿಗೆ ನಿಮಿತ್ತಗಳಾದ ಎಲ್ಲ ಶುಭಾಶುಭ ಫಲಗಳೂ ಸಹ ಅನುಭವಿಸಲೇಬೇಕು. ಅಧಿಕಾರದಿಂದ, ಶಕ್ತಿಯಿಂದ, ಶ್ರೀಮಂತಿಕೆಯ ಬಲದಿಂದ ಕೂಡಿರುವ ಯಾವನಾದರೂ ಅಸಮರ್ಥನಾದವನನ್ನು ತೊಂದರೆಪಡಿಸಿದ್ದೇ ಆದರೆ ಆ ತೊಂದರೆಗೆ ಪ್ರತಿಯಾಗಿ ಯಾವುದೇ ರೀತಿಯಲ್ಲಿ ಪ್ರತೀಕಾರ ಮಾಡಲು ಅಸಮರ್ಥನಾದವನು ಒಂದು ವೇಳೆ ದುಃಖದಿಂದ ರೋದಿಸಿದರೆ ಆಗ ಆ ದುಃಖದ ಪ್ರಭಾವದಿಂದ ತೊಂದರೆ ಮಾಡಿದವನು ಸಹ ಯಾವುದೋ ಒಂದು ಸಂದರ್ಭದಲ್ಲಿ ದುಃಖಪಡುತ್ತಾನೆಂಬುದು ಲೋಕಾನುಭವ. ಇದೇ ರೀತಿಯಾಗಿ ಆನಂದಾಶ್ರುವಿಗೆ ನಿಮಿತ್ತನಾದವನೂ ಸಹ ಆನಂದಕ್ಕೆ ಪಾತ್ರನಾಗುತ್ತಾನೆ.

ಈ ಪ್ರಕಾರವಾಗಿ ಸಾಮಾನ್ಯಜನಗಳ ಕಣ್ಣೀರಿಗೆ ಇಂತಹ ಸಾಮರ್ಥ್ಯವು ಇರುವುದಾದರೆ ಜಗತ್ತಿನ ರಕ್ಷಕನಾದ ಶಿವನ ಯೋಗಾಶ್ರುವಿನ ವಿಷಯದಲ್ಲಿ ಏನನ್ನು ತಾನೆ ಹೇಳಲು ಸಾಧ್ಯ? ದುಷ್ಟಸಂಹಾರ, ಶಿಷ್ಟಸಂರಕ್ಷಣೆಯ ಸಂದರ್ಭದಲ್ಲಿ ಉಂಟಾಗುವ ರುದ್ರನ ಯೋಗಾಶ್ರುಗಳಿಂದ ರುದ್ರಾಕ್ಷಗಳು ಉತ್ಪತ್ತಿಯಾದವು. ಆದುದರಿಂದ ಅವುಗಳೂ ಸಹ ದುರ್ಭಾವನೆಗಳನ್ನು ಸಂಹಾರಮಾಡಿ, ಸದ್ಭಾವನೆಗಳನ್ನು ಸಂರಕ್ಷಣೆಮಾಡುತ್ತವೆ. ಆ ಕಾರಣದಿಂದ ಅವುಗಳನ್ನು ಧರಿಸುವುದರಿಂದ ಸ್ಥೂಲಶರೀರದ ಸ್ವಾಸ್ಥ್ಯ ಪ್ರಾಪ್ತಿಯು ಮಾತ್ರವಲ್ಲ, ದುರ್ಗುಣಗಳನ್ನು ನಿವಾರಣೆಮಾಡುವುದರ ಮೂಲಕ ಸೂಕ್ಷ್ಮಶರೀರದ ಸ್ವಾಸ್ಥ್ಯವೂ ಸಹ ಉಂಟಾಗುತ್ತದೆ.

---

[೫೪] ಶಿವತತ್ತ್ವದರ್ಶನಮ್, ಪು. ೮೫

[೫೫] ಬ್ರಾಹ್ಮಣೋ ವಾಂತ್ಯಜೋ ವಾಪಿ ಮೂರ್ಖೋ ವಾ ಪಂಡಿತೋಽಪಿ ವಾ।
ರುದ್ರಾಕ್ಷಧಾರಣಾದೇವ ಮುಚ್ಯತೇ ಸರ್ವಪಾತಕೈಃ॥ -ಸಿ.ಶಿ, ೭.೬೧

ಇದಲ್ಲದೆ "ಸರ್ವೋ ಹ್ಯೇಷ ರುದ್ರಃ"[೫೬] ಎಂಬ ಶ್ರುತಿವಾಕ್ಯಾನುಸಾರವಾಗಿ ಸಮಸ್ತ ಜಗತ್ತನ್ನು ರುದ್ರರೂಪದಿಂದ ನೋಡುವುದರಿಂದ ಅದು ಅಂತರಂಗರುದ್ರಾಕ್ಷ ಧಾರಣೆ ಎನಿಸುತ್ತದೆ. ಸಮತಾದೃಷ್ಟಿಯು ಸಮಾಜದಲ್ಲಿ ಶಾಂತಿಸ್ಥಾಪನೆ ಮಾಡಲು ಮೂಲಕಾರಣ. ಈ ಉದ್ದೇಶದಿಂದಲೇ ಅನಾದಿಕಾಲದಿಂದಲೂ ದಾರ್ಶನಿಕರ ಶ್ರಮವು ಕಂಡುಬರುತ್ತದೆ ಎಲ್ಲವನ್ನೂ ಸಮಾನದೃಷ್ಟಿಯಿಂದ ನೋಡುವುದೇ ಮಾನವಜೀವನದ ಅಂತಿಮ ಗುರಿ. ಇಂತಹ ಸಮದರ್ಶಿಗಳನ್ನೇ ಪಂಡಿತರೆಂದು ಕರೆಯಲಾಗಿದೆ. ಭಗವಾನ್ ಶ್ರೀಕೃಷ್ಣನು-

ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ।
ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ॥[೫೭]

"ವಿದ್ಯೆ-ವಿನಯಗಳಿಂದ ಕೂಡಿದವನನ್ನು, ಬ್ರಾಹ್ಮಣ, ಹಸು, ಆನೆ, ನಾಯಿ ಮತ್ತು ಚಂಡಾಲ -ಈ ಎಲ್ಲರನ್ನೂ ಪಂಡಿತರು ಸಮಾನದೃಷ್ಟಿಯಿಂದ ನೋಡುತ್ತಾರೆ" ಎಂದಿದ್ದಾನೆ.

ಆದುದರಿಂದ ಗುರುವಿನಿಂದ ಶಾಸ್ತ್ರಗಳ ಉಪದೇಶಶ್ರವಣಮಾಡುವುದರಿಂದ ಮತ್ತು ತನ್ನ ಶ್ರಮದಿಂದ ಆ ಬಗೆಯ ಸಮತಾಭಾವನೆಯನ್ನು ಗಳಿಸುವುದೇ ರುದ್ರದೃಷ್ಟಿಯು, ಅದೇ ಅಂತರಂಗರುದ್ರಾಕ್ಷಣಧಾರಣೆ. ಇಂತಹ ಭಾವೆನಯಿಲ್ಲದಿರುವುದರಿಂದಲೇ ಮನುಷ್ಯರು ಮೃಗಗಳಾಗಿ ಪರಸ್ಪರ ಜಗಳವಾಡುತ್ತಾ ಮನುಕುಲದ ನಾಶಕರಾಗಿರುವುದು ಕಂಡುಬರುತ್ತದೆ. ಆದುದರಿಂದಲೇ ಸುಭಾಷಿತಕಾರನು "ಮನುಷ್ಯರೂಪೇಣ ಮೃಗಾಶ್ಚರಂತಿ" (ಮನುಷ್ಯರೂಪದ ಮೃಗಗಳು) ಎಂದು ಹೇಳಿದ್ದಾನೆ. ಆಕಾರಮಾತ್ರದಿಂದಲೇ ಮನುಷ್ಯನು ಮನುಷ್ಯನಲ್ಲ, ಆದರೆ ಮನುಷ್ಯತ್ವದಿಂದ ಕೂಡಿದಾಗಲೇ ಮನುಷ್ಯ ಎನಿಸುತ್ತಾನೆ. ಮನುಕುಲದ ಸಂತತಿಯನ್ನು ಮೊದಲಿಗೆ ಮನುಷ್ಯರೆಂದು ಭಾವಿಸಬೇಕು. "ಮನಸಾ ಸೀವ್ಯತೀತಿ ಮನುಷ್ಯಃ" ಎಂಬ ನಿರುಕ್ತಿಯಂತೆ ಸಂಕುಚಿತವಾದ ಮಾನಸಿಕ ಸಂಬಂಧದಿಂದ ಬಂಧಿತನಾದವನು ಪಶು ಎಂದು ವ್ಯವಹರಿಸಲ್ಪಡುವ ಈ ಜೀವಾತ್ಮನು ಅದೇ ಸಂಬಂಧದ ನಿವೃತ್ತಿಯಿಂದ ಶಿವನಾಗುತ್ತಾನೆ.

ಶಿವಾತ್ಮಕಮಿದಂ ಸರ್ವಂ ಶಿವಾದನ್ಯನ್ನ ವಿದ್ಯತೇ।
ಶಿವೋಽಹಮಿತಿ ಯಾ ಬುದ್ಧಿಸ್ತದೇವ ಜ್ಞಾನಮುತ್ತಮಮ್॥[೫೮]

"ಸಮಸ್ತ ಪ್ರಪಂಚವೂ ಶಿವಸ್ವರೂಪವಾದುದು, ಶಿವನನ್ನು ಹೊರತುಪಡಿಸಿ ಯಾವುದೂ ಇರುವುದಿಲ್ಲ, ನಾನು ಶಿವನು ಎಂಬ ಯಾವ ಬುದ್ಧಿಯುಂಟೋ ಅದೇ ಉತ್ತಮವಾದ ಜ್ಞಾನವೆನಿಸುವುದು" ಎಂಬ ಆಚಾರ್ಯೋಕ್ತಿಯಿಂದ ಇಂತಹ ಶಿವಜ್ಞಾನವುಂಟಾದವನ ಪೂರ್ವೋಕ್ತ ಪಶುಭಾವದ ನಿವೃತ್ತಿಯಾಗುತ್ತದೆ. ಪಶುಭಾವದ

---

[೫೬] ಮಹಾನಾರಾಯಣೋಪನಿಷತ್, ೧೦.೧೧

[೫೭] ಭಗವದ್ಗೀತಾ, ೫.೧೮

[೫೮] ಸಿ.ಶಿ, ೧೬.೩೧

ನಿವಾರಣೆ ಮಾಡುವ ಈ ಜ್ಞಾನವೇ ರುದ್ರದೃಷ್ಟಿ ಎನಿಸುತ್ತದೆ. ಆದುದರಿಂದ "ಯತ್ರ ಯತ್ರ ಮನೋ ಯಾತಿ ತತ್ರ ತತ್ರ ಬ್ರಹ್ಮದರ್ಶನಮ್" (ಮನಸ್ಸು ಎಲ್ಲೆಲ್ಲಿ ಹೋಗುತ್ತದೆಯೋ ಅಲ್ಲೆಲ್ಲ ಬ್ರಹ್ಮದರ್ಶನವಾಗುತ್ತದೆ) ಎಂಬ ಉಕ್ತಿಯಂತೆ ನಿರಂತರವಾಗಿ ಹರಿಯುತ್ತಿರುವ ಮನೋವೃತ್ತಿಯಲ್ಲಿ ರುದ್ರಸ್ವರೂಪವನ್ನು ಚಿಂತನೆಮಾಡುವುದೇ ಅಂತರಂಗ ಅಕ್ಷಮಾಲೆ ಎಂದು ಕರೆಯಲ್ಪಟ್ಟಿದೆ.

ಈ ರೀತಿಯಾಗಿ ಭೌತಿಕರುದ್ರಾಕ್ಷವು ಶಾರೀರಿಕ-ಮಾನಸಿಕ ಸ್ವಾಸ್ಥ್ಯವನ್ನು ನೀಡುವುದರಿಂದ ಸಾಧಕನನ್ನು ರಕ್ಷಿಸುತ್ತದೆ. ರುದ್ರದೃಷ್ಟಿರೂಪದ ಅಂತರಂಗರುದ್ರಾಕ್ಷವು ಸಮತಾಭಾವನೆಯನ್ನು ಹೆಚ್ಚಿಸುವುದರಿಂದ ಸಮಾಜದಲ್ಲಿರುವ ಭೇದಭಾವಗಳನ್ನು ನಿವಾರಣೆಮಾಡುವ ಮೂಲಕ ಸಾಮಾಜಿಕ ಸ್ವಾಸ್ಥ್ಯರಕ್ಷಣೆಗೆ ಕಾರಣವಾಗುತ್ತದೆ. ಹೀಗೆ ಬಹಿರಂಗ-ಅಂತರಂಗ ರುದ್ರಾಕ್ಷಗಳಿಂದ ವ್ಯಕ್ತಿ ಮತ್ತು ಸಮಾಜವನ್ನು ದುಷ್ಟ ಪ್ರವೃತ್ತಿಗಳಿಂದ ರಕ್ಷಿಸುವ ಕಾರಣ ಎರಡೂ ಬಗೆಯ ರುದ್ರಾಕ್ಷಗಳು ಆವರಣಗಳೆಂದು ಪ್ರತಿಪಾದಿಸಲ್ಪಟ್ಟಿವೆ.

ವೀರಶೈವದ ಅಷ್ಟಾವರಣಗಳಲ್ಲಿ ಮಂತ್ರವು ಎಂಟನೆಯ ಆವರಣ. ಪ್ರಣವ ಸಹಿತವಾದ ಪಂಚಾಕ್ಷರಮಂತ್ರವು "ಜಪತೋ ನಾಸ್ತಿ ಪಾತಕಮ್" (ಜಪಿಸಿದರೆ ಪಾತಕ ವುಂಟಾಗುವುದಿಲ್ಲ) ಎಂಬ ಉಕ್ತಿಗೆ ಅನುಸಾರವಾಗಿ ಪಾತಕಗಳನ್ನು ನಿವಾರಿಸುವುದರಿಂದ ಮತ್ತು ಶ್ರೇಷ್ಠವಾದ ಮುಕ್ತಿಯನ್ನು ಪ್ರದಾನಮಾಡುವುದರಿಂದ ಸಾಧಕನನ್ನು ಸಾಂಸಾರಿಕ ದುಃಖಗಳಿಂದ ರಕ್ಷಿಸುತ್ತದೆ ಎಂಬ ಕಾರಣದಿಂದ ಮಂತ್ರವೂ ಸಹ ರಕ್ಷಾಕವಚರೂಪ ಆವರಣಶಬ್ದಕ್ಕೆ ಪಾತ್ರವಾಗುತ್ತದೆ. ಮನನ ಮಾಡುವುದರಿಂದ ರಕ್ಷಿಸುತ್ತದೆಯಾದ ಕಾರಣದಿಂದ ಮಂತ್ರವೆನಿಸಿದೆ (ಮನನಾತ್ ತ್ರಾಯತ ಇತಿ ಮಂತ್ರಃ) ಎಂಬ ವ್ಯುತ್ಪತ್ತಿಯಂತೆ ಮಂತ್ರದ ರಕ್ಷಾಕವಚರೂಪತ್ವವು ಸ್ಪಷ್ಟವಾಗುತ್ತದೆ. ಜಲಪಾತಗಳಿರುವ ಸ್ಥಳಗಳಲ್ಲಿ ನಿರಂತರವಾಗಿ ಸುತ್ತುವ ಚಕ್ರದಿಂದ ಹೇಗೆ ವಿದ್ಯುತ್ ಉತ್ಪಾದನೆಯಾಗುತ್ತದೆಯೋ ಹಾಗೆಯೇ ಒಬ್ಬನೇ ಪರಮಾತ್ಮನ ನಾಮರೂಪವಾದ ಮಂತ್ರವನ್ನು ಪದೇ ಪದೇ ಆವೃತ್ತಿಮಾಡುವುದರಿಂದ ಅಪೂರ್ವವಾದ ಪರಿಣಾಮವುಂಟಾಗುತ್ತದೆ ಮತ್ತು ಪರಮಾತ್ಮನು ಜೀವಾತ್ಮನ ಕಡೆಗೆ ಅಭಿಮುಖನಾಗುತ್ತಾನೆ. ಜಗತ್ತಿನಲ್ಲಿ ಎಲ್ಲರೂ ಅನುಭವಿಸುವ ಈ ವಿಷಯವು ಯಾರಿಗಾದರೂ ಸ್ವಲ್ಪ ದೂರದಲ್ಲಿರುವ ಪುರುಷನ ನಾಮೋಚ್ಚಾರಣೆ ಮಾಡುವುದರಿಂದ ಅವನು ಅವಶ್ಯವಾಗಿ ಹತ್ತಿರಕ್ಕೆ ಬರುತ್ತಾನೆ. ದೂರದಲ್ಲಿರುವ ವ್ಯಕ್ತಿಯ ಪ್ರಬಲವಾದ ಮಾನಸಿಕಸಂಕಲ್ಪದಿಂದ ಧ್ಯಾನಮಾಡಿದರೆ ಅವನ ಮನಸ್ಸಿನಲ್ಲಿ ಧ್ಯಾನಮಾಡಿದವನ ಸ್ಮರಣೆಯು ಮತ್ತೆ ಮತ್ತೆ ಉಂಟಾಗುತ್ತದೆ. ಅದೇ ರೀತಿಯಲ್ಲಿ ಭಗವಂತನ ನಾಮರೂಪವಾದ ಮಂತ್ರದ ವಾಚಿಕಜಪದಿಂದ, ಮನನರೂಪದ ಮಾನಸಿಕಜಪದಿಂದ ಪರಮಾತ್ಮನು ಮಂತ್ರವನ್ನು ಜಪಿಸುವವನ ಕಡೆಗೆ ಅಭಿಮುಖನಾಗುತ್ತಾನೆ. ತನ್ನ ಇಷ್ಟದೇವತೆಯ ನಾಮವಾದ ಮಂತ್ರದ ವಿಷಯದಲ್ಲಿನ ಅತಿಶಯವಾದ ಶ್ರದ್ಧೆಯಿಂದ ಮಂತ್ರಜಪಮಾಡುವವನು ಮಂತ್ರ

ಮಹಿಮೆಯಿಂದ, ತನ್ನ ಸಾನ್ನಿಧ್ಯದಲ್ಲಿರುವ ಭಗವಂತನ ಕೃಪೆಯಿಂದ ಬೆಂಕಿಯ ಮಧ್ಯದಲ್ಲಿದ್ದರೂ ಸುಡುವುದಿಲ್ಲ, ವಿಷಪಾನ ಮಾಡಿದರೂ ಅಮರನಾಗುತ್ತಾನೆ ಎಂಬ ವಿಷಯವು ಭಗವಂತನ ಭಕ್ತರಾದ ಪ್ರಹ್ಲಾದ, ಮೀರಾಬಾಯಿ ಮೊದಲಾದವರ ಚರಿತ್ರೆಗಳಿಂದ ತಿಳಿದುಬರುತ್ತದೆ. ಮಂತ್ರಶಾಸ್ತ್ರದಲ್ಲಿ ಶಿವಕವಚ, ದುರ್ಗಾಕವಚ ಇತ್ಯಾದಿ ರೂಪದಿಂದ ವಿಭಿನ್ನ ದೇವತೆಗಳ ಮಂತ್ರರೂಪದ ಕವಚಗಳೂ ಸಹ ನಿರೂಪಿತವಾಗಿವೆ. ಜಪಾದಿಗಳಿಂದ ಸಿದ್ಧವಾದ ಸಾಮಾನ್ಯ ಮಂತ್ರಗಳೂ ಸಹ ಭೂತಬಾಧೆಗಳ, ಸರ್ಪ, ಚೇಳು ಮುಂತಾದವುಗಳ ಕಚ್ಚುವಿಕೆಯಿಂದ ಉಂಟಾದ ವಿಷದಬಾಧೆಯೂ ಸಹ ನಿವಾರಣೆಯಾಗುವುದನ್ನು ಪ್ರತ್ಯಕ್ಷವಾಗಿ ಎಲ್ಲರೂ ನೋಡಿರಲು, ಮಂತ್ರರಾಜವೆಂದು ಕರೆಯಲ್ಪಡುವ ಪಂಚಾಕ್ಷರ ಮಹಾಮಂತ್ರದ ಮಹಿಮೆಯನ್ನು ಯಾರು ತಾನೆ ಹೇಳಲು ಸಾಧ್ಯ! ಅತಿಶಯವಾದ ಶ್ರದ್ಧೆಯಿಂದ ಈ ಮಂತ್ರವನ್ನು ಜಪಿಸುವುದರಿಂದ ಸಾಧಕನು ದುಃಖತ್ರಯಗಳಿಂದ ಅವಶ್ಯವಾಗಿ ರಕ್ಷಿಸಲ್ಪಡುತ್ತಾನೆ. ಆದುದರಿಂದ ಮಂತ್ರವು ಬಹಿರಂಗ ಆವರಣವೆನಿಸಿದೆ.

ನಮಃ ಪದಂ ತತ್‌ಖಲು ಜೀವವಾಚಿ ಶಿವಃಪದಂ ತತ್ಪರಮಾತ್ಮವಾಚಿ।
ಅಯೇತಿ ತಾದಾತ್ಮ್ಯಪದಂ ತದೇತನ್ನಮಃ ಶಿವಾಯೇತಿ ಜಗಾದ ಮಂತ್ರ॥[೫೯]

"'ನಮಃ' ಎಂಬ ಪದವು ಜೀವಾತ್ಮ ವಾಚಕವಾಗಿದ್ದು, 'ಶಿವಃ' ಎಂಬ ಪದವು ಪರಮಾತ್ಮ ವಾಚಕವಾಗಿದೆ. 'ಅಯ' ಎಂಬ ಪದವು ಅವರಿಬ್ಬರ ತಾದಾತ್ಮ್ಯ (ಅಭೇದ)ವನ್ನು ಬೋಧಿಸುವುದರಿಂದ ಈ ಮಂತ್ರವನ್ನು 'ನಮಃ ಶಿವಾಯ' ಎಂದು ಹೇಳಿದೆ" ಎಂಬ ಮಾಯಿದೇವನ ಉಕ್ತಿಯಂತೆ ಶಿವ-ಜೀವರ ಅಭೇದರೂಪ ಅರ್ಥಾನುಸಂಧಾನ ಪುರಸ್ಸರವಾಗಿ ಈ ಪಂಚಾಕ್ಷರಮಹಾಮಂತ್ರದ ಜಪದಿಂದ ಸಾಧಕನ ಐಕ್ಯಬೋಧೆಯುಂಟಾಗುತ್ತದೆ. ತನ್ಮೂಲಕ ಸಾಧಕನ ಸಂಕುಚಿತ ಶಕ್ತಿಗಳು ವಿಕಾಸಹೊಂದುತ್ತವೆ ಮತ್ತು ಜೀವಾತ್ಮನು ಪರಮಾತ್ಮನೊಂದಿಗೆ ಬೆರೆಯುತ್ತಾನೆ. ಈ ರೀತಿಯಾಗಿ ಈ ಮಂತ್ರವನ್ನು ಜೀವತ್ವಕ್ಕೆ ಕಾರಣವೆಂದು ಆಪಾದಿಸಲಾಗುವ ಅವಿದ್ಯೆಯನ್ನು ನಿವಾರಣೆ ಮಾಡುವ ಮೂಲಕ ಪುನರ್ಜನ್ಮ-ಮರಣರೂಪ ಸಂಸಾರದ ದುಃಖದಿಂದ ಶಾಶ್ವತವಾಗಿ ರಕ್ಷಿಸಲ್ಪಡುತ್ತಾನೆ. ಈ ಪ್ರಕಾರವಾಗಿ ಮಂತ್ರಾನುಸಂಧಾನದಿಂದ ಉಂಟಾಗುವ ಐಕ್ಯಬೋಧೆಯು ಅಂತರಂಗ ಮಂತ್ರವೆನಿಸಿ, ಅದೇ ಅಂತರಂಗದ ಆವರಣವೆಂದೂ ಸಹ ಬೋಧಿಸಲಾಗಿದೆ.

ಹೀಗೆ ಸ್ಥೂಲ ಅಷ್ಟಾವರಣಗಳು ಬಹಿರಂಗದ ಮತ್ತು ಸೂಕ್ಷ್ಮ ಅಷ್ಟಾವರಣಗಳು ಅಂತರಂಗದ ರಕ್ಷಣೆಮಾಡುತ್ತವೆ. ಈ ಅಷ್ಟಾವರಣಗಳು ಮುಕ್ತಿಗೆ ಸಹಕಾರಿ ಕಾರಣಗಳೆಂದು ಅಂಗೀಕರಿಸಿರುವ ಕಾರಣದಿಂದ ಇವುಗಳನ್ನು ಸಾಧಕನ ಆಧ್ಯಾತ್ಮಿಕ ಅಂಗಗಳೆಂತಲೂ ಕರೆಯಲಾಗಿದೆ. ಕೈ, ಕಾಲು ಮುಂತಾದ ಅಂಗಗಳಿಲ್ಲದೆ ಲೌಕಿಕ

---

[೫೯] ಅ.ಸೂ, ೬.೪೬

ವ್ಯವಹಾರವು ಹೇಗೆ ಸರಿಯಾಗಿ ನಡೆಯುವುದಿಲ್ಲವೋ ಹಾಗೆಯೇ ಅಷ್ಟಾವರಣಗಳಿಲ್ಲದೆ ಸಾಧಕನ ಆಧ್ಯಾತ್ಮಿಕ ವ್ಯವಹಾರವೂ ಸಹ ಸರಿಯಾದ ರೀತಿಯಲ್ಲಿ ಉಂಟಾಗದು ಎಂಬ ಕಾರಣದಿಂದ ಈ ಆವರಣಗಳು ಸಾಧಕನ ಆಧ್ಯಾತ್ಮಿಕ ಅಂಗಗಳು ಎಂದು ಕರೆಯಲ್ಪಟ್ಟಿವೆ.

ಪಂಚಾಚಾರಗಳನ್ನು ವೀರಶೈವದ ಪ್ರಾಣಗಳೆಂದು ಕರೆದಿರುವುದರಿಂದ ಮೊದಲು ಅವುಗಳ ಸ್ವರೂಪಾದಿಗಳನ್ನು ಕುರಿತು ಪ್ರತಿಪಾದನೆಮಾಡಬೇಕಾಗಿತ್ತು. ಆದರೆ ಅಂಗರೂಪವಾದ ಅಷ್ಟಾವರಣಗಳ ಪ್ರತಿಪಾದನೆಯ ನಂತರ ಪಂಚಾಚಾರಗಳು ಪ್ರಾಣ ಸ್ವರೂಪದವುಗಳೆಂದು ಪ್ರತಿಪಾದಿಸುವುದು ಎಷ್ಟರಮಟ್ಟಿಗೆ ಸರಿ? ಎಂದು ಜಿಜ್ಞಾಸುಗಳು ಸಂದೇಹಪಡುವುದು ಸಹಜ. ಅದಕ್ಕೆ ಕಾರಣವಿಷ್ಟು- ಶಾಸ್ತ್ರಗಳು ವಿಧಿಸಿರುವ ಮಾರ್ಗವನ್ನು ಅನುಸರಿಸುವುದೇ ಆಚಾರ. ಶಾಸ್ತ್ರಗಳಲ್ಲಿ ಅಂಗರೂಪವಾದ ಅಷ್ಟಾವರಣಗಳ ಪ್ರತಿಪಾದನೆಯ ನಂತರ ಪಂಚಾಚಾರಗಳ ನಿರೂಪಣೆಯಿದೆ. ಆದುದರಿಂದ ಈ ಕ್ರಮವನ್ನು ಅನುಸರಿಸಲಾಗಿದೆ. ಆಚಾರವು ಮನುಷ್ಯನ ಶ್ರೇಷ್ಠವಾದ ಅಲೌಕಿಕ ಆಭರಣವಾಗಿದೆ. ವಸ್ತ್ರ, ಆಭರಣಾದಿಗಳಿಗಿಂತಲೂ ಆಚಾರದಿಂದ ಭೂಷಿತವಾಗಿರುವುದೇ ಶ್ರೇಷ್ಠವು. ವಸ್ತ್ರಾದಿಗಳಿಂದ ಅಲಂಕೃತವಾಗಿದ್ದರೂ ಸಹ ಆಚಾರವಿಲ್ಲ ದವನು ಲೋಕದಲ್ಲಿ ನಿಂದಿತನಾಗುತ್ತಾನೆ. ವಸ್ತ್ರಾದಿಗಳಿಂದ ಭೂಷಿತನಲ್ಲದಿದ್ದರೂ ಆಚಾರವಂತನಾದವನು ಲೋಕದಲ್ಲಿ ಪೂಜಾರ್ಹನಾಗುತ್ತಾನೆ. ಶಿವಾನುಗ್ರಹಪ್ರಾಪ್ತಿಗೆ ಜ್ಞಾನದೊಂದಿಗೆ ಆಚಾರವೂ ಸಹ ಅವಶ್ಯಕವೆಂದು ವೀರಶೈವಾಚಾರ್ಯರು ಬೋಧಿಸಿದ್ದಾರೆ.[೫೯(ಎ)] ಆಚಾರಶೀಲರಾದವರ ಅಂತರಾತ್ಮವು ಯಾವಾಗಲೂ ಪ್ರಸನ್ನ ವಾಗಿರುತ್ತದೆ, ದೇಹದ ಸ್ವಾಸ್ಥ್ಯವು ವೃದ್ಧಿಯಾಗುತ್ತದೆ ಮತ್ತು ಸಂಪೂರ್ಣ ಆಯುಸ್ಸು ಉಂಟಾಗುತ್ತದೆ. ದುರಾಚಾರಗಳಿಂದ ಕೂಡಿದವನು ಲೋಕದ ನಿಂದೆಗೆ ಪಾತ್ರನಾಗಿ, ಆಧಿವ್ಯಾಧಿಗಳಿಂದ ಕೂಡಿ, ಅಲ್ಪಾಯುವೂ, ದುಃಖಕ್ಕೆ ಪಾತ್ರನೂ ಆಗುತ್ತಾನೆ. ಮಂತ್ರ, ಶಾಸ್ತ್ರ, ಶ್ರೌತಕರ್ಮ, ಶ್ರೀಗುರು -ಇವಾವುವೂ ದುರಾಚಾರಿಯನ್ನು ಪಾವನಗೊಳಿಸುವುದಿಲ್ಲ.[೬೦] ಆದುದರಿಂದ ಜಗತ್ತಿನಲ್ಲಿ ಪ್ರತಿಯೊಬ್ಬರೂ ಸದಾಚಾರಿಗಳಾಗಬೇಕು. ಆ ಕಾರಣದಿಂದ ವೀರಶೈವ ಸಿದ್ಧಾಂತದ ರೀತ್ಯಾ ಆಚಾರದಿಂದ ಕೂಡಿದ ಜ್ಞಾನವೇ ಮೋಕ್ಷಕ್ಕೆ ಕಾರಣವೆಂದು ಪ್ರತಿಪಾದಿಸಲಾಗಿದೆ. ಆದುದರಿಂದ ಈ

೫೯(ಎ). ಜ್ಞಾನೇನಾಚಾರಯುಕ್ತೇನ ಪ್ರಸೀದತಿ ಮಹೇಶ್ವರಃ।
ತಸ್ಮಾದಾಚಾರವಾನ್ ಜ್ಞಾನೀ ಭವೇದಾದೇಹಪಾತನಮ್॥ -ಸಿ.ಶಿ., ೧೬.೧೪

೬೦. ಆಚಾರಹೀನಂ ನ ಪುನಂತಿ ವೇದಾ ಹ್ಯಾಚಾರಹೀನಂ ನ ಪುನಾತಿ ಶಾಸ್ತ್ರಮ್।
ಆಚಾರಹೀನಂ ನಹಿ ಶ್ರೌತಕರ್ಮ ಹ್ಯಾಚಾರಹೀನಂ ನ ಗುರುಃ ಪುನಾತಿ॥
-ಬ್ರಹ್ಮಸೂತ್ರ ಶ್ರೀಕರಭಾಷ್ಯ, ೩-೧-೧೦

ಸಿದ್ಧಾಂತದಲ್ಲಿ ಜ್ಞಾನೋತ್ಪತ್ತಿ ಯಾಗುವುದಕ್ಕೆ ಮೊದಲು ಮತ್ತು ನಂತರದಲ್ಲಿ ಎಲ್ಲರೂ ಆಚರಿಸಬೇಕಾದ ಐದು ಬಗೆಯ ಆಚಾರಗಳು[೬೧] ಪ್ರತಿಪಾದಿತವಾಗಿವೆ.

ವೀರಶೈವ ಸಿದ್ಧಾಂತದಲ್ಲಿ ಪಂಚಾಚಾರಗಳು ಸಾಧಕನ ಪಂಚಪ್ರಾಣಗಳೆಂದು ಹೇಳಲಾಗಿದೆ. ಅದರ ರಹಸ್ಯವಿಷ್ಟು- ಕೈ, ಕಾಲು ಮೊದಲಾದ ಅವಯವಗಳಿಂದ ಶರೀರವು ಕೂಡಿದ್ದರೂ ಸಹ ಪ್ರಾಣವಿಲ್ಲದಿದ್ದರೆ ಪ್ರೇತವೆಂದು ಕರೆಯಲಾಗುತ್ತದೆ. ಪ್ರೇತದ ವಾಸಸ್ಥಾನ ಸ್ಮಶಾನವೇ ಹೊರತು ಮನೆ-ಮಠಾದಿಗಳಲ್ಲ. ಸ್ಮಶಾನದಲ್ಲಿಯೂ ಕೂಡ ಶರೀರವನ್ನು ಭೂಸಮಾಧಿಯನ್ನೋ ಅಥವಾ ದಹನವನ್ನೋ ಮಾಡಲಾಗುತ್ತದೆ. ಪ್ರೇತಸ್ಪರ್ಶದಿಂದ ಅಥವಾ ಪ್ರೇತಯಾತ್ರಿಗಳ ಸ್ಪರ್ಶಮಾಡುವುದರಿಂದ ಸೂತಕ ವುಂಟಾಗುತ್ತದೆ. ಅದನ್ನು ನಿವಾರಿಸುವ ಸಲುವಾಗಿ ಸ್ನಾನಾದಿ ಶೌಚಕ್ರಿಯೆಗಳನ್ನು ಜನಗಳು ಆಚರಿಸುತ್ತಾರೆ. ಇದೇ ರೀತಿಯಾಗಿ ಆಚಾರವೆಂಬ ಪ್ರಾಣವಿಲ್ಲದ ಜನಗಳು ಪ್ರೇತಕ್ಕೆ ಸಮಾನರಾಗಿ, ಸ್ಮಶಾನದಲ್ಲಿ ವಾಸಿಸಲು ಯೋಗ್ಯರಾಗಿ ದಹನಕ್ಕೆ ಅರ್ಹರಾಗುತ್ತಾರೆ. ಆದುದರಿಂದ ಸೀತೆಯನ್ನು ಹುಡುಕಲು ಲಂಕೆಗೆ ಹೋದ ಹನುಮಂತನು ಅಲ್ಲಿ ವಾಸ ಮಾಡುತ್ತಿರುವ ಜನಗಳು ಆಚಾರಶೂನ್ಯರಾಗಿರುವುದನ್ನು ನೋಡಿ ಅವರೆಲ್ಲರೂ ಪ್ರೇತಗಳು ಹಾಗೂ ದಹನಕ್ಕೆ ಅರ್ಹರೆಂದು ಭಾವಿಸಿ ಲಂಕೆಯನ್ನೇ ಸುಟ್ಟನು. ಇಂದಿನ ಕಾಲದಲ್ಲಿಯೂ ಸಹ ನವರಾತ್ರಿಯ ಉತ್ಸವದಲ್ಲಿ ಬೃಹದಾಕಾರದ ರಾವಣಾದಿಗಳ ವಿಗ್ರಹಗಳನ್ನು ಮಾಡಿ ಸುಡಲಾಗುತ್ತದೆ. ದುರಾಚಾರಿಗಳು ಪ್ರೇತಸಮಾನರಾದ ಕಾರಣ ಅವರು ದಹನಕ್ಕೆ ಅರ್ಹರೆಂಬುದು ಈ ದಹನದ ಸಂಕೇತ. ಆಚಾರಹೀನನಾದವನು ಯಾವನೇ ಇರಲಿ ಅವನು ಪ್ರೇತಕ್ಕೆ ಸಮಾನ ಎಂದು ಇದರಿಂದ ತಿಳಿಯುತ್ತದೆ. ಆದುದರಿಂದಲೇ ಸಮಸ್ತ ಮಾನವರು ಆಚಾರಪ್ರಾಣವುಳ್ಳವರಾಗಲಿ ಎಂದು ವೀರಶೈವಾಚಾರ್ಯರು ಪಂಚಾಚಾರಗಳನ್ನು ಉಪದೇಶಿಸಿದ್ದಾರೆ.

ಪಂಚಾಚಾರಗಳಲ್ಲಿ ಲಿಂಗಾಚಾರವು ಮೊದಲನೆಯದು. ವೀರಶೈವ ಸಿದ್ಧಾಂತದಲ್ಲಿ ಜೀವಾತ್ಮನನ್ನು ಅಂಗವೆಂದು, ಶಿವನನ್ನು ಲಿಂಗವೆಂದು ಕರೆಯಲಾಗಿದೆ. ಲಿಂಗದ ಸ್ವರೂಪವು ಪ್ರಾಪ್ತವಾಗಲು ಅಂಗನು ಅನುಷ್ಠಾನ ಮಾಡಬೇಕಾದ ಆಚಾರವೇ ಲಿಂಗಾಚಾರ. ಈ ಆಚಾರದಲ್ಲಿ ಏಕದೇವೋಪಾಸನೆಯ ರಹಸ್ಯವು ಅಡಗಿದೆ. ನೀರನ್ನು ಪಡೆಯಲು ಬಯಸುವ ರೈತನು ಒಂದೇ ಸ್ಥಳದಲ್ಲಿ ನಿರಂತರವಾಗಿ ಭೂಮಿಯನ್ನು ಅಗೆಯುವುದರಿಂದ ಜಲರೂಪ ಫಲವು ಹೇಗೆ ಶೀಘ್ರವಾಗಿ ದೊರೆಯುತ್ತದೆಯೋ ಹಾಗೆಯೇ ಒಬ್ಬನೇ ಭಗವಂತನನ್ನು ನಿಷ್ಠೆಯಿಂದ ಪೂಜಿಸುತ್ತಾ ಜಪ, ಧ್ಯಾನಾದಿಗಳನ್ನು ಮಾಡುವುದರಿಂದ ಸಾಧಕನೂ ಸಹ ತನ್ನ ಉಪಾಸನಾಪ್ರಾಪ್ತಿರೂಪದ ಸಾಯುಜ್ಯ ಫಲವನ್ನು ಪಡೆಯುತ್ತಾನೆ.

---

[೬೧] ಲಿಂಗಾಚಾರಃ ಸದಾಚಾರಃ ಶಿವಾಚಾರಸ್ತಥೈವ ಚ।
ಭೃತ್ಯಾಚಾರೋ ಗಣಾಚಾರಃ ಪಂಚಾಚಾರಾಃ ಪ್ರಕೀರ್ತಿತಾಃ।। -ಚ.ಜ್ಞಾ, ಕ್ರಿ.ಪಾ, ೯.೪

ಇದಲ್ಲದೆ ವೀರಶೈವದ ಈ ಲಿಂಗಾಚಾರವು ಸತಿ-ಪತಿಭಾವದಿಂದ ಕೂಡಿರುವಂತಹದ್ದಾಗಿದೆ. ಇಲ್ಲಿ ಜೀವಾತ್ಮನೇ ಸತಿ, ಅವನು ಉಪಾಸನೆಮಾಡುವ ಇಷ್ಟಲಿಂಗವೇ ಪತಿ. ಪತಿವ್ರತೆಯಾದ ಸ್ತ್ರೀಯು ಪರಪುರುಷನನ್ನು ಪ್ರೀತಿಮಾಡುವುದರಿಂದ ಹೇಗೆ ವ್ಯಭಿಚಾರಿಣಿ ಎನಿಸುತ್ತಾಳೆಯೋ ಹಾಗೆಯೇ ಇಷ್ಟಲಿಂಗೋಪಾಸಕನಾದ ಸಾಧಕನು ಇಷ್ಟಲಿಂಗಪೂಜೆಯನ್ನು ಬಿಟ್ಟು ಬೇರೆ ದೇವತೆಗಳ ಉಪಾಸನೆಯಲ್ಲಿ ಆಸಕ್ತನಾದರೆ ಆಗ ಅವನೂ ಸಹ ಅಂತಹ ದೋಷಕ್ಕೆ ಪಾತ್ರನಾಗುತ್ತಾನೆ. ಆದುದರಿಂದ "ನಹಿ ನಿಂದಾ ನಿಂದಿತುಮೀಷ್ಟೇಽಪಿ ತು ಸ್ತುತ್ಯಮೇವಸ್ತೌತಿ" (ನಿಂದೆ ಎಂಬುದು ನಿಂದಿಸುವುದಕ್ಕೆ ಎಂದಲ್ಲ, ಸ್ತುತ್ಯವಾದುದನ್ನು ಸ್ತುತಿಸುವುದಕ್ಕೋಸ್ಕರ) ಎಂಬ ಮೀಮಾಂಸಾನ್ಯಾಯದಂತೆ ಬೇರೆ ದೇವತೆಗಳ ಉಪಾಸನೆಯನ್ನು ನಿಷೇಧಮಾಡುವುದರ ಮೂಲಕ ತನ್ನ ಇಷ್ಟಲಿಂಗದಲ್ಲಿ ಸಾಧಕನ ಭಾವನೆಯು ದೃಢವಾಗುವಂತೆ ಮಾಡಿದ್ದಾರೆ ವೀರಶೈವಾಚಾರ್ಯರು. ಇಂತಹ ದೃಢವಾದ ಭಾವನೆಯನ್ನು ಎಲ್ಲ ಮಾನವರೂ ಸಹ ತಮ್ಮ ಇಷ್ಟದೇವತೆಗಳಲ್ಲಿ ಭಾವಿಸಿಕೊಂಡು ತಮ್ಮ ತಮ್ಮ ಗುರಿಯನ್ನು ತಲುಪುವುದು ಎಂದು ಎಲ್ಲ ಮಾನವರಿಗೆ ಈ ಸಂದೇಶ.

ಸದಾಚಾರವು ಎರಡನೆಯ ಆಚಾರವಾಗಿದೆ. ಈ ಆಚಾರದಲ್ಲಿ ಧರ್ಮಮಾರ್ಗದಿಂದ ಗಳಿಸಿದ ಸಂಪತ್ತಿನಿಂದ ಪ್ರತಿನಿತ್ಯವೂ ಗುರು, ಲಿಂಗ, ಜಂಗಮರ ಸಂತರ್ಪಣೆಯನ್ನು ಮಾಡಬೇಕೆಂದು ಉಪದೇಶಿಸಲಾಗಿದೆ. ಈ ಆಚಾರವು ಅತಿಥಿ ಸೇವೆಯ ರಹಸ್ಯದಿಂದ ಕೂಡಿದೆ. ಮನೆಯಲ್ಲಿ ತಯಾರಿಸಿದ ಅನ್ನ-ಪಾನಾದಿಗಳನ್ನು ನಾವೇ ಸ್ವತಃ ತಿಂದು ಸಂತೋಷಪಡುವುದು ಭಾರತೀಯ ಸಂಸ್ಕೃತಿಯಾಗಿರದೆ ಇತರರನ್ನು ಅದರಿಂದ ತೃಪ್ತಿಪಡಿಸುವುದೇ ಆಗಿದೆ. ಆದುದರಿಂದಲೇ ಭಗವಾನ್ ಶ್ರೀಕೃಷ್ಣನು[೬೨] ಯಜ್ಞದಲ್ಲಿ ಉಳಿದ ಅನ್ನವನ್ನು ಊಟಮಾಡುವವನು ಎಲ್ಲ ಪಾಪಗಳಿಂದ ಮುಕ್ತನಾಗುತ್ತಾನೆಂದು ನಿರೂಪಿಸಿ, ಅದಕ್ಕೆ ವಿರುದ್ಧವಾಗಿ ವರ್ತಿಸಿದವರು ಪಾಪಕ್ಕೆ ಭಾಜನರಾಗುತ್ತಾರೆಂದು ಸಂದೇಶಿಸಿ ಸ್ವಾರ್ಥಿಗಳಾದ ಮಾನವರನ್ನು ಅತಿಥಿಸೇವೆಯಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರಣೆಮಾಡಿದ್ದಾನೆ. ಅಡುಗೆಯು ಸಿದ್ಧವಾದ ನಂತರ ಭೂತಬಲಿಯನ್ನು ಅರ್ಪಿಸಿ, ಅತಿಥಿಗಳಿಗೆ ಅರ್ಪಣೆಮಾಡಿದ ಅನಂತರವೇ ಅನ್ನವನ್ನು ಭುಂಜಿಸಬೇಕೆಂದು ಧರ್ಮಶಾಸ್ತ್ರಗಳಲ್ಲಿಯೂ ಉಕ್ತವಾಗಿದೆ.

ಅತಿಥಿಸತ್ಕಾರ ರೂಪವಾದ ಈ ಸದಾಚಾರವು "ಸದಾಚಾರಃ ಪ್ರಿಯಃ ಶಂಭುಃ ಸದಾಚಾರೇಣ ಪೂಜ್ಯತೇ"[೬೨(ಎ)] (ಶಿವನು ಸದಾಚಾರಪ್ರಿಯನಾಗಿದ್ದು,

---

[೬೨] ಯಜ್ಞಶಿಷ್ಟಾಶಿನಃ ಸಂತೋ ಮುಚ್ಯಂತೇ ಸರ್ವಕಿಲ್ಬಿಷೈಃ।
ಭುಂಜತೇ ತೇ ತ್ವಘಂ ಪಾಪಾ ಯೇ ಪಚತ್ಯಾತ್ಮಕಾರಣಾತ್॥
-ಭಗವದ್ಗೀತಾ, ೩.೧೩

[೬೨(ಎ)] ಸಿ.ಶಿ, ೧೬.೬೬

ಸದಾಚಾರದಿಂದಲೇ ಪೂಜಿಸಲ್ಪಡುತ್ತಾನೆ) ಎಂಬ ಆಚಾರ್ಯೋಕ್ತಿಯಂತೆ ಶಿವಾನುಗ್ರಹವನ್ನುಂಟು ಮಾಡುತ್ತದೆ. ಇದನ್ನು ನಿಷ್ಠೆಯಿಂದ ಪಾಲನೆಮಾಡುವುದರಿಂದ ಸಾಕ್ಷಾತ್ ಶಿವನ ಆರಾಧನೆಯನ್ನು ಮಾಡಿದ ಫಲವೇ ಲಭಿಸುತ್ತದೆ. ಶಿವನು ನಿತ್ಯತೃಪ್ತನು. ಅವನಿಗೆ ಯಾವುದೇ ಬಗೆಯ ಭೋಗದ ಅವಶ್ಯಕತೆಯೂ ಇರುವುದಿಲ್ಲ. ಶಿವ-ಶಕ್ತಿಯರು ಜಗತ್ತಿನ ಮಾತಾ-ಪಿತೃಗಳಾಗಿದ್ದಾರೆ.[೬೩] ಎಲ್ಲ ಪ್ರಾಣಿಗಳೂ ಅವರಿಬ್ಬರ ಸಂತಾನರೂಪವುಳ್ಳವರು. ಲೋಕದಲ್ಲಿ ತಮ್ಮ ಸಂತಾನದ ಭೋಜನದಿಂದ ಪಿತೃಗಳು ಹೇಗೆ ಸಂತೋಷ ಪಡುತ್ತಾರೆಯೋ ಹಾಗೆಯೇ ಅತಿಥಿರೂಪದಿಂದ ಆಗಮಿಸಿದ ಯಾವುದಾದರೂ ಪ್ರಾಣಿಗೆ ಭೋಜನನೀಡುವುದರಿಂದ ತಂದೆಗೆ ಸಮಾನನಾದ ಶಿವನು ಸ್ವಯಂ ಸಂತುಷ್ಟನಾಗುತ್ತಾನೆ. ಆದುದರಿಂದ ಯಾರು ಶಿವನಿಗೆ ಭೋಜನವನ್ನು ಮಾಡಿಸಲು ಬಯಸುವರೋ ಅವರೆಲ್ಲರೂ ಅತಿಥಿಗಳಿಗೆ ಭೋಜನಾದಿಗಳನ್ನು ಮಾಡಿಸಲಿ ಎಂದು ಶಿವನು ಸಂತೃಪ್ತನಾಗುವ ಸುಲಭವಾದ ಉಪಾಯವನ್ನು ವೀರಶೈವಾಚಾರ್ಯರು ಉಪದೇಶಿಸಿದ್ದಾರೆ. ಈ ಸದಾಚಾರದಿಂದ ಜಗತ್ತಿನ ಆದರ ಮತ್ತು ಶಿವಾನುಗ್ರಹವೆಂಬ ಐಹಿಕ-ಆಮುಷ್ಮಿಕ ಫಲಗಳೆರಡು ಸಾಧಕನಿಗೆ ಲಭಿಸುತ್ತವೆ.

ಶಿವಾಚಾರವು ಮೂರನೆಯ ಆಚಾರವು. ಅನನ್ಯಭಾವದಿಂದ ಶಿವನಿಗೆ ಶರಣಾಗತನಾಗುವುದೇ ಶಿವಾಚಾರವೆನಿಸುತ್ತದೆ. ಈ ಆಚಾರವು ಹೃದಯವೈಶಾಲ್ಯದ ತತ್ತ್ವದಿಂದ ಕೂಡಿದೆ. ವ್ಯಕ್ತಿ ಮತ್ತು ಸಮಾಜದ ಉನ್ನತಿಗೆ ಹೃದಯವೈಶಾಲ್ಯ ಮತ್ತು ದೃಷ್ಟಿವೈಶಾಲ್ಯಗಳ ಅವಶ್ಯಕತೆಯಿದೆ. ಶಿವನ ಉಪಾಸನೆಯಿಂದ ಈ ಎರಡೂ ಸುಲಭವಾಗಿ ಲಭ್ಯವಾಗುತ್ತವೆ. ಹೇಗೆಂದರೆ ಶಿವನು ಸರ್ವವ್ಯಾಪಕನೂ, ಎಲ್ಲ ಮಂಗಳಗಳನ್ನು ನೀಡುವವನೂ ಆಗಿದ್ದಾನೆ. ಅಂತಹ ಶಿವನನ್ನು ಉಪಾಸನೆ ಮಾಡುವುದರಿಂದ ಆ ಬಗೆಯ ಗುಣಗಳುಂಟಾಗುತ್ತವೆ. ನಿಧಾನವಾಗಿ ಶಿವಭಾವನೆಯು ದೃಢವಾಗುವುದರಿಂದ ಎಲ್ಲೆಡೆ ಶಿವದೃಷ್ಟಿಯುಂಟಾಗುತ್ತದೆ. ಇದರಿಂದ ಸಾಧಕನಲ್ಲಿರುವ ಸಂಕುಚಿತಬುದ್ಧಿಯು ನಿವಾರಣೆಯಾಗಿ "ಸರ್ವಂ ಶಿವಮಯಂ ಜಗತ್" (ಈ ಜಗತ್ತೆಲ್ಲವೂ ಶಿವನಿಂದ ಕೂಡಿದೆ) ಎಂಬ ವಿಶಾಲಭಾವನೆಯುಂಟಾಗುತ್ತದೆ. ಆಗ ಅವನು ಯಾರನ್ನೂ ದ್ವೇಷಿಸುವುದಿಲ್ಲ, ಯಾವುದರಿಂದಲೂ ಜುಗುಪ್ಸೆಯನ್ನು ಹೊಂದುವುದಿಲ್ಲ. ಪರಸ್ಪರ ದ್ವೇಷ ಮತ್ತು ಜುಗುಪ್ಸೆಗಳಿಂದ ಸಮಾಜದಲ್ಲಿ ವಿಷಮತೆ ಉಂಟಾಗುತ್ತದೆ. ವಿಷಮತೆಯೇ ವಿಷ ಮತ್ತು ಸಮತೆಯೇ ಸಂಜೀವಿನಿ. ಹೀಗೆ ಹೃದಯವೈಶಾಲ್ಯವನ್ನು ಸಂಪಾದಿಸಿ, ಸಮಾಜದಲ್ಲಿ ಸಮತೆಯನ್ನು ಪ್ರತಿಷ್ಠಾಪನೆ ಮಾಡುವುದಕ್ಕೋಸ್ಕರ ವೀರಶೈವಾಚಾರ್ಯರು ಈ ಶಿವಾಚಾರವನ್ನು ಪ್ರಚಾರಗೊಳಿಸಿ ಆಚರಿಸಿದರು.

---

[೬೩] ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ।
ಜಗತಃ ಪಿತರೌ ವಂದೇ ಪಾರ್ವತೀಪರಮೇಶ್ವರೌ॥ -ರಘುವಂಶ, ೧.೧

ಗಣಾಚಾರವು ನಾಲ್ಕನೆಯ ಆಚಾರ. ಈ ಆಚಾರದಲ್ಲಿ ದುರ್ಗುಣಗಳನ್ನು ದೂರಮಾಡುವ ರಹಸ್ಯವು ಅಡಗಿದೆ. ನಿಂದೆಯು ಅತಿನಿಕೃಷ್ಟವಾದ ದುರ್ಗುಣವೆಂದು ಶಾಸ್ತ್ರಗಳು ಪ್ರತಿಪಾದಿಸಿವೆ. ನಿಂದನೆ ಮಾಡುವುದರಿಂದ ಮನಸ್ಸಿನ ಮಾಲಿನ್ಯವು ವೃದ್ಧಿಸುತ್ತದೆ. ಇದರ ಪರಿಜ್ಞಾನವಿಲ್ಲದಿರುವುದರಿಂದಲೇ ಸಾಮಾನ್ಯವಾಗಿ ಜನಗಳು ನಿಂದನೆಮಾಡಲು ಆತುರರಾಗಿರುವುದು ಕಂಡುಬರುತ್ತದೆ. ಬೇರೆಯವರು ಮಾಡಿದ ನಿಂದೆಯಿಂದ ಉಂಟಾಗುವ ಪಾಪವು ನಿಂದಕನಿಗೆ ಅಂಟಿಕೊಳ್ಳುತ್ತದೆ. ಇತರರನ್ನು ನಿಂದಿಸುವವನು ಯಾವ ರೀತಿಯಾಗಿ ದೋಷಯುಕ್ತನಾಗುವನೋ ಅದೇ ರೀತಿಯಾಗಿ ಅದನ್ನು ಕೇಳುವವನೂ ಸಹ ಅವನಂತೆಯೇ ಪಾಪಿಯಾಗುತ್ತಾನೆ. ಆದುದರಿಂದ ಶಿವಭಕ್ತನು ಯಾವಾಗಲೂ, ಯಾರನ್ನೂ ನಿಂದಿಸಬಾರದು ಮತ್ತು ಶಿವನ, ಶಿವಭಕ್ತರ, ಶಿವಧರ್ಮದ ನಿಂದೆಯನ್ನು ಕೇಳಬಾರದು. ಗಣಾಚಾರ ಸ್ವರೂಪವನ್ನು ನಿರೂಪಣೆ ಮಾಡುವ ಸಂದರ್ಭದಲ್ಲಿ- "ಶಿವನಿಂದಾಕರಂ ದೃಷ್ಟ್ವಾ ಘಾತಯೇತ್"[೬೪] (ಶಿವನಿಂದಕರನ್ನು ನೋಡಿದರೆ ಘಾತಿಸಬೇಕು) ಎಂದು ಆಚಾರ್ಯರು ಉಪದೇಶಿಸಿದ್ದಾರೆ. ಇಲ್ಲಿ 'ಘಾತನ' ಶಬ್ದಕ್ಕೆ 'ಶರೀರಘಾತನ' ಎಂಬ ಅರ್ಥವು ಗೌಣವಾಗಿದ್ದು, 'ಬುದ್ಧಿಘಾತನ'ವೆಂಬ ಮುಖ್ಯಾರ್ಥವನ್ನು ಗ್ರಹಿಸಬೇಕು. ಮನಸ್ಸು, ಬುದ್ಧಿಗಳ ದೋಷಗಳಿಂದಲೇ ಮನುಷ್ಯನು ದುರ್ಮಾರ್ಗಿಯಾಗುತ್ತಾನೆ. ಕೇವಲ ಶರೀರಘಾತನದಿಂದ ವ್ಯಕ್ತಿಯ ಮನಸ್ಸು, ಬುದ್ಧಿಗಳ ಶುದ್ಧಿಯಾಗುವುದಿಲ್ಲ. ಆದುದರಿಂದ ಒಳ್ಳೆಯ ರೀತಿಯಾಗಿ ಉಪದೇಶಮಾಡುವುದರಿಂದ ಅವನ ಬುದ್ಧಿಯ ಘಾತನವನ್ನು ಮಾಡಬೇಕು. ಶಾಸ್ತ್ರೋಪದೇಶದಿಂದ ಸಮಾಜವು ಶುದ್ಧಿಯಾಗುವಂತೆ ಶಸ್ತ್ರದಿಂದ ಎಂದಿಗೂ ಆಗುವುದಿಲ್ಲ. ದುರ್ಬುದ್ಧಿಯಿಂದ ಕೂಡಿದ ಮನುಷ್ಯನು ಶಾಸ್ತ್ರೋಪದೇಶದಿಂದ ಸನ್ಮಾರ್ಗದಲ್ಲಿ ನಡೆಯುವುದಿಲ್ಲ. ಶಸ್ತ್ರಪ್ರಹಾರದಿಂದ ಸಾಯಿಸಿದರೂ ಕೂಡ ಮೃತನಾದ ಅವನು ಪುನರ್ಜನ್ಮಗಳಲ್ಲಿ ಅದೇ ದುರ್ಬುದ್ಧಿಯಿಂದ ಕೂಡಿದವನಾಗಿ ಮತ್ತೆ ಅದೇ ದುರ್ವ್ಯವಹಾರಗಳಲ್ಲಿ ಪ್ರವೃತ್ತನಾಗುತ್ತಾನೆ. ಆದುದರಿಂದ ಸಾಮಾಜಿಕ ದುಷ್ಪ್ರವೃತ್ತಿಗಳನ್ನು ಶಾಸ್ತ್ರೋಪದೇಶಗಳಿಂದ ನಿವಾರಿಸುವುದು ಅವಶ್ಯಕ. ಅತ್ಯಂತ ದುಷ್ಟನಾದವನು ಶಾಸ್ತ್ರೋಪದೇಶವನ್ನು ಕೇಳದೇ ಇದ್ದರೆ ಆಗ ಬೇರೆ ಮಾರ್ಗವಿಲ್ಲದೆ ಸಮಾಜದ ಹಿತದೃಷ್ಟಿಯಿಂದ ಅವನ ಶರೀರವನ್ನು ಘಾತನಗೊಳಿಸುವುದು ದೋಷವಲ್ಲ. ದಕ್ಷನ ಶಿರಚ್ಛೇದನದ ಮೂಲಕ ಅಂತಹ ಆಚಾರವನ್ನು ವೀರಭದ್ರನು ಅನುಷ್ಠಾನ ಮಾಡಿದನು. ಶಿವನ ಗಣಗಳಲ್ಲೊಬ್ಬನಾದ ವೀರಭದ್ರನು ಈ ಆಚಾರವನ್ನು ಅನುಷ್ಠಾನ ಮಾಡಿದ ಕಾರಣದಿಂದ ಇದಕ್ಕೆ ಗಣಾಚಾರ ಎಂದು ಹೆಸರಾಯಿತು. ಈ ಆಚಾರದಲ್ಲಿ ವ್ಯಕ್ತಿ ಮತ್ತು ಸಮಾಜದ ಪರಿಶುದ್ಧಿಯ ಭಾವವು ಅಡಗಿದೆ.

ಭೃತ್ಯಾಚಾರವು ಐದನೆಯ ಆಚಾರ. ಇದು ವಿನಯಗುಣಗಳನ್ನು ಬೋಧಿಸುತ್ತದೆ. ಅಹಂಕಾರದಿಂದ ನಾಶ, ವಿನಯದಿಂದ ಔನ್ನತ್ಯಪ್ರಾಪ್ತಿ ಎಂಬುದು ಶಾಸ್ತ್ರಪ್ರಮಾಣ ಮತ್ತು ಲೋಕಾನುಭವದಿಂದ ಸಿದ್ಧವಾಗಿದೆ. ಭೃತ್ಯಾಚಾರವನ್ನು ಪಾಲಿಸುವ ಸಾಧಕನಲ್ಲಿ

---

[೬೪] ಸಿ.ಶಿ, ೯.೩೮

"ಮಾದೃಶ ಆಚಾರಶೀಲಃ ಕೋಽಸ್ತಿ" (ನನ್ನಂತಹ ಆಚಾರವಂತನು ಯಾರು ಇದ್ದಾನೆ?) ಎಂಬ ಕೃತಕವಾದ ಸ್ವಾಭಿಮಾನವು ಇರುತ್ತದೆ. ಇಂತಹ ಅಭಿಮಾನವು ಸಾಧಕನಲ್ಲಿ ಉಂಟಾದರೆ ಅವನ ಪತನವು ನಿಶ್ಚಿತ. ಆದುದರಿಂದ ಉತ್ಕೃಷ್ಟಗುಣವುಳ್ಳ ಸಾಧಕನ ಪತನವು ಆಗಬಾರದು ಎಂಬ ಕಾರಣದಿಂದ ಶೈವಾಗಮಗಳಲ್ಲಿ ಭೃತ್ಯಾಚಾರವನ್ನು ಕೊನೆಯಲ್ಲಿ ಉಪದೇಶಿಸಲಾಗಿದೆ. ಈ ಬಗೆಯ ಭೃತ್ಯಭಾವನೆಯಿಂದಲೇ ಸಮಾಜದಲ್ಲಿ ಸಮಾನತೆ ಮತ್ತು ಶಾಂತಿಗಳು ನೆಲೆಸುವಂತೆ ಮಾಡಲು ಸಾಧ್ಯ. ಇಲ್ಲದಿದ್ದರೆ ಎಲ್ಲರೂ ಅಹಂಕಾರಿಗಳಾದರೆ ಸುಂದೋಪಸುಂದನ್ಯಾಯದಂತೆ ಎಲ್ಲರ ವಿನಾಶವು ನಿಶ್ಚಿತ. ಆದುದರಿಂದ ಈ ಭೃತ್ಯಭಾವವು ಕೆಳಹಂತದಲ್ಲಿರುವ ಸಾಧಕರಿಗೆ ಮಾತ್ರವಲ್ಲ ಉಚ್ಚಮಟ್ಟದ ಸಾಧಕರಿಗೂ, ಸಿದ್ಧರಿಗೂ ಸಹ ಆವಶ್ಯಕವೆಂದು ತಿಳಿಯಬೇಕು. ಈ ಆಚಾರದ ಪ್ರಚಾರವು ಉಪದೇಶದಿಂದಲ್ಲದೆ ಆಚರಣೆಯಿಂದ ಆಗುವಂತಹದ್ದು. ಆ ಕಾರಣದಿಂದ ಭಗವಾನ್ ಶ್ರೀಕೃಷ್ಣನೂ ಸಹ- "ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ"[೭೪(ಎ)] (ಉತ್ತಮರು ಯಾವ ಯಾವ ಆಚಾರಗಳನ್ನು ಅನುಷ್ಠಾನಮಾಡುವರೋ ಸಾಮಾನ್ಯರು ಅವರನ್ನೇ ಅನುಸರಿಸುತ್ತಾರೆ) ಎಂಬಲ್ಲಿ ಆಚರಣೆಮಾಡುವುದರಿಂದಲೇ ಆಚಾರದ ಉಪದೇಶ ವೆಂದು ಸೂಚಿಸಿದ್ದಾನೆ. ಆದುದರಿಂದ ಇಂದಿನ ಕಾಲದಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿರುವ ನೇತಾರರೆಲ್ಲರೂ ಸಹ ನಿಜವಾದ ಭೃತ್ಯಾಚಾರಿಗಳೆಂದು ಭಾವಿಸಬೇಕು. ಆ ರೀತಿಯಾಗಿ ಆದದ್ದೇ ಆದರೆ ಎಲ್ಲ ಜನರು ಅವರನ್ನು ಅನುಕರಣೆಮಾಡುವುದರಿಂದ ಸಮಾಜದಲ್ಲಿ ಸರ್ವತೋಮುಖ ಸುಖ-ಶಾಂತಿಗಳು ನೆಲೆಸುತ್ತವೆ.

ಪೂರ್ವೋಕ್ತ ವೀರಶೈವರ ಪಂಚಾಚಾರಗಳಲ್ಲಿ ಏಕದೇವೋಪಾಸನೆಯ ಮಹತ್ತ್ವ, ಅತಿಥಿಸೇವೆಯ ರಹಸ್ಯ, ಹೃದಯವೈಶಾಲ್ಯದ ಪ್ರಕ್ರಿಯೆ, ದುರ್ಗುಣಗಳನ್ನು ದೂರ ಮಾಡುವ ಉಪಾಯ, ನಿರಹಂಕಾರತ್ವಗಳನ್ನು ಸಂಪಾದಿಸುವ ಮಹತ್ತ್ವಪೂರ್ಣವಾದ ತತ್ತ್ವಗಳಿವೆ. ಈ ಐದು ತತ್ತ್ವಗಳು ವ್ಯಕ್ತಿ ಮತ್ತು ಸಮಾಜದ ಪ್ರಾಣದೋಪಾದಿಯಲ್ಲಿವೆ. ಆದುದರಿಂದಲೇ ವೀರಶೈವಾಚಾರ್ಯರು ಪಂಚಾಚಾರಗಳನ್ನು ಪ್ರಾಣಗಳೆಂದು ಅಂಗೀಕರಿಸಿದರು. ವೀರಶೈವರು ಮಾತ್ರವಲ್ಲದೆ ಇತರೆ ಎಲ್ಲ ಜನಾಂಗದ ಆಧ್ಯಾತ್ಮಿಕ ಸಾಧಕರು ಪೂರ್ವೋಕ್ತವಾದ ಪಂಚಾಚಾರಗಳನ್ನು ನಿಷ್ಠೆಯಿಂದ ಪಾಲಿಸಲು ಉತ್ಸುಕರಾಗಿದ್ದಾರೆ. ಈ ಆಚಾರಗಳು ವೀರಶೈವರಿಗೆ ಮಾತ್ರವಲ್ಲ ಸಮಸ್ತ ಮಾನವಜನಾಂಗದ ಸುಧಾರಣೆಯನ್ನು ಮಾಡುವಂತಹವುಗಳಾಗಿವೆ. ಆದುದರಿಂದ ಪ್ರತಿಯೊಬ್ಬರೂ ತಮ್ಮ ತಮ್ಮ ಶಕ್ತ್ಯಾನುಸಾರವಾಗಿ ಈ ಆಚಾರಗಳನ್ನು ಪಾಲಿಸುವುದು ಆದ್ಯಕರ್ತವ್ಯ.

ಅಷ್ಟಾವರಣಗಳು ಅಂಗಗಳಾಗಿರುವಂತೆ, ಪಂಚಾಚಾರಗಳು ಪ್ರಾಣಗಳಂತೆ ಇರುವುದರಿಂದ ಷಟ್‌ಸ್ಥಲವು ಆತ್ಮರೂಪದ್ದಾಗಿದೆ. ಅದು ಹೇಗೆಂಬುದನ್ನು ಈಗ

೭೪(ಎ). ಭಗವದ್ಗೀತಾ, ೩.೨೧

ನಿರೂಪಿಸಲಾಗುವುದು. ವೀರಶೈವ ಸಾಧಕನು ಪೂರ್ವೋಕ್ತ ಅಷ್ಟಾವರಣಗಳೇ ಅಂಗವಾಗಿ, ಪಂಚಾಚಾರಗಳೇ ಪ್ರಾಣವಾಗಿದ್ದು ಷಟ್‌ಸ್ಥಲಸೋಪಾನಮಾರ್ಗದಿಂದ ಕ್ರಮವಾಗಿ ತನ್ನ ಶಕ್ತಿಯ ವಿಕಾಸವನ್ನು ಹೊಂದುತ್ತ ಕೊನೆಯಲ್ಲಿ ಶಿವಸಾಯುಜ್ಯವನ್ನು ಪಡೆಯುತ್ತಾನೆ ಎಂಬುದು ವೀರಶೈವ ಸಿದ್ಧಾಂತ. ಇಲ್ಲಿ ಉಕ್ತವಾದ ಷಟ್‌ಸ್ಥಲಗಳು[೬೫] ಸಾಧಕನ ಆತ್ಮಸ್ವರೂಪದವುಗಳೆಂದು ಹೇಳಲಾಗಿದೆ. ಸರ್ವಾಂಗಪರಿಪೂರ್ಣವೂ, ಪ್ರಾಣಯುಕ್ತವೂ ಆದ ಶರೀರದಲ್ಲಿ ಒಂದು ವೇಳೆ ಆತ್ಮವಿಲ್ಲದಿದ್ದರೆ, ಆಗ ಶರೀರವು ಪ್ರಾಣಯುಕ್ತವಾಗಿದ್ದರೂ ಹೇಗೆ ಪ್ರಜ್ಞೆ ಇಲ್ಲದಂತಾಗುತ್ತದೆಯೋ ಹಾಗೆಯೇ ಸಾಧಕನು ಆವರಣ-ಆಚಾರಗಳಿಂದ ಸಂಪನ್ನನಾಗಿದ್ದರೂ ಷಟ್‌ಸ್ಥಲೋಪಾಸನೆಯ ಕ್ರಮದಿಂದ ಶಿವಭಾವವನ್ನು ಪಡೆಯದಿದ್ದರೆ ಅವನಲ್ಲಿರುವ ಆವರಣ-ಆಚಾರಗಳು ನಿರರ್ಥಕವಾಗುತ್ತವೆ. ಆದುದರಿಂದ ವೀರಶೈವ ಸಿದ್ಧಾಂತದಲ್ಲಿ ಜೀವನು ಶಿವಭಾವವನ್ನು ಹೊಂದುವುದೇ ಷಟ್‌ಸ್ಥಲಸೋಪಾನದ ವೈಶಿಷ್ಟ್ಯ.

ಈ ಷಟ್‌ಸ್ಥಲಸೋಪಾನ ಪದ್ಧತಿಯಲ್ಲಿ ಜ್ಞಾನ-ಕರ್ಮಗಳಿಂದ ಕೂಡಿದ ಭಕ್ತಿಯ ಪ್ರಾಶಸ್ತ್ಯವಿರುತ್ತದೆ. ಆಣವಾದಿ ಮಲತ್ರಯಗಳಿಂದ ಆವೃತನಾದ್ದರಿಂದ ಸಂಕುಚಿತ ಶಕ್ತಿಯುಳ್ಳ ಜೀವಾತ್ಮನು ಗುರುದೀಕ್ಷೆಯ ಮೂಲಕ ಮಲತ್ರಯಗಳು ನಾಶವಾಗಲು, ಶ್ರದ್ಧಾ, ನಿಷ್ಠಾ, ಅವಧಾನ, ಅನುಭವ, ಆನಂದ ಮತ್ತು ಸಮರಸ ಎಂಬ ಷಡ್ವಿಧ ಭಕ್ತಿಗಳ ಸಹಾಯದಿಂದ ತನ್ನ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳ ಉಪಾಸನೆಯನ್ನು ಮಾಡಿ ಶಕ್ತಿಗಳ ವಿಕಾಸವನ್ನು ಪಡೆದು ಲಿಂಗಸ್ವರೂಪಿಯಾಗುತ್ತಾನೆ. ಈ ವಿಕಾಸಕ್ರಮವು ಇಲ್ಲಿ ಕೀಟಭ್ರಮರನ್ಯಾಯದಿಂದ[೬೬] ನಿರೂಪಿತವಾಗಿದೆ. ಯಾವ ರೀತಿಯಾಗಿ ಕೀಟವು ಭ್ರಮರಕ್ಕಿಂತಲೂ ಭಿನ್ನವಾಗಿದ್ದರೂ ಸಹ, ನಿರಂತರವಾಗಿ ಭ್ರಮರದ ಧ್ಯಾನಮಾಡುವುದರಿಂದ ಕಾಲಕಳೆದಂತೆ ಭ್ರಮರವೇ ಆಗುವಂತೆ ಶಕ್ತಿಗಳ ಸಂಕೋಚದಿಂದ ಪರಶಿವನಿಗಿಂತ ಬೇರೆಯಾದ ಜೀವಾತ್ಮನು ಶಿವೋಪಾಸನೆಯಿಂದ ವಿಕಾಸಗೊಂಡ ಶಕ್ತಿಗಳುಳ್ಳವನಾಗಿ ನೀರಿನಲ್ಲಿ ನೀರು ಬೆರೆತಂತೆ ಪರಶಿವನಲ್ಲಿ ಬೆರೆಯುತ್ತಾನೆ.

ಇಲ್ಲಿ ನಿರೂಪಿತವಾಗಿರುವ ಷಡ್ವಿಧ ಭಕ್ತಿಗಳು ಬೇರೆ ದರ್ಶನಗಳಲ್ಲಿರದೆ ಸ್ವಲ್ಪ ವಿಲಕ್ಷಣಸ್ವರೂಪದವುಗಳಾಗಿವೆ. ಈ ಭಕ್ತಿಗಳು ಪರಶಿವನಶಕ್ತಿಯ ಅವಸ್ಥಾಂತರ

---

೬೫. ಆದೌ ಭಕ್ತಸ್ಥಲಂ ಪ್ರೋಕ್ತಂ ತತೋ ಮಾಹೇಶ್ವರಸ್ಥಲಮ್।
ಪ್ರಸಾದಿಸ್ಥಲಮನ್ಯತ್ತು ಪ್ರಾಣಲಿಂಗಿಸ್ಥಲಂ ತತಃ॥
ಶರಣಸ್ಥಲಮಾಖ್ಯಾತಂ ಷಷ್ಠಮೈಕ್ಯಸ್ಥಲಂ ಮತಮ್॥ -ಸಿ.ಶಿ, ೫.೨೩

೬೬. ಕೀಟೋ ಭ್ರಮರಯೋಗೇನ ಭ್ರಮರೋ ಭವತಿ ಧ್ರುವಮ್।
ಮಾನವಃ ಶಿವಯೋಗೇನ ಶಿವೋ ಭವತಿ ನಿಶ್ಚಯಮ್॥
-ಲಿಂಗಪುರಾಣ, ೨-೨೧-೯೫

ರೂಪಗಳಿಂದು ತಿಳಿದುಬರುತ್ತದೆ. ಇದರ ತಾತ್ಪರ್ಯವಿಷ್ಟು- ಸೃಷ್ಟಿಕಾರ್ಯದಲ್ಲಿ ಶಿವನೊಂದಿಗೆ ಕೂಡಿಕೊಂಡ ಶಕ್ತಿಯೇ ಜೀವಾತ್ಮನಲ್ಲಿ ಭಕ್ತಿರೂಪದಿಂದ ಪ್ರವೇಶಿಸಿ ಅವನ ಮುಕ್ತಿಗೆ ಕಾರಣವಾಯಿತು. ಜಗತ್ತಿನಲ್ಲಿ ತಾಯಿಯು ಪತಿಯ ಸಂಪರ್ಕದಿಂದ ಪುತ್ರೋತ್ಪತ್ತಿಗೆ ಕಾರಣೀಭೂತಳಾಗಿ, ಹುಟ್ಟುವ ಮಕ್ಕಳಿಗೆ ಅವರ ತಂದೆಯು ಯಾರು ಎಂಬ ಜ್ಞಾನವನ್ನು ತಿಳಿಸಲು ಹೇಗೆ ಸಹಾಯಕಳೋ ಹಾಗೆಯೇ ಈ ಶಕ್ತಿಯು ಪರಶಿವನ ಸಂಬಂಧದಿಂದ ಜೀವಾತ್ಮನ ಉತ್ಪತ್ತಿಗೆ ಕಾರಣೀಭೂತಳಾದರೂ ಸಹ ಮತ್ತೊಮ್ಮೆ ಭಕ್ತಿಯ ರೂಪದಿಂದ ಜೀವಾತ್ಮನ ಮುಕ್ತಿಯಲ್ಲಿ, ಅರ್ಥಾತ್ ಜೀವಾತ್ಮನಿಗೆ ಪರಶಿವನ ಜ್ಞಾನದ ಅರಿವುಂಟಾಗಲು ಸಹಾಯಕಳಾಗುತ್ತಾಳೆ. ಆದುದರಿಂದ ಈ ಸಿದ್ಧಾಂತದಲ್ಲಿ ಷಟ್‌ಸ್ಥಲಸೋಪಾನಕ್ಕೆ ಷಡ್ವಿಧಭಕ್ತಿಗಳ ಆವಶ್ಯಕತೆಯು ಪ್ರತಿಪಾದಿತವಾಗಿದೆ.

ಷಡ್ವಿಧ ಭಕ್ತಿಗಳಲ್ಲಿ ಶ್ರದ್ಧಾಭಕ್ತಿಯು ಮೊದಲನೆಯದು. ಲೌಕಿಕ ವ್ಯವಹಾರದಲ್ಲಿ ವಿಶ್ವಾಸವು ಹೇಗೆ ಅವಶ್ಯಕವೋ ಹಾಗೆಯೇ ಷಟ್‌ಸ್ಥಲಮಾರ್ಗದಲ್ಲಿ ಶ್ರದ್ಧೆಯು ಮುಖ್ಯವಾಗಿ ಬೇಕಾಗಿರುವಂತಹದ್ದು. ಇದರಿಂದ ಸಾಧಕನಿಗೆ ತನ್ನ ಇಷ್ಟಲಿಂಗ ಮೊದಲಾದವುಗಳಲ್ಲಿ ಅತಿಶಯವಾದ ಪ್ರೀತಿಯುಂಟಾಗುತ್ತದೆ. ಈ ಭಗವಂತನ ವಿಷಯದಲ್ಲಿನ ಪ್ರೀತಿಯಿಂದ ಸಾಧಕನ ಮನಸ್ಸು ನಿಧಾನವಾಗಿ ಸಾಂಸಾರಿಕ ವಿಷಯಗಳಿಂದ ವಿಮುಖವಾಗುತ್ತದೆ. ನಿಷ್ಠಾಭಕ್ತಿಯು ಎರಡನೆಯದು. ಈ ಭಕ್ತಿಯಿಂದ ಸಾಧಕನ ಇಷ್ಟಲಿಂಗದ ವಿಷಯದ ಪ್ರೀತಿಯು ದೃಢವಾಗುತ್ತದೆ. ಈ ದೃಢತೆಯು ಪ್ರಾಣತ್ಯಾಗದ ಸಂದರ್ಭದಲ್ಲಿಯೂ ವಿಚಲಿತವಾಗುವುದಿಲ್ಲ. ಅವಧಾನಭಕ್ತಿಯು ಮೂರನೆಯದು. ಈ ಭಕ್ತಿಯುಕ್ತನಾದ ಸಾಧಕನು ಸದಾ ಸಾವಧಾನದಿಂದ ವರ್ತಿಸುತ್ತಾನೆ. ಅನವಧಾನಾವಸ್ಥೆಯಲ್ಲಿ ಬಹಳಷ್ಟು ಅನರ್ಥಗಳು ಸಂಭವಿಸುತ್ತವೆ. ಅಲೆಗಳಿಲ್ಲದ ಜಲಾಶಯದಲ್ಲಿ ಸೂರ್ಯ-ಚಂದ್ರರ ಪ್ರತಿಬಿಂಬಗಳು ಸ್ಪಷ್ಟವಾಗಿ ಕಾಣಿಸುವಂತೆ ಸಾವಧಾನದಿಂದಿರುವ ಮನಸ್ಸಿನಲ್ಲಿ ಪರಶಿವನ ಅನುಭವವುಂಟಾಗುತ್ತದೆ. ಈ ಪರಶಿವಾನುಭವವೇ ಈ ಸಿದ್ಧಾಂತದಲ್ಲಿ ಅನುಭವಭಕ್ತಿ ಎಂದು ಕರೆಯುತ್ತಾರೆ. ವಿಷಯಾನುಭವದ ನಂತರ ಆನಂದಪ್ರಾಪ್ತಿ ಎಂಬ ಲೋಕಾನುಭವವು ಹೇಗೆ ಉಂಟೋ ಹಾಗೆಯೇ ಇಲ್ಲಿಯೂ ಸಹ ಶಿವಾನುಭವದ ತರುವಾಯವೇ ಶಿವಾನಂದದ ಪ್ರಾಪ್ತಿಯು. ಆದುದರಿಂದ ಸಾಧಕನು ಅನುಭವಿಸುವ ಶಿವಾನಂದವೇ ಆನಂದಭಕ್ತಿ ಎನಿಸಿದೆ. ಶಿವಾನಂದವನ್ನು ಅನುಭವಿಸುತ್ತಲೇ ಸಾಧಕನು ಶಿವನೊಂದಿಗೆ ಸಮರಸಹೊಂದುತ್ತಾನೆ. ಈ ಸಮರಸಾವಸ್ಥೆಯೇ ಸಮರಸಭಕ್ತಿಯು.

ಶ್ರದ್ಧಾಭಕ್ತಿಯುಕ್ತನಾದ ಸಾಧಕನು ಭಕ್ತ ಎಂದೂ, ನಿಷ್ಠಾಭಕ್ತಿಯಿಂದ ಕೂಡಿದಾಗ ಮಾಹೇಶ್ವರ ಎಂದೂ, ಅವಧಾನಭಕ್ತಿಯಿಂದ ಪ್ರಸಾದಿ ಎಂದೂ, ಅನುಭವಭಕ್ತಿಯಿಂದ ಪ್ರಾಣಲಿಂಗಿ ಎಂದೂ, ಆನಂದಭಕ್ತಿಯಿಂದ ಶರಣ ಎಂದೂ ಮತ್ತು ಸಮರಸಭಕ್ತಿಯುಕ್ತನಾದಾಗ ಐಕ್ಯ ಎಂಬ ಹೆಸರುಗಳಿಂದ ಕರೆಯಲ್ಪಡುವ ಅಂಗನು (ಜೀವಾತ್ಮನು) ಆರು ಬಗೆಯ ಭಕ್ತಿಗಳ ಸಹಾಯದಿಂದಲೇ ಷಟ್‌ಸ್ಥಲಸೋಪಾನವನ್ನು ಏರಿ ತಾನು ಉಪಾಸನೆ

ಮಾಡುವ ಲಿಂಗದಲ್ಲಿ ಸಮರಸಹೊಂದುತ್ತಾನೆ. ಇದೇ ಲಿಂಗಾಂಗಸಾಮರಸ್ಯ ಎಂಬ ವೀರಶೈವರ ಷಟ್‌ಸ್ಥಲಪ್ರಾಸಾದದ ಅಂತಿಮ ಮೆಟ್ಟಿಲು. ಪೂಜ್ಯ ಶ್ರೀ ರೇಣುಕಾಚಾರ್ಯರು-

> ಜಲೇ ಜಲಮಿವ ನ್ಯಸ್ತಂ ವಹ್ನೌ ವಹ್ನಿರಿವಾರ್ಪಿತಮ್।
> ಪರಬ್ರಹ್ಮಣಿ ಲೀನಾತ್ಮಾ ವಿಭಾಗೇನ ನ ದೃಶ್ಯತೇ॥[೬೭]

"ನೀರಿನಲ್ಲಿ ನೀರನ್ನು ಬೆರೆಸಿದಂತೆಯೂ, ಬೆಂಕಿಯಲ್ಲಿ ಬೆಂಕಿಯನ್ನು ಬೆರೆಸಿದಂತೆಯೂ ಪರಬ್ರಹ್ಮಸ್ವರೂಪ ಮಹಾಲಿಂಗದಲ್ಲಿ ಆತ್ಮನನ್ನು ಲಯಗೊಳಿಸಿದ ಶಿವಯೋಗಿಯು ಪರಬ್ರಹ್ಮಸ್ವರೂಪಕ್ಕಿಂತ ಭಿನ್ನವಾಗಿ ತೋರುವುದಿಲ್ಲ" ಎಂದು ಲಿಂಗಾಂಗಸಾಮರಸ್ಯ ಸ್ವರೂಪವನ್ನು ವರ್ಣಿಸಿದ್ದಾರೆ. ಹೀಗೆ ಐಕ್ಯಭಾವವನ್ನು ಹೊಂದಿದ ಸಾಧಕನ ಹಿಂದಿನ ಪಶುಭಾವವು ನಾಶವಾಗುತ್ತದೆ. ಅದನ್ನು ಸಿದ್ಧಾಂತ ಶಿಖಾಮಣಿಯು ಹೀಗೆ ನಿರೂಪಿಸಿದೆ:

> ಪಶುತ್ವಂ ಚ ಪತಿತ್ವಂ ಚ ಮಾಯಾಮೋಹವಿಕಲ್ಪಿತಮ್।
> ತಸ್ಮಿನ್ ಪ್ರಲಯಮಾಪನ್ನೇ ಕಃ ಪಶುಃ ಕೋ ನು ವಾ ಪತಿಃ॥[೬೮]

"ಜೀವರೂಪವಾದ ಪಶುತ್ವವಾಗಲಿ, ಶಿವರೂಪವಾದ ಪತಿತ್ವವಾಗಲಿ ಮಾಯಾಶಕ್ತಿಯ ಮೋಹದಿಂದ ಉತ್ಪನ್ನವಾಗುವುದು. ಆ ಉಭಯವೂ ಲಯವನ್ನು ಹೊಂದಲು ಯಾವನು ಪಶುವು? ಯಾವನು ಪತಿಯು? (ಈ ಪಶು-ಪತಿ ಭೇದವೇ ಉಳಿಯುವುದಿಲ್ಲ ಎಂದರ್ಥ)."

ಈ ರೀತಿಯಾಗಿ ವೀರಶೈವ ಸಿದ್ಧಾಂತದಲ್ಲಿ ಬಂಧನಾವಸ್ಥೆಯಲ್ಲಿ ಪರಮಾತ್ಮನಿಂದ ಎಲ್ಲ ರೀತಿಯಲ್ಲಿಯೂ ಭಿನ್ನನಾದ ಜೀವನು ಷಟ್‌ಸ್ಥಲೋಪಾಸನೆಯ ಕ್ರಮದಿಂದ ಕ್ರಮವಾಗಿ ಶಕ್ತಿಗಳ ವಿಕಾಸವನ್ನು ಪಡೆದು ಐಕ್ಯಾವಸ್ಥೆಯಲ್ಲಿ ಪರಶಿವನೊಂದಿಗೆ ಸಮರಸವನ್ನು ಹೊಂದುತ್ತಾನೆಂದು ಪ್ರತಿಪಾದಿಸಲಾಗಿದೆ.

ಇದರ ಭಾವವಿಷ್ಟು- ಕೀಟವು ದುಂಬಿಗಿಂತಲೂ ಭಿನ್ನವಾದ ರೂಪವುಳ್ಳದ್ದಾದರೂ ನಿರಂತರವಾಗಿ ದುಂಬಿಯನ್ನು ಕುರಿತು ಚಿಂತನೆಮಾಡುವ ಸಾಮರ್ಥ್ಯದಿಂದ ಕೀಟದ ಸ್ವಭಾವವನ್ನು ತ್ಯಜಿಸಿ ದುಂಬಿಯ ಆಕಾರ ಮತ್ತು ಗುಣಗಳನ್ನು ಪಡೆದು ಮತ್ತೆ ಎಂದಿಗೂ ಕೀಟತ್ವವನ್ನು ಪಡೆಯುವುದಿಲ್ಲವೋ; ಪಾದರಸದ ಸಂಪರ್ಕದಿಂದ ತಾಮ್ರದ ತಾಮ್ರತ್ವವು ಸಹಜವಾಗಿ ನಿವಾರಣೆಯಾಗಿ ಸುವರ್ಣತ್ವವು ಪ್ರಾಪ್ತವಾಗಿ ಮತ್ತೆ ಎಂದಿಗೂ ತಾಮ್ರತ್ವವನ್ನು ಪಡೆಯದಿರುವಂತೆ; ಸ್ವಾತಿನಕ್ಷತ್ರದ ಸಂದರ್ಭದಲ್ಲಿ ಸಮುದ್ರದಲ್ಲಿರುವ ಚಿಪ್ಪಿನೊಳಗೆ ಬಿದ್ದ ಮಳೆಯ ನೀರು ಜಲಭಾವವನ್ನು ತ್ಯಜಿಸಿ ಅನರ್ಘ್ಯ ಮುತ್ತಿನ ಆಕಾರವನ್ನು ತಳೆದು ಮತ್ತೊಮ್ಮೆ ಜಲದ ರೂಪವನ್ನು ಹೊಂದದಿರುವಂತೆ ಪರಶಿವನಿಂದ

---

೬೭. ಸಿ.ಶಿ, ೨೦.೬೧

೬೮. ಸಿ.ಶಿ, ೧೪.೯

ಸಂಪೂರ್ಣವಾಗಿ ಭಿನ್ನನಾದ ಜೀವಾತ್ಮನು ಉಪಾಸನೆಯ ಸಾಮರ್ಥ್ಯದಿಂದ ಪರಶಿವನ ಸ್ವರೂಪಿಯಾಗಿ, ಮತ್ತೆ ಎಂದಿಗೂ ಜೀವತ್ವದ ಸ್ಥಿತಿಯನ್ನು ಹೊಂದುವುದಿಲ್ಲ. ಆದುದರಿಂದಲೇ ಭಾಷ್ಯಕಾರರಾದ ಶ್ರೀಪತಿಪಂಡಿತಾರಾಧ್ಯರು- "ಸ್ವಾಭಾವಿಕ ಜೀವತ್ವನಿವೃತ್ತಿಪೂರ್ವಕಶಿವತ್ವಪ್ರಾಪ್ತಿರೇವ ಮೋಕ್ಷಃ"[೧೯] ಎಂದು ಪೂರ್ವೋಕ್ತ ಅಭಿಪ್ರಾಯವನ್ನೇ ಸಮರ್ಥಿಸಿದ್ದಾರೆ. ಈ ಸಂದರ್ಭದಲ್ಲಿ ಈ ಅಂಶವನ್ನೂ ಸಹ ಗಮನಿಸಬೇಕು- ಶಿವಾಗಮಗಳಲ್ಲಿ ಪರಶಿವನ ಸರ್ವಜ್ಞತಾ, ತೃಪ್ತಿ, ಸ್ವತಂತ್ರತಾ, ಅಲುಪ್ತಶಕ್ತಿ ಮತ್ತು ಅನಂತಶಕ್ತಿ ಎಂಬ ಆರು ಬಗೆಯ ಶಕ್ತಿಗಳು ನಿರೂಪಿತವಾಗಿವೆ. ಭಕ್ತಾದಿ ಷಟ್‌ಸ್ಥಲಮಾರ್ಗದಿಂದ ಶಿವನ ಆರು ಬಗೆಯ ಶಕ್ತಿಗಳನ್ನು ಉಪಾಸನೆ ಮಾಡುವುದರಿಂದ ಜೀವಾತ್ಮನು ಯಾವಾಗ ಆ ಶಕ್ತಿಗಳನ್ನು ಕ್ರಮವಾಗಿ ಪಡೆಯುತ್ತಾನೋ[೨೦] ಆಗ ಅವನಲ್ಲಿರುವ ಅದ್ವೈತಭಾವನೆಯು ನಾಶವಾಗಿ ಅದ್ವೈತದ ಸ್ಥಿತಿಯು ಉಂಟಾಗುತ್ತದೆ.

ಕಾಶ್ಮೀರಶೈವ ಸಿದ್ಧಾಂತದಂತೆ ಪಶುವಿನ ಬಂಧನವು ಮಿಥ್ಯಾರೂಪದ್ದು. ಆದುದರಿಂದಲೇ ಅವರು ಪಶುಬಂಧನದ ನಿವೃತ್ತಿಯನ್ನು ಕೇವಲ ಜ್ಞಾನದಿಂದ ಪ್ರತಿಪಾದಿಸಿದ್ದಾರೆ. ಆದರೆ ವೀರಶೈವಸಿದ್ಧಾಂತದಲ್ಲಿ ಸತ್ಯವಾಗಿಯೂ ಕೇವಲ ಜ್ಞಾನದಿಂದ ಪಶುವಿನ ಬಂಧನನಿವೃತ್ತಿಯು ಅಸಾಧ್ಯವಾದುದರಿಂದ ಜ್ಞಾನದೊಂದಿಗೆ ಕರ್ಮದ ಉಪಾಸನೆಯು ನಿರೂಪಿತವಾಗಿದೆ. ಉಭಯದರ್ಶನಗಳಲ್ಲಿ ಮುಕ್ತಿಸಾಧನೆಯ ವಿಷಯದಲ್ಲಿ ವಿರುದ್ಧವಿದ್ದರೂ, ಮುಕ್ತಿಸ್ವರೂಪದ ವಿಷಯದಲ್ಲಿ ಒಮ್ಮತವಿದೆ.[೨೧] ಭೇದವಾದಿಗಳಾದ ಸಿದ್ಧಾಂತಶೈವರು ಮುಕ್ತಾವಸ್ಥೆಯಲ್ಲಿ ಜೀವಾತ್ಮನು ಶಿವನಿಗೆ ಸಮಾನನಾಗಿ ಆಗುತ್ತಾನೆ, ಶಿವನೊಂದಿಗೆ ಸಮರಸವನ್ನು ಹೊಂದುವುದಿಲ್ಲ ಎಂದು ನಿರೂಪಿಸಿದ್ದಾರೆ. ಅವರ ಈ ಬಗೆಯ ಅಭಿಪ್ರಾಯವು ದ್ವೈತಸಿದ್ಧಾಂತಾನುಸಾರವಾಗಿದೆ. ಇತರ ಶೈವದರ್ಶನಗಳಲ್ಲಿ ಪ್ರತಿಪಾದಿತವಾಗದ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳೆಂಬ ತತ್ತ್ವತ್ರಯಗಳು ನಿರೂಪಿತವಾಗಿರುವುದೇ ವೀರಶೈವದರ್ಶನದ ವೈಶಿಷ್ಟ್ಯವೆಂಬುದು ಸ್ಪಷ್ಟವಾಗಿ ಗೋಚರವಾಗುತ್ತದೆ.

---

೧೯. ಬ್ರಹ್ಮಸೂತ್ರ ಶ್ರೀಕರಭಾಷ್ಯ, ೩-೨-೫, ಪು. ೨೦೯

೨೦. ಯದ್ಭಕ್ತಸ್ಥಲಮಿತ್ಯಾಹುಸ್ತತ್ಸರ್ವಜ್ಞತ್ವಮುಚ್ಯತೇ।
ಯನ್ಮಾಹೇಶ್ವರಕಂ ನಾಮ ಸಾ ತೃಪ್ತಿರ್ಮಮಶಾಂಕರೀ॥
ಯತ್ಪ್ರಸಾದಾಭಿಧಂ ಸ್ಥಾನಂ ತದ್ಬೋಧೋ ಮೇ ನಿರಂಕುಶಃ।
ಯತ್ಪ್ರಾಣಲಿಂಗಕಂ ನಾಮ ತತ್‌ಸ್ವಾತಂತ್ರ್ಯಮುದಾಹೃತಮ್।
ಯದಸ್ತಿ ಶರಣಂ ನಾಮ ಹ್ಯಲುಪ್ತಾಶಕ್ತಿರುಚ್ಯತೇ।
ಯದೈಕ್ಯಸ್ಥಾನಮರ್ಥಸ್ಥಾ ಹ್ಯನಂತಾ ಶಕ್ತಿರುಚ್ಯತೇ॥
-ಬ್ರ.ಸೂ.ಶ್ರೀ, ಭೂಮಿಕೆ, ಪು.೧೭೭-೧೭೮

೨೧. ಸಲಿಲೇ ಸಲಿಲಂ ಕ್ಷೀರೇ ಕ್ಷೀರಮಿವ ಬ್ರಹ್ಮಣೀಲಯೀ ಸ್ಯಾತ್।
-ಪರಮಾರ್ಥಸಾರಃ, ಶ್ಲೋ.೫೧

ಶಕ್ತಿವಿಶಿಷ್ಟಾದ್ವೈತದ ಸಮನ್ವಯಸಿದ್ಧಾಂತ

ವೀರಶೈವಾಚಾರ್ಯರು ಸಮನ್ವಯವಾದಿಗಳು. ಅವರು ಇತರ ಮತ ಸಿದ್ಧಾಂತಗಳನ್ನು ಖಂಡಿಸಿ ಸ್ವಮತಪ್ರತಿಷ್ಠಾಪನಪರವಾದ ಮಾರ್ಗವನ್ನು ಬಿಟ್ಟು ಸಮನ್ವಯದ ಮೂಲಕ ದಾರ್ಶನಿಕ ಪ್ರಪಂಚದ ಜಗಳವನ್ನು ಶಾಂತಗೊಳಿಸಲು ಪ್ರಯತ್ನಿಸಿದರೆಂದು ತಿಳಿಯುತ್ತದೆ. ಆದುದರಿಂದಲೇ ಬೇರೆ ಬೇರೆ ಆಗಮಗಳ ಶ್ರವಣದಿಂದ ಸಂಶಯಗೊಂಡ ಅಗಸ್ತ್ಯ ಮಹರ್ಷಿಯನ್ನು ಕುರಿತು ಶ್ರೀ ರೇಣುಕಾಚಾರ್ಯರು-

ಸಾಂಖ್ಯಂ ಯೋಗಃ ಪಾಂಚರಾತ್ರಂ ವೇದಾಃ ಪಾಶುಪತಂ ತಥಾ।
ಏತಾನಿ ಮಾನಭೂತಾನಿ ನ ಹಂತವ್ಯಾನಿ ಯುಕ್ತಿಭಿಃ॥
ವೇದಃ ಪ್ರಧಾನಂ ಸರ್ವೇಷಾಂ ಸಾಂಖ್ಯಾದೀನಾಂ ಮಹಾಮುನೇ।
ವೇದಾನುಸಾರಣಾದೇಷಾಂ ಪ್ರಾಮಾಣ್ಯಮಿತಿ ನಿಶ್ಚಿತಮ್॥[೭೨]

"ಎಲೈ ಅಗಸ್ತ್ಯ, ಪ್ರೀತಿಯ ವೈಚಿತ್ರ್ಯದಿಂದ ಭಿನ್ನ ಭಿನ್ನ ಆಚಾರಗಳಿಂದ ಕೂಡಿದವುಗಳೂ, ಭಿನ್ನ ಭಿನ್ನ ಅರ್ಥಗಳನ್ನು ಪ್ರತಿಪಾದಿಸುವಂತಹವುಗಳೂ ಆದ ಸಿದ್ಧಾಂತಗಳು ಅನೇಕವಾಗಿರುತ್ತವೆ. ಸಾಂಖ್ಯ, ಯೋಗ, ಪಾಂಚರಾತ್ರ, ವೇದಗಳು, ಪಾಶುಪತ -ಈ ಶಾಸ್ತ್ರಗಳೆಲ್ಲವೂ ಪ್ರಮಾಣಭೂತವಾಗಿದ್ದು, ಇವುಗಳನ್ನು ಯುಕ್ತಿಪ್ರಯುಕ್ತಿಗಳಿಂದ ಖಂಡಿಸಬಾರದು. ಇಲ್ಲಿ ಹೇಳಿದ ಎಲ್ಲ ಸಾಂಖ್ಯಾದಿ ಶಾಸ್ತ್ರಗಳಲ್ಲಿ ವೇದವು ಪ್ರಧಾನವಾದುದು. ಈ ಎಲ್ಲ ಶಾಸ್ತ್ರಗಳು ವೇದಗಳನ್ನನುಸರಿಸುವುದರಿಂದ ಪ್ರಮಾಣವೆಂದು ದೃಢವಾಗುತ್ತದೆ" ಮೊದಲಾದ ರೀತಿಯಿಂದ ಸಮನ್ವಯವನ್ನೇ ಬೋಧಿಸಿದ್ದಾರೆ. ಇದರ ಆಶಯವಿಷ್ಟು- ಎಲ್ಲ ಮತಗಳೂ ವೇದ ಅಥವಾ ಆಗಮಗಳ ಶಾಖೆಗಳನ್ನು ಆಶ್ರಯಿಸಿವೆ. ವೇದಗಳಲ್ಲಿ ದ್ವೈತ, ಅದ್ವೈತ ಮತಗಳನ್ನು ಪ್ರತಿಪಾದಿಸುವಂತಹ ಮಂತ್ರಗಳಿವೆ. ಅವುಗಳನ್ನು ಆಶ್ರಯಿಸಿಯೇ ದ್ವೈತ, ಅದ್ವೈತ ಮತಗಳು ಹುಟ್ಟಿದವು. ದ್ವೈತವಾದಿಗಳು ಅದ್ವೈತಪರವಾದ ಶ್ರುತಿವಾಕ್ಯಗಳನ್ನು ಗೌಣಾರ್ಥದಲ್ಲಿಯೂ, ಅದ್ವೈತವಾದಿಗಳು ದ್ವೈತಪರವಾದ ಶ್ರುತಿಪ್ರಮಾಣಗಳನ್ನು ಗೌಣಾರ್ಥವೆಂದು ನಿರೂಪಿಸುವುದರಿಂದ ಅವರು ಜಗತ್ತಿನಲ್ಲಿ ದ್ವೈತವಾದಿಗಳು ಮತ್ತು ಅದ್ವೈತವಾದಿಗಳೆಂದು ಖ್ಯಾತರಾಗಿದ್ದಾರೆ. ಎರಡೂ ಬಗೆಯ ಶ್ರುತಿಗಳು ಶಿವನ ನಿಃಶ್ವಾಸರೂಪಗಳಾದ್ದರಿಂದ ಒಂದಕ್ಕೆ ಮುಖ್ಯಾರ್ಥವನ್ನು ಮತ್ತೊಂದಕ್ಕೆ ಗೌಣಾರ್ಥವನ್ನು ಹೇಳುವುದು ಸರಿಯಲ್ಲವೆಂದು ವೀರಶೈವಾಚಾರ್ಯರು ಅವಸ್ಥಾಭೇದದಿಂದ ಎರಡು ಬಗೆಯ ಶ್ರುತಿಗಳನ್ನೂ ಸಹ ಮುಖ್ಯಾರ್ಥತ್ವದಿಂದಲೇ ಸಮನ್ವಯವನ್ನು ಸ್ಥಾಪಿಸಿದ್ದಾರೆ. ಆದುದರಿಂದ ಭಾಷ್ಯಕಾರರಾದ ಶ್ರೀಪತಿ ಪಂಡಿತಾರಾಧ್ಯರು- "ವೀರಶೈವೈಕಸಿದ್ಧಾಂತೇ, ಸರ್ವಶ್ರುತಿ ಸಮನ್ವಯಃ"[೭೩] (ವೀರಶೈವ ಸಿದ್ಧಾಂತ ಒಂದರಲ್ಲಿಯೇ ಎಲ್ಲ ಶ್ರುತಿಗಳ ಸಮನ್ವಯವು ಪ್ರತಿಪಾದಿತವಾಗಿದೆ) ಎಂದು ಹೇಳಿದ್ದಾರೆ.

---

[೭೨] ಸಿ.ಶಿ, ೫.೩-೫

[೭೩] ಬ್ರಹ್ಮಸೂತ್ರ ಶ್ರೀಕರಭಾಷ್ಯ, ಮಂಗಲಶ್ಲೋಕ. ೧೫

ಸರ್ವಶ್ರುತಿಸಮನ್ವಯ ಪ್ರಕಾರ

ಶಕ್ತಿವಿಶಿಷ್ಟಾದ್ವೈತವೆಂಬ ಪರ್ಯಾಯನಾಮವುಳ್ಳ ವೀರಶೈವದರ್ಶನವು ಎಲ್ಲ ಶ್ರುತಿಗಳ ಸಮನ್ವಯಾರ್ಥದ ಉದ್ದೇಶದಿಂದಲೇ ಜನ್ಮತಾಳಿತು ಎಂದು ಸೂತ್ರರೂಪ ದಿಂದ ಹೇಳಲ್ಪಟ್ಟಿತು. ಉಪನಿಷದ್ವಾಕ್ಯಗಳಲ್ಲಿ ಎಲ್ಲೆಡೆಯೂ ದಾರ್ಶನಿಕರ ವಿರೋಧ ಕಂಡುಬರದೆ, ಕೆಲವು ಸ್ಥಳಗಳಲ್ಲಿ ಮಾತ್ರ ಕಂಡುಬರುತ್ತದೆ. ವಿರೋಧವಿರುವೆಡೆಗಳಲ್ಲಿ ಮಾತ್ರ ಸಮನ್ವಯವನ್ನು ಸಾಧಿಸಿದರೆ, ಎಲ್ಲ ಶ್ರುತಿಗಳ ಸಮನ್ವಯವೂ ಸಾಧಿತ ವಾದಂತೆಯೇ ಸರಿ. ಆದುದರಿಂದ ವಿವಾದಗ್ರಸ್ತವಾದ ಶ್ರುತಿವಾಕ್ಯಗಳ ಸಮನ್ವಯ ಪ್ರಕಾರವನ್ನು ಈಗ ವಿಚಾರಮಾಡಲಾಗುವುದು.

"ಸರ್ವಂ ಖಲ್ವಿದಂ ಬ್ರಹ್ಮ"[೭೪] (ಇದೆಲ್ಲವೂ ಬ್ರಹ್ಮವೇ), "ಏಕಮೇವಾದ್ವಿತೀಯಂ ಬ್ರಹ್ಮ"[೭೫] (ಏಕವೂ ಅದ್ವಿತೀಯವೂ ಆದುದು ಬ್ರಹ್ಮ), "ಸದೇವ ಸೋಮ್ಯೇದಮಗ್ರ ಆಸೀತ್"[೭೬] (ಸತ್‌ಸ್ವರೂಪವೇ ಸೃಷ್ಟಿಗೆ ಮೊದಲು ಏಕಮೇವಾದ್ವಿತೀಯವಾಗಿತ್ತು) ಇತ್ಯಾದಿ ಶ್ರುತಿವಾಕ್ಯಗಳು ಬ್ರಹ್ಮವನ್ನು ಹೊರತುಪಡಿಸಿದ ಎಲ್ಲವನ್ನೂ ನಿಷೇಧಿಸಿವೆ. ಆದರೆ "ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಃ ಸಂಭೂತಃ"[೭೭] (ಆ ಆತ್ಮನಿಂದ (ಬ್ರಹ್ಮನಿಂದ) ಆಕಾಶವು ಉತ್ಪನ್ನವಾಯಿತು) ಇತ್ಯಾದಿ ಶ್ರುತಿಗಳಲ್ಲಿ ಬ್ರಹ್ಮದಿಂದಲೇ ಜಗತ್ತಿನ ಉತ್ಪತ್ತಿಯಾಯಿತು ಎಂದು ಹೇಳಲಾಗಿದೆ. ಈ ರೀತಿಯಾಗಿ ಹೇಳುವುದರಿಂದ ಪ್ರಪಂಚವು ವಾಸ್ತವಿಕ ರೂಪದಿಂದ ಇದೆಯೋ ಅಥವಾ ಇಲ್ಲವೋ ಎಂಬ ವಿವಾದವುಂಟಾಗುತ್ತದೆ. ಈ ವಿಷಯದಲ್ಲಿ ಅದ್ವೈತವಾದಿಗಳು- ಪ್ರಪಂಚವು ಮಿಥ್ಯೆ, ಸೃಷ್ಟಿಯೇ ಮೊದಲಾದವುಗಳನ್ನು ಬೋಧಿಸುವ ಶ್ರುತಿವಾಕ್ಯಗಳು ಕಲ್ಪಿತವಾದ ಭೇದವನ್ನು ಬೋಧಿಸುವಂತಹವುಗಳು. ಆದುದರಿಂದ ಸ್ವಗತ, ಸಜಾತೀಯ, ವಿಜಾತೀಯಗಳೆಂಬ ಭೇದವಿಲ್ಲದ ಬ್ರಹ್ಮವೇ ಸತ್‌ಸ್ವರೂಪವುಳ್ಳದ್ದೆಂದು ವಾದವನ್ನು ಮಂಡಿಸಿದ್ದಾರೆ. ದ್ವೈತವಾದಿಗಳು ನಮಗೆ ಗೋಚರವಾಗುವ ಪ್ರಪಂಚದ ಸತ್ಯವನ್ನು ಮರೆಮಾಚುತ್ತಾ "ಅಸ್ಯ ಅಗ್ರೇ ಇದಮಗ್ರೇ" ಎಂದು 'ಇದಮಗ್ರೇ' (ಸತ್‌ಸ್ವರೂಪವೇ ಸೃಷ್ಟಿಗೆ ಮೊದಲು) ಎಂಬ ಪದವನ್ನು ನಿರ್ವಚನ ಮಾಡಿ ಈ ಪ್ರಪಂಚದ ಉತ್ಪತ್ತಿಗಿಂತಲೂ ಮೊದಲು ಬ್ರಹ್ಮಸದೃಶವಾದದ್ದು ಯಾವುದೂ ಇರಲಿಲ್ಲವೆಂದು ಹೇಳುವ ಸಜಾತೀಯಭೇದವನ್ನು ಮಾತ್ರ ನಿಷೇಧಿಸಿದ್ದಾರೆ. ಇದರಿಂದ ಪ್ರಪಂಚದ ಸತ್ಯತ್ವವನ್ನು ಮರೆಮಾಚಲು ಸಾಧ್ಯವಿಲ್ಲ ವೆಂಬುದು ಅವರ ಆಶಯವಾಗಿದೆ. ಇಲ್ಲಿ "ಏಕಮೇವಾದ್ವಿತೀಯಮ್" (ಎರಡಿಲ್ಲದ ಒಬ್ಬನು) ಎಂಬುದಕ್ಕೆ ಮೇಲೆ ಹೇಳಿದ ಸ್ವಗತ, ಸಜಾತೀಯ, ವಿಜಾತೀಯವೆಂಬ

---

[೭೪] ಛಾಂದೋಗ್ಯೋಪನಿಷತ್, ೩-೧೪-೧

[೭೫] ಛಾಂದೋಗ್ಯೋಪನಿಷತ್, ೬-೨-೧

[೭೬] ಛಾಂದೋಗ್ಯೋಪನಿಷತ್, ೬-೨-೧

[೭೭] ತೈತ್ತಿರೀಯೋಪನಿಶಷತ್, ೨-೧-೧

ಮೂರು ಭೇದಗಳಿಲ್ಲವೆಂಬ ಅರ್ಥದ ಸಂಕೋಚವು ದ್ವೈತವಾದಿಗಳ ವ್ಯಾಖ್ಯಾನದಲ್ಲಿ ಕಂಡುಬರುತ್ತದೆ. ಶಕ್ತಿವಿಶಿಷ್ಟಾದ್ವೈತ ವೇದಾಂತದಲ್ಲಾದರೊ ಪರಮಾತ್ಮನ ವಿಶ್ವೋತ್ತೀರ್ಣ ಮತ್ತು ವಿಶ್ವರೂಪ ಎಂಬ ಎರಡು ಅವಸ್ಥೆಗಳನ್ನು ಅಂಗೀಕರಿಸಲಾಗಿದೆ. ತನ್ನ ಆತ್ಮರೂಪ ಚಿಚ್ಛಕ್ತಿಯುಕ್ತನಾದ ವಿಶ್ವೋತ್ತೀರ್ಣನು ಸೃಷ್ಟ್ಯಾದಿ ಭೇದತ್ರಯರಹಿತನಾಗಿದ್ದು, ಮತ್ತೆ ಅವನೇ ಯಾವಾಗ ಮಾಯಾಶಕ್ತಿವಿಶಿಷ್ಟನಾಗುತ್ತಾನೆಯೋ ಆಗ ವಿಶ್ವರೂಪನಾಗುತ್ತಾನೆ. ಆದುದರಿಂದ ಪ್ರಪಂಚವು ಪರಮಾತ್ಮನ ಶಕ್ತಿಯ ವಿಕಾಸರೂಪವಾದ್ದರಿಂದ ಪರಮಾತ್ಮನ ಸತ್ಯತ್ವವನ್ನು ಒಪ್ಪಲಾಗಿದೆ. ಈ ರೀತಿಯಾಗಿ ನಿರ್ಗುಣಶ್ರುತಿಗಳು ಪರಮಾತ್ಮನ ವಿಶ್ವೋತ್ತೀರ್ಣ ಅವಸ್ಥೆಯ ಪರವಾಗಿರುವುದರಿಂದ ಮತ್ತು ಸಗುಣಶ್ರುತಿಗಳು ವಿಶ್ವರೂಪ ಪರವಾಗಿರುವುದರಿಂದ ಅರ್ಥಸಂಕೋಚವಿಲ್ಲವೆಂದು ಸಿದ್ಧಮಾಡಿರುವುದರಿಂದ ವೀರಶೈವ ಸಿದ್ಧಾಂತದಲ್ಲಿ ಉಭಯವಿಧ ಶ್ರುತಿಗಳ ಸಮನ್ವಯವು ಸ್ಪಷ್ಟವಾಗಿದೆ.

ಇದೇ ಪ್ರಕಾರವಾಗಿ "ದ್ವಾ ಸುಪರ್ಣಾ",[೭೮] "ಋತಂ ಪಿಬಂತೌ ಸುಕೃತಸ್ಯ ಲೋಕೇ"[೭೯] (ಲೋಕದಲ್ಲಿ ಪರಮಾತ್ಮ ಮತ್ತು ಜೀವಾತ್ಮರಿಬ್ಬರೂ ತಮ್ಮ ಪುಣ್ಯದ ಫಲವನ್ನು ಅನುಭವಿಸುತ್ತಿದ್ದಾರೆ) ಇತ್ಯಾದಿ ಶ್ರುತಿವಾಕ್ಯಗಳಲ್ಲಿ ಜೀವಾತ್ಮ-ಪರಮಾತ್ಮರ ಭೇದವು ನಿರೂಪಿತವಾಗಿದೆ. "ತತ್ತ್ವಮಸಿ"[೮೦] (ಆ ಬ್ರಹ್ಮವು ನೀನೇ ಆಗಿದ್ದೀಯೆ), "ಅಹಂ ಬ್ರಹ್ಮಾಸ್ಮಿ"[೮೧] (ನಾನೇ ಬ್ರಹ್ಮನಾಗಿದ್ದೇನೆ) ಇತ್ಯಾದಿಗಳಿಂದ ಅವರ ಅಭೇದವು ಪ್ರತಿಪಾದಿತವಾಗಿದೆ. ಆದುದರಿಂದ ಭೇದವು ಸತ್ಯವೆ? ಅಥವಾ ಅಭೇದವು ಸತ್ಯವೆ? ಎಂಬ ಸಂದೇಹವುಂಟಾಗುತ್ತದೆ. ಈ ವಿಷಯದಲ್ಲಿ ದ್ವೈತವಾದಿಗಳು ಭೇದವನ್ನು ಮುಖ್ಯಾರ್ಥವನ್ನಾಗಿಯೂ, "ಸಿಂಹೋ ಮಾಣವಕಃ" (ಮಾಣವಕನು ಸಿಂಹ), "ಮಮಾಯಮಾತ್ಮಾ ಭದ್ರಸೇನಃ" (ನನ್ನ ಈ ಆತ್ಮವು ಭದ್ರಸೇನ) ಇತ್ಯಾದಿಗಳಂತೆ ಗೌಣವಾದ ಅರ್ಥವನ್ನೂ ಮತ್ತು ಅದ್ವೈತಿಗಳು ಅಭೇದಾರ್ಥವನ್ನು ಮುಖ್ಯಾರ್ಥವನ್ನಾಗಿಯೂ, ಕರ್ಣನು ರಾಧೆಯ ಮಗನೆಂದು ಹೇಳುವಂತೆ ಭ್ರಮಕಲ್ಪನೆಯಿಂದ ಭೇದವನ್ನು ಸಾಧಿಸುತ್ತಾರೆ. ಶಕ್ತಿವಿಶಿಷ್ಟಾದ್ವೈತವೇದಾಂತದಲ್ಲಿ ಸಂಸಾರದಶೆಯಲ್ಲಿ ಜೀವಾತ್ಮ-ಪರಮಾತ್ಮರ ಭೇದವು ವಾಸ್ತವಿಕವೆಂದು ಒಪ್ಪಲಾಗಿದೆ. ಆದುದರಿಂದ ವೀರಶೈವರ ಷಟ್‌ಸ್ಥಲೋಪಾಸನೆಯು ಭಕ್ತಸ್ಥಲದಿಂದ ಮೊದಲ್ಗೊಂಡು ಶರಣಸ್ಥಲದ ವರೆಗೆ ಜೀವಾತ್ಮ-ಪರಮಾತ್ಮರ ಭೇದವನ್ನೇ ಪ್ರತಿಪಾದಿಸಿದೆ. ಐಕ್ಯಸ್ಥಲದಲ್ಲಿ ನೀರಿನಲ್ಲಿ ನೀರು ಬೆರೆತಂತೆ ಅವರ ಅಭೇದವು ನಿರೂಪಿತವಾಗಿದೆ. ಹೀಗೆ ಜೀವಾತ್ಮನ ಅವಸ್ಥಾ ಭೇದದಿಂದ ಭೇದ-ಅಭೇದಗಳನ್ನು ಹೇಳುವ ಶ್ರುತಿವಾಕ್ಯಗಳನ್ನು ಮುಖ್ಯಾರ್ಥದಿಂದಲೇ

---

[೭೮] ಮುಂಡಕೋಪನಿಷತ್, ೩-೧-೧

[೭೯] ಕಠೋಪನಿಷತ್, ೧-೩-೧

[೮೦] ಛಾಂದೋಗ್ಯೋಪನಿಷತ್, ೬-೮-೭

[೮೧] ಬೃಹದಾರಣ್ಯಕೋಪನಿಷತ್, ೧-೪-೧೦

ಸ್ವೀಕರಿಸಿರುವುದರಿಂದ ಈ ಸಿದ್ಧಾಂತದಲ್ಲಿ ದ್ವೈತಾದ್ವೈತಗಳ ಸಮನ್ವಯವು ಬೋಧಿತವಾಗಿದೆ.

ಮತ್ತು "ನಿರವದ್ಯಂ ನಿರಂಜನಮ್"[೮೨] (ಅನಿಂದ್ಯನೂ, ನಿರಂಜನನೂ), "ಸತ್ಯಂ ಜ್ಞಾನಮನಂತಂ ಬ್ರಹ್ಮ"[೮೩] (ಬ್ರಹ್ಮವು ಸತ್ಯ, ಜ್ಞಾನ, ಅನಂತ) ಇತ್ಯಾದಿ ಶ್ರುತಿವಾಕ್ಯಗಳು ಪರಬ್ರಹ್ಮನ ನಿರ್ವಿಕಾರತ್ವವನ್ನು, "ತದಾತ್ಮಾನಂ ಸ್ವಯಮಸೃಜತ"[೮೪] (ತನ್ನನ್ನು ತಾನೇ ಉತ್ಪತ್ತಿ ಮಾಡಿಕೊಂಡು), "ತದೈಕ್ಷತ ಬಹು ಸ್ಯಾಂ ಪ್ರಜಾಯೇಯ"[೮೫] (ಆ ಸದ್ವಸ್ತುವು ಬಹುವಾಗುವೆನು, ಉತ್ಪನ್ನನಾಗುವೆನು ಎಂದು ಯೋಚಿಸಿತು) ಮುಂತಾದ ಶ್ರುತಿಗಳು ಪರಶಿವನು ಜಗದ್ರೂಪದಿಂದ ರೂಪಾಂತರವಾಗಿರುವುದನ್ನು ಬೋಧಿಸುತ್ತಿವೆ. ಈಗ ಪರಬ್ರಹ್ಮನು ರೂಪಾಂತರವಾಗಿರುವನೋ ಅಥವಾ ಇಲ್ಲವೋ? ಎಂಬ ಜಿಜ್ಞಾಸೆ ಉಂಟಾಗುತ್ತದೆ. ಈ ವಿಷಯದಲ್ಲಿ ದ್ವೈತವಾದಿಗಳು ಬ್ರಹ್ಮನು ಉಪಾದಾನಕಾರಣವಾದರೆ ಅವನಿಗೆ ವಿಕಾರವು ಬಂದೊದಗಬಹುದೆಂಬ ಕಾರಣದಿಂದ ಅವನನ್ನು ನಿಮಿತ್ತಕಾರಣವೆಂದೂ, ಅದ್ವೈತವಾದಿಗಳು ವಿವರ್ತೋಪಾದಾನಕಾರಣವೆಂದೂ ಪ್ರತಿಪಾದಿಸುತ್ತಾರೆ. ಈ ಉಭಯರೂ ಪ್ರಪಂಚದ ವಿಷಯದಲ್ಲಿ ಪರಬ್ರಹ್ಮನ ಸಾಕ್ಷಾತ್ ಉಪದಾನತ್ವವನ್ನು ಪ್ರತಿಪಾದನೆ ಮಾಡದಿರುವುದರಿಂದ, ಸಾಕ್ಷಾತ್ ಉಪಾದಾನತ್ವವನ್ನು ಪ್ರತಿಪಾದಿಸಿರುವ "ಬಹುಸಾ ಸ್ಯಾಂ ಪ್ರಜಾಯೇಯ" (ಬಹುವಾಗುವೆನು, ಉತ್ಪತ್ತಿ ಮಾಡುವೆನು), "ತದಾತ್ಮಾನಂ ಸ್ವಯಮಸೃಜತ" (ತನ್ನನ್ನು ತಾನೇ ಸೃಷ್ಟಿಸಿದನು) ಇತ್ಯಾದಿ ಶ್ರುತಿವಾಕ್ಯಗಳು ನಿರರ್ಥಕವಾಗುತ್ತವೆ. ಇದಲ್ಲದೆ ಪ್ರಪಂಚದ ವಿಷಯದಲ್ಲಿ ಪರಬ್ರಹ್ಮನ ಉಪಾದಾನತ್ವವಿಲ್ಲದಿದ್ದರೆ "ಏಕವಿಜ್ಞಾನೇನ ಸರ್ವವಿಜ್ಞಾನಮ್" (ಒಂದು ವಿಜ್ಞಾನದಿಂದ ಎಲ್ಲ ವಿಜ್ಞಾನಗಳು) ಎಂಬ ಉಪನಿಷತ್ತಿನ ಸಿದ್ಧಾಂತವೂ ಸಹ ವ್ಯರ್ಥವಾಗುತ್ತದೆ. ಆದರೆ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದಲ್ಲಿ ಕೂರ್ಮಾಂಗಭಂಗಿ, ಅಹಿಕುಂಡಲ, ಸ್ವರ್ಣಕುಂಡಲ ಮುಂತಾದ ನ್ಯಾಯದಿಂದ ಅವಿಕೃತಪರಿಣಾಮವಾದ (ವಿಕಾರವಾಗದ ಬದಲಾವಣೆ)ವನ್ನು ಒಪ್ಪುವುದರ ಮೂಲಕ ಪ್ರಪಂಚದಲ್ಲಿ ನಿರ್ವಿಕಾರಿತ್ವ ಮತ್ತು ಪರಿಣಾಮ್ಯುಪಾದಾನತ್ವವು ಸಂಭವಿಸುತ್ತದೆ ಎಂಬ ಕಾರಣದಿಂದ ಪರಬ್ರಹ್ಮನ ನಿರ್ವಿಕಾರಿತ್ವ, ಪರಿಣಾಮಿತ್ವಗಳನ್ನು ಪ್ರತಿಪಾದಿಸುವ ಎರಡೂ ಬಗೆಯ ಶ್ರುತಿಗಳ ಸಮನ್ವಯವು ಹಾಗೂ ಒಂದು ವಿಜ್ಞಾನದಿಂದ ಎಲ್ಲ ವಿಜ್ಞಾನಪ್ರತಿಪಾದಕವಾದ ಸಿದ್ಧಾಂತವೂ ಸಹ ಸಾರ್ಥಕವಾಗಿದೆ ಎಂದು ತಿಳಿಯಬೇಕು.

---

೮೨. ಶ್ವೇತಾಶ್ವತರೋಪನಿಷತ್, ೬.೧೯

೮೩. ತೈತ್ತಿರೀಯೋಪನಿಷತ್, ೨-೧-೧

೮೪. ತೈತ್ತಿರೀಯೋಪನಿಷತ್, ೨.೭

೮೫. ಛಾಂದೋಗ್ಯೋಪನಿಷತ್, ೬-೨-೩

ಅದಲ್ಲದೆ "ತಮೇವ ವಿದ್ವಿತ್ವಾಽತಿಮೃತ್ಯುಮೇತಿ ನಾನ್ಯಃ ಪಂಥಾವಿದ್ಯತೇಽಯನಾಯ"[೮೬] (ಅವನನ್ನೇ ಅರಿತುಕೊಂಡ (ಮನುಷ್ಯನು) ಮೃತ್ಯುವನ್ನು ದಾಟುತ್ತಾನೆ. ಪರಮಪದ ಪ್ರಾಪ್ತಿಗೆ ಇದಕ್ಕಿಂತ ಬೇರೆ ದಾರಿಯಿಲ್ಲ) ಎಂಬ ಶ್ರುತಿವಾಕ್ಯವು (ಪರಬ್ರಹ್ಮನ) ಜ್ಞಾನವಿಲ್ಲದ ಮೋಕ್ಷಸಾಧನತ್ವವನ್ನು ನಿಷೇಧಿಸಿದೆ. ಮತ್ತೆ "ವಿದ್ಯಾಂ ಚಾವಿದ್ಯಾಂ ಚ ಯಸ್ತದ್ವೇದೋಭಯಂ ಸಹ"[೮೭] (ಯಾವನು ವಿದ್ಯೆ ಮತ್ತು ಅವಿದ್ಯೆ -ಈ ಎರಡನ್ನೂ ಒಟ್ಟಿಗೆ ಅರಿಯುತ್ತಾನೆಯೋ) ಎಂಬ ಶ್ರುತಿಯು ಕರ್ಮವೂ ಸಹ ಮೋಕ್ಷಸಾಧನತ್ವವೆಂದು ಪ್ರತಿಪಾದಿಸಿದೆ. ಆದುದರಿಂದ ಕೇವಲ ಜ್ಞಾನದಿಂದ ಮೋಕ್ಷವೆ? ಅಥವಾ ಕರ್ಮ--ಜ್ಞಾನಗಳೆರಡರಿಂದಲೇ? ಎಂಬ ಜಿಜ್ಞಾಸೆ ಉಂಟಾಗುತ್ತದೆ. ಇದಕ್ಕೆ ದ್ವೈತವಾದಿಗಳಾದ ಮೀಮಾಂಸಕರು ಕೇವಲ ನಿತ್ಯನೈಮಿತ್ತಿಕಕರ್ಮದಿಂದ ಮೋಕ್ಷವೆಂದೂ, ಶಾಂಕರವೇದಾಂತ ಅದ್ವೈತಿಗಳು ಮತ್ತು ಕಾಶ್ಮೀರಶೈವರು ಕೇವಲ ಜ್ಞಾನದಿಂದ ಮೋಕ್ಷವೆಂದು ಪ್ರತಿಪಾದಿಸಿದ್ದಾರೆ. ಅವರ ಮತದಲ್ಲಿ ಕರ್ಮ ಅಥವಾ ಜ್ಞಾನದಿಂದ ಮೋಕ್ಷವೆಂದು ಪ್ರತಿಪಾದನೆಮಾಡುವ ಶ್ರುತಿಗಳ ಸಮನ್ವಯವು ಇದ್ದರೂ ಸಹ ಜ್ಞಾನ-ಕರ್ಮಗಳ ಸಮಸಮುಚ್ಚಯವನ್ನು ಪ್ರತಿಪಾದಿಸುವ ಶ್ರುತಿಗಳ ಸಮನ್ವಯವಿರುವುದಿಲ್ಲ. ಆದರೆ ಶಕ್ತಿವಿಶಿಷ್ಟಾದ್ವೈತವೇದಾಂತದಲ್ಲಿ-

ಅಂಧಪಂಗುವದನ್ಯೋಽನ್ಯಸಾಪೇಕ್ಷೇ ಜ್ಞಾನಕರ್ಮಣೀ।
ಫಲೋತ್ಪತ್ತೌ ವಿರಕ್ತಸ್ತು ತಸ್ಮಾತ್ತದ್ದ್ವಯಮಾಚರೇತ್॥
ಜ್ಞಾನೇ ಸಿದ್ಧೇಽಪಿ ವಿದುಷಾಂ ಕರ್ಮಾಪಿ ವಿನಿಯುಜ್ಯತೇ।
ಫಲಾಭಿಸಂಧಿರಹಿತಂ ತಸ್ಮಾತ್ಕರ್ಮ ನ ಸಂತ್ಯಜೇತ್॥[೮೮]

"ಕರ್ಮ ಮತ್ತು ಜ್ಞಾನಗಳೆರಡೂ ಕುರುಡ ಮತ್ತು ಕುಂಟರಂತೆ ಪರಸ್ಪರ ಅಪೇಕ್ಷೆಯುಳ್ಳವುಗಳಾಗಿವೆ. ಆದುದರಿಂದ ಶಿವಯೋಗಿಯು ಮುಕ್ತಿರೂಪ ಫಲೋತ್ಪತ್ತಿಯಲ್ಲಿ ಆ ಎರಡನ್ನೂ (ಕರ್ಮ-ಜ್ಞಾನಗಳೆರಡನ್ನೂ) ಆಚರಿಸಬೇಕು. ಜ್ಞಾನಿಗಳಿಗೆ ಜ್ಞಾನವು ಸಿದ್ಧವಾಗಿದ್ದರೂ ನಿಷ್ಕಾಮಕರ್ಮವು ಹೇಳಲ್ಪಟ್ಟಿದೆ. ಆದುದರಿಂದ ಫಲಾಪೇಕ್ಷಾ ಶೂನ್ಯವಾದ ಕರ್ಮವನ್ನು ಬಿಡಬಾರದು" ಎಂಬ ಶ್ರೀ ರೇಣುಕ ಭಗವತ್ಪಾದರ ಉಕ್ತಿಯಂತೆ ಇಷ್ಟಲಿಂಗಪೂಜಾರೂಪ ನಿತ್ಯಕರ್ಮ ಮತ್ತು ಶಿವಜ್ಞಾನ -ಈ ಎರಡನ್ನೂ ಸಮಸಮುಚ್ಚಯವನ್ನಾಗಿ ಶಿವಯೋಗಿಯು ಸ್ವೀಕರಿಸಿದ್ದಾನೆ. ಆದುದರಿಂದ ಮೋಕ್ಷಸಾಧನವನ್ನಾಗಿ ಪ್ರತಿಪಾದಿಸಿರುವ ಎರಡೂ ಬಗೆಯ ಶ್ರುತಿಗಳು, ಸಮಾನವಾಗಿ ಈ ಸಿದ್ಧಾಂತದಲ್ಲಿ ಪ್ರಮಾಣಗಳಾಗುತ್ತವೆ. ಆ ಕಾರಣ ಉಭಯವಿಧ ಶ್ರುತಿಗಳ ಸಮನ್ವಯವು ವೀರಶೈವ ಸಿದ್ಧಾಂತದಲ್ಲಿ ಉಂಟಾಗುತ್ತದೆಂಬುದು

---

[೮೬] ಶ್ವೇತಾಶ್ವತರೋಪನಿಷತ್, ೩.೮

[೮೭] ಈಶಾವಾಸ್ಯೋಪನಿಶಷತ್, ೧೧

[೮೮] ಸಿ.ಶಿ, ೧೬.೧೧-೧೨

ಸಿದ್ಧವಾಗುತ್ತದೆ. ಇದೇ ರೀತಿಯಾಗಿ ದ್ವೈತ-ಅದ್ವೈತ ದರ್ಶನಗಳು ವಿರುದ್ಧಾರ್ಥವುಳ್ಳ ಶ್ರುತಿಗಳ ವಿಷಯದಲ್ಲಿ ಪರಸ್ಪರ ಜಗಳವಾಡುತ್ತವೆಯೋ ಅಂತಹ ಕಡೆಗಳೆಲ್ಲ ವೀರಶೈವಾಚಾರ್ಯರು ಸಮನ್ವಯ ದೃಷ್ಟಿಯಿಂದ ಜಗಳವನ್ನು ನಿವಾರಣೆಮಾಡಿದ್ದಾರೆ. ಇಂತಹ ಅನೇಕ ಶ್ರುತಿಗಳ ಸಮನ್ವಯವನ್ನು ಶ್ರೀ ಟಿ.ಜಿ. ಸಿದ್ಧಪ್ಪಾರಾಧ್ಯ ಅವರು ತಮ್ಮ ಶಕ್ತಿವಿಶಿಷ್ಟಾದ್ವೈತದರ್ಶನವೆಂಬ[೫೯] ಗ್ರಂಥದಲ್ಲಿ ತೋರಿಸಿದ್ದಾರೆ.

ಭೇದಾಭೇದವನ್ನು ವಾದಿಸುವ ಇತರ ಮತಗಳಿಗಿಂತ ವೀರಶೈವದ ವೈಲಕ್ಷಣ್ಯ

ವೇದಾಂತ ಪ್ರಸ್ಥಾನದಲ್ಲಿ ಭಾಸ್ಕರಾಚಾರ್ಯ ಮತ್ತು ಯಾದವಪ್ರಕಾಶಾಚಾರ್ಯರು ಭೇದಾಭೇದವಾದಿಗಳೆಂದು ಪ್ರಸಿದ್ಧರಾಗಿದ್ದಾರೆ. ಪೂರ್ವೋಕ್ತ ಪ್ರಕಾರದ ದ್ವೈತಾದ್ವೈತ ಶ್ರುತಿಗಳ ಸಮನ್ವಯವನ್ನು ಪ್ರತಿಪಾದಿಸುವ ವೀರಶೈವದರ್ಶನವೂ ಸಹ ಭೇದಾಭೇದ ಮತವನ್ನು ಅಂಗೀಕರಿಸಿದೆ. ಆದರೂ ಕೂಡ ಇದು ಭಾಸ್ಕರಾಚಾರ್ಯ ಮತ್ತು ಯಾದವಪ್ರಕಾಶಾಚಾರ್ಯರ ಮತಗಳಿಗಿಂತಲೂ ಭಿನ್ನವಾದದ್ದು. ಭೇದಾಭೇದವಾದಿಯಾದ ಭಾಸ್ಕರಾಚಾರ್ಯರ ಮತದಲ್ಲಿ ಸರ್ವಶ್ರುತಿ ಸಮನ್ವಯವು ಸಂಭವಿಸುವುದಿಲ್ಲ. ಹೇಗೆಂದರೆ ಅಚಿತ್‌ಬ್ರಹ್ಮನ ಭೇದಾಭೇದವನ್ನು ಸಹಜವಾಗಿ ಒಪ್ಪುವ ಅವರು ಜೀವ-ಬ್ರಹ್ಮ ಇವರ ಭೇದ ಮತ್ತು ಔಪಾಧಿಕ ಅಭೇದವು ಸ್ವಾಭಾವಿಕವೆಂದು ಅಭಿಪ್ರಾಯಪಡುತ್ತಾರೆ. ಅವರ ಈ ರೀತಿಯ ವಾದವು ಬ್ರಹ್ಮಸೂತ್ರ ಭಾಸ್ಕರಭಾಷ್ಯದ ಜ್ಞಾನಾಧಿಕರಣ, ಅಂಶಾಧಿಕರಣ, ಅವಿಭಾಗದೃಷ್ಟತ್ವಾಧಿಕರಣಗಳಲ್ಲಿ ಕಂಡುಬರುತ್ತದೆ. ಮುಕ್ತಾವಸ್ಥೆಯಲ್ಲಿ ಶಿವ-ಜೀವರ ಅಭೇದ ಪ್ರತಿಪಾದನೆ ಮಾಡಿರುವುದರಿಂದ ಭೇದದ ವಾಸ್ತವಿಕತೆಯಲ್ಲಿ ಆದರ ನಿವೃತ್ತಿಯಿಲ್ಲವೆಂಬುದು ಅವರ ಆಶಯವಾಗಿದೆ. ಶಿವ-ಜೀವರ ಭೇದವು ನಿಜವಾದರೂ ಸಹ ಭೇದನಿವೃತ್ತಿಯನ್ನು ಭ್ರಮರಕೀಟನ್ಯಾಯದ ಮೂಲಕ ವೀರಶೈವರು ಅಂಗೀಕರಿಸಿದ್ದಾರೆ. ಆದುದರಿಂದ ಜೀವಾತ್ಮನ ಬಂಧನ-ಮುಕ್ತಾವಸ್ಥೆಯಲ್ಲಿ ದ್ವೈತಾದ್ವೈತ ಶ್ರುತಿಗಳ ಮುಖ್ಯಾರ್ಥವನ್ನು ಪ್ರತಿಪಾದಿಸುವ ಮೂಲಕ ಹೇಗೆ ವೀರಶೈವರು ಸಮನ್ವಯವನ್ನು ಸಾಧಿಸಿದ್ದಾರೆಯೋ ಹಾಗೆಯೇ ಭಾಸ್ಕರಾಚಾರ್ಯರು ಸಮನ್ವಯವನ್ನು ಸಾಧಿಸಿರುವುದಿಲ್ಲವೆಂಬುದು ವಿಶೇಷ.

ಭಾಸ್ಕರಾಚಾರ್ಯರ ಶ್ರುತಿಸಮನ್ವಯಸಿದ್ಧಾಂತದಲ್ಲಿ ಸ್ವಾರಸ್ಯವಿಲ್ಲದಿರುವುದನ್ನು ಗಮನಿಸಿದ ಯಾದವಪ್ರಕಾಶಾಚಾರ್ಯರು ಭಿನ್ನ ರೀತಿಯಿಂದ ಭೇದಾಭೇದ ಸಿದ್ಧಾಂತವನ್ನು ಪ್ರತಿಪಾದಿಸಿದರು.[೬೦] ಇವರು ಪೂರ್ವಾಶ್ರಮದಲ್ಲಿ ಶ್ರೀ ರಾಮಾನುಜಾಚಾರ್ಯರ ಶಿಷ್ಯರಾಗಿದ್ದರು. ರಾಮಾನುಜಾಚಾರ್ಯರು ವಿಶಿಷ್ಟಾದ್ವೈತವನ್ನು ಸ್ಥಾಪಿಸಿದಾಗ ಯಾದವಪ್ರಕಾಶಾಚಾರ್ಯರು ಅವರಿಂದ ಪ್ರಭಾವಿತರಾಗಿ ವಿಶಿಷ್ಟಾದ್ವೈತಿಗಳಾದರು. ಆದುದರಿಂದಲೇ ಅವರ ಭಾಷ್ಯವು ಲುಪ್ತವಾಯಿತು. ಶ್ರೀ ರಾಮಾನುಜಾಚಾರ್ಯರು

---

[೫೯] ಶಕ್ತಿವಿಶಿಷ್ಟಾದ್ವೈತದರ್ಶನ, ಪು. ೨೨೪-೨೪೨

[೬೦] ಶಕ್ತಿವಿಶಿಷ್ಟಾದ್ವೈತದರ್ಶನ, ಪು. ೬೨

ಶ್ರೀಭಾಷ್ಯದ ವಿಲಕ್ಷಣತ್ವಾಧಿಕರಣ, ತದನ್ಯತ್ವಾಧಿಕರಣ ಮತ್ತು ವೇದಾರ್ಥಸಂಗ್ರಹಾಧಿಕರಣಗಳಲ್ಲಿ ಯಾದವಪ್ರಕಾಶರ ಮತಸಾರವನ್ನು ಪ್ರಸ್ತಾಪಿಸಿದ್ದಾರೆ. ಅವರ ಅಭಿಪ್ರಾಯವು ವೀರಶೈವಮತಕ್ಕೆ ಬಹಳ ಸದೃಶವಾಗಿದೆ ಎಂದು ಶ್ರೀ ಟಿ.ಜಿ. ಸಿದ್ಧಪ್ಪಾರಾಧ್ಯರು ಅಭಿಪ್ರಾಯಪಟ್ಟಿದ್ದಾರೆ.[೯೧] ಆದರೂ ಸಹ ವೇದಾರ್ಥಸಂಗ್ರಹದ ತಾತ್ಪರ್ಯದೀಪಿಕೆಯ ವ್ಯಾಖ್ಯಾನದಲ್ಲಿ ಮುಕ್ತಾವಸ್ಥೆಯಲ್ಲಿ ಜೀವ-ಬ್ರಹ್ಮರಿಗೆ ಭೇದಾಭೇದವೇ ಎಂದು ಯಾದವಪ್ರಕಾಶರಿಗೆ ಸಮ್ಮತವಾಗಿದೆಯೆಂದು ಪ್ರತಿಪಾದಿಸಿರುವುದರಿಂದ, ಮುಕ್ತಾವಸ್ಥೆಯಲ್ಲಿ ಜೀವಾತ್ಮ-ಪರಮಾತ್ಮರ ಅಭೇದವನ್ನು ಪ್ರತಿಪಾದನೆ ಮಾಡುವ ವೀರಶೈವದರ್ಶನವು ವಿಶಿಷ್ಟಾದ್ವೈತದರ್ಶನಕ್ಕಿಂತ ವಿಲಕ್ಷಣವಾಗಿರುವುದು ಸ್ಪಷ್ಟವಾಗಿದೆ.

ಈ ರೀತಿಯಾಗಿ ಕೇವಲ ಅದ್ವೈತ, ದ್ವೈತ, ವಿಶಿಷ್ಟಾದ್ವೈತ, ಭೇದಾಭೇದ ಮತಗಳಿಂದ ವಿಲಕ್ಷಣವಾದ ಈ ಶಕ್ತಿವಿಶಿಷ್ಟಾದ್ವೈತದರ್ಶನವು ಸರ್ವಶ್ರುತಿಸಮನ್ವಯಾತ್ಮಕವಾದ ಭೇದಾಭೇದಸಿದ್ಧಾಂತವೆಂದು ತಿಳಿಯಬೇಕು.

ಈ ಜಗತ್ತಿನಲ್ಲಿ ಮಾನವನ ಕಲ್ಯಾಣಕ್ಕಾಗಿ ದಾರ್ಶನಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಅನಾದಿಕಾಲದಿಂದಲೂ ದಾರ್ಶನಿಕರ ಮತ್ತು ಸಮಾಜಶಾಸ್ತ್ರಜ್ಞರ ಶ್ರಮವು ಕಂಡು ಬರುತ್ತದೆ. ಅವುಗಳಲ್ಲಿ ಸಮನ್ವಯವಾದಿಗಳಾದ ವೀರಶೈವಾಚಾರ್ಯರಿಗೆ ಅಗ್ರಸ್ಥಾನವಿದೆ. ದ್ವೈತ ಮತ್ತು ಅದ್ವೈತಮತಗಳನ್ನು ಅವಲಂಬಿಸಿ ಪ್ರವೃತ್ತವಾದ ಬೇರೆ ದರ್ಶನಗಳಲ್ಲಿ ಪರಸ್ಪರ ಕಲಹವು ಅನಾದಿಕಾಲದಿಂದಲೂ ಆರಂಭವಾಗಿದೆ. ತತ್ತ್ವಜ್ಞಾನಿಗಳು ಪರಸ್ಪರ ಕಲಹ ಮಾಡುವುದರಿಂದ ಅವರು ಉಪದೇಶಿಸಿರುವ ತತ್ತ್ವಗಳಲ್ಲಿ ಜನಗಳು ಹೇಗೆ ನಂಬುತ್ತಾರೆ ಎಂದು ಚಿಂತಿಸಿದ ವೀರಶೈವಾಚಾರ್ಯರು ದ್ವೈತ-ಅದ್ವೈತಮತಗಳ ಸಮನ್ವಯವನ್ನು ಮಾಡುವ ಸಲುವಾಗಿ ವೀರಶೈವಸಿದ್ಧಾಂತವನ್ನು ಸ್ಥಾಪಿಸಿದರು. ಅವರ ಸಮನ್ವಯ ಸಿದ್ಧಾಂತಕ್ಕೆ ಯಾವ ರೀತಿಯ ಗೌರವವು ಲೋಕದಲ್ಲಿ ಅದನ್ನು ಸ್ಥಾಪನೆ ಮಾಡುವ ಸಂದರ್ಭದಲ್ಲಿ ಇದ್ದಿತೋ, ಅದೇ ಬಗೆಯ ಆದರವು ಇಂದಿಗೂ ಸಹ ಕಂಡುಬರುತ್ತದೆ. ಸಮಾಜದಲ್ಲಿ ಸಮನ್ವಯವಾದಿಗಳು ಯಾವಾಗಲೂ ಆದರಣೀಯರೇ ಆಗುತ್ತಾರೆ.

ವೀರಶೈವ ಸಿದ್ಧಾಂತದಲ್ಲಿ ಪ್ರತಿಪಾದಿತವಾದ ಅಷ್ಟಾವರಣ ಮತ್ತು ಪಂಚಾಚಾರಗಳ ಅವಶ್ಯಕತೆ ಇಂದಿನ ದಿನಗಳಲ್ಲಿ ಬಹಳ ಹೆಚ್ಚಾಗಿದೆ. ಕಲಿಯುಗದ ಮಹಿಮೆಯಿಂದ ಜಗತ್ತಿನಲ್ಲಿ ಗುರು, ದೇವತೆ ಮೊದಲಾದ ಪೂಜಾರ್ಹರಲ್ಲಿ ಶ್ರದ್ಧೆಯು ಕಡಿಮೆಯಾಗುತ್ತಿರುವುದು ಎಲ್ಲೆಡೆ ಕಂಡುಬರುತ್ತದೆ. ಮುಪ್ಪಿನಿಂದ ಜೀರ್ಣವಾದ ಶರೀರದಲ್ಲಿರುವ ಪ್ರಾಣಗಳಂತೆ ಆಚಾರಗಳು ಕ್ಷೀಣಿಸುತ್ತಿವೆ. ಇಂತಹ ಸಂದರ್ಭಗಳಲ್ಲಿ ಮನುಷ್ಯನು ಅಷ್ಟಾವರಣಸಂಪನ್ನನೂ, ಆಚಾರಶೀಲನೂ ಆಗದಿದ್ದರೆ ಮನುಷ್ಯತ್ವದ ರಕ್ಷಣೆಯು ಸಾಧ್ಯವಾಗುವುದಿಲ್ಲ. ಪೂಜ್ಯರಾದ ಗುರು, ದೇವತೆ ಮೊದಲಾದವರ ಆಶೀರ್ವಾದವು

---

[೯೧] ಶಕ್ತಿವಿಶಿಷ್ಟಾದ್ವೈತದರ್ಶನ, ಪು. ೭೩.

ನಮ್ಮ ಭದ್ರವಾದ ಕವಚವು. ಈ ಕವಚದಿಂದಾವೃತನಾದ ಮನುಷ್ಯನು ಎಲ್ಲ ಕಡೆಯೂ ವಿಜಯಶಾಲಿಯಾಗುತ್ತಾನೆ. ಶರೀರದಲ್ಲಿ ಧರಿಸುವ ಬಾಹ್ಯಧಾರ್ಮಿಕ ಚಿಹ್ನೆಗಳಾದ ಭಸ್ಮ, ರುದ್ರಾಕ್ಷ ಮುಂತಾದವುಗಳು ರಕ್ಷಾಕವಚಗಳೇ ಸರಿ. ಒಂದು ವೇಳೆ ಇಂದಿನ ದಿನಗಳಲ್ಲಿ ಬಾಹ್ಯವಾದ ಧಾರ್ಮಿಕ ಚಿಹ್ನೆಗಳನ್ನು ಅವಲಂಬಿಸಿ ಕಲಹವು ನಡೆಯುತ್ತಿದ್ದರೆ, ಅದು ಧರ್ಮಜ್ಞರು ಮಾಡುತ್ತಿರುವ ಕಲಹವಾಗಿರದೆ, ಧರ್ಮಾಂಧರು ದುಷ್ಟ ರಾಜನೀತಿಯಿಂದ ಪ್ರೇರಿತರಾಗಿ ಮಾಡುತ್ತಿರುವ ಕೆಟ್ಟ ವ್ಯವಹಾರವೆಂದು ತಿಳಿಯಬೇಕು. ಎಲ್ಲ ಧರ್ಮಗಳ ಆಚಾರ್ಯರುಗಳು ಒಟ್ಟಿಗೆ ಸೇರಿ ಇಂತಹ ಧರ್ಮಾಂಧರ ಕಲಹವನ್ನು ಪರಿಹರಿಸಲು ಪ್ರಯತ್ನಮಾಡಬೇಕು. ಇತ್ತೀಚಿನ ದಿನಗಳಲ್ಲಿ ವೀರಶೈವಾಚಾರ್ಯರು ಸರ್ವಧರ್ಮಸಮ್ಮೇಳನಾದಿಗಳನ್ನು ಆಯೋಜಿಸುವುದರ ಮೂಲಕ ಆ ದಿಶೆಯಲ್ಲಿ ಪ್ರಯತ್ನಿಸುತ್ತಿದ್ದಾರೆ. ಸಮನ್ವಯವಾದಿಗಳಾದ ವೀರಶೈವಾಚಾರ್ಯರು ಪ್ರತಿಪಾದಿಸಿರುವ ಆಚಾರಸಂಹಿತೆಗಳನ್ನು ನಿಷ್ಠೆಯಿಂದ ಎಲ್ಲರೂ ಪಾಲಿಸಿದ್ದೇ ಆದರೆ ಆಗ ಎಲ್ಲ ಸಾಮಾಜಿಕ ಸಮಸ್ಯೆಗಳಿಗೆ ಸುಲಭವಾದ ಪರಿಹಾರವು ಉಂಟಾಗುತ್ತದೆ. ಆದುದರಿಂದ ವೀರಶೈವ ಸಿದ್ಧಾಂತದಲ್ಲಿ ಪ್ರತಿಪಾದಿಸಿರುವ ಆವರಣ ಮತ್ತು ಆಚಾರಗಳು ಪ್ರಸ್ತುತ ಸನ್ನಿವೇಶದಲ್ಲಿಯೂ ಸಹ ಬಹಳ ಅವಶ್ಯಕವೆನಿಸುತ್ತವೆ. ಅವುಗಳ ಆಚರಣೆ ಮತ್ತು ಪ್ರಚಾರದ ಸಂಕಲ್ಪವನ್ನು ಮಾಡಿರುವ ನಾವು ಕೊನೆಯಲ್ಲಿ-

> ಸರ್ವೇ ಭವಂತು ಸುಖಿನಃ ಸರ್ವೇ ಸಂತು ನಿರಾಮಯಾಃ।
> ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿದ್ ದುಃಖಮಾಪ್ನುಯಾತ್॥

ಎಂದು ಎಲ್ಲ ಜೀವಿಗಳಿಗೂ ಮಂಗಳವಾಗಲಿ ಎಂಬ ಭಾವನೆಯಿಂದ ಈ ಪ್ರಬಂಧವನ್ನು ಮುಕ್ತಾಯಗೊಳಿಸುತ್ತೇವೆ.

॥ ಓಂ ಶಾಂತಿಃ ಓಂ ಶಾಂತಿಃ ಓಂ ಶಾಂತಿಃ ॥

■

ಆಕರ ಗ್ರಂಥಗಳು

ಸಂಸ್ಕೃತ

೧. ಅರ್ಥಸಂಗ್ರಹಃ - ಚೌಖಾಂಬಾ ಸಂಸ್ಕೃತ ಸೀರೀಸ್, ವಾರಣಾಸಿ, ೧೯೭೬

೨. ಅದ್ವೈತಸಿದ್ಧಿಃ - ನಿರ್ಣಯಸಾಗರ್ ಪ್ರೆಸ್, ಮುಂಬಯಿ, ೧೯೩೭

೩. ಅನುಭವಸೂತ್ರಮ್ - (ತಂತ್ರಸಂಗ್ರಹಃ, ಭಾಗ-೧), ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ, ವಾರಣಾಸಿ, ೧೯೮೭

೪. ಅನುಭವಸೂತ್ರಮ್ (ಕನ್ನಡಾನುವಾದ) - ಡಾ. ಸಿ. ಶಿವಕುಮಾರಸ್ವಾಮಿ, ವೀರಶೈವ ಅನುಸಂಧಾನ ಸಂಸ್ಥಾನ, ಬೆಂಗಳೂರು, ೨೦೦೪

೫. ಅಭಿಜ್ಞಾನಶಾಕುಂತಲಮ್ - ಚೌಖಾಂಬಾ ಸಂಸ್ಕೃತ ಪ್ರತಿಷ್ಠಾನ, ದೆಹಲಿ, ೧೯೮೭

೬. ಅಮರಕೋಶಃ - ಚೌಖಾಂಬಾ ಸಂಸ್ಕೃತ ಪ್ರತಿಷ್ಠಾನ, ದೆಹಲಿ, ೧೯೮೪

೭. ಅಷ್ಟಪ್ರಕರಣಮ್ - ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ, ವಾರಣಾಸಿ, ೧೯೮೮

೮. ಆಗಮಮೀಮಾಂಸಾ - ಲಾಲಬಹದೂರಶಾಸ್ತ್ರಿ ಕೇಂದ್ರೀಯ ಸಂಸ್ಕೃತ ವಿದ್ಯಾಪೀಠ, ನವದೆಹಲಿ, ೧೯೮೨

೯. ಈಶಾದ್ಯಷ್ಟೋತ್ತರಶತೋಪನಿಷದಃ - ನಿರ್ಣಯಸಾಗರ್ ಪ್ರೆಸ್, ಮುಂಬಯಿ, ೧೯೨೫

೧೦. ಈಶಾವಾಸ್ಯೋಪನಿಷತ್, (ಶಾಂಖರೀ ವ್ಯಾಖ್ಯಾಸಹಿತ) - ಶಂಕರವಿಲಾಸ ಸಂಸ್ಕೃತ ಪಾಠಶಾಲಾ, ಮೈಸೂರು, ೧೯೭೬

೧೧. ಈಶ್ವರಪ್ರತ್ಯಭಿಜ್ಞಾವಿಮರ್ಶಿನೀ - ಕಾಶ್ಮೀರ ಸಂಸ್ಕೃತ ಗ್ರಂಥಾವಲಿ, ಶ್ರೀನಗರ, ೧೯೧೮-೨೧

೧೨. ಈಶ್ವರಪ್ರತ್ಯಭಿಜ್ಞಾವಿವೃತಿವಿಮರ್ಶಿನೀ - ಕಾಶ್ಮೀರ ಸಂಸ್ಕೃತ ಗ್ರಂಥಾವಲಿ, ಶ್ರೀನಗರ, ೧೯೩೮-೪೧

೧೩. ಉಪನಿಷದ್ವಾಕ್ಯಮಹಾಕೋಶಃ, ಭಾಗ-೧-೨ - ಗುಜರಾತ್ ಪ್ರಿಂಟಿಂಗ್ ಪ್ರೆಸ್, ಮುಂಬಯಿ, ೧೯೪೦

೧೪. ಋಗ್ವೇದಸಂಹಿತಾ - ವೈದಿಕ ಸಂಶೋಧನ ಮಂಡಲ, ಪುಣೆ, ೧೯೪೧

೧೫. ಏಕಾಕ್ಷರನಾಮಕೋಶಸಂಗ್ರಹಃ - ರಾಜಾಸ್ಥಾನ ಪ್ರಾಚ್ಯವಿದ್ಯಾ ಪ್ರತಿಷ್ಠಾನ, ಜೋಧಪುರ

೧೬. ಕಾರಣಾಗಮಃ - ಪಂಚಾಚಾರ್ಯ ಪ್ರೆಸ್, ಮೈಸೂರು, ೧೯೫೬

೧೭. ಕಾರಣಾಗಮಃ - ವೀರಶೈವ ಅನುಸಂಧಾನ ಸಂಸ್ಥಾನ, ಬೆಂಗಳೂರು.

೧೮. ಕ್ರಿಯಾಸಾರಃ (ಭಾಗ-೧,೨,೩) - ಓ.ಆರ್.ಐ, ಮೈಸೂರು, ೧೯೫೪, ೫೭, ೫೮

೧೯. ಚಂದ್ರಜ್ಞಾನಾಗಮಃ - ಪಂಚಾಚಾರ್ಯ ಪ್ರೆಸ್, ಮೈಸೂರು, ೧೯೫೬

೨೦. ಚಂದ್ರಜ್ಞಾನಾಗಮಃ - ವೀರಶೈವ ಅನುಸಂಧಾನ ಸಂಸ್ಥಾನ, ಬೆಂಗಳೂರು.

೨೧. ತತ್ತ್ವಪ್ರಕಾಶಃ (ಅಷ್ಟಪ್ರಕರಣಮ್) - ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ, ವಾರಾಣಸಿ, ೧೯೮೮

೨೨. ತತ್ತ್ವಸಂಗ್ರಹಃ - ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ, ವಾರಾಣಸಿ, ೧೯೮೮

೨೩. ತಂತ್ರಯಾತ್ರಾ - ರತ್ನಾ ಪಬ್ಲಿಕೇಷನ್ಸ್, ವಾರಾಣಸಿ, ೧೯೮೨

೨೪. ತಂತ್ರವಾರ್ತಿಕಮ್ (ಶಾಬರಭಾಷ್ಯವ್ಯಾಖ್ಯಾ) ಭಾಗ ೨-೪ - ಆನಂದಾಶ್ರಮ ಸಂಸ್ಕೃತ ಗ್ರಂಥಾವಲಿಃ, ಪುಣೆ, ೧೯೮೧, ೧೯೮೪

೨೫. ತಂತ್ರಸಾರಃ - ಕಾಶ್ಮೀರ ಸಂಸ್ಕೃತ ಗ್ರಂಥಾವಲಿಃ, ಶ್ರೀನಗರ, ೧೯೧೮

೨೬. ತಂತ್ರಾಲೋಕಃ (ಭಾಗ ೧-೧೨) - ಕಾಶ್ಮೀರ ಸಂಸ್ಕೃತ ಗ್ರಂಥಾವಲಿಃ, ಶ್ರೀನಗರ, ೧೯೧೮-೧೯೨೨

೨೭. ನಾರದಭಕ್ತಿಸೂತ್ರಮ್ - ಗೀತಾ ಪ್ರೆಸ್, ಗೋರಖಪುರ, ೨೦೩೯ (ವಿಕ್ರಮ ಸಂವತ್ಸರ)

೨೮. ನಿತ್ಯಾಷೋಡಶಿಕಾರ್ಣವಃ (ದ್ವಿತೀಯ ಸಂಸ್ಕರಣಮ್) - ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ, ವಾರಾಣಸಿ, ೧೯೮೪

೨೯. ನೇತ್ರತಂತ್ರಮ್ - ಪರಿಮಳ ಪಬ್ಲಿಕೇಶನ್ಸ್, ದೆಹಲಿ, ೧೯೮೫

೩೦. ನ್ಯಾಯಕೋಶಃ - ಭಂಡಾರಕರ್ ಪ್ರಾಚ್ಯವಿದ್ಯಾ ಸಂಶೋಧನಾಲಯ, ಪುಣೆ, ೧೯೨೮

೩೧. ನ್ಯಾಯಸಾರಃ - ನಿರ್ಣಯಸಾಗರ ಪ್ರೆಸ್, ಮುಂಬಯಿ, ೧೯೧೦

೩೨. ನ್ಯಾಯಸೂತ್ರಭಾಷ್ಯಮ್ (ನ್ಯಾಯದರ್ಶನಮ್) - ಚೌಖಾಂಬಾ ಸಂಸ್ಕೃತ ಸೀರೀಸ್, ವಾರಾಣಸಿ, ೧೯೭೦

೩೩. ಪಂಚದಶೀ - ಭಾರ್ಗವ ಪುಸ್ತಕಾಲಯ, ವಾರಾಣಸಿ, ೧೯೫೬

೩೪. ಪದ್ಮಪುರಾಣಮ್ - ಮನಸುಖರಾಯ ಮೋರ, ಕಲ್ಕತ್ತಾ, ೧೯೫೭

೩೫. ಪರಮಾರ್ಥಸಾರಃ - ಕಾಶ್ಮೀರ ಸಂಸ್ಕೃತ ಗ್ರಂಥಾವಲಿಃ, ಶ್ರೀನಗರ, ೧೯೧೬

೩೬. ಪರಮೋಕ್ಷನಿರಾಸಕಾರಿಕಾ (ಅಷ್ಟಪ್ರಕರಣಮ್) - ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ, ವಾರಾಣಸಿ, ೧೯೮೮

೩೭. ಪಾರಮೇಶ್ವರತಂತ್ರಮ್ - ವೀರಶೈವ ಲಿಂಗಿಬ್ರಾಹ್ಮಣ ಗ್ರಂಥಮಾಲಾ, ಸೋಲಾಪುರ, ೧೯೦೪

೩೮. ಪಾರಮೇಶ್ವರಾಗಮ - ವೀರಶೈವ ಅನುಸಂಧಾನ ಸಂಸ್ಥಾನ, ಬೆಂಗಳೂರು, ೧೯೯೯

೩೯. ಪರಾಶರಸ್ಮೃತಿಃ - ಶ್ರೀ ವೆಂಕಟೇಶ್ವರ ಸ್ಟೀಮ್ ಪ್ರೆಸ್, ಮುಂಬಯಿ, ೧೯೮೧

೪೦. ಪ್ರತ್ಯಭಿಜ್ಞಾಹೃದಯಮ್ - ಕಾಶ್ಮೀರ ಸಂಸ್ಕೃತ ಗ್ರಂಥಾವಲಿಃ, ಶ್ರೀನಗರ, ೧೯೧೧

೪೧. ಪ್ರಬೋಧಸುಧಾಕರಃ - ಓರಿಯಂಟಲ್ ಬುಕ್ ಏಜೆನ್ಸಿ, ಪುಣೆ, ೧೯೫೨

೪೨. ಪ್ರಶಸ್ತಪಾದಭಾಷ್ಯಮ್ (ನ್ಯಾಯಕಂದಲೀ ಸಹಿತಮ್) - ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ, ವಾರಾಣಸಿ, ೧೯೭೭

೪೩. ಬೃಹನ್ನಾರದೀಯಪುರಾಣಮ್ - ನಾಗ್ ಪಬ್ಲಿಕೇಶನ್ಸ್, ದೆಹಲಿ, ೧೯೮೪

೪೪. ಬ್ರಹ್ಮಸೂತ್ರಶ್ರೀಕರಭಾಷ್ಯಮ್ (ಭಾಗ ೧-೨) - ಓ.ಆರ್.ಐ., ಮೈಸೂರು, ೧೯೭೭

೪೫. ಬ್ರಹ್ಮಸೂತ್ರಶಾಂಕರಭಾಷ್ಯಮ್ (ಭಾಮತೀಸಹಿತಮ್) - ನಿರ್ಣಯಸಾಗರ ಪ್ರೆಸ್, ಮುಂಬಯಿ, ೧೯೦೯

೪೬. ಬ್ರಹ್ಮಸೂತ್ರಶ್ರೀಕಂಠಭಾಷ್ಯಮ್ (ಶಿವಾರ್ಕಮಣಿದೀಪಿಕಾ ಸಹಿತಮ್ ಚತುಃಸೂತ್ರೀ ಭಾಗಃ) - ಜಂಗಮವಾಡಿಮಠ, ವಾರಾಣಸಿ, ೧೯೮೬

೪೭. ಭಕ್ತಿರಸವಿಮರ್ಶಃ - ಡಾ|| ಕಪಿಲದೇವ ಬ್ರಹ್ಮಚಾರಿ - ಆಚಾರ್ಯಗದ್ದೀ, ಫತುಹಾ, ಪಾಟ್ನ, ೧೯೮೦

೪೮. ಭಗವದ್ಗೀತಾ - ಅಚ್ಯುತ ಗ್ರಂಥಮಾಲಾ, ವಾರಾಣಸಿ, ೨೦೨೩ (ವಿಕ್ರಮ ಸಂವತ್ಸರ)

೪೯. ಭಗವದ್ಗೀತಾ - ರಾಮಕೃಷ್ಣಾಶ್ರಮ, ಮೈಸೂರು

೫೦. ಭಾಸ್ಕರೀ - ಸರಸ್ವತೀ ಭವನ ಟೆಕ್ಸ್ಟ್, ನಂ. ೮೩, ಅಲಹಾಬಾದ್, ೧೯೫೦

೫೧. ಭೋಗಕಾರಿಕಾ (ಅಷ್ಟಪ್ರಕರಣಮ್) - ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ, ವಾರಾಣಸಿ, ೧೯೮೮

೫೨. ಮತಂಗ ಪಾರಮೇಶ್ವರಾಗಮಃ - ಫ್ರೆಂಚ್ ಇನ್‌ಸ್ಟಿಟ್ಯೂಟ್, ಪಾಂಡಿಚೇರಿ, ೧೯೭೭

೫೩. ಮನುಸ್ಮೃತಿಃ - ಖೇಮರಾಜ ಶ್ರೀಕೃಷ್ಣದಾಸ್, ಮುಂಬಯಿ, ೧೯೪೫

೫೪. ಮಹಾರ್ಥಮಂಜರೀ - ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ, ವಾರಾಣಸಿ, ೧೯೭೨

೫೫. ಮಹಾನಾರಾಯಣೋಪನಿಷತ್ (ಶೈವಭಾಷ್ಯೋಪೇತಾ) - ಜಂಗಮವಾಡಿ ಮಠ, ವಾರಾಣಸಿ, ೧೯೨೯

೫೬. ಮಹಾಭಾರತಮ್ (ಷಷ್ಠಖಂಡ) - ಗೀತಾ ಪ್ರೆಸ್, ಗೋರಖಪುರ, ೨೦೪೪ (ವಿಕ್ರಮ ಸಂವತ್ಸರ)

೫೭. ಮಹಿಮ್ನಸ್ತೋತ್ರಮ್ - ಚೌಖಾಂಬಾ ಸಂಸ್ಕೃತ ಸಂಸ್ಥಾನ, ವಾರಾಣಸಿ, ೧೯೮೩,

೫೮. ಮಾಲಿನೀವಿಜಯೋತ್ತರತಂತ್ರಮ್ - ಕಾಶ್ಮೀರ ಸಂಸ್ಕೃತ ಗ್ರಂಥಾವಲಿಃ, ಶ್ರೀನಗರ, ೧೯೨೨

೫೯. ಮೀಮಾಂಸಾನ್ಯಾಯಪ್ರಕಾಶಃ - ಭಂಡಾರಕರ್ ಪ್ರಾಚ್ಯವಿದ್ಯಾ ಸಂಶೋಧನಾಲಯ, ಪುಣೆ, ೧೯೭೨

೬೦. ಮೃಗೇಂದ್ರಾಗಮಃ - ಕಾಶ್ಮೀರ ಸಂಸ್ಕೃತ ಗ್ರಂಥಾವಲಿಃ, ಶ್ರೀನಗರ, ೧೯೩೦

೬೧. ಮೋಕ್ಷಕಾರಿಕಾ (ಅಷ್ಟಪ್ರಕರಣಮ್) - ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ, ವಾರಾಣಸಿ, ೧೯೮೮

೬೨. ಯೋಗಿನೀಹೃದಯಮ್ - ಮೋತೀಲಾಲ್ ಬನಾರಸಿದಾಸ್, ವಾರಾಣಸಿ, ೧೯೮೮

೬೩. ಯೋಗಸೂತ್ರಭಾಷ್ಯಮ್ - ಜೀವಾನಂದ್ ವಿದ್ಯಾಸಾಗರ್, ಕಲ್ಕತ್ತಾ, ೧೯೪೦

೬೪. ರಘುವಂಶಮಹಾಕಾವ್ಯಮ್ - ಛುನ್ನೂಲಾಲ್ ಜ್ಞಾನಾನಂದ ಪಾಠಕ್, ವಾರಾಣಸಿ, ೧೯೫೯

೬೫. ರತ್ನತ್ರಯಮ್ (ಅಷ್ಟಪ್ರಕರಣಮ್) - ಸಂಸ್ಕೃತ

೬೬. ರೌರವಾಗಮಃ - ಫ್ರೆಂಚ್ ಇನ್‌ಸ್ಟಿಟ್ಯೂಟ್, ಪಾಂಡಿಚೇರಿ, ೧೯೬೧

೬೭. ಲಿಂಗಧಾರಣಚಂದ್ರಿಕಾ (ದ್ವಿತೀಯ ಸಂಸ್ಕರಣಮ್) - ಶೈವಭಾರತೀ ಭವನಮ್, ಜಂಗಮವಾಡಿ ಮಠ, ವಾರಾಣಸಿ, ೧೯೮೮

೬೮. ಲಿಂಗಪುರಾಣಮ್ - ಪುವ್ವಾಡ ವೆಂಕಟರಾಯ್, ಕಾಂಚೀ, ೧೮೭೯

೬೯. ಲುಪ್ತಾಗಮಸಂಗ್ರಹಃ (ಭಾಗ-೨) - ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ, ವಾರಾಣಸಿ, ೧೯೮೩

೭೦. ವಾಚಸ್ಪತ್ಯಮ್ (ಪ್ರಥಮ ಖಂಡಮ್) - ತಾರಾನಾಥ ತರ್ಕವಾಚಸ್ಪತಿ ಭಟ್ಟಾಚಾರ್ಯ, ಕಲ್ಕತ್ತಾ, ೧೮೭೩

೭೧. ವಾತುಲಶುದ್ಧಾಖ್ಯ ತಂತ್ರಮ್ (ತಂತ್ರಸಂಗ್ರಹಃ, ಭಾಗ-೧) - ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ, ವಾರಾಣಸಿ, ೧೯೭೦

೭೨. ವಾತುಲಶುದ್ಧಾಗಮಃ - ಓ.ಆರ್.ಐ, ಮೈಸೂರು

೭೩. ವಾಯುಪುರಾಣಮ್ - ಖೇಮರಾಜ ಶ್ರೀಕೃಷ್ಣದಾಸ್, ಮುಂಬಯಿ, ೧೯೩೩

೭೪. ವಿಜ್ಞಾನಭೈರವಃ (ದ್ವಿತೀಯ ಸಂಸ್ಕರಣಮ್) - ಮೋತಿಲಾಲ್ ಬನಾರಸೀ ದಾಸ್, ವಾರಾಣಸಿ, ೧೯೮೪

೭೫. ವಿವೇಕಚೂಡಾಮಣಿಃ - ಓರಿಯಂಟಲ್ ಬುಕ್ ಏಜೆನ್ಸಿ, ಪುಣೆ, ೧೯೫೨

೭೬. ವೀರಶೈವ ಸದಾಚಾರಸಂಗ್ರಹಃ - ವೀರಶೈವ ಲಿಂಗಿಬ್ರಾಹ್ಮಣ ಗ್ರಂಥಮಾಲೆ, ಸೋಲಾಪುರ, ೧೯೦೫

೭೭. ವೀರಶೈವಾನಂದಚಂದ್ರಿಕಾ - ಮೂರುಸಾವಿರ ಮಠ, ಹುಬ್ಬಳ್ಳಿ, ೧೯೩೭

೭೮. ವೀರಶೈವಾಷ್ಟಾವರಣಪ್ರಮಾಣಾಷ್ಟಕಾಭರಣಮ್ (ಹಸ್ತಪ್ರತಿಃ)

೭೯. ವೇದಾಂತಸಾರಃ - ನಿರ್ಣಯಸಾಗರ ಪ್ರೆಸ್, ಮುಂಬಯಿ, ೧೯೩೪

೮೦. ವೇದಾಂತಸಾರವೀರಶೈವಚಿಂತಾಮಣಿಃ - ವೀರಶೈವ ಲಿಂಗಿಬ್ರಾಹ್ಮಣ ಗ್ರಂಥಮಾಲೆ, ಸೋಲಾಪುರ, ೧೯೦೫

೮೧. ವೈದಿಕಶಿವಪೂಜಾವಿಧಿಃ - ಪಂಚಾಚಾರ್ಯ ಪ್ರೆಸ್, ಮೈಸೂರು, ೧೯೮೨

೮೨. ವೈರಾಗ್ಯಶತಕಮ್ - ಚೌಖಾಂಬಾ ವಿದ್ಯಾಭವನ, ವಾರಾಣಸಿ, ೧೯೩೭

೮೩. ವೈಶೇಷಿಕಸೂತ್ರಮ್ (ಉಪಸ್ಕಾರಸಹಿತಮ್) - ಚೌಖಾಂಬಾ ಸಂಸ್ಕೃತ ಸಂಸ್ಥಾನ, ವಾರಾಣಸಿ, ೧೯೩೯

೮೪. ಶಕ್ತಿವಿಶಿಷ್ಟಾದ್ವೈತದರ್ಶನಮ್ - ರಂಭಾಪುರೀ ಸಂಸ್ಥಾನಮಠ, ಬಾಳೆಹೊನ್ನೂರು, ೧೯೬೧

೮೫. ಶತರತ್ನಸಂಗ್ರಹಃ - ಸಂಸ್ಕೃತ ಪುಸ್ತಕ ಭಂಡಾರ, ಕಲ್ಕತ್ತಾ, ೧೯೪೪

೮೬. ಶಬ್ದಕಲ್ಪದ್ರುಮಃ - ರಾಜಾ ರಾಧಾಕಾಂತದೇವ ಬಹಾದುರ್, ಕಲ್ಕತ್ತಾ, ೧೮೮೬

೮೭. ಶಾಂಡಿಲ್ಯಭಕ್ತಿಸೂತ್ರಮ್ - ಗೀತಾ ಪ್ರೆಸ್, ಗೋರಖಪುರ, ವಿಕ್ರಮ ಸಂವತ್ಸರ, ೨೦೦೯

೮೮. ಶಾರದಾತಿಲಕಮ್ - ಆಗಮಾನುಸಂಧಾನ ಸಮಿತಿ, ಕಲ್ಕತ್ತಾ, ೧೯೩೩

೮೯. ಶಿವಗೀತಾ - ಪೀತಾಂಬರಾ ಪೀಠ, ದತಿಯಾ, ೧೯೬೦

೯೦. ಶಿವತತ್ತ್ವರತ್ನಾಕರಃ (ಭಾಗ ೧-೨) - ಓ.ಆರ್.ಐ. ಮೈಸೂರು, ೧೯೬೪
೯೧. ಶಿವದೃಷ್ಟಿಃ - ಕಾಶ್ಮೀರ ಸಂಸ್ಕೃತ ಗ್ರಂಥಾವಲಿಃ, ಶ್ರೀನಗರ, ೧೯೩೪
೯೨. ಶಿವಮಹಾಪುರಾಣಮ್ - ಪಂಡಿತ ಪುಸ್ತಕಾಲಯ, ಕಾಶೀ, ವಿಕ್ರಮ ಸಂವತ್ಸರ ೨೦೨೦
೯೩. ಶಿವಸೂತ್ರಮ್ (ವಿಮರ್ಶಿನೀ ಸಹಿತಮ್) - ಕಾಶ್ಮೀರ ಸಂಸ್ಕೃತ ಗ್ರಂಥಾವಲಿ, ಶ್ರೀನಗರ, ೧೯೬೮
೯೪. ಶಿವಾರ್ಚನಚಂದ್ರಿಕಾ - ಶಿವಾಗಮ ಸಂಘ, ದೇವಸಾಲನಗರ, ೧೯೨೨
೯೫. ಶಿವಾದ್ವೈತದರ್ಪಣಃ - ಪೂವಲ್ಲೀ ಬೃಹನ್ಮಠ ಗ್ರಂಥಮಾಲೆ, ಹೂಲಿ, ೧೯೨೮
೯೬. ಶಿವಾದ್ವೈತಪರಿಭಾಷಾ - ಜಂಗಮವಾಡಿಮಠ, ವಾರಾಣಸಿ, ೧೯೮೩
೯೭. ಶೈವದರ್ಶನಬಿಂದುಃ - ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ, ವಾರಾಣಸಿ, ೧೯೬೮
೯೮. ಶ್ರೀಮದ್ಭಾಗವತಮ್ - ಭಾಗವತ ವಿದ್ಯಾಪೀಠ, ಅಹಮದಾಬಾದ್, ೨೦೨೯ (ವಿ.ಸಂ)
೯೯. ಸರ್ವದರ್ಶನಸಂಗ್ರಹಃ - ಚೌಖಾಂಬಾ ವಿದ್ಯಾಭವನ, ವಾರಾಣಸಿ, ೧೯೬೪
೧೦೦. ಸರ್ವದರ್ಶನಸಂಗ್ರಹಃ - ಭಂಡಾರಕರ್ ಪ್ರಾಚ್ಯವಿದ್ಯಾ ಸಂಶೋಧನಾ ಮಂದಿರ, ಪುಣೆ, ೧೯೨೪
೧೦೧. ಸಾರಸ್ವತೀ ಸುಷಮಾ (ತ್ರೈಮಾಸಿಕೀ ಅನುಸಂಧಾನ ಪತ್ರಿಕಾ)-ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ, ವಾರಾಣಸಿ
೧೦೨. ಸಿದ್ಧಾಂತ ಶಿಖಾಮಣಿಃ - ಜಂಗಮವಾಡಿ ಮಠ, ವಾರಾಣಸಿ, ೧೯೮೬
೧೦೩. ಸಿದ್ಧಾಂತ ಶಿಖಾಮಣಿಃ (ತತ್ತ್ವಪ್ರದೀಪಿಕಾ ವ್ಯಾಖ್ಯಾಸಹಿತಃ), ಭಾಗ-೧-೨ - ವೀರಶೈವ ಲಿಂಗಿಬ್ರಾಹ್ಮಣ ಗ್ರಂಥಮಾಲೆ, ಸೋಲಾಪುರ, ೧೯೦೫
೧೦೪. ಸಿದ್ಧಾಂತ ಶಿಖಾಮಣಿಃ (ತಾತ್ಪರ್ಯದೀಪಿಕೆ - ಕನ್ನಡ ವ್ಯಾಖ್ಯಾನ ಸಹಿತ) - ಎನ್.ಆರ್. ಕರಿಬಸವಶಾಸ್ತ್ರೀ, ಮೈಸೂರು, ೧೯೨೧
೧೦೫. ಸಿದ್ಧಾಂತ ಶಿಖಾಮಣಿಃ (ಕನ್ನಡ ವ್ಯಾಖ್ಯೆ) - ಪಂಚಾಚಾರ್ಯ ಪ್ರೆಸ್, ಮೈಸೂರು
೧೦೬. ಸಿದ್ಧಾಂತ ಶಿಖಾಮಣಿಃ (ಸೋಸಲೆ ರೇವಣಾರಾಧ್ಯರ ಕನ್ನಡ ವ್ಯಾಖ್ಯಾನ ಸಹಿತ) - ವಿದ್ವಾನ್ ಸಿದ್ಧಗಂಗಯ್ಯ
೧೦೭. ಸೂಕ್ಷ್ಮಾಗಮಃ - ಪಂಚಾಚಾರ್ಯ ಪ್ರೆಸ್, ಮೈಸೂರು, ೧೯೫೬
೧೦೮. ಸೂಕ್ಷ್ಮಾಗಮಃ - ವೀರಶೈವ ಅನುಸಂಧಾನ ಸಂಸ್ಥಾನ, ಬೆಂಗಳೂರು
೧೦೯. ಸ್ಕಂದಪುರಾಣಮ್ - ಖೇಮರಾಜ ಶ್ರೀಕೃಷ್ಣದಾಸ, ಮುಂಬಯಿ, ೧೯೩೫

ಹಿಂದೀ

೧. ಆಗಮ ಔರ್ ತಂತ್ರಶಾಸ್ತ್ರ - ಪಂ. ವ್ರಜವಲ್ಲಭ ದ್ವಿವೇದಿ, ಪರಿಮಳ ಪಬ್ಲಿಕೇಶನ್ಸ್, ದೆಹಲಿ, ೧೯೮೪

೨. ಗೋ-ಅಂಕ (ಕಲ್ಯಾಣ ವಿಶೇಷಾಂಕ) - ಗೀತಾ ಪ್ರೆಸ್, ಗೋರಖಪುರ, ೧೯೪೫

೩. ಭಾರತೀಯ ದರ್ಶನ್ - ಪಂ. ಬಲದೇವ ಉಪಾಧ್ಯಾಯ, ಶಾರದಾ ಮಂದಿರ, ವಾರಾಣಸಿ, ೧೯೬೦

೪. ಭಾರತೀಯ ಸಂಸ್ಕೃತಿ ಔರ್ ಸಾಧನಾ - ಮಹಾಮಹೋಪಾಧ್ಯಾಯ ಗೋಪೀನಾಥ ಕವಿರಾಜ್, ಬಿಹಾರ ರಾಷ್ಟ್ರಭಾಷಾ ಪರಿಷತ್, ಪಟ್ನಾ, ೧೯೬೩

೫. ಶಕ್ತಿವಿಶಿಷ್ಟಾದ್ವೈತಸಿದ್ಧಾಂತ - ಪಂ. ಕಾಶೀನಾಥ ಶಾಸ್ತ್ರೀ, ಕಾಶೀ ವೀರಶೈವ ವಿದ್ವತ್ ಸಂಘ, ಜಂಗಮವಾಡಿ ಮಠ, ವಾರಾಣಸಿ, ೧೯೩೭

೬. ಶಂಕರದಿಗ್ವಿಜಯ್ - ಪಂ. ಬಲದೇವ ಉಪಾಧ್ಯಾಯ, ಶ್ರೀ ಶ್ರವಣನಾಥ್ ಜ್ಞಾನಮಂದಿರ್, ಹರಿದ್ವಾರ, ವಿಕ್ರಮ ಸಂವತ್ಸರ ೨೦೪೨

೭. ಶಿವಾಂಕ (ಕಲ್ಯಾಣ ವಿಶೇಷಾಂಕ) - ಗೀತಾ ಪ್ರೆಸ್, ಗೋರಖಪುರ, ೧೯೩೩

೮. ಹಿಂದೀ ವಿಶ್ವಕೋಶ - ನಾಗೇಂದ್ರನಾಥ ವಸು ಆ್ಯಂಡ್ ವಿಶ್ವನಾಥ್ ವಸು, ಕಲ್ಕತ್ತಾ, ೧೯೩೦

೯. ಹಿಂದುತ್ವ - ರಾಮದಾಸಗೌಡ, ಶಿವಾಪ್ರಸಾದ ಗುಪ್ತ ಸೇವಾ ಉಪವನ, ವಾರಾಣಸಿ, ೧೯೯೫

ಕನ್ನಡ

೧. ಅಷ್ಟಾವರಣವಿವೇಕ - ಶ್ರೀ ಶಂಭುಲಿಂಗ ಶಿವಾಚಾರ್ಯರು, ಬಿಜಾಪುರ, ೧೯೨೩

೨. ಇಷ್ಟಲಿಂಗವಿಜ್ಞಾನ - ಶ್ರೀ ಅಕ್ಕುಲಯ್ಯ ದೀಕ್ಷಿತ್, ಪ್ರಬೋಧ ಪುಸ್ತಕಮಾಲೆ, ಬೆಂಗಳೂರು, ೧೯೪೬

೩. ವೀರಶೈವ ಚಿಂತಾಮಣಿ - ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೧

೪. ಶಿವತತ್ತ್ವದರ್ಶನ - ಶ್ರೀಗುರುದೇವ ಶಿವಾಚಾರ್ಯ, ಶಂಕರ ಆರ್ಟ್ಸ್ ಕಾಲೇಜ್, ನವಲಗುಂದ, ೧೯೭೨

೫. ಶ್ರೀ ಸಿದ್ಧಾಂತ ಶಿಖಾಮಣಿ ಪ್ರವಚನ ಪ್ರಭೆ (ಭಾಗ ೧-೨) - ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು, ಮಾನವಧರ್ಮ ಸಂಸ್ಥೆ, ಬೆಂಗಳೂರು

ಮರಾಠಿ

೧. ಪರಮರಹಸ್ಯ - ಶ್ರೀ ಮನ್ಮಥಸ್ವಾಮಿ, ವೀರಮಠ, ಅಹಮದಪುರ, ೧೯೭೪

೨. ವೀರಶೈವರತ್ನ - ಪಂ. ಕಾಶೀನಾಥಶಾಸ್ತ್ರಿ, ಶೈವಭಾರತೀ ಭವನ, ಜಂಗಮವಾಡಿ ಮಠ, ವಾರಾಣಸಿ, ೧೯೫೨

ಇಂಗ್ಲೀಷ್

1. Abhinavagupta : A Historical and philosophical study (Second Edition) - Dr. Kantichandra Pandeya, Chauhhambha Sanskrit Series, Varanasi, 1963

2. A Hand Book of Veerashaivism - Dr. S.C. Nandimath, Motilal Banarasidass, Delhi, 1979

3. A History of South India - K.A. Neelakantha Shastry, Oxford University Press, 1966

4. Krama Tantricism of Kashmir - Motilal Banarasidass, Delhi, 1979

5. Sree Siddhantha Shikhamani with Maritontadarya's Commentary (Enlgish Translation & notes) Dr M. Sivakumara Swamy, Shaiva Bharati Shodha Pratisthana, Jangamawadimath, Varanasi, 2007

5. The Indian Review (Journal) - Volume-16, May 1915, Madras.

ಸಂಕೇತಾಕ್ಷರ ಸೂಚಿ

ಅ.ಕೋ.	ಅಮರಕೋಶಃ
ಅಥ.ಉ.	ಅಥರ್ವಶಿಖೋಪನಿಷತ್
ಅನು.	ಅನುಶಾಸನಪರ್ವ
ಅ.ಪ್ರ.	ಅಷ್ಟಪ್ರಕರಣಮ್
ಅಭಿ.	ಅಭಿನವಗುಪ್ತ-ಅನ್ ಹಿಸ್ಟಾರಿಕಲ್ ಆ್ಯಂಡ್ ಫಿಲಾಸಾಫಿಕಲ್ ಸ್ಟಡಿ
ಅಭಿ.ಶಾ.	ಅಭಿಜ್ಞಾನಶಾಕುಂತಲಮ್
ಅ.ಮಾ.ಉ.	ಅಕ್ಷಮಾಲೋಪನಿಷತ್
ಅ.ವಿ.	ಅಷ್ಟಾವರಣವಿವೇಕಃ
ಅ.ಶಿಖೋ.	ಅಥರ್ವಶಿಖೋಪನಿಷತ್
ಅ.ಸೂ.	ಅನುಭವಸೂತ್ರಮ್
ಅ.ಸಿ.ಲ.	ಅದ್ವೈತಸಿದ್ಧಿಲಘುಚಂದ್ರಿಕಾ
ಅ.ಸಿ.	ಅದ್ವೈತಸಿದ್ಧಿಃ
ಅ.ಸಂ.	ಅರ್ಥಸಂಗ್ರಹ
ಆ.	ಆಹ್ನಿಕಮ್
ಆಗಮ.	ಆಗಮಪ್ರಕರಣಮ್
ಆ.ತ.	ಆಗಮ ಔರ್ ತಂತ್ರಶಾಸ್ತ್ರ
ಆದಿ.	ಆದಿಪರ್ವ
ಆ.ಮೀ.	ಆಗಮಮೀಮಾಂಸಾ
ಆಶ್ವ.	ಆಶ್ವಮೇಧಿಕಪರ್ವ
ಇ.ವಿ.	ಇಷ್ಟಲಿಂಗವಿಜ್ಞಾನ
ಈ.ಉ.ಶಾ.ವ್ಯಾ.	ಈಶಾವಾಸ್ಯೋಪನಿಷತ್, ಶಾಂಕರೀವ್ಯಾಖ್ಯಾ

ಈ.ಪ್ರ.ವಿ.	ಈಶ್ವರಪ್ರತ್ಯಭಿಜ್ಞಾವಿಮರ್ಶಿನೀ
ಈ.ಪ್ರ.ವಿ.ವಿ.	ಈಶ್ವರ ಪ್ರತ್ಯಭಿಜ್ಞಾವಿವೃತಿವಿಮರ್ಶಿನೀ
ಉ.ಭಾ.	ಉತ್ತರಭಾಗಃ
ಉಪೋ.	ಉಪೋದ್ಘಾತಃ
ಋ.	ಋಗ್ವೇದಃ
ಋಗ್ವೇ.	ಋಗ್ವೇದಃ
ಏಕಾ.ಕೋ.	ಏಕಾಕ್ಷರಕೋಶಃ
ಕ.ಉ.	ಕಠೋಪನಿಷತ್
ಕಠೋ.	ಕಠೋಪನಿಷತ್
ಕಾ.ಆ.	ಕಾರಣಾಗಮಃ
ಕಾಲಾ.ಉ.	ಕಾಲಾಗ್ನಿರುದ್ರೋಪನಿಷತ್
ಕ್ರಮ.	ಕ್ರಮತಾಂತ್ರಿಸಿಜಮ್ ಆಫ್ ಕಾಶ್ಮೀರ್
ಕ್ರಿ.	ಕ್ರಿಯಾಪಾದಃ
ಕ್ರಿ.ಪಾ.	ಕ್ರಿಯಾಪಾದಃ
ಕ್ರಿ.ಸಾ.	ಕ್ರಿಯಾಸಾರಃ
ಕೇ.	ಕೇದಾರಖಂಡಃ
ಕೈ.ಉ.	ಕೈವಲ್ಯೋಪನಿಷತ್
ಕೌಷೀ.	ಕೌಷೀತಕೀಬ್ರಾಹ್ಮಣೋಪನಿಷತ್
ಚ.ಜ್ಞಾ.	ಚಂದ್ರಜ್ಞಾನಾಗಮಃ
ಛಾ.ಉ.	ಛಾಂದೋಗ್ಯೋಪನಿಷತ್
ಟೀ.	ಟೀಕಾ
ತತ್ತ್ವ.	ತತ್ತ್ವಪ್ರಕಾಶಿಕಾವ್ಯಾಖ್ಯೆ (ಸಿದ್ಧಾಂತಶಿಖಾಮಣಿಃ)
ತಂತ್ರಾ.	ತಂತ್ರಾಲೋಕಃ
ತ.ಪ್ರ.	ತತ್ತ್ವಪ್ರಕಾಶಃ
ತ.ವಾ.	ತಂತ್ರವಾರ್ತಿಕಮ್
ತ.ಸಾ.	ತಂತ್ರಸಾರಃ
ತ.ಸಂ.	ತತ್ತ್ವಸಂಗ್ರಹಃ

ತಾ.	ತಾತ್ಪರ್ಯದೀಪಿಕಾ (ತತ್ತ್ವಪ್ರಕಾಶಿಕಾ ವ್ಯಾಖ್ಯಾ)
ತೈ.ಆ.	ತೈತ್ತಿರೀಯಾರಣ್ಯಕಮ್
ತೈ.ಉ.	ತೈತ್ತಿರೀಯೋಪನಿಷತ್
ತೈ.ಸಂ.	ತೈತ್ತಿರೀಯಸಂಹಿತಾ
ದೀ.	ದೀಪಿಕಾ (ಯೋಗಿನೀಹೃದಯ ವ್ಯಾಖ್ಯಾ)
ನಾ.ಭ.ಸೂ.	ನಾರದಭಕ್ತಿಸೂತ್ರಮ್
ನಿ.ಷೋ.	ನಿತ್ಯಷೋಡಶಿಕಾರ್ಣವಃ
ನೇ.ತ.	ನೇತ್ರತಂತ್ರಮ್
ನ್ಯಾ.ಕ.	ನ್ಯಾಯಕಂದಲೀ
ನ್ಯಾ.ಕೋ.	ನ್ಯಾಯಕೋಶಃ
ನ್ಯಾ.ಸಾ.	ನ್ಯಾಯಸಾರಃ
ನ್ಯಾ.ಸೂ.	ನ್ಯಾಯಸೂತ್ರಮ್
ಪ.	ಪರಿಮಲಃ (ಮಹಾರ್ಥಮಂಜರೀವ್ಯಾಖ್ಯಾ)
ಪ.ಮೋ.ನಿ.	ಪರಮೋಕ್ಷನಿರಾಸಕಾರಿಕಾ
ಪ.ರ.	ಪರಮರಹಸ್ಯ
ಪ.ಸಾ.	ಪರಮಾರ್ಥಸಾರಃ
ಪಂಚ.	ಪಂಚದಶೀ
ಪದ್ಮ.ಪು.	ಪದ್ಮಪುರಾಣಮ್
ಪಾ.ತ.	ಪಾರಮೇಶ್ವರತಂತ್ರಮ್
ಪಾರಾ.ಸ್ಮೃ.	ಪಾರಾಶರಸ್ಮೃತಿಃ
ಪ್ರ.ಉ.	ಪ್ರಶ್ನೋಪನಿಷತ್
ಪ್ರ.ಪಾ.ಭಾ.	ಪ್ರಶಸ್ತಪಾದಭಾಷ್ಯಮ್
ಪ್ರಶ್ನೋ.	ಪ್ರಶ್ನೋಪನಿಷತ್
ಪ್ರ.ಸು.	ಪ್ರಬೋಧಸುಧಾರಕಃ
ಪ್ರ.ಹೃ.	ಪ್ರತ್ಯಭಿಜ್ಞಾಹೃದಯಮ್
ಪ್ರತ್ಯಭಿ.ವಿ.	ಪ್ರತ್ಯಭಿಜ್ಞಾವಿಮರ್ಶಿನೀ
ಪ್ರಾ.	ಪ್ರಾಸ್ತಾವಿಕಮ್

ಬೃ.ಉ.	ಬೃಹದಾರಣ್ಯಕೋಪನಿಷತ್
ಬೃ.ಜಾ.ಉ.	ಬೃಹಜ್ಜಾಬಾಲೋಪನಿಷತ್
ಬೃ.ನಾ.ಪು.	ಬೃಹನ್ನಾರದೀಯಪುರಾಣಮ್
ಬ್ರ.ಬಿ.	ಬ್ರಹ್ಮಬಿಂದೂಪನಿಷತ್
ಬ್ರ.ಸೂ.	ಬ್ರಹ್ಮಸೂತ್ರಮ್
ಬ್ರ.ಸೂ.ಭಾ.	ಬ್ರಹ್ಮಸೂತ್ರಭಾಮತೀಟೀಕಾ
ಬ್ರ.ಸೂ.ಶ್ರೀ.	ಬ್ರಹ್ಮಸೂತ್ರಶ್ರೀಕರಭಾಷ್ಯಮ್
ಬ್ರ.ಸೂ.ಶ್ರೀಕಂಠ	ಬ್ರಹ್ಮಸೂತ್ರಶ್ರೀಕಂಠಭಾಷ್ಯಮ್
ಬೋ.ಪ.	ಬೋದಪಂಚದಶಿಕಾ
ಭ.ಗೀ.	ಭಗವದ್ಗೀತಾ
ಭ.ರ.ವಿ.	ಭಕ್ತಿರಸವಿಮರ್ಶಃ
ಭ.ಸಂ.ಉ	ಭವಸಂತರಣೋಪನಿಷತ್
ಭಾ.	ಭಾಗಃ
ಭಾ.ದ.	ಭಾರತೀಯ ದರ್ಶನ
ಭಾ.ಸಂ.ಸಾ.	ಭಾರತೀಯ ಸಂಸ್ಕೃತಿ ಔರ್ ಸಾಹಿತ್ಯ
ಭಾಗವ.	ಶ್ರೀಮದ್ಭಾಗವತಮ್
ಭಾಸ್ಕ.	ಭಾಸ್ಕರೀ
ಭೂ.	ಭೂಮಿಕಾ
ಭೋ.ಕಾ.	ಭೋಗಕಾರಿಕಾ
ಮತಂಗ	ಮಾತಂಗಪಾರಮೇಶ್ವರಾಗಮಃ
ಮ.ನ.ಉ.	ಮಹಾನಾರಾಯಣೋಪನಿಷತ್
ಮ.ಭಾ.	ಮಹಾಭಾರತಮ್
ಮ.ಮ.	ಮಹಾರ್ಥಮಂಜರೀ
ಮ.ಸ್ತೋ.	ಮಹಿಮ್ನಸ್ತೋತ್ರಮ್
ಮ.ಸ್ಮೃ.	ಮನುಸ್ಮೃತಿಃ
ಮಹಾನಾ.	ಮಹಾನಾರಾಯಣೋಪನಿಷತ್
ಮಾ.ಉ.ಕಾ.	ಮಾಂಡೂಕ್ಯೋಪನಿಷತ್ಕಾರಿಕಾ

ಮಾ.ವಿ.	ಮಾಲಿನೀವಿಜಯೋತ್ತರಮ್
ಮೀ.ಪ್ರ.	ಮೀಮಾಂಸಾನ್ಯಾಯಪ್ರಕಾಶಃ
ಮು.ಉ.	ಮುಂಡಕೋಪನಿಷತ್
ಮುಂಡ.	ಮುಂಡಕೋಪನಿಷತ್
ಮೃ.ವಿ.	ಮೃಗೇಂದ್ರಾಗಮವಿದ್ಯಾಪಾದಃ
ಮೋ.ಕಾ.	ಮೋಕ್ಷಕಾರಿಕಾ
ಯೋ.ಶಿ.ಉ.	ಯೋಗಶಿಖೋಪನಿಷತ್
ಯೋ.ಸೂ.	ಯೋಗಸೂತ್ರಮ್
ಯೋ.ಸೂ.ಭಾ.	ಯೋಗಸೂತ್ರಭಾಷ್ಯಮ್
ಯೋ.ಹೃ.	ಯೋಗಿನೀಹೃದಯಮ್
ರ.ತ್ರ.	ರತ್ನತ್ರಯಪರೀಕ್ಷಾ
ರಘು	ರಘುವಂಶಮಹಾಕಾವ್ಯಮ್
ರು.ಜಾ.ಉ.	ರುದ್ರಾಕ್ಷಜಾಬಾಲೋಪನಿಷತ್
ರೌ.ವಿ.	ರೌರವಾಗಮವಿದ್ಯಾಪಾದಃ
ಲ.	ಲಘುಚಂದ್ರಿಕಾ (ಅದ್ವೈತಸಿದ್ಧಿ ವ್ಯಾಖ್ಯಾ)
ಲಿಂಗಾ.	ಲಿಂಗಾಷ್ಟಕಸ್ತೋತ್ರಮ್
ಲಿ.ಚ.	ಲಿಂಗಧಾರಣಚಂದ್ರಿಕಾ
ಲಿ.ಪು.	ಲಿಂಗಪುರಾಣಮ್
ಲು.ಸಂ.	ಲುಪ್ತಾಗಮಸಂಗ್ರಹಃ
ವ.ಸೂ.ಉ.	ವಜ್ರಸೂಚಿಕೋಪನಿಷತ್
ವಾ.	ವಾಯುಸಂಹಿತಾ
ವಾ.ತ.	ವಾತುಲಶುದ್ಧಾಖ್ಯತಂತ್ರಮ್
ವಾ.ಪು.	ವಾಯುಪುರಾಣಮ್
ವಾ.ಶು.ಆ.	ವಾತುಲಶುದ್ಧಾಗಮಃ
ವಾಚ.	ವಾಚಸ್ಪತ್ಯಮ್
ವಿ.	ವಿವೃತಿಃ (ವಿಜ್ಞಾನಭೈರವ ವ್ಯಾಖ್ಯಾ)
ವಿ.ಚೂ.	ವಿವೇಕ ಚೂಡಾಮಣಿಃ

ವಿದ್ಯೇ.	ವಿದ್ಯೇಶ್ವರಸಂಹಿತಾ (ಶಿವಪುರಾಣೀಯ)
ವಿ.ಭೈ.	ವಿಜ್ಞಾನಭೈರವಮ್
ವೀ.ಆ.ಪ್ರ.ಮ.	ವೀರಶೈವಾಷ್ಟಾವರಣಪ್ರಮಾಣಾಷ್ಟಕಾಭರಣಮ್
ವೀ.ಆ.ಚ.	ವೀರಶೈವಾನಂದಚಂದ್ರಿಕಾ
ವೀ.ಚಿ.	ವೀರಶೈವಚಿಂತಾಮಣಿಃ
ವೀ.ಭಾ.	ವೀರಶೈವಭಾಷ್ಯಮ್
ವೀ.ರ.	ವೀರಶೈವರತ್ನಮ್
ವೀ.ಸ.ಸಂ.	ವೀರಶೈವಸಾದಾಚಾರಸಂಗ್ರಹಃ
ವೃ.	ವೃತ್ತಿಃ
ವೇ.ಸಾ.	ವೇದಾಂತಸಾರಃ
ವೇ.ಸಾ.ವಿ.ಚಿ.	ವೇದಾಂತಸಾರವೀರಶೈವಚಿಂತಾಮಣಿಃ
ವೈ.ಭಾ.	ವೈಷ್ಣವಮತಾಬ್ಜಭಾಸ್ಕರಃ
ವೈ.ಶ.	ವೈರಾಗ್ಯಶತಕಮ್
ವೈ.ಶಿ.ವಿ.	ವೈದಿಕ ಶಿವಪೂಜಾವಿಧಿಃ
ವೈ.ಸೂ.	ವೈಶೇಷಿಕ ಸೂತ್ರಮ್
ಶ.	ಶಂಕರಸಂಹಿತಾ
ಶ.ಕ.	ಶಬ್ದಕಲ್ಪದ್ರುಮಃ
ಶ.ದಿ.	ಶಂಕರದಿಗ್ವಿಜಯಃ
ಶ.ರ.ಸಂ.	ಶತರತ್ನಸಂಗ್ರಹಃ
ಶ.ವಿ.ದ.	ಶಕ್ತಿವಿಶಿಷ್ಟಾದ್ವೈತದರ್ಶನಮ್
ಶ.ವಿ.ಸಿ.	ಶಕ್ತಿವಿಶಿಷ್ಟಾದ್ವೈತಸಿದ್ಧಾಂತಃ
ಶಾಟ್ಯಾ.	ಶಾಟ್ಯಾಯನೋಪನಿಷತ್
ಶಾಂಡಿ.	ಶಾಂಡಿಲ್ಯೋಪನಿಷತ್
ಶಾಂಡಿ.ಉ.	ಶಾಂಡಿಲ್ಯೋಪನಿಷತ್
ಶಾ.ತಿ.	ಶಾರದಾತಿಲಕಮ್
ಶಾ.ಭ.ಸೂ.	ಶಾಂಡಿಲ್ಯಭಕ್ತಿಸೂತ್ರಮ್
ಶಿ.ಗೀ.	ಶಿವಗೀತಾ

ಶಿ.ಚ.	ಶಿವಾರ್ಚನಚಂದ್ರಿಕಾ
ಶಿ.ತ.ದ.	ಶಿವತತ್ತ್ವದರ್ಶನಮ್
ಶಿ.ದ.	ಶಿವಾದ್ವೈತದರ್ಪಣಃ
ಶಿ.ದೃ.	ಶಿವದೃಷ್ಟಿಃ
ಶಿ.ಪ.	ಶಿವಾದ್ವೈತಪರಿಭಾಷಾ
ಶಿ.ಪು.	ಶಿವಮಹಾಪುರಾಣಮ್
ಶಿ.ಮ.ದೀ.	ಶಿವಾರ್ಕಮಣಿದೀಪಿಕಾ (ಶ್ರೀಕಂಠಭಾಷ್ಯ ವ್ಯಾಖ್ಯಾ)
ಶಿ.ರ.	ಶಿವತತ್ತ್ವರತ್ನಾಕರಃ
ಶಿ.ಲ.	ಶಿವಾನಂದಲಹರೀ
ಶಿ.ಸೂ.	ಶಿವಸೂತ್ರಮ್
ಶೈ.ದ.ಬಿ.	ಶೈವದರ್ಶನಬಿಂದುಃ
ಶ್ರೀರುದ್ರ.	ಶ್ರೀರುದ್ರಾಧ್ಯಾಯಃ
ಶ್ವೇ.ಉ.	ಶ್ವೇತಾಶ್ವೇತರೋಪನಿಷತ್
ಸ.ದ.ಸಂ.	ಸರ್ವದರ್ಶನಸಂಗ್ರಹಃ
ಸಾ.ಸು.	ಸಾರಸ್ವತೀಸುಷುಮಾ
ಸಿ.ಉ.	ಸಿದ್ಧಾಂತ ಶಿಖೋಪನಿಷತ್
ಸಿ.ಶಿ.	ಸಿದ್ಧಾಂತ ಶಿಖಾಮಣಿಃ
ಸಿ.ಶಿಖೋ.	ಸಿದ್ಧಾಂತ ಶಿಖೋಪನಿಷತ್
ಸುಬಾಲೋ.	ಸುಬಾಲೋಪನಿಷತ್
ಸು.ಭಾ.	ಸುಭಾಷಿತರತ್ನಭಾಂಡಾಗಾರಮ್
ಸೂ.ಆ.	ಸೂಕ್ಷ್ಮಾಗಮಃ
ಸ್ಕ.ಪು	ಸ್ಕಂದಪುರಾಣಮ್
ಹಿ.ವಿ.ಕೋ.	ಹಿಂದೀ ವಿಶ್ವಕೋಶ
ಹಿಂದು	ಹಿಂದುತ್ವ

■

ವೀರಶೈವ ಅನುಸಂಧಾನ ಸಂಸ್ಥಾನ

'ನಾವೀನ್ಯ', 365/ಸಿ, 5ನೇ 'ಎ' ಮುಖ್ಯರಸ್ತೆ, ರೆಂಕೋ ಬಡಾವಣೆ,
ವಿಜಯನಗರ 2ನೇ ಹಂತ, ಬೆಂಗಳೂರು–560 040

ಕೃತಜ್ಞತೆಗಳು

ಶಕ್ತಿವಿಶಿಷ್ಟಾದ್ವೈತತತ್ತ್ವತ್ರಯವಿಮರ್ಶೆ ಎಂಬ ಈ ಗ್ರಂಥವು ಶ್ರೀಮತ್ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ಡಾ|| ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರು ವಾರಾಣಸಿಯ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಡಿ.ಲಿಟ್ ಪದವಿಗಾಗಿ ಸಾದರಪಡಿಸಿದ ಶಕ್ತಿವಿಶಿಷ್ಟಾದ್ವೈತತತ್ತ್ವತ್ರಯವಿಮರ್ಶಃ ಎಂಬ ಸಂಸ್ಕೃತ ಮಹಾಪ್ರಬಂಧದ ಕನ್ನಡಾನುವಾದ. ಈ ಪ್ರಬಂಧವನ್ನು ಕನ್ನಡಕ್ಕೆ ಅನುವಾದಿಸಿದವರು ಡಾ|| ಸಿ. ಶಿವಕುಮಾರಸ್ವಾಮಿ, ಸಂಸ್ಕೃತ ಪ್ರಾಧ್ಯಾಪಕರು, ಬಸವೇಶ್ವರ ಪ್ರಥಮ ದರ್ಜೆ ಕಾಲೇಜು, ಬೆಂಗಳೂರು ಇವರು.

ಕರ್ನಾಟಕ ಸರ್ಕಾರದ ರಾಜ್ಯ ಪತ್ರಾಗಾರ ಇಲಾಖೆಯು ತನ್ನ ಪ್ರಾಚೀನ ಗ್ರಂಥಗಳ ಪ್ರಕಟಣೆಯ ಯೋಜನೆಯಡಿಯಲ್ಲಿ ಈ ಗ್ರಂಥವನ್ನು ಪ್ರಕಟಿಸುತ್ತಿರುವುದು ಸಂತಸವನ್ನು ತಂದಿದೆ. ಈ ಗ್ರಂಥ ಪ್ರಕಟಣೆಗೆ ಕಾರಣಕರ್ತರಾದ ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಜಯರಾಮರಾಜೇ ಅರಸು ಅವರಿಗೆ, ರಾಜ್ಯ ಪತ್ರಾಗಾರ ಇಲಾಖೆಯ ನಿರ್ದೇಶಕರಾದ ಶ್ರೀಮತಿ ಉಷಾ ಸುರೇಶ್ ಹಾಗೂ ಅವರ ಎಲ್ಲ ಸಿಬ್ಬಂದಿ ವರ್ಗದವರಿಗೆ ಕೃತಜ್ಞತಾಪೂರ್ವಕ ಧನ್ಯವಾದಗಳನ್ನು ಸಮರ್ಪಿಸುತ್ತೇನೆ.

ಬೆಂಗಳೂರು
ದಿನಾಂಕ 15-6-2009

ಡಾ|| ಸಿ.ಯು. ಉಮಾದೇವಿ ಉಮಾಶಂಕರ್
ಕಾರ್ಯದರ್ಶಿ

ವೀರಶೈವ ಅನುಸಂಧಾನ ಸಂಸ್ಥಾನದ ಪ್ರಕಟಣೆಗಳು

1998 ಮಕುಟಾಗಮ – ಅನು: ಡಾ. ಸಿ. ಶಿವಕುಮಾರಸ್ವಾಮಿ

1998 ಸಿದ್ಧಾಂತ ಶಿಖಾಮಣಿ ವಿಚಾರದೀಪ್ತಿ – ಸಂ. ಡಾ. ಎಂ. ಶಿವಕುಮಾರಸ್ವಾಮಿ

1999 ಕಾರಣಾಗಮ – ಅನು: ಡಾ. ಮಲ್ಲಿಕಾರ್ಜುನ ಪರಡ್ಡಿ

1999 ಶೈವಾಗಮಗಳಲ್ಲಿ ವೀರಶೈವ – ಸಂ. ಡಾ. ಎಂ. ಶಿವಕುಮಾರಸ್ವಾಮಿ

2000 ಪಾರಮೇಶ್ವರಾಗಮ – ಅನು: ಡಾ. ಎಂ. ಶಿವಕುಮಾರಸ್ವಾಮಿ

2001 ಸೂಕ್ಷ್ಮಾಗಮ – ಅನು: ಶ್ರೀ ಷಣ್ಮುಖಯ್ಯ ಅಕ್ಕೂರಮಠ

2001 ಚಂದ್ರಜ್ಞಾನಾಗಮ ವಿಚಾರರಶ್ಮಿ – ಸಂ. ಡಾ. ಎಂ. ಶಿವಕುಮಾರಸ್ವಾಮಿ

2002 ಸೂಕ್ಷ್ಮಾಗಮ ವಿಚಾರಪ್ರಭೆ – ಸಂ. ಡಾ. ಎಂ. ಶಿವಕುಮಾರಸ್ವಾಮಿ

2003 ಚಂದ್ರಜ್ಞಾನಾಗಮ – ಅನು: ಡಾ. ಎಂ. ಶಿವಕುಮಾರಸ್ವಾಮಿ

2003 ವೇದಾಗಮಗಳು ಮತ್ತು ಶಿವಶರಣರು ಭಾಗ–1
– ಸಂ. ಡಾ. ಎಂ. ಶಿವಕುಮಾರಸ್ವಾಮಿ

2004 ವೇದಾಗಮಗಳು ಮತ್ತು ಶಿವಶರಣರು ಭಾಗ–2
– ಸಂ. ಡಾ. ಎಂ. ಶಿವಕುಮಾರಸ್ವಾಮಿ

2002 ಅನುಭವಸೂತ್ರಂ – ಅನು: ಡಾ. ಸಿ. ಶಿವಕುಮಾರಸ್ವಾಮಿ

2005 ವಿದ್ವತ್‌ವಿಭೂತಿ – ಲೇ|| ಡಾ. ಶಿವಾನಂದ ಶಿವಾಚಾರ್ಯಸ್ವಾಮಿಗಳು

2005 ಶಿವಪಂಚವಿಂಶತಿಲೀಲಾಶತಕಂ – ಅನು: ಪ್ರೊ. ಕೋ.ರಂ. ಬಸವರಾಜು

2005 ಶಿವತತ್ತ್ವ ಚಿಂತಾಮಣಿ : ಒಂದು ಅಧ್ಯಯನ – ಶೈವಭಾರತಿ ಶೋಧ ಪ್ರತಿಷ್ಠಾನ ವಾರಾಣಸಿಯಿಂದ ಪ್ರಕಟವಾಗಿರುವ ಕನ್ನಡ ಸಂಶೋಧನಾ ಪ್ರಬಂಧ – ಡಾ. ಸಿ. ಯು. ಉಮಾದೇವಿ ಉಮಾಶಂಕರ್

2006 ವೀರಶೈವ ಧರ್ಮ : ಒಂದು ಪುನರಾವಲೋಕನ
– ಸಂ. ಡಾ. ಎಂ. ಶಿವಕುಮಾರಸ್ವಾಮಿ

2007 ಆಧುನಿಕ ಜಗತ್ತಿಗೆ ಶ್ರೀ ಸಿದ್ಧಾಂತ ಶಿಖಾಮಣಿಯ ಕೊಡುಗೆ
– ಸಂ. ಡಾ. ಎಂ. ಶಿವಕುಮಾರಸ್ವಾಮಿ

2008 **Sri Kashi Jnanapeetha - Tradition & History**
- Dr. K.V. Ramesh

ಶಕ್ತಿವಿಶಿಷ್ಟಾದ್ವೈತತತ್ತ್ವತ್ರಯವಿಮರ್ಶೆ ಎಂಬ ಈ ಗ್ರಂಥವು ಮೂಲತಃ ಶ್ರೀಮತ್ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಡಾ|| ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಯವರು ತಮ್ಮ ವಿದ್ಯಾವಾಚಸ್ಪತಿ (ಡಿ.ಲಿಟ್) ಪದವಿಗಾಗಿ ವಾರಾಣಸಿಯ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದ ಸಂಸ್ಕೃತದಲ್ಲಿ ರಚಿಸಿದ್ದ ಮಹಾಪ್ರಬಂಧ. ಇದರ ಕನ್ನಡ ಅನುವಾದವನ್ನು ಸಿದ್ಧಪಡಿಸಿದವರು ಡಾ|| ಸಿ. ಶಿವಕುಮಾರಸ್ವಾಮಿ ಅವರು.

ಈ ಗ್ರಂಥದಲ್ಲಿ ಪ್ರತಿಪಾದಿತವಾದ ವಿಷಯವೆಂದರೆ ಗ್ರಂಥದ ಶೀರ್ಷಿಕೆಯೇ ಸೂಚಿಸುವಂತೆ ಶಕ್ತಿವಿಶಿಷ್ಟಾದ್ವೈತದರ್ಶನವೆಂದು ವಿದ್ವತ್ ಸಮುದಾಯದಲ್ಲಿ ಪ್ರಸಿದ್ಧವಾದ ವೀರಶೈವ ಸಿದ್ಧಾಂತದಲ್ಲಿ ಬರುವ ತತ್ತ್ವತ್ರಯದ ವಿಮರ್ಶಾತ್ಮಕ ವಿಚಾರ. ಇಲ್ಲಿ ತತ್ತ್ವತ್ರಯವೆಂದರೆ ಮೂರು ತತ್ತ್ವಗಳು. ಆ ಮೂರು ತತ್ತ್ವಗಳೆಂದರೆ ಶೈವಾಗಮಗಳ ಪ್ರಕಾರ ಪತಿ–ಪಶು--ಪಾಶ. ಗ್ರಂಥಕಾರರೇ ಹೇಳಿದಂತೆ ಈ ಮೂರು ತತ್ತ್ವಗಳು ವೀರಶೈವ ದರ್ಶನದಲ್ಲಿ ಶಿವ–ಜೀವ–ಶಕ್ತಿಯೆಂದು ಕರೆಯಲ್ಪಡುತ್ತವೆ. ಅವುಗಳ ವಿಷಯದಲ್ಲಿ ವೀರಶೈವ ಸಿದ್ಧಾಂತಕ್ಕೂ, ಉತ್ತರದ ಕಾಶ್ಮೀರಶೈವ–ದಕ್ಷಿಣದ ಸಿದ್ಧಾಂತಶೈವ ದರ್ಶನಗಳಿಗೂ ಅನೇಕಾಂಶಗಳಲ್ಲಿ ಸಾಮ್ಯವೂ, ಕೆಲವಂಶಗಳಲ್ಲಿ ವ್ಯತ್ಯಾಸವೂ ಕಂಡು ಬರುತ್ತದೆ. ಹೀಗಿರುವಾಗ ತತ್ತ್ವತ್ರಯದ ವಿಚಾರದಲ್ಲಿ ವೀರಶೈವದ ವೈಶಿಷ್ಟ್ಯವೇನು ? ಎಂಬುದು ಮೊದಲ ಪ್ರಶ್ನೆ. ಇದರ ಜೊತೆಗೆ ಕೇವಲ ವೀರಶೈವರಲ್ಲಿ ಪ್ರಸಿದ್ಧವಾದ ಅಷ್ಟಾವರಣ--ಪಂಚಾಚಾರ--ಷಟ್‌ಸ್ಥಲವೆಂಬ ತತ್ತ್ವತ್ರಯದ ಸ್ವರೂಪವಿಮರ್ಶೆಯೂ ಇಲ್ಲಿ ಪ್ರಸ್ತುತವೆಂದು. ಈ ತತ್ತ್ವತ್ರಯದ ಅಂಗೀಕಾರದಿಂದ ವೀರಶೈವ ಆಚಾರ್ಯರು ಯಾವ ವೈಶಿಷ್ಟ್ಯವನ್ನು ನೆಲೆಗೊಳಿಸಿದರು ? ಎಂಬುದು ಎರಡನೆ ಪ್ರಶ್ನೆ. ಈ ಎರಡೂ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವನ್ನು ಈ ಗ್ರಂಥದಲ್ಲಿ ಕಾಣಬಹುದು.

ಮೂಲ ಕೃತಿಯು ಸಂಸ್ಕೃತದ ಶಾಸ್ತ್ರೀಯ ಶೈಲಿಯಲ್ಲಿದೆ. ಅದನ್ನು ಬೇರೆ ಯಾವುದೇ ಭಾಷೆಗೆ ಅನುವಾದಿಸುವುದೆಂದರೆ ಒಂದು ಸವಾಲಿನ ಕೆಲಸವೇ ಸರಿ. ಅಂತಹ ಸವಾಲಿನ ಕಾರ್ಯವನ್ನು ಡಾ|| ಸ್ವಾಮಿ ಸಮರ್ಥವಾಗಿ ನಿರ್ವಹಿಸಿದ್ದಾರೆ ಎಂಬುದು ನನಗೆ ವೈಯಕ್ತಿಕವಾಗಿ ಅತ್ಯಂತ ಹೆಮ್ಮೆಯ ವಿಷಯ. ಅನುವಾದವು ಮೂಲಗ್ರಂಥದ ಶೈಲಿಯ ದೃಷ್ಟಿಯಿಂದ ಎಷ್ಟು ಸರಳವಾಗಿರಲು ಸಾಧ್ಯವೋ ಅಷ್ಟು ಸರಳವಾಗಿದೆ ಎಂದು ನಾನು ಮೆಚ್ಚುಗೆಯಿಂದ ಹೇಳಲು ಇಚ್ಛಿಸುತ್ತೇನೆ.

– ಡಾ|| ಎಂ. ಶಿವಕುಮಾರಸ್ವಾಮಿ